ಸ್ವದೇಶಾಭಿಮಾನಿ
Swadeshabhimani

ಸಂಪುಟ ೩೩ ※ ತಾರೀಕು ೧—೯—೧೯೩೯ (1—9—1939) ※ ಸಂಚಿಕೆ ೩೫

ಅನುಕ್ರಮ

ಬೋಸರ ಮೇಲೆ ದ್ವೇಷವಿರಲಿಲ್ಲ

ಕಾಂಗ್ರೆಸಿನ ಶಕ್ತಿಯು ಸತ್ಯ ಅಹಿಂಸೆಗಳಲ್ಲಿ

ಲೋಕ ಯುದ್ಧದ ಸಾಧ್ಯಾಸಾಧ್ಯತೆಗಳು

ಮದ್ರಾಸು ಮಂತ್ರಿಮಂಡಲ

ಹಂಗೇರಿಯು ಹಿಟ್ಲರನ ಪದಹತಿಯಲ್ಲಿ—

ಭಾರತದ ದೌರ್ಬಲ್ಯಗಳು ಹೆಚ್ಚಬಾರದು

ಸ್ವೈರಿಣೀ! (ಸಣ್ಣ ಕತೆ)

ಜಯಪುರದ ಸಮಸ್ಯೆಯ ಪರಿಹಾರ

ಕಾಂಗ್ರೆಸ್ಸು ಸಂಸ್ಥಾಪಕ ಎ. ಓ. ಹ್ಯೂಮರ ಜೀವನ

ಮಹಿಳಾ ಸಮಾಜ

ಅಗ್ರಲೇಖ

ಸಾಹಿತ್ಯ ಸಂಚಯ

ಕರ್ನಾಟಕ, ಮಂಗಳೂರು, ಜಿಲ್ಲಾ ಸಮಾಚಾರಗಳು

ಸನಾತನಿಗಳಿಗೆ ರಾಜಾಜಿಯವರ ಎಚ್ಚರಿಕೆ

ಚಲಚ್ಚಿತ್ರ ಪ್ರಪಂಚ, ವಿಜ್ಞಾನ ಯುಗ, ಸಿನೆಮಾ ನಟಿಯರ ಜೀವನ, ತೆರೆಯ ಮರೆಯಲ್ಲಿ— ಇತ್ಯಾದಿ...

ಯುದ್ಧ ಸಂಭವಿಸಿದಲ್ಲಿ ಶತ್ರುದಳದ ವಿಮಾನವನ್ನು ಹೊಡೆದೋಡಿಸಲು ಬ್ರಿಟನ್ನಿನ ಸಿದ್ಧತೆ.
Photo: C. P. London.

32 ಪುಟಗಳು 32

ಸಚಿತ್ರ ವಾರಪತ್ರಿಕೆ

ನೋಟಗಳು!

ಎ. ಐ. ಸಿ. ಸಿ. ಯ ನಿರ್ಣಯವನ್ನು ವಿರೋಧಿಸುವುದಕ್ಕಿಂತ ಮೊದಲು, ಬೋಸರು ದೇಶಬಂಧು ದಾಸರಂತೆ, ತನ್ನ ಬಂಗಾಳ ಪ್ರಾಂತಿಕ ಕಾಂಗ್ರೆಸುಕಮಿಟಿಯ ಅಧ್ಯಕ್ಷತೆಗೆ ರಾಜಿನಾಮೆ ಕೊಡಬೇಕಿತ್ತು ಎಂದು ಒಬ್ಬರು ಬೋಸರನ್ನು ಟೀಕಿಸಿದ್ದರು!

◈

ಬೋಸರು ಇದಕ್ಕೆ ಉತ್ತರಕೊಡುತ್ತಾ, ದೇಶಬಂಧುಗಳು ಗಯಾ ಕಾಂಗ್ರೆಸು ಅಧಿವೇಶನಕ್ಕಿಂತ ಮೊದಲೇ ಬೇರೆಯೇ ಕಾರಣವೊಂದಕ್ಕಾಗಿ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಅಧ್ಯಕ್ಷತನಕ್ಕೆ ರಾಜಿನಾಮೆ ಕೊಟ್ಟಿರುವರೆಂದೂ, ವಿಮರ್ಶಕರ ಅಭಿಪ್ರಾಯವು ಅಸತ್ಯವೆಂದೂ ಹೇಳಿದರು!

◈

ದಕ್ಷಿಣ ಹಿಂದೂಸ್ಥಾನದಲ್ಲಿ ಒಮ್ಮೆ ಭಾಷಣ ಮಾಡಿದಾಗ ಬೋಸರು 'ಯಾರು ಕಾಂಗ್ರೆಸಿನ ನಿರ್ಣಯಗಳಿಗೆ ನಿಷೇಧ ಸೂಚಿಸಬೇಕೆಂದು ಬಯಸುತ್ತಾರೋ, ಅವರು ತಮ್ಮ ಜವಾಬ್ದಾರೀ ಕೆಲಸಗಳಿಗೆ ಮೊದಲಾಗಿ ರಾಜಿಕೊಡಬೇಕೆಂದೂ ನಾನು ಕೌನ್ಸಿಲು ಪ್ರವೇಶದ ಪ್ರಚಾರವನ್ನು ಮಾಡಲು ಸಾಧ್ಯವಿಲ್ಲದಿರುವುದರಿಂದ, ಕಾಂಗ್ರೆಸಿನ ಅಧ್ಯಕ್ಷತೆಗೆ ರಾಜಿಯಿತ್ತಿರುವೆನೆಂದೂ' ಎಲ್ಲಾ ಪ್ರಾಂತಿಕ ಕಾಂಗ್ರೆಸು ಕಮಿಟಿಗಳೂ ಅಖಿಲಭಾರತ ಕಾಂಗ್ರೆಸು ಕಮಿಟಿಯ ಅಧೀನ ಸಂಸ್ಥೆಗಳಾದ ನಿಮಿತ್ತ ಅದರ ಆಜ್ಞೆಗಳಿಗೆ ಬದ್ಧರಾಗಿರತಕ್ಕದ್ದೆಂದೂ ಹೇಳಿದ್ದರು!

◈

ಬೋಸರು, ದೇಶಬಂಧುಗಳು ಸಾಕ್ಷಾತ್ತಾಗಿ ಹೇಳಿದ ಈ ಮಾತನ್ನೂ ಅಲ್ಲಗಳೆಯುವರೇ?

◈

ಶಿಸ್ತುಜಾರಿಯ ಕುರಿತು ಕಡೆಗೆ ಮಹಾತ್ಮಾಜಿಯವರ ಪ್ರಕಟನೆ ಹೊರಟಿತು!

◈

ಬೋಸರು, ಈ ಶಿಸ್ತು ಜಾರಿಯನ್ನು ಸ್ವಾಗತಿಸಿದ್ದರಿಂದೂ, ಹಾಗಿರುವಾಗ ವರ್ಕಿಂಗ್ ಕಮಿಟಿಯು ಅದನ್ನು ಅಂಗೀಕರಿಸದೆ ಉಪಾಯವಿಲ್ಲವೆಂದೂ ಇದು ಬಹಳ ಕಡಿಮೆಯ ಶಿಕ್ಷೆಯೆಂದೂ ಅವರ ಹೇಳಿಕೆ!

◈

ಬೋಸರು ಇದಕ್ಕೆ ಉತ್ತರ ಹೇಳುತ್ತಾ, ವರ್ಕಿಂಗ್ ಕಮಿಟಿಯವರು ಮತ್ತು ಗಾಂಧಿಜಿಯವರು ನನಗೆ ಇದಕ್ಕಿಂತ ದೊಡ್ಡ ಶಿಕ್ಷೆ ಮಾಡಲಿ, ಆದರೆ ಕಾಂಗ್ರೆಸಿನ ರಂಗವಾದ 'ರಾಷ್ಟ್ರೀಯ ಕೇಳಿಕೆ'ಯನ್ನು ಮುಂದೊತ್ತಿ ಪೂರ್ಣ ಸ್ವರಾಜ್ಯವನ್ನು ಪಡೆಯಲಿ ಎಂದರು

◈

ಕಳೆದ ಅರ್ಧ ಶತಮಾನಗಳಿಂದ ಪೂರ್ಣ ಸ್ವರಾಜ್ಯಕ್ಕಾಗಿ ಹೋರಾಡಿದ ಮಹಾತ್ಮರು ಮತ್ತು ದೇಶದ ಪ್ರತಿಷ್ಠಾವಂತ ದೇಶಭಕ್ತರಾದ ಅವರ ಅನುಯಾಯಿಗಳು, ಇಂದು ಪೂರ್ಣ ಸ್ವರಾಜ್ಯವನ್ನು ಮಾರುವುದಕ್ಕಾಗಿ ಯತ್ನಿಸುತ್ತಿರುವರೆಂದು ಬೋಸರು ತಿಳಿದಂತಿದೆ!

THE CENTRE OF THE EAST INDIES

HAVE you never remarked how all your friends in the East Indies have spent a longer or shorter time at Bandoung?

This has always led me to think that Bandoung must be considered as the centre of the Dutch East Indies, the town where everyone is happy, the Pearl of the Crown of the East Indies. Although places like Batavia and Sourabaya are much more important and have much greater populations, Bandoung is the town where holidays are spent, where one suddenly meets old friends after years of hard work in the bush and where health may be restored in a perfectly healthy and magnificent mountain climate in one of the most beautiful regions of Java, that of the Preang Regency.

Above all, Bandoung is the centre of mountain cultures, such as tea, coffee and cinchona, which have reached a degree of prosperity, hitherto unknown in the Preang District. Cinchona plays a particularly important part, for this culture has been able to develop perfectly in this region, owing to the favourable nature of the soil and the ideal climate.

Whilst being the centre of the cinchona culture, Bandoung is equally well known by reason of the quinine which is extracted being an indispensable remedy. This may be concluded from the recommendations of the Malaria Commission, set up by the League of Nations, according to which a daily dose of 15 to 20 grains of quinine should be given from 5 to 7 days to cure cases of malaria. This Commission advises that as a preventive measure, a daily dose of 6 grains of quinine should be taken through out the fever-season.

The interest that lies in quinine does not just stop at its use against malaria; this product is also of the greatest importance as a preventive of inflenza. For this, a daily dose of 3 grains is required.

Since science has discovered that such dangerous and annoying maladies as influenza colds and influenza can be prevented by taking a small dose of the natural product, quinine, every day, the number of possible applications of this substance extracted from cinchona has been doubled.

Mal. E. No. 59

'ಓವಲ್ಟಿನ್' ಮಿದುಳನ್ನೂ ನರವನ್ನೂ ಪೋಷಿಸುವುದು

ಆರೋಗ್ಯವನ್ನೂ ಬಲವನ್ನೂ ವೃದ್ಧಿಸುವುದು!

ನೀವು ಆಯಾಸಪಟ್ಟಾಗ, ಉದಾಸೀನಪಟ್ಟಾಗ ನಿಮ್ಮ ನರನಾಡಿಗಳು ಸೊರಗಿದ್ದಾಗ ಒಂದು ಕಪ್ 'ಓವಲ್ಟಿನ್' ಪಾನೀಯವು ದಣಿವನ್ನು ನಿವಾರಿಸಿ ನರನಾಡಿಗಳನ್ನು ಉತ್ತೇಜಿಸುವಂತೆ ಇನ್ನಾವ ಪಾನೀಯಗಳೂ ಮಾಡವು.

'ಓವಲ್ಟಿನ್' ದೇಹಕ್ಕೆ, ಮಿದುಳಿಗೆ, ನರನಾಡಿಗಳಿಗೆ ಶೀಘ್ರದಲ್ಲಿಯೇ ಶಕ್ತಿಯನ್ನು ಉಂಟುಮಾಡುವುದು. ಪ್ರಕೃತಿಯ ಉತ್ಕೃಷ್ಟ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟದ್ದು — ನೆನೆಹಾಕಿ ಹುರಿದ ಮಾಗಿದ ಬಾರ್ಲಿ, ದನದ ಹಸಿ ಹಾಲು ಅಮೂಲ್ಯವಾದ ನೈಸರ್ಗಿಕ ಶಕ್ತಿವರ್ಧಕ ಜೀವಾತು ಮತ್ತು ಫೊಸ್ಫಟೈಡ್ಸಿನಿಂದ ತಯಾರಿಸಿಟ್ಟ 'ಓವಲ್ಟಿನ್' ಸುದೃಢವಾದ ದೇಹವನ್ನು ಚುರುಕಾದ ಬುದ್ಧಿಯನ್ನುಂಟುಮಾಡುವಂತೆ ನಿಮ್ಮನ್ನು ಪೋಷಿಸುವುದು.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು: ಜೇಮ್ಸ್‌ರೈಟ್ ಲಿಮಿಟೆಡ್,
ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ.

'ಓವಲ್‌ಟಿನ್'

·OVALTINE

'ಓವಲ್ಟಿನ್' ಬಿಸ್ಕತ್ತುಗಳು:

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕತ್ತುಗಳು. ಇವುಗಳಲ್ಲಿ ವೈಶಿಷ್ಟ್ಯ ಬೆಲೆಯ 'ಓವಲ್ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

ಸ್ವದೇಶಾಭಿಮಾನಿ
SWADESHABHIMANI

ರಕ್ಷ್ಯೈರ್ಮುರ್ಹಾರ್ಕ್ಸೈಃಸ್ವಕುರ್ಮನ
ದೇವಾಃ । ನ ಭೀಚಿರೆ ಭೀಮ
ವಿಷೇಣ ಭೀತಿಮ್ । ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ

ದೊರೆಯಲನುಪಮ ರತ್ನಗಳು
ಸಾ । ಗರವ ಮಥಿಸಲು ಸುರರು
ಗದರಿಂ ಹರುಷವಾಯಿತೆ? ಮತ್ತೆ
ವಿಶ್ವವ ಸುಟ್ಟತೆ ಬರುತಿರುವ ।
ಗರಳಕವಳಿಂಜಿದರೆ ಸುಧೆಯನು ।
ಮರೆಸು, ಕ್ಷುದ್ರರ
ತೆರದಿ ಕುಳಿತರೆ । ತೆರಳ ಒಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ॥

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

1—9—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧—೯—೧೯೩೯

ಕಾಂಗ್ರೆಸಿನ ಶಕ್ತಿಯು ಐಕ್ಯ ಮತ್ತು ಅಹಿಂಸೆಯಲ್ಲಿದೆ

ಪ್ರಧಾನ ಮಂತ್ರಿಗಳ ಸಮ್ಮೇಳನ ★ ಬ್ರಿಟಿಷರು ಒಕ್ಕಲುಗಳಲ್ಲ

ಕಾಂಗ್ರೆಸು ಮಂತ್ರಿಗಳ ವಿಚಾರ ವಿನಿಮಯ

ಪ್ರಧಾನ ಮಂತ್ರಿಗಳ ಸಮ್ಮೇಳನ

ಪೂನಾದಲ್ಲಿ ಕಾಂಗ್ರೆಸ ಪ್ರಧಾನ ಮಂತ್ರಿಗಳ ಸಭೆಯು ನೆರವೇರಿತು.

ಅಂತರ್ರಾಷ್ಟ್ರೀಯ ಪರಿಸ್ಥಿತಿ ಹಾಗೂ ರಶ್ಯ ಜರ್ಮನ್ ಒಪ್ಪಂದದ ಮಾತು ಕತೆಯೇ, ಪ್ರಾಮುಖ್ಯ ಸಂಭಾಷಣಾ ವಿಷಯವಾಗಿತ್ತು.

ಅದಾದ ಮೇಲೆ ಬೇರೆ ಬೇರೆ ಪ್ರಾಂತಗಳಲ್ಲಿ ನಡೆಯುತ್ತಿರುವ ಕಾಂಗ್ರೆಸು ಸರಕಾರಗಳ ಆಡಳಿತೆಯ ವಿಷಯವು ವಿಚಾರಿಸಲ್ಪಟ್ಟಿತು.

ಬೇರೆ ಬೇರೆ ಪ್ರಾಂತಗಳಲ್ಲಿ ಜಾರಿಗೆ ತಂದ, ತೆರಿಗೆಯ ವಿಷಯಗಳನ್ನು, ಅಲ್ಲಲ್ಲಿನ ಪ್ರಧಾನ ಮಂತ್ರಿಗಳು ವಿವರಿಸಿದರು. ಮದ್ಯಪಾನ ನಿಷೇಧದ ವಿಷಯವೂ ಆಲೋಚಿಸಲಾಯಿತು.

ಬ್ರಿಟಿಷ್ ಸರಕಾರವು, ಯುದ್ಧವಾದಲ್ಲಿ ಹಿಂದೀಯರ ಅಭಿಪ್ರಾಯವನ್ನು ವಿಚಾರಿಸದೆ, ಹಿಂದೂದೇಶವನ್ನು ಯುದ್ಧಕ್ಕೆಳೆದಲ್ಲಿ ಏನು ಮಾಡತಕ್ಕದ್ದೆಂದು ವಿಚಾರಿತವಾಯಿತು. ಶ್ರೀ ಮಹಾದೇವ ದೇಸಾಯಿಗಳ ಸಭೆಯಲ್ಲಿ ಹಾಜರಿದ್ದರು. ಅವರು ವಾರ್ಧಾಕ್ಕೆ ತೆರಳಿ, ಅಲ್ಲಿಂದ ಗಾಂಧಿಜಿಯವರ ಅಭಿಪ್ರಾಯವನ್ನು ಕಳುಹಿಸುವರು.

ಔದ್ಯೋಗಿಕ ಚಳವಳ

... ಬೇರೆ ಬೇರೆ ... ಔದ್ಯೋಗಿಕ ಚಳವಳದ ಕುರಿತು ವಿಚಾರಿಸಲಾಯಿತು. ... ಕಾಂಗ್ರೆಸ ಕೂಲಿಗಾರರ ಪರವಾಗಿರುವುದರಿಂದ ... ಪಕ್ಷದವರು ಕೂಲಿಗಾರರ ಪರವಾಗಿ ಮುಂದಾಳುತನ ವಹಿಸಿ ... ಗಳನ್ನು ನಿಷೇಧಿಸುವ ನಿರ್ಣಯವಾಯಿತು. ಕಾಂಗ್ರೆಸ ಸರಕಾರವು ಮುಷ್ಕರ ಹೂಡದೆ, ಪ್ರತಿಯೊಂದು ಜಗಳವೂ ಒಪ್ಪಂದದಿಂದ ಆಗುವಂತೆ ಯುಕ್ತಿ ಸಮೇತವಾಗಿ ನಿಶ್ಚಯ ಮಾಡಿತು. ... ದಾಳಿಗಾರರ ಮತ್ತು ಕೂಲಿಗಾರರ ಸಮಸ್ಯೆಯನ್ನು ಪರಿಹರಿಸಲು, ಕಾಂಗ್ರೆಸು ಸರಕಾರವು ಗಾಂಧಿಜಿಯವರ ಕ್ರಮವನ್ನು ಅನುಸರಿಸುವುದಾಗಿ ನಿರ್ಣಯವಾಯಿತು.

ಕೈ ಮಗ್ಗ ಮತ್ತು ಸಕ್ಕರೆಯ ಕೈಗಾರಿಕೆ

ಹಿಂದೂ ದೇಶದಲ್ಲಿ ಮಾರ್ಕೆಟ್ ... ಬಂದಿಲ್ಲ, ನಡೆದ ... ಕೈಮಗ್ಗದ ಕೈಗಾರಿಕೆ ... ಜವಳಿ ವಸ್ತ್ರಗಳ ... ಸರ್ಕಾರವು ... ಹೆಚ್ಚು ಕೈಮಗ್ಗಗಳ ... ಆದದರಿಂದ ಗಿರಾಕಿಗಳಿಂದ ... ಆಗದಂತೆ ... ನಿರ್ಣಯವಾಯಿತು.

ಅಂತೆಯೇ ಇಂದು ಉತ್ತರಹಿಂದುಸ್ಥಾನದಲ್ಲಿ ಒಳಿಯುತ್ತಿರುವ ಸಕ್ಕರೆಯು ಇತರ ಹಿಂದೂದೇಶಕ್ಕೆ ಸಾಕಾಗಿರಲು ಬೇರೆ ಕಡೆಗಳಲ್ಲಿ ಬೆಳೆಯುವಂತೆ ನೋಡಬೇಕಾಗಿಯೂ ದಕ್ಷಿಣ ಹಿಂದೂಸ್ಥಾನದ ಕೈಮಗ್ಗದಕೈಗಾರಿಕೆಯು ಉತ್ತರಹಿಂದೂಸ್ಥಾನದಲ್ಲಿ ಹೆಚ್ಚಲು ಆಸ್ಪದ ಕೊಡಬಾರದಾಗಿಯೂ ನಿರ್ಣಯವಾಯಿತು.



ಪೂನಾದಲ್ಲಿ ಜರಗಿದ ಕಾಂಗ್ರೆಸು ಪ್ರಧಾನರ ಪರಿಷತ್ತಿಗೆ—ಮಾನ್ಯ ಎಲ್. ಎಂ. ಪಾಟೀಲ್, ಮಾನ್ಯ ಗೋಪೀನಾಥ ಬರ್ಡೋಲೋಯ್ ಮತ್ತು ಮಾನ್ಯ ಕೃಷ್ಣಸಿಂಹ್ ಹೋಗುವುದು

'ಕಡೆಯ ನುಡಿ ಪ್ರಯೋಜನವಿಲ್ಲ' ಸರ್ದಾರರ ನಿರ್ಧಾರ

ಕೆಲವಂದಿ, ಮದ್ಯಪಾನ ... ಹೊರತೆರಿಗೆ ಮೊದಲಾದ ... ಗಳ ವಿಷಯವಾಗಿ, ದೂರಬಹುದು. ಆದರೆ ಕಾಂಗ್ರೆಸ ಸರಕಾರವು ಇದನ್ನು ಮಡಿದ್ದು ಬಡವರ ಉದ್ಧಾರಕ್ಕಾಗಿ ಮದ್ಯಪಾನ ನಿಷೇಧದಿಂದ ಆದ ನಷ್ಟವನ್ನು ತುಂಬಿಸಲು ಕಾಂಗ್ರೆಸ ಸರಕಾರಕ್ಕೆ ಬೇರೆ ದಾರಿಯಿಲ್ಲ ... ದೇಶ ಸೇವೆ ... ಯನ್ನು ... ಬ್ರಿಟಿಷರ ... ಗಳಲ್ಲಿ ...

ನಮ್ಮ ಒಲವು ... ಅಹಿಂಸಾತ್ಮಕ ... ಬ್ರಿಟಿಷರನ್ನು ... ಹಾಗಲ್ಲದೆ ... ಒಕ್ಕಲುಗಳಾಗಿ ಬ್ರಿಟಿಷರು ಇಲ್ಲ ಹೀಗೆಂದು ಸರ್ದಾರ ಪಟೇಲರು ಪ್ರಧಾನರ ಸಮ್ಮೇಳನದಲ್ಲಿ ಹೇಳಿದರು.

ತಾತ್ಕಾಲಿಕ ಫೆಡರಲ್ ಮಂತ್ರಿಮಂಡಳದ ರಚನೆ

ಅಂತರ್ ರಾಷ್ಟ್ರೀಯ ಸಮಸ್ಯೆಗೆ ಪರಿಹಾರ

ಸ್ಟೇಟ್ಸ್‌ಮನ್ ಪತ್ರಿಕೆಯ ಲೇಖನವೊಂದರಲ್ಲಿ ಅಂತರ್ ರಾಷ್ಟ್ರೀಯ ಪರಿಸ್ಥಿತಿಯ ವಿಷಮತೆಯ ಸಂದರ್ಭದಲ್ಲಿ, ಒಂದು ತಾತ್ಕಾಲಿಕ ಫೆಡರಲ್ ಮಂತ್ರಿಮಂಡಲದ ರಚನೆಯಾಗತಕ್ಕದೆಂದೂ, ಆ ಬಗ್ಗೆ ಮಿ. ಜಿನ್ನಾ, ಶ್ರೀ ಭುಲಾಭಾಯಿ ದೇಸಾಯಿ ಇವರನ್ನು ಕರೆದು ವಿಚಾರಿಸುವುದು ಅವಶ್ಯವಿದೆಯೆಂದೂ ಉಲ್ಲೇಖಿತವಾದ ವಿಷಯವು ಹೆಚ್ಚು ವಿಚಾರಣೀಯವಾಗಿದೆ. ಯುದ್ಧ ಸಂಭವದ ಸಮಯದಲ್ಲಿ ಪ್ರಾಂತಿಕ ಸರಕಾರಗಳು ರಾಜೀನಾಮೆಯಿತ್ತ ಸಂದರ್ಭದಲ್ಲಿ, ಅದರಿಂದ ಬ್ರಿಟನು ಮತ್ತು ಹಿಂದೂದೇಶಗಳ ಸಂಬಂಧವು ಬಹಳ ವೈಷಮ್ಯವಾಗಿ ನಿಲ್ಲಬಹುದೆಂದೂ, ಕೇಂದ್ರದಲ್ಲಿ ಜನರ ಪ್ರಾತಿನಿಧ್ಯವಿಲ್ಲದ ಸರಕಾರವೂ, ಪ್ರಾಂತಗಳಲ್ಲಿ ಪ್ರಾತಿನಿಧ್ಯ ಸರಕಾರವೂ ಹೀಗೆ ಅಸಾಧ್ಯವಾಗಿ ಪರಿಣಾಮವಾದೀತೆಂದೂ ಪತ್ರಿಕೆಯು ಹೇಳುತ್ತದೆ.

ಈ ವಾರ್ತೆಯು ಅಧಿಕಾರಿಕ ವಾರ್ತೆಯೋ ಅಲ್ಲವೋ ಎಂಬ ವಿಷಯವಾಗಿ ಈಗ ಏನೂ ಹೇಳಬರುವುದಿಲ್ಲ. ಆದರೆ ಸಿಮ್ಲಾ ಎಸೆಂಬ್ಲಿಯ ಸದಸ್ಯರು ಯುದ್ಧ ಪ್ರಸಂಗವು ಸಂಭವಿಸುವಲ್ಲಿ, ಏನಾದರೂ ಒಂದು ಹೊಸ ರೀತಿಯ ಮಾರ್ಪಾಟಿನ ಸರಕಾರ ರಚನೆಯಾಗಲಿದೆಯೆಂದು ನಿರೀಕ್ಷಿಸುತ್ತಾರೆ.

ಭಾರತೀಯ ಸೈನ್ಯ

ಇದುವರೆಗೆ ಭಾರತೀಯರಿಗೆ ಬ್ರಿಟಿಷ್ ಸರಕಾರದೊಡನೆ ಇದ್ದ ಚರ್ಚೆಯೆಂದರೆ ಸೈನ್ಯಕ್ಕಾಗಿ ಆಗುವ ಖರ್ಚು ಮತ್ತು ವಿದೇಶೀಯ ಸೈನಿಕರನ್ನು ಸೇರಿಸಿ ಅವರಿಗೆ ವಿಪರೀತ ಸಂಬಳಕೊಡುವುದು; ಆದರೆ, ಈಗ ಆ ವಿಷಯದಲ್ಲಿ ಭಾರತೀಯರನ್ನು ಸೈನ್ಯದಲ್ಲಿ ಸೇರಿಸಬೇಕೆಂಬ ನಿರ್ಣಯವಾಗಿದ್ದರೂ ಸರಕಾರವು ಬಹು ಮಂದಗತಿಯಿಂದ ಕೆಲಸವನ್ನು ಮಾಡುತ್ತಿತ್ತು. ಈಗ ತಿರಿಗಿ ಎಲ್ಲಾ ಸೈನ್ಯಗಳನ್ನು ಸಂಪೂರ್ಣ ಭಾರತೀಯ ಸೈನಿಕರಿಂದ ತುಂಬಿಸಲು ಸರಕಾರವು ಇಷ್ಟಪಡುವುದಂತೆ.

ಬೇರೆ ಬೇರೆ ಪಕ್ಷದ ಮುಖಂಡರನ್ನು ಕರೆದು, ಅವರ ಒಟ್ಟಿನ ತಾತ್ಕಾಲಿಕ ಫೆಡರಲ್ ಮಂತ್ರಿಮಂಡಳವಾಗಬೇಕೆಂದು ಪಾರ್ಲಿಮೆಂಟಿನ ಹಲವು ಮಂದಿ ಮುಖಂಡರ ಅಭಿಪ್ರಾಯದ ಮೇಲೆ ಇದು ಸೂಚಿತವಾಗಿದೆಯೆಂದು ತಿಳಿಯುತ್ತದೆ. ಹೀಗೆ ಮಾಡಿ ಹಿಂದೂದೇಶದ ಸಾರ್ವಜನಿಕ ಅಭಿಪ್ರಾಯವನ್ನು ತೃಪ್ತಿಪಡಿಸಲು ಬ್ರಿಟಿಷ ಸರಕಾರವು ಯತ್ನಿಸುವುದು.

ಹೊಸ ಕಾನೂನು

ಹಿಂದೂದೇಶದಲ್ಲಿ ಇರುವ, ಇಲ್ಲಿಂದ ಹೊರಹೋಗುವ ಮತ್ತು ಬರುವ ಬ್ರಿಟಿಷರ ಮೇಲೆ ಹೊಸ ನಿರ್ಬಂಧದ ಶಾಸನವೊಂದು ಪ್ರಕಟವಾಗಿದೆ.

ಪೂನಾದ ಕಾಂಗ್ರೆಸು ಪ್ರಧಾನರ ಪರಿಷತ್ತಿಗೆ ಆಚಾರ್ಯ ಕೃಪಾಲನಿ, ಮಿಸ್ಟರ್ ಎಲ್ ಎಂ ಪಾಟಿಲ್, ಮಿಸ್ಟರ್ ಗೋಪಿನಾಥ ಬಾರ್ಡೋಲಿ, ಮಿಸ್ಟರ್ ಶ್ರೀ ಕೃಷ್ಣಸಿಂಹ ಇವರು ಹೋಗುವುದು

ಸಿಂಧದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ

ಸಿಂಧದಲ್ಲಿ ಕಾಂಗ್ರೆಸು ಐಕ್ಯಮಂತ್ರಿಮಂಡಳದ ವಿಷಯವಾಗಿ, ಮೌಲಾನಾ ಆಝಾದರು, ಸರ್ದಾರ ಪಟೇಲರು, ಡಾಕ್ಟರ್ ಚೋಯಿತ್‌ರಾಮರಿಗೆ ಅನುಮತಿಯಿತ್ತಿರುವರು.

ಡಾಕ್ಟರ್ ಚೋಯಿತ್‌ರಾಮರು ಪ್ರಧಾನ ಮಂತ್ರಿ ಅಲ್ಲಾಬಕ್ಷರನ್ನು ಕಂಡು ಆ ಕುರಿತು ಸಂಭಾಷಣೆ ನಡೆಸಲಿರುವರು.

ನಿಮಿಷದಲ್ಲಿ ಭೇದಗಳು ಮುಗಿವವು

ಬೋಸರ ಹೇಳಿಕೆ

ಇಂತಹ ಅಂತರ್‌ರಾಷ್ಟ್ರೀಯ ಗೊಂದಲದ ಸಮಯದಲ್ಲಿ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯವರು ಮತ್ತು ಗಾಂಧಿಜಿಯವರು, ಪೂರ್ಣ ಸ್ವರಾಜ್ಯಕ್ಕಾಗಿ ಇಂದಿನ ದೌರ್ಬಲ್ಯದ ತತ್ವವನ್ನು ಬಿಟ್ಟು ಪೂರ್ಣ ಸ್ವರಾಜ್ಯಸಾಧನೆಗಾಗಿ ಕಳೆದ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯವಾದ ರಾಷ್ಟ್ರೀಯ ಕೇಳಿಕೆಯನ್ನು ಮುಂದಿಟ್ಟು ಕೆಲಸಮಾಡಿದಲ್ಲಿ ನಮ್ಮ ಅಭಿಪ್ರಾಯ ಭೇದವು ನಿಮಿಷ ಮಾತ್ರದಲ್ಲಿ ಮಾಯವಾಗುವುದೆಂದು ಹೇಳುತ್ತಾರೆ.

ಶೀಯಾ ಸುನ್ನೀ ಗಲಭೆಯು ಕೊನೆಗೊಳ್ಳುವುದು

ಮೌಲಾನಾ ಅಜಾದರ ಸಾಹಸ

ತನ್ನ ಆರೋಗ್ಯವನ್ನೂ ಲಕ್ಷಿಸದೆ ಲಕ್ನೋದಲ್ಲಿ ನಡೆಯುತ್ತಿರುವ ಶೀಯಾ ಸುನ್ನೀ ಮುಸಲ್ಮಾನರೊಳಗಿನ ಜಗಳವನ್ನು ನಿಲ್ಲಿಸಲು ಮೌಲಾನಾ ಅಜಾದರು ಅಲ್ಲಿಗೆ ತೆರಳಿದ್ದರಷ್ಟೆ, ಅವರ ಮುಖಂಡರನ್ನು ಕಂಡು ಮಾತನಾಡಿ, ಈಗ ಕಳೆದ ಹಲವು ದಿನಗಳಿಂದ ನಡೆಯುತ್ತಿದ್ದ ಸತ್ಯಾಗ್ರಹ ಚಾರಿಸುವಿಕೆಯನ್ನು ನಿಲ್ಲುವಂತೆ ಅವರು ಮಾಡಿದರು. ಬೇಗನೇ ಉಭಯ ಪಕ್ಷದ ಮುಖಂಡರ ಸಮ್ಮೇಳನವೊಂದನ್ನು ಕರೆದು ಈ ಜಗಳವನ್ನು ಸಂಪೂರ್ಣ ನಿಲ್ಲಿಸುವ ಭರವಸೆಯುಳ್ಳವರಾಗಿರುವರು.

ಜಾತೀಯ ತೀರ್ಮಾನವು ನಿಷಿದ್ಧವಾದುದು

ಕಲ್ಕತ್ತಾ ಅಧಿವೇಶನದ ನಿರ್ಣಯ

ಕಲ್ಕತ್ತಾದಲ್ಲಿ ನೆರೆದ, ಜಾತೀಯ ತೀರ್ಮಾನ ವಿರುದ್ಧದ ಚತುರ್ಥ ಪರಿಷತ್ತು ಶ್ರೀ ಎಂ. ಎಸ್. ಆಣೆಯವರ ಅಧ್ಯಕ್ಷತೆಯಿಂದ, ಸರಕಾರವು ಜಾತೀಯ ತೀರ್ಮಾನದಂತೆ ಪ್ರಾತಿನಿಧ್ಯ ಚುನಾವಣೆಯ ಕ್ರಮವನ್ನು ತೀವ್ರವಾಗಿ ಕೈಕೊಳ್ಳಬೇಕಾಗಿಯೂ ನಿರ್ಣಯವಾಯಿತು.

ಮುಸ್ಲಿಂ ಲೀಗಿನ ಸಮ್ಮೇಳನ

ಪಂಜಾಬಿನ ಪ್ರಧಾನರ ಮೇಲೆ ಶಿಸ್ತು ಜಾರಿಯೆ?

ಮುಸ್ಲಿಂ ಲೀಗ್ ಕೌನ್ಸಿಲಿನ ಸಭೆಯು ದಿಲ್ಲಿಯಲ್ಲಿ ಮಿ। ಜಿನ್ನರ ಅಧ್ಯಕ್ಷತೆಯಲ್ಲಿ ಸೇರಿತು. ಪಂಜಾಬಿನ ವಿಷಯವೇ ಮುಖ್ಯ ಮಾತುಕತೆಯಾಗಿತ್ತು.

ಭಾರತ ಮತ್ತು ಬ್ರಿಟಿಷ್ ಸರಕಾರದ ವ್ಯಾಪಾರದ ಸಂಬಂಧದಲ್ಲಿ, ಪಂಜಾಬಿನ ಪ್ರಧಾನ ಮಂತ್ರಿ ಸರ್ ಸಿಕಂದರ್ ಹಯ್ಯತ್‌ಖಾನರು ಈಚೆಗೆ ಎಸೆಂಬ್ಲಿಯಲ್ಲಿ ಹೇಳಿದ ವಿಷಯವು, ಮುಸ್ಲಿಂ ಲೀಗಿನ ತತ್ವಕ್ಕೆ ವಿರೋಧವಾಗಿರುವುದರಿಂದಲೂ, ಮಾತ್ರವಲ್ಲದೆ, ಅವರ ಹೊಸ ಫೆಡರೇಶನ್ ಯೋಜನೆಯೂ ಮುಸ್ಲಿಂ ಲೀಗಿಗೆ ಅಸಮ್ಮತಿಯದಾಗಿರುವುದರಿಂದಲೂ, ಅವರ ಮೇಲೆ ಆ ಕಾರ್ಯಗಳನ್ನು ಮಾಡಿದುದಕ್ಕಾಗಿ ಶಿಸ್ತು ಜಾರಿಮಾಡಬೇಕೆಂಬ ಠರಾವು ಬಂತು.

ಕಡೆಗೆ ಅದು ಅವರು ಲೀಗಿನ ಪರವಾಗಿ ಮಾಡಿದ ಕೆಲಸವಲ್ಲವೆಂದೂ, ಅವರ ವೈಯುಕ್ತಿಕ ಕಾರ್ಯವೆಂದೂ, ಈ ಕುರಿತು ಲೀಗಿನವರು ಸ್ಪಷ್ಟವಾದ ನೀತಿಯನ್ನು ಮಾಡದಿರುವುದರಿಂದ, ಶಿಸ್ತು ಜಾರಿಮಾಡಲಾಗುವುದಿಲ್ಲವೆಂದೂ ನಿಶ್ಚಯಿಸಿ ಠರಾವನ್ನು ಹಿಂದೆಗೆಯಲಾಯಿತು.

ಶ್ರೀ ಶ್ರೀನಿವಾಸ ಅಯ್ಯಂಗಾರರು

ಕಾಂಗ್ರೆಸು ಸದಸ್ಯತನಕ್ಕೆ ರಾಜಿನಾಮೆಯಿತ್ತರು

ಇತ್ತೀಚೆಗೆ ಕಳೆದ ದಶಮಾನದಿಂದ ಶ್ರೀ ಶ್ರೀನಿವಾಸ ಅಯ್ಯಂಗಾರರು ಕಾಂಗ್ರೆಸು ತತ್ವಗಳ ಕುರಿತು ವಿಮರ್ಶೆಯ ಭಾಷಣ ಮಾಡುತ್ತಾ, ತಿರಿಗಿ ಸಾರ್ವಜನಿಕರ ಗಣ್ಯತೆಯನ್ನು ಅಭಿಲಾಷೆ ತೋರಿಸಿದ್ದರು. ಹಿಂದಿನ ಕಾಂಗ್ರೆಸಿನ ಅಧ್ಯಕ್ಷರಾಗಿದ್ದ ಇವರೆ, ಇಂದು ಕಾಂಗ್ರೆಸಿನ ತತ್ವಗಳಲ್ಲಿ ತನ್ನ ಅಭಿಪ್ರಾಯ ವ್ಯತ್ಯಾಸವಿದೆಯೆಂದೂ ಆದಕಾರಣ ತಾನು ಕಾಂಗ್ರೆಸಿನ ನಾಲ್ಕಾಣೆಯ ಸದಸ್ಯತ್ವದಿಂದಲೂ ರಾಜಿಕೊಟ್ಟಿರುವೆನೆಂದೂ, ಹೇಗಿದ್ದರೂ ಕಾಂಗ್ರೆಸಿನ ಉದ್ದೇಶಗಳಿಗಾಗಿ ಗಾಂಧಿಜಿಯವರು ಮಾಡುತ್ತಿರುವಂತೆ ತಾನೂ ಮಾಡುವುದಾಗಿಯೂ ಹೇಳುತ್ತಾರೆ. ಕಾಂಗ್ರೆಸಿನ ತತ್ವದಲ್ಲಿ, ತನಗೆ ಸಮ್ಮತಿಯಾದಾಗ ತಿರಿಗಿ ಅದರ ಸದಸ್ಯರಾಗುವರಂತೆ!

ತೆರೆಯ ಮರೆಯಲ್ಲಿ

ಯುದ್ಧದ ಸಾಧ್ಯಾಸಾಧ್ಯತೆಗಳು

ಯಾವ ಉಪಾಯ?

ರಶ್ಯಾ ಜರ್ಮನ್ ಒಪ್ಪಂದವಾದ ಮೇಲೆ ಇಡೀ ಯೂರೋಪು ರಾಷ್ಟ್ರವೇ ಬಹಳ ಗೊಂದಲದಲ್ಲಿ ಬಿದ್ದಿದೆ. ಇಂದಿನ ಪ್ರಶ್ನೆಯೆಂದರೆ 'ಹಿಟ್ಲರನು ಯಾವಾಗ ಯುದ್ಧವನ್ನು ಆರಂಭಿಸುವನು?' ಎಂಬುದು. ನಾಲ್ಕೈದು ದಿನಗಳ ವರ್ತಮಾನಗಳನ್ನು ಪರೀಕ್ಷಿಸುತ್ತಿದ್ದವರಿಗೆ ಎರಡು ವಿಷಯಗಳು ಎದ್ದು ತೋರುತ್ತಿವೆ

(೧) ಹಿಟ್ಲರನು ಬೇಗನೇ ಡಾನ್ಜಿಗ್ ಹಿಡಿಯುವುದು, ಆ ಮೇಲೆ ರಾಜಿಯ ಮಾತುಕತೆಗೆ ಬರುವುದು ಎಂದು ಕೆಲವರ ವಿಚಾರ.

(೨) ಇನ್ನು ಕೆಲವರ ಊಹನೆಯೆಂದರೆ, ಪೋಲೆಂಡನ್ನು ವಿಭಾಗ ಮಾಡಿಕೊಳ್ಳಲು ಬಹಳ ದೊಡ್ಡ ಹಂಚಿಕೆ ನಡೆಯುತ್ತಿದೆಯೆಂದು

ಹಿಟ್ಲರನಂತಹ ಮನುಷ್ಯನ ವಿಷಯದಲ್ಲಿ, ಮುಂದಿನ ಅವನ ಕಾರ್ಯಕ್ರಮವೇನೆಂದು ಹೇಳುವುದು ಅಸಾಧ್ಯವೇ ಆಗಿದೆ ಆದರೆ ಇಂದಿನ ಸುದ್ದಿಗಳಿಂದ ಹಿಟ್ಲರನು ತನ್ನ ತೀವ್ರ ಧೋರಣೆಯನ್ನು ಸ್ವಲ್ಪ ಮಂದ ಗತಿಗೆ ತಂದಿರುವುದಾಗಿ ತಿಳಿಯಬಹುದು

ಇದರ ಮೊದಲನೆಯ ಚಿಹ್ನೆಯೆಂದರೆ ಇದುವರೆಗೆ ಯಾವುದೇ ವಿಷಯಕ್ಕಾದರೂ, ಯುದ್ಧ ಕೌನ್ಸಿಲಿನವರೊಡನೆ ವಿಚಾರಿಸದ ಹಿಟ್ಲರನು ಈಗ ಅವರೊಡನೆ ದೀರ್ಘಸಂಭಾಷಣೆಗೆ ತೊಡಗಿರುವನು ಎರಡನೆಯದಾಗಿ, ವಿಲಕ್ಷಣವಾಗಿ ಹಿಟ್ಲರನೇ ಕೆಲವು ಸಂಧಿಸೂಚಕ ವಿಷಯಗಳನ್ನು ತಿಳಿಸಿ, ಬ್ರಿಟಿಷ್ ಫ್ರೆಂಚ್ ರಾಯಭಾರಿಗಳನ್ನು ಅವರವರ ರಾಷ್ಟ್ರಗಳಿಗೆ ಕಳುಹಿಸಿರುತ್ತಾನೆ

ಅಂತೂ ಹಿಟ್ಲರನು ತನ್ನ ಕಾರ್ಯಸಾಧನೆಗಾಗಿ, ಯಾವುದಾದರೂ ಬೇರೊಂದು ಉಪಾಯವನ್ನು ಹುಡುಕುತ್ತಿರುವನೆಂದು ತಿಳಿಯಬಹುದಾಗಿದೆ

ಹಿಟ್ಲರನ ಬೆದರಿಕೆಯೆ?

ಪೋಲೆಂಡು ಬ್ರಿಟನು ಫ್ರಾನ್ಸುಗಳು ಒಂದಾಗಿರುವುದನ್ನೂ ಇತ್ತೀಚೆಗೆ ಆದ ಆಂಗ್ಲ ಪೋಲೆಂಡುಗಳು ಒಪ್ಪಂದ ನೋಡಿ ಹಿಟ್ಲರನು ಹೆದರಿದ್ದಾಗಿ ತೋರುತ್ತದೆ.

ಹಿಟ್ಲರನ ಜೀವದ ಗೆಳೆಯನಾದ ಮುಸಲೋನಿಯೂ, ಹಿಟ್ಲರನ ಇತ್ತೀಚೆಯ ಕಾರ್ಯಗಳ ಕುರಿತು ವಿಶೇಷ ಆಸಕ್ತಿ ತೆಕ್ಕೊಂಡಂತೆ ಕಂಡುಬರುವುದಿಲ್ಲ. ಜರ್ಮನಿಯು ಯುದ್ಧ ಶುರುಮಾಡಿದರೆ, ಇಟಲಿಯು ಸಹಾಯ ಕೊಡುವುದೇ ಎಂಬುದು ಸಂಶಯಾಸ್ಪದವಾಗಿದೆ. ಕೆಲಸಮಯಗಳಿಂದ ಮುಸಲನಿಯು ಈ ಕುರಿತು ದೀರ್ಘಾಲೋಚನೆಗೆ ಬಿದ್ದಿದ್ದಾನೆ, ಇತ್ತೀಚೆಗೆ ಜಪಾನು ಜರ್ಮನಿಯೊಡನೆ ಸೈನಿಕ ಒಪ್ಪಂದವನ್ನು ಮಾಡಿಕೊಳ್ಳಲು ಇಷ್ಟಪಡುವುದಿಲ್ಲವಾಗಿ ಹೇಳಿದೆ. ಏಕೆಂದರೆ, ಡಾನ್ಜಿಗಿನ ವಿಷಯದಲ್ಲಿ ಅವರಿಗೆ ಯಾವ ಅಭಿಲಾಷೆಯೂ ಇಲ್ಲದಂತೆ. ಮುಸಲೋನಿಗೂ ಡಾನ್ಜಿಗಿನ ವಿಷಯ ಏನೂ ಆಸಕ್ತಿಯಿಲ್ಲ. ತನ್ನ ಅಂತರ್ಯದಲ್ಲಿ ಮುಸಲಿನಿಗೆ ಹಿಟ್ಲರನು ಇನ್ನೂ ದರ್ಪಶಾಲಿಯಾಗಲು ಬಿಡಲು ಮನಸ್ಸಿಲ್ಲ. ಹಾಗಾಗಿ, ಈ ಮೌನವು ಹಿಟ್ಲರನಿಗೆ ಬಹಳ ದೊಡ್ಡ ಆಘಾತವಾಗಿದೆ.

ಮುಂದಿನ ಯುರೋಪಿನ ಕಲಹದಲ್ಲಿ ತಾನು ತಟಸ್ಥವೆಂದು ಸ್ಪೈನು ಹೇಳಿದೆ

ಈ ಎಲ್ಲಾ ವಿಷಯಗಳಿಂದ ಹಿಟ್ಲರನು ಸ್ವಲ್ಪ ಮಂದಗತಿಯನ್ನು ತಾಳಿದಂತೆ ತೋರುತ್ತದೆ ಹಾಗಾಗಿ, ಶಾಂತಿಯ ಸೂಚನೆಯು ಹಿಟ್ಲರನ ಬಾಯಿಂದಲೇ ಹೊರಡುತ್ತದೆ ಹಿಟ್ಲರನು ಯುದ್ಧಕ್ಕಾತುರನಾಗಿಲ್ಲವೆಂದು ನಾವು ತಿಳಿಯಬಹುದು ಇದುವರೆಗಿನ ಬೊಬ್ಬೆ ಗಲಭೆಗಳೆಲ್ಲಾ ಬರಿಯ ಬೆದರಿಕೆಯ ಗುಳ್ಳೆಗಳು ಹಿಟ್ಲರನು ಯುದ್ಧಕ್ಕಾತುರನಾಗಿಲ್ಲದಿದ್ದರೆ ಯುರೋಪಿನಲ್ಲಿ ಯುದ್ಧ ಸಂಭವಿಸುವಂತಿಲ್ಲ

ಫ್ರಾನ್ಸಿಗೆ ಹಿಟ್ಲರನ ಉತ್ತರ

ಹಿಟ್ಲರನು ಫ್ರಾನ್ಸಿನ ಮಂತ್ರಿ ದಲಾಡಿಯರನ್ನು ಸೂಚಿಸಿದ ಪೋಲೆಂಡಿನ ರಾಜಿಯ ಇಕ್ಕಟ್ಟಿಕ್ಕೆ ನಿಷೇಧಾತ್ಮಕವಾದ ಉತ್ತರವನ್ನು ಕೊಟ್ಟಿರುವನು.

ಜರ್ಮನಿಯು, ಪೋಲೆಂಡಿನ ಇಂದಿನ ಪರಿಸ್ಥಿತಿಯನ್ನು ಸಹಿಸಲಾರದೆಂದೂ, ಈ ಸಂದರ್ಭದಲ್ಲಿ ಜರ್ಮನಿ ಮತ್ತು ಫ್ರಾನ್ಸುಗಳು ರಕ್ತದ ಚೆಲ್ಲಾಟವಾಡುವ ಸಂದರ್ಭ ಬರಬಹುದೆಂಬೂ ಹಿಟ್ಲರನು ಫ್ರಾನ್ಸಿನ ರಾಯಭಾರಿಗೆ ತಿಳಿಸಿರುವನು.

ದಲಾಡಿಯರು, ಜರ್ಮನಿಗೆ ಪೋಲೆಂಡು ಗೌರವದ ಇತ್ಯರ್ಥಕ್ಕೆ ಸಮ್ಮತಿಸುವುದೆಂದೂ ಹೇಳಿಕಳುಹಿಸಿದ್ದರು. ಈ ಸಂದರ್ಭದಲ್ಲಿ ತನ್ನಿಂದ ಆಗಬೇಕಾದ ಎಲ್ಲಾ ಸಹಾಯವನ್ನೂ ತಾನು ಮಾಡಲು ಸಿದ್ಧನಿರುವೆನೆಂದು ಹೇಳಿದ್ದರು.

ಇದಕ್ಕೆ ಹಿಟ್ಲರನು ಡಾನ್ಜಿಗನ್ನು ತನ್ನ ಸ್ವಾಧೀನಕ್ಕೆ ಬಿಡದೆ ಯಾವ ಮಾತುಕತೆಯೂ ನಡೆಯಲು ಸಾಧ್ಯವಿಲ್ಲವೆಂದೂ ಹೇಳಿರುವನು

ಬ್ರಿಟನು ಪೋಲೆಂಡನ್ನು ಬಲಗೊಳಿಸದಿದ್ದಲ್ಲಿ ಬರುವ ೨೫ ವರ್ಷಗಳ ತನಕ ಯೂರೋಪಿನ ಶಾಂತಿಗೆ ತೊಂದರೆಯಿರಲಿಲ್ಲವೆಂದೂ, ಬ್ರಿಟನಿನ ಕಾರ್ಯದಿಂದ ಪೋಲೆಂಡು ಆವೇಶಗೊಂಡಿರುವುದೆಂದೂ ಫ್ರಾನ್ಸಿನ ಪ್ರಾಂತವೊಂದು ಬೇರೆಯಾದಲ್ಲಿ ಅದಕ್ಕಾಗಿ ಯುದ್ಧಮಾಡುವಲ್ಲಿ ದಲಾಡಿಯರು ಹಿಂಜರಿಯುವರೇ ಎಂದು ಕೇಳಿರುವನು.

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.
ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ
ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

THE
Canara Banking Corporation Ltd.,
(INCORPORATED IN BRITISH INDIA)
THREE YEARS' CASH CERTIFICATES
bearing interest at 4% p. a
in denominations of
RS. 50/-, 100/-, 500/-, 1,000/-, & 5,000/
are now issued at all our Branches
For particulars call at or write to
any of our nearest Branches.

ಹತ್ತು, ಗಡಿಯಾರಗಳಿಗೆ ಬರೀ ಮೂರು ರೂಪಾಯಿ ಹತ್ತಾಣೆ ಮಾತ್ರ!



ನಾಲ್ಕು ದಮ್ಮಿ ರಿಸ್ಟವಾಚ್‌ಗಳು ಎರಡು ದಮ್ಮಿ ಪಾಕೆಟ್ ವಾಚ್ ಮತ್ತು ಒಂದು ಬಲವಾದ ಮಿಶನ್ ಸಾಮಾನುಗಳಿಂದ ತಯಾರಿಸಲ್ಪಟ್ಟ ಟೈಂಪಿಸ್, ೩೦ ಘಂಟೆಗಳ ಕಾಲ ನಡೆಯುವುದು. ೧೨ ವರ್ಷ ಗ್ಯಾರಂಟೀ, ಈ ಗಡಿಯಾರಗಳನ್ನು ವಿಲಾಯತಿಯಿಂದ ಬಹಳವಾಗಿ ತರಿಸಿರುತ್ತೇವೆ. ಆದರೂ ಈ ರಿಯಾಯತಿ ದರದಂತೆ ೧೦ ಸಾವಿರ ಗಡಿಯಾರಗಳನ್ನು ಮಾರಲು ನಿಶ್ಚಯಿಸಿರುತ್ತೇವೆ ಈ ಸಮಯದಲ್ಲಿ ಬೇಗನೆ ತರಿಸಿಕೊಳ್ಳುವುದು. ಇಲ್ಲವಾದರೆ ಎಲ್ಲಾ ಖರ್ಚಾಗಿ ಹೋಗುವವು ಗಡಿಯಾರಗಳ ಜೊತೆಗೆ ಒಂದು ಫೌಂಟನ್ ಪೆನ್, ೧೪ ಕ್ಯಾರೆಟ್ ರೋಲ್ಡ್ ಗೋಲ್ಡ್ ನಿಬ್ ಸಹಿತ, ಒಂದು ಸುಂದರವಾದ ಹಾರವೂ, ಫ್ರೀಯಾಗಿ ಕೊಡಲಾಗುವುವು. ಟಪ್ಪಾಲು ಖರ್ಚು ಪ್ಯಾಕಿಂಗ್ ಖರ್ಚು ಬೇರೆ. ಸರಿಯಾಗಿ ತೋರದಿದ್ದಲ್ಲಿ ಬೆಲೆ ವಾಪಸು. ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ ಮಾಡಬೇಕು.

ಪತ್ತೆ
German Watch Co., (P. M H)
P. B. No. 27 Amritsar, (India).

ರಶ್ಯಾ ಜರ್ಮನುಗಳೊಳಗೆ ಹತ್ತು ವರ್ಷಗಳ ಒಪ್ಪಂದ

ಬ್ರಿಟನು ಪ್ರತಿಜ್ಞೆಯನ್ನು ಪಾಲಿಸುವುದು

ರೂಸ್‌ವೆಲ್ಟರ ಶಾಂತಿ ಸಂದೇಶ

ಒಪ್ಪಂದದ ಶರತುಗಳು

ರಶ್ಯ ಮತ್ತು ಜರ್ಮನಿಗಳೊಳಗೆ ಒಪ್ಪಂದವು, ಈಗ ಸಹಿ ಹಾಕಲ್ಪಟ್ಟಿತು. ಈ ಒಪ್ಪಂದವು ಹತ್ತು ವರ್ಷಗಳ ವರೆಗೆ ಜಾರಿಯಲ್ಲಿರುವುದು

ಒಪ್ಪಂದದ ವಿವರ ಹೀಗಿದೆ:-

ಈ ಎರಡು ದೇಶಗಳು, ಅನ್ಯೋನ್ಯವಾಗಿ ಯಾವುದೇ ಬಲಾತ್ಕಾರ, ಯುದ್ಧ, ಆಕ್ರಮಣಗಳನ್ನು ಮಾಡಬಾರದು ಇತರರಿಗೆ ಆ ಸಂಬಂಧ ಬೆಂಬಲವಾಗಲೂ ಬಾರದು.

ಇವುಗಳಲ್ಲಿ ಯಾವುದೇ ರಾಷ್ಟ್ರವು ಮೂರನೆಯ ರಾಷ್ಟ್ರದಿಂದ ಯುದ್ಧಕ್ಕೆಳೆಯಲ್ಪಟ್ಟಲ್ಲಿ ಉಳಿದ ರಾಷ್ಟ್ರವು ಮೂರನೇ ರಾಷ್ಟ್ರದ ಬೆಂಬಲ ಹೋಗಕೂಡದು

ಎರಡು ರಾಷ್ಟ್ರಗಳಿಗೆ, ಸಂಬಂಧಿಸಿದ ವಿಷಯಗಳು ಅವುಗಳೆರಡೂ ಕೂಡಿ ಇತ್ಯರ್ಥಿಸಬೇಕು.

ಇವುಗಳಲ್ಲಿ ಯಾವುದೇ ರಾಷ್ಟ್ರಕ್ಕಾಗಲಿ, ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ರೀತಿಯಿಂದ ಎದುರು ನಿಲ್ಲುವುದಿದ್ದರೆ, ಅದಕ್ಕೆ ಈ ಎರಡು ರಾಷ್ಟ್ರಗಳೂ ಸೇರಬಾರದ

ಈ ಎರಡೂ ರಾಷ್ಟ್ರಗಳೊಳಗೆ ಆಗುವ ಯಾವುದೇ ಮತಭೇದಗಳನ್ನು ಮೈತ್ರಿಯಿಂದ ನ್ಯಾಯರೀತಿಯಿಂದ ಇತ್ಯರ್ಥ ಮಾಡಬೇಕು

ಕಡೆಯ ಎರಡು ನಿಬಂಧನೆಗಳು, ಈ ಒಪ್ಪಂದವು, ಎಷ್ಟರ ತನಕ ಬಾಳಿಕೆಯುಳ್ಳದ್ದು ಎಂಬ ವಿಷಯವಾಗಿ ತಿಳಿಸುವವು

ಪ್ರತಿಜ್ಞೆಯನ್ನು ಪಾಲಿಸುವೆವು

ಹೆಲಿಫಾಕ್ಸರ ಎಚ್ಚರಿಕೆ

ಲಾರ್ಡ್ ಹೆಲಿಫಾಕ್ಸರು ಬ್ರಿಟನಿನ ನಿರ್ಧಾರದ ಕುರಿತು ಜಗತ್ತಿಗೆ ಹೀಗೆ ಸಾರುತ್ತಾರೆ,

"ಜರ್ಮನಿಯು ಇಂದು ಡಾನ್ಸಿಗಿನ ಸಮಸ್ಯೆಯಲ್ಲಿ ಪೋಲೆಂಡಿನೊಡನೆ ಕಲಹಕ್ಕೆ ಬರುವ ವಾರ್ತೆಯು ತೀವ್ರವಾಗಿ ಬರುತ್ತಿರುವಾಗ, ಆ ಕುರಿತು ನಮ್ಮ ನಿರ್ಧಾರವನ್ನು ಸ್ಪಷ್ಟಪಡಿಸುವುದು ಅಗತ್ಯವಿದೆ

"ಆದರೆ, ಇಂತಹ ಸಮಸ್ಯೆಯು ಕಾಲದಲ್ಲಿಯೂ, ನ್ಯಾಯರೀತಿಯಿಂದ ವಿಷಯಗಳ ಇತ್ಯರ್ಥಕ್ಕೆ ಪೋಲೆಂಡು ಸರಕಾರವು ಸಿದ್ಧವಿರುತ್ತದೆ ಆದರೆ ಈ ಮಾತುಕತೆಯು ಹೃತ್ಪೂರ್ವಕವಾಗಿರಬೇಕು.

ಪಶುಶಕ್ತಿಯು ಸಲ್ಲದು

"ಇದೀ ಜನಾಂಗದ ಜೀವನವಿರುವುದು, ಅನ್ಯೋನ್ಯ ಒಬ್ಬರನ್ನೊಬ್ಬರು ವಿಶ್ವಾಸದಿಂದ, ಗೌರವದಿಂದ ತಿಳಿದು ವರ್ತಿಸುವುದರಲ್ಲಿ ಅವರವರ ಹಕ್ಕು ಪಾಲನೆಗಾಗಿ ಪ್ರತಿಯೊಬ್ಬನೂ ಯತ್ನಿಸುತ್ತಿರುವಾಗ, ನೆರೆಕರೆಯವರ ಹಕ್ಕಿನಲ್ಲಿ ಮಧ್ಯವರ್ತಿಯಾಗುವುದೂ ಅನುಚಿತವಾಗಿದೆ.

ಯಾವುದೇ ಒಂದು ರಾಷ್ಟ್ರವಾದರೂ ಇನ್ನೊಂದು ರಾಷ್ಟ್ರವನ್ನು ಆಕ್ರಮಿಸುವುದನ್ನು ಬ್ರಿಟನು ತೀವ್ರವಾಗಿ ಖಂಡಿಸುತ್ತದೆ ಯಾವ ರಾಷ್ಟ್ರಗಳ ಸ್ವಾತಂತ್ರ್ಯವು ಅಪಾಯಕಲ್ಪಿತವಾದರೋ ಅವುಗಳ ಬೆಂಬಲವಾಗಿ ಬ್ರಿಟನ ಇದೆ ಈ ಕಾರಣದಿಂದಲೇ ನಾವು ಪೋಲೆಂಡಿನ ಪ್ರತಿಜ್ಞೆ ಕೊಟ್ಟಿದೇವೆ

ರಶ್ಯಾ--ಜರ್ಮನ್ ಒಪ್ಪಂದದ ವಿಷಯ

"ಕೆಲವರ್ಷಗಳಿಂದಲೇ ಈ ಎರಡು ರಾಷ್ಟ್ರಗಳನ್ನು ಅನ್ಯೋನ್ಯ ಜಗಳಾಡುತ್ತಿರಲು, ಇಂದು ಆದ ಒಪ್ಪಂದವು ಜಗತ್ತನ್ನು ವಿಸ್ಮಯಗೊಳಿಸಿದೆ ಇದರ ಪರಿಣಾಮವೇನಾಗಬಹುದೆಂಬುದನ್ನು ನಾನು ಹೇಳುವುದಿಲ್ಲ ಆದರೆ ಇದರಿಂದ ಬ್ರಿಟನು ಪೋಲೆಂಡಿಗೆ ಕೊಡುವ ಬೆಂಬಲವು ದುರ್ಬಲವಾಗಲಾರದು ನಮ್ಮ ಉದ್ದೇಶವು ಪಶುಶಕ್ತಿಯನ್ನು ತಗ್ಗಿಸಿ ಶಾಂತಿ ರಚನೆಮಾಡುವುದು.

ಜರ್ಮನಿ ದ್ವೇಷವಿಲ್ಲ

"ಜರ್ಮನಿಯೊಡನೆ ನಮಗೆ ದ್ವೇಷವಿಲ್ಲ. ಜರ್ಮನಿಯು ಇಂದಿನ ತನ್ನ ಧೋರಣೆಯನ್ನು ಬಿಟ್ಟು ಸೌಹಾರ್ದದ ಮಾತುಕತೆಗೆ ಬರುವಲ್ಲಿ, ಮತಭೇದಗಳನ್ನು ಇತ್ಯರ್ಥಿಸಲು ನಾವು ಸಿದ್ಧರಿದ್ದೇವೆ ಆದರೆ ಜಗತ್ತಿನ ಶಾಂತಿಗಾಗಿ ನಾವು ಇಂದು ಜರ್ಮನಿಯ ಯುದ್ಧದ ಉದ್ದೇಶವನ್ನು ಖಂಡಿತ ಎದುರಿಸುವೆವು

ಬರ್ಮಾದಲ್ಲಿ ನೆರೆಯ ಹಾವಳಿ

ಭಾರತವು ಮಳೆಗಾಗಿ ಹಾತೊರೆಯುತ್ತಿರುವಾಗ ಬರ್ಮಾದಲ್ಲಿ ನೆರೆಯ ಹಾವಳಿಯು ವಿಪರೀತವಾಗಿದೆ ಪಶುಪಾಲಕರು ತಮ್ಮ ತಮ್ಮ ಜಾನುವಾರುಗಳನ್ನು ನೆರೆಯ ಪಾಲಾಗದಂತೆ ಎತ್ತರವಾದ ಪ್ರದೇಶಗಳಿಗೆ ಸಾಗಿಸುತ್ತಿರುವುದು

ಭಾರತದಲ್ಲಿ ಮಳೆಯ ಅಭಾವ

ಕಾಠೇವಾಡದಲ್ಲಿ ಮಳೆಯಿಲ್ಲದೆ ನೀರಿನ ಅಭಾವದಿಂದ ಹುಲ್ಲುಕಡ್ಡಿಯಿಲ್ಲದೆ ಸಹಿಸಾರು ಜಾನುವಾರು ಸಾಯುತ್ತಿವೆ ... ಈ ದುರ್ಭಾಗ್ಯ ಪ್ರಾಣಿಗಳು ಆಹಾರಕ್ಕಾಗಿ ಅಲೆದಾಡುತ್ತಿವೆ

ಶಾಂತಿಗೆ ರೂಸವೆಲ್ಟರ ಬಿನ್ನಹ

ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರು ಹಿಟ್ಲರರಿಗೂ ಪೋಲೆಂಡಿನ ಪ್ರೆಸಿಡೆಂಟ್ ಮೊಸಿಕಿಯವರಿಗೂ ಶಾಂತಿಯ ವಿನ್ನಹವೊಂದನ್ನು ಕಳುಹಿಸಿರುವರು. ಇದರಲ್ಲಿ ಮೂರು ಉಪಾಯಗಳು ಸೂಚಿತವಾಗಿವೆ

ಪ್ರತ್ಯಕ್ಷ ಮಾತುಕತೆನಾಡಿ ಪಕ್ಷಪಾತವಿಲ್ಲದ ಮೂರನೆಯವರ ತೀರ್ಮಾನಕ್ಕೆ ಒಪ್ಪುವುದು, ಎರಡು ರಾಷ್ಟ್ರಗಳೂ ಒಟ್ಟಾಗಿ ಇತ್ಯರ್ಥ ಮಾಡುವುದು ಎರಡು ದೇಶಗಳ ರಾಜಕರ್ತರದ ಕೂಟವೊಂದನ್ನು ಮಾಡುವುದು ಹೀಗೆ ಮೂರು ಸೂಚನೆಗಳುಂಟು

ಪ್ರೆಸಿಡೆಂಟರ ಈ ಹೇಳಿಕೆಯು ಇನ್ನೂ ಪರಿಶೀಲನೆಯನ್ನು ಮಾಡಬೇಕೆಂಬ ಅಭಿಪ್ರಾಯದ್ದಲ್ಲವೆಂದು ಅವರ ಸೆಕ್ರೆಟರಿ ತಿಳಿಸುತ್ತಾನೆ

ಚೀನಾ--ಜಪಾನು ಯುದ್ಧ

ಹೊಸ ಕೆಲಸನ್ನು ಪ್ರಾರಂಭಿಸಿದಂದ ತಪಾಸ ... ಜಪಾನಿನ ... ಬೇಗ ಗಿ ಇತರ ಯಾವ ಸಹಾಯವು ದೊರೆಯಲಾರದು ಜಪಾನ ... ಚಿಕೆಯನ್ನು ಮಾಡಿದೆ

ಲೈಸೆನ್ಸ್ ಬೇಕಾಗಿಲ್ಲ

ಅಮೇರಿಕನ್ ರಿವಾಲ್ವರ್

ಅತ್ಯಾಧುನಿಕ ತಯಾರಿ, 1939ರಲ್ಲೇ ಮೊದಲನೆಯ ಸಲ ತರಿಸಿದ್ದು ಆಕಾರ ಮೇಲಿನ ಚಿತ್ರದಲ್ಲಿರುವಂತೆಯೇ ಉದ್ದ 7 ಇಂಚು ಭಾರ ಸುಮಾರು 15 ಔನ್ಸುಗಳಷ್ಟು 50 ಗುಂಡುಗಳನ್ನು ತನಗೆ ತಾನಾಗಿ ಅಂದರೆ ಅಟೊಮೇಟಿಕ್ ಆಗಿ ಹಾರಿಸಬಹುದು ಬೆಲೆ ರೂ 4-8-0 ಕೃತಕ ಮದ್ದು ಗುಂಡುಗಳಿಗೆ 1000ಕ್ಕೆ ರೂ 3 ಚರ್ಮದ ಚೀಲ ಬೇಕಾದರೆ 1 12 0 ರಿವಾಲ್ವರಿನ ಯಂತ್ರಕ್ಕೆ ಬಿಡುವ ಎಣ್ಣೆ ಬೇಕಾದರೆ 0 12 0 ಆರ್ಡರಿನೊಂದಿಗೆ ಸಂಪೂರ್ಣ ಬೆಲೆಯ ಮೊತ್ತವನ್ನು ಕಳುಹಿಸಿಕೊಟ್ಟರೆ ಟಪ್ಪಾಲು ಖರ್ಚು ಮುಫತ್ತು

ಸೂಚನೆ: ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಪ್ರಯತ್ನಿಸಿರಿ.

American Pistol Co (P. M. H.)

Post Box No 27, Amritsar (India)

ಗಾಂಧಿಜಿಯುವರ ಸಂದೇಶ!

ಸತ್ಯಾಗ್ರಹಿಯು ಸಂಕಷ್ಟಗಳನ್ನು ಎದುರಿಸಬೇಕು

ಭೇದವನ್ನು ಮರೆಯಿರಿ

'ದಕ್ಷಿಣ ಆಫ್ರಿಕದ ಹಿಂದೀಯರು, ತಮ್ಮ ನಾಗರಿಕ ಸ್ವಾತಂತ್ರ್ಯಕ್ಕಾಗಿ ಮಾಡುವ ಹೋರಾಟದ ಕುರಿತು ಗಾಂಧಿಜಿಯುವರು ಹೀಗೆಂದು ಬರೆಯುತ್ತಾರೆ—

'ಸ್ವಾರ್ಥವನ್ನು ಬಿಟ್ಟು ಭೇದವಿಲ್ಲದೆ ಒಂದಾಗಿ ಕಾರ್ಯ ಸಾಧನೆ ಮಾಡಿದರೆ ಮಾತ್ರ ಜಯಶೀಲರಾಗಬಹುದು. ವ್ಯಕ್ತಿಗಳು ಸ್ವಾರ್ಥದ ಉದ್ದೇಶದಿಂದ ಕಾರ್ಯ ಮಾಡಿದಲ್ಲಿ, ಅವರ ಗೌರವವ ಜೀವನವೂ ರಾಷ್ಟ್ರದ ಮಾನವೂ ಉಳಿಯಲಾರದು.

'ನಾನಲ್ಲಿದ್ದಾಗ, ಸತ್ಯಾಗ್ರಹವನ್ನು ಆರಂಭಿಸಿದ ಸಮಯ, ಅಲ್ಲಿನ ಪ್ರತಿಯೊಬ್ಬ ಹಿಂದೀಯನೂ ತನಗೆ ಸಹಾನುಭೂತಿಯಿದ್ದರೂ, ಸತ್ಯಾಗ್ರಹಕ್ಕೆ ಇಳಿಯಲು ಸಾಧ್ಯವಿಲ್ಲವೆಂದು ತಿಳಿದಾಗ ಸತ್ಯಾಗ್ರಹಿಗಳಿಗಾಗಿಯೇ ಪ್ರತ್ಯೇಕ ಸಂಸ್ಥೆಯೊಂದನ್ನು ಮಾಡಿ, ಬಾಕಿಯವರು ಅದರಲ್ಲಿ ಸೇರದಿದ್ದರೂ, ಅವರ ಸಹಾನುಭೂತಿಯನ್ನು ಸಂಪಾದಿಸಿಕೊಂಡಿದ್ದು, ಇಂದಿನ ಸತ್ಯಾಗ್ರಹಿಗಳೂ ಅದೇ ಉದಾಹರಣೆಯನ್ನು ಅನುಸರಿಸಲಿ. ಇಂದಿನ ಸತ್ಯಾಗ್ರಹಿಗಳು ಪದವಿ ಗೌರವಗಳನ್ನು ಪಡೆಯುವುದಕ್ಕಿಂತ ಹೆಚ್ಚು ಸ್ವಾರ್ಥತ್ಯಾಗ ಮತ್ತು ಬಲಿದಾನದ ಸಂಕಷ್ಟಗಳನ್ನು ತಡೆಯಲು ಸಾಮರ್ಥ್ಯವನ್ನು ಗಳಿಸಲಿ. ಒಬ್ಬ ಸತ್ಯಾಗ್ರಹಿಯು ತನ್ನ ಜೊತೆಗಾರನ ವಿಷಯದಲ್ಲಿ ಮಾತ್ರ ಪ್ರೇಮ ಹೃದಯವನ್ನು ತೋರಿಸಿದರೆ ಸಾಲದು, ತನ್ನ ವೈರಿಯ ವಿಷಯದಲ್ಲಿಯೂ ಪ್ರೇಮವಿಡಬೇಕು. ಯಾವ ಹಕ್ಕು ಸತ್ಯ ಸ್ವಾತಂತ್ರ್ಯಗಳನ್ನು ಆತನು ಪಡೆಯುತ್ತಾನೋ, ಅವುಗಳೆಲ್ಲಾ ಜನರಿಗೂ ಎಂದು ಆತ ತಿಳಿಯಬೇಕು. ಅವನು ಎಲ್ಲರ ಮಿತ್ರನು, ಯಾರ ಶತ್ರುವೂ ಅಲ್ಲ. ಇದೇ ಸತ್ಯಾಗ್ರಹವು ಯಶಸ್ವಿಯಾಗಬೇಕಾದರೆ ಮೊದಲನೆಯ ವಿಷಯವಾಗಿದೆ'

ಒಂದ ಸಂತೋಷದ ವಿಷಯ!

ಬಹಳ ಸಂತೋಷದ ವಿಷಯ

ಹೈದರಾಬಾದಿನ ಆರ್ಯ ಸತ್ಯಾಗ್ರಹವು ಶಾಂತ ರೀತಿಯಿಂದ ಕೊನೆಗೊಂಡ ವಿಷಯವಾಗಿ, ತಮ್ಮ ಸಂತೋಷವನ್ನು ಪ್ರಕಟಿಸುತ್ತಾ ಗಾಂಧಿಜಿಯುವರು ಹೀಗೆಂದು ಬರೆಯುತ್ತಾರೆ

'ಆರ್ಯ ಸತ್ಯಾಗ್ರಹವು ಸುಖ ಪರ್ಯವಸಾನ ಹೊಂದಿತು. ಅವರ ಆಂದೋಲನದ ವಿಷಯ ನಾನಿದುವರೆಗೆ ಒಂದೇ ಒಂದು ಶಬ್ದವನ್ನೂ ಬರೆಯಲಿಲ್ಲ. ಹೀಗೆ ನಾನು ಮೌನ ಮಾಡಿದುದರಿಂದ, ನನಗೆ ಅವರ ಚಳವಳದಲ್ಲಿ ನನಗೆ ಹೆಚ್ಚಿನ ಸಂತೋಷವಿಲ್ಲವೆಂದು ಅರ್ಥವಾಗುವುದಿಲ್ಲ. ಹೈದರಾಬಾದಿನ ವಿಷಯದಲ್ಲಿ ಯಾವ ಪ್ರವೇಶವಿಲ್ಲದ ಆರ್ಯಸಮಾಜದ ಮುಖಂಡರೊಡನೆಯೂ ನಾನು ವ್ಯವಹಾರವಿಟ್ಟುಕೊಂಡಿದ್ದೆ.

'ಆರ್ಯ ಸಮಾಜದವರ ಕೇಳಿಕೆಯ ವಿಷಯವಾಗಿ, ನನ್ನ ಸಹಾನುಭೂತಿಯು ಅವರ ಕಾರ್ಯದಲ್ಲಿದೆ. ಇದು ಸರಳ ಮತ್ತು ಪ್ರಾಥಮಿಕ ವಿಚಾರ. ಆದರೆ ನಾನು ಅವರ ಸತ್ಯಾಗ್ರಹಕ್ಕೆ ಸಮ್ಮತಿ ಕೊಡಲಿಲ್ಲ. ಏಕೆಂದು ನಾನು ಮೊದಲು ವಿಷದ ಪಡಿಸಿದ್ದೇನೆ. ಅವರ ಸತ್ಯಾಗ್ರಹವು, ನಾನು ಹೂಡಿದ ಸತ್ಯಾಗ್ರಹಕ್ಕಿಂತ ಒಳ್ಳೆಯದಾಗಿರದಿದ್ದರೂ, ಕೆಟ್ಟದಾಗಿಲ್ಲವೆಂದು ಅವರು ಹೇಳಿದಾಗ ನಾನು ಉದ್ವೇಗಗೊಳ್ಳಲಿಲ್ಲ. ನನ್ನ ಒತ್ತಾಯವನ್ನು ಅವರ ಮೇಲೆ ಹಾಕಲು ನನಗೆ ಅಧಿಕಾರವಿಲ್ಲವೆಂದು ನಾನು ತಿಳಿದೆ. ನಾನು ನನ್ನ ಸಾಧ್ಯವಿದ್ದಷ್ಟುಗಾದರೂ ಹೈದರಾಬಾದಿನ ನಿಜಾಮರನ್ನು ಈ ವಿಷಯ ಸಮಿತಿಸಲು ಉತ್ಸುಕನಾಗಲಿಲ್ಲ.

'ಇಂದು ಆರ್ಯ ಸತ್ಯಾಗ್ರಹವು ಮೈತ್ರಿಭಾವದಿಂದ ಕೊನೆಗೊಂಡದ್ದು, ನನಗೆ ಪರಮ ಸಂತೋಷದ ವಿಷಯವಾಗಿದೆ. ಇದಕ್ಕಾಗಿ ನಿಜಾಮ್ ಸರಕಾರ ಮತ್ತು ಆರ್ಯ ಸಭೆಗಳನ್ನು ಅಭಿನಂದಿಸಬೇಕು. ಶ್ರೀ ಘನಶ್ಯಾಮದಾಸರು ಪ್ರಕಟಿಸಿದ ಮಹತ್ವದ ಪ್ರಕಟನೆಗೆ ಆರ್ಯರು ಸಲ್ಲತಕ್ಕ ಗೌರವವನ್ನು ಕೊಡಲಿ ಎಂದು ಹಾರೈಕೆ.'

ಒಬ್ಬ ಸತ್ಯಾಗ್ರಹಿಯೊಡನೆ

ಪೂಣದ ಶ್ರೀ ವಿ. ವಿ. ಸಾಥೆಯೆಂಬವರು, ಬೊಂಬಾಯಿಯ ಮಂತ್ರಿಮಂಡಲದವರು ಗುಂಡು ಹಾರಿಸಿದ, ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿದ್ದೇ ಮೊದಲಾದ ಕಾಂಗ್ರೆಸಿನ ತತ್ವಗಳಿಗೆ ವಿರೋಧ ಹೋದ ವಿಷಯದಲ್ಲಿ, ಎಸೆಂಬ್ಲಿ ಭವನದ ಮೆಟ್ಟಿಲುಗಳಲ್ಲಿಯೂ, ಉಪವಾಸ ಹೂಡಿ, ಕಡೆಗೆ ಶೇಗಾಂವಿನಲ್ಲಿ ಗಾಂಧಿಯರೆದುರು ಸತ್ಯಾಗ್ರಹ ಹೂಡಲು ಹೋಗಿದ್ದರು.

ಒಬ್ಬ ಸತ್ಯಾಗ್ರಹಿಯ ವಾದ!

ಗಾಂಧಿಜಿಯುವರು ಕಾಂಗ್ರೆಸಿನ ದೇವರೆಂದೂ, 'ಮಂತ್ರಿಗಳು ಅವರ ಶಿಸ್ತಿನೊಳಗಿರುವರೆಂದೂ' ಅವರು ಹೇಳಿ, ಗಾಂಧಿಜಿಯುವರ ಸನ್ನಿಧಿಯಲ್ಲಿ ಹದಿನೈದು ದಿನಗಳ ಉಪವಾಸ ಮಾಡಲು ಬಂದಿದ್ದರು. ಕಡೆಗೆ ಗಾಂಧಿಜಿಯುವರು ಆ ವಿಷಯದಲ್ಲಿ ಮಾಡಿದ ಚರ್ಚೆಯನ್ನು ಕೇಳಿದರು. ಅವರ ಸಂಭಾಷಣೆಯ ಸಾರಾಂಶ ಹೀಗಿತ್ತು —

'ನೀವು ಸತ್ಯಾಗ್ರಹ ಸುರುಮಾಡುವುದಕ್ಕಿಂತ ಮೊದಲ, ನ್ಯಾಯ ರೀತಿಯಿಂದ, ಕಾರ್ಯ ಮಾಡಬೇಕಿತ್ತು. ಬೊಂಬಾಯಿ ಮಂತ್ರಿಮಂಡಳವು, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಮತ್ತು ಬೊಂಬಾಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಅಧೀನತೆಯಲ್ಲಿದೆ. ಅವರ ಮುಂದೆ ನಿಮ್ಮ ಆಕ್ಷೇಪಣೆಯನ್ನಿರಿಸಬೇಕಿತ್ತು. ಅಲ್ಲಿ ಸೋತರೆ ವರ್ಕಿಂಗ್ ಕಮಿಟಿಯ ಮುಂದೆ, ಅಲ್ಲಿಯೂ ಆಗದಿದ್ದರೆ, ಅಖಿಲಭಾರತ ಕಾಂಗ್ರೆಸು ಕಮಿಟಿಯ ಮುಂದೆ, ಕಡೆಗೆ ಕಾಂಗ್ರೆಸು ಅಧಿವೇಶನದಲ್ಲಿ ಈ ಕುರಿತು ಕಾರ್ಯವನ್ನು ತರಬೇಕಿತ್ತು. ನೀವು ಸತ್ಯಾಗ್ರಹದಲ್ಲಿ ನನ್ನನ್ನು ಒಬ್ಬ ನಿಪುಣನೆಂದು ವಿಚಾರಿಸಿದ್ದರೆ, ನನ್ನ ಅಭಿಪ್ರಾಯ ಕೇಳಲು ಬರಬೇಕಿತ್ತಲ್ಲದೆ ಉಪವಾಸ ಮಾಡಲು ಬರಬಾರದಿತ್ತು.

'ನಾನು ಕಾಂಗ್ರೆಸ ಅಧಿವೇಶನದ ಮುಂದೆ ಇದನ್ನು ಇಡುತ್ತೇನೆ. ಆದರೆ, ನಿಮಗಿರುವ ಅಧಿಕಾರದಂತೆ, ನೀವದನ್ನು ಅಲ್ಲಿ ಒತ್ತಿ ವಾದಿಸಬೇಕು.'

'ನನಗೆ ಕಾಂಗ್ರೆಸಿನ ಮೇಲೆ ನೀತಿಯ ಅಧಿಕಾರವಲ್ಲದೆ ಬೇರೆ ಅಧಿಕಾರವಿಲ್ಲ, ಆದರೆ ನೀವು ಹೇಳುವುದು ನ್ಯಾಯವೆಂದು ನನಗೆ ಮನಗಂಡರೆ ನನ್ನ ನೀತಿಯ ಅಧಿಕಾರವನ್ನು ನಾನು ಉಪಯೋಗಿಸಬಹುದು. ನೀವು ಹೇಳಿದ ಆಕ್ಷೇಪಣೆಗಳನ್ನು ಕೇಳಿದ ಕೂಡಲೇ ನಾನು ಅದರ ಕುರಿತು ತೀರ್ಮಾನ ಹೇಳುವುದೂ ಸಾಧ್ಯವಿಲ್ಲ. ಮಂತ್ರಿಗಳ ಹೇಳಿಕೆಯನ್ನೂ ನಾನು ತಿಳಕೊಳ್ಳಬೇಕು.

'ಆದರೆ, ನಾನು ಉಪವಾಸ ಮಾಡುತ್ತಿದ್ದಂತೆ, ಆ ವಿಚಾರಣೆ ಮಾಡುತ್ತಿರಬಹುದು

'ಹಾಗೆ ಮಾಡುವುದರಿಂದ ನೀವು ನನ್ನ ವಿಚಾರವನ್ನು ನಿರ್ಬಂಧಪಡಿಸುತ್ತೀರಿ. ನೀವು ಗೀತೆಯನ್ನು ಓದಿದ್ದೀರಷ್ಟೆ?

'ಹೌದು

'ಹಾಗಾದರೆ ನಿಮ್ಮ ಉಪವಾಸವು, ಅದರಲ್ಲಿ ಹೇಳಿದಂತೆ ತಾಮಸ ತಪಸ್ಸು ಅಜ್ಞಾನದಿಂದ ಹುಟ್ಟಿದುದಾಗಿದೆ

ಕಡೆಗೆ ಅವರ ಸಂಪೂರ್ಣ ತೃಪ್ತಿಗೊಂಡದ್ದರಿಂದ, ತಿಂಗಳ ಮೇಲೆ ಉಪವಾಸ ಮಾಡುವೆನೆಂದ ಪ್ರಾಣಕ್ಕೆ ತೆರಳಿದರು.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ ಜನ್ನಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸು

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಮದ್ರಾಸು ಮಂತ್ರಿಮಂಡಳ

ಕುಡುಕರ ಕಡೆಗೆ ಮಹಿಳೆಯರ ದೃಷ್ಟಿಯಿರಬೇಕು
ಗ್ರಾಮದ ಆಡಳಿತೆಯು ಗ್ರಾಮಸ್ಥರಿಗೆ ಸಿಗಬೇಕು
ಹಿಂದಿ ಮತ್ತು ಚರಕಗಳೇ ಸ್ವರಾಜ್ಯ ಸಾಧನಗಳು

ಮಾನ್ಯ ರಾಜಾಜಿ

ಪ್ರಾಯಸ್ಥರ ವಿದ್ಯಾಭ್ಯಾಸದ ವಿಷಯ

"ಸಾಕ್ಷರತೆಯು ಪ್ರಚಾರಕ್ಕಿಂತ ಪ್ರಾಯಸ್ಥರ ವಿದ್ಯಾಭ್ಯಾಸವು ಬೇರೆ. ಪ್ರಾಯಸ್ಥರ ವಿದ್ಯಾಭ್ಯಾಸದಿಂದ ಅವರನ್ನು ಅಕ್ಷರಸ್ಥರನ್ನಾಗಿ ಮಾಡುವುದಲ್ಲದೆ, ಒಳ್ಳೆಯ ನಾಗರಿಕರನ್ನಾಗಿಯೂ ತಯಾರಿಸಬೇಕು. ಪ್ರಾಯಸ್ಥನಿಗೆ, ಮಗುವಿನಂತೆ ಅಕ್ಷರ ಅರಿಯದಿದ್ದರೂ, ಇಬ್ಬರನ್ನೂ ಒಂದೇ ರೀತಿಯಲ್ಲಿ ನೋಡಬಾರದು. ಪ್ರಾಯಸ್ಥರು ತಮ್ಮ ಇಚ್ಛೆಯಿಂದ ಕಲಿಯಲು ಬರುವವರು. ಹುಡುಗರನ್ನು ಒತ್ತಾಯಿಸಬೇಕು. ಅವರಿಗೆ ಕತೆ ಹೇಳುವುದು, ರಂಗ ಮಾಡುವುದೆಲ್ಲ ಸಮಯ ಹಾಳು ಮಾಡುವುದೆಂದು ತಿಳಿಯುವುದು. ಹುಡುಗರಿಗೆ ಕಲಿಸುವಾಗ ಬೊಬ್ಬೆಯಾಡಿದಂತೆ ಮಾಡಬಾರದು. ಸಣ್ಣ ಧ್ವನಿಯಲ್ಲಿ ಕಲಿಸಬೇಕು. ಪ್ರಾಯಸ್ಥನಿಗೆ ನಿರಕ್ಷರಸ್ಥನಾಗಿ ನಾಚಿಕೆಯಿದೆ. ಉಪಾಧ್ಯಾಯನು ಅವನ ಭಾವನೆಗಳನ್ನು ಕೆಣಕುವಂತೆ, ಪ್ರಶ್ನೆಗಳನ್ನು ಕೇಳಬಾರದು ಒಂದು ಗುಂಪಿನಲ್ಲಿ ಕಲಿಸುವುದಕ್ಕಿಂತ ಅವರನ್ನು ಒಬ್ಬೊಬ್ಬನನ್ನಾಗಿ ಕಲಿಸುವುದು ಒಳ್ಳೆಯದು ಪ್ರಾಯಸ್ಥರಿಗೆ ಸಾಧಾರಣ ಐದುಸಾವಿರ ಶಬ್ದಗಳ ಪರಿಚಯವಿರುತ್ತದೆ. ಹುಡುಗರಿಗೆ ಕೇವಲ ಮುನ್ನೂರು ಶಬ್ದಗಳು ಗೊತ್ತಿರಬಹುದು. ಪ್ರಾಯಸ್ಥರಿಗೆ ಕಲಿಸುವಾಗ, ಅವರು ಕಲಿತ ಮೇಲೆ ಇನ್ನೊಬ್ಬರಿಗೆ ಕಲಿಸಬೇಕೆಂದು ತಿಳಿಸಬೇಕು. ಇದರಿಂದ ಕಾರ್ಯವು ಸುಲಭವಾಗಬಹುದು" ಹೀಗೆಂದು ಕೊಯಂಬುತ್ತೂರಿನ ಪ್ರಾಯಸ್ಥರ ವಿದ್ಯಾಭ್ಯಾಸ ಪ್ರಚಾರದ ಆರಂಭ ಭಾಷಣದಲ್ಲಿ ಪ್ರಧಾನಮಂತ್ರಿ ರಾಜಾಜಿಯವರು ತಿಳಿಸಿದರು

ಮಾನ್ಯ ಮುನಿಸ್ವಾಮಿ ಪಿಳ್ಳೆ

(ಮಹಿಳೆಯರೂ ಮದ್ಯಪಾನ ನಿಷೇಧವೂ)

"ಕಡಪ್ಪದಲ್ಲಿ, ಮದ್ಯಪಾನ ನಿಷೇಧವನ್ನು ಆರಂಭಮಾಡಿದಾಗ, ಇಲ್ಲಿನ ಮಹಿಳೆಯರಿಗೆ ಅದರ ಪ್ರಾಧಾನ್ಯತೆ ತಿಳಿಯಲಿಲ್ಲ. ಆದರೆ ಇಂದು ಹಳ್ಳಿ ಹಳ್ಳಿಯ ಹೆಂಗುಸರು, ಮಕ್ಕಳು ಬಹಳ ಆನಂದಿತರಾಗಿದ್ದಾರೆ. ಇಂದು ಅವರ ಸಾಂಸಾರಿಕ ಜೀವನವೂ ಆರ್ಥಿಕ ಸ್ಥಿತಿಯೂ ಬಹು ಸುಧಾರಣೆಯಾಗಿದೆ. ಇಂದು ತಮ್ಮ ಹಾರ್ದಿಕ ಸೌಹಾರ್ದವನ್ನು ಕಾಂಗ್ರೆಸು ಮಂತ್ರಿಗಳಿಗೆ ಅವರು ಸೂಚಿಸುತ್ತಾರೆ. ಮಹಿಳೆಯರು ಕುಡುಕರ ಮೇಲೆ ಪೋಲೀಸಿನವರಂತೆ ಸದಾ ದೃಷ್ಟಿಯಿಟ್ಟು ಉದ್ಧಾರ ಮಾಡಬೇಕು". ಹೀಗೆಂದು ಮಾನ್ಯ ಪಿಳ್ಳೆಯವರು ಕಡಪ್ಪಾದಲ್ಲಿ ಹೇಳಿದರು

ಮಾನ್ಯ ಪ್ರಕಾಶಂ

(ಗ್ರಾಮ ಆಡಳಿತೆಯ ಕುರಿತು)

"ಗ್ರಾಮದ ಆಡಳಿತೆಯ ಸುಧಾರಣೆಯ ಕುರಿತು ಒಂದು ಶಾಸನವನ್ನು ತರಲು ನಾನು ಬಹಳ ಸಮಯದಿಂದ ಆಗ್ರಹಗೊಂಡಿದ್ದೇನೆ ಅದರ ನಕಲು ಎರಡು ವರ್ಷಗಳಿಗಿಂತಲೂ ಮೊದಲೇ ಆಗಿದ್ದರೂ ಒಂದಲ್ಲೊಂದು ನಿಮಿತ್ತದಿಂದ ಅದು ಹಿಂದೆ ಬಿದ್ದಿದೆ ಬರುವ ಅಧಿವೇಶನದಲ್ಲಿ ಅದು ಬರಬಹುದು ಗ್ರಾಮದ ಆಡಳಿತೆಯ ಸಂಬಂಧದಲ್ಲಿಯಾದರೂ ನಿಜವಾದ ಅಧಿಕಾರವು ಹಳ್ಳಿಯವರಿಗೆ ಬರುವಂತಾಗಬೇಕು ಗ್ರಾಮದ ಅಧಿಕಾರರು ಖಾದಿಯ ಪ್ರಚಾರವನ್ನು ಮಾಡಬೇಕು. ಖಾದಿಯೆಂಬುದು ನಮ್ಮ ಅನ್ನದ ಬಟ್ಟೆಯ ಹಾದಿ ಮಾತ್ರವಲ್ಲ ನಮ್ಮಲ್ಲಿ ೬೦ ಕೋಟಿ ರೂಪಾಯಿಗಳನ್ನು ವರ್ಷ ಒಂದರಲ್ಲಿ ಉಳಿಸುವುದು. ಸ್ವರಾಜ್ಯವನ್ನು ಪಡೆಯಲು ಇದು ರಚನಾತ್ಮಕವಾದ ಕಾರ್ಯ" ಹೀಗೆಂದು ಕಡಪ್ಪಾದಲ್ಲಿ ಮಾನ್ಯ ಪ್ರಕಾಶಂರವರು ಸಾರಿದರು.

ಮಾನ್ಯ ಡಾ। ಸುಬ್ಬರಾಯನ್

ಗಾಂಧಿಜಿಯವರಲ್ಲಿ ವಿಶ್ವಾಸವಿಡಿರಿ

'ಇಂದು ಆರ್ಯ-ದ್ರಾವಿಡ ವ್ಯತ್ಯಾಸದ ಚರ್ಚೆಯು ಕಾಂಗ್ರೆಸಿನವರನ್ನೂ ಪದಚ್ಯುತರನ್ನಾಗಿ ಮಾಡಲು ಹೂಡಿದುದಾಗಿದೆ. ಸ್ವಾತಂತ್ರ್ಯವು ತಮಿಳರಿಗೆ ಬೇಕಾಗಿದ್ದರೆ, ಅವರು ಈ ದುಷ್ಟ ಹಟವನ್ನು ನಿಲ್ಲಿಸಬೇಕು, ನಾವೆಲ್ಲರೂ ಗಾಂಧಿಜಿಯವರ ಮುಂದಾಳುತನದಲ್ಲಿ ಅಹಿಂಸೆಯ ಮೂಲಕ ನಮ್ಮ ಗುರಿಯನ್ನು ಪಡೆಯಲು ಮುಂದಾಗಬೇಕು. ಅವರ ಹಿತವನ್ನು ಕೇಳದಿದ್ದರೆ ಭಾರತವು ಸ್ವಾತಂತ್ರ್ಯವನ್ನು ಪಡೆಯಲಾರದು. ಬೋಸರ ಫಾರ್ವರ್ಡ್ ಬ್ಲಾಕಿನಿಂದ, ಕಾಂಗ್ರೆಸು ಹಾಳಾಗುವಂತಾಗಿದೆ. ಭಾರತದ ಸ್ವಾತಂತ್ರ್ಯದ ಹಡಗವನ್ನು ದಡಮುಟ್ಟಿಸಲು ಗಾಂಧಿಜಿಯವರು ಮಾತ್ರ ನುರಿತ ನಾವಿಕರಾಗಿದ್ದಾರೆ' ಹೀಗೆಂದು ಈರೋಡಿನ ರಾಜಕೀಯ ಪರಿಷತ್ತಿನ ಉದ್ಘಾಟನಾ ಭಾಷಣದಲ್ಲಿ ಮಾನ್ಯ ಸುಬ್ಬರಾಯನರು ತಿಳಿಸಿದರು

ಮಾನ್ಯ ರಮಾನಾಥನ್

(ಹಿಂದೂಸ್ಥಾನೀ ಮತ್ತು ನೂಲುವುದರ ವಿಷಯ)

"ನಾನು ಕಾಲೇಜು ಬಿಟ್ಟು ಬಂದ ಮೇಲೆ, ಸಮಾಜಸೇವೆಯ ಕುರಿತು ಚರ್ಚಿಸಲು ಮಹಾತ್ಮಾಜಿಯವರಲ್ಲಿಗೆ ಹೋಗಿದ್ದೆನು. ಅವರು ನನಗೆ ಮೊದಲಾಗಿ ಹಿಂದುಸ್ಥಾನಿಯನ್ನು ಕಲಿಯಲೂ, ನೂಲುವುದನ್ನು ಅಭ್ಯಾಸಿಸಲೂ ತಿಳಿಸಿದರು. ಆಗ ಆ ವಿಷಯವು ಯುವಕರಿಗೆ ಅರ್ಥವಾಗಲಿಲ್ಲ ೨೦ ವರ್ಷಗಳ ಮೇಲೆ ದೇಶದ ಅಭಿವೃದ್ಧಿಯು ಅವರಲ್ಲಿಯೇ ಇದೆ ಎಂದು ಅನುಭವದಿಂದ ತಿಳಿಯಿತು". ಹೀಗೆಂದು ಮಾನ್ಯ ರಮಾನಾಥರವರು ಕೊಯಂಬುತ್ತೂರಿನಲ್ಲಿ ವಿವರಿಸಿದರು



[ಮಾನ್ಯ ರಮಾನಾಥನ್]

ಮಾನ್ಯ ಡಾ। ರಾಜನ್

(ಹಿಂದೀಯ ವ್ಯಾಯಾಮ ಪದ್ಧತಿಯನ್ನು ಪ್ರಶಂಸಿಸಿ)

'ಭಾರತವು ಇತರ ದೇಶಗಳಂತೆ ಬಲವಂತವಾದ ರಾಷ್ಟ್ರವಾಗಬೇಕಾದರೆ ಇಲ್ಲಿನ ಜನರು ಶರೀರದಲ್ಲಿಯೂ ಗುಣದಲ್ಲಿಯೂ ದೃಢರಾಗಬೇಕು ಇದರಿಂದ ಮಾತ್ರ ರಾಷ್ಟ್ರವನ್ನು ರಕ್ಷಿಸಬಹುದು. ಒತ್ತಾಯದ ವ್ಯಾಯಾಮ ಶಿಕ್ಷಣವನ್ನು ಶಾಲೆಗಳಲ್ಲಿ ಕೊಡುವ ಪ್ರಯೋಜನವನ್ನು ಸರಕಾರವು ಯೋಚಿಸುತ್ತಿದೆ. ಬುದ್ಧಿಗೂ ದೇಹಕ್ಕೂ ಶಕ್ತಿಕೊಡುವ ವ್ಯಾಯಾಮವು ಹಿಂದೀಯರ, ಆಸನ, ಸೂರ್ಯನಮಸ್ಕಾರ ಮೊದಲಾದ ಕ್ರಮದಲ್ಲಿದೆ ಇದನ್ನು ರಾಷ್ಟ್ರೀಯ ಸರಕಾರವು ಉಚಿತ ಪ್ರೋತ್ಸಾಹಿಸುವುದು. ಗಂಡುಸರು ಮಾತ್ರವಲ್ಲದೆ, ಮುಂದಿನ ಜನಾಂಗದ ಮಾತೆಯರಾದ ಹೆಂಗುಸರೂ ವ್ಯಾಯಾಮ ಪಡೆಯಬೇಕು' ಹೀಗೆಂದು ಮದ್ರಾಸು ವ್ಯಾಯಾಮ ಮಂಡಳದಲ್ಲಿ ಮಾನ್ಯ ಡಾ। ರಾಜನರವರು ಭಾಷಣವಿತ್ತರು

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore. And this is but the be ginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE

ESTED: 1906

CANARA BANK, LIMITED.

ಒಂದು ಸಣ್ಣ ಕತೆ:—

ಭೈರವೀ

[ಭೈರವಿಯು ಕ್ರಾಂತಿಕಾರಳು ಆಕೆಯನ್ನು ಜೀವಂತವಾಗಿಯಾಗಲಿ ಇಲ್ಲವೇ ಕೊಂದಾಗಲಿ ತಂದು ಕೊಟ್ಟವರಿಗೆ ಅಪಾರ ಧನವನ್ನು ಉಚಿತವಾಗಿ ಕೊಡುವುದಾಗಿ ಸರಕಾರವು ಪ್ರಕಟಿಸಿತ್ತು!

ಸಿಪಾಯಿ ದಂಗೆಯು ಮುಗಿದು ಎರಡು ವರ್ಷಗಳ ಮೇಲಿನ ಕಥೆಯಿದು. ಶಾಂತಿಯು ಒಂದು ರೀತಿಯಿಂದ ಸ್ಥಾಪಿತವಾಗಿದ್ದರೂ, ಕ್ರಾಂತಿಕಾರ ಮುಂದಾಳು ನಾನಾ ಸಾಹೇಬನು, ಬ್ರಿಟಿಷರ ಎದೆಗೆ ಆಣಿಯಂತಿದ್ದನು, ಅವನ ಅನುಯಾಯಿಗಳೂ ಹಲವರಿದ್ದರು. ಅವರಲ್ಲಿ 'ಭೈರವಿ'ಯು ಧುರೀಣಳು ಮಾನ ಮತ್ತು ಮರಣಗಳ ನಡುವೆ ಸಿಲುಕಿದಾಗ, ಭಾರತ ಮಹಿಳೆಯರು ತಮ್ಮ ಮಾನ ಅಭಿಮಾನ ರಕ್ಷಣೆಗಾಗಿ ಸಾವನ್ನೇ ಆಲಂಗಿಸುವರು ಭಾರತದ ಇತಿಹಾಸವು ಇಂತಹ ಎಷ್ಟೋ ಘಟನೆಗಳಿಂದ ಕೂಡಿದೆ ಭೈರವಿ'ಯ ಜೀವನವು ಅಂತಹ ಒಂದು ಆದರ್ಶ ಕಥಾನಕವಾಗಿದೆ!]

'ಈ ಗುಂಪು ಏತಕ್ಕೆ ಇಲ್ಲಿ ಸೇರಿದೆ?' 'ಭೈರವಿಯೊಬ್ಬಳು ಇಲ್ಲಿಗೆ ಬಂದಿದ್ದಾಳೆ!'

ಹೀಗೆಂದು ಮಾತನಾಡುತ್ತಾ, ಇಬ್ಬರು ಆ ಗುಂಪಿನೊಳಗೆ ಹೊಕ್ಕರು ಇಬ್ಬರೂ ಒಳ್ಳೇ ಧಾಂಡಿಗ ಯುವಕರಿದ್ದರು!

ಕಾಶಿಯ ಮೀನಾಕ್ಷಿ ಘಾಟಿಗೆ ಸ್ನಾನಕ್ಕೆಂದು ಒಬ್ಬ ಭೈರವಿಯು ಬಂದಿದ್ದಳು! ನೀತಿಗೆಟ್ಟ, 'ಪಟಿಂಗ' ಜನರು ಅವಳ ಸುತ್ತು ನೆರೆದು, ಗಲಭೆ ಆರಂಭಿಸಿದ್ದರು!

ಪ್ರಾತಃಕಾಲ, ಸುಮಾರು ೮ ಗಂಟೆಯ ಸಮಯವಾಗಿರಬಹುದು. ಉದಯ ಸೂರ್ಯನ, ಸುವರ್ಣ ಕಿರಣಗಳು, ಗಂಗಾನದಿಯ ತೆರೆಯ ಮೇಲೆ ಹೊಳೆ ಹೊಳೆದು ನರ್ತನಮಾಡುತ್ತಿದ್ದುವು! ಹಿಮಕಾಲ, ಜನರು ಚಳಿಯಿಂದ ನಡುಗುತ್ತಿದ್ದರೂ ದೂರ ಸಮೀಪಗಳಿಂದ ಬಂದ ಹಲವರು ಪವಿತ್ರ ಸ್ನಾನಕ್ಕಾಗಿ ಗಂಗೆಯಲ್ಲಿ ಮುಳುಗಿ ಎದ್ದು ಬರುತ್ತಿದ್ದರು! ಹಲವರು ಹಾಗೆ ಸ್ನಾನ ಮಾಡಿ ಒದ್ದೆಯಾಗಿ ಘಾಟಿನ ಮೇಲೆ ಬಂದು ನಿಂತುಕೊಂಡಿದ್ದರು, ಇನ್ನು ಕೆಲವರು, ಆಗಲೇ ವಿಶ್ವನಾಥ ದರ್ಶನಕ್ಕಾಗಿ ತೆರಳಿದ್ದರು!

ಆ ಇಬ್ಬರು ಧಾಂಡಿಗರೂ, ಗುಂಪನ್ನು ಚದರಿಸಿ, ಭೈರವಿಯು ಕುಳಿತ ಕಡೆಗೆ ನಡೆದರು. ಯಾರಿಗೂ ಹೆದರದ, ಯಾರನ್ನೂ ಗೌರವಿಸದ ಅವರು, ಹೆಂಗಸೊಬ್ಬಳನ್ನು ಗೌರವದಿಂದ ನೋಡಬೇಕೆಂದೂ ತಿಳಿಯದೆ, ಅವಳ ಹತ್ತಿರ ಹತ್ತಿರ ಬರುತ್ತಿದ್ದರು

ಭೈರವಿಯನ್ನು ಸಮೀಪದಿಂದ ನೋಡಿದಾಗ, ಹಾಗೆ ಅವಳ ಸುತ್ತು ಗುಂಪು ಏತಕ್ಕೆ ನೆರೆದಿತ್ತೆಂಬುದು ಅವರಿಗೆ ಚೆನ್ನಾಗಿ ತಿಳಿಯಿತು! ಅವಳು ಪ್ರಾಯದವಳಿದ್ದು, ಸುಂದರಿಯಾಗಿದ್ದಳು! ಅವಳ ಬಿಚ್ಚಿದ ಕೂದಲು ರಾಶಿಯು ದೀರ್ಘವಾಗಿ ಬಿಟ್ಟಿದ್ದು, ತೆರೆ ತೆರೆಯಾಗಿ ಸೌಂದರ್ಯಮಯವಾಗಿತ್ತು, ಹಿಂದೆ ಒಮ್ಮೆ ಆ ಕೂದಲ ರಾಶಿಯು ಸುಗಂಧ ಶೋಭಿಯಾಗಿ ಕಾಂತಿಯಿಂದ ನಯನ ಮನೋಹರವಾಗಿದ್ದಿರಬೇಕೆಂದು ಯಾರಾದರೂ ಊಹಿಸಬಹುದಾಗಿತ್ತು ತಲೆಯ ಕೂದಲನ್ನು ಆಕೆ ಕೆದರದೆ ಇದ್ದರೆ, ಅವಳ ಮುಖವು ಮತ್ತಷ್ಟು ಉಜ್ವಲವಾಗಿ ಬೆಳಗುತ್ತಿತ್ತು, ಆದರೆ ಇಂದಿನ ಅವಳ ಶರೀರ ಸೌಂದರ್ಯದಲ್ಲಿ ಮಾರ್ದವತೆಯಿರಲಿಲ್ಲ, ಅವಳ ಕಣ್ಣುಗಳೇ, ಆಕೆಯ ಹೃದಯದ ಕಠೋರತೆಯನ್ನು ವ್ಯಕ್ತಪಡಿಸುತ್ತಿದ್ದುವು! ಅವಳ ಶರೀರವೆಲ್ಲಾ ವಸ್ತ್ರವೊಂದರಿಂದ ಮುಚ್ಚಲ್ಪಟ್ಟು, ತಲೆ, ಕೈ, ಕಾಲುಗಳು ಮಾತ್ರ ಕಾಣುತ್ತಿದ್ದುವು ಅವಳ ತೊಡೆಯ ಮೇಲೆ ಹೊಳೆಯುವ ಮೊನಚಾದ ತ್ರಿಶೂಲವೊಂದು ಬಿದ್ದಿತ್ತು!

ಒಮ್ಮೆಯಾದರೂ ಅವಳು ಆ ಹುಚ್ಚು ಜನರ ಗುಂಪಿನ ಕಡೆ ನೋಡಿರಲಿಲ್ಲ. ಅವಳ ದೃಷ್ಟಿಯು ಎದ್ದು ಬೀಳುವ ಗಂಗೆಯ ತೆರೆಗಳ ಕಡೆಗೆ, ಅದರಲ್ಲಿ ಮನೋಹರವಾಗಿ ಪ್ರತಿಫಲಿಸುವ ಸೂರ್ಯನ ಸುವರ್ಣ ಕಿರಣಗಳ ಸೌಂದರ್ಯ ಕಡೆಗೆ ಆಕರ್ಷಿಸಲ್ಪಟ್ಟಿತ್ತು! ಇಷ್ಟರಲ್ಲಿಯೇ ಅವಳ ದೃಷ್ಟಿಯು ಅಡ್ಡವಾಗಿ ಈ ಇಬ್ಬರು ಧಾಂಡಿಗರೂ ಬಂದು ನಿಂತರು ಅವರ ನೆರಳು ಅವಳ ಮೇಲೆ ಬಿತ್ತು

ಭೈರವಿಯು ಕಣ್ಣೆತ್ತಿ ನೋಡಿದಳು, ಅವರು ಹುಚ್ಚು ಹಿಡಿದವರಂತೆ ಆಕೆಯನ್ನೇ ನೋಡುತ್ತಿದ್ದರು. ದೃಷ್ಟಿಯನ್ನು ಇನ್ನೊಂದು ಕಡೆಗೆ ಹೊರಳಿಸಿದರೆ, ಅಂತಹ ಸ್ವತಂತ್ರರಾದ ಮಾನವ ಪಶುಗಳ ಒಂದು ದೊಡ್ಡ ಗುಂಪೇ ತನ್ನನ್ನು ಎವೆಯಿಕ್ಕದೆ ನೋಡುತ್ತಿತ್ತು! ನಿಮಿಷಮಾತ್ರದಲ್ಲಿ ಆಕೆ ಎದ್ದವಳೇ, ಬಲಗೈಯಲ್ಲಿ ಮೊನಚಾದ ತ್ರಿಶೂಲವನ್ನು ಹಿಡಕೊಂಡು ಮಿಂಚಿನಂತೆ ಗುಂಪನ್ನು ಭೇದಿಸಿ ಮುಂದುವರಿದಳು! ಜನರು ಬೆದರಿ ಚೆದರಿದರು! ದೀರ್ಘಕಾಯಳಾಗಿದ್ದ ಅವಳು ಸಾಕ್ಷಾತ್ ಭೈರವಿಯಂತೆಯೇ ತೋರುತ್ತಿದ್ದಳು! ಧೃತಗತಿಯಿಂದ ವಿಶ್ವನಾಥ ಮಂದಿರದ ಕಡೆ ಸಾಗಿದಳು! ಅವರಿಬ್ಬರು ಮಾತ್ರ ಅವಳನ್ನು ಹಿಂಬಾಲಿಸದೆ ಬಿಡಲಿಲ್ಲ!

ಅವರಲ್ಲಿ ಒಬ್ಬನು ಆಕೆಯನ್ನು ಸಂಬೋಧಿಸಿ 'ಹೆಂಗುಸೇ, ನೀನು ಇಲ್ಲಿಗೆ ಹೊಸಬಳಾಗಿ ತೋರುತ್ತಿ, ಏಕಾಂಗಿನಿಯಾಗಿ ಇಲ್ಲಿ ಇರುವುದು ಸಾಧ್ಯವಿಲ್ಲ; ನಮ್ಮೊಡನೆ ಬಾ, ಇಲ್ಲಿ ದೇವಾಲಯಕ್ಕೆ ಸಮೀಪಿಸಿ ನಮ್ಮದೇ ಒಂದು ಮನೆಯಿದೆ. ಅದರಲ್ಲಿ ನಿನ್ನಿಷ್ಟವಿದ್ದಂತೆ ಇರಬಹುದು, ಬೇರೆ ಯಾರ ತೊಂದರೆಯೂ ಇಲ್ಲ'' ಹೀಗೆಂದು ಹೇಳಿದನ

ಆತನ ಕಡೆಗೆ ತಿರುಗಿ ಭೈರವಿಯು ಧೈರ್ಯ ಕಠೋರ ಸ್ವರದಿಂದ ಹೇಳಿದಳು, 'ನನಗೆ ನಿಮ್ಮ ಸಹಾಯವು ಅವಶ್ಯವಿಲ್ಲ!''

ಮಾತು ಕೇಳಿ ಅವರು ಬದರಿ ಸ್ತಂಭಿತರಾದರು! ಆಕೆ ಮೊದಲಿಗಿಂತಲೂ ತೀವ್ರವಾಗಿ ನಡೆಯುತ್ತಿದ್ದಳು. ಅವಳು ಎಲ್ಲಿ ಉಳಕೊಳ್ಳುವಳು ಏನು ಮಾಡುವಳೆಂದೂ ಅವರಿಗೆ ತಿಳಿಯುವ ಕುತೂಹಲ ಹುಟ್ಟಿತು ಏಕೆಂದರೆ ಭೈರವಿಯು ಯುವತಿಯಾಗಿದ್ದಳು, ಮತ್ತೆ, ಪರಮ ಸುಂದರಿ! ಏಕಾಂಗಿನಿಯಾಗಿದ್ದಾಳೆ! ಅವಳು ಎಲ್ಲಿ ಇರುವಳೆಂದು ತಿಳಿಯಲು ಹಿಂಬಾಲಿಸುವುದರಲ್ಲಿ ತಪ್ಪಿಲ್ಲವೆಂದು ಅವರು ಆಕೆಯನ್ನು ಅನುಸರಿಸಿ ನಡೆದರು.

ಮಿಸ್ ಇಂದುರಾಣಿ ಮತ್ತು ಸುಶೀಲ ಕುಮಾರ ಮೋಹನ ಚಿತ್ರಪಟದ 'ಸ್ವಸ್ತಿಕಾ'ದಲ್ಲಿ

ದೇಗುಲದ ಬಳಿ ಬಂದು ಭೈರವಿಯು ಕ್ಷಣಹೊತ್ತು ನಿಂತುಕೊಂಡಳು ಬಾಗಿ ವಂದಿಸಿ, ಮುಂದಿನ ಒಳಹೊಕ್ಕಳು. ಅವರಲ್ಲಿ ಒಬ್ಬನು ದ್ವಾರದ ಬಳಿ ನಿಂತನು, ಇನ್ನೊಬ್ಬನು ಅವಳೊಡನೆ ದೇಗುಲವನ್ನು ಪ್ರವೇಶಿಸಿದನು.

೨

ಆ ದಿನ ರಾತ್ರಿ ಭೈರವಿಯು ಒಂದು ಜೀರ್ಣ ದೇಗುಲದಲ್ಲಿ ಉಳಕೊಂಡಳು. ರಾತ್ರಿ ಹೊತ್ತಿನಲ್ಲಿ ಯಾವನೂ ಅಲ್ಲಿ ಉಳಕೊಳ್ಳಲು ಧೈರ್ಯ ಪಡುತ್ತಿರಲಿಲ್ಲ! ಸುತ್ತು ಮುತ್ತು ಜನರ ವಸತಿಯೇ ಇರಲಿಲ್ಲ. ಅದರ ಬಾಗಿಲು ಕಿಟಿಕಿಗಳೆಲ್ಲಾ ಮುರಿದುಹೋಗಿದ್ದು, ರಾತ್ರಿ ಹಗಲನ್ನದೆ ಗಂಗಾನದಿಯ ಗಂಭೀರ ಜಲನಿರ್ಘೋಷವು ಬಿಡದೆ ಕೇಳಿಸುತ್ತಿತ್ತು; ಏಕಾಂತ ಧಾರಿಣಿಯಾಗಿ, ಆಕೆ ಆ ಜೀರ್ಣ ದೇಗುಲದಲ್ಲಿ ರಾತ್ರಿ ಕಳೆದಳು!

ನಡು ಇರುಳು, ಬೆಳದಿಂಗಳು ಹರಡಿತ್ತು, ಇನ್ನೂ ಪಟ್ಟಣದ ಜನರ ಗಲಭೆ ನಿಂತಿರಲಿಲ್ಲ, ನಾಯಿಗಳು ಬೊಗಳುತ್ತಾ ಅತ್ತಿತ್ತ ಓಡಾಡುತ್ತಿದ್ದವು. ಆಗ ಆ ಇಬ್ಬರು ದಾಂಡಿಗರೂ ಆ ಜೀರ್ಣ ದೇಗುಲದ ಕಡೆಗೆ ಬರುತ್ತಿದ್ದರು.

ಭೈರವಿ ನೆಲದಲ್ಲಿ ಮಲಗಿದ್ದರೂ ಆಕೆಗೆ ನಿದ್ರೆ ಹತ್ತಿರಲಿಲ್ಲ ಹೆಜ್ಜೆಯ ಸಪ್ಪಳ ಆಲಿಸಿ, ಎದ್ದು ಕುಳಿತಳು ಆ ದಿನ ಬೆಳಗ್ಗೆ ತನನ್ನು ಹಿಂಬಾಲಿಸಿದ್ದ ಅದೇ ಧೂರ್ತರು, ಬಂದಿದ್ದರು! ಇಬ್ಬರೂ ಚೆನ್ನಾಗಿ ಅಮಲು ಸೇವಿಸಿದ್ದರು. ಒಬ್ಬನ ಕೈಯಲ್ಲಿ ಇನ್ನೂ ಒಂದು ಬಾಟ್ಲಿ ಇತ್ತು ಮದ್ಯದ ದುರ್ವಾಸನೆಯು ಆ ಸ್ಥಳವನ್ನು ತುಂಬಿತ

ಭೈರವಿಯು ಎದ್ದು ನಿಂತಳು ತ್ರಿಶೂಲವು ಅವಳ ಕೈಯಲ್ಲಿ ಹೊಳೆಯುತ್ತಿತ್ತು ಅವಳನ್ನು ನೋಡಿ ಒಬ್ಬ ಹೇಳಿದ—'ನೀನು ಯಾತಕ್ಕೆ ಎದ್ದು ನಿಂತಿದ್ದೀ! ಇಗೋ, ಭೈರವಿಗೆ ಸಮರ್ಪಿಸಲು ನಾವು ಈ ಮದ್ಯವನ್ನು ತಂದಿದ್ದೇವೆ, ಕುಡಿ'' ಇನ್ನೊಬ್ಬನು ಅಷ್ಟೊಂದು ಕುಡಿದಿರಲಿಲ್ಲ ಬಾಗಿಲಿಗೆ ಅಡ್ಡವಾಗಿ ಅವನು ನಿಂತಿದ್ದ.

'ನೀನು ಎಲ್ಲಿಗೆ ಹೋಗುತ್ತೀಯೆ? ನಾವು ಕಂದುತಂದುಕೊಂಡಲ್ಲಿಗೆ ನೀನೇ ಬಂದಿದ್ದೀ, ಇಗೋ ಇದನ್ನು ತಿನ್ನು'

ಹೀಗೆಂದು ಹೇಳಿ ಹುರಿದ ಮಾಂಸದ ತುಂಡನ್ನು ಅವಳ ಮುಂದಿಟ್ಟನು!

ಆಕೆಗೆ ನೆರವಾಗಲು ಅಲ್ಲಿ ಯಾರೂ ಇರಲಿಲ್ಲ ಇಬ್ಬರೂ ಧೂರ್ತರು! ಜನ್ಮಕ್ಕೆ ಹೇಸದ ಪಾಪಿಗಳು! ಅವಳನ್ನು ಏಕಾಂಗಿನಿಯಾಗಿ ಈಗ ಮುತ್ತಿದ್ದಾರೆ. ಯಾರು ಆಕೆಯನ್ನು ಕಾಪಾಡಬೇಕು?

ಆದರೆ, ಭೈರವಿಯ ಮುಖದಲ್ಲಿ ಭಯದ ಚಿಹ್ನೆಯೇ ಇರಲಿಲ್ಲ. ಎರಡನೆಯ ಮನುಷ್ಯನ ಮಾತು ಮುಗಿದ ಕೂಡಲೇ ಅವಳು ಕೇಳಿದಳು.

"ಏನು? ಎಲ್ಲಾ ಭೈರವಿಗಳೂ ಕುಡಿಯುತ್ತಾರೆಯೇ?''

"ಕುಡಿಯದೆ ಯಾವ ಹೆಂಗುಸೂ ಭೈರವಿಯಾಗುವುದಿಲ್ಲ ಈ ಅಪರ ರಾತ್ರಿಯ ಹೊತ್ತಿನಲ್ಲಿ ನೀವು ಇಲ್ಲಿಗೆ ಯಾತಕ್ಕಾಗಿ ಬಂದಿದ್ದೀರಿ?'' ಅವಳು ಪ್ರಶ್ನಿಸಿದಳು.

ಅವರಿಬ್ಬರು ಗಟ್ಟಿಯಾಗಿ ನಕ್ಕರು. "ನೀನು ಅದನ್ನೇ ಕೇಳಬೇಕು.''

"ನಾನು ಅನಾಥಳಾಗಿದ್ದೇನೆ, ನನ್ನನ್ನು ಹೀಗೆ ಅಪಮಾನಗೊಳಿಸುವುದು ಉಚಿತವಲ್ಲ, ನಾನು ಬ್ರಹ್ಮಚಾರಿಣಿ.''

"ನಿನ್ನ ಹಾಗೆ ಸಾವಿರ ಬ್ರಹ್ಮಚಾರಿಣಿಯರನ್ನು ನಾವು ನೋಡಿದ್ದೇವೆ. ನಮ್ಮ

[೧೦ನೇ ಪುಟಕ್ಕೆ ಮುಂದುವರಿಯುವುದು]

ಭೈರವೀ

[೯ನೆಯ ಪುಟದಿಂದ]

ಮಧ್ಯದಲ್ಲಿ ಕುಳಿತುಕೋ, ಬೇಕಾದಷ್ಟು ತಿನ್ನು!'' ''ಇದು ಪವಿತ್ರ ಕಾಶಿಯೆಂಬುದು ನಿಮಗೆ ತಿಳಿದಿದೆಯೋ!'' ಭೈರವಿ ಕೇಳಿದಳು.

''ನಾವು ಹಿಂದೆ ಹಾಗೆಂದು ಕೇಳಿಯೇ ಇರಲಿಲ್ಲ. ಈಗ, ನೀನು ಇಲ್ಲಿಗೆ ಬಂದುದರಿಂದ ನಿಜವಾಗಿಯೂ ಕಾಶಿಯು ಪಾವನವಾಯಿತು!'' ಇಬ್ಬರೂ ಅಟ್ಟಹಾಸ ಮಾಡಿ ನಕ್ಕರು!

''ಹುಚ್ಚುಗಳೇ, ಸ್ವರ್ಗದಲ್ಲಿದ್ದು ಪಾಪ ನೆಸೆದರೆ, ನರಕದ ಹೊಂತಕ್ಕೆ ಬೀಳುತ್ತೀರಿ. ನರಕದಲ್ಲಿ ಬಿದ್ದು ನಿಮ್ಮ ಪಾಪವು ಮುಗಿಯಲಾರದು. ಎಷ್ಟು ಪವಿತ್ರ ಅಬಲೆಯರನ್ನು ನೀವು ಹಾಳು ಮಾಡಿದ್ದೀರೋ ಆ ವಿಶ್ವನಾಥನಿಗೆ ಒಬ್ಬನಿಗೆ ಮಾತ್ರ ಗೊತ್ತು!''

ಮೊದಲನೆಯವನು ಎರಡನೆಯವನೊಡನೆ ಹೇಳಿದನು—''ನಾವು ಇಲ್ಲಿ ಇವಳೊಡನೆ ಶಾಸ್ತ್ರ ವಿಚಾರವಾಗಿ ಚರ್ಚಿಸಲು ಬಂದಿದ್ದೇವೋ? ಇವಳು ಕುಡಿಯುವುದು, ತಿನ್ನುವುದು ಬಿಟ್ಟು, ಚರ್ಚೆ ಮಾಡುತ್ತಾ ರಾತ್ರಿಯೆಲ್ಲಾ ಕಳೆಯುತ್ತಾಳೆ.''

ಹೀಗೆಂದು ಹೇಳಿ ಆತನು ಭೈರವಿಯ ಕೈ ಹಿಡಿಯಲು ಹೋದನು.

ಭೈರವಿಯ ರಕ್ತವು ಕುದಿಯಿತು! ತ್ರಿಶೂಲವನ್ನು ಎತ್ತಿ ಹಿಡಿದವಳು ಕಾಳಭೈರವಿಯಂತೆ ಕೆರಳಿದಳು. ''ಪಾಪಿಗಳೇ ಸಾಯಲು ಬಂದಿದ್ದೀರಿ, ಸತ್ತು ಹೋಗಿ'' ತ್ರಿಶೂಲವು ಅವರೆದೆಗಳನ್ನು ನಾಟಿತ್ತು!

*

ಸಿಪಾಯಿ ದಂಗೆಯಾಗಿ ಎರಡು ವರ್ಷಗಳು ದಾಟಿದ್ದುವು, ಬ್ರಿಟಿಷರ ಕಳವಳವು ಕೊನೆಯ ಕಡಿಮೆಯಾಗಿತ್ತು. ಆದರೆ, ಉಜ್ವಲ ಕ್ರಾಂತಿ ಪುರುಷನಾದ ನಾನಾಸಾಹೇಬನು ಎಲ್ಲಿರುವನು, ಏನು ಮಾಡುತ್ತಿರುವನು ಎಂಬುದು ಅವರಿಗೆ ತಿಳಿದಿರಲಿಲ್ಲ. ಇವನನ್ನೂ ಅವನ ಅನುಯಾಯಿಗಳನ್ನೂ ಹಿಡಿಯಲು ದೇಶದ ಸಮಸ್ತತೆಯಲ್ಲಿ ಗುಪ್ತಚಾರರನ್ನು ಕಳುಹಿಸಿದ್ದರು.

ಇವರ ಮುಂದಾಳುವಿನ ಹೆಸರು ಮುರ್‌ತಾಜ್ ಅಲಿ! ಆತನು ಒಳ್ಳೆಯ ಕುಶಲನಾಗಿದ್ದನು. ಯಾವ ವೇಷವಾದರೂ ಆತನಿಗೆ ಒಪ್ಪುತ್ತಿತ್ತು, ಒಂದು ಸನ್ಯಾಸಿಯ ವೇಷಧರಿಸಿ, ಕ್ರಾಂತಿಕಾರರ ಸುಳುಹನ್ನು ಕಂಡುಹುಡುಕಲು ಅವನು ಕಾಶಿಗೆ ಬಂದಿಳಿದನು.

ನಗರದಲ್ಲಿ ವೇಷವಲ್ಲಟಿಸಿ ಸಂಚರಿಸುತ್ತಾ ಒಬ್ಬ ಭೈರವಿಯ ವಿಷಯ ಜನರು ಆಕೆಯ ಚಿತ್ರ ವರ್ತನೆಯನ್ನು ಕುರಿತು ಅಲ್ಲಲ್ಲಿ ಸಂಭಾಷಿಸುತ್ತಿರುವುದನ್ನು ಕೇಳಿದನು.

'ಭೈರವಿಯ ಮುಖದಲ್ಲಿ ಒಂದು ಗಾಯದ ಕಲೆಯಿದೆಯೋ?' ಸನ್ಯಾಸಿಯು ಒಬ್ಬನೊಡನೆ ಕೇಳಿದ. ',ಹೌದು, ನಿನಗೆ ಅವಳ ಪರಿಚಯವುಂಟೇ?'' ಆತ ತಿರುಗಿ ಪ್ರಶ್ನಿಸಿದ. ಸನ್ಯಾಸಿಯು ಜಪಮಾಲೆಯನ್ನು ತಿರುಗಿಸುತ್ತಾ, ಧರ್ಮಶಾಲೆಯ ದ್ವಾರಕ್ಕೆ ನಡೆದನು. ಪೋಲೀಸ್ ಸ್ಟೇಶನಿಗೆ ಬಂದು ತನ್ನ ಪರಿಚಯದ ಪತ್ರವನ್ನು ತೋರಿಸಿ, ಕೆಲವುಂದಿ ಪೋಲೀಸರನ್ನು ಒಟ್ಟಿಗೆ ಕರೆದುಕೊಂಡನು.

ಮರುದಿನ ಮುರ್‌ತಾಜ್ ಅಲಿಯು ತನ್ನ ನಿಜವೇಷವನ್ನು ತೊಟ್ಟು ಕೈಯಲ್ಲಿ ಖಡ್ಗವನ್ನು ಹಿಡಕೊಂಡು, ಕೆಲಮಂದಿ ಪೋಲೀಸರನ್ನು ತನ್ನನ್ನು ಹಿಂಬಾಲಿಸಿ ಬರುವಂತೆ ಆಜ್ಞಾಪಿಸಿ ಘಾಟಿನ ಬಳಿ ಬಂದನು. ಒಂದು ಕಡೆ ಜನರ ಗುಂಪು ಕೂಡಿತ್ತು. ಭೈರವಿಯೊಬ್ಬಳು ಪೀಠದ ಮೇಲೆ ಭದ್ರಾಸನದಲ್ಲಿ ಕುಳಿತಿದ್ದಳು!

ಆತನು ಭೈರವಿಯ ಸಮೀಪ ಹೋದನು! ಅವಳ ಮುಂದೆ ನಿಂತು ಆತ ಸಣ್ಣ ಧ್ವನಿಯಲ್ಲಿ ಕೇಳಿದನು ''ನನ್ನ ಗುರುತು ಹತ್ತಿತೇ?''

ಆಕೆ ತಿರುಗಿ ನೋಡಿ ಚಕಿತಳಾದಳು. ಆದರೂ ಧೈರ್ಯ ತಂದುಕೊಂಡು ನಗುತ್ತಾ ಹೇಳಿದಳು ''ಮುರ್‌ತಾಜ್ ಅಲಿ, ನೀನು ಇಲ್ಲಿಗೆ ಹೇಗೆ ಬಂದೆ?''

ಆತನು ಮುಗುಳು ನಕ್ಕು ಹೇಳಿದ— ''ನಾನು ಬಂದುದರಲ್ಲಿ ಆಶ್ಚರ್ಯವಿಲ್ಲ, ಆದರೆ ನೀನು ಇಲ್ಲಿ ಬಹುಕಾಲದಿಂದ ಇದ್ದೆಯಲ್ಲವೇ?''

'ನಾನು ಬೇರೆಲ್ಲಿಗೆ ಹೋಗಲಿ!'' ಭೈರವಿಯು ಕಣ್ಣನ್ನು ಸೆರಗಿನಿಂದ ಒರಸಿಕೊಂಡಳು!

'ನಾನು ಯಾತಕ್ಕಾಗಿ ಬಂದಿರುವೆನೆಂದು ನಿನಗೆ ಗೊತ್ತಿದೆಯೋ'' ಮುರ್‌ತಾಜ ಅಲಿ ಪ್ರಶ್ನಿಸಿದ.

'ಪ್ರತೀಕಾರಕ್ಕಾಗಿ ಅಲ್ಲವೇ'? ಆಕೆ ನಿಶ್ಚಯವಾದ ಸ್ವರದಿಂದ ಹೇಳಿದಳು!

'ನಿನ್ನ ವಿಷಯ ಸರಕಾರದ ಇಚ್ಛೆಯೇನೆಂದು ನೀನು ಬಲ್ಲೆಯಾ?''

'ಸಿಕ್ಕಿದರೆ ಫಾಶಿಗೆ ಕೊಡುವುದು ಅಷ್ಟೇ ಅಲ್ಲವೇ? ನೀನು ನನ್ನನ್ನು ಸೆರೆ ಹಿಡಿಯಲು ಬಂದಿರ ನಿಯಸ್ಸ?'

'ನಾನು ಗುಪ್ತಚಾರ ಅದು ನನ್ನ ಕರ್ತವ್ಯ!'

ತಪ್ಪೇನು? ನಾನು ಸಿಪ್ಪಹಾಯಕಳಾಗಿದ್ದೇನೆ! ನಿನ್ನ ಜನರನ್ನು ಒಂಫಿಸಲು ಬರಹೇಳು'

'ಬೇಡ ನೀನು ನನ್ನೊಡನೆ ಬಾ, ಜನರು ಈ ವಿಷಯ ತಿಳಿಯುವುದು ಬೇಡ'

ಹೂಂ, ಹಾಗಾದರೆ ನೀನು ನನ್ನ ನಿಕಾ (ಮದುವೆ) ಮಾಡಿಕೊಳ್ಳುತ್ತೀಯಾ?'

'ಅದು, ನೀನು ಇಷ್ಟಪಟ್ಟರೆ! ತಡ ಮಾಡಬೇಡ. ನನ್ನೊಡನೆ ಹೊರಟು ಬಾ!'

'ನಾನು ಬರದಿದ್ದರೆ?'

'ನೀನು ಕ್ರಾಂತಿಕಾರಿಣಿಯು ನಿನ್ನನ್ನು ಪೋಲೀಸರಿಂದ ಬಂಧಿಸಿಕೊಂಡು ಹೋಗುವೆನು!'

'ನಾನು ಇಲ್ಲಿಂದ ಚಲಿಸುವುದಿಲ್ಲ!'

'ಏನು, ಚಲಿಸುವುದಿಲ್ಲ?' ಅಲಿಯು ಸುತ್ತು ನೋಡಿದನು. ಪೋಲೀಸರು ಆಕೆಯನ್ನು ಸುತ್ತು ಗಟ್ಟಿದ್ದರು!

ತ್ರಿಶೂಲವನ್ನು ಬಲಗೈಯಲ್ಲಿ ಹಿಡಿದೆತ್ತಿ ಭೈರವಿಯು ಮಿಂಚಿನಂತೆ ನೆಗೆದಳು. ಆಕೆಯನ್ನು ಹಿಡಿದು ನಿಲ್ಲಿಸಲು ಯಾರೂ ಧೈರ್ಯಗೊಳ್ಳಲಿಲ್ಲ.

ಭೈರವಿಯು ತ್ರಿಶೂಲವನ್ನು ಬಲವಂತವಾಗಿ ಹಿಡಿದೆತ್ತಿ, ತನ್ನ ಎದೆಯನ್ನೇ ಇರಿದುಕೊಂಡಳು!

ರಕ್ತವು ಗಾಯದಿಂದ ಸುತ್ತು ಚಿಲ್ಲಿತು!

ಜನರು ಎಲ್ಲಾ ಕಡೆಯಿಂದಲೂ ಅಲ್ಲಿ ಬಂದು ನೆರೆದರು

ಮುರ್‌ತಾಜಾ ಅಲಿಯು ಆಕೆಯ ಬಳಿಗೆ ಬಂದನು. ಭೈರವಿಯ ಹೃದಯದಿಂದ ಹೊರಟ ಬಿಸಿ ರಕ್ತದ ಪ್ರವಾಹವು ಗಂಗಾನದಿಯನ್ನು ಸೇರಿತ್ತು! ಭೈರವಿಯ, ಗಂಭೀರವಾದ ತೇಜೋಪೂರ್ಣವಾದ ಮುಖದ ಮೇಲೆ, ಅಸ್ತಂಗತನಾಗುವ ಸೂರ್ಯನ ರಕ್ತಕಿರಣವು ನರ್ತನವಾಡುತ್ತಿತ್ತು! ಅವಳ ಎದೆಯ ಜ್ಯೋತಿಯು, ಪರಂಜ್ಯೋತಿಯೊಡನೆ ಅಸ್ತಮಯ ಹೊಂದಿತು!

ಜನರು ಮುರ್‌ತಾಜ್ ಅಲಿಯೊಡನೆ ಕೇಳಿದರು 'ಏನಾಯಿತು? ಈ ಭೈರವಿ ಯಾರು ಗೊತ್ತಿದೆಯೋ?'

ಮೃತಿಹೊಂದಿದ ಆ ಪುಣ್ಯ ಶರೀರಕ್ಕೆ ಅಲಿಯು ತಲೆಬಾಗಿಸಿ, ವಂದನೆ ಮಾಡಿ ಹೇಳಿದನು

'ಆಕೆ ಅಜಾಮ್ ನಗರದ ರಾಣಿ ಚಂದಳ!'

'ಬ್ರಿಟಿಷರೊಡನೆ ಅಜಾಮ್‌ಗರಿನಲ್ಲಿ ಭಯಂಕರ ಕಾದಾಡಿದ ಆ ಮಹಾರಾಣಿಯೆ?' ನೂರಾರು ಕೊರಳುಗಳು ಒಮ್ಮೆಯೇ ಪ್ರಶ್ನಿಸಿದುವು!

ಗದ್ಗದ ಕಂಠದಿಂದ ಮೆಲ್ಲನೆ ಅಲಿಯು ಹೇಳಿದ: 'ಅವಳೇ, ಸ್ವಾತಂತ್ರ್ಯ ಪ್ರಿಯಳಾದ, ಅಭಿಮಾನ ಧನಳಾದ ಮಹಾರಾಣಿಯೇ ಈಕೆ!'

ಜನರ ನಿಟ್ಟುಸಿರು ನಭೋ ಮಂಡಳವನ್ನು ಭೇದಿಸುವಂತೆ ಹೊರಟಿತು! ಗಂಗಾನದಿಯು ಕಠೋರವಾಗಿ ಮೊರೆಯುತ್ತಿತ್ತು! ದಿಗಂತವನ್ನು ಕತ್ತಲು ಕವಿದು ಬಂತು!

(ಆಧಾರದಿಂದ)

—ದುರ್ಗಾದಾಸ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕಿ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲವರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ರುಚಿಯಲ್ಲಿಯೂ, ಬಣ್ಣದಲ್ಲಿಯೂ ನಸ್ಯವು ಖಾರದಲ್ಲಿಯೂ, ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ವೀಸಕ್ಕೆ ರೂ 3-8-0 ನವೀನ ಮಾರ್ಕ ಸಾರಥಿ ನಸ್ಯ 1 ವೀಸಕ್ಕೆ ರೂ 3-0-0 (ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ:—

ಎ ಪಿ ಸಾರಧಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್ ಪಿ. ಬಿ. ನಂಬ್ರ 47 ಮದ್ರಾಸು

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½%per annum Savings Bank Deposits at 1½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction .. d ranging from Rs 100/ to Rs. 5000/ run regularly on systematic lines Unique Banking facilities to Businessmen and interested Public

Apply for particulars—

K R. GURU, *Managing Director*.

ಅತ್ಯಾಶ್ಚರ್ಯಕರವಾದ ಕನ್ನಡಿ!

ಯಾವುದೇ ವಯಸ್ಸಿನವರಾದರೂ ಮನುಷ್ಯನು ಈ ಕನ್ನಡಿಯನ್ನು ನೋಡಲು ಸಾಧ್ಯವಿನೆ ಕಳವು ಆಗಿರುವ ಸಾಮಾನು, ಅಸ್ವಸ್ಥತೆಯಿಂದ ಗುಣವಾಗದಿರುವಿಕೆ, ಮುಂದೆ ಸಂಭವಿಸಬಹುದಾದ ದುಃಖಗಳು ಮತ್ತು ಅವುಗಳಿಂದ ತಪ್ಪಿಸಲು ಉಪಾಯ, ಭೂಮಿಯಲ್ಲಿ ಇಟ್ಟಿರುವ ಹಣದಪತ್ತೆ, ಯಾವುದೇ ಕಷ್ಟತರವಾದ ಕೆಲಸಗಳು ಸಾಧ್ಯವಾಗುವಿಕೆ, ನೌಕರಿ, ಕೋರ್ಟುಕಚೇರಿ ಕೆಲಸಗಳಲ್ಲಿ ಯಶ, ಪರೀಕ್ಷೆ ಮುಂತಾದ ಕೈಕೊಂಡ ಕೆಲಸಗಳಲ್ಲಿ ಯಶಸ್ಸು ದೊರೆಯಾಗುತ್ತದೆ. ಸ್ವರ್ಗಸ್ಥರಾದ ತಂದೆತಾಯಿಗಳನ್ನು ಮತ್ತು ಆಪ್ತಮಿತ್ರರನ್ನು ಮತ್ತು ಸ್ವಪ್ನದಲ್ಲಿ ನೋಡಬೇಕೆಂಬ ವಸ್ತುಗಳನ್ನು ಇದರಲ್ಲಿ ಕಾಣಬಹುದು ಬೆಲೆ ಬರೀ ೨॥ ಪೌಂಡು ಮತ್ತು ಅಂಚೆ ಖರ್ಚು ಬೇರೆ. ಇದು ನಿಜವಲ್ಲವೆಂದು ತೋರಿಸಿಕೊಟ್ಟಲ್ಲಿ ಬೆಲೆ ವಾಪಸು ನಿಮ್ಮ ಪತ್ತೆ ಚೆನ್ನಾಗಿ ಬರೆಯಿರಿ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ನಿಮ್ಮ ಸ್ಥಳ

American Mesmerism House,

P B. No. 27 P M H. Amritsar (India)

ಹಿಟ್ಲರನ ಮುಂದಿನ ತುತ್ತಿಗೆ ಹಂಗೇರಿಯು ಬಲಿಯಾಗುವುದೆ

ಹಿಟ್ಲರನು ಹಲವಿಧದ ಹಂಬಲವಿಟ್ಟಿರುತ್ತಾನೆ. ಸಾಮ್ರಾಜ್ಯ ವಿಸ್ತಾರ, ಅಧಿಕಾರ ಪ್ರಚಾರ ಇವುಗಳೇ ಆತನ ಆಕಾಂಕ್ಷೆಗಳು. ನ್ಯಾಯ ಅನ್ಯಾಯಗಳ ವಿಚಾರವಿಲ್ಲದೆ, ನಿರ್ಬಲ ರಾಷ್ಟ್ರಗಳನ್ನು ನುಂಗುತ್ತ ಬರುವ ಹಿಟ್ಲರನ ತುತ್ತಿಗೆ, ಹಂಗೇರಿಯವು ಬಲಿಯಾಗಲಿರುವುದೇ?

ಡಾನ್ಸಿಗಿನ ಕಡೆಗೆ ಇಂದು ಪ್ರಪಂಚದ ದೃಷ್ಟಿಯು ತಿರುಗಿದೆ. ಹಿಟ್ಲರನ ಹೊಡೆತವು ಯಾವಾಗ ಬೀಳುವುದೆಂದು ಜನರು ಕಳವಳದಲ್ಲಿದ್ದಾರೆ. ಆದರೆ ಒಬ್ಬ ರಾಜಕೀಯ ಕುಶಲನಾದವನು ಇನ್ನೊಂದು ಬಗೆಯಿಂದ ಕಳವಳಪಡುವನು. ಹಿಟ್ಲರನ ಮುಂದಿನ ಕೊಳ್ಳೆ ಹಂಗೇರಿಯಾಗುವುದೇ ಎಂಬುದು ಈಗ ಸಮಸ್ಯೆಯಾಗಿದೆ. ಇದಕ್ಕೆ ಸಾಕಷ್ಟು ಆಧಾರಗಳೂ ಇವೆ.

ಹಿಟ್ಲರನ ಅಭಿಲಾಷೆ

ಹಿಟ್ಲರನು ಯುದ್ಧಕಾಲಕ್ಕಿಂತ ಹಿಂದಿದ್ದ ಎಲ್ಲಾ ರಾಷ್ಟ್ರಗಳನ್ನು ಆದ ರೀತಿ, ಜರ್ಮನಿಯ ಸ್ವಾಧೀನತೆಗೆ ಬರಬೇಕೆಂದು ಅಭಿಲಾಷೆಗೊಂಡಿದ್ದಾನೆ. ಆಸ್ಟ್ರಿಯದ ಭಾಗವನ್ನು ಆತನು ಈಗಾಗಲೆ ಪಡೆದಿರುವನು. ಈಗ ರೀತಿ, ಆರ್ಥಿಕ ರಾಷ್ಟ್ರಗಳಿಗೆ ಈಗ ಬೇರೆ ಬೇರೆ ಕಡೆಯಿಂದ ಬೇಕಾದ ವಸ್ತುಗಳನ್ನು ತರಿಸಲು ಉಪಾಯವಾಗಿಕೊಂಡಿವೆ. ಆದರೆ ಜರ್ಮನಿಗೆ ಈಗ ಹಂಗೇರಿಯದ ಈ ಪ್ರಯೋಜನವು ಬೇಕಾಗಿದೆ.

ಇತರ ಪ್ರಯೋಜನಗಳು

ಇದು ಮಾತ್ರವಲ್ಲದೆ ಇತರ ಪ್ರಯೋಜನಗಳೂ ಜರ್ಮನಿಗೆ ಇವೆ. ಅನೇಕ ತರದ ಖನಿಜಗಳಿಗೆ ಹಂಗೇರಿಯು ಉತ್ತಮ ಕ್ಷೇತ್ರವಾಗಿದೆ. ಈ ಖನಿಜ ಸಂಪತ್ತನ್ನು ಸ್ವಾಧೀನಪಡಿಸುವುದು ಜರ್ಮನಿಗೆ ಬಹಳ ಅಗತ್ಯವಾಗಿ ಬೇಕಾಗಿದೆ.

ತುಂಬಾ ಎಣ್ಣೆಯೂ ಹಂಗೇರಿಯದಲ್ಲಿ ಹುಟ್ಟುತ್ತದೆ. ಜರ್ಮನಿಗೆ ಎಣ್ಣೆಯ ಸರಬರಾಯಿಯು ಈಗ ಅತ್ಯಾವಶ್ಯಕವಾಗಿ ದಬೇಕ

ಮತ್ತು ರಾಜಕೀಯ ದೃಷ್ಟಿಯಿಂದ ಹಂಗೇರಿಯು ತನಗೆ ಬರಬೇಕೆಂದು ಆತನು ಅಪೇಕ್ಷಿಸುತ್ತಾನೆ. ಈ ರಾಷ್ಟ್ರವು ಸಿಕ್ಕಿದರೆ, ಜರ್ಮನಿಗೆ ಬಹು ಪ್ರಯೋಜನಗಳುಂಟು, ಅಲ್ಲಿನ ಪ್ರಾಕೃತಿಕ ಮತ್ತು ಬೇಸಾಯದ ಉತ್ಪತ್ತಿಯಿಂದ ಜರ್ಮನಿಯು ಲಾಭ ಹೊಂದಬಹುದಾಗಿದೆ.

ಬಹಳ ಗೋಧಿ

ಅಲ್ಲಿಯ ಜನರಿಗೆ ಸಾಕಾಗಿ ಹೆಚ್ಚಾಗುವ ಗೋಧಿಗೆ ಗಿರಾಕಿಗಳಿಲ್ಲ. ಜರ್ಮನಿಯು ಅದನ್ನು ಪಡಕೊಳ್ಳಲು ಇಷ್ಟಪಡುತ್ತದೆ. ಇಡೀ ಯೂರೋಪಿನಲ್ಲಿ ಉತ್ಕೃಷ್ಟವಾದ ಗೋಧಿಯು ಇಲ್ಲಿ ಆಗುತ್ತದೆ. ಅಲ್ಲಿನ ಪಶುಪ್ರಾಣಿಗಳ ಅಭಿವೃದ್ಧಿಯೂ ತುಂಬಾ ಇದೆ. ಹಂಗೇರಿಯದ ಜನರಿಗೆ ಅಗತ್ಯವಿಲ್ಲದಷ್ಟು ದನಗಳು, ಕುರಿಗಳು, ಹಂದಿಗಳು ಅಲ್ಲಿ ಇವೆ.

ಹಂಗೇರಿಯದಲ್ಲಿ ಗೋಧಿಯು ಬಹಳ ದೊಡ್ಡ ಮಿಲ್ಲು ಕೈಗಾರಿಕೆಯಿದೆ. ಇತರ ಜಾತೀಯ ರೀತಿಯಿಂದಲೂ ಹಂಗೇರಿಯದ ಮೇಲೆ ಜರ್ಮನಿಯು ಕಣ್ಣಿದೆ. ಹಂಗೇರಿಯದಲ್ಲಿ, ಕೇವಲ ಅಲ್ಪ ಸಂಖ್ಯಾಕರಾಗಿರದೆ ಜರ್ಮನರ ಸಂಖ್ಯೆಯೂ ಹೆಚ್ಚಿದೆ. ಜೆಕೋಸ್ಲೋವೇಕಿಯ ಆಸ್ಟ್ರೇಲಿಯಗಳನ್ನು ಜರ್ಮನಿಯು ಆಕ್ರಮಣ ಮಾಡಿದ ಮೇಲೆ ಅಲ್ಲಿನ ಜರ್ಮನರು ಈ ಕುಂತ್ರ ಚೆಚ್ಚೆಯೆಬ್ಬಿಸುತಿದ್ದಾರೆ.

ಯೆಹೂದ್ಯರ ಸಮಸ್ಯೆ

ಯೆಹೂದ್ಯರು ಅಲ್ಲಿ ಶೇಕಡಾ ಆರರಂತೆ ಮಾತ್ರ ಇರುವುದಿದ್ದರೂ, ಅವರ ಸಮಸ್ಯೆಯು ವಿಷಮವಾಗಿದೆ. ಗಣ್ಯರ ಖಾನೆಸುಮಾರಿಯಂತೆ ಉದ್ಯೋಗ ವ್ಯವಹಾರದಲ್ಲಿ ಶೇಕಡಾ ಐವತ್ತು ಇರುವವರೆಲ್ಲರೂ ಯೆಹೂದ್ಯರೇ ಎಂದು ತಿಳಿದಿದೆ. ಇತ್ತೀಚೆಗೆ ಪಾಸಾದ ಒಂದು ಶಾಸನವು ಅವರಿಗೆ ಉದ್ಯೋಗವನ್ನು ಇಲ್ಲದೆ ಮಾಡಲು ಸಹಾಯವಾದಿದೆ.

ಹೀಗೆಯೆ ಯೆಹೂದ್ಯರನ್ನು ಹಂಗೇರಿಯಿಂದ ಹೊರಹಾಕುವ ಒತ್ತಾಯವು ಜರ್ಮನಿಯದ್ದೆಂಬುದಕ್ಕೆ ಸಂಶಯವಿಲ್ಲ. ಅವರನ್ನು ತೆಗೆದುಹಾಕಿದ ಸ್ಥಳಗಳಲ್ಲಿ ತುಂಬಿಸಲು ಬೇಕಾದಷ್ಟು ಹಂಗೇರಿಯಾನರು ಇಲ್ಲದಿರಲು, ಸಹಜವಾಗಿಯೂ ಇದರಿಂದ ಜರ್ಮನರಿಗೇ ಅಲ್ಲಿ ಉದ್ಯೋಗವು ದೊರಕುವುದು.

ಹೀಗೆ ಆರ್ಥಿಕ ವಿಷಯಗಳೇ ಜರ್ಮನಿಗೆ ಹಂಗೇರಿಯದ ಮುತ್ತಿಗೆಗೆ ಸಾಕಷ್ಟು ಆಧಾರಗಳು ಸಾಕಾಗಿವೆ. ಆದರೆ ಇನ್ನು ಕಾರಣವಿದೆ. ಹಂಗೇರಿಯದ ಮಧ್ಯದಲ್ಲಿ ಹರಿವ ಡೆನ್ಯೂಬ್ ನದಿಯ ಮೂಲಕ ಜರ್ಮನಿಯು ಯೂರೋಪಿನ ದಕ್ಷಿಣ ಪೂರ್ವ ಬದಿಯನ್ನು ಮುಟ್ಟಬಹುದಾಗಿದೆ. ಸೈನಿಕ ಚಲನೆಗೂ ಇದು ಪ್ರಾಕೃತಿಕವಾದ ಹಾದಿಯಾಗಿದೆ. ಎತ್ತರ ಪರ್ವತಗಳ ರಕ್ಷಣೆಯಿಂದ ಜರ್ಮನಿಗ ಹಂಗೇರಿಯವು ಇತರ ರಾಷ್ಟ್ರಗಳ ಕಡೆಯಿಂದ ಸಂರಕ್ಷಣೆಯ ಗೋಡೆಯಾಗಿದೆ.

ಹಂಗೇರಿಯದ ರಿಜೆಂಟ್ ಮತ್ತು ಪ್ರಧಾನ ಮಂತ್ರಿಗಳು ಜರ್ಮನಿಗೆ ಕರೆಯಲ್ಪಟ್ಟಿದ್ದಾರೆ. ಮಾತುಕತೆಯಲ್ಲಿ ಸೌಹಾರ್ದ ಸೂಚನೆಗಳೇ ಇದ್ದುವು. ಆದರೆ ಹಿಟ್ಲರನ ಈ ಗೆಳೆತನದ ಮಾತಿನಿಂದ ಹಂಗೇರಿಯದ ಜನರ ಎದೆಗುಂಡಿಗೆಯು ಬಡಿತವು ಜೋರಾಗಿದೆ.

ನೋಟೀಸು

ಉಡುಪಿ ಡಿ। ಮು। ಕೋರ್ಟಿನಲ್ಲಿ

O P No 42/1939

೧ ಕೆ ಶಂಕರನಾರಾಯಣ ಕಿಣಿ,
೨ ಕಳ್ಯಾ ಕೃಷ್ಣ ಕಿಣಿಯರ ಮಗ,
೩ ಶಾರದಾ ಯಾನೆ ಲೀಲಾವತಿಬಾ ಕಳ್ಯಾ ಕೃಷ್ಣ ಕಿಣಿಯರ ವಿಧವೆ—ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದ ಉಡುಪಿ ಕಸಬಾ ಮಾರುಥಿ ವೀಥಿಕಾದಲ್ಲಿ ಇರುವರು. | ಪ್ರತಿವಾದಿಗಳು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ —

೧ನೇ ಅರ್ಜಿದಾರನ ತಂದೆ ಮತ್ತು ೨ನೇ ಅರ್ಜಿದಾರಳ ಗಂಡ ಉಡುಪಿ ಕಸಬೆಯಲಿ ತಾ ೨೨—೬—೩೯ರಲ್ಲಿ ಮೃತಪಟ್ಟ ಕಳ್ಯಾ ಕೃಷ್ಣ ಕಿಣಿಯರು "The Empire of India Life Assurance Co, Ltd, Bombay" ಈ ಕಂಪೆನಿಯಲ್ಲಿ ಪಡೆದ ನಂಬ್ರ 3563ನೇ ಪೋಲಿಸಿ ಬಾಬ್ತು ಬರತಕ್ಕ ರೂಪಾಯಿ 616—0—0ನ್ನು ವಸೂಲು ಮಾಡುವರೆ ೧ನೇ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ದಾಖಲು ಮಾಡಿದ ಸದ್ರಿ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾ ೧೫—೯—೩೯ಕ್ಕೆ ತಪ್ಸಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನ್ಕಿ ಸಮಯ ಸದ್ರಿ ಕೋರ್ಟು ಮುಂದೆ ಸ್ವತಹ ಅಥವಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ.

Advocate's Office, Udipi 24—8—1939 } **M. Damodar Kamath,** *Advocate for Petts*

ನೋಟೀಸು

ಪುತ್ತೂರು ತಾಲೂಕು ೧೪ನೇ ಕೂವೆಟ್ಟು ಗ್ರಾಮದ ಕೂವೆಟ್ಟಿನಲ್ಲಿರುವ ಕುಕ್ಕ ಯಾನೆ ಕೋಟಿ ಪೂಜಾರಿಗಳ ಅಳಿಯ ಕರ್ತ ಪೂಜಾರಿ ಆದ ನಾನು ಈ ಮೂಲಕ ಎಲ್ಲಾ ಜನರ ತಿಳುವಳಿಕೆ ಬಗ್ಗೆ ತಿಳಿಯಪಡಿಸುವುದೇನೆಂದರೆ—

ನಾನು ೧೪ನೇ ಕೂವೆಟ್ಟು ಗ್ರಾಮದ ನಂಬ್ರ ೬ನೇ ಪಟ್ಟೆಗೆ ಒಳಪಟ್ಟ ಆಸ್ತಿಗಳ ಪಟ್ಟಾದಾರನೂ, ಅಡಳ್ತೆದಾರನೂ, ಮತ್ತು ಕುಟುಂಬದಲ್ಲಿ ಹಿರೀ ಮೆಂಬರನಾಗಿದ್ದು ಕುಟುಂಬದ ಯಜಮಾನನೂ ಆಗಿರುತ್ತೇನೆ. ನಾನು ಸದ್ರಿ ನನ್ನ ಹಕ್ಕಿನ ಆಸ್ತಿಗಳ ಸಂಪೂರ್ಣ ಸ್ವಾಧೀನತೆಯಲ್ಲಿದ್ದು ಅವುಗಳ ಗೇಣಿ ವಸೂಲು ಮಾಡಿ ಸರಕಾರ ತೀರ್ವೆ ಕೊಟ್ಟು ಕುಟುಂಬದ ಜೀವನವೂ, ಶುಭ ಶೋಭನಾದಿಗಳೂ, ಮನೆಯಲ್ಲಿ ಆಗತಕ್ಕ ಹವ್ಯಕವ್ಯಗಳೂ ಯೋಗ್ಯ ರೀತಿಯಿಂದ ನಡಿಸಿಕೊಂಡು ಬಂದಿರುತ್ತೇನಲ್ಲದೆ ಕುಟುಂಬದ ಹಿತಾರ್ಥಕ್ಕಾಗಿ ಆಸ್ತಿಯಲ್ಲಿ ಕೃತಾವಳಿಗಳು ಮಾಡಿಸಿ, ಅನೇಕ ಸತ್ಕಾರ್ಯಗಳು ಕೂಡಾ ಮಾಡಿರುತ್ತೇನೆ.

ಹೀಗಿರುತ್ತಿರುವಲ್ಲಿ ನನ್ನ ಕುಟುಂಬದಲ್ಲಿ ವಿನಾ ಕಾರಣವಾಗಿ ಸ್ವಾರ್ಥದಿಂದ ನನ್ನ ಮೇಲೆ ಅಹಿತ ಚಿಂತನೆಯುಳ್ಳವರು ಕೆಲವು ಜನ ಕಿರೆ ಮೆಂಬರರು ನನ್ನ ದ್ವೇಷಿಕರ ದುರ್ಬೋಧನೆಗಳಿಗೆ ಒಳಪಟ್ಟು ನನ್ನ ಮೇಲೆ ಕೆಟ್ಟ ಚಿಂತನೆಯುಳ್ಳವರಾಗಿದ್ದಲ್ಲದೆ, ಕೆಲವು ಸುಳ್ಳು ಸಂಗತಿಗಳನ್ನು ವಾರ್ತಾಪತ್ರಿಕೆಗಳಲ್ಲಿ ಒಂದು ಪ್ರಕಟಣೆಯನ್ನು ಕೊಟ್ಟಿರ ತ್ತಾರಾಗಿ ನನ್ನ ತಿಳುವಳಿಕೆಗೆ ಬಂದಿರುತ್ತದೆ. ಅಂಥಾದ್ದೇನಂದರೂ ಪ್ರಕಟನೆಗಳ ಪ್ರಕಟಿಸಿದರೂ ತ್ತಾರಾದರೆ ಅವುಗಳು ಕೇವಲ ಸುಳ್ಳು ಮತ್ತು ನಿರಾಧಾರವಾದವುಗಳು ಅಲ್ಲದೆ ಸರ್ವಮಾನ್ಯ ಕಾರಣಗಳಿಂದಲೂ ಬಾಧಿಸತಕ್ಕವುಗಳಲ್ಲವೆ ಸಿಂಧುವಾಗತಕ್ಕವುಗಳೂ ಅಲ್ಲ ಮಾತ್ರವಲ್ಲ ನಾನು ಈ ವರೆಗೆ ಮಾಡಿರುವ ಮತ್ತು ಇನ್ನು ಮುಂದೆ ಮಾಡಬಹುದಾದ ಯಾವತ್ತೂ ಬರಹ ಮೂಲಕ ರಿಕಾರ್ಡುಗಳು ನನ್ನ ಸ್ವಬುದ್ಧಿಯಿಂದಲೂ ಆತ್ಮಸಂತೋಷದಿಂದಲೂ ಮಾಡಿದವುಗಳು ಮತ್ತು ಮಾಡುವಂಥವುಗಳಾಗಿದ್ದು ಅವುಗಳನ್ನು ಮಾಡಲು ನಾನು ಸಂಪೂರ್ಣ ಹಕ್ಕು ವ ಸ್ವತಂತ್ರವುಳ್ಳವನಾಗಿರುತ್ತೇನಲ್ಲದೆ ಅವುಗಳು ಮಂಜೂರು ಆಗತಕ್ಕವುಗಳೂ ಆಗಿರುತ್ತವೆ. ಅಂಥವುಗಳನ್ನು ಆಕ್ಷೇಪಿಸಲು ಯಾರೊಬ್ಬರಿಗೂ ಹಕ್ಕು ಇರುವುದಿಲ್ಲ ಎಂಬುದನ್ನು ಈ ಮೂಲಕ ತಿಳಿಸಿರುತ್ತೇನೆ.

(1) ಈ ಎಡ ಹೆಬ್ಬೆಟ್ಟು ಮುದ್ರೆ ಮತ್ತು ಗೆರೆಗಳು ಕರ್ತ ಪೂಜಾರಿ ರುಜು.

ಮೊಕ್ಕಾಂ ಕೂವೆಟ್ಟು ತಾರೀಕು 27-8-39

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

ಜಯಪುರದ ಸಮಸ್ಯೆಯು ಬೇಗನೇ ಪರಿಹಾರವಾಗುವುದು

-ಬಜಾಜರ ಭರವಸೆ-

ಎಡಪಕ್ಷದವರ ಮೂರು ಠರಾವುಗಳು

ಜಯಪುರದ ಘಟನೆಗಳು

ಜಯಪುರ ದರ್ಬಾರು ಮತ್ತು ಪ್ರಜಾ ಮಂಡಳಿಗಳೊಳಗೆ, ಒಂದು ಯೋಗ್ಯ ರೀತಿಯ ಒಪ್ಪಂದವು ಬೇಗನೇ ಆಗುವ ಸಂಭವವುಂಟೆಂದು ಸೇಟ್ ಜಮ್ನಾಲಾಲ ಬಜಾಜರು ಹೇಳುತ್ತಾರೆ.

ತಾನು ಸೆರೆಮನೆಗೆ ಹೋಗುವುದಕ್ಕಿಂತ ಮೊದಲು ಕೈಕೊಂಡ ಕಾರ್ಯವನ್ನೇ ತಿರಿಗಿ ಜಯಪುರದಲ್ಲಿ ಮುಂದುವರಿಸಲಿರುವೆನೆಂದೂ, ತನ್ನ ಶರೀರದ ಆರೋಗ್ಯದ ವಿಷಯದಲ್ಲಿ ತಕ್ಕ ಔಷಧಿ ಮಾಡತಕ್ಕದಿದ್ದರೂ, ಜಯಪುರದ ಕಾರ್ಯವನ್ನು ತಾನು ಮುಂದಕ್ಕೆ ಹಾಕಿದರೆ ನ್ಯಾಯವಾಗಲಾರದೆಂದು ಅವರು ಹೇಳುತ್ತಾರೆ!

ಜಯಪುರದ ಮಹಾರಾಜರು ಸ್ವತಃ ರಾಷ್ಟ್ರದ ಆಂದೋಲನದ ವಿಷಯದಲ್ಲಿ ಬಹಳ ಜಾಗ್ರತೆಯನ್ನು ತೆಕ್ಕೊಳ್ಳಲು ಆರಂಭಿಸಿರುವರೆಂದೂ, ಅದರಿಂದ ಮುಂದಕ್ಕೆ ಯೋಗ್ಯ ನಿರ್ಧಾರವು ಆಗಬಹುದೆಂಬ ಆಸೆಯು ಹುಟ್ಟಿದೆಯೆಂದೂ ಹೇಳಿದರು

ಟಿಕೆಟಿಲ್ಲದೆ ಪಯಣ

ರೈಲ್ವೆಯ ಅಧಿಕಾರಿಗಳು, ಟಿಕೆಟಿಲ್ಲದೆ ರೈಲುಗಳಲ್ಲಿ ಪ್ರಯಾಣ ಮಾಡುವವರ ಮೇಲೆ ಕಠಿಣ ದಂಡನೆಯನ್ನು ವಿಧಿಸುವ ಬಿಲ್ಲನ್ನು ತರುವ ಸಲುವಾಗಿ ಯೋಚಿಸಲು ಸಿಮ್ಲಾದಲ್ಲಿ ಸಭೆ ಸೇರಿರುವರು.

ರೈಲ್ವೆಯ ಮುಖ್ಯ ಕಮಿಶನರು, ಸರಕಾರವು ಅದರ ಕುರಿತು ಯೋಗ್ಯ ಕಾನೂನೊಂದನ್ನು ಮಾಡದ ವಿನಹ, ಜನರು ಈ ದುರಭ್ಯಾಸವನ್ನ ಬಿಡಲೊಲ್ಲರೆಂದು ಒತ್ತಿ ಹೇಳಿರುವರು

ಹಕ್-ಖಾನರ ಭೇಟಿ

ಬಂಗಾಳದ ಪ್ರಧಾನ ಮಂತ್ರಿ ಮಾನ್ಯ ಎ ಕೆ ಫಜುಲ್ ಹಕ್ಕರು ದಿಲ್ಲಿಯಲ್ಲಿ ತಾ ೨೭ರಂದು ಸೇರಿದ, ಮುಸ್ಲಿಂ ಲೀಗಿನ ಕೌನ್ಸಿಲಿನ ಸಭೆಗೆ ಹಾಜರಾಗಿ ಪಂಜಾಬಿನ ಪ್ರಧಾನ ಮಂತ್ರಿ ಸರ್ ಸಿಖಂದರ್ ಹಯ್ಯತ್ ಖಾನರೊಡನೆ ಸಂಭಾಷಣೆ ಮಾಡಿದರು ಪಂಜಾಬ್ ಮತ್ತು ಬಂಗಾಳ ಪ್ರಾಂತಗಳೆರಡಕ್ಕೂ ಅನ್ವಯಿಸುವ ವಿಷಯವಾಗಿ, ಅವರು ಚರ್ಚೆ ಮಾಡುವರು

ಗುಂಡು ಹಾರಿಸಿದರು

ಗಡಿನಾಡಿನ ಮುಸ್ಲಿಂ ಮತ್ತು ಕಿಸಾನರೊಳಗೆ ಆದ ಗಲಭೆಯಲ್ಲಿ, ಗುಂಪನ್ನು ಚದರಿಸಲು ಪೋಲೀಸರು ಗುಂಡು ಹಾರಿಸಬೇಕಾಯಿತು.

ಮುಸ್ಲಿಂ ಲೀಗಿನವರು ಒಂದು ಕಡೆ ಸಭೆ ಕರೆದರು. ಕಿಸಾನ್ ಸಭೆಯವರು ಅದಕ್ಕೆ ವಿರೋಧ ಇನ್ನೊಂದು ಸಭೆ ಕರೆದರು. ಎರಡು ಕಡೆಯವರೂ, ಬೇರೆ ಬೇರೆ ಜಯಘೋಷ ಮಾಡುತ್ತಿದ್ದರು ಕಲ್ಲು, ಮಣ್ಣುಗಳನ್ನು ಆಚೀಚೆಗೆ ಎಸೆಯುವ ಕಾರ್ಯವಾಗಲು ಸಭೆಯು ಚದರಿತು ಹೀಗೆ ಈ ಎರಡೂ ಗುಂಪೂ ಅನ್ಯೋನ್ಯ ಜಗಳಾಡುವುದನ್ನು ಚದರಿಸಲು, ಪೋಲೀಸರು ಗುಂಡು ಹಾರಿಸಿದರು. ಒಬ್ಬನು ಸತ್ತುಹೋಗಿ, ಇನ್ನೊಬ್ಬನಿಗೆ ಗಾಯವಾಗಿದೆ.

ಎಡಪಕ್ಷದವರ ಮೂರು ಠರಾವುಗಳು

ಲೆಫ್ಟ್ ಕನ್ಸೊಲಿಡೇಶನ್ ಕಮಿಟಿಯವರು ಈ ಕೆಳಗಿನ ಸಾರಾಂಶದ ಮೂರು ಠರಾವುಗಳನ್ನು ಮಂಜೂರು ಮಾಡಿದ್ದಾರೆ

(೧) ಎರಡು ತಿಂಗಳ ಅವಧಿಯಲ್ಲಿ ಬಂಗಾಳದ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡದಿದ್ದಲ್ಲಿ, ಈ ಕಮಿಟಿಯು ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯೊಡನೆ, ಸತ್ಯಾಗ್ರಹವನ್ನು ಆರಂಭಿಸಬೇಕಾಗಿ ಕೇಳಿಕೊಳ್ಳುತ್ತದೆ

ಮಾತ್ರವಲ್ಲದ ವರ್ಕಿಂಗ್ ಕಮಿಟಿಯೊಡನೆಯೂ, ದೇಶದ ಎಲ್ಲಾ ಕಾಂಗ್ರೆಸು ಕಮಿಟಿಗಳು ಈ ಕುರಿತು ಅಂದೋಲನ ಮಾಡಲು ಬಿನ್ನಹ ಮಾಡುತ್ತದೆ

(೨) ತ್ರಿಪುರಿಯ ಅಧಿವೇಶನದ ನಿರ್ಣಯದಂತೆ, ಜಗತ್ತಿನ ಯುದ್ಧ, ಸಂಯುಕ್ತ ರಾಜ್ಯ ಘಟನೆಯನ್ನು ಹೊರಿಸುವಿಕೆ, ಇವುಗಳ ಸಂದರ್ಭದಲ್ಲಿ, ಅಖಿಲಭಾರತ ಆಂದೋಲನವನ್ನು, ಬ್ರಿಟಿಷ್ ಸಾಮ್ರಾಜ್ಯಶಾಹಿಯವರ ಹೂಡಲು ಅಭಿಪ್ರಾಯ ಪಡುತ್ತದೆ

ಈ ಬಗ್ಗೆ ಜನತೆಯ ಮನೋವೃತ್ತಿಯನ್ನು ಒಂದುಗೂಡಿಸುವರೆ, ಆಗಸ್ಟ ೩೧ರಿಂದ ಸಪ್ಟಂಬರದ ವರೆಗೆ ಒಂದು ವಾರ ರಾಷ್ಟ್ರೀಯ ಹೋರಾಟದ ವಾರವನ್ನು ಆಚರಿಸಬೇಕು

(೩) ಯುದ್ಧದ ವಿಷಯದಲ್ಲಿ ವರ್ಕಿಂಗ್ ಕಮಿಟಿಯ ಠರಾವು ತೃಪ್ತಿಕರವಾಗಿಲ್ಲ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಭಾರತವನ್ನು ಬಲಿಗೊಡಕೂಡದು, ಕೇಂದ್ರ ಎಸೆಂಬ್ಲಿಯ ಸದಸ್ಯರು, ಬರುವ ಸಭೆಗೆ ಹಾಜರಾಗದಿದ್ದರೆ ಮಾತ್ರ ಸಾಲದು, ಅವರು ರಾಜಿಯಿತ್ತು, ರಾಷ್ಟ್ರೀಯ ಜಾಗೃತಿಯ ಕಾರ್ಯವನ್ನು ಕೈಕೊಳ್ಳಬೇಕು ಇದಕ್ಕಾಗಿ ಇಡೀ ರಾಷ್ಟ್ರದಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ಚಳವಳ ನಡೆದು ಭಾರತವು ಒತ್ತಾಯದಿಂದಲಾದರೂ, ಯುದ್ಧದಲ್ಲಿ ಸಹಕರಿಸದಂತೆ ಮಾಡಬೇಕು

ಬೀಹಾರಿನ ವಿದ್ಯಾರ್ಥಿಗಳ - ರಚನಾತ್ಮಕ ಕಾರ್ಯ

ಬೀಹಾರ ಪ್ರಾಂತಿಕ ವಿದ್ಯಾರ್ಥಿ ಪೆಡರೇಶನಿನವರು ಬರುವ ರಾಮಘರದ ಕಾಂಗ್ರೆಸು ಅಧಿವೇಶನಕ್ಕೆ ಒಂದು ಸ್ವಯಂಸೇವಕ ದಳವನ್ನು ಕಳುಹಿಸುವರು.

ಪ್ರಾಂತದ ಬೇರೆ ಬೇರೆ ಕಡೆಗಳಿಗೆ ಪ್ರಚಾರ ಯಾತ್ರೆ ಮಾಡುವುದು ಇದು ಅಲ್ಲಲ್ಲಿನ ಜಿಲ್ಲಾ ವಿದ್ಯಾರ್ಥಿ ಸಂಘಗಳಿಂದ ಮಾಡಲ್ಪಡಬೇಕು ಈ ಯಾತ್ರೆಯ ಉದ್ದೇಶವು ಪರಸ್ಪರ ವಿದ್ಯಾರ್ಥಿಗಳಲ್ಲಿ ಸಂಬಂಧವನ್ನು ಹೆಚ್ಚಿಸುವುದು ವಿದ್ಯಾರ್ಥಿಗಳಿಗೆ ಅವರ ಚಳವಳದ ಉದ್ದೇಶವನ್ನು ತಿಳಿಸುವುದು. ಜಾತೀಯ ವಿಚಾರಗಳನ್ನು ಕಿತ್ತೊಗೆಯಲು ಯತ್ನಿಸುವುದು ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಲ್ಲಿ ಅನ್ಯೋನ್ಯ ಮೈತ್ರಿ ಬಳಿಸುವುದು

ಅಲ್ಲಲ್ಲಿ ಅಭ್ಯಾಸ ಗೋಷ್ಟಿಗಳನ್ನು ಮಾಡುವುದು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಚರ್ಚಿಸುವುದು ರಾಷ್ಟ್ರದ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ವಿಷಯಗಳ ಅಭ್ಯಾಸ ಮಾಡುವುದು

ಸಾರ್ವಜನಿಕ ಸಭೆಗಳನ್ನೂ ಚರ್ಚೆ ಕೂಟಗಳನ್ನೂ ಏರ್ಪಡಿಸುವುದು ಎಲ್ಲಾ ತರದ ಬುದ್ಧಿವಂತರಾದ ಮುಖಂಡರನ್ನು ಸಭೆಗೆ ಆಹ್ವಾನಿಸಿ ಭಾಷಣ ಕೊಡಿಸುವುದು

ಶಿಸ್ತಿನ ವಿದ್ಯಾರ್ಥಿಗಳ ಸ್ವಯಂಸೇವಕ ದಳವನ್ನು ಮಾಡುವುದು.

ಜನತೆಯ ಸಂಪರ್ಕವನ್ನು ಹೆಚ್ಚು ಹೆಚ್ಚು ಸಂಪಾದಿಸುವುದು

ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣವನ್ನು ಕೊಡುವಂತೆ ಸರಕಾರವನ್ನು ಕೇಳಿಕೊಳ್ಳುವುದು ಹೆಚ್ಚೆಚ್ಚು ಸದಸ್ಯರನ್ನು ಸೇರಿಸುವುದೇ ಮೊದಲಾದ ರಚನಾತ್ಮಕ ಕಾರ್ಯಗಳನ್ನು ಮಾಡುವುದಾಗಿ ನಿರ್ಣಯ ಮಾಡಿದೆ

ಅರವಿಂದರ ದರ್ಶನ

ಪೊಂಡಿಚ್ಚೇರಿಯ. ಶ್ರೀ. ಅರವಿಂದ ಘೋಷರ ಆಶ್ರಮದಲ್ಲಿ ಅವರ ದರ್ಶನಕ್ಕಾಗಿ ೪೦೦ ಮಂದಿ ಆತುರರಾಗಿ ಬಂದಿದ್ದರು ಇದು ಅರವಿಂದರ ೬೮ನೆಯ ಜನ್ಮದಿನವಾಗಿತ್ತು

ಈ ದರ್ಶನಾಕಾಂಕ್ಷಿಗಳಲ್ಲಿ ೨೦೦ ಮಂದಿ ಹೊರಗಿಂದ ಬಂದವರು, ೨೦೦ ಮಂದಿ ಆಶ್ರಮ ನಿವಾಸಿಗಳು ಅವರಲ್ಲಿ ಹೈದರಾಬಾದಿನ ಪ್ರಧಾನ ಮಂತ್ರಿ ಸರ್ ಅಕ್ಬರ್ ಹೈದರಿಯವರೂ ಒಬ್ಬರಾಗಿದ್ದರು. ರಾಜಾ ಶ್ಯಾಮರಾಜರೂ, ಅಮೇರಿಕದ ಹಿಂದಿನ ಪ್ರೆಸಿಡೆಂಟರ ಪುತ್ರಿ ಸಾವಿಲ್ಸನರೂ ಇದ್ದರು.

ಸಂಜೆ ೫ ಗಂಟೆಗೆ ದರ್ಶನವಾಯಿತು. ಆ ಮಹಾಯೋಗಿಯು ಎಲ್ಲರಿಗೂ ಮೌನದ ಆಶೀರ್ವಾದವನ್ನಿತ್ತರು

ಅಖಿಲಭಾರತ ಪಶು ಪ್ರದರ್ಶನ

ಹೊಸ ದಿಲ್ಲಿಯ ಇರ್ವಿನ್ ಥಿಯೇಟರಿನಲ್ಲಿ ಬರುವ ೧೯೪೦ನೇ ಇಸವಿ ಫೆಬ್ರವರಿ ೧೨ರಿಂದ ೨೮ರ ವರೆಗೆ ಅಖಿಲ ಭಾರತ ಪಶುಪ್ರದರ್ಶನವು ನಡೆಯುವುದ. ಭಾರತ ಪಶುಸಂರಕ್ಷಣೆಯ ಕುರಿತು, ಅಭಿರುಚಿಯುಳ್ಳವರು ಅದರಲ್ಲಿ ಸಹಕರಿಸಬೇಕಾಗಿ ಪ್ರಕಟಣೆ ಹೊಂದಿದೆ

WANTED

Applications are invited for teachers' posts in the 'Sri Venkatramana Temple Sanskrit School' Moolky, to be opened in September 1939 Preference will be given to Secondary grade trained teacher with Hindi qualifications Applications for a Sanskrit Pandit's post are also invited

The applications should reach the undersigned by the 15th Sept 1939

Manager,
Sri Venkatramana Temple Sanskrit School, MOOLKY

ಎಂಟು ಹಂಬಲದಿಂದ ದಮ್ಮು ಹತ್ತಿ ಬಳಲುವವನು ತೀವ್ರ ಗುಣವಾಗುವ ಆಶೆಯಿಂದ ಎಂಟು ಹತ್ತು ನಿಮಿಷಗಳಲ್ಲಿಯೇ ದಮ್ಮು ನೆಟ್ಟಗೆ ಆಗುವದು ಎಂದು ಪ್ರಶಂಸೆ ಕೊಡುವ ಪೇಟೆಂಟ ಉಪಾಯಗಳನ್ನು ಉಪಯೋಗಿಸಿ ಬೇಸತ್ತು ಹೋಗುತ್ತಾನೆ ಆದರೆ ದಮ್ಮಿನಿಂಥ ಕಟ್ಟಿದ ಬೇನೆಯನ್ನು ಸಾಂಗೋಪಾಂಗ ಚಿಕಿತ್ಸೆ ಮಾಡದೆ ಬೇರು ಸಹಿತ ನಾಶಮಾಡಿ ನೆಟ್ಟಗೆ ಆದೀತು ಎಂಬ ಆಶೆ ಹಿಡಿಯುವದು ವ್ಯರ್ಥ

ದಮ್ಮು ಹತ್ತಿದವನ ಪ್ರಕೃತಿಯು ಒಳಗಿಂದೊಳಗೇ ಕೆಟ್ಟು ಹೋಗಿರುತ್ತದೆ ದಮ್ಮು ಮಾತ್ರ ಬರೇ ಹೊರಗೆ ತೋರುವ ಲಕ್ಷಣ ಆದ್ದರಿಂದ ಬಳಲುವದು ಸ್ವಲ್ಪ ವೇಳೆ ಶಾಂತವಾದರೆ ದಮ್ಮು ಗುಣವಾಯಿತು ಎಂದು ಅನ್ನಲಿಕ್ಕೆ ಬರುವದಿಲ್ಲ ಉಪಚಾರವನ್ನು ನಿಯಮಿತವಾಗಿಯೂ ದೃಢವಾಗಿಯೂ ಮಾಡುವಂಥ ಔಷಧಗಳೇ ದಮ್ಮನ್ನು ನೆಟ್ಟಗೆ ಮಾಡುವವು. ಆದರೆ ಆ ಔಷಧಗಳಿಂದ ಸಂಪೂರ್ಣ ಗುಣವಾಗಬೇಕಾದರೆ ಅವುಗಳ ಜೊತೆಗೆ ನಿಯಮಿತ ಶೌಚಶುದ್ಧಿಯಾಗಿ ಪಚನ ಕ್ರಿಯೆಯು ಸುಧಾರಿಸುವಂಥ ಮತ್ತು ಶಕ್ತಿಯನ್ನು ಹೆಚ್ಚಿಸುವಂಥ ಉಪಾಯ ವೂ ಆಗಬೇಕು

ಪುರೋಹಿತ ಶ್ವಾಸಹಾರಿಯಲ್ಲಿ ಇಂಥ ದ್ರವ್ಯಗಳು ಸರಿಯಾಗಿ ಸೇರಿದ್ದರಿಂದ ದಮ್ಮಿನ ಮೂಲಕಾರಣವನ್ನು ಮುರುಕಿ ಅದರ ಮೇಲೆ ತನ್ನ ಪ್ರಭಾವವನ್ನು ತೋರಿಸಿ ಮೆಲ್ಲಮೆಲ್ಲಗೆ ಆದರೆ ಖಂಡಿತವಾಗಿ ದಮ್ಮನ್ನು ನೆಟ್ಟಗೆ ಮಾಡುವ ಶಾಸ್ತ್ರೀಯ ಔಷಧಗಳಲ್ಲಿ ಅದು ಎಷ್ಟೋ ವರ್ಷಗಳಿಂದ ಶ್ರೇಷ್ಠವೆಂದು ಗಣನೆಯಾಗಿದೆ ಆದ್ದರಿಂದ ದಮ್ಮು, ಕೆಮ್ಮು, ಸುಂಯ್ ಸುಂಯ್ ಇಲ್ಲವೆ ಗಂಟಲು ಉರಿಯುವಂಥ ಕೆಮ್ಮು ಮತ್ತು ಪುಪ್ಪುಸದ ಎಲ್ಲ ವ್ಯಥೆಗಳಿಗೆ ಅದು ಗುಣಮಾಡುವಂಥ ಔಷಧವು ಆಗಿದೆ

ರೂ. ೨, ರೂ ೩—೮, ರೂ. ೬ ಬೆಲೆಯ ಸೀಸೆಗಳಲ್ಲಿ ಎಲ್ಲ ಕಡೆಯಲ್ಲು ಸಿಗುತ್ತದೆ.

ಡಾಕ್ಟರ ಪುರೋಹಿತ ಫಾರ್ಮಸಿ

ಪುರೋಹಿತ ಶ್ವಾಸಹಾರಿ ದಮ್ಮಿಗೆ ಗುಣಕಾರಿ

ರಶ್ಯದ ಅದ್ಭುತ ಸೈನ್ಯಶಕ್ತಿ!

[ರಶ್ಯ-ಜರ್ಮನಿಗಳ ಒಪ್ಪಂದವು ನಡೆಯಿತು; ತ್ರಿರಾಷ್ಟ್ರಗಳ ಮಾತುಕತೆಯು ಬೆಲೆಯಿಲ್ಲದಾಯಿತು. ಬ್ರಿಟನ್ ಫ್ರಾನ್ಸು ಗಳು, ಯಾವುದರ ಸಲುವಾಗಿ ರಶ್ಯದ ನೆರವನ್ನು ಹಾರೈಸುತ್ತಿದ್ದವು? ಸರ್ವಾಧಿಕಾರಿಗಳ ಎದುರಿಗೆ ರಶ್ಯದ ಅದ್ಭುತ ಸೈನ್ಯವನ್ನು ಎದುರೊಡ್ಡುವ ಹಂಚಿಕೆಯಾಗಿತ್ತು! ಅಲ್ಲಿನ ಸೈನ್ಯಶಕ್ತಿಯ ವಿವರವನ್ನು ಈ ಕೆಳಗೆ ಕೊಡಲಾಗಿದೆ.]

ರಶ್ಯದ ಮಹಾಸೇನಾಧಿಪತಿಯಾದ ಕೆ ಇ. ವೊರೊಶಿಲೋವನ ಅಧೀನದಲ್ಲಿ ಪ್ರಪಂಚದ ಅತ್ಯಂತ ಮಹತ್ವವಾದ ಸೇನಾಸಮೂಹವು ಇದೆ. ರಶ್ಯದ ಸೇನಾ ರಚನೆಯು ಇತರ ರಾಷ್ಟ್ರಗಳ ಸೇನಾ ರಚನೆಗಿಂತ ವಿಶೇಷವಾಗಿದೆ. ಅವರ 'ರಕ್ತದಳ'ವು ಕೇವಲ ಯುದ್ಧಸಿದ್ಧತೆ ಗಳಿಸ ಲ್ಲ; ನಾಗರಿಕತೆಯು ಸಂಸ್ಕೃತಿಯ ನೆಲೆವೀಡೂ ಆಗಿದೆ. ರಶ್ಯದ ಚುನಾವಣೆ ಮೊದಲಾದುವುಗಳಲ್ಲಿ ಅವರೂ ಪ್ರತ್ಯಕ್ಷ ಭಾಗವಹಿಸುತ್ತಾರೆ ಮಾತ್ರವಲ್ಲದೆ, ತಮ್ಮ ಪ್ರತಿನಿಧಿಗಳನ್ನು ಸದಸ್ಯರಾಗಿಯೂ ಕಳುಹಿಸುತ್ತಾರೆ.

ಸೇವೆಗೆ ಸಿದ್ಧರಾಗಿಯೇ ಇರಬೇಕು

ಕೆಲಸಗಾರರು, ವ್ಯವಸಾಯಗಾರರು ಮತ್ತು ಸಮಾಜದ ಹಿತಸಾಧಕರಾಗಿರುವವರು ಸೈನ್ಯದಲ್ಲಿ ಸೇರಲು ಬರುವುದು ಅವರ ರಾಷ್ಟ್ರೀಯ ಸೇವೆಯ ಉದ್ಯೋಗವಾಗಿದೆ. ಇತರ ಜನರಂತೆ ಅವರಿಗೆ ಎಲ್ಲಾ ಹಕ್ಕು ಸ್ವಾತಂತ್ರ್ಯಗಳೂ ಇವೆ. ರಶ್ಯದ ಪ್ರತಿಯೊಂದು ಕಾರ್ಖಾನೆ ಪ್ರತಿಯೊಂದು ಗ್ರಾಮವೂ ಒಂದು ರೀತಿಯಿಂದ ಬೇರೆ ಬೇರೆ ಸೈನ್ಯ ಶಿಬಿರವಾಗಿದೆ.

ರಶ್ಯದ ಯುವಕನಿಗೆ ೧೯ನೇ ವಯಸ್ಸಿನಲ್ಲಿ ಸೈನಿಕ ಶಿಕ್ಷಣವು ಕೊಡಲ್ಪಡುತ್ತದೆ. ಪ್ರತಿಯೊಬ್ಬನೂ ೨ ವರ್ಷ ಪದಾತಿದಳದಲ್ಲಿ, ಮೂರು ವರ್ಷ ವಿಮಾನದಳದಲ್ಲಿ, ಐದು ವರ್ಷ ನೌಕಾದಳದಲ್ಲಿ ಸೇವೆ ಸಲ್ಲಿಸಲೇಬೇಕು. ಇವರಲ್ಲಿ ಆರೋಗ್ಯ ದೃಢಕಾಯರೂ ಯೋಗ್ಯರೂ ಆದವರಲ್ಲಿ ಮೂರರಲ್ಲಿ ಒಂದಂಶ ಜನರನ್ನು "ರಕ್ತದಲ"ಕ್ಕೆ ಸೇರಿಸಲ್ಪಡುವುದು. ಇತರರೆಲ್ಲರೂ ಕರೆದಾಗ ಸೈನ್ಯಕ್ಕೆ ಸೇರುವಂತೆ ನಿಯಮಿಸಲಾಗಿದೆ.

ಹೀಗೆ ಒತ್ತಾಯದ ಸೈನ್ಯ ಶಿಕ್ಷಣವು ಅಸಾಧಾರಣವಾಗಿದ್ದರೂ, ಜನತೆಗೆ ಅಪ್ರಿಯವಾಗಿಲ್ಲ. ರಾಷ್ಟ್ರಸೇವೆಯ ಪ್ರಚಾರವೇ ಇದಕ್ಕೆ ಕಾರಣ. ಸೈನ್ಯಾಧಿಪತಿಯು ಹಳ್ಳಿಹಳ್ಳಿಗಳಿಗೆ ಹೋಗುತ್ತಾನೆ. ಯುವಕರನ್ನೂ ಅವರ ಹಿರಿಯರನ್ನೂ ಸಭೆಗೆ ಬರಹೇಳುತ್ತಾನೆ, ಅಲ್ಲಿ ರಕ್ತದಳದಲ್ಲಿ ಸಿಗುವ ವೀರಜೀವನ, ವಿದ್ಯಾಸೌಕರ್ಯ ರಾಷ್ಟ್ರಸೇವಾಸಂದರ್ಭವೇ ಮೊದಲಾದ ಪ್ರಯೋಜನಗಳನ್ನು ವಿವರಿಸುತ್ತಾನೆ. ಜನರು ನಿಜವಾಗಿ ಮನವೊಪ್ಪಿ ಸೈನಿಕರಾಗಿ ಬರುತ್ತಾರೆ.

ಶಿಕ್ಷಣಸಮಯದಲ್ಲಿ ನಿಯಮಗಳ ಪಾಲನೆಯ ಬಗ್ಗೆ ಬಹು ಗಮನಕೊಡಲಾಗುತ್ತದೆ. ಹಲವು ಸಲ ಈ ಸೈನಿಕರು ನಾಟಕವಾಡುವುದೂ ಉಂಟು. ಸೈನ್ಯಾಧಿಕಾರಿಯು ಮಡದಿಯು ಸೈನಿಕರೊಡನೆ ಸಂಸವಾಡುವಳು. ರಶ್ಯದ ಸೈನ್ಯಾಧಿಕಾರಿಯೂ ಜನತೆಯ ದೃಷ್ಟಿಯಿಂದ ಒಬ್ಬ ಪ್ರತ್ಯೇಕ ಕಲಿಯುವಿಕೆಯು ಸಾಮಾನ್ಯ ಯೋಧನೆ ಆಗಿದ್ದಾನೆ.

ವಿದ್ಯೆ ಮತ್ತು ಶಿಕ್ಷಣ

ಸೈನ್ಯದ ಯೋಗ್ಯತೆಯು ಅದಕ್ಕೆ ಇರುವ ಜ್ಞಾನಶಕ್ತಿಯನ್ನೂ ಹೊಂದಿದೆ. ಪ್ರತಿಯೊಂದ ಕೇಂದ್ರದಲ್ಲಿಯೂ ಕ್ಲಬ್ಬುಗಳು, ಶಾಲೆಗಳು, ನಾಟಕ ಮಂದಿರಗಳು, ವಾಚನಾಲಯಗಳು ಇವೆ.

ಒಬ್ಬ ನಿರಕ್ಷರಸ್ಥನು ಸೈನ್ಯಕ್ಕೆ ಸೇರಿದರೆ, ಅವನಿಗೆ ಅಲ್ಲಿ ಖಂಡಿತವಾಗಿ ಓದಲು ಬರೆಯಲು ಕಲಿಸುತ್ತಾರೆ. ಅವರಿಗೆ ಗಣಿತ ಭೂಗೋಳ ಚರಿತ್ರೆಗಳನ್ನು ಮಾತ್ರ ಕಲಿಸುವುದಿಲ್ಲ, ಅರ್ಥಶಾಸ್ತ್ರ ರಾಜನೀತಿಗಳನ್ನು ಸುಲಭವಾಗಿ ತಿಳಿಸುವಂತೆ ಮಾಡಿದ್ದಾರೆ. ಯಾರಿಗೆ ಸಂಗೀತಾಭಿರುಚಿಯುಂಟೋ ಅವರೆಲ್ಲರಿಗೂ ಸಂಗೀತಪಾಠವೂ ಇವೆ.

ಪ್ರತಿವರ್ಷವೂ ಹೀಗೆ ಅರ್ಧ ಮಿಲಿಯ ಜನರು ತಮ್ಮ ಸೈನಿಕಶಿಕ್ಷಣವನ್ನು ಮುಗಿಸಿ ಮನೆಗೆ ಬರುತ್ತಾರೆ.

ಅದ್ಭುತ ಜನಶಕ್ತಿ

ಜಗತ್ತಿನಲ್ಲಿ ಅತ್ಯಂತ ಪ್ರಬಲ ಸೇನಾಶಕ್ತಿಯುಳ್ಳದ್ದೆಂದು ರಶ್ಯಕ್ಕೆ ಹೆಸರು ಬಂದದ್ದು, ಅಲ್ಲಿನ ಜನಶಕ್ತಿಯು ಮತ್ತು ಸೈನಿಕರ ಯೋಗ್ಯತೆಗಳಿಂದಲಾಗಿದೆ. ಯುದ್ಧವಾಗುವ ಸಂದರ್ಭದಲ್ಲಿ ಇಡೀ ಜನಸಂಖ್ಯೆಯಲ್ಲಿ ಸೇಕಡಾ ಹತ್ತರಂತೆ ಸೈನಿಕರಾಗಿ ಸಿಗಬಹುದಾಗಿದೆ.

ಇಂದು ರಶ್ಯದ ಸೈನ್ಯದ ಸಂಖ್ಯೆಯು ೧,೩೦೦,೦೦೦ ಜನರಷ್ಟಿದೆ. ಇದಲ್ಲದೆ ಎಳೆಂಟು ಮಿಲಿಯ ಜನರು ಸಿದ್ಧರಾಗುತ್ತಾ ಇದ್ದಾರೆ. ಹಿಂದೆ ಶಿಕ್ಷಣ ಪಡೆದ ೧೩॥ ಮಿಲಿಯ ಜನರು ತಯಾರಿದ್ದಾರೆ. ಒಟ್ಟು ೨೦,೦೦೦,೦೦೦ ಸೈನ್ಯಶಕ್ತಿಯು ಇಂದು ರಶ್ಯಕ್ಕಿದೆ.

ನವೀನ ನವೀನ ಯಂತ್ರೋಪಕರಣಗಳೂ ಇಂದು ಅವರಲ್ಲಿವೆ. ೫೦,೦೦೦ ಮೆಶಿನುಗನ್ನುಗಳು ಅವರಲ್ಲಿವೆ.

ಹೀಗೆ ಪದಾತಿದಲವನ್ನು ಹೆಚ್ಚಿಸುವುದರೊಡನೆ ವೈಮಾನಿಕ ದಳವೂ ತೀವ್ರ ಅಭಿವೃದ್ಧಿಹೊಂದುತ್ತಿದೆ. ಅತ್ಯಾಧುನಿಕ ಪದ್ಧತಿಯ ವಿಮಾನಗಳು ಸಾವಿರಾರು ಸಿದ್ಧವಾಗಿವೆ.

ಹೀಗೆ ಸರ್ವವಿಧದ ಸೈನ್ಯಶಕ್ತಿಯಲ್ಲಿ ರಶ್ಯವು ಸ್ವತಂತ್ರರಕ್ಷಣೆಗೆ ಸಂಪೂರ್ಣವಾಗಿದೆ. ೧೯೩೩ರಲ್ಲಿಯೇ ಬ್ರಿಟಿಷ್, ಫ್ರೆಂಚ್, ಅಮೇರಿಕಗಳ ಸೈನ್ಯಕ್ಕಿಂತ ರಶ್ಯದ ಸೈನ್ಯಶಕ್ತಿಯು ಹೆಚ್ಚಿತ್ತು. ಈಗಂತೂ ಅದು ದ್ವಿಗುಣಿತವಾಗಿದೆ. ಸೇನಾಧಿಕಾರಿ ವೊರೊಶಿಲೋವನು ಹೇಳುತ್ತಾನೆ ಕೇಳಿ,

"ಇಂದು ನಮ್ಮ ಯೋಧರ ವೈಮಾನಿಕ ನಿಲ್ದಾಣಗಳಲ್ಲಿ ಕೇವಲ ವಿಮಾನಗಳು ಮಾತ್ರ ಕಾಣಸಿಗುವುದಲ್ಲ. ಗಂಟೆಗೆ ೫೦೦ ಕಿಲ್ಲೋಮೀಟರ್ ವೇಗದ ಬೊಂಬು ವಿಮಾನಗಳೂ, ೧೪,೦೦೦ದಿಂದ ೧೬,೦೦೦ ಮೀಟರ್ ಎತ್ತರ ಹಾರಾಡುವ ವಿಮಾನಗಳೂ ನಮ್ಮಲ್ಲಿವೆ."

ಸೈನ್ಯದ ತೀವ್ರ ಚಲನೆ

ರಶ್ಯದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬಹಳ ತೀವ್ರವಾಗಿ ಸೈನ್ಯವನ್ನು ಸಾಗಿಸಲು ಬೇಕಾದಷ್ಟು ರೈಲ್ವೆಗಳು ಮಾರ್ಗಗಳು ಇಗಿವೆ. ಎಷ್ಟು ವೇಗದಿಂದ ಯಾವ ಯಾವ ಸ್ಥಳಗಳಿಗೆ ಎಷ್ಟೆಷ್ಟು ಸೈನ್ಯಗಳು ಅವರು ಕಳುಹಿಸಬಲ್ಲರೆಂಬ ವಿಷಯವನ್ನು ತಿಳಿದರೆ ದಿಗ್ಭ್ರಾಂತರಾಗಬೇಕಾಗುವುದು.

ಯುದ್ಧ ತಪ್ಪುವುದೇ?

ರೂಸ್‌ವೆಲ್ಟರ ಶಾಂತಿಯ ಒಪ್ಪಂದದ ಮಾತುಕತೆಗೆ ಪೋಲೆಂಡಿನ ಪ್ರೆಸಿಡೆಂಟ್ ಮೊಸಿಕಿಯವರು ಒಪ್ಪಿರುವುದಾಗಿಯೂ ಹಿಟ್ಲರನೂ ಆ ವಿಷಯದಲ್ಲಿ ತನ್ನ ಸೂಚನೆಗಳನ್ನು ಕೇಳಿ ಶಾಂತಿರಕ್ಷಣೆಗೆ ನೆರವಾಗಬೇಕೆಂದು ಅವರು ತಿರಿಗಿ ಬಿನ್ನಯಿಸಿಕೊಂಡಿದ್ದಾರೆ. ಈ ರಾಜಿಪಂಚಾಯಿತಿಕೆಯ ಮಧ್ಯಸ್ಥರು ರೂಸವೆಲ್ಟರೇ ಎಂದು ತಿಳಿಯುತ್ತದೆ.

ಹಿಟ್ಲರನು, ಚೆಂಬರ್ಲಿನರಿಗೆ ಶಾಂತಿಯ ಬಗ್ಗೆ ಅಭಿಪ್ರಾಯ ಕೇಳಲು ರಾಯಭಾರಿಯನ್ನು ಕಳುಹಿಸಿರುವುದಾಗಿ ತಿಳಿದಿದೆ. ಈ ಕುರಿತು ಬ್ರಿಟಿಷ್ ಮಂತ್ರಿಮಂಡಲದ ಸಭೆ ಸೇರಿತು.

ಮುಸಲಿನಿ ಮತ್ತು ಹಿಟ್ಲರರು ಟೆಲಿಫೋನಿನ ಮೂಲಕ ಅನ್ಯೋನ್ಯ ಮಾತುಕತೆ ಮಾಡುತ್ತಿರುವರು.

ಆಂಗ್ಲ—ಪೋಲರ ಒಪ್ಪಂದ

ಅನ್ಯೋನ್ಯ ಸಹಾಯಸೂಚಕವಾಗಿ ಆಂಗ್ಲ ಮತ್ತು ಪೋಲರೊಳಗೆ ಒಪ್ಪಂದವಾಯಿತು. ಒಂದು ಪಕ್ಷವು ಯಾವುದಾದರೂ ರಾಷ್ಟ್ರದೊಡನೆ ಯುದ್ಧಕ್ಕಿಳಿಯಬೇಕಾದ ಸಂದರ್ಭದಲ್ಲಿ ಎರಡನೆಯ ಪಕ್ಷವು ಅದಕ್ಕೆ ಸಹಾಯ ಮಾಡಲು ಬದ್ಧವಾಗಿರತಕ್ಕದ್ದು.

ಪ್ರಥಮ ಪ್ರಣಯದ ಫಲವಾಗಿ ಎಡ್ಡಾಳ ಜನನವಾಯಿತು

ಹಿಟ್ಲರನಿಗೆ ಮುಸ್ಲಿಮರ ಆಹ್ವಾನ

ಚೈನಾದಲ್ಲಿ ಸಾಕ್ಷರ ಪ್ರಚಾರ

ಮುಸಲನಿಯ ಪ್ರಣಯ ಕಥೆ

ಮುಸಲನಿಯ ಮಕ್ಕಳಲ್ಲಿ ಎಡ್ಡಾಳ ವ್ಯಕ್ತಿತ್ವ, ಸಾಮರ್ಥ್ಯ, ಜ್ಞಾನಶಕ್ತಿಗಳು ಅಪೂರ್ವವಾಗಿವೆ ತಂದೆಗೆ ಆಕೆಯು ಸರ್ವವಿಧದಿಂದಲೂ ನೆರವಾಗುತ್ತಾಳೆ ಆದರೆ ಆಕೆಯು ಮುಸಲನಿಯ ಹೆಂಡತಿ, ಡೊನ್ನಾರಾಕೆಲಿಯಳ ಹೊಟ್ಟೆಯಲ್ಲಿ ಹುಟ್ಟಿದವಳಲ್ಲವೆಂದು ತಿಳಿದುಬರುತ್ತದೆ. ಆತನು ಪ್ರಥಮ ಪ್ರಣಯ ಮಾಡಿದ, ರಶ್ಯಾದ ಸೋಶಿಯಲಿಸ್ಟ ಹೆಂಗಸಿನ ಬಸುರಲ್ಲಿ ಆತನು ಅಧಿಕಾರಕ್ಕೆ ಬರುವುದಕ್ಕಿಂತ ಮೊದಲು ಅವಳು ಹುಟ್ಟಿದವಳೆಂದು ಗೊತ್ತಾಗಿದೆ

ಜಾತಕವಿಲ್ಲ

ಮುಸಲನಿಯ ಇತರ ಮಕ್ಕಳಂತೆ, ಎಡ್ಡಾಳ ಹುಟ್ಟಿದ ದಿನದ ಕುರಿತು ಯಾವ ಆಧಾರವೂ ಇಲ್ಲ ಆಕೆಯ ವಿವಾಹ ಸಮಯದಲ್ಲಿ ೧೯ ವರ್ಷವಾಗಿತ್ತೆಂದು ಹೇಳಿಕೆ ಆದರೆ ಈಗ ೨೮, ೨೯ ವರ್ಷವಾಗಬಹುದು ಸೋಶಿಯಲಿಸ್ಟನಾಗಿದ್ದ ಮುಸಲನಿಯು, ತನ್ನ ಮದುವೆಯು ಚರ್ಚಿನಲ್ಲಿ ಆಗುವುದಕ್ಕೆ ಸಮ್ಮತಿಸದೆ ಇದ್ದುದರಿಂದ ಹೀಗಾಗಿರಬಹುದು. ೧೯೨೦ರಲ್ಲಿ ಎಡ್ಡಾಳು ಲಂಡನಿಗೆ ಬಂದ್ದದು, ಆಕೆಯು ನಿಜಮಾತೆಯನ್ನು ಕಾಣಲು ಎಂದು ಕಥೆಯಿದೆ. ಅವಳ ತಾಯಿ ೧೯೩೦ರಲ್ಲಿ ಕ್ಷಯ ಹಿಡಿದು ಸತ್ತಳಂತೆ. ಎಡ್ಡಾಳ ಹೃದಯ ಕೋಶವೂ ದುರ್ಬಲವೆಂದು ತಿಳಿದಿದೆ. ಆದರೆ ಮುಸಲನಿಯ ಇತರ ಮಕ್ಕಳಿಗೆ ಹೀಗೆ ಇಲ್ಲ.

ಚೈನದಲ್ಲಿ ಸಾಕ್ಷರತೆ

೧೯೪೯ನೇ ಇಸವಿಯಲ್ಲಿ ಚೈನಾದಲ್ಲಿ ಪ್ರಾಯಸ್ಥರ ನಿರಕ್ಷರತೆಯು ಸಂಪೂರ್ಣ ಇಲ್ಲದಾಗುವುದು. ಯುದ್ಧ ಶುರುವಾಗುವುದಕ್ಕಿಂತ, ಮೊದಲೇ ಚೈನವು ತೀವ್ರವಾಗಿ ವಿದ್ಯಾಯೋಜನೆಯನ್ನು ಆರಂಭಿಸಿತ್ತು. ಆ ಮೇಲೆ ಯುದ್ಧವಾರಂಭವಾದಂದಿನಿಂದ, ಚೈನೀಯರಿಗೆ ಸಾಕ್ಷರತೆಯ ಮಹತ್ವವು ಇನ್ನಷ್ಟು ವಿದಿತವಾಗಿದೆ.

ಎರಡು ತಿಂಗಳ ಪೂರದಂತೆ, ಅಲ್ಲಲ್ಲಿ ಸಾಕ್ಷರತೆಯ ಕೇಂದ್ರಗಳು ಸ್ಥಾಪಿಸಲ್ಪಡುವವು.

ಕಾರ್ಯ ನಿರ್ವಾಹ

ವಿದ್ಯಾರ್ಥಿಗಳಿಗೆ, ಹೆಚ್ಚು ರಜಾದಿನಗಳನ್ನು ಕೊಟ್ಟು, ಅವರನ್ನು ಹತ್ತಿರದ ದೂರದ ದೇಶಗಳಿಗೆ ಕಳುಹಿಸಲಾಗುತ್ತದೆ. ಅವರು ಸಾಕ್ಷರತೆಯ ಪ್ರಚಾರದೊಡನೆ, ಯುದ್ಧ ಸಮಯದಲ್ಲಿ ಜನತೆಯು ಮಾಡತಕ್ಕ ಕಾರ್ಯಗಳ ಕುರಿತು ಜನರಿಗೆ ಒಳ್ಳೆಯ ತೆರದ ಬೋಧೆಯನ್ನು ಕೊಡುತ್ತಾರೆ

ಹಿಂದೆ, ಶಾಂತಿಕಾಲದಲ್ಲಿ ಕಲಿಸುತ್ತಿದ್ದ, ಭೂಗೋಳ, ಚರಿತ್ರೆ. ಲೆಕ್ಕ ಇವೆಲ್ಲವೂ ಈಗಿಲ್ಲ ರಾಷ್ಟ್ರೀಯ ರಕ್ಷಣೆ, ಮತ್ತು ಕದನ ಸಿವಾತಣೆಯ ಶಿಕ್ಷಣ ಪದ್ಧತಿಯು ಈಗಿನದು. ಯುದ್ಧದಲ್ಲಿ ಹೇಗೆ ಹೇಗೆ ಇರಬೇಕು, ವಿಮಾನಧಾಳಿಯನ್ನು ಹೇಗೆ ತಪ್ಪಿಸುವುದು, ಸಾರ್ವಜನಿಕ ಆರೋಗ್ಯವನ್ನು ಹೇಗೆ ಕಾಪಾಡಬೇಕು ಇವೇ ಮೊದಲಾದುವುಗಳು ಕೊಡಲ್ಪಡುತ್ತವೆ ಎರಡು ತಿಂಗಳ ಅವಧಿಯಲ್ಲಿ ಪ್ರತಿಯೊಬ್ಬನೂ ೧,೨೦೦ ಚೈನೀಯ ಶಬ್ದಗಳನ್ನು ಕಲಿಯುತ್ತಾನೆ ಪಠ್ಯ ಪುಸ್ತಕಗಳನ್ನು ಸರಕಾರವೇ ಹಂಚುವುದು.

ಕಳೆದ ವರ್ಷ ೧,೫೦೦,೦೦೦ ವಿದ್ಯಾರ್ಥಿಗಳು ಈ ಕಾರ್ಯವನ್ನು ಕೈಕೊಂಡಿದ್ದರು ಹಾಗಾಗಿ ಒಟ್ಟು ಜನ ಸಂಖ್ಯೆಯಾಗಿದ್ದ ೧೨,೦೦೦,೦೦೦ರಲ್ಲಿ ೧,೪೦೦,೦೦೦ ಮಂದಿ ಸಾಕ್ಷರರಾಗಿದ್ದಾರೆ

ಹಂಗೇರಿಯದ ಸಂಕಟ

ಹಂಗೇರಿಯ ವೈನ್ ಬೆಳೆಸುವವರು ಈ ವರ್ಷದ ಅನಾವೃಷ್ಟಿಯಿಂದ ಬಹಳ ಸಂಕಟ ಪಟ್ಟಿರುವರು. ಇದರ ಪರಿಹಾರಕ್ಕಾಗಿ ಜರ್ಮನಿಯು ಸಹಾಯವನ್ನು ಕೇಳಿದಾಗ ಸಹಾಯ ಮಾಡಲು ತಿರಸ್ಕರಿಸಿ, ಹಂಗೇರಿಯದ ಉದ್ಯೋಗವೇ ಅವನತಿಹೊಂದುವಂತೆ ಮಾಡಲಾಗಿದೆ.

ವಸಂತಕಾಲದಲ್ಲಿ ನೀರಿನ ಬಹಳ ದುರ್ಭಿಕ್ಷವಾಯಿತು. ಹಾಗಾಗಿ, ಬೆಳೆಯ ಮೇಲೆ ಕೊಳೆರೋಗವು ಬಂತು. ಈ ಕೊಳೆರೋಗವನ್ನು ನಿವಾರಿಸಲು ಕೊಪ್ಪರ್ ಸಲ್ಫೇಟು ಅಗತ್ಯವಿದೆ. ಇದು ಜರ್ಮನಿಯಲ್ಲಿ ಮಾತ್ರ ಸಿಗುವುದು. ಹಂಗೇರಿಯು ಇದಕ್ಕಾಗಿ ಜರ್ಮನಿಗೆ, ಅದನ್ನು ಕಳುಹಿಸಬೇಕಾಗಿ ಆರ್ಡರ್ ಮಾಡಿತು.

Kanarese No. 26

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ತಕ್ಕುದಾದ ಸುಲಭ ರೀತಿಯಲ್ಲಿ ನಾಶನಮಾಡಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ ಇದು ಕುರುಹುಣ್ಣು, ಮುದ್ದಣ ಕಾಲು ಕುಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುಕೊಳ್ಳುವಿಕೆಯನ್ನೂ ಗುಣಮಾಡುತ್ತದೆ

ಕುಟಿಕೂರಾ ಮುಲಾಮು (cuticura ointment) ನಿಧುರು ಯಾವ ಕ್ರಿಮಿಗಳು ತಡೆಯವು ಆದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ ಕುಟಿಕೂರವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು. ಒಂದು ವರ್ಷ ಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು.

ಕುಟಿಕೂರಾ ಮುಲಾಮನ್ನು (cuticura ointment) ಗಜ್ಜಿ, ಕುರು ವ್ರಣ್ಣ ಹುಣ್ಣು, ಮುದ್ದಣ, ವಿಷಕಾರಿಗಾಯ್ಕು ಉರಿ ಮುಂತಾದ ಎಲ್ಲಾ ಚರ್ಮರೋಗಗಳನ್ನೂ ಗುಣಪಡಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು

Cuticura Ointment

ನಗದಿ ಹಣವನ್ನು ತೆರದೆ ಕಳುಹಿಸಲಾಗುವುದಿಲ್ಲವೆಂದು ಜರ್ಮನಿಯ ಉತ್ತರ ಹಂಗೇರಿಯದ ಗೋದಿಯ ಬೇಸಾಯಗಾರರಿಂದ ತಕ್ಕಿಂತ ಗೋದಿಗಾಗಿ, ಜರ್ಮನಿಯು ಈಗಾಗಲೇ ಎಪ್ಪತ್ತು ಮಿಲಿಯ ಮಾರ್ಕುಗಳನ್ನು ಹಂಗೇರಿಗೆ ಕೊಡುವುದಿದ್ದರೂ, ಹೀಗೆ ಉತ್ತರ ಕೊಟ್ಟು ಹಂಗೇರಿಯರ ಕೈಗಾರಿಕೆಯನ್ನು ನಾಶಮಾಡಿತು

ಇದರ ಪರಿಣಾಮವಾಗಿ, ಬೇರೆ ಕಡೆಯಿಂದ, ಅದಕ್ಕೆ ಬೇಕಾಗಿದ್ದ ಮದ್ದನ್ನು ತರಿಸಲು ಬಹಳ ತಡವಾದುದರಿಂದ, ಅರ್ಧಕ್ಕರ್ಧ ಬೆಳೆಯು ಕಡಿಮೆಯಾಗಿ ಬೇಸಾಯಗಾರರು ದುರ್ಭಿಕ್ಷದಲ್ಲಿದ್ದಾರೆ. ಹಂಗೇರಿಯದ ಔದ್ಯೋಗಿಕ, ರಾಜಕೀಯ ಕ್ಷೇತ್ರಗಳಲ್ಲಿ ಎಲ್ಲಾ ಕಡೆಯಿಂದಲೂ ಜರ್ಮನಿಯು ಉಪದ್ರವನ್ನು ಕೊಡುತ್ತಿದೆ.

ಹಿಟ್ಲರನು ಮುಸ್ಲಿಮನಾಗಲಿ!

ಜರ್ಮನಿಯನ್ನು ಇಂದಿನ ದುರಂತ ಸಂಕಷ್ಟದಿಂದ ಪರಿಹರಿಸಲು, ಹಿಟ್ಲರನು ಮುಸ್ಲಿಂ ಮತಕ್ಕೆ ಸೇರಬೇಕೆಂದು ಇಜಿಪ್ತಿನಿಂದ ಅವನಿಗೆ ಸ್ವಾಗತ ಬಂದಿದೆ. ಈ ಅಭಿಪ್ರಾಯವನ್ನು ಸೂಚಿಸಿದವರು ಇಜಿಪ್ತಿನ ಪ್ಯಾಸಿಸ್ಟ ಪಕ್ಷದ ಮುಂದಾಳುವಾದ ಅಹಮ್ಮದ್ ಹುಸೇನರೆಂಬವರು. ಹೀಗೆ ಮಾಡದಿದ್ದರೆ ಜರ್ಮನಿಯ ಜನರು ಸಂಕಷ್ಟದಿಂದ ಪರಿಹಾರಹೊಂದಲಾರರಂತೆ!

"ನೀನು, ಹಸಿದ ಮಾನವಕುಲಕ್ಕೆ ಯಾವುದಕ್ಕೂ ಕಾರ್ಯಮಾಡುತ್ತೀಯೋ ಸಾಮ್ರಾಜ್ಯ ವಿಸ್ತರಣವು ನಿನ್ನ ಧ್ಯೇಯ ಅದು ಆದ ಮೇಲೆ ಮತ್ತೇನು? ಏನಿಲ್ಲ ಮಾನವಕುಲವು ತೃಪ್ತಿಗೊಳ್ಳಬೇಕ ಇಸ್ಲಾಂ ಧರ್ಮವು ಅಂತಹ ಮಹತ್ವದ ಕರ್ತವ್ಯವನ್ನು ತಿಳಿಸುವುದು" ಹೀಗೆಂದು ಅವರು ಹಿಟ್ಲರನಿಗೆ ಉಪದೇಶಿಸುತ್ತಾರೆ!

ಹಿಂಸೆಗೆ ತಲೆಬಗ್ಗಿಸಲಾರೆವು

ಫ್ರೆಂಚ್ ಪ್ರಧಾನ ಮಂತ್ರಿ ದಲಾಡಿಯವರು ತಾವು ಯಾವ ರಾಷ್ಟ್ರದ ಬಲಾತ್ಕಾರಕ್ಕೂ ತಲೆ ಬಗ್ಗಿಸಲಾರೆವೆಂದೂ ನಾವು ಶಾಂತಿಗಾಗಿ ಯತ್ನಿಸುವೆವೆಂದೂ ಆಕಾಶಭಾಷಿತ ಮಾಡಿದರು.

ಭಾರತದ ದೌಃ

ಚಿಂಗಲಪಟ್ಟಿನಲ್ಲಿ ಕ್ಷಾಮ

ಈ ವರ್ಷದ ಮಳೆಯ ಅಭಾವದಿಂದ ಚಿಂಗಲ್‌ಪಟ್ಟಿನಲ್ಲಿ ಬರಗಾಲ ಬಂದಿದೆ ಆ ಜಿಲ್ಲೆಯ ಬೇರೆಬೇರೆ ಭಾಗಗಳಲ್ಲಿ ನಿರುದ್ಯೋಗವು ತುಂಬಿದೆ

ಕೆಲವು ಸ್ಥಳಗಳ ತೀರ್ವೆಯನ್ನು ಮದ್ರಾಸು ಸರಕಾರವು ಮಾಫಿ ಮಾಡಿದೆ.

ನಿರುದ್ಯೋಗಿಗಳಿಗೆ ಕೆಲಸ ಕೊಡಲು ಸರಕಾರವೂ ಸ್ಥಳೀಕ ಸಂಸ್ಥೆಗಳೂ ಯತ್ನಿಸುತ್ತಿವೆ.

ಸಾವಿರ ರೂಪಾಯಿಗಳ ನಿಧಿಯೆತ್ತಿ ಬಡಬಗ್ಗರಿಗೆ ಅಕ್ಕಿ ಕೊಡುವ ಏರ್ಪಾಡು ಮಾಡಿದೆ. ಬಡವರಿಗೆ ಸಹಾಯ ಮಾಡಲು ಅಧಿಕಾರಿಗಳಿಗೂ ಆರ್ಡರು ಹೋಗಿದೆ

ದೌರ್ಬಲ್ಯವು ಸಾಕಷ್ಟಾಯಿತು

ನೆಹರುಗಳ ನಿವೇದನೆ

ಪಂಡಿತ ಜವಾಹಿರಲಾಲ ನೆಹರ ಗಳು ಭಾರತೀಯದ ದೌರ್ಬಲ್ಯ ಕಾರಣಗಳನ್ನು ವಿವರಿಸುತ್ತಾ, ಇವುಗಳು ಸಾಕಷ್ಟು ಆಗಿ ಹೋದುವು. ನಾವದನ್ನು ಇನ್ನಾದರೂ ಕಡೆಯಬೇಕೆಂದು ಒಂದು ಲೇಖನದಲ್ಲಿ ವಿವರಿಸುತ್ತಾರೆ

"ಇಂದು ಹಿಂದೂದೇಶದ ಪರಿಸ್ಥಿತಿಯು ಅಸಾಧ್ಯವಾಗಿ ಬಂದೊದಗಿದೆ ಉದ್ದೇಶಪೂರ್ವಕವಾಗಿ ದೌರ್ಬಲ್ಯವನ್ನುಂಟು ಮಾಡುವ ಪಕ್ಷಗಳು ಹುಟ್ಟಿವೆ ಕೆಲವರು ಕಲಹಕಾರಣಗಳಿಂದ ಚಿತ್ತಿತ್ತ ಬಡಿದಾಡುತ್ತಿರುವಾಗ, ವಿಲಯಾಂತರ ಮಂದಿಯು ಅದರಿಂದ ಸಂಕಷ್ಟಕ್ಕೆ ಒಳಗಾಗಿದ್ದಾರೆ

"ಯಾವುದೇ ಒಂದು ಸಂಸ್ಥೆಯನ್ನು ನಾನಿಲ್ಲಿ ದೂರುವುದಲ್ಲ, ಪ್ರತಿಯೊಂದು ಸಂಸ್ಥೆಯಲ್ಲಿಯೂ ಕೆಟ್ಟವರೂ ಒಳ್ಳೆಯರೂ ಇದ್ದಾರೆ ಹೇಗಿದ್ದರೂ, ಜಾತೀಯ ಸಂಸ್ಥೆಗಳು ಇಂತಹ ಪರಿಸ್ಥಿತಿಗೆ ಕಾರಣವೆಂದು ಹೇಳುವುದರಲ್ಲಿ ಯಾವ ಆಕ್ಷೇಪವೂ ಇಲ್ಲ ಇಂತಹ ಪರಿಸ್ಥಿತಿಯು ಮುಂದುವರಿಯಬಾರದು ಯಾವ ನಾಗರಿಕ ಜನಾಂಗವೂ ಇದನ್ನು ಸಹಿಸಲಾರದು ಇದು ಕಾಂಗ್ರೆಸು ಮತ್ತು ಸರಕಾರದ ಕರ್ತವ್ಯಗಳಲ್ಲ ಸಾರ್ವಜನಿಕರಾದ ಪ್ರತಿಯೊಬ್ಬ ಸದುದ್ದೇಶದ ಹೆಂಗಸರು ಗಂಡಸೂ ಇಂತಹ ಹಾನಿಗಳನ್ನು ನಿಲ್ಲಿಸಲು ಯತ್ನಿಸಬೇಕು"

ಪೂನಾದಲ್ಲಿ ಕಾಂಗ್ರೆಸು ಪ್ರಧಾನ ಸಮ್ಮೇಳನ

ಪೂನಾದಲ್ಲಿ ಕಾಂಗ್ರೆಸು ಪ್ರಧಾನ ಮಂತ್ರಿಗಳ ಸಮ್ಮೇಳನವು ಜರಗಿತು. ಸರ್ದಾರ ಪಟೇಲರೂ ಬಂದಿದ್ದರು

ನಾಲ್ಕು ದಿನಗಳ ವರೆಗೆ ಈ ಸಮ್ಮೇಳನವು ಜರಗಿತು.

ಮದ್ರಾಸಿಗೆ ಬೋಸರು

ಸಪ್ಟೆಂಬರ ಪ್ರಾರಂಭಕ್ಕೆ ಮದ್ರಾಸಿಗೆ ಬೋಸರು ಬರುವರು. ಶ್ರೀ. ಎಸ್.

ವಿಷಯದಲ್ಲಿ ಒ. .
ಕರಿಸುವುದಿಲ್ಲವೆಂದೂ, ತನ್ನ ಪ್ರಾಂತದಲ್ಲಿ ಪ್ರತ್ಯೇಕ ಯೋಜನಾ ಸಮಿತಿಯನ್ನು ಏರ್ಪಡಿಸುವುದೆಂದೂ ಹಿಂದೆ ಪ್ರಕಟವಾಗಿತ್ತಷ್ಟೆ!

ಆದರೆ, ಈಗ, ಬಂಗಾಳ ಮತ್ತು ಬೀಹಾರ ಸರಕಾರಗಳು ಆ ಬಗ್ಗೆ ಪ್ರತಿಯೊಂದು ೫,೦೦೦ ರೂಪಾಯಿಗಳನ್ನು ಕೊಟ್ಟಿರುವರಾಗಿ ಮಾನ್ಯ ಗಿರಿಯವರು ತಿಳಿಸುತ್ತಾರೆ

ಹರಿಜನರ ಪರಿಷತ್ತು

ಗಾಂಧಿ-ನೆಹರುಗಳ ಸಂದೇಶ

ನವದಿಲ್ಲಿಯಲ್ಲಿ ಅಖಿಲ ಭಾರತ ರಾಷ್ಟ್ರೀಯ ಹರಿಜನರ ಪರಿಷತ್ತು ಶ್ರೀ. ಕಾರಣಸಿಂಗ ಕಾನೆಯವರ ಅಧ್ಯಕ್ಷತೆಯಿಂದ ಸೇರಿತು. ಎಲ್ಲ ಪ್ರಾಂತಗಳಿಂದಲೂ ಪ್ರತಿನಿಧಿಗಳು ಬಂದಿದ್ದರು.

ಶುಭಶೂಂಸೆಯ ಸಂದೇಶಗಳು ಮಹಾತ್ಮ ಗಾಂಧಿ, ಪಂಡಿತ ನೆಹರು, ಪಂಡಿತ ಪಂತರು, ವಿಶ್ವನಾಥದಾಸರು, ಖೇರರು, ಶುಕ್ಲರೇ ಮೊದಲಾದವರಿಂದ ಬಂದಿತ್ತು. ಕಾಂಗ್ರೆಸನ್ನು ಸೇರಿ ಬಲಪಡಿಸಬೇಕಾಗಿ ಪರಿಷತ್ತಿನಲ್ಲಿ ನಿರ್ಣಯವಾಯಿತು

ಅಗತ್ಯದ ಕಾರ್ಯಕ್ಕಾಗಿ

ಮಹಾದೇವ ದೇಸಾಯಿಗಳು ಅಗತ್ಯದ ಕೆಲಸಕ್ಕಾಗಿ ವಾರ್ಧಾವನ್ನು ಬಿಟ್ಟು ದಿಲ್ಲಿಗೆ ತೆರಳಿರುವರು

ಚೈನಾದಲ್ಲಿ ನೆಹರುಗಳು

ಚುಂಕಿಂಗಿಗೆ ತಾ. ೨೩ರಂದು ಬಂದಿಳಿದ ಪಂಡಿತ ನೆಹರುಗಳನ್ನು ೮೦೦ ಮಂದಿ ಸ್ವಾಗತಿಸಿದರು

ಸರಕಾರದ ಪರವಾಗಿ, ಮಾನ್ಯ ಅತಿಥಿಗಳಾದ ನೆಹರುಗಳಿಗೆ, ಒಂದು ಭೋಜನ ಸತ್ಕಾರವಿತ್ತು.

ಮಾರ್ಶಲ್ ಚಿಯಾಂಗ್ ಕೈಶೇಕರು ನೆಹರುಗಳನ್ನು ಭದ್ರತೆಯಿಂದ ನೋಡಿಕೊಳ್ಳಬೇಕಾಗಿ ಅಧಿಕಾರಿಗಳಿಗೆ ತಂತಿ ಬಿಟ್ಟಿದ್ದಾರೆ.

ಹೊಸ ವಾರ್ತೆ

ಬೊಂಬಾಯಿ ಸಂಸ್ಥಾನದ ಹಲವು ಕಡೆಗಳಲ್ಲಿ ಮಳೆಬಂದು, ಸೀನ ದುರ್ಭಿಕ್ಷವು ಪರಿಹಾರವಾಗಿದೆ.

❖

ಮುಸಲಿನಿಯು ಹಿಟ್ಲರನ ರಾಯಭಾರಿಯನ್ನು ಕಾಯಿರುವನು. ಯುದ್ಧವಾಗುವ ಸಂಭವವಿಲ್ಲವೆಂದೂ, ಮುಸಲಿನಿಯು ಜಗತ್ತಿನ ಶಾಂತಿಗಾಗಿ ಯತ್ನಿಸುವ ಬಯಕೆಯುಳ್ಳವನಾಗಿರುವನೆಂದೂ ಇಟಲಿಯ ವಾರ್ತೆ.

❖

ಬ್ರಿಟನು ಯುದ್ಧಕ್ಕೆ ಸಂಪೂರ್ಣ ಸಿದ್ಧವಾಗಿದೆ. ಆದರೆ ಯಾವ ಗೊಂದಲದಲ್ಲಿಯೂ ಇಲ್ಲ.

❖

ಜಪಾನು ಮಂತ್ರಿಮಂಡಲವು [illegible] ಕೊಟ್ಟಿದೆ. ಜನರಲ್ ನೋಬುಯುಕಿ [illegible] ಧುರೀಣತೆಯಿಂದ ಸಂಪೂರ್ಣ ಹೊಸ ಮಂತ್ರಿಮಂಡಲದ ರಚನೆಯಾಗುವುದು.

❖

ಇನ್ನೊಮ್ಮೆ [illegible] ಪ್ರವ ಸಾಧ್ಯವಿಲ್ಲವೆಂದೂ, ಬ್ರಿಟನು [illegible] ಒಂದಾಗಿರಬೇಕೆಂದೂ [illegible] ಸಾರುತ್ತಿದೆ.

❖

[illegible] ಕಾಂಗ್ರೆಸು ವರ್ಕಿಂಗ್ ಕಮಿಟಿಯ [illegible] ಅಧಿವೇಶನವೊಂದು [illegible]. ರಾಷ್ಟ್ರಪತಿಗಳು ಗಾಂಧಿಜಿಯವರೊಡನೆ [illegible] ನಡೆಸಿರುವರು. [illegible] ಅಥವಾ [illegible] ಇವುಗಳಲ್ಲಿ [illegible] ಸಭೆ ಕರೆಯಬಹುದೆಂದು. ಗಾಂಧಿಜಿಯವರ ಅಭಿಪ್ರಾಯವನ್ನು ಕೇಳಿರುವರು.

❖

ರೂಸಾವೆಲ್ಟರು ಶಾಂತಿಗಾಗಿ ಹೊಸ ಉಪಾಯಗಳನ್ನು ಹೂಡುತ್ತಿರುವರೆಂದು ತಿಳಿದಿದೆ. ಆದರೆ ಅವುಗಳ ವಿವರವು ಗೊತ್ತಾಗಿಲ್ಲ. ತನ್ನ ಈ ಕಾರ್ಯದಲ್ಲಿ ಅದಷ್ಟು ರಾಷ್ಟ್ರಗಳ ಬೆಂಬಲವನ್ನು ಪಡೆಕೊಳ್ಳುವ ಸಿದ್ಧತೆ ಮಾಡುತ್ತಿದ್ದಾರೆ.

❖

ವಾರ್ಧಾದಿಂದ ಸೇಟ್ ಜಮ್ನಾಲಾಲ ಬಜಾಜರು, ತನ್ನ ಸೌಭಾಗ್ಯವತಿಯೊಡನೆ ಜಯಪುರಕ್ಕೆ ಬಂದಿರುವರು. ದಾರಿಯಲ್ಲಿ, ಕಲ್ಕತ್ತಾ ಸ್ಟೇಶನಿನಲ್ಲಿ ಅವರಿಗೆ ಸಂಭ್ರಮದ ಸ್ವಾಗತವಿತ್ತು!

❖

ಪಂಡಿತ ನೆಹರುಗಳು ಚೈನದಲ್ಲಿ ಜನರಲ್ ಮತ್ತು ಮೇಡಮ್ ಚಿಯಾಂಗ ಇಂದ ಆಮಂತ್ರಿತರಾಗಿ ಅವರೊಡನೆ [illegible].

ಕಾಂಗ್ರೆಸು ವಿರೋಧಿಗಳು!

ದೇವಸ್ಥಾನ ಪ್ರವೇಶ ರಕ್ಷಣಾ [illegible] ನಡೆಯನ್ನು ಮುಂಗೆಯಲು ಸನಾತನಿಗಳು ಅಸಾಧ್ಯ ಸಾಹಸಗಳನ್ನು ಮಾಡುತ್ತಿದ್ದಾರೆ. ಮೈಸೂರಾಯರು ತನ್ನ ಒಪ್ಪಿಗೆಯನ್ನು ಕೊಡಬಾರದೆಂದು, ಅವರಲ್ಲಿ ಸನಾತನಿಗಳ ದೂರು ಹೋಗಿದೆ. ಹಿಂದೀಯರಿಗೆ ಮಾತ್ರವಲ್ಲ, ವಿದೇಶಿಯರಾಗಿರುವ ವೈಸರಾಯರಿಗೂ ಕೂಡಾ ಸನಾತನಿಗಳ 'ತಲೆ ಬೋಳು' ತನವು ಇದರಿಂದ ವ್ಯಕ್ತವಾಗುವಂತಾಯಿತು! ವೇದ, ಆಗಮ ಗ್ರಂಥಗಳ ಆಧಾರವನ್ನಿತ್ತು [illegible] ಸನಾತನಿಗಳಿಗೆ, [illegible] ರಾಜಾಜಿಯವರು ವೇದ ಆಗಮ ಶಾಸ್ತ್ರಗಳಿಂದಲೇ ಉತ್ತರವಿತ್ತಿದ್ದಾರೆ! ರಾಜಾಜಿಯವರೊಡನೆ ತರ್ಕ ಮಾಡಿ ಗೆದ್ದು ಹೊಂದಲು ಸಾಧ್ಯವಿಲ್ಲವೆನ್ನು ತಿಳಿದೋ ಏನೋ, ಈಗ [illegible] ಪ್ರಕಾರ ತಮ್ಮ ನಿರ್ಧಾರವನ್ನು ಸಾಧಿಸಲು, ವೈಸರಾಯರಲ್ಲಿಗೆ ಹೋಗಿ, [illegible] ಅಪಮಾನಕ್ಕೆ ಈಡಾಗುವ ಪ್ರಸಂಗವನ್ನು ಸನಾತನಿಗಳು ತಂದುಕೊಂಡಿರುವರು.

ಕಾಂಗ್ರೆಸ್ ಮಂತ್ರಿ ಮಂಡಳವನ್ನು ವಿರೋಧಿಸಲು ಬದ್ಧ ಕಂಕಣರಾದ ಶ್ರೀ ರಾಮಸ್ವಾಮಿ ನಾಯಕರು, ಕಾಂಗ್ರೆಸು ಸರಕಾರವು ಕಾರ್ಯಕ್ಕೆ ತಂದ ಹಿಂದೀ ಪ್ರೋತ್ಸಾಹದ ವಿಷಯವನ್ನು ಹಿಡಿದೆತ್ತಿ, ದ್ರಾವಿಡ ಭಾಷೆ ಸಂಸ್ಕೃತಿಗಳ ಉದ್ಧಾರವೆಂಬ ಘೋಷಣೆ ಮಾಡಿ ಎದುರಾದರು. ಇವರ ಆರ್ಯ ದ್ರಾವಿಡ ಸಂಸ್ಕೃತಿಗಳ ವಿಭಜನೆಯು ಎಲ್ಲಿಯವರೆಗೆ ಹೋಯಿತೆಂದರೆ, ಮೊನ್ನೆ ಮೊನ್ನೆ ತಮಿಳರು ಹಿಂದುಗಳಲ್ಲವೆಂದು ಹೇಳುವಷ್ಟು ಶ್ರೀ ನಾಯಕರು ಮೂರ್ಖತೆಯನ್ನು ವ್ಯಕ್ತಪಡಿಸಿದ್ದಾರೆ. ಇವರ ಈ ಅಸಂಬದ್ಧ ಪ್ರಲಾಪವನ್ನು ಕೇಳಿ, ನಿಜವಾಗಿ ತಮಿಳು ಜನತೆಯು ಕೆರಳಿರಬೇಕು. ಕಾಂಗ್ರೆಸಿನ ವಿರೋಧಿಗಳು ಇಂತಹ ಅಸಂಬದ್ಧವಾದ ವರ್ತನೆಗಳಿಂದ ತಮ್ಮ ಶೂನ್ಯ ಹೃದಯವನ್ನು ಜನತೆಯ ಮುಂದಿಡುತ್ತಿದ್ದಾರೆ.

ಮಂಗಳೂರು ಸಮಾಚಾರ

ದಾನ.

ಕ್ಯಾಲಿನ ಹಬ್ಬದ ನಿಮಿತ್ತ, ಸ್ಟೆಂಟ್ ಪೌಲ್ಸ್ ಕಥೆಡ್ರಲ್‌ನ ಚರ್ಚ್ ಕಮಿಟಿಯವರು ವಿ. ಸಿ. [illegible], ಉತ್ತರಾನಂದ ಮಹಿಳಾ ಸೇವಾಶ್ರಮ ಮತ್ತು ಬೇಬಿ ವೆಲ್‌ಫರ್ ಸೆಂಟರುಗಳಿಗೆ ಅಕ್ಕಿ, ಹಿಟ್ಟು, ಹಣ್ಣು ಮತ್ತು ಕಬ್ಬುಗಳನ್ನು ತಾ. [illegible]ರಂದು ಹಂಚಿದರು.

ಸಭೆ.

ಕಳೆದ ತಾ. [illegible]ರಲ್ಲಿ ಮೆಟ್ರೋಪಾಲ್ ಮಾರ್ಕೆಟಿನ ವ್ಯಾಪಾರಿಗಳ ಮತ್ತು ಮಹಾಜನರ ಸಭೆಯು ಮೈದಾನದಲ್ಲಿ ಶ್ರೀ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ. ಜತನ್ನ ಶೆಟ್ಟಿಯವರು ವ್ಯಾಪಾರಿಗಳ ಸಂಕಷ್ಟವನ್ನು ವಿವರಿಸಿದರು.

ಸಂಗೀತ.

ನಮ್ಮ ಜಿಲ್ಲೆಯವರಾದ ಸಂಗೀತ ವಿದ್ವಾನ್ ಶ್ರೀ. [illegible] ಉಪಾಧ್ಯಾಯರು ಕಳೆದ ತಾ. [illegible] ಪ್ರಸಂಗಿಕವನ್ನು [illegible] ನಡೆಸಿದರು.

ಮಾನ್ಯ ಮಂತ್ರಿಗಳಿಗೆ ಸತ್ಕಾರ.

ಮಾನ್ಯ ಶ್ರೀ. [illegible] [illegible] ಮಂತ್ರಿಗಳಿಗೆ [illegible] [illegible] ನಡೆಯುವುದು.

ನಿಧನ.

[illegible] ಸ್ಥಾನವನ್ನು ವಹಿಸಿ [illegible] ಶ್ರೀ. ಜಿ. ಎ. ಡಿ'ಸೋಜರವರು ಇದೇ ತಾ. [illegible] ಅಪರಾಹ್ನ ಕಾಲವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. [illegible] ಮನೋಸಿಕತೆಯುಳ್ಳ ಕ್ರೈಸ್ತರಲ್ಲಿ ಇವರೊಬ್ಬರು. [illegible] ಹಲವು ವರ್ಷ ಮುನಿಸಿಪಲ್ ಕೌನ್ಸಿಲರರಾಗಿದ್ದರು.

ಬಿಜಯಿ

ಸ್ಟೆಂಟ್ ಫ್ರಾನ್ಸಿಸ್ ಕ್ಸೇವಿಯರ್ [illegible] ಸಂಘದ [illegible] ವರ್ಷದ ವಿಜಯೋತ್ಸವವು ಕಳೆದ [illegible] ಅತಿ ವಿಜೃಂಭಣೆಯಿಂದ ಜರಗಿತು. ಈ ಸಂಘದ ಸ್ಥಾಪನೆಯು ಇಲ್ಲಿ ಇತ್ತೀಚೆಗೆ ಆದರೂ ಇದರ [illegible] ಕಾರ್ಯಕಲಾಪಗಳನ್ನು [illegible] ದಿನದ ಅಧ್ಯಕ್ಷರಾದ ಜಿಲ್ಲಾ ನ್ಯಾಯಾಧೀಶರು ಬಹಳ ಸಂತೋಷಪಟ್ಟರು. [illegible] ವನಗೆ, ವಸ್ತುಪ್ರದರ್ಶನ, ಭಾಷಣ ವಿನೋದಾವಳಿಗಳಿಂದ ಪ್ರಚಾರ ಕಾರ್ಯವು ನಡೆಸಲ್ಪಟ್ಟಿತು.

ಪ್ರಕಟಣೆ.

ಇನ್ನು ಮುಂದೆ ಎಲ್ಲಾ ಕೋರ್ಟ ಲೈಸನ್ಸು ಅರ್ಜಿಗಳಿಗೆ ಮತ್ತು ಸರ್ಟಿಫಿಕೇಟ್ ಲೈಸನ್ಸು, ರಿನೀವಲ್, ಟ್ರಾನ್ಸ್‌ಫರ್, ಎಕ್ಸ್‌ಟೆನ್‌ಶನ್, ರಿಜಿಸ್ಟ್ರೇಶನ್, ಕೇನ್ಸ ಲೇಶನ್ ಮತ್ತು ಕೋರ್ಟ ಬದಲಾವಣೆ ಬಾಬ್ತು ಅರ್ಜಿಗಳಿಗೆ ಮತ್ತು ಕೋರ್ಟ ಮಾರಾಟ ಸುತ್ತು ಕೊಂಡುಕೊಳ್ಳಲು ಕೋರ್ಟ ಪಡಕೊಳ್ಳುವ ಪ್ಯಾದೆ ಮುಂದಿರಿಸಲು ಮತ್ತು ಅಂತಹ ಇತರ ಬಾಬಿನಲ್ಲಿ ಇಂಡಿಯನ್ ಆರ್ಮ್ಸ್ ರೂಲ್ಸಿನ [illegible] ಗನುಸಾರವಾಗಿ ಮಾಡುವ ಎಲ್ಲಾ ಅರ್ಜಿಗಳಿಗೆ [illegible] ಕೋರ್ಟ ಫೀ ಸ್ಟಾಂಪನ್ನು ಅಂಟಿಸತಕ್ಕದ್ದು ಎಂದು ದಕ್ಷಿಣ ಕನ್ನಡ ಜಿಲ್ಲಾ ಮೆಜಿಸ್ಟ್ರೇಟರಾದ [illegible] ರವರು ತಿಳಿಸುತ್ತಾರೆ.

ಭಾವಚಿತ್ರ ಅನಾವರಣ.

ತಾ. [illegible]ರಂದು ನಗರ ಸಭಾಭವನದಲ್ಲಿ [illegible] [illegible] ಅನಾವರಣೋತ್ಸವ [illegible] [illegible].

ಸ್ವಯಂಸೇವಕ ದಳ.

[illegible] ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ. ಸುಭಾಷಚಂದ್ರ ಬೋಸರಿಗೆ ಆಹ್ವಾನ.

[illegible] ಕಾರಿಗಳ ಸಭೆಯೊಂದು ಕಳೆದ ಶನಿವಾರ [illegible] ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲೇ ಮುಖ್ಯವಾಗಿ ಕನಕ ಬದಲಿರುವ ಶ್ರೀ. ಸುಭಾಷಚಂದ್ರ ಬೋಸರನ್ನು ಮಂಗಳೂರಿಗೆ ಆಹ್ವಾನಿಸುವ ಬಗ್ಗೆ ಒಂದು ಸ್ವಾಗತ ಮಂಡಲಿಯನ್ನು ರಚಿಸಲ್ಪಟ್ಟಿತು.

ಕನ್ನಿಗೋಳಿ.

ವಿ ಅಸಿಸ್ಟೆಂಟ್ ಕಮಿಶನರ್ ಟೀಕ್ಸ್ ಆಫೀಸರರು, ಕಳೆದ ತಾ. [illegible]ರಲ್ಲಿ ಇಲ್ಲಿಗೆ ಬಂದು, ಹೊಸತಾಗಿ [illegible] [illegible] ಮಾರಾಟದ ಲೈಸನ್ಸಿನ ಕುರಿತು ಇಲ್ಲಿಯ ಎಲ್ಲಾ ವ್ಯಾಪಾರಿಗಳಿಗೆ [illegible] ಸಭೆ ಜರಗಿ [illegible] ನಿಯಮಗಳನ್ನು ವಿವರಿಸಿ, ಲೈಸನ್ಸು ಪಡಕೊಳ್ಳುವ ಬಗ್ಗೆ ಆಗತ್ಯವುಳ್ಳ ಅರ್ಜಿ ಫಾರ್ಮುಗಳನ್ನೂ ಹಂಚಿದರು.

ತಾಲೂಕು ಸಮಾಚಾರ

ಉಡುಪಿ

ಉಡುಪಿ ಗೊಂದು ಹಾಲಿನ ಡಿಪೋ:—ಉಡುಪಿ ಶಹರಿಗೊಂದು ಸಹಕಾರ ಸಂಘ ತತ್ವದ ಮೇಲೆ ಡೈರಿ (ಹಾಲಿನ ಡಿಪೋ) ತೆರೆಯುವ ಯೋಜನೆಯ ಕುರಿತು ಆಲೋಚಿಸಲು ಇದೇ ತಾ. [illegible]ರಲ್ಲಿ ಮುನಿಸಿಪಲ್ ಮೈನ್ ಶಾಲೆಯಲ್ಲಿ ಸಾರ್ವಜನಿಕ ಸಭೆಯು ಜರಗಿತು. ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ. ಪುರುಷೋತ್ತಮರಾಯರೂ ಮುನಿಸಿಪಲ್ ಕಮಿಶನರರೂ ಹಾಲಿನ ಡಿಪೋವಿನ ಆವಶ್ಯಕತೆಯ ಕುರಿತು ಮಾತಾಡಿದರು. [illegible] ಯೋಜನೆಯ ಸಾಧ್ಯಾಸಾಧ್ಯತೆಯ ಕುರಿತು ಪರಿಶೀಲಿಸಿ ರಿಪೋರ್ಟ ತಯಾರಿಸುವರೆ ಒಂದು ಕಮಿಟಿಯು ನೇಮಕವಾಯಿತು.

ಆತ್ಮಹತ್ಯೆ:—[illegible] ಕಟ್ಟೆ [illegible] ಸಮೀಪದಲ್ಲಿ ಕುತ್ತಿಗೆಗೆ [illegible] ನೇಣು ಹಾಕಿಕೊಂಡಿದ್ದ [illegible] [illegible].

ನಲವತ್ತು ಸಹಸ್ರ ರೂಪಾಯಿಗಳ [illegible] ಸರಕಾರದಿಂದ ರೂ. [illegible] ಸಕ್ಕರೆ [illegible] [illegible].

ಕಾಸರಗೋಡು.

ಪೆರಡಾಲ

ಹಯ್ಯರ್ ಎಲಿಮೆಂಟರಿ ಶಾಲೆಗೆ ಶಂಕು ಸ್ಥಾಪನೆ:—[illegible] ಬೋ. [illegible] ಶಾಲೆಯು [illegible] ಶಂಕುಸ್ಥಾಪನೆಯು, ತಾ. [illegible]ರಂದು ಮಧ್ಯಾಹ್ನ [illegible] ಗಂಟೆಗೆ [illegible] ಶ್ರೀ. [illegible] ಶೆಟ್ಟರಿಂದ ನಡೆಸಲ್ಪಟ್ಟಿತು. ಜನಸಂದಣಿಯೂ ಕಿಕ್ಕಿರಿದು ನೆರೆದಿತ್ತು. [illegible] ಅಧ್ಯಕ್ಷರಾದ ಶ್ರೀ. [illegible] ಕೃಷ್ಣ ಭಟ್ಟರು ಸ್ವಾಗತ ಭಾಷಣವಿತ್ತರು. [illegible] ವಿ. ಎಸ್. ಶಾಸ್ತ್ರಿಗಳು ಕೃತಜ್ಞತಾ ಸಮರ್ಪಣೆ ಮಾಡಿದರು.

[illegible]

ಪುತ್ತೂರು

[illegible]

ಬೆಳ್ಳಾರೆ

[illegible]

ಕರ್ನಾಟಕ ಸಮಾಚಾರ

ಮೈಸೂರು

ಕಾಂಗ್ರೆಸ್ ಮುಖಂಡರಿಗೆ ಶಿಕ್ಷೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಮ॥ ಹೆಚ್. ಸಿ. ದಾಸಪ್ಪನವರೂ ಇತರ ಮುಖಂಡರೂ ಕಾರ್ಯಪ್ರಚಾರಕ್ಕಾಗಿ ಕೋಲಾರದ ಚಿನ್ನದ ಗಣಿಗೆ ಕಳೆದವಾರ ಹೋಗಿದ್ದಾಗ ಅವರ ಮೇಲೆ ಪ್ರತಿಬಂಧಕಾಜ್ಞೆ ಹೊರಡಿಸಲ್ಪಟ್ಟಿತು ಮತ್ತು ಇದನ್ನು ಉಲ್ಲಂಘಿಸಿದರೆಂಬ ಅಪಾದನೆ ಮೇಲೆ ವಿಚಾರಣೆಗೆ ಒಳಪಡಿಸಲ್ಪಟ್ಟು ಶಿಕ್ಷೆ ವಿಧಿಸಲಾಯಿತು.

ಮ॥ ಗಳಾದ—ಹೆಚ್. ಸಿ. ದಾಸಪ್ಪ, ಕೆ. ಟಿ. ಭಾಷಮಯ್ಯಂಗಾರ್, ಕೆ. ಚಂಗಲರಾಯರೆಡ್ಡಿ, ಎಸ್. ರಂಗರಾಮಯ್ಯ, ಕೆ ಸಂಪಂಗಿರಾಮಯ್ಯ, ವಿ ಎಸ್ ನಾರಾಯಣರಾವ್, ಕೆ. ಹಂಚಾರಪ್ಪ, ಎಂ ಗೋವಿಂದ ರೆಡ್ಡಿ, ಹೆಚ್. ಕೆ ವೀರಣ್ಣ ಗೌಡ, ಟಿ. ರಾಮಾಚಾರ್, ಕೆ ಪಟ್ಟಾಭಿರಾಮನ್ ಇವರಿಗೆಲ್ಲಾ ತಲಾ ೩ ತಿಂಗಳು ಕಠಿಣ ಸಜೆ ಮತ್ತು ಮ। ಗಳಾದ ಲಾವಣಿ ವಿಷಕಂಠ ರಾವ್ ಮತ್ತು ಗಂಗಿ ರೆಡ್ಡಿಯವರಿಗೆ ತಲಾ ೨ ತಿಂಗಳು ಕಠಿಣ ಶಿಕ್ಷೆ

ಈ ಸಂದರ್ಭದಲ್ಲಿ ಸಂಸ್ಥಾನದ ಹಲವು ಕಡೆ ಹರತಾಳವೂ, ಸಭೆಗಳೂ ಆಚರಿಸಲ್ಪಟ್ಟುವು

ಶ್ರೀ॥ ಎಸ್. ಜಿ. ಶಾಸ್ತ್ರಿಗಳವರು ಇಲ್ಲಿನ ಇಂಟರ್ ಮೀಡಿಯೇಟ್ ಕಾಲೇಜಿನ ಪಾಪ್ಯುಲರ್ ಸಾಯನ್ಸ್ ಅಸೋಸಿಯೇಶನಿನ ಆಶ್ರಯದಲ್ಲಿ ಉಪಯುಕ್ತವಾದ ಭಾಷಣವಿತ್ತರು. ಮಿ. ಜೆ. ಸಿ. ರೋಲೋರವರು ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕರು ತಮ್ಮ ಭಾಷಣದಲ್ಲಿ ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ ಕಂಪೆನಿಯವರು ಬೆಳಗೊಳದಲ್ಲಿ ಸ್ಥಾಪಿಸಿರುತ ಕಾರ್ಖಾನೆಯಲ್ಲಿ ಅಮೋನಿಯಂಸಲ್ಫೇಟ್ ಎಂಬ ಗೊಬ್ಬರವನ್ನು ರಸಾಯನ ಶಾಸ್ತ್ರರೀತ್ಯಾ ತಯಾರಿಸುವ ವಿಚಾರವನ್ನು ತಿಳಿಸಿದರು.

ಮಡಿಕೇರಿ

ಗ್ರೀಸ್ ದೇಶದ ರಾಜಕುಮಾರರು (H R H The Prince of Greece) ರವರು ಕೊಡಗಿಗೆ ದಯಮಾಡಿಸಿರುತ್ತಾ, ಸದ್ಯ ಮಡಿಕೇರಿಯ 'ಬ್ಯುವೀರ್' ಭವನದಲ್ಲಿ ಇಳಿದಿರುವರು. ತಾ ೨೫ರಲ್ಲಿ ಇವರ ಮಡಿಕೇರಿಯ ಓಂಕಾರೇಶ್ವರ ದೇವಾಲಯ ಮತ್ತು ರಾಜಗದ್ದುಗೆಗಳನ್ನು ಸಂದರ್ಶಿಸಿದರು ಕೊಡಗು ದೇಶದವರ ಕುಲಾಚಾರಾದಿಗಳನ್ನು ಪರಿಶೀಲಿಸುವುದರಲ್ಲಿ ಅರಸುಕುಮಾರರಿಗೆ ತುಂಬಾ ಅಭಿರುಚಿಯುದೆಯಾಗಿ ತಿಳಿಯಬರುತ್ತದೆ

ಅಕಸ್ಮತ್ತಾಗಿ ಉಂಟಾದ ಥಂಡಿಯು ನಿಮ್ಮ ಶ್ವಾಸಕೋಶಗಳನ್ನು ಅಪಾಯಗೊಳಿಸಬಹುದು.

ನಿಮಗೆ ಸುಲಭವಾಗಿ ಥಂಡಿ ಉಂಟಾಗುವುದೆ? ನೀವು ಗಂಟಲುಬೇನೆ, ಕಟ್ಟು ಕಮ್ಮು ಯಾ ಶೀತದಿಂದ ನರಳುತ್ತಿರುವಿರೇ? ನೀವು ನರಳುವಿರಾದರೆ ಪೆಪ್ಸನ್ನು ಕೊಂಡುಕೊಳ್ಳುವಂತೆ ನಿಶ್ಚಯಿಸಿರಿ. ಈ ಹೆಸರುವಾಸಿಯಾದ ಕ್ರಿಮಿನಾಶಕ ಶ್ವಾಸನೀಯ ಮಾತ್ರೆಗಳು ಎಷ್ಟು ಕಠಿಣತರದ ಥಂಡಿ, ಇನ್‌ಫ್ಲೂಯೆಂಜಾ, ಬ್ರೊಂಕ್ಯಾಟಿಸ್, ನಿಮೋನಿಯಾ ಮುಂತಾದುವುಗಳನ್ನು ಗುಣಪಡಿಸುತ್ತದೆ.

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ಆಳವಾಗಿ ನಿಮ್ಮ ಶ್ವಾಸಕೋಶಗಳನ್ನು ಪ್ರವೇಶಿಸುವುದು ಪೆಪ್ಸು ವಿಷಕಾರಿ ಕ್ರಿಮಿಗಳನ್ನು ನಾಶಮಾಡುವುದು ಬಾತು ಹೋದ ವಾಯುನಾಳಗಳನ್ನು ಗುಣಪಡಿಸುವುದು, ಮತ್ತು ಇತರ ಯಾವತ್ತೂ ಥಂಡಿಯು ನಿಮ್ಮ ದೇಹವನ್ನು ಪ್ರವೇಶಿಸದಂತೆ ರಕ್ಷಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ 1-0-0ರಂತೆ ಮಾರುತ್ತಾರೆ

ಏಜೆಂಟ್ —

ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದ್ರಾಸು

ಯಾವಾಗಲು ಪೆಪ್ಸನ್ನೇ ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು.

ಮಂಗಳೂರು

ಅಳಿಯಸಂತಾನ ಸುಧಾರಣಾ ಮಸೂದೆ.

ಅಳಿಯ ಸಂತಾನ ಸುಧಾರಣಾ ಕಮಿಟಿಯವರು ತಯಾರಿಸಿರುವ ಮಸೂದೆಯ ಕುರಿತು ಅಭಿಪ್ರಾಯ ಪಡೆಯುವರೆ ಮತ್ತು ಬರುವ ಸಪ್ಟೆಂಬರ ತಾ ೧೭ಕ್ಕೆ ನಡೆಯಲಿರುವ ಅಳಿಯ ಸಂತಾನ ಸುಧಾರಣಾ ಪರಿಷತ್ತಿಗೆ ಮಂಗಳೂರು ತಾಲೂಕಿನ, ಗುರುಪುರ, ಪಾಣೆಮಂಗಳೂರು, ಫರಂಗಿಪೇಟೆ, ಕೋಟೆಕಾರ್, ಸುರತಕಲ್ ಮತ್ತು ಮೂಲ್ಕಿ ಸರ್ಕಲ್‌ಗಳಿಂದ ಐದೈದು ಮಂದಿ ಮತ್ತು ಮಂಗಳೂರಿನಿಂದ ೧೦ ಮಂದಿ ಪ್ರತಿನಿಧಿಗಳನ್ನು ಆರಿಸುವ ಬಗ್ಗೆ ಮಂಗಳೂರು ಪಟ್ಟಣದ ಮತ್ತು ತಾಲೂಕಿನ ಅಳಿಯ ಕಟ್ಟನು ಆಚರಿಸುವ ಸಮಾಜಗಳವರ ಸಭೆಯು ತಾ ೩-೯-೩೯ನೇ ಆದಿತ್ಯವಾರ ಅಪರಾಹ್ನ ಪಂಟೆ ಮೂರಕ್ಕೆ ಶ್ರೀ॥ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನಡೆಯಲಿರುವುದು ಅಳಿಯಕಟ್ಟನ್ನಾಚರಿಸುವವರೆಲ್ಲಾ ದಯಮಾಡಿ ಬಂದು ಪ್ರೋತ್ಸಾಹಿಸಬೇಕಾಗಿ ಅ ಸಂ. ಸು. ಸಮಿತಿಯ ಪ್ರಚಾರಕರಾದ ಶ್ರೀ॥ ಎನ್. ಎಸ್. ಕಿಲ್ಲೆಯವರು ತಿಳಿಸುತ್ತಾರೆ.

ತಿದ್ದುಪಡಿ.

ಎರಡನೆಯ ಪುಟದ 'ನೋಟಗಳು' ಇದರಲ್ಲಿ ೧೮ನೆ ಪಂಕ್ತಿಯ 'ಬೋಸರು' ಎಂದಿರುವುದನ್ನು ದೇಶಬಂಧು ಚಿತ್ತರಂಜನದಾಸರು ಎಂದು ಓದುವುದು.

ರಾಮಕುಂಜ:—ಇಲ್ಲಿಯ ಸಂಸ್ಕೃತ ಶಾಲಾ ಬೋರ್ಡಿಂಗ್ ಮೆಂಬರರ ಸಂಪದ ವಾಗ್ವರ್ಧಿನಿ ಸಭೆಯು ಆಗೋಸ್ತು ತಿಂಗಳ ತಾರೀಕು ೨೧ರಲ್ಲಿ ರಾಮಕುಂಜ ಬೋರ್ಡ್ ಎಲಿಮೆಂಟರಿ ಶಾಲಾ ಮುಖ್ಯ ಉಪಾಧ್ಯಾಯರಾದ ಶ್ರೀ ಐ ಕೃಷ್ಣಯ್ಯರವರ ಅಧ್ಯಕ್ಷತೆಯಲ್ಲಿ ಜರಗಿತು ಉಪನ್ಯಾಸಕ್ಕಿಟ್ಟ 'ಗ್ರಾಮೋದ್ಧಾರದ' ಅಧ್ಯಾಪಕರಾದ ಶ್ರೀ. ಎಸ್ ಶ್ರೀನಿವಾಸ ಶಾಸ್ತ್ರಿಗಳು, ಶಿರೋಮಣಿ, ಮಹೋಪಾಧ್ಯಾಯ ಈ ಸಭೆಯ ಉದ್ದೇಶವನ್ನು ಸ್ತುತಿಸಿ, ಭಾಷಣವಿತ್ತರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ದೂರದಿಂದ ಬರುವ ವಿದ್ಯಾರ್ಥಿಗಳಿಗೋಸ್ಕರ ನಡಿಸಲ್ಪಡುತ್ತಿರುವ ಈ ರೀತಿಯ ಕಾರ್ಯಕಲಾಪಗಳನ್ನು ಅಭಿನಂದಿಸಿದರು

ಈ ಶಾಲೆಯ ಕರೆಸ್ಪೆಂಡೆಂಟ್ ಮತ್ತು ಕಾರ್ಯದರ್ಶಿಗಳಾದ ಶ್ರೀ, ಮಿಯ್ಯಾಳ ನರಸಿಂಹಾಚಾರ್ಯ, ಶಿರೋಮಣಿ, ಶಾಲೆಯ ಸಂಪದ ಕಡೆಯಿಂದ ಬೋರ್ಡಿಂಗನ್ನು ಸ್ಥಾಪಿಸಿ, ತನ್ಮೂಲಕ ಪರಸ್ಥಳದ ಮತ್ತು ಊರ ವಿದ್ಯಾರ್ಥಿಗಳಿಗೂ ಅನುಕೂಲತೆಗಳನ್ನು ಒದಗಿಸಿಕೊಟ್ಟು, ಶಾಲೆಯ ಏಳಿಗೆಯನ್ನು ಬಯಸುತ್ತಿರುವುದು ಬಹಳ ಸ್ತುತ್ಯ.

ನೀಲೇಶ್ವರ:—ಸ್ವಯಂಸೇವಕ ಶಿಕ್ಷಣ: ಹೊಸದುರ್ಗ ತಾಲೂಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ, ಇಲ್ಲಿ ೩೦ ಗ್ರಾಮಗಳ ಪ್ರತಿನಿಧಿಗಳಿಗೆ ಸ್ವಯಂಸೇವಕ ಶಿಕ್ಷಣವನ್ನು ಶ್ರೀ॥ ಕೊಟ್ಟಪ್ಪನ್‌ರವರು ಕೊಡುತ್ತಿದ್ದಾರೆ.

ಧಾರವಾಡ

ಶ್ರೀ॥ ಎಚ್. ವಿ ಕಾಮತರ ಕರ್ನಾಟಕ ಸಂಚಾರ

ಸುಭಾಸ ಬೋಸರ ಫಾರ್ವರ್ಡ್ ಬ್ಲಾಕಿನ ಸಂಘಟನೆ ಪ್ರಚಾರಗಳಿಗಾಗಿ ಶ್ರೀ॥ ಎಚ್ ವಿ ಕಾಮತರು ಕರ್ನಾಟಕ ಸಂಚಾರವನ್ನು ಕೈಕೊಳ್ಳಿರುವರು

ಶ್ರೀ॥ ಮುದುವೀಡು ಕೃಷ್ಣರಾಯರು ಫಾರ್ವರ್ಡ್ ಬ್ಲಾಕಿಗೆ

ಕರ್ನಾಟಕದ ಹಿರಿಯ ದೇಶಭಕ್ತರಲ್ಲೊಬ್ಬರಾದ ಶ್ರೀ ಮುದುವೀಡು ಕೃಷ್ಣರಾಯರು ಫಾರ್ವರ್ಡ್ ಬ್ಲಾಕಿಗೆ ಸೇರಿರುವರೆಂದು ತಿಳಿಯುತ್ತದೆ ಇವರು ಪ್ರಚಂಡ ವಾಗ್ಮಿಗಳು

ಶ್ರೀ॥ ಹೊಸಕೊಪ್ಪ ಕೃಷ್ಣರಾಯರು ತಿರುವಾಂಕೂರಿಗೆ

ಅನಾರೋಗ್ಯದಿಂದಾಗಿ ತೊಂದರೆಪಡುತ್ತಿರುವ ಶ್ರೀ॥ ಹೊಸಕೊಪ್ಪ ಕೃಷ್ಣರಾಯರು ಆರೋಗ್ಯಲಾಭ ಪಡೆಯುವುದಕ್ಕಾಗಿ ತಿರುವಾಂಕೂರಿಗೆ ದಯಮಾಡಿಸಿದರೆಂದೂ, ಅಲ್ಲಿ ಶ್ರೀಯುತರಿಗೆ ಆಯುರ್ವೇದ ಚಿಕಿತ್ಸಾಕ್ರಮ ನಡೆಸುವುದಕ್ಕೆ ತಿರುವಾಂಕೂರು ದಿವಾನರಾದ ಸಚಿವೋತ್ತಮ ಸಿ. ಪಿ. ರಾಮಸ್ವಾಮಯ್ಯರ್‌ರವರು ಸರ್ವ ಏರ್ಪಾಡುಗಳನ್ನು ಮಾಡುವುದಕ್ಕೆ ಒಪ್ಪಿರುತ್ತಾರಾಗಿಯೂ ತಿಳಿದುಬಂದಿದೆ

ಬೆಂಗಳೂರಿನ ಹಸುವಿಗೆ ದೆಹಲಿಯಲ್ಲಿ ಬಹುಮಾನ

ಬೆಂಗಳೂರಿನ ಸಿಂಧೀ ಹಸುವೊಂದಕ್ಕೆ ಈ ಸಲ ದೆಹಲಿಯಲ್ಲಿ ನಡೆದ ಅಖಿಲ ಭಾರತ ಹಸುಗಳ ಪ್ರದರ್ಶನದಲ್ಲಿ ಬೇರೆ ಬೇರೆ ಮೂರು ಮೊದಲನೆಯ ಬಹುಮಾನಗಳು ಬಂದವು ಅವುಗಳಲ್ಲಿ ಅತ್ಯುತ್ತಮ ರಾಸು, ಅತ್ಯುತ್ತಮ ಕರಾವು, ಅತ್ಯುತ್ತಮ ಜಾತಿ ಈ ಮೂರು ಬಾಬುಗಳಿಗೂ ಈ ಹಸುವಿಗೇ ಬಹುಮಾನ ದೊರೆಯಿತು

ರಾಮಗೋಪಾಲನ ನೃತ್ಯ

ಬೆಂಗಳೂರಿನ ರಾಮಗೋಪಾಲನ ಅಮೇರಿಕಾ ಖಂಡದ ಪ್ರವಾಸ ತೀರಿಸಿಕೊಂಡು, ಲಂಡನ್ ನಗರದಲ್ಲಿ ನೃತ್ಯ ಪ್ರದರ್ಶಿಸಿದನು. ಈ ಜತೆಯಲ್ಲಿ ಥಿಲ್ಲಿಯ ಮಿಸ್ ಮಾಲಾಪ್ರಸಾದ್ ಇಂಗ್ಲೆಂಡಿನ ಪ್ರೇಕ್ಷಕರ ಮನ ರಕ್ಷಿಸಿದರು ಭಾಗವಹಿಸಿದರು ನಟರಾಜ, ನವಿಲುನೃತ್ಯ, ಮೋಪ ಸಂಚಾರಿ ಛಂದ, ಕಥಕ್ಕಳಿ, ಸರ್ಪನೃತ್ಯ ಮೊದಲಾದವು ಪ್ರೇಕ್ಷಕರನ್ನು ಮರುಳುಗೊಳಿಸಿದುವು ಎಳೆಯ ವಯಸ್ಸಿನ ಇವರೆಲ್ಲರ ಸಾಹಸವನ್ನು ಇಂಗ್ಲೆಂಡ್ ಪತ್ರಿಕೆಗಳು ಅತಿಯಾಗಿ ಶ್ಲಾಘಿಸಿದುವು. ರಾಮಗೋಪಾಲನು ಉದಯಶಂಕರನನ್ನೂ ಮೀರಿಸುವನೆಂದೂ, ಕೆಲವೊಂದು ಸನ್ನಿವೇಶಗಳಲ್ಲಿ ಸುಧಾರಿಸಿಕೊಂಡರೆ, ಪಾಶ್ಚಿಮಾತ್ಯ ಪ್ರೇಕ್ಷಕರ ಹೃದಯವನ್ನು ಸೂರೆಗೊಳ್ಳುವುದರಲ್ಲಿ ಎಳ್ಳಷ್ಟು ಸಂದೇಹವಿಲ್ಲವೆಂದೂ ಆಂಗ್ಲ ಪತ್ರಿಕೆಗಳು ಬರೆದವೆ

ಶ್ರೀಮತಿ ಡಿ ಸಾಕಮ್ಮನವರು

ಕಳೆದ ೧೮ನೇ ತಾರೀಕಿನ ದಿವಸ ನಡೆದ ಡಿ ಬೋ ಮೀಟಿಂಗಿನಲ್ಲಿ ಶ್ರೀಮತಿ ಸಾಕಮ್ಮನವರು ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಉಪಾಧ್ಯಕ್ಷೆಯರಾಗಿ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು

ನಿರ್ಮಾದಕ ಪ್ರದೇಶ

ಉತ್ತರ ಕನ್ನಡ ಜಿಲ್ಲೆಯನ್ನು ಇದೇ ಸಪ್ಟೆಂಬರ ತಾ ೧ರಿಂದ ನಿರ್ಮಾದಕ ಪ್ರದೇಶವನ್ನಾಗಿ ಮಾಡಬೇಕೆಂದು ಮುಂಬಯಿ ಸರಕಾರದವರು ನಿರ್ಧರಿಸಿದ್ದಾರೆ

ಕಾಂಗ್ರೆಸಿನ ಸಂಸ್ಥಾಪಕರಾದ ಎ. ಓ. ಹ್ಯೂಮ್

[ಜೀವನ ಚರಿತ್ರೆ]

[ಭರತ ಭೂಮಿಯ ರಮಣೀಯ ಇತಿಹಾಸದಲ್ಲಿ ಕ್ರಿಸ್ತಶಕ ೧೮೮೫ನೆಯ ಇಸವಿಯು ನೂತನ ಯುಗ ಪ್ರವರ್ತನೆಯ ವರ್ಷವಾಗಿ, ಕ್ರಾಂತಿಕಾರಕವಾಗಿ, ಅಮೋಘವೂ ಚಿರಸ್ಮರಣೀಯವೂ ಆಗಿದೆ. ಇಂದು ನಮ್ಮ ರಾಷ್ಟ್ರದ ಏಕಮಾತ್ರ ಪ್ರತಿನಿಧಿ ಸಂಸ್ಥೆ—ನಮ್ಮೆಲ್ಲರ ಅಭಿಮಾನದ ಗೌರವದ ನಿಧಿಯಾಗಿರುವ ಕಾಂಗ್ರೆಸು ಸಂಸ್ಥೆಯು ಆ ವರ್ಷ ಸ್ಥಾಪಿತವಾಯಿತು! ಅದರ ಆದಿಯ ಘಟನೆಗಳು, ಅದರ ಸಂಸ್ಥಾಪಕರ ಪಾವನ ಜೀವನಗಳು ಹಿಂದೀಯರಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಲು ಸಾಕಾಗುವವು!]



ಬ್ರಿಟಿಷ್ ಸಾಮ್ರಾಜ್ಯಶಾಹಿಯು ಭಾರತದ ಸ್ವಾತಂತ್ರ್ಯವನ್ನು ಅಪಹರಿಸಿ, ತನ್ನ ದುರ್ದಾಂತ ರಾಜ್ಯನೀತಿಯನ್ನು ಒಂದು ಶತಮಾನದ ಕಾಲ ನಡಸಿತ್ತು. ಬಂಧಿತರಾಗಿದ್ದ ಭಾರತೀಯರು ತಮ್ಮ ಸ್ಥಿತಿಗತಿಗಳನ್ನೂ ಮರೆತು, ಬ್ರಿಟಿಷ್ ಸಾಮ್ರಾಜ್ಯಶಾಹಿಯ ಯಂತ್ರ ಉಪಕರಣಗಳಂತೆ ವರ್ತಿಸುತ್ತಿದ್ದರು. ಇಂತಹ ಭೀಕರ ಪರಿಸ್ಥಿತಿಯಲ್ಲಿ, ಅಜ್ಞಾನದ ಕಾಳಿರುಳಲ್ಲಿ ರಕ್ಷದ ಕೈ ದೀವಿಗೆಯನ್ನು ಹೊತ್ತಿಸಿದಂತೆ, ಕಾಂಗ್ರೆಸು ಸಂಸ್ಥೆಯು ಉದಯವಾಯಿತು. ನ್ಯಾಯದ ಗೌರವದ, ಸ್ವಾತಂತ್ರ್ಯದ ದಾರಿಯಲ್ಲಿ ಭಾರತೀಯರನ್ನು ಮುನ್ನಡೆಸಲು ಕಾಂಗ್ರೆಸು ಪ್ರತಿಜ್ಞೆ ಕೊಟ್ಟು ನಿಂತಿತು!

ಆಗ ಭಾರತದಲ್ಲಿ ಲಾರ್ಡ್ ರಿಪನರು ವೈಸ್‌ರಾಯರಾಗಿದ್ದರು. ಲಾರ್ಡ್ ರಿಪನರನ್ನು ಭಾರತೀಯರು ಎಂದೂ ಮರೆವ ಹಾಗಿಲ್ಲ. ಅವರು 'ಇಲ್ಬರ್ಟ್ ಬಿಲ್ಲ್' ಎಂಬೊಂದು ಕಾನೂನನ್ನು ತನ್ನ ಸಾಧ್ಯ ಸಾಹಸದಿಂದ, ಜಾರಿಗೆ ಬರುವಂತೆ ಸಾಧಿಸಿ, ಭಾರತೀಯ ಮ್ಯಾಜಿಸ್ಟ್ರೇಟರಿಗೆ ತನ್ನ ಕೋರ್ಟಿನಲ್ಲಿ ಇತರರಂತೆ ಯೂರೋಪಿಯನರನ್ನು ವಿಚಾರಣೆಗೆ ಗುರಿಮಾಡುವ ಅಧಿಕಾರವು ಬರುವಂತೆ ಮಾಡಿದರು! ಇದರ ಫಲವಾಗಿ, ಕಲ್ಕತ್ತದ ಯೂರೋಪಿಯನರು ಮಾಡಿದ ತೀವ್ರ ಚಳವಳಿಯಿಂದ ಕಡೆಗೆ ಮಾನಧನರಾದ ಲಾರ್ಡ್ ರಿಪನರು ೧೮೮೪ರಲ್ಲಿ, ತನ್ನ ಉದ್ಯೋಗಕ್ಕೆ ತಿಲಾಂಜಲಿಯಿತ್ತು ತೆರಳಬೇಕಾಯಿತು. ಲಾರ್ಡ್ ಡಫರಿನರು ಅವರ ಸ್ಥಾನಕ್ಕೆ ಆ ಮೇಲೆ ನಿಯುಕ್ತರಾಗಿ ಬಂದರು.

ಭಾರತೀಯರಿಗೊಂದು ಪಾಠ

ಹೀಗೆ ಭಾರತದ ನ್ಯಾಯಕ್ಕಾಗಿ ಕಾದಾಡಿದ, ಧರ್ಮ ಪಕ್ಷಪಾತಿಗಳಾದ, ಲಾರ್ಡ್ ರಿಪನರಿಗೆ ಬಂದೊದಗಿದ ಪರಿಸ್ಥಿತಿಯು ಪತ್ರಿಕೆಗಳ ವರ್ತಮಾನ ಪ್ರಚಾರಗಳ ಪರಿಣಾಮವಾಗಿ ದೇಶದ ಎಲ್ಲಾ ಜನನಾಯಕರನ್ನು ಎಚ್ಚರಿಸುವಂತೆ ಮಾಡಿ, ತಮ್ಮ ಆತ್ಮರಕ್ಷಣೆಗೆ, ನ್ಯಾಯಸಾಧನೆಗೆ, ಅಖಿಲ ಭಾರತ ಪ್ರಾತಿನಿಧ್ಯದ ಸಂಘವೊಂದನ್ನು ಸ್ಥಾಪಿಸುವಂತೆ ವಿಚಾರಕ್ರಾಂತಿಯನ್ನು ಹುಟ್ಟಿಸಿತು. 'ಇಲ್ಬರ್ಟ್ ಬಿಲ್ಲಿ'ಗೆ ಯೂರೋಪಿಯನರು ಮಾಡಿದ್ದ ಆಂದೋಲನದ ಪ್ರತ್ಯಕ್ಷ ಪರಿಣಾಮವಾಗಿಯೇ ಅಖಿಲಭಾರತ ಕಾಂಗ್ರೆಸು ಸಂಸ್ಥೆಯು ಸ್ಥಾಪಿತವಾದಂತಾಯಿತು!

ಒಬ್ಬ ಐರೋಪ್ಯರ ಸಾಹಸ!

೧೯೧೩ರಲ್ಲಿ ಶ್ರೀ ಗೋಖಲೆಯವರು ವಿಲಾಯತಿಯಲ್ಲಿ "ಯಾವನೇ ಭಾರತೀಯನಿಗಾದರೂ, ಭಾರತೀಯ ಕಾಂಗ್ರೆಸನ್ನು ಸ್ಥಾಪಿಸಲು ಸಾಧ್ಯವಿರಲಿಲ್ಲ, ಮಿ ಹ್ಯೂಮರ ಅಸದೃಶವಾದ ವ್ಯಕ್ತಿತ್ವವೇ ಮಾತ್ರವಲ್ಲದೆ, ಅಂತಹ ವ್ಯಕ್ತಿತ್ವವು ಭಾರತೀಯನೊಬ್ಬನಿಗೆ ಇದ್ದರೂ, ಅಧಿಕಾರಿಗಳ ವಿರೋಧದಿಂದ, ಅಂತಹ ಸಂಸ್ಥೆಯು ಹುಟ್ಟಲು ಸಾಧ್ಯವಿರಲಿಲ್ಲ, ಒಬ್ಬ ಆಂಗ್ಲೇಯನು, ಹಾಗೂ ಅಧಿಕಾರೀ ವರ್ಗದಲ್ಲಿದ್ದವನೊಬ್ಬನೇ, ಅಂತಹ ಸಂಸ್ಥೆಯನ್ನು ಸ್ಥಾಪಿಸಬಲ್ಲವನಾಗಿದ್ದನಲ್ಲದೆ, ಭಾರತದ ವಿಷಯದಲ್ಲಿ ನಿರ್ದಯರಾದ ಮತ್ತು ಅಪಿಶ್ವಾಸಿಗಳಾದ ಅಧಿಕಾರಿಗಳು ಇತರ ಆಂದೋಲನಗಳನ್ನು ಧ್ವಂಸಮಾಡಿ ಬಿಡುತ್ತಿದ್ದರು" ಎಂದು ಹೇಳಿರುತ್ತಾರೆ. ಶ್ರೀ ಗೋಖಲೆಯವರ ಮಾತು ಸತ್ಯವಾಗಿತ್ತು! ಮಿ. ಎಂ ಹ್ಯೂಮರಿಗೆ, ಕಾಂಗ್ರೆಸಿನ ಸ್ಥಾಪಕರಾಗಿ, 'ಕಾಂಗ್ರೆಸಿನ ಜನಕ'ರೆಂಬ ಹೆಸರು ಸಾರ್ಥಕವಾಗಿ ಒಪ್ಪುತ್ತದೆ. ಆಗಿನ ಪರಿಸ್ಥಿತಿಯೂ ಮಿ ಹ್ಯೂಮರ ಈ ಕಾರ್ಯಕ್ಕೆ ಅನುಗುಣವಾಗಿ ಇತ್ತು.

ಪ್ರಥಮ ಕಾಂಗ್ರೆಸ್ ಅಧಿವೇಶನ

ಕಾಂಗ್ರೆಸಿನ ಪ್ರಥಮ ಅಧಿವೇಶನವು ೧೮೮೫ರಲ್ಲಿ ಬೊಂಬಯಿಯಲ್ಲಿ ನಡೆಯಿತು. ಸುಪ್ರಸಿದ್ಧರಾದ ಸರ್ ದಿನ್ ಶಾ ವಾಚಾರವರ ಪಿತಾಮಹರು ಅದರ ಒಬ್ಬರು ಸದಸ್ಯರಾಗಿದ್ದರು. ಅವರು ಹೇಳಿದ ಮಾತನ್ನು ಸರ್ ವಾಚಾರವರು ಹೀಗೆಂದು ಬರೆಯುತ್ತಾರೆ—

"ನನ್ನ ಪಿತಾಮಹರಿಗೆ ಅವರ ವೃದ್ಧಾಪ್ಯದ ನಿಮಿತ್ತ, ಹಿಂದಿನ ನೆನಹುಗಳು ಸರಿಯಾಗಿ ಇರಲಿಲ್ಲ. ಆದರೆ ಅವರು ಹೇಳುತ್ತಿದ್ದಂತೆ, ಭಾರತೀಯ ಕಾಂಗ್ರೆಸಿನ ಸ್ಥಾಪನೆಯ ಅಭಿಪ್ರಾಯವನ್ನು ಮಾಡಿದವರು ದಾದಾಭಾಯಿ ನವರೋಜಿಗಳಲ್ಲ, ಅದು ಮಿ ಹ್ಯೂಮರು. "ನೇಶನಲ್ ಎಸೆಂಬ್ಲಿ ಮತ್ತು ನೇಶನಲ್ ಫಂಡ್" ಮಾಡಬೇಕೆಂಬ ಅಭಿಪ್ರಾಯವನ್ನು ತಂದವರು ಶ್ರೀ ಕಿಸೋದಾಸಪಾಲರ ಧುರೀಣತೆಯಿಂದ ಕಲ್ಕತ್ತದ ಸಾರ್ವಜನಿಕರು. ಪ್ರೊಫೆಸರ್ ಸುಂದರ್‌ರಾಮರೆಂಬವರು ಮೊದಲನೆಯ ಕಾಂಗ್ರೆಸಿನ ವಿಷಯವಾಗಿ ಸುಂದರವಾದ ವಿವರಣೆಗಳನ್ನು ಕೊಟ್ಟಿದ್ದಾರೆ. ಅವರು ಹೀಗೆನ್ನುತ್ತಾರೆ—"ಮಿ ಹ್ಯೂಮರು ಆಗಾಗ ವೈಸರಾಯ್ ಲಾರ್ಡ್ ಡಫರಿನರನ್ನು ಕಂಡು ಮಾತನಾಡುತ್ತಿದ್ದರು. ಹೀಗೆ ಒಂದು ದಿನದ ಸಂದರ್ಶನದ ಸಂಭಾಷಣೆಯ ಕಾಲದಲ್ಲಿ, ಭಾರತೀಯರ ರಾಜಕೀಯ ಐಕ್ಯತೆಯ ಹಿತಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸುವಂತೆಯೂ, ಆ ಸಭೆವಾಗಿ ಆಂಗ್ಲೇಯರ ಅಭಿಮತವನ್ನು ತಿದ್ದುವಂತೆಯೂ ಪ್ರಸ್ತಾವನೆ ಬಂತು. ಅವರ ಅಭಿಪ್ರಾಯವು, ಭಾರತೀಯ ಮುಖಂಡರ ಮತ್ತು ಸ್ಕಾಟ್‌ಲೆಂಡಿನ ಜನರ ಹಾಗೂ ಭಾರತೀಯ ಹಿತೇಚ್ಛುಗಳಾದ ಆಂಗ್ಲೇಯರ ಆಂದೋಲನದಿಂದ, ಇಂಗ್ಲೆಂಡಿನಲ್ಲಿರುವ ಬ್ರಿಟಿಷರ ಅಭಿಪ್ರಾಯವನ್ನು ಅನುಕೂಲವಾಗಿ ಮಾಡುವದಾಗಿತ್ತು. ಆದರೆ ಲಾರ್ಡ್ ಡಫರಿನರು, ಹೀಗೆ ಇಂಗ್ಲೆಂಡಿನಲ್ಲಿ ಪ್ರಚಾರ ಮಾಡುವುದರಿಂದ, ಅವರ ಉದ್ದೇಶವು ಭಗ್ನವಾಗುವ ಸಂಭವವಿದೆಯೆಂದೂ, ಇಂಗ್ಲೀಷರಾದರೂ, ತಮ್ಮ ಅಧೀನ ರಾಷ್ಟ್ರದಲ್ಲಿ ಸರ್ವ ವಿಧದ ಪ್ರಯೋಜನವನ್ನು ಪಡೆಯುವುದನ್ನು ಬಿಡಲೊಲ್ಲರೆಂದೂ, ಅವರ ಉದ್ದೇಶಸಾಧನೆಯಾಗಬೇಕಾದರೆ, ಚಳವಳವು ಕೇವಲ ಭಾರತ ದೇಶದ ಮಟ್ಟಿಗೆ ಮಾತ್ರ ಇರಬೇಕೆಂದೂ ಸಹಾನುಭೂತಿಯ ಉತ್ತರವಿತ್ತರು."

ಪ್ರೊಫೆಸರ್ ಸುಂದರ್‌ರಾಮರ ಅಭಿಪ್ರಾಯವನ್ನು ತೆಕ್ಕೊಂಡರೆ, ಈ ಸಂಸ್ಥೆಯ ಸೂಚನೆಯು ಲಾರ್ಡ್ ಡಫರಿನರಿಂದ ಬಂದದೆಂದು ತಿಳಿಯುತ್ತದೆ. ಹೀಗಿದ್ದರೂ 'ಇಂಡಿಯನ್ ಮಿರರ್' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಪತ್ರದ ಆಧಾರದಿಂದ ೧೮೬೭ರಲ್ಲಿಯೇ ಈ ಆಂದೋಲನವು ಆರಂಭವಾಗಿತ್ತೆಂದು ತಿಳಿಯುವುದಾಗಿದೆ. ಅಂತೂ ಸಿಪಾಯಿ ದಂಗೆಯ ನಂತರ, ಮಿ ಹ್ಯೂಮರು ಹಿಂದೂ ದೇಶದ, ವಿವಿಧ ಭಾಗವನ್ನು ಸಂದರ್ಶಿಸಿ, ಪ್ರತಿಯೊಂದನ್ನು ಪರೀಕ್ಷಿಸಿ ತಿಳಿದುಕೊಂಡಿದ್ದರು. ೧೮೮೨ರಿಂದ ಅವರು ಕಲ್ಕತ

[೨೦ನೇ ಪುಟವನ್ನು ನೋಡಿರಿ]

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತು ಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯಸ್ವಾತಿಕಸ್ತರು, ಪೋಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಕಾಂಗ್ರೆಸಿನ ಸಂಸ್ಥಾಪಕರಾದ ಎ. ಓ. ಹ್ಯೂಮ್

[೧೯ನೆಯ ಪುಟದಿಂದ]

ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಂದು ಮಾಡಿದ ಭಾಷಣದಿಂದ ಅವರಲ್ಲಿ ಭಾರತೀಯರ ಹೆಚ್ಚಿನ ಗೌರವವು ಹುಟ್ಟುವಂತೆ ಆಯಿತು.

ಒಂದು ರಾಷ್ಟ್ರೀಯ ಪಾರ್ಲಿಮೆಂಟ್

ಶ್ರೀ. ಸುರೇಂದ್ರನಾಥ ಬೆನರ್ಜಿಯವರು ಆ ವೇಳೆ ಇಡೀ ಹಿಂದೂದೇಶದ ಸಂಚಾರ ಮಾಡಿದುದರ ಪರಿಣಾಮವಾಗಿ ಅಖಿಲ ಭಾರತ ಸಂಘದ ಸ್ಥಾಪನೆಯು ಕಾರ್ಯರೂಪಕ್ಕೆ ಬರುವಂತಾಯಿತು. ಮದ್ರಾಸಿನಲ್ಲಿ ಸ್ಥಾಪಿತವಾಗಿದ್ದ ಮಹಾಜನ ಸಭೆ, ಮಹಾರಾಷ್ಟ್ರದಲ್ಲಿ ಆಗಿದ್ದ ಸಾರ್ವಜನಿಕ ಸಭೆ, ಇವುಗಳೆಲ್ಲಾ ಅಖಿಲ ಭಾರತ ಸಂಸ್ಥೆಯ ಪೂರ್ವಸಿದ್ಧತೆಯಂತಿದ್ದುವು. ಕಲ್ಕತ್ತದಲ್ಲಿ ನೆರೆದ ಪ್ರಥಮ ರಾಷ್ಟ್ರೀಯ ಸಮ್ಮೇಳನದಲ್ಲಿ ಶ್ರೀ. ಆನಂದ ಮೋಹನ ಬೋಸರು ಮಾಡಿದ ಭಾಷಣದಲ್ಲಿ, "ರಾಷ್ಟ್ರೀಯ ಪಾರ್ಲಿಮೆಂಟೊಂದ"ನ್ನು ಸ್ಥಾಪಿಸಬೇಕೆಂದು ಅಭಿಪ್ರಾಯವನ್ನು ಹೇಳಿದ್ದರು.

ಮಿ. ಹ್ಯೂಮರೇ ೧೮೮೮ರಲ್ಲಿ, ಅಹಮ್ಮದಾಬಾದಿನಲ್ಲಿ ಮಾಡಿದ ಭಾಷಣವೊಂದರಲ್ಲಿ, ಭಾರತದ ಹಿತಕ್ಕಾಗಿ ದುಡಿಯುತಿದ್ದ, ಸಂಸ್ಕೃತರಾದ ಭಾರತೀಯರ ಪರಿಶ್ರಮದಿಂದಲೇ, ಈ ಸಂಸ್ಥೆಯು ಸ್ಥಾಪಿತವಾಯಿತು ಎಂದು ಹೇಳುತ್ತಾ, ತಾನೊಬ್ಬನೇ ಇದರ ಸರ್ವಸ್ಥಾಪಕನಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಹ್ಯೂಮರ ಅನುಪಮ ವ್ಯಕ್ತಿತ್ವ

ಇದರಿಂದೆಲ್ಲಾ ಮಿ. ಹ್ಯೂಮರು ಮಾಡಿದ ಅಸಾಧಾರಣ ಕಾರ್ಯದ ಮಹತ್ವವು ಕಡಿಮೆಯಾದಂತೆ ಆಗುವುದಿಲ್ಲ. ಈ ಸಾಹಸದ ಕಾರ್ಯವನ್ನು ಜಯಶೀಲವನ್ನಾಗಿ ಮಾಡಲು ಅವರ ಪ್ರಯತ್ನ ಮತ್ತು ಅವರ ಅನುಪಮ ವ್ಯಕ್ತಿತ್ವಗಳೇ ಹೆಚ್ಚಿನ ಆಧಾರಗಳಾಗಿವೆ. ಗೋಖಲೆಯವರಂದಂತೆ ಕಾಂಗ್ರೆಸನ್ನು ಆಂಗ್ಲೇಯರೊಬ್ಬರು ಸ್ಥಾಪಿಸುವುದು ಸಾಧ್ಯವಿತ್ತೆಂಬುದೇ ಮಿ. ಹ್ಯೂಮರ ಪ್ರಾಶಸ್ತ್ಯವಲ್ಲ, ಅವರು ಕಾಂಗ್ರೆಸು ಉಚಿತವಾದ ಮಾರ್ಗದಲ್ಲಿ ನಡೆಯುವಂತೆ, ಯೋಗ್ಯರಾದ ಮುಂದಾಳುಗಳನ್ನು ಆರಿಸಿ ಕಾಂಗ್ರೆಸನ್ನು ಮುನ್ನಡೆಸಲು ಯತ್ನಮಾಡಿದ್ದು ಇನ್ನಷ್ಟು ಮಹತ್ವದ ವಿಚಾರವಾಗಿದೆ.

ಮಿ. ಹ್ಯೂಮರು ಅಧಿಕಾರದಲ್ಲಿದ್ದಾಗ ಭಾರತದ ಹಳ್ಳಿಗಳಲ್ಲಿಯೂ ಬ್ರಿಟಿಷರ ಅಧಿಕಾರದಲ್ಲಿ ಅಸಂತೃಪ್ತಿಯಿದೆಯೆಂಬ ಅನೇಕ ಸಿ. ಐ. ಡಿ. ಪತ್ರಗಳು ಅವರಿಗೆ ಬಂದಿತ್ತಂತೆ! ಅನೇಕ ಒಳಸಂಚುಗಳೂ ಆಗಿದ್ದುವು. ಲಿಟನರ ಕಾಲದಲ್ಲಿ ಭಾರತದ ಬೇರೆ ಬೇರೆ ಭಾಗದ ಕೃಷಿಕರು ದಂಗೆ ಮಾಡುವುದರಲ್ಲಿದ್ದರು. ಬೊಂಬಯಿಯಲ್ಲಿ ಅಂತಹ ದಂಗೆಯೂ ನಡೆದಿತ್ತು!

ಇಂತಹ ಪರಿಸ್ಥಿತಿಯಲ್ಲಿ, ನಿಜವಾಗಿ ಭಾರತೀಯರ ಸಂಕಷ್ಟವನ್ನು ಮನಗಂಡವರು ಮಿ. ಹ್ಯೂಮರೊಬ್ಬರೇ!

ಅಧಿಕಾರಿಗಳ ವರ್ತನೆ!

೧೮೫೭ರಲ್ಲಿ ಆದ ದಂಗೆಯನ್ನು ಅಧಿಕಾರಿಗಳು ಅಣಗಿಸಿದ್ದರು. ಆಗ ಅವರಿಗೆ ಭಾರತದ ಜನಮತದ ಗುಟ್ಟೇನೆಂದು ತಿಳಿದಿರಲಿಲ್ಲ. ಇಂತಹ ಸಂದರ್ಭದಲ್ಲಿ ಅಖಿಲಭಾರತ ಸಂಸ್ಥೆಯನ್ನು ಸ್ಥಾಪಿಸಲು ಅಧಿಕಾರಿಗಳ ಬೆಂಬಲವನ್ನು ಪಡೆಯಲು ಮಿ. ಹ್ಯೂಮರಿಗೆ ಬಹಳ ಕಷ್ಟವಾಯಿತು. ಹಾಗಾಗಿ, ಆಗಾಗ್ಗೆ ಸಿಮ್ಲಾಕ್ಕೆ ಹೋಗಿ ಆಗಮಾತ್ರ ಬಂದಿದ್ದ, ಮೇಧಾವಿಗಳಾದ ಲಾರ್ಡ್ ಡಫರಿನರೊಡನೆ ಮಾತುಕತೆ ನಡೆಸಿ, ಕಾಂಗ್ರೆಸಿನ ರಚನೆಯ ಕಾರ್ಯವನ್ನು ಸಾಗಿಸಬೇಕಾಯಿತು

ಅಖಿಲಭಾರತದ ಆಂದೋಲನಕ್ಕೆ ಆಗ ಸಮಯವೂ ಅನುಕೂಲವಾಗಿತ್ತು ಆಗ ತಾನೇ ಆಗಿದ್ದ ಕೃಷಿಕರ ಆಂದೋಲನವು, ವಿದ್ಯಾವಂತರ ಸಹಾಯವನ್ನೂ ಪಡೆದು, ನವಭಾರತ ನಿರ್ಮಾಣಕ್ಕೆ ನೂತನ ಶಕ್ತಿಯನ್ನು ಕೊಟ್ಟಿತು. ಅಂತೂ, ಹಿಂಸಾಮಯವಾದ ಸಂಸ್ಥೆಯೊಂದು ಸ್ಥಾಪಿಸಲ್ಪಡಲಿಲ್ಲವೆಂಬ ವಿಷಯವು ಬಹಳ ಮಹತ್ವದ್ದಾಗಿದೆ ಏಕೆಂದರೆ, ಹಾಗೆ ಆರಂಭವಾಗಿದ್ದರೂ ಅದರಿಂದ ರಕ್ತದ ಚೆಲ್ಲಾಟವೂ, ದ್ವೇಷ ಪ್ರಕೋಪಗಳೂ ಮಾತ್ರ ಹೆಚ್ಚುವಂತಾಗುತ್ತಿತ್ತು

ಕಾಂಗ್ರೆಸಿನಲ್ಲಿ ಉಂಟಾದ ಉತ್ಕ್ರಾಂತಿ!

ಈಗ ಐವತ್ತು ವರ್ಷಗಳ ಅನಂತರ ಹಿಂದಿನ ಚರಿತ್ರೆಯ ಕಡೆಗೆ ಕಣ್ಣೆತ್ತಿ ನೋಡಿದರೆ, ಹೇಗೆ ಹಿಂದೂದೇಶವು ಕ್ರಮಕ್ರಮವಾಗಿ, ಬೇರೆಬೇರೆ ಸ್ಥಿತಿಗತಿಗಳನು ಹೊಂದಿದೆಯೆಂದು ತಿಳಿಯುತ್ತದೆ. ಒಮ್ಮೆ ಅಧಿಕಾರಿಗಳ ಪ್ರೀತಿಯ ನೆರಳಲ್ಲಿದ್ದು, ಒಮ್ಮೆ ಅತ್ಯವಾದ ಅವಿಧೇಯತೆಯ ಸಂಸ್ಥೆಯೊಂದು ಯಾತನೆಗೆ ಒಳಗಾಗಿದ್ದು ಕೆಲಸಮಯ ಮಂದಪಕ್ಷೀಯರ ಅಭಿಪ್ರಾಯದ ಸಹಕಾರಿಯಾಗಿದ್ದು, ಇನ್ನೊಮ್ಮೆ ಉಗ್ರಪಕ್ಷದವರ ಅಧೀನದಲ್ಲಿದ್ದು ಒಮ್ಮೆ ಸರಕಾರದೊಡನೆ ಸಹಕರಿಸುತ್ತಿದ್ದು, ಇನ್ನೊಮ್ಮೆ ಅದೇ ಸರಕಾರದಿಂದಲೇ ಬಹಿಷ್ಕಾರವಾಗಿ, ಮುಖಂಡರು ಸೆರೆಮನೆಯನ್ನು ಸೇರುವಂತಾಗಿದ್ದು ಕಡೆಗೊಮ್ಮೆ ಈಗ ಪ್ರಾಂತಗಳ ಅಧಿಕಾರವನ್ನೇ ಕೈವಶ ಮಾಡಿಕೊಂಡಿದ್ದು, ಹೀಗೆ ಕಾಂಗ್ರೆಸು ಚಳವಳಿದ ಚರಿತ್ರೆಯಲ್ಲಿ ಆದ ಉತ್ಕ್ರಾಂತಿಯು ಅದ್ಭುತವಾದ ಘಟನೆಗಳಿಂದ ಕೂಡಿದೆ.

ಮಿ. ಎ. ಓ. ಹ್ಯೂಮರು ಇಂದು ಜೀವಿಸಿದ್ದರೆ ತನ್ನ ಶಿಶುವು ಹೀಗೆ ಬೆಳೆದು ಬಂದದ್ದನ್ನು ನೋಡಿ ನಿಜವಾಗಿಯೂ ಅಭಿಮಾನ ಪಡುತ್ತಿದ್ದರು!



ಜಪಾನಿಗೆ ಸಂತೋಷವಿಲ್ಲ

ರಶ್ಯಾ ಜರ್ಮನ್ ಒಪ್ಪಂದದ ವಿಷಯ ಜಪಾನು ಕೆರಳಿ ದೂರುತ್ತದೆ

ನ್ಯುರೆಂಬರ್ಗ್ ಕಾಂಗ್ರೆಸಿಗೆ ಹೋಗಲು ಹೊರಟ ಎಡ್ಮಿರಲ್ ಉಸಮಿಯವರು ಜರ್ಮನಿಗೆ ಹೋಗುವುದಿಲ್ಲವೆಂದು ನಿಶ್ಚಯಿಸಿರುವರು.

ಪೋರ್ಚುಗೀಸರು ಹಿಟ್ಲರನನ್ನು ನಿಂದಿಸುವರು

ಜರ್ಮನಿ ಮತ್ತು ಇಟಲಿ ದೇಶಗಳ ನಾಣ್ಯಗಳ ಚಲಾವಣೆಗಳನ್ನು ಪೋರ್ಚುಗೀಸಿನ ಹಲವು ಬೇಂಕುಗಳು ಇನ್ನು ಮುಂದಕ್ಕೆ ನಿಲಿಸಿವೆ.

ಬ್ರಿಟನ ಮತ್ತು ಫ್ರಾನ್ಸು ದೇಶಗಳ ಧೈರ್ಯವನ್ನು ಹೊಗಳುತ್ತಾ, ಇಂದಿನ ಅಂತರ್ ರಾಷ್ಟ್ರೀಯ ಅಶಾಂತಿಗೆ ಕಾರಣನಾದ ಹಿಟ್ಲರನನ್ನು ದೂರಿ, ಹಲವು ಪತ್ರಿಕೆಗಳು ಬರೆಯುತ್ತಿವೆ

ಸ್ಪೈನಿನ ತಾಟಸ್ಥ್ಯ

ರಶ್ಯಾ ಜರ್ಮನ್ ಒಪ್ಪಂದದ ವಿಷಯ ಜಪಾನು ಕೆರಳಿ ದೂರುತ್ತದೆ

ಜರ್ಮನಿಯ ಸಿದ್ಧತೆ!

ಜರ್ಮನಿಯು ಯುದ್ಧವನ್ನು ಆರಂಭ ಮಾಡುವುದಿಲ್ಲವಾದರೂ, ಯುದ್ಧಕ್ಕಾಗಿ ಸಂಪೂರ್ಣ ಸಿದ್ಧತೆಗಳನ್ನು ಮಾಡುತ್ತಿರುವುದಾಗಿ ತಿಳಿದಿದೆ

ಮಹಿಳಾ ಸಮಾಜ

ಗರ್ಭಿಣಿಯರು ಪ್ರೇಮಾವರಣದಿಂದ ನಿರಂತರ ಆನಂದಗೊಂಡಿರಬೇಕು

ಸಂಸಾರದ ಸೌಭಾಗ್ಯವೇನು?

ಶಿಶುವು ಹುಟ್ಟುವ ವಿಷಯದಷ್ಟು ಆಶ್ಚರ್ಯಕರವಾದುದು ಈ ಲೋಕದಲ್ಲಿ ಬೇರೆ ಇಲ್ಲವೆಂದರೂ ಸರಿಯಾದೀತು ನವ ಪ್ರಸೂತೆಯಾದ ಮಾತೆಯು, ತನ್ನ ವೈವಾಹಿಕ ಜೀವನ ಸೌಖ್ಯದ ಸೌಭಾಗ್ಯವನ್ನು—ತನ್ನ ಹಲದಿನದ ಹಂಬಲನ್ನು, ತನ್ನ ಮತ್ತು ಪತಿದೇವನ ಪೂರ್ಣ ಪ್ರತಿಫಲದಂತಿರುವ ಸುಂದರ ಶಿಶುವಿನ ಮುಖವನ್ನು ಯಾವ ಕ್ಷಣದಲ್ಲಿ ನೋಡುತ್ತಾಳೋ, ಆಗ ಆಕೆಯ ಹೃದಯವು ಅಪೂರ್ವ ಸಂತೋಷದಿಂದ ತುಂಬಿರುತ್ತದೆ ಈ ಲೇಖನದಲ್ಲಿ ಗರ್ಭಿಣಿಯರಾಗಿದ್ದ ಮಹಿಳೆಯರು ಸುಂದರ ಆರೋಗ್ಯವಂತರಾದ ಶಿಶುಗಳನ್ನು ಹೇಗೆ ಪಡೆಯಬಹುದೆಂಬ ವಿಷಯವಾಗಿ ಕೆಲವು ಅಂಶಗಳನ್ನು ವಿವರಿಸಲಾಗಿದೆ

ಪ್ರಕೃತಿ ಸಹಜವಾದರೂ ಅಜಾಗ್ರತೆ ಕೂಡದು

ಹೆಂಗಸು ಗರ್ಭ ಧರಿಸುವುದು, ಮಗುವನ್ನು ಹೆರುವುದು ಪ್ರಕೃತಿ ಸಹಜವಾದ ವಿಷಯವೆಂಬುದು ನಿಜ, ಆದರೆ, ಇದರಿಂದ ಅನಾಗರಿಕ ಜೀವನದಿಂದ, ಅಸ್ವಾಭಾವಿಕ ವರ್ತನೆಯಿಂದ ... ದರೂ ಶಿಶುವಿಗಾಗಲಿ, ... ಯಾವ ತೊಂದರೆ ... ತಿಳಿಯಬಾರದು. ಆಕೆಯ ಹಿತಕ್ಕಾಗಿ ಮತ್ತು ಆಕೆಯ ಹೊಟ್ಟೆಯಲ್ಲಿರುವ ಶಿಶುವಿನ ಹಿತಕ್ಕಾಗಿ ಕೆಲವು ಮೂಲಭೂತ ನಿಯಮಗಳನ್ನು ಅನುಸರಿಸಬೇಕಾದದ್ದು ಅತ್ಯವಶ್ಯವಿರುತ್ತದೆ

ಮೂಲಭೂತ ನಿಯಮಗಳು

ಈ ನಿಯಮಗಳೆಂದರೆ ಇವುಗಳು ಆಕೆಯು ಎಂದೂ ಪ್ರೇಮಾನಂದದ ಆನಂದದಿಂದಲೇ ಹರ್ಷಿತಳಾಗಿರತಕ್ಕದ್ದು, ಪತಿ ಮತ್ತು ಪತ್ನಿಯರೊಳಗೆ ಗಾಢ ಪ್ರೇಮವಿರತಕ್ಕದ್ದು, ಗರ್ಭಿಣಿಯಾದ ಮಹಿಳೆಯ ಜೀವನದಲ್ಲಿ ಅತ್ಯಂತ ಪರಿಣಾಮಕಾರಿಯಾಗಿದೆ ಈ ಬಗ್ಗೆ ಉಭಯತರೂ ಎಚ್ಚರಿರತಕ್ಕದ್ದು ಇತರ ಸಂಸಾರದ ಜನರಿಂದಲಾಗಲಿ, ಇನ್ನು ಯಾವುದೇ ವಿಧದ ಚಿಲ್ಲರೆ ಚಿಲ್ಲರೆ ಸಣ್ಣಗಳು ಜಗಳ, ಗೊಂದಲ, ಬೇಸರ ಇವುಗಳನ್ನು ಅವರು ಬಿಟ್ಟಿರಬೇಕು. ಪತಿ ಪತಿಯರಲ್ಲಿ ಅನ್ಯೋನ್ಯ ಐಕಮತ್ಯವಿರಬೇಕಾದದ್ದು ಎಲ್ಲದಕ್ಕಿಂತಲೂ ಪ್ರಾಧಾನ್ಯವಾಗಿದೆ

ಗರ್ಭಿಣಿಯಾದ ಹೆಂಗಸಿಗೆ ಒಳ್ಳೆಯ ವಾಯು ಸೇವನೆ ಮತ್ತು ಸೂರ್ಯನ ಬೆಳಕು ಅಗತ್ಯವಾಗಿ ಬೇಕಾಗಿದೆ.

ಆಕೆ ಖನಿಜಲವಣ ಮತ್ತು ಜೀವಾತು (Vitamins)ಗಳನ್ನು ತೆಕ್ಕೊಳ್ಳಬೇಕು ಇದಕ್ಕೆ ಅರ್ಧ ಆಹಾರವಾಗಿ ಆಕೆ, ಹಣ್ಣು ಸಲಡ್, ಒಣಗಿದ ಹಣ್ಣು ಬೀಜ, ಮಧು ಇವುಗಳನ್ನು ಸೇವಿಸಬೇಕು ಇನ್ನುಳಿದರ್ಧವು ಬೇಯಿಸಿದ ವಸ್ತುಗಳಾಗಿರತಕ್ಕದ್ದು ಹಾಲು, ಗೋದಿರೊಟ್ಟಿ ಮತ್ತು ಬಿಸ್ಕಿಟು, ಇವುಗಳೇ ಆಕೆಯ ಆಹಾರ ಪುಷ್ಟಿಗೆ ಸಾಕಾಗುವವು ಎಸಿಡ್ ಉಂಟುಮಾಡುವ ಆಹಾರಗಳನ್ನು, ಮೀನು, ತತ್ತಿ, ಮಾಂಸ ಮೊದಲಾದವುಗಳನ್ನು ಬಹಳ ಕಡಿಮೆಯಾಗಿ ತೆಕ್ಕೊಳಬೇಕು ಸಕ್ಕರೆ ಮೊದಲಾದವುಗಳನ್ನು ಪೂರಾ ಬಿಡುವುದೊಳ್ಳೆಯದು ಅಂತರಂಗ ನೈರ್ಮಲ್ಯಗಳು ಅಗತ್ಯವಾಗಿದೆ ... ಇಡೀ ಶರೀರಕ್ಕೆ ಬಿಸಿನೀರು ಸ್ನಾನ ಮತ್ತು ವಾಯು ಸ್ನಾನವು ಅಗತ್ಯವಾಗಿದೆ. ಎರಡು ಸಲ ಮಲವಿಸರ್ಜನೆಯಾಗಬೇಕಾಗಿದೆ

ಸಾಕಷ್ಟು ವಿಶ್ರಾಂತಿಯ ... ರಾತ್ರಿ ಬೇಗನೇ ... ಮಧ್ಯಾಹ್ನ ಹೊತ್ತಿಗೂ ವಿಶ್ರಾಂತಿ ತೆಕ್ಕೊಳ್ಳಬೇಕು

ಕೆಲವು ತೊಂದರೆಗಳು

ಕೆಲ ಶಾರೀರಿಕ ಮಾನಸಿಕ ತೊಂದರೆಗಳನ್ನು ತಪ್ಪಿಸಬೇಕು. ಆಕೆಯು ... ಬಯ ದ ಬೇಸರ ವಿಷಯಗಳನ್ನು ... ಮಾಡಿ ಹೆಂಗಸರಾಗಲಿ ಹೇಳಬಾರದು ಕೆಲವು ವಿಷಯಗಳು ಕೇವಲ ಹುಚ್ಚುತನವೆಂದು ಆಕೆಯೇ ... ಹುದು ಆದರೆ ಅಂತಹ ವಿಷಯಗಳನು ಕೇಳುವುದರಿಂದಲೇ ಕೆಲವು ದುಷ್ಪರಿಣಾಮಗಳು ಆಗುತ್ತವೆ

ಹಲ್ಲು ಬೇನೆ ಮೊದಲಾದ ಶಾರೀರಿಕ ತೊಂದರೆಗಳನ್ನು ಕೂಡಲೇ ಯೋಗ್ಯ ಡಾಕ್ಟರರ ಪರೀಕ್ಷೆಯಿಂದ ನಿವೃತ್ತಿಪಡಿಸಬೇಕು. ಗರ್ಭಕೋಶದಲ್ಲಿ ಮಗುವು ಅತಿ ಹೆಚ್ಚಾಗಿ ಬೆಳೆಯದಂತೆಯೂ ನೋಡಿಕೊಳ್ಳುವುದು ಅವಶ್ಯವಿದೆ

ಆ ಮೇಲೆ ಮುಂಜಾನೆಯ ವಾಂತಿ ಮೊದಲಾದ ವಿಷಯಗಳು ಜಾಗ್ರತೆಯಿಂದಿರಬೇಕು ಮಲಬದ್ಧವಾಗುವುದು ನಿಂತ ಕೂಡಲೇ ಇದು ಸುರುವಾಗುವುದ ಆದರೆ ಆಹಾರದಲ್ಲಿ ತೆಕ್ಕೊಳ್ಳುವ ಜಾಗ್ರತೆಯಿಂದ ಅದೂ ನಿಲ್ಲುವುದು

ಹತ್ತು ದಿನಕ್ಕೊಮ್ಮೆ ಉಪವಾಸ ಮಾಡುವುದು ಒಳ್ಳೆಯದು ಹೆರಿಗೆಯ ತಿಂಗಳ ಮೊದಲು ಇದನ್ನು ನಿಲ್ಲಿಸಬೇಕು. ಹಲವು ಸಲ ವಾಂತಿ ಮೊದಲಾದವುಗಳಿಂದ ಹೀಗೆ ಮಾಡಿದುದರಿಂದ ಆಗುವುದೇ ಇಲ್ಲ ಅಂತರಂಗ ಶುದ್ಧಿಯು ಹೆಚ್ಚಾಗಿ ಗರ್ಭಿಣಿಯರಿಗೆ ಇರುವುದಿಲ್ಲ ಉಪವಾಸದಿಂದ ಅದು ನಿವೃತ್ತಿಯಾಗುತ್ತದೆ

ಉಪವಾಸದ ಸಮಯದಲ್ಲಿ ಹಣ್ಣುಗಳನ್ನು, ದ್ರವಾಹಾರಗಳನ್ನು ತೆಕ್ಕೊಂಡು ಕ್ರಮ ಪ್ರಕಾರ ...

ಈ ಸಮಯದಲ್ಲಿ ... ಯಾವರೂ ತನ್ನ ಪತ್ನಿಗೆ ಅಧಿಕ ... ಸ ಪಡದಂತೆ, ... ಮಾಡಬೇಕು ಅಂತೇ ... ಸದಾ ಸಂತೋಷವನ್ನು ... ಸವು ಅವನದು

ಬೊಂಬ್ಯಾ ಯುನಿವರ್ಸಿಟಿಯ ವಾರ್ಷಿಕ ಕಾನ್ವಕೇಶನ್

ವಾರ್ಷಿಕ ಕಾನ್ವಕೇಶನ ಸಮಯ ಗ್ರೇಜುಏಟ್ ಡಿಗ್ರಿಗಳನ್ನು ಪಡೆದ ಕೆಲವು ಮಹಿಳೆಯರು

ಮಗು ಬೇಕೆ?

ಈ ವಿಷಯವಾಗಿ, ಮಕ್ಕಳನ್ನು ಗರ್ಭದಲಿ ಧರಿಸುವುದಕ್ಕಿಂತ ಮೊದಲೇ ... ವಿಚಾರಿಸಿಕೊಳ್ಳಬೇಕು ಹುಟ್ಟಿದ ಮಗ ... ಗಳನ್ನು ... ಸಿದ್ಧಮಾಡಿಟ್ಟಿರುವುದ ... ಹುಟ್ಟಿದ ...

ಸಾವಕಾರ ಶ್ರೀನಿವಾಸರಂಗಪ್ಪ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮತ್ತು ಸರ್ಟಿಫಿಕೆಟ್ಟು—ಡಾ, ವೈದ್ಯ ಎಲ್. ಸಿ. ಪಿ. ಎಸ್ ಕೆಳವಾದಮಾಡಿಸು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯದೂ ...

ವಿಳಾಸ ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, (S. M C)

ವಿಚಿತ್ರ ಪ್ರಪಂಚ!

ಉದ್ದ ಬೆಳೆಸಿದ ಬಲಶಾಲಿ

ಐರಿಸ್ ದೇಶದಲ್ಲಿ ಹುಟ್ಟಿ ಆಸ್ಟ್ರೇಲಿಯಕ್ಕೆ ಬಂದಿದ್ದ ಚೆರಿ ಓ ಕೀಫ್ ಎಂಬನು ತನ್ನ ೧೦೨ನೆಯ ವಯಸ್ಸಿನಲ್ಲಿ ಮೃತನಾದನು.

ಉದ್ದ ಕೂದಲನ್ನು ಅವನು ಭುಜದಿಂದೆ ದೀರ್ಘವಾಗಿ ಬಿಡುತ್ತಿದ್ದ! ಆವನು ಅತ್ಯಂತ ಬಲಶಾಲಿಯೆಂದು ಪ್ರಸಿದ್ಧನಾಗಿದ್ದ ಈಗ ಕೇವಲ ೫ ವರ್ಷಗಳಿಂದೆ, ಭಯಂಕರ ಭಾರದ ವಸ್ತುಗಳನ್ನೆತ್ತುವುದೂ, ಹೆಚ್ಚು ಶಕ್ತಿಯ ಕೆಲಸಗಳನ್ನೂ ಮಾಡುತ್ತಿದ್ದ

ತನ್ನ ಈ ಬಲವು ಹೆಚ್ಚಾಗಲು ತಾನು ಬೆಳೆಸಿದ, ಕೆಂಪು ಕೂದಲ ರಾಶಿಯೂ, ಸಹಾಯಕವಾಗಿದೆಯೆಂದು ಅವನ ಅಭಿಪ್ರಾಯವಾಗಿದೆ

ಇಂಗ್ಲಿಷ್ ಬೇಂಕಿನಲ್ಲಿ ಹಿಂದೀಯ ಹುಡುಗಿ

ಇಂಗ್ಲೆಂಡಿನ ಬಾರ್ಕ್ಲೇ ಬೇಂಕಿನ ಬೇರೆ ಬೇರೆ ಆಫೀಸುಗಳಲ್ಲಿ, ಬಹು ಸಮಯದಿಂದ, ಬಹಳ ನಾಜೂಕಾಗಿ ಕೆಲಸ ಮಾಡುತ್ತಿರುವ ಒಬ್ಬ ಹಿಂದೀಯ ಹುಡುಗಿಯ ಪರಿಚಯವು ವಿಶೇಷ ವಿಷಯವಾಗಿದೆ

ಆಕೆಯು ಹೆಸರು ಮಿಸ್ ಮೇರಿ ಹನ್ನುಮೇನ್ ಎಂದು ಅವಳು ಬಂಗಳೂರಿನವಳು ಬ್ರಿಟಿಷ್ ಬೇಂಕಿನಲ್ಲಿ ಕೆಲ ಸಮಯದಿಂದ ಕೆಲಸಮಾಡುತ್ತಿದ್ದು, ಬೇಂಕಿನ ವಹಿವಾಟನ್ನು ಚನ್ನಾಗಿ ಪರಿಚಯಮಾಡಿಕೊಂಡಿದ್ದಾಳೆ! ಅವಳು ಮೈಸೂರು ಮಹಿಳಾ ಕಾಲೇಜಿನ ಪ್ರಿನ್ಸಿಪಾಲ್ ಮಿಸೆಸ್ ಎಸ್ ಜಿ ಹನ್ನುಮಾನಳ ಮಗಳು ಬ್ರಿಟಿಷ್ ಬೇಂಕಿನಲ್ಲಿ ಉದ್ಯೋಗಕ್ಕೆ ಸೇರಿದ ಹೆಂಗಸರಲ್ಲಿ ಅವಳೇ ಪ್ರಥಮಳು ಹಿಂದೂದೇಶದ ಸೆಂಟ್ರಲ್ ಬೇಂಕಿನವರು ಅವಳನ್ನು ಅಲ್ಲಿಗೆ ಆ ಶಿಕ್ಷಣಕ್ಕಾಗಿ ಕಳುಹಿಸಿದ್ದಾಗಿದೆ

ಬೇಗನೇ ತನ್ನ ಶಿಕ್ಷಣವನ್ನು ಮುಗಿಸಿ, ಸರ್ಟಿಫಿಕೇಟು ಪಡೆದು ಆಕೆ ಹಿಂದೂದೇಶಕ್ಕೆ ಬಂದು ಹಿಂದೀಯ ಬ್ಯಾಂಕೊಂದರಲ್ಲಿ ಉದ್ಯೋಗ ಮಾಡುವಳು.

ತಿಬೇಟನ್ನು ಕೃಷಿಕ ಹುಡುಗನು ಆಳುವನು

ಚುಂಕಿಯಾಂಗಿನಿಂದ ಬಂದ ಒಂದು ವಾರ್ತೆಯಂತೆ, ತಿಬೇಟಿನ ಹದಿನಾಲ್ಕನೇ ರಾಜನು, ಐದು ವರ್ಷದ ಒಬ್ಬ ಕೃಷಿಕ ಹುಡುಗನೆಂದು ಪ್ರಕಟವಾಗಿದೆಯೆಂದು ತಿಳಿದಿದೆ ಅವನು ರಾಜನು ಮಾತ್ರವೇ ಅಲ್ಲ, ಅಲ್ಲಿನ ಮಿಲಿಯಾಂತರ ಜನರಿಗೆ ಅವನೇ ಧರ್ಮ ಗುರುವೂ ಆಗಿದ್ದಾನೆ. ಐದು ವರ್ಷಗಳ ತನಕ ಹುಡುಕಿದ ತಿಬೇಟಿನ ಸನ್ಯಾಸಿಗಳು ಆತನನ್ನು ಈಗತಾನೇ ಕಂಡು ಹುಡುಕಲಾಗಿದೆ.

ಹಿಟ್ಲರನಿಗೆ ಕಿರೀಟ!

ಆರ್ಜೆಂಟೈನಿನ ನಾಜಿಗಳು, ಜರ್ಮನಿಯ ಅಧಿರಾಜನಾದ ಹಿಟ್ಲರನಿಗೆ, ಆತನ ಮೇಲಿರು ತಮ್ಮ ಪ್ರೀತಿಯನ್ನು ಪ್ರಕಟಿಸುವಂತೆ, ಒಂದು ಕಿರೀಟವನ್ನು ಮಾಡಲು ಗುಪ್ತನಿಧಿಯನ್ನು ಎತ್ತುತ್ತಿರುವನು.

'ಕ್ರಿಟಿಕ್' ಪತ್ರಿಕೆಯು ಕಿರೀಟಧಾರಿಯಾಗಿ, ವಜ್ರ, ರತ್ನ, ಸುವರ್ಣಾಭರಣ ಶೋಭಿತನಾದ ಮಕುಟಾಧಿಪತಿ ಹಿಟ್ಲರನ ಚಿತ್ರವೊಂದನ್ನು ಪ್ರಕಟಿಸಿದೆ.

ಕಡೆಗೆ-ಹಿಂದೀಯರಾದರು!

ಸರ್ ಸರ್ವಪಳ್ಳಿ ರಾಧಾಕೃಷ್ಣನರು ಒಂದು ಕಥೆಯನ್ನು ಲಂಡನಿನಲ್ಲಿ ಹೇಳಿದರು.

'ದೇವರು ಮೊದಲು ಒಬ್ಬ ರೊಟ್ಟಿ ಮಾಡುವ ಮೂರ್ತಿಯನ್ನು ಸೃಷ್ಟಿಸಿದರು ಆವನು ರೊಟ್ಟಿಮಾಡಲು ಬಹಳ ತಡಮಾಡಿದ, ಹಾಗಾಗಿ ಕರಿಜನರು ಆದರು. ದೇವರಿಗೆ ಬೇಸರವಾಗಿ ಎರಡನೆ ಸಲ ರೊಟ್ಟಿಯನ್ನು ಬೇಗ ತೆಗೆದ, ಅದರ ಫಲವಾಗಿ ಬಿಳಿ ಜನರು ಹುಟ್ಟಿದರು ಕಡೆಗೆ ಇದರ ಅನುಭವದಿಂದ ಸರಿಯಾದ ರೊಟ್ಟಿ ಆಯಿತು ಅದರ ಫಲವೇ ಹಿಂದೀಯರು!'

ತರ್ಮೋಮಿಟರನ್ನು ನುಂಗಿದಳು!

ಶಾಂಗಾಯಿಯ ಆಸ್ಪತ್ರೆಯಲ್ಲಿ ಒಬ್ಬ ದಾದಿಯು, ಚೈನೀಯ ರೋಗಿಯೋರ್ವನ ಟೆಂಪರೇಚರನ್ನು ತೆಗೆಯುತಿದ್ದಾಗ, ಆ ರೋಗಿಯು ತರ್ಮೋಮಿಟರನ್ನೇ ನುಂಗಿರುವುದಾಗಿ ತಿಳಿಯುತ್ತದೆ

ಡಾಕ್ಟರರನ್ನು ಕರೆಯಿತು ದಾದಿಯು ಇನ್ನೊಂದು ತರ್ಮೋಮಿಟರನ್ನು ರೋಗಿಯ ಬಾಯಲ್ಲಿಟ್ಟಳು ಅದನ್ನೂ ನುಂಗಿದಳು.

ಈ ಎರಡು ತರ್ಮೋಮಿಟರಗಳನು ಹೊರತೆಗೆಯಲು ಒಪರೇಶನು ನಡೆಸಿ, ಕಡೆಗೆ ಅವುಗಳೆರಡನ್ನೂ ತೆಗೆಯಲಾಯಿತು.

ಕುಳ್ಳರ ಪರಿಷತ್ತು

ಬುಡಪೆಸ್ಟಿನಲ್ಲಿ ೩೩ ಜನ ಗಂಡಸರು ಹೆಂಗಸರು ಸೇರಿ, ಒಂದು ಪ್ರಪಂಚದ ಕುಳ್ಳರ ಮಹಾಸಭೆಯನ್ನು ಸೇರಸಬೇಕೆಂದಿದ್ದಾರೆ ಮತ್ತು ಈ ಕೆಳಗಿನ ನಿಯಮಗಳ ಅರ್ಜಿಯೊಂದನ್ನು ಲೀಗ್ ಆಫ್ ನೇಶನ್ಸಿಗೆ ಕಳುಹಿಸಬೇಕೆಂದಿದ್ದಾರೆ

ಕುಳ್ಳರಿಗೂ ಇತರ ಸಾಮಾನ್ಯ ಜನರಿಗೂ ವಿವಾಹ ನಡೆಯುವುದನ್ನು ತಪ್ಪಿಸಬೇಕು

ಕುಳ್ಳರನ್ನು ಹೆದರಿಸುವದಾಗಲೀ ತೊಂದರೆಪಡಿಸುವುದಾಗಲಿ ಮಾಡಕೂಡದು

ಸಿನಿಮಾ ಮತ್ತು ನಾಟಕಗಳಲ್ಲಿ ರಿಯಾಯತಿ ಚಾರ್ಜು

ಉದ್ಯೋಗವಿಲ್ಲದವರಿಗೂ, ಆಶಕ್ತರಿಗೂ ಅನಾದಾಶ್ರಮಗಳು

ಸಾರ್ವಜನಿಕ ಸ್ಥಳಗಳಲ್ಲಿ ಕುಳ್ಳರನ್ನು ಹಾಸ್ಯ ಕುಚೋದ್ಯ ಮಾಡಿದವರಿಗೆ ಶಿಕ್ಷೆ

ಕೂಡಲೇ ಅಖಿಲ ಪ್ರಪಂಚದ ಕುಳ್ಳರ ಸಮಿತಿಯೊಂದನ್ನು ಸ್ಥಾಪಿಸಿ ಪ್ರಪಂಚದಲೆಲ್ಲಾ ಪ್ರಚಾರಮಾಡುವುದು

ಗೊತ್ತಿದೆಯೋ?

ಒಂದು ನಿಮಿಷಕ್ಕೆ ೩೦೦ ಬ್ಲೇಡುಗಳಂತೆ ೧ ಪೌಂಡು ಉಕ್ಕಿನಲ್ಲಿ ೧೪೦೦೦ ರೇಜರ್ ಬ್ಲೇಡುಗಳಾಗುವವಂತೆ!

ನ್ಯೂಜಿಲೆಂಡಿನ ವೈಟೂಮಾ ಎಂಬಲ್ಲಿ ಒಂದು ಗುಹೆಯಲ್ಲಿ ಬೆಳಕಿನ ಹುಳುಗಳು ಬೆಳಕನ್ನು ಕೊಡುತ್ತವಂತೆ!

ಜಪಾನಿನಲ್ಲಿ ಸುಮಾರು ೧೪ ಲಕ್ಷ ಜನ ರೇಷ್ಮೆ ವ್ಯವಸಾಯದಿಂದ ಜೀವಿಸುತ್ತಿರುವರಂತೆ!

ರಷ್ಯಾದ ಡಿಕ್ಟೇಟರಾದ ಸ್ಟಾಲಿನ್ನನು ಸ್ಪೆಷಲ್ ರೈಲಿನಲ್ಲಿ ಪ್ರಯಾಣ ಮಾಡುವಾಗ ಅವನ ಎಂಜನನ್ನು ಒಬ್ಬ ಹೆಂಗಸು ನಡೆಸುವಳಂತೆ

ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವಾದ ಎಂದರೆ ೩೩೪ ಅಡಿ ಎತ್ತರವಿರುವ ಮರವು ಕ್ಯಾಲಿಫೋರ್ನಿಯಾದಲ್ಲಿ ಡಿಯರ್‌ವೆಲ್ಲಿ ಎಂಬಲ್ಲಿರುವುದಂತೆ

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು.

ರಕ್ತ ಕ್ಷೀಣತೆಯಿಂದುಟಾಗುವ ಬಳಲಿಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನ ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವಿರ್ಯೋತ್ಸಾಹ ಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟು ಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾ ಚಾರ್ಲುರವರ

ಜೀವಾಮೃತ



ಸ್ತ್ರೀಪುರುಷರು ವಯೋಬೇಧವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:

ಆಯುರ್ವೇದಾಶ್ರಮ : ಮದರಾಸು

ಸ್ಟಾಕಿಸ್ಟರು:

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಗೊನೋರಿಯಾ ರೋಗಕ್ಕೆ ತೀಕ್ಷ್ಣ ಪರಿಹಾರ ಮತ್ತು ಖಂಡಿತ ಗುಣ.

ಸೆ ಟಿ ಸ ನ್

ಕೆದಮುವ ಗುಣಗಳಿಂದ ವಿರಹಿತವಾದ ಶುದ್ಧ ಗಂಧದ ಎಣ್ಣೆಯಿಂದ ತಯಾರಿಸಲ್ಪಟ್ಟ ಔಷಧಿ

ಭಯಂಕರವಾದ

ಗೊ ನೊ ರಿ ಯಾ

ರೋಗಕ್ಕೆ ನಿಶ್ಚಿತವೂ ಸುರಕ್ಷಿತವೂ ಆದ ರಾಮಬಾಣ ಔಷಧ ಗೊನೊರಿಯವು ಪ್ರಾರಂಭದ್ದಿರಲಿ, ದೀರ್ಘಕಾಲದ್ದಿರಲಿ, ಸೌಮ್ಯವಿರಲಿ ಯಾ ತೀಕ್ಷ್ಣದ್ದಿರಲಿ ಸೆಟಿಸನ್ ನೋವನ್ನು ಕೂಡಲೇ ನಿವಾರಿಸಿ ಖಾತ್ರಿಯಾಗಿ ಗುಣಮಾಡುವುದು

ಪ್ರಾಮುಖ್ಯ ಸಂಗತಿ:

ಸೆಟಸನ್ ಒಂದರಲ್ಲಿ ಮಾತ್ರವೇ ಹೊಟ್ಟೆಯೊಳಗೆ ಸೇವಿಸಿದೊಡನೆ ಗುಣಪಡಿಸುವಷ್ಟು ಪ್ರಮಾಣದಲ್ಲಿರುವ ಗಂಧದ ಎಣ್ಣೆ ಇರುವುದು ಇದೇ ಇದರ ಅನುಪಮ ವಿಜಯ. ಆದುದರಿಂದ ಕಡಿಮೆ ಪರಿಮಾಣದ ಗಂಧದ ಎಣ್ಣೆಯಿಂದ ಕೂಡಿರುವ ಇದರಷ್ಟು ಉತ್ತಮವಲ್ಲದ ಇತರ ಔಷಧಿಯೊಂದಿಗೆ ತಂಗಿಡಿಸಬೇಡಿ

ಟಪ್ಪಾಲುದ್ವಾರಾ ತರಿಸಿರಿ

Crystal Chemical Co, Ltd., 109 Parsee Bazar St Fort Bombay

ಕ್ರಯ ಆರ್ಡರಿನೊಂದಿಗೆ ಹಣ ಕಳುಹಿಸಿದರೆ ರೂ 6-10-0 (ಅಂಚೆವೆಚ್ಚ ಮುಫತ್ತು)

ವಿ ಪಿ ಪಿ ದ್ವಾರಾ ತರಿಸುವುದಾದರೆ ಅಂಚೆವೆಚ್ಚ ಹೆಚ್ಚು

ನಿಮ್ಮ ಜಾಹಿರಾತನ್ನು ಸ್ವದೇಶಾಭಿಮಾನಿಗೇ ಕೊಡಿರಿ

ಅಸ್ಪೃಶ್ಯತೆಯ ವಿಷಸರ್ಪವು ಸನಾತನಿಗಳ ಸೇಡು ತೀರಿಸುವುದು!

ಪ್ರಧಾನ ಮಂತ್ರಿ ರಾಜಾಜಿಯವರ ಹೇಳಿಕೆ



ಕೊಯಂಬುತ್ತೂರಿನ ಗೋಬಿ ಚೆಟ್ಟಿ ಪಾಲ ತಾಲೂಕು ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸು ಸರಕಾರದ ಕಾರ್ಯವನ್ನು ಅವರು ಹೀಗೆಂದು ಸಮರ್ಥಿಸಿದರು.—

"ಹೊಸ ತೆರಿಗೆಯನ್ನು ಎತ್ತಲು ಈಗ ಪ್ರಾರಂಭವಾಗಿಲ್ಲವಾದರೂ, ಅದರ ವಿರುದ್ಧ ಪ್ರಚಾರವು ಆಗಿಯೇ ಹೋಗಿದೆ. ತಿಳಿಯದ ನಿರಪರಾಧಿಗಳಾದ ಜನರನ್ನು ಹೀಗೆ ಅಪಪ್ರಚಾರದಿಂದ ಹಲವರು ವಂಚಿಸುತ್ತಾರೆ. ಇದನ್ನು ನಿಷೇಧಿಸಿ ಸತ್ಯವನ್ನು ಸಾರುವುದು ಕಾಂಗ್ರೆಸಿನ ಕರ್ತವ್ಯ. ಹಿಂದೆ ಹೇಳಿದ ಪ್ರತಿಜ್ಞೆಗಳನ್ನು ಕಾರ್ಯರೂಪಕ್ಕೆ ತರಲು ಕಾಂಗ್ರೆಸು ನಿಶ್ಚಯ ಮಾಡಿದೆ. ಅಸ್ಪೃಶ್ಯತಾ ನಿವಾರಣೆಯು ಅವರ ಪ್ರತಿಜ್ಞೆ. ಅದನ್ನು ಅವರು ಈಗ ಜಾರಿಗೆ ತಂದಿದ್ದಾರೆ.

ಜಾತಿ ವೈಷಮ್ಯವನ್ನು ಹರಡುತ್ತಾರೆ

ಕಾಂಗ್ರೆಸಿನ ವಿರೋಧಪಕ್ಷಗಳು ಯಾವವು? ಒಂದು ಪಕ್ಷವು ಜಾತಿವೈಷಮ್ಯವನ್ನು ಬೆಳೆಸಲು ಹುಟ್ಟಿತು. ಆದರೆ ಇಂದು ಕಾಂಗ್ರೆಸು ಎಲ್ಲಾ ಜಾತಿಯವರಿಗೂ ಉಚಿತವಾದ ಉದ್ಯೋಗಗಳನ್ನು ಕೊಡುತ್ತಿರುವಾಗ, ಆ ಪಕ್ಷದವರ ಉದ್ದೇಶವೇ ಆಗಿದ್ದ ಉದ್ಯೋಗ ಪ್ರಾಪ್ತಿಯ ವಿಷಯ ಉಳಿಯಲಿಲ್ಲ.

ಇಂದು ಶ್ರೀ ಇ. ರಾಮಸ್ವಾಮಿ ನಾಯ್ಕರು ತಿರಿಗೆ ಜಾತೀಯತೆಯ ಘೋಷಣೆಯೆತ್ತಿ, ವಿಷಬೀಜವನ್ನು ಬಿತ್ತುತಿದ್ದಾರೆ. ಇದರಿಂದ ಲೋಕಕ್ಕೆ ಯಾವ ಪ್ರಯೋಜನವಿಲ್ಲ. ಕಾಂಗ್ರೆಸು ಜಾತಿವೈಷಮ್ಯವನ್ನು ನಿರ್ನಾಮಗೊಳಿಸಲು ಸಿದ್ಧವಾಗಿದೆ.

ದೇಗುಲ ಪ್ರವೇಶ ಮತ್ತು ಜನಮತ

ಹರಿಜನರಿಗೆ ದೇಗುಲಪ್ರವೇಶವಾಗುವುದು ದೇವಾಲಯದ ಅಧಿಕಾರಿಗಳು ಮತ್ತು ಬಹುಮಂದಿ ಜನರು ಅಭಿಪ್ರಾಯಪಟ್ಟಲ್ಲಿ ಮಾತ್ರ. ಪರಂಪರೆಯಿಂದ ಹೀಗೆ ಕಷ್ಟಕ್ಕೆ ಗುರಿಯಾದವರನ್ನು ನಾವು ಸಮಾಧಾನಪಡಿಸಬೇಕು. ದೇವಾಲಯ ಪವಿತ್ರಸ್ಥಳ. ಬೆಂಕಿಯು ಒಣಗಿದ ಹಸಿಯ ಎಲ್ಲಾ ವಸ್ತುಗಳನ್ನು ಸುಡುತ್ತದೆ ಮತ್ತು ನಿರ್ಮಲವಾಗಿ ಜ್ವಲಿಸುತ್ತದೆ. ದೇವರ ಸನ್ನಿಧಿಯಲ್ಲಿಯೂ ಅಂತೇ, ದೇಗುಲವು ಯಾವುದರಿಂದಲೂ ಅಪವಿತ್ರವಾಗುವುದಿಲ್ಲ. ಶಾಸ್ತ್ರಗಳಲ್ಲಿಯೂ ಕೂಡಾ, ಎಲ್ಲ ಜಾತಿಯವರೂ ಪ್ರಸಾದವನ್ನು ಜಿಲ್ಲಿಯೇ ತಿನ್ನಬೇಕೆಂದೂ, ಅದಕ್ಕೆ ದೃಷ್ಟಿ ದೋಷವಿಲ್ಲವೆಂದೂ ತಿಳಿಸಿದೆ. ಹೇಗೆ ದೇವಾಲಯಗಳಲ್ಲಿ ಜಾತಿಭೇದವನ್ನು ಮರೆಯುತ್ತಿರುವಾಗ, ಹರಿಜನರನ್ನು ಮಾತ್ರ ದೂರವಿರಿಸುವುದಕ್ಕೆ ನ್ಯಾಯವಿಲ್ಲ. ಈ ಅಸಮತೆಯು ಅನ್ಯಾಯವೆಂದು ನಿರಾಧಾರವಾದುದೆಂದು ಕಾಂಗ್ರೆಸು ತಿಳಿದಿದೆ. ಮಾನವ ಹಕ್ಕು ಹರಿಜನರಿಗೆ ದೊರೆತಲ್ಲಿ, ಅದರಿಂದ ಯಾವ ದೋಷವೂ ಆಗುವ ಹಾಗಿಲ್ಲ. ನಮ್ಮ ದೇಶದ ಎಲ್ಲಾ ಪ್ರಸಿದ್ಧ ದೇವಾಲಯಗಳನ್ನೂ ಎಲ್ಲಾ ಜಾತಿಯವರ ಒಮ್ಮತ ಸಹಕಾರಗಳಿಂದ ಕಟ್ಟಲ್ಪಟ್ಟಾಗಿದೆ. ಹೀಗೆ ಹತ್ತು ಮಂದಿಯ ಸೊತ್ತಿನಲ್ಲಿ, ಹರಿಜನರಿಗೆ ಅಧಿಕಾರವಿಲ್ಲವೆಂದು ಯಾಕೆ ವಾದಿಸುವುದು? ಎಲ್ಲಿವರೆಗೆ ಈ ಅಸ್ಪೃಶ್ಯತೆಯೆಂಬ, ವಿಷಪೂರ್ಣ ಸರ್ಪವನ್ನು ಬಲಾತ್ಕಾರದಿಂದ ತಡೆಯಬಹುದು? ಸನಾತನಿಗಳು ಹೇಳುತ್ತಾರೆ ನಾವು ಈ ಸರ್ಪವನ್ನು ಬಂಧಿಸಿದ್ದೇವೆ ಎಂದು. ಆದರೆ ಕಾಂಗ್ರೆಸು ಹೇಳುತ್ತಿದೆ, ಅವರು ಬಂಧಿಸಿದ ಹಗ್ಗವು, ಒಂದು ದಿನ ಸಡಿಲಾಗಿ, ಅವರನ್ನು ಕಚ್ಚಿ, ಗಾಯಗೊಳಿಸದೆ ಇರದೆಂದು.

ಜಾತಿಯು ಜನ್ಮದಿಂದಲ್ಲ

'ಹಿಂದಕ್ಕೆ, ಜಾತಿಭೇದವು ಜನ್ಮದಿಂದ ಮಾಡಲಿಲ್ಲ, ಅವರವರ ಕರ್ಮದಿಂದ, ಈಗ ಆ ನಲೆಯು ತಪ್ಪಿದೆ. ತಿರುವಾಂಕೂರಿನಲ್ಲಿ ಮಹಾರಾಜರು ದೇವಾಲಯ ಪ್ರವೇಶಾಜ್ಞೆಯಿತ್ತಾಗ, ಯಾವ ಮಠಾಧಿಪತಿಯೂ ಆಕ್ಷೇಪ ಹೇಳಲಿಲ್ಲ. ಬಹುಶಃ ಮಹಾರಾಜರು ದೇವಾಂಶಸಂಭೂತರೆಂದೂ, ಸನಾತನ ಈ ಸುಧಾರಣೆಗೆ ಕಾರಣನಾದವನು ಬರಿಯ ಸಾಮಾನ್ಯ ಮನುಷ್ಯನೆಂದೂ ಅವರು ತಿಳಿದು ಹೀಗೆ ಮಾಡಿರಬಹುದು.

ಈ ಶಾಸನವು ವೈಸರಾಯರ ಅನುಮತಿಯನ್ನು ಪಡೆಯತಕ್ಕದ್ದಿದೆ. ಅದಕ್ಕೆ ವಿರೋಧವಾಗಿ ಈಗ ಅರ್ಜಿ ಮಾಡಲು ಸಹಿಯನ್ನು ಸಂಪಾದಿಸುತ್ತಾರೆ. ಈ ಸಹಿಗಳ ರಾಶಿಯಿಂದ ನಮ್ಮಲ್ಲಿ ಎಷ್ಟು ಹುಚ್ಚರಿದ್ದಾರೆಂಬ ಗಣನೆಯಾದೀತು. ಮಿಸ್ ಮೇಯೋ ನಮ್ಮ ವಿಷಯ ಬರೆದಾಗ ಜನರು ಅದಕ್ಕೆ ಆಕ್ಷೇಪ ಮಾಡಿದರೆ? ಆದರೆ ಈ ಸಹಿಗಳು, ಮಿಸ್ ಮೇಯೋ ಬರೆದಷ್ಟು ಸಹಿಯೆಂಬುದನ್ನು ರುಜುಪಡಿಸುವುವು."

ಸಮತಾವಾದವು ಪ್ರಯೋಜನವಿಲ್ಲ

ಕಾಂಗ್ರೆಸಿನ ಒಳಭೇದಗಳ ಕುರಿತು ಹೀಗೆಂದರು —

"ಸಮತಾವಾದಿಗಳು" ಕಾಂಗ್ರೆಸಿನಲ್ಲಿ ಕೆಲವರು ಮಾತ್ರ. ಸಮತಾವಾದವು ಒಳ್ಳೆಯದೋ ಕೆಟ್ಟದೋ ಅದು ಈಗ ಪ್ರಯೋಜನವಿಲ್ಲ. ಸಮತಾವಾದಿಗಳು ದೇಶದ ದಾರಿದ್ರ್ಯ ಪರಿಹಾರದ ನಿವಾರಣೋಪಾಯವನ್ನು ಮಾಡಲು ಒಪ್ಪಿಸಿದರು. ಆದರೆ ಕಾಂಗ್ರೆಸು ಏನು ಮಾಡುತ್ತಿದೆ? ದೊಡ್ಡವರು, ಐಶ್ವರ್ಯವಂತರು ತೆರಿಗೆ ತೆತ್ತರೆ ಬಡವರ ಉದ್ಧಾರವಾದೀತೆಂದು ಅವರು ಹೇಳುವುದು, ಕಾಂಗ್ರೆಸು ಅದನ್ನೇ ಮಾಡಿದೆ. ನಾಲ್ಕು ಕೋಟಿ ರೂಪಾಯಿಗಳ ತೆರಿಗೆಯು ಬಡವರಿಂದ ಬರುತಿತ್ತು. ಹೊಸ ತೆರಿಗೆಯಿಂದ, ಬಡವರ ತಲೆಯ ಭಾರವು ಧನಿಕರ ಮೇಲೆ ಬಿದ್ದಿದೆ. ಒಬ್ಬ ಬಡ ಮದ್ಯಪಾಯಿಯು ಕೊಡುತಿದ್ದ ಹಣವನ್ನು ಈಗ ಅವನಾಗಲಿ ವ್ಯಾಪಾರಿಯಾಗಲಿ ತೆರಬೇಕಾಗಿಲ್ಲ. ಯಾರು ಹೊಗೆಸೊಪ್ಪು ಉಪಯೋಗಿಸುತ್ತಾನೋ ಅವನು ತೆರಬೇಕು. ಜನರು ತಿಳಿದಂತೆ, ತೆರಿಗೆ ಹೊಗೆಸೊಪ್ಪಿನ ಮೇಲೆ ಅಲ್ಲ, ಬೀಡಿ ಸಿಗರೇಟುಗಳ ಮೇಲೆ. ಮಾರಾಟದ ತೆರಿಗೆಯಿಂದ ವ್ಯಾಪಾರಿಗಳು ಅನಾವಶ್ಯಕ ಹೆದರಿದ್ದಾರೆ. ಯಾರಿಗೆ ಲೆಕ್ಕವಿಡಲು ಗೊತ್ತಿಲ್ಲವೋ ಅವರು ಲೆಕ್ಕವಿಡಲು ಕಲಿತಂತಾಗುತ್ತದೆ. ಲೆಕ್ಕವಿರುವುದೇ ವ್ಯಾಪಾರದ ಅಭಿವೃದ್ಧಿಯ ಮೂಲ. ನಾನು ಹೇಳಿದ್ದು ರುಚಿಯಾಗದಿರಬಹುದು. ಆದರೆ ಕಹಿಮದ್ದಾದರೂ ರೋಗವನ್ನು ಗುಣಪಡಿಸಿದರೆ ವೈದ್ಯರಿಗೆ ತೃಪ್ತಿಯಾಗುವುದು.

ಹೊಸ ತೆರಿಗೆಗಳು

"ಹೊಸ ತೆರಿಗೆಯನ್ನು ತೆರಲು ಮನಸ್ಸಿಲ್ಲದರೆ ಮಾತ್ರ ಮದ್ಯಪಾನ ನಿಷೇಧವು ಸಾಧ್ಯವಾದೀತು. ಯಾರ ಅದಕ್ಕೆ ಸಮ್ಮತಿಸುವುದಿಲ್ಲವೋ ಅವರು ಮದ್ಯಪಾನ ನಿಷೇಧವನ್ನು ಒಪ್ಪುವುದಿಲ್ಲವೆಂದರ್ಥ. ಕೆಲವರು ತಿಳಿದಿದ್ದಾರೆ, ಕಾಂಗ್ರೆಸನ್ನು ಬ್ರಿಟಿಷರು ಅಧಿಕಾರದಿಂದ ತೆಗೆದು ಹಾಕುವರು, ಆ ಮೇಲೆ ಈ ಕಾನೂನೆಲ್ಲಾ ಹೋದೀತೆಂದು. ಅದು ತಪ್ಪು. ಕಾಂಗ್ರೆಸು ಅಧಿಕಾರದಿಂದ ಹೋಗಬಹುದು. ನಾವು ಅಧಿಕಾರದಿಂದ ಚ್ಯುತರಾಗಬಹುದು. ಆದರೆ ಮಧ್ಯ ... ದೇವಾಲಯದ ಬಾಗಿಲು ... ಹರಿಜನರಿಗೆ ಮುಚ್ಚಲಾರದು.

... ಅಭಿಮಾನದ ... ಇದೇ ... ದಲ್ಲಿ ... ಪ್ರೀತಿಯ ... ಅದನ್ನು ವಿರೋಧಿಸಿದವರು ... ಮೂರ್ತಿಗಳ ... ದೂಳಿಯಂತೆ ಜನರ ... ಹುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

THE
BANK OF MANGALORE LTD.,
MANGALORE
ESTD 1931

Branches -
Panemangalore, Mudabidri & Padubidri.

Fixed Deposits will be received at following rates of interest

For 3 months		3½%
" 6 "		4%
" 12 "		5%
" 24 "	& upwards	5½%

Interest Payable Quarterly.

Savings Bank deposit 3½% on daily balances.

All kinds of bankingbusiness transacted

ದ್ವೇಷ ಸಾಧಿಸುವ ಉದ್ದೇಶವಿರಲಿಲ್ಲ

ಬೋಸರ ಶಿಸ್ತು ನಿರ್ಣಯದ ಕುರಿತು ಗಾಂಧಿಜಿಯವರ ಹೇಳಿಕೆ

ಅಹಿಂಸೆಯ ಸಾಧನೆಗಾಗಿಯೇ ನನ್ನ ಜೀವಿತವು

ವೈರಸಾಧನೆಯು ಉದ್ದೇಶವಿಲ್ಲ

ಗಾಂಧಿಜಿಯವರು ಬೋಸರ ಮೇಲೆ ವರ್ಕಿಂಗ್ ಕಮಿಟಿಯು ಕೈಕೊಂಡ ಕಾರ್ಯಕ್ರಮದ ಕುರಿತೂ ಯುದ್ಧ ರಂಗದ ಕುರಿತೂ ಈ ಪ್ರಕಟಣೆ ಹೊರಡಿಸಿದ್ದಾರೆ.

'ಬೋಸರ ಮೇಲೆ, ವರ್ಕಿಂಗ್ ಕಮಿಟಿಯು ಮಾಡಿದ ಶಿಸ್ತು ಜಾರಿಯ ನಿರ್ಣಯದ ಕುರಿತು ನನಗೂ, ರಾಷ್ಟ್ರಪತಿ ರಾಜೇಂದ್ರ ಬಾಬುಗಳಿಗೂ, ಅನೇಕ ದೂಷ್ಯ ಪತ್ರಗಳು ಬಂದಿವೆ. ಈ ವಿಷಯದಲ್ಲಿ, ನನ್ನ ಸ್ಥಿತಿಯನ್ನು ಸಾರ್ವಜನಿಕರಿಗೆ ಸ್ಪಷ್ಟಗೊಳಿಸುವುದು ನನ್ನ ಕರ್ತವ್ಯವಾಗಿದೆ. ಆ ನಿರ್ಣಯದ ಮೂಲ ಪ್ರತಿಯನ್ನು ನಾನೇ ಮಾಡಿದ್ದು. ಬೋಸರ ಮೇಲೆ ಶಿಸ್ತು ಜಾರಿಮಾಡದಿದ್ದರೆ ವರ್ಕಿಂಗ್ ಕಮಿಟಿಯವರು ತಮ್ಮ ಕರ್ತವ್ಯದಿಂದ ಹಿಂಜರಿದಂತಾಗುತ್ತಿತ್ತು. ಇದಕ್ಕೆ ತುಂಬಾ ನಿಷೇಧಗಳಿರಬಹುದೆಂದೂ ಅವರು ತಿಳಿದಿದ್ದರು. ಆದರೂ ಹಾಗೆ ಮಾಡದಿದ್ದರೆ, ಕಾಂಗ್ರೆಸು ಕೆಲಸಗಾರರು ಶಿಸ್ತನ್ನು ಕಾಪಾಡುವಂತೆ ಮಾಡುವ ತಮ್ಮ ಪ್ರಾಥಮಿಕ ಕರ್ತವ್ಯದಿಂದ, ಅವರು ಚ್ಯುತರಾಗುತ್ತಿದ್ದರು.

'ಬೋಸರಾದರೂ, ಇಂಥ ಶಿಸ್ತು ಜ್ಯಾರಿಯನ್ನು ಆಹ್ವಾನಿಸಿದ್ದರು. ಯಾವುದಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಾದರೆ ಅದು ತನ್ನ ಮೇಲೆ ಆಗಬೇಕೆಂದು ಅವರು ಎದೆ ತಟ್ಟಿ ಹೇಳಿದ್ದರು. ನನ್ನ ಅಭಿಪ್ರಾಯದಂತೆ, ವರ್ಕಿಂಗ್ ಕಮಿಟಿಯ ನಿರ್ಣಯವು, ಸಾಧ್ಯವಾದಷ್ಟು ಕಡಿಮೆ ತರದ ಶಿಕ್ಷೆಯಾಗಿದೆ. ಇದರಲ್ಲಿ ದ್ವೇಷಸಾಧನೆಯ ಉದ್ದೇಶವು ಏನೂ ಇರಲಿಲ್ಲ.

'ಬೋಸರ ಸ್ಥಾನವನ್ನು ವಿಚಾರಿಸಿದರೆ, ದ್ವೇಷಸಾಧನೆಯೆಂಬ ಮಾತಿಗೆ ಯಾವ ಶಕ್ತಿಯೂ ಇಲ್ಲ. ಏಕೆಂದರೆ, ಅವರಿಗೆ ತನ್ನ ಮೇಲೆ ಜನತೆಗೆ ಪ್ರೀತಿಯು ಬಹಳ ಇದೆಯೆಂದು ತಿಳಿದುದ್ದರಿಂದ, ವರ್ಕಿಂಗ್ ಕಮಿಟಿಯು ಅವರನ್ನು ಏನೂ ಮಾಡಲಾರದು ಎಂಬ ಧೈರ್ಯವಿತ್ತು. ಅವರು, ವರ್ಕಿಂಗ್ ಕಮಿಟಿಗೆ ಎದುರು ಯುದ್ಧಮಾಡಿದರು. ವರ್ಕಿಂಗ್ ಕಮಿಟಿ ಮತ್ತು ಬೋಸರ ಈ ವಿಷಯಗಳಲ್ಲಿ ನ್ಯಾಯಾನ್ಯಾಯವನ್ನು ನಿರ್ಣಯಿಸಲು, ಸಾರ್ವಜನಿಕರ ಮತ್ತು ಕಾಂಗ್ರೆಸಿನ ಕೆಲಸಗಾರರ ವಶ ಬಿಟ್ಟು, ವರ್ಕಿಂಗ್ ಕಮಿಟಿಯವರು ತಮ್ಮ ಕರ್ತವ್ಯವನ್ನು ಮಾಡಿದ್ದಾರೆ.

'ಬೋಸರಂತಹ ಪರಿಸ್ಥಿತಿಯಲ್ಲಿ ನಾನು ಇದ್ದಿದ್ದರೆ, ಅವರು ಮಾಡಿದಂತೆಯೇ ಮಾಡುತ್ತಿದ್ದೆಯೆಂದು ಹಲವರು ಸೂಚಿಸಿದ್ದಾರೆ. ನನ್ನ ಜೀವಮಾನದಲ್ಲಿ, ನಾನು ಯಾವ ಸಂಸ್ಥೆಗೆ ವಿಧೇಯನಾಗಬೇಕಾಗಿದ್ದೇನೋ, ಅದಕ್ಕೆ ವಿರುದ್ಧ ನಿಂತಿರುವಂತಹ ಒಂದು ಸಂದರ್ಭವೂ ಇಲ್ಲ; ಸಂಸ್ಥೆಯಿಂದ ಹೊರ ಬಂದು ಅದಕ್ಕೆ ವಿರುದ್ಧ ಮಾಡುವುದಾದರೂ ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅದೇ ತನ್ನ ೧೯೨೦ರ ಅಹಿಂಸಾ ಸತ್ಯಾಗ್ರಹದ ರೂಪ ಆಗಿದೆ.

ಬೋಸರಿಗೆ ಇರುವ ಮುಂದಿನ ಹಾದಿ

'ನಾನು ಇದನ್ನು ವರ್ಕಿಂಗ್ ಕಮಿಟಿಯ ನಿರ್ಣಯವು ಸರಿಯೆಂದು ಹೇಳಲೂ, ಬೋಸರು ಮತ್ತು ಅವರ ಅನುಯಾಯಿಗಳು ಸುಮ್ಮಗಿರಬೇಕೆಂದು ತಿಳಿಸಲೂ ಬರೆಯುವುದಲ್ಲ. ಅವರು ಅಖಿಲ ಭಾರತ ಕಾಂಗ್ರೆಸು ಕಮಿಟಿಗೆ, ಈ ನಿರ್ಣಯದ ವಿರುದ್ಧವಾಗಿ ಮನವಿಮಾಡಲು ಹಕ್ಕುಳ್ಳವರಾಗಿದ್ದಾರೆ. ಅಲ್ಲಿಯೂ ಅವರು ಸೋತುಹೋದರೆ, ತಮ್ಮ ವಾದವನ್ನು ಅವರು ಕಾಂಗ್ರೆಸಿನ ವಾರ್ಷಿಕಾಧಿವೇಶನದಲ್ಲಿ ಮುಂದಿಡಬಹುದು. ಇದಲ್ಲಾ ಕೆಲಸಗಳನ್ನೂ ವರ್ಕಿಂಗ್ ಕಮಿಟಿಯ ಸದಸ್ಯರ ಮೇಲೆ ಕೆಟ್ಟತನದ ದುರಭಿಪ್ರಾಯಗಳನ್ನು ಬಿಟ್ಟೇ ಮಾಡಬಹುದು. ವರ್ಕಿಂಗ್ ಕಮಿಟಿಯವರು, ತಪ್ಪು ನಿರ್ಣಯ ಮಾಡಿದರೆಂದು, ಯಾಕೆ ತಿಳಿದು ತೃಪ್ತಿಗೊಳ್ಳಬಾರದು? ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಬಹುಮಂದಿ ಸದಸ್ಯರು, ಈ ನಿರ್ಣಯವು ತಪ್ಪೆಂದು ಬರಹ ಮೂಲಕ ಸೂಚಿಸಿದಲ್ಲಿ, ಇಂದಿನ ವರ್ಕಿಂಗ್ ಕಮಿಟಿಯವರೂ ಸಂತೋಷದಿಂದ ರಾಜಿನಾಮೆ ಕೊಡುವರು.

ಕೆಟ್ಟ ಭಾವನೆಗಳನ್ನು ಇಟ್ಟುಕೊಳ್ಳಬಾರದು

"ಶತಮಾನಗಳ ತಾಳ್ಮೆ ಸ್ವಾರ್ಥತ್ಯಾಗಗಳಿಂದ, ಕಟ್ಟಿಸಿದ ಕಾಂಗ್ರೆಸಿನ ಕಟ್ಟಡದ ರಚನೆಯನ್ನು, ಇಂದು ಅದರಲ್ಲಿರುವ ಸದಸ್ಯರು ಅನ್ಯೋನ್ಯ ದ್ವೇಷಭಾವನೆ ಇಟ್ಟುಕೊಳ್ಳುವುದರಿಂದ, ವಿನಾಶಮಾಡುವಂತೆ ಆಗುವುದು. ಏನಾದರೂ ದುರುದ್ದೇಶದಿಂದ ಮಾಡಲಾಗಿದೆಯೆಂದು ಸಂಶಯ ಬಂದರೂ ಕೂಡಾ, ಸಂಪೂರ್ಣ ಪರೀಕ್ಷೆ ಮಾಡಿ ರುಜುಮಾಡುವ ತನಕ, ಆ ಕುರಿತು ಮೌನವಾಗಿರುವುದು ಲೇಸು. ಸಾರ್ವಜನಿಕ ಅಭಿಪ್ರಾಯದ ಮುಖಂಡರು, ಯಾವುದಾದರೂ ಘಟನೆಗಳನ್ನು ಮತ್ತು ನಿರ್ಣಯಗಳನ್ನು, ಅವರವರ ಯೋಗ್ಯತೆಗನುಗುಣವಾಗಿ ನಿರ್ಣಯ ಹೇಳುವುದು, ಸಾರ್ವಜನಿಕರನ್ನು ತರಬೇತಿ ಮಾಡುವ ದೃಷ್ಟಿಯಿಂದ ಅವಶ್ಯವಿದೆ.

ಯುದ್ಧದ ನಿರ್ಣಯದಲ್ಲಿ ಸೋಲು

'ಯುದ್ಧದ ನಿರ್ಣಯದ ವಿಷಯವಾಗಿ ನಾನು ಸಂಪೂರ್ಣ ಅಪಜಯಹೊಂದಿದ್ದೇನೆ, ನಾನು ಮತ್ತು ಪಂಡಿತ ನೆಹರುಗಳು ಈ ಕುರಿತು ನಿರ್ಣಯವನ್ನು ತಯಾರು ಮಾಡಲು ಆಮಂತ್ರಿತರಾಗಿದ್ದೆವು. ನಾನು ನನ್ನ ಮೂಲಪ್ರತಿಯ ವಿಷಯ ಅಭಿಮಾನದಿಂದಿದ್ದೆ. ಆದರೆ ನನ್ನ ಅಭಿಮಾನವು ಧ್ವಂಸವಾಯಿತು. ನನ್ನ ನಿರ್ಣಯದ ಕುರಿತು ವಾದಿಸಿ ಒತ್ತಾಯಪಡಿಸದಿದ್ದಲ್ಲಿ ಅದು ಮಂಜೂರಾಗಲಿಕ್ಕಿಲ್ಲವೆಂದು ತಿಳಿದೆ. ಆದರೆ ಹಾಗೆ ಒತ್ತಾಯಮಾಡಲು ನನಗೆ ಇಷ್ಟವಿರಲಿಲ್ಲ. ಪಂಡಿತರು ತಯಾರಿಸಿದ ನಿರ್ಣಯವನ್ನು ನಾವು ಕೇಳಿದೆವು, ಅದು ಜನತೆಯ ಮತ್ತು ಇಡೀ ವರ್ಕಿಂಗ್ ಕಮಿಟಿಯ ಅಭಿಪ್ರಾಯಕ್ಕೆ ಅನುಗುಣವಾಗಿತ್ತೆಂದು ನಾನು ಕೂಡಲೇ ಒಪ್ಪಿಕೊಂಡೆ. ನಾನು ತಯಾರಿಸಿದ ನಿರ್ಣಯವು ಸಂಪೂರ್ಣ ಅಹಿಂಸೆಯ ಮೂಲವಾಗಿತ್ತು. ಕಾಂಗ್ರೆಸು ಹೃತ್ಪೂರ್ವಕವಾಗಿ ತನ್ನ ಧ್ಯೇಯವೆಂದಾದರೂ, ಅಹಿಂಸೆಯನ್ನು ಒಪ್ಪಿಕೊಂಡಿದ್ದರೆ, ಆಗ ಅದರ ಪರೀಕ್ಷಾ ಕಾಲವಾಗಿತ್ತು. ಆದರೆ, ಕಾಂಗ್ರೆಸಿನಲ್ಲಿರುವ ಬೇರೆ ಬೇರೆ ವ್ಯಕ್ತಿಗಳ ಅಭಿಪ್ರಾಯವುಳ್ಳ ಕೆಲವರು ಇದು ಯೋಗ್ಯವಾದ ವಿಷಯವೆಂದು ನಂಬುವುದಿಲ್ಲ.

ಅಹಿಂಸೆ ಮತ್ತು ಕಾಂಗ್ರೆಸು

'ಯಾರು ಅಧಿಕಾರ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಮಾತ್ರ ಕಾಂಗ್ರೆಸು, ಸರಕಾರದೊಡನೆ ವಿರುದ್ಧ ಹೋರಾಡುವ ಸಂಸ್ಥೆಯೆಂದು ತಿಳಿಯುತ್ತಾರೋ, ಅವರಿಗೆ ಇದು ಸರಿಯಾಗಿರಬಹುದು. ಆಗಾದರೆ ಕಾಂಗ್ರೆಸು ಜಗತ್ತಿಗೆ ಸಾರತಕ್ಕ ಅಹಿಂಸಾ ಸಂದೇಶವು ಉಳಿಯಲಿಲ್ಲ. ಕಾಂಗ್ರೆಸು, ಅಂತಹ ಸಂದೇಶವನ್ನು ಸಾರಲಿದೆಯೆಂದು ನಾನು ಸಂತೋಷದಿಂದ ನಂಬುತ್ತೇನೆ. ಈ ಎರಡು ನಿರ್ಣಯಗಳ ಪರಿಸಮಾಪ್ತಿಗೆ, ತೀವ್ರ ವ್ಯತ್ಯಾಸಗಳು ಆಗಬೇಕಾದ ಅವಶ್ಯವಿರಲಿಲ್ಲ. ಆದರೆ ಅಭಿಪ್ರಾಯ ಶಕ್ತಿಯು ಬೇರೆಯಿದ್ದು, ಅದೇ ಪರಿಸಮಾಪ್ತಿಯು ಬೇರೆ ಬೇರೆ ಸಂದರ್ಭದಲ್ಲಿ ಬೇರೆಬೇರೆಯಾಗಿ ಅನ್ವಯಿಸಬಹುದು.

'ಹಿಂದೂದೇಶದಲ್ಲಿ ಇಂದು ಹಿಂಸೆಯು ನಡೆಯುತ್ತಾ ಇರುವುದನ್ನು ಕಂಡರೆ, ಕಾಂಗ್ರೆಸು ಸರಕಾರಗಳು ಸೈನಿಕರ ಮತ್ತು ಪೋಲೀಸರ ಸಹಾಯವನ್ನು ಪಡೆಯಬೇಕಾದ ಸಂಭವಗಳನ್ನು ವಿಚಾರಿಸಿದರೆ, ಜಗತ್ತಿಗೆ ಅಹಿಂಸೆಯ ಸಂದೇಶವೆಂಬ ಪ್ರಕಟಣೆಯು, ಒಂದು ಕೇವಲ ಪ್ರಹಸನವಾಗಿ ಕಾಣಬಹುದು. ಇದರಿಂದ ಹಿಂದೂದೇಶದಲ್ಲಾಗಲಿ, ಜಗತ್ತಿನಲ್ಲಾಗಲಿ ಯಾವ ಬೆಲೆಯೂ ಸಿಗಲಾರದು. ಆದರೂ ನನ್ನ ಹೃದಯದ ಮಟ್ಟಿಗೆ, ಸತ್ಯವಾಗಿರುವ ಸಲುವಾಗಿ, ನಾನು ತಯಾರಿಸಿದ್ದ ನಿರ್ಣಯಕ್ಕಿಂತ ಮೇಲೆ ಬೇರೆ ನಿರ್ಣಯಗಳನ್ನು ತಯಾರಿಸಲು ಅಸಮರ್ಥನಾದೆ. ನನ್ನ ದರಾವಿನ ಅದೃಷ್ಟವು, ಕಾಂಗ್ರೆಸಿನ ಅಧಿಕಾರದ ಸಂಬಂಧದಿಂದ ನನ್ನನ್ನು ದೂರ ನಿಲ್ಲುವಂತೆ ಕಲಿಸಿತು.

ಅಹಿಂಸೆಯ ಸಾಧನೆಗಾಗಿ

'ನಾನು ವರ್ಕಿಂಗ್ ಕಮಿಟಿಯ ಅಧಿವೇಶನಕ್ಕೆ ಹೋದದ್ದು, ಅಲ್ಲಿನ ದರಾವು ಮತ್ತು ಅವರ ತತ್ವಗಳಲ್ಲಿ ನಾನೂ ಸೇರಿಕೊಳ್ಳಬೇಕೆಂಬ ಉದ್ದೇಶದಿಂದಲ್ಲ. ನಾನು ಅಲ್ಲಿಗೆ ಹೋದದ್ದು, ನನ್ನ ಅಹಿಂಸಾ ತತ್ವದ ಸಾಧನೆಗಾಗಿ! ಅವರು ನನ್ನನ್ನು ಆಮಂತ್ರಿಸುವ ವರೆಗೆ ನಾನು, ಅವರು ತಮ್ಮ ಕಾರ್ಯಗಳಲ್ಲಿ ಅಹಿಂಸೆಯನ್ನು ಆಚರಿಸುವಂತೆಯೂ, ಆ ಮೂ

[೨೬ನೆ ಪುಟವನ್ನು ನೋಡಿರಿ]

ಸರದಾರ ಭವನ Sirdar Bhavan
ಫೆಲಿಕ್ಸ್‌ಪೈ ಬಜಾರ್‌–ಮಂಗಳೂರು
ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿ ತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೆ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ಬಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ.
Propriter— H. R. Rao,
Bangalore Guit Emporuim Madras.

ಭಾರತದ ನಿರ್ಧಾರಕ್ಕೆ ಬ್ರಿಟನು ತಲೆಬಾಗಿಸಬೇಕು!

ಭಾರತೀಯರಿಗೆ ಬ್ರಿಟಿಷರ ಯೋಜನೆ ಬೇಡ

ರಾಷ್ಟ್ರೀಯ ಜಾಗೃತಿಯು ಕೆರಳಿದೆ

ಭಾರತದ ಕುರಿತು ಜರ್ಮನಿ ಪತ್ರಿಕೆಯ ಹೇಳಿಕೆ

ಭಾರತದ ಎಲ್ಲಾ ಪ್ರಾಂತಗಳ ಮತ್ತು ಎಲ್ಲಾ ನರೇಂದ್ರ ಮಂಡಲಗಳ ಸ್ವತಂತ್ರ ಸಂಯುಕ್ತ ರಾಜ್ಯಘಟನೆಯು ಆಗತ್ಯವಿದ್ದು ಅವಶ್ಯವಿದೆ; ಅಲ್ಲದೆ ಇಂದಿನಂತೆ ಬ್ರಿಟನಿನ ಕೈಯೊಳಗಿರುವ ಸಂಯುಕ್ತ ರಾಜ್ಯಘಟನೆಯು ಭಾರತದ ತಲೆಭಾರವಾಗಿ ಹೊರಿಸಲು ಸಾಧ್ಯವಿಲ್ಲವೆಂದು ಜರ್ಮನಿಯ ಪತ್ರಿಕೆಯೊಂದು ಬರೆಯುತ್ತದೆ. ಆ ವಿಷಯವಾಗಿ ಈ ರೀತಿ ಅದು ಸಮರ್ಥಿಸುತ್ತಿದೆ.

ಭಾರತವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಂಧನದಲ್ಲಿದೆ. ಆದರೆ ೧೯೩೫ನೆ ಹೊಸ ಘಟನೆಯಂತೆ, ಇಂದು ಒಟ್ಟು ಹನ್ನೊಂದು ಪ್ರಾಂತಗಳಲ್ಲಿ ಎಂಟು ಪ್ರಾಂತಗಳ ಆಡಳಿತೆಯನ್ನು ಕಾಂಗ್ರೆಸು ಮಂತ್ರಿಮಂಡಲಗಳು ತೆಕ್ಕೊಂಡು, ಅತ್ಯಂತ ಸಮರ್ಪಕವಾಗಿ ಕಾರ್ಯವನ್ನು ನಡೆಸುತ್ತಿದ್ದಾರೆ. ಅನೇಕ ಸಲ, ಪ್ರಾಂತದ ಗವರ್ನರರೇ, ಕಾಂಗ್ರೆಸಿನ ಆಡಳಿತವನ್ನು ಪ್ರಶಂಸಿಸಿರುತ್ತಾರೆ.

ಆದರೆ ಭಾರತದ ನಿಕಟ ಸಮಸ್ಯೆಯು ಇನ್ನು ಮುಂದೆ ಬರಲಿದೆ. ಅದು ಹೊಸ ಸುಧಾರಣೆಯ ಎರಡನೆಯ ಭಾಗವಾದ ಸಂಯುಕ್ತ ರಾಜ್ಯಘಟನೆಯು ಜ್ಯಾರಿಗೆ ಬಂದಾಗ ಆಗುವುದು. ಈ ವಿಷಯದಲ್ಲಿ ಬ್ರಿಟಿಷ್ ಸರಕಾರ ಮತ್ತು ಕಾಂಗ್ರೆಸುಗಳೊಳಗೆ ತೀವ್ರ ಮತಭೇದವಿದೆ.

ಅಹಿಂಸೆಯು ಮಹಾ ಪ್ರಭಾವ

ಭಾರತದ ೪೦೦,೦೦೦,೦೦೦ ಮಂದಿ ಜನರ ಮೇಲೆ ಬ್ರಿಟನು ತನ್ನ ಈ ಬಲೆಯನ್ನು ಬೀಸಿರುತ್ತದೆ. ಗಾಂಧಿಜೀಯವರ ಧೀರ ಮುಂದಾಳುತನದಲ್ಲಿ, ಅಭಿಮಾನಿಗಳಾದ ಭಾರತೀಯರು, ವಿದೇಶಿಯರ ಆಡಳಿತೆಯ ನೊಗದ ಭಾರದಿಂದ ತಮ್ಮ ದೇಶವನ್ನು ಸ್ವತಂತ್ರಮಾಡಲು ಸೊಂಟಕಟ್ಟಿದ್ದಾರೆ. ಎಲ್ಲಾ ಧಾರ್ಮಿಕ ರಾಜಕೀಯ ಸಾಂಸ್ಕೃತಿಕ ಪಂಗಡಗಳೂ ಇಂದಿನ ಸಂಯುಕ್ತ ರಾಜ್ಯಘಟನೆಯನ್ನು ಖಂಡಿತ ವಿರೋಧಿಸುತ್ತದೆ. ಅಹಿಂಸೆಯ ಮೂಲದಾಗಿ ಆರಂಭವಾದ, ಚಾರಿತ್ರಿಕ ಪ್ರಾಧಾನ್ಯತೆಯನ್ನು ಪಡೆದ, ಭಾರತೀಯರ ರಾಷ್ಟ್ರ ಆಂದೋಲನವು ತೀವ್ರ ಪರಿಣಾಮಕಾರಿಯಾಗಿದೆ. ಪಾಶವಿರದ ಶಕ್ತಿಯನ್ನು ತಗ್ಗಿಸಲು ಅದು ಮಹತ್ವವಾದ ಸಾಧನವಾಗಿದೆ. ಆದರೆ ಈ ಅಹಿಂಸೆಯ ಅಸ್ತ್ರವನ್ನು ಉಪಯೋಗಿಸುವವನು, ಯುದ್ಧವು ಮುಗಿವ ವರೆಗೆ ಧೀರನಾಗಿರಬೇಕು. ಆತ್ಮ ಶಕ್ತಿಯನ್ನು ಪಡೆವುದು ಅವಶ್ಯವಾಗಿದೆ. ಅದನ್ನು ಹೊಂದಿದ ಮಾನವನು ಶತ್ರುಭಯದಿಂದ ವಿಮುಕ್ತನಾಗುವನು.

ಸೈನ್ಯದ ಸ್ವಾಧೀನತೆ

'ಸಂಯುಕ್ತ ರಾಜ್ಯ ಘಟನೆ ಮಾತ್ರವಲ್ಲದೆ, ಇನ್ನೂ ಅನೇಕ ವಿಷಯಗಳಲ್ಲಿ ಭಾರತೀಯರು ಕ್ರಾಂತಿಯೆದ್ದಿರುವರು. ಇದರ ಪರಿಣಾಮವಾಗಿ, ಬ್ರಿಟಿಷರು ಬೇಗನೇ ಭಾರತದಿಂದ ಹೊರಹೋಗಬೇಕಾಗುವುದು. ಭಾರತದಿಂದ ಸೈನ್ಯದ ಮೇಲೆ ಕಾಂಗ್ರೆಸು ಅಧಿಕಾರಮಾಡಲು ಅಪೇಕ್ಷಿಸುತ್ತದೆ. ಭಾರತೀಯರಿಗೆ ಪ್ರಪಂಚದ ಯಾವ ರಾಜ್ಯಗಳ ಮೇಲೂ ದ್ವೇಷವಿಲ್ಲ. ಆದರಂತೆ, ಬರುವ ಯುದ್ಧದಲ್ಲಿ, ಬ್ರಿಟನಿಗಾಗಿ, ಯುದ್ಧಮಾಡಿ, ಇನ್ನೊಮ್ಮೆ ನಿರಾಶೆಯನ್ನು ಹೊಂದಲು ಅವರು ಇಷ್ಟಪಡುವುದಿಲ್ಲ.

'ಭಾರತದ ರಾಜನೀತಿಜ್ಞರು, ಬ್ರಿಟಿಷರ ವ್ಯಾಪಾರದ ಸುಲಿಗೆಯನ್ನೂ ತೀವ್ರ ವಿರೋಧಿಸುತ್ತಾರೆ. ಬ್ರಿಟಿಷರ ಭಂಡವಾಳವು ಹಿಂದೂದೇಶದಲ್ಲಿ ಬಹಳವಾಗಿ ಪಸರಿಸಿದೆ. ಬಂಗಾರದ ರಫ್ತಿನ ವಿಷಯವೂ ಹಾಗೆ. ಇದರ ಪರಿಣಾಮವಾಗಿ ಹಿಂದೂದೇಶದಲ್ಲಿ, ಔದ್ಯೋಗಿಕ ಕ್ರಾಂತಿಯುಂಟಾಗಿದೆ.

ಸಾಮರ್ಥ್ಯವಿಲ್ಲ

'ಜಗತ್ತಿನ ಮಹಾ ರಾಷ್ಟ್ರವೊಂದು, ಸಾಮರ್ಥ್ಯವನ್ನು ಕಳಕೊಂಡು ಅವನತಿಗಿಳಿದಿದೆ. ಹಿಂದೆ ಮಹಾ ಸಾಮ್ರಾಜ್ಯಕಟ್ಟಿದ, ಬ್ರಿಟನಿನ ರಾಜಕೀಯ ಜ್ಞಾನವು ಇದು ಪಾಶವಿಕ ಸುಲಿಗೆಗೆ ಮಾತ್ರ ಉಪಯೋಗಿಸಲ್ಪಡುತ್ತದೆ. ಹೀಗಿರಲು, ದೊಡ್ಡ ರಾಜಕೀಯ ಮುಖಂಡರು ಎಲ್ಲಾ ಕಡೆಯಲ್ಲಿಯೂ ಹುಟ್ಟಿ ರಾಷ್ಟ್ರಿಯ ಜಾಗೃತಿಯನ್ನು ಹುಟ್ಟಿಸುತ್ತಿರುವಾಗ, ಖಂಡಿತವಾಗಿಯೂ ಬ್ರಿಟನಿನ ಈ ನೀತಿಯು ನಡೆಯಲಾರದು. ಭಾರತ ನಿರ್ಧಾರಕ್ಕೆ ಬ್ರಿಟನು, ತಲೆಬಾಗಿಸಲೇಬೇಕು.

ದ್ವೇಷ ಸಾಧಿಸುವ ಉದ್ದೇಶವಿರಲಿಲ್ಲ

[೨೫ನೇ ಪುಟದಿಂದ]

ಲಕ, ಕಾಂಗ್ರೆಸಿನವರು ಅಹಿಂಸೆಯನ್ನು ಆಚರಿಸುವಂತೆಯೂ ಮಾಡುವ ಸಲುವಾಗಿ ಹೋಗುವೆನು. ನಾವೆಲ್ಲರೂ ಒಂದೇ ಗುರಿಯನ್ನು ಸಾಧಿಸುತ್ತೇವೆ. ಅವರೆಲ್ಲರೂ, ಸಾಧ್ಯವಾದರೆ, ಕಡೆಯ ತನಕ ನನ್ನೊಡನೆ ಬರಬಹುದು; ಆದರೆ ನನ್ನ ಮಟ್ಟಿಗೆ ಸತ್ಯವಂತನಾಗಿರಲು ನಾನು ಹವಣಿಸುವಂತೆ, ಅವರು ಅವರ ಮಟ್ಟಿಗೂ, ಈಗ ಅವರು ಪ್ರಾತಿನಿಧ್ಯವನ್ನು ವಹಿಸಿದ ದೇಶದ ಮಟ್ಟಿಗೂ ಸತ್ಯವಂತರಾಗಿರಬೇಕಾಗಿದೆ. ಅಹಿಂಸೆಯ ಪ್ರಚಾರವು ಮತ್ತು ಅಭಿವೃದ್ಧಿಯು ಬಹಳ ಹೀನ ಮತ್ತು ದುರ್ಬಲವಾಗಿ ನಡೆಯುತ್ತಿದೆಯೆಂದು ನಾನು ಬಲ್ಲೆ. ಆದರೆ ನಮ್ಮೆಲ್ಲರ ಗುರಿಯನ್ನು ಹೊಂದಲು ಇದೇ ಯೋಗ್ಯವಾದ ದಾರಿಯೆಂದು ಅನುಭವವು ನನಗೆ ತಿಳಿಸುತ್ತದೆ. ಸೈನ್ಯ ಸಂಘರ್ಷದಿಂದ ಜಗತ್ತಿಗಾಗಲಿ, ಹಿಂದೂದೇಶಕ್ಕಾಗಲಿ ಹಿತ ಪ್ರಾಪ್ತಿಯಾಗಲಾರದು. ನ್ಯಾಯಕ್ಕಾಗಿಯಾದರೂ, ಹಿಂಸೆಯು ಸಲ್ಲದು. ಈ ವಿಶ್ವಾಸದಿಂದ, ನನ್ನ ಕಾರ್ಯದಲ್ಲಿ ಸಹಭಾಗಿಗಳಾಗುವವರು ಯಾರೂ ಬರದಿದ್ದರೂ, ನನ್ನ ಕೆಲಸವನ್ನು ಏಕಾಂಗಿಯಾಗಿ ನಾನು ಮುನ್ನಡೆಸುವೆನು.'

ಇಂಗ್ಲಾಂಡಿನಲ್ಲಿ ಸ್ತ್ರೀಯರು ಕೂಡಾ ಕ್ರಿಕೆಟ್ ಆಟದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿರುವರು.



ಇಂಗ್ಲಾಂಡು ದಳದ ಕೆಪ್ಟನ್ ಮಿಸ್ ಆರ್ಕಡೇಲಳು ಚೆಂಡನ್ನು ಹೊಡೆಯುತ್ತಿರುವುದು. ಚೆಂಡು ವಿಕೆಟ್‌ಕೀಪರಳ ತಲೆಯ ಮೇಲಿದ್ದಂತೆ ಕಂಡುಬಂದರೂ ಅದು ಬೌಂಡರಿಯನ್ನು ಮುಟ್ಟಿರುವುದು.

ಬೇಕಾಗಿದ್ದಾರೆ

ಇದೇ ೧೯ನೇ ಸಪ್ಟಂಬರದಿಂದ ಮೂಲ್ಕಿಯಲ್ಲಿ ಪ್ರಾರಂಭವಾಗುವ 'ಶ್ರೀ ವೆಂಕಟ್ರಮಣ ಟೆಂಪಲ್ ಸಂಸ್ಕೃತ ಶಾಲೆ'ಗೆ ಉಪಾಧ್ಯಾಯರು ಬೇಕಾಗಿದ್ದಾರೆ. ಹಿಂದೀ ತಿಳಿದಿದ್ದ ಸೆಕೆಂಡರಿ ಗ್ರೇಡ್ ಟ್ರೈನ್ಡ ಆದವರಿಗೆ ಮೊದಲಾಗಿ ಅವಕಾಶ ಕೊಡಲಾಗುವುದು. ಸಂಸ್ಕೃತ ಪಂಡಿತರ ಕೆಲಸಕ್ಕೂ ಓರ್ವ ಉಪಾಧ್ಯಾಯರು ಬೇಕಾಗಿದ್ದಾರೆ.

ಅರ್ಜಿಯು ಇದೇ ೧೯ನೇ ಸಪ್ಟಂಬರ ೧೫ನೇ ತಾರೀಕಿನೊಳಗೆ ಈ ಕೆಳಗಿನವರಿಗೆ ತಲಪಬೇಕು.

ಮೆನೇಜರ್

"ಶ್ರೀ ವೆಂಕಟ್ರಮಣ ಟೆಂಪಲ್, ಸಂಸ್ಕೃತ ಸ್ಕೂಲ್" ಮುಲ್ಕಿ.

ಮನೋಹರ ಗ್ರಂಥಮಾಲಾ ಧಾರವಾಡ.

ಸ್ವತಂತ್ರ ಕಥೆ, ಕಾದಂಬರಿ, ನಾಟಕ, ಹರಟೆ ಮೊದಲಾದ ಮನಮೆಚ್ಚಿಸುವ ಸರಸ ವಾಙ್ಮಯದ ಸುಗ್ಗಿ! ಅಖಿಲ ಕರ್ನಾಟಕದಲ್ಲಿ ಹೆಸರು ಪಡೆದ ಬರಹಗಾರರ ಕೈವಾಡ ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦ ಪುಟಗಳುಳ್ಳ ಆರು ಸರಸ ಗ್ರಂಥಗಳು ವಾರ್ಷಿಕ ಚಂದಾ ರೂ. ೩-೮-೦.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ತೋರಿಸಲಾಗುವುದು.

ವ್ಯವಸ್ಥಾಪಕ—

ಮನೋಹರ ಗ್ರಂಥಮಾಲಾ

ಧಾರವಾಡ.

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತಿದೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು.

ಕೈಯಿಂದ ಮಾಡುವ ಕಾಗದ ಕೈಗಾರಿಕೆ

[ಕಾಗದವು ಇಂದು, ನಮಗೆ ಹೇಗೆ ದಿನನಿತ್ಯದ ಅತ್ಯಂತ ಉಪಯುಕ್ತವಾದ ವಿಷಯವೆಂಬುದನ್ನು ಪ್ರತಿಯೊಬ್ಬರೂ ಬಲ್ಲರು ಇಂತಹ ಸಂದರ್ಭದಲ್ಲಿ ಕಾಗದ ಕೈಗಾರಿಕೆಯ ವಿಷಯವು ತಿಳಿಯದಿರಲು ಸಾಧ್ಯವಿಲ್ಲ! ಬಡ ಭಾರತೀಯರಿಗೆ ಇದು ಖಾದಿಯಷ್ಟೇ ಪ್ರಧಾನವಾದ ಉದ್ಯೋಗವಾಗಿದೆ. ಕಾಗದ ಕೈಗಾರಿಕೆಯ ವಿಷಯದಲ್ಲಿ ಕೆಲವು ಉಪಯುಕ್ತ ವಿವರವು ಕೊಡಲಾಗಿದೆ]

ಕಾಗದವು ಮೊದಲು ಹುಟ್ಟಿದ್ದು ಚೈನದಲ್ಲಿ, ಮೊಗಲರ ಆಳ್ವಿಕೆಯ ಸಮಯದಲ್ಲಿ, ಅದನ್ನು ಭಾರತದೇಶಕ್ಕೆ ಅಲ್ಲಿಂದ ಬರಮಾಡಲಾಗಿತ್ತು ಆ ಮೇಲೆ ಅಭಿವೃದ್ಧಿಯು ಬಹಳವಾಗಿ ಆಯಿತು ಇತ್ತೀಚೆಗೆ ಇಪ್ಪತ್ತು ವರ್ಷಗಳಿಂದ, ಆ ಕೈಗಾರಿಕೆಯು ಸಂಪೂರ್ಣ ನಿರ್ನಾಮ ಹೊಂದಿದೆ. ಇದರ ಕಾರಣವೆಂದರೆ, ಜನರು ಕೈಗಾರಿಕೆಯ ವಿಷಯದಲ್ಲಿ ಸಾಕಷ್ಟು ಗಮನಕೊಡದಿರುವುದು, ಮತ್ತು ಯಂತ್ರ ಸಾಮಗ್ರಿಯು ಬಂದು, ಕೈಗಾರಿಕೆಯನ್ನು ಹಿಂದೆ ಹಾಕಿದ್ದು.

ಸಹಾಯಕ ಉದ್ಯೋಗ

ನಮ್ಮ ದೇಶವು ಕೃಷಿಕರ ನಾಡು ವರ್ಷದ ಬಹುಭಾಗ ಅವರಿಗೆ ಹೆಚ್ಚಿನ ಉದ್ಯೋಗವಿರುವುದಿಲ್ಲ, ಅಂತಹವರಿಗೆ ಕಾಗದ ಕೈಗಾರಿಕೆಯು ಸಹಾಯಕ ಉದ್ಯೋಗವಾಗಿ ಬಹಳ ಉಪಕಾರಿಯಾಗುವುದು ಕಾಗದಗಳನ್ನು ಮಾಡಲು ಬೇಕಾದ ಕೆಲವು ಸಸ್ಯವಸ್ತುಗಳು, ಪ್ರಯೋಜನವಿಲ್ಲದ ಹತ್ತಿ, ಹುಲ್ಲು, ಮೊದಲಾದವುಗಳ ಅವರಿಗೆ ಧಾರಾಳ ದೊರಕುತ್ತವೆ.

ಬಾಳಿಕೆ ಹೆಚ್ಚು

ಕೈಯಿಂದ ಮಾಡಿದ ಕಾಗದವು ಬಹಳ ಸಮಯದ ವರೆಗೆ ಬಾಳಿಕೆ ಬರುತ್ತದೆ. ಹೆಚ್ಚು ಸಮಯಗಳ ವರೆಗೆ ಬಾಳಿಕೆ ಬರಲಿರುವ ಕರಾರು, ಶಾಶ್ವತ ರಿಕಾರ್ಡುಗಳಿಗೆ ಈ ಕಾಗದಗಳನ್ನೇ ಉಪಯೋಗಿಸುತ್ತಾರೆ ಇತ್ತೀಚೆಗೆ ಮದ್ರಾಸಿನಲ್ಲಿ ಮಾಡಿದ ಶೋಧನೆಯಂತೆ ಈ ವಿಷಯವು ಇನ್ನಷ್ಟು ಸ್ಪಷ್ಟವಾಗಿದೆ

ಹೀಗಾದುದರಿಂದ, ಸರಕಾರದ, ಸ್ಥಳೀಕ ಸಂಸ್ಥೆ, ಸಹಕಾರಸಂಘ, ಮತ್ತು ಇತರ ಸಂಸ್ಥೆಗಳು ಈ ಕೈಗಾರಿಕೆಗೆ ಪ್ರೋತ್ಸಾಹ ಕೊಟ್ಟು ಬೆಳೆಸುವುದು ಅವಶ್ಯವಿದೆ. ಹಿಂದೂದೇಶದಲ್ಲಿರುವ ಕಾಗದ ಮಿಲ್ಲುಗಳು, ನಮಗೆ ಬೇಕಾದ ನೇಕಡಾ ಇಪ್ಪತ್ತರಷ್ಟು ಕಾಗದಗಳನ್ನು ಮಾತ್ರ ಒದಗಿಸಿಕೊಡುತ್ತವೆ. ಬಾಕಿಯುದು ವಿದೇಶಗಳಿಂದ ಬರುತ್ತದೆ. ಈ ಕೈಗಾರಿಕೆಯನ್ನು ಸರಕಾರದ ಆಶ್ರಯದಲ್ಲಿ ಕೈಕೊಂಡರೆ ಖಂಡಿತವಾಗಿಯೂ ಇದು ಅಭಿವೃದ್ಧಿ ಹೊಂದುವುದು. ಖಾದಿಯನ್ನು ಬಿಟ್ಟರೆ, ಕಾಗದದಷ್ಟು ಪ್ರಧಾನ ಕೈಗಾರಿಕೆಯು ಬೇರಿಲ್ಲ ಮಿಲಿಯಾಂತರ ಮಂದಿ ಬಡ ಭಾರತೀಯರಿಗೆ ಇದು ಅನ್ನವನ್ನೊದಗಿಸುವುದು.

ಮಾಡುವ ಕ್ರಮ

ಕಾಗದವನ್ನು ತಯಾರಿಸುವ ಕ್ರಮವು ಅದಕ್ಕೆ ಬೇಕಾದ ವಸ್ತುಗಳ ಪ್ರಕೃತಿಯನ್ನು ಹೊಂದಿಕೊಂಡಿದೆ. ಕಾಗದವನ್ನು ಮಾಡುವ ವಿಧಾನ, ಮತ್ತು ಅದಕ್ಕೆ ಬೇಕಾದ ಸಾಮಗ್ರಿ ಎಲ್ಲವೂ, ಬಟ್ಟೆಯನ್ನು ನೂತು ನೇಯ್ದು ಮಾಡುವ ಕೆಲಸದಷ್ಟೇ ಸರಲವಾದದ್ದು ಮತ್ತು ಸುಲಭ

ನೋಟೀಸು

ಕಾರ್ಕಳದ ಡಿ ಮುಂ. ಕೋರ್ಟಿನಲ್ಲಿ

(O S 770/1934)

R E P. No. 358/1939.

ಯಂ ನೀಲಕಂಠ ಪ್ರಭು—ವಾದಿ—ಅರ್ಜಿದಾರ

ಮತ್ತು

1) ಕುಂಬಾರ ಪೂವಾ
2) ಸುಂದರಿಯಾನೆ ರಾಧಾಬ್ಯಾ
3) ಸೋಮಯ್ಯ
4) ತಿಮ್ಮಪ್ಪ
} ಪ್ರತಿವಾದಿಗಳು

ಇವರೊಳಗೆ—

ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವದೇನೆಂದರೆ—ಕಾರ್ಕಳ ತಾಲೂಕು ಯರ್ಲಪಾಡಿ ಗ್ರಾಮದ ಬಾಬ್ತು 2ನೆ ಎದ್ರಿಗೆ (ಸುಂದರಿಯಾನೆ ರಾಧಾಬ್ಯಾ) ಮೂಲಿ ಹಕ್ಕಿನ ಆಸ್ತಿಯನ್ನು ಅರ್ಜಿದಾರನು ಮೇಲಿನ ಅಮಲ್ ಜ್ಯಾರಿಯಲ್ಲಿ ಏಲಂಗೆ ಅಪೇಕ್ಷಿಸಿ ಇಸ್ತಿಹಾರು ದಾಖಲು ಮಾಡಿರುವದರಿಂದ ಮತ್ತು ಸದ್ರಿ ಆಸ್ತಿ ಏಲಂ ಸಮಯ ಬಿಡ್ ನ set off ಮಾಡುವರೆ ಪರ್ಮಿಶನ್ ಅರ್ಜಿ ದಾಖಲು ಮಾಡಿರುವದರಿಂದ ಆ ಕುರಿತು ಆಕ್ಷೇಪ ಇದ್ದಲ್ಲಿ ಸದರಿ ಅಮಲ್ ಜ್ಯಾರಿಯು ತಸ್ಕಿ ಬಗ್ಗೆ ಇಟ್ಟ ತಾ 20 9–39ನೇ ದಿವಸ ಪೂರ್ವಾಹ್ನ, ಗಂಟೆ 10ಕ್ಕೆ 2ನೆ ಎದ್ರಿಗೆ ಸುಂದರಿ ಯಾನೆ ರಾಧಾ ಬ್ಯಾಯು ಸ್ವತಃ ವ ವಕೀಲರ ಮುಖಾಂತರ ಹಾಜರಾಗಿ ತಿಳಿಸಬೇಕು ತಪ್ಪಿದ್ದಲ್ಲಿ ಅಮಲ್ ಜ್ಯಾರಿಯು ಕ್ರಮಪ್ರಕಾರ ಮುಂದರಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿದೆ

Karkal 26-8 39 } H K Gopala Krishna Rau' ಅರ್ಜಿದಾರನ ಕಡೆ ವಕೀಲ್.

ಒಂದೂ ಕಲೆಯುಳಿದಂತೆ ಗುಣಪಡಿಸುವುದು!



ಗಾಯ ಮತ್ತು ವ್ರಣಗಳಿಗೆ ಅತ್ಯುತ್ಕೃಷ್ಟ ಔಷಧಿ.

ನಿಮ್ಮ ಯಾವತ್ತೇ ವ್ರಣ, ಚರ್ಮರೋಗ, ಗಾಯ ಮೊದಲಾದವುಗಳ ಮೇಲೆ ಜ್ಯಾಂಬಕನ್ನು ಸವರಿಸಿದ ಕೂಡಲೇ ಬೇನೆಯು ಮಾಯವಾಗಿ ಗುಣವಾಗಲು ಪ್ರಾರಂಭಿಸುತ್ತದೆ. ಜ್ಯಾಂಬಕಿನಲ್ಲಿರುವ ಔಷಧೀಯ ಗಿಡದ ಎಲೆಗಳ ತೈಲವು ಆಳವಾಗಿ ನಿಮ್ಮ ಚರ್ಮರಂಧ್ರಗಳನ್ನು ಹೊಕ್ಕು ವಿಷಮಯವಾದ ಕ್ರಿಮಿಕೀಟಗಳನ್ನು ನಾಶಪಡಿಸಿ ವ್ರಣಗಳಿಂದ ಹೊಸ ಬಲವಾದ ರಶಿಗೆಯನ್ನು ಉಂಟಾಗಿಸುತ್ತದೆ. ಜ್ಯಾಂಬಕು ಅಸಹ್ಯಕರವಾದ ಒಂದೂ ಕಲೆಯನ್ನುಂಟುಮಾಡದೆ ಗುಣಪಡಿಸುತ್ತದೆ ಜ್ಯಾಂಬಕನ್ನು ಕಜ್ಜಿ, ವ್ರಣ, ಗಾಯ, ಕಡಿತ, ಮುದ್ದಣ, ಕಾಲುಕುಂಟು, ಬಾವುವಿಕೆ ಮೊದಲಾದುವುಗಳಿಗೆ ಉಪಯೋಗಿಸಿರಿ ಎಲ್ಲಾ ಔಷಧಿ ವ್ಯಾಪಾರಿಗಳು ಜ್ಯಾಂಬಕು ರೂ. 1-0 0 ಮತ್ತು 2-4-0ರಂತೆ ಮಾರುತ್ತಾರೆ

ಏಜಂಟ್ಸ್

ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ವಾದುದು. ಜನತೆಯೂ ಸರಕಾರವೂ ಈ ಕಡೆಗೆ ಗಮನಕೊಟ್ಟ ಪಕ್ಷದಲ್ಲಿ ರಾಷ್ಟ್ರದ ಏಳಿಗೆಯು ಆಗುವುದು.

ಮಗನ ಬಿಡುಗಡೆಮಾಡಲು ತಂದೆಯಲ್ಲಿಗೆ ದೂರು

ಗಡಿನಾಡಿನ ಪ್ರಧಾನ ಮಂತ್ರಿಗಳ ಧೈರ್ಯ

ಸಂಘಪರಿವಲ್ಲಿ ಉಂಟಾದ ಕೃಷಿಕ ಆಂದೋಲನದ ಸಂಬಂಧ ಸುಮಾರು ವರ್ಷಗಳ ಕಠಿಣ ಸಜೆಗೆ ಗುರಿಯಾದ ಗಡಿನಾಡಿನ ಪ್ರಧಾನ ಮಂತ್ರಿ ಡಾ. ಖಾನ್ ಸಾಹೇಬರ ಪುತ್ರ ಮಿ ಒಬೆದುಲ್ಲಾ ಎಂಬವರನ್ನೂ, ಇನ್ನು ಕೆಲವು ಜನರನ್ನೂ ಬಂಧನದಿಂದ ಬಿಡುಗಡೆ ಮಾಡಬೇಕಾಗಿ, ಗಡಿನಾಡಿನ ಕೆಲವು ಕಾಂಗ್ರೆಸು ಕೆಲಸಗಾರರ ಮತ್ತು 'ಕೆಂಪಂಗಿ'ಗಳ ಶಿಷ್ಟಮಂಡಲವೊಂದು ಪ್ರಧಾನ ಮಂತ್ರಿಗಳನ್ನೇ ಸಂಧರ್ಶಿಸಿ ಬಿನ್ನವಿಸಿಕೊಂಡಿತು. ಈ ಸಂಬಂಧವಾಗಿ ಸೆರೆಯಲ್ಲಿರಿಸಿದ ಎಲ್ಲಾ ಬಂಧಿಯನ್ನು ಈಗಾಗಲೇ ಬಿಡುಗಡೆ ಮಾಡಬೇಕು, ಮಿ ಒಬಿಧುಲ್ಲಾರವರನ್ನು ಬಿಡುಗಡೆ ಮಾಡಬಾರದೆಂದು ಅವರು ಕೇಳಿಕೊಂಡರು

ಡಾ ಖಾನ್ ಸಾಹೇಬರ ಮಗನು ಈ ಚಿಕ್ಕಹುದ್ದೆಯ ಬೇಸರಗೊಂಡವರಂತೆ ತೋರಿದರು. ಕಡೆಗೆ ಅವರು ಮುಂದಕ್ಕೆ ಯಾವ ರೀತಿಯ ಗೊಂದಲವನ್ನಾದರೂ ಮಾಡುವುದಿಲ್ಲವೆಂದು ಒಪ್ಪಿಗೆಯಿತ್ತಲ್ಲಿ ತಾನು ಆ ಕುರಿತು ವಿಚಾರ ಮಾಡುವುದಾಗಿ ಹೇಳಿದರು

ಶಿಷ್ಟಮಂಡಳವು ಅಲ್ಲಿಂದ ಜೈಲಿಗೆ ಹೋಗಿ ಮಿ। ಒಬಿದುಲ್ಲಾ ಮತ್ತು ಅವರ ಅನುಯಾಯಿಗಳನ್ನು ಡಾ। ಖಾನ್ ಸಾಹೇಬರು ಹೇಳಿದ ಶರತಗಳಿಗೆ ಸಮ್ಮತಿಸುವಂತೆ ಒಪ್ಪಿಸಿದರು

ಮಗನ ಅವರ ಬಿಡುಗಡೆಯಾಗುವ ಸಂಭವವಿದೆ

ಪೂನಾದ ಕಾಂಗ್ರೆಸು ಪ್ರಧಾನ ಮಂತ್ರಿಗಳ ಪರಿಷತ್ತಿಗೆ—ಮಾನ್ಯ ಮುನ್ಶಿ, ಮಾನ್ಯ ರಾಜಾಜಿಯವರು ತೆರಳುತ್ತಾರೆ.

ಕಲ್ಕತ್ತ ಕಾಂಗ್ರೆಸು ಭವನದ ಶಂಖು ಸ್ಥಾಪನೆ

ಕವೀಂದ್ರ ರವೀಂದ್ರರ ಭಾಷಣ

ಕಲ್ಕತ್ತದ ಕಾಂಗ್ರೆಸು ಭವನದ ಶಂಖು ಸ್ಥಾಪನೆ ಮಾಡುತ್ತಾ ರವೀಂದ್ರನಾಥ ಠಾಗೂರರು ಬಂಗಾಳದ ಹಸ್ತವು ಭಾರತದ ಹಸ್ತಕ್ಕೆ ಶಕ್ತಿಯೊದಗಿಸಲಿ, ಭಾರತದ ಸಂದೇಶಕ್ಕೆ ಬಂಗಾಳದ ಧ್ವನಿಯು ಶಕ್ತಿಯನ್ನು ಸೇರಿಸಲಿ ಐಕ್ಯಭಂಗದಂತಹ ಕಾರ್ಯ ಮಾಡುವುದರಿಂದ, ಬಂಗಾಳವು ಎಂದಿಗಾದರೂ, ಭಾರತದ ಸ್ವಾತಂತ್ರ್ಯ ಸಮರದಲ್ಲಿ ಹಿಂದಾಗದಿರಲಿ; ಹೀಗೆಂದು ಹೇಳಿದರು.

ಸಾಹಿತ್ಯ ಸಂಚಯ

ಮಿತ್ರಮಂಡಳಿ, ಮಂಗಳೂರು.

೧. ಧ್ಯೇಯ:—ಕನ್ನಡ ಸಾಹಿತ್ಯದ ಉನ್ನತಿ ಮತ್ತು ಕನ್ನಡ ಸಾಹಿತ್ಯ ಪ್ರೇಮಿಗಳೊಳಗೆ ಮೈತ್ರಿ.

೨. ಸದಸ್ಯತೆ:—ಸ್ಥಳ ಪರಸ್ಥಳದ ಕನ್ನಡ ಸಾಹಿತಿಗಳೂ ಸಾಹಿತ್ಯಪ್ರೇಮಿಗಳೂ (ಸ್ತ್ರೀಯರೂ ಪುರುಷರೂ) ಇದರ ಸದಸ್ಯರಾಗಬಹುದು.

೩. ವರ್ಗಣಿ:— ವಾರ್ಷಿಕ ರೂ. ಅ.

೧. ಪರಸ್ಥಳೀಯ ಸಾಮಾನ್ಯ ಸದಸ್ಯರಿಗೆ	೦—೮
೨. ವಿದ್ಯಾರ್ಥಿಗಳಿಗೆ	೦—೮
೩. ಸ್ಥಳೀಯ ಸಾಮಾನ್ಯ ಸದಸ್ಯರಿಗೆ	೧—೦
೪. ಪ್ರೋತ್ಸಾಹಕರಿಗೆ	೨—೦
೫ ಪೋಷಕರಿಗೆ	೫—೦
ಆಜೀವ ಸದಸ್ಯರಿಗೆ	೨೫—೦

೪ ಕಾರ್ಯನಿರ್ವಾಹ ಕ್ರಮ:—

೧ ಮಂಡಳಿಯ ಆಶ್ರಯದಲ್ಲಿ ಆಗಿಂದಾಗ ಪ್ರಖ್ಯಾತ ಸಾಹಿತಿಗಳಿಂದಲೂ, ಪ್ರಮುಖ ಪುರುಷರಿಂದಲೂ ಕನ್ನಡದಲ್ಲಿ ಭಾಷಣಗಳನ್ನು ಏರ್ಪಡಿಸಿರುವುದು.

[ಇವುಗಳಿಗೆ ಸರ್ವರಿಗೂ ಸುಸ್ವಾಗತವಿದೆ]

೨ ಪ್ರತಿವರ್ಷವೂ ನಾಡಹಬ್ಬವಾದ ದಸರೆಯಲ್ಲಿ ಸಾಹಿತ್ಯೋತ್ಸವವನ್ನು ಜರಗಿಸುವುದು

ಇದರ ಕಾರ್ಯಕ್ರಮ (ಸಾಮಾನ್ಯವಾಗಿ) –

[೧] ಭಾಷಣಗಳು
[೨] ವಾಚನಗಳು
[೩] ನಾಟಕ, ಪ್ರಹಸನ, ಸಂಗೀತಾದಿಗಳು
[೪] ಯಕ್ಷಗಾನ ಪ್ರಸಂಗಗಳು
[೫] ಹರಿಕಥಾ ಕಾಲಕ್ಷೇಪ
[೬] ಸಾಹಿತ್ಯ ಸಂಗೀತಾದ ಸ್ಪರ್ಧೆಗಳು
[೭] ಗ್ರಂಥ, ಪತ್ರಿಕಾದಿಗಳ ಪ್ರದರ್ಶನ
[೮] ಜಿಲ್ಲಾ ಸಾಹಿತ್ಯ ಸಮ್ಮೇಳನ

[ಇವುಗಳಲ್ಲಿ ಕೆಲವಕ್ಕೆ ಪ್ರವೇಶಧನ ಇರಿಸಲಾಗುವುದು]

೩ ಸದಸ್ಯರಿಂದ ರಚಿತವಾದ ಉತ್ಕೃಷ್ಟ ಕನ್ನಡ ಗ್ರಂಥ ಯಾ ಸಂಕಲನಗಳನ್ನು ಆಗಿಂದಾಗ ಪ್ರಕಟಿಸುವುದು

ಮಂಡಳಿಯಿಂದ ಈ ವರೆಗೆ ಈ ಕೆಳಗಿನ ಪುಸ್ತಕಗಳು ಪ್ರಕಟವಾಗಿವೆ —

[೧] ಬಿಳಿ ಸೀರೆ
[೨] „ „ (ದ್ವಿತೀಯ ಖಂಡ)
[೩] ತಾಯ್ನಾಡು
[೪] ಅಲರು
[೫] ನಮ್ಮ ಕಥೆಗಳು
[೬] ವಿನೋದ ಚಿತ್ರಗಳು
[೭] ಸಂಸಾರ
[೮] ಶಕುಂತಲೆ
[೯] ತರಂಗ
[೧೦] ನಮ್ಮ ಕವಿತೆಗಳು

[ಇವುಗಳು ಸದಸ್ಯರಿಗೆ ಅರ್ಧ ಬೆಲೆಗೆ ದೊರೆಯುವುವು.]

೪ ಮಂಡಳಿಯಿಂದ ಒಂದು ಪ್ರತ್ಯೇಕ ಕನ್ನಡ ಪತ್ರಿಕೆಯನ್ನು ಹೊರಡಿಸುವುದು ಇದು ಕಾರ್ಯಸಾಧ್ಯವಾಗುವ ವರೆಗೆ ಸ್ಥಳೀಯ ಕನ್ನಡ ಪತ್ರಿಕೆಗಳೊಳಗೆ ಒಂದರಲ್ಲಿ ಕೆಲವು ಪುಟಗಳನ್ನು ಸದಸ್ಯರ ಕನ್ನಡ ಲೇಖನ ವ್ಯವಸಾಯಕ್ಕೆ ಅವಕಾಶ ಕೊಡುವುದು.

ಇದರಲ್ಲಿ ಒಳಗೊಳ್ಳುವ ವಿಭಾಗಗಳು —

[೧] ಪ್ರಬಂಧಗಳು (ಮಹತ್ವದ ವಿಷಯಗಳ ಮೇಲೆ)
[೨] ಸಣ್ಣ ಕಥೆಗಳು
[೩] ಏಕಾಂಕ ನಾಟಕಗಳು
[೪] ಹಾಸ್ಯೋಲ್ಲೇಖಗಳು (ಹರಟೆಗಳು)
[೫] ಚಿಕ್ಕ ಕವಿತೆಗಳು
[೬] ಹಾಸ್ಯ ಬಿಂದುಗಳು
[೭] ವ್ಯಂಗ್ಯ ಚಿತ್ರಗಳು
[೮] ಒಗಟುಗಳು (ಸ್ಪರ್ಧಾರಂಗ)
[೯] ಬಾಲಸಾಹಿತ್ಯ
[೧೦] ಗ್ರಂಥ ವಿಮರ್ಶೆ (ಸ್ವೀಕಾರ-ವಿಮರ್ಶೆ)
[೧೧] ಗ್ರಂಥ ಟೀಕೆಗಳು (comments & criticisms)
[೧೨] ಸಮಾಚಾರ ಸಂಗ್ರಹ (ಸಾಹಿತ್ಯ-ಸಾಹಿತಿಗಳ ಕುರಿತು)
[೧೩] ಸದಸ್ಯರ ನಾಮಾವಳಿ (ಕ್ರಮಶಃ)
[೧೪] ಪತ್ರವ್ಯವಹಾರ (ಸದಸ್ಯರು-ಸಂಪಾದಕರೊಳಗೆ ಸಾಹಿತ್ಯ ವಿಷಯಗಳ ಸಂಬಂಧ ಪ್ರಶ್ನೋತ್ತರಗಳು)
[೧೫] ಮಂಡಳಿಯ ಪ್ರಕಟನಾದಿಗಳು

೫. ಕಾರ್ಯನಿರ್ವಾಹಕ ಮಂಡಳಿ:

೧೯೩೯-೪೦ನೇ ವರ್ಷಕ್ಕೆ—

ಅಧ್ಯಕ್ಷ
ಶ್ರೀ ಎಮ್ ಎನ್ ಕಾಮತ್

ಉಪಾಧ್ಯಕ್ಷ
ಶ್ರೀ. ಎಮ್. ವಾಸುದೇವ ಪ್ರಭು,
ಎಮ್ ಎ, ಎಲ್. ಟಿ

ಕಾರ್ಯದರ್ಶಿ
ಶ್ರೀ ಎಸ್ ಪಿ. ಭಟ್ಟ

ಜತೆಕಾರ್ಯದರ್ಶಿ
ಶ್ರೀ ಕೇಶವ ಭಟ್ಟ

ಕನ್ನಡ ಸಾಹಿತ್ಯ ಪ್ರೇಮಿಗಳೆಲ್ಲರೂ ಮಿತ್ರಮಂಡಳಿಯ ಸದಸ್ಯರಾಗಿ ಮೇಲಿನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಲು ಸರ್ವತೋಮುಖವಾಗಿ ಸಹಕರಿಸಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ

ಎಸ್. ಪಿ ಭಟ್ಟ,
ಗೌರವ ಕಾರ್ಯದರ್ಶಿ, ಮಿತ್ರಮಂಡಳಿ,
ಸದಾನಂದ ಬಿಲ್ಡಿಂಗ್ಸ್, ಹಂಪನಕಟ್ಟೆ,
ಮಂಗಳೂರು

ಸ್ವೀಕಾರ—ವಿಮರ್ಶೆ

ಧರ್ಮ ಅಥವಾ ನಾಲ್ವರು ಮಹಾಪುರುಷರು:—ಲೇಖಕರು —ಶ್ರೀ ವಾಸುದೇವ ಶ್ರೀರಾಮ ಕೃಷ್ಣಾಶ್ರಮ ಮೈಸೂರು, ಶ್ರೀ ಸ್ವಾಮಿ ಸಿದ್ಧೇಶ್ವರಾನಂದರ ಮುನ್ನುಡಿ ಪುಟಗಳು ಕ್ರೌನ್ ಅಷ್ಟಮಾಂಶದ ೭೭ ಬೆಲೆ ೫ ಆಣೆ

ಪ್ರಪಂಚದಲ್ಲಿ ವಿಶ್ವಧರ್ಮವನ್ನು ಸಾರಿದ ನಾಲ್ವರು ಮಹಾ ವಿಭೂತಿಗಳ ಜೀವನೇತಿಹಾಸವನ್ನು ಶ್ರೀ ವಾಸುದೇವರು ಅನ್ನು ಸುಂದರವಾದ, ಸರಳವಾದ, ತಿಳಿಗನ್ನಡದ ಶೈಲಿಯಲ್ಲಿ ಕನ್ನಡಿಗರಿಗೆ ವಿವರಿಸಿದ್ದಾರೆ ಭಗವಾನ್ ಬುದ್ಧ, ಮಹಾತ್ಮ ಯೇಸುಕ್ರಿಸ್ತ, ಪೈಗಂಬರ ಮುಹಮ್ಮದ್, ಶ್ರೀ ರಾಮಕೃಷ್ಣ ಪರಮಹಂಸ ಈ ನಾಲ್ವರೇ ಇದರಲ್ಲಿ ಚಿತ್ರಿತರಾದ ವಿಭೂತಿಪುರುಷರು ಧರ್ಮಜಿಜ್ಞಾಸುಗಳಿಗೆ ಈ ಹೊತ್ತಿಗೆಯು ಕೈಗನ್ನಡಿಯಂತಿದೆ.

ಸಂಕುಚಿತ ಮನೋವೃತ್ತಿಯ ಅಂಧ ಅನುಕರಕರು ಈ ನಾಲ್ವರು ವಿಭೂತಿಗಳನ್ನು ಬೇರೆ ಬೇರೆ ಧರ್ಮಗಳ ಸ್ಥಾಪಕರೆಂದು ತಿಳಿದಿದ್ದರೂ, ಇವರೆಲ್ಲರೂ ಒಂದೇ ತತ್ವ, ಒಂದೇ ವಿಶ್ವವ್ಯಾಪಿ ಪರಮಾತ್ಮನ ಮಹಿಮೆಯನ್ನೇ ತಿಳಿಸಿದವರೆಂದು ಲೇಖಕರು ಸಮರ್ಥವಾಗಿ ತಿಳಿಸಿದ್ದಾರೆ

ಲೇಖಕರ ಶೈಲಿಯಲ್ಲಿ ಒಂದು ಸುಂದರವಾದ ಹೊಸತನವಿದೆ ಭಾವನೆಗಳನ್ನು ತಿಳಿಯಾಗಿ ತಿಳಿಸಬಲ್ಲ ಓಜಸ್ವೀ ಶಕ್ತಿಯಿದೆ. ಮುಂದಕ್ಕೆ ಈ ಶೈಲಿಯನ್ನೇ ಬಳಸಿ, ಪೂರ್ಣತೆಗೆ ತಂದರೆ, ತನ್ನದೇ ಆದ ಒಂದು ನೂತನ ಕಥನಕ್ರಮವು ಇವರಲ್ಲಿ ಒಡಮೂಡಬಹುದೆಂದು ಆಶಿಸಬಹುದಾಗಿದೆ

ಅಂತೂ, ಕನ್ನಡಿಗರ ಮನ್ನಣೆಗೆ ಯೋಗ್ಯವಾದ ಹೊತ್ತಿಗೆಯಿದು.

ಸುಧಾರಣೆಯ ಯುಗದಲ್ಲಿ? – ಲೇಖಕರು ಶ್ರೀ ಎನ್ ಸಿ ಪಾಲ್ ಪ್ರಕಾಶಕರು ಮಾಧವ, ಬೊಂಬಯಿ ನವಜ್ಯೋತಿ ಗ್ರಂಥಮಾಲೆಯ ಪ್ರಥಮ ಪುಷ್ಪ ಡೆಮ್ಮಿ ೧/೮ ಆಕಾರದ ೧೪ ಪುಟಗಳು ಬೆಲೆ ಎರಡಾಣೆ

ಕನ್ನಡದ ಸೇವೆಗಾಗಿ ಹೊಸ ಹೊಸ ಗ್ರಂಥಮಾಲೆಗಳನ್ನು ಹೊರಡಿಸಿ ನವೀನ ಪುಸ್ತಕಗಳನ್ನು ಪ್ರಕಟಿಸುವುದು ಪ್ರಶಂಸನೀಯವಾದ ಸಾಹಸ ಇದೊಂದು ಕಲ್ಪಿತ ಸಾಮಾಜಿಕ ಕಥೆ ವಿದ್ಯಾವಂತನಾದ ತರುಣನೊಬ್ಬನು, ದೇಶದ ನಿರುದ್ಯೋಗ, ದಾರಿದ್ರ್ಯಗಳನ್ನು ವಿಚಾರಿಸಿ, ತನಗೆ ಮಕ್ಕಳಾಗಬಾರದೆಂದು ನಿಶ್ಚಯಿಸಿದ್ದರೂ, ಕಡೆಗೆ ಮಗುವೊಂದು ಹುಟ್ಟಲು ಅದನ್ನು ಕೊಂದು ಕಡೆಗೆ ಚೀತ್ಕರಿಸಿ ಮೂರ್ಛಿತನಾದನೆಂದು ಕಥೆಯು ಕೊನೆಗೊಂಡಿದೆ

ಲೇಖಕರು ಸುಧಾರಣೆಯ ಯುಗದಲ್ಲಿ ವಿದ್ಯಾವಂತರು ಇಂತಹ ಹುಚ್ಚು ಕೆಲಸಗಳನ್ನು ಮಾಡಬಹುದೆಂದು ತಿಳಿದಿರುವರೋ, ಅಥವಾ ಹಾಗೆ ಮಾಡುವುದು ವಿದ್ಯಾವಂತನ ಕರ್ತವ್ಯವೆಂದು ಸಮರ್ಥಿಸುತ್ತಾರೋ, ಅಂತೂ ಸುಧಾರಣೆ ಯುಗದಲ್ಲಿ? ಎಂಬ ಪ್ರಶ್ನಾರ್ಥಕವಾದ ತಲೆಬರಹದಿಂದ, ಯಾವ ಪ್ರಶ್ನೆಯನ್ನು ಜನತೆಯ ಮುಂದಿಡುತ್ತಾರೋ ವ್ಯಕ್ತವಾಗುವುದಿಲ್ಲ ಹೇಗೂ ಇದು ಲೇಖಕರ ಪ್ರಥಮ ಸಾಹಸವಾದುದರಿಂದ ಮುಂದಕ್ಕಾದರೂ ಪ್ರಯೋಜನವುಳ್ಳ ಕೃತಿಗಳನ್ನೇ ಬರೆದು ಲೇಖಕರು ಕನ್ನಡದ ಸೇವೆಯನ್ನು ಮಾಡಲಿ ಎಂದು ಹಾರೈಕೆ

ರಾಯ್, ಮತ್ತು ರಾಯ್ ವಾದ: (ಭಾರತೀಯ ಕ್ರಾಂತಿಯ ಇತಿಹಾಸ) ಲೇಖಕರು-ಶ್ರೀಗಳಾದ ಸ ರಂ ಸುಂಠಣಕರ ಮತ್ತು ಕೆ ರಾಮರಾವ ಪ್ರಕಾಶಕರು ಶ್ರೀ ಆರ್ ವಿ. ಜಠಾರ ಬಿ ಎ ಎಲ್ ಎಲ್ ಬಿ ಧಾರವಾಡ ಕ್ರೌನ್ ಅಷ್ಟಮಾಂಶದ ೧೬–೧೨೩ ಪುಟಗಳು ಬೆಲೆ ಹನ್ನೆರಡಾಣೆ

ಶ್ರೀ ಎಂ ಆರ್ ಡಾಲ್ವಿ ಎಲ್ ಎಲ್ ಬಿ ಇವರು ಮುನ್ನುಡಿ ಬರೆದಿದ್ದಾರೆ

ಫೈಜಪುರ ಕಾಂಗ್ರೆಸಿನ ಅನಂತರ ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ದುಡಿಯಲು ಮುಂಬಂದ, ಕ್ರಾಂತಿ ಪುರುಷರಾದ ಶ್ರೀ ಮಾನವೇಂದ್ರನಾಥ ರಾಯ್ ಮತ್ತು ಅವರ ರಾಯ್ ವಾದ ಇವುಗಳ ಕುರಿತು ಕೇಳದ ರಾಜಕೀಯ ವಿಚಾರಶೀಲರಿರಲಾರರು ಅವರ ಜೀವನ ಚರಿತ್ರೆಯು ಅವರ ತತ್ವಗಳು ಈ ಪುಸ್ತಕದಲ್ಲಿ ಕನ್ನಡಿಗರಿಗೆ ಪರಿಚಯ ಮಾಡಿ ಕೊಡಲಾಗಿದೆ

ಬಂಗಾಳದಲ್ಲಿ ಒಬ್ಬ ಸಾಮಾನ್ಯ ಶಿಕ್ಷಕನ ಮಗನಾಗಿ ಹುಟ್ಟಿ, ತನ್ನ ಹದಿಮೂರನೆಯ ವಯಸ್ಸಿನಲ್ಲಿಯೇ ಕ್ರಾಂತಿಯ ಮೂರ್ತಿಯಾಗಿ ೧೯೧೫ರಲ್ಲಿ ಭಾರತದಿಂದ ಬ್ರಿಟಿಷರನ್ನೋಡಿಸಲು ಜರ್ಮನಿಯೊಡನೆ ಒಳಸಂಚು ನಡೆಸಿ, ಮುಂದಕ್ಕೆ ರಾಜಕೀಯ ಉಚ್ಚ ಶಿಕ್ಷಣಕ್ಕೆಂದು ಜರ್ಮನಿ, ಮೆಕ್ಸಿಕೋ, ಸ್ಪೈನ್, ತುರ್ಕಿಸ್ಥಾನ, ರಷ್ಯಾ, ಅಮೇರಿಕ ಮೊದಲಾದೆಡೆಗಳಲ್ಲಿ ಸಂಚರಿಸಿ, ತನ್ನನ್ನು ಬೆಂಬತ್ತುತಿದ್ದ ವಿರೋಧಿಗಳನ್ನು ಕಣ್ಣು ಮರೆಸುತ್ತಾ, ಯೂರೋಪಿನ ಹಲವು ರಾಷ್ಟ್ರಗಳ ಕ್ರಾಂತಿಯ ಇತಿಹಾಸದಲ್ಲಿ ಭಾಗವಹಿಸುತ್ತಿದ್ದು, ಭಂಡವಾಳ ಶಾಹಿಯ ವಿರೋಧಿಯಾಗಿ ಮಾರ್ಕ್ಸ್ ವಾದದ ದೃಢವಾದಿಯಾಗಿ ತನ್ನ ಪ್ರತ್ಯೇಕ ವ್ಯಕ್ತಿತ್ವ ವಿಶೇಷವನ್ನು ಸ್ಥಾಪಿಸಿ ಮಹಾ ಪ್ರಭಾವಶಾಲಿಯೆಂದು ಹೆಸರಾದ ಶ್ರೀ ಎಂ. ಎನ್. ರಾಯ್ ಇವರ 'ರಹಸ್ಯಮಯ ಜೀವನ ಚರಿತ್ರೆಯು ಅದ್ಭುತ ರಮಣೀಯವಾಗಿದೆ.

ಭಾರತೀಯ ರಾಜಕೀಯದಲ್ಲಿ ಇವರ ತತ್ವಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗುವವೋ, ಹೇಳಬರುವುದಿಲ್ಲವಾದರೂ, ಅವರ ತತ್ವವೇನು? ಅವರ ಸ್ಥಾನಮಾನಗಳೇನು? ಎಂಬುದು ರಾಜಕೀಯ ವಿದ್ಯಾರ್ಥಿಗೆ ತಿಳಿದುಕೊಳ್ಳತಕ್ಕ ವಿಷಯ,

ಧಾರವಾಡದ ಭಾಷೆಯೇ ಹೆಚ್ಚಾಗಿ ಉಪಯೋಗಿಸಲ್ಪಟ್ಟು, ಅನೇಕ ಮರಾಠೀ ಶಬ್ದ ಮಿಶ್ರಣಗಳಿಂದ ಈ ಪುಸ್ತಕವು ಅಲ್ಲಿನವರಿಗೆ ಎಷ್ಟು ಉಪಯುಕ್ತವಾಗುವುದೋ, ಅಷ್ಟು ಅಖಿಲ ಕರ್ನಾಟಕದವರಿಗೆ ಮಂದಟ್ಟಾಗಲಾರದು

ಮುದ್ರಾ ರಾಕ್ಷಸನ ದೋಷಗಳೂ ತುಂಬಾ ಇವೆ ಅಂತೂ, ಸಾಹಿತ್ಯ ದೃಷ್ಟಿಯನ್ನು ಬಿಟ್ಟು ರಾಜಕೀಯ ದೃಷ್ಟಿಯಿಂದ ಇದು ಕನ್ನಡಿಗರಿಗೆ ಒಂದು ನೂತನ ವ್ಯಕ್ತಿ ತತ್ವ ಬೋಧಕವಾದ ಗ್ರಂಥವಾಗಿ ಪ್ರಯೋಜನಕಾರಿಯಾಗುವುದೆಂಬುದರಲ್ಲಿ ಸಂದೇಹವಿಲ್ಲ

— ಕಯ್ಯಾರ

ಸಾದರಸ್ವೀಕಾರ

ಆ ಕ್ಯಾಪಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಈ ಸಂಸ್ಥೆಯ ಚರಿತ್ರೆ ಮತ್ತು ಕಾರ್ಯಗಳ ವಿಸ್ತಾರದ ಸಂಚಿಕೆಯೊಂದು ನಮ್ಮ ಹಸ್ತಗತವಾಗಿದೆ ಈ ಸಂಸ್ಥೆಯ ಮೇನೆಜಿಂಗ್ ಡೈರೆಕ್ಟರರೂ ಡೈರೆಕ್ಟರ್ ಒಫ್ ಬೋರ್ಡಿನ ಚೇರ್ಮೇನರೂ ಆದ ಡಾ| ಟಿ ಮಾಧವಪೈಗಳ ಜೀವನಚರಿತ್ರೆಯೂ ಕೊಡಲಾಗಿದೆ ಸಂಸ್ಥೆಯ ಬೇರೆ ಬೇರೆ ಕಡೆಗಳ ಮತ್ತು ಉದ್ಯೋಗಸ್ಥರ ಅನೇಕ ಛಾಯಾಚಿತ್ರಗಳೂ ಇವೆ ಸಂಚಿಕೆಯು ಅಂದವಾಗಿ ಮುದ್ರಿಸಲ್ಪಟ್ಟಿದೆ ಸಂಸ್ಥೆಯು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ.

For
Paintings, Photo enlargements, Letter-head designs, Advertisement Slides - - - -
IN SHORT
All Artistic Requisties

PLEASE CONSULT
S. R. BEKAL
ARTIST
SWADESHABHIMANI OFFICE
Car-street - - MANGALORE.

ಸಿನೇಮಾ ನಟರ ಜೀವನ ಪರಿಚಯ

೬. ಮಜ್ಹರ್ ಖಾನ್

ವೇಷವೆಲ್ಲವಿಡದ ಮಾಟಗಾರ.

ಭಾರತ ಚಿತ್ರಗಳಲ್ಲಿ ಕಾರ್ಯಕುಶಲನಾದ, ವಿಶಿಷ್ಟ ಅಭಿನಯಗಾರನೆಂದರೆ ಮಜ್ಹರಖಾನನೇ ಸರಿ. ವೇಷವಲ್ಲಟಕೆಯ ಕಾರ್ಯಕುಶಲತೆಯಲ್ಲಿ ಈತನು ಅಗ್ರಗಣ್ಯ. ಈತನು ಸಿನೇಮಾ ವೃತ್ತಿಯನ್ನು ಮೂಕ ಚಲಚ್ಚಿತ್ರಗಳ ಕಾಲದಿಂದ ಪ್ರಾರಂಭಿಸಿದನು. ವಿಶಾಲವಾದ ಈತನ ಎದೆ, ಬಲವಾದ ತೋಳುಗಳುಳ್ಳ ಮೈಕಟ್ಟು ಬಾಲ್ಯದ ಗರಡಿ ಸಾಧನೆಯ ಜೀವನವನ್ನು ಪ್ರಕಟಿಸುತ್ತಿದ್ದುವು.

'ಬಿರುಸಾದ' ನೀಚ ಯಾ ದ್ರೋಹಿಯ ಪಾತ್ರವನ್ನು ವಿಶಿಷ್ಟ ರೀತಿಯಲ್ಲಿ ಅಭಿನಯಿಸುವ ಈತನ ಪ್ರತಿಭೆಯು ಶ್ಲಾಘನೀಯವಾದುದಲ್ಲದೆ ಈತನಿಗೆ ಯಶಸ್ಸನ್ನು ತಂದಿರುವುದು. ಆದರೂ ಹಾಸ್ಯ ಮತ್ತು ನಾಯಕನ ಪಾತ್ರವನ್ನು ಕೂಡಾ ಅಭಿನಯಿಸಬಲ್ಲನು.

ಅಕಬರನ ಪಾತ್ರದಲ್ಲಿ

'ರಾಜ ತಿಲಕ' ಎಂಬ ಚಿತ್ರದಲ್ಲಿ ಕಥಾನಾಯಕ ಪಾತ್ರವನ್ನು ಅಭಿನಯಿಸಿ ತನ್ನ ವರ್ಚಸ್ಸನ್ನು ಸ್ಥಾಪಿಸಿರುವನು. 'ಮಾಧುರಿ' ಮತ್ತು 'ನೂರಜಹಾನ್' ಎಂಬ ಎರಡು ಚಿತ್ರಗಳಲ್ಲಿ ಅಕಬರನ ಪಾತ್ರವನ್ನು ಸ್ವೀಕರಿಸಿರುವನು. 'ಸೊಹನಿ ಮಹಿವಾಲಾ' ಎಂಬ ಚಿತ್ರದಲ್ಲಿ ಷಾಜಹಾನನಾಗಿ ಅಭಿನಯಿಸಿರುವನು. ಇಷ್ಟರ ತನಕ ಈತನು ಸುಮಾರು ೧೦೦ ಚಿತ್ರಗಳಲ್ಲಿ ಅಭಿನಯಿಸಿರುವನು. ಆದರೆ ಈ ಎಲ್ಲ ಚಿತ್ರಗಳಲ್ಲಿ ಈತನ ಅಭಿನಯವು ಸಿಪ್ಪ[illegible]ಜಕವಾಗದ್ದರಿಂದ ಈತನು ತನ್ನ ಅಭಿನಯದ ವಿಷಯವಾಗಿ ಹೆಮ್ಮೆಪಡುತ್ತಿರುವನು.

ಸಂಯುಕ್ತ ಪ್ರಾಂತ್ಯದ ಪಿಲಿಭಿತ್ [illegible] ಅಕ್ಟೋಬರ [illegible]ರಲ್ಲಿ ಜನ್ಮವೆತ್ತಿದನು. ಇಂದೂರಿನಲ್ಲಿ ವಿದ್ಯಾರ್ಜನೆಗೈದು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ದಾರಾ ಸಂಸ್ಥಾನದಲ್ಲಿ ಪೋಲಿಸು ಫೌಜಿನಲ್ಲಿ ಸಬ್ ಇನ್ಸ್‌ಪೆಕ್ಟರನ ನೌಕರಿಯನ್ನು ಸಂಪಾದಿಸಿದನು.

ಸಿನೇಮಾ ಜೀವನ

'ನಾನು ಸಿನೇಮಾ ಜೀವನವನ್ನು ಹೇಗೆ ಪ್ರಾರಂಭಿಸಿದೆ?' ಎಂಬುದರ ವಿಷಯ ಮಜ್ಹರಖಾನನು ಈ ರೀತಿಯಲ್ಲಿ ಅಭಿಪ್ರಾಯ ಪಡುತ್ತಿರುವನು. 'ಪೋಲಿಸ್ ಫೌಜಿನ ಕೆಲಸದಲ್ಲಿ ನನಗೆ ಬೇಸರವೂ ನಿರಾಶೆಯೂ ಪ್ರಾರಂಭವಾಯಿತು. ಈ ಸಮಯದಲ್ಲಿ ನಾನು ಗುಂಡುಹೊಡೆಯುವುದು, ಕುದುರೆ ಸವಾರಿ, ಪೋಲೊ ಮುಂತಾದ ಆಟಗಳಲ್ಲಿ ಚಾತುರ್ಯವನ್ನು ಸಂಪಾದಿಸಿದೆನು. ಚಲಚಿತ್ರ ನೋಡುವುದೆಂದರೆ ನನಗೆ ಬಹಳ ಆಸೆ. ಹೆಚ್ಚಾಗಿ ಎಲ್ಲಾ ಚಿತ್ರಗಳನ್ನು ನಾನು ನೋಡಿರುವೆನು. ಚಿತ್ರವನ್ನು ಕಂಡು ಹೊರಬಂದಾಗ ಚಿತ್ರದ ಕಥಾನಾಯಕ ಮತ್ತು 'ವಿಲನ್'ರ ಜೀವನ ರಹಸ್ಯದ ವಿಷಯ ಆಲೋಚಿಸುತ್ತಾ ಸಿನೇಮಾ ನಟರ ಜೀವನ ಎಷ್ಟು ಕಂಟಕಮಯ ಮತ್ತು ಅದ್ಭುತವಾದುದೆಂದು ಯೋಚಿಸುತ್ತಾ ನಿಟ್ಟುಸಿರೆಳೆಯುತ್ತಿದ್ದೆನು. ಆದರೆ ಸಿನೇಮಾ ಜೀವನವು ಯಾವ ರೀತಿಯದಿರುವುದೆಂದು ಈಗ ನಾನು ಚೆನ್ನಾಗಿ ಮನಗಂಡೆನು.'

'ನನ್ನ ತಂದೆಯು ನನ್ನ ವೃತ್ತಿಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿ ತನ್ನಂತೆ ಹೆಸರು ಸಂಪಾದಿಸಲು ನನಗೆ ಬೋಧಿಸುತ್ತಿದ್ದನು. ನನ್ನ ತಂದೆಯು ಮೆಜಿಸ್ಟ್ರೇಟರಾಗಿದ್ದರು. ಅವರ ಸಲುವಾಗಿ ನನ್ನ ವೃತ್ತಿಯಲ್ಲಿ ಬಹಳ ಶ್ರದ್ಧೆಯನ್ನು ತೋರಿಸಲಾರಂಭಿಸಿದೆ. ಅವರ ಪತ್ರಾಯಕ್ಕಾಗಿ ಮೆಜಿಸ್ಟ್ರೇಟರನ್ನು ಆರಿಸುವ ಪರೀಕ್ಷೆಗೆ ಕುಳಿತುಕೊಂಡೆನು. ಈ ಕೆಲಸದಲ್ಲಿ ನನಗೆ ಮನಸ್ಸೇ ಇರಲಿಲ್ಲ. ಫಲಿತಾಂಶವು ಬಯಲಾಗಲು ಲಜ್ಜೆಯಿಂದ ನಾನು ಊರು ಬಿಟ್ಟು ಬೊಂಬಾಯಿಗೆ ಪಲಾಯನಮಾಡಿದೆ.

ಆಶಾಭಂಗ

'ಬೊಂಬಾಯಿಗೆ ಮುಟ್ಟಿದೊಡನೆ ಪ್ರತಿಯೊಂದು ಚಲಚ್ಚಿತ್ರ ಕಂಪನಿಯನ್ನು ವಿಚಾರಿಸಿದೆನು. ಆದರೆ ಯಾರೊಬ್ಬರೂ ನನ ಮೇಲೆ ದಯೆ ತೋರಲಿಲ್ಲ. ಕಟ್ಟಕಡೆಗೆ ನನ್ನ ಜೀವನದ ವಿಷಯವಾಗಿ ನನಗೆ ಆಶಾಭಂಗವಾಯಿತು. ಸದ್ದೈವದಿಂದ ಪ್ರಖ್ಯಾತ ಡ್ಯಾರೆಕ್ಟರರಾದ ದಿವಂಗತ ಬಿ. ಪಿ. ಮಿಶ್ರರನ್ನು ಭೇಟಿಮಾಡಿದೆ. ಇವರು ನನ್ನ ಮೇಲೆ ಕನಿಕರಪಟ್ಟುದಲ್ಲದೆ ಚೆನ್ನಾಗಿ ಕಷ್ಟಪಟ್ಟು ನನ್ನನ್ನು ತರಬೇತಿಗೊಳಿಸಿ 'ಶ್ರೇಟಲ್ ಗಾರ್ಲೆಂಡ್' ಎಂಬ ಚಿತ್ರದಲ್ಲಿ ಅಭಿನಯಿಸುವಂತೆ ಸಂದರ್ಭವಿತ್ತರು. ನನ್ನ ಎರಡನೇ ಚಿತ್ರವು 'ಸರೋವರದ ಕನ್ಯೆ.'

ಮೂಕ ಚಿತ್ರಗಳು

ಮೂಕಚಿತ್ರಗಳು ಬಹಳವಾಗಿ ಪ್ರಚಾರದಲ್ಲಿದ್ದ ಸಮಯ ಮಜ್ಹರಖಾನನ ಉತ್ತಮ ಚಿತ್ರಗಳೆಂದರೆ 'ಎವೆಂಜಿಂಗ್ ಏಂಜಲ್' ಇದರಲ್ಲಿ ಕಥಾನಾಯಕ ಮತ್ತು 'ವಿಲನ್' ಎರಡು ಪಾತ್ರಗಳನ್ನೂ ಇವನೇ ಅಭಿನಯಿಸಿರುವನು. 'ವೆನಿಶಿಂಗ್ ಹೋಪ್' 'ರಜಪೂತನಾದ ರಕ್ತ' (ಸುಲೋಚನಾ ಮತ್ತು ಬಿಲ್ಲಿಮೋರಿಯಾರೊಂದಿಗೆ) 'ಸಿನೇಮಾ ಹುಡುಗಿ' (ಪೃಥ್ವೀರಾಜ ಮತ್ತು ಎರ್ಮಾಲಿನರೊಂದಿಗೆ) 'ಸಿಂದಬಾದ ನಾವಿಕ' 'ಚೆಲೆಂಜ್' 'ಅಲಿಬಾಬ ಮತ್ತು ೪೦ ಕಳ್ಳರು' ಮುಂತಾದುವುಗಳು.

ಈಗಲೂ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುವ ಈತನ ಅಭಿನಯ ಚಿತ್ರಗಳೆಂದರೆ 'ಫಾದರ್ ಇಂಡಿಯಾ' 'ಮಾಧುರಿ' 'ವಿಲೆಜ್ ಗರ್ಲ್' 'ಫ್ಲಯಿಂಗ್ ರಾಣಿ' 'ಮಿಡ್‌ನೈಟ್ ರೋಬರ್' 'ವೆಡ್ಡಿಂಗ್ ನೈಟ್' 'ಬಚ್ಚೆ ಸಕ್ಕಾ' ಇದರಲ್ಲಿ 'ಬಚ್ಚೆ ಸಕ್ಕಾ' ಚಿತ್ರದಲ್ಲಿ ಈತನ ವೇಷವು ಅಪಘಾನಿಸ್ಥಾನದ ಅರಸನಂತೆ ಕಂಡು ಬಂದದ್ದರಿಂದ ಈ ಚಿತ್ರದ ಪ್ರದರ್ಶನಕ್ಕೆ ಪ್ರತಿಬಂಧಿಸಿದ್ದರು.

ಮಾತಾಡುವ ಚಲಚ್ಚಿತ್ರ

ಮಾತಾಡುವ ಚಲಚ್ಚಿತ್ರಗಳು ಬರಲು ಪ್ರಾರಂಭವಾದುವು. ಮೂಕ ಚಿತ್ರಗಳು ಮೂಲೆ ಪಾಲಾದುವು. ಅದರೊಂದಿಗೆ ಪ್ರಸಿದ್ಧಿ ಪಟ್ಟ ಅನೇಕ ನಟ ನಟಿಯರು ಮೂಲೆ ಸೇರಿದರು. ಆದರೆ ಮಜ್ಹರ್ ಖಾನನು ಮಾತ್ರ ಮಾತಾಡುವ ಚಿತ್ರಗಳಲ್ಲಿ ಕೂಡಾ ಪ್ರಖ್ಯಾತಿಗೆ ಬಂದನು. ಇವನ ಪ್ರಥಮ ಮಾತನಾಡುವ ಚಿತ್ರವು 'ನೂರಜಹಾನ್' ನಂತರ ಈತನು ಸಾಗರ ಕಂಪೆನಿಯನ್ನು ಸೇರಿ 'ವೀರ ಅಭಿಮನ್ಯು' ಎಂಬ ಚಿತ್ರದಲ್ಲಿ ಅಭಿನಯಿಸಿದನು. ಕೂಡಲೇ ಇವನಿಗೆ ಕಲ್ಕತ್ತದ ನ್ಯೂ ಥಿಯೇಟರ್ಸಿನವರು ಆಮಂತ್ರಿಸಿದನು. 'ಸುಬಾಹಾ ಸಿತಾರಾ' ಎಂಬ ಚಿತ್ರದಲ್ಲಿ ಹಾಸ್ಯಗಾರನ ಭೂಮಿಕೆಯಲ್ಲಿ ಅಭಿನಯಿಸಿದನು. ಅದರ ನಂತರ ಕಲ್ಕತ್ತದ ಈಸ್ಟ್ ಇಂಡಿಯಾ ಫಿಲ್ಮ್ ಕಂಪೆನಿಯನ್ನು ಸೇರಿದನು. 'ಒಂದು ದಿನದ ಅರಸು' ಎಂಬ ಚಿತ್ರದಲ್ಲಿ ಸಬಿತಾದೇವಿಯೊಂದಿಗೆ ಅಭಿನಯಿಸಿದನು. ನಂತರ ಮುಮ್ತಾಜ್ ಬೇಗಮ್ 'ಸುಲ್ತಾನಾ' ಮುಂತಾದ ಅನೇಕ ಚಿತ್ರಗಳಲ್ಲಿ ನಾಯಕನ ಮತ್ತು ವಿಲನನ ಪಾತ್ರದಲ್ಲಿ ಕೆಲಸ ಮಾಡಿದನು.

ಆರು ತರದ ವೇಷಗಳು

ನಂತರ ಆತನ ಎಲ್ಲ ಚಿತ್ರಗಳಲ್ಲಿ 'ನೈಟ್ ಬರ್ಡ್' ಎಂಬ ಚಿತ್ರದಲ್ಲಿ ನಾಯಕನ ಪಾತ್ರದಲ್ಲಿ ಅಭಿನಯಿಸಿ ಆರು ತರದ ವೇಷಗಳನ್ನು ಧರಿಸಿದನು. ಮುಖ್ಯ ವೇಷವನ್ನು ಧರಿಸಲು ಈತನಿಗೆ ಆರು ತಾಸುಗಳ ಸಮಯವು ಬೇಕಾಯಿತು. ವೇಷವಲ್ಲಟದಿಂದ ಮುಖವು ಹಾಳಾಗದಂತೆ ರಾತ್ರಿ ಕ್ರೀಮು ಮತ್ತು ಇನ್ನಿತರ ಔಷಧೀಯ ಎಣ್ಣೆಗಳನ್ನು ಮುಖಕ್ಕೆ ತಾಗಿಸುತ್ತಿದ್ದನು.

ಮೋಟಾರ್ ಸೈಕಲು ಸವಾರಿ, ಈಜಾಟ, ಹಾರ್ಮೋನಿಯಮ್ ಬಾರಿಸುವದು ಮುಂತಾದುವುಗಳಲ್ಲಿ ಈತನಿಗೆ ಬಹಳ ಆಸಕ್ತಿ. ಈತನ ನಿಜವಾದ ಹೆಸರು 'ಇಸನತುಲ್ಲಾ ಖಾನ್' ಎಂಬುದು. ಹೆಚ್ಚಾಗಿ ತನ್ನ ವೃತ್ತಿಯಲ್ಲೇ ಮಗ್ನನಾಗಿರುವನು. ಮದುವೆಯಾಗಿರುವುದು. ಒಬ್ಬ ಮಗನಿರುವನು. ಈತನ ಈಗಿನ ಪ್ರಖ್ಯಾತ ಚಿತ್ರವು 'ಅಚ್ಯುತ' ಎಂಬುದು. ಇದು ಬೇಗನೇ ಅನೇಕ ಕಡೆಗಳಲ್ಲಿ ಪ್ರದರ್ಶಿಸಲ್ಪಡುವುದು. ಇದರಲ್ಲಿ ಈತನು ಒಬ್ಬ ವ್ಯಾಪಾರಸ್ಥನ ಪಾತ್ರದಲ್ಲಿ ಅಭಿನಯಿಸಿರುವನು. ಈಗ ಈತನು ರಣಜಿತ ಕಂಪೆನಿಯನ್ನು ಬಿಟ್ಟು ಬೇರೆ ಕಂಪೆನಿಯನ್ನು ಸೇರಲಿರುವನು.

ರೂಪಾಯಿ 1-12-0ಕ್ಕೆ ಲಿವರ್ ರಿಸ್ಟ್ ವಾಚು



ಈ ಚಿತ್ರದಲ್ಲಿ ತೋರುವುದಕ್ಕಿಂತಲೂ ಅಂದವಾದ ಚೌಕ ಮತ್ತು ದುಂಡಾಕಾರದ ಮೋಹಕ ರಿಸ್ಟ್‌ವಾಚುಗಳು. ಸರಿಯಾದ ಸಮಯ ತೋರಿಸುವುದೆಂದು 5 ವರ್ಷದ ಗ್ಯಾರಂಟಿ. ಕ್ರಯ 1-12-0, ಸುಪೀರಿಯರ್ 1-14-0, ಸ್ಪೆಶ್ಯಲ್ 2-8-0 ರೇಡಿಯಂ 3-8-0, ರೋಲ್ಡ್‌ಗೋಲ್ಡ್ 6-8-0, ಶ್ರೇಷ್ಠವಾದ್ದು 8-8-0 ಪೋಸ್ಟೇಜು ಮತ್ತು ಪೇಕಿಂಗ್ 0-10-0

3 ವಾಚುಗಳನ್ನು ಒಮ್ಮೆಲೇ ತರಿಸುವುದಾದರೆ ಪೋಸ್ಟೇಜು ಧರ್ಮಾರ್ಥ

Empire Trading Co.,
P. O. No. 6744 Calcutta. (A. B)

ಚಲಚ್ಚಿತ್ರ ಪ್ರಪಂಚ

'ಫಿಲ್ಮ್ ಇಂಡಿಯಾ' ಪತ್ರಿಕೆಯ ಸಂಪಾದಕರಿಗೂ ವಾಚಕರಿಗೂ ನಡೆದ ಕೆಲವು ಪ್ರಶ್ನೋತ್ತರಗಳು

ಪಿನ್ ಬಿ. (ಬರೋಡಾ)

ನಮ್ಮ ಬರೋಡಾ ಕಾಲೇಜಿನ ಹುಡುಗಿಯರೆಲ್ಲರೂ ಶಾಂತಾ ಆಪ್ಟೆಯ ಅಭಿನಯವನ್ನು ಹಾಡುವಿಕೆಯನ್ನು ಅನುಕರಿಸುತ್ತಾರೆ ಅವರು ಕಾಲೇಜು ಹುಡುಗರ ಗೌರವಕ್ಕೆ ಪಾತ್ರರಾಗಬಹುದೆಂದು ನೀವು ಎಣಿಸುತ್ತೀರೊ?

ಬರೋಡಾ ಕಾಲೇಜಿನ ಹುಡುಗರ ರಸಿಕತೆಯು ಅಭಿರುಚಿಯು ಯಾವುದೆಂದು ನನಗೆ ತಿಳಿದಿಲ್ಲ ಆದರೆ ತಾರುಣ್ಯದ ಕಾಲ್ಪನಿಕ ಮನೋರಾಜ್ಯದ ಗೋಪುರಕ್ಕೆ ಶಾಂತಾ ಆಪ್ಟೆಯು ಅಷ್ಟೊಂದು ಕೆಟ್ಟ ಮೂರ್ತಿ ಅಲ್ಲವೆಂದು ಹೇಳಬಲ್ಲೆ ಆದರೆ ನಿಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಶಾಂತಾ ಆಪ್ಟೆಯ ಕೆಟ್ಟ ಕೋಪವನ್ನು ಅನುಕರಿಸರೆಂದು ನಾನು ಆಶಿಸುತ್ತೇನೆ ಹಾಗೆ ಮಾಡಿದರೆ ಹುಡುಗರಿಗೆ ಗೊಂದಲವಾದೀತು

ನನ್ನ ಸ್ನೇಹಿತನೊಬ್ಬನು 'ಪ್ರಭಾ'ಳ ಸಲುವಾಗಿ ಸಾಯುತ್ತಿರುವನು ಇದರಿಂದಾಗಿ ಅವನಿಗೆ ಹುಚ್ಚು ಹಿಡಿದಂತಾಗಿದೆ ಇದಕ್ಕೆ ತಕ್ಕುದಾದ ಔಷಧ ಯಾವುದ ?

ಇಷ್ಟರ ತನಕ ಎಷ್ಟು ಸಾರಿ ಅವನು ಸತ್ತಿರುವನು? ಈಗಲೂ ಜೀವಂತನಾಗಿರುವನಾದರೆ ವಿಳಂಬಮಾಡದೆ ಕೊಂದು ಹುಗಿದು ಬಿಡಿರಿ ಅವನ ಸಲುವಾಗಿ ಒಂದು ಚಲೋ ದುಃಖದಾಯಕವಾದ ದೃಶ್ಯವನ್ನು ತಯಾರಿಸಲು ಸಮ್ಮತಿಸುವಂತೆ ಪ್ರಭಾಳನ್ನು ಕೇಳಿಕೊಳ್ಳುವ ಭಾರವನ್ನು ನಾನು ಹೊರುತ್ತೇನೆ ಪ್ರಭಾಳಿಗೆ ಮದುವೆಯಾಗಿರುವುದಲ್ಲದೆ ಕೆಲವು ಮಕ್ಕಳ ತಾಯಿಯಾಗಿರುವಳು ಈ ಸಂಗತಿಯನ್ನು ನಿಮ್ಮ ಸ್ನೇಹಿತರಿಗೆ ತಿಳಿಸಿರಿ ಈ ವಾರ್ತೆಯೇ ಅವರನ್ನು ಗುಣಪಡಿಸಬಹುದು.

ವೈ ಎ ವಿ ಪಟೀಲ (ರ್‍ಯಾಚೂರು)

(ಈ ಬಾರಿ ನಿಮ್ಮ ಉತ್ತರ ಸಿಗದಿದ್ದರೆ ನಿಮ್ಮ ಮೇಲೆ ನ್ಯಾಯವಾದ ದಾವೆಯನ್ನು ಹೂಡಬೇಕಾಗುವುದು ಇದರಿಂದ ನನಗೂ ನಿಮಗೂ ದ್ವೇಷಕ್ಕೆ ಕಾರಣವಾದೀತು) ಪ್ರಮಿಳೆಗೆ ಮದುವೆಯಾಗಿರುವುದೆ, ಅವಳ ಪ್ರಾಯ, ಸಂಬಂಧಿಕರು, ವಿಳಾಸ, ಅವಳಿಗೆ ಈಗ ಸ್ಟುಡಿಯೋದಲ್ಲಿ ಸಿಗುವ ಸಂಬಳ, ವಾಸಿಸುವ ಬೀದಿ

ಮಿಸ್ ಸರೋಜಿನಿ ಮತ್ತು ನವೀನಚಂದ್ರ ಇವರು

ಪೆರಮೌಂಟ್ ಇಂಡಿಯನ್ ಲಿಬರ್ಟಿ ಪಿಕ್ಚರ್ಸ್ ಕಂಪೆನಿಯವರ 'ಸಂಸಾರ್ ನಯ್ಯಾ' ಎಂಬ ಚಿತ್ರದಲ್ಲಿ

ಯ ಕುರಿತು ತಿಳಿಸಿರಿ. ಅವಳು ನನ್ನ ಭೇಟಿಗೆ ಸಮ್ಮತಿಸುವಳೇ? ಆಕೆಯ ಸೌಂದರ್ಯದ ಕುರಿತು ನಿಮ್ಮ ಅಭಿಪ್ರಾಯವೇನ ? ಆಕೆಯ ಮನಮೋಹಕವಾದ ನಗೆ ಮತ್ತು ಸೌಂದರ್ಯಪೂರ್ಣವಾದ ವದನವು ನನ್ನನ್ನು ಮರುಳುಗೊಳಿಸಿರುವುದು ಈ ನನ್ನ ಮರುಳಿಗೆ ಮದ್ದು ದುವುದೆ?

ಇದನ್ನೋದಿ ಈಗ ಪ್ರಮಿಳೆಗೂ ಮರುಳು ಹಿಡಿಯಬಹುದು ನಿಮ್ಮ ಈ ರೋಗವು ಗುಣವಾಗದಂಥಾ ದೀರ್ಘವ್ಯಾಧಿ. ಅಂತ್ಯದ ನಿರಾಶಾಜನಕವಾಗಿ 'ಮದುವೆ' ಮದ್ದನ್ನು ಪರೀಕ್ಷಿಸಿರಿ.

ಎಲ್ ನವಾನಿ (ಕರಾಚಿ)

ರೇಣುಕಾ ದೇವಿಯು ಮುಸ್ಲಿಮತರುಣಿಯೇ? ಅವಳ ನಿಜವಾದ ಹೆಸರು ಯಾವುದು, ಅವಳ ಜನ್ಮಸ್ಥಳ ಯಾವುದು?

ಸರಿ, ರೇಣುಕಾದೇವಿಯು ಮುಸ್ಲಿಮಳು ಖುರ್ಷಿದ ಎಂಬುದೇ ಆಕೆಯ ಹೆಸರು ಜನ್ಮಸ್ಥಳವು ಲಿಫೆರ್

ಹಿಕ್ಮತ್ ಯು ಖಾನ್ (ಗ್ವಾಲಿಯರ)

ಪ್ರಥ್ವಿರಾಜ ಮತ್ತು ಮೋತಿಲಾಲ ಇವರಿಬ್ಬರಲ್ಲಿ ಉತ್ತಮ ಅಭಿನಯ ಕುಶಲರು ಯಾರು?

ಇಬ್ಬರೂ ಅಭಿನಯ ಕುಶಲರೆ ಉತ್ತಮ ಅಭಿನಯವು ಅವರವರಿಗೆ ಕೊಟ್ಟ ನಟನೆಯ ಕೆಲಸದ ಮೇಲೆ ಹೊಂದಿಕೊಂಡಿದೆ ನಮ್ಮ ನಟರಿಗೆ ತಕ್ಕುದಾದ ನಟನೆಯ ಕೆಲಸಗಳು ಸಿಕ್ಕುವುದೇ ವಿರಳ ಮೋತಿಲಾಲನು ಹಾಸ್ಯರಸವತ್ತಾದ ನಟನೆಯಲ್ಲಿಯೂ ಪೃಥ್ವಿರಾಜನು ಗೌರವಯುಕ್ತವಾದ ಘನತೆಯ ನಟನೆಯಲ್ಲಿಯೂ ಶ್ರೇಷ್ಠತರ ಕಲೆಗಾರರು. ನಮ್ಮ ಟೀಗ ಮೋತಿಲಾಲನ 'ಶಾದಿನಗಳನಂತರ' ಮತ್ತು ಪೃಥ್ವಿರಾಜನ 'ವಿದ್ಯಾಪತಿ' ಎಂಬ ಚಿತ್ರಗಳಲ್ಲಿನ ಅಭಿಯನವೇ ಇದಕ್ಕೆ ಉದಾಹರಣೆಗಳಾಗಿವೆ

ಗ್ರೇಟಾ ಗಾರ್ಬೋಳನ್ನು ಜಗತ್ತಿನ ಪ್ರಥಮ ಶ್ರೇಣಿಯ ನಟಿಯೆಂದೆಣಿಸಬಹುದೇ?

ಇಲ್ಲ. ಅವಳಿಂದಲೂ ಉತ್ತಮ ನಟಿಯರಿರುವರು. ಅವಳ ಜಾಹೀರಾತಿನಿಂದ ಮತ್ತು ಅವಳಿಗೆ ಪ್ರತೀ ಒಂದು ಚಿತ್ರದಲ್ಲಿಯೂ ಯೋಗ್ಯ ನಟನೆಯ ಕೆಲಸವನ್ನು ಕೊಟ್ಟಿದ್ದರಿಂದ ಅವಳು ಉಚ್ಚಶ್ರೇಣಿಯ ನಟಿಯೆಂದು ಕೆಲವರು ಎಣಿಸಿರಬಹುದು ಆದರೆ ಆಕೆಯು ನೊರ್ಮಾ ಶಿರರಳಷ್ಟು ಸರ್ವಕಾರ್ಯ ಚತುರತೆಯ ನಟಿಯಲ್ಲವೆಂದು ನಿಃಸಂಕೋಚವಾಗಿ ಹೇಳಬಹುದು

ಅಪಹರಣೆ

ಸಾಗರ ಫಿಲ್ಮ ಕಂಪೆನಿಯ ನಟನಾದ ಮಿ. ಸುರೇಂದ್ರನಾಥನು ಸ್ಟುಡಿಯೋದಲ್ಲಿ ತನ್ನ ಕೆಲಸವನ್ನು ಮುಗಿಸಿ ರಾತ್ರೆ ಮನೆಗೆ ಹಿಂತಿರುಗುವಾಗ ಕೆಲವು ಮಂದಿ ಕಳ್ಳರು ಹಿಡಿದು ನಿಲ್ಲಿಸಿ ಆತನ ಹತ್ತಿರ ವಿದ್ದ ಒಂದು ಚಿನ್ನದ ಉಂಗುರ, ರಿಸ್ಟ್ ವಾಚ ಮತ್ತು ಕೆಲವು ರೂಪಾಯಿಗಳನ್ನು ಅಪಹರಿಸಿದರ ಪ್ರಾಯಶಃ ಅಪಹರಿಸಿದವರು ಚಲಚ್ಚಿತ್ರಗಳನ್ನು ಕಂಡೇ ಇದನ್ನು ಕಲಿತರಬಹುದು

ಕಂಪೆನಿಯ ಮೇಲೆ ದಾವೆ

ಮೊಂಬ್ಬಾಯ ಸಿನಮಾ ಮಂದಿರವೊಂದರಲ್ಲಿ ಈಗ ಪ್ರದರ್ಶಿಸಲ್ಪಡುತ್ತಿರುವ 'ಬಂಡರ' ಎಂಬ ಚಿತ್ರದಲ್ಲಿ ಅಭಿನಯಿಸಿದ ರೊಮಿಲಾಳು ತನಗೆ ಬರತಕ್ಕ ಸಂಬಳಕ್ಕಾಗಿ ದಾವೆ ಹೂಡಿರುವಳು

ಪ್ರದರ್ಶನಕ್ಕೆ ನಿರ್ಭಂಧ

ಬಗವಾ ಶ್ರೀ ... ಚಿತ್ರವು ಶಿವಾಜಿಗಿಂತಲೂ ರಾಮದಾಸರ ... ತೆ ... ತ ... ತ್ತಿದೆಯೆಂದೂ ಇದು ಶಿವಾಜಿಯ ಜೀವನ ಚರಿತ್ರೆ ... ಆ ಚಿತ್ರವನ್ನು ಕೊಲ್ಲಾಪುರದಲ್ಲಿ ಪ್ರದರ್ಶಿಸಬಾರದೆಂತ ನಿರ್ಬಂಧಿಸಿರುವರೆಂದೂ ವಾರ್ತೆ

ಹನ್ಸ ಪಿಕ್ಚರ್ಸ್

ಹನ್ಸ ಪಿಕ್ಚರ್ಸಿನವರು ಗುಲಾಬಿ ಫಂಡಾ (In search of happiness) ಎಂಬ ಚಿತ್ರವು ತ್ವರಿತಗತಿಯಿಂದ ತಯಾರಾಗುತ್ತಿದೆ ಇದರಲ್ಲಿ ಬಾಬುರಾವ್ ಪೆಂಡಾರ್ಕರರು ನಾಯಕರಾಗಿ ಉಷಾದೇವಿ, ಮಂತ್ರಿ, ಮಾಲ್ವಂಕರ್, ಜೋಗ್ ಸಾಳ್ವಿ ಮೊದಲಾದವರೊಂದಿಗೆ ಅಭಿನಯಿಸುವರು

ಶಾಂತಾ ಹುಬ್ಳೀಕರ್ ಮತ್ತು ಶಾಹು ಮೋಡಕ್ ಇವರು

ಪ್ರಭಾತ ಕಂಪೆನಿಯ 'ಆದ್ಮಿ' ಎಂಬ ಚಿತ್ರದಲ್ಲಿ,

'ಆದ್ಮಿ' ಚಿತ್ರದಲ್ಲಿನ ಇನ್ನೊಂದು ದೃಶ್ಯ.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಸಮಯದ ಬೆಲೆ ಎಷ್ಟೆಂದು ನಿಶ್ಚೈಸಿದವರಿರುವರೆ?

ಹಣದ ಬೆಲೆಯನ್ನು ಕಟ್ಟಬಹುದು—ಆದರೆ ಸಮಯದ ಬೆಲೆಯನ್ನು ನಿಶ್ಚೈಸಲಸಾಧ್ಯ!

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶ ಕೊಡದಂತೆ, ನಮ್ಮ ಸರ್ವಿಸುಗಳು ಪ್ರಾತಃಕಾಲದಿಂದ— ಸಾಯಂಕಾಲ ವರೆಗೆ ಬಿಡುವಿಲ್ಲದೆ ಓಡಾಡುತಿದ್ದು ನಿಮ್ಮ ಯಾವುದೇ ಕೆಲಸಗಳನ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡು ಮಾಡಿರುವೆವು ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನು ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು'

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದೌರ್ಬಲ್ಯ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ.
P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	4—14—0	4—14—0
,, ದುಯಂ ,, ,,	4—10—0	4—12—0
,, ಅವ್ವಲ್ ಸುಗ್ಗಿ ,,	4—9—0	—
,, ದುಯಂ ,, ,,	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದು ,,	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
,, ದಿಲ್‌ಪಸಂದ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	2—8—0	8—8—0
ಗೇರುಬೀಜ ಮುಡಿಗೆ	8—10—0	8—12—0
ಕಬ್ಬಿನ ಬೆಲ್ಲ ಖಂಡಿಗೆ	55—0—0	60—0—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	14—8—0	15—8—0

ಚಲಚ್ಚಿತ್ರ ಪ್ರಪಂಚ

'ಫಿಲ್ಮ್ ಇಂಡಿಯಾ' ಪತ್ರಿಕೆಯ ಸಂಪಾದಕರಿಗೂ ವಾಚಕರಿಗೂ ನಡೆದ ಕೆಲವು ಪ್ರಶ್ನೋತ್ತರಗಳು

ಪಿನ್. ಬಿ. (ಬರೋಡಾ)

ನಮ್ಮ ಬರೋಡಾ ಕಾಲೇಜಿನ ಹುಡುಗಿಯರೆಲ್ಲರೂ ಶಾಂತಾ ಆಪ್ಟೆಯ ಅಭಿನಯವನ್ನು ಹಾಡುವಿಕೆಯನ್ನು ಅನುಕರಿಸುತ್ತಾರೆ. ಅವರು ಕಾಲೇಜು ಹುಡುಗರ ಗೌರವಕ್ಕೆ ಪಾತ್ರರಾಗಬಹುದೆಂದು ನೀವು ಎಣಿಸುತ್ತೀರೋ?

ಬರೋಡಾ ಕಾಲೇಜಿನ ಹುಡುಗರ ರಸಿಕತೆಯ ಅಭಿರುಚಿಯು ಯಾವುದೆಂದು ನನಗೆ ತಿಳಿದಿಲ್ಲ. ಆದರೆ ತಾರುಣ್ಯದ ಕಾಲ್ಪನಿಕ ಮನೋರಾಜ್ಯದ ಗೋಪುರಕ್ಕೆ ಶಾಂತಾ ಆಪ್ಟೆಯು ಅಷ್ಟೊಂದು ಕೆಟ್ಟ ಮೂರ್ತಿ ಅಲ್ಲವೆಂದು ಹೇಳಬಲ್ಲೆ. ಆದರೆ ನಿಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಶಾಂತಾ ಆಪ್ಟೆಯ ಕೆಟ್ಟ ಕೋಪವನ್ನು ಅನುಕರಿಸರೆಂದು ನಾನು ಆಶಿಸುತ್ತೇನೆ. ಹಾಗೆ ಮಾಡಿದರೆ ಹುಡುಗರಿಗೆ ಗೊಂದಲವಾದೀತು.

ನನ್ನ ಸ್ನೇಹಿತನೊಬ್ಬನು 'ಪ್ರಭಾ'ಳ ಸಲುವಾಗಿ ಸಾಯುತ್ತಿರುವನು. ಇದರಿಂದಾಗಿ ಅವನಿಗೆ ಹುಚ್ಚು ಹಿಡಿದಂತಾಗಿದೆ. ಇದಕ್ಕೆ ತಕ್ಕುದಾದ ಔಷಧ ಯಾವುದು?

ಇಷ್ಟರ ತನಕ ಎಷ್ಟು ಬಾರಿ ಅವನು ಸತ್ತಿರುವನು? ಈಗಲೂ ಜೀವಂತನಾಗಿರುವನಾದರೆ ವಿಳಂಬಮಾಡದೆ ಕೊಂದು ಹುಗಿದು ಬಿಡಿರಿ. ಅವನ ಸಲುವಾಗಿ ಒಂದು ಚಲೋ ದುಃಖದಾಯಕವಾದ ದೃಶ್ಯವನ್ನು ತಯಾರಿಸಲು ಸಮ್ಮತಿಸುವಂತೆ ಪ್ರಭಾಳನ್ನು ಕೇಳಿಕೊಳ್ಳುವ ಭಾರವನ್ನು ನಾನು ಹೊರುತ್ತೇನೆ. ಪ್ರಭಾಳಿಗೆ ಮದುವೆಯಾಗಿರುವುದಲ್ಲದೆ ಕೆಲವು ಮಕ್ಕಳ ತಾಯಿಯಾಗಿರುವಳು. ಈ ಸಂಗತಿಯನ್ನು ನಿಮ್ಮ ಸ್ನೇಹಿತರಿಗೆ ತಿಳಿಸಿರಿ. ಈ ವಾರ್ತೆಯೇ ಅವರನ್ನು ಗುಣಪಡಿಸಬಹುದು.

ವೈ. ಎ. ವಿ. ಪಟೇಲ (ರ್‍ಯಾಚೂರು)

(ಈ ಬಾರಿ ನಿಮ್ಮ ಉತ್ತರ ಸಿಗದಿದ್ದರೆ ನಿಮ್ಮ ಮೇಲೆ ನ್ಯಾಯವಾದ ದಾವೆಯನ್ನು ಹೂಡಬೇಕಾಗುವುದು. ಇದರಿಂದ ನನಗೂ ನಿಮಗೂ ದ್ವೇಷಕ್ಕೆ ಕಾರಣವಾದೀತು.) ಪ್ರಮಿಳೆಗೆ ಮದುವೆಯಾಗಿರುವುದೆ, ಅವಳ ಪ್ರಾಯ, ಸಂಬಂಧಿಕರು, ವಿಳಾಸ, ಅವಳಿಗೆ ಈಗ ಸ್ಟುಡಿಯೋದಲ್ಲಿ ಸಿಗುವ ಸಂಬಳ, ವಾಸಿಸುವ ಬೀದಿಯು ಕುರಿತು ತಿಳಿಸಿರಿ. ಅವಳು ನನ್ನ ಭೇಟಿಗೆ ಸಮ್ಮತಿಸುವಳೇ? ಆಕೆಯ ಸೌಂದರ್ಯದ ಕುರಿತು ನಿಮ್ಮ ಅಭಿಪ್ರಾಯವೇನು? ಆಕೆಯ ಮನಮೋಹಕವಾದ ನಗೆ ಮತ್ತು ಸೌಂದರ್ಯಪೂರ್ಣವಾದ ವದನವು ನನ್ನನ್ನು ಮರುಳುಗೊಳಿಸಿರುವುದು. ಈ ನನ್ನ ಮರುಳಿಗೆ ಮದ್ದು ದುವುದೆ?

ಇದನ್ನೋದಿ ಈಗ ಪ್ರಮಿಳೆಗೂ ಮರುಳು ಹಿಡಿಯಬಹುದು. ನಿಮ್ಮ ಈ ರೋಗವು ಗುಣವಾಗದಂಥಾ ದೀರ್ಘವ್ಯಾಧಿ. ಅಂತ್ಯದ ನಿರಾಶಾಜನಕವಾಗಿ 'ಮದುವೆ' ಮದ್ದನ್ನು ಪರೀಕ್ಷಿಸಿರಿ.

ಎಲ್. ನವಾನಿ (ಕರಾಚಿ)

ರೇಣುಕಾ ದೇವಿಯು ಮುಸ್ಲಿಮ ತರುಣಿಯೇ? ಅವಳ ನಿಜವಾದ ಹೆಸರು ಯಾವುದು, ಅವಳ ಜನ್ಮಸ್ಥಳ ಯಾವುದು?

ಸರಿ, ರೇಣುಕಾದೇವಿಯು ಮುಸ್ಲಿಮಳು. ಖುರ್ಶಿದ ಎಂಬುದೇ ಆಕೆಯ ಹೆಸರು; ಜನ್ಮಸ್ಥಳವು ಅಲಿಘರ್.

ಹಿಕ್ಮತ್ ಯು. ಖಾನ್ (ಗ್ವಾಲಿಯರ)

ಪ್ರಥ್ವಿರಾಜ ಮತ್ತು ಮೋತಿಲಾಲ ಇವರಿಬ್ಬರಲ್ಲಿ ಉತ್ತಮ ಅಭಿನಯ ಕುಶಲರು ಯಾರು?

ಇಬ್ಬರೂ ಅಭಿನಯ ಕುಶಲರೆ. ಉತ್ತಮ ಅಭಿನಯವು ಅವರವರಿಗೆ ಕೊಟ್ಟ ನಟನೆಯ ಕೆಲಸದ ಮೇಲೆ ಹೊಂದಿಕೊಂಡಿದೆ. ನಮ್ಮ ನಟರಿಗೆ ತಕ್ಕದಾದ ನಟನೆಯ ಕೆಲಸಗಳು ಸಿಕ್ಕುವುದೇ ವಿರಳ. ಮೋತಿಲಾಲನು ಹಾಸ್ಯರಸವತ್ತಾದ ನಟನೆಯಲ್ಲಿಯೂ ಪೃಥ್ವಿರಾಜನು ಗೌರವಯುಕ್ತವಾದಘನತೆಯ ನಟನೆಯಲ್ಲಿಯೂ ಅತ್ಯಂತ ಕುಶಲರಿರುವರು. ನನ್ನಮಟ್ಟಿಗೆ ಮೋತಿಲಾಲನ "ಶಾದಿನಗಳ ಸಂಕರ" ಮತ್ತು ಪೃಥ್ವಿರಾಜನ "ವಿದ್ಯಾಪತಿ" ಎಂಬ ಚಿತ್ರಗಳಲ್ಲಿನ ಅಭಿಯವೇ ಇದಕ್ಕೆ ಉದಾಹರಣೆಗಳಾಗಿವೆ.

ಗ್ರೇಟಾ ಗಾರ್ಬೋಳನ್ನು ಜಗತ್ತಿನ ಪ್ರಥಮ ಶ್ರೇಣಿಯ ನಟಿಯೆಂದೆಣಿಸಬಹುದೇ?

ಇಲ್ಲ. ಅವಳಿಂದಲೂ ಉತ್ತಮ ನಟಿಯರಿರುವರು. ಅವಳ ಜಾಹೀರಾತಿನಿಂದ ಮತ್ತು ಅವಳಿಗೆ ಪ್ರತಿ ಒಂದು ಚಿತ್ರದಲ್ಲಿಯೂ ಯೋಗ್ಯ ನಟನೆಯ ಕೆಲಸವನ್ನು ಕೊಟ್ಟಿದ್ದರಿಂದ ಅವಳು ಉಚ್ಚಶ್ರೇಣಿಯ ನಟಿಯೆಂದು ಕೆಲವರು ಎಣಿಸಿರಬಹುದು. ಆದರೆ ಆಕೆಯು ನೊರ್ಮಾ ಶಿರರಳಷ್ಟು ಸರ್ವಕಾರ್ಯ ಚತುರತೆಯ ನಟಿಯಲ್ಲವೆಂದು ನಿಃಸಂಕೋಚವಾಗಿ ಹೇಳಬಹುದು.

ಮಿಸ್ ಸರೋಜಿನಿ ಮತ್ತು ನವೀನಚಂದ್ರ ಇವರು

ಪೆರಮೌಂಟ್ ಇಂಡಿಯನ್ ಲಿಬರ್ಟಿ ಪಿಕ್ಚರ್ಸ್ ಕಂಪೆನಿಯವರ 'ಸಂಸಾರ್ ನಯ್ಯಾ' ಎಂಬ ಚಿತ್ರದಲ್ಲಿ

ಅಪಹರಣ

ಸಾಗರ ಫಿಲ್ಮ ಕಂಪೆನಿಯ ನಟನಾದ ಮಿ. ಸುರೇಂದ್ರನಾಥನು ಸ್ಟುಡಿಯೋದಲ್ಲಿ ತನ್ನ ಕೆಲಸವನ್ನು ಮುಗಿಸಿ ರಾತ್ರಿ ಮನೆಗೆ ಹಿಂತಿರುಗುವಾಗ ಕೆಲವು ಮಂದಿ ಕಳ್ಳರು ಹಿಡಿದು ನಿಲ್ಲಿಸಿ ಆತನ ಹತ್ತಿರವಿದ್ದ ಒಂದು ಚಿನ್ನದ ಉಂಗುರ, ರಿಸ್ಟ್ ವಾಚು ಮತ್ತು ಕೆಲವು ರೂಪಾಯಿಗಳನ್ನು ಅಪಹರಿಸಿದರು. ಪ್ರಾಯಶಃ ಅಪಹರಿಸಿದವರು ಚಲಚ್ಚಿತ್ರಗಳನ್ನು ಕಂಡೇ ಇದನ್ನು ಕಲಿತಿರಬಹುದು.

ಕಂಪೆನಿಯ ಮೇಲೆ ದಾವೆ

ಬೊಂಬಾಯಿ ಸಿನೆಮಾ ಮಂದಿರವೊಂದರಲ್ಲಿ ಈಗ ಪ್ರದರ್ಶಿಸಲ್ಪಡುತ್ತಿರುವ 'ಥಂಡರ್' ಎಂಬ ಚಿತ್ರದಲ್ಲಿ ಅಭಿನಯಿಸಿದ ಲೀಮಿಲಾಳು ತನಗೆ ಬರತಕ್ಕ ಸಂಬಳಕ್ಕಾಗಿ ದಾವೆ ಹೂಡಿರುವಳು.

ಪ್ರದರ್ಶನಕ್ಕೆ ನಿರ್ಬಂಧ

'ಭಗವಾ ಝೆಂಡಾ' ಎಂಬ ಚಿತ್ರವು ಶಿವಾಜಿಗಿಂತಲೂ ರಾಮದಾಸರ ಪ್ರಾಮುಖ್ಯತೆ ಮತ್ತು ಶ್ರೇಷ್ಠತೆಯನ್ನು ತೋರಿಸುತ್ತಿದೆಯೆಂದೂ ಇದು ಶಿವಾಜಿಯ ಜೀವನಚರಿತ್ರೆಗೆ ಅಪಮಾನಕರವೆಂದೆಣಿಸಿ ಆ ಚಿತ್ರವನ್ನು ಕೊಲ್ಹಾಪುರದಲ್ಲಿ ಪ್ರದರ್ಶಿಸದಂತೆ ನಿರ್ಬಂಧಿಸಿರುವರೆಂದೂ ವಾರ್ತೆ.

ಹನ್ಸ ಪಿಕ್ಚರ್ಸ್

ಹನ್ಸ ಪಿಕ್ಚರ್ಸಿನವರು 'ಗುಲಾಬಿ ಫಂಡಾ' (In search of happiness) ಎಂಬ ಚಿತ್ರವು ತ್ವರಿತಗತಿಯಿಂದ ತಯಾರಾಗುತ್ತಿದೆ. ಇದರಲ್ಲಿ ಬಾಬುರಾವ್ ಪೆಂಡಾರ್ಕರರು ನಾಯಕರಾಗಿ ಉಷಾದೇವಿ, ಮಂತ್ರಿ, ಮಾಲ್ವಂಕರ್, ಜೋಗ್ ಸಾಳ್ವಿ ಮೊದಲಾದವರೊಂದಿಗೆ ಅಭಿನಯಿಸುವರು.

ಶಾಂತಾ ಹುಬ್ಳೀಕರ್ ಮತ್ತು ಶಾಹು ಮೋಡಕ್ ಇವರು

ಪ್ರಭಾತ ಕಂಪೆನಿಯ 'ಆದ್ಮಿ' ಎಂಬ ಚಿತ್ರದಲ್ಲಿ.



'ಆದ್ಮಿ' ಚಿತ್ರದಲ್ಲಿನ ಇನ್ನೊಂದು ದೃಶ್ಯ.

...ಲ್ಲ ಕಾರಣಗಳನ್ನು ಮುಂದೆ ಬೆಳೆಸ ಬಿಡಬಾರದು

ನೆಹರುಗಳ ನಿವೇದನೆ

ಮದ್ರಾಸಿಗೆ ಬೋಸರ ಆಗಮನ

ಗಾಂಧಿಜಿಯವರನ್ನು ನಂಬಿರಿ

ಶ್ರೀನಿವಾಸ ಅಯ್ಯಂಗಾರರೊಡನೆ ಅವರು ಮೂರು ದಿನಗಳ ವರೆಗೆ ನಗರದಲ್ಲಿಯೇ ಭಾಷಣ ಪ್ರಚಾರಗಳ ಕಾರ್ಯಕ್ರಮ ಇಟ್ಟಿರುವರು.

ರಾಷ್ಟ್ರೀಯ ಯೋಜನಾ ಸಮಿತಿಗೆ ಬಂಗಾಳದ ಬೆಂಬಲವಿದೆ

ರಾಷ್ಟ್ರೀಯ ಯೋಜನಾಸಮಿತಿಯು ...ಾಳ ಸರಕಾರವು ಸಹ

ಗಾಂಧಿಜಿಯವರು ಪಂಜಾಬಿಗೆ ಬರಲಿ

ಪಂಜಾಬ್ ಕಾಂಗ್ರೆಸಿನ ಪಕ್ಷ ಭೇದಗಳ ವೈಷಮ್ಯಗಳನ್ನು ತೆಗೆಯಲು, ಗಾಂಧಿಜಿ, ರಾಜೇಂದ್ರ ಪ್ರಸಾದ, ಅಜಾದರು ಪಂಜಾಬಿಗೆ ಬರಬೇಕೆಂದು ಡಾ ಸತ್ಯಪಾಲರು ತಿಳಿಸುತ್ತಾರೆ

ಮಹಾತ್ಮರು ಹರಿಜನದಲ್ಲಿ ಹೇಳಿದಂತೆ ಪಕ್ಷದವನೆಂಬುದನ್ನು ಮರೆತು, ನಿಷ್ಪಕ್ಷಪಾತಿಯಾಗಿ, ಕಾಂಗ್ರೆಸನ್ನು ಒಟ್ಟುಗೂಡಿಸುವ ಕೆಲಸವನ್ನು ತಾನು ವಹಿಸಲು ಇಚ್ಛಿಸುವುದಾದರೂ ಏಕಾಂಗಿಯಾಗಿ ಹಾಗೆ ಮಾಡಲಾರೆನೆಂದೂ, ಮಹಾತ್ಮಾಜಿಯವರು ಬಂದು, ನಾನು ಏನು ಮಾಡಬೇಕೆಂದು ತಿಳಿಸಿದರೆ, ಅದರಂತೆ ಮಾಡಲು ಸಿದ್ಧನಿದ್ದೇನೆಂದೂ ಹೇಳಿರುವರು

ಮೊದಲಾಗಿ, ಮಹಾತ್ಮರ ಅಸಹಕಾರ ಚಳವಳದಲ್ಲಿ ಪಂಜಾಬ್ ಬಹಳ ಪ್ರಾಮುಖ್ಯ ಭಾಗ ವಹಿಸಿರುವುದರಿಂದ, ಮಹಾತ್ಮರಿಗೆ ಪಂಜಾಬಿನ ವಿಷಯದಲ್ಲಿ ಹೆಚ್ಚು ಆಸಕ್ತಿಯಿರಬೇಕಾಗಿದೆಯೆಂದು ಬರೆಯುತ್ತಾರೆ

'ನಮ್ಮಲ್ಲಿ ಅಭಿಪ್ರಾಯ ಭೇದವಾಗಬಹುದು'

ದೇಸಾಯಿಗಳ ಹೇಳಿಕೆ

ರಾಯಪುರ ನಗರ ಸಭೆಯವರಿತ್ತ ಮಾನಪತ್ರಕ್ಕೆ ಉತ್ತರವಾಗಿ ಶ್ರೀ ಭುಲಾಭಾಯಿ ದೇಸಾಯಿಗಳು ಮಾತನಾಡುತ್ತಾ, ನಮಗೆ ಇಂದಿನ ರಾಜಕೀಯದಲ್ಲಿ ಅಭಿಪ್ರಾಯ ಭೇದವಾಗಬಹುದು ಆದರೆ ಐಕ್ಯತೆಯಿಂದಿದ್ದು, ಐಕ್ಯ ಕಾರ್ಯಸಾಧನೆಮಾಡುವ ಒಂದು ವಿಷಯದಲ್ಲಿ ಮಾತ್ರ ನಾವು ಭಿನ್ನರಾಗಲು ಸಾಧ್ಯವಿಲ್ಲ' ಎಂದರು

ದೇಸಾಯಿಗಳು ಸಿವಿಲ್ ಸರ್ವಿಸಿನಲ್ಲಿರುವ ಆಫೀಸರರು, ದೇಶದ ಪರಿಸ್ಥಿತಿಯನ್ನು ವಿಚಾರಿಸಿ ತಮ್ಮ ಸಂಬಳವನ್ನು ತೆಗ್ಗಿಸಿಕೊಳ್ಳಬೇಕೆಂದು ಕೇಳಿಕೊಂಡರು

ಮುಸಲ್ಮಾನ ಕೇಂದ್ರದಲ್ಲಿ ಖಾದಿ ಕೈಗಾರಿಕೆಯ ಅಭಿವೃದ್ಧಿ

ಮಲಬಾರ್ ಜಿಲ್ಲೆಯ ಎರ್ನಾಡ್ ತಾಲೂಕಿನ ಪುಲಿಕ್ಕಲ್ ಗ್ರಾಮವು ಹೆಚ್ಚು ಮಾಪಿಳೆಯವರಿರುವ ಕೇಂದ್ರ ಸ್ಥಳ. ಅಲ್ಲಿ ಹಿಂದೆ ನೂಲುವ ಮತ್ತು ಬಟ್ಟೆ ಮಾಡುವ ಕೈಗಾರಿಕೆಯೇ ಇರಲಿಲ್ಲ. ಅಖಿಲಭಾರತ ಚರಕಾ ಸಂಘದವರು ಅಲ್ಲಿ ಖಾದಿ ಬಟ್ಟೆಯನ್ನು ಮಾಡುವ ಸಲುವಾಗಿ ನೂಲುವ ಕೆಲಸವನ್ನು ಕೈಗೊಂಡಿದ್ದರು ಇತ್ತೀಚಿನ ವರದಿಯಂತೆ ಅಲ್ಲಿರುವ ಮಾಪಿಳ್ಳೆ ಹೆಂಗುಸರು ಮತ್ತು ಗಂಡುಸರು ನೂಲುವ ಕೆಲಸದಲ್ಲಿ ಬಹಳ ಅಭಿವೃದ್ಧಿಯನ್ನು ಹೊಂದಿರುವುದಾಗಿ ತಿಳಿದಿದೆ

ಅಖಿಲಭಾರತ ಚರಕಾ ಸಂಘದವರ ಈ ಪ್ರಯೋಗದ ಪ್ರೋತ್ಸಾಹದಿಂದ, ಮದ್ರಾಸು ಸಂಸ್ಥಾನದಲ್ಲಿ ಈ ವರ್ಷವೇ, ಇನ್ನೂ ನಾಲ್ಕು ಕೇಂದ್ರಗಳನ್ನು ತೆರೆಯುವ ಯೋಜನೆ ಮಾಡಿದ್ದಾರೆ

ಗಾಂಧಿಜಿಯವರಲ್ಲಿ ವಿಶ್ವಾಸವಿಡಿರಿ

ಕೇಂದ್ರ ಪ್ರಾಂತದ ಪ್ರಧಾನ ಮಂತ್ರಿಗಳಾದ ಮಾನ್ಯ ರವಿಶಂಕರ ಶುಕ್ಲರು ಅಕೋಲದಲ್ಲಿ ಭಾಷಣ ಮಾಡುತ್ತಾ ಹೀಗೆಂದರು.—

"ಎಲ್ಲರೂ ಕಾಂಗ್ರೆಸಿಗೆ ಸೇರುವ ಮೂಲಕ ಅದನ್ನು ಬಲಪಡಿಸಬೇಕು ಸಂಗ್ರಾಮದಲ್ಲಿ ಸ್ವಾತಂತ್ರ್ಯವನ್ನು ಪಡೆಯಲು ಗಾಂಧಿಜಿಯವರ ತತ್ವೋಪದೇಶಗಳಿಂದ ಮಿಗಿಲಾದ ಉಪಾಯಗಳಿಲ್ಲ ಜನರು ಗಾಂಧಿಜಿಯವರಲ್ಲಿ ವಿಶ್ವಾಸವಿಡಿರಿ"

ನರಿಮನರೇ ಮೊದಲಾದವರ ಮೇಲೆ ಶಿಸ್ತು ಜಾರಿ

ಎ. ಐ. ಸಿ. ಸಿ.ಯ ನಿರ್ಣಯದ ನಿಷೇಧ ಸೂಚನೆ ಮಾಡಿದ ಬಗ್ಗೆ ಬೊಂಬಾಯಿ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಶ್ರೀ ಕೆ ಎಫ್ ನರಿಮನರೇ ಮೊದಲಾದ ಒಂಬತ್ತು ಮಂದಿಯ ಮೇಲೆ ಶಿಸ್ತು ಜಾರಿಯ ಕಾರ್ಯಕ್ರಮವನ್ನು ಕೈಗೊಂಡಿದೆ

ವರ್ಕಿಂಗ್ ಕಮಿಟಿಯು ಈ ಬಗ್ಗೆ ಆಯಾಯ ಪ್ರಾಂತಗಳಲ್ಲಿ ನಡೆದ ನಿಷೇಧಗಳ ಬಗ್ಗೆ ಪ್ರಾಂತಿಕ ಕಮಿಟಿಗಳಿಗೆ ಅಧಿಕಾರವಿತ್ತಿದೆ.

ಸ್ವದೇಶಾಭಿಮಾನಿ

ತಾರೀಕು 1-9-1939.

ಭಾರತದ ಮುಖಂಡರ ಅಭಿಪ್ರಾಯವನ್ನು ಮನ್ನಿಸಲಿ!

ಕೇವಲ ಹದಿನೈದು ದಿವಸಗಳ ಹಿಂದೆ, ಕಾಂಗ್ರೆಸು ವರ್ಕಿಂಗ್ ಕಮಿಟಿಯು, ಯುದ್ಧವಾಗುವ ಸಂಭವದಲ್ಲಿ, ಭಾರತದ ನಿರ್ಧಾರದ ಕುರಿತು, ಮಹತ್ವದೊಂದು ನಿರ್ಣಯವನ್ನು ಮಾಡಿತು. ಆ ಮೇಲೆ ಅತ್ಯಲ್ಪ ಕಾಲದಲ್ಲಿಯೇ, ಈಗ, ಲೋಕಯುದ್ಧದ ಭೀತಿಯು ಜಗತ್ತನ್ನೇ ಕಳವಳಗೊಳಿಸಿದೆ. ಕತಿಸುತ್ತ ತಿರುಗುತ್ತಿರುವ ಈ ಮಹಾನರ್ಥವನ್ನು ಎದುರಿಸಲು, ಯುರೋಪಿನ ರಾಷ್ಟ್ರಗಳೂ, ಇತರ ಸ್ವತಂತ್ರ ರಾಷ್ಟ್ರಗಳೂ, ತಮ್ಮತಮ್ಮಲ್ಲಿ ಸಂಪೂರ್ಣವಾಗಿ ಸಾಧ್ಯ ಸಿದ್ಧತೆಗಳನ್ನು ಮಾಡುತ್ತಿವೆ. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಒಂದು ವಿಷಯವನ್ನು ಮಾತ್ರ ಸಂಪೂರ್ಣ ಮರೆತುಬಿಟ್ಟಂತೆ ತೋರುತ್ತಿದೆ.

ಇಂತಹ ಮಹಾಸಮರದ ಸಿದ್ಧತೆಯಲ್ಲಿ ಸುಮಾರು ನಲ್ವತ್ತು ಮಿಲಿಯ ಭಾರತೀಯರು ಸೇರಬೇಕಾದರೆ, ಅವರು ಯಾತಕ್ಕಾಗಿ ಸೇರಬೇಕು, ಅದರಲ್ಲಿ ಯಾವ ನ್ಯಾಯವಿದೆ, ಅವರ ಸ್ಥಿತಿಗತಿಗಳೇನು; ಎಂಬ ವಿಚಾರವಾಗಿ ಬ್ರಿಟಿಷ್ ಸರಕಾರವು ಒಂದಿಷ್ಟು ವಿಚಾರಿಸುವ ಹಾಗೆ ಕಂಡುಬರುವುದಿಲ್ಲ. ಇತ್ತ ಜನತೆಯ ಏಕಪ್ರತಿನಿಧಿ ಸಂಸ್ಥೆಯಾದ ಕಾಂಗ್ರೆಸು ತನ್ನ ನಿರ್ಧಾರವನ್ನು ಲೋಕದ ಮುಂದಿರಿಸಿ ಸ್ಪಷ್ಟಮಾಡಿದೆ. ಹಾಗಾಗಿ, ಬ್ರಿಟಿಷ್ ಸರಕಾರವು ಬಹುಶಃ ಈಗ ವಿಚಾರಿಸಿದಂತೆ, ಭಾರತವು ಯುದ್ಧವಾಗುವ ಸಂದರ್ಭದಲ್ಲಿ ಸರ್ವಥಾ ಬ್ರಿಟನಿಗೆ ನೆರವಾಗಿ ನಿಲ್ಲುವುದು ಎಂಬ ಆದರ ಊಹನೆಯು ಖಂಡಿತ ಸಾಧ್ಯವಾಗಲಾರದೆಂದು ತಿಳಿಯಬಹುದಾಗಿದೆ. ಇಂತಹ ವಿಷಯದಲ್ಲಿ ವಿಚಾರ ವಿನಿಮಯಕ್ಕಾಗಿ ಭಾರತೀಯ ಮುಖಂಡರನ್ನು ಕಂಡು ಮಾತನಾಡಲು ಬ್ರಿಟಿಷ್ ಸರಕಾರವು ಯಾತಕ್ಕೆ ಇಷ್ಟಪಡುವುದಿಲ್ಲವೋ ತಿಳಿಯಲಾರದ ಸಮಸ್ಯೆಯಾಗಿದೆ.

ಕಳೆದ ಮಹಾಯುದ್ಧದಲ್ಲಿ ಭಾರತವು ಬ್ರಿಟನಿಗೆ ನೆರವಾಗಿ ನಿಂತು, ಅದರಿಂದ ಸಿಕ್ಕಿದ ಕೂಸ್ತ ಪ್ರಯೋಜನದ ನೆನಪು, ನಿರರ್ಥಕವಾಗಿ, ಧನ, ಜೀವಗಳನ್ನು ಕಳೆದುಕೊಂಡು, ಕಡೆಗೆ ಒದಗಿದ ನಿರಾಶೆ, ಇವುಗಳು ಇಂದೂ ಭಾರತೀಯರ ನೆನಪಿನಲ್ಲಿ ಇನ್ನೂ ಹೊಸತಾಗಿ ಉಳಿದಿವೆ. ಸ್ವಾತಂತ್ರ್ಯವಿಲ್ಲದೆ, ಸಮಾನತೆಯಿಲ್ಲದೆ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸಲುವಾಗಿ ಭಾರತವು ಯುದ್ಧದಲ್ಲಿ ಬಲಿಬೀಳುವ ಅನರ್ಥವನ್ನು ತಿರಿಗಿ ಒಮ್ಮೆ ತಂದುಕೊಳ್ಳುವಷ್ಟು ಹಿಂದೀಯರು ವಿವೇಕಶೂನ್ಯರಾಗುವುದು ಸಾಧ್ಯವೇ ಇಲ್ಲ! ಈ ವಿಷಯವನ್ನು, ಇನ್ನಷ್ಟು ಸ್ಪಷ್ಟವಾಗಿ ಹೇಳುವುದಿದ್ದರೆ, ಇಂತಹ ಪ್ರಬಲ ಹೊಣೆಗಾರಿಕೆಯ ಕಾರ್ಯವನ್ನು ಸ್ವಾತಂತ್ರ್ಯವನ್ನು ಪಡೆದ ಭಾರತದೇಶವು ಮಾತ್ರ ಹೊರಲು ಸಿದ್ಧವಾಗಿದೆಯೆಂಬುದನ್ನು ದೇಶದ ಮುಖಂಡರು, ಸರ್ವಪಕ್ಷಗಳ ಮುಂದಾಳುಗಳೂ ಸಾರಿ ಸಾರಿ ತಿಳಿಸಿದ್ದಾರೆ!

ಕಾಂಗ್ರೆಸು ವರ್ಕಿಂಗ್ ಕಮಿಟಿಯು ನಿರ್ಣಯವೂ ಈ ವಿಷಯವನ್ನೇ ವ್ಯಕ್ತಪಡಿಸಿದೆ. ಅಲ್ಲದೆ, ಸರ್ವಾಧಿಕಾರಿಗಳ ಇಂದಿನ ನಿರ್ದಯವಾದ, ಅನ್ಯಾಯವಾದ ಅನಾಚಾರಗಳಿಗೆ ಬಲಿಬಿದ್ದು ಸಂಕಟಪಡುತ್ತಿರುವ ನಿರ್ಬಲ ಪ್ರಜಾಪ್ರಭುತ್ವ ರಾಷ್ಟ್ರಗಳ ವಿಷಯದಲ್ಲಿ, ಹಾಗೂ ಅವುಗಳ ಸ್ವಾತಂತ್ರ್ಯ ರಕ್ಷಣೆಯ ವಿಷಯದಲ್ಲಿ ಹಿಂದೂದೇಶವು ಸಹಾನುಭೂತಿಯನ್ನು ತೋರಿಸುವುದಿಲ್ಲವೆಂದು ಗ್ರಹಿಸುವುದು ತಪ್ಪೆಣಿಕೆ. ಭಾರತವಿಂದು ಹೋರಾಡುವುದು; ಸಂಪೂರ್ಣ ಪ್ರಜಾಪ್ರಭುತ್ವ ಪದ್ಧತಿಯ ಸ್ವತಂತ್ರ ರಾಷ್ಟ್ರವಾಗಲು; ಅದೇ ತತ್ವವು ಇತರ ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರಗಳ ಗೌರವವನ್ನು ಉಳಿಸಲು ಭಾರತವು ಸಹಾಯವಾಗಬೇಕು ಎಂಬ ವಿಷಯಕ್ಕೆ ಸಾಕಷ್ಟು ಆಧಾರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಹಿಂದೀಯರ ಅಭಿಪ್ರಾಯವನ್ನು ಗಮನಿಸದೆ, ತನ್ನಿಷ್ಟದಂತೆ ನಡೆಯುವ, ಬ್ರಿಟಿಷ್ ಸರಕಾರವು ಮಹಾಯುದ್ಧದಲ್ಲಿ ತನ್ನ ಸಲುವಾಗಿ ಭಾರತದೇಶವನ್ನು ಬಲಿಕೊಡಲು ಯತ್ನಿಸುವುದರಲ್ಲಿ ಯಾವ ತರದ ನ್ಯಾಯವಾಗಲಿ, ಔಚಿತ್ಯವಾಗಲಿ ಇರುವುದಿಲ್ಲ. ಭಾರತವು ಯುದ್ಧದ ಕುರಿತು ತನ್ನ ಸ್ವತಂತ್ರ ವಿಚಾರವನ್ನು ಮುಂದಿರಿಸಬೇಕಾದರೆ, ಮೊದಲು, ಅದರ ಸ್ಥಾನವು ಇತರ ಸ್ವತಂತ್ರ ರಾಷ್ಟ್ರಗಳ ಮಟ್ಟಕ್ಕೆ ಏರುವುದು ಅಗತ್ಯವಾಗಿದೆ. ಅದಲ್ಲದೆ, ಸಾರ್ವಭೌಮ ಸರಕಾರಕ್ಕೆ ವಿಧೇಯತೆಯೆಂಬ ಬಲಾತ್ಕಾರವು ಇಂದಿನ ಜಾಗೃತಿಯ ದಿನಗಳಲ್ಲಿ ಸರ್ವಥಾ ಸಲ್ಲದು.

ಆದರೆ, ಇತ್ತೀಚೆಗೆ ತಾತ್ಕಾಲಿಕ ಫೆಡರಲ್ ಯೋಜನೆಯೊಂದನ್ನು ವೈಸರಾಯರು, ನರೇಂದ್ರ ಮಂಡಳಿಗಳು, ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸುಗಳ ಐಕ್ಯ ಮಂತ್ರಿಮಂಡಳದ ಮೂಲಕ ಮಾಡುವ ಅಭಿಪ್ರಾಯದಲ್ಲಿರುವರೆಂಬ ವಾರ್ತೆಯು ಅವಶ್ಯವಾಗಿ ವಿಚಾರಣೀಯವಾಗಿದೆ. ಇದು ಆದಷ್ಟು ತೀವ್ರವಾಗಿಯೇ ಕೂಡಲಿದೆಯೆಂದೂ ತಿಳಿದುಬರುತ್ತದೆ. ಆದರೆ, ಈ ಯೋಜನೆಯ ಸಾಧಕರಿಗೆ ಇದೇ ಹಿಂದೂ ದೇಶವೇ ಪಕ್ಷಗಳ ಭೇದವಿಲ್ಲದೆ ಗವರ್ನಮೆಂಟ್ ಓಫ್ ಇಂಡಿಯಾ ಆಕ್ಟಿನಲ್ಲಿ ಸೂಚಿತವಾದ ಫೆಡರಲ್ ಯೋಜನೆಯನ್ನು ವಿರೋಧಿಸುತ್ತದೆಯೆಂಬ ವಿಷಯವು ಮರೆತು ಹೋದಂತಿದೆ. ಫೆಡರಲ್ ಯೋಜನೆಗೆ ಭಾರತೀಯರು ಹೇಳುವ ಮುಖ್ಯ ಆಕ್ಷೇಪವೆಂದರೆ, ಅದರಂತೆ, ಸೈನ್ಯ ಮತ್ತು ವಿದೇಶೀಯ ರಾಜಕಾರಣದ ಕಾರ್ಯದಲ್ಲಿ, ಅವರಿಗೆ ಯಾವ ತರದ ಅಧಿಕಾರವೂ ಇರುವುದಿಲ್ಲವೆಂಬುದು. ಈ ಸಂದರ್ಭದಲ್ಲಿ ಈ ಎಲ್ಲಾ ವಿಷಯಗಳ ಕುರಿತು ಬ್ರಿಟಿಷ್ ಸರಕಾರವು ಯಾವ ಇತ್ಯರ್ಥವನ್ನು ಮಾಡದೆ, ಫೆಡರಲ್ ಯೋಜನೆಯನ್ನು ತಾತ್ಕಾಲಿಕವಾಗಲಿ, ನಿತ್ಯವಾಗಲಿ, ತರುವ ಯತ್ನಮಾಡುತ್ತಾ ಭಾರತದ ಮುಂದಾಳುಗಳ ಅಭಿಪ್ರಾಯವನ್ನು ಕೇಳದೆ ನಡೆಯುವುದು ದೂರದರ್ಶಿತ್ವವಾಗಲಾರದು. ಇಂದು, ಭಾರತದ ಮುಖಂಡರೊಡನೆ ಈ ವಿಷಯದಲ್ಲಿ ವಿಚಾರ ವಿನಿಮಯವಾಗಿ, ಅವರಿಗೆ ಸಂಪೂರ್ಣ ಸಮಾಧಾನವಿತ್ತು, ಆ ಮೇಲೆ ಸ್ಪಷ್ಟವಾದ ಒಂದು ಪ್ರಕಟಣೆಯನ್ನು ಬ್ರಿಟಿಷ್ ಸರಕಾರವು ಕೊಡುವುದು ಅವಶ್ಯವಿದೆ. ಆ ಪ್ರಕಟಣೆಯ ಸ್ಪಷ್ಟತೆ ಮತ್ತು ಅಸ್ಪಷ್ಟತೆಗಳಲ್ಲಿ ಭಾರತದ ಮುಂದಿನ ನಿರ್ಧಾರವು ನಿರ್ಣಯವಾಗಬಹುದು.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಸಮಯದ ಬೆಲೆ ಎಷ್ಟೆಂದು ನಿಶ್ಚೈಸಿದವರಿರುವರೆ?

ಹಣದ ಬೆಲೆಯನ್ನು ಕಟ್ಟಬಹುದು—ಆದರೆ ಸಮಯದ ಬೆಲೆಯನ್ನು ನಿಶ್ಚೈಸಲಸಾಧ್ಯ!

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶ ಕೊಡದಂತೆ, ನಮ್ಮ ಸರ್ವಿಸುಗಳು ಪ್ರಾಥಃಕಾಲದಿಂದ—ಸಾಯಂಕಾಲ ವರೆಗೆ ಬಿಡುವಿಲ್ಲದೆ ಓಡಾಡುತಿದ್ದು ನಿಮ್ಮ ಯಾವುದೇ ಕೆಲಸಗಳಸ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡು ಮಾಡಿರುವೆವು ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನು ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು'

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳೀಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1–4–0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	4—14—0	4—14—0
,, ದುಯಂ ,, ,,	4—10—0	4—12—0
,, ಅವ್ವಲ್ ಸುಗ್ಗಿ ,,	4—9—0	—
,, ದುಯಂ ,, ,,	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದು ,,	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
,, ದಿಲ್‌ಪಸಂದ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	3—6—0	3—6—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—8—0	3—8—0
ಗೇರುಬೀಜ ಮುಡಿಗೆ	8—10—0	8—12—0
ಕಬ್ಬಿನ ಬೆಲ್ಲ ಖಂಡಿಗೆ	55—0—0	60—0—0
ಒಳ್ಳೇಮೆಣಸು ಹಂಡ್ರೆಡ್‌ವೇಟಿಗೆ	14—8—0	15—8—0

Date 1-9-1939 ಬಿಡಿ ಸಂಚಿಕೆ ಒಂದಾಣೆ. Regd. No. M 3406

ಸ್ವದೇಶಾಭಿಮಾನಿ

ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2-13-0

ಸಂಪುಟ 33] ತಾರೀಕು 1-9-1939 [ಸಂಚಿಕೆ 35

YOUR DAUGHTER'S MARRIAGE MADE EASY

GIRLS are more or less Lumpsum Liabilities unlike the BOYS who are Instalment Liabilities You can not only convert Lumpsum Liabilities into Instalment Liabilities but also guarantee the PURPOSE through Policies in

THE BOMBAY LIFE ASSURANCE CO., LIMITED

For details, please consult:

KOCHIKAR BROTHERS LTD,
Madras Branch Secretaries,
Bombay Life Building,
Sir Lalubhai Samaldas Road,
Gandhi Nagar, UDIPI.

OR ANY OF THEIR FOLLOWING OFFICES –

Post Box No. 337
MOUNT ROAD, MADRAS

Visweshwarapuram Circle
BANGALORE CITY

Charni Road, Girgaum,
BOMBAY NO. 4

Car Street
MANGALORE

Puthiyara,
CALICUT

Central Station Road,
TRIVENDRUM

MAKE LIFE WORTH-LIVING!

Indigestion - Insomnia Dry Cough - Nervousness - Weak Heart &c
these make you wiery of Life!

CONSULT US AND BUY YOUR LIFE'S HAPPINESS!

Oils – that cool the brain and induce sleep
Lehas – that build-up your wasted system
Asavas = that regenerate your jaded nerves

All Genuine Ayurvedic Preparations-
-from this huge Ayurvedic Concern of a Century Standing–

Bhuvanendra Products, Ltd.,
Katapady, S. Kanara.
(BRANCH—KUMTA, N KANARA)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, - ದ ಕನ್ನಡ

ಸ್ಥಳೀಯ ಸ್ಟೋಕಿಸ್ಟರು (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

Edited Printed & Published by A S Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani Estd 1906

ಸಂಪುಟ ೩೩ — ತಾರೀಕು ೮—೯—೧೯೩೯ (8—9—1939) — ಸಂಚಿಕೆ ೩೬

ಯೂರೋಪಿನ ಪ್ರಚಂಡ ಯುದ್ಧ

ಭಾರತದಲ್ಲಿಯೂ ಮಹಾ ಕೋಲಾಹಲ

ಬ್ರಿಟನಿನ ಯುದ್ಧ ಮಂದಿರ

ನಾಜಿಗಳು ನಿರ್ನಾಮವಾಗುವರು

ಕಾಂಗ್ರೆಸು ಸಮರ ಹೂಡುವುದು

ಗಾಂಧಿಜಿಯವರ ಸಂದೇಶ

ಚೋರ ಪಕ್ಷಿ! (ಕಥೆ)

ಫ್ರಾನ್ಸಿನ ಪ್ರಚಂಡ ಸೈನ್ಯ

ಹರಿಜನ ದೇಗುಲ ಪ್ರವೇಶ

ಮದ್ರಾಸು ಮಂತ್ರಿಮಂಡಳ

ಅಗ್ರಲೇಖ

ಚಲಚ್ಚಿತ್ರ ಪ್ರಪಂಚ

ವಿಜ್ಞಾನ ಯುಗ

ಮಹಿಳಾ ಸಮಾಜ

ನೋಟಗಳು, ವಿಚಿತ್ರ ಯುಗ, ಸಾಹಿತ್ಯ ಸಂಚಯ, ಇತ್ಯಾದಿ.

28 ಪುಟಗಳು 28

ಮಹಾಯುದ್ಧದ ಪ್ರಾರಂಭ



ಯುದ್ಧೋತ್ಸಾಹಿಗಳಾದ ಫ್ರೆಂಚ ಸೈನಿಕರ ದಳ.

ಸಚಿತ್ರ ವಾರಪತ್ರಿಕೆ

ಸೋಟಿಗಳು!

ರಶ್ಯಾ ಜರ್ಮನ್ ಒಪ್ಪಂದದ ವಿಷಯವಾಗಿ ಇಂಗ್ಲೆಂಡಿನ ಸುಪ್ರಸಿದ್ಧ ಗ್ರಂಥಕರ್ತರಾದ ಜಾರ್ಜ್ ಬರ್ನಾರ್ಡ್ ಷಾರವರೊಡನೆ ಪ್ರಶ್ನಿಸಿದಾಗ, ಅವರು ಒಪ್ಪಂದದಿಂದ, ಪರಿಸ್ಥಿತಿಯು ಕೆಡಲಿಲ್ಲವೆಂದೂ ಒಳ್ಳೆಯದೇ ಆಯಿತೆಂದೂ ಹೇಳಿದರು. ಅವರು, ಶಾಂತಿಗಾಗಿ ಉತ್ಸುಕನಾಗಿರುವ ಸ್ಟ್ಯಾಲಿನನ ಹಿಡಿತದಲ್ಲಿ ಈಗ ಹಿಟ್ಲರನು ಸಿಕ್ಕಿಬಿದ್ದಿರುವನೆಂದು ಅಭಿಪ್ರಾಯಪಡುತ್ತಾರೆ.

◆

ರಶ್ಯಾದೊಡನೆ ಒಪ್ಪಂದ ಮಾಡಿದಾಗ ಬಲಾತ್ಕಾರವನ್ನಿದಿರಿಸುವ ಯತ್ನವು ಧ್ವಂಸವಾಯಿತು ಎಂದು ಹಿಟ್ಲರನು ಬಗೆದಿದ್ದ.

◆

ಈಗ ಹಿಟ್ಲರನಿಗೆ ದಿಗಿಲುಹುಟ್ಟಿದೆ; ಹಿಂದಿಗಿಂತಲೂ ಬಲವಂತವಾಗಿ ಈಗ ಹಿಟ್ಲರನನ್ನು ಎದುರಿಸಲು ಸಿದ್ಧರಾಗಿದ್ದಾರೆ

◆

ಯೂರೋಪಿನಲ್ಲಿ, ಹಿಟ್ಲರನು ಹೆದರಿಕೆಯನ್ನು ಹುಟ್ಟಿಸುತ್ತಿದ್ದಂತೆ ಗಾಂಧಿಜಿಯವರ ಸಂದೇಶವೂ ಅಲ್ಲಿ ಹರಡುತ್ತಿದೆ. ವಿಶೇಷವಾಗಿ ಪೋಲೆಂಡಿನವರಿಗೆ, ಭಾರತವು ಇಂದು ಕಾಂಗ್ರೆಸ್ಸಿನ ಆಶ್ರಯದಲ್ಲಿ ಶೇಕಡಾ ನೂರರಷ್ಟು ಪ್ರಜಾಪ್ರಭುತ್ವ ಸರಕಾರಕ್ಕೆ ಕಾದಾಡುತ್ತಿರುವಾಗ, ಜಗತ್ತಿನ ಇತರ ಪ್ರಜಾಪ್ರಭುತ್ವ ಸರಕಾರಗಳಿಗೆ ನೆರವಾಗುವುದು ಎಂಬ ವಿಷಯವು ತಿಳಿದಿದೆ.

◆

ಪೋಲೆಂಡಿನಲ್ಲಿ ಗಾಂಧಿಜಿಯವರನ್ನು, ಬುದ್ಧನೆಂದೂ, ಹಿಂದೀಯರ ದೇವರ ಅವತಾರವೆಂದೂ ವರ್ಣಿಸುತ್ತಿದ್ದಾರೆ!

◆

ಜಪಾನಿನಲ್ಲಿ ಹಳೆಯ ಮಂತ್ರಿಮಂಡಳವು ಉರುಳಿಯಿತ್ತು, ಹೊಸ ಮಂತ್ರಿಮಂಡಳದ ರಚನೆಯಾಯಿತು!

◆

ಜರ್ಮನ್–ರಶ್ಯಾ ಒಪ್ಪಂದವಾದ ಕೂಡಲೇ ಇದು ನಡೆಯಿತು!

◆

ಆದರೆ, ಜಪಾನಿನ ಮಂತ್ರಿಮಂಡಳದ ಈ ವ್ಯತ್ಯಾಸಕ್ಕೆ ರಶ್ಯಾ ಜರ್ಮನ್ ಒಪ್ಪಂದವು ಕಾರಣವಾಗಿರಲಾರದು!

◆

ಟೆನಿಸ್ಟನ್ ಗೊಂದಲವು ಕಡಿಮೆಯಾಗಿದೆ ಹೊಂಕೊಂಗಿನ ಮುತ್ತಿಗೆಯ ಹೆದರಿಕೆಯು ಹಿಂತೆಗೆಯಲಾಗಿದೆ. ಚೈನಾ ಜಪಾನು ಸಮಸ್ಯೆಯೂ ಪರಿಹಾರವಾಗುವುದೆ?

◆

ಚೈನಾದಲ್ಲಿ ನೆಹರುಗಳಿಗೆ ರಾಜವೈಭವದ ಸ್ವಾಗತವು, ಸಿಕ್ಕಿತು. ಭಾರತದ ಸಹಾನುಭೂತಿ! ಇದು ಚೈನದ ಯೋಗ್ಯ ಸತ್ಕಾರವಾಗಿದೆ!

◆

ಯುದ್ಧದ ಭೇರಿಯು ಮೊಳಗಿತು!

◆

ಇದರಲ್ಲಿ ಭಾರತದ ಭಾಗವೇನು? ಈ ಪ್ರಶ್ನೆಯು ಪ್ರತಿಯೊಬ್ಬ ಭಾರತೀಯ ತಲೆಸುತ್ತು ತಿರುಗುತ್ತಿದೆ!

◆

ಇಲ್ಲಿರುವ ಬೇರೆ ಬೇರೆ ಪಕ್ಷಗಳ ಮುಖಂಡರು, ಬೇರೆ ಬೇರೆ ಅಭಿಪ್ರಾಯವನ್ನು ಪ್ರಕಟಿಸುತ್ತಾರೆ.

◆

ಬ್ರಿಟನಿನ ಸಂಕಷ್ಟದ ಸಮಯದಲ್ಲಿಯೇ, ನಮ್ಮ ಲಾಭವನ್ನು ಹೊಂದಲು ಯೋಗ್ಯ ಸಂದರ್ಭವೆಂದು ಬೋಸರ ಪಕ್ಷದವರು ಹೇಳುತ್ತಾರೆ.

◆

ಬೋಸರ ಆರು ತಿಂಗಳ ಕಡೆಯ ನುಡಿಯು ಮಾತ್ರ ಮುಂದೆ ಬರಬಹುದು!

◆

ಕೆಲ ಜನ, ಕಮ್ಯುನಿಸ್ಟರು ಮತ್ತು ಬಹಳ ತೀವ್ರಗಾಮಿಗಳಾದ ಸಮತಾವಾದಿಗಳನ್ನು ಬಿಟ್ಟ ಯಾರೂ ಈ ಅಭಿಪ್ರಾಯವನ್ನು ಮೆಚ್ಚುವಂತಿಲ್ಲ.

◆

ಹಿಂದಿನಿಂದ ಹೋಗಿ ತಿವಿಯುವುದು, ಧರ್ಮ ಯುದ್ಧವಲ್ಲ!

◆

ಕಾಂಗ್ರೆಸಿನ ಅಭಿಪ್ರಾಯವು ಸ್ಪಷ್ಟವಿದೆ. ಬ್ರಿಟನಿನೊಡನೆ ಅಸಹಕಾರವು ಅದರ ಧೋರಣೆ!

◆

ಬ್ರಿಟನು ಭಾರತದ ವಿಷಯವಾಗಿ, ಯೋಗ್ಯರೀತಿಯಿಂದ ವರ್ತಿಸಲಿಲ್ಲ. ಪ್ರಜಾಪ್ರಭುತ್ವ ಸರಕಾರಕ್ಕೆ ಬ್ರಿಟನು ಸಹಾಯ ಕೊಡುವುದಿದ್ದರೂ, ಅದು ಸಾಮ್ರಾಜ್ಯಶಾಹಿಯ ತನ್ನ ಧೋರಣೆಯನ್ನು ಬಿಡುವ ಹಾಗಿಲ್ಲ!

◆

ಯುದ್ಧಸಂಭವದಲ್ಲಿ, ಮುಸ್ಲಿಮ್ ಲೀಗಿನವರು ಹೇಗೆ ವರ್ತಿಸುವರೆಂದು ಸ್ಪಷ್ಟ ತಿಳಿದಿದೆ.

◆

ಇನ್ನು ರಾಜಭಕ್ತಿಯ ಜನರು ಅಲ್ಲಲ್ಲಿ ಕಣ್ಣು ಮುಚ್ಚಿ ಬ್ರಿಟನಿಗೆ ಸಹಾಯ ಕೊಡಬೇಕೆಂದು ಕೂಗುತ್ತಿದ್ದಾರೆ.

◆

ಹೇಗಿದ್ದರೂ ಕಾಂಗ್ರೆಸಿನ ವಿರೋಧವಿರುವವರೆಗೆ, ಬ್ರಿಟನಿಗೆ ಭಾರತದ ಸಂಪೂರ್ಣ ಬೆಂಬಲವು ಸಿಗುವ ಹಾಗಿಲ್ಲ! ಬ್ರಿಟನು ಮತ್ತು ಭಾರತದ ಹಿತದೃಷ್ಟಿಯಿಂದ ಒಂದು ಯೋಗ್ಯ ಒಪ್ಪಂದವು ಆಗತಕ್ಕದ್ದು ಅವಶ್ಯವಾಗಿದೆ.

◆

ವೈಸರಾಯರೂ ಈ ವಿಷಯವನ್ನು ತಿಳಿದುಕೊಂಡಂತೆ ಕಾಣುತ್ತದೆ. ಗಾಂಧಿಜಿಯವರನ್ನು ಕರೆದು ಮಾತುಕತೆ ಮಾಡುತ್ತಿದ್ದಾರೆ.

THE

Canara Banking Corporation Ltd.,

(INCORPORATED IN BRITISH INDIA).

THREE YEARS' CASH CERTIFICATES

bearing interest at 4%p. a.
in denominations of

RS. 50/-, 100/-, 500/-, 1,000/-, & 5,000/-
are now issued at all our Branches.

For particulars call at or write to any of our nearest Branches.

ಹತ್ತು ಗಡಿಯಾರಗಳಿಗೆ ಬರೇ ಮೂರು ರೂಪಾಯಿ ಹತ್ತಾಣೆ ಮಾತ್ರ!



ನಾಲ್ಕು ಡಮ್ಮಿ ರಿಸ್ಟವಾಚ್‌ಗಳು ಎರಡು ಡಮ್ಮಿ ಪಾಕೆಟ್ ವಾಚ್ ಮತ್ತು ಒಂದು ಬಲವಾದ ಮಿಶನ್ ಸಾಮಾನುಗಳಿಂದ ತಯಾರಿಸಲ್ಪಟ್ಟ ಟೈಂಪಿಸ್, ೩೦ ಘಂಟೆಗಳ ಕಾಲ ನಡೆಯುವುದು. ೧೨ ವರ್ಷ ಗ್ಯಾರಂಟೀ, ಈ ಗಡಿಯಾರಗಳನ್ನು ವಿಲಾಯತಿಯಿಂದ ಬಹಳವಾಗಿ ತರಿಸಿರುತ್ತೇವೆ. ಆದರೂ ಈ ರಿಯಾಯತಿ ದರದಂತೆ ೧೦ ಸಾವಿರ ಗಡಿಯಾರಗಳನ್ನು ಮಾರಲು ನಿಶ್ಚಯಿಸಿರುತ್ತೇವೆ. ಈ ಸಮಯದಲ್ಲಿ ಬೇಗನೆ ತರಿಸಿಕೊಳ್ಳುವುದು. ಇಲ್ಲವಾದರೆ ಎಲ್ಲಾ ಖರ್ಚಾಗಿ ಹೋಗುವವು. ಗಡಿಯಾರಗಳ ಜೊತೆಗೆ ಒಂದು ಫೌಂಟನ್‌ಪೆನ್, ೧೪ ಕ್ಯಾರೆಟ್ ರೋಲ್ಡ್ ಗೋಲ್ಡ್ ನಿಬ್ ಸಹಿತ, ಒಂದು ಸುಂದರವಾದ ಹಾರವೂ, ಫ್ರೀಯಾಗಿ ಕೊಡಲಾಗುವುವು. ಟಪ್ಪಾಲು ಖರ್ಚು ಪ್ಯಾಕಿಂಗ್ ಖರ್ಚು ಬೇರೆ. ಸರಿಯಾಗಿ ತೋರದಿದ್ದಲ್ಲಿ ಬೆಲೆ ವಾಪಸು. ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ ಮಾಡಬೇಕು.

ಪತ್ತೆ:
German Watch Co., (P. M. H)
P. B. No. 27 Amritsar, (India).

For

Paintings, Photo enlargements, Letter-head designs, Advertisement Slides - - - -

IN SHORT

All Artistic Requisties

PLEASE CONSULT

S. R. BEKAL
ARTIST
SWADESHABHIMANI OFFICE
Car-street - - MANGALORE.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾಃ । ನ ಭೇಜಿರೇ ಭೀಮ ವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ

ಸ್ವದೇಶಾಭಿಮಾನಿ
SWADESHABHIMANI

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಒದಗಿದುವ ॥ ಗರಲಕವರಂಜಿದರೆ ಸುಧೆಯನು ಮರೆತು, ಕ್ಷುದ್ರರ ತೆರದಿ ಕುಳಿತರೆ । ಕೇಳು ಬಲ್ಲರಿ ತೊರೆದು ಧೀರರು ನಿಶ್ಚಿತಾರ್ಥವನು ॥

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

8—9—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೮—೯—೧೯೩೯

ಡಾನ್ಜಿಗಿನ ಎದೆಯ ಮೇಲೆ ಹಿಟ್ಲರನ ರಣನೃತ್ಯ!

ಯುದ್ಧವನ್ನು ತಪ್ಪಿಸಲು ಆಗಲಿಲ್ಲ! ಹಿಟ್ಲರನು ಏಕಾಂಗಿಯಾಗಿ ಕಾದಾಡುವನು!!

ಪೋಲೆಂಡಿಗೆ ಫ್ರಾನ್ಸು-ಬ್ರಿಟನುಗಳ ಬೆಂಬಲ!

ಹಿಂದಿನ ಘಟನೆಗಳು

ಹಿಂದೆ ಜೆಕೊಸ್ಲವೇಕಿಯವನ್ನು ಜರ್ಮನಿಗೆ ಸೇರಿಸಿದ ನೆವನದಂತೆ, ತಿರಿಗ ಡಾನ್ಜಿಗನನ್ನೂ ನುಂಗಬೇಕೆಂದು ಹಿಟ್ಲರನು ಕೆಲ ಸಮಯಗಳ ಹಿಂದೆ ಪ್ರಕಟಿಸಿದನು ಆದರೆ ಡಾನ್ಜಿಗನ್ನು ಕಳಕೊಳ್ಳುವುದರಿಂದ ಪೋಲೆಂಡಿನ ಸ್ವಾತಂತ್ರ್ಯಕ್ಕೆ ಬಹಳಹಾನಿ ತಟ್ಟುವನಿಮಿತ್ತ ಪೋಲೆಂಡು ಸರಕಾರವು ಹಿಟ್ಲರನ ಈ ಧೋರಣೆಯನ್ನು ಮೊದಲಿಂದಲೇ ತೀವ್ರವಾಗಿ ಪ್ರತಿಭಟಿಸಿತ್ತು.

ಈ ಸಂದರ್ಭದಲ್ಲಿ ದಿನದಿಂದ ದಿನಕ್ಕೆ ಸಾಮ್ರಾಜ್ಯ ವಿಸ್ತರಣ ಕಾತುರನಾಗಿ ಮುಂದುವರಿಯುತ್ತಿರುವ, ಸರ್ವಾಧಿಕಾರಿಗಳ ನೀತಿಯನ್ನು ಕಂಡು ಇಂಗ್ಲೆಂಡು ಫ್ರಾನ್ಸುಗಳು ಎಚ್ಚರಗೊಂಡವು ದುರ್ಬಲರಾಷ್ಟ್ರಗಳ ಸ್ವಾತಂತ್ರ್ಯ ಅಪಹರಣದ ಧೋರಣೆಯನ್ನು ಮೊದಲಿಂದಲೇ ಅವುಗಳು ಇದಿರಿಸುತ್ತಾ ಲೋಕಶಾಂತಿಗಾಗಿ ಹಿಟ್ಲರನು ಡಾನ್ಜಿಗನ್ನು ಆಕ್ರಮಿಸಬಾರದೆಂದು ವಿನಂತಿಸಿಕೊಂಡವು ಪೋಲೆಂಡೂ ಕೂಡಾ, ಹಿಟ್ಲರನ ಧೋರಣೆಯಿಂದ ಸಿಟ್ಟಿಗೆದ್ದು ಖಂಡಿತ ಮಾತು ಹೇಳಿತು.

ಆದರೂ, ಹಿಟ್ಲರನ ವಿಚಾರವು ಡಾನ್ಜಿಗಿನಿಂದ ತಿರಿಗಿದಂತೆ ಕಂಡುಬರಲಿಲ್ಲ. ಇಷ್ಟರಲ್ಲಿ ಪೋಲೆಂಡಿನ ನೆರವಾಗಿ ನಿಲ್ಲುವವೆಂದು ಬ್ರಿಟನು ಫ್ರಾನ್ಸುಗಳು ಅದಕ್ಕೆ ಪ್ರತಿಜ್ಞೆಯಿತ್ತುವು ಈ ಸಂದರ್ಭದಲ್ಲಿಯೇ ಯೂರೋಪಿನ ಇನ್ನು ಕೆಲವು ರಾಷ್ಟ್ರಗಳೊಡನೆ, ಕಲಹಕಂಟಕರ ಧೋರಣೆಯನ್ನು ಸಂಯುಕ್ತರಾಗಿ ಇದಿರಿಸುವ ಸಲುವಾಗಿ ಒಪ್ಪಂದಗಳೂ ಆದುವು. ರಶ್ಯಾ— ಬ್ರಿಟನು— ಫ್ರಾನ್ಸುಗಳು— ಈ ಮುಖ್ಯ ತ್ರಿರಾಷ್ಟ್ರಗಳೂ-ಕೂಡಾ ಕಲಹಕಂಟಕರನ್ನು ಎದುರಿಸಲು ಒಂದಾಗುವ ಮಾತುಕತೆಯೂ ಬೆಳೆಯಿತು.

ರಶ್ಯಕ್ಕೆ ಬ್ರಿಟನು-ಫ್ರಾನ್ಸುಗಳ ಒಪ್ಪಂದದ ಮಾತುಕತೆಯಲ್ಲಿ ವಿಶ್ವಾಸಹುಟ್ಟದ ನಿಮಿತ್ತ, ತಾನ ಹಿಟ್ಲರನೊಡನೆ, ಎದುರಾಡುವುದನ್ನು ತಪ್ಪಿಸಿಕೊಂಡ ಯುದ್ಧ ಸಂದರ್ಭದಲ್ಲಿ ದೂರನಿಲ್ಲುವಂತೆ ಜರ್ಮನಿಯೊಡನೆ, ವ್ಯಾಪಾರ ಮತ್ತು ರಾಜಕೀಯ ಒಪ್ಪಂದಗಳೂ ನಡೆದುವು ಈ ಒಪ್ಪಂದದಂತೆ ಬ್ರಿಟನ ಫ್ರಾನ್ಸುಗಳೊಡನೆ ರಶ್ಯವು ತನ್ನ ಸಂಬಂಧವನ್ನು ಕಡಿದುಕೊಂಡದ ಮಾತ್ರವಲ್ಲದೆ ಜರ್ಮನಿಯು ಯುದ್ಧಕ್ಕೆ ಇಳಿಯುವಲ್ಲಿ, ಇತರ ರಾಷ್ಟ್ರಗಳೊಡನೆ ಸೇರದ ರೀತಿಯೂ ಜರ್ಮನಿಗೂ ನೆರವಿಲ್ಲದಂತೆಯೂ ತಟಸ್ಥವಾಯಿತು.

ಇಷ್ಟರಲ್ಲಿ, ಪೋಲೆಂಡಿನ ಗಡಿಯಲ್ಲಿ ಜರ್ಮನಿಯ ಮುಂದೊತ್ತಿದ ಸೈನ್ಯಗಳೊಳಗೆ ಘರ್ಷಣೆಯಾಯಿತು ಹಿಟ್ಲರನು ಡಾನ್ಜಿಗನ್ನು ಆಕ್ರಮಿಸುವ ತನ್ನ ಧೋರಣೆಯನ್ನು ಇನ್ನಷ್ಟು ಸ್ಪಷ್ಟಪಡಿಸಿದನು ಅಮೇರಿಕದ ಪ್ರೆಸಿಡೆಂಟ ರೂಸ್‌ವೆಲ್ಟರು, ಇಂದಿನ ಸಮಸ್ಯೆಯನ್ನು ಪರಿಹರಿಸಲು ಒಪ್ಪಂದದ ರಾಜಿಯ ಮಾತುಕತೆ ನಡೆಸಬೇಕೆಂದು ಹಿಟ್ಲರನಿಗೆ ಒಂದು ಸಂದೇಶವಿತ್ತರು. ಬ್ರಿಟನು ಮತ್ತು ಫ್ರಾನ್ಸುಗಳು ಒಂದು ಕಡೆಯಿಂದ ಯುದ್ಧಸಿದ್ಧತೆಮಾಡುತ್ತಿದ್ದಂತೆಯೇ, ಹಿಟ್ಲರನು ಜಗತ್ತಿನ ಶಾಂತಿಯನ್ನು ಕೆದಕಬಾರದಾಗಿಯೂ ಬಿನ್ನಯಿಸುತ್ತಿದ್ದುವು.

ಹಿಟ್ಲರನ ಹೇಳಿಕೆ

ಹಿಟ್ಲರನು ಈ ಮಾತಿಗೆ ಖಂಡಿತ ಉತ್ತರ ಕೊಟ್ಟಿದ್ದಾನೆ ಜರ್ಮನಿಯ ಮೇಲೆ ಆರೋಪವನ್ನಾಡುತ್ತಾ ಪ್ರಶ್ನೆಯನ್ನೂ ತೆಕ್ಕೊಳ್ಳುವ ಸಾಹಸವನ್ನಾಡುತ್ತಾ, ನಾಗರಿಕರಿಗೆ ತಂಟಿಮಾಡುತ್ತಿರುವ ಪೋಲೆಂಡಿನ ವೃತ್ತಿಯು ಸಹನಾತೀತವೆಂದೂ ತಾನು ಡಾನ್ಜಿಗನ್ನು ಸ್ವಾಧೀನಪಡಿಸದಿರಲು ಸಾಧ್ಯವಿಲ್ಲವೆಂದೂ ಅವನ ಹೇಳಿಕೆ

ಬ್ರಿಟನಿನ ಉತ್ತರ

ಈ ಹೇಳಿಕೆಯು ಬ್ರಿಟನಿಗೆ ಸಿಕ್ಕಿದ ಮೇಲೆ ತೀವ್ರ ಎಚ್ಚರಗೊಂಡು ಕೆಬಿನೆಟ್ ಸಭೆಯು ಸೇರಿತು ಬ್ರಿಟಿಷ್ ಸಾಮ್ರಾಜ್ಯದ ಬೇರೆ ಬೇರೆ ಸರಕಾರಗಳೊಡನೆಯೂ ಅಭಿಪ್ರಾಯ ಕೇಳಿತು. ಕಡೆಗೆ ಇನ್ನಾದರೂ ಹಿಟ್ಲರನೊಡನೆ ನ್ಯಾಯದ ಇತ್ಯರ್ಥಕ್ಕೆ ಬ್ರಿಟನು ಸಿದ್ಧವಿದೆಯೆಂಬ ಉತ್ತರವು ಕೊಡಲಾಗಿತ್ತು ಈ ಸಂದರ್ಭವು ಇಂದಿನ ಹಿಟ್ಲರನ ಧೋರಣೆಯು ಅಸಮರ್ಪಕವೆಂದೂ ವಿವರಿಸಲಾಗಿತ್ತು. ಇಷ್ಟರಲ್ಲಿ ಪೋಲೆಂಡಿನ ವಿಷಯದಲ್ಲಿ ಹಿಟ್ಲರನು ಒಂದು ಖಂಡಿತ ನಿರ್ಧಾರಕ್ಕೆ ಬಂದನು.

ಪೋಲೆಂಡಿನ ಸಿದ್ಧತೆ

ಜರ್ಮನಿಯ ಸೈನ್ಯವು ಮುಂದುವರಿಯುತ್ತಿರುವುದನ್ನು ಕಂಡು ಪೋಲೆಂಡಿನಲ್ಲಿ ಭರದಿಂದ ಯುದ್ಧಸಿದ್ಧತೆಯೂ ನಡೆಯಿತು ಸ್ಲೊವೇಕಿಯಕ್ಕೆ ಜರ್ಮನ್ ಸೈನ್ಯವು ಪ್ರವೇಶಿಸುವ ವಿಷಯದಲ್ಲಿ ಪೋಲೆಂಡಿನ ಸೈನಿಕರು ಬಹಳ ಜಾಗ್ರತೆ ತೆಕ್ಕೊಂಡರು ಎಲ್ಲಾ ಕಡೆಯಿಂದಲೂ ಪೋಲೆಂಡಿನ ೪೦ ವರ್ಷ ಪ್ರಾಯದ ಕೆಳಗಿನ ತರುಣರು ಯುದ್ಧ ಸೈನಿಕರಾಗಿ ಸೇರಿಸಲಾಯಿತು

ಫ್ರಾನ್ಸಿನ ತಯಾರಿ

ಫ್ರಾನ್ಸಿನಲ್ಲಿ ಜನರು ಎಚ್ಚತ್ತು ಯುದ್ಧಸಿದ್ಧತೆ ಆರಂಭಿಸಿದರು, ಸೈನ್ಯ ಸಂಗ್ರಹದ ಕೋಲಾಹಲವು ನಡೆಯಿತು.

ಅಲ್ಲಿನ ಎಲ್ಲಾ ಸಂಸ್ಥೆಗಳೂ ಈ ಸಿದ್ಧತೆಗೆ ಸಹಾಯಮಾಡಿದುವು ಅನೇಕ ಮಂದಿ ಮಕ್ಕಳನ್ನು ಮುಖ್ಯ ಪಟ್ಟಣಗಳಿಂದ ದೂರದ ಸ್ಥಳಗಳಲ್ಲಿ ಭದ್ರವಾಗಿ ಇರಿಸಲಾಯಿತು ಬ್ರಿಟನಿನಲ್ಲಿಯೂ ಈ ರೀತಿಯ ತಯಾರಿಯಾಯಿತು.

ಪೋಲೆಂಡಿನ ಮೇಲೆ ಧಾಳಿ

ಪೋಲೆಂಡಿನ ಎಲ್ಲಾ ಗಡಿಗಳಲ್ಲಿಯೂ ಜರ್ಮನರು ತೀವ್ರ ಧಾಳಿಯನ್ನು ಮಾಡಿದರು

ಹಿಟ್ಲರನು ಜರ್ಮನ್ ಜನತೆಗೆ ಒಂದು ಹೇಳಿಕೆಯನ್ನು ಹೊರಡಿಸುತ್ತಾ ಅದರಲ್ಲಿ ಪೋಲೆಂಡಿನವರ ಎಲ್ಲಾ ದುಷ್ಟ ಕಾರ್ಯಗಳನ್ನು ಮುಗಿಸಲು, ಅವರೊಡನೆ ಎದುರಾಡದೆ ನಿರ್ವಾಹವಿಲ್ಲವೆಂದು ಹೇಳಿದನು

ಪೋಲೆಂಡು, ಜರ್ಮನಿಯು ಇಚ್ಛಿಸಿದಂತೆ ಶಾಂತಿಗೆ ಒಪ್ಪಲಿಲ್ಲವೆಂದೂ, ಅಲ್ಲಿನ ಜರ್ಮನರನ್ನು ಭಯಂಕರವಾಗಿ ಹಿಂಸಿಸಿರುವುದೆಂದೂ, ಜರ್ಮನಿಯ ಅಭಿಮಾನಕ್ಕೆ ತಡೆತಂದಿದೆಯೆಂದೂ, ಜರ್ಮನಿಯ ಗೌರವಕ್ಕಾಗಿ ಕಾದಾಡುವುದು ಆಗತ್ಯವೆಂದೂ, ವೀರಾವೇಶದ ಹೇಳಿಕೆಯೊಂದನ್ನು ಹಿಟ್ಲರನು ಕೊಟ್ಟನು.

ಸ್ವದೇಶಾಭಿಮಾನಿ

ತಾರೀಕು 8—9—1939.

ರಣರಂಗ

ಯುದ್ಧಜ್ವರವು ಲೋಕವನ್ನೇ ವ್ಯಾಪಿಸಿದೆ! ಪ್ರಪಂಚವೇ ದಿಗಿಲುಗೊಂಡಿದೆ! ನಾಜೀ ಸರ್ವಾಧಿಕಾರಿಯ ಸ್ವಾರ್ಥ-ದುರಾಶೆ-ಬಲವಂತಗಳ ಅನ್ಯಾಯದ ಫಲವಾಗಿ, ಯಾರೂ ಬಯಸದ, ಜರ್ಮನಿಯ ಜನತೆಯೇ ಇಚ್ಛಿಸದ ಯುದ್ಧವು ಆರಂಭವಾಗಿ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹತ್ಯಾಕಾಂಡವು ನಡೆಯುತ್ತಿದೆ! ಇಂತಹ ವಿಷಮ ಪರಿಸ್ಥಿತಿಯು ಬರಬಾರದೆಂದು, ಬ್ರಿಟನು ಫ್ರಾನ್ಸುಗಳು ಮೊದಲಿಂದಲೇ ಸಾಧ್ಯ ಸಾಹಸ ಮಾಡಿದುವು. ಆದರೆ, ಹಲವು ಸಮಯಗಳ ಪ್ರಯತ್ನಗಳಿಂದ ಇಂದು ನ್ಯಾಯಕ್ಕೆ ಉನ್ಮತ್ತ ಸರ್ವಾಧಿಕಾರಿಯು ಕಿವಿಗೊಡುವಂತಿಲ್ಲವೆಂಬುದು ಸ್ಪಷ್ಟವಾಯಿತು! ನ್ಯಾಯ, ಸತ್ಯ, ದಯೆ, ಸ್ವಾತಂತ್ರ್ಯಗಳು ಹಿಟ್ಲರ್ ಶಾಹಿಯೊಡನೆ ನಡೆಯಲಾರವು! ಕಡೆಗೆ, ಯುದ್ಧವೇ ಅನಿವಾರ್ಯವಾಗಿ ಸಂಭವಿಸಿ ಪ್ರಪಂಚವು ಸಂಕಷ್ಟದಲ್ಲಿ ಅದ್ದಿಹೋಗುವಂತಾಗಿದೆ!

ನಿನ್ನೆ ಬ್ರಿಟನ್-ಫ್ರಾನ್ಸುಗಳು ಯಾವ ನಿರ್ಧಾರದಿಂದ ಯುದ್ಧರಂಗಕ್ಕಿಳಿದುವೋ ಅದರಲ್ಲಿ ಇಡೀ ಪ್ರಪಂಚವೇ ಸೇರಬೇಕಾಗಬಹುದು! ಪೋಲೆಂಡಿನ ಸ್ವಾತಂತ್ರ್ಯ ರಕ್ಷಣೆಗಾಗಿ, ಪ್ರತಿಜ್ಞೆಯಂತೆ, ಬ್ರಿಟನು ಫ್ರಾನ್ಸುಗಳು ಇಂದು ಜರ್ಮನಿಗೆ ಎದುರಾಗಿ ಕಾದಾಡುವುದು ಸ್ಪಷ್ಟ ನೀತಿಯಾದರೂ, ಇದರ ನಿಜವಾದ ಉದ್ದೇಶವು ಪಶುಶಕ್ತಿಯನ್ನು, ಲೋಕಕಂಟಕ ಘೋರ ಹೆಯನ್ನು, ಸರ್ವಾಧಿಕಾರಿಗಳ ಮದವನ್ನು, ಪ್ರಜಾ ಪ್ರಭುತ್ವ ರಾಜ್ಯಗಳು ಲೋಕಹಿತಕ್ಕಾಗಿ ಕಡೆಯುವುದಾಗಿದೆ! ಜಗತ್ತಿನ ಸಣ್ಣ ದೊಡ್ಡ ರಾಷ್ಟ್ರಗಳ ಸ್ವಾತಂತ್ರ್ಯ, ಜನರ ಹಿತ ಸುಖಗಳ ರಕ್ಷಣೆ ಇವುಗಳ ಸಲುವಾಗಿ ಯುದ್ಧರಂಗಕ್ಕಿಳಿಯದಿದ್ದಲ್ಲಿ ಸಾಧ್ಯವಾಗುವ ಹಾಗಿಲ್ಲ. ಇದೇ ಅಭಿಪ್ರಾಯವನ್ನೇ ಬ್ರಿಟಿಷ್ ಪ್ರಧಾನ ಮಂತ್ರಿ ಚೆಂಬರ್ಲೀನರು 'ಇಂದಿನ ಸಂದರ್ಭದಲ್ಲಿ, ಜರ್ಮನಿಯ ಅಧಿಕಾರಿಯು ಹೇಳಿದ ಯಾವ ಮಾತನ್ನೂ ನಂಬಲು ಸಾಧ್ಯವಿಲ್ಲ. ಯಾವ ರಾಷ್ಟ್ರ ಜನಾಂಗಗಳಾದರೂ ಸುಖದಿಂದಿರಲೂ, ಸಹಿಸಿಕೊಂಡಿರಲೂ ಆಗುವ ಹಾಗಿಲ್ಲ'' ಎಂದಿರುವರು. ಚರ್ಚಿಲ್ಲರೂ ತಮ್ಮ ವೀರ ಭಾಷಣದಲ್ಲಿ, ''ಇಂದಿನ ನಮ್ಮ ಯುದ್ಧವು ರಾಜ್ಯವಿಸ್ತಾರ, ಲಾಭಗಳಿಗಾಗಲಿ, ಜನಾಂಗದ ಹಿತಅಭಿವೃದ್ಧಿಯ ಹಾನಿಗಾಗಲಿ ಅಲ್ಲ, ಇಂದಿನ ನಮ್ಮ ಯುದ್ಧವು ಮಾನವನ ಪ್ರತಿಷ್ಠೆಯನ್ನು ಸ್ಥಾಪಿಸಲು ಮತ್ತು ಬೆಳಗಿಸಲು'' ಎಂದು ಹೇಳಿರುವರು.

೧೯೧೪ರ ಮಹಾಯುದ್ಧದ ದುರಂತ ಅನುಭವವು ಇನ್ನು ಲೋಕದ ಜನತೆಯ ನೆನಹಿನಲ್ಲಿ ಮಾಸದೆ ಉಳಿದಿರಲು, ಇಂದು ವೈಜ್ಞಾನಿಕ ಅಭಿವೃದ್ಧಿಯ ಮೂಲಕ, ನಿಮಿಷವೊಂದರಲ್ಲಿ, ಒದಗಬಹುದಾದ ಅನರ್ಥ ಅನಾಹುತಗಳನ್ನು ನೆನೆಸಿ ಇಡೀ ಮಾನವ ಕುಲವೇ ಭಯಭೀತವಾಗಿರುತ್ತದೆ! ಈ ಯುದ್ಧವು ಎಲ್ಲಿಯವರೆಗೆ ಮುಂದುವರಿಯಬಹುದು, ಯಾವಾಗ ಕೊನೆಗೊಳ್ಳಬಹುದು, ಏನೆಲ್ಲಾ ಅನಾಹುತಗಳಾಗುವವೆಂದು ಪ್ರತಿಯೊಬ್ಬರೂ ವಿಚಾರಗ್ರಸ್ತರಾಗಿರುವರಾದರೂ, ಭವಿಷ್ಯವನ್ನು ಹೇಳಲು ಸಾಧ್ಯವಿಲ್ಲ. ಆದರೂ, ಮುಂದೆ ಲೋಕದಲ್ಲಿ ಎಂದೆಂದೂ ಅನ್ಯಾಯವೇ ಆಳುವುದು ಸಾಧ್ಯವಿಲ್ಲವೆಂದೂ, ನೀತಿಯು ಖಂಡಿತವಾಗಿಯೂ ನೆಲಸಬೇಕೆಂದೂ, ಪಶುಶಕ್ತಿ ದುರಾಶೆಗಳನ್ನು ಮೆಟ್ಟಿ, ಧರ್ಮ ಸತ್ಯಗಳು ಸ್ಥಿರವಾಗಿರಬೇಕೆಂದೂ ಅಚಲ ವಿಶ್ವಾಸವುಳ್ಳವರಿಗೆ, ಇಂತಹ ಕವಿದ ಕಾರ್ಮೋಡಗಳ ಎಡೆಯಿಂದ ಸರ್ವಾಧಿಕಾರವು ವಿನಾಶವಾಗಲಿರುವ ಆಶಾಕಿರಣವು ತೋರಿಬರುವುದು. ಇಂತಹ ಸಮಯದಲ್ಲಿ ನ್ಯಾಯ, ಸತ್ಯ, ಸ್ವಾತಂತ್ರ್ಯಗಳನ್ನು ಯಾರು ಜೀವಸಮಾನವೆಂದು ಒಗೆಯುತ್ತಾರೋ, ಅವರು ಯಾವ ಪಕ್ಷಕ್ಕೆ ಸಹಾಯ ಸಹಾನುಭೂತಿಗಳನ್ನು ತೋರಿಸಬೇಕೆಂಬ ವಿಷಯವು ಸ್ಪಷ್ಟವಾಗಿದೆ! ಇಂದಿನ ಈ ಭಯಂಕರ ಯುದ್ಧವು, ಎಷ್ಟೇ ಸಂಕಷ್ಟಕರವಾಗಿ ಪರಿಣಮಿಸಿದರೂ, ಸತ್ಯ ನ್ಯಾಯಗಳ ಜಯಧ್ವಜವು ಪ್ರಪಂಚದಲ್ಲಿ ಮುಂದಕ್ಕೆ ಸ್ಥಿರವಾಗಿ ಹಾರಾಡುವುದರಲ್ಲಿ ಯಾವ ಸಂಶಯವೂ ಇಲ್ಲ!

ಭಾರತದ ಭವಿಷ್ಯ?

ಯುದ್ಧವಾರ್ತೆಯು ವಿದ್ಯುದ್ವೇಗದಿಂದ ಪ್ರಪಂಚವನ್ನೇ ಹರಡಿರುವಾಗ, ಪ್ರತಿಯೊಂದು ರಾಷ್ಟ್ರವು ಆತ್ಮರಕ್ಷಣೆಗಾದರೂ ಸಿದ್ಧತೆ ಮಾಡುತ್ತ ಇರುವಾಗ ಇಂತಹ ಜಾಗೃತಾವಸ್ಥೆಯಲ್ಲಿ ಭಾರತದ ಭವಿಷ್ಯವನ್ನು ಕುರಿತು ನಿರ್ಣಯಿಸಲು ಕಾಂಗ್ರೆಸಿನ ಮುಖಂಡರು ನಿರ್ಧಾರವಮಾಡಿದ್ದಾರೆ! ಚೈನದ ವಿಜಯ ಯಾತ್ರೆಗೆ ಹೊರಟ ನೆಹರುಗಳನ್ನು ತೀವ್ರ ಹಿಂದಿರುಗಿ ಬರುವಂತೆ ರಾಷ್ಟ್ರಪತಿಗಳು ತಂತಿ ಬಿಟ್ಟು ಕರೆದಿದ್ದಾರೆ! ವರ್ಕಿಂಗ್ ಕಮಿಟಿಯ ಸದಸ್ಯರು, ಕರೆದಾಗ ಬರಲು ಸಿದ್ಧರಿರಬೇಕೆಂದು ಎಲ್ಲರಿಗೂ ಮೊದಲೇ ಸೂಚನೆಗಳು ತಿಳಿಸಲಾಗಿವೆ. ಗಾಂಧಿಜಿಯವರ ಕಡೆಗೆ ರಾಷ್ಟ್ರಪತಿಗಳು ಹೋಗಿ, ಅವರ ಸನ್ನಿಧಿಯನ್ನು, ಹಿತವಚನವನ್ನು ಕೇಳಿದ್ದಾರೆ!

ಇಂತಹ ಸಂದರ್ಭದಲ್ಲಿ, ಭಾರತದಲ್ಲಿ ಪಕ್ಷ ಭೇದಗಳ, ಜಾತಿ ವೈಷಮ್ಯಗಳ ಸಂಕುಚಿತ ಮನೋವೃತ್ತಿಯು ಅಳಿಯಬೇಕಾಗಿದೆ. ಕಾಂಗ್ರೆಸಿನ ಅಂತರ್ಗತ ಪಕ್ಷಭೇದವು ಸಂಪೂರ್ಣ ಮರೆತು, ರಾಷ್ಟ್ರಧ್ವಜದ ನೆರಳಲ್ಲಿ ಎಲ್ಲರೂ ಒಂದಾಗಿ, ಒಂದೇ ಅಭಿಮತಕ್ಕೆ, ನಿಶ್ಚಲ ನಿರ್ಧಾರಕ್ಕೆ ಬರುವ ಶೋಭಚಿಹ್ನೆಗಳು ಕಾಣುವುದು ಆನಂದದ ವಿಷಯವಾಗಿದೆ! ಸರ್ದಾರ ಪಟೇಲರು ಸುಭಾಷ ಬೋಸರನ್ನು ವರ್ಕಿಂಗ್ ಕಮಿಟಿಯ ಅಧಿವೇಶನಕ್ಕೆ ಬರುವಂತೆ ಆಮಂತ್ರಿಸಿದ್ದಾರೆ! ಬೋಸರು ಖಂಡಿತ ಹೋಗುವುದಾಗಿಯೂ ಉತ್ತರವಿತ್ತಿದ್ದಾರೆ! ಕಾಂಗ್ರೆಸಿನೊಳಗಿನ ಕಿಸನ್ ಸಂಘ, ತೀವ್ರಗಾಮಿ, ಸಮತಾವಾದಿ ಪಕ್ಷಗಳ ಮುಖಂಡರೆಲ್ಲರೂ, ತಮ್ಮ ರಾಜಕೀಯ ಅಭಿಪ್ರಾಯ ಭೇದವನ್ನು ಮರೆತು, ಕಾಂಗ್ರೆಸಿನ ನಿರ್ಧಾರಕ್ಕೆ ನಮ್ಮ ಒಪ್ಪಿಗೆಯಿದೆಯೆಂಬ ಸರ್ವ ಸಮ್ಮತಿಯನ್ನು ತೋರಿಸಿದ್ದಾರೆ! ಕಾಂಗ್ರೆಸು ಒಂದು ನ್ಯಾಯವಾದ ನಿಶ್ಚಯವಾದ ನಿರ್ಧಾರಕ್ಕೆ ಬಂದು, ತನ್ನ ಸ್ವಾತಂತ್ರ್ಯವನ್ನೂ, ಲೋಕ ಸ್ವಾತಂತ್ರ್ಯವನ್ನೂ ಕಾಪಾಡುವ ಮಹಾ ಕಾರ್ಯದಲ್ಲಿ ಪ್ರಾಮುಖ್ಯ ಭಾಗವನ್ನು ವಹಿಸಲು ಖಂಡಿತವಾಗಿಯೂ ಹಿಂದಾಗುವ ಹಾಗಿಲ್ಲ!

ಭಾರತೀಯರಿಗೆ, ಬ್ರಿಟಿಷ್ ಸರಕಾರದ ಪರವಾಗಿ, ಸಂದೇಶ ಹೇಳುತ್ತಾ ವೈಸರಾಯರು 'ನ್ಯಾಯದ ಕಡೆಗೆ ಜಯವು ಖಂಡಿತವಾಗಿಯೂ ಬರಬೇಕಾದುದರಿಂದ, ಅದು ಕೇವಲ ಯುದ್ಧ ಸಾಧನಗಳಿಂದ ಮಾತ್ರ ಸಿಗಲಾರದು, ಇಂತಹ ಸಂದರ್ಭದಲ್ಲಿ ನಾವೆಲ್ಲರೂ, ನಮ್ಮ ಎಲ್ಲಾ ಸಂಕಷ್ಟ, ದುರಂತ ಸಮಸ್ಯೆಗಳ ಪರಿಹಾರಕ ಶಕ್ತಿಯಾದ ಆ ಆತ್ಮಶಕ್ತಿಯ ಕಡೆಗೆ ವಿಶ್ವಾಸದಿಂದಿರಬೇಕು, ಇದೇ ನಮಗೆ ಸ್ಥಿರವಾಗಿ ಉಳಿಯತಕ್ಕ ಬಲ ಮತ್ತು ಧೈರ್ಯವಾಗಿದೆ'' ಎಂದು ಹೇಳುತ್ತಾರೆ! ಈ ಮಾತಿನ ತತ್ವವು ಹಿಂದೀಯರ ಧಾರ್ಮಿಕ ಹೃದಯದಲ್ಲಿ ನಿಜವಾಗಿಯೂ ಅಪೂರ್ವ ಪರಿಣಾಮವನ್ನು ಹುಟ್ಟಿಸುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ವೈಸರಾಯರು ಮಾಡಬೇಕಾದ ಮಹತ್ವವಾದ ಕರ್ತವ್ಯವೇನೆಂದರೆ, ಭಾರತದ ಜನಮತದ ವಿಶ್ವಾಸವನ್ನು ತಮ್ಮ ನಿರ್ಮಲ ಕಾರ್ಯಧೋರಣೆಯಿಂದ ಗಳಿಸಿಕೊಳ್ಳಬೇಕು. ಕಳೆದ ಹಲವು ವರ್ಷಗಳಿಂದ ಭಾರತವು ಸ್ವಾತಂತ್ರ್ಯಕ್ಕಾಗಿ, ಅಸಹನೀಯ ಯಮಯಾತನೆಗಳನ್ನು ಅನುಭವಿಸುತ್ತಾ, ಧೈರ್ಯಪೂರ್ವಕ, ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಎದುರಾಡಿದೆ. ಈ ಪವಿತ್ರ ಕಾರ್ಯಕ್ಕಾಗಿ, ಭಾರತದ ಅನೇಕ ಮುಖಂಡರು ಜೀವಾರ್ಪಣ ಮಾಡಿದ್ದಾರೆ, ಜನತೆಯ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸಿನ ನೆರಳಲ್ಲಿ, ತಮ್ಮನ್ನು ವಿಜಯದ ಕಡೆಗೆ, ಸ್ವಾತಂತ್ರ್ಯದ ಕಡೆಗೆ ನಡೆಸುವ ಮುಂದಾಳುಗಳ ಧುರೀಣತೆಯಲ್ಲಿ ಭಾರತದ ಜನಮತವು ಇಂದು ಏಕಮತ, ಏಕಕಂಠ, ಏಕಕಾರ್ಯಗಳನ್ನು ಮಾಡಲು ತಯಾರಾಗಿದೆ. ಇಂತಹ ಪ್ರಸಂಗದಲ್ಲಿ, ಜನತೆಯ ವಿಶ್ವಾಸವುಳ್ಳ ಧುರೀಣರನ್ನು ಕರೆದು ಅವರೊಡನೆ ಪ್ರೇಮಪೂರ್ವಕ ವಿಚಾರ ವಿನಿಮಯ ಮಾಡಿ ವ್ಯವಹರಿಸುವುದರಿಂದ ಮಾತ್ರ ಭಾರತದ ಸಹಾಯ ಸಹಾನುಭೂತಿಗಳನ್ನು ಬ್ರಿಟಿಷ್ ಸರಕಾರವು ಹಾರೈಸಬಹುದು. ಈಗಾಗಲೇ, ಸಮಯದ ಸನ್ನಿಹಿತ ಪರಿಸ್ಥಿತಿಯನ್ನು ತಿಳಿದು ವೈಸರಾಯರು ಗಾಂಧಿಜಿಯವರನ್ನು ಆಮಂತ್ರಿಸಿದ್ದೂ, ಮಾತ್ರವಲ್ಲದೆ ಬೇಗನೇ ಭಾರತದ ಸರ್ವಪಕ್ಷಗಳ ಮುಖಂಡರನ್ನೂ ಕೂಡಿ ಮಾತನಾಡುವರೆಂದು ಪ್ರಕಟವಾಗಿರುವುದೂ ಯೋಗ್ಯವಾದ ಮತ್ತು ಕ್ರಮವಾದ ರೀತಿಯಾಗಿದೆ. ಭಾರತದ ಭವಿಷ್ಯವು ಈ ಮಾತುಕತೆ ಮಾತ್ರವಲ್ಲದೆ ಕಾಂಗ್ರೆಸಿನ ನಿರ್ಧಾರದ ಮೇಲೆ ಹೊಂದಿಕೊಂಡಿದೆ!

ಆಹಾರ ಸಾಧನಗಳಿಗೆ ಕ್ರಯ ಹೆಚ್ಚಿಸಬಾರದು

ಯುದ್ಧದವಿಪತ್ತು ಈಗಾಗಲೇ ನಮ್ಮ ನಗರದಲ್ಲಿ ಆರಂಭವಾಗಿದೆ. ಕೇವಲ ಮೂರು ನಾಲ್ಕು ದಿನಗಳ ಹಿಂದೆ ಮಾತ್ರ ಪಾಶ್ಚಾತ್ಯ ರಾಷ್ಟ್ರಗಳು ಅನ್ಯೋನ್ಯ ಕತ್ತಿ ಕಟ್ಟಿನಿಂತಿವೆ. ಆದರೆ, ಅದರ ಫಲವಾಗಿ ನಮ್ಮಲ್ಲಿನ ವ್ಯಾಪಾರಿಗಳು ಆಹಾರವಸ್ತುಗಳಿಗೆ ವಿಪರೀತವಾಗಿ ಕ್ರಯವೇರಿಸಿದರೆ ಹಿಂದೂದೇಶದಲ್ಲಿ ನಿರಂತರವಾಗಿ ಇರುವ ದಾರಿದ್ರ್ಯ ಸಂಕಷ್ಟಗಳನ್ನು ಇನ್ನಷ್ಟು ಹೆಚ್ಚಿಸಿದಂತಾಗುವುದು.

ವಿದೇಶಗಳಿಂದ ಬರತಕ್ಕ ವಸ್ತುಗಳಿಗೆ ರಸಾಯನ ವಸ್ತುಗಳು ಕಾಗದ ಕಬ್ಬಿಣ ಮೊದಲಾದವುಗಳಿಗೆ ಕ್ರಯ ಹೆಚ್ಚಿಸಿದರೆ, ಆ ವಿಷಯದಲ್ಲಿಯಾದರೂ ಜನತೆಯು ಅದರ ಕುರಿತು ತಿಳಕೊಂಡು ಸಮಾಧಾನ ಹೊಂದಬಹುದು, ವಿದೇಶ ವ್ಯವಹಾರವು ಸರಿಯಿಲ್ಲದಿರುವಾಗ, ಸಹಜವಾಗಿ ಅಲ್ಲಿಂದ ಬರತಕ್ಕವಸ್ತುಗಳಿಗೆ ಬೆಲೆಯೂ ಏರುವುದು ಸಂಭವವಿದೆ. ಇದರಿಂದ ನಮ್ಮ ದೇಶಕ್ಕೆ ಹೆಚ್ಚಿನ ಅಘಾತವಿಲ್ಲ. ವಿದೇಶೀಯ ಸಾಮಾನುಗಳನ್ನು ತರಿಸದೆ ಕಾರ್ಯ ನಿರ್ವಾಹವಾಗದು ಎಂಬ ಸ್ಥಿತಿಯು ತೀರಾ ಕಡಿಮೆಯವರಿಗೆ ಇದೆ. ಮುಂದಕ್ಕಾದರೂ ಇಂತಹ ಸಂದರ್ಭ ಒದಗದಂತೆ ಭಾರತೀಯರು ಎಚ್ಚರಗೊಂಡು ರಾಷ್ಟ್ರೀಯ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಿ, ಎಲ್ಲಾ ವಿಧದಿಂದಲೂ ರಾಷ್ಟ್ರವು ಅನ್ಯರನ್ನು ಅವಲಂಬಿಸಿಕೊಂಡಿರದಂತೆ ಮಾಡಲಿ. ಇದರಿಂದ ಯೋಗ್ಯ ಸಂದರ್ಭವಾದಂತಾಯಿತು. ಹೀಗಾಗಿ ವಿದೇಶದಿಂದ ಬರುವ ವಸ್ತುಗಳ ಮೇಲೆ ವ್ಯಾಪಾರಿಗಳು ಕ್ರಯ ಹೆಚ್ಚಿಸಿದಲ್ಲಿ, ಅಪ್ರತ್ಯಕ್ಷ ರೀತಿಯಿಂದ ಭಾರತದ ಕೈಗಾರಿಕೆಯನ್ನು ಪ್ರೋತ್ಸಾಹಿಸಿದಂತೆಯೇ ಆಗುವುದು!

ಆದರೆ, ತಮ್ಮಲ್ಲಿ ಧಾನ್ಯಗಳ ಸಂಗ್ರಹವಿರುವ ದೇಶೀಯ ಉತ್ಪತ್ತಿಗಳಾದ ಆಹಾರಸಾಮಗ್ರಿಗಳಿಗೆ ಅಕ್ಕಿ, ಧಾನ್ಯ, ದವಸಗಳಿಗೆ ವಿಪರೀತ ಕ್ರಯ ಏರಿಸಿದ ವ್ಯಾಪಾರಸ್ಥರ, ಜನರ ಹೊಟ್ಟೆಗೆ ಬಡಿವ ಕಾರ್ಯವನ್ನು ಮಾಡಿದಂತಾಗುವುದು ಮೊದಲೇ ದಾರಿದ್ರ್ಯದಿಂದ ಬಹಳಸಂಕಷ್ಟದಿಂದ ಜೀವಿಸುತ್ತಿರುವ ಜನ ಸಾಮಾನ್ಯರ ಬೆಂದೊಡಲಿಗೆ ಇನ್ನಷ್ಟು ಬಿಸಿಯೇರಿಸುವ ಹಾಗೆ ಮಾಡಕೂಡದು. ಇತ್ತ, ಆಹಾರ ಸಾಮಗ್ರಿಗಳಿಗೆ, ದಿನನಿತ್ಯದ ಉಪಯೋಗಗಳಿಗೆ ಕ್ರಯವು ಏರುತ್ತಿದ್ದಂತೆ, ಜನರ ಕೂಲಿಯಾದರೂ ಏರುವುದು ಸಾಧ್ಯವೇ ಇಲ್ಲ. ಇಂದಿನ ಅಲ್ಪ ದುಡಿತದಿಂದ, ಇಷ್ಟು ಏರಿದ ಬೆಲೆಗೆ ಆಹಾರವನ್ನು ಒದಗಿಸಿ ಜೀವನನಿರ್ವಾಹ ಮಾಡುವುದು ಅಸಾಧ್ಯವಾಗಿದೆ!

ಈ ಕುರಿತ ವ್ಯಾಪಾರಸ್ಥರ ಸಂಘವು ತೀವ್ರ ವಿಚಾರಿಸಬೇಕು. ಇಲ್ಲವೇ ಪ್ರಾಂತೀಯ ಸರಕಾರವಾಗಲಿ, ಕೇಂದ್ರ ಸರಕಾರವಾಗಲಿ ತಮ್ಮ ಹಿಡಿತವನ್ನು ಇಟ್ಟುಕೊಳ್ಳಬೇಕು. ಇಲ್ಲದಿದ್ದಲ್ಲಿ ವ್ಯಾಪಾರದ ಪರಿಸ್ಥಿತಿಯು ಬಹಳ ಅವನತಿಗಿಳಿದು, ಬಡಜನರು ಆಹಾರವನ್ನು ಸಂಪಾದಿಸಲು ಅಶಕ್ತರಾಗಿ ಸಂಕಷ್ಟಕ್ಕೆ ತುತ್ತಾಗುವರು. ವ್ಯಾಪಾರಿಗಳೂ, ಸರಕಾರವೂ ಈ ಎಡೆಗೆ ಗಮನ ಕೊಡಲಾರರೇ?

ನಾಜಿಗಳ ನಿರ್ನಾಮವಾದಾಗ ಯುದ್ಧವು ಕೊನೆಗೊಳ್ಳುವುದು

ಒಬ್ಬ ಸರ್ವಾಧಿಕಾರಿಯ ಪೀಡೆ! ಹಿಟ್ಲರನನ್ನು ಹಿಡಿದು ನಿಲ್ಲಿಸಬೇಕು

-ಚರ್ಚಿಲರ ವೀರವಾಣಿ-

ಜರ್ಮನಿಯು ಎಷ್ಟೋ ಸಮಯಗಳಿಂದ, ಯುದ್ಧ ಸಿದ್ಧತೆ ಮಾಡಿತ್ತು ಹೊರಗಿನ ರಾಷ್ಟ್ರಗಳು ಶಾಂತಿಯ ಮಂತ್ರವನ್ನು ಜಪಿಸುತ್ತಿದ್ದಂತೆ, ಹಿಟ್ಲರನ ನಿರ್ಧಾರವೇ ಬೇರೆಯಿತ್ತು ಗತಗಳಲ್ಲಿ ಮಾಡಿದ ಯುದ್ಧದ ಕ್ರಮವೇ ಭಿನ್ನವಾಗಿತ್ತು; ಒಂದು ಕಡೆಯಿಂದ, ಇನ್ನೊಂದು ಕಡೆಗೆ ಸೈನ್ಯವನ್ನೊಯ್ದು, ಶತ್ರುಗಳನ್ನೆದುರಿಸಲು, ವಾರವಾರಗಳು ಬೇಕಾಗಿತ್ತು ಇಂದಿನ ಜರ್ಮನಿಯ ತಯಾರಿಯು ಮಿಂಚಿನ ವೇಗದಿಂದ ಆಗಿದೆ ಪೋಲೆಂಡಿನ ಎಲ್ಲಾ ಗಡಿಗಳಲ್ಲಿಯೂ ಜರ್ಮನ್ ಸೈನ್ಯಗಳು ಕಾದಿವೆ 'ಗುಂಡು ಹಾರಲಿ' ಎಂಬಘೋಷ ಕೇಳಿದ ಕೂಡಲೇ ಪೋಲೆಂಡಿನ ಸುತ್ತು ಭಯಂಕರ ಸಮರ ಕೋಲಾಹಲವು ನಡೆಯುವುದು. ಗತಗಳಲ್ಲಂದು ಸೈನ್ಯಸಿದ್ಧತೆಯಾಗಲಿ ಎಂದು ಬಹು ಸಮಯ ಕಳೆದ ಮೇಲೆ ಸೈನ್ಯತಯಾರಿಯಾಗುತಿತ್ತು ಈಗ ಆ ಮಾತು ಬಿದ್ದ ಕೂಡಲೇ ಶತ್ರುಗಳ ಮೇಲೆ ಗುಂಡಿನ ಬಾಂಬಿನ ಸುರಿಮಳೆಯೂ ಬೀಳುವುದು.

ಯೂರೋಪಿನ ವಿಭಜನೆ

ಗತಗಳಲ್ಲಿ, ಗಡಿಯಿಂದ ಆರೇಳು ಮೈಲು ದೂರದಲ್ಲಿ ಸೈನ್ಯ ನಿಲ್ಲಿಸಿ ಕಾದಾಡುವುದಿತ್ತು ಶತ್ರುಗಳನ್ನು ಉದ್ರೇಕಗೊಳಿಸಬಾರದೆಂದು ಈ ಜಾಗ್ರತೆ ಮಾಡುತ್ತಿದ್ದರು ಆದರೆ, ಈಗ, ಎರಡು ಕಡೆಯರು, ಗಡಿಯಲ್ಲಿ, ಎಷ್ಟು ಭೂಮಿಗಳನ್ನು ಆಕ್ರಮಿಸಬೇಕೋ, ಸಾಧ್ಯವೋ ಅದನ್ನು ಮೊದಲೇ ತೀರಿಸಿಬಿಡುತ್ತಾರೆ

ರೈನ್ ನದಿಯ ದಡಗಳಲ್ಲಿ, ಕೊಂಕ್ರೀಟ್ ಸಿಮೆಂಟಿನ ಕೋಟೆಗಳು ಕಟ್ಟಲ್ಪಟ್ಟು ಗುಂಡು ಹಾರಿಸಲು ತಯಾರಾಗಿವೆ ಎರಡು ದಡಗಳ ಎದುರೆದುರಾಗಿ ಶತ್ರುಗಳು ನಿಂತಿದ್ದಾರೆ ಒಂದು ಕಡೆಯಿಂದ ಗುಂಡು ಹಾರಿಸಿದರೆ ಎದುರಿನ ಸೈನ್ಯಕ್ಕೆ ಪ್ರಬಲ ಆಘಾತವಾಗುವುದು ಇಕ್ಕಡೆಯುವರೂ ಯುದ್ಧಮಾಡಿದಲ್ಲಿ ಆಳವಾದ ರೈನ್ ನದಿಯ ನೀರು ರಕ್ತದಿಂದ ಕೆಂಪಾಗಿ ಬಿಡುವುದು ಹಗಲು ರಾತ್ರಿ ನಿದ್ರೆಯಿಲ್ಲದೆ ಸೈನಿಕರು ಕೋವಿಗೆ ಕೈಕೊಟ್ಟು ನಿಂತಿದ್ದಾರೆ ಪೂರ್ವ ಮತ್ತು ಪಶ್ಚಿಮ ಯೂರೋಪುಗಳು ಇದರಿಂದ ವಿಭಜನೆ ಹೊಂದಿವೆ.

ಒಬ್ಬ ವ್ಯಕ್ತಿಯ ಪೀಡೆ!

ಇಂತಹ ಕರುಣಾಹೀನವಾದ ರಾಕ್ಷಸ ಸಿದ್ಧತೆಗಳನ್ನು ನಡೆಯುವುದನ್ನು ನೋಡಿದವನಿಗೆ, ಯೂರೋಪು ಮಾತ್ರವಲ್ಲ, ಅಖಿಲ ಪ್ರಪಂಚವೂ, ಭಯಂಕರ ಯುದ್ಧ ಆಹುತಿಗೆ ಬಲಿಯಾಗುವುದು ಅಸಂಭವವಲ್ಲವೆಂದು ತಿಳಿದಿತ್ತು.

ಉನ್ನತ ಪರ್ವತದ ಮೇಲಿರುವ ಬಂಗ್ಲೆಯಲ್ಲಿ ನಿದ್ರೆ ವಿಶ್ರಾಂತಿಗಳಿಲ್ಲದೆ, ಪ್ರಪಂಚವನ್ನೇ ಅಂಗೈಯಲ್ಲಿಟ್ಟು ಕುಣಿಸಲು ಒಬ್ಬ ವ್ಯಕ್ತಿ ಯೋಚಿಸಿದನು ಆತನಿಗೆ ಆಗುಹೋಗುಗಳ ವಿಚಾರವಿರಲಿಲ್ಲ ಮನುಷ್ಯ ಹೃದಯವೇ ಅವನಿಗಿಲ್ಲ. ಹೆದರಿಕೆ ಎಂಬುದು ಇಲ್ಲವೇ ಇಲ್ಲ ಸಾಮ್ರಾಜ್ಯವನ್ನು ನುಂಗದೆ ಆತನ ಹಸಿವು ಅಡಗುವಂತಿಲ್ಲ ಇಡೀ ಪ್ರಪಂಚದ ನಾಗರಿಕತೆಯನ್ನೇ ಧ್ವಂಸಮಾಡುವ ಆವೇಶ ಅವನದು ಇಡೀ ಲೋಕವನ್ನೇ ಹೀಗೆ ನರಕದಲ್ಲಿ ಇದ್ದಲು ಹಿಂಜರಿಯದ ಸರ್ವಾಧಿಕಾರಿತ್ವವನ್ನು ನಿಲ್ಲಿಸದೆ ಲೋಕಕ್ಕೆ ಬೇರೆ ಉಪಾಯವಿಲ

ಹಿಟ್ಲರನನ್ನು ಹಿಡಿದು ನಿಲ್ಲಿಸಬೇಕು

ಹಿಟ್ಲರನು ಪ್ರಮತ್ತನಾಗಿ ಬಹು ದೂರ ಹೋಗಿದ್ದಾನೆ ಆತನನ್ನು ರಟ್ಟೆ ಹಿಡಿದು ನಿಲ್ಲಿಸಬೇಕು ಆದಕ್ಕೆ ಅವನ ಮನೋಶಕ್ತಿಗಿಂತ ತೀವ್ರವಾದ ಮನೋಶಕ್ತಿಯಿರಬೇಕು ಅವನ ಹುಚ್ಚುತನದ ಆವೇಶ ಇಳಿಯುವುದು ಅವನ ಸೈನಿಕರನ್ನು ಅವರ ಮನೆಗೆ ಕಳುಹಿಸಬೇಕು ಮ್ಯುನಿಚ್ ಒಪ್ಪಂದದಂತೆ ಜೆಕ್ಕರ ಸ್ವಾತಂತ್ರ್ಯವನ್ನು ತಿರುಗಿ ಅವರಿಗೆ ಕೊಡಬೇಕು. ಆಗ ಇಡೀ ವಾತಾವರಣವೇ ವ್ಯತ್ಯಾಸವಾಗುವುದು ಸೂರ್ಯನ ಬೆಳಕು ಆಗ ಶುಭ್ರವಾಗುವುದು ಆಗ ಮನುಷ್ಯನನ್ನು ಕೊಲ್ಲಲು ಉಪಯೋಗಿಸುವ ವಿಜ್ಞಾನವು ಶ್ರಮಜೀವಿಗಳ ಅಭಿವೃದ್ಧಿಗಾಗಿ ಉಪಯುಕ್ತವಾಗುವುದು

ಬಗ್ಗುವ ಹಾಗಿಲ್ಲ

ಮುಂದಕ್ಕೆ ಹಿಟ್ಲರನಿಗೆ ಬಗ್ಗುವ ಹಾಗಿಲ್ಲ ಆತನು ಕೇಳಿದ್ದನ್ನು ಕೊಟ್ಟುಬಿಡುವುದು ಸಾಧ್ಯವಿಲ್ಲ. ಕೋವಿಧಿರಂಗಿಗಳಿಗೆ ಹೆದರಿಕೊಳ್ಳುವುದೂ ಸಾಧ್ಯವಿಲ್ಲ. ನಾಜಿಗಳು ಯೋಗ್ಯ ಒಪ್ಪಂದಗಳನ್ನು ಮುರಿಯುತ್ತಾ ಬರುತ್ತಿವೆ ನಿರ್ಬಲ ರಾಷ್ಟ್ರಗಳ ಮೇಲೆ ಅತ್ಯಾಚಾರ ಮಾಡಿ ಅವುಗಳನ್ನು ನುಂಗಿ, ಸುತ್ತುಮುತ್ತಲಿನ ರಾಷ್ಟ್ರಗಳನ್ನು ಗುಂಡಿನ ಪೆಟ್ಟಿನಿಂದ ಹೆದರಿಸುವಂತಹ ಭೀಕರ ಸನ್ನಿವೇಶದಲ್ಲಿ ಬಲಾತ್ಕಾರವನ್ನು ಎದುರಿಸುವವರು ಬಟ್ಟಾಗುವುದು ಸಂತೋಷ. ನಮ್ಮ ನಮ್ಮೊಳಗಿನ ವಾದವಿವಾದಗಳಿಗೆ ಇದು ಸಮಯವಲ್ಲ. ಒಬ್ಬ ವ್ಯಕ್ತಿಯ ಉಪದ್ರವದಿಂದ ಇಡೀ ಪ್ರಪಂಚವನ್ನೇ ಕಾಪಾಡಬೇಕು.

ಜರ್ಮನಿಯ ಭ್ರಮೆ

ಯುದ್ಧದಿಂದ ಆಗಬಹುದಾದ ಭಯಂಕರ ಅತ್ಯಾಚಾರವನ್ನು ತಡೆಯಲು ಬ್ರಿಟನು ಹುಕ್ಕಿಸುತ್ತಿರುವುದನ್ನು, ಜರ್ಮನಿಯು ಬ್ರಿಟನು ಹೆದರಿಕೆಯಿಂದ ಹೀಗೆ ಹಿಂದೆ ನಿಲ್ಲುತ್ತದೆಯೆಂದು ತಪ್ಪು ಗ್ರಹಿಕೆ ಮಾಡಿಕೊಂಡಿದೆ ಜರ್ಮನಿಯು ಫ್ರಾನ್ಸು ಮತ್ತು ಬ್ರಿಟನುಗಳು, ಸರ್ವಾಧಿಕಾರಿಗಳ ದರ್ಪದಿಂದ ಧ್ವಂಸವಾಗುವವೆಂದು ಭ್ರಮಿಸಿಕೊಂಡಿದೆ

ನಾಜಿ ತತ್ವದ ಅಂತ್ಯವಾಗುವುದು

ಮುಂದಿನ ಯುದ್ಧವು ಬೇಗನೇ ಮುಗಿಯುವುದೋ ಬಹು ಕಾಲ ಹೋಗುವುದೋ ಎಂದು ಜನತೆಯು ಸಂದೇಹಗೊಂಡಿದೆ ನಾಜಿಗಳು ನಿರ್ನಾಮವಾದಷ್ಟು ಬೇಗನೇ ಯುದ್ಧವು ಅಂತ್ಯವಾಗುವುದು. ಲೋಕಕಂಟಕರಾದ ನಾಜಿಗಳ ನಾಶದಲ್ಲಿ ಪ್ರಪಂಚಕ್ಕೆ ಶಾಂತಿ ಸಿಗುವುದು. ಬಲಾತ್ಕಾರವು ಬಹುಕಾಲ ಬದುಕಲಾರದು

ಸೈನ್ಯವನ್ನು ಹಿಂದೆ ಕರೆಯಲಿ

ಪಾರ್ಲಿಮೆಂಟು ಸಭೆಯಲ್ಲಿ ಲಾರ್ಡ್ ಹೆಲಿಫಾಕ್ಸ್ ಮತ್ತು ಚೇಂಬರ್ಲಿನರೂ ಬ್ರಿಟನು ಪೋಲೆಂಡಿಗೆ ನೆರವಾಗುವುದೆಂಬ ನಿರ್ಧಾರವನ್ನು ವ್ಯಕ್ತಪಡಿಸಿರುವರು.

ಈ ಸಂದರ್ಭದಲ್ಲಿ ಇಟಲಿ ಸರಕಾರವು ಮಧ್ಯಸ್ಥಿಕೆಯ ಮಾತು ತಂದಿತು. ಬ್ರಿಟನು, ಫ್ರಾನ್ಸು, ಪೋಲೆಂಡು, ಜರ್ಮನಿ, ಇಟಲಿ ಈ ಐದು ರಾಷ್ಟ್ರಗಳೊಳಗೆ ಮಾತುಕತೆ ನಡೆಯಬೇಕೆಂದು ಅದರ ಸೂಚನೆಯಾಗಿತ್ತು. ಇದಕ್ಕೆ ಉತ್ತರ ಹೇಳುತ್ತಾ ಬ್ರಿಟಿಷ್ ಸರಕಾರವು, ಹಿಟ್ಲರನು ಪೋಲೆಂಡಿನ ಗಡಿಯಿಂದ ಸೈನ್ಯವನ್ನು ಹಿಂದೆಗೆದು, ಡಾನ್ಜಿಗಿನ ಆಕ್ರಮಣವನ್ನು ನಿಲ್ಲಿಸಿದರೆ ಮಾತ್ರ ಮಧ್ಯಸ್ಥಿಕೆಯ ಮಾತುಕತೆಯಾಗುವುದೆಂದು ಹೇಳಿದೆ.

ಸರದಾರ ಭವನ Sirdar Bhavan

ಫೆಲಿಕ್ಸ್‌ಪೈ ಬಜಾರ್-ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿ ತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳು

Propriter— **H R Rao,**
Bangalore Guit Emporuim Madras

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತುಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯಸ್ವಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಜರ್ಮನಿಗೆ ಬ್ರಿಟನಿನ ಕಡೆಯ ನುಡಿ

ಬ್ರಿಟನಿಗೆ ಬೇರೆ ದಾರಿಯಿಲ್ಲ — ರಣರಂಗದಲ್ಲಿ ಸೈನಿಕರ ವೀರಾವೇಶ

ಯುರೋಪಿಗೆ ಗಾಂಧಿಜಿಯವರ ಸಂದೇಶ

ಹಿಟ್ಲರನಿಗೆ ಬ್ರಿಟನಿನ 'ಕಡೆಯನುಡಿ'

ಚೆಂಬರ್ಲೀನರ ಎಚ್ಚರಿಕೆ!

ಜರ್ಮನ್ ರಾಯಭಾರಿಗೆ, ಪ್ರಧಾನ ಮಂತ್ರಿ ಚೆಂಬರ್ಲೀನರು ಈ ರೀತಿಯಿಂದ ಕಡೆಯ ನುಡಿಯೊಂದನ್ನು ಕೊಟ್ಟಿದ್ದಾರೆ

"ಜರ್ಮನ್ ಸರಕಾರವು, ಪೋಲೆಂಡಿನ ಗಡಿಯಿಂದ, ತನ್ನ ಸೈನ್ಯವನ್ನು ಹಿಂದೆಗೆದು, ಯುದ್ಧಕಾಂಕ್ಷೆಯನ್ನು ನಿಲ್ಲಿಸುವ ಭರವಸೆ ತೋರಿಸದ ವಿನಹ ಬ್ರಿಟಿಷ್ ಸರಕಾರವು ಪೋಲೆಂಡಿಗೆ ಖಂಡಿತವಾಗಿಯೂ ನೆರವಾಗಿ ನಿಲ್ಲದಿರದು."

ಪಾರ್ಲಿಮೆಂಟಿನಲ್ಲಿ ತಾನು ಕೊಟ್ಟ ಉತ್ತರವನ್ನು ಪ್ರಧಾನ ಮಂತ್ರಿಗಳು ಓದಿದಾಗ ಸಭಾಮಂದಿರವು ಕಿಕ್ಕಿರಿದು ನೆರೆದಿತ್ತು. ಚೆಂಬರ್ಲೀನರು ಮಾತನಾಡುತ್ತಾ "ನಾನು ಈ ಸಂದರ್ಭದಲ್ಲಿ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ, ಸಮಯವು ನಮ್ಮನ್ನು ಇಂದು ರಂಗಕ್ಕಿಳಿದು ಕೆಲಸಮಾಡಲು ಕರೆಯುತ್ತದೆ. ನಾನು ಕಳೆದ ಹದಿನೆಂಟು ತಿಂಗಳಿಂದ ಪರಿಸ್ಥಿತಿಯನ್ನು ಬದಲಾಯಿಸಲು ಯತ್ನ ಮಾಡಿದೆ. ರಣರಂಗಕ್ಕೆ ಜನಾಂಗವನ್ನು ಎಳೆಯುವ ಇಷ್ಟ ನನಗಿರಲಿಲ್ಲ. ಆದರೆ ಜರ್ಮನಿಯು ಹಿಂದಿನಂತೆ ಪಶುಶಕ್ತಿಯನ್ನು ತೋರಿಸಿದಲ್ಲಿ, ಅದನ್ನು ತಡೆಯದೆ ನಮಗೆ ಸಾಧ್ಯವೇ ಇಲ್ಲವೆಂಬುದನ್ನು ನಾವು ಸ್ಪಷ್ಟಪಡಿಸಿದ್ದೇವೆ"

ಮುಸಲನಿಯ ಪ್ರಶಸ್ತಿ

"ಆದರೆ, ಒಂದು ಸಂತೋಷದ ಸಂಗತಿಯೆಂದರೆ, ಈ ಎಲ್ಲಾ ದಿನಗಳಲ್ಲಿಯೂ ಸೀನಿಯರ್ ಮುಸಲನಿಯು, ಇಂದಿನ ಸಮಸ್ಯೆಯನ್ನು ಪರಿಹರಿಸಲು ಯತ್ನಿಸುತ್ತಿರುವುದು.

ಇಂದಿನ ಈ ದುರ್ಘಟನೆಯ ಎಲ್ಲಾ ಹೊರೆಯೂ ಒಬ್ಬ ಮನುಷ್ಯನ ತಲೆಯ ಮೇಲಿದೆ. ಹಿಟ್ಲರನು ತನ್ನ ಆ ಕಾಂಕ್ಷೆಯನ್ನು ತೀರಿಸಿಬಿಡುವ ಸಲುವಾಗಿ, ಜಗತ್ತನ್ನೇ ಸಂಕಷ್ಟದಲ್ಲಿ ಇಡುತ್ತಾನೆ.

ಪೋಲೆಂಡ್-ಜರ್ಮನ್ ಮಾತುಕತೆ

'ಕಳೆದ ಕೆಲ ಸಮಯಗಳಿಂದ, ಪೋಲೆಂಡು ಮತ್ತು ಜರ್ಮನ್‌ಗಳೊಳಗೆ ಗೌರವ ಪೂರ್ವಕ ಒಪ್ಪಂದ ಮಾಡಲು ಯತ್ನಿಸಿದುದರ ಫಲವಾಗಿ, ಪೋಲೆಂಡು ಸರಕಾರವು ಅಂತಹ ಗೌರವಪೂರ್ವಕವಾದ ಒಪ್ಪಂದವಾಗುವ ಭರವಸೆಯಿತ್ತಲ್ಲಿ, ಜರ್ಮನ್ ಗಡಿಯಿಂದ, ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆವುದಾಗಿ ತಿಳಿಸಿತು. ಆದರೆ, ಈ ಕುರಿತು ಜರ್ಮನ್ ಸರಕಾರವು ಯಾವ ಉತ್ತರವನ್ನೂ ಕೊಡಲಿಲ್ಲ.

ಒಂದೇ ದಾರಿ

'ಪೋಲೆಂಡಿನ ರಾಯಭಾರಿಯಾದರೂ ಜರ್ಮನ್ ರಾಯಭಾರಿಯನ್ನು ಕಂಡು ಸಮಾನತೆಯ ಒಪ್ಪಂದವನ್ನು ಮಾಡುವುದಾಗಿ ತಿಳಿಸಿದನು. ಇದಕ್ಕೆ ಜರ್ಮನಿಯ ಉತ್ತರವೆಂದರೆ, ಮರುದಿನ ಮುಂಜಾವದಲ್ಲಿ, ಪೋಲೆಂಡಿನ ಗಡಿಯ ನಗರಗಳ ಮೇಲೆ ಬಾಂಬಿನ ಮಳೆ! ಇಂತಹ ಸಂದರ್ಭದಲ್ಲಿ ನಮಗೆ ಒಂದೇ ದಾರಿಯಿದೆ. ಈ ದಾರಿಯೇನೆಂಬುದನ್ನು ಜರ್ಮನ್ ಸರಕಾರಕ್ಕೆ ನಮ್ಮ ರಾಯಭಾರಿಯ ಮೂಲಕ ತಿಳಿಸಲಾಗಿದೆ. ಜರ್ಮನಿಯು ಪೋಲೆಂಡಿನ ಸ್ವಾತಂತ್ರ್ಯವನ್ನು ಹರಿಯಲು ಮುಂದೊತ್ತಿದರೆ ನಾವು ಪೋಲೆಂಡಿಗೆ ನೆರವಾಗಿ ನಿಲ್ಲುವೆವು. ಇದಕ್ಕೆ ಜರ್ಮನಿಯ ಅಸಮರ್ಪಕವಾದ ಉತ್ತರವಿತ್ತಲ್ಲಿ ನಮ್ಮ ರಾಯಭಾರಿಯನ್ನು ಅಲ್ಲಿಂದ ಹಿಂದಕ್ಕೆ ಕರೆಯಲಾಗುವುದು

ಬ್ರಿಟನು ಸಿದ್ಧವಾಗಿದೆ

"ನಮ್ಮ ರಕ್ಷಣೆಯ ಸಿದ್ಧತೆಯಾಗಿದೆ. ನಮ್ಮ ಮತ್ತು ಹೊರಗಿನ ಸಾಮ್ರಾಜ್ಯದಲ್ಲಿರುವ ಎಲ್ಲಾ ಸ್ಥಳ, ಜಲ, ವಾಯು ಸೈನ್ಯಗಳೂ ಈಗ ತಯಾರಾಗಿವೆ

"ಈ ಸಮುದ್ರದಲ್ಲಿ ರೋಗಗಳ ನೆನಪು ಯಾರಿಗಾದರೂ ಆಗಬಹುದು. ಆದರೆ, ಇಂದು ನಾವು ಅಂದಿಗಿಂತ ಎಷ್ಟೋ ಬಲಿಷ್ಠರಾಗಿದ್ದೇವೆ. ಹದಿನೆಂಟು ವರ್ಷಗಳಿಂದ ನಲ್ವತ್ತೊಂದರ ಒಳಗಿನ ಎಲ್ಲವರಿಗೂ ಸೈನಿಕ ಶಿಕ್ಷಣ ಕೊಡುವ ಶಾಸನವು ಬರುವುದು".

"ಚೆಂಬರ್ಲೀನರ ಈ ಧೋರಣೆಗೆ ವಿರುದ್ಧಪಕ್ಷದವರಿಂದಲೂ ಸಹಾಯವು ಸಿಕ್ಕಿತು

ಪೋಲೆಂಡಿನಲ್ಲಿ ಯುದ್ಧ

ಪೋಲೆಂಡಿನ ಗಡಿಯಲ್ಲಿ ಮೂರು ಸಲ ವಿಮಾನ ಧಾಳಿಯಾಯಿತು. ಅನೇಕ ವಿಮಾನಗಳು, ವಾರ್ಸೋ ನಗರದ ಸುತ್ತು ತಿರುಗುತ್ತಿದ್ದುವು. ಒಂದು ವಿಮಾನದಿಂದ ಒಮ್ಮೆಗೇ ಆರು ಬಾಂಬುಗಳು ಬಿದ್ದುವು.

ಸೈನಿಕರ ವೀರಾವೇಶ

ಎರಡು ಕಡೆಯ ಸೈನಿಕರೂ, ಬಹಳ ವೀರಾವೇಶದಿಂದ ಕಾದಾಡುತ್ತಿದ್ದಾರೆ. ಪೋಲೆಂಡಿನ ಸೈನಿಕರ ಮೇಲಲ್ಲದೆ ನಾಗರಿಕರ ಮೇಲೆ ವಿಮಾನ ಧಾಳಿ ಮೊದಲಾದವುಗಳನ್ನು ನಡೆಸಬಾರದೆಂದು ಹಿಟ್ಲರನು ಹೇಳಿರುವನಂತೆ!

ರಶ್ಯದ ತಯಾರಿ

ಜಗತ್ತಿನಲ್ಲಿ ಯುದ್ಧದ ಕೋಲಾಹಲ ಹುಟ್ಟಿದುದರಿಂದ ರಶ್ಯವೂ ತನ್ನ ಯುದ್ಧ ಸಿದ್ಧತೆಯ ಬಗ್ಗೆ ಸೈನ್ಯ ತಯಾರಿಮಾಡಿತು.

ಕಡ್ಡಾಯದ ಸೈನಿಕ ಶಿಕ್ಷಣವು ಆರಂಭವಾಯಿತು.

ಜರ್ಮನಿ—ರಶ್ಯಾ ಒಪ್ಪಂದದ ಸ್ಪಷ್ಟತೆಯ ಕುರಿತು ಮಾತನಾಡುತ್ತಾ ರಶ್ಯದ ಪ್ರಧಾನ ಮಂತ್ರಿಗಳು ಜರ್ಮನಿಯೊಡನೆ ಒಪ್ಪಂದವಾಗಿದ್ದರೂ, ರಶ್ಯಕ್ಕೆ ವಿರುದ್ಧವಾಗಿ ಯುದ್ಧ ನಡೆದ ಕ್ಷಣದಲ್ಲಿ ನಾವು ಸುಮ್ಮಗಿರಲಾರೆವು ಎಂದು ಹೇಳಿದರು.

ಪೋಲೆಂಡಿನಲ್ಲಿ ಗಾಂಧಿಜಿಯವರ ಸಂದೇಶವನ್ನು ಮನ್ನಿಸಿದರು

ಪೋಲೆಂಡಿಗೆ ಗಾಂಧಿಜಿಯವರು ಕಳುಹಿದ ಸಂದೇಶವು ಬಹು ಮಾನ್ಯತೆ ಪಡೆಯಿತು. ಪೋಲೆಂಡಿನವರೂ ಕೂಡಾ ಭಾರತದ ಸಂಸ್ಕೃತಿ ನಾಗರಿಕತೆಗಳ ಬಗೆ ಅಭಿಮಾನವುಳ್ಳವರೆಂದೂ ಪೋಲೆಂಡು ತನ್ನ ಸ್ವಾತಂತ್ರ್ಯರಕ್ಷಣೆಗಳ ಬಗೆ ಕಾದಾಡುತ್ತಿದೆಯೆಂದು ಭಾರತವು ತಿಳಿದಿರುವುದಕ್ಕಾಗಿ ಬಹಳ ಸಂತೋಷಪಟ್ಟಿದೆಯೆಂದೂ ಅವರ ಹೇಳಿಕೆ

ಡಾನ್ಜಿಗಿನಲ್ಲಿ ಜರ್ಮನಿಯ ಹೊಸ ರಾಜ್ಯನಿಯಮ

ಹೆರ್ ಫೋರ್ಸ್ಟರನು ಡಾನ್ಜಿಗಿಗೆ ಜರ್ಮನಿಯ ಹೊಸ ರಾಜ್ಯನಿಯಮವನ್ನು ತಯಾರಿಸಿ, ಅದನ್ನು ಸಮ್ಮತಿಸುವಂತೆ ಹಿಟ್ಲರನಿಗೆ ಕಳುಹಿಸಿದನು.

ಹಿಟ್ಲರನು ಅದನ್ನು ಸಮ್ಮತಿಸಿದ್ದು ಮಾತ್ರವಲ್ಲದೆ, ವಿಶಾಲ ಜರ್ಮನಿಯ ಮಹಾಕಾರ್ಯದಲ್ಲಿ ಆತನು ಮಾಡಿದ ಸಾಹಸಕ್ಕಾಗಿ ಅಭಿನಂದಿಸಿ, ಡಾನ್ಜಿಗಿನ ಸಿವಿಲ್ ಎಡ್ಮಿನಿಸ್ಟ್ರೇಶನಿನ ಮುಖ್ಯ ಆಫೀಸರನಾಗಿ ನಿಯಮಿಸಿರುವನು.

ಫ್ರಾನ್ಸಿನ ಮಂತ್ರಿಮಂಡಳದ ನಿರ್ಧಾರ

ಫ್ರಾನ್ಸಿನ ಮಂತ್ರಿಮಂಡಳದ ಸಭೆ ಸೇರಿ, ಫ್ರಾನ್ಸ್ ಪೋಲೆಂಡಿಗೆ ಕೊಟ್ಟ ಪ್ರತಿಜ್ಞೆಯಂತೆ ನಡೆಯುವುದೆಂದು ಪ್ರಕಟವಾಗಿದೆ. ಅಲ್ಲಿ ಎಲ್ಲಾ ಸಿದ್ಧತೆಗಳೂ ಆಗುತ್ತಿವೆ.

ಅಂತರ್ ರಾಷ್ಟ್ರೀಯ ಟೆಲಿಫೋನು ವಾರ್ತೆಯು ನಿಲ್ಲಿಸಲಾಗಿದೆ

ಜರ್ಮನಿಯ ಬೆದರಿಕೆ

ಡಾನ್ಜಿಗನ್ನು ಬಿಟ್ಟುಬಿಡಲಿ

ಜರ್ಮನಿ—ಪೋಲೆಂಡುಗಳ ಇತ್ಯರ್ಥವಾಗಬೇಕಾದಲ್ಲಿ ಈ ಕೆಳಗಿನ ವಿಷಯಗಳಿಗೆ ಪೋಲೆಂಡು ಒಪ್ಪಬೇಕೆಂದು ಹೇಳಿತು

೧ ಡಾನ್ಜಿಗನ್ನು ಯಾವ ಶರತ್ತೂ ಇಲ್ಲದೆ ಜರ್ಮನಿಗೆ ಬಿಟ್ಟುಕೊಡಬೇಕು

೨ ಒಂದು ವರ್ಷದ ನಡೆದ ಮೇಲೆ ಒಂದು ಸಮಿತಿಯು ಜರ್ಮನಿಗೆ ಸೇರತಕ್ಕ ದಾರಿಯ ಕುರಿತು ಇತ್ಯರ್ಥಗೊಳಿಸಬೇಕು

೩ ಅಂತಹ ಸಮಿತಿಯು ಚುನಾವಣೆಗೆವ ತತೆಗೆಯವಲ್ಲಿ ೧೯೩೮ ಜನವರಿ ಒಂದರ ಒಳಗೆ ಹುಟ್ಟಿದ ಎಲ್ಲಾ ಪೋಲರು ಮತ್ತು ಜರ್ಮನರು ಹಕ್ಕುದಾರರಾಗಿದ್ದಾರೆ. ಇದಕ್ಕೆ ಪೋಲೆಂಡು ನಕಾರವಿತ್ತಿದೆ

ಬ್ರಿಟನೂ ಸಂಪೂರ್ಣ ತಯಾರಿಯಾಗಿದೆ

ಬ್ರಿಟನಿನಲ್ಲಿಯೂ ಸೈನಿಕರ ಪದಾತಿ ಜಲ ವಾಯು ಸೈನ್ಯಗಳ ಸಂಪೂರ್ಣ ಸಿದ್ಧತೆಯಾಗಿದೆ. ಈ ಮೂರು ವಿಭಾಗಗಳ ಅಧಿಕಾರಿಗಳು ಸರಕಾರದ ಅಪ್ಪಣೆಯನ್ನು [illegible] ತ್ತಾರೆ

ಲಂಡನ್ ಹೆಲಿಪೋರ್ಟ್ಸರು ಎದುರು ಪಕ್ಷದ ನಾಯಕ ಗ್ರೀನ್ವುಡ್ ಕಂಡು ಮಾತನಾಡಿದರು. ವಿಮಾನ ತಯಾರಿಯ ಸಿದ್ಧತೆಯು ಬಹಳ ಜೋರಾಗಿ ನಡೆಯುತ್ತಿದೆ.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿಗಳ

ವಜ್ರಗಳು!

ಎನ್ಟ್ವರ್ಪ್ ಪಟ್ಟಣದಿಂದ ಬರುವ ವಜ್ರಗಳ ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ,

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು.

ಗಾಂಧಿಜಿಯವರ ಸಂದೇಶಗಳು

ರೂಸ್‌ವೆಲ್ಟರ ಸಂದೇಶಕ್ಕೆ ಜರ್ಮನಿಯು ಕಿವಿಗೊಡಲಿ
ನನಗೆ ಮದ್ಯಪಾನ ಸುಧಾರಣೆಯೊಂದೇ ಸಾಕು
ಖಾದಿಯನ್ನು ಸರಕಾರವೇ ಪ್ರೋತ್ಸಾಹಿಸಬೇಕು

ರೂಸ್‌ವೆಲ್ಟರ ಸಂದೇಶಕ್ಕೆ ಹಿಟ್ಲರನು ಕಿವಿಗೊಡಬೇಕು

ಯುದ್ಧದ ವಿಷಯದಲ್ಲಿ ಮಹಾತ್ಮಾ ಗಾಂಧಿಜಿಯವರು ಈ ಕೆಳಗಿನ ಹೇಳಿಕೆಯನ್ನು ಕೊಟ್ಟಿರುವರು —

"ಲಂಡನ್ ನಗರದಿಂದ ನನಗೆ ಹಲವು ತಂತಿಗಳು ಬಂದಿವೆ 'ಅಹಿಂಸೆಯಲ್ಲಿರುವ ನಿಮ್ಮ ಶ್ರದ್ಧೆಯ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿರಿ' ಎಂದು ಇವರೆಲ್ಲರೂ ವಿನಂತಿಮಾಡಿಕೊಂಡಿರುವರು. ಇದೀಗ ಮಾನವ ಜನಾಂಗಕ್ಕೆ ಅನ್ವಯಿಸುವ ಈ ಬಿಕ್ಕಟ್ಟಿನ ಸಂಬಂಧವಾಗಿ ನಾನೆ ನನ್ನಭಿಮತವನ್ನು ಕೊಡಬೇಕೆಂದಿರುತ್ತಿದ್ದೆನು

"ಶಾಂತಿ ಅಥವಾ ಯುದ್ಧವನ್ನು, ನಿರ್ಧರಿಸುವವರ ಮೇಲೆ ನನ್ನ ಮಾತಿಗೆ ಬೆಲೆಯಿಲ್ಲವೆಂಬುದನ್ನು ತಿಳಿದಿರುವೆನು. ನನ್ನ ಮಾತಿಗೆ ಹಲವು ರಾಷ್ಟ್ರಗಳಲ್ಲಿ ಮನ್ನಣೆ ಕೊಡುವರೆಂದು ಬಲ್ಲೆನು. ಯುದ್ಧದ ಗಂಡಾಂತರದಿಂದ ತಪ್ಪಿಸಲು ನಾನು ಸದಾ ದೇವರಲ್ಲಿ ಪ್ರಾರ್ಥಿಸುತ್ತಿದ್ದೇನೆ ಆದರೆ ವಿವಾದಗಳನ್ನು ಪರಿಹರಿಸಲು ನನಗೆ ಅಹಿಂಸೆಯಲ್ಲಿ ಅಚಲವಾದ ಶ್ರದ್ಧೆಯಿದೆ"

"ಹಿಂಸೆಯಿಂದ ಸಾಧ್ಯವಾದರೂ ಅದರಿಂದ ನನ್ನ ದೇಶದ ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳಲು ನನಗೆ ಇಚ್ಛೆಯಿಲ್ಲ. ಕತ್ತಿಯ ಶಕ್ತಿಯಿಂದ ಗೆದ್ದುಕೊಂಡುದನ್ನು ಕತ್ತಿಯಿಂದಲೇ ಕಳೆಕೊಳ್ಳಬೇಕಾಗುವುದೆಂಬ ನಾಣ್ಣುಡಿಯಲ್ಲಿ ನನಗೆ ವಿಶ್ವಾಸವಿದೆ".

ರೂಸ್‌ವೆಲ್ಟರ ಸಂದೇಶವನ್ನು ಹಿಟ್ಲರರು ಸ್ವೀಕರಿಸಿ, ಅವರ ಹಕ್ಕನ್ನು ಮಧ್ಯಸ್ಥಿಕೆಗಾರರ ವಿಚಾರಣೆಗೆ ಒಪ್ಪಿಸಿದರೆ ನನಗೆಷ್ಟು ಸಂತೋಷವಾಗುತಿತ್ತು'"

ಒಂದು ಸುಧಾರಣೆ ಸಾಕು

ಮದ್ಯಪಾನ ನಿಷೇಧವನ್ನು ಮೊದಲು ಜಾರಿಮಾಡಲು ಕಾಂಗ್ರೆಸ್ ಸರಕಾರಗಳು ನಿರ್ಧರಿಸಿದುವೇಕೆ ಎಂಬ ಬಗೆ ಗಾಂಧಿಜಿಯವರು 'ಹರಿಜನ'ದಲ್ಲಿ ಒಂದು ಲೇಖನವನ್ನು ಬರೆಯುತ್ತಾ ಹೀಗೆಂದಿರುವರು —

"ಮದ್ಯದ ಅಪಾಯದ ಬಗ್ಗೆ ಜನಾಭಿಪ್ರಾಯವು ಅನುಕೂಲವಾಗಿದೆ ಸಟ್ಟ, ಜುಗಾರಿ, ಸಿನೆಮಾ ಮೊದಲಾದವುಗಳು ಅಷ್ಟು ಪ್ರಚಾರದಲ್ಲಿಲ್ಲ. ಮದ್ಯದ ಮೊದಲು ಇವುಗಳನ್ನು ನಿಲ್ಲಿಸಬೇಕೆಂದು ಹಲವರು ನನ್ನನ್ನು ಕೇಳಿಕೊಂಡಿರುವರು. ಜುಗಾರಿಯ ವಿರುದ್ಧ ಚಳವಳವೆಬ್ಬಿಸಿದ್ದರೆ ನನ್ನ ಪೋಷಕರು ಕೈಬಿಡುವ ಸಂಭವವಿದೆ. ಕುದುರೆ ಜೂಜಾಟದ ವಿರುದ್ಧ ಮಾತನಾಡಿದರೆ ವೈಸರಾಯರಿಂದ ಹಿಡಿದು ಅತಿ ಕೆಳಗಿನ ನೌಕರರ ವರೆಗೂ ನನ್ನ ಮೇಲೆ ಶಸ್ತ್ರಾಸ್ತ್ರಗಳನ್ನೂ ಧರಿಸುವ ಸಂಭವವಿದೆ. ಸಿನೆಮದ ವಿರುದ್ಧ ಪ್ರಚಾರಕ್ಕೆ ಕೈಕೊಂಡರೆ ಶಿಕ್ಷಿತರು ನನ್ನನ್ನು ಪ್ರತಿಭಟಿಸದೇ ಇರಲಾರರು. ಆದುದರಿಂದ ಮದ್ಯಪಾನ ನಿಷೇಧದ ಒಡಲು ಇವನ್ನು ಸ್ವೀಕರಿಸುತಿದ್ದರೆ ನನ್ನ ಜಾತಿ ಹೋಗುತಿತ್ತು. ನನಗೆ ಮಹಾತ್ಮ ಬಿರುದೂ ತಪ್ಪುತಿತ್ತು. ಒಂದೇ ಪ್ರಗತಿದಾಯಕ ಹೆಜ್ಜೆ ನನಗೆ ಸಾಕು. ಉಳಿದುದನ್ನು ನನಗಿಂತಲೂ ಹೆಚ್ಚಿನ ಸುಧಾರಕರು ಕೈಕೊಳ್ಳಲಿ'

ನೂಲುವವರಿಗೆ ಹೆಚ್ಚು ಸಂಬಳ

ನೂಲುವವರಿಗೆ ಎಂಟಾಣೆಯ ಸಂಬಳವನ್ನು ಕೊಡಬೇಕೆಂದು ಮಹಾತ್ಮಾ ಗಾಂಧಿಜಿಯವರು ಹೇಳುತ್ತಿರುವರು ವಾರ್ಧಾದಲ್ಲಿ ನೆರೆದ ಅಖಿಲಭಾರತ ಚರಕಸಂಘದವರ ಅಧಿವೇಶನದಲ್ಲಿ ಎಂಟು ಗಂಟೆಯ ಕೆಲಸಕ್ಕೆ ಇಂದಿನ ಮೂರಾಣೆಯ ಸಂಬಳಕ್ಕಿಂತ ಹೆಚ್ಚು ಕೊಡುವ ವಿಷಯವನ್ನು ಮುಂದಕ್ಕೆ ಆಲೋಚಿಸಬಹುದೆಂದು ಆದ ಠರಾವಿನ ಕುರಿತು ಗಾಂಧಿಜಿಯವರು ಹೀಗೆನ್ನುತ್ತಾರೆ.—

"ಗುರಿಯನ್ನು ಒಂದೇಕ್ಷಣದಲ್ಲಿ ಹೊಂದುವುದು ಸಾಧ್ಯವಿಲ್ಲವೆಂದು ನಾನು ತಿಳಿದಿದ್ದೆನು. ಆದರೆ ಕೆಲವೇ ತಿಂಗಳಲ್ಲಿ ಕೆಲಸಗಾರರ ಸಂಬಳದ ವಿಷಯದಲ್ಲಿ ಅಭಿವೃದ್ಧಿ ತೋರಬಹುದೆಂದು ಆಲೋಚಿಸಿದೆ. ಆದರೆ, ಅಂತಹ ಉನ್ನತ ಆಶೆಯಲ್ಲಿ ಮುಂದುವರಿದ ಹಲವರ ಅನುಭವದಿಂದ ಭಾರತದ ರಂತಹ ದಾರಿದ್ರ್ಯದಿಂದ ತುಂಬಿದ ನಾಡಿನಲ್ಲಿ ಮಿಲಿಯಾಂತರ ಮಂದಿಗೆ ದಿನಕ್ಕೆ ಎಂಟಾಣೆಯಂತೆ ಸಂಬಳ ಕೊಡುವುದು ಸಾಧ್ಯವಿಲ್ಲವೆಂದು ತಿಳಿದಿದೆ. ಹೆಚ್ಚಾಗಿ ಹಳ್ಳಿಯ ಎಲ್ಲಾ ಕೆಲಸಗಾರರೂ, ದಿನಕ್ಕೆ ಎಂಟಾಣೆಯಷ್ಟು ಸಂಪಾದಿಸುವುದಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆಯಾಗದ ವಿನಹ ನೂಲುವವರಿಗೆ ಸಂಬಳ ಹೆಚ್ಚು ಮಾಡುವುದು ಸಾಧ್ಯವಾಗುವುದಿಲ್ಲ.

"ಇಂದು ಸೈನ್ಯಕ್ಕೆ ನಿರರ್ಥಕವಾಗಿ ಖರ್ಚುಮಾಡಿ ಹಣದಿಂದ, ಪೆನ್ಶನಿನ ಲೆಕ್ಕಕ್ಕೆ ವಿದೇಶಕ್ಕೆ ಹೋಗುವ ಅಪರಿಮಿತ ದ್ರವ್ಯದಿಂದ ನಮ್ಮ ದೇಶದ ಬಡತನವು ಹೆಚ್ಚಿದೆ ಇನ್ನೂ ಕೆಲವು ಕಾರಣಗಳಿವೆ ಈ ವಿಷಯಗಳು ಹೇಗಿದ್ದರೂ ಇಂದು ಖಾದಿಯನ್ನು ಉಪಯೋಗಿಸುವ ಸಾಮಾನ್ಯ ಮಧ್ಯಮ ತರಗತಿಯ ಮನುಷ್ಯನು ಮೂರಾಣೆ ಸಂಬಳಕ್ಕಿಂತ ಜಾಸ್ತಿ ಸಂಬಳಕೊಟ್ಟು ಮಾಡಿಸಿದ ಖಾದಿಯನ್ನು ಕೊಂಡುಕೊಳ್ಳಲು ಅಸಮರ್ಥನಿರುವನೆಂಬ ವಿಷಯವು ನೋವನ್ನು ಉಂಟುಮಾಡುತ್ತದೆ. ಠರಾವೂ ಈ ವಿಷಾದಮಯ ಸಂಗತಿಯನ್ನು ವಿವರಿಸುತ್ತದೆ.

"ಆದರೆ ಈ ಮೂರಾಣೆಯ ಸಂಬಳದ ಮಟ್ಟವೂ, ಪ್ರಾಂತಿಕ ಸರಕಾರಗಳ ಬೆಂಬಲ ಸಿಗದಿದ್ದರೆ ಉಳಿವಹಾಗಿಲ್ಲ. ಅವುಗಳ ಶಾಸನದಿಂದ ಮತ್ತು ಆಡಳಿತೆಯಿಂದಲೂ ಹಾಗೆ ನೆರಹಾಗಬಹುದು. ಇದನ್ನು ಅವರು ಮಾಡಬೇಕಾದರೆ ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಮತ್ತು ಹಿಂದುಸ್ಥಾನಿ ತಾಲಿಮಿ ಸಂಘ ಇವುಗಳನ್ನು ತಮ್ಮ ಸಂಘಗಳೆಂದು ತಿಳಿಯುವುದು ಅವಶ್ಯ. ಬಡ ಹಳ್ಳಿಯ ಜನರು ವಿರಾಮಕಾಲದಲ್ಲಿ ವ್ಯರ್ಥ ಸಮಯ ಕಳೆಯುವಾಗ, ಅವರಿಗೆ ಲಕ್ಷಗಟ್ಟಲೆ ದುಡ್ಡು ಸಿಗುವಂತಾಗಬೇಕೆಂದು ನನ್ನ ಬಯಕೆ. ಆದರೆ ಇವರ ಉದ್ಯೋಗಗಳಿಗೆ ದ್ರವ್ಯದ ಪ್ರತಿಫಲ ಸಿಗದಿದ್ದರೆ, ಆದರಿಂದ ಯಾವ ಪ್ರಯೋಜನವೂ ಇಲ್ಲ

ಸರಕಾರವೇ ಖಾದಿಯನ್ನು ಪ್ರೋತ್ಸಾಹಿಸಬೇಕು

ಖಾದಿಗೆ ಮೂರು ಪ್ರತ್ಯೇಕ ಕಾರ್ಯಗಳು ಇವೆಯೆಂಬ ವಿಷಯ ಗಾಂಧಿಯವರು 'ಹರಿಜನ'ದಲ್ಲಿ ಹೀಗೆಂದು ಬರೆಯುತ್ತಾರೆ.—

'ಅರ್ಧ ಉಪವಾಸದಿಂದ, ಅರ್ಧ ಉದ್ಯೋಗದಿಂದಿರುವ ಮಿಲಿಯಾಂತರ ಮಂದಿಗೆ ಖಾದಿಯು ಒಂದು ಸಹಾಯಕ ಉದ್ಯೋಗವಾಗಿದೆ. ಕ್ಷಾಮ ಬಂದ ಕಡೆಗಳಲ್ಲಿ ಜೀವಿಸಲು ಇದು ಸಹಾಯ. ಉತ್ಪತ್ತಿ ಕೊಡುವುದು ಹಿಂದೂದೇಶದಲ್ಲಿ ಹುಡುಗರಿಗೆ ಮತ್ತು ಹುಡುಗಿಯರಿಗೆ ಇದು ಉತ್ತಮವಾದ ಶಿಕ್ಷಣ ಸಾಧ್ಯನವಾಗಿದೆ

'ಆದರೆ ಒಂದು ಪ್ರಶ್ನೆಯಿದೆ. ಕ್ಷಾಮ ಬಂದ ಸ್ಥಳಗಳಲ್ಲಿ ಮತ್ತು ಶಾಲೆಗಳಲ್ಲಿ ಮಾಡಿದ ಖಾದಿಯನ್ನೂ ಏನು ಮಾಡುವುದು ಎಂದು? ಖಾದಿಯನ್ನು ಮಾರಾಟಮಾಡಲು ಸಾಧ್ಯವಾಗದಿದ್ದರೆ, ಕ್ಷಾಮದ ಕಾಲದಲ್ಲಿ ಕಲ್ಲನ್ನು ಪುಡಿಮಾಡಿ ಇಟ್ಟುಕೊಂಡಷ್ಟೆ ಅದರಿಂದಲೂ ಪ್ರಯೋಜನವಾದೀತು

'ಈ ಎರಡು ರೀತಿಯಿಂದ ತಯಾರಾದ ಖಾದಿಯನ್ನು ಸರಕಾರವು ತೆಕ್ಕೊಳ್ಳಬೇಕು. ಖಾದಿಯ ಬೆಲೆಯನ್ನು ವಿಚಾರಿಸಿದರೆ, ಮಿಲ್ಲ್ ಬಟ್ಟೆಗಿಂತ ಬಹಳ ಹೆಚ್ಚಾಗಿದೆ ಹಾಗಾಗಿ, ಇದನ್ನು ಸಂತೆಯಲ್ಲಿ ಕೇವಲ ತತ್ವ ತಿಳಿದವರು ಮತ್ತು ದೇಶಾಭಿಮಾನಿಗಳು ಮಾತ್ರ ಮನ್ನಿಸುವರು. ಆದರೆ, ಯಾರಲ್ಲಿ ಕಾಸಿಲ್ಲವೋ ಅವರಿಗೆ ತತ್ವ ಮತ್ತು ದೇಶಾಭಿಮಾನಿಗಳ ನೆನಪಿಲ್ಲ. ಅವರು ಬಹಳ ಕಡಿಮೆ ಕ್ರಯದನ್ನು ಕೊಂಡುಕೊಳ್ಳುವರು. ಆದುದರಿಂದ, ಸರಕಾರವು ಮಿಲ್ಲು ಬಟ್ಟೆಗಳನ್ನು ತಡೆದು, ಅವುಗಳಿಗೆ ಹೆಚ್ಚು ತೆರಿಗೆ ಹೇರಿಸುವ ಕ್ರಮದಿಂದ ಖಾದಿಯನ್ನು ಪ್ರೋತ್ಸಾಹಿಸುವುದು ಕರ್ತವ್ಯವಾಗಿದೆ

ಇಂದು ಖಾದಿಯಂತಹ ಉತ್ತಮ ಕೈಗಾರಿಕೆಯನ್ನೂ ರಕ್ಷಿಸುವಷ್ಟು ಅಧಿಕಾರವು, ಎಂಟು ಪ್ರಾಂತಗಳ ಕಾಂಗ್ರೆಸ್ ಸರಕಾರಗಳಿಗಿವೆ ಇತರ ಪ್ರಾಂತಗಳಾದರೂ, ಈ ವಿಷಯದಲ್ಲಿ, ಅಭಿಪ್ರಾಯ ಭೇದವಿಲ್ಲದಿರುವಾಗ, ಯಾಕೆ ಕಾಂಗ್ರೆಸು ಸರಕಾರಗಳನ್ನೂ ಅನುಸರಿಸಬಾರದೆಂಬುದಕ್ಕೆ ಯಾವ ಆಧಾರವೂ ಇಲ್ಲ. ಇತರ ಪ್ರಾಂತಗಳು ಒಪ್ಪುತ್ತವೋ, ಇಲ್ಲವೋ, ವಿಷಯ ಬೇರೆ, ಅಂತೂ ಕಾಂಗ್ರೆಸು ಪ್ರಾಂತಗಳಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳ ಉನ್ನತಿಯ ಬಗ್ಗೆ ತುಂಬಾ ಪ್ರೋತ್ಸಾಹವು ಸಿಗುವುದು ಅಶ್ಯವಿದೆ.

ರೂಪಾಯಿ 1-12-0ಕ್ಕೆ ಲಿವರ್ ರಿಸ್ಟು ವಾಚು



ಈ ಚಿತ್ರದಲ್ಲಿ ತೋರುವುದಕ್ಕಿಂತಲೂ ಅಂದವಾದ ಚೌಕ ಮತ್ತು ದುಂಡಾಕಾರದ ಮೋಹಕ ರಿಸ್ಟುವಾಚುಗಳು. ಸರಿಯಾದ ಸಮಯ ತೋರಿಸುವುದೆಂದು 5 ವರ್ಷದ ಗ್ಯಾರಂಟಿ ಕ್ರಯ 1-12-0, ಸುಪೀರಿಯರ್ 1-14-0, ಸ್ಪೆಶ್ಯಲ್ 2-8-0 ರೇಡಿಯಂ 3-8-0, ರೋಲ್ಡ್‌ಗೋಲ್ಡ್ 6-8-0, ಶ್ರೇಷ್ಠವಾದ್ದು 8-8-0. ಪೋಸ್ಟೇಜು ಮತ್ತು ಪೇಕಿಂಗ್ 0-10-0
3 ವಾಚುಗಳನ್ನು ಒಮ್ಮೆಲೇ ತರಿಸುವುದಾದರೆ ಪೋಸ್ಟೇಜು ಧರ್ಮಾರ್ಥ.

Empire Trading Co.,
P. O. No. 6744 Calcutta. (A. B.)

ಮದ್ರಾಸು ಮಂತ್ರಿಮಂಡಳ

ಹೊಣೆಗಾರಿಕೆ ಹೊರಲು ಗ್ರಾಮಸ್ಥರಿಗೆ ಯೋಗ್ಯತೆ ಇದೆ
ಸಂಸ್ಕೃತ ವಿದ್ಯಾಭ್ಯಾಸವು ಅಪೂರ್ವ ಜ್ಞಾನದ ಖನಿ
ಕಾಂಗ್ರೆಸನ್ನು ಬಲಗೊಳಿಸಿ ಸ್ವಾತಂತ್ರ್ಯ ಸಾಧಿಸಬೇಕು
ಉಪಾಧ್ಯಾಯರು ರಾಜಕೀಯದಲ್ಲಿ ಗಮನಕೊಡಬೇಕು



ಮಾನ್ಯ ವಾರ್ಕಿ

ಉಪಾಧ್ಯಾಯರೂ ರಾಜಕೀಯವೂ

'ತಮ್ಮ ಶಾಲೆಯ ಕೆಲಸಗಳಲ್ಲದೆ ಉಪಾಧ್ಯಾಯರು, ತಮ್ಮ ಗ್ರಾಮದ, ಜಿಲ್ಲೆಯ ಹಾಗೂ ಪ್ರಾಂತದ ರಾಜಕೀಯದಲ್ಲಿ ಪ್ರತ್ಯಕ್ಷ ಅನುಭವಗಳನ್ನು ಪಡೆದು ಪ್ರವೇಶಿಸಬೇಕು. ಆದರೆ ಎಲ್ಲಾ ಪಕ್ಷಗಳಿಗಿಂತಲೂ ಮೇಲ್ತರಗತಿಯಲ್ಲಿರಬೇಕು. ಹೀಗೆ ಅವರು ರಾಷ್ಟ್ರ ಸೇವೆ ಮಾಡುವುದು ಅವರ ಕರ್ತವ್ಯ. ಯಾರು ಹಲವು ವರ್ಷಗಳ ವರೆಗೆ ಉಪಾಧ್ಯಾಯ ವೃತ್ತಿ ಮಾಡಿ, ತಮ್ಮ ಜ್ಞಾನವನ್ನು ತುಂಬಿಸಿಕೊಂಡಮೇಲೆ, ಪ್ರತ್ಯಕ್ಷ ರಾಜಕೀಯಕ್ಕೇ ಸೇರಬೇಕೆಂದು ಮನಸ್ಸು ಮಾಡುತ್ತಾರೋ ಅವರು ತಮ್ಮ ಕೆಲಸಕ್ಕೆ ರಾಜಿಕೊಟ್ಟು ರಾಜಕೀಯ ರಂಗಕ್ಕಿಳಿಯಲಿ. ಸ್ಥಳೀಕ ಸಂಸ್ಥೆ, ಮುನ್ಸಿಪಾಲಿಟಿ, ಎಸೆಂಬ್ಲಿ ಮೊದಲಾದವುಗಳ ಚುನಾವಣೆಗೆ ನಿಲ್ಲಲಿ. ಇದು ಇಂಗ್ಲೆಂಡಿನಲ್ಲಿಯೂ ನಡೆಯುತ್ತದೆ. ಹೀಗೆ ಹೆಚ್ಚು ಉಪಾಧ್ಯಾಯರು ರಾಜಕೀಯ ರಂಗಕ್ಕಿಳಿದು ದೇಶಸೇವೆಯನ್ನು ಮಾಡಲಿ ಎಂದು ನಾನು ಆಶಿಸುತ್ತೇನೆ. ಹೀಗೆಂದು ಮಾನ್ಯ ವಾರ್ಕಿಯವರು ಅಂಬಾಸಮುದ್ರದಲ್ಲಿ ಹೇಳಿದರು.

ಮಾನ್ಯ ಪ್ರಕಾಶಂ

[ಗ್ರಾಮಪಂಚಾಯತ ಬಿಲ್ಲಿನ ಕುರಿತು]

'ಗ್ರಾಮಪಂಚಾಯತ ಬಿಲ್ಲನ್ನು ಬರುವ ಎಸೆಂಬ್ಲಿಯ ಅಧಿವೇಶನದಲ್ಲಿ ಇಡುವ ಏರ್ಪಾಡು ಮಾಡಲಾಗಿದೆ. ಈಗ ಬಿಲ್ಲು ರಚಿತವಾಗುತ್ತಿದೆ. ನನ್ನ ಜೀವಿತಕಾಲದಲ್ಲಿಯೇ, ಗ್ರಾಮದ ಆಡಳಿತ ಹಿಂದಿನಂತೆ, ಗ್ರಾಮದ ಜನರಿಂದ ಸ್ವಾತಂತ್ರ್ಯ ಮಾಡಲಾಗುವಂತೆಯೂ ಒಳ್ಳೆಯ ರೀತಿಯಿಂದ ಗ್ರಾಮದ ಜನರು ಆಡಳಿತೆಯನ್ನು ನಡೆಸಿ ಅಭಿವೃದ್ಧಿ ತೋರಿಸುವುದನ್ನೂ ನೋಡುವ ಆಶೆಯಿದೆ ಹೀಗೆ ಮಾಡುವಾಗ, ಜನತೆಯ ಕೆಲಸದಲ್ಲಿ ಮೇಲಿನ ಅಧಿಕಾರಿಗಳ ಉಪದ್ರವು ಆದಷ್ಟು ಕಡಿಮೆಯಾಗಬೇಕು. ಇಂದು ಆಡಳಿತೆಯ ಕ್ರಮವು ಬಹು ದ್ರವ್ಯವ್ಯಯದಿಂದ ಆಗುತ್ತದೆ. ಇಂದು ಪಟೇಲರು ಮತ್ತು ಶ್ಯಾನುಭಾಗರೇ ಹಳ್ಳಿಯ ಭೂಕಂದಾಯವನ್ನು ವಸೂಲುಮಾಡುವುದಿದ್ದರೂ, ಅಗತ್ಯವಿಲ್ಲದ ಅನೇಕ ಸರಕಾರೀ ತೊಂದರೆಗಳು ಅವರಿಗೆ ಇದೆ. ಅದನ್ನು ತಪ್ಪಿಸಿ ಭೂಕಂದಾಯದ ವಸೂಲಿಯನ್ನು ಗ್ರಾಮಪಂಚಾಯತಿಗೆ ಕೊಡಬೇಕು. ಕೆಲವರು ಇದರಿಂದ ಅನರ್ಥವಾಗುವುದೆಂಬ ಆಕ್ಷೇಪವೆತ್ತುತ್ತಾರೆ. ಆದರೆ ಜನರಿಗೆ ಈ ಜವಾಬ್ದಾರಿಯನ್ನು ಹೊತ್ತು ಕೆಲಸಮಾಡುವಷ್ಟು ಯೋಗ್ಯತೆಯು ಇದೆ' ಹೀಗೆಂದು ಮಾನ್ಯ ಪ್ರಕಾಶಂರವರು ನಂದ್ಯಾಲದಲ್ಲಿ ಹೇಳಿದರು

ಮಾನ್ಯ ಗಿರಿ



[ಕಾಂಗ್ರೆಸನ್ನು ಬಲಗೊಳಿಸಿರಿ]

'ಕಾಂಗ್ರೆಸು ಹನ್ನೊಂದು ಪ್ರಾಂತಗಳಲ್ಲಿ ಇಂದು ಎಂಟು ಪ್ರಾಂತಗಳ ಅಧಿಕಾರ ಪಡೆದಿದೆ. ಇದರಿಂದ ನಾವು ಸ್ವಾತಂತ್ರ್ಯ ಸಂಪಾದಿಸಿದೆವೆಂದೂ ಯಾರಾದರೂ ತಿಳಿದಿದ್ದರೆ ಅದು ಕೇವಲ ಭ್ರಾಂತಿ ಇದು ನೂರರಲ್ಲಿ ಮೂರಂಶ ಸ್ವಾತಂತ್ರ್ಯವೂ ಅಲ್ಲ. ಸಂಪೂರ್ಣ ಆರ್ಥಿಕ, ರಾಜಕೀಯ ಸ್ವಾತಂತ್ರ್ಯವೆಂದರೆ ಭಾರತದ ೩೫ ಮಿಲಿಯ ಜನರು ದಿನಕ್ಕೆ ಮೂರೂಟ ಪಡೆದು, ಮೈಗೆ ತುಂಬ ವಸ್ತ್ರವುಟ್ಟು ಒಳ್ಳೆಯ ಮನೆಗಳನ್ನು ಮಾಡಿ ಸುಖದಿಂದಿರುವುದು. ಸರಕಾರವಾದರೂ ಅವರಿಂದ ಎತ್ತಿದ ತೆರಿಗೆಯಿಂದ ಧರ್ಮಾರ್ಥ ವಿದ್ಯಾಭ್ಯಾಸ, ಔಷಧ ಹಂಚೋಣಗಳನ್ನು ಕೊಟ್ಟು ಅವರನ್ನು ಉದ್ಯೋಗನಿರತರನ್ನಾಗಿ ಮಾಡಿದರೆ ಆಗ ಸಂಪೂರ್ಣ ಆರ್ಥಿಕ ಸ್ವಾತಂತ್ರ್ಯವು ದೊರಕಿತು. ಆರ್ಥಿಕ ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರ್ಯವನ್ನು ಹೊಂದಿದೆ. ರಾಜಕೀಯ ಸ್ವಾತಂತ್ರ್ಯವು ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿದೆ. ಇಂದಿನ ಮಂತ್ರಿಗಳು ಗುಲಾಮಗಿರಿಯಲ್ಲಿ ಆಳುತ್ತಾರೆ. ಭಾರತದ ಸರ್ವ ಮತದವರೂ ಒಂದಾಗದೆ ಸ್ವಾತಂತ್ರ್ಯವು ಸಿಗುವ ಹಾಗಿಲ್ಲ ಇಂದಿನ ಮಂತ್ರಿಮಂಡಳವು ಮದ್ಯಪಾನ ನಿಷೇಧವಮಾಡಿ, ಹಲವು ಸಂಸ್ಕಾರಗಳನ್ನು ಉಳಿಸಿದೆ, ಇದರಿಂದ ಆದ ನಷ್ಟಕ್ಕೆ ಹೊಸ ತೆರಿಗೆ ಎತ್ತಬೇಕಾಯಿತು. ಇಂದು ನಮಗೆ ಕೇಂದ್ರ ಸರಕಾರದ ಹಣದಲ್ಲಿ ಸ್ವಾತಂತ್ರ್ಯವಿಲ್ಲ; ಅಬಿದ್ದರೆ ಹೊಸ ತೆರಿಗೆಯ ಅವಶ್ಯವಿರಲಿಲ್ಲ ಕೇಂದ್ರ ಸರಕಾರ ಮತ್ತು ಕಾಂಗ್ರೆಸು ಕಳೆದ ೨೮ ವರ್ಷಗಳಿಂದ ಈ ಸಮಸ್ಯೆಗಾಗಿ ಕಾದಾಡುತ್ತಿವೆ. ಕಾಂಗ್ರೆಸು ನಮ್ಮ ಏಕಮಾತ್ರ ಸಂಸ್ಥೆ, ಅದರ ಬಲಗೊಳಿಸುವುದರಲ್ಲಿಯೇ ನಮಗೆ ಸ್ವಾತಂತ್ರ್ಯವು ಸಿಗುವುದು ಹೀಗೆಂದು ಕಡಪಾದಲ್ಲಿ ಮಾನ್ಯ ಗಿರಿಯವರು ಉಪದೇಶಿಸಿದರು

ಮಾನ್ಯ ರಾಜಾಜಿ

[ಸಂಸ್ಕೃತಾಭ್ಯಾಸದ ಕುರಿತು]

"ಸಂಸ್ಕೃತವೆನ್ನು ಹಿಂದೂಧರ್ಮವನ್ನು ಒಟ್ಟು ಸೇರಿಸುವುದು ತಪ್ಪು ಹಿಂದೂಧರ್ಮವೆಂಬುದು ಒಂದು ವಿಜ್ಞಾನ, ಒಂದು ಕಲೆ, ಜೀವಕರ್ಮಗಳ ಮತ್ತು ಜ್ಞಾನನಿಧಿಯಾಗಿದೆಯಲ್ಲದೆ ಅದೊಂದು ಪ್ರತ್ಯೇಕವಾದುದಲ್ಲ ಹಿಂದೂಧರ್ಮವನ್ನು ತಿಳಿಯಬೇಕಾದರೆ ಒಬ್ಬನು ಕಲೆ, ವಿಜ್ಞಾನಗಳನ್ನು ತಿಳಿದಿರಬೇಕು. ಸಂಸ್ಕೃತದ ಬಹ್ವಂಶವು ಧಾರ್ಮಿಕವಾಗಿರುವುದೇನೋ ನಿಜ ಆದರೆ ಸಂಸ್ಕೃತವಿದ್ಯಾಭ್ಯಾಸದಿಂದ ಹಿಂದೂಮತದ ಅಂಗೀಕಾರವಾಗುವುದೆಂಬ ಬೆದರಿಕೆ ಶಕ್ಯವೇ? ಗ್ರೀಕ್ ಲಿಟನುಗಳನ್ನು, ಅರಬ್ಬಿ, ಪರ್ಶಿಯನ್ ಭಾಷೆಗಳನ್ನೂ ಕ್ರಿಶ್ಚನ್ ಮತ್ತು ಮುಸ್ಲಿಂಮತಗಳೊಡನೆ ಸೇರಿಸುವುದು ಸರಿಯೋ? ಸಂಸ್ಕೃತ ವಿದ್ಯಾಭ್ಯಾಸವೆಂಬುದು ಒಂದು ಅಪೂರ್ವ ಜ್ಞಾನದ ಖನಿ, ಹಿಂದೂದೇಶದ ವಿಶೇಷ ಶಕ್ತಿ; ಯಾರು ಇದನ್ನು ಉಪೇಕ್ಷಿಸುತ್ತಾರೋ ಅವರಿಗೆ ಇದರ ಅರಿಯಬೇಕಿದೆ

"ಸಂಸ್ಕೃತದ ಜ್ಞಾನವು ಹರಡಬೇಕಾದರೆ, ದೇಶಾಭಿಮಾನಿಗಳಾದ ಉದಾರಿಗಳು ಮುಂದಕ್ಕೆ ಬರಬೇಕು ತುಂಬಾ ಹಣ ಸಹಾಯ ಮಾಡಿ, ಇಂದಿನ ಅವನತಿಯಿಂದ ಎತ್ತಬೇಕು" ಹೀಗೆಂದು ಪ್ರಧಾನ ಮಂತ್ರಿ ರಾಜಾಜಿಯವರು ಪಚ್ಚೆಯಪ್ಪ ಕಾಲೇಜ್ ಸಂಸ್ಕೃತ ಸಂಘದ ಪ್ರಾರಂಭ ಭಾಷಣದಲ್ಲಿ ಹೇಳಿದರು.

THE

BANK OF MANGALORE LTD.,

MANGALORE

ESTD 1931

Branches.-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

All kinds of bankingbusiness transacted

ಒಂದು ಸಣ್ಣ ಕತೆ:

ಚೋರ ಪತ್ನಿ!

[ಸಿರಿವಂತರನ್ನು ಸುಲಿದು ಬಡವರಿಗೆ, ನಿರ್ಗತಿಕರಿಗೆ ಆತ ಹಂಚುತ್ತಿದ್ದ; ಒಂದು ರೀತಿಯಿಂದ ಕೇರಳದಲ್ಲಿ ಸಮತಾವಾದದ ಪ್ರವರ್ತಕನೇ ಅವನೆಂದರೂ ಸರಿಯಾಗುವುದು. ಆತ, ಆಕೆಯನ್ನು ಪ್ರೀತಿಸುತ್ತಿದ್ದುದು, ಕೇವಲ ಅವಳ ಅನುಪಮ ಸೌಂದರ್ಯಕ್ಕಾಗಿಯಲ್ಲ; ಅವಳ ಧೈರ್ಯ, ನಿಷ್ಕಲ್ಮಷ ಪ್ರೇಮ, ಸಹನೆಗಳಿಗಾಗಿ ಅವನ ಹೃದಯವು ಸೂರೆಯಾಗಿತ್ತು.]

ಇಂದಿನ ನಾಗರಿಕತೆಯ ಥಳಕು ಆಗ ಬಂದಿರಲಿಲ್ಲ. ಜನರು ತಮ್ಮ ತಮ್ಮ ಹಳ್ಳಿಗಳಲ್ಲಿಯೇ ಇದ್ದು ಪರಂಪರೆಯಿಂದ ಬಂದ ಕಸುಬುಗಳಲ್ಲಿ, ಹಿರಿಯರ ಹೊಲ ನೆಲಗಳ ಬೇಸಾಯಗಳಲ್ಲಿ ತೃಪ್ತರಾಗಿ, ದಿನ ಕಳೆಯುತ್ತಿದ್ದರು ದುಡಿತದ ಸ್ವಲ್ಪ ಅಂಶವನ್ನು ಮಾತ್ರ ಖರ್ಚುಮಾಡಿ, ಹೆಚ್ಚಿನ ಪಾಲನ್ನು ಉಳಿಸುತ್ತಿದ್ದರು. ತಾವು ಗಳಿಸಿದ ಹಣವನ್ನು ತಮ್ಮ ಮನೆಯ ಹಿತ್ತಲಿನ ಯಾವುದಾದರೊಂದು ಮರದಡಿಯಲ್ಲಿಯೋ ಇಲ್ಲವೇ ಮನೆಯ ಕತ್ತಲು ನೆಲಮಾಳಿಗೆಯಲ್ಲಿಯೋ ಭದ್ರವಾಗಿ ಇಟ್ಟು ಕಾಪಾಡುತ್ತಿದ್ದರು ಆ ಸಮಯದಲ್ಲಿ ಹೀಗೆ ಕೂಡಿಟ್ಟ ಹಣಕ್ಕಾಗಿ ಕಳ್ಳ ದರೋಡೆಗಾರರ ಗುಂಪು, ಮನೆಗಳನ್ನು, ಹಳ್ಳಿಗಳನ್ನು ಹೊಕ್ಕು ಲೂಟಿ ಮಾಡುವ ಬೆದರಿಕೆಯು ಎಲ್ಲರಿಗೂ ಎಲ್ಲಾ ಕ್ಷಣದಲ್ಲಿಯೂ ಇತ್ತು. ರಾತ್ರಿ ಹಳ್ಳಿಯನ್ನು ಹೊಕ್ಕ ದರೋಡೆಗಾರರು, ಬೆಳಕು ಹರಿಯಬೇಕಾದರೆ, ತಮ್ಮ ಕೈಗೆ ಸಿಕ್ಕಿದ ಎಲ್ಲಾ ವಸ್ತುಗಳನ್ನೂ ದೋಚಿಕೊಂಡು ಹೋಗುತ್ತಿದ್ದರು!

ಆಗ ಇಡೀ ತಿರುವಾಂಕೂರನ್ನೇ ಭಯಗೊಳಿಸುವ ಒಂದು ದರೋಡೆಯ ಗುಂಪು ಇತ್ತು. ಹಳ್ಳಿಯ ಸಾಮಾನ್ಯ ಜನರಿಗಿಂತ ಧನಿಕರಿಗೂ, ಸರಕಾರಕ್ಕೂ ಅವರ ಭೀತಿಯು ವಿಪರೀತವಾಗಿತ್ತು ಈ ಗುಂಪಿನ ನಾಯಕನನ್ನು ಒಬ್ಬ ಅದ್ಭುತ ವ್ಯಕ್ತಿಯೆಂದು ಜನರು ತಿಳಿದಿದ್ದರು ಆತನ ಹೆಸರು 'ಭಾದನ್' ಎಂದು. ಆತನ ಸಾಹಸ ಕಾರ್ಯಗಳ ವರ್ಣನೆಯು ಜನರ ದಿನನಿತ್ಯದ ಮಾತಾಗಿತ್ತು ಆತನು ಕುಲೀನ ವಂಶದಲ್ಲಿ ಜನ್ಮವೆತ್ತಿದವನೆಂದೂ ಜನರು ಹೇಳುತ್ತಿದ್ದರು. ಆದರೆ ಯಾತಕ್ಕಾಗಿ ಕದ್ದುಕೊಳ್ಳುವ ವೃತ್ತಿಯನ್ನು ಕೈಕೊಂಡನೋ ಯಾರಿಗೂ ತಿಳಿಯದು!

ಬಡವರಿಗೆ ಆತನು ಎಂದೂ ಉಪದ್ರವ ಕೊಡುತ್ತಿರಲಿಲ್ಲ ದೊಡ್ಡವರನ್ನು ಸುಲಿದು, ಅವರ ಹಣವನ್ನು ದರಿದ್ರರಿಗೆ ಅನಾಥರಿಗೆ, ಅಂಗಹೀನರಿಗೆ ಹಂಚುತ್ತಿದ್ದನು ಒಂದು ರೀತಿಯಿಂದ, ಕೇರಳದಲ್ಲಿ ನಿಜವಾದ ಸಮತಾವಾದದ ಪ್ರಥಮ ಪ್ರಚಾರಕನೇ ಆತನೆಂದು ಹೇಳುವುದೂ ಸರಿಯಾಗಿ ಒಪ್ಪುವಂತಿತ್ತು! ಈ ಎಲ್ಲಾ ವಿಶೇಷ ಗುಣಗಳಿಂದ, ಆತನು 'ಅದ್ಭುತ ವ್ಯಕ್ತಿ'ಯಾಗಿ, ಸಿರಿವಂತರ ಭಯಂಕರ ಶತ್ರುವಾಗಿ, ಬಡವರ ಭಾಗ್ಯವಿಧಾತನಾಗಿ ಮನ್ನಣೆ ಪಡೆದಿದ್ದನು!

ಭಾದನನು ದೀರ್ಘಕಾಯನಾದ ಸುಂದರ ಯುವಕನಾಗಿದ್ದನು, ಬಹಳ ರಸಿಕ ಜೀವಿ, ಕನ್ನಿ ಎಂಬ ಗ್ರಾಮಕನ್ನಿಕೆಯೊಬ್ಬಳಲ್ಲಿ ಆತನ ಪ್ರಣಯವಿತ್ತು ಕಡಲ ದಡದಲ್ಲಿ, ಒಂದು ದೊಡ್ಡ ತೆಂಗಿನ ತೋಟದ ಮಧ್ಯದಲ್ಲಿರುವ ಗುಡಿಸಲೊಂದರಲ್ಲಿ ಆಕೆ ತನ್ನ ಮಲತಾಯಿಯೊಡನೆ ಏಕಾಂಗಿಸಿಯಾಗಿ ಜೀವಿಸುತ್ತಿದ್ದಳು ಆಕೆಗೆ ಆಗ ಕೇವಲ ಹದಿನೆಂಟು ವರ್ಷ ಪ್ರಾಯವಾಗಿತ್ತು. ಅಸಾಮಾನ್ಯ ಸೌಂದರ್ಯವತಿಯಾಗಿದ್ದಳು.

ಕನ್ನಿಯ ದೇಹಸೌಂದರ್ಯದಿಂದ ಮಾತ್ರ ಭಾದನನು ಆಕರ್ಷಿಸಲ್ಪಟ್ಟಿರಲಿಲ್ಲ. ಅಂತಹ ಎಷ್ಟೋ ಮಂದಿ ಬೆಡಗಿಯರನ್ನು ಆತನು ಕಂಡಿರಬಹುದು! ಆದರೆ ಆಕೆಯ ಧೈರ್ಯ, ನಿಷ್ಕಲ್ಮಷ ಪ್ರೇಮ, ನಿರ್ಮಲ ನಡತೆ ಇವುಗಳಿಗೆ ಆತನು ಮುಗ್ಧನಾಗಿ ಹೋಗಿದ್ದನು ಎಷ್ಟೋ ಸಮಯ ದಿನಗಟ್ಟಲೆ, ತಿಂಗಳು ತಿಂಗಳುಗಳಾದರೂ, ತನ್ನ ಸಾಹಸ ಕಾರ್ಯಗಳ ನಿಮಿತ್ತ, ಅವನು ಎಲ್ಲೆಲ್ಲಿಯೋ ಅಲೆದಾಡಬೇಕಾಗಿತ್ತು! ಆದರೆ ಆಕೆಯು ಸ್ವರ್ಗದ ಬೆಳಕನ್ನು ಕಾಯುತ್ತಿರುವವಳಂತೆ, ತನ್ನ ನಲ್ಲನು ಬರುವ ಮುಹೂರ್ತವನ್ನೇ ಧೀರಳಾಗಿ, ಶಾಂತಳಾಗಿ ಎದುರುನೋಡುತ್ತಿದ್ದಳು!, ಗುಡಿಸಲಿನ ಹೊರಗಡೆ, ಅವರ

ಹತ್ತು ತಿಂಗಳ ಪ್ರಾಯದ ಸೆಂಡಿ ಹೆನ್ಸಿಲ್ ಎಂಬ ಈ ಮಗುವು
ಬಿಂಗ್ ಕ್ರೋಸ್ ಬಿ ಮತ್ತು ಜೋನ್ ಬ್ಲೊಂಡೆಲರೊಂದಿಗೆ
'ಫಸ್ಟ್ ಸ್ಟ್ಯಾಡ್ ಓಫ್ ಹೆವನ್' ಎಂಬ ಚಿತ್ರದಲ್ಲಿ ಅಭಿನಯಿಸಿರುವುದು

ರಾತ್ರಿಯಲ್ಲಿಯೇ ಆಗಲಿ, ಭಾದನನ ಕಾಲ ಸಪ್ಪಳವು ಕೇಳಿದರೆ, ಎದ್ದು ಓಡಿಹೋಗಿ, ಆತನು ತನ್ನ ಹೆಸರೆತ್ತಿ ಕರೆಯುವುದಕ್ಕಿಂತ ಮೊದಲೇ, ಕೈ ಹಿಡಿದು, ಒಳತಂದು, ಉಪಚರಿಸಿ, ಉಣಬಡಿಸಿ, ಮುದ್ದಿಸಿ, ಸರಸವಾಡಿ, ತನ್ನ ಮತ್ತು ಆತನ ಅಷ್ಟು ದಿನಗಳ ಆಯಾಸಗಳನ್ನೂ ಪರಿಹರಿಸುವಳು!

ರಾಜ್ಯದ ಆಡಳಿತದಲ್ಲಿ ಸಿರಿವಂತರ ಕೈ ಮಾಟವೇ ನಡೆಯುವುದಷ್ಟೆ? ಭಾದನನನ್ನು ಜೀವಂತವಾಗಿಯಾಗಲೀ, ಕೊಂದಾಗಲೀ, ಸರಕಾರಕ್ಕೆ ಒಪ್ಪಿಸಿದವರಿಗೆ, ಅಪೂರ್ವ ಧನವು ಉಚಿತವೀಯುವುದಾಗಿ ಸರಕಾರವು ಪ್ರಕಟಿಸಿತು ಆತನನ್ನು ಹಿಡಿದು, ಬಹುಮಾನ ಪಡೆಯಲು, ಪೋಲೀಸು ಪಡೆಯು ದೇಶದಲ್ಲಿ ಎಲ್ಲೆಲ್ಲಿಯೂ ಹರಡಿತ್ತು. ಆದರೆ ಭಾದನನು ಎತ್ತರ ಪರ್ವತ ಕಾನನಗಳ ನಡುವೆ, ನಿರ್ಜನ ನಿಬಿಡ ಅರಣ್ಯದ ಅಂಧಕಾರದ ಆವರಣದಲ್ಲಿ, ಧೀರ ಸಿಂಹದಂತೆ ಅಲೆದಾಡುತ್ತಲೇ ಇದ್ದನು ಅಲ್ಲಿಗೆ ಯಾರೂ ಆತನನ್ನು ಹುಡುಕಲು ಹೋಗುವ ಧೈರ್ಯಶಾಲಿಗಳು ಇರಲಿಲ್ಲ ಹಾಗೆ ಹೋದವರು ತಿರುಗಿ ಜೀವಂತರಾಗಿ ಬರುವುದೂ ಸಾಧ್ಯವಿರಲಿಲ್ಲ ಹಳ್ಳಿಯ ಬಡವರು ಜೀವ ಹೋದರೂ, ಆತನ ಗೊತ್ತು ಗುರಿಗಳನ್ನು ಸರಕಾರಕ್ಕೆ ತಿಳಿಸುವ ಹಾಗೂ ಇರಲಿಲ್ಲ.

ಭಾದನನನ್ನು ಹಿಡಿಯುವ ಹಂಚಿಕೆ ಹುಡುಕಿ ಹುಡುಕಿ ಅಧಿಕಾರಿಗಳ ತಲೆಯ ನರಗಳು ಕಡಿಯುವಂತಾದುವು ಕಡೆಗೆ ಎಲ್ಲರೂ ಕೂಡಿ ಈ ಒಂದು ನಿರ್ಣಯಕ್ಕೆ ಬಂದರು ದಂಡಿನಲ್ಲಿ ಒಳ್ಳೆಯ ತರುಣನೂ ಸುಂದರನೂ ಬಲಶಾಲಿಯೂ ಆದ ನಾನಪ್ಪನೆಂಬ ಸಿಪಾಯಿಯೊಬ್ಬನಿದ್ದನು. ಆತನು ಒಳ್ಳೆಯ ಬಿಲ್ಲುಗಾರನು ಮಾತ್ರವಲ್ಲದೆ, ಖಡ್ಗ ಬೀಸುವುದರಲ್ಲಿಯೂ ಕುಶಲನಿದ್ದನು ಆತನನ್ನು ಕರೆದು, ಗುಪ್ತವೇಷದಿಂದ ಯಾರಿಗೂ ಸಂಶಯ ಹುಟ್ಟದಂತೆ, ಕನ್ನಿಯಿರುವ ಹಳ್ಳಿಗೆ ಹೋಗಿ ಆಕೆಯ ಗುಡಿಸಲಿನ ಹತ್ತಿರ ಉಳಕೊಂಡು, ಕ್ರಮೇಣ ಆಕೆಯ ಮಲತಾಯಿಯನ್ನು ಧನದಾಸೆಯಿಂದ ಸ್ವಾಧೀನಪಡಿಸಿ, ಕನ್ನಿಯ ಪರಿಚಯವನ್ನೂ ಮಾಡಿ, ಸಾಧ್ಯವಾದಲ್ಲಿ, ಆಕೆಯ ಪ್ರೇಮವನ್ನೂ ಸಂಪಾದಿಸಿ, ಭಾದನನು ಬರುವ ಒಳಸಂಚುಗಳನ್ನರಿತು, ಜೀವಂತವಾಗಿಲಿ, ಕೊಂದಾಗಲಿ ತರಲು ಯತ್ನಿಸಬೇಕೆಂದು ಮೇಲಧಿಕಾರಿಯು ಸೂಚಿಸಿದನು. ಈ ಕಾರ್ಯವನ್ನು ಕುಶಲತೆಯಿಂದಲೂ, ವಿಧೇಯತೆಯಿಂದಲೂ ಮಾಡಿದರೆ ಮುಂದಕ್ಕೆ ಅಪಾರ ಉಚಿತವೂ, ಕೆಲಸದಲ್ಲಿ ಮೇಲಿನ ವರ್ಗವೂ, ಬೇಕಾದರೆ ಅದೇ ಹುಡುಗಿಯನ್ನು ಮದುವೆ ಮಾಡಿಸಿಯೂ ಕೊಡುವ ಭರವಸೆ ಕೊಟ್ಟು ಆತನನ್ನು ಅವಳಿದ್ದ ಹಳ್ಳಿಗೆ ಕಳುಹಿಸಿದನು

ಅಧಿಕಾರಿಗಳ ಈ ಊಹನೆಯಲ್ಲಿ ಹೆಚ್ಚಿನ ಅಸಂಭವವಿರಲಿಲ್ಲ ನಾನಪ್ಪನು ಒಳ್ಳೆಯ ಚುರುಕಿನವನಿದ್ದನು ಆಕೆಯ ಮಲತಾಯನ್ನು ಸ್ವಾಧೀನಪಡಿಸುವಲ್ಲಿ, ಸರಕಾರದಿಂದ ನಾನಪ್ಪನಿಗೆ ಬೇಕಾದಷ್ಟು ಹಣವು ಒದಗಿಸಿಕೊಡುವ ಏರ್ಪಾಡೂ ಮಾಡಲಾಗಿತ್ತು. ಇಂತಹ ಅತುಲ ಐಶ್ವರ್ಯದಲ್ಲಿ, ಸುಂದರ ಜೀವನದಲ್ಲಿದ್ದ ಯುವಕನೋರ್ವನನ್ನು ಆಕೆಯು ಪ್ರೇಮಮಾಡುವುದೂ, ಆ ರೀತಿಯಿಂದ ಭಾದನನನ್ನು ಸರೆಹಿಡಿಯುವುದೂ ಅಧಿಕಾರಿಗಳ ದೃಷ್ಟಿಯಿಂದ ಅಸಾಧ್ಯವಿರಲಿಲ್ಲ

ಆ ತರುಣ ಸಿಪಾಯಿಯಾದರೂ, ಇಂತಹ ಸೌಭಾಗ್ಯವನ್ನು ಕನಸಲ್ಲಿಯೂ ಇರಲಿಕ್ಕಿಲ್ಲ ಸರಕಾರದ ಬಂಬಲ, ಖರ್ಚುಮಾಡಲು ಬೇಕಾದಷ್ಟು ಹಣ, ತರುಣಿಯೋರ್ವಳೊಡನೆ ಪ್ರಣಯಕಾರ್ಯ ಭಾದನನನ್ನು ಕೊಂದರೆ ಮುಂದಕ್ಕೆ ಅಧಿಕಾರದಲ್ಲಿ ಆಗುವ ಪದೋನ್ನತಿ ಒಂದೊಂದೇ ವಿಚಾರಗಳು ಆತನನ್ನು ಇಂತಹ ಸಾಹಸದ ಕಾರ್ಯದಲ್ಲಿ ಉತ್ಸಾಹಿತನಾಗಿ ತೊಡಗಿಸಲು ಸಾಕಾಗುವಂತಿದ್ದವು!

ಮರುದಿನವೇ ಕನ್ನಿಯ ಗುಡಿಸಲ ಬಳಿಯ ಇನ್ನೊಂದು ಮನೆಯಲ್ಲಿ ಆತ ವಾಸವಾದನು. ಒಂದು ನೆವನ ಹೇಳಿ ಒಂದು ನೆರೆಯೂರಿದನು. ಹಳ್ಳಿಯ ಜನರೊಡನೆ ಬೆರಕೆಯಾಗಿ, ಸಾಯಂಕಾಲ ಅವರು ಮದ್ಯದಂಗಡಿಗೆ ಹೋದರೆ, ಅವರೊಡನೆ ತಾನೂ ಸೇರುತ್ತಿದ್ದು, ಸುತ್ತಮುತ್ತಲಿನವರಿಗೆ ತನ್ನ ಹಣದಿಂದಲೇ ಮದ್ಯವನ್ನು ಹಂಚುತಿದ್ದು ಅವರ ಹುಚ್ಚು ನಗೆಗಳಲ್ಲಿ ತಾನೂ ಕೂಡಿ ಕಳೆಯುತ್ತಿದ್ದನು ಹೀಗೆ ಗ್ರಾಮದ ಜನರಿಗೆ ಆತನು ಬಹಳ ಪರಿಚಿತನೂ, ಪ್ರೇಮಪಾತ್ರನೂ ಆದನು

ಅವರ ಬಾಯಿಂದ ಭಾದನನ ಅನೇಕ ಸಾಹಸ ವರ್ಣನೆಗಳನ್ನು ಕೇಳಿದನು ರಾತ್ರಿಯ ಹೊತ್ತಿನಲ್ಲಿ ಒಮ್ಮೊಮ್ಮೆ ಶುಭ್ರವಾದ ಬೆಳದಿಂಗಳಲ್ಲಿ, ಒಮ್ಮೊಮ್ಮೆ ಕಡಲ ದಡದಲ್ಲಿ, ಇನ್ನೊಮ್ಮೆ ತೆಂಗಿನ ಮರದ ಬುಡದಲ್ಲಿ ಭಾದನನೂ ಕನ್ನಿಯೂ ಸರಸವಾಡುತ್ತಿರುವ ವಿಷಯಗಳೂ ಅವರಿಂದ ಆತನಿಗೆ ತಿಳಿಯಿತು.

'ಹಾಗೆ ಅವರು, ಮುಂದಕ್ಕೆ ಬಹಳ ಕಾಲ ಇರಲಾರರು' ತರುಣ ಸಿಪಾಯಿಯು, ಹೀಗೆಂದು ತನ್ನಲ್ಲಿಯೇ ಯೋಚಿಸಿಕೊಂಡು ನಕ್ಕನು.

ಕನ್ನಿಯ ಗುಡಿಸಲಿಗೆ, ಏನಾದರೊಂದು ನೆವ ಮಾಡಿ ಆತ ಆಗಾಗ ಹೋಗುತಿದ್ದನು, ಆದರೆ ಅಲ್ಲಿ ಅವನಿಗೆ ಯಾವ ಸ್ವಾಗತವೂ ಸಿಗಲಿಲ್ಲ. ಇವನ ವಿಷಯ ಅವರಿಗೆ ಸಂಶಯವಾಗದೆ ಇರಲಿಲ್ಲ ಆದರೆ ದಿನದಿಂದ ದಿನಕ್ಕೆ ಹಳ್ಳಿಯ ಜನರಿಂದ ಆತನ

[೧೦ನೇ ಪುಟವನ್ನು ನೋಡಿರಿ]

ಚೋರ ಪತ್ನಿ!

[೯ನೇ ಪುಟದಿಂದ ಮುಂದುವರಿದುದು]

ಪ್ರಶಂಸೆಯನ್ನು ಕೇಳಿ, ಹಾಗೂ ಆತನ ಹಣದ ಪ್ರಲೋಭನಕ್ಕೆ ಮರುಳಾಗಿ ಆಕೆಯ ಮಲತಾಯಿಯು ಸ್ವಾಗತಿಸತೊಡಗಿದಳು.

ಕನ್ನಿಯನ್ನು ಒಂದು ದಿನ ಆತ, ಮಲತಾಯ ಸಮೀಪ ಕುಳಿತಿದ್ದು ಕಂಡನು. ಕಳ್ಳನನ್ನು ಹಿಡಿದು ಘನತೆಗೇರುವ ತನ್ನ ಕರ್ತವ್ಯಕ್ಕಿಂತಲೂ, ಆಗ ಆತನಿಗೆ ಕನ್ನಿಯನ್ನು ಪಡೆಯುವ ಅಭಿಲಾಷೆಯೇ ಹೆಚ್ಚಿತು ತನ್ನ ಮನೆಯ ಸುತ್ತು ಹೊಲಗಳಲ್ಲಿ, ಗದ್ದೆಗಳಿದು, ಸಂತೋಷದಿಂದ ಹಾಡುತ್ತಾ, ಆಗಾಗ ಕೈಯ್ಯಲ್ಲಿ ಕೊಯ್ಯುವ ಕತ್ತಿಯನ್ನೆತ್ತಿ ಹಿಡಿದು, ಬಿಚ್ಚಿದ ಕೂದಲ ರಾಶಿಯನ್ನು ಜುಟ್ಟುಗಟ್ಟಿಕೊಂಡು, ಸುಂದರವಾಗಿ ತೋರುವ, ಬಳುಕುವ ಬೆಡಗಿನ ಬಾಲೆಯರನ್ನು ಆತ ನೋಡಿದ್ದನು ಆದರೆ, ಅವರೆಲ್ಲರ ರಾಣಿ ಈಕೆಯೆಂದು ಆತನಿಗೆ ಹೊಳೆಯಿತು ಸರಕಾರದ ಆಜ್ಞೆಯೂ ಆಕೆಯ ಮೇಲಿನ ಅಭಿಲಾಷೆಯೂ ಎರಡೂ ಸೇರಿ, ನಾನಪ್ಪನು ಭಾದನನನ್ನು ಬಹಳವಾಗಿ ದ್ವೇಷಿಸತೊಡಗಿದನು

ಒಮ್ಮೆ ಪೇಟೆಗೆ ಹೋದವನೇ ಅವನು ಒಂದು ನೂತನವಾದ ಬಾಚಣಿಗೆಯನ್ನು ತಂದನು ಹಳ್ಳಿಯ ಜನರು ಅಂತಹುದನ್ನು ಕಂಡಿರುವುದೇ ಸಾಧ್ಯವಿರಲಿಲ್ಲ ಕನ್ನಿಗೆ ಇದನ್ನು ಬಹುಮಾನವಾಗಿತ್ತು ಆಕೆಯ ಪ್ರೇಮಸಂಪಾದನೆ ಮಾಡಬೇಕೆಂದು ಅವಳ ಗುಡಿಸಲ ಕಡೆಗೆ ಹೋದನು

'ಕನ್ನೀ, ಈ ಚೆಲುವಾದ ಬಾಚಣಿಗೆಯಿಂದ, ನಿನ್ನ ಹಾರುವ ಮುಂಗುರುಳುಗಳನ್ನು ಸರಿಮಾಡಿಕೊಂಡರೆ, ನೀನು ಇನ್ನಷ್ಟು ಸುಂದರಳಾಗಿ ತೋರುವಿ' ಹೀಗೆಂದು ಹೇಳಿ ಅದನ್ನು ಅವಳಿಗೆ ಕೊಡಹೋದನು

ಈ ಮಾತನ್ನು ಮೆಚ್ಚದವಳಂತೆ ಕನ್ನಿಯು ಅಲ್ಲಿಂದ ಬೆನ್ನು ಹಾಕಿ ಹೊರ ಹೋದಳು ತನ್ನ ಉಪಾಯವು ಸಾಧಿಸಲಿಲ್ಲವೆಂದೂ, ಉತ್ತಮ ಹಂಚಿಕೆಯೊಂದನ್ನು ಹುಡುಕಬೇಕೆಂದೂ ಆತ ಹಗಲಿರುಳು ಯೋಚನಾಗ್ರಸ್ತನಾದನು

ಕಡೆಗೆ ಒಂದು ಯೋಚನೆಯು ಹೊಳೆಯಿತು ತಾನು ಭಾದನನ ಹಿತಚಿಂತಕನೆಂದೂ, ಆತನನ್ನು ಹಿಡಿಯಲು ಸರಕಾರವು ಪ್ರಯತ್ನಿಸುತ್ತಿರುವಾಗ ತಾನು ಸಾಧ್ಯ ಸಾಹಸ ಮಾಡಿ ತಪ್ಪಿಸಲು ಇಷ್ಟಪಡುವೆನೆಂದೂ ಹೇಳಿದರೆ, ಕನ್ನಿಯು ತನ್ನೊಡನೆ ಸಲಿಗೆಯಿಂದಿರಬಹುದೆಂದೂ, ಆತನ ಗುಟ್ಟುಗಳನ್ನು ಆಕೆ ಹೇಳಬಹುದೆಂದೂ ವಿಚಾರಿಸಿದನು

'ಭಾದನನನ್ನು ಹಿಡಿಯಲು ಇಲ್ಲಿಗೆ ಅಧಿಕಾರಿಗಳು ಜನ ಕಳುಹಿಸಿರುವರೆಂದು ಸುದ್ದಿಯಿದೆ' ಎಂದು ಒಮ್ಮೆ ನಾನಪ್ಪ ಕನ್ನಿಯೊಡನೆ ಹೇಳಿದ. ಈ ಮಾತಿನ ಪರಿಣಾಮವು ಆಕೆಯ ಮೇಲೆ ಏನಾಗುವುದೋ ಎಂದು ಆತನು ನಿರೀಕ್ಷಿಸುತಿದ್ದನು ಆಕೆ ಒಂದು ಪ್ರತಿಮೆಯಂತೆ ಕುಳಿತಿದ್ದಳು

'ಇಲ್ಲ ಕನ್ನೀ, ನಾನು ನಿನ್ನ ಭಾದನನನ್ನು ಬಹಳವಾಗಿ ಮೆಚ್ಚುತ್ತೇನೆ. ಅವನಂತಹ ಪರೋಪಕಾರಿ ಯಾರಿದ್ದಾನೆ? ನನಗೆ ಸಾಧ್ಯವಾದರೆ, ಆತನ ಕೂದಲೆಳೆಯನ್ನು ಸರಕಾರವು ಮುಟ್ಟದಂತೆ ಯತ್ನಿಸುವೆನು' ಎಂದು ಹೇಳಿದ.

ಕನ್ನಿಯು ಒಂದು ಮುಗುಳ್ನಗೆ ನಕ್ಕಳು. ನಾನಪ್ಪನಿಗೆ ಇದು ಬಹಳ ಮುದ್ದಾಗಿ ಕಂಡಿತು

'ನೀನು ಸಂಶಯಪಡುತ್ತೀಯಾ, ನನ್ನ ಶರೀರವನ್ನು ನೋಡು. ನಾನು ಬಲಶಾಲಿಯಾಗಿಲ್ಲವೇ? ಒಂದು ಮುಷ್ಟಿಯ ಪೆಟ್ಟಿನಿಂದ ಒಮ್ಮೆಗೇ ಐವರನ್ನು ನಾನು ಪುಡಿ ಮಾಡಬಲ್ಲೆ'

'ಸರಕಾರದಲ್ಲಿ ನಿನಗಿಂತ ಬಲಶಾಲಿಗಳು ಹಲವರಿರಬಹುದು, ಅವರ ಭಯಂಕರ ಆಯುಧಗಳೆದುರು ನಿನ್ನ ಮುಷ್ಟಿಯು ಪ್ರಯೋಜನವಾಗಲಿಕ್ಕಿಲ್ಲ' ಕನ್ನಿಯು ಇದೇ ಮೊದಲನೆಯದಾಗಿ ಆತನೊಡನೆ ಮಾತನಾಡಿದಳು

'ನಿನಗೆ ನನ್ನ ವಿಷಯ ಗೊತ್ತಿಲ್ಲ, ಅವರ ಆಯುಧಗಳೋ? ಇಲ್ಲಿ ನೋಡು, ಹರಿತವಾದ ಖಡ್ಗ, ತೀಕ್ಷ್ಣವಾದ ಅಸ್ತ್ರಗಳು ನನ್ನ ಸೊಂಟದಲ್ಲಿಯೇ ಇವೆ' ಹೀಗೆಂದು ಅಡಗಿಸಿಟ್ಟಿದ್ದ ಖಡ್ಗ ಅಸ್ತ್ರಗಳನ್ನು ಹೊರತೆಗೆದು ತೋರಿಸಿದನು 'ಈಗಲಾದರೂ ನಂಬುತ್ತೀಯಾ'' ಆತ ಕೇಳಿದ.

'ಈ ವಿಷಯ ನೀನು ಮೊದಲೇ ಯಾಕೆ ತಿಳಿಸಿರಲಿಲ್ಲ?' ಆಕೆ ಪ್ರಶ್ನಿಸಿದಳು

'ನೀನು ಅದಕ್ಕೆ ಸಂದರ್ಭವೇ ಕೊಡಲಿಲ್ಲ ನಾನು ಬಹಳವಾಗಿ ಮೆಚ್ಚುತ್ತಿರುವ ಭಾದನನ ಸಾಹಸ ವರ್ಣನೆಗಳನ್ನು ಎಷ್ಟೋ ಕೇಳಬಹುದಿತ್ತು, ನೀನು ನನ್ನೊಡನೆ ಒಮ್ಮೆಯೂ ಮಾತನಾಡಲೇ ಇಲ್ಲ'

'ನೀನು ಅವನನ್ನು ಅಷ್ಟೊಂದು ಮೆಚ್ಚುತ್ತೀ ಎಂದು ನಾನು ತಿಳಿಯದೆ ಹೋದೆ'' ಕನ್ನಿಯು ಮುಗುಳ್ನಕ್ಕು, ಹೊರ ಹೋದಳು ಆ ಮಧುರವಾದ ಮುಗುಳ್ನಗೆಯೇ ಆತನನ್ನು ರಾತ್ರಿಯಿಡೀ ನಿದ್ರೆಯಿಲ್ಲದವನನ್ನಾಗಿ ಮಾಡಿತು

ತನ್ನ ಈ ಜಯದಿಂದ ನಾನಪ್ಪನಿಗೆ ಬಹಳ ಸಂತೋಷವಾಯಿತು ಈಗ ಆಕೆ ತನ್ನನ್ನು ಗೆಳೆಯನೆಂದು ವಿಚಾರಿಸುವಳೆಂದು ಆತ ಉಬ್ಬಿಹೋದನು ಆ ಮೇಲೆ ಅವಳ ಗುಡಿಸಲಿಗೆ ಹೋಗಿ ಬರುವುದು, ಅವಳೊಡನೆ ಮಾತನಾಡುವುದು ಹೆಚ್ಚಿತು ಸರಕಾರದವರ ಕೆಲವು ಗುಪ್ತ ಹಂಚಿಕೆಯ ಕುರಿತು ತಿಳಿಸುವಂತೆ ಆಗಾಗ ಕೆಲ ವಿಷಯಗಳನ್ನು ಹೇಳುತಿದ್ದನು ಅದನ್ನು ಕೇಳಿ ಆಕೆ ನಗಾಡುತಿದ್ದಳು ಈಕೆ, ಬಹಳ ಧೈರ್ಯಶಾಲಿನಿ' ಎಂದು ಆತ ಮೊದಲು ಆಲೋಚಿಸಿದನು ಕಡೆಕಡೆಗೆ ಭಾದನನ ವಿಷಯ ಪ್ರೇಮ ಕಡಿಮೆಯಾಗಿರುವುದರಿಂದ, ಅವನ ಸುದ್ದಿಯಲ್ಲಿ ನಿರುತ್ಸಾಹಳಾಗಿ ಹೀಗೆ ನಗುತ್ತಿರಬಹುದೇ ಎಂದೂ ಭಾವಿಸಿಕೊಂಡನು

ಒಮ್ಮೆ ಒಂದು ಬೆಳದಿಂಗಳ ರಾತ್ರಿ ಕಡಲ ದಡಕ್ಕೆ ಇಬ್ಬರೇ ಹೋಗುವ ಅಭಿಪ್ರಾಯವನ್ನು ಆತ ಆಕೆಗೆ ತಿಳಿಸಿದ ಅವಳೂ ಕೂಡಲೇ ಸಮ್ಮತಿಸಿದಳು ನಾನಪ್ಪನು ಹಿಗ್ಗಿಹೋದ ಕಡಲ ದಡದಲ್ಲಿ, ತೆಂಗಿನ ಗಿಡದ ಕೆಳಗೆ ಇಬ್ಬರೂ ಕುಳಿತರು ಆತನು ತನ್ನ ಹೃದಯದ ಪ್ರೇಮವನ್ನು ಆಕೆಗೆ ಬಿಚ್ಚಿಹೇಳಿದ ಅವಳು ಮಾತೆತ್ತಲಿಲ್ಲ ಮುಗುಳ್ನಗೆ ತೋರಿಸಲೂ ಇಲ್ಲ 'ಎಳೆಯ ಹುಡುಗಿ, ನಾಚಿಕೆಯ ಸ್ವಭಾವದವಳು ಮುಂದೆ ನೋಡುವ' ಹೀಗೆಂದು ಸಮಾಧಾನಮಾಡಿಕೊಂಡು ಅವಳೊಡನೆ ಗುಡಿಸಲಿಗೆ ಹಿಂತಿರುಗಿ ಬಂದನು.

ದಿನಗಳು ಹೀಗೆ ಉರುಳಿದವು! ಒಂದು ಹುಣ್ಣಿಮೆಯ ದಿನ, ಕನ್ನಿಯೇ ಹೊರ ಹೋಗುವ ಎಂದು ನಾನಪ್ಪನೊಡನೆ ಹೇಳಿದಳು ಇದನ್ನು ಕೇಳಿ ನಾನಪ್ಪನು ಕನಸಿನ ಗೋಪುರವನ್ನೇ ಕಟ್ಟಲು ಸುರುಮಾಡಿದನು. ವಿಚಾರಮಾಡುತ್ತಿರುವಂತೆ, ಮೈ ರೋಮಾಂಚನಗೊಂಡಿತು 'ಈ ಸಲ ಆಕೆ ತನ್ನ ಹೃದಯವನ್ನು ಬಿಚ್ಚಿ ತೋರಿಸುತ್ತಾಳೆ, ಅವಳ ಮುಖದ ಮಧುವನ್ನು ನಾನು ಹೀರಿಯೇ ಬಿಡಬೇಕು' ಇದೇ ಆತನ ತಲೆ ಸುತ್ತು ತಿರುಗತೊಡಗಿತು

ಬೆಳದಿಂಗಳ ರಾತ್ರಿ, ಅವರಿಬ್ಬರೂ ಮುಂದೆ ಮುಂದಕ್ಕೆ ಸಾಗಿದರು ನಾನಪ್ಪನು ತನ್ನ ಹೃದಯದ ಪ್ರೇಮಭಾವನೆಗಳನ್ನು ವರ್ಣಿಸಿ ಹೇಳುತ್ತಾ ಇದ್ದನು ಅವರು ನಡೆದು ಪರ್ವತದ ಎತ್ತರ ಸ್ಥಳಕ್ಕೆ ಬಂದು, ಅಲ್ಲಿ ಒಂದು ಮರದ ನೆರಳಲ್ಲಿ ಕುಳಿತುಕೊಂಡರು ನಾನಪ್ಪನು ಕುಳಿತ ಸ್ಥಳಕ್ಕೆ ಸಮೀಪ ಒಂದು ಪೊದರು ಹರಡಿತ್ತು

'ಕನ್ನಿ ನಾನಪ್ಪ ಹೇಳಲು ಆರಂಭಿಸಿದ 'ನಾನು ನಿನ್ನ ಭಾದನನಿಗಿಂತಲೂ ಕಡಿಮೆಯವನೇ''

ಕನ್ನಿ ನಗಾಡಿದಳ ಆತನ ಕಿವಿಗ ಅದು ಮಧುರ ಸಂಗೀತಾಲಾಪದಂತೆ ಕೇಳಿಸಿತು 'ತನ್ನ ಹೃದಯದ ಆಕಾಂಕ್ಷೆಗಳನ್ನು ಜಡಗಿಸಲು ಹಾಗೆ ನಗಾಡುತ್ತಾಳೆ, ಹುಡುಗಿಯರೆಲ್ಲಾ ಹಾಗೆಯೇ' ಆತ ಯೋಚಿಸಿಕೊಂಡ ತನ್ನ ಮನೆ, ತನ್ನ ಜನರು, ತನ್ನ ಕುಟುಂಬದ ಪ್ರಸಿದ್ಧಿ, ಧನ ಧಾನ್ಯ ಸಂಪತ್ತು ಎಲ್ಲವುಗಳನ್ನೂ ಆಕೆಯ ಮುಂದೆ ವರ್ಣಿಸಿದನು ಇದರೆಡೆಯಲ್ಲಿ ದರೋಡೆಗಾರನೊಬ್ಬನನ್ನು ಪ್ರೀತಿಸುವುದರ ನಿರರ್ಥಕತೆಯನ್ನೂ ತಿಳಿಸಲು ಮರೆಯಲಿಲ್ಲ ಹೇಳು ಕೊನೆಗೆ ಅವನ ಗತಿಯೇನು' ಪಾಶಿಯಲ್ಲವೇ' ಆತ ಕೇಳಿದ

ಕನ್ನಿಯು ಒಮ್ಮೆ ತನ್ನ ದೃಷ್ಟಿಯನ್ನು ಆ ಕಡೆ ಹೊರಳಿಸಿದಳು ಇಷ್ಟೇ ಅವನಿಗೆ ಸಾಕಾಗಿತ್ತು ಆಕೆಯನ್ನು ಬರಸೆಳೆಯಲು ಆತ ಮುಂದುವರಿದನು

ಹಾ! ಅಸ್ತ್ರವೊಂದು ನಾನಪ್ಪನ ಎದೆಯನ್ನು ನಾಟಿತ್ತು ನೆಲಕ್ಕೆ ಒರಗಿದವನೇ ಸೊಂಟದ ಖಡ್ಗಕ್ಕೆ ಕೈ ಹಾಕಿದನು ಅಷ್ಟರಲ್ಲಿ ಇನ್ನೊಂದು ಬಾಣವೂ ಬಿತ್ತು! ಕನ್ನಿ ಗಟ್ಟಿಯಾಗಿ ನಕ್ಕಳು ಪರ್ವತದ ಗಿರಿಕಂದರಗಳು ಪ್ರತಿಧ್ವನಿಗೊಡುವಂತಹ ಅಟ್ಟಹಾಸವದು! ಸಂಗೀತದ ಮಧುರಾಲಾಪದ ಇಂಪು ಈಗ ಅದರಲ್ಲಿರಲಿಲ್ಲ

ಪೊದರಿನೆಡೆಯಿಂದ ದೀರ್ಘಕಾಯನಾದ ಮನುಷ್ಯನೊಬ್ಬನು ಹೊರಬಂದನು ಕನ್ನಿ ಓಡಿಹೋಗಿ ಆತನನ್ನು ಆಲಂಗಿಸಿದಳು ಅವರು, ನಾನಪ್ಪನನ್ನು ಅಲ್ಲಿ ಹಾಗೆಯೇ ಬಿಟ್ಟು ಗುಡಿಸಲಿನ ಕಡೆಗೆ ನಡೆದರು

'ಆದರೆ ನಲ್ಲೇ, ಈ ರೀತಿ ಮರೆಮೋಸದಿಂದ ಆತನನ್ನು ಕೊಲ್ಲಲು ನನಗೆ ಇಷ್ಟವಿರಲಿಲ್ಲ!

'ನಲ್ಲಾ, ಆತನ ಸೊಂಟದಲ್ಲಿ ಖಾನಾಗಲೂ ಹರಿತವಾದ ಖಡ್ಗವೊಂದು ಇತ್ತು'

'ಹುಚ್ಚಿ, ಭಾದನನಿಗೂ ಅದರ ಹೆದರಿಕೆಯೇ?'

ಸಿಂಹ ಸಿಂಹಿಣಿಗಳ ಗರ್ಜನೆಯಂತೆ ಅವರ ನಗು ಗಿರಿಗಹ್ವರಗಳಲ್ಲಿ ಅಲೆ ಅಲೆಯಾಗಿ ಮಾರ್ದನಿಗೊಂಡು ಗುಡುಗಿತು!

[ಆಧಾರದಿಂದ]

— ದುರ್ಗಾದಾಸ.

ಕೊಂಡು ಕೊಳ್ಳಿರಿ

ANDREWS LIVER SALT

ಈಗ ಪ್ರತಿ ಒಬ್ಬರು ತಮ್ಮ ತಮ್ಮ ಹೊಟ್ಟೆಯೊಳಗಣ ಇಂದ್ರಿಯಗಳನ್ನು ಸುಲಭವಾಗಿ ಸುಖವಾಗಿ ಅತ್ಯಲ್ಪ ಖರ್ಚಿನಲ್ಲಿ ಶುದ್ಧಗೊಳಿಸುವುದು. ಎಂಡ್ರ್ಯೂಸ್ ಲಿವರ್ ಸೊಲ್ಟ್ ಇದನ್ನು ಒದಗಿಸುವುದು ಹಿಂದೆ ಬಾಟ್ಲಿಗಳಲ್ಲಿ ದೊರೆಯುತಿತ್ತು. ಈಗ ಟಿನ್ನುಗಳಲ್ಲ ದೊರಕುತ್ತವೆ (ದೊಡ್ಡ ಟಿನ್ನು ರೂ 1 4 0 ಸಣ್ಣದು ಆರು (2) ಬಾಟ್ಲಿಗಳಿಗಿಂತಲೂ ತುಂಬಾ ಲಾಭಕಾರಿಯಾಗಿ ಎಲ್ಲರೂ ಎಂಡ್ರ್ಯೂಸ್ ಲಿವರ್ ಸೊಲ್ಟಿನಿಂದ ಉತ್ತಮ ವಿರೇಚಕ ಲಾಭ ಪಡೆಯುವಂತಿದೆ

ಉಕ್ಕಿಬರುವ ಎಲ್ಲಾ ಲವಣಗಳಲ್ಲಿ ಎಂಡ್ರ್ಯೂಸ್ ಹೆಚ್ಚಾಗಿ ವ್ಯಾಪಾರವಾಗುವುದು ಇದು ಟಿನ್ನುಗಳಲ್ಲಿ ಉತ್ತಮ ಆದರೆ ಈ ಮೊದಲು ನಿಮಗೆ ಪರಿಚಿತವಾದ ಉಪ್ಪು ಬಾಟ್ಲಿಗಳಲ್ಲೂ ದೊರಕುತ್ತದೆ

ಈ ಇಕೊನೊಮಿ ಟಿನ್ನಿನಲ್ಲಿ

783

NEW ECONOMY TIN

ಜಗತ್ತಿನ ಮಹಾ ಯುದ್ಧದ ಕೋಲಾಹಲವು ರಾಷ್ಟ್ರವನ್ನೂ ಸೈನ್ಯವನ್ನೂ ಬಲವಂತವಾಗಿ ಮಾಡುವ ಶಕ್ತಿಯಾಗಿದೆ ಸಹಜವಾದ ಪ್ರಾಕೃತಿಕ ಗುಣಗಳಿಂದ ಒಂದು ಸೈನ್ಯವು. ಆ ರಾಷ್ಟ್ರದ ಶಕ್ತಿಯನ್ನೂ ವಿಚಾರ ಕ್ರಾಂತಿಯನ್ನೂ ವ್ಯಕ್ತಗೊಳಿಸುತ್ತದೆ ಫ್ರಾನ್ಸಿನ ಸಿಪಾಯಿಯು ತನ್ನ ವ್ಯಕ್ತಿತ್ವದ ಮಟ್ಟಿಗೆ ಬಹಳ ಜಾಗೃತನಾಗಿದ್ದಾನೆ. ಹಲವೊಮ್ಮೆ ಇಂತಹ ವ್ಯಕ್ತಿತ್ವದ ಅಭಿಮಾನದಿಂದ ಅನಿಷ್ಟವಾಗುವುದೂ ಉಂಟು, ಆದರೆ ಹೆಚ್ಚಾಗಿ ಫ್ರಾನ್ಸ್ ಸೈನ್ಯ ದಲವು ಈ ವ್ಯಕ್ತಿತ್ವದಿಂದ ಹೆಚ್ಚಿನ ಪ್ರಯೋಜನಪಡೆದಿದೆ. ಅಲ್ಲಿನ ಸೈನಿಕರನ್ನು ಕುರುಡು ಕೆಲಸಕ್ಕಾಗಿ ಮುನ್ನಡೆಯುವಂತೆ ಮಾಡುವುದು ಸಾಧ್ಯವಿಲ್ಲ ಒಮ್ಮೆ ತಾನು ಮಾಡುವ ಕಾರ್ಯದಲ್ಲಿ ನ್ಯಾಯವಿದೆಯೆಂದು ಫ್ರೆಂಚ್ ಸಿಪಾಯಿಯು ಮನಗಂಡರೆ, ತನ್ನ ಜೀವ ಹೋದರೂ ಮತ್ತೆ ಹಿಂದೆ ನಿಲ್ಲುವುದಿಲ್ಲ, ಹಾಗೂ ಮುಖ್ಯ ವಿಷಯವೆಂದರೆ, ಆತನ ಪ್ರತಿಯೊಂದು ಚಲನವಲನಗಳೂ ಸಕಾರಣವಾಗಿರಬೇಕು. ಫ್ರೆಂಚ್ ಸಿಪಾಯಿಯನ್ನು ಸ್ವಾಧೀನಪಡಿಸಿಕೊಳ್ಳುವುದೆಂದರೆ ಅಸಾಧ್ಯ ಸಾಮರ್ಥ್ಯವಿರಬೇಕು, ಆದರೆ ಒಮ್ಮೆ ಸ್ವಾಧೀನಪಡಿಸಿಕೊಂಡರೆ, ಆ ಮೇಲೆ ಅವನಿಗೆ ಸದೃಶ್ಯರು ಯಾರೂ ಇಲ್ಲ

ಹೊಸ ಉತ್ಸಾಹ

ಕಳೆದ ಮಹಾ ಯುದ್ಧದ ಕಾಲದಲ್ಲಿ ಯೂರೋಪಿನ ಸೈನ್ಯಶಕ್ತಿಯು ಬಹಳ ಅನುಭವಗಳನ್ನು ಪಡೆಯಿತು. ಯುದ್ಧದ ಮಧ್ಯ ಕಾಲದಲ್ಲಿ ಫ್ರೆಂಚ್ ಸೈನ್ಯಕ್ಕೆ ಒಂದು ಹೊಸ ಚೈತನ್ಯದ ಸಂದೇಶವು ಬಂತು ಇದರಿಂದ ನೂತನ ಉತ್ಸಾಹಿತರಾಗಿ, ಫ್ರಾಂಚ ದಲವೇ ಕ್ರಾಂತಿಯ ಶಕ್ತಿಯನ್ನು ಪಡೆಯಿತು. ಒಂದು ಚಿಕ್ಕ ಹದ ಕರಪತ್ರವನ್ನು ತೋರಿಸಿ, ಅದರ ಪ್ರತಿಯನ್ನು, ಪ್ರತಿಯೊಬ್ಬ ಸೈನಿಕನಿಗೂ ಕೊಡುವ ಏರ್ಪಾಡು ಮಾಡಲಾಗಿತ್ತು ಈ ಕರಪತ್ರದ ಭಾಷೆಯು ಬಹಳ ಸರಳವಾಗಿದ್ದು, ಪ್ರತಿಯೊಬ್ಬರಿಗೂ ಹೃದಯಂಗಮವಾಗಿತ್ತು! ಒಂದು ಪಗಡೆಯಾಟದಲ್ಲಿ, ಪ್ರತಿಯೊಂದು ಸಾಮಾನಿಗೂ ಹೇಗೆ ಪ್ರಾಶಸ್ತ್ಯವಿದೆಯೋ, ಹಾಗೆಯೇ, ಒಂದು ರಾಷ್ಟ್ರದ ಸಂರಕ್ಷಣೆಯಲ್ಲಿ ಪ್ರತಿಯೊಬ್ಬನಿಗೂ ಅಷ್ಟೇ ವ್ಯಕ್ತಿತ್ವ ಜವಾಬ್ದಾರಿಯಿದೆಯೆಂದು ಅದರಲ್ಲಿ ವಿವರಿಸಲಾಗಿತ್ತು! ಜನಾಂಗದ ಹಿತಕ್ಕಾಗಿ ಸಂಯುಕ್ತರಾಗಿ ಸೈನಿಕರು ತಮ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಇದರಲ್ಲಿ ನಮೂದಿಸಲಾಗಿತ್ತು. ಇದನ್ನು ಪ್ರತಿಯೊಬ್ಬ ಸಿಪಾಯಿಯೂ ಅರ್ಥಮಾಡಿಕೊಂಡನು! ಅದರ ಪರಿಣಾಮವು ಭಯಂಕರವಾಯಿತು!

ಇಂದಿನ ಸೈನಿಕರು

ಇಂದಿನ ಫ್ರೆಂಚ್ ಸೈನಿಕರು, ಹೆಚ್ಚಾಗಿ ಅಂದು ಆವೇಶಗೊಂಡ ಜನರ ಸಂತಾನದವರು. ಅಂದಿನ ಆ ಹಿರಿಯರ ಬಿಸಿ ರಕ್ತವು ಇವರಲ್ಲಿಯೂ ಚಲಿಸುತ್ತಿದೆ. ಇದರಿಂದಲೇ ಸೈನ್ಯದ ಸಂಯುಕ್ತ ಶಕ್ತಿಯಲ್ಲಿ ಅವರಿಗೆ ಅಚಲ ವಿಶ್ವಾಸವಿದೆ. ಮಾತ್ರವಲ್ಲದೆ ಸೈನ್ಯದಲ್ಲಿ ಭಿನ್ನಭೇದಗಳೂ ಇಲ್ಲ. ಒಬ್ಬ ಸಿಪಾಯಿಯು ತಾನು ಸಾಮಾನ್ಯ ಜನ ಎಂದು ತಿಳಕೊಳ್ಳುತ್ತಾನೆ ಸಾಮಾನ್ಯ ಮನುಷ್ಯನೊಬ್ಬನು ತಾನೊಬ್ಬ ಸಿಪಾಯಿಯೆಂದೂ ಅಭಿಮಾನಪಡುತ್ತಾನ

ಡಲಾಡಿಯರ ಧುರೀಣತೆಯಲ್ಲಿ ಫ್ರಾನ್ಸಿನ ಪ್ರಬಲ ಸೈನ್ಯಸಂಗ್ರಹ

[ಫ್ರಾನ್ಸಿನ ಸೈನ್ಯವು ಅಖಿಲ ಜಗತ್ತಿನಲ್ಲಿ ಮಹತ್ವವಾದುದೆಂದು ಲಾಯಿಡ್ ಜಾರ್ಜರು ಹೌಸ್ ಓಫ್ ಕಾಮನ್ಸಿನಲ್ಲಿ ಹೇಳಿದರು. ಈ ಮಾತು ಅಸತ್ಯವೆಂದಾಗಲೀ, ನಿರಾಧಾರದ್ದೆಂದಾಗಲೀ ಯಾರೂ ಪ್ರತಿವಾದ ಹೂಡಲಿಲ್ಲ; ಇಂದು ಎಡ್ವರ್ಡ್ ಡಲಾಡಿಯರರು ಪ್ರಧಾನ ಮಂತ್ರಿಸ್ಥಾನದಲ್ಲಿದ್ದು, ಕೇವಲ ರಾಜಕೀಯ ವಿಚಾರವನ್ನು ಮಾತ್ರ ಮಾಡುತ್ತಿರುವುದಲ್ಲದೆ, ಆತ್ಮರಕ್ಷಣೆಗೆ ಸಾಕಷ್ಟು ಸೈನ್ಯಸಂಗ್ರಹವನ್ನೂ ಮಾಡಿಕೊಂಡಿರುವರು]

ಒಂದು ಅಸದೃಶ ನಾಯಕತ್ವ

ಇಂತಹ ಸಮಯದಲ್ಲಿ, ಫ್ರೆಂಚ್ ಸೈನ್ಯವು ಅಸದೃಶ ಶಕ್ತಿಶಾಲಿಯೊಬ್ಬನ ನಾಯಕತ್ವವನ್ನು ಪಡೆದ ವಿಷಯವು ವಿಶೇಷವಾದುದು ಮಂತ್ರಿಮಂಡಳಿಕ್ಕೆ ಜನರನ್ನು ಆರಿಸುವುದು ಹೆಚ್ಚಾಗಿ ಅವರ

ರಾಜಕೀಯ ಅನುಭವ ಮತ್ತು ಇತರ ಸಾಮಾನ್ಯ ಯೋಗ್ಯತಾ ವಿಶೇಷಗಳಿಗಾಗಿ, ಆದರೆ ಎಂ ಡಲಾಡಿಯರು ಅಪವಾದವಾಗಿದ್ದಾರೆ ಕಳೆದ ಮಹಾಯುದ್ಧದಲ್ಲಿ ಅವರು ಫ್ರಾನ್ಸಿನ ಮಹಾ ಪದಾತಿದಳವನ್ನು ನಡೆಸಿದರು. ೧೯೧೮ರಲ್ಲಿ ಫ್ರಾನ್ಸಿನ ಹೈಸ್ಕೂಲೊಂದರಲ್ಲಿ, ಅವರು ಚರಿತ್ರೆಯನ್ನು ಕಲಿಸುತ್ತಿದ್ದರು. ೧೯೧೯ರಲ್ಲಿ, ಕೆಪ್ಟನರಾಗಿ ನೇಮಿಸಲ್ಪಟ್ಟರು. ಕೆಪ್ಟನನ ಯೋಗ್ಯತೆ ಶಕ್ತಿಗಳು ಆತನನ್ನು ಪ್ರಸಿದ್ಧಿಗೇರಿಸಲು ನಿರ್ಮಾಣಗೊಳಿಸಲೂ ಸಾಕು. ತಾನು ಕೆಪ್ಟನರಾಗಿದ್ದಾಗ ಅವರು ಮೂರು ವಿಜಯಗಳನ್ನು ಪಡೆದರು.

ಜನತೆಯ ಸಂಪರ್ಕ

ಹೀಗೆ ಸೈನಿಕ ಜೀವನದಲ್ಲಿದ್ದ ಅವರಿಗೆ, ತಮ್ಮ ಶಾಲೆಯ ಅನುಭವಗಳ ಸಮ್ಮಿಶ್ರಣದಿಂದ ಜನತೆಯ ಸಂಪರ್ಕವು ಹೆಚ್ಚಾಯಿತು; ಬೇಸಾಯಗಾರರು, ಉದ್ಯೋಗಗಾರರು, ವ್ಯಾಪಾರಿಗಳು, ಹೀಗೆ ಬೇರೆ ಬೇರೆ ತರದ ಜನರೊಡನೆ ಅವರು ಬೆರೆತರು. ಅವರಿಗೆ ಪ್ರತಿಯೊಬ್ಬರ ವಿಚಾರ, ಅವರ ಚಲನವಲನಗಳು ತಿಳಿದುವು. ಶಿಸ್ತುಪಾಲನೆ ರಕ್ಷಣೆಗಳ ಪ್ರಾಮುಖ್ಯತೆಯು ವಿಶೇಷವಾಗಿ ಇಟ್ಟುಕೊಂಡಿರುವರು.

ಮಂತ್ರಿತ್ವ ಸ್ವೀಕಾರ

ಹೀಗೆ ಸೈನ್ಯದಳದ ಅಧಿನಾಯಕತ್ವದಿಂದ, ೧೯೩೬ರಲ್ಲಿ ಯುದ್ಧದ ಮಂತ್ರಿತ್ವದ ಅಧಿಕಾರವನ್ನು ಸ್ವೀಕರಿಸಿಕೊಂಡರು. ಜನರಿಗೆ ಬಹಳ ಭರವಸೆಯಾಯಿತು 'ಡಲಾಡಿಯರನಿಗೆ, ಎಲ್ಲಾ ಗೊತ್ತಿದೆ ಜನರ ಆಗತ್ಯ, ಕಾರ್ಯಕುಶಲತೆ, ಪ್ರಯೋಜನಗಳನ್ನೆಲ್ಲಾ ಆತನು ಬಲ್ಲನು, ನಾವು ಅವನು ಹೇಳಿದ ಹಾದಿಯಲ್ಲಿ ನಡೆಯುವ' ಹೀಗೆಂದು ಫ್ರೆಂಚ್ ಜನತೆಯನ್ನು ಅವರನ್ನು ಅನುಸರಿಸಿತು.

ಇಂದು ಯುದ್ಧದ ಸಮಯದಲ್ಲಿ ಯಾವುದೆಲ್ಲ ಆಗಬೇಕಾಗಿದೆಯೋ, ಅದೆಲ್ಲವನ್ನೂ ಡಲಾಡಿಯರು ಚೆನ್ನಾಗಿ ತಿಳಿದಿರುವನು ಅಂತರ್‌ರಾಷ್ಟ್ರೀಯ ಗೊಂದಲವು ಉಂಟಾಗಬಹುದೆಂಬ ಸಂಶಯವು ಅವರಿಗೆ ಇದೆ ಹಾಗಾಗಿಯೇ ಇಂದು ರಾಜನೀತಿಜ್ಞರಿಗಿಂತಲೂ, ಹೆಚ್ಚು ಮಂದಿ ಸಿಪಾಯಿಗಳು ಬೇಕಾಗಿದೆಯೆಂದು ಅವರು ಸಾರುತ್ತಿದ್ದಾರೆ ಇಂದು ಫ್ರಾನ್ಸನ್ನು ಇತರ ಯಾವ ರಾಷ್ಟ್ರದ ಧಾಳಿಯಿಂದಲಾದರೂ ಭದ್ರವಾಗಿ ಕಾಪಾಡಲು ಡಲಾಡಿಯರಿಗೆ ತಿಳಿದಿದೆ, ನನ್ನ ಕರ್ತವ್ಯವು ಯುದ್ಧದಲ್ಲಿ ಫ್ರಾನ್ಸಿಗೆ ಜಯ ತರುವುದು' ಇದು ಅವರ ನಿರ್ಧಾರ

ಯಾಂತ್ರಿಕ ಯುದ್ಧದಲ್ಲಿ

ಇಂದಿನ ಯಾಂತ್ರಿಕ ಯುದ್ಧದ ಯುಗದಲ್ಲಿ, ನಿಜವಾದ ಸೈನ್ಯದ ಮಹತ್ವವಿರುವುದು, ಸೈನ್ಯವನ್ನು ಸರಿಯಾಗಿ ಉಪಯೋಗಿಸುವ ಸೇನಾಧಿಪತಿಗಳಲ್ಲಿ ಅಲ್ಲದೆ ಅಸಂಖ್ಯ ಸೈನಿಕರಿದ್ದೂ ಪ್ರಯೋಜನವಿಲ್ಲ.

ಫ್ರೆಂಚ್ ಸೈನಾಧಿಕಾರದಲ್ಲಿ 'ಇಂದು ಫ್ರಾನ್ಸಿನ ಉತ್ತಮ ಯೋಧಾಪಿಗಳು ಇದ್ದಾರೆ ಹೀಗೆ ಸೈನಿಕ ವೃತ್ತಿಗೆ ಸೇರಬೇಕಾದರೆ, ಇರುವ ಪ್ರವೇಶ ಪರೀಕ್ಷೆಯು ಬಹಳ ಕಷ್ಟದ್ದಾಗಿದೆ. ಇಡೀ ಯೂರೋಪಿನಲ್ಲಿ ಇದು ಬಹಳ ಪ್ರಾಮುಖ್ಯವೆನಿಸಿದೆ

ಇಂದು ಸೈನ್ಯದಲ್ಲಿ ತರುಣರು ದಿನದಿಂದ ದಿನಕ್ಕೆ ಹೆಚ್ಚು ಸೇರುತಿದ್ದಾರೆ. ಸೈನಿಕ ಜೀವನದಿಂದ ನಿವೃತ್ತರಾದವರು, ಇಂದು ಸಾಹಿತ್ಯ, ವಿಜ್ಞಾನ, ವ್ಯವಸಾಯಗಳಲ್ಲಿ ಬಹಳ ಅಭಿವೃದ್ಧಿಯನ್ನೂ, ಕೀರ್ತಿಯನ್ನೂ ಗಳಿಸಿದ್ದಾರೆ. ರಾಜಕೀಯದಲ್ಲಿ ಸಿಪಾಯಿಗಳು ಭಾಗವಹಿಸಬಾರದು. ಸೈನಿಕರಿಗೆ ಮತಕೊಡುವ ಹಕ್ಕು ಇಲ್ಲ.

ರಾಷ್ಟ್ರೀಯ ರಕ್ಷಣೆ

ಸಂಗತಿಗಳ ಭೇದವಿಲ್ಲ ಎಲ್ಲರೂ ಒಂದೇ ಪ್ರಜಾಪ್ರಭುತ್ವ ಜಾತಿಯವರೆಂದು ಭಾವಿಸುತ್ತಾರೆ ಡಲಾಡಿಯರವರು ಈಗ ಯುದ್ಧದ ಪ್ರಸಂಗವನ್ನು ಎದುರಿಸುವ ಸಲುವಾಗಿ, ರಾಷ್ಟ್ರೀಯ ರಕ್ಷಣಾ ಖಾತೆಯ ಮಂತ್ರಿಯನ್ನು ನೇಮಿಸಿ, ಅವನ ಕೈಕೆಳಗಿನ ಅನೇಕ ಅಫೀಸರರಿಂದ ಸೈನ್ಯನಿರ್ವಹಣಾಗುವಂತೆ ನೋಡುತ್ತಾರೆ ವಿಮಾನ, ನೌಕಾ, ಪದಾತಿ ಪಡೆಗಳಿಗೆ ಬೇರೆ ಬೇರೆ ವಿಭಜನೆಗಳಾಗಿವೆ

ಸೈನಿಕ ಜೀವನದಲ್ಲಿಯೇ ಇಂದು ಹೆಚ್ಚು ಮಂದಿಯಿಲ್ಲ ಫ್ರಾನ್ಸು ಹೆಚ್ಚಿನ ಮಟ್ಟಿಗೆ ಜನತೆಯ ಸ್ವಯಂಸೇವಕತೆಯನ್ನು ಆಧರಿಸಿಕೊಂಡಿದೆ. ಯುದ್ಧ ಶುರುವಾದಲ್ಲಿ ೨೧ ವರ್ಷಕ್ಕಿಂತ ಮೇಲೆ ದೃಢಕಾಯರಾದವರೆಲ್ಲರೂ ಸೈನ್ಯಕ್ಕೆ ಸೇರುವರು. ೧೦,೦೦೦,೦೦೦ ಜನರು ಆಗ ಸೈನ್ಯದಲ್ಲಿ ಸೇರುವರು ಡಲಾಡಿಯರ ಭರವಸೆಯಂತೆ ಯುದ್ಧವು ಆರಂಭವಾದಲ್ಲಿ ಫ್ರಾನ್ಸು ಖಂಡಿತವಾಗಿಯೂ ಜಯವನ್ನು ಪಡೆಯುವುದೆಂಬುದಕ್ಕೆ ಫ್ರೆಂಚ್ ಸೈನ್ಯಶಕ್ತಿಯೇ ಆಧಾರವಾಗಿದೆ.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ
"ಲಿವರ್ ಕ್ಯೂರ್"
ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು
ವಿಲಕ್ಷಣ ತಯಾರಿ: ಜನ್ನಿ ವೆಂಕಟ್ರಮ ಅಯ್ಯ
ವಿಶೇಷ ಮಾಹಿತಿಗೆ ಬರೆಯಿರಿ
ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಲಿಸ್ಟ್,
—— ಮೈಲಾಪುರ, ಮದ್ರಾಸು.

ಅವರು ಎಸೆದ ಕಲ್ಲುಜೋಡುಗಳು ನನ್ನೆದೆಯನ್ನು ತಾಗಿವೆ!

ಬಂಕಿಮಪುರದ ಘಟನೆಯ ಕುರಿತು ರಾಷ್ಟ್ರಪತಿಗಳ ಹೇಳಿಕೆ

ಕೊಳಕಿನಿಂದ ಕೊಳಕು ಹೋಗಲಾರದು

ಬಂಕಿಪುರದಲ್ಲಿ ಬೋಸ್, ಸ್ವಾಮಿ ಸಹಜಾನಂದರು ಇವರೀ ಭಾಷಣ ಮಾಡುತ್ತಿದ್ದಾಗ, ಸಭಿಕರು, ಕಲ್ಲು ಜೋಡುಗಳನ್ನು, ಅವರ ಕಡೆ ಎಸೆದದ್ದನ್ನು ಖಂಡಿಸುತ್ತಾ ರಾಜೇಂದ್ರ ಪ್ರಸಾದರು ಹೀಗೆಂದು ಹೇಳಿರುವರು.

'ಕಾಂಗ್ರೆಸಿನಂತಹ ಪ್ರಜಾಪ್ರಭುತ್ವ ತತ್ವದ ಸಂಸ್ಥೆಯಲ್ಲಿ, ಇನ್ನೊಂದು ಪಕ್ಷವನ್ನು ಬಲಾತ್ಕಾರದಿಂದ ಅಡಗಿಸುವುದರಿಂದ, ರಾಜಕೀಯ ತತ್ವವು ಉಳಿಯಲಾರದು. ಸುಭಾಸಬಾಬು, ಸ್ವಾಮಿ ಸಹಜಾನಂದರೇ ಮೊದಲಾದವರ ಕಡೆಗೆ ಎಸೆದ ಪ್ರತಿಯೊಂದು, ಕಲ್ಲು ಜೋಡು ಇವುಗಳೆಲ್ಲಾ ಇವರ ಕಡೆಗೆ ಎಸೆದುದಲ್ಲ; ನನ್ನ ಕಡೆಗೆ, ಅವುಗಳು ಗುರಿಗೆ ತಾಗಿವೆಯೋ, ಇಲ್ಲವೋ, ಖಂಡಿತವಾಗಿಯೂ ನನ್ನೆದೆಗೆ ಅವುಗಳು ತಾಗಿವೆ. ನನಗೆ ಮಾಡಿ ಏನಾದರೂ ಅನ್ಯಾಯಕ್ಕಾಗಿ ಅವರು ಪ್ರತಿಕಾರ ಮಾಡುವುದೇ? 'ಪ್ರತೀಕಾರ'ವೆಂಬ ಮಾತೇ ಸತ್ಯಾಗ್ರಹ ವಿಶ್ವಕೋಶದಲ್ಲಿ ಇಲ್ಲ. ಸತ್ಯಾಗ್ರಹಕ್ಕೆ ಈ ರೀತಿಯಿಂದ ಸತ್ಕಾರ ಮಾಡುವುದು ಸರಿಯಲ್ಲ.

'ಮಹಾತ್ಮಾಜಿಯವರು, ಇದುವರೆಗೆ ಯಾವ ಕಾರ್ಯಗಳನ್ನು ಮಾಡಿದ್ದಾರೋ, ಯಾವುದಕ್ಕಾಗಿ ದುಡಿಯುತ್ತಿದ್ದಾರೋ, ಅವೆಲ್ಲವನ್ನೂ ಇಂತಹ ಹಿಂಸಾ ಕಾರ್ಯಗಳಿಂದ ಹಾಳುಮಾಡುತ್ತಾರೆ! ಅಹಿಂಸೆಯು ಬ್ರಿಟಿಷ್ ಸರಕಾರ ಮತ್ತು ಅದರ ಪ್ರತಿನಿಧಿಗಳ ಬಗ್ಗೆ ಮಾತ್ರ ಕಾದಿಡಲ್ಪಡತಕ್ಕದ್ದಲ್ಲ. ನಮ್ಮ ರಾಜಕೀಯ ಪ್ರತಿಕಕ್ಷಿಗಳ ವಿಷಯದಲ್ಲಿಯೂ ಇದು ಹಾಗೆಯೇ ಅನ್ವಯಿಸಬೇಕು.

ಕೆಸರು ಕೆಸರಿನಿಂದ ಹೋಗಲಾರದು

'ಕೆಸರು ಕೆಸರಿನಿಂದ ತೊಳೆದು ಹೋಗಲಾರದು. ಇದನ್ನು ಒಳ್ಳೆಯ ಶುದ್ಧ ನೀರಿನಿಂದ ಮಾತ್ರ ತೊಳೆಯಬಹುದು. ಪಾಟ್ನದಲ್ಲಿ ಆದ ಧೂರ್ತತನ ಮತ್ತು ಹಿಂಸೆಯು ಹಿಂದೆ ಎಲ್ಲಿಯಾದರೂ ಆಗಿದ್ದ, ಮತ್ತು ಮುಂದೆ ಎಲ್ಲಿಯಾದರೂ ಆಗಬಹುದಾಗ ಹಿಂಸೆಗೆ ಪರಿಹಾರೋಪಾಯವಲ್ಲ. ಇದರಿಂದ ವಾತಾವರಣವು ಹಾಳಾಗುವುದು. ಇದಕ್ಕಾಗಿ ನಾವು ಕ್ಷಮಾಪಣೆಕೇಳಬೇಕು. ಇದನ್ನು ನಾನು ಬಹಿರಂಗವಾಗಿ ಕೇಳುತ್ತೇನೆ.

'ಯಾರು ಸುಭಾಸರನ್ನು ಪಾಟ್ನಾಕ್ಕೆ ಕರೆದಿದ್ದರೋ ಅವರು ಹಾಗೆ ಮಾಡಲು ಪೂರ್ಣ ಸ್ವಾತಂತ್ರ್ಯವುಳ್ಳವರಿದ್ದಾರೆ; ಯಾರು ಸ್ವಾಗತವಿತ್ತರೋ, ಅವರೂ ಸಂಪೂರ್ಣ ನ್ಯಾಯಮಾಡಿದವರೇ ಆಗಿದ್ದಾರೆ. ಯಾರಿಗೆ ಸ್ವಾಗತಕೊಡಲು ಮನಸ್ಸಿರಲಿಲ್ಲವೋ ಅವರಿಗೂ ಹಾಗೆ ಮಾಡಲು ಹಕ್ಕಿರುತ್ತದೆ. ಆದರೆ ವಿರುದ್ಧ ಪ್ರದರ್ಶನ ಮಾಡುವುದಕ್ಕಿಂತ ಮೊದಲು ಆ ಕುರಿತು ನೂರಾರು ಸಲ ಯೋಚಿಸಬೇಕಿತ್ತು. ಅಂತಹ ಪ್ರದರ್ಶನದಿಂದ ಯಾವ ಪ್ರಯೋಜನವೂ ಆಗಲಾರದು. ಅವರು ಬೋಸರ ಆಗಮನದಿಂದ ಮತ್ತು ಭಾಷಣದಿಂದ ತನ್ನ ತತ್ವವು ಹಾಳಾಗುವುದೆಂದು ಹೆದರಿದ್ದರೊ? ಹಾಗಿದ್ದರೆ ಅವರ ತತ್ವವೇ ಬಹಳ ನಿಷ್ಪ್ರಯೋಜಕವಾದ ತತ್ವವಾಗಿರಬೇಕು. ವಿರುದ್ಧಪಕ್ಷದ ವಿಚಾರವನ್ನು ಕೇಳುವುದರಿಂದ ಏನೂ ನಷ್ಟವಿಲ್ಲ; ಅದೂ ಲಾಭವೇ ಆಗಿದೆ. ನಮ್ಮ ತತ್ವವು ಭದ್ರವಾದುದ್ದಾದರೆ, ಅದನ್ನು ಬಲಗೊಳಿಸಲು ಮತ್ತು ಏವರಗೊಳಿಸಲು ಅದರಿಂದ ಸಹಾಯವಾಗುವುದು.

ಬಿಹಾರ ಯಾತ್ರೆಯ ಕುರಿತು ಬೋಸರ ಹೇಳಿಕೆ

ಪಾಟ್ನದಿಂದ ಹೊರಡುವುದಕ್ಕಿಂತ ಮೊದಲು ಬೋಸರು 'ನನ್ನ ಬಿಹಾರ ಯಾತ್ರೆಯು ಜಯಶಾಲಿಯಾಗಿದೆ' ಎಂದು ಒಂದು ಪ್ರಕಟಣೆ ಕೊಟ್ಟಿದ್ದಾರೆ:—

"ಬಂಕಿಂಪುರ ಮೈದಾನಿನಲ್ಲಿ ಸಾಧಾರಣ ೫೦ ಸಾವಿರ ಜನರು ಸೇರಿದ್ದ ಸಭೆಯಲ್ಲಿ ಕೆಲವು ಯುವಕರು ತೋರಿಸಿದ ಕಪ್ಪುನಿಶಾನಿ ಪ್ರದರ್ಶನವು ಕೇವಲ ಆ ದೊಡ್ಡ ಜನಗುಂಪಿಗೆ ಅಂದು ತಮ್ಮ ಏರಿದ ಉತ್ಸಾಹವನ್ನು ಸಮಾಧಾನಕ್ಕೆ ತರುವಂತೆ ಮಾತ್ರ ಆಯಿತು. ಈ ಪ್ರದರ್ಶನವು ಅವರಲ್ಲಿರುವ ತಪ್ಪು ಅಭಿಪ್ರಾಯದಿಂದ ಆಗಿದೆ. ಆ ಯುವಕರಿಗೆ, ನನ್ನ ಪ್ರಯಾಣವು ಮಹಾತ್ಮಾಜಿಯವರ ವಿಶೇಷವಾಗಿ ಡಾಕ್ಟರ್ ರಾಜೇಂದ್ರ ಪ್ರಸಾದರ ದೂಷಣೆಗಾಗಿದೆಯೆಂದು ಯಾರೋ ತಿಳಿಸಿದ ನಿಮಿತ್ತ ಆತ್ಮ ಗೌರವದಿಂದ ಅವರು ಹಾಗೆ ಮಾಡಿದರು! ನನಗೆ ಅಂತಹ ಉದ್ದೇಶವಿದ್ದಿದ್ದರೆ, ಹಾಗೆ ಅವರು ಮಾಡಿದ ಕರಿ ನಿಶಾನ ಪ್ರದರ್ಶನವು ನ್ಯಾಯವಾಗುತ್ತಿತ್ತು. ಅವರು ಹಾಗೆ ಮಾಡಲು, ಅವರನ್ನು ಪ್ರೇರೇಪಿಸಿದ ಅವರ ಉತ್ಸಾಹ ಅಭಿಮಾನಗಳನ್ನು ನಾನು ತಿಳಿದು ಮೆಚ್ಚುತ್ತೇನೆ. ಆದರೆ ನನ್ನ ಉದ್ದೇಶವು ಯಾವುದೇ ಮುಖಂಡರನ್ನಾಗಲಿ ದೂರುವುದಲ್ಲ; ಎಡಪಕ್ಷದ ಹಾಗೂ ಫಾರ್ವರ್ಡ್ ಬ್ಲಾಕಿನ ತತ್ವ ಮತ್ತು ಕಾರ್ಯಕ್ರಮಗಳನ್ನು ಜನತೆಯ ಮುಂದಿರಿಸುವುದಾಗಿದೆ. ನನ್ನ ತಿರುಗಾಟದಲ್ಲಿ ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಸ್ವಾಗತವು ಸಿಕ್ಕಿದೆಯೆಂಬುದರಿಂದ ನಾನು ತೃಪ್ತನಾಗಿದ್ದೇನೆ."

ನೌಕಾ-ವಿಮಾನಗಳ ನಿರ್ಬಂಧ

ಬ್ರಿಟಿಷ್ ಇಂಡಿಯಾದಲ್ಲಿರುವ ಯಾವುದೇ ರಿಜಿಸ್ಟರ್ಡ್ ಹಡಗವಾಗಲಿ, ವಿಮಾನವಾಗಲಿ, ಅದರ ಮಾಲಿಕನು ಅದನ್ನು ಇನ್ನೊಬ್ಬನ ಹೆಸರಲ್ಲಿ ಮಾಡುವುದೇ ಮೊದಲಾದವುಗಳ ಬಗ್ಗೆ ವೈಸರಾಯರು ನಿರ್ಬಂಧ ಹೊರಡಿಸಿದ್ದಾರೆ.

ಅತ್ಯಾಶ್ಚರ್ಯಕರವಾದ ಕನ್ನಡಿ!

ಯಾವುದೇ ವಯಸ್ಸಿನವನಾದರೂ ಮನುಷ್ಯನು ಈ ಕನ್ನಡಿಯನ್ನು ನೋಡಲು ಸಾಧ್ಯವಿದೆ. ಕಳವು ಆಗಿರುವ ಸಾಮಾನು, ಅಸ್ವಸ್ಥತೆಯಿಂದ ಗುಣವಾಗದಿರುವಿಕೆ, ಮುಂದೆ ಸಂಭವಿಸಬಹುದಾದ ದುಃಖಗಳು ಮತ್ತು ಅವುಗಳಿಂದ ತಪ್ಪಿಸಲು ಉಪಾಯ, ಭೂಮಿಯಲ್ಲಿ ಇಟ್ಟಿರುವ ಹಣದಪತ್ತೆ, ಯಾವುದೇ ಕಷ್ಟತರವಾದ ಕೆಲಸಗಳು ಸಾಧ್ಯವಾಗುವಿಕೆ, ನೌಕರಿ, ಕೋರ್ಟುಕಚೇರಿ ಕೆಲಸಗಳಲ್ಲಿ ಯಶ, ಪರೀಕ್ಷೆ ಮುಂತಾದ ಕೈಕೊಂಡ ಕೆಲಸಗಳಲ್ಲಿ ಯಶಸ್ಸು ಉಂಟಾಗುತ್ತದೆ. ಸ್ವರ್ಗಸ್ಥರಾದ ತಂದೆತಾಯಿಗಳನ್ನು ಮತ್ತು ಆಪ್ತಮಿತ್ರರನ್ನು ಮತ್ತು ಸ್ವಪ್ನದಲ್ಲಿ ನೋಡಬೇಕೆಂಬ ವಸ್ತುಗಳನ್ನು ಇದರಲ್ಲಿ ಕಾಣಬಹುದು
ಬೆಲೆ ಒಂದು ೩॥ ಪೌಂಡು ಮತ್ತು ಟಪ್ಪಾಲು ಖರ್ಚು ಬೇರೆ. ಇದು ನಿಜವಲ್ಲವೆಂದು ತೋರಿಸಿಕೊಟ್ಟಲ್ಲಿ ಬೆಲೆ ವಾಪಸು. ನಿಮ್ಮ ಪತ್ತೆ ಚೆನ್ನಾಗಿ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ. ಸಿಕ್ಕುವ ಸ್ಥಳ:

American Mesmerism House,
P. B. No. 27 P. M. H. Amritsar (India).



ಪೊಂಡಿಚೇರಿಯಲ್ಲಿ ಬ್ಲೇಕ್-ಔಟ್

ಯುದ್ಧ ಸಂಭವಿಸಿದಲ್ಲಿ, ಜನತೆಯು ಜಾಗ್ರತೆಯಿಂದಿರಬೇಕಾದ ಶಿಕ್ಷಣದಬಗ್ಗೆ ಪಾಂಡಿಚೇರಿಯಲ್ಲಿ 'ಬ್ಲೇಕ್-ಔಟ್' ಪ್ರದರ್ಶಿಸಲಾಯಿತು.

NOTICE

In the Court of the District Munsiff of Mangalore

R. E. P. No. 244/39
R. E. A. No. 350/39
in O. S. No. 130/37

Between

Elias Rego, by power of attorney holder Faustine Marceline Rego — Petitioner (Plaintiff)

and

T. Subraya — Respondent (Defendant)

Notice is hereby given to the Respondent T. Subraya, son of Pandit Baburaya, last residing at Sharada Lunch Home, Royapettah, Madras that the petitioner has filed R. E. P. No. 244/1939 for sale of the properties described in the mortgage decree in the above suit and for other reliefs mentioned in the said execution petition. The respondent is also informed that the petitioner has filed R. E. A. No. 350 of 1939 for permission to bid at the said sale and to set off the purchase money against the decree debt. Both the abovesaid applications are posted to 13 September 1939 for hearing in the said court. In default of the respondent's appearance on that day the said applications will be heard and determined **ex-parte**.

(By order of the Court)

Mangalore, 27-8-1939 — **John Gonsalves,** Vakil for Petitioner

ಮಂಗಳೂರು ಸಮಾಚಾರ

ಶೋಚನೀಯ ನಿಧನ:—ಮಂಗಳೂರಿನ ಪ್ರಮುಖ ರಾಷ್ಟ್ರಭಕ್ತರೂ, ಪತ್ರಿಕಾ ಪ್ರಪಂಚದಲ್ಲಿ ಬಹಳ ದುಡಿದವರೂ ಮತ್ತು ಕೆಲ್ಲಕಾಲ ನಗರಸಭೆಯ ಸದಸ್ಯರೂ ಆಗಿದ್ದ ಶ್ರೀ ಉಳ್ಳಾಲ ಸಂಜೀವರಾಯರು ಬೆಂಗಳೂರಲ್ಲಿ ಆರೋಗ್ಯ ಸಂಪಾದನೆಗಾಗಿ ಹೋದವರು ಕಳೆದ ವಾರ ದೈವಾಧೀನರಾದರೆಂದು ತಿಳಿಸಲು ತುಂಬ ವಿಷಾದವೆನಿಸುತ್ತದೆ. ಶ್ರೀಯುತರ ಮರಣದಿಂದ ಅವರ ಬಂಧು ಮಿತ್ರರಿಗುಂಟಾದ ದುಃಖದಲ್ಲಿ ನಮ್ಮ ಸಹಸ್ವಾತಾಪವನ್ನು ವ್ಯಕ್ತಗೊಳಿಸುತ್ತೇವೆ.

ಮಂಗಳೂರು ಆರ್ಯಸಮಾಜ-ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಕಳೆದ ತಾ ೨೭ನೇ ಆದಿತ್ಯವಾರ ಹೈದರಾಬಾದ್ ಆರ್ಯ ಸತ್ಯಾಗ್ರಹದಲ್ಲಿ ಜೈಲು ಶಿಕ್ಷೆಯನ್ನನುಭವಿಸಿ ಪ್ರಕೃತ ಬಿಡುಗಡೆ ಹೊಂದಿದ ತ್ರಿಚಿನಾಪಳ್ಳಿಯ ಸೋಮದೇವ ಎಂಬ ಒಬ್ಬ ಬ್ರಹ್ಮಚಾರಿ ಯುವಕನ 'ಸತ್ಯಾಗ್ರಹ ಸಮರ ಮತ್ತು ತನ್ನ ಜೈಲುವಾಸದ ಹೃದಯದ್ರಾವಕ ಘಟನೆ'ಗಳ ಕುರಿತು ಭಾಷಣವಾಯಿತು. ಇವರು ಲಾಹೋರ್ ದಯಾನಂದ ಉಪದೇಶಕ ಮಹಾ ವಿದ್ಯಾಲಯದ ಒಬ್ಬ ವಿದ್ಯಾರ್ಥಿ ಇವರು ಆ ವಿದ್ಯಾಲಯದಿಂದ ಸತ್ಯಾಗ್ರಹಕ್ಕಾಗಿ ಹೊರಟ ವಿದ್ಯಾರ್ಥಿಗಳ ಒಂದು ಪಂಗಡದ ನಾಯಕರಾಗಿದ್ದರು

ದುಃಖಸೂಚಕ ಸಭೆ.—ಮಂಗಳೂರು ಆರ್ಯ ಸಮಾಜದ ಒಬ್ಬ ಉತ್ಸಾಹೀ ಕಾರ್ಯಕರ್ತರಾಗಿದ್ದ ಜಪ್ಪು ಶ್ರೀ ತನಿಯಪ್ಪ ಆರ್ಯರ ತಾ. ೨೨-೮-೩೯ರಲ್ಲಿ ದಿವಂಗತರಾದ ಕುರಿತು ಆರ್ಯ ಸಮಾಜಿಕರ ಒಂದು ಸಭೆಯು ಕಳೆದ ಆದಿತ್ಯವಾರ ಜರಗಿತು. ಶ್ರೀ ಬಸ್ತಿ ದಾಸಪ್ಪ ಶೆಣೈಯವರೂ ಶ್ರೀ ಮೋಹನಪ್ಪ ತಿಂಗಳಾಯರೂ ದಿವಂಗತರ ಗುಣಕಥನ ಮಾಡಿದರು. ಶ್ರೀ. ತನಿಯಪ್ಪ ಆರ್ಯರು ಕಷ್ಟಪೀಡಿತರಾಗಿ ಸಮಾಜಕ್ಕೆ ಬರುವ ದುಃಖಿತರಿಗೆ ಅಗತ್ಯವುಳ್ಳ ಸಹಾಯ ನೀಡಿ, ಅವರ ಸೇವೆಗೈಯುವ ಕಾರ್ಯದಲ್ಲಿ ಒಬ್ಬ ಉತ್ಸಾಹೀ ಸ್ವಯಂ ಸೇವಕರಾಗಿದ್ದರು. ಇವರ ಆತ್ಮಕ್ಕೆ ಶಾಂತಿಯುಂಟಾಗಲಿ.

ಮೋಟರು ಕೆಲಸಗಾರರ ಚಳವಳದ ಇತ್ಯರ್ಥ:—ಹಲವು ಸಮಯಗಳಿಂದ ನಡೆಯುತ್ತಿದ್ದ ಜಿಲ್ಲಾ ಮೋಟರು ಕೆಲಸಗಾರರ ಚಳವಳದ ವಿಚಾರವು ಲೇಬರ್ ಕಮಿಶನರ ಮಧ್ಯಸ್ಥಿಕೆಯಿಂದ ನ್ಯಾಯವಾಗಿ ಇತ್ಯರ್ಥವಾಯಿತೆಂದು ತಿಳಿಯುತ್ತದೆ.

ವಿದ್ಯಾರ್ಥಿಗಳ ಸಂಘ:— ನಮ್ಮ ವಿದ್ಯಾರ್ಥಿ ಸಂಘವು ಈ ವರ್ಷದಲ್ಲಿ ಇಷ್ಟರ ತನಕ (೧॥ ತಿಂಗಳಲ್ಲಿ) ಈ ಕೆಳಗಿನ ಕೆಲಸಗಳನ್ನು ಮಾಡಿರುವುದು.—ಎರಡು ಹಿಂದೀ ಕ್ಲಾಸುಗಳನ್ನು ತೆರೆದಿರುವುದು, ಒಂದು ಕದ್ರಿ ವಿದ್ಯಾಬೋಧಿನೀ ಶಾಲೆಯಲ್ಲಿ; ಇನ್ನೊಂದು ಕೆನರಾ ಹೈಸ್ಕೂಲಿನಲ್ಲಿ. ಸಪ್ಟಂಬರ ಆದಿಯಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಇನ್ನೊಂದು ಹಿಂದೀ ಕ್ಲಾಸು ತೆರೆಯಲಾಗುವುದು. ಇಷ್ಟೇ ಅಲ್ಲದೆ ಸಂಘವು ಒಂದು ಕ್ಲಬ್ಬನ್ನು ಹಿಂದೂಸ್ಥಾನದ ಸ್ಕೌಟ್ ದಳವನ್ನು ತೆರೆದಿದೆ; ಬಡ ಹುಡುಗರ ವಿದ್ಯಾಭ್ಯಾಸಕ್ಕೆ ಧನಸಹಾಯ ಮಾಡಿದೆ; ಸ್ಟೂಡೆಂಟ್ಸ್ ಲೈಫ್ ಎಂಬ ಗೋಡೆ ಪತ್ರಿಕೆಯ ಪ್ರಕಟನೆ ಇತ್ಯಾದಿ ಕೆಲಸಗಳನ್ನು ಮಾಡಿದೆ. ಮುಂದಕ್ಕೆ ಅನೇಕ ಕೆಲಸಗಳನ್ನು ಕೈಕೊಳ್ಳಲಿರುವದು, ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಶ್ರೀ ಕೃಷ್ಣ ಜಯಂತಿ:—ಮಂಗಳೂರು ಆರ್ಯ ಸಮಾಜದವರು ಶ್ರೀ ಕೃಷ್ಣ ಜಯಂತಿ ಉತ್ಸವದ ಸಂಬಂಧ ಸಪ್ಟಂಬರ ತಾ ೬ನೇ ಸಾಯಂ ಮೈದಾನದಲ್ಲಿಯೂ, ತಾ. ೭ನೇ ಪ್ರಾತಃಕಾಲ ಜಪ್ಪು ಹರಿಜನ ಕೋಲನಿಯಲ್ಲಿಯೂ, ಭಜನೆ ಭಾಷಣಗಳು ನಡೆದುವು

ಕರ್ನಾಟಕ ಸಾಹಿತ್ಯ—ಯುನಿವರ್ಸಿಟಿ ಎಕ್ಸ್‌ಟೆನ್‌ಶನ್ ಬೋರ್ಡಿನ ಆಶ್ರಯದಲ್ಲಿ ಸೈ ಎ ಕಾಲೇಜಿನ ಹಾಲಿನಲ್ಲಿ ತಾ ೪ಕ್ಕೆ ಸಾಯಂಕಾಲ ೫ ಘಂಟೆಗೆ Modern Trend in Kannada Literature' ಎಂಬ ವಿಷಯದಲ್ಲಿ ಶ್ರೀ ಎಂ ಹೆಚ್ ಕಾಮತರು ಭಾಷಣ ಮಾಡಿದರು.

ತಾಲೂಕು ಸಮಾಚಾರ

ಉಡುಪಿ

ತಾಲೂಕು ಕಾಂಗ್ರೆಸ್ ಕಮಿಟಿಯ ಸಭೆ:—ನಂಬ್ರ ೧೨೮೦ನೇ ಸರಕಾರಿ ಹುಕುಮಿನ ನಿಷೇಧ—ಉಡುಪಿ ತಾಲೂಕು ಕೊಂಗ್ರೆಸ್ ಕಮಿಟಿಯ ಮಹಾಸಭೆಯು ಕಳೆದ ತಾ. ೨೦ನೇ ಆದಿತ್ಯವಾರ ಮೋಡರ್ನ್ ಹಾ. ಎ. ಶಾಳೆಯಲ್ಲಿ ಜರಗಿತು. ಲೆಖ್ಖಪತ್ರಗಳ ಪ್ರಕಟಣೆಯ ಕುರಿತು ಸುದೀರ್ಘ ಮಾತುಕತೆಗಳಾದುವು. ತಾಲೂಕು ಕಮಿಟಿಯ ಹಾಗೂ ಗ್ರಾಮಕಮಿಟಿಗಳ ನಿಯಮಾವಳಿಗಳು ಅಂಗೀಕರಿಸಲ್ಪಟ್ಟವು. ಹಳ್ಳಿಹಳ್ಳಿಗಳಲ್ಲಿ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮವನ್ನು ಮುಂದೊತ್ತುವರೆ ಶಾಲಾಮಾಸ್ತರರುಗಳ ಸಹಕಾರ ಆತ್ಯಗತ್ಯವಿರುವುದರಿಂದ ಇತ್ತೀಚೆಗೆ ಜಾರಿಯಾದ ನಂಬ್ರ ೧೨೮೦ನೇ ಸರಕಾರಿ ಹುಕುಮನ್ನು ವಾಪಾಸು ಪಡಕೊಳ್ಳುವಂತೆ ಸಂಬಂಧಪಟ್ಟವರನ್ನು ವಿನಂತಿಸಬೇಕೆಂದಾಯಿತು

ಮಹಾಪಾರ ಶಾಲಾ ವರ್ಧಂತಿ—ಶ್ರೀ ಮಧ್ವಸಿದ್ಧಾಂತ ಪ್ರಬೋಧಿನಿ ಮಹಾಪಾಠಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. ೩೧ನೇ ಗುರುವಾರ ಯಶಸ್ವಿಯಾಗಿ ಆಚರಿಸಲಾಯಿತು. ವಾಮೂಲು ಪ್ರಕಾರ ಪರ್ಯಾಯ ಪೀಠಸ್ಥರಾದ ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರು ಅಗ್ರಸ್ಥಾನವನ್ನು ವಹಿಸಿದ್ದರು. ದ್ವಂದ್ವ ಮಠಾಧಿಪತಿಗಳಾದ ಶ್ರೀ ಅದಮಾರು ವಿಬುಧಮಾನ್ಯ ತೀರ್ಥ ಸ್ವಾಮಿಗಳವರೂ ಚಿತ್ತೈಸಿದ್ದರು. ವ್ಯಾಸಪೂಜಾ, ವರದವಾಚನ ಇನಾಮು ಹಂಚೋಣ ಮೊದಲಾದ ಕಾರ್ಯಗಳು ಸಾಂಗವಾಗಿ ನೆರವೇರಿದುವು.

ಕಾಸರಗೋಡು

ಹುಲಿ ಬೇಟೆ.— ಮಾಯಿಪಾಡಿಯಿಂದ ಸುಮಾರು ಮೂರು ಮೈಲು ಉತ್ತರದಲ್ಲಿ ಕಳೆದ ಒಂದು ತಿಂಗಳಿಂದ ಸುಳಿದಾಡುತ್ತಿದ್ದ ಹುಲಿಯೊಂದನ್ನು ಬೀಕ್‌ಬೈಂಡರ್ ಮಿ. ಟಿ. ಕೆ. ಮಹಮದ್ ಕುಞ ಎಂಬವರು ಸಾಹಸ ಮಾಡಿ ಕೊಂದುದು ಸ್ತುತ್ಯವಾಗಿದೆ.

ಸಭೆ:—ಶ್ರೀ. ಮಹಾಬಲ ದೇವದಾಸರು ತಾ. ೨೩ರಲ್ಲಿ ಮಿಶ್ಯನ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿ ಸಂಘದಲ್ಲಿ ಕರ್ನಾಟಕದ ದಾಸಕೂಟದ ವಿಷಯವಾಗಿ ಸರಸವಾದ ಭಾಷಣ ಮಾಡಿದರು.

ಕಾರ್ಕಳ

ಕಾರ್ಕಳ:—ಕಳೆದ ತಾ. ೨೦ರಲ್ಲಿ ಕಾರ್ಕಳದ ಎಸ್.ಆರ್. ಎಸ್. ಹೋಮಿನಲ್ಲಿ ಕಾರ್ಕಳ ತಾಲೂಕಿನ ಆಳಿಯಕಟ್ಟಿನವರ ಸಭೆಯು ಶ್ರೀ ಮುದ್ರಾಡಿ ನಾಗರಾಜ ಅತಿಕಾರಿಗಳ ಅಧ್ಯಕ್ಷತೆಯಲ್ಲಿ ಸೇರಿತು ಜಿಲ್ಲಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಿದ್ದ ಬಳಿಕ ಸಭಾಂತ್ಯವಾಯಿತು.

ಕುಂದಾಪುರ

ಭಾಷಣ:—ತಾ. ೨೫ನೇ ಅ. ಪೌ. ೫ಕ್ಕೆ ತ್ರಾವಂಕೂರಿನ ಶ್ರೀ ಚೆರಿಯಾನ್‌ರವರು ಸ್ಥಳೀಯ ಬೋರ್ಡು ಹೈಸ್ಕೂಲಿನ ತರ್ಕ ಸಂಘದ ಆಶ್ರಯದಲ್ಲಿ ತಮ್ಮ ಯೂರೋಪ್ ಪ್ರವಾಸದ ಅನುಭವವನ್ನು ಕುರಿತು ಭಾಷಣ ಮಾಡಿದರು. ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಬಿ ಬಿ ಪುರಾಣಿಕರು ಅಗ್ರಾಸನ ವಹಿಸಿದ್ದರು.

ಹಿಂದೀ ಪ್ರೇಮೀ ಮಂಡಳ:—ಕಳೆದ ತಾ. ೨೩ನೇ ಅ. ಪೌ. ೫-೩೦ಕ್ಕೆ ಕಾರ್ಯನಿರ್ವಾಹಕ ಸಭೆಯು ಕರ್ನಾಟಕ ಸಾಹಿತ್ಯ ಸಂಘದಲ್ಲಿ ಸೇರಿ ವಕೀಲ್ ಶ್ರೀ ಎ. ವಿ. ಎನ್. ಹೆಬ್ಬಾರ್‌ರವರು ಮಂಡಲದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಪ್ರಕೃತ ೪೬ ವಿದ್ಯಾರ್ಥಿ ವಿದ್ಯಾರ್ಥಿನಿಯರು ರಾಷ್ಟ್ರ ಭಾಷೆಯನ್ನು ಕಲಿಯುತಿದ್ದಾರೆ.

ಭಾಷಣ:—ಶ್ರೀ ಎಚ್. ಸೀತಾರಾಮ ಶಾಸ್ತ್ರಿಗಳು ಕರ್ನಾಟಕ ಸಾಹಿತ್ಯ ಸಂಘದ ಆಶ್ರಯದಲ್ಲಿ ಕುಂದಾಪುರ ಕ್ಲಬ್ಬಿನಲ್ಲಿ ತಾ. ೩೦ನೇ ಬುಧವಾರ ಅ. ಪೌ. ೫-೩೦ಕ್ಕೆ ಶ್ರೀ ವಕೀಲ್ ಕೆ. ಎಸ್. ಕಾರಂತರವರ ಅಧ್ಯಕ್ಷತೆಯಲ್ಲಿ 'ರಂಗಭೂಮಿಯೂ ಸಮಾಜವೂ' ಎಂಬ ವಿಷಯವಾಗಿ ಭಾಷಣ ಮಾಡಿದರು.

ಕರ್ನಾಟಕ ಸಮಾಚಾರ

ಮೈಸೂರು

ಮೈಸೂರಿನಲ್ಲೊಂದು ವಿಮಾನ ನಿಲ್ದಾಣ:—ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ವಿಮಾನಗಳು ನಿಲ್ಲಲು ಒಂದು ಏರೋಡ್ರೋಮ್‌ನ್ನು ನಿರ್ಮಿಸಬೇಕೆಂದು ಅಧಿಕಾರಿಗಳ ಆಲೋಚನೆಯಲ್ಲಿದೆಯೆಂದು ತಿಳಿಯುತ್ತದೆ

ಬರ್ಲಿನಿಗೆ ಪ್ರಯಾಣ: ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಟ್ಯೂಬರ್ ಕ್ಯುಲೋಸಿಸ್ ಆಸ್ಪತ್ರೆಯ ಮುಖ್ಯಾಧಿಕಾರಿಗಳಾದ ಡಾ॥ ಬಿ. ಜಯರಾಂರವರು ಅಂತರರಾಷ್ಟ್ರೀಯ ಕ್ಷಯರೋಗ ನಿವಾರಣಾ ಸಮ್ಮೇಲನದಲ್ಲಿ ಭಾಗವಹಿಸಲು ಬರ್ಲಿನಿಗೆ ಪ್ರಯಾಣ ಮಾಡಿದ್ದಾರೆ

ಬೆಳಗಾವಿ

ಜರ್ಮನನನ್ನು ಹೊರಡಿಸಿದರು:—ಜರ್ಮನಿಯಲ್ಲಿಯ ಕೆಮಿಕಲ್ ಕಂಪೆನಿಯ ಜರ್ಮನ್ ಪ್ರತಿನಿಧಿಯೊಬ್ಬನು ಇಲ್ಲಿಗೆ ಬಂದಿದ್ದವನಿಗೆ ಇಲ್ಲಿಯ ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರವರು ಒಂದು ಹುಕುಮನ್ನು ಹೊರಡಿಸಿ ಅವನಿಗೆ ೨೪ ತಾಸುಗಳಲ್ಲಿ ಬೆಳಗಾವಿ ಜಿಲ್ಲೆ ಬಿಟ್ಟು ತೆರಳಬೇಕೆಂದು ಆಜ್ಞೆ ವಿಧಿಸಿದರು.

ಕೃತ್ರಿಮ ರೇಶ್ಮೆಯ ಕಾರ್ಖಾನೆ:—ಜರ್ಮನಿಯಿಂದ ಮರಳಿದ ಇಲ್ಲಿಯ ಪ್ರಸಿದ್ಧ ಇಂಜಿನಿಯರರಾದ ಡಾ. ತೆಂಡೂಲಕರ ಇವರು ಮುಂಬಯಿ ಸರಕಾರದ ಮುಂದೆ ಮಂಡಿಸಿದ ಕೃತ್ರಿಮ ರೇಶ್ಮೆಯ ಕಾರ್ಖಾನೆಯ ಯೋಜನೆಯು ಸರಕಾರದವರಿಂದ ಮಾನ್ಯತೆ ಪಡೆದಿದೆ. ಮತ್ತು ಅದನ್ನು ಪರಿಶೀಲಿಸುವುದಕ್ಕಾಗಿ ಸರಕಾರದವರು ಒಂದು ಕಮಿಟಿಯನ್ನು ನೇಮಿಸಿದ್ದಾರೆ.

ಆಯುರ್ವೇದ ಕಾರ್ಖಾನೆ:—ಬರುವ ವಿಜಯ ದಶಮಿಯ ಮುಹೂರ್ತದಲ್ಲಿ ಇಲ್ಲಿ ಒಂದು ಔಷಧಿ ಕಾರ್ಖಾನೆಯು ಪ್ರಾರಂಭವಾಗಲಿದೆ. ಡಾ॥ ಸವನೂರ ಮುಂತಾದ ವೈದ್ಯತಜ್ಞರು ಇದರಲ್ಲಿದ್ದಾರೆ.

ನಂಜನಗೂಡು

ಶ್ರೀ ಸೋದೇವಾದಿರಾಜಮಠದ ಶ್ರೀ ಶ್ರೀಪಾದಂಗಳವರು:—ಶ್ರೀ ರಾಘವೇಂದ್ರ ಸ್ವಾಮಿಗಳವರ ಪುಣ್ಯದಿನ ಪ್ರಯುಕ್ತ ತಾ. ೧ರಂದು ಶ್ರೀ ಸೋದೇವಾದಿರಾಜಮಠದ ಶ್ರೀ ದೇವರ ಪೂಜಾ ಪೂರ್ವಕ ಶ್ರೀಪಾದಂಗಳವರ ಸಮಕ್ಷಮದಲ್ಲಿ ಮಹಾಸಮಾರಾಧನೆಯು ವಿಜೃಂಭಣೆಯಿಂದ ಜರಗಿತು. ಶ್ರೀ. ರಾಘವೇಂದ್ರ ಸ್ವಾಮಿಗಳವರ ಮಹಾಮಹಿಮೆಯ ಕುರಿತು ಸಂಜೆ ೫ರಿಂದ ೭ ತಾಸುಗಳವರೆಗೆ ಶ್ರೀಪಾದಂಗಳವರು ಉಪನ್ಯಾಸವಿತ್ತರು. ಈ ಉಪನ್ಯಾಸಕ್ಕೆ ಈ ಊರ ಅಧಿಕಾರಸ್ಥರು ಅಶೇಷ ಲೌಕಿಕ ವೈದಿಕ ಸ್ತ್ರೀಪುರುಷರೆಲ್ಲರೂ ನೆರೆದಿದ್ದರು. ಈ ಊರ ಆಸ್ತಿಕ ಮಹಾಪುರುಷರಿಗೆ ಸಂಘಟಿಸಿದ ಈ ಸುಯೋಗಕ್ಕಾಗಿ ಶ್ರೀಪಾದಂಗಳವರಿಗೆ ಅಭಿವಂದನೆಯನ್ನರ್ಪಿಸಿ ಸಭೆಯು ವಿರಾಮವನ್ನು ಹೊಂದಿತು.

ಇಂದಿನ ಮಹಾಯುದ್ಧದಲ್ಲಿನ ಕೆಲವು ಪ್ರಾಮುಖ್ಯ ವ್ಯಕ್ತಿಗಳು!

ಮಿ. ವಿನ್ಸಟನ್ ಚರ್ಚಿಲ್

ಮಿ. ಎಂತೋನಿ ಈಡನ್

ಲೋರ್ಡ್ ಹೆಲಿಫೆಕ್ಸ್

ಮಿ. ನೆವಿಲ್ ಚೆಂಬರ್ಲಿನ್

ವಿಸ್‌ಕೌಂಟ್ ಗೋರ್ಟ್

ಸರ್ ಸಿರಿಲ್ ನ್ಯೂಯಲ್

ವಿಸ್‌ಕೌಂಟ್ ಸಾಮುವೆಲ್

ಹಿಟ್ಲರ್ ಶಾಹಿಯು ನಿರ್ನಾಮವಾಗಬೇಕು!

— ಬ್ರಿಟನಿನ ಪ್ರಚಂಡ ರಣಘೋಷ —

ಪ್ರಜಾಪ್ರಭುತ್ವ ತತ್ವಕ್ಕಾಗಿ ಯೂರೋಪಿನಲ್ಲಿ ದ್ವಂದ್ವಯುದ್ಧ!

ಜರ್ಮನಿಯೊಡನೆ ಬ್ರಿಟನು ಯುದ್ಧವು ಹೂಡಿತು!

ಬ್ರಿಟಿಷರ ಕಡೆಯ ನುಡಿಗೆ, ಜರ್ಮನಿಯು ತೃಪ್ತಿಕರವಾದ ಉತ್ತರವನ್ನು ಕೊಡದಿದ್ದುದರಿಂದ, ಬ್ರಿಟನು ಜರ್ಮನಿಯೊಡನೆ, ಯುದ್ಧಮಾಡುವ ಪ್ರಕಟಣೆ ಕೊಟ್ಟಿದೆ!

ಜರ್ಮನಿಯೊಡನೆ ಯುದ್ಧಮಾಡುವ ಈ ಪ್ರಕಟಣೆಯನ್ನು ಚೇಂಬರ್ಲೇನರು ಪಾರ್ಲಿಮೆಂಟು ಸಭೆಯಲ್ಲಿ ಪ್ರಕಟಿಸಿದರು.'

ಫ್ರಾನ್ಸು ಈ ರಣರಂಗದಲ್ಲಿ ಬ್ರಿಟನಿನೊಡನೆ ಸಹಾಯನಿಂತಿದೆ'

ಚೆಂಬರ್ಲೇನರ ಯುದ್ಧ ಪ್ರಕಟಣೆಯ ಸಾರಾಂಶವು ಹೀಗಿದೆ —

'ನಾವು ಜರ್ಮನಿಗೆ ಕೊಟ್ಟ ಕಡೆಯ ನುಡಿಯಂತೆ, ಜರ್ಮನಿಯು ಪೋಲೆಂಡಿನ ಗಡಿಯಿಂದ ಜರ್ಮನ್ ಸೈನ್ಯವನ್ನು ಹಿಂದೆಗೆಯಲಿಲ್ಲ. ಇದರಿಂದಲಾಗಿ, ನಾವು ಜರ್ಮನಿಯೊಡನೆ ಯುದ್ಧಮಾಡದಿರಲು ಸಾಧ್ಯವಿಲ್ಲ

'ಇದುವರೆಗೆ, ಬಹಳ ಸಮಯದಿಂದ ಶಾಂತಿಗಾಗಿ ಯತ್ನಿಸುತ್ತಿದ್ದ ನನಗೆ, ಜರ್ಮನಿಯ ಈ ಯುದ್ಧಧೋರಣೆಯಿಂದ ಅತ್ಯಂತ ಖೇದವೆನಿಸುವುದಿದ್ದರೂ, ಹಿಟ್ಲರನು ಶಾಂತಿಯನ್ನು ತಪ್ಪಿಸಿ ಯುದ್ಧವನ್ನು ಆಹ್ವಾನಿಸಿದನು ಯಾವ ಮಾತಿಗೂ ಕಿವಿಗೊಡದೆ ಹಿಟ್ಲರನು ಈಗ ತನ್ನ ಸೈನ್ಯವನ್ನು ಪೋಲೆಂಡಿನ ಮೇಲೆ ತೆಕ್ಕೊಂಡು ಹೋಗಿರುವನು

'ಆದ್ದರಿಂದ ನಾವು ಫ್ರಾನ್ಸಿನೊಡನೆ, ಈಗ ಪೋಲೆಂಡಿನಲ್ಲಿ ಮತ್ತಿದ ಅನ್ಯಾಯದ ಶಕ್ತಿಯನ್ನೂ ಇದಿರಿಸಲು ಹೊರಡುತ್ತೇವೆ.

'ನಾವು ಶಾಂತಿಗಾಗಿ ಮಾಡಬೇಕಾದ ಎಲ್ಲಾ ಕಾರ್ಯಗಳನ್ನು ಮಾಡಿಯಾಯಿತು, ಇಂದು ಜರ್ಮನಿಯ ಯಾವುದೊಂದೂ ಮಾತನ್ನೂ ನಂಬಲು ಸಾಧ್ಯವಿಲ್ಲ; ಅದರ ಕಾರ್ಯಗಳನ್ನು ಸಹಿಸಿಕೊಂಡಿರಲೂ ಸಾಧ್ಯವಿಲ್ಲ.

'ಇಂತಹ ಸಂದರ್ಭದಲ್ಲಿ ನಮಗೆ ಸಹಾಯಕೊಡಲು ಸಾಮ್ರಾಜ್ಯದ ಎಲ್ಲಾ ಕಡೆಗಳಿಂದಲೂ ಜನರು ಮುಂದುವರಿದು ಬಂದಿದ್ದಾರೆ

'ನಾವೀಗ ಪಶುಶಕ್ತಿಯೆದುರು, ಅನ್ಯಾಯದ ಎದುರು, ಕೆಟ್ಟ ವಿಶ್ವಾಸದ ಎದುರು ಯುದ್ಧ ಮಾಡುತ್ತೇವೆ ಇದರಿಂದ ಮಾತ್ರ ನ್ಯಾಯವು ಉಳಿಯುವುದು.

ಬ್ರಿಟಿಷ್ ಸಾರ್ವಭೌಮರ ಸಂದೇಶ

ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಾರ್ವಭೌಮರು ಈ ರೀತಿಯ ಸಂದೇಶ ಕೊಟ್ಟಿದ್ದಾರೆ —

'ಇಂತಹ ಚಾರಿತ್ರಿಕವ ಹತ್ತಿರದ ಸಂದರ್ಭದಲ್ಲಿ ಬ್ರಿಟನಿನಲ್ಲಿರುವ ಮತ್ತು ಸಾಮ್ರಾಜ್ಯದ ಬೇರೆ ಕಡೆಗಳಲ್ಲಿರುವ ಎಲ್ಲರಿಗೂ ನಾನು ಹೃತ್ಪೂರ್ವಕವಾಗಿ ಈ ಸಂದೇಶವನ್ನು ತಿಳಿಸುತ್ತೇನೆ

ನಮ್ಮ ಜೀವನದಲ್ಲಿ ಈಗ ನಾವು ಎರಡನೆಯ ಸಲ ಒಮ್ಮೆ ಯುದ್ಧರಂಗಕ್ಕಿಳಿದಿದ್ದೇವೆ ನಾವು, ಈಗ ನಮಗೆ ಶತ್ರುಗಳಾಗಿರುವವರೊಡನೆ, ಶಾಂತಿಯಿಂದಿರಲು ಯತ್ನಿಸಿದೆವು, ಅದು ಪ್ರಯೋಜನವಾಗಲಿಲ್ಲ ನಮ್ಮನ್ನು ಯುದ್ಧರಂಗಕ್ಕೆ ಆಹ್ವಾನಿಸಿದರು ನಾವು ತತ್ವಕ್ಕಾಗಿ ಕಾದಾಡಲು ಆಮಂತ್ರಿತರಾಗಿದ್ದೇವೆ ಹಿಂದೆ ನಿಂತರೆ ಜಗತ್ತಿನ ನಾಗರಿಕತೆಗೇ ಮಹಾನಷ್ಟವೊದಗುವುದು

'ಸ್ವಾರ್ಥದ ದುರಾಶೆಯಿಂದ, ಪ್ರತಿಜ್ಞೆ ಒಪ್ಪಂದಗಳನ್ನು ಮುರಿದು, ಇತರ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕೆಡಿಸಿ, ಯಾವಾಗಲೂ ಕಾರುಣ್ಯಹೀನವಾಗಿ ವರ್ತಿಸುವ ಹೀನ ತತ್ವವನ್ನು ನಾವು ಎದುರಿಸದಿದ್ದರೆ, ನಮ್ಮ ರಾಷ್ಟ್ರಗಳ ಸ್ವಾತಂತ್ರ್ಯಕ್ಕೇ ಧಕ್ಕೆ ತಗಲುವುದು

"ಇಂತಹ ಮನೋದ್ದೇಶಕ್ಕಾಗಿ ನಾನು ಸಾಮ್ರಾಜ್ಯದ ಎಲ್ಲಾ ಜನರಿಗೂ ಸಂದೇಶ ಕಳುಹಿಸುತ್ತೇನೆ ಒಂದಾಗಿ, ಧೈರ್ಯಪೂರ್ವಕ ಈ ದುರ್ಘಟನೆಯನ್ನು ಇದಿರಿಸಬೇಕು ದೇವರ ದಯೆಯಿಂದ ನಾವು ಜಯಶಾಲಿಗಳಾಗುವೆವು"

ಫ್ರಾನ್ಸೂ ಯುದ್ಧ ಪ್ರಕಟಣೆ ಮಾಡಿತು!

ಫ್ರಾನ್ಸೂ ಜರ್ಮನಿಗೆ ಕಡೆಯ ನುಡಿ ಕೊಟ್ಟಿತು ಅದಕ್ಕೂ ಜರ್ಮನಿಯು ಉತ್ತರವಿಲ್ಲ ಆದ್ದರಿಂದ, ಹಿಂದಿನ ಪ್ರತಿಜ್ಞೆಯಂತೆ ಪೋಲೆಂಡಿಗೆ ಸಹಾಯ ಕೊಡುವುದಾಗಿ, ಜರ್ಮನಿಯೊಡನೆ ಯುದ್ಧ ಹೂಡುವ ಪ್ರಕಟಣೆ ಮಾಡಿದೆ

ನ್ಯೂಜಿಲೆಂಡ್-ಆಸ್ಟ್ರೇಲಿಯಗಳು ಜರ್ಮನ್ ವಿರುದ್ಧ ಕಾದಾಡುವವು

ಆಸ್ಟ್ರೇಲಿಯ, ಮತ್ತು ನ್ಯೂಜಿಲೆಂಡುಗಳ ಜರ್ಮನಿಯೊಡನೆ ಯುದ್ಧ ಹೂಡುವ ಪ್ರಕಟಣೆ ಹೊರಡಿಸಿವೆ 'ಬ್ರಿಟನು ಯಾವ ಉದ್ದೇಶಕ್ಕಾಗಿ ಕಾದಾಡುವುದೋ, ಆ ಬಗ್ಗೆ ನಾವೂ ಅದಕ್ಕೆ ಬೆಂಬಲ ಕೊಡುವೆವು ಎಂದು ಆಸ್ಟ್ರೇಲಿಯವು ಹೇಳಿದೆ

ಹಿಟ್ಲರ್ ಧೋರಣೆ ನಿರ್ನಾಮವಾಗಬೇಕು

ಪಾರ್ಲಿಮೆಂಟಿನಲ್ಲಿ ಚೆಂಬರ್ಲೇನರು ಭಾಷಣ ಕೊಡುತ್ತಾ 'ನಾನು ಹಿಟ್ಲರ್ ಧೋರಣೆಯು ನಾಶವಾಗುವ ವರೆಗೆ ಬದುಕಬೇಕೆಂದು ಹೇಳಿದರು.

ಗ್ರೀನವುಡ್ಡರು ಭಾಷಣ ಕೊಡುತ್ತಾ ಹಿಂದಿನಿಂದಲೂ ಪೋಲೆಂಡು ನಮ್ಮ ಸಹಾಯಕ್ಕೆ ನಿಂತಿರುವುದು, ನಾವು ಅವರ ಸಂಕಷ್ಟದಲ್ಲಿ ನೆರವಾಗದಿರಲು ಸಾಧ್ಯವಿಲ್ಲವೆಂದರು

ಸರ್ ಆರ್ಚಿಬಾಲ್ಡ್ ಸಿಂಕ್ಲೇರರೂ ಬ್ರಿಟನಿನ ನಿರ್ಧಾರದ ಕುರಿತು ಆವೇಶಪೂರ್ಣ ಭಾಷಣವಿತ್ತರು!

ಚರ್ಚಿಲ್ಲರು ಮಾತನಾಡುತ್ತಾ, ನಾವಿಂದು ಯುದ್ಧಮಾಡುವುದು ಜಗತ್ತನ್ನೇ ರಕ್ಷಿಸಲು, ನಾಜಿಗಳ ಅನ್ಯಾಯವನ್ನು ತಡೆಯಲು ನಾವು ಖಂಡಿತ ನಿರ್ಧರಿಸಿದ್ದೇವೆ ಎಂದರು

ಲಾಯಿಡ್ ಜಾರ್ಜರು ಪ್ರಧಾನ ಮಂತ್ರಿಗಳ ಮಾತಿಗೆ ಬೆಂಬಲವಿತ್ತು ಮಾತನಾಡಿದರು

ಹೌಸ್ ಆಫ್ ಲಾರ್ಡ್ಸನಲ್ಲಿ ಲಾರ್ಡ್ ಹೆಲಿಫಾಕ್ಸರು ಯುದ್ಧ ನಿರ್ಧಾರದ ಪ್ರಕಟಣೆಯ ಕುರಿತು ಉತ್ತಮ ಭಾಷಣವಿತ್ತರು!

ಅಮೇರಿಕವು ತಟಸ್ಥವಾಗಿರುವುದು

ಪ್ರೆಸಿಡೆಂಟ ರೂಸ್‌ವೆಲ್ಟರು, ಇಂದಿನ ಯುದ್ಧದಲ್ಲಿ ಅಮೇರಿಕವು ತಟಸ್ಥವಾಗಿರುವುದೆಂದು ಹೇಳಿರುವರು ಇಂತಹ ಯುದ್ಧ ಕೋಲಾಹಲವು ಉಂಟಾದ ಸಂದರ್ಭದಲ್ಲಿಯೂ, ಅಮೇರಿಕವು ತನ್ನ ಶಾಂತಿ ಪಕ್ಷವನ್ನು ಮುಂದುವರಿಸುವುದೆಂದು ಹೇಳಿದರು

ಜಪಾನೂ ತಟಸ್ಥವಾಗಿರುವುದು

ಜಪಾನು ಸರಕಾರವು ತಟಸ್ಥವಾಗಿರುವುದೆಂದು ಬ್ರಿಟಿಷ್ ಸರಕಾರಕ್ಕೆ ತಿಳಿಸಿದೆ

ಬೆಲ್ಜಿಯಮ್ ತಟಸ್ಥವಾಗಿರುವುದು.

ನಗರಗಳ ಮೇಲೆ ಬೋಂಬು

ಸೈನಿಕರ ಮೇಲೆ ಮಾತ್ರ ಬಾಂಬುಗಳನ್ನೆಸೆಯಬೇಕೆಂದು ಜರ್ಮನ್ ಸರಕಾರದೊಡನೆ ಪೋಲೆಂಡ್ ಸರಕಾರವು ಕೇಳಿದ್ದರೂ, ನಾಗರಿಕರ ಮೇಲೆ, ಹಳ್ಳಿ ಪಟ್ಟಣಗಳ ಮೇಲೆ ಜರ್ಮನಿಯು ಬಾಂಬೆಸೆದಿದೆ.

ಜರ್ಮನಿಯ ೬೪ ವಿಮಾನಗಳು ಉರುಳಿದುವು

ಜರ್ಮನಿಯ ಅರವತ್ತನಾಲ್ಕು ವಿಮಾನಗಳು ಧ್ವಂಸವಾದುವು ಅನೇಕ ಸಂಕಗಳನ್ನು ಬಾಂಬು ಹಾಕಿ ನಾಶಮಾಡಿದ್ದಾರೆ

ಬ್ರಿಟನಿಗೆ ಜರ್ಮನಿಯ ಉತ್ತರ

ಜರ್ಮನಿಗೆ ಬ್ರಿಟನು ಕಡೆಯ ನುಡಿ ಕೊಟ್ಟದ್ದಕ್ಕೆ, ಕಡೆಯ ನುಡಿ ಕೊಡುವ ಕ್ರಮವನ್ನು ನಾವು ಅಂಗೀಕರಿಸಲಾರೆವೆಂದು ಜರ್ಮನಿಯು ಉತ್ತರವಿತ್ತಿದೆ.


ಎಮ್. ದಲಾಡಿಯರ್


ಜನರಲ್ ಗೆಮ್ಲಿನ್


ಮಾರ್ಶಲ್ ಸ್ಮಿಗ್ಲಿರಿಡ್ಜ


ಕೌಂಟ್ ಮೊಸಿಕಿ


ಹೆರ್ ಹಿಟ್ಲರ್


ಜನರಲ್ ಗೋರಿಂಗ್


ಸಿನೋರ್ ಮುಸಲಿನಿ

ಪೋಲೆಂಡಿನ ಮೇಲೆ ಗುಂಡುಗಳ ಸುರಿಮಳೆ

ಸಾವಿರಾರು ನಿರಪರಾಧಿಗಳ ಮರಣ

ವರ್ಕಿಂಗ್ ಕಮಿಟಿಯ ಸಭೆಗೆ ಸುಭಾಸರೂ ಹೋಗುವರು!

ಬ್ರಿಟನ್-ಫ್ರಾನ್ಸುಗಳು ರಣರಂಗಕ್ಕಿಳಿದುವು! ಬ್ರಿಟಿಷ್ ಹಡಗವು ಧ್ವಂಸವಾಯಿತು!!

ಗಾಂಧಿ ವೈಸರಾಯರ ಭೇಟಿ!

ಪೋಲೆಂಡ್-ಜರ್ಮನ್ ಗಡಿನಾಡುಗಳಲ್ಲಿ, ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮಯದಲ್ಲಿ ರಣರಂಗವು ಸುರುವಾಗಿದೆ ಎರಡು ಕಡೆಯವರೂ ಉನ್ಮತ್ತರಾಗಿ ಕಾದಾಡುತ್ತಿದ್ದಾರೆ! ಟಿಕ್ಷಿನ್ ಮತ್ತು ವೆಲನ್ ಎಂಬಲ್ಲಿಯೂ, ಪಶ್ಚಿಮ ಗಡಿಯಲ್ಲಿಯೂ ಅಸಾಧ್ಯ ಸಂಗ್ರಾಮವು ನಡೆಯಿತು

ಜರ್ಮನಿಯ ಹಲವು ವಿಮಾನಗಳು ಪೋಲೆಂಡಿನ ಸೈನ್ಯದ ಮೇಲೆ ಮಾತ್ರ ಭಾಳಿಯಿಟ್ಟು ಬೊಂಬು ಹಾಕಿದ್ದು ಮಾತ್ರವಲ್ಲದೆ, ನಿರಪರಾಧಿಗಳಾಗಿರುವ ನಾಗರಿಕರ ಮೇಲೂ, ಹಲವು ಗ್ರಾಮ ನಗರಗಳ ಮೇಲೂ, ಬಾಂಬಿನ ಮಳೆಯನ್ನು ಸುರಿಸುತ್ತಿದ್ದಾರೆ

ಡಾನ್ಜಿಗ್ಗಿನಲ್ಲಿ ಎದುರಾಗಲು ಬಂದ ಮೂರು ಜರ್ಮನ್ ವಿಮಾನಗಳನ್ನು ಪೋಲರು ಹಿಂದಕ್ಕಟ್ಟಿದರು ವಿಮಾನ ದಾಳಿಯಲ್ಲಿ ಹಲವು ಚರ್ಚುಗಳು ಧ್ವಂಸವಾಗಿವೆ ಪೋಲೆಂಡಿನ ಮುಖ್ಯ ನಗರವಾದ ವಾರ್ಸೋ ಮಾತ್ರವಲ್ಲದೆ, ಬಾಕಿ ಹೊಸೇಳು ನಗರಗಳ ಮೇಲೂ ಬಾಂಬು ಬಿದ್ದಿದೆ ಹಲವು ಜರ್ಮನ್ ವಿಮಾನಗಳನ್ನು ಗುಂಡಿಕ್ಕಿ ಕೆಳಗುರುಳಿಸಲಾಗಿದೆ. ಪೋಲರ ವಿಮಾನಗಳೂ ಕಾಣೆಯಾಗಿವೆ. ಇಡೀ ಪೋಲೆಂಡಿನಲ್ಲಿ ಮಾರ್ಶಲ್ ಲಾ ಜಾರಿಯಾಗಿದೆ ರಾತ್ರಿ ಹಗಲೆನ್ನದೆ ಯುದ್ಧವು ನಡೆಯುತ್ತಿತ್ತು ಅನೇಕ ಮಂದಿಯನ್ನು ಸೆರೆ ಹಿಡಿದಿದ್ದಾರೆ

ಪೋಲರ ಸಾಹಸ

ಪೋಲೆಂಡಿನಿಂದ ಬಂದ ಸುದ್ದಿಯಂತೆ, ಪೋಲೆಂಡಿನವರು ೩೭ ಜರ್ಮನ್ ವಿಮಾನಗಳನ್ನು ಕೆಳಗುರುಳಿಸಿರುವರೆಂದು ತಿಳಿದಿದೆ ನೂರಾರು ಜರ್ಮನರ ಸೈನ್ಯ ಸಂಗ್ರಹಾಲಯಗಳು ಧ್ವಂಸಮಾಡಲಾಗಿವೆ!

ಹೆಂಗಸು ಮಕ್ಕಳನ್ನು ಕೊಂದರು

ಯುದ್ಧ ನಗರಗಳಿಂದ ದೂರಕ್ಕೆ ಸಾಗಿಸುತ್ತಿರುವಾಗ ಹೆಂಗಸು ಮಕ್ಕಳು ಇದ್ದ ರೈಲ್ವೆಗಾಡಿಗಳಿಗೆ ಜರ್ಮನರು ಬೊಂಬಿಕ್ಕಿದರು.

ಬ್ರಿಟನು ರಣರಂಗಕ್ಕಿಳಿಯಿತು

ಬ್ರಿಟಿಷ್ ರಾಯಭಾರಿಯು ಬ್ರಿಟಿಷ್ ಸರಕಾರದ ಕಡೆಯ ಸುದ್ದಿಯನ್ನು ಹೇಳಿಕೆಯನ್ನು ಜರ್ಮನಿಯಲ್ಲಿ ಕೊಟ್ಟನು. ಅದರಲ್ಲಿ, ತಕ್ಷಣವೇ ಜರ್ಮನಿಯು ಪೋಲೆಂಡಿನ ಗಡಿಯಿಂದ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಂಡು ಹೋಗಬೇಕಾಗಿ ಸೂಚಿತವಾಗಿತ್ತು.

ಫ್ರಾನ್ಸು ಪ್ರತಿಜ್ಞೆಯಂತೆ ನಡೆವುದು

ಫ್ರಾನ್ಸು ಚೇಂಬರಿನ ಸಭೆ ಕೂಡಿತು ಇಂತಹ ಸಂದರ್ಭದಲ್ಲಿ ರಾಷ್ಟ್ರೀಯ ಐಕ್ಯತೆಯಿರಬೇಕೆಂದು ಸ್ಪೀಕರರಾದ ಎಂ. ಹೆರಿಯೋಟರು ಭಾಷಣಮಾಡಿದರು

ಆ ಮೇಲೆ ಪ್ರಧಾನ ಮಂತ್ರಿ ಡಲಾಡಿಯರು, ಆವೇಶಪೂರ್ಣ ಭಾಷಣ ಮಾಡುತ್ತಾ ಫ್ರಾನ್ಸು ಬ್ರಿಟನುಗಳು ಪೋಲೆಂಡಿಗೆ ನೆರವಾಗುವುದೆಂದು ಹೇಳಿದರು.

ಪೋಲೆಂಡಿನಲ್ಲಿ ಬೊಂಬುಗಳ ಸಿಡಿತ

ಆ ಬಳಿಕ ಪ್ರೆಸಿಡೆಂಟ್ ಲಿಬ್ರನರು ತಮ್ಮ ವೀರಾವೇಶದ ಭಾಷಣದಲ್ಲಿ, ಜರ್ಮನಿಯು ಪೋಲೆಂಡನ್ನು ನಿರ್ದಯವಾಗಿ ಪೀಡಿಸುತ್ತಿರುವಾಗ, ಯುದ್ಧವು ತಪ್ಪಿಸಲು ಸಾಧ್ಯವಿಲ್ಲವೆಂದೂ, ಇಂತಹ ಹೀನ ಧೋರಣೆಯನ್ನು ನಾವು ಎದುರಿಸಬೇಕೆಂದೂ, ನ್ಯಾಯ ನೀತಿಗಳಿಗೆ ಜಯವಾಗುವುದೆಂದೂ ಹೇಳಿದರು

ಈ ಭಾಷಣಗಳಿಗೆ ಎಲ್ಲಾ ಪಕ್ಷದವರಿಂದಲೂ ಏಕಕಂಠದ ಸಮ್ಮತಿ ಸಿಕ್ಕಿತ

ಸ್ಟೇರಿಯನ್ ಪ್ರೆಸಿಡೆಂಟರು ಫ್ರಾನ್ಸಿನ ಬೆಂಬಲ ಬರುವುದಾಗಿ ತಿಳಿಸಿರುವರು

ಪೋಲೆಂಡಿಗೆ ಟರ್ಕಿಯ ಬೆಂಬಲ

ಬಲಾತ್ಕಾರ ಮಾಡುವವರನ್ನು ಇದಿರಿಸುವಲ್ಲಿ, ಟರ್ಕಿಯು ಬೆಂಬಲ ಕೊಡುವುದೆಂದು ಪ್ರೆಸಿಡೆಂಟ್ ಇನೆನೂರವರು ಬ್ರಿಟಿಷ್ ರಾಯಭಾರಿಗೆ ತಿಳಿಸಿದರು.

ತಟಸ್ಥ ರಾಷ್ಟ್ರಗಳು

ನೋರ್ವೆ ಸರಕಾರವು, ತನ್ನ ಹಿಂದಿನ ಒಪ್ಪಂದದಂತೆ; ತಟಸ್ಥವಾಗಿರಬೇಕಾಗಿ, ಜರ್ಮನಿ ಸರಕಾರವು ತಿಳಿಸಿದೆ.

ಪೋರ್ಚುಗಲ್ ಸರಕಾರವೂ ತಟಸ್ಥವಾಗಿರುವುದಾಗಿ ಅಧಿಕಾರಿಕ ವಾರ್ತೆ ಬಂದಿದೆ. ಐರ್ಲೆಂಡೂ ತಟಸ್ಥವಾಗಿರುವುದೆಂದು ಡಿ ವೆಲರಾ ಹೇಳಿಕೆ ಪ್ರಕಟಿಸಿದ್ದಾರೆ

ವರ್ಕಿಂಗ್ ಕಮಿಟಿಯ ಸಭೆ

ಈ ಸಂದರ್ಭದಲ್ಲಿ ವರ್ಕಿಂಗ್ ಕಮಿಟಿಯ ಸಭೆಯನ್ನು ಬೇಗನೇ ಕರೆಯಲಾಗುವುದು ನೆಹರುಗಳ ಆಗಮನವನ್ನು ನಿರೀಕ್ಷಿಸಲಾಗಿದೆ

ವೈಸರಾಯರು ಭಾರತದ ಮುಖಂಡರೊಡನೆ ಮಾತನಾಡುವರು

ಯುದ್ಧದ ಗೊಂದಲದಲ್ಲಿ, ಹಿಂದೂ ದೇಶದ ಸಹಕಾರಕ್ಕಾಗಿ ವೈಸರಾಯರು, ಭಾರತದ ಬೇರೆ ಬೇರೆ ಪಕ್ಷದ ಮುಖಂಡರನ್ನು ಕಂಡು ಮಾತನಾಡುವರು

ಗಾಂಧಿಜಿಯವರು ಕಾಂಗ್ರೆಸಿನ ಪ್ರತಿನಿಧಿಯಾಗಿ ಹೋಗಲು ಅವರೊಡನೆ ಕೇಳಿಕೊಳ್ಳಲಾಗಿದೆ ಆದರೆ, ಯುದ್ಧದ ಬಾಬಿಗೆ ನೆಹರುಗಳು ಜವಾಬ್ದಾರರಾದುದರಿಂದ, ವೈಸರಾಯರು ಅವರನ್ನೂ ಕರೆಯಬಹುದು

ಬ್ರಿಟಿಷ್ ಹಡಗವು ಧ್ವಂಸವಾಯಿತು!

೧,೪೦೦ ಮಂದಿ ಯಾತ್ರಿಕರಿಂದ ಕೂಡಿದ ಬ್ರಿಟಿಷ್ ಹಡಗವೊಂದು ಸ್ಕೋಟ್ಲೇಂಡಿನ ಗಡಿಯಲ್ಲಿ ಧ್ವಂಸವಾಯಿತು' ಅದರಲ್ಲಿ ೩೫೦ ಅಮೇರಿಕನರು ಇದ್ದರು

ಸಿಮ್ಲಾದಲ್ಲಿ ಗಾಂಧಿಜಿಯವರು

ಗಾಂಧಿಜಿಯವರು ಸಿಮ್ಲಾಕ್ಕೆ ಬಂದಿರುವರು. ಅವರು ವೈಸರಾಯರೊಡನೆ ಯಾವ ಇತ್ಯರ್ಥಕ್ಕೂ ಬರಲಾರರೆಂದೂ, ಕಾಂಗ್ರೆಸಿನ ಧೋರಣವನ್ನು ಮಾತ್ರ ತಿಳಿಸುವರೆಂದೂ ತಿಳಿದಿದೆ.

ವರ್ಕಿಂಗ್ ಕಮಿಟಿಯ ಸಭೆಗೆ ಬೋಸರು ಬರುವರು

ಅಂತರ್ ರಾಷ್ಟ್ರೀಯ ಪರಿಸ್ಥಿತಿಯ ಕುರಿತು ಚರ್ಚಿಸಲು, ಕಾಂಗ್ರೆಸು ವರ್ಕಿಂಗ್ ಕಮಿಟಿಗೆ ಸರ್ದಾರ್ ಪಟೇಲರು ಬೋಸರನ್ನು ಆಮಂತ್ರಿಸಿರುವರು ಅವರು ಸಭೆಗೆ ಬರಲು ಒಪ್ಪಿರುವರು.

ಕೆನಡವೂ ಪ್ರತಿಜ್ಞೆ ಪಾಲಿಸುವುದು

ಕೆನಡದ ಪ್ರಧಾನ ಮಂತ್ರಿಯವರು ಚೇಂಬರ್ಲೇನರಿಗೆ ತಂತಿ ಬಿಡುತ್ತಾ ಅಮೇರಿಕವು ಪೋಲೆಂಡಿಗೆ ಬೆಂಬಲವಾಗಲು ಬಂದಲ್ಲಿ, ಕೆನಡವೂ ಅವರೊಡನೆ ಸಹಕರಿಸುವುದಾಗಿ ತಿಳಿಸಿದ್ದಾರೆ.

ಸ್ವಾತಂತ್ರ್ಯಕ್ಕಾಗಿ ಸಾಯಲೂ ತಯಾರಾಗುವ!

ಬೋಸರ ಎಚ್ಚರಿಕೆ

ಸುಭಾಸಭೋಸರು ಮದ್ರಾಸಿನ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ, ಹೀಗೆಂದರು —ಇಂದಿನ ಪರಿಸ್ಥಿತಿಯಲ್ಲಿ ನಾವು ಹಿಂದಿನ ಗತಕಥೆಗಳನ್ನು ಮರೆತು ಮುಂದಕ್ಕೆ ಒದಗಲಿರುವ ಸ್ವಾತಂತ್ರ್ಯದ ಕುರಿತು ಯೋಚಿಸಿ, ಒಕ್ಕಟ್ಟಿನಿಂದ ಕೆಲಸ ಮಾಡುವ, ಇಂತಹ ಸಂದರ್ಭದಲ್ಲಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಿಗೂ ಗಾಂಧಿಜಿಯವರಿಗೂ ನಾವು ಬಿನ್ನಹಮಾಡುವದೇನೆಂದರೆ, ಧೈರ್ಯಪೂರ್ವಕ ಇಂದಿನ ಸಮಸ್ಯೆಯನ್ನು ನಾವು ಎದುರಿಸಬೇಕು. ಸ್ವಾತಂತ್ರ್ಯಕ್ಕಾಗಿ ಜೀವವನ್ನರ್ಪಿಸಲೂ ನಾವು ತಯಾರಾಗಿರಬೇಕು ಎಂದರು.

ಫ್ರಾನ್ಸಿನ ಸಮರ ಸನ್ನಾಹ!

ಬ್ರಿಟನಿನ ಯುದ್ಧ ಮಂತ್ರಿ ಮಂಡಳ

ಬ್ರಿಟನು ಯುದ್ಧ ಮಂತ್ರಿಮಂಡಲವೊಂದನ್ನು ರಚಿಸಿದೆ. ಚರ್ಚಿಹಿಲ್ಲರು ಮುಖ್ಯ ಸೈನ್ಯಾಧಿಕಾರಿಯಾಗಿ ಸೇವಕರಾಗಿರುವರು.

ಯುದ್ಧದಿಂದಾಗಿ ಭಾರತದಲ್ಲಿಯೂ ಗೊಂದಲ

ಸರಕಾರದ ಹೊಸ ಶಾಸನಗಳು!

ಗಾಂಧಿ-ವೈಸರಾಯರ ಭೇಟಿ!

ವರ್ಕಿಂಗ್ ಕಮಿಟಿ ಅಧಿವೇಶನ

ಗ್ರಾಮೋದ್ಧಾರಕ್ಕೆ ಸರಕಾರದ ಸಹಾಯ ೬೩,೪೪,೬೧೫ ರೂಪಾಯಿಗಳು

ಇಂಡಿಯಾ ಸರಕಾರವು ಗ್ರಾಮೋದ್ಧಾರದ ಸಲುವಾಗಿ ಎಲ್ಲ ಪ್ರಾಂತಗಳ ಮತ್ತು ಸ್ಥಳೀಕ ಸಂಸ್ಥೆಗಳ ಆಡಳಿತೆಯ ಸಲುವಾಗಿ ೧೯೩೭ರ ಅಂಕ್ಯದಲ್ಲಿ ೬೩,೪೪,೬೧೫ ರೂಪಾಯಿಗಳಷ್ಟು ಹಣವನ್ನು ಸೇಂಕ್ಷನು ಮಾಡಿದೆ.

ಈ ಹಣದಲ್ಲಿ ಬಂಗಾಳವು ಹೆಚ್ಚು ಅಂಶವನ್ನು ಖರ್ಚುಮಾಡಿದೆ. ಆಮೇಲೆ ಸಂಯುಕ್ತ ಪ್ರಾಂತ್ಯ ಮತ್ತೆ ಮದ್ರಾಸು, ಇವುಗಳಲ್ಲಿ ಕ್ರಮವಾಗಿ ೧೯½ ಲಕ್ಷ, ೧೨ ಲಕ್ಷ, ೧೦½ ಲಕ್ಷ ರೂಪಾಯಿಗಳು ಹಂಚಿದೆ.

ನೆಹರುಗಳು ಚೈನದಿಂದ ಭಾರತಕ್ಕೆ ಬೇಗನೇ ಹಿಂತಿರುಗಲಿದರು

ಕಾಂಗ್ರೆಸು ಅಧಿಕಾರೀ ಮಂಡಳದಿಂದ, ಪಂಡಿತ ನೆಹರುಗಳನ್ನು ಬೇಗನೇ, ಚೈನಾದಿಂದ ಮರಳಿ ಬರಬೇಕೆಂದು, ವಿನಂತಿಸಿ ತಂತಿ ಬಿಟ್ಟ ಪ್ರಕಾರ ಅವರು ಹಿಂತಿರಳಿದರು.

ವಿದೇಶೀಯರ ಮೇಲೆ ನಿರ್ಬಂಧ

ಮೊದಲನೆಯ ಶಾಸನವಾಗಿ ವಿದೇಶೀಯರ ಮೇಲೆ ನಿರ್ಬಂಧದ ಶಾಸನವು ಬೊಂಬಾಯಿ, ಮದ್ರಾಸು ಮೊದಲಾದ ಎಲ್ಲಾ ಪ್ರಾಂತಗಳಲ್ಲಿಯೂ ಜಾರಿಗೆ ಬಂದಿವೆ.

ಖಾನ್ ಅಬ್ದುಲ್ ಗಫರ್ ಖಾನ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನರು ಬರುವ ತಿಂಗಳಲ್ಲಿ ಬಲೂಚಿಸ್ಥಾನವನ್ನು ಸಂದರ್ಶಿಸುವರು. ಡೇರಾ ಇಸ್ಮಾಯಿಲ್ ಖಾನದಿಂದ ಕೈಟ್ಟಾದ ಮೂಲಕ ಅವರು ಯಾತ್ರೆ ಬೆಳೆಸುವರು.

ಪೋಲೆಂಡಿಗೆ ಗಾಂಧಿಜಿಯವರ ಸಂದೇಶ

ಗಾಂಧಿಜಿಯವರು, ಪೋಲೆಂಡು ಸರಕಾರಕ್ಕೆ ಒಂದು ಸಂದೇಶ ಕಳುಹಿಸುತ್ತಾ, ಅದರಲ್ಲಿ ಅಲ್ಲಿನ ಜನರು, ಪ್ರಾಣನ ಕುಲದ ಏಳಿಗೆಗೆ ಮಾಡುತ್ತಿರುವ ಸಾಹಸದ ಬಗ್ಗೆ ತಮ್ಮ ಹೃತ್ಪೂರ್ವಕ ಸಹಾನುಭೂತಿ ಮತ್ತು ಆಶೀರ್ವಾದಗಳನ್ನು ತಿಳಿಸಿರುವರು.

ಗಾಂಧಿಜಿಯವರ ಸಂದೇಶಕ್ಕೆ ಅಂಡ್ರೂಸರ ಅನುಮೋದನೆ



ಹಿಟ್ಲರನು ಇಂದಿನ ಜಗತ್ತಿನ ಕೋಲಾಹಲದ ನಿವೃತ್ತಿಗಾಗಿ, ರೂಸ್ವೆಲ್ಟರ ಮಾತಿಗೆ ಕಿವಿಗೊಡಬೇಕೆಂದು ಗಾಂಧಿಜಿಯವರು ಕೊಟ್ಟ ಹೇಳಿಕೆಯನ್ನು, ಅನುಮೋದಿಸಿ ದೇಶಬಂಧು ಸಿ ಎಫ್ ಅಂಡ್ರೂಸರು, ಮಹಾತ್ಮಾಜಿಯವರು ಯೋಗ್ಯ ಸೂಚನೆ ಕೊಟ್ಟಿರುವರೆಂದೂ, ಜಗತ್ತಿನ ಎಂತಹ ವಿಪತ್ತನ್ನಾದರೂ ನೈತಿಕ ಕಾರ್ಯವು ಕೊನೆಗೊಳಿಸುವುದೆಂದೂ, ಹಿಂದೆ ಮಾಡಿದ ಪಾಪಕ್ಕಾಗಿ, ಎಲ್ಲಾ ಧರ್ಮ ವಿಶ್ವಾಸಿಗಳಾದ ಜನರೂ, ಶಾಂತಿಗಾಗಿ ಪ್ರಾರ್ಥನೆ ಸಲ್ಲಿಸಬೇಕೆಂದೂ ಹೇಳಿರುವರು.

ಮುಸ್ಲಿಂ ಲೀಗಿನಲ್ಲಿ ಒಡಕು

ಕಳೆದ ಡಿಲ್ಲಿಯ ಅಧಿವೇಶನದಲ್ಲಿ ಸರ್ ಸಿಕಂದರ್ ಹಯ್ಯಾತ್ ಖಾನರ ವಿಷಯದಲ್ಲಿ ಆದ ನಿಷೇಧ ಠರಾವಿನ ನಿಮಿತ್ತ, ಅವರ ಪಂಗಡದವರು ಮುಸ್ಲಿಂಲೀಗಿನಿಂದ ಹೊರಬರುವರೆಂದು ತಿಳಿಯುತ್ತದೆ. ಅವರು ಪ್ರತ್ಯೇಕ ಪಕ್ಷವೊಂದನ್ನು ಸ್ಥಾಪಿಸುವರು.

ಮುಸ್ಲಿಂ ಲೀಗಿನಲ್ಲಿ, ಹಿಂದೂ ಮುಸ್ಲಿಂ ಒಪ್ಪಂದದ ಅವಶ್ಯಕತೆಯ ಕುರಿತು ಸ್ಪಷ್ಟ ಅಭಿಪ್ರಾಯದ ಜನರ ಪಕ್ಷವೊಂದೂ ಇದೆ. ಅವರೂ ಕಾಂಗ್ರೆಸನ್ನು ಸೇರಬಹುದು.

ಹೊಸ ಶಾಸನಗಳು

ಯುದ್ಧ ಸಂಭವಿಸಿದಲ್ಲಿ ಪತ್ರಿಕೆಗಳಿಗೆ ನಿರ್ಬಂಧವೇ?

ಯುದ್ಧವು ಸಂಭವಿಸಿದಲ್ಲಿ, ಅನೇಕ ಹೊಸ ಶಾಸನಗಳು ಹೊರತಕ್ಕದ್ದಿವೆ. ಆಗ ಪತ್ರಿಕೆಗಳ ಮೇಲೂ ಕೆಲವು ನಿರ್ಬಂಧವು ಬರುವುದು.

ಆದರೆ ಪತ್ರಿಕೆಗಳನ್ನು ಪ್ರಿಂಟುಮಾಡುವುದಕ್ಕಿಂತ ಮೊದಲು, ಆ ವಿಷಯಗಳನ್ನೆಲ್ಲಾ, ಸರಕಾರಕ್ಕೆ ಕಳುಹಿಸಬೇಕೆಂಬಷ್ಟು ಕಠಿಣ ನಿರ್ಬಂಧವು ಬರಲಾರದೆಂದು ಊಹಿಸಲಾಗಿದೆ. ಹೀಗಿದ್ದರೂ ಸರಕಾರವು ಒಂದು ನಿಯಮಾವಳಿಯ ಪುಸ್ತಕವೊಂದನ್ನು ತಯಾರಿಸುವುದು. ಆ ಪುಸ್ತಕದ ನಿಯಮಗಳಿಗೆ ಸರಿ ನಡೆಯದ ಸಂಪಾದಕರನ್ನು ಶಿಕ್ಷಿಸಲಾಗುವುದು.

ಸಂದೇಹ ವಿಷಯಗಳಲ್ಲಿ ಸಂಪಾದಕರಿಗೆ ಹಿತಸೂಚನೆ ಕೊಡಲು ಪ್ರೆಸ್ ಎಡ್ವೈಸರ್‌ರನ್ನು ನೇಮಿಸಲಾಗುವುದು

ವರ್ಕಿಂಗ್ ಕಮಿಟಿ ಅಧಿವೇಶನ

ಇಂದಿನ ಜಗತ್ತಿನ ಘಟನೆಯ ಕುರಿತು ಕಾಂಗ್ರೆಸಿನ ಇತ್ಯರ್ಥ ಮಾಡಲು, ರಾಂಚಿಯಲ್ಲಿ ಬೇಗನೇ, ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆಯು ಸೇರುವುದಕ್ಕೆ, ಅದರ ಸದಸ್ಯರು ಯಾವಾಗ ಕರೆದರೂ, ಅಲ್ಲಿಗೆ ಬರಲು ಸಿದ್ಧರಿರಬೇಕೆಂದು ಪ್ರೆಸಿಡೆಂಟರು ಸೂಚನೆ ಕೊಟ್ಟಿದ್ದಾರೆ ಮೌಲಾನ ಅಜಾದರು ರಾಂಚಿಗೆ ತೆರಳಿದರು.

ಪೊಂಡಿಚೇರಿಯಲ್ಲಿ ಎಚ್ಚರಿಕೆ

ಪೊಂಡಿಚೇರಿಯಲ್ಲಿ ಗವರ್ನರರು ಯುದ್ಧದ ಕೋಲಾಹದಿಂದ ಎಚ್ಚರಗೊಂಡಿದ್ದಾರೆ. ದೀಪಸ್ತಂಭಗಳಲ್ಲಿ, ಟೆಲಿಸ್ಕೋಪುಗಳ ಮೂಲಕವಾಗಿ ಹಡಗುಗಳ ಚಲನವಲನಗಳನ್ನು ಬಹಳ ಜಾಗ್ರತೆಯಿಂದ ಪರೀಕ್ಷಿಸುತ್ತಿದ್ದಾರೆ.

ಯುದ್ಧ ಸಹಾಯ ಸಮಿತಿ

ವೈಸರಾಯರ ಹೊಸ ನಿರ್ಬಂಧ

ಯುದ್ಧ ಆರಂಭವಾದಲ್ಲಿ ಬ್ರಿಟಿಷ್ ಸರಕಾರಕ್ಕೆ ಸಂಪೂರ್ಣ ಬೆಂಬಲ ಕೊಡುವ ಸಲುವಾಗಿ ಯುದ್ಧ ಸಹಾಯ ಸಮಿತಿಯೊಂದನ್ನು ವೈಸರಾಯರು ರಚಿಸಿರುವರು.

ಗಾಂಧಿ-ಸರ್ದಾರರ ಭೇಟಿ

ಸಿಮ್ಲಾಕ್ಕೆ ಹೊರಡುವ ಗಾಂಧಿಜಿಯವರನ್ನು ಕಂಡು ಮಾತನಾಡಲು ಸರ್ದಾರ ಪಟೇಲರು ಡಿಲ್ಲಿಗೆ ತೆರಳಿದ್ದಾರೆ.

ಮಹಾತ್ಮಾಜಿಯವರು, ಮಹಾದೇವ ದೇಸಾಯಿಗಳೊಡನೆ ಸಿಮ್ಲಾಕ್ಕೆ ಹೊರಟರು.

ಗಾಂಧಿಜೀ — ವೈಸರಾಯರ ಭೇಟಿ

ಯೂರೋಪಿನ ಘಟನೆಗಳ ಪರಾಕಾಷ್ಠತೆ

ವೈಸರಾಯರು ಇಂದಿನ ಅಂತರ್ರಾಷ್ಟ್ರೀಯ ಗೊಂದಲದ ವಿಷಯ ಹಿಂದೂದೇಶದ ಪ್ರಮುಖ್ಯ ರಾಜಕೀಯ ಮುಖಂಡರೊಡನೆ ಬೇಗನೇ, ಒಂದು ಮಾತುಕತೆ ನಡೆಸಬೇಕೆಂದು ಆಲೋಚಿಸುತ್ತಿರುವರೆಂದೂ, ಈ ಬಗ್ಗೆ ಮಹಾತ್ಮಾಜಿಯವರಿಗೆ ಒಂದು ಆಮಂತ್ರಣಪತ್ರವನ್ನು ಕಳುಹಿಸಿರುವರೆಂದೂ ತಿಳಿದಿದೆ

ಭಾರತದಲ್ಲಿ ಯುದ್ಧ ಸಿದ್ಧತೆ

ಎಲ್ಲಾ ಕಡೆಗಳಲ್ಲಿಯೂ ವಯರ್‌ಲೆಸ್ಸ್ ವಾರ್ತೆಗಳ ಕುರಿತು ಲೈಸನ್ಸ್ ಪಡೆದವರ ಲೈಸನ್ಸನ್ನು ಹಿಂತೆಗೆಯುವುದಾಗಿ ತಿಳಿದಿದೆ.

ಹಿಂದೂದೇಶವನ್ನು ಬಿಟ್ಟು ಹೋಗುವವರೆಲ್ಲರನ್ನು ಹೊರಗೆ ಹೋಗದಂತೆ ನಿಲ್ಲಿಸಲಾಗಿದೆ.

ನರೇಂದ್ರರ ಬೆಂಬಲ

ಮಹಾಯುದ್ಧದಲ್ಲಿ ಬ್ರಿಟನಿಗೆ ತಮ್ಮ ಸಂಪೂರ್ಣ ಬೆಂಬಲವುಂಟೆಂದು, ಕಾಶ್ಮೀರ, ಗೋಲಿಯರ್, ರೇವಾ, ಕಾಂಬೇ, ಕಾಪುರ್ತಲ, ಜಯಪುರ, ನವನಗರ ಮೊದಲಾದೆಡೆಗಳಿಂದ ಬ್ರಿಟಿಷ್ ಸರಕಾರಕ್ಕೆ ತಂತಿ ಹೋಗಿದೆ.

ಹಿಂದೂದೇಶದಿಂದ ಹೋಗುವ ವಿದೇಶ ವಾರ್ತೆಗೆ ನಿರ್ಬಂಧ

ವಿದೇಶಕ್ಕೆ ಟೆಲಿಗ್ರಾಫ್ ಮೂಲಕ ವಾರ್ತೆ ಕಳುಹಿಸುವುದರ ಸಂಬಂಧವನ್ನು ಬೇಗನೇ ಹಿಂದೂ ದೇಶದಲ್ಲಿ ನಿಲ್ಲಿಸಲಾಗುವುದು.

ವಿದೇಶಕ್ಕೆ ಕಳುಹಿಸುವ ಎಲ್ಲಾ ಪತ್ರಗಳ ಕುರಿತು ವಿಶೇಷ ನಿರ್ಬಂಧವು ಹೊರಡಿಸಲಾಗಿದೆ.

ವಿಚಿತ್ರ ಪ್ರಪಂಚ!

ಹೆಂಡತಿಯನ್ನೇ ಅಡವಿಟ್ಟ!

ಬ್ರಿಟಿಷ್ ಸಿಪಾಯಿ ಆಗಿದ್ದು, ವಿಶ್ರಾಂತಿಹೊಂದಿ, ಪ್ಯಾರಿಸ್ ನಗರದಲ್ಲಿ ವಿಲಾಸಜೀವನ ಸಾಗಿಸುತ್ತಿದ್ದ ಟಾಮ್-ಸ್ಮಿತ್ ಎಂಬವನ ವಿಷಯವಿದು.

ಯುದ್ಧಕಾಲದಲ್ಲಿ ಸಿಪಾಯಿಯಾಗಿದ್ದನು. ಅನಂತರ ಪಿಂಚಣಿ ಸಿಕ್ಕಿತು. ಬೆಡಗಿನ ಜೀವನಕ್ಕಾಗಿ ಪ್ಯಾರಿಸಿಗೆ ಬಂದನು. ಅಲ್ಲೊಬ್ಬಳು ಸುಂದರಿ—ಮಿಲ್ಲೋಟ್ ಎಂಬವಳು ಗಂಟುಬಿದ್ದಳು. ಸ್ನೇಹ ಪ್ರಣಯಗಳಾಗಿ ಕೊನೆಗೆ ಮದುವೆಯೂ ಆಯಿತು. ಕೆಲವು ದಿನ ದಂಪತಿಗಳು ಸುಖಜೀವಿತವನ್ನು ಸಾಗಿಸಿದರು.

ಟಾಂಸ್ಮಿತ್‌ಗೆ ಕುಡಿಯಲು ಹಣಸಿಕ್ಕದೆ ಹೋಯಿತು! ಅವನಿಗೆ ಸಾಲ ಕೊಡುತ್ತಿದ್ದ ಒಬ್ಬ ಸಾಹುಕಾರ ಆಧಾರವಿಲ್ಲದೆ ಸಾಲಕೊಡಲು ಒಡಂಬಡಲಿಲ್ಲ. 'ನನ್ನ ಹೆಂಡತಿಯನ್ನೆ ಆಧಾರವಾಗಿ ಪಡೆಯಿರಿ' ಎಂದ. ಆಗಲಿ—ಎಂದರು ಸಾಹುಕಾರರು. ಪತ್ರಗಳು ಬರೆಯಲ್ಪಟ್ಟವು. ಆಕೆ ಹೊಸ ಯಜಮಾನನ ಮನೆ ಸೇರಿದಳು.

ಸ್ಮಿತ್ ಹಣವನ್ನು ಸಲ್ಲಿಸಲಿಲ್ಲ. ಕೋರ್ಟಿಗೆ ಬಂತು ವ್ಯವಹಾರ. ನನ್ನ ಹೆಂಡತಿ ನನಗೆ ಬಿಡಿಸಿಕೊಡಿ ಎಂದ ಸ್ಮಿತ್. 'ನನಗೆ ಈಗ ಇರುವ ಸ್ಥಳವೇ ಚೆನ್ನಾಗಿದೆ, ಯಾವ ತಾಪತ್ರಯವೂ ಇಲ್ಲ, ಒಪ್ಪಂದದಂತೆ ನಡೆಯಲು ಸಿದ್ಧ' ಎಂದಳು ಮಿಲ್ಲೋಟಾ. ಕೋರ್ಟಿನ ವಿಚಾರಣೆ ಮಾಡಿ ಒಪ್ಪಂದದಂತೆ ನಡೆಯಲು ಅವಕಾಶವಿತ್ತರು.

ಗೊತ್ತಿದೆಯೇ?

ಆಫ್ರಿಕಾದೇಶದ ಮಾಕೊಂಬಾ ಜಾತಿಯ ಜನರು ಹಸೀ ಮಾಂಸವನ್ನು ಉಪಯೋಗಿಸಲು ಹಲ್ಲುಗಳನ್ನು ಸೂಜಿಗಳಂತೆ ಮೊನೆಯಾಗಿ ಅವರ ವೈದ್ಯರಿಂದ ಮಾಡಿಸಿಕೊಳ್ಳುವರು.

ಮಾನಿಯಾರ್ಡರ್ ವಿಧಾನವು ೧೮೬೪ರಲ್ಲಿ ಕಂಡುಹಿಡಿಯಲ್ಪಟ್ಟಿತು.

ಬೀಳೀಕಾಗದವು ೧೮೪೩ರಲ್ಲಿ ತಯಾರ್ ಮಾಡಲ್ಪಟ್ಟಿತು.

ಪೆಟ್ರೋಲಿಯಂನಿಂದ ತೆಗೆದ ಸೀಮೆ ಎಣ್ಣೆಯು ೧೮೦೬ರಲ್ಲಿ ಬಳಕೆಗೆ ಬಂತು.

ಟ್ವೈನ್ ದಾರವು ೧೮೪೯ರಲ್ಲಿ ಕಂಡುಹಿಡಿಯಲ್ಪಟ್ಟಿತು.

ಯಂತ್ರಗಳಿಂದ ಸೂಜಿಗಳನ್ನು ತಯಾರಿಸುವಿಕೆಯು ಪ್ರಾರಂಭವಾದದ್ದು ೧೮೬೬ರಲ್ಲಿ.

ಆಫ್ರಿಕದ ಮಂತ್ರವಾದಿಗಳು

ಎಲ್ಸಿ ಆಸ್‌ಬರ್ನ್ ಎಂಬಾಕೆಯು ಫ್ರೆಂಚ್ ಕಾಂಗೋ ಮುಂತಾದ ಪ್ರದೇಶಗಳಲ್ಲಿ ಕಳೆದ ೫ ವರ್ಷಗಳಿಂದ ಸಂಚಾರಮಾಡಿ, ಅಲ್ಲಿನ ಸ್ಥಿತಿಗತಿಗಳನ್ನು ತಿಳಿದುಕೊಂಡು ಬಂದಿದ್ದಾಳೆ. ಅಲ್ಲಿರುವ ನಿಗ್ರೋಗಳಲ್ಲಿ ಆಚರಣೆಯಲ್ಲಿರುವ ಮಹೇಂದ್ರ ಜಾಲ, ಇಂದ್ರಜಾಲಗಳನ್ನು ಕಣ್ಣಾರೆ ಕಂಡುಬಂದಿದ್ದಾಳೆ.

ಆಕೆ ಕಣ್ಣಾರೆ ಕಂಡ ದೃಶ್ಯಗಳನ್ನು ಬಣ್ಣಿಸುತ್ತಿದ್ದಾಳೆ. ಹಳ್ಳಿಯವನೊಬ್ಬನು ಆಕೋಮಿನರ ಪವಿತ್ರ ಭರ್ಚಿಯೊಂದನ್ನು ಅಪಹರಿಸಿದನಂತೆ! ಆಗ ಆ ಕುಲದ ಯಜಮಾನನು ಮಂತ್ರ ಶಕ್ತಿಯಿಂದ, ಕಳ್ಳನನ್ನು ಶಿಕ್ಷಿಸಲು ನಿಶ್ಚಯಿಸಿದನು. ಆ ಕಾಲದಲ್ಲಿ ಆಸ್‌ಬಾರ್ನ್ ಕೂಡ ಅವರೊಡನೆ ಹೋದಳು.

ಕಳ್ಳನು ತನ್ನ ಗುಡಿಸಲಿನಲ್ಲಿ ಮಲಗಿದ್ದ; ಸುತ್ತಲೂ ದಪ್ಪ ಗೋಡೆ, ಕಿಟಕಿಗಳಿಲ್ಲ, ಬಲವಾದ ಮರದ ಕದವಿತ್ತು. ಯಜಮಾನನು ತನ್ನ ಅನುಯಾಯಿಗಳೊಡನೆ ಹೊರಗಡೆ ನಿಂತ, ಆಸ್ಬರ್ನ್ ಒಳಕ್ಕೆ ಹೋದಳು. ಮನೆಯೊಳಗಿರುವವರು ಅಪರಾಧಿ ಮತ್ತು ಆಸ್ಬರ್ನ್. ಹೊರಗಿನಿಂದ ಕದವನ್ನು ಹಾಕಿದರು. ಆಸ್ಬರ್ನ್ ತನ್ನ ಕೈಯಲ್ಲಿದ್ದ ಟಾರ್ಚ್ ಹತ್ತಿಸಿ, ಅಪರಾಧಿಯು ಮಲಗಿದ್ದ ಕಡೆಗೆ ಹಿಡಿದಳು. ೫ ನಿಮಿಷವಿಲ್ಲ—ಶಬ್ದವು ಆರಂಭವಾಯಿತು. ಪ್ರಾಯಶಃ ಆ ಕುಲದ ಯಜಮಾನನು ಹಾಕುತ್ತಿದ್ದ ಮಂತ್ರವೇ ಅದು. ಕೂಡಲೇ ಗಾಳಿಯಲ್ಲಿ ಶಬ್ದವೊಂದು ಕೇಳಿಬಂತು. ನೋಡಿದರೆ ಹೊಳೆಹೊಳೆಯುವ ಭರ್ಚಿಯೊಂದು ಅಪರಾಧಿಯ ಶರೀರವನ್ನು ಪ್ರವೇಶಿಸಿದೆ! ಕಳೆದು ಹೋಗಿದ್ದ ಭರ್ಚಿಯೇ ಅದು.

ಅನಂತರ ಆಸ್‌ಬಾರ್ನ್ ಸುತ್ತಲೂ ಪರೀಕ್ಷೆ ನಡೆಸಿದಳಂತೆ. ಮಂತ್ರದಿಂದ ವಿನಾ ಮತ್ತು ಬೇರೆ ಕಾರ್ಯಗಳಿಂದಲೂ ಅದು ಸಾಧ್ಯವಾದಂತೆ ಕಂಡುಬರಲಿಲ್ಲ!

ಸ್ಟಾಂಪುಗಳ ಶತಮಾನೋತ್ಸವ

ಶತಾಬ್ದ ಉತ್ಸವ. ಸ್ಟಾಂಪುಗಳಿಗೆ ೧೮೪೦ನೇ ಮೇ ತಿಂಗಳು ೬ನೇ ತಾರೀಖು ನೂರು ವರ್ಷಗಳು ತುಂಬುತ್ತವೆ. ಈ ಶತಮಾನೋತ್ಸವವನ್ನು ವೈಭವದಿಂದ ನೆರವೇರಿಸಲು ಲಂಡನ್ ನಗರದಲ್ಲಿ ಈಗಿನಿಂದಲೇ ಏರ್ಪಾಡುಗಳು ನಡೆಯುತ್ತಿರುವುವು. ಆ ಸಂದರ್ಭದಲ್ಲಿ ಅಂಚೆ ಸ್ಟಾಂಪುಗಳ ಪ್ರದರ್ಶನವೂ ಕೂಡಾ ಏರ್ಪಡಿಸುವರು. ಈ ಉತ್ಸವದ ಜ್ಞಾಪಕಾರ್ಥವಾಗಿ ಬ್ರಿಟಿಷ್ ಪೋಸ್ಟಲ್ ಇಲಾಖೆಯವರು ಬೇರೆಯಾಗಿಯೇ ಒಂದು ರೀತಿಯಾದ ಅಂಚೆಯ ಚೀಟುಗಳನ್ನು ಹೊರಡಿಸುವರಂತೆ! ಅಂಚೆ ಚೀಟಿ ಹತ್ತಿಸುವ ಪದ್ಧತಿಯು ಮೊಟ್ಟಮೊದಲು ೧೮೪೦ನೇ ಮೇ ೬ನೇ ತಾರೀಕಿಗೆ ಆಚರಣೆಗೆ ಬಂದಿತು.

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore. And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE

Estd 1906

CANARA BANK, LIMITED.

ಪಂಡಿತ ಡಿ. ಗೋಪಾಲಾಚಾರ್ಯರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರ

ಆಯುರ್ವೇದಾಶ್ರಮ :: ಮದರಾಸು

ಸ್ಟಾಕಿಸ್ಟರು

ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.



ಲೈಸೆನ್ಸ್ ಬೇಕಾಗಿಲ್ಲ

ಅಮೇರಿಕನ್ ರಿವಾಲ್ವರ್

ಅತ್ಯಾಧುನಿಕ ತಯಾರಿ 1939ರಲ್ಲೇ ಮೊದಲನೆಯ ಸಲ ತರಿಸಿದ್ದು. ಆಕಾರ ಮೇಲಿನ ಚಿತ್ರದಲ್ಲಿರುವಂತೆಯೇ ಉದ್ದ 7 ಇಂಚು, ಭಾರ ಸುಮಾರು 15 ಔನ್ಸುಗಳಷ್ಟು, 50 ಗುಂಡುಗಳನ್ನು ತನಗೆ ತಾನಾಗಿ ಅಂದರೆ ಆಟೊಮೇಟಿಕ್ ಆಗಿ ಹಾರಿಸಬಹುದು. ಬೆಲೆ ರೂ. 4-8-0 ಕೈಚೀಲ ಮದ್ದು ಗುಂಡುಗಳಿಗೆ 1000ಕ್ಕೆ ರೂ 3 ಚರ್ಮದ ಚೀಲ ಬೇಕಾದರೆ 1-12-0 ರಿವಾಲ್ವರಿನ ಯಂತ್ರಕ್ಕೆ ಬಿಡುವ ಎಣ್ಣೆ ಬೇಕಾದರೆ 0-12-0. ಆರ್ಡರಿನೊಂದಿಗೆ ಸಂಪೂರ್ಣ ಬೆಲೆಯ ಮೊತ್ತವನ್ನು ಕಳುಹಿಸಿಕೊಟ್ಟರೆ ಟಪ್ಪಾಲು ಖರ್ಚು ಮುಫತ್ತು.

ಸೂಚನೆ: ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಪ್ರಯತ್ನಿಸಿರಿ.

American Pistol Co (P. M. H.)

Post Box No. 27, Amritsar (India)

ಪತ್ರವ್ಯವಹಾರ

[ಬಾತ್ಮಿದಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ—ಸಂ. 'ಸ್ವ']

ಹರಿಜನರ ದೇವಸ್ಥಾನ ಪ್ರವೇಶ

ಹಿಂದೂ ಬಾಂಧವರಲ್ಲಿ ವಿನಂತಿ,

'ಹರಿಜನರ ದೇವಸ್ಥಾನ ಪ್ರವೇಶ'ವು ಇಂದು ನಮ್ಮ ಮುಂದಿರುವ ಮುಖ್ಯ ಪ್ರಶ್ನೆಗಳಲ್ಲಿ ಒಂದಾಗಿದೆ. ಕೆಲ ಸಮಯದ ಹಿಂದೆ ತಿರುವಾಂಕೂರು ಸಂಸ್ಥಾನದಲ್ಲಿಯೂ, ಇತ್ತೀಚೆಗೆ ಮದುರೆಯೇ ಮೊದಲಾದ ತಮಿಳು ನಾಡಿನ ಹಲವು ಕಡೆಗಳಲ್ಲಿಯೂ, ಹರಿಜನರು ದೇವಸ್ಥಾನಗಳನ್ನು ಪ್ರವೇಶಿಸುವಂತಾದ ಮೇಲೆ ಜನತೆಯು ಇದೇ ಪ್ರಶ್ನೆಯನ್ನು ವಿಧ ವಿಧವಾಗಿ ಆಲೋಚಿಸತೊಡಗಿದೆ. ಇದರಿಂದಲೇ ಧರ್ಮದ ಉನ್ನತಿಯೆಂದೂ, ಅವನತಿಯೆಂದೂ ಅಲ್ಲಲ್ಲಿ ವಾದಿಸುವವರಿದ್ದಾರೆ. ನಮ್ಮ ಜಿಲ್ಲೆಯೂ ಈ ವಿಷಯವನ್ನು ಸ್ವಲ್ಪ ಆಳಕ್ಕಿಳಿದು ವಿಚಾರಿಸುವುದುತ್ತಮ.

ಹರಿಜನರಿಗೆ ದೇವಸ್ಥಾನ ಪ್ರವೇಶವೀಯುವುದರಲ್ಲಿ ಆಲೋಚಿಸಬೇಕಾದ ವಿಷಯವೆಂದರೆ ಒಂದು ಮಾತ್ರ. ಅವರನ್ನು ಹಿಂದುಗಳೆಂದು ನಾವು ಭಾವಿಸುವುದಾದರೆ ಅವರಿಗೂ ದೇವಸ್ಥಾನಗಳಲ್ಲಿ ಪ್ರವೇಶವಿರಬೇಕು. ಅಲ್ಲವೆಂದಾದರೆ ಅಗತ್ಯವಿಲ್ಲ. ದೇವಸ್ಥಾನ ಪ್ರವೇಶಕ್ಕಿಂತಲೂ ಮೊದಲಾಗಿ ಹರಿಜನರ ಸಾಂಪತ್ತಿಕ ಸ್ಥಿತಿಯ ಸುಧಾರಣೆಗಾಗಿ ಕೆಲಸ ಮಾಡುವುದುತ್ತಮವೆಂದು ಕೆಲವರ ವಾದವಿದೆ. ಆ ಕೆಲಸವನ್ನು ಹರಿಜನ ಸೇವಾ ಸಂಘವು ಹಿಂದೂಸ್ಥಾನದಲ್ಲೆಲ್ಲಾ ಆದಷ್ಟು ವ್ಯವಸ್ಥೆಯಿಂದ ಮಾಡುತ್ತಿದೆ. ಆದರೆ, ಇಂದಿನ ಯಾವ ತಮ್ಮ ದುಸ್ಥಿತಿಯನ್ನು ಹರಿಜನರು ಸಹಿಸಿಕೊಂಡಿರುವರೋ ಅದನ್ನು ಇನ್ನು ಮುಂದೆ ಅವರು ಅಭಿವೃದ್ಧಿಯಾಗುತ್ತಾ ಹೋಗುವಾಗ ಸಹಿಸಿಕೊಳ್ಳಲು ಸಾಧ್ಯವಾಗಲಾರದು. ಆದ್ದರಿಂದ ಅವರ ಸಾಂಪತ್ತಿಕ ಸ್ಥಿತಿಯ ಸುಧಾರಣೆಯೊಂದಿಗೆ ಅಸ್ಪೃಶ್ಯತಾ ನಿವಾರಣೆಯೂ, ದೇವಸ್ಥಾನ ಪ್ರವೇಶವೂ ಒಟ್ಟಾಗಿ ಆಗಬೇಕೆಂಬುದೇ ನಮ್ಮ ಅಭಿಪ್ರಾಯವಿರುತ್ತದೆ.

ಹಿಂದೀ ಸ್ವಾತಂತ್ರ್ಯದ ಸಲುವಾಗಿ ಹೋರಾಡುತ್ತಿದ್ದ ಕಾಲದಲ್ಲಿಯೂ ಇಂದಿಗೆ ಸಾಮಾನ್ಯ ೨೦ ವರ್ಷಗಳಿಂದ ಮಹಾತ್ಮಾ ಗಾಂಧಿಯವರು ಹರಿಜನೋದ್ಧಾರದ ಕೆಲಸಕ್ಕಾಗಿ ಹೆಚ್ಚಾಗಿ ತಪಿಸುತ್ತಿದ್ದರು. ೧೯೩೨ರ ಕಾರಾಗ್ರಹದ ಕಾಲದಲ್ಲಿ ಅವರು ಹರಿಜನರನ್ನು ಹಿಂದೂ ಮತದಿಂದ ಪ್ರತ್ಯೇಕಿಸುವ ಸರಕಾರದ ಧೋರಣೆಯಿಂದ ತಪ್ಪಿಸುವ ಛಲದಲ್ಲಿ ಅಮೂಲ್ಯವಾದ ತಮ್ಮ ಪ್ರಾಣವನ್ನು ನೀಗುವುದಕ್ಕೂ ಸಿದ್ಧರಾಗಿದ್ದರು. ಹಾಗ್ಗಾಗಿ ಶುದ್ಧ ಸನಾತನ ಧರ್ಮದಲ್ಲಿ ನಿಷ್ಠಾವಂತರಾಗಿರುವ ಪಂಡಿತ ಮದನಮೋಹನ ಮಾಲವೀಯರೇ ಮೊದಲಾದ ಅನೇಕ ಹಿಂದೂ ಮುಖಂಡರು ಹರಿಜನೋದ್ಧಾರದ, ಹಾಗೂ ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ಹೋರಾಡುವ ಪ್ರತಿಜ್ಞೆಯನ್ನು ಮಾಡಿರುವರು. ಉತ್ತರ ಹಿಂದೂಸ್ಥಾನದ ಹಲವು ದೇವಸ್ಥಾನಗಳನ್ನು ಹರಿಜನರಿಗಾಗಿ ಅಂದೇ ತೆರೆದಿದ್ದರು. ಮಹಾತ್ಮರು ತಮ್ಮ ಬಿಡುಗಡೆಯಾದೊಡನೆ ದೇಶದಲ್ಲೆಲ್ಲಾ ಸಂಚರಿಸಿ, ನಿಧಿ ಸಂಗ್ರಹವಾಗುವಂತೆ ಮಾಡಿ, ಹರಿಜನ ಸೇವಕ ಸಂಘವನ್ನು ಸ್ಥಾಪಿಸಿದರು. ಅಂದಿನಿಂದ ಅವ್ಯಾಹತವಾಗಿ ನಡೆದಿರುವ ಕಾರ್ಯಗಳ ಕಾರಣದಿಂದಲೂ, ಸೇವಾ ಸಂಘದ ಸೆಂಟ್ರಲ್ ಬೋರ್ಡಿನ ಉಪಾಧ್ಯಕ್ಷರಾದ ಶ್ರೀ. ರಾಮೇಶ್ವರೀ ನೆಹರುಗಳ ಉತ್ತಮ ಪ್ರಚಾರದ ಧೆಸೆಯಿಂದಲೂ, ತಮಿಳು ನಾಡಿನ ಹರಿಜನ ಸಂಘದ ಅಧ್ಯಕ್ಷರಾದ ಶ್ರೀ. ವೈದ್ಯನಾಥ ಅಯ್ಯರರೇ ಮೊದಲಾದ ಮಹನೀಯರನೇಕರ ಅವಿಶ್ರಾಂತ ಪರಿಶ್ರಮದ ಮೇಲೆ ಒಂದೊಂದಾಗಿ ತಮಿಳು ನಾಡಿನ ಹಲವು ದೇವಸ್ಥಾನಗಳಲ್ಲಿಯೂ ಹರಿಜನ ಪ್ರವೇಶವು ನಡೆದು ಹೋಯಿತು.

ದೇಶದ ಸ್ಥಿತಿಯು ಹೀಗಿರುತ್ತಾ ನಾವೇಕೆ ಕಣ್ಮುಚ್ಚಿ ಕೂತಿರಬೇಕು? ಒಂದು ಕಾಲದಲ್ಲಿ ಇಡೀ ಪ್ರಪಂಚಕ್ಕೆ ಜ್ಞಾನದ ಬೆಳಕನ್ನಿತ್ತ ಶ್ರೀ ಮಧ್ವಮುನಿಗಳ ಜನ್ಮ ಭೂಮಿಯೇ ನಮ್ಮ ಜಿಲ್ಲೆಯು. ಇಲ್ಲಿಯೇ ಶ್ರೀ ಕನಕದಾಸರಿಗೆ ಕಾಣಿಸಿಕೊಳ್ಳುವುದಕ್ಕಾಗಿ ಶ್ರೀ ಕೃಷ್ಣನು ಅವರ ಕಡೆಗೆ ತಿರುಗಿ ನಿಂತದ್ದು. ಹಿಂದೂ ಮತದಲ್ಲೊಂದು ಕ್ರಾಂತಿಯನ್ನೆಬ್ಬಿಸಿ, ಸಂಘಟನೆಯಿಂದ ಶಕ್ತಿಯನ್ನು ಹೆಚ್ಚಿಸಿದ ಶ್ರೀ ವಾದಿರಾಜ ಸ್ವಾಮಿಗಳೂ ಇಲ್ಲಿಯೇ ಆಗಿ ಹೋದವರು. ಹೀಗಿದ್ದು, ಇಂತಹದೊಂದು ಮಹತ್ವದ ಪ್ರಶ್ನೆಯಲ್ಲಿ ಈ ಹೊತ್ತು ನಮಗೇಕೆ ಮೌನದಿಂದಿರಬೇಕು? ಎಲ್ಲವನ್ನೂ ಬೇರೆಯವರು ಮಾಡಿ ಮುಗಿಸಿದ ಮೇಲೆ ನಾವು ಮುಂದೊತ್ತಬಹುದೆಂಬುದು ಪೌರುಷವಲ್ಲ. ತಾಯಿಯೆಂದಾದವಳ ಬಳಿಯಲ್ಲಿ ನಿಲ್ಲುವುದಕ್ಕೆ ಕೂಡ ಅನರ್ಹನಾದ ಮಗನೊಬ್ಬನ ಗತಿಯು ಹೇಗಾಗಬೇಕು? ಹಿಂದೂ ದೇವಸ್ಥಾನಗಳಲ್ಲಿ ಹಿಂದೂಗಳಾದ ಯಾರಿಗಾದರೂ ಎಡೆಯಿಲ್ಲವೆಂಬುದು ನ್ಯಾಯವೆ? "ದೈವೀಕ ಮತ್ತು ರಾಜಕೀಯಗಳಲ್ಲಿ ಎಲ್ಲರೂ ಸಮಾನ"ವೆಂಬುದು ರೂಢಿಯಲ್ಲಿ ಕೂಡಿಟ್ಟ ಮಾತಾಗಿದೆ. ಸನಾತನ ಧರ್ಮದ ಶ್ರೇಯಸ್ಸನ್ನು ಬಯಸುವವರು ಸ್ವಲ್ಪ ದೂರದೃಷ್ಟಿಯಿಟ್ಟು ವಿಚಾರಿಸಬೇಕಾಗಿದೆ. ಧರ್ಮವು ಜೀವ ಸಮಾನವಾದರೆ, ಸಮಾಜವು ದೇಹದಂತಿದೆ. ಸಜ್ಜಸ್ಥಿತಿಯು ಹೀಗಿರುತ್ತಾ, ಸಮಾಜವು ಶಿಥಿಲವಾದಲ್ಲಿ ಧರ್ಮದ ಗತಿಯು ಏನಾಗಬಹುದೆಂಬುದನ್ನು ತಿಳಿಯಬೇಕು. ೭ ಕೋಟಿ ಹರಿಜನರನ್ನು ಕಳಕೊಂಡು ಬಲಹೀನವಾಗುತ್ತಾ ಬಂದಲ್ಲಿ ಹಿಂದೂ ಮತದ ನೆಲೆಯೆಲ್ಲಿ?

ಇನ್ನಾದರೂ ನಾವು ವಿಚಾರಿಸಬೇಕು. ಅಸ್ಪೃಶ್ಯತೆಯು ಅತ್ಯಂತ ವಿಶೇಷವಾಗಿ ನೆಲೆಗೊಂಡಿದ್ದ ಮಲಬಾರು ಪ್ರಾಂತ್ಯದಲ್ಲಿ ದೇವಸ್ಥಾನ ಪ್ರವೇಶದ ಕಾನೂನಾಯಿತು. ಕಾನೂನು ವಿನಹ ಪ್ರವೇಶವಾಗುವ ಕ್ರಮವು ಮಧುರೆಯಲ್ಲಿ ನಡೆದು ಹೋಯಿತು. ಈ ರೀತಿ ಎಲ್ಲೆಲ್ಲಿಯೂ ಕೆಲಸವಾಗುವ ತನಕ ಮತ್ತು ಕಾನೂನೇ ಅಧಿಕಾರಿಕವಾಗಿ ಅದನ್ನು ಮಾಡಿಸುವ ತನಕ, ಕಾದಿರದೆ ನಮ್ಮ ಅಭಿಪ್ರಾಯಗಳನ್ನು ಎಚ್ಚತ್ತ ಪ್ರಪಂಚದ ಮುಂದಿರಿಸುವುದು ಕರ್ತವ್ಯವಿದೆ. ಪರ ಮತಾವಲಂಬಿಗಳಿಗಿರುವ ಸ್ಥಾನವು ಕೂಡಾ ಹಿಂದುಗಳಾಗಿರುವ ಹರಿಜನರಿಗೆ ಹಿಂದೂ ದೇವಾಲಯಗಳಲ್ಲಿಲ್ಲ! ಕೊಳಕು ಪ್ರಾಣಿಗಳು ಹೋಗವಲ್ಲಿ ವರೆಗೆ ಕೂಡ ಅವರಿಗೆ ಹೋಗಲೆಡೆಯಿಲ್ಲ! ಇದೆಂತಹ ನಿರ್ದಯ ನೀತಿ? ಆತ್ಮವು ಸರ್ವಭೂತಗಳಲ್ಲಿಯೂ ಸಮಾನವೆಂದು ಸಾರುವ ಧರ್ಮವೇ ಮೂಲವಾಗಿರುವ ಧರ್ಮವು ಅದೇ ಧರ್ಮವನ್ನು ಜೀವದಂತೆ ನಂಬಿರುವವರನ್ನು ಹಿಂದುಳಿದವರೆಂದು ನಿಂದಿಸುವುದೂ ಧರ್ಮವೇ?

ಧರ್ಮಾಭಿಮಾನಿಗಳಾದ ಹಿಂದೂ ಬಾಂಧವರೆ! ಎಷ್ಟೋ ವರ್ಷಗಳಿಂದ ಕೂಡಿ ಹಾಕಿರುವ ಈ ಅಸ್ಪೃಶ್ಯತೆಯ ಕೊಳೆಯನ್ನು ಇಂದೇ ಹೊತ್ತು ಹಾಕುವ. ಹಿಂದೂದೇಶವು ಸಂಪೂರ್ಣ ನಾಶವಾಗುವ ಮೊದಲು ಮತ್ತು ಹಿಂದೂಮತವು ಮುಳುಗಿ ಹೋಗುವ ಮೊದಲು ನಮ್ಮನ್ನು ನಾವು ತಿದ್ದಿಕೊಳ್ಳುವ. ನಮ್ಮ ಹೃದಯ ಮಂದಿರಗಳನ್ನೂ ಅವುಗಳೊಂದಿಗೆ ದೇವಮಂದಿರಗಳನ್ನೂ ಹಿಂದುಳಿದ ಭಾಂಧವರಿಗೆ ತೆರೆಯುವ. ಅಲ್ಲಿ ನಾವೆಲ್ಲರೂ ಒಂದಾಗುವ. ಒಂದಾದ ನಮ್ಮ ಬಲವನ್ನು ಧಾರ್ಮಿಕ ಪ್ರಪಂಚದಲ್ಲಿಯೂ ರಾಜಕೀಯ ರಂಗದಲ್ಲಿಯೂ ಚೆನ್ನಾಗಿ ತೋರಿಸುವ. ಸ್ವಾತಂತ್ರ್ಯ ಸಾಮ್ರಾಜ್ಯವನ್ನು ಆ ಮೂಲಕ ಗಟ್ಟಿಯಾಗಿ ಕಟ್ಟುವ. ಪ್ರತಿಯೊಬ್ಬ ಆರ್ಯ ಋಷಿಯೂ ಒಂದೊಂದು ಕಾಲದಲ್ಲಿ ಒಂದೊಂದು ಕ್ರಾಂತಿಯನ್ನುಂಟುಮಾಡಿರುವುದು ಚರಿತ್ರೆಯಾಗಿ ನಿಂತಿದೆ. ಅದೆಲ್ಲಾ ಧರ್ಮದ ಉನ್ನತಿಗಾಗಿಯೇ ಇತ್ತು. ಇಂದಿನವರಾದ ನಾವಾದರೂ ಯುಗ ಧರ್ಮವನ್ನನುಸರಿಸಿ, ಋಷಿ ಋಣವನ್ನು ತೀರಿಸುವ. ಅದಕ್ಕಾಗಿ ಹಿಂದೂ ಬಾಂಧವರೆಲ್ಲರೂ ಅಲ್ಲಲ್ಲಿ ಆದಷ್ಟು ಸಭೆಗಳನ್ನು ಮಾಡಿ, ಭಾಷಣಗಳನ್ನು ಕೊಟ್ಟು, ಪತ್ರಿಕೆಗಳ ಮೂಲಕ ಅಭಿಪ್ರಾಯಗಳನ್ನು ಪ್ರಕಟಿಸಿ ಜನಸಾಮಾನ್ಯರಲ್ಲಿ ಸಂಭಾಷಣೆಗಳನ್ನು ಮಾಡಿ ಅನುಕೂಲ ಪರಿಸ್ಥಿತಿಗೆ ಜನಮತವನ್ನು ಸಂಗ್ರಹಿಸುವ ಕೆಲಸಮಾಡಿ ಹರಿಜನರ ದೇವಸ್ಥಾನ ಪ್ರವೇಶ ಶಿಕ್ಷವು ದರಲ್ಲಿ ಸಹಾಯ ಮಾಡಬೇಕಾಗಿ ವಿನಂತಿ.

ಎಚ್. ವಿ. ಅಪಪ್ಪ,
ಅಧ್ಯಕ್ಷ, ಜಿಲ್ಲಾ ಹರಿಜನ ಸೇವಕ ಸಂಘ

ಸಾಹುಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾಹುಕಾರ ಮಹಾಲ್, ಮಂಗಳೂರು.

[illegible]

ದಮ್ಮು ಹತ್ತಿದವರ ಶ್ವಾಸಕೋಶವು [illegible]

ಪುರೋಹಿತ ಶ್ವಾಸಹಾರಿಯಲ್ಲಿ [illegible] ಗಳು ಸರಿಯಾಗಿ [illegible] ದಮ್ಮಿನ [illegible]

[illegible]

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಸಂದರ್ಭವು ಪೂರ್ಣವಾದಾಗ ಕಾಂಗ್ರೆಸು ಸಂಗ್ರಾಮ ಹೂಡುವದು

-ಬೋಸರಿಗೆ ಉತ್ತರ-

ಬಂಗಾಳಕ್ಕೆ ಬೀಹಾರದ ಪ್ರತೀಕಾರ

ಕಾಂಗ್ರೆಸಿನಲ್ಲಿ ಹಿಂಸೆಯ ಪ್ರವೇಶ

ಸುಭಾಸರು, ಹೋದ ಹೋದ ಕಡೆಗಳಲ್ಲಿ, ಕಾಂಗ್ರೆಸಿನ ಇಂದಿನ ಪ್ರಮುಖರು, ಯೋಗ್ಯ ಸಂದರ್ಭ ಬಂದರೂ ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊಡನೆ ಸಮರ ಹೂಡಲು ತಯಾರಿಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ಅನೇಕ ಕಡೆಗಳಿಂದ ಹಲವು ಉತ್ತರಗಳು ಬಂದಿವೆ. ಬೋಸರು ತಮ್ಮ ಈ ವಿಚಿತ್ರವಾದವನ್ನು ಬಿಡುವ ಹಾಗೆ ಕಂಡುಬರುವುದಿಲ್ಲ. ಬೀಹಾರದಲ್ಲಿ ಪ್ರವಾಸ ಮಾಡುತ್ತಿದ್ದಾಗ ಬಂಗಾಳದ ಪ್ರಮುಖ ಧುರೀಣರೇ ಆದ ಡಾ। ಪ್ರಫುಲ್ಲಚಂದ್ರ ಘೋಷರು ವರ್ಕಿಂಗ್ ಕಮಿಟಿಯ ಮೇಲೆ ಬೋಸರು ಹೊರಿಸಿರುವ ಆಕ್ಷೇಪಕ್ಕೆ ಈ ರೀತಿಯಿಂದ ಉತ್ತರ ಕೊಟ್ಟಿರುವರು. —

'ಕಾಂಗ್ರೆಸು ವರ್ಕಿಂಗ್ ಕಮಿಟಿಯು ಸುಧಾರಣಾ ವಿಚಾರವನ್ನು ಸಂಪೂರ್ಣ ಬಿಟ್ಟಿದೆಯೆಂಬ ಪ್ರಚಾರವು ಕೇವಲ ಭ್ರಮಾತ್ಮಕವಾದದ್ದು. ಸಂದರ್ಭವು ಬಂದಾಗ, ವರ್ಕಿಂಗ್ ಕಮಿಟಿಯು ಸಮರ ಹೂಡಲು ಹಿಂಜರಿಯಲಾರದು ' ಎಂದು ಢಕ್ಕಾದಲ್ಲಿ ನೆರೆದ ಮಹಾಸಭೆಯೊಂದರಲ್ಲಿ ವ್ಯಕ್ತಪಡಿಸಿದರು.

ಬಂಗಾಳಕ್ಕೆ ಬೀಹಾರದ ಪ್ರತೀಕಾರವೇ?

ಆದರೆ ಬೋಸರಿಗೆ ಇದು ಯಾವುದೂ ಕೇಳುವಂತೆ ಕಂಡುಬರುವುದಿಲ್ಲ. ಬೀಹಾರದ ಅವರ ಯಾತ್ರೆಯಲ್ಲಿ ಈ ಕುರಿತು ಯಾವ ವ್ಯತ್ಯಾಸದ ಮಾತೂ ಆಡಲಿಲ್ಲ. ಇದಿ ಬೀಹಾರದ ಯಾತ್ರೆಯೇ ಅವರಿಗೆ ಒಂದು ರೀತಿಯಿಂದ ಬಹಳ ಬೇಸರದ್ದಿತ್ತು. ಪಾಟ್ನಾ ಸ್ಟೇಶನಿಗೆ ಬೋಸರು ಬಂದು ತಲುಪಿದ ಕೂಡಲೇ, ಹಲವು ಯುವಕರು, ಬೋಸರ ವಿರುದ್ಧ ಘೋಷಣೆಗಳನ್ನೆತ್ತಿದರು. ಬೋಸರು ಈ ಘೋಷಣೆಯ ಕಡೆಗೆ ಮೌನವಾಗಿದ್ದರು. ಆ ಜನರನ್ನು ಬಲಾತ್ಕಾರದಿಂದ ಹಿಂದೆ ದೂಡಬೇಕಾಯಿತು.

ಕೂಡಲೇ ಇನ್ನೊಂದು ವಿದ್ಯಾರ್ಥಿಗಳ ಗುಂಪು, 'ಹಿಂದೆ ಹೋಗಿ' ಎಂಬ ಘೋಷಣೆ ಮಾಡಿ ಮುಂದುವರಿದು ಬಂತು. ಅಖಿಲ ಭಾರತ ಕಾಂಗ್ರೆಸು ಅಧಿವೇಶನದ ಸಮಯ ಬಂಗಾಳದ 'ಪಟಿಂಗ'ರು, ಬಾಬೂ ರಾಜೇಂದ್ರ ಪ್ರಸಾದರನ್ನು ಹೇಗೆ ಕೆಣಕಲು ಬಂದಿದ್ದರೋ ಹಾಗೆಯೇ ಇವರು ಬೋಸರ ಮೇಲೆ ಬೀಳಲು ಬಂದಂತಿತ್ತು. ಇದನ್ನು ಕಂಡು ಹಬ್ಬ ಬಂಗಾಳಿಗಳು, 'ಇದು ಮುಯ್ಯಿಗೆ ಮುಯ್ಯೇ?' ಎಂದು ಕೇಳಿದರು. ನಮಗೆ ನಿನ್ನೆ ಉಣಬಡಿಸಿದವರು, ಈ ಹೊತ್ತು ನಮ್ಮಲ್ಲಿಗೆ ಉಣ್ಣಲಿಕ್ಕೆ ಬಂದಿದ್ದಾರೆ, ಬೀಹಾರಿಗೆ ಬಂಗಾಳಿಗಳು ಕೊಟ್ಟ ಊಟವು, ಬೀಹಾರಿನಲ್ಲಿ ಬಂಗಾಳಿಗಳಿಗೂ ತಯಾರಾಗಿದೆ' ಹೀಗೆಂದು ಕರಪತ್ರಗಳು ಹಂಚಲಾಗಿತ್ತು.

ಸಭೆ ಚೆದರಿತು!

ಬಂಕಿಪುರದಲ್ಲಿ ಆದ ಒಂದು ದುರ್ಘಟನೆಯಿಂದ ಇಡೀ ಸಭೆಯೇ ಗೊಂದಲದಲ್ಲಿ ಚೆದರಬೇಕಾಯಿತು. ಬೋಸರು ಮಾತನಾಡಲು ಎದ್ದುನಿಂತಾಗ, ಜೋಡುಗಳನ್ನು ಆ ಕಡೆಗೆ ಎಸೆದರು. ಕಡೆಗೆ ಸಭೆಯು ಹಾಗೆಯೇ ಚೆದರಬೇಕಾಯಿತು.

ಹೀಗೆ ಬಿಹಾರದಲ್ಲಿ ಬೋಸರಿಗೆ ಸ್ವಾಗತವು ಸಿಕ್ಕಿತು! ಬೋಸರ ಪಕ್ಷಕ್ಕೆ ಎಷ್ಟರ ಮಟ್ಟಿಗೆ ಜನರ ಸ್ವಾಗತವಿದೆಯೆಂದು ಇದರಿಂದ ತಿಳಿಯುವುದರೊಡನೆ ಜನಕೆಯಲ್ಲಾದರೂ, ಪ್ರಾಂತೀಯತೆಯ ದುರಭಿಮಾನ, ಹಿಂಸಾಮತಿಗಳು ಎಷ್ಟರ ಮಟ್ಟಿಗೆ ತುಂಬಿವೆಯೆಂದೂ ಗೊತ್ತಾಗುವುದು. ಬೋಸರೇ ಹೇಳುತ್ತಾರೆ:

"ನನಗೆ ಅಲ್ಲಿ ಸ್ವಾಗತಕೊಡಬೇಕೆಂದು ನಾನು ಇಚ್ಛಿಸುವುದಿಲ್ಲ. ಸಾಮ್ರಾಜ್ಯ ಶಾಹಿಯೊಡನೆ ರಣಕಹಳೆಯನ್ನು ಊದಲು ನಾನು ಅಭಿಲಾಷೆಪಟ್ಟಿದ್ದೆನು. ನಾನು ರಾಷ್ಟ್ರದ ಸಂಗ್ರಾಮದಲ್ಲಿ ಮುಂದುವರಿವ ಯೋದ್ಧರನ್ನು ನಿಷ್ಠೆಯಿಂದ ಹಿಂಬಾಲಿಸುವೆನು" ಎಂದು ಹೇಳುತ್ತಾರೆ.

ಈ ರಣಕಹಳೆ, ಈ ಸಂಗ್ರಾಮ ಸಿದ್ಧತೆ ಇವುಗಳನ್ನು ಕಾಂಗ್ರೆಸು ವರ್ಕಿಂಗ್ ಕಮಿಟಿಯನ್ನು ದೂರದೆ ಬೋಸರು ಪ್ರಚಾರಮಾಡಲು ಆಗುವುದಿಲ್ಲವೇ?

ಕಾಂಗ್ರೆಸಿನಲ್ಲಿ ಹಿಂಸೆ ಮುತ್ತಿದೆ

ಹಿಂದೂದೇಶದ ಜಾತಿಜಾತಿಗಳಲ್ಲಿ ಹಿಂಸಾ ಪ್ರವೃತ್ತಿಯು ಬೆಳೆದಿದೆ, ಇದರ ಫಲವಾಗಿ ಇತ್ತೀಚೆಗೆ ಆದ ಮಾರಾಮಾರಿಗಳಲ್ಲಿ ಹಲವರು ಪ್ರಾಣ ಕಳಕೊಂಡಿದ್ದಾರೆ, ಹಲವರು ಗಾಯಗೊಂಡಿದ್ದಾರೆ. ಕಾಂಗ್ರೆಸು ಸಭೆಗಳೇ ಹಲವು ಕಡೆಗಳಲ್ಲಿ ಹಿಂಸೆಯಿಂದ ಕೊನೆಗೊಂಡಿವೆ.

ಕಾಂಗ್ರೆಸಿನ ತತ್ವ

ಕಾಂಗ್ರೆಸಿನ ಒಳಗೇ ಹಿಂಸೆಯು ಬಂದಿದೆ; ಕೆಲವು ವೈಯುಕ್ತಿಕ ಕಾಂಗ್ರೆಸು ಕೆಲಸಗಾರರ, ತಮ್ಮ ಮಾತು, ಬರವಣಿಗೆಗಳಲ್ಲಿ ಹಿಂಸೆಯು ತೋರುತ್ತದೆ. ಕಾಂಗ್ರೆಸಿನ ತತ್ವವು ಶಾಂತಿ ಮತ್ತು ಅಹಿಂಸೆ. ಆದರೆ ಅನೇಕ ಕಾಂಗ್ರೆಸು ಕೆಲಸಗಾರರ ನಡತೆಗಳಲ್ಲಿ ಇಂದು ಅದು ಕಂಡುಬರುವುದಿಲ್ಲ. ಅಖಿಲಭಾರತ ಕಾಂಗ್ರೆಸು ಸಂಸ್ಥೆಯಿಂದ ಆರಂಭಿಸಿ, ದೇಶದ ಎಲ್ಲಾ ಅಧೀನ ಸಂಸ್ಥೆಗಳೂ ಈ ವಿಷಯದ ಕಡೆ ಗಮನಕೊಡದಿದ್ದಲ್ಲಿ ಕಾಂಗ್ರೆಸಿಗೆ ಪ್ರಬಲ ಆಘಾತವಾಗುವುದು. ಮಾತಿನಲ್ಲಾಗಲಿ, ಕೃತಿಯಲ್ಲಾಗಲಿ ಹಿಂಸೆ ಕಾಣುವುದು ಕಾಂಗ್ರೆಸಿನ ಮೂಲತತ್ವಕ್ಕೇ ವಿರುದ್ಧವಾದುದು.

ಸಮತಾವಾದಿಗಳು ಜಯಶಾಲಿಗಳಾಗುವುದಿಲ್ಲ

ಅಲ್ಲಹಾಬಾದ್ ವಿಶ್ವವಿದ್ಯಾಲಯದ ಪ್ರೊಫೆಸರ್ ಆಧರ್‌ಕರರು ತಮ್ಮೊಂದು ಭಾಷಣದಲ್ಲಿ ಹೀಗೆಂದಿರುವರು. —

'ಹಿಂದೂದೇಶದ ರಾಜಕೀಯ ಪ್ರಗತಿಯನ್ನು ವಿಚಾರಿಸಿದರೆ ಸಮತಾವಾದವು ಖಂಡಿತ ಅಪಜಯ ಹೊಂದುವುದು. ಸಮತಾವಾದಿಗಳು, ಮ್ಯಸ್ಕರ, ಪ್ರತ್ಯಕ್ಷ ಚಳವಳ, ಜನತಾಕ್ರಾಂತಿ ಮೊದಲಾದ ವಿಷಯವಾಗಿ ಪ್ರಯೋಗ ಮಾಡಲು ನೋಡುತ್ತಾರೆ, ಆದರೆ ಅದರ ಪರಿಣಾಮವನ್ನು ತಡೆಯಲು ನಿಜವಾಗಿಯೂ ಅವರಲ್ಲಿ ಯಾವ ಸಾಮರ್ಥ್ಯವೂ ಇಲ್ಲ. ಸಮತಾವಾದಿಗಳು ರಾಷ್ಟ್ರವನ್ನು ಇನ್ನಷ್ಟು ನಿರಾಶೆ ಸಮಸ್ಯೆಗಳ ಕಡೆಗೆ ಒಯ್ಯುತ್ತಾರೆ. ಅವರು ಭೂಮಿಯಲ್ಲಿ ಸ್ವರ್ಗವು ಬರುವುದೆಂದು ಭರವಸೆ ಹೇಳುತ್ತಾರೆ, ಆದರೆ ನಿಜವಾಗಿ ಭೂಮಿಯನ್ನು ನರಕಕ್ಕೆ ಇಳಿಸುವ ಕಾರ್ಯವನ್ನೇ ಅವರು ಕೈಗೊಂಡಿರುವರು. ಸಾಮ್ರಾಜ್ಯಶಾಹಿಯ ದಂಡನೆಯನ್ನು ಪರಿಣಾಮಕಾರಿಯಾಗಿ ತಡೆಯಬೇಕಾದಲ್ಲಿ ಸೈನ್ಯ ಸಂಘಟನೆಯಿಲ್ಲದೆ ಸಾಧ್ಯವಿಲ್ಲ.'

ವರ್ಷಕಾಲದ ಉದರಯಾತನೆಯು ಗುಣವಾಯಿತು

ಗುಣಪಡಿಸಲಸಾಧ್ಯವೆಂದು ನೀವು ನೆನಸಿರುವ ಉದರ ಯಾತನೆಗೆ ನೀವು ಬಲಿಯಾಗಿರುವಿರೇ? ಮಿ ಎಸ್. ಟಿ ಡಬ್ಲ್ಯು ರವರು, ತನ್ನಂತೆ ಬಹುಕಾಲದಿಂದ ಅಂಥಾ ಹೊಟ್ಟೆನೋವಿನ ಸಂಕಟದಿಂದ ನರಳುತ್ತಿರುವವರ ವಿಷಯ ಕನಿಕರಪಡುತ್ತಿದ್ದಾರೆ. ಅಂಥಾ ಸಂಕಟದಿಂದ ಈಗ ಅವರು ಸಂಪೂರ್ಣ ಗುಣಹೊಂದಿ ಸಂತೋಷಪಡುತ್ತಾ ಈ ರೀತಿಯಾಗಿ ಬರೆಯುತ್ತಾರೆ 'ಈ ಉದರ ಯಾತನೆಯಿಂದ ಸಂಕಟಪಡುತ್ತಿರುವ ದುರ್ಬಲರು ತಮ್ಮ ಯಾತನೆಯು ಬಹುಕಾಲದ್ದಿದ್ದರೂ ಅದನ್ನು ಗುಣಪಡಿಸುವ ಹಾದಿಯು ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರಿನಲ್ಲಿದೆಯೆಂದು ತಿಳಿಯಲಿ'

'ವರ್ಷಗಟ್ಟಲೆ ನಾನು ಹೇಳಲಸಾಧ್ಯವಾದ ಪ್ರಾಣಸಂಕಟದಿಂದ ನರಳಿದೆನು. ಯಾವ ಆಹಾರವನ್ನು ಸೇವಿಸಲು ಭಯವಾಗುತಿದ್ದುದರಿಂದ ಜೀವಿಸುವ ಹಂಚಿಕೆ ಯಾವುದೆಂದು ಆಶ್ಚರ್ಯಪಟ್ಟೆನು. ಉದರಶೂಲೆ, ವ್ರಣ, ಅಜೀರ್ಣ ಮುಂತಾದವುಗಳಿಗೆ ಚಿಕಿತ್ಸೆ ನಡೆಸಿದೆನು. ಒಂದು ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರಿನ ಜಾಹೀರಾತನ್ನು ಕಂಡು ಅದನ್ನೊಂದು ಬಾರಿ ಪರೀಕ್ಷಿಸಲು ನಿಶ್ಚಯಿಸಿದೆನು. ಈಗ ನಾನು ಏನನ್ನು ಬೇಕಾದರೂ ತಿನ್ನುತ್ತಿರುವೆನು. ನನ್ನ ಯಾತನೆಯ ವಿಷಯ ಪರಿಚಯವುಳ್ಳವರು ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರಿನಿಂದ ಗುಣವಾದೆನೆಂದು ತಿಳಿಸಲು ಆಶ್ಚರ್ಯಪಡುತ್ತಿರುವರು. 67 ವರ್ಷದ ಪ್ರಾಯಸ್ಥನು ಮತ್ತು ನನ್ನ ಜೀವನವೇ ಈ ಮದ್ದಿಗೆ ಒಂದು ಯೋಗ್ಯ ಪತ್ರವಾಗಿದೆ'

ನಿಮ್ಮ ಉದರವೇದನೆಯಿಂದ ಈ ರೀತಿಯ ಖಂಡಿತವಾದ ಹಾದಿಯಿಂದ ನಿವೃತ್ತರಾಗಿರಿ. ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರನ್ನು ಕೊಂಡುಕೊಳ್ಳುವಂತ ಜಾಗ್ರತರಾಗಿ. ಬಾಟ್ಲಿಯ ಮೇಲೆ

Alex. C. Maclean

ಎಂಬ ದಸ್ಕತೂ ಪೆಟ್ಟಿಗೆಯ ಮೇಲೆ ದಸ್ಕತೂ ಕೆಂಪು ಸೀಲೂ ಇದ್ದರೆ ಮಾತ್ರ ಅದು ನಿಜವಾದ ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರು. ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ—ಬಾಟ್ಲಿಗಳಲ್ಲಿಯೂ ಪೆಟ್ಟಿಗೆಗಳಲ್ಲಿಯೂ (ಹುಡಿ ಮತ್ತು ಮಾತ್ರೆ) ಸಿಕ್ಕುತ್ತದೆ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

702

THE PIE-MONEY BANK LTD.,
Maidan Road, MANGALORE.

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auctions . . ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—

K. R. GURU, *Managing Director*

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಬ್ರಿಟಿಷರ ಯುದ್ಧಮಂದಿರದ ಕೆಲವು ರಹಸ್ಯಗಳು!

[ಇಂದಿನ ಯುದ್ಧದ ಕೋಲಾಹಲದ ಸಂದರ್ಭದಲ್ಲಿ ಜಗತ್ತಿನ ಪ್ರಬಲ ರಾಷ್ಟ್ರಗಳು ಯುದ್ಧ ಸಿದ್ಧತೆ ಮೊದಲಾದವುಗಳ ರಹಸ್ಯವನ್ನು ತಿಳಿಯುವುದು ಬಹಳ ಅಗತ್ಯವಿದೆ ಬ್ರಿಟಿಷ್ ಸರಕಾರವು ಜಗತ್ತಿನಲ್ಲಿ ಮಹಾ ಸಾಮ್ರಾಜ್ಯವನ್ನು ವಿಸ್ತರಿಸಿದೆ ತನ್ನ ಸಾಮ್ರಾಜ್ಯಪಾಲನೆಗಾಗಿ ಮತ್ತು ಇತರ ಎದುರಾಳಿಯಾದ ರಾಷ್ಟ್ರದೊಡನೆ ಸರಿಮಿಗಿಲೆನಿಸಿ ಯುದ್ಧ ಹೂಡುವ ಸಂದರ್ಭದಲ್ಲಿ ಹೇಗೆ ಬ್ರಿಟಿಷರು ಸದಾ ಕಾರ್ಯಸನ್ನದ್ಧರಾಗಿರುವರೆಂಬ ವಿಷಯದ ರಹಸ್ಯವು ಇಲ್ಲಿ ಕೊಡಲಾಗಿದೆ]

ಬ್ರಿಟಿಷರ ಯುದ್ಧಮಂದಿರ (War Office) ದಷ್ಟು ಕಾರ್ಯತತ್ಪರವಾದುದು ಇಡೀ ಪ್ರಪಂಚದಲ್ಲಿ ಬೇರೊಂದು ಇರಲಾರದು. ಲಂಡನಿನಲ್ಲಿರುವ ಆ ಯುದ್ಧ ನಿಲಯದಲ್ಲಿ, ಬಹಳ ಜಾಗ್ರತೆಯಿಂದ ಕೆಲಸಮಾಡುತ್ತಿರುವ ಕೆಲವೆ ಮಂದಿಯು ಇಡೀ ಸಾಮ್ರಾಜ್ಯದ ಸೈನ್ಯಶಕ್ತಿಯನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಒಬ್ಬ ನರೆ ಕೂದಲಿನ ಮನುಷ್ಯನು—ಆತನ ವಿಷಯವಾಗಿ ಹೊರಗಿನ ಪ್ರಪಂಚಕ್ಕೆ ಹೆಚ್ಚು ಗೊತ್ತಿಲ್ಲದಿರಬಹುದು—ಮೌನವಾಗಿ ಕುಳಿತಿದ್ದು, ಎದುರುಗಡೆಯ ಭೂಪಟವೊಂದನ್ನು ನಿರೀಕ್ಷಿಸುತ್ತ, ಸಾವಿರಾರು ಮೈಲುಗಳ ದೂರದ ಸೇನಾನಾಯಕರೊಡನೆ ಮಾತನಾಡುತ್ತ, ಇಡೀ ಸಾಮ್ರಾಜ್ಯದಲ್ಲಿ ಬ್ರಿಟಿಷ್ ಸೈನ್ಯಗಳು ಹೇಗೆ ಚಲಿಸುತ್ತಿವೆ ಯೆಂಬ ವಿಷಯವನ್ನು ಎಲ್ಲಾ ತಿಳಿದಿರುತ್ತಾನೆ ಬ್ರಿಟಿಷ್ ಸರಕಾರದ ಸ್ವಾಧೀನತೆಯಲ್ಲಿ ಎಷ್ಟು ಮೆಶಿನ್‌ಗನ್ನುಗಳಿವೆ, ಎಷ್ಟು ವಿಮಾನಗಳಿವೆ, ಎಷ್ಟು ಸೈನಿಕರಿದ್ದಾರೆ, ಅವರನ್ನು ಹೇಗೆ ಒಂದೇ ನಿಮಿಷದಲ್ಲಿ ತಯಾರು ಮಾಡಬಹುದು ಎಂಬ ವಿಷಯ ಅವನಿಗೆ ಗೊತ್ತಿದೆ

ಪ್ರೇಕ್ಷಕರಿಗೆ ನಿರ್ಬಂಧವಿದೆ!

ಅದರ ಒಳಹೊಕ್ಕು ನೋಡಬೇಕಾದರೆ ಪ್ರೇಕ್ಷಕರಿಗೆ ನಿರ್ಬಂಧವಿದೆ ಆದರೆ ಅದು ಹೊರಗಡೆಯವರಿಗೆ ಮಾತ್ರ. ಅಲ್ಲಿನ ಸೈನಿಕ ಜನರು ಅಸಂಖ್ಯಾತರಾಗಿ ಒಳಹೋಗುತ್ತಾರೆ ಅವರ ಪ್ರತಿಯೊಬ್ಬನ ಪರಿಚಯವೂ ಅಲ್ಲಿನ ರಕ್ಷಕರಿಗಿದೆ ಆದರೆ, ಇದರ ಮಧ್ಯದಲ್ಲಿ ಯಾವನೇ ಗುಪ್ತಚಾರನಾದರೂ ಒಳಹೋಗಲು ಸಾಧ್ಯವೇ ಇಲ್ಲ ಇದರ ಸುತ್ತುಮುತ್ತು ಕೆಲವು ಜನರು ತಿರುಗಾಡುತ್ತಾ ಹೋಗುವರರ ಮೇಲೆ ಯಾವಾಗಲೂ ದೃಷ್ಟಿ ಇಡುತ್ತಲೇ ಇದ್ದಾರೆ

ಒಂದು ಪಕ್ಷ ಒಬ್ಬ ಗುಪ್ತಚಾರನು ಒಳಹೊಕ್ಕರೂ ಅಲ್ಲಿ ಅವನಿಗೆ ಯಾವ ಗುಟ್ಟೂ ತಿಳಿಯಲಾರದು ಎಲ್ಲಾ ಕಡೆಗಳಲ್ಲಿಯೂ ಜನರು ತಮ್ಮ ತಮ್ಮ ಮೇಜಿನ ಮುಂದೆ ಕುಳಿತು ಕಾರ್ಯತತ್ಪರರಾಗಿರುತ್ತಾರೆ ಅಲ್ಲಿ ಏರುವ ಇಳಿಯುವ ಸ್ಥಳಗಳಿವೆ ಅಲ್ಲಿಯೂ ಯಾರೂ ಇರುವುದಿಲ್ಲ ಆದರೆ ಒಬ್ಬನು ಎರಡೇ ಹೆಜ್ಜೆ ಮುಂದಿಟ್ಟರೆ ಸಾಕು, ಆತನನ್ನು ಹಿಡಿದು ನಿಲ್ಲಿಸುವರು, ಈ ಕಾವಲುಗಾರರು ಎಲ್ಲಿ ಅಡಗಿರುವರೆಂದು ಯಾರಿಗೂ ತಿಳಿಯದು. ಅಲ್ಲಿನ ಈ ಘಟನೆಯು ನಿಜವಾಗಿಯೂ ವಿಸ್ಮಯಕರವಾಗಿದೆ.

ಪ್ರೇಕ್ಷಕನು, ಯುದ್ಧ ನಿಲಯದಲ್ಲಿ ತನಗೆ ಅಗತ್ಯವಾಗಿಕ್ಕ ಕೆಲಸವನ್ನು ವಿಚಾರಿಸುವಲ್ಲಿ, ಪ್ರವೇಶ ಸಿಗುವುದು ಅಂತಹವನಿಗೆ ಯಾವ ನಿರ್ಬಂಧವೂ ಇಲ್ಲದೆ ಒಳಗೆ ಬರಲು ಸ್ವಾತಂತ್ರ್ಯವಿದೆ. ಆದರೆ, ಅವನ ಕೆಲಸಕ್ಕಿಂತ ಹೆಚ್ಚಿನದನ್ನು ಅವ ಮಾಡಲು ನೋಡಿದರೆ ಅವನು ಅಲ್ಲಿ ನಿರ್ಬಂಧವಿಲ್ಲದಿರಲು ಸಾಧ್ಯವಿಲ್ಲ. ಅದೇ ಅಲ್ಲಿನ ಗುಟ್ಟು!

ಯುದ್ಧಸಭೆ

ಹೀಗೆ ಯುದ್ಧ ಮಂದಿರದ ಒಳಗಡೆ ಒಂದು ವಿಶಾಲವಾದ ಸಭಾಭವನವಿದೆ ಅಲ್ಲಿ ಕೆಲ ಜನ ಸಭಾಸದರು ಸೇರಿ ಬ್ರಿಟಿಷ್ ಸಾಮ್ರಾಜ್ಯದ ಕೆಳಗಿರುವ ಮಿಲಿಯಾಂತರ ಮಂದಿಯ ರಕ್ಷಣೆಯ ವಿಷಯ ಆಗಾಗ ಚರ್ಚಿಸುವರು ಇದು ವಾರಕ್ಕೊಮ್ಮೆ ಆಗುವುದು ಇದರಲ್ಲಿ ಯುದ್ಧ ಮಂತ್ರಿಗಳು ಅಧ್ಯಕ್ಷತೆ ವಹಿಸುವರು

ಈ ಸಮಿತಿಯಲ್ಲಿ ಪ್ರಧಾನರಾಗಿ ಆರು ಮಂದಿ ಸದಸ್ಯರಿದ್ದಾರೆ, ಇವರಲ್ಲದೆ ಮಿಕ್ಕ ಎರಡು ರಾಜಕೀಯ ಸದಸ್ಯರೂ ಇದ್ದಾರೆ ಈ ವಾರದ ಸಭೆಯಲಿ, ಬೇರೆ ಬೇರೆ ಯುದ್ಧ ಇಲಾಖೆಗಳ ಸಂಘಟಿತ ಕಾರ್ಯಗಳ ವಿಚಾರ ವಿನಿಮಯ ನಡೆಯುತ್ತದೆ ಯುದ್ಧ ಮಂತ್ರಿಯು ಜಗತ್ತಿನ ಅಂತರ್ ರಾಷ್ಟ್ರೀಯ ಪರಿಸ್ಥಿತಿಯನ್ನು ಸಭೆಯ ಮುಂದಿಡುತ್ತಾನೆ ಹೀಗೆ ಯುದ್ಧಮಂದಿರದಲ್ಲಿ ಕ್ರಮಪ್ರಕಾರ ಕೆಲಸಗಳು ನಡೆಯುತ್ತವೆ.

ರಹಸ್ಯಮಯ ಕುಶಲತೆಗಳು

ಯುದ್ಧಕ್ಕೆ ಹೊರಡಬೇಕಾದಲ್ಲಿ ಏನೆಲ್ಲಾ ಆಗಬೇಕೋ, ಇದು ಮಿಂಚು ಹೊಳೆದಂತೆ, ಒಂದೇ ಕ್ಷಣದಲ್ಲಿ ಸಂಪೂರ್ಣ ಸಿದ್ಧವಾಗುವವು, ಆ ಯುದ್ಧ ಮಂದಿರದ ನೆಲದ ಒಳಗಡೆಯುಂಟು ಗುಪ್ತವ್ಯವಹಾರಗಳನ್ನು ಕಳುಹಿಸುವ ಏರ್ಪಾಡು ಇದೆಯೆಂದು ತಿಳಿಯುತ್ತದೆ ಆದರೆ, ಹಾಗೆ ನೆಲದೊಳಗಡೆಯ ಹಾದಿಯನ್ನು ಕಂಡವನು ಯಾರು ಇಲ್ಲ

ಈ ಗಗನಭವನ ನಿರ್ಮಾಣವು, ಶತ್ರುಗಳ ಮುತ್ತಿಗೆಯಿಂದ ಬ್ರಿಟನ ಈ ಯುದ್ಧಮಂದಿರವು ಹಾಳಾದರೂ, ಕ್ಷಣಕ್ಕೆ ಯುದ್ಧ ವ್ಯವಹಾರವು ನಡೆಯುತ್ತಾ ಇರಬೇಕೆಂಬ ಕುಶಲತೆಯಿಂದ ಮಾಡಲಾಗಿದೆ.

ಒಬ್ಬ ಪ್ರೇಕ್ಷಕನು, ಇಡೀ ಮಂದಿರದಲ್ಲಿ ಆಚೀಚೆಗೆ ಅಲೆದಾಡುತ್ತಿದ್ದರೂ, ಅಲ್ಲಿನ ರಹಸ್ಯದ ಒಂದೇ ಒಂದು ಕುರುಹನ್ನೂ ಕಾಣಲಾರನು. ಆದರೂ, ಅಲ್ಲಿ ಸೈನಿಕ ಪ್ರಾಧಾನ್ಯತೆಯ ಹಲವು ರಹಸ್ಯಗಳಿವೆ. ಎಲ್ಲಿ ಇದೆ, ಎಂತಹದಿದೆಯೆಂದು ಹೊರಗಿನವರಿಗೆ ಏನೂ ತಿಳಿದಿಲ್ಲ.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ಯಾವನೇ ಒಬ್ಬ ಸೈನಿಕನ ವಿಷಯ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದರೆ, ಈ ಮಂದಿರದಿಂದ ಸರಿಯಾದ ಉತ್ತರವು ಲಭಿಸುವುದು

ಗುಪ್ತಚಾರನ ಸಮಸ್ಯೆ

ಕಟ್ಟಡವು ದೊಡ್ಡದಿದ್ದರೂ, ಒಬ್ಬ ಗುಪ್ತಚರನು, ಇದನ್ನು ದೊಡ್ಡ ವ್ಯಾಪಾರಿಯ ಅಂಗಡಿಯೆಂದು ತಿಳಿಯಬಹುದು ಜನರು ಒಳಗಡೆ ಹೋಗುತ್ತಾರೆ ಬರುತ್ತಾರೆ ಯಾರಿಗೂ ಸೈನಿಕರ ಉಡುಪಿಲ್ಲ ಆದರೆ ಜರ್ಮನಿಯೇ ಮೊದಲಾದ ದೇಶಗಳ ಯುದ್ಧಮಂದಿರಗಳು ಅದರ ಮತ್ತು ಅಲ್ಲಿನ ಜನರ ವೈಶಿಷ್ಟ್ಯತೆಗಳಿಂದ ಪ್ರತ್ಯೇಕ ಗೊತ್ತಾಗುವುದು. ಬ್ರಿಟಿಷರ ಯುದ್ಧಮಂದಿರವು ಬಹಳ ಸಾದಾತರದ್ದಾಗಿದೆ ಎಲ್ಲವೂ ಸರಲ ಮತ್ತು ಸಹಜವಾಗಿರುವಾಗ, ಗುಟ್ಟು ಯಾವುದೆಂದು ತಿಳಿಯಲು ಗುಪ್ತಚರನಿಗೆ ಬಲು ದೊಡ್ಡ ಸಮಸ್ಯೆಯಾಗುವುದು

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ
ಜಗತ್ಪ್ರಸಿದ್ಧ

GONO ORIGINAL KILLER

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ,

ಎಲ್ಲಾ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತದೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ, ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು ಮೂತ್ರಮಾರ್ಗದ ಒಸಗೆ, ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ–ಕ್ಹೊಕಸ' ಎಂಬ ವಿಷಾರಿ ಜಂತುಗಳು ಅದೇ ವೇಳೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8–0–0 (ವ್ಹಿ ಪಿ ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಬರೆಯಿರಿ

ತಯಾರಿಸುವ ಏಕಮಾತ್ರರು:
ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4
Sole Manufacturer **Dr. D. N. JASANI,** Vithalbhai Patal Road, BOMBAY

ಸ್ಟಾಕಿಸ್ಟರು
ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್‌ಪೆನ್ಸರಿ, ಕೆಮಿಸ್ಟ ಮತ್ತು ಡ್ರಗ್ಗಿಸ್ಟ್ಸ್, ಹಂಪನಕಟ್ಟಾ ಮಂಗಳೂರು

ಮಹರ್ಷಿ ಅರವಿಂದ ಘೋಷರು

[ಭರತಭೂಮಿಯು ಅಧ್ಯಾತ್ಮಿಕ ಮಹಾಪುರುಷರ ನಾಡು; ಇಲ್ಲಿನ ರಾಜಕೀಯವಾದರೂ, ಅಧ್ಯಾತ್ಮಿಕತೆಯನ್ನು ಬಿಟ್ಟಿಲ್ಲ. ಹೆಚ್ಚಿನ ರಾಜಕೀಯ ಮುಖಂಡರಾದರೂ, ಕಡೆಗೆ ಅಧ್ಯಾತ್ಮದ ಕಡೆಗೇ ತಿರುಗುತ್ತಾರೆ. ಇಂತಹ ಒಂದು ವಿಭೂತಿ ಪುರುಷರಲ್ಲಿ ಮಹರ್ಷಿ ಅರವಿಂದ ಘೋಷರು ಒಬ್ಬರು ವಿದೇಶದ ವಿಲಕ್ಷಣ ವಿದ್ಯಾಭ್ಯಾಸವನ್ನು ಪಡೆದು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರಿ, ಕಡೆಗೆ ಸಂಪೂರ್ಣ ಜಗತ್ತನ್ನು ಬಿಟ್ಟು ಪಾಂಡಿಚೇರಿಯ ಆಶ್ರಮದಲ್ಲಿರುವ ಈ ಮಹರ್ಷಿ ಇವರ ಜೀವನವಿಚಾರಗಳು ರಮ್ಯವಾಗಿವೆ]

ಭರತ ಭೂಮಿಯ ಮಹತ್ವವನ್ನು, ಬೇರೆ ಬೇರೆ ವಿಧಗಳಿಂದ, ಎತ್ತಿ ಹಿಡಿದು ಮೆರೆಸಿದ ಮಹನೀಯರನೇಕರು ಇದ್ದಾರೆ! ಒಬ್ಬನು ಧಾರ್ಮಿಕ ಕಾರ್ಯದಿಂದ, ಇನ್ನೊಬ್ಬನು ರಾಜಕೀಯ ಸಾಹಸದಿಂದ, ಮೂರನೆಯವನು ಸಮಾಜ ಸೇವೆಯಿಂದ ಹೀಗೆ ನಾನಾ ರೀತಿಗಳಿಂದ ತಮ್ಮ ಜೀವಿತದ ಕರ್ತವ್ಯವನ್ನು ಮುಗಿಸಿದ ಮಹಾಪುರುಷರ ಪುಣ್ಯಜೀವನ ಚರಿತ್ರೆಯು ನಮಗೆ ಆದರ್ಶವಾಗಿದೆ! ಆದರೆ, ಧಾರ್ಮಿಕ, ರಾಜಕೀಯ, ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗಿ, ಸರ್ವ ವಿಧದಿಂದಲೂ ಮಹಾಪುರುಷರೆಂದು ಹೆಸರು ಪಡೆದವರು ಕಾಣಸಿಗುವುದು ವಿರಳ, ಅಂತಹರಲ್ಲಿ ಮಹರ್ಷಿ ಅರವಿಂದ ಘೋಷರು ಒಬ್ಬರು.

ಮಹಾ ದರ್ಶನ

ಮೊನ್ನೆ ಪೋಂಡಿಚೇರಿಯ ಪುಣ್ಯಾಶ್ರಮದಲ್ಲಿರುವ ಈ ಮಹರ್ಷಿಗಳ ೬೮ನೇ ಜನ್ಮದಿನೋತ್ಸವದಂದು ಅಪೂರ್ವವಾದ 'ದರ್ಶನ'ವೊಂದು ನೆರೆಯಿತು. ಭಾರತದ ಮತ್ತು ಅಖಿಲ ಜಗತ್ತಿನ ಅನೇಕರು ಅವರ ದರ್ಶನಕ್ಕಾಗಿ ಬಂದಿದ್ದರು ಇಡೀ ವರ್ಷದ ೩೬೨ ದಿನಗಳಲ್ಲಿಯೂ, ಅವರು ಆಶ್ರಮದ ಒಳಗಡೆಯಲ್ಲಿಯೇ, ಏಕಾಂತರಾಗಿದ್ದು, ಹೊರಗಿನವರನ್ನು ಸಂದರ್ಶಿಸಲು ಬಿಡದೆ, ಕೇವಲ ಒಂದು ದಿವಸ ಮಾತ್ರ ಅವರು ಮೌನದರ್ಶನವನ್ನು ತೋರಿಸುವರು, ಆದಕ್ಕೂ ಕೂಡಾ ಸರ್ವರನ್ನೂ ಬರಲು ಎಡೆ ಕೊಡುವುದಿಲ್ಲ ಹಿಟ್ಲರ್ ಮುಸಲೋನಿಗಳನ್ನಾದರೂ ನೋಡಬಹುದು, ಅರವಿಂದರನ್ನು ನೋಡುವುದು ಅಸಾಧ್ಯವೆಂದು ಹಲವರು ತಿಳಿದಿದ್ದಾರೆ ಈ ಅವರ ಆಚರಣೆಯ ಮಹತ್ವವನ್ನು ಅಧ್ಯಾತ್ಮಿಕ ದೃಷ್ಟಿಯಿಂದ ವಿಚಾರಿಸುವವರಿಗೆ ಅಗಾಧ ವಿಷಯಗಳು ಹೊಳೆಯದಿರವು ಈ ವರ್ಷ ನೆರೆದಿದ್ದ ೪೦೦ ಮಂದಿ ದರ್ಶನಾರ್ಥಿಗಳಿಗೆ ಅವರು ಮೌನ ಆಶೀರ್ವಾದವಿತ್ತರು

ತಾರುಣ್ಯ ಜೀವನ

ಅರವಿಂದ ಘೋಷರು, ತಮ್ಮ ತಾರುಣ್ಯದ ಬಹಳ ಕಾಲಗಳನ್ನು ಬ್ರಿಟನಿನಲ್ಲಿ ಕಳೆದರು ಸಣ್ಣ ಹುಡುಗನಿದ್ದಾಗ, ಅವರನ್ನು ವಿದೇಶೀಯ ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಕಳುಹಿಸಿದ್ದರು ಐ. ಸಿ. ಎಸ್ ಪರೀಕ್ಷೆಯಲ್ಲಿ ಉತ್ತೀರ್ಣನಾಗದೆ ಅವರು ಮಾತೃಭೂಮಿಗೆ ಮರಳಿ ಬಂದಾಗ, ತಮ್ಮ ಮಾತೃಭಾಷೆಯಲ್ಲಿ ಮಾತನಾಡಲೂ ಅವರಿಗೆ ಬರುತ್ತಿರಲಿಲ್ಲ

ಅಂದು ಹಾಗೆ ಅವರು ಐ ಸಿ ಎಸ್. ಪರೀಕ್ಷೆಯಲ್ಲಿ ತೇರ್ಗಡೆಹೊಂದದೆ ಉತ್ತೀರ್ಣರಾಗಿರುತ್ತಿದ್ದರೆ, ಬಹುಶಃ ಭರತಭೂಮಿಯು ಒಂದು ಮಹಾಪುರುಷನನ್ನು ಕಳೆದುಕೊಳ್ಳುವಂತೆ ಆಗುತಿತ್ತೋ ಏನೊ? ಐ ಸಿ ಎಸ್ ಅಧಿಕಾರದಿಂದ ನಿವೃತ್ತರಾಗಿ, ಇಂದು ಯಾವುದಾದರೊಂದು ಕ್ಲಬ್ಬಿನಲ್ಲಿ ಕುಳಿತು ವಿಸ್ಕಿ ಮತ್ತು ಸೋಡಾ ಕುಡಿಯುತ್ತಾ ಜುಗಾರಿಯಾಡುತ್ತಾ ದಿನ ಕಳೆಯುವ ದುರವಸ್ಥೆಯು ಅವರಿಗೆ ಒದಗಲಿಲ್ಲ. ಹೀಗೆ ಪರೀಕ್ಷೆಯಲ್ಲಿ ಅವರು ಉತ್ತೀರ್ಣರಾಗದೆ ಇದ್ದುದರಿಂದ ಲೋಕ ಕಲ್ಯಾಣವೇ ಆಯಿತು

ಉದ್ಯೋಗದಲ್ಲಿ

ವಿದೇಶದಿಂದ ಮರಳಿ ಬಂದ, ಅರವಿಂದ ಘೋಷರನ್ನು ಬರೋಡದ ಮಹಾರಾಜರು ತಮ್ಮ ಪ್ರೈವೇಟ್ ಸೆಕ್ರೆಟರಿಯ



ನ್ನಾಗಿ ನೇಮಕ ಮಾಡಿದರು ಕಡೆಗೆ, ಅವರು ಬರೋಡಾ ಕಾಲೇಜೊಂದರಲ್ಲಿ ಪ್ರೊಫೆಸರರಾಗಿಯೂ, ಪ್ರಿನ್ಸಿಪಾಲರಾಗಿಯೂ ಕೆಲಸಮಾಡಿದರು ಬರೋಡದಲ್ಲಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾಗ, ದೇಶದ ಸುತ್ತು ಹರಡಿದ ಸ್ವಾತಂತ್ರ ಘೋಷವನ್ನು ಕೇಳಿ, ಅವರೂ ರಾಜಕೀಯ ಕ್ಷೇತ್ರಕ್ಕೆ ಧುಮುಕಿದರು ರಾಜಕೀಯ ಕ್ಷೇತ್ರದಿಂದಲೂ, ಅವರು ಕೇವಲ ಐದು ವರ್ಷಗಳ ಅವಧಿಯಲ್ಲಿಯೇ ನಿವೃತ್ತರಾಗಿ ಯೋಗಾಭ್ಯಾಸ ನಿರತರಾದರು

ಕ್ರಾಂತಿ ತಪಸ್ಯೆಯೇ?

ಭಾರತದ ಸ್ವಾತಂತ್ರ್ಯಕ್ಕಾಗಿ ಕಾದಾಡಲು ಹೊರಟ ಅನೇಕ ಮಂದಿಯನ್ನು ಅರವಿಂದರು ಬಿಟ್ಟು, ಇಂದು ಏಕಾಂಗಿಯಾಗಿ ರಾಷ್ಟ್ರೀಯ ಕರ್ತವ್ಯವನ್ನು ಮರೆತು ತಮ್ಮ ಸಹೋದ್ಯೋಗಿಗಳನ್ನು ಕೈಬಿಟ್ಟಿದ್ದಾರೆಯೋ ಎಂಬ ವಿಷಯವು ಅವಶ್ಯ ವಿಚಾರಣೀಯವಾಗಿದೆ ಹಲವರು, ಅರವಿಂದರ ಇಂದಿನ ತಪಸ್ಸು ಮಾತೃಭೂಮಿಯ ಸ್ವಾತಂತ್ರ್ಯದ ಸಲುವಾಗಿಯೇ ಇದೆಯೆಂದೂ, ಒಮ್ಮೆ ಅವರು ತಿರಿಗಿ ರಾಜಕೀಯರಂಗಕ್ಕೆ ಧುಮುಕುವರೆಂದೂ ಹೇಳುತ್ತಾರೆ. ಹೀಗಾಗಿ, ಪೋಂಡಿಚೇರಿಯಲ್ಲಿ ಅವರು ಆಶ್ರಮ ಕಟ್ಟಿ ಉಳಿಕೊಳ್ಳಲು ಆರಂಭಿಸಿದ ಕಾಲದಲ್ಲಿ ಬ್ರಿಟಿಷ್ ಸರಕಾರಕ್ಕಾದರೂ ಬಹಳ ಸಂಶಯವಿತು, ಅವರು ಅಲ್ಲಿ ಕ್ರಾಂತಿಕಾರಕ ಚಳವಳಿಯನ್ನು ನಡೆಸುತ್ತಿರುವರೆಂದೂ, ಅದಕ್ಕಾಗಿ ವಿದೇಶ ರಾಜ್ಯಗಳ ನೆರವನ್ನು ಪಡೆಯುತ್ತಿರುವರೆಂದೂ, ಬ್ರಿಟಿಷ್ ಸರಕಾರಕ್ಕೆ ಸಂದೇಹವಿತ್ತು. ಇತ್ತೀಚೆಗೆ ಕೆಲಸಮಯಗಳಿಂದ ಮಾತ್ರ ಸಿ. ಐ. ಡಿ ಗಳು ಅವರ ಬೆನ್ನು ಬಿಟ್ಟಿರುತ್ತಾರೆ

ರಾಜಕೀಯ ರಂಗದಲ್ಲಿ

ವಂಗ ವಿಭಜನೆಯ ಕಾಲವು ಭಾರತದ ಚರಿತ್ರೆಯಲ್ಲಿ ಬಹಳ ಮಹತ್ವದ್ದಾಗಿದೆ ಒಂದು ಕಡೆಯಿಂದ ಸುರೇಂದ್ರನಾಥರಂತಹ ಮುಖಂಡರು, ವಂಗ ವಿಭಜನೆಯನ್ನು ವಿರೋಧಿಸಿ ಜನಮತವನ್ನು ಉದ್ರೇಕಗೊಳಿಸುತ್ತಿರಲು, ಇನ್ನೊಂದು ಕಡೆಯಿಂದ, ಅರವಿಂದ ಘೋಷರಂತವರು, ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಸಮರಕ್ಕೆ ಇದೇ ಪ್ರಥಮ ಸಾಹಸವೆಂದು ಕೂಗಿ ಹೇಳಿದರು. ಅವರು ಅಂದು ಬಿತ್ತಿದ ಅಖಿಲ ಭಾರತ ಸ್ವಾತಂತ್ರ್ಯ



ಶ್ರೀ ಅರವಿಂದರ ಆಧ್ಯಾತ್ಮಿಕವಾದ ದರ್ಶನ ಆಸನ
ಹಲವು ಕಡೆಗಳಿಂದ ತನ್ನ ದರ್ಶನಕ್ಕಾಗಿ ನೆರೆದ ಜನರಿಗೆ ಶಾಂತವಾದ ಆಶೀರ್ವಾದವೀಯುವ ಕಾಲದಲ್ಲಿ ಮಾತ್ರ ಇದನ್ನು ವರ್ಷಕ್ಕೆ ಮೂರು ಬಾರಿ ಉಪಯೋಗಿಸುವರು

ಬೀಜವೇ ಮುಂದಕ್ಕೆ ಬೆಳೆದು ಮರವಾಗಿ ಕಾಂಗ್ರೆಸು ಸಂಸ್ಥೆಯಾಗಿ ಬೆಳೆಯಿತು. ಅಂದಿನ ಅವರ ದಿವ್ಯ ದರ್ಶನದಲ್ಲಿ, ಭಾರತದ ರಾಜಕೀಯ ಸ್ವಾತಂತ್ರ್ಯವು ಅಂತರ್ರಾಷ್ಟ್ರೀಯ ಶಾಂತಿಸಾಧನೆಯೇ ಎಂದು ತಿಳಿದಿದ್ದರು. ಅಂದಿನ ಆ ದಾರ್ಶನಿಕ ರಾಜ್ಯಭಾರವು ಮುಗಿದು ಭಾರತಕ್ಕೆ ಸ್ವಾತಂತ್ರ್ಯ ರಾಜ್ಯಭಾರವು ಒದಗುವುದೆಂದು ಅವರು ಹೇಳಿದ್ದರು.

೧೯೦೬ರಲ್ಲಿ ಇದೇ ಅಭಿಪ್ರಾಯದಿಂದ ಬಂಗಾಳದ ರಾಷ್ಟ್ರೀಯ ಸ್ವಾತಂತ್ರ್ಯಕಾಂಕ್ಷಿಗಳು, ಅರವಿಂದ ಘೋಷರ ಮುಂದಾಳುತನದಿಂದ ರಾಷ್ಟ್ರೀಯ ಪಕ್ಷವೆಂಬೊಂದು ಸಂಸ್ಥೆಯನ್ನು ಸ್ಥಾಪಿಸಿದರು ಇದೀ ಭರತಭೂಮಿಯ ಪಾರತಂತ್ರ್ಯವನ್ನು ಪರಿಹರಿಸುವುದೇ ಅವರ ಉದ್ದೇಶವಾಗಿತ್ತು

ಸ್ವಾತಂತ್ರ್ಯ ಮೀಮಾಂಸೆ

ಮನುಷ್ಯನು ಪ್ರಕೃತಿಸಹಜವಾಗಿ ಸ್ವಾತಂತ್ರ್ಯಾಕಾಂಕ್ಷಿಯಾಗಿರುತ್ತಾನೆ ಜೀವನ ಯಾತ್ರೆಯಲ್ಲಿ ಮುಂದುವರಿಯುತ್ತಿದ್ದಂತೆ ಆತನಿಗೆ ಅನೇಕ ಎಡೆತಡೆಗಳು ಬಂದು, ಆತನನ್ನು ಇನ್ನಷ್ಟು ಸ್ವಾತಂತ್ರ್ಯ ಪ್ರೇಮಿಯನ್ನಾಗಿ ಮಾಡುತ್ತದೆ ಈ ತೊಂದರೆಗಳನ್ನು ತಪ್ಪಿಸಲು ಆತನು 'ಸ್ವಾತಂತ್ರ್ಯವನ್ನು ಬಯಸುತ್ತಾನೆ ಅವನ ವಿಚಾರ, ಕಾರ್ಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವು ದೊರಕದ ವಿನಹ ಯಾವ ಮನುಷ್ಯನಿಗಾದರೂ ಶಾಂತಿಯು ಸಿಗುವುದಿಲ್ಲ. ಹೀಗೆ ಇಂತಹ ವ್ಯಕ್ತಿ ಸ್ವಾತಂತ್ರ್ಯ ಮತ್ತು ಲೋಕಕಲ್ಯಾಣವು ಅಭಿನ್ನವಾಗಿದೆ ಅಂತಹ ವ್ಯಕ್ತಿ ಸ್ವಾತಂತ್ರ್ಯಕ್ಕಾಗಿಯೇ ಅರವಿಂದರೂ ಯತ್ನಿಸುತ್ತಾರೆ. ಅರವಿಂದರ ಸ್ವಾತಂತ್ರ್ಯ ನಿರೀಕ್ಷೆಯು ಕೇವಲ ರಾಜಕೀಯದ ಮಟ್ಟಿಗೇ ಇರದೆ, ಆತ್ಮ ಸ್ವಾತಂತ್ರ್ಯದ ಕಡೆಗೆ ತಿರುಗಿದೆ.

ಮಹಾತ್ಮಾ ಗಾಂಧಿಜಿಯವರ ಜೀವನವನ್ನು ತಿಳಿದವರಿಗೂ ಈ ವಿಷಯವು ವ್ಯಕ್ತವಾಗುವುದು, ಆದರೆ, ಗಾಂಧಿಜಿಯವರು ತಾವು ಹೇಳುವ ಕಾರ್ಯಗಳನ್ನು ಕಾರ್ಯತಃ ಮಾಡಿತೋರಿಸುತ್ತಾರೆ, ಜಗದ ಕಲ್ಯಾಣಕ್ಕಾಗಿ, ಜಗತ್ತಿನಲ್ಲಿ ಇದ್ದುಕೊಂಡೇ ಆದರ್ಶರಾಗಿದ್ದಾರೆ, ಅರವಿಂದರು ಜಗತ್ತನ್ನು ಬಿಟ್ಟು ಏಕಾಂತಕ್ಕೆ ಸೇರಿ ಯೋಗಸಾಧನೆಗೆ ತೊಡಗಿದ್ದಾರೆ. ಯಾರು ನಿಜವಾದ 'ಕರ್ಮಯೋಗಿ' ಯಾರ ಜೀವನವು ಲೋಕ ಕಲ್ಯಾಣಕ್ಕಾಗಿ ಇದೆ ಎಂಬ ವಿಚಾರವು ತುಂಬಾ ಚರ್ಚಾಸ್ಪದವಾದದು ಆದರೆ, ಇಂದು ರಾಜಕೀಯದಿಂದ, ಪ್ರಪಂಚದ ಗೊಂದಲದಿಂದ ನಿವೃತ್ತರಾಗಿ ಅರವಿಂದರು ಆಶ್ರಮದ ಏಕಾಂತ ಜೀವನದಲ್ಲಿ ಇರುವುದಾದರೂ ಅವರ ಅಪೂರ್ವ ತತ್ವವು ನಿಗೂಢವೂ ಸಂಪೂರ್ಣ ಪರಿಶುದ್ಧವೂ ಆಗಿದೆ

ಮನೋಹರ ಗ್ರಂಥಮಾಲಾ, ಧಾರವಾಡ.

ಸ್ವತಂತ್ರ ಕಥೆ, ಕಾದಂಬರಿ, ನಾಟಕ, ಹರಟೆ ಮೊದಲಾದ ಮನಮೆಚ್ಚಿಸುವ ಸರಸ ವಾಙ್ಮಯದ ಸುಗ್ಗಿ! ಅಖಿಲಕರ್ನಾಟಕದಲ್ಲಿ ಹೆಸರುಪಡೆದ ಬರಹಗಾರರ ಕೈವಾಡ ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦೦ ಪುಟಗಳುಳ್ಳ ಆರು ಸರಸ ಗ್ರಂಥಗಳು ವಾರ್ಷಿಕ ಚಂದಾ ರೂ. ೩-೮-೦

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ತೋರಿಸಲಾಗುವುದು.

ವ್ಯವಸ್ಥಾಪಕ—

ಮನೋಹರ ಗ್ರಂಥಮಾಲಾ
ಧಾರವಾಡ.

ವಿಜ್ಞಾನ ಯುಗ

ರಸಾಯನಿಕ ಪರಿಷತ್ತು

ಅಖಿಲ ಜಗತ್ತಿನ ರಸಾಯನಿಕ ಎಂಜಿನಿಯರರ ಪರಿಷತ್ತು ಬರ್ಲಿನಿನಲ್ಲಿ ೧೯೪೦ನೇ ಇಸವಿ ಜೂನ್ ೨೩ರಿಂದ ೨೯ರ ವರೆಗೆ ನಡೆಯಲಿರುವುದು ಮೊದಲನೆಯ ಇಂತಹ ಪರಿಷತ್ತು ೧೯೩೬ನೇ ಜೂನಿನಲ್ಲಿ ಸೇರಿತು ಬರುವ ಕಾಂಗ್ರೆಸಿನಲ್ಲಿ ೨೦೦ಕ್ಕೆ ಮಿಕ್ಕಿದ ಹೊಸ ಶೋಧನೆಗಳ ವಿಷಯ ಚರ್ಚಿಸಲ್ಪಡಲಿರುವುದೆಂದು ತಿಳಿದಿದೆ ಬೇರೆ ಬೇರೆ ೧೫ ರಾಷ್ಟ್ರಗಳ ಪ್ರತಿನಿಧಿಗಳು ಬಂದು ಸೇರಲಿರುವರು ಇದರಂಕ್ಕದಲ್ಲಿ ಅಂತರ್ ರಾಷ್ಟ್ರೀಯ ರಸಾಯನಿಕ ಪ್ರದರ್ಶನ ಸಮಾರಂಭವೊಂದು ಸೇರಲಿರುವುದು.

ಟೆಲಿಫೋನಿನಿಂದ ರೇಡಿಯೊ

ಟೆಲಿಫೋನಿನಿಂದ ರೇಡಿಯೋ ಕಾರ್ಯಕ್ರಮವು ಸರಿಯಾಗಿ ನಡೆಸಲ್ಪಡುವುದೆಂದು ರಶ್ಯಾದ ವೈಜ್ಞಾನಿಕರು ಕಂಡುಹುಡುಕಿರುವುದಾಗಿ ತಿಳಿದಿದೆ. ಲೆನಿನ್ ಗ್ರಾಡಿನಲ್ಲಿ ಹಲವು ಮಂದಿ ಟೆಲಿಫೋನ್ ಇಟ್ಟುಕೊಂಡವರು, ಅದಕ್ಕೆ ಸೇರಿಸಿದ ಒಂದು ಸ್ಪೆಶಲ್ ರಿಸೀವರಿನ ಮೂಲಕ ರೇಡಿಯೋ ಸಮಾಚಾರವನ್ನೂ ಕೇಳುತ್ತಿದ್ದಾರೆ

ಯಂತ್ರಯುಗ

ಕೈಯಿಂದ ಮಾಡಿದ ಮೋಟಾರು ಕಾರು ಒಂದಕ್ಕೆ ಕಡಿಮೆಯೆಂದರೆ, ೨,೦೦೦ ಪವನುಗಳಷ್ಟು ಖರ್ಚು ಬೀಳುವುದೆಂದು ಅಂದಾಜು ಮಾಡಿದ್ದಾರೆ ಮೋಟರು ಉದ್ಯೋಗವು ಯಂತ್ರಯುಗದಲ್ಲಿ ಬಹಳ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿದ ಕೈಗಾರಿಕೆಯಾಗಿದೆ.

ಒಂದು ಮೆಶಿನು ೩,೬೦೦ ಗ್ಲಾಸ್ ಬಾಟ್ಲಿಗಳನ್ನು ಒಂದು ಗಂಟೆಯ ಸಮಯದಲ್ಲಿ ಮಾಡಿಬಿಡುತ್ತದೆ. ಆದರೆ ಅದೇ ಕೆಲಸವನ್ನು ಹಲವು ನೂರು ಜನರು ಹಲವು ದಿವಸಗಳ ತನಕ ಮಾಡಿದರೂ ಕೊನೆಗೊಳ್ಳುವುದಿಲ್ಲ.

ಮಹಾಯುದ್ಧಕ್ಕಿಂತ ಮೊದಲು ಒಂದು ದೀಪವನ್ನು ಮಾಡಲು ೯,೦೦೦ ತಾಸುಗಳು ಹಿಡಿಯುತ್ತಿದ್ದರೆ, ಇಂದು ಕೇವಲ ಒಂದು ಗಂಟೆಯಲ್ಲಿ ಅದೇ ದೀಪವು ಒಂದು ಕಾರ್ಖಾನೆಯಲ್ಲಿ ಆಗುತ್ತದೆ

ಯಂತ್ರದ ಸಹಾಯವಿಲ್ಲದೆ, ಕೇವಲ ೬೦ ಪವನುಗಳ ಕ್ರಯಕ್ಕೆ ಒಂದು ರೇಡಿಯೋ ಸೆಟ್ಟನ್ನು ಪಡೆಯಲು ಸಾಧ್ಯವೇ ಇರಲಿಲ್ಲ. ಇತ್ತೀಚೆಗೆ ಇದಕ್ಕಿಂತಲೂ ಕಡಿಮೆ ಬೆಲೆಗೆ ಸಿಗುವುದಾಗಿ ತಿಳಿದಿದೆ.

ಒಂದು ಕ್ಷೌರದ ಬ್ಲೇಡನ್ನು ಕೈಯ್ಯಲ್ಲಿ ಮಾಡುವುದಿದ್ದರೆ, ಇಂದಿನ ಬ್ಲೇಡಿನ ಕ್ರಯಕ್ಕಿಂತ ೨೦ ಪಾಲು ಹೆಚ್ಚು ಕ್ರಯ ಬಾಳುವುದು.

ನೆರಳಿಂದ ಸರಿಯಾದ ಅಳತೆ

ಸೂಟ್ ಅಥವಾ ಇನ್ನಾವುದೇ ಡ್ರೆಸ್ಸನ್ನಾಗಲಿ, ಸರಿಯಾಗಿ, ಖಚಿತವಾಗಿ ಮಾಡಬೇಕಾದರೆ ಇಂದಿನ ಅಳತೆಯ ಕ್ರಮವು ಹೋಗಿ ಹೊಸ ಕ್ರಮವು ಬಂದಿದೆ

ಮನುಷ್ಯನ ಶರೀರದ ಮೇಲೆ ಒಂದು ಕಡೆಯಿಂದ ಬೆಳಕನ್ನು ಬಿಟ್ಟರೆ, ಅವನ ನೆರಳು ನೆಲದ ಗ್ಲಾಸ್ ಸ್ಕ್ರೀನಿನ ಮೇಲೆ ಪ್ರತಿಫಲಿಸುವುದು.

ಜೀವವನ್ನುಳಿಸುವ ಬಣ್ಣ

ಮೆಥಿಲಿನೆಬ್ಲ್ಯೂ ಎಂಬ ಸಿಲ್ಕ್ ಮತ್ತು ಹತ್ತಿಯ ಬಟ್ಟೆಗಳಿಗೆ ಕೊಡುವ ಬಣ್ಣವು ಇಂದು ಬೇರೆ ಒಂದು ಪ್ರಯೋಜನಕ್ಕಾಗಿ ಉಪಯೋಗಿಸಬಹುದೆಂದು ವೈಜ್ಞಾನಿಕರು ಕಂಡು ಹುಡುಕಿದ್ದಾರೆ!

ಇದು ವಿಷಹಾರಕ ಶಕ್ತಿಯುಳ್ಳದ್ದೆಂದು ಅವರ ಅಭಿಪ್ರಾಯ, ಕೆಲವು ವಿಷ ವಸ್ತುಗಳಿಂದ ರಕ್ತದ ಓಕ್ಸಿಜನ್ ಹಾಳಾಗುತ್ತದೆ. ಇದರಿಂದ ಪ್ರಾಣಾಂತಿಕವು ಒದಗುವುದು. ಆದರೆ, ಮೆಥಿಲಿನೆಬ್ಲ್ಯೂ ಬಣ್ಣವನ್ನು ಆ ಸ್ಥಳಕ್ಕೆ ತಾಗಿಸಿದಲ್ಲಿ ಅದರಿಂದ ಅಂತಹ ಹಾನಿಯು ತಪ್ಪುವುದೆಂದು ಕಂಡು ಹುಡುಕಲಾಗಿದೆ ಅದರಲ್ಲಿ ಜೀವರಕ್ಷಕ ಸತ್ವವಿರುತ್ತದೆ ಫ್ರೆಂಚ್ ವಿಜ್ಞಾನಿಯೊಬ್ಬನ ಶೋಧನೆಯಂತೆ, ಆ ಬಣ್ಣವು ಲೋಕದಲ್ಲಿ ಬಹಳ ಪ್ರಯೋಜನವನ್ನು ಕೊಡಬಲ್ಲುದು ಎಂದು ಊಹಿಸಲಾಗಿದೆ

ಬ್ರಿಟಿಷ್ ಸೈನಿಕರು ವಿಮಾನ ಹಾರುವಿಕೆಯ ಎತ್ತರವನ್ನು ಕಂಡುಹಿಡಿಯುವ ಯಂತ್ರವನ್ನು ಹೊತ್ತುಕೊಂಡು ಹೋಗುವುದು

ಆ ಸ್ಕ್ರೀನಿನ ಮೇಲೆ ಬೇಕಾದ ವಿಧದ ಡ್ರೆಸ್ಸುಗಳ ಆವರಣ ರೇಖೆಯು ಹಾಕಲ್ಪಟ್ಟಿದೆ. ಈ ನೆರಳು ಮತ್ತು ಅಲ್ಲಿರುವ ಆವರಣ ರೇಖೆಗಳ ಹೋಲಿಕೆಯಿಂದ ಸರಿಯಾದ ಡ್ರೆಸ್ಸನ್ನು ಮಾಡಲು ಆಗುತ್ತದೆ.

ಇದರಿಂದ ಬಹಳ ಸಮಯವೂ ಉಳಿಯುತ್ತದೆ

ಅಭಿವೃದ್ಧಿಯ ಹಾದಿ

ಡಾ ಮೋಂಟೆಸೋರಿಯಳ ಶೋಧನೆ

'ಮಕ್ಕಳ ಮಿದುಳಲ್ಲಿ ಅಭಿವೃದ್ಧಿಯ ಸೂಚನೆಗಳು ಕಂಡುಬರುತ್ತದೆ. ಅವುಗಳು ಹೇಗೆ ಅಭಿವೃದ್ಧಿ ಹೊಂದುವವೆಂದು ವಿದ್ಯಾಂಗದಲ್ಲಿ ಬಹಳ ಶೋಧನೆ ನಡೆಸಿದ ಡಾ. ಮರಿಯ ಮೋಂಟೆಸೋರಿಯಳು ಹೇಳುತ್ತಾಳೆ.

ಆಕೆಯ ತತ್ವದಂತೆ, ಮಕ್ಕಳಿಗೆ ಜನನದಾರಭ್ಯ ಆತ್ಮಶಕ್ತಿಯಿದೆಯೆಂದೂ, ಆ ಆತ್ಮದ ರಹಸ್ಯವನ್ನು ಕಂಡು ಹುಡುಕಿದ ಮೇಲೆ ಇಡೀ ಜಗತ್ತಿನ ಸತ್ಯವೇ ಕಾಣುವುದೆಂದೂ ಅವಳ ಹೇಳಿಕೆ.

ಮೊದಲು ಮೊದಲು ಆಕೆಯನ್ನು ಹಲವರು ಅಪಹಾಸ್ಯ ಮಾಡಿದರು. ಈಗ ಅವಳಿಗೆ ಬಹಳ ಮನ್ನಣೆಯಿದೆ.

ನಾಲ್ಕು ವರ್ಷಗಳ ಸಮಯ ನೋವನ್ನು ಅನುಭವಿಸಿದನು
ಯಾವಾಗಲೂ ಭಯಾನಕ ಕಲ್ಪನೆಗಳನ್ನೇ ಮಾಡುತಿದ್ದನು
ಕ್ರುಶನ್ ಅವನನ್ನು ರಕ್ಷಿಸಿತು!

ನಾಲ್ಕು ವರ್ಷಗಳ ಸಮಯ ಆತನ ಬೆನ್ನು ಬಿಡದೆ ನೋಯಿಸಿತು. ಆದ್ದರಿಂದಲೇ ಅವನು ಯಾವಾಗಲೂ ಕರ್ಕಶಚಿತ್ತನಾಗಿದ್ದನು. ಈಗ ಆತನ ಪ್ರಾಯವು ೫೭ ವರ್ಷ ಆದರೂ ಅತ್ಯಂತ ಹರುಷಚಿತ್ತದಿಂದ ತನ್ನ ನಿತ್ಯದ ಜೀವಮಾನವನ್ನು ಪ್ರಾರಂಭಿಸಿರುವನು ಆತನಲ್ಲೀಗ ಬೆನ್ನು ನೋವೆ ಇಲ್ಲ. ಆತನ ಕಥೆಯನ್ನು ಓದಿರಿ.

'ನಾಲ್ಕು ವರ್ಷಗಳ ಸಮಯ ಬಿಡುವಿಲ್ಲದೆ ನಾನು ಬೆನ್ನು ನೋವನ್ನು ಅನುಭವಿಸಿ, ಜೀವಿಸುವುದೆ ಬೇಡವೆಂದು ನೆನೆಸುತಿತ್ತು ಈಗ ಕ್ರುಶನಿನ ಮಹೋಪಕಾರದಿಂದ ಆರೋಗ್ಯದಿಂದಿರುವೆನು ಅದಕ್ಕಾಗಿ ನಾನು ಚಿರಋಣಿಯಾಗಿರುವೆನು. ಬೆಳಗ್ಗಿನ ಜಾವ ನಾನು ಉತ್ಸಾಹದಿಂದ ನಿತ್ಯಕಾರ್ಯವನ್ನು ಪ್ರಾರಂಭಿಸುತ್ತೇನೆ ಬರೆ ಏಳು ದಿವಸಗಳ ಕ್ರುಶನ್ ಸೇವನೆಯಿಂದ, ನನಗೆ ಬೇಗನೆ ಹಾಸಿಗೆ ಬಿಡಲು ಸಾಧ್ಯವಾಯಿತು. ಬೆಳಗಿನ ಜಾವ ನಾನು ಹರ್ಷಚಿತ್ತನೆ ಆಗಿರುವೆನು ನನ್ನ ಪ್ರಾಯವು ೫೭. ಕ್ರುಶನೆ ನನ್ನ ಮುಕ್ತಿಮಾರ್ಗವು"

ಜೆ ಟಿ

ಮೂತ್ರಪಿಂಡಗಳು ಮನುಷ್ಯನ ದೇಹವನ್ನು ನಿರ್ಮಲಗೊಳಿಸುವ ಇಂದ್ರಿಯ. ದೇಹದೊಳಗಿರುವ ವಿಷಕರ ಕಶ್ಮಲಗಳನ್ನು ಹೊರದೂಡುವುದೆ ಅವುಗಳ ಕರ್ತವ್ಯವು ಅವುಗಳು ಸರಿಯಾಗಿ ಕಾರ್ಯಿಸದಿದ್ದರೆ, ಆಗ ವಿಷಕಶ್ಮಲಗಳು ದೇಹದಲ್ಲಿ ಶೇಖರವಾಗಿ, ರಕ್ತವನ್ನು ಕೆಡಿಸಿ, ಅಲ್ಲಸಲ್ಲದ ಕಷ್ಟಪರಂಪರೆಗಳಿಗೆ ಕಾರಣವಾಗವುದು ಬೆನ್ನುನೋವು, ಹರ್ಷವಿಲ್ಲದಿರುವಿಕೆ ಇತ್ಯಾ ರೋಗಗಳಿಗೆ ಇದೇ ಕಾರಣವು.

ಕ್ರುಶನಿನಲ್ಲಿರುವ ಆರು ಲವಣಗಳು ನಿಮ್ಮ ಮೂತ್ರಪಿಂಡವು ಸರಿಯಾಗಿ ಕಾರ್ಯಿಸುವಂತೆ ಮಾಡುತ್ತವೆ ಅದರ ಫಲವಾಗಿ, ನಿಮ್ಮಲ್ಲಿರುವ ಎಲ್ಲಾ ಬೇನೆಗಳು ಮಾಯವಾಗುತ್ತವೆ ನೀವು ಬೆವರುತ್ತಿರುವಾಗ ಅವು ನಿಮ್ಮ ಅಂಗದಿಂದ ಹೊರಟುಹೋಗುತ್ತವೆ"



ಕ್ರುಶನ್ ಲವಣಗಳು ಎಲ್ಲಾ ದವಾಖಾನೆಗಳಲ್ಲೂ ಸ್ಟೋರುಗಳಲ್ಲೂ, ಬಜಾರುಗಳಲ್ಲೂ ಮಾರಲ್ಪಡುತ್ತದೆ

No 23

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ, ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ, ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು, ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೆಟು—ಡಾ ವೈದ್ಯ ಎಲ್, ಸಿ. ಪಿ. ಎಸ್, ಕೊಲ್ಹಾಪುರ ಇವರು, ಕಾಣೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ ೪-೦-೦ ವಿ ಪಿ

ವಿಳಾಸ ಸಂಜೀವಿನೀ ಔಷಧಾಲಯ ಮು. ಪೋ. ಮಿರಜೆ, (S M. C.

ಮಹಿಳಾ ಸಮಾಜ

ಮಗುವಿನ ಮಾನಸಿಕ ಸ್ವಾತಂತ್ರ್ಯಕ್ಕೆ ಹೆತ್ತವರೂ ಅಡ್ಡ ಬರಬಾರದು

ತಾನು ಜನ್ಮವೆತ್ತಿದ ಭೂಮಿಯಲ್ಲಿ, ನಾಗರಿಕನಾಗಿ ಬಾಳಲು, ಪ್ರತಿಯೊಂದು ಶಿಶುವೂ ಅಧಿಕಾರ ಹೊಂದಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ, ಆ ಶಿಶುವು ಒಂದು ಪ್ರಾಯಕ್ಕೆ ತಲಪುವ ವರೆಗೆ, ದೇಶದ ಯಾವ ಕಾನೂನಿಗೂ ಅದನ್ನು ಬಂಧಿಸುವ ಶಕ್ತಿಯಿರುವುದಿಲ್ಲ. ಆದರೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಹೆತ್ತವರ ಶಾಸನವೇ ಅದಕ್ಕೆ ಆಗ ವಿಪರೀತವಾಗಿರುತ್ತದೆ.

ಮಕ್ಕಳ ಮೇಲೆ ಸರ್ವಾಧಿಕಾರವೇ?

ಪ್ರತಿಯೊಂದು ತಂದೆ ತಾಯಿಗಳೂ, ಪ್ರತ್ಯೇಕ ಪ್ರತ್ಯೇಕ ಶಾಸನಗಳಿಂದ ತಮ್ಮ ಮಕ್ಕಳನ್ನು ದಂಡಿಸುತ್ತಾರೆ. ಆ ಶಾಸನ ನಿಯಮಗಳಿಗೆ, ಅವರ ಮಕ್ಕಳು, ಮಾರು ಮಾತೆತ್ತದೆ ವಿಧೇಯರಾಗಿ ನಡೆಯಲೇ ಬೇಕು. ರಾಷ್ಟ್ರದ ಶಾಸನವನ್ನಾದರೂ, ಅದನ್ನು ನಿರ್ಮಾಣ ಮಾಡುವವರು, ಬಹಳ ದಿನಗಳ ಚರ್ಚೆಯಿಂದ ತಯಾರಿಸುವರು. ಹೀಗೆ ತಯಾರಿಸಿದ ಶಾಸನವು ಶಾಸನ ಸಭೆಯ ಮುಂದೆ ಬಂದಾಗ ಎದುರು ಪಕ್ಷದವರು ಅದರ ಅಕ್ಷರ ಅಕ್ಷರವನ್ನು ಹಿಡಿದೆತ್ತಿ ಟೀಕಿಸುವರು. ಬಹುಮತಕ್ಕೆ ಒಪ್ಪದಿದ್ದಲ್ಲಿ ಶಾಸನವು ಬಿದ್ದು ಹೋಗಲೂ ಬಹುದು. ಇದೀ ರಾಷ್ಟ್ರಕ್ಕೆ ಬರತಕ್ಕ ಶಾಸನದ ಕುರಿತು ಪ್ರತಿಯೊಬ್ಬರೂ, ಜನತೆಯ ಪ್ರತಿನಿಧಿಗಳು ಬಹಳ ಜಾಗ್ರತೆಯುಳ್ಳವರಾಗಿದ್ದಾರೆ. ಆದರೆ, ಯಾವ ಮಕ್ಕಳನ್ನು ತಂದೆತಾಯಿಗಳೇ ಅತ್ಯಂತವಾಗಿ ಪ್ರೀತಿಸುತ್ತಾರೋ, ಅವರ ವಿಷಯವಾಗಿ, ತಂದೆ ತಾಯಿಗಳು ಮಾಡಿದ ಶಾಸನವು ಬಹಳ ತೀಕ್ಷ್ಣವೂ, ತೀವ್ರ ಆಕ್ಷೇಪಕಾರಕವೂ ಇರುತ್ತದೆ. ಇಂದಿನ ಮಕ್ಕಳೇ ಮುಂದಿನ ಜನಾಂಗ ಆಂತಹವರಿಗೆ, ಇರತಕ್ಕ ಶಾಸನವು, ಅವರನ್ನು ಹೆತ್ತವರು ಮಾಡಿದ್ದೇ ಆಗಲಿ, ಆ ಮಕ್ಕಳ ಬೆಳವಣಿಗೆಗೆ, ನಾಗರಿಕತೆಯ ಮಟ್ಟಕ್ಕೆ ಮುಟ್ಟಿಸಲು ತಕ್ಕುದಿರಬೇಕು. ಶಾಸನ ಮಾಡಿ ಶಿಕ್ಷಿಸುವಾಗ, ತಮ್ಮದೇ ತಮ್ಮದಾದ, ಸರ್ವಾಧಿಕಾರಿ ಹೆತ್ತವರಿಗೂ ಸಲ್ಲದು.

ಒಬ್ಬ ಸೆರೆಯಾಳುವಿನ ವಿಷಯ

ಒಬ್ಬ ಸೆರೆಯಾಳುವಿಗೆ ಜೈಲಿನಲ್ಲಿ, ಅಧಿಕಾರಿಗಳು ಹೊಡೆದುಬಿಟ್ಟರೆಂದು ವಿಚಾರಿಸುವ. ಇದರಿಂದ ಇಡೀ ರಾಷ್ಟ್ರದಲ್ಲಿಯೇ ಬಹಳ ಗೊಂದಲ ಹುಟ್ಟುವುದು; ಪತ್ರಿಕೆಗಳು ಅದನ್ನು ಬಹು ದೊಡ್ಡ ವಿಷಯವಾಗಿ ಪ್ರಕಟಿಸುವವು. ರಾಜಕೀಯ ಮುಖಂಡರು ಅದರ ಕುರಿತು ಆವೇಶಗೊಂಡು ಭಾಷಣಮಾಡುವರು. ಪ್ರಜಾಪ್ರತಿನಿಧಿ ಸಂಸ್ಥೆಯ ಮೇಜಿನ ಮೇಲೆ ಹೊಡೆದು ಹೊಡೆದು ಸದಸ್ಯರು ಸರಕಾರವನ್ನು ಬೆದರಿಸುವರು. ಆದರೆ ನೂರಾರು ಮಂದಿ ಮಕ್ಕಳಿಗೆ, ಅವರ ಹೆತ್ತವರ ದಿನನಿತ್ಯ ಪೆಟ್ಟಿನ ಮಳೆ, ಬೈಗಳ ರಾಶಿ, ಇವುಗಳೆಲ್ಲವನ್ನು ಕೇಳಿದರೆ, ಆ ಮಕ್ಕಳಾದರೂ ತಾವು ಲೋಕದಲ್ಲಿ ನೀಚ ಪ್ರಾಣಿಗಳೆಂದೇ ತಿಳಕೊಳ್ಳಬೇಕಾಗುವುದು.

ಮನೆಯ ನಿರ್ಬಂಧಕ್ಕೆ ಎದುರಿಲ್ಲ

ಶಾಲೆಗಳಲ್ಲಿ ಉಪಾಧ್ಯಾಯರು ಹುಡುಗರನ್ನೂ ತಮ್ಮಿಷ್ಟದಂತೆ ಶಿಕ್ಷಿಸಬಾರದೆಂದು, ಸುಪ್ರಸಿದ್ಧ ವಿದ್ಯಾಂಗ ಸುಧಾರಕರಾದ ಮೊಂಟೆಸೋರಿ, ಫ್ರೋಬೆಲ್ ಮೊದಲಾದವರು ವಾದಿಸಿ ಜಯಶಾಲಿಗಳಾದರು. ಉಪಾಧ್ಯಾಯರ ಸರ್ವಾಯ ಹೊಡೆತದಿಂದ, ಆ ಪ್ರಣ್ಯಾತ್ಮರು ಮಕ್ಕಳನ್ನು ಕಾಪಾಡಿದರು. ಆದರೆ ಮನೆಯ ಶಿಕ್ಷೆಗೆ ಯಾರೂ ತಡೆ ಬರಲಿಲ್ಲ. ಹಿಂದ ಕ್ಕಾದರೂ, ಉಪಾಧ್ಯಾಯರು ಹೆತ್ತವರಷ್ಟು ಮಕ್ಕಳ ಮೇಲೆ ಸರ್ವಾಧಿಕಾರವನ್ನು



ಭಾರತದ ಋಷಿಕೆಯರು, ಬಹಳ ದೈವಭಕ್ತಿಯುಳ್ಳವರು; ಉಷಃಕಾಲದಲ್ಲಿ ತುಲಸಿಯ ವಂದನೆ ಮಾಡುವುದು ಅವರ ಮೊದಲನೆಯ ಕರ್ತವ್ಯ

ತೋರಿಸುತ್ತಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯದೊಳಗಿನ ಎಲ್ಲಾ ಗುಲಾಮರನ್ನೂ ಎಮಾನ್ಸಿಪೇಶನ್ ಆಕ್ಟ್ ಜಾರಿಗೆಬಂದ ಮೇಲೆ ಬಿಡುಗಡೆ ಮಾಡಲಾಯಿತು. ಆದರೆ ಮಕ್ಕಳ ಸಂಕಷ್ಟವನ್ನು ತಪ್ಪಿಸಲು ಯಾರೂ ಬರಲಿಲ್ಲ.

ಅವಿಧೇಯತೆಗೆ ಕಾರಣವೇನು?

ಹುಡುಗರು ತಂಟೆ ಮಾಡುವುದರ ಕಾರಣವಾದರೂ ಏನೆಂದು ವಿಚಾರಿಸಬೇಕು. ಮಕ್ಕಳು ಅವಿಧೇಯರಾಗಿ ತಂಟೆ ಮಾಡುವುದು ತಪ್ಪೆ? ಹೆತ್ತವರು ತಾಳ್ಮೆಗೆಟ್ಟು, ಅವಮಾನುಷತೆಯನ್ನು ತೋರಿಸುವುದು ತಪ್ಪೆ? ಆ ಮೇಲೆ ಇತ್ಯರ್ಥಿಸಬಹುದು.

ಪ್ರತಿಯೊಂದು ಮಗುವೂ ಆರೋಗ್ಯಕರವಾಗಿ ಹುಟ್ಟುತ್ತದೆಯೆಂದು ನಾವು ತಿಳಿಯುವ. ಮಗುವಿನ ಆರೋಗ್ಯವು ಹೆಚ್ಚಿದ್ದಂತೆ, ಅದರ ವಿಚಾರಶಕ್ತಿಯೂ ಹೆಚ್ಚಿರುತ್ತದೆ. ವಿಚಾರಶಕ್ತಿಯು ಹೆಚ್ಚಿದಂತೆ, ಅದು ಯಾವಾಗಲೂ ಕುತೂಹಲಗೊಂಡಿರುತ್ತದೆ. ಈ ಕುತೂಹಲದಿಂದ ಮಾಡುವ ಕೆಲಸವೇ ತಂದೆ ತಾಯಿಗಳು ಅವಿಧೇಯತೆಯೆಂದೂ ತಂಟೆಯೆಂದೂ ಗಣಿಸಿಕೊಂಡು, ಮಕ್ಕಳನ್ನು ಶಿಕ್ಷಿಸುವರು. ಹಾಗೆ ದಂಡಿಸುವ ಹೆತ್ತವರು, ಮಗುವಿನ ಪ್ರಾಕೃತಿಕ ಕುತೂಹಲವನ್ನು ತಮ್ಮ ಸರ್ವಾಯ ಪಾಶವಿಕ ದಂಡನೆಯಿಂದ ಹಾಳು ಮಾಡುತ್ತಾರೆ. ಮಕ್ಕಳ ಸರ್ವತೋಮುಖವಾದ ಅಭಿವೃದ್ಧಿಗಾಗಿ ಯತ್ನಿಸುತ್ತಿರುವ ತಂದೆ ತಾಯಿಗಳೇ ಮಗುವಿನ ಈ ಪ್ರಾಕೃತಿಕವಾದ ಗುಣವನ್ನು ತಿಳಿಯುವುದಿಲ್ಲವೆಂಬುದು ಆಶ್ಚರ್ಯ.

ಮಕ್ಕಳು ತಿರಿಗಿ ತಪ್ಪು ಮಾಡುವುದಿಲ್ಲ

ಮಕ್ಕಳನ್ನು ನಾವು ಹೆದರಿಸಿ, ಎರಡೇ ನಿಮಿಷಗಳಲ್ಲಿ ನಾವು ಹೇಳಿದಂತೆ, ಕೇಳಿಸಬಹುದು; ಆದರೆ, ಆ ಮಗುವಿಗೆ, ಅದು ಮಾಡಿದ ತಪ್ಪನ್ನು ತಿಳಿಸಬೇಕಾದರೆ, ನಾಲ್ಕು ಗಂಟೆಯ ಸಮಯಬೇಕು. ಹೆಚ್ಚಾಗಿ ಎಲ್ಲಾ ಮಕ್ಕಳು, ಒಮ್ಮೆ ತಪ್ಪೆಂದು ತಿಳಿದ ಕಾರ್ಯವನ್ನು ಮತ್ತೊಮ್ಮೆ ಮಾಡುವುದಿಲ್ಲ. ಆದರೆ ಕೆಲವು ಮಕ್ಕಳು ಅದಕ್ಕೂ ವಿಪರೀತವಾಗಿರುವುದುಂಟು; ಆದರೆ ಅವುಗಳ ವಿಷಯವಾಗಿಯೂ ದಂಡನೆ ಸಲ್ಲದು.

ಪರಿಹಾರವೇನು?

ಯಾವುದಾದರೂ ಒಂದು ಮಗುವು ತಪ್ಪುಮಾಡುತ್ತದೆಯೆಂಬುದು ತಿಳಿದರೆ, ಅದಕ್ಕೆ ಅದನ್ನು ವಿವರಿಸಿ ಹೇಳಬೇಕು. ಅದು ತಪ್ಪೆಂದನ್ನು ಪ್ರಮಾಣ ಪೂರ್ವಕ ತಿಳಿಸಬೇಕು. ಹೀಗೆ ಮಾಡಿದಲ್ಲಿ, ಮಗು ವಿನಲ್ಲಿಯೂ ವೈಯಕ್ತಿಕತೆಯು ಬೆಳೆಯುವುದು. ಇಂತಹ ವೈಯಕ್ತಿಕತೆಯಿಂದಲೇ ಸಮಾಜವೂ ಅಭಿವೃದ್ಧಿ ಹೊಂದುವುದು. ಮಕ್ಕಳ ವಿಷಯ ಹೀಗೆ ತಿದ್ದಿ ಸರಿಗೊಳಿಸುವುದು ಶಾಶ್ವತ ಪರಿಣಾಮಕಾರಿಯಾದುದು. ಇದಕ್ಕೆ ಅಪಾರ ತಾಳ್ಮೆ ಬೇಕು, ಮಾತ್ರವಲ್ಲದೆ ಸತ್ಯಪ್ರೇಮದ ಆಭರಣವು ಹೆತ್ತವರ ಹೃದಯವನ್ನು ತುಂಬಿರಬೇಕು.

ಜ್ಞಾನದ ಬೆಳವಣಿಗೆ

ಹೆಚ್ಚಾಗಿ ಮಕ್ಕಳು ತಂಟೆಮಾಡುವುದು ಜ್ಞಾನಶಕ್ತಿಯ ಬೆಳೆಯುವ ಸೂಚನೆ. ಇದಕ್ಕಾಗಿ ಸಿಟ್ಟುಗೊಳ್ಳುವುದಕ್ಕಿಂತ, ಹೆತ್ತವರು ಅಭಿಮಾನಗೊಳಬೇಕು. ಅವರನ್ನು ಆಗ ಯೋಗ್ಯದಾರಿಯಲ್ಲಿ ನಡೆಸಬೇಕು. ಬಡತನದಲ್ಲಿರುವ ಮಕ್ಕಳು ಹಾಳಾಗುತ್ತಾರೆ. ಅವರಿಗೆ ಸ್ವಾತಂತ್ರ್ಯ ಸಿಕ್ಕದ ಕಾರಣಲೇ, ಅವರು ಒಮ್ಮೆಗೇ ಎಲ್ಲಾ ಸ್ವಾತಂತ್ರ್ಯವನ್ನೂ ಉಪಯೋಗಿಸುತ್ತಾರೆ. ಹೆಚ್ಚಾಗಿ ಸವಾಶಾಲಿ ಧಾರ್ಮಿಕರ ಮಕ್ಕಳೇ ಅಧಾರ್ಮಿಕರಾಗಿರುತ್ತಾರೆ.

ಮಗುವಿನ ಮನಸ್ಸನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅದನ್ನು ಸರಿದಾರಿಗೆ ಹಚ್ಚಬೇಕು. ಪ್ರೇಮದಿಂದ ಬೆಳೆಸಬೇಕು. ಮಗುವಿಗಾದರೂ ಪ್ರಾಕೃತಿಕವಾಗಿರತಕ್ಕ ಸ್ವಾತಂತ್ರ್ಯಕ್ಕೆ ಹೆತ್ತವರೂ ಅಡ್ಡ ಬರಬಾರದು. ಮುಂದಿನ ಲೋಕದಲ್ಲಿ ಅದೂ ಉತ್ತಮ ನಾಗರಿಕನಾಗತಕ್ಕದ್ದು. ಈ ವಿಷಯ ತಂದೆಗಿಂತಲೂ ತಾಯಿಯು ಹೆಚ್ಚು ಗಮನಕೊಡಬೇಕು.

ನಷ್ಟರಹಿತ! ಸ್ವರ್ಣಸಂಧಿ! ಕಳಕೊಳ್ಳಬೇಡಿರಿ!!

ಸರ್ವೋತ್ತಮ ಸ್ಪರ್ಧೆ ನಂ. ೧

ಪ್ರಥಮ ಬಹುಮಾನ ರೂ 20 ದ್ವಿತೀಯ ಬಹುಮಾನ ರೂ. 5

2 ತಪ್ಪಿನವರಿಗೆಲ್ಲರಿಗೂ 12 ಆಣೆ ಕ್ರಯದ ಬ್ರಹ್ಮಿತೈಲ ಬಾಟ್ಲಿ 1. 3 ತಪ್ಪಿನವರಿಗೆಲ್ಲರಿಗೂ 8 ಆಣೆ ಕ್ರಯದ ಭೃಂಗರಾಜತೈಲ ಬಾಟ್ಲಿ 1. 4 ತಪ್ಪಿನವರಿಗೆಲ್ಲರಿಗೂ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆಲ್ಲರಿಗೂ 6 ಆಣೆ ಕ್ರಯದ ಅಂಬಾ ಹೆಯರ್ ಆಯಿಲ್ ಬಾಟ್ಲಿ 1. ರೂ. 1ರ 6 ಉತ್ತರ ಕಳುಹಿಸಿದವರಿಗೆಲ್ಲರಿಗೂ ಕಾಲುಪೌಂಡಿನ ಚ್ಯವನಪ್ರಾಶ ಬಾಟ್ಲಿಯೊಂದು. ಔಷಧಿ ಅಗಿನ ಊರಿನ ನಮ್ಮ ಏಜಂಟರ ಮುಖೇನವೂ ಕೊಡುವ ಏರ್ಪಾಡು ಮಾಡಲಾಗುವುದು.

—ಗಳೂರು	(1
ಅ——ಬಾದ್	(2
—ಲ್ಲೂರು	(3
——ಪುರ	(4
——ಶ್ವರ	(5
——ರು	(6

ನಿಯಮಗಳು:

—ಹಾಕಿದಲ್ಲಿ ಒಂದು ಅಕ್ಷರ ತುಂಬಿಸಿದರೆ ಒಂದು ರೈಲ್ವೇ ಸ್ಟೇಶನಿನ ಹೆಸರಾಗುವುದು. ಮೊಹರು ಮಾಡಿಟ್ಟ ಉತ್ತರಕ್ಕೆ ಸರಿಯಾಗಿ ತೋರುವ ಉತ್ತರಕ್ಕೆ 1ನೇ ಬಹುಮಾನ ಕೊಡೋಣಾಗುವುದು. ಆಯುರ್ವೇದ ಪ್ರಚಾರ ದೃಷ್ಟಿಯಿಂದ ಈ ಸ್ಪರ್ಧೆ ಪ್ರಾರಂಭಿಸಿರುತ್ತದೆ. ಪ್ರತೀಯೊಬ್ಬರಿಗೂ ಬಹುಮಾನವಿದೆ. ಸರಿಯಾದ ಉತ್ತರವು ತಾ. 29-9-39ರ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸುತ್ತದೆ. ಬಹುಮಾನ ಅದೇ ದಿವಸ ಹಂಚಲಾಗುತ್ತೆ. 0-1-0 ಸ್ಟ್ಯಾಂಪು ಇಟ್ಟಲ್ಲಿ ಪತ್ರವ್ಯವಹಾರಕ್ಕೆ ಅವಕಾಶವಿದೆ. ಪ್ರವೇಶಧನ ಉತ್ತರಕ್ಕೆ 0-4-0, ಮೂರು ಉತ್ತರಕ್ಕೆ 0-8-0, ಮತ್ತು 1-0-0ಗೆ 6 ಉತ್ತರ. ಪ್ರವೇಶಧನ ಮನಿಯಾರ್ಡರ ಯಾ ಪೋಸ್ಟಲ್ ಆರ್ಡರ ಮುಖೇನ ಕಳುಹಿಸಬಹುದು. ಎಲ್ಲಾ ಉತ್ತರಗಳು 22-9-39ರೊಳಗೆ ನಮಗೆ ತಲುಪಬೇಕು.

Wanted Agents Apply to:

ವಿಳಾಸ: **Sarvothuma Products**, Bantval S. K.

ಸಾಹಿತ್ಯ ಸಂಚಯ

ಸ್ವೀಕಾರ--ವಿಮರ್ಶೆ

೧ ಸಮಾಜ ರಚನೆ. ೨ ಭಾಷೆ ಮತ್ತು ಬರವಣಿಗೆ ೩. ಮತಧರ್ಮ. ೪ ಅತೀಂದ್ರಿಯವಾಗಿ ತೋರುವ ವಿದ್ಯಮಾನಗಳು. ಲೇಖಕರು,—ಶ್ರೀ. ಗಳಾದ ಎಚ್. ನಾರಾಯಣ ರಾವ್, ಬಿ. ಎ ಮತ್ತು ಕೆ. ಪಿ ರಾಮನಾಥಯ್ಯ, ಎಂ ಎ. ೧೫ ಪಾಪಯ್ಯ ಬೀದಿ, ಚಿಕ್ಕಮಾವಳ್ಳಿ, ಬೆಂಗಳೂರು ಸಿಟಿ. ಡೆಮ್ಮಿ ಅಷ್ಟಮಾಂಶದ ೧೮, ೧೪, ೩೯, ೩೧ ಪುಟಗಳು ಬೆಲೆ?

೧. ಕೌಟುಂಬಿಕ ಜೀವನಕ್ಕಾಗಿ ವ್ಯಕ್ತಿಗಳು ಸಮಾಜ ಸಂಘಟನೆಯನ್ನು ಮಾಡಿಕೊಂಡ ವಿಷಯವು, ಇದರಲ್ಲಿ ಮನುಷ್ಯನ ಮೊದಲ ಬಾಳುವೆಯಿಂದ ಆರಂಭಿಸಿ, ಮಾನವನು ಅನಾಗರಿಕತೆಯಿಂದ ನಾಗರಿಕತೆಯ ಮೆಟ್ಟಿಲಿಗೆ ಏರಿಬಂದಂತೆ, ಬೇಟೆ, ಪಶುಪಾಲನೆ, ವ್ಯವಸಾಯ, ವೃತ್ತಿಗಳಲ್ಲಿ ನಿರತನೂ, ಜನಾಂಗರಚನೆ ಮಾಡಿಕೊಂಡು, ಶತ್ರು ಮಿತ್ರ ಕಲಹ ಸಾಮ್ಯಗಳನ್ನೇರ್ಪಡಿಸಿಯೂ, ಜಯದಾಸೆ ಹೆಚ್ಚಿದಂತೆ ರಾಜ್ಯದಾಕ್ರಮಣಕ್ಕೆ ತೊಡಗಿದ ಈ ಮನುಷ್ಯವಂಶದ ಇತಿಹಾಸವೂ, ಕಡೆಗೆ ಸಮಾಜದ ಲೋಕ ಕಲ್ಯಾಣ ದೃಷ್ಟಿಯ ತತ್ವವೂ ಸಂಗ್ರಹವಾಗಿ ವರ್ಣಿತವಾಗಿದೆ

೨. ಮಾನವನ ಏಳಿಗೆಯಲ್ಲಿ ಭಾಷೆ ಮತ್ತು ಬರವಣಿಗೆಗಳು ಪಡೆದ ಸ್ಥಾನ, ಮಾತನಾಡುವುದನ್ನು ಕಲಿಯುವುದಕ್ಕಿಂತ ಮೊದಲಿದ್ದ ಸ್ಥಿತಿ, ಆ ಮೇಲೆ ಕ್ರಮಶಃ ಮಾತುಗಾರಿಕೆ, ಕತೆಗಾರಿಕೆ, ಚಿತ್ರಲೇಖನ ಪದಲಿಪಿ, ಅಕ್ಷರಲಿಪಿ ಭಾಷೆ ಮತ್ತು ಬರವಣಿಗೆಯ ಸಮಾಯೋಗ, ಮುದ್ರಾಯಂತ್ರದ ನೆರವು, ಭಾಷೆಗಳಲ್ಲಿರುವ ಕೊರತೆ, ಈಗಿನ ಪರಿಸ್ಥಿತಿ ಈ ಎಲ್ಲಾ ವಿಷಯಗಳು ಭಾಷಾಶಾಸ್ತ್ರದ ದೃಷ್ಟಿಯಿಂದ ವಿವರಿಸಲ್ಪಟ್ಟಿದೆ

೩. ಮಾನವನ ಜೀವಿತದಲ್ಲಿ ಮತಧರ್ಮಗಳ ನೆಲೆಗಡೆ ಪೂರ್ವೇತಿಹಾಸ, ಆದಿಯ ದೈವ ಕಲ್ಪನೆ, ದೇವಸ್ಥಾನಗಳ ರಚನೆ, ಯಜ್ಞ ಆಹುತಿಗಳು, ಮತಸ್ಥಾಪನೆ ಮತ ಸಂಸ್ಕಾರಗಳು, ವಿವಿಧ ಮತಗಳ ಉದ್ಭವ, ವಿಜ್ಞಾನ ದೃಷ್ಟಿಯಲ್ಲಿ ಮತದ ವಿಶಾಲತೆ, ಮತಧರ್ಮ ಶಿಕ್ಷಣದ ಆವಶ್ಯಕತೆ ಇವುಗಳು ವಿಸ್ತೃತವಾಗಿವೆ

೪ ಮನುಷ್ಯನ ಮನಸ್ಸಿನ ಮೇಲೆ ಅತೀಂದ್ರಿಯವಾಗಿ ತೋರುವ ಕೆಲವು ಪರಿಣಾಮಗಳಾಗುವ ವಿಚಾರ, ಮನಮೋಹಕ ಜಾಲ (Hypnotism)ದ ಮಹಿಮೆ, ಮನೋಧರ್ಮ, ಮನಮೋಹಕ ಜಾಲದ ಉದ್ದೇಶಗಳು, ಈ ವಿಷಯದಲ್ಲಿ ವಿದೇಶೀಯ ವಿಜ್ಞಾನಿಗಳ ಅನುಭವ ಪ್ರಯೋಗವಿದ್ಯೆಗಳ ವಿಮರ್ಶೆ, ಇವೇ ವಿಷಯಗಳು ಚರ್ಚಿತವಾಗಿವೆ

ಅಂತೂ ಈ ನಾಲ್ಕು ಚಿಕ್ಕ ಹೊತ್ತಿಗೆಗಳು ಕನ್ನಡದಲ್ಲಿ ಹೊಸ ವಿಷಯ ಬೋಧಕಗಳಾಗಿವೆ. ಇಂತಹ ವೈಜ್ಞಾನಿಕ ದೃಷ್ಟಿಕೋಣದಿಂದ, ಸಮಾಜದ ನೆಲೆಗಟ್ಟನ್ನು ಒಳಹೊಕ್ಕು ವಿವರಿಸಿದ ವಿಮರ್ಶಾತ್ಮಕ ಪುಸ್ತಕಗಳು ಕನ್ನಡದಲ್ಲಿ ಬಹಳ ಕಡಿಮೆ. ಮನುಷ್ಯನ ಜ್ಞಾನಶಕ್ತಿಗೆ ಇಂತಹ ಪುಸ್ತಕಗಳ ಅಭ್ಯಾಸದಿಂದ ಬಹಳ ಉಪಕಾರವಾಗುವುದು.

ಯಾವುದೊಂದು ಪ್ರಸ್ತಾಪನೆ ವಿವರಣೆಗಳ ಆಡಂಬರಗಳಿಲ್ಲದೆ, ಈ ವಿಷಯಗಳ ಕುರಿತು ಬರೆದ ಪ್ರಯೋಜನಕಾರಿಯಾದ ಈ ಪುಸ್ತಕಗಳನ್ನು ವಿಚಾರವಂತರಾದ ಇಬ್ಬರು ಲೇಖಕರು, ಹೀಗೆ ನಿರ್ಮಲವಾಗಿ ಕನ್ನಡಿಗರ ಮುಂದಿಡುವುದರಲ್ಲಿ ಒಂದು ವಿಶಿಷ್ಟ ಉದ್ದೇಶವಿರಬೇಕೆಂದು ಅನ್ನಿಸುತ್ತದೆ. ಭಾಷೆ, ಬರವಣಿಗೆಗಳ ಶೈಲಿಯು ಸಾಕಷ್ಟು ಪರಿಪೂರ್ಣವಾಗಿದೆ ಮುಂದಕ್ಕೆ ಈ ಲೇಖಕರಿಂದ ಈ ರೀತಿಯ ಹಲವು ಕೃತಿಗಳನ್ನು ಹಾರೈಸುತ್ತೇವೆ.

'ಮಕ್ಕಳ ಪುಸ್ತಕ' ಪ್ರೆಸ್ಸಿನ ಸುಂದರ ಮುದ್ರಣವು ಪುಸ್ತಕದ ಸೌಂದರ್ಯವನ್ನು ಹೆಚ್ಚಿಸಿದೆ.

ಮಹಾತ್ಮಾಗಾಂಧಿ: ಬರೆದವರು — ಕಿರುತ್ತಾರಿ, ಗ್ರಾಮ ಸೇವಾನಿಲಯ, ಈದಿಗ ಮೈಸೂರು ಕ್ರೌನ್ ಅಷ್ಟಮಾಂಶದ ೧೪೮ ಪುಟಗಳು, ಬೆಲೆ ೧೨ ಆಣೆ

ಗಾಂಧಿಜಿಯವರ ಜೀವನ ಚರಿತ್ರೆಯನ್ನು ಲೇಖಕರಿಗೆ ಬರೆದಷ್ಟೂ ತೀರದಿರುವಂತೆ, ವಾಚಕರಿಗೆ, ಓದಿದಷ್ಟೂ ಸಾಕೆನಿಸುವುದಿಲ್ಲ, ಗಾಂಧಿಜಿಯವರಂತಹ ಮಹಾ ವಿಭೂತಿ ಪುರುಷರ ಜೀವನ, ಲೇಖನಗಳಿಗೆ ಯಾವುದೇ ಸಾಹಿತ್ಯದಲ್ಲಾಗಲಿ ಒಂದು ವಿಶಿಷ್ಟ ಸ್ಥಾನ ಇದೆ ಹಿಂದಿನ ಒಬ್ಬೊಬ್ಬ ಮಹಾಪುರುಷರು ಒಂದೊಂದು ಯುಗದ ಇತಿಹಾಸವನ್ನು ಬೆಳಗಿಸಿದಂತೆ, ಗಾಂಧಿಜಿಯವರು ವರ್ತಮಾನ ಕಾಲದಲ್ಲಿ ಮಹತ್ವವಾದ ಕಾರ್ಯ ಮಾಡಿದ್ದಾರೆ. ರಾಜಕೀಯದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಧೀರ ನಿಶ್ಚಲ ನಾಡ ಕರ್ಮಯೋಗಿಯಾಗಿ, ತನ್ನ ಜೀವನದಲ್ಲಿ ಶುದ್ಧ ದೈವಭಕ್ತಿ, ಈಶ್ವರ ತತ್ವಗಳನ್ನೇ ಬೆಳೆಸಿ ಸಾಧಿಸಿಕೊಂಡ ಅವರ ಪಾವನ ಜೀವನ ಕಥೆಯು ಯಾರಿಗೆ ಅಪ್ಯಾಯನವಾಗಲಿಕ್ಕಿಲ್ಲ?

ಗಾಂಧಿಜಿಯವರ ಚರಿತ್ರೆಯ ಕುರಿತು ಕನ್ನಡದಲ್ಲಿ ಹಲವು ಗ್ರಂಥಗಳು ಹುಟ್ಟಿವೆ ಗಾಂಧಿಜಿಯವರ 'ಸತ್ಯ ಶೋಧನೆ'ಯೇ ಕನ್ನಡಿಸಲಾಗಿದೆ ಇದರ ಇತ್ತೀಚೆಗೆ ನಡೆದ ಅನೇಕ ಘಟನೆಗಳ ವರ್ಣನೆಗಳನ್ನು ಕೊಟ್ಟಿರುವ ಈ ಪುಸ್ತಕವು ಅವರ ಪೂರ್ಣ ಜೀವನದ ಸಂಗ್ರಹವಾಗಿದೆ.

ಜೀವನ ಚರಿತ್ರೆಯನ್ನು ಬರೆವಲ್ಲಿ, ಇವರು ಒಂದು ಹೊಸ ಹಾಗೂ ಯೋಗ್ಯವಾದ ಬಳಕೆಯನ್ನು ತೋರಿಸಿದ್ದಾರೆ ಅಲ್ಲಲ್ಲಿನ ಘಟನಗಳನ್ನು ವಿವರಿಸಿ ತಿಳಿಸುವಲ್ಲಿ ಮಹಾತ್ಮಾಜಿಯವರ ಮಾತನ್ನೇ ಎತ್ತಿ ಹೇಳಿ, ವಿಷಯಗಳನ್ನು ಸ್ಪಷ್ಟಗೊಳಿಸುವ ಕ್ರಮವು ಬಹಳ ಊರ್ಜಿತವೆನಿಸುತ್ತದೆ ವಾಚಕರಿಗೆ ಕೇವಲ ಲೇಖಕನ ಕಾಲ್ಪನಿಕವೋ ಎಂದು ಊಹಿಸಬಹುದಾದ ವಿಷಯಗಳಿಗೆ ಇದರಿಂದ ಸತ್ಯತೆಯ ಮುದ್ರೆಯೊತ್ತಿದಂತೆ ಆಗುತ್ತದೆ

ಗಾಂಧಿಜಿಯವರ ಜೀವನ ಚರಿತ್ರೆ ಮಾತ್ರವಲ್ಲದೆ, ಪುಸ್ತಕದ ಕೊನೆಗೆ, 'ಗಾಂಧಿಯುಗ' 'ಮಹಾತ್ಮರ ವ್ಯಕ್ತಿತ್ವ' ಎಂಬ ಎರಡು ವಿಮರ್ಶಾಪೂರ್ಣವಾದ ಭಾಗಗಳು ಸೇರಿ, ಗ್ರಂಥದ ಉದ್ದೇಶವನ್ನು ಲೇಖಕರು ಸಂಪೂರ್ಣಗೊಳಿಸಿದ್ದಾರೆ

ಮಹಾತ್ಮಾಜಿಯವರ ಬಾಲ್ಯ ಕಾಲದಿಂದ ಇಂದಿನ ವರೆಗಿನ, ವಿವಿಧ ಭಾವ ಚಿತ್ರಗಳೂ ಇವೆ

ಲೇಖಕರು ಈ ಗ್ರಂಥವನ್ನು ಸಾಕಷ್ಟು ಪರಿಶ್ರಮ ಮೂಲಕವಾಗಿ ಬರೆದಿದ್ದಾರೆ. ಭಾಷೆಯು ಗ್ರಂಥದ ಮಹತ್ವಕ್ಕೆ ಒಪ್ಪುವಂತೆ ಸರಲವಾಗಿಯೂ ಶುದ್ಧವಾಗಿಯೂ ಇದೆ ಕಿರುತಾರಿಯ ಕಡೆಗೆ ಕನ್ನಡಿಗರು, ಇನ್ನೂ ಹೆಚ್ಚು ಹೆಚ್ಚು ಬೆಳಕಿಗಾಗಿ ನಿರೀಕ್ಷಿಸಬಹುದು.

ಪುಸ್ತಕದ ಅಚ್ಚುಕಟ್ಟೂ ಚನ್ನಾಗಿದೆ ಇಷ್ಟು ಕಡಿಮೆ ಬೆಲೆಗೆ ಇಷ್ಟು ಮುದ್ದಾದ ಮತ್ತು ಮಹತ್ವವಾದ ಪುಸ್ತಕವನ್ನು ಕನ್ನಡಿಗರಿಗೆ ಕೊಡುವುದು ಪ್ರಕಾಶಕರ ಸಾಹಸವಾಗಿದೆ

— ಕಯ್ಯಾರ

ಸಾದರ--ಸ್ವೀಕಾರ

ಹತ್ತು ವರುಷ ಬರೆದವರು ಶ್ರೀ. ಜಿ. ಪಿ ರಾಜರತ್ನಂ ಪ್ರಕಾಶಕರು, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.

ವಿಮರ್ಶೆಯಥಾವಕಾಶ.

ಗಾಂಧಿಜಿಯವರ ಜೀವನ ಚಿತ್ರ

ಗಾಂಧಿಜಿಯವರ ಜೀವನವನ್ನು ಚಲಚ್ಚಿತ್ರದಲ್ಲಿ ತೋರಿಸುವ ಬಗ್ಗೆ ಮದ್ರಾಸಿನ ಶ್ರೀ ಎ. ಕೆ. ಚೆಟ್ಟಿಯರರು ಪ್ರಪಂಚದಲ್ಲಿ ತಿರುಗಾಡಿ ಧನ ಸಂಗ್ರಹ ಮಾಡುತ್ತಿದ್ದಾರೆ

ಈಗಾಗಲೇ ಸ್ಟುಡಿಯೋದಲ್ಲಿ ನ್ಯೂಸ್ ರೀಲುಗಳ ಉತ್ತಮ ನೆಗೆಟಿವ್‌ಗಳು ತೆಗೆಯಲಾಗಿದೆ

Kanarese No -9

ಮಾತೆಯೇ, ಮಕ್ಕಳು ರಾತ್ರಿಯಲ್ಲಿ ಎಚ್ಚತ್ತು ಅಳುತ್ತಿವೆಯೇ?

ಮಗುವನ್ನು ಮೀಯಿಸಿದ ನಂತರ ಇಡೀ ಮೈಗೆ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಸವರಿಸಿರಿ, ಆಗ ಮಗುವಿಗೆ ರಾತ್ರಿ ಎಚ್ಚರವಾಗದು—ಅಂದರೆ ನಿಮಗೆ ಕೂಡಾ ತೊಂದರೆಯಾಗದೆ ನಿದ್ರೆಬೀಳುವುದು! ಕುಟಿಕೂರಾ ಟಾಲ್ಕಮಿನ ಗುಣವು ಎಷ್ಟು ವಿಶಿಷ್ಟ ಮತ್ತು ಕ್ರಿಮಿನಾಶಕವೆಂದರೆ, ತುರಿಸುವಿಕೆ ಯಾ ತುರಿಗಜ್ಜಿಗಳಿಂದ ಮಗುವಿನ ನಿದ್ರೆಯು ಹಾನಿಯಾಗದು ಇದು ಬೆವರನ್ನು ಹೀರಿಕೊಂಡು ಚರ್ಮಕ್ಕೆ ಆಹ್ಲಾದಕರವಾದ ಪರಿಮಳವನ್ನು ಕೊಡುವುದು ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳು ಮಕ್ಕಳಿಗೆ ಕುಟಿಕೂರಾ ಟಾಲ್ಕಮನ್ನೇ (Cuticura Talcum) ಶಿಫಾರಸು ಮಾಡುತ್ತಾರೆ ತುರಿಗಜ್ಜಿ ಮತ್ತು ತುರಿಸುವಿಕೆಯನ್ನು ತಡೆಗಟ್ಟಲು ಇದಕ್ಕೆ ಸಮಾನವಾದುದಿಲ್ಲ

ಮಕ್ಕಳ ಸ್ನಾನಕ್ಕೆ ಕುಟಿಕೂರಾ ಸಾಬೂನನ್ನು (Cuticura Soap) ಉಪಯೋಗಿಸಿರಿ ಇದು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛವಾಗಿರಿಸುವುದು ಕುಟಿಕೂರಾ ಮುಲಾಮು (Cuticura Ointment) ಗಾಯಗಳನ್ನೂ ವ್ರಣಗಳನ್ನೂ ಕೂಡಲೇ ಗುಣಪಡಿಸುವುದು

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಮಕ್ಕಳಿಗೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ರುಚಿಯಲ್ಲಿಯೂ, ಬಣ್ಣದಲ್ಲಿಯೂ ನಸ್ಯವು ಖಾರದಲ್ಲಿಯೂ, ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ವೀಸಕ್ಕೆ ರೂ. 3-8-0 ನವಿಲಿನ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ 3-0-0 (ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ಎಡ್ರೆಸು —

ಎ ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್ ಪಿ. ಬಿ. ನಂಬ್ರ 47 ಮದ್ರಾಸ

ಮದ್ರಾಸಿನಲ್ಲಿ ರಕ್ಷಣಾ ಸಿದ್ಧತೆ

ಮದ್ರಾಸಿನಲ್ಲಿ ರಕ್ಷಣಾ ಸಿದ್ಧತೆಯು ನಡೆಯುತ್ತದೆ. ವಿಮಾನಧಾಳಿಯನ್ನು ಎದುರಿಸುವ ಸಾಮಗ್ರಿಗಳು ಬಂದಿವೆ. ಕೆಲವು ಸಾರ್ವಜನಿಕ ಕಟ್ಟಡಗಳಲ್ಲಿ ಇದು ಇರಿಸಲಾಗಿದೆ.

ಕರಾವಳಿಯಲ್ಲಿ ಕಾವಲುಗಾರರು ಬಹಳ ಜಾಗ್ರತೆಯಿಂದ ಕಾಯುತ್ತಿದ್ದಾರೆ. ದೀಪಸ್ತಂಭವನ್ನು ನಾಶಗೊಳಿಸದಂತೆ ನೋಡಲಾಗಿದೆ.

ವಿದೇಶೀಯರ ಕುರಿತು ಪ್ರಕಟಣೆಯು ಪ್ರಕಟಿತವಾಯಿತು.

ಬೊಂಬಾಯಿ ಕಲ್ಕತ್ತಗಳಲ್ಲಿಯೂ ಇದೇರೀತಿ ಬಹಳ ತೀವ್ರವಾಗಿ ಕಾರ್ಯಗಳು ನಡೆಯುತ್ತವೆ. ಹಲವು ನಗರಗಳಲ್ಲಿ ಈಗಾಗಲೇ ತುಂಬಾ ಗಲಭೆ ಹುಟ್ಟಿದೆ.

ಹಿಂದೂ ವಿಶ್ವವಿದ್ಯಾಲಯದ ಅಧಿಕಾರಕ್ಕೆ ಮಾಲವೀಯರ ರಾಜಿನಾಮೆ

ಪಂಡಿತ ಮದನಮೋಹನ ಮಾಲವೀಯರು ತಮ್ಮ ನಿರಂತರ ಸಾಹಸದಿಂದ, ಕಾಶಿಯಲ್ಲಿ ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ, ಕಳೆದ ೧೯೧೯ರಿಂದ ವೈಸ್ ಚಾನ್ಸಲರಾಗಿದ್ದರು. ಈಗ, ಅನಾರೋಗ್ಯದ ನಿಮಿತ್ತ ಆ ಪದವಿಗೆ ರಾಜಿನಾಮೆಯಿತ್ತು, ತನ್ನ ಸ್ಥಾನದಲ್ಲಿ, ಪ್ರೊ. ರಾಧಾಕೃಷ್ಣನರನ್ನು ಆರಿಸಬೇಕೆಂದು ಹೇಳಿರುವರು.

ಗ್ರಾಮಉದ್ಯೋಗಸ್ಥರೂ ರಾಜಕೀಯವೂ

ಸರಕಾರದ ಪ್ರಕಟಣೆ

ಗ್ರಾಮಉದ್ಯೋಗಸ್ಥರು ರಾಜಕೀಯ ವಿಷಯದಲ್ಲಿ ಅಥವಾ, ಎಸೆಂಬ್ಲಿ, ಮುನ್ಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು, ಪಂಚಾಯತ ಬೋರ್ಡು ಮೊದಲಾದುವುಗಳ ಚುನಾವಣೆಯಲ್ಲಿ ಭಾಗವಹಿಸ ಬಹುದೋ ಎಂಬ ವಿಷಯವನ್ನು ಸರಕಾರವು ಆಲೋಚನೆಮಾಡಿದೆ. ಸರಕಾರದ ಕೆಲಸದಲ್ಲಿರುವ ಗ್ರಾಮಉದ್ಯೋಗಸ್ಥರು ರಾಜಕೀಯದಲ್ಲಾಗಲಿ, ಮೇಲೆ ಹೇಳಿದ ಯಾವುದೇ ಚುನಾವಣೆಯಲ್ಲಾಗಲಿ ಸೇರುವುದು ಸರಿಯಲ್ಲವೆಂದು ಸರಕಾರವು ಅಭಿಪ್ರಾಯಪಟ್ಟಿದೆ. ಅಥವಾ ಯಾರಿಗೆ ರಾಜಕೀಯದಲ್ಲಾಗಲಿ, ಮೇಲೆ ಸೂಚಿಸಲಾದ ಚುನಾವಣೆಯಲ್ಲಾಗಲಿ ಉಮೇದ್ವಾರರಾಗಬೇಕೆಂದು ಮನಸ್ಸು ಇದೆಯೋ ಅಂತಹವರು, ತಮ್ಮ ಅಧಿಕಾರಿಗಳಿಗೆ ಮೊದಲಾಗಿ ರಾಜಿ ಕೊಡಬೇಕೆಂದೂ ತಿಳಿಸುತ್ತದೆ. ಇಷ್ಟರಲ್ಲಿಯೇ ಎಸೆಂಬ್ಲಿ, ಡಿ. ಬೋರ್ಡು, ಪಂಚಾಯತ ಬೋರ್ಡು ಮೊದಲಾದುವುಗಳಲ್ಲಿ ಸದಸ್ಯರಾಗಿರುವವರು ತಮ್ಮ ಅವಧಿಯ ವರೆಗೆ ಇರಬಹುದೆಂದೂ, ಮುಂದಿನ ಚುನಾವಣೆಗೆ ನಿಲ್ಲಬೇಕಾದರೆ, ತಮ್ಮ ಕೆಲಸಗಳಿಗೆ ರಾಜಿಕೊಡದೆ ಇರಲು ಸಾಧ್ಯವಿಲ್ಲವೆಂದು ಸರಕಾರವು ತಿಳಿಸುತ್ತದೆ. ಕೆಲಸದಲ್ಲಿಯೇ ಇದ್ದರೂ ಅವರಿಗೆ ಇಷ್ಟ ಬಂದವರಿಗೆ ಓಟು ಕೊಡಬಹುದು.

ಬೊಂಬಾಯಿಯ ಸಮೀಪವಿರುವ ಕಲ್ಯಾಣದಲ್ಲಿ ನೆರೆಯ ಹಾವಳಿ



ಭಯಂಕರವಾದ ಮಳೆಯ ಹಾವಳಿಯಿಂದ ಕಲ್ಯಾಣದ ಬೀದಿಗಳೆಲ್ಲಾ ನೀರಿನಿಂದ ತುಂಬಿವೆ

ಸಮಾಜಿಕ ಕೆಲಸಗಾರರಿಗೆ ಶಿಕ್ಷಣ

ಅಲ್ಲಹಾಬಾದಿನಲ್ಲಿ ಹರಿಜನ ಆಶ್ರಮದಲ್ಲಿ ಸಾಮಾಜಿಕ ಕೆಲಸಗಾರರಿಗೆ ಒಂದು ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಲಾಗಿದೆ. ಅಖಿಲ ಹಿಂದೂಸ್ಥಾನದಲ್ಲಿ, ಇಂತಹುದು, ಇದೇ ಪ್ರಥಮ ಸುಧಾರಣೆಯಾಗಿರುತ್ತದೆ.

ಹರಿಜನ ಮತ್ತು ಸವರ್ಣರಲ್ಲಿ ಗೊಂದಲಗಳುಂಟಾಗದಂತೆ, ಜನಮತವನ್ನು ಸರಿಗೊಳಿಸಲು ಒಳ್ಳೆಯ ಶಿಕ್ಷಣ ಕೊಡದ ಕೆಲಸಗಾರರಿಂದ ಸಾಧ್ಯವಿಲ್ಲವೆಂದು ತಿಳಿದು ಈ ಕಾರ್ಯವು ಆರಂಭಿಸಲ್ಪಟ್ಟಿದೆ.

ಬಾಗ್ದಾದಿನ ಹಿಂದೀಯರಿಗೆ ಗಾಂಧಿಜಿಯವರ ಮಾತು ಕೇಳುವ ಆತುರ

ಬಗ್ದಾದಿನ ಹಿಂದೀಯರ ಪರವಾಗಿ ಶ್ರೀ ಎ. ಎಂ. ಕೆ. ನಾಸಿರ್ ಎಂಬವರು ಅಲ್ಲಿರುವ ಹಿಂದೀ ಸೈನಿಕರನ್ನು ಸಾಮ್ರಾಜ್ಯ ಶಾಹಿಯ ಬೆಳವಣಿಗೆಯ ಸಲುವಾಗಿ ಬ್ರಿಟಿಷ ಸಾಮ್ರಾಜ್ಯ ಶಾಹಿಯು ಉಪಯೋಗಿಸುವುದನ್ನು ನಿಷೇಧಿಸಿ ಒಂದು ಪತ್ರವನ್ನು ಅಖಿಲಭಾರತ ಕಾಂಗ್ರೆಸು ಕಮಿಟಿಗೆ ಕಳುಹಿಸಿರುವರು.

ಅವರು ಅಖಿಲ ಭಾರತ ಕಾಂಗ್ರೆಸು ಕಮಿಟಿಗೆ, ಅಲ್ಲಿಂದ, ಧನ ಸಹಾಯವನ್ನೂ ಕೂಡಿಸಿ ಕಳುಹಿಸಿರುವರು, ಮಾತ್ರವಲ್ಲದೆ, ಆ ಕುರಿತು ಬಾಗ್ದಾದಿನಲ್ಲಿ ಮಹಾತ್ಮಾಜಿ ಮತ್ತು ಇತರ ಭಾರತೀಯ ಧುರೀಣರು ಬಂದು ಭಾಷಣ ಕೊಡಬೇಕಾಗಿಯೂ ಕೇಳಿಕೊಂಡಿರುವರು.

ನೋಟೀಸು

ದಿ. ಕೆನರಾ ಬ್ಯಾಂಕ್ ಲಿಮಿಟೆಡ್, ಉಪ್ಪಿನಂಗಡಿ.

ಈ ಕೆಳಗೆ ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲಗಳ ಅಸಲು ಯಾ, ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದಲೂ ಸದ್ರಿಯವರಿಗೆ ಟಪ್ಪಾಲು ದ್ವಾರ ಮೂಲಕ ರವಾನಿಸಿದ ನೋಟೀಸುಗಳೂ, ರಿಜಿಸ್ಟ್ರಿ ನೋಟೀಸುಗಳೂ ವಿಳಾಸದಾರರು ಮೃತಪಟ್ಟಿರುವುದರಿಂದ ಜ್ಯಾರಿ ಆಗದೆ ವಾಪಾಸು ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಈ ಕೆಳಗಿನ ಸಾಲಗಳಲ್ಲಿ ಬೇಂಕಿಗೆ ಬರುವ ಅಸ್ಲು, ಬಡ್ಡಿ, ವ ಇತರ ಖರ್ಚುಗಳನ್ನು ಸದ್ರಿಯವರ ವಾರೀಸುದಾರರು ತಾ. ೧೯-೯-೧೯೩೯ನೇ ಮಂಗಳವಾರದ ಒಳಗೆ ಬೇಂಕಿಗೆ ತೆತ್ತು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ತಾ. ೨೦-೯-೧೯೩೯ನೇ ಬುಧವಾರ ಅಪರಾಹ್ನ ಘಂಟೆ ೩ಕ್ಕೆ ಸದ್ರಿ ನಗಗಳನ್ನು ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು.

ಜಂಜ್ರಾ ನಂಬ್ರ	ಲೋನು ನಂಬ್ರ	ಹೆಸರು ವ ವಿಳಾಸ	ಅಸ್ಲು ರೂಪಾಯಿ
1	S L 172/38	ಆದಂ ಬ್ಯಾರಿ ಚೆರಿಮೋನು ಯಾನೆ ಅಮದ್ ಬ್ಯಾರಿ ಮಗ ವ್ಯಾಪಾರಸ್ಥ ಗೇಟಿನ ಬಳಿ ಉಪ್ಪಿನಂಗಡಿ ಕಸ್ಬಾ.	75-0-0
2	S L 276/38	ಡಿ.	8-0-0
3	S L 254/38	ಸಾಂತಪ್ಪ ಗೌಡ ಈಶ್ವರ ಗೌಡನ ಮಗ ಕೂಲಿ, ರೆಂಜಲ, ಪೆದ್ರಾಡಿ, ಬಜತ್ತೂರು ಗ್ರಾಮ ಉಪ್ಪಿನಂಗಡಿ ಪೋಸ್ಟು.	5-0-0
4	S L 310/38	ಡಿ.	5-0-0

Office of the Bank
Uppinangady
2-9-1939

M. A. Bhat.
Agent

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಗೂನೋರಿಯಕ್ಕೆ ಸಂಪೂರ್ಣ ಪರಿಹಾರ ಮತ್ತು ನಿಮಿಷದಲ್ಲಿ ನಿವಾರಣೆ.

ರೋಗಕ್ಕಿಂತಲೂ ಹೆಚ್ಚಾಗಿ ರೋಗದ ಹೆದರಿಕೆಯು ಮನುಷ್ಯನನ್ನು ಕಂಗಾಲು ಮಾಡುತ್ತದೆ! ಗೊನೋರಿಯಾ ರೋಗವು ಭಯಂಕರ ರೋಗ ಮಾತ್ರವಲ್ಲ ಇದರ ಹರಡುವಿಕೆಯಿಂದ ಸಮಾಜದಲ್ಲಿ ಬಹಳ ಅಪಮಾನವು ಆಗುವುದು. ಈ ರೋಗವು ಹಲವುಸಲ ಪಾಪಕೃತ್ಯಗಳಿಗಿಂತ ಹೆಚ್ಚು, ನಿರಪರಾಧದಿಂದಲೂ ಆಗುತ್ತದೆ. ಇದರ ಎಲ್ಲಾತರದ ನೋವು ಸಂಕಟಗಳನ್ನೂ ಶುದ್ಧ ಗಂಧದ ಎಣ್ಣೆಯಿಂದ ತಯಾರಿಸಲ್ಪಟ್ಟ **ಸೆಟಸನ್** ಕೂಡಲೇ ಗುಣಪಡಿಸುವುದು.

ಪ್ರಾಮುಖ್ಯ ಸಂಗತಿ: ಸೆಟಸನ್ ಒಂದರಲ್ಲಿ ಮಾತ್ರವೇ ಹೊಟ್ಟೆಯೊಳಗೆ ಸೇವಿಸಿದೊಡನೆ ಗುಣಪಡಿಸುವಷ್ಟು ಪರಿಮಾಣದಲ್ಲಿರುವ ಗಂಧದ ಎಣ್ಣೆ ಇರುವುದು. ಇದೇ ಇದರ ಅನುಪಮ ವಿಜಯ. ಆದುದರಿಂದ ಕಡಿಮೆ ಪರಿಮಾಣದ ಗಂಧದ ಎಣ್ಣೆಯಿಂದ ಕೂಡಿರುವ ಇದರಷ್ಟು ಉತ್ತಮವಲ್ಲದ ಇತರ ಔಷಧಿಯೊಂದಿಗೆ ಕಂಗೆಡಿಸಬೇಡಿ.

ಕ್ರಯ: ಆರ್ಡರಿನೊಂದಿಗೆ ಹಣ ಕಳುಹಿಸಿದರೆ ರೂ. 6-10-0 (ಅಂಚೆವೆಚ್ಚ ಮುಫತ್ತು) ವಿ. ಪಿ. ಪಿ. ದ್ವಾರಾ ತರಿಸುವುದಾದರೆ ಅಂಚೆವೆಚ್ಚ ಹೆಚ್ಚು.

SETSAN

Crystal Chemical Company Limited,
109, Parsee Bazar St., Fort Bombay.

ಚಲಚ್ಚಿತ್ರ ಪ್ರಪಂಚ

ಪ್ರಕಾಶ್ ಫಿಲ್ಮ್ ಕಂಪೆನಿಯ ನಟ-ನಟಿಯರ ಪರಿಚಯ

ಜಯಂತ

೧೯೧೩ರಲ್ಲಿ ಡೆರಾಡೂನಿನಲ್ಲಿ ಮುಸ್ಲಿಮ ಕುಟುಂಬವೊಂದರಲ್ಲಿ ಜನಿಸಿದನು. ಈತನ ಹೆಸರು ಈತನ ನೀಳವಾದ ದೇಹಕ್ಕೆ ತಕ್ಕುದಾಗಿಯೇ ಜಾಕೀರಿ ಖಾನ್ ಸದಾಗರ ಸಯ್ಯದ್ ಅಹಮ್ಮದ್ ಖಾನ್ ಮಹಮ್ಮದ್ ಜಾಯಿ ಎಂದಿದ್ದಿತು. ದಷ್ಟಪುಷ್ಟವಾದ ನೀಳ ಶರೀರ. ಈತನು ಸಿನೆಮಾ ವೃತ್ತಿಯನ್ನು ಕೈಕೊಳ್ಳುವ ಮೊದಲು ಆಲ್ವಾರ ಸಂಸ್ಥಾನದಲ್ಲಿ ಲೆಫ್ಟಿನೆಂಟಿನ ಹುದ್ದೆಯಲ್ಲಿದ್ದನು. ಇತನು ಸಿನೇಮಾ ವೃತ್ತಿಯನ್ನು ಕೈಕೊಂಡು ಹೆಚ್ಚೆಂದರೆ ಐದಾರು ವರ್ಷಗಳಾದುವು. ಇವನ ಮೊಟ್ಟಮೊದಲಿನ ಚಿತ್ರವು 'ಏಕ್ಟ್ರೆಸ್' ಎಂಬುದು. ಇವನು ಅಭಿನಯಿಸಿದ ಚಿತ್ರಗಳಲ್ಲಿ 'ಡ್ರೀಮ್ ಲೇಂಡ್' ಮತ್ತು 'ಹಿರೋ ನಂ. 1' ಎಂಬ ಚಿತ್ರಗಳು ಬಹಳ ಉತ್ತಮವಾಗಿವೆ. ಸಿಗರೇಟು ಸೇದುವುದು ಮತ್ತು ಉರ್ದು ಕಾದಂಬರಿಗಳನ್ನೋದುವುದರಲ್ಲಿ ಬಹಳ ಇಷ್ಟ.

ಜೈರಾಜ್

ಈತನಿಗೆ ೩೦ ವರ್ಷ ವಯಸ್ಸು. ಈತನು ದುರ್ಗಾಬಾಯಿ ಕೋಟೆ, ಮಾಧುರಿ, ಬಿಬ್ಬು, ಲೀಲಾ ಚಿಟ್ನಿಸ್, ಸಿತಾರಾ, ರೇಣುಕಾದೇವಿ ಮೊದಲಾದ ಉಚ್ಚಶ್ರೇಣಿಯ ನಟಿಯರೊಂದಿಗೆ ಅಭಿನಯಿಸಿರುವನು. ಆದರೆ 'ಬಾಘಿ' ಚಿತ್ರವೊಂದನ್ನು ಬಿಟ್ಟು ಇವನು ಅಭಿನಯಿಸಿದ ಇತರ ಚಿತ್ರಗಳು ಅಷ್ಟೊಂದು ಪ್ರಸಿದ್ಧಿ ಪಡೆಲಿಲ್ಲ. ೧೯೩೦ರಲ್ಲಿ ಸಿನೇಮಾ ಜೀವನಕ್ಕೆ ಪಾದಾರ್ಪಣಗೈದನು. ಇವನ ಪ್ರಾರಂಭದ ಚಿತ್ರವು 'ಟ್ರೈಂಪ್ ಓಫ್ ಲವ್' ಎಂಬುದು. ಸವಯನಿದ್ದಾಗ ಚಿತ್ರಗಳನ್ನು ಬಿಡಿಸುವುದು ಬಹಳ ಇಷ್ಟ ... ಯುವುದರಲ್ಲಿಯೇ ಮಗ್ನನಾಗುವನು.

ಉಮಾಕಾಂತ

ಬರೋಡದಲ್ಲಿ ೧೯೦೯ರಲ್ಲಿ ಜನಿಸಿದನು. ವಿದ್ಯಾಭ್ಯಾಸವನ್ನು ಪೂರೈಸಿದ ಮೇಲೆ ಬಿ. ಬಿ. ಎಂಡ್ ಸಿ. ಐ. ರೈಲ್ವೆ ಕಂಪನಿಯಲ್ಲಿ ಕೆಲಸಕ್ಕೆ ಸೇರಿದನು. ೧೯೩೦ನೇ ಇಸ್ವಿಯಲ್ಲಿ ಚಲಚ್ಚಿತ್ರವು ಇವನ ಮನಸೆಳೆಯಿತು. ಚಲಚ್ಚಿತ್ರ ಕಂಪೆನಿಯನ್ನು ಸೇರಿ 'ನರಸಿಂಹ ಮೆಹ್ತಾ' ಎಂಬ ಗುಜರಾತಿ ಚಿತ್ರವೊಂದರಲ್ಲಿ ಅಭಿನಯಿಸಿದನು. ಇವನ ಚಿತ್ರಗಳಲ್ಲಿ ಪ್ರಕಾಶ ಕಂಪೆನಿಯ 'ಸಂಸಾರ ಲೀಲಾ' ಮತ್ತು 'ಪೂರ್ಣಿಮಾ' ಚಿತ್ರಗಳು ಪ್ರಸಿದ್ಧಪಟ್ಟಿವೆ. ಈತನು ಮೆಹ್ತಾಬ್, ರಾಜಕುಮಾರಿ, ಶಿರಿನ್ ಬಾನು, ಪ್ರಮಿಳಾ ಮೊದಲಾದವರೊಂದಿಗೆ ಅಭಿನಯಿಸಿರುವನು.

ನ್ಯೂ ಥಿಯೇಟರ್ಸಿನವರ 'ಹಾವಾಡಿಗ' ಚಿತ್ರದಲ್ಲಿ ಕನನ್ ಬಾಲಾ

ಶ್ಯಾಮ ಸುಂದರ

ಈತನ ನಿಜವಾದ ಹೆಸರು ಶಿವಾಜಿ ಕಲ್ಯಾಣಜಿ ಧಕ್ಕರ್. ಕರಾಚಿಯಲ್ಲಿ ೨೭ ವರ್ಷಗಳ ಹಿಂದೆ ಹುಟ್ಟಿದನು. ೧೯೩೪ರಲ್ಲಿ ಸಿನೆಮಾ ಉದ್ಯೋಗವನ್ನವಲಂಬಿಸಿದನು. "ಫೆಶನೇಬಲ್ ಇಂಡಿಯಾ" ಎಂಬ ಚಿತ್ರದಲ್ಲಿ ಪ್ರಥಮವಾಗಿ ಅಭಿನಯಿಸಿರುವನು. ಇವನ ಇತ್ತೀಚಿನ ಚಿತ್ರವು "ಹೀರೋ ನಂ 1". ಈತನು ಪ್ರಕಾಶ ಕಂಪೆನಿಯವರೊಂದಿಗೆ ದೀರ್ಘಕಾಲದ ಕಂಟ್ರಾಕ್ಟಿನಲ್ಲಿರುವನು.

ಗುಲಾಬ್

ಇವಳ ಜನ್ಮಸ್ಥಾನವು ಕಾಶ್ಮೀರ. ಮೂವತ್ತು ವರ್ಷ ಪ್ರಾಯ. ಹೆಸರು ಸರಸ್ವತಿಬಾಯಿ. ೧೯೨೩ರಲ್ಲಿ ಕೃಷ್ಣಾ ಫಿಲ್ಮ್ ಕಂಪೆನಿಯನ್ನು ಸೇರಿ ಮೂಕ ಚಿತ್ರಗಳಲ್ಲಿ ಅಭಿನಯಿಸಿದಳು. 'ಬೊಂಬಾಯಿ ಸೆಠಾಣಿ' 'ಮಿರ್ಜಾ ಸಾಹಿಬಾನ್' ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿರುವಳು.

THE POPULAR INSURANCE COMPANY, LIMITED,

HEAD OFFICE:
MANGALORE, S. INDIA.

The Company has pleasure to announce the appointment of
Messrs. H. K. BANERJEA & SONS, 21, Chittaranjan Avenue, CALUTTA
As its Chief Agents for
Bengal, Bihar, Assam and Orissa.

Messrs H. K. Banerjea & Sons are the Proprietors of The Narayanganj Dock, The Narayanganj Iron Works, The Dacca Tile Works; Managing Agents for The Pabna Electric Supply Co., Ltd., The Kalimpong Electric Supply Co., Ltd., and Distributors and Agents for several overseas Firms

THE PROGRESS AND ACTIVITIES OF THE POPULAR' SHOULD INTEREST YOU VERY MUCH. YOU CAN FURTHER ADD TO THE POPULARITY AND PROSPERITY OF THIS LIFE OFFICE OF YOUR OWN DISTRICT BY PLACING ALL YOUR LIFE ASSURANCE REQUIREMENTS WITH THE "POPULAR"

1939-Second Quinquennial Valuation

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಸಮಯದ ಬೆಲೆ ಎಷ್ಟೆಂದು ನಿಶ್ಚೈಸಿದವರಿರುವರೆ?

ಹಣದ ಬೆಲೆಯನ್ನು ಕಟ್ಟಬಹುದು—ಆದರೆ ಸಮಯದ ಬೆಲೆಯನ್ನು ನಿಶ್ಚೈಸಲಸಾಧ್ಯ!

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶ ಕೊಡದಂತೆ, ನಮ್ಮ ಸರ್ವಿಸುಗಳು ಪ್ರಾತಃ-ಕಾಲದಿಂದ—ಸಾಯಂಕಾಲ ವರೆಗೆ ಬಿಡುವಿಲ್ಲದೆ ಓಡಾಡುತಿದ್ದು ನಿಮ್ಮ ಯಾವುದೇ ಕೆಲಸಗಳನ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡು ಮಾಡಿರುವೆವು ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನು ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು!

JOINT MANAGERS,

The Combined Booking Agency, MANGALORE

The Joint Booking Office, KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಏದುಸಿರು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುಂಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ರೋ. ಬೊಂಬಾಯಿ, ಮದರಾಸು, ಕಲ್ಕತ್ತ.

(೦) ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ ಮತ್ತು ಬ್ರಿಲಿಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ, ಗ್ನೋಲಿಕಟ್ಟಾ ಬಜಾರ್, ಮಂಗಳೂರು

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ, ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ, ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ, ಪೆರಿಡೇಪಿ.

P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಾಗ್ರಿಗಳು	ಮೂಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	1—14—0	—
,, ದೊಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	4—14—0	4—14—0
,, ದುಯಂ ,, ,,	4—10—0	4—12—0
,, ಅವ್ವಲ್ ಸುಗ್ಗಿ ,,	4—9—0	—
,, ದುಯಂ ,, ,,	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದು ,,	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
,, ದಿಲ್‌ಪಸಂದಿ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—8—0	3—8—0
ಗೇರುಬೀಜ ಮುಡಿಗೆ	8—10—0	8—12—0
ಕಬ್ಬಿನ ಬೆಲ್ಲ ಖಂಡಿಗೆ	55—0—0	60—0—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	14—8—0	15—8—0

Date 8-9-1939 | ಬಿಡಿ ಸಂಚಿಕೆ ಒಂದಾಣೆ | Regd. No. M 3406

ಸ್ವಾಭಿಮಾನಿ

ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2-13-0

ಸಂಪುಟ 33] | ತಾರೀಖು 8-9-1939 | [ಸಂಚಿಕೆ 36

YOUR DAUGHTER'S MARRIAGE MADE EASY

GIRLS are more or less Lumpsum Liabilities unlike the BOYS who are Instalment Liabilities. You can not only convert Lumpsum Liabilities into Instalment Liabilities, but also guarantee the PURPOSE through Policies in

THE BOMBAY LIFE ASSURANCE CO., LIMITED

For details, please consult:-

KOCHIKAR BROTHERS LTD.,

Madras Branch Secretaries,
Bombay Life Building,
Sir. Lalubhai Samaldas Road,
Gandhi Nagar, UDIPI.

OR ANY OF THEIR FOLLOWING OFFICES:—

Post Box No. 337
MOUNT ROAD, MADRAS.

Visweshwarapuram Circle
BANGALORE CITY.

Charni Road, Girgaum,
BOMBAY NO. 4.

Car Street
MANGALORE

Puthiyara,
CALICUT

Central Station Road,
TRIVENDRUM

MAKE LIFE WORTH-LIVING!

**Indigestion – Insomnia – Dry Cough—
Nervousness – Weak Heart &c.,**
these make you wiery of Life!

**CONSULT US AND BUY
YOUR LIFE'S HAPPINESS!**

Oils – that cool the brain and induce sleep.
Lehas – that build-up your wasted system.
Asavas – that regenerate your jaded nerves.

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara.

(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

**ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ
ಆನಂದವನ್ನು ಕೊಂಡುಕೊಳ್ಳಿರಿ!**

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

**ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ**

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನಾೖಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani Estd 1906

ಸಂಪುಟ ೩೩ — ತಾರೀಕು ೧೫—೯—೧೯೩೯ (15—9—1939) — ಸಂಚಿಕೆ ೩೭

ನಾಜೀ ಜರ್ಮನಿಗೆ ಕೊನೆಗಾಲ ಬಂದಿದೆ

ಹಿಟ್ಲರನನ್ನು ಜಗತ್ತು ನಂಬುದಿಲ್ಲ

ಜರ್ಮನರಿಗೇ ಯುದ್ಧವು ಬೇಡವಾಗಿದೆ!

ಬ್ರಿಟನಿನ ಯುದ್ಧ ಸಿದ್ಧತೆ ಹೇಗಿದೆ?

ಅಹಿಂಸೆಯು ನಿಸ್ಸಾರವಲ್ಲ

ಅಧಿಕಾರ ಲಾಲಸೆಯಿಂದ ಅನ್ಯಾಯವಾಯಿತು

ಮಹಿಳಾಪಹರಣ (ಕಥೆ)

ಬ್ರಿಟಿಷರ ವಿಪತ್ತಿನಲ್ಲಿ ಭಾರತಕ್ಕೆ ಪ್ರಯೋಜನವೆ?

ಪೋಲೆಂಡಿನ ಇತಿಹಾಸ

ಅಗ್ರಲೇಖ

ಯೂರೋಪಿನ ರಣರಂಗದ ವಿವರ

ವರ್ಕಿಂಗ್ ಕಮಿಟಿಯು ಅಧಿವೇಶನ

ನೋಟಗಳು, ವಿಚಿತ್ರ ಪ್ರಪಂಚ, ಜಿಲ್ಲಾ ಸಮಾಚಾರ ಇತ್ಯಾದಿ.

ನಗರಗಳ ಪ್ರಳಯ ಸಾಧನೆಯೆ?

ವಿಮಾನ ಧಾಳಿಯಿಂದ ಒಂದು ಮಹಾನಗರವು ಹೇಗೆ ನಿರ್ನಾಮವಾಗಬಹುದು?

ಸಚಿತ್ರ ವಾರಪತ್ರಿಕೆ

ನೋಟಗಳು!

ಯುದ್ಧದ ಕುರಿತು ಭವಿಷ್ಯ ಹೇಳಿ ಹಲವು ಜೋತಿಷ್ಯರು ಪ್ರಸಿದ್ಧಿಗೆ ಬಂದಿದ್ದಾರೆ; ಹಣವನ್ನೂ ಸಂಪಾದಿಸಿದ್ದಾರೆ!

◈

ಕಳೆದ ತಿಂಗಳಲ್ಲಿಯೂ, ಲಕ್ನೋದ ಸುಪ್ರಸಿದ್ಧ ಜ್ಯೋತಿಷ್ಯರೊಬ್ಬರು ಡಾನ್ಜಿಗಿನ ವಿಷಯ ಯುದ್ಧವಾಗುವುದಿಲ್ಲವೆಂದೂ, ಈ ವರ್ಷವಾಗಲಿ ಬರುವ ವರ್ಷವಾಗಲಿ ಪ್ರಬಲ ರಾಷ್ಟ್ರಗಳು ಸೇರಿ ಯುದ್ಧವಾಗಲಾರದೆಂದೂ ಭರವಸೆಯಿತ್ತದ್ದು ಮಾತ್ರವಲ್ಲದೆ, ಜರ್ಮನಿಯು ಯಾವುದನ್ನು ಬೇಕೆಂದು ಹೇಳುತ್ತದೋ ಅವುಗಳನ್ನೆಲ್ಲಾ ಹಿಂದೆ ಪಡೆದಿದ್ದಂತೆ, ಮುಂದೆಯೂ ಪಡೆಯುವುದೆಂದೂ ಪ್ರಕಟಿಸಿದ್ದರು! ಅಷ್ಟೇ ಅಲ್ಲ, ೧೯೪೨ರ ವರೆಗೆ ಜರ್ಮನ್‌ರಿಕು ಉನ್ನತಿಗೇರುವುದೆಂದೂ ಅಲ್ಲಿಯತನಕವೂ ಹಿಟ್ಲರನು ಅಧಿಕಾರದಲ್ಲಿರುವನೆಂದೂ ಅವರ ಭವಿಷ್ಯವಾಗಿತ್ತು!

◈

ಅಂತೂ ಅವರ ಮೊದಲನೆಯ ಭವಿಷ್ಯವೊಂದು ಈಗ ಸುಳ್ಳಾಯಿತು. ಎರಡನೆಯ ಭವಿಷ್ಯವೂ ಅದೇ ಅವಸ್ಥೆಯನ್ನು ಹೊಂದುವುದೇ ಎಂದು ಸಂದೇಹಪಡಬೇಕಾಗಿದೆ!

◈

ಸುಭಾಷಬೋಸರನ್ನು, ವರ್ಕಿಂಗ್ ಕಮಿಟಿಯ ಅಧಿವೇಶನಕ್ಕೆ ಆಮಂತ್ರಿಸಿದ ಸರ್ದಾರ ಪಟೇಲರ ಜಾಣ್ಮೆಯನ್ನು ಯಾರಾದರೂ ಮೆಚ್ಚಬೇಕು.

◈

ಬೋಸರಾದರೂ, ಆ ಆಮಂತ್ರಣವನ್ನು ಅಂಗೀಕರಿಸಿ, ವಾರ್ಧಾಕ್ಕೆ ತೆರಳಿದ್ದು ಬಹಳ ಬುದ್ಧಿವಂತಿಕೆಯ ಕಾರ್ಯವೇ ಆಯಿತು.

◈

ಬೋಸರು ಇದೇ ಸಂದರ್ಭದಲ್ಲಿ 'ಹಿಂದಿನದನ್ನೆಲ್ಲಾ ಮರೆತು ನಾವೆಲ್ಲರೂ ಒಂದಾಗುವ, ಗಾಂಧಿಜಿ ಮತ್ತು ವರ್ಕಿಂಗ್ ಕಮಿಟಿಯವರು ಈ ಸಂದರ್ಭದಲ್ಲಿ ರಾಷ್ಟ್ರವನ್ನು ಸ್ವಾತಂತ್ರ್ಯಪಥದಲ್ಲಿ ಮುನ್ನಡೆಸಲಿ' ಎಂದು ಪ್ರಕಟಿಸಿದ್ದು ಇನ್ನಷ್ಟು ಯೋಗ್ಯವಾಗಿದೆ.

◈

ಲೋಕಯುದ್ಧದ ಮಹಾ ಘಟನೆಯು ಒಂದು ರೀತಿಯಿಂದಲಾದರೂ ಭಾರತಕ್ಕೆ ಭಾಗ್ಯವನ್ನು ತರಲಿ ಎಂದು ಹಾರೈಸಬಹುದಾಗಿದೆ.

◈

ಭಾರತದಲ್ಲಿರುವ ಭಿನ್ನ ಭಿನ್ನ ಭೇದಭಾವನೆಗಳ ಜನರು ಈ ಸಂದರ್ಭದಲ್ಲಾದರೂ ಐಕ್ಯರಾಗುವ ಸುವರ್ಣ ಸಂಧಿಯು ಒದಗುವಂತೆ ಆದದ್ದು ಯಾರಿಗೆ ತಾನೇ ಆನಂದದಾಯಕವಾಗಲಾರದು?

◈

ಬೊಂಬಾಯಿಯಲ್ಲಿ ಮೊನ್ನೆ ನಡೆದ ಒಂದು ಘಟನೆಯಿಂದ ಭಾರತದಲ್ಲಿ ಎಷ್ಟರ ಮಟ್ಟಿಗೆ ವಿದ್ಯಾವಂತರ ನಿರುದ್ಯೋಗವಿದೆಯೆಂದು ತಿಳಿಯುತ್ತದೆ.

◈

ಒಂದು ವಿದ್ಯಾವಂತ ನಿರುದ್ಯೋಗಿ ತರುಣನು ತನ್ನ ಹಾಗಿದ್ದ ನೂರು ಜನರ ಪರವಾಗಿ, ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಲ್ಲಿ ಹೋಗಿ ತಮ್ಮ ಮೇಲೆ ಆಪಾದನೆ ಹೊರಿಸಿ ಸೆರೆಮನೆಗೆ ಹಾಕಬೇಕಾಗಿ ಹೇಳಿದನು. ಇದರಿಂದಲಾದರೂ ತಮಗೆ ಧರ್ಮಾರ್ಥ ವಸತಿ, ಅನ್ನಬಟ್ಟೆಗಳು ಸಿಗುವವೆಂದು ಅವನ ಹೇಳಿಕೆಯಾಗಿತ್ತು.

◈

ಮೆಜಿಸ್ಟ್ರೇಟರಿಗೆ ಅವರ ಮೇಲೆ ಕರುಣೆಹುಟ್ಟಿದರೂ, ಅವರ ಮನವಿಯಂತೆ ಸೆರೆಮನೆಗೆ ಕಳುಹಿಸಲು ಒಪ್ಪಲಿಲ್ಲ! ನಿರಪರಾಧಿಗಳನ್ನು ಸೆರೆಮನೆಗೆ ಕಳುಹಿಸಲು ಅವರಿಗೆ ಅಧಿಕಾರವಿಲ್ಲವೆಂದು ಹೇಳಿ, ಅವರ ಹೇಳಿಕೆಯನ್ನು ಸರಕಾರದ ಅವಗಾಹನೆಯ ಬಗ್ಗೆ ಕಳುಹಿಸಿರುವರು.

◈

ಈ ಕುರಿತು ಬೊಂಬಾಯಿ ಸರಕಾರವು ಯಾವ ಕಾರ್ಯಕ್ರಮವನ್ನು ಕೈಕೊಳ್ಳುವುದೋ ನೋಡಬೇಕಾಗಿದೆ!

◈

卐
ರತ್ನೈರ್ಮಹಾರ್ಹೈಸ್ತುತುಷುರ್ನ
ದೇವಾಃ । ನ ಭೇಜಿರೇ ಭೀಮ
ವಿಷೇಣ ಭೀತಿಮ್ । ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ
卐

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

卐
ದೊರೆಯಲುರುತರ ರತ್ನಗಳು
ಸಾ । ಗರವ ಮಥಿಸಲು ಸುರ
ಗಡಣಂ ತರುಷವಾಯಿತೆ ಮತ್ತೆ
ವಿಷ್ಟದ ಸ್ಪರ್ಶತ ಉದಿಸಿದುದ್ದ ।
ಗರಲಕವರಂಜಿದರೆ ಸುಧೆಯನು
ಪಡೆಯದೆ ಪೃಥ್ವಿಯ
ತೆರದಿ ಕುಳಿತರೆ ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ।
卐

15—9—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೫—೯—೧೯೩೯

ಬ್ರಿಟಿಷರಿಗೆ ಒದಗಿದ ವಿಪತ್ತಿನಿಂದ ನಾವು ಪ್ರಯೋಜನ ಹೊಂದಬಾರದು

—ನೆಹರೂಗಳ ಹೇಳಿಕೆ—

ಗಾಂಧೀಜಿಯವರನ್ನು ಅನುಸರಿಸಿರಿ

ವೈಸರಾಯರು ನ್ಯಾಯವನ್ನು ಕೊಡಬೇಕು

ಯುದ್ಧದಲ್ಲಿ ಭಾರತದ ಭಾಗವೇನು?

ನೆಹರೂಗಳ ಹೇಳಿಕೆ

"ಇಂತಹ ಸಮಯದಲ್ಲಿ, ಬ್ರಿಟಿಷರಿಗೆ ಒದಗಿದ ಸಮಯದ ಕಷ್ಟವನ್ನು ಪರಿಹಾರಿಸಿಕೊಂಡು, ಅದರಿಂದ ನಾವು ಪ್ರಯೋಜನವನ್ನು ಪಡೆದುಕೊಳ್ಳುವುದಿಲ್ಲವೆಂಬ ವಿಷಯವಾಗಿ ಅನೇಕ ಸಲ ಹೇಳಿದ್ದೇವೆ. ಈ ಯುದ್ಧವು ಪರಿಸ್ಥಿತಿಯನ್ನು ಬಹಳ ಮಾರ್ಪಾಟು ಮಾಡಬಹುದು. ಹಳೆಯ ಕ್ರಮವು ನಾಶವಾಗಿದೆ, ತಿರಿಗಿ ಅದನ್ನು ಪುನಸ್ಸ್ಥಾಪನೆ ಮಾಡುವುದೂ ಅಸಾಧ್ಯವು. ನಾವೀಗ ಹೊಸತನ್ನೇ ರಚಿಸಬೇಕಾಗಿದೆ. ಹಾಗೆ ಹೊಸತನ್ನು ರಚಿಸುವಾಗ, ಅದನ್ನು ವಿವೇಕಪೂರ್ವಕ ಮಾಡಬೇಕು. ನಮ್ಮ ಮುಂದುವರಿಯುವ ನಿರ್ಧಾರದಿಂದ ಮಾಡಬೇಕು. ಇಂದು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳು ಒಂದು ಕಡೆ ನಿಂತು, ಇನ್ನೊಂದು ಕಡೆಯ ನಾಝಿಸಿಸ್ಟ್ ತತ್ವ ಮತ್ತು ಕಲಹಪ್ರಿಯತೆಗಳನ್ನು ವಿರೋಧಿಸಲು ಯುದ್ಧವಾಗುತ್ತದೆ. ಇಂತಹ ಸಮಯದಲ್ಲಿ ನಾವು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳಿಗಾಗಿ ಕಾದಾಡುವ ರಾಷ್ಟ್ರಗಳಿಗೆ ಸಹಾನುಭೂತಿ ಕೊಡುವೆವೆಂಬ ವಿಷಯದಲ್ಲಿ ಯಾವ ಸಂಶಯವೂ ಇಲ್ಲ.

ನಿಜವಾದ ಪರೀಕ್ಷೆ!

"ಆದರೆ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳೆಂಬ ಬರಿಯ ಗುಲ್ಲು ನಿಜವಾದ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳ ಅರ್ಥವನ್ನು ಕೊಡಲಾರದು. ಕಳೆದ ಯುದ್ಧವು ಮತ್ತು ಹಿಂದಿನ ವರ್ಷಗಳು, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳು ಲೋಕಶಾಂತಿಯ ಮಾತುಕತೆಯಿಂದ ಹೇಗೆ ಹಾಳುಗೊಳಿಸಲ್ಪಟ್ಟಿವೆಯೆಂದು ಸೂಚಿಸಿವೆ. ಆದರೆ ನಿಜವಾದ ಪರೀಕ್ಷೆಯು ಈ ಯುದ್ಧವು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳ ಕೇವಲ ತತ್ವಕ್ಕಾಗಿ ಮಾಡುವ ಗುಲ್ಲೇ ಅಥವಾ ಅದರಿಂದ ಕಾರ್ಯತಃ ಮಾಡುವ ಸಾಧನೆಯೇ ಎಂಬುದರಲ್ಲಿದೆ. ಇಂಗ್ಲೆಂಡು ಸ್ವಾತಂತ್ರ್ಯ ರಕ್ಷಣೆಗಾಗಿ ಕಾದಾಡುವುದಾದರೆ, ಅದರ ನಿಜವಾದ ತೋರಿಕೆಯು ಹಿಂದೂದೇಶದಲ್ಲಿ ಕಾಣಬೇಕು. ಇಂದಿನ ಪರಿಸ್ಥಿತಿಗೆ ತಕ್ಕ ನಿಜ ವಿಶ್ವದೊಡನೆ ಒಡಂಬಡಿಕೆಯ ಸೂಚನೆಯಾಗಿದೆ.

"ಇಂದಿನ ಯುದ್ಧದಿಂದ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳಲ್ಲಿ ಬಹಳ ವ್ಯತ್ಯಾಸವುಂಟಾಗುವುದೆಂದು ನನಗೆ ತಿಳಿಯುತ್ತದೆ. ನಾವು ಇದಕ್ಕಾಗಿ ಹೊಸ ರೀತಿಯನ್ನು ಮಾಡಬೇಕು. ಆ ಹೊಸ ರೀತಿಯಲ್ಲಿ ಸಾಮ್ರಾಜ್ಯಶಾಹಿಗಾಗಲಿ, ನಾಝಿಸಮ್‌ಗಾಗಲಿ ಎಡೆಯಿರದ

ಭಿನ್ನಭೇದಗಳನ್ನು ಮರೆಯಿರಿ

"ಇಂದಿನ ಹೊಸ ರೀತಿಯ ಸಾಧನೆಯಲ್ಲಿ ಭಾರತವು ಸರ್ವ ಪಕ್ಷದಿಂದ ಸಹಕರಿಸಬೇಕಾಗಿದೆ. ನನ್ನ ದೇಶದ ಜನರು ಇಂದಿನ ಪರಿಸ್ಥಿತಿಯನ್ನು ರಾಷ್ಟ್ರದ ಸಂಕುಚಿತ ದೃಷ್ಟಿಯಿಂದ ನೋಡದೆ ವಿಶಾಲ ಜಗತ್ತಿನ ದೃಷ್ಟಿಯಿಂದ ನೋಡಬೇಕು. ಇದರಿಂದಲೇ ನಮಗೂ ಅನರ್ಥವು ಒಂದಿದೆಯೆಂದು ಅರಿಯಬೇಕು. ಇಂದಿನ ಸಮಯದಲ್ಲಿ ಪ್ರತಿಯೊಬ್ಬರೂ ಚಿಲ್ಲರೆ ಭೇದ ಕಲಹಗಳನ್ನು ಮರೆಯುವಷ್ಟು ಜಾಣ್ಮೆ ತೋರಿಸಬೇಕು. ಭಾರತದ ಸ್ವಾತಂತ್ರ್ಯ ಮತ್ತು ಜಗತ್ತಿನ ಸುಧಾರಣೆಯು ಈ ವಿಷಯಗಳು ಮಾತ್ರ ನಮ್ಮ ಗಮನದಲ್ಲಿರಬೇಕಾಗಿದೆ" ಹೀಗೆಂದು ಜವಾಹರಲಾಲರು ಯುದ್ಧದ ಕುರಿತು ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಗಾಂಧೀಜಿಯವರನ್ನು ಹಿಂಬಾಲಿಸಿರಿ!

— ಬಜಾಜರ ಹೇಳಿಕೆ —

"ಇಂದು ಇಡೀ ಜಗತ್ತೇ ಸಂಕಷ್ಟದಲ್ಲಿ ಅದ್ದಿರಲು, ಮಾನವ ಜೀವನವೇ ಭಯಕಂಪಿತವಾಗಿರಲು, ಮನುಷ್ಯನಲ್ಲಿ ರುವ ಪವಿತ್ರ ವಸ್ತುವೆಲ್ಲವೂ ನಾಶವಾದ ದಾರಿಯನ್ನು ಕಾಣುತ್ತಿರಲು, ಭಾರತೀಯರಿಗೂ ನನ್ನ ಬಿನ್ನಹವೇನೆಂದರೆ, ನಮ್ಮೊಳಗಿನ ಆಂತರಿಕ ಭೇದಭಾವಗಳನ್ನು ಮರೆತು, ನಮ್ಮ ಮಾರ್ಗದರ್ಶಕರಾಗಿ ಗಾಂಧೀಜಿಯವರನ್ನು ಹಿಂಬಾಲಿಸುವ. ಇಂತಹ ಸಂದರ್ಭದಲ್ಲಿ ಅವರು ಕೈಕೊಳ್ಳುವ ಕಾರ್ಯವೇ ನಮಗೆ ಆದರ್ಶವಾಗಿರುವುದು. ನಾವು ಕೈಕೊಳ್ಳುವ ಪ್ರತಿಯೊಂದು ಕಾರ್ಯದಲ್ಲಿಯೂ ಜಾಗ್ರತರಾಗಿರಬೇಕು. ಇಂತಹ ಸಮಯದಲ್ಲಿ ನಾವು ಮಾಡುವ ಪ್ರತಿಯೊಂದು ಅನರ್ಥಕಾರಿ ಕಾರ್ಯವು ಜನಾಂಗಕ್ಕೆ ಮಹಾ ದೋಷವನ್ನುಂಟುಮಾಡುವುದು. ಎಲ್ಲದಕ್ಕಿಂತಲೂ ಒಳ್ಳೆಯ ಕೆಲಸವೆಂದರೆ ಗಾಂಧೀಜಿಯವರನ್ನು ಹಿಂಬಾಲಿಸುವುದು.

ವೈಸರಾಯರು ನ್ಯಾಯವನ್ನು ಕೊಡಬೇಕು

ಸರ್ ರಾಧಾಕೃಷ್ಣರವರ ಹೇಳಿಕೆ.

"ವರ್ಕಿಂಗ್ ಕಮಿಟಿಯು ಯುದ್ಧದಲ್ಲಿ ಭಾರತದ ಭಾಗದ ಕುರಿತು ವಿಚಾರಿಸುವುದು. ಯುದ್ಧವು ಅನ್ಯಾಯವಿದ್ದರೂ, ಹಿಂಸೆಯನ್ನು ಹಿಂಸೆಯಿಂದ ಎದುರಿಸುವುದು ವ್ಯರ್ಥವೆಂದೂ ತಿಳಿದವರಿಗೆ ಇದರಿಂದ ಏನೂ ಗೊಂದಲವಾಗಲಾರದು. ಆದರೆ ಬಹುಮಂದಿ, ನಾವಿಂದು ಯೋಗ್ಯವಾಗಿರುವ ಲೋಕದಲ್ಲಿಲ್ಲ, ಕೇವಲ ಪ್ರಗತಿಪರವಾದ ಲೋಕದಲ್ಲಿ ಇದ್ದೇವೆ ಎಂದು ತಿಳಿದಿರುವುದು.

"ಬ್ರಿಟನು ತತ್ವರಕ್ಷಣೆಗಾಗಿ ಯುದ್ಧಕ್ಕಿಳಿದಿದೆ. ನಾಜಿ ಅನ್ಯಾಯವನ್ನು ತಡೆಯುವಲ್ಲಿ, ಜಗತ್ತಿನ ಬೆಂಬಲವಿದೆ. ಭಾರತದ ಜನರೂ ಪೋಲೆಂಡ್ ಸ್ವಾತಂತ್ರ್ಯಕ್ಕಾಗಿ ಸಹಾನುಭೂತಿಯುಳ್ಳವರಾದುದರಿಂದ ಬ್ರಿಟಿಷರು ಆ ಬಗ್ಗೆ ಯುದ್ಧಕ್ಕಿಳಿದಿರುವ ನಿಮಿತ್ತ, ಬ್ರಿಟನಿಗೂ ಬೆಂಬಲವಿದೆ. ಕೇಂದ್ರದಲ್ಲಿ ಸ್ವತಂತ್ರ ಸರಕಾರವನ್ನು ಸ್ಥಾಪಿಸಿದರೆ ಬ್ರಿಟನು ಭಾರತದಿಂದ ಒಳ್ಳೆ ಬೆಂಬಲವನ್ನು ಹಾರೈಸಬಹುದು.

"ಗಾಂಧೀಜಿಯವರು ಹೇಳುವಂತೆ ಬ್ರಿಟನು ಸಂಕಷ್ಟದಲ್ಲಿರುವಾಗ, ಅದರ ಉಪಯೋಗ ಮಾಡಿಕೊಳ್ಳಲು ಅವರು ಒಪ್ಪಲಿಕ್ಕಿಲ್ಲ. ಆದರೆ ವರ್ಕಿಂಗ್ ಕಮಿಟಿ ಸದಸ್ಯರನ್ನು ಒಪ್ಪಿಸಲು ಅವರು ಕಷ್ಟಪಡಬೇಕಾದೀತು. ಜನರಿಗೆ ತಮ್ಮ ನಾಡಿನಲ್ಲಿಯೇ ಸ್ವಾತಂತ್ರ್ಯವಿಲ್ಲದೆ ಅತೃಪ್ತಿಯಿದೆ. ಇಂತಹ ಪರಿಸ್ಥಿತಿಯಲ್ಲಿ ವಿಚಕ್ಷಣರಾದ ವೈಸರಾಯರು ಜನರ ಸಹಾಯ ಸಿಗುವುದಕ್ಕಾಗಿಯಲ್ಲ, ನಿಜವಾದ ತತ್ವದ ದೃಷ್ಟಿಯಿಂದ ಭಾರತಕ್ಕೆ ನ್ಯಾಯವನ್ನು ಕೊಡಲು ಪ್ರಯತ್ನಿಸಬೇಕು." ಹೀಗೆಂದು ಸರ್ ರಾಧಾಕೃಷ್ಣನವರು ಹೇಳುತ್ತಾರೆ.

ಪ್ರಕಟಣೆ

ಕಾಸರಗೋಡು ತಾಲೂಕ ಮಂಜೇಶ್ವರ ವಾಗಣೆ ಉಬರಂಗಳ ಗ್ರಾಮದ ಮುಜರ್ಸೆ ಪುರುಷೋತ್ತಮ ಭಟ್ರ ಮಗ ನಾರಾಯಣ ಭಟ್ಟನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ —

ನಾನೂ ಕೂಡಾ ನನ್ನ ಸಹೋದರರು ಜನರೂ ಅವಿಭಕ್ತ ಕುಟುಂಬದವರಾಗಿ ಏಕ ಗೃಹಕೃತ್ಯದಲ್ಲಿದ್ದು ಇತ್ತ ಕೆಲವು ದಿವಸಗಳ ಲಾಗಾಯ್ತು ನನ್ನ ಅಣ್ಣ ತಮ್ಮ ವೆಂಕಟೇಶ ಭಟ್ಟನಿಗೆ ಚಿತ್ತಚಾಪಲ್ಯದ ಹುಚ್ಚು ಹಿಡಿದಿರುತ್ತದೆ. ನನ್ನ ಮೇಲಿನ ವಿರೋಧಿಗಳು ಸದ್ರಿ ವೆಂಕಟೇಶ ಭಟ್ಟನಿಗೆ ನಮ್ಮ ಮನೆಯಿಂದ ತಪ್ಪಿಸಿ ಆತನ ಹೆಸ್ರು ರಿಜಿಸ್ತ್ರಿ ಮೂಲಕ ಪರಭಾರೆ ಮಾಡುವ ಇರಾದೆಯಿರುತ್ತಾದಾಗಿ ನನಗೆ ಇತ್ತಲಾಗಿ ತಿಳಿದುಬಂದಿರುತ್ತದೆ. ನನ್ನ ಸಹೋದರನಿಗೆ ಈ ವರೆಗೂ ಗಂಡು ಮಕ್ಕಳಿರುವುದಿಲ್ಲ. ಹೆಣ್ಣು ಮಕ್ಕಳು ೨ ಜನರಿದ್ದು, ಒಬ್ಬಳಿಗೆ ಮದುವೆ ಮಾಡಿಕೊಟ್ಟಿರುತ್ತದೆ. ಈ ರೀತಿ ಇರುತ್ತಾ ಸದ್ರಿ ನನ್ನ ತಮ್ಮ ವೆಂಕಟೇಶ ಭಟ್ಟನಿಂದ ಯಾವ ತರದ ರಿಜಿಸ್ತ್ರಿ ಮಾಡಿಕೊಂಡರೂ ಮ ಬೇರೆ ವಿ. ಪ್ರೊ. ನೋಟಿಸಿನ ವಗೈರೆ ಲೇವಾದೇವಿ ಮಾಡಿಕೊಂಡರೂ ಅದು ಸ್ವತಃ ರದ್ದಾಗತಕ್ಕದ್ದು. ಉಬರಂಗಳ ಗ್ರಾಮದ ನಂ. ೨೫೫ನೇ ಪಟ್ಟೆಯು ನನ್ನ ಹೆಸರಿನದ್ದು ನಾನು ವರ್ಗದಾರನಾಗಿ ರೂ. 45-12-0 ಕಂದಾಯ ಕೊಡುತ್ತೇನೆ.

ಉಬರಂಗಳ 13-9-39 } ನಾರಾಯಣ ಭಟ್ಟನ ರುಜು

ಸ್ವದೇಶಾಭಿಮಾನಿ

ತಾರೀಕು 15—9—1939

ನಿರೀಕ್ಷೆಗಿಂತ ಮೊದಲೇ ಶಾಂತಿಯಾಗುವುದೇ?

ಜಪಾನು, ಇಂದಿನ ಯುದ್ಧದಲ್ಲಿ ತಟಸ್ಥವಾಗಿ ನಿಲ್ಲುವುದೆಂದು, ಬ್ರಿಟನಿಗೆ ಭರವಸೆ ಕೊಟ್ಟಿರುವುದೆಂಬ ವಾರ್ತೆಯು ಭಾರತೀಯರಿಗೆ ಸಂತೋಷದ ವಿಷಯವಾಗಿದೆ. ರಶ್ಯಾ ಮತ್ತು ಜರ್ಮನುಗಳೊಳಗೆ ಆದ ಒಪ್ಪಂದದ ಕಾರಣವಾಗಿ ಜಪಾನು-ಸೋವಿಯಿಟಿನ ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆದಿರುವುದೆಂದೂ ತಿಳಿಯುತ್ತದೆ. ಹೇಗಿದ್ದರೂ ಪರಿಸ್ಥಿತಿಯು ಹೀಗೆಯೇ ಮುಂದುವರಿದಲ್ಲಿ, ಭಾರತವು ವಿಮಾನದಾಳಿಗೆ ಭಯಪಡಬೇಕಾದ ಸಂಭವವಿಲ್ಲ.

ಆದರೆ, ಹಿಟ್ಲರನ ಈ ಧೋರಣೆಯನ್ನು ಹೀಗೆಯೇ ಎಂದು ತರ್ಕಿಸುವುದು ಸಾಧ್ಯವಿಲ್ಲ. ಮಂಗೋಲಿಯದ ಗಡಿಯಲ್ಲಿ ಇಂದು ರಶ್ಯಾ ಜಪಾನುಗಳೊಳಗೆ ಕಾದಾಟವು ನಡೆಯುತ್ತಿದ್ದರೂ, ಹಿಟ್ಲರನು ಜಪಾನು-ರಶ್ಯಾಗಳೊಳಗೆ ಒಪ್ಪಂದಮಾಡುವ ಸಾಧನೆಯಲ್ಲಿರುವುದಾಗಿ ತಿಳಿಯುತ್ತದೆ. ಈ ಯತ್ನವು ಸಾಧಿಸಿಹೋದರೆ, ಇಂದಿನ ಎಲ್ಲಾ ಪರಿಸ್ಥಿತಿಗಳೂ ತಲೆಕೆಳಗಾಗುವುವು. ಜಪಾನಿನಲ್ಲಿಯೂ, ಇಷ್ಟರಲ್ಲಿಯೇ ಮಂತ್ರಿಮಂಡಲದ ವ್ಯತ್ಯಾಸವೂ ಆಗಿದೆ. ಈ ಎಲ್ಲಾ ಬದಲಾವಣೆಗಳಿಂದ ಏನು ಆಗುವುದೋ ನಮಗೆ ಹೇಳಬರುವಂತಿಲ್ಲ. ಜಪಾನು ಚೈನಾದೊಡನೆ ಒಪ್ಪಂದವನ್ನು ಮಾಡಿಕೊಳ್ಳುವುದೇ? ಅಂತೂ ಹೀಗೆ ಮಾಡಿದಲ್ಲಿ ಜಪಾನಿಗೂ, ಪೌರ್ವಾತ್ಯ ರಾಷ್ಟ್ರಗಳಿಗೂ ಮಾನವಜಾತಿಗೂ ಬಹಳ ಶ್ರೇಯಸ್ಸು ಒದಗುವುದು. ಬ್ರಿಟನು ಈಗಾಗಲೇ ಜಪಾನನ್ನು ಸ್ವಾಧೀನಪಡಿಸುವ ಉಪಾಯ ಮಾಡುತ್ತಿದೆ. ಚೈನಾದಲ್ಲಿ ಜಪಾನು ವಿರುದ್ಧ ಕಾರ್ಯಗಳು ನಿಂತು, ಜಪಾನಿನ ವ್ಯಾಪಾರೋದ್ಯಮಗಳಿಗೆ, ಫ್ರಾನ್ಸು ಬ್ರಿಟನುಗಳ ಸಹಕಾರವೂ ಚೈನದ ಗೌರವಪೂರ್ವಕವಾದ ಒಪ್ಪಿಗೆಯೂ ದೊರೆತಲ್ಲಿ ಜಪಾನಿಗೆ ಏನು ಆಗಬೇಕಾಗಿದೆಯೋ ಅದೆಲ್ಲವೂ ಒದಗಿದಂತೆಯೇ ಆಗಲಿಲ್ಲವೇ? ಸಹಜವಾಗಿಯೂ, ಜಪಾನಿಗೆ ಚೈನದೊಡನೆ ಯುದ್ಧ ಪ್ರಾರಂಭ ಮಾಡುವ ಸಂದರ್ಭದಲ್ಲಿ, ಸಾಮ್ರಾಜ್ಯವಿಸ್ತಾರಣ ಮಾಡುವ ಮಹತ್ವಾಕಾಂಕ್ಷೆಯೇನೋ ಇತ್ತು. ಆದರೆ ಹಿಟ್ಲರನು ಸ್ಟಾಲಿನನೊಡನೆ ರಾಜಕೀಯ ಒಪ್ಪಂದ ಮಾಡಿಕೊಂಡ ಮೇಲೆ, ಜಪಾನಿನ ಈ ಆಸೆಯು ಉಡುಗಿಹೋಗಿದೆ. ಇಂದಿನ ಪರಿಸ್ಥಿತಿಗಳನ್ನು ಪರ್ಯಾಲೋಚಿಸಿ, ಜಪಾನು, ಬ್ರಿಟನು—ಫ್ರಾನ್ಸುಗಳೊಡನಾಗಲಿ, ಜರ್ಮನ್—ಇಟಲಿಗಳೊಡನಾಗಲಿ, ಅಂತರ್ ರಾಷ್ಟ್ರೀಯ ಸೌಹಾರ್ದತೆ [illegible] ಹೆಚ್ಚಿಸಿಕೊಂಡು, ವ್ಯಾಪಾರಾಭಿವೃದ್ಧಿಯ ಕಾರ್ಯವನ್ನು ಮುಂದುವರಿಸಲು ನಿಶ್ಚಯಪಡಬಹುದಲ್ಲದೆ, ವಿಶೇಷ ಗೊಂದಲಕ್ಕೀಡು ವಿಷಮತೆಯನ್ನು ಆಹ್ವಾನಿಸುವುದು ಸಂಭವವಾಗಿ ಕಾಣುವುದಿಲ್ಲ.

ಆದರೆ ಬ್ರಿಟನ್ನು—ಫ್ರಾನ್ಸುಗಳೊಡನೆ ಜಪಾನು ಯಾವುದಾದರೂ ಒಂದು ರೀತಿಯ ಒಪ್ಪಂದವನ್ನು ಮಾಡಿಕೊಳ್ಳುವುದು ಅಷ್ಟೇನೂ ಸುಲಭಸಾಧ್ಯವಾದ ಕಾರ್ಯವಾಗಿಲ್ಲ. ಸ್ಟಾಲೀನನು ಈ ರೀತಿಯ ಜಪಾನಿನ ಮತ್ತು ಬ್ರಿಟನು—ಫ್ರಾನ್ಸುಗಳ ಸಂಬಂಧವನ್ನು ಮೆಚ್ಚಲಾರನು. ಸ್ಟಾಲಿನನಿಗಾದರೂ, ಚೈನದಲ್ಲಿ ಸೋವಿಯಟ್ ರಿಪಬ್ಲಿಕನ್ನು ಸ್ಥಾಪಿಸುವ ಮಹತ್ವವಾದ ಉದ್ದೇಶವೊಂದು ಇದೆ. ಹೀಗಿರಲು ಜಪಾನ್ನು ಬ್ರಿಟಿಷ್ ಈ ಸಾಮ್ರಾಜ್ಯಶಾಹಿಗಳು ಒಂದಾದಲ್ಲಿ, ಸ್ಟಾಲೀನನು ಇಂದಿನ ತಾಟಸ್ಥ್ಯದ ಮುಸುಕನ್ನು ಭೇದಿಸಿ, ಜರ್ಮನಿಗೆ ಬೆಂಬಲ ನಿಂತು ಪ್ರತ್ಯಕ್ಷ ರಣರಂಗಕ್ಕೆ ಧುಮುಕುವ ಸಾಹಸಮಾಡಬಹುದು. ಜಪಾನು ಮತ್ತು ರಶ್ಯಾಗಳ ಈ ದುರಭಿಲಾಷೆಗಳೆಡೆಯಲ್ಲಿ ಸಿಲುಕಿ ಚೈನವು ಮುಂದೆಯೂ ಬಹಳ ದುರಂತ ಪ್ರಸಂಗಗಳನ್ನು ಇದಿರಿಸಬೇಕಾಗಿದೆ.

ಇಷ್ಟರಲ್ಲಿ, ಇಟಲಿಯು ಯಾವ ಕಾರ್ಯಕ್ಕೆ ಕೈಹಾಕುವುದು ಎಂಬುದು ಇನ್ನೊಂದು ಪ್ರಶ್ನೆಯಾಗಿದೆ. ಬ್ರಿಟನು ಫ್ರಾನ್ಸುಗಳು ಜರ್ಮನಿಯ ವಿರುದ್ಧ ಯುದ್ಧ ಪ್ರಕಟಣೆಯನ್ನು ಮಾಡುವುದಕ್ಕಿಂತ, ಎರಡು ದಿವಸಗಳ ಹಿಂದೆ, ಹಿಟ್ಲರನು, ಮುಸಲಿನಿಗೆ, ತಾನು ಆಗಾಗ ಇಟಲಿಯಿಂದ ಪಡೆದಿರುವ ಸಹಾಯಗಳಿಗಾಗಿ ಕೃತಜ್ಞನಾಗಿರುವೆನೆಂದೂ, ಇಂದಿನ ಯುದ್ಧದಲ್ಲಿ ಇಟಲಿಯ ಪ್ರತ್ಯಕ್ಷ ಸಹಾಯವು ತನಗೆ ಅವಶ್ಯ ಬೀಳಲಿಕ್ಕಿಲ್ಲವೆಂದೂ ತಿಳಿಸಿರುವನು. ಈಗ ಬ್ರಿಟನು ಫ್ರಾನ್ಸುಗಳು ಜರ್ಮನಿಯ ಮೇಲೆ ಕತ್ತಿ ಕಟ್ಟಿ ನಿಂತಿರುವುದರಿಂದ, ಇಟಲಿಯು ಮುಂದಕ್ಕೆ ಯಾವ ನಿರ್ಧಾರ ಮಾಡಲಿದೆಯೋ ನೋಡಬೇಕಾಗಿದೆ. ಇಂದಿನ ಇಟಲಿಯ ತಾಟಸ್ಥ್ಯ ನೀತಿಯು ಮುಸಲಿನಿಯ ದೂರದರ್ಶಿತ್ವವೆನ್ನಲು ಯಾವ ಅಡ್ಡಿಯೂ ಇಲ್ಲ. ಜರ್ಮನಿಗೆ ಎಲ್ಲಾ ರೀತಿಯಿಂದಲೂ ವಿದೇಶಗಳ ವ್ಯಾಪಾರ ಸಂಬಂಧವು ಬೇಕಾಗಿದೆ. ಯುದ್ಧ ಸಾಮಗ್ರಿ ಆಹಾರ ಸಂಪತ್ತುಗಳ ವಿಷಯದಲ್ಲಿ ಹಾಗೂ ಆರ್ಥಿಕ ಸ್ಥಿತಿಯಲ್ಲಿ ಜರ್ಮನಿಯು ಭದ್ರವಾಗಿಲ್ಲವೆಂಬ ಗುಲ್ಲು ಎಲ್ಲೆಡೆಗಳಲ್ಲಿಯೂ ಕೇಳಿ ಬರುತ್ತಿರುವಾಗ, ಇಟಲಿಯ ಈ ತಾಟಸ್ಥ್ಯ ನೀತಿಯಿಂದ, ಜರ್ಮನಿಗೆ ಬೇಕಾದ ಎಲ್ಲಾ ವಿದೇಶ ವ್ಯವಹಾರಗಳನ್ನು ಇಟಲಿಯ ಮೂಲಕ ಸಾಗಿಸಿ ಹಿಟ್ಲರನಿಗೆ ಅಪ್ರತ್ಯಕ್ಷವಾದರೂ, ಪರಿಣಾಮಕಾರಿಯಾದ ಬೆಂಬಲ ಕೊಡುವುದು ಮುಸಲಿನಿಯ ಹಂಚಿಕೆಯಾಗಿರಬಹುದೇ?

ಬ್ರಿಟನ-ಫ್ರಾನ್ಸುಗಳಂತಹ ಪ್ರಬಲ ರಾಷ್ಟ್ರಗಳೊಡನೆ ಹೋರಾಡುವ ಜರ್ಮನಿಯು [illegible] ಪುದು ಎಂಬ ವಿಷಯವು ಇನ್ನೂ ಯೋಚಿಸಬೇಕಾಗಿದೆ. ದಕ್ಷಿಣದಲ್ಲಿ ಫ್ರಾನ್ಸಿನ ಧಾಳಿಯನ್ನು ತಡೆಯುವಂತೆ ಜರ್ಮನಿಯು ಸುರಕ್ಷಿತವಾಗಿದೆ. ಆದರೆ ಬ್ರಿಟನು ಫ್ರಾನ್ಸುಗಳ ಸಂಯುಕ್ತ ಶಕ್ತಿಗಳೆದುರು, ಈ ಭದ್ರತೆಯು ಎಷ್ಟು ಸಮಯಗಳವರೆಗೆ ಉಳಿಯುವುದೋ ತಿಳಿಯದಾಗಿದೆ. ಅದರೊಳಗೆ ಪೋಲೆಂಡಿನ ಅವಸ್ಥೆಯು ಮುಗಿದು, ಹಿಟ್ಲರನಿಗೆ ಅದು ಶರಣಾದಲ್ಲಿ, ಬ್ರಿಟನು ಫ್ರಾನ್ಸುಗಳ ಸಂಯುಕ್ತ ಶಕ್ತಿಯನ್ನೂ ಹಿಟ್ಲರನು ತಡೆಯಲು ಶಕ್ತನಾಗಬಹುದು. ಅಂತೂ ಕಳೆದ ಯುದ್ಧದ ಅನುಭವದಿಂದ ಹಿಟ್ಲರನು ವಿಶೇಷವಾದ ನೂತನ ಹಂಚಿಕೆಯೊಂದನ್ನು ಕೈಕೊಳ್ಳುವುದು ಸಂಭವವಿದೆ!

ಪ್ರೆಸಿಡೆಂಟ್ ರೂಸ್‌ವೆಲ್ಟರ ಸಂದೇಶಕ್ಕೆ ಬ್ರಿಟನು ಫ್ರಾನ್ಸುಗಳು ತಾವು ನಿರಪರಾಧಿ ಜನರ ಮೇಲೆ ಧಾಳಿ ಮಾಡಲಾರೆವೆಂದೂ, ವಿಷವಾಯು ಪ್ರಯೋಗ ಮೊದಲಾದವುಗಳನ್ನು ಕೈಕೊಳ್ಳಲಾರೆವೆಂದೂ ಭರವಸೆಯಿತ್ತಿರುವವು. ಈ ಸಂದರ್ಭದಲ್ಲಿ ಹಿಟ್ಲರನೂ ಈ ರೀತಿಯ ಆಶ್ವಾಸನೆ ಕೊಡಬೇಕಾಗಿ ಬ್ರಿಟನ ಫ್ರಾನ್ಸುಗಳು ಕೇಳಿರುವವು. ಆದರೆ ಹಿಟ್ಲರನು ಇಂತಹ ಯಾವ ಆಶ್ವಾಸನೆಗೂ ಕಟ್ಟುಬೀಳುವಂತಿಲ್ಲ! ಸಾಧ್ಯವಿದ್ದ ಎಲ್ಲಾ ಹಿಂಸಾಮಯ ಸಾಧನೆಗಳಿಂದ, ಶತ್ರುಗಳನ್ನು ಬಗ್ಗು ಬಡಿಯಲು ಹಿಟ್ಲರನ ಹಿಂದೆ ಮುಂದೆ ನೋಡುವವನಲ್ಲ. ನಿರಪರಾಧಿ ಜನರ ಹತ್ಯಾಕಾಂಡವಾಗುವುದು ಖಂಡಿತ ನಿರೀಕ್ಷಣೀಯವಾಗಿದೆ. ನಾಗರಿಕತೆ ಸಂಸ್ಕೃತಿಗಳು ಇದರೊಡನೆ ಮರಣದ ಹಾದಿಯನ್ನು ಕಾಣುವವು!

ನಾಜಿ ತತ್ವ ಮತ್ತು ಕಮ್ಯುನಿಸ್ಟ್ ತತ್ವಗಳ ನಿರ್ನಾಮವನ್ನು ನೋಡಲು ಜರ್ಮನಿ ರಶ್ಯಗಳು ಅನ್ಯೋನ್ಯ ಬಡಿದಾಡ ಬೇಕೆಂದು ಬ್ರಿಟನ ಫ್ರಾನ್ಸುಗಳ ಯೋಚಿಸಿ ಸೋತು ಹೋದವು. ಈಗ ತಿರಿಗಿ ಸ್ಟಾಲಿನನೇ ಸಾಮ್ರಾಜ್ಯಶಾಹಿ, ನಾಜಿಸಂಗಳ ನಿರ್ನಾಮವನ್ನು ತನ್ನ ಜಾಣ್ಮೆಯ ಕಾರ್ಯದಿಂದ ನೋಡುತ್ತಾ ಇದ್ದಾನೆ! ಜಪಾನು, ಯುದ್ಧರಂಗಕ್ಕಿಳಿಯದಿದ್ದಲ್ಲಿ ಈ ಯುದ್ಧದಲ್ಲಿ ರಶ್ಯವು ಖಂಡಿತ ತಟಸ್ಥವಾಗಿ ಉಳಿಯುವುದೆಂದು ತಿಳಿಯಬಹುದು. ಕಡೆಗೆ ಪೋಲೆಂಡನ್ನು ಜರ್ಮನಿಯು ಹದಮಾಡಿದ ಕ್ಷಣದಲ್ಲಿ, ಸ್ಟಾಲಿನನೇ ಶಾಂತಿ ಸಂಧಾಯಕನಾಗಿ ಮುಂದೆ ಬಂದರೂ ಬರಬಹುದು. ಪೋಲೆಂಡಿನ ಸ್ವಾತಂತ್ರ್ಯವು ರಕ್ಷಿಸಲ್ಪಡುವುದೆಂಬ ಆಗ ಭರವಸೆ ಕೊಡಲಾಗುವುದು, ಡಾನ್‌ಜಿಗು ಮತ್ತು ಕಾರಿಡರು ಜರ್ಮನಿಗೆ ಸೇರುವುವು. ಯುದ್ಧಮಾಡಿ ಬಳಲಿದ ಪೋಲೆಂಡು ಇದಕ್ಕೆ ಒಪ್ಪಲೂಬಹುದು. ಬ್ರಿಟನು—ಫ್ರಾನ್ಸುಗಳು ತಮ್ಮ ಕರ್ತವ್ಯಗಳನ್ನು ಮಾಡಿದೆವೆಂದು ಯುದ್ಧರಂಗದಿಂದ ಹಿಂತೆರಳಿ ಬರಲೂಬಹುದು. ಹೀಗಾಗಿ ಶಾಂತಿಯು ನಾವು ನಿರೀಕ್ಷಿಸುವುದಕ್ಕಿಂತ ಮೊದಲೇ ಬರಬಹುದೆಂದು ವಿಚಾರಿಸಬೇಕಾಗಿದೆ.

ಅಕ್ಕಿ ಸಾಮಾನುಗಳನ್ನು ಒದಗಿಸುವ ಏರ್ಪಾಡು

ತಾ ೧೧ರಂದು ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಈ ಕೆಳಗಿನ ಮಹನೀಯರ [illegible] ಇತರ ಜೀನಸುಗಳ ಬೆಲೆ ಏರದಂತೆ ಸಲಹೆ ಕೊಡುವ ಉದ್ದೇಶದಿಂದ ಅವರದೊಂದು ಕಮಿಟಿ ನೇಮಕವಾಯಿತು.

ಶ್ರೀ! ವೆಂಕಟ್ರಾಯಬಾಳಿಗ ಬಿ. ಎ., ಬಿ. ಎಲ್., ಎಂ. ಎಲ್. ಎ., ಡಾ! ಕೆ. ವಿಟ್ಠಳ ಶೆಟ್ರು, ಮಿ! ಎ. ಎಲ್. ಪಿಂಟೋ, ದಿ! ಬ! ಮಹಾಬಲಹೆಗ್ಡೆ, ಶ್ರೀ! ಎಂ. ಪದ್ಮನಾಭ ರಘುನಾಥಪೈ, ಶ್ರೀ! ಎಂ. ವೆಂಕಟೇಶಪೈ, ಶ್ರೀ! ಎಂ. ರಾಘವೇಂದ್ರಪೈ ಇವರು ಅಕ್ಕಿಯನ್ನು ವಾಡಿಕೆಯ ಬೆಲೆಯಲ್ಲಿ ಸರಬರಾಯಿ ಮಾಡಲು ಸಾಹುಕಾರರು ಒಪ್ಪಿರುವರೆಂದು ತಿಳಿದುಬರುತ್ತದೆ.

ತಾ ೧೩ರಲ್ಲಿ ಜೆಪ್ಪು ಮುನ್ಸಿಪಲ್ ಶೆಡ್ಡಿನಲ್ಲಿಯೂ, ಉರ್ವ ಮುನಿಸಿಪಲ್ ಶಾಲೆಯಲ್ಲಿಯೂ ಮತ್ತು ಬಂದರದಲ್ಲಿ ಭಾವಿ ಪಾಂಡುರಂಗ ಶೆಣೈಯವರ ಗೇರುಬೀಜ ಕಾರಖಾನೆಯಲ್ಲಿಯೂ ಕೂಡ ಮೂರು ಕೇಂದ್ರಗಳಲ್ಲಿ ಅಕ್ಕಿ ಡಿಪೋಗಳನ್ನು ತೆರೆಯುವಂತೆ ಏರ್ಪಾಡು ಮಾಡಲಾಗುವುದು. ಅಕ್ಕಿ ಸೇರು ೧ರ ೦–೧–೯ರಂತೆಯೂ ಚಿಮಿಣಿ ಎಣ್ಣೆ ಬಾಟ್ಲಿ ೧ರ ಎರಡಾಣೆಯಂತೆಯೂ ಈ ಡಿಪೋಗಳಲ್ಲಿ ಮಾರಾಟ ಮಾಡಲಾಗುವುದು. ತಾ ೧೩ರಿಂದ ಮೊದಲ್ಗೊಂಡು ಪ್ರತಿದಿನ ಸಂಜೆ ಘಂಟೆ ೩ರಿಂದ ೬ರ ವರೆಗೆ ಈ ಡಿಪೋಗಳು ತೆರೆದಿರುವವು.

ಅಕ್ಕಿ ಮತ್ತು ಚಿಮಿಣಿ ಎಣ್ಣೆ ಈಗಿನ ಬೆಲೆಯಲ್ಲಿ ದೊರೆಯುವಂತೆ ಮಾಡುವುದೇ ಈ ಡಿಪೋಗಳ ಉದ್ದೇಶವಾಗಿದೆ. ಪ್ರತಿ ಒಂದು ಕುಟುಂಬಕ್ಕೆ ಮಾರಾಟಮಾಡುವಾಗ ಎರಡು ಸೇರು ಅಕ್ಕಿ ಮತ್ತು ಅರ್ಧ ಬಾಟ್ಲಿ ಚಿಮಿಣಿ ಎಣ್ಣೆಯನ್ನು ಕೊಡಲಾಗುವುದು.

ಮಹನೀಯರು ಬಡವರಿಗೆ ಈ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕಾಗಿ ಅವರಿಗೆ ವಂದನೆಗಳು.

ಧವಸ ಧಾನ್ಯಗಳಿಗೆ ಕ್ರಯ ಏರಿಸಬಾರದಾಗಿ ಮದ್ರಾಸ್ ಸರಕಾರದ ಎಚ್ಚರಿಕೆ

ಈ ಕೆಳಗಿನ ಪ್ರಕಟಣೆಯನ್ನು ಮದ್ರಾಸು ಸರಕಾರದವರು ಪ್ರಕಟಿಸಿದ್ದಾರೆ —

ಯಾವದೇ ಪದಾರ್ಥದ ಮುಖ್ಯವಾಗಿ ಆಹಾರ ಸಾಮಗ್ರಿಗಳ ಕ್ರಯ ಏರಿಸುವುದರಲ್ಲಿ ಏನೇನೂ ನ್ಯಾಯವಿಲ್ಲ. ಅಂತರ ರಾಷ್ಟ್ರೀಯ ಬಿಕ್ಕಟ್ಟಿನ ಅವಸ್ಥೆಯನ್ನು ಹೀಗೆ ದುರುಪಯೋಗಪಡಿಸಿಕೊಳ್ಳುವುದನ್ನು ಕಂಡು ಸರಕಾರಕ್ಕೆ ಬಹಳ ಅಸಮಾಧಾನವಾಗಿದೆ. ಕೆಲವು ವರ್ತಕರ ಈ ತರದ ವರ್ತನೆಗಾಗಿ ಸರಕಾರಕ್ಕೆ ವಿಷಾದವಾಗುತ್ತದೆ. ನ್ಯಾಯವೂ ಅನುಚಿತವೂ ಆದ ಈ ರೀತಿ ದುಬಾರಿ ಲಾಭ ಮಾಡುವ ಹವ್ಯಾಸಕ್ಕೆ ಯಾರೂ ಬಲಿಬೀಳಬಾರದೆಂದು ಸರಕಾರದ ಆಕಾಂಕ್ಷೆ. ಆದರೆ ಹಾಗೆ ಯುದ್ಧದ ಹೆಸರಲ್ಲಿ ದುಬಾರಿ ಲಾಭಗಳಿಸುವುದು ಸರಕಾರದ ಗಮನಕ್ಕೆ ಬಂದುದೇ ಆದರೆ, ಯುದ್ಧದ ಬಾಧಕವು ಏನೇನೂ ತಟ್ಟದಿರುವ ಸಂದರ್ಭಗಳಲ್ಲಿ ಕೂಡಾ ವ್ಯಾಪಾರ ವ್ಯವಹಾರಗಳ ಮೇಲೆ ನಿರ್ಬಂಧ ಹಾಕುವ ವಿಶೇಷಾಧಿಕಾರವನ್ನು ಸರಕಾರಕ್ಕೆ ಕೊಟ್ಟಿರುವ ಡಿಫೆನ್ಸ್ ಒಪ್ ಇಂಡಿಯಾ ಆರ್ಡಿನೆನ್ಸ್ ಪ್ರಕಾರ ಸರಕಾರವು ಕಠಿಣ ಪ್ರತಿಕ್ರಿಯೆಯನ್ನು ಕೈಕೊಳ್ಳಬೇಕಾದೀತು ಎಂಬುದನ್ನು [illegible]

ಬ್ರಿಟಿಷ್ ಸಾರ್ವಭೌಮರ ಮತ್ತು ಫ್ರಾನ್ಸ್ ಪ್ರೆಸಿಡೆಂಟರ ಅನ್ಯೋನ್ಯತೆ

ಬ್ರಿಟಿಷ್ ಸಾರ್ವಭೌಮರು, ಫ್ರೆಂಚ್ ಪ್ರೆಸಿಡೆಂಟರವರಿಗೆ ಸಂದೇಶವನ್ನು ಕಳುಹಿಸುತ್ತಾ ಫ್ರಾನ್ಸು ಇಂದು ಜಗತ್ತಿನ ಅನ್ಯಾಯವನ್ನೆದುರಿಸಲು ಮಾಡಿದ ನಿರ್ಧಾರಕ್ಕಾಗಿ ಅಭಿನಂದನೆಯನ್ನು ತಿಳಿಸಿದ್ದಾರೆ.

ಸಾರ್ವಭೌಮರ ಸಂದೇಶಕ್ಕೆ ಫ್ರೆಂಚ್ ಪ್ರೆಸಿಡೆಂಟ್ ಲಿಬ್ರೆನರು ಈ ರೀತಿಯಿಂದ ಉತ್ತರ ಕೊಟ್ಟಿದ್ದಾರೆ.—

"ಚರಿತ್ರೆಯಲ್ಲಿ ಅತ್ಯಂತ ನಿಂದನೀಯವಾದ ಕಾರ್ಯವನ್ನು ಮಾಡಿದ ಕಲಹಕಂಟಕ ವ್ಯಕ್ತಿಯನ್ನು ತಡೆಯಲು ಬ್ರಿಟನು ೨೫ ವರ್ಷಗಳ ಹಿಂದಿನಂತೆ—ಫ್ರೆಂಚಿನ ಜನತೆಯನ್ನೂ ಈ ಪವಿತ್ರಕಾರ್ಯದಲ್ಲಿ ಸೇರಿಸಿಕೊಂಡು ಸರ್ವಸಿದ್ಧತೆ ಮಾಡುತ್ತಿದೆ. ಫ್ರಾನ್ಸಿನ ಹೆಸರಿನಿಂದ ನಾನು ಬ್ರಿಟನಿಗೆ ಭಕ್ತಿಪೂರ್ವಕ ವಂದಿಸುತ್ತೇನೆ ನಮ್ಮ ಎರಡು ದೇಶಗಳ ಆದರ್ಶ ಮತ್ತು ಸತ್ಯಕ್ಕಾಗಿ ನಾವು ಪಡೆಯುವ ಐಕ್ಯಶಕ್ತಿಗಳು ಮುಂದೆ ಮಹಾದೃಶ್ಯವನ್ನು ತೋರಿಸುವುವು"

ನಾವು ಖಂಡಿತವಾಗಿಯೂ ಜಯಿಸುವೆವು
ಫ್ರೆಂಚ್ ಪ್ರಧಾನರಿಗೆ ಬ್ರಿಟಿಷ್ ಪ್ರಧಾನರ ಸಂದೇಶ!

"ಬ್ರಿಟನು ಮತ್ತು ಫ್ರಾನ್ಸುಗಳಲ್ಲಿ ಎಲ್ಲರೂ ಕಲಹಪ್ರಿಯರನ್ನು ಎದುರಿಸಲು ಸಿದ್ಧತೆಮಾಡುತ್ತಿರುವಾಗ, ರಾಷ್ಟ್ರಗಳ ಗೌರವದ ಮಾನವನ್ನು ಕಾಪಾಡಲು ಪ್ರತಿಜ್ಞೆಸುತ್ತಿರುವಾಗ, ನಾನು ಈ ದೇಶದ ಜನರ ಅಭಿನಂದನೆಯನ್ನು ನಿಮಗೆ, ನಿಮ್ಮ ಮೂಲಕ ಇಡೀ ಫ್ರೆಂಚ್ ಜನತೆಗೆ ಕಳುಹಿಸುತ್ತೇನೆ ನಾವು ಬಯಸಿದ್ದ ಶಾಂತಿಯ ನಿರೀಕ್ಷೆಯು ಪೋಲೆಂಡಿನ ದಾಳಿಯಿಂದ ಭಗ್ನವಾಯಿತು. ಈಗ ನಾವು ನ್ಯಾಯಕ್ಕಾಗಿ ಕಾದಾಡುವ ನಿಶ್ಚಯದಿಂದ ಶಕ್ತಿಯುತ್ತ ನಿಂತಿದ್ದೇವೆ. ನಾವು ಮಾಡಲು ನಿಶ್ಚಯಿಸಿದ ಈ ಸ್ವಾರ್ಥತ್ಯಾಗದ ಬಲಿದಾನ ವ್ಯರ್ಥವಾಗಲಾರದು ಎಂದು ನಾನು ಭರವಸೆ ನಂಬುತ್ತೇನೆ ನ್ಯಾಯವು ಖಂಡಿತವಾಗಿಯೂ ಜಯಿಸುವುದು"

ಅಮೇರಿಕ ಬೆಲ್ಜಿಯಮುಗಳ ತಾಟಸ್ಥ್ಯ

ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರೂ ಮತ್ತು ಮಿ ಕೋರ್ಡೆಲ್ ಹಲ್ಲರೂ ತಾಟಸ್ಥ್ಯ ನೀತಿಯು ಕೂಡಲೇ ಜಾರಿಯಲ್ಲಿರುವಂತೆ ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ ಈ ಪ್ರಕಟಣೆಯು ವಿದೇಶೀಯ ನ್ಯಾಯಕ್ರಮಕ್ಕೆ ಸರಿಯಾಗಿರುವುದೆಂದೂ ತಾಟಸ್ಥ್ಯ ಕಾನೂನಿಗೆ ಸಂಬಂಧಿಸಿದ್ದಲ್ಲವೆಂದೂ ಇದರ ಪ್ರಕಾರ ಯಾವುದೇ ರೀತಿಯಿಂದ ವಿದೇಶದ ಯುದ್ಧದಲ್ಲಿ ಅಮೇರಿಕವು ದೂರ ನಿಲ್ಲುವಂತಾಗುವುದೆಂದೂ ರೂಸ್‌ವೆಲ್ಟರ ಕಾರ್ಯದರ್ಶಿಯು ತಿಳಿಸುತ್ತಾನೆ

ಬೆಲ್ಜಿಯಮ್ ತಾಟಸ್ಥ್ಯದಲ್ಲಿರುವ ತನ್ನ ಧೋರಣೆಯನ್ನು ಸ್ಪಷ್ಟಪಡಿಸಿದೆ.

ಜರ್ಮನ್ ಜನತೆಗೆ ಯುದ್ಧ ಬೇಡವಾಗಿದೆ!

ಬ್ರಿಟನಿನಲ್ಲಿ ಸ್ತ್ರೀ ಸ್ವಯಂಸೇವಕಿಯರ ದಳ

ನಾವು ಖಂಡಿತವಾಗಿ ಜಯಿಸುವೆವು

ಜರ್ಮನ್ ಪೋಲರ ಭಯಂಕರ ಯುದ್ಧ

ಕೊರಿಡರು ಜರ್ಮನರ ವಶವಾಯಿತು

ಆದರೆ ಜಗತ್ತಿನ ಶಾಂತಿಗಾಗಿ ಬೆಲ್ಜಿಯಮ್ ಸರಕಾರವು ತನ್ನ ಸಹಾಯ ಸಹಾನುಭೂತಿಯನ್ನು ತೋರಿಸಿದೆ

ವಾಹನಗಳು ಕಡಿಮೆಯಾದುವು; ಪತ್ರಿಕೆಗಳು ಸಣ್ಣದಾದುವು

ಯುದ್ಧಸಮಯದಲ್ಲಿ ಲಂಡನಿನ ಎರಡು ವಿಶೇಷ ಚಿಹ್ನೆಗಳೆಂದರೆ, ಪತ್ರಿಕೆಗಳು ಈಗ ಮೊದಲಿನ ಅರ್ಧದಷ್ಟು ಆಗಿವೆ ವಾಹನಗಳು ಕಡಿಮೆ ಓಡಾಡುತ್ತವೆ ಸೈನಿಕರನ್ನು ಅಗತ್ಯವಿದ್ದಲ್ಲಿಗೆ ಸಾಗಿಸಲು ವಾಹನಗಳು ಕಾದಿಡಲ್ಪಟ್ಟಿವೆ ಕಳೆದ ಕೆಲವು ದಿವಸಗಳಿಂದ ೬೫೦,೦೦೦ ಮಿಕ್ಕಿದ ಮಕ್ಕಳನ್ನು ಯಾವ ಅಪಾಯವೂ ಇಲ್ಲದೆ ನಗರದಿಂದ ಹೊರ ಸಾಗಿಸಲಾಗಿದೆ ೩೦ ಸಾವಿರ ಸ್ವಯಂಸೇವಕರು ಕೆಲಸಮಾಡುತಿದ್ದಾರೆ

ಕರುಣಾಕರುಣೆಯುಳ್ಳ ಮದುವೆಯಾಗಲು ಕಳೆದ ಶುಕ್ರವಾರದಿಂದ ಬಹಳ ಉತ್ಸುಕರಾಗಿದ್ದಾರೆ ಕಳೆದ ಮಹಾಯುದ್ಧದ ಅಂಕಿಸಂಖ್ಯೆಗಳನ್ನು ಇದು ಮೀರಬಹುದು

ಸ್ತ್ರೀ ಸ್ವಯಂಸೇವಕಿಯರು

ರಿಸ್ಪಿ ನ್ಸ್ಬ್ರಿಕ್ಷಿ ಯುದ್ಧಸಹಾಯಕ್ಕಾಗಿ ಹೆಂಗಸು ಸ್ತ್ರೀಸ್ವಯಂಸೇವಕಿಯರು ಮುಂದೆ ಬಂದು ತನ್ನ ಹೆಸರುಗಳನ್ನು ಕೊಡುತ್ತಿದ್ದಾರೆ ಈಗಾಗಲೇ ೨೫ ಸಾವಿರಕ್ಕೆ ಇವರ ಸಂಖ್ಯೆಯು ಮುಟ್ಟಿದೆ ಅಡಿಗೆಗೆ, ಬರವಣಿಗೆಗೆ, ಸಾಮಾನುಗಳನ್ನು ಒದಗಿಸಲು ಇವರು ತುಂಬಾ ನೆರವಾಗುವರು

ಜರ್ಮನ್ ಸೋಶಿಯಲಿಸ್ಟರಿಗೆ ಮತ್ತು ಕೃಷಿಕರಿಗೆ ಯುದ್ಧ ಬೇಡ

ಬ್ರಿಟಿಷ್ ಸ್ವತಂತ್ರ ಕೂಲಿಗಾರರ ಪಕ್ಷಕ್ಕೆ ಸಂದೇಶ ಕಳುಹಿಸುತ್ತಾ ಜರ್ಮನ್ ಸ್ವತಂತ್ರ ಸೋಶಿಯಲಿಸ್ಟ್ ಪಕ್ಷವು "ಜರ್ಮನಿಯ ಸೋಶಿಯಲಿಸ್ಟರು ಮತ್ತು ಕೃಷಿಕರು ಯುದ್ಧವನ್ನು ಬಯಸುವುದಿಲ್ಲ" ಎಂದು ತಿಳಿಸುತ್ತಾರೆ.

"ನಾವು ನಮ್ಮ ರಾಷ್ಟ್ರವನ್ನು ಪ್ರೀತಿಸುವುದಿದ್ದರೂ ಇಂದಿನ ಆಡಳಿತೆಯನ್ನು ಒಪ್ಪುವುದಿಲ್ಲ ನಾವು ಆಸ್ಟ್ರಿಯವನ್ನು ಆಕ್ರಮಿಸಿದಾಗ, ಜೆಕೊಸ್ಲೊವೇಕಿಯವನ್ನು ಮುತ್ತಿದಾಗ, ಹೀಗೆ ಹಿಟ್ಲರನ ಕಲಹಕಂಟಕ ಧೋರಣೆಯನ್ನು ಯಾವಾಗಲೂ ಪ್ರತಿಭಟಿಸಿದೆವು ಈ ಯುದ್ಧವು ನಮ್ಮ ಯುದ್ಧವಲ್ಲ ನಾವು ನಮ್ಮ ತತ್ವಗಳಿಗಾಗಿ ಇಂದಿನ ಹಿಟ್ಲರ್‌ಶಾಹಿಯ ಆಡಳಿತೆಯಲ್ಲಿ ಯಮಯಾತನೆಗೆ ಒಳಗಾಗಿದ್ದೇವೆ ನಿಮ್ಮಂತೆ ನಾವೂ ನಮ್ಮ ರಾಷ್ಟ್ರವನ್ನು ಪ್ರೀತಿಸುತ್ತೇವೆ ಆದರೆ ನಮ್ಮೆಲ್ಲರ ಪಿತೃಭೂಮಿಯು ಮಾನವ ಸುಖ ಹೋಗಿದೆ ಅವರ ಹೃದಯ ಸಂದೇಶ!

ಕೊರಿಡರನ್ನು ಜರ್ಮನರು ಕೈವಶಮಾಡಿದರು

ಕ್ರಾಕೋ, ಬ್ರೊಂಬರ್ಗ್ ಮತ್ತು ಗ್ರಾಡೆನ್ಜ್ ಈ ನಗರಗಳು ಜರ್ಮನರ ವಶವಾಯಿತೆಂದು ಜರ್ಮನ್ ಸೇನಾಧಿಕಾರಿಯು ಪ್ರಕಟಿಸಿರುತ್ತಾನೆ ಜರ್ಮನಿಯನ್ನು ಡಾನ್ಜಿಗ್ ಮತ್ತು ಪೂರ್ವ ಪ್ರಶ್ಯಾಗಳಿಂದ ಕೊರಿಡರು ವಿಭಾಗ ಮಾಡುವುದಾಗಿತ್ತು ಇನ್ನು ಮುಂದೆ ಅಂತಹ ತಡೆಯು ಜರ್ಮನರಿಗೆ ಇರುವುದಿಲ್ಲ

ಜರ್ಮನ್ ಸೈನ್ಯವು ಕ್ರಾಕೋದಲ್ಲಿ ಹೋಗಿ ತಳವೂರಿರುವುದಾಗಿ ತಿಳಿದಿದೆ ಕ್ರಾಕೋವನ್ನು ಆಕ್ರಮಿಸುವಾಗ ಯುದ್ಧವೇ ನಡೆಯಲಿಲ್ಲವೆಂದೂ ವಾರ್ತೆ

ಪೋಲರ ಈ ವಾರ್ತೆಯು ಸುಳ್ಳೆಂದು ಪ್ರಕಟಿಸಿದ್ದಾರೆ

ಭಯಂಕರ ಕಾದಾಟ

ಜರ್ಮನರಿಗೆ ಮತ್ತು ಪೋಲರಿಗೆ ಭಯಂಕರ ಕಾದಾಟಗಳು ನಡೆಯುತ್ತಿವೆ ಜರ್ಮನರು ವಾರ್ಸೋದ ಮೇಲೆ ಅನೇಕ ಸಲ ಬಾಂಬೆಸೆದರೂ ಪೋಲರು ಜರ್ಮನರನ್ನು ಹಲವುಕಡೆ ಸೋಲಿಸಿದರು

ಜರ್ಮನರ ಮುತ್ತಿಗೆಯಿಂದ ಪೋಲೆಂಡಿನ ಬೇಸಾಯಗಾರರು ಸಿಟ್ಟುಗೊಂಡು ಹಳ್ಳಿಹಳ್ಳಿಗಳಲ್ಲಿ ಸೈನ್ಯಶಿಕ್ಷಣವನ್ನು ಪಡೆದು ಜರ್ಮನರನ್ನು ಎದುರಿಸಲು ಸಿದ್ಧತೆ ಮಾಡುತ್ತಿದ್ದಾರೆ

ರೈನ್ ಗಡಿಭೂಮಿಯಲ್ಲಿ ದ್ವಂದ್ವಯುದ್ಧ
ಫ್ರೆಂಚರು ಜರ್ಮನ್ ಗಡಿಯಲ್ಲಿ ಮುಂದರಿದರು

ರೈನ್ ಗಡಿಯಲ್ಲಿ ಜರ್ಮನರ ಮತ್ತು ಫ್ರೆಂಚರ ತೋಫಿನ ಭಟರಿಗೆ ದ್ವಂದ್ವಯುದ್ಧವು ನಡೆಯಿತು. ಫ್ರೆಂಚರು ಗಡಿಯನ್ನು ಮುಂದೊತ್ತಿ ಹೋಗಿರುವುದಾಗಿ ವಾರ್ತೆ

ಪಾರಿಸ್ಸಿನ ಮೇಲೆ ಜರ್ಮನ್ ವಿಮಾನ

ಪಾರಿಸ್ ನಗರದ ಮೇಲೆ ಜರ್ಮನ್ ವಿಮಾನಗಳ ಹಾರಾಟವು ತಡೆಯಿತು. ಜನರೆಲ್ಲರೂ ಮೊದಲೇ ಗೊತ್ತುಮಾಡಲ್ಪಟ್ಟಂತೆ, ಈ ಕುರಿತು ಸಿಗ್ನಲಿನ ಶಬ್ದವನ್ನು ಕೇಳಿ ಭದ್ರ ಜಾಗಗಳಲ್ಲಿ ಅಡಗಿಕೂತುಕೊಂಡರು ಈಗ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸಮಯವು ಹಿಂದಿಗಿಂತ ಕಡಿಮೆಯಾಗಿದೆಯೆಂದು ತಿಳಿಯುತ್ತದೆ

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಟಾಗುವ ಬಳಲಿಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ, ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ



ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:

ಆಯುರ್ವೇದಾಶ್ರಮ : : ಮದರಾಸು

ಸ್ಟಾಕಿಸ್ಟರು:

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

'ದೇವರು ಸರ್ವಶಕ್ತನು, ಅಹಿಂಸೆಯು ನಿಸ್ಸಾರವಲ್ಲ!

ವೈಸರಾಯರ ಭೇಟಿಯ ಕುರಿತು ಮಹಾತ್ಮರ ಹೇಳಿಕೆ

—ಹಿಟ್ಲರನಿಗೆ ಮಹಾತ್ಮರ ಪತ್ರ—

ಮಹಾತ್ಮರು ವೈಸರಾಯಿಗಳನ್ನು ಕಂಡು ಸಿಮ್ಲದಿಂದ ಹೊರಡುವ ಮುಂಚೆ ಈ ಪ್ರಕಟಣೆಯನ್ನು ಕೊಟ್ಟರು –

'ನೀವು ವೈಸರಾಯಿಗಳೊಡನೆ ಯಾವ ಒಪ್ಪಂದವನ್ನೂ ಮಾಡಿಕೊಳ್ಳಬೇಡಿರಿ' ಎಂದು ಹಲವರು ನನಗೆ ಎಚ್ಚರಕೊಟ್ಟರು. ಕಾಂಗ್ರೆಸಿನ ಕಾರ್ಯಕಾರಿ ಮಂಡಲಿಯು ನನಗಾವ ಸೂಚನೆಯನ್ನೂ ಕೊಟ್ಟಿರಲಿಲ್ಲ. ನಾನು ವಿಶುದ್ಧ ಅಹಿಂಸಾವಾದಿ ಈ ಸಂದರ್ಭದಲ್ಲಿ ಹೊಣೆಗಾರಿಕೆಯನ್ನು ಮರೆತು, ಅಹಿಂಸೆಯನ್ನು ಪ್ರತಿಪಾದಿಸುವೆನು. ವೈಸರಾಯರು ನನ್ನನ್ನು ಆಹ್ವಾನಿಸಿದರು. ನಾನು ಕೂಡಲೇ ಹೊರಟೆ ನನ್ನ ಒಬ್ಬನ ಅಭಿಪ್ರಾಯವನ್ನಷ್ಟೆ ತಿಳಿಸಿದೆ; ಇದು ಕಾಂಗ್ರೆಸಿನ ಅಭಿಪ್ರಾಯವಲ್ಲ ಎಂದೂ ವೈಸರಾಯಿಗಳಿಗೆ ತಿಳಿಸಿದೆ. ನನ್ನ ಮಿತಿ ನನಗೆ ಗೊತ್ತಿರುವುದರಿಂದ ಯಾರೂ ನನಗೆ ಎಚ್ಚರಕೊಡಬೇಕಾದ ಆವಶ್ಯಕತೆಯಿಲ್ಲ. ವೈಸರಾಯಿಗಳ ಅರಮನೆಯಿಂದ ಬರಿಗೈಯಲ್ಲಿ ಬಂದೆ ಯಾವ ಒಪ್ಪಂದವನ್ನೂ ಮಾಡಲಿಲ್ಲ ಒಪ್ಪಂದದ ಮಾತುಕತೆಗಳೂ ನಡೆಯಲಿಲ್ಲ'.

'ಕಾಂಗ್ರೆಸಿಗೂ ನನಗೂ ಇರುವ ಸಂಬಂಧವನ್ನು ಸ್ಪಷ್ಟವಾಗಿ ತಿಳಿಸುತ್ತಾ, ನನ್ನ ಸಹಾನುಭೂತಿ ಬ್ರಿಟಿಷ ಸರಕಾರಕ್ಕಿದೆ, ಎಂಬುದನ್ನು ವೈಸರಾಯಿಗಳಿಗೆ ತಿಳಿಸಿದೆ. ಇದುವರೆಗೆ ಅಭೇದ್ಯವೆನಿಸಿದ್ದ ಲಂಡನ್ ನಗರ, ವೆಸ್ಟ್ ಮಿನ್‌ಸ್ಟರ್ ಎಬ್ಬೆ, ಮೊದಲಾದ ಭವ್ಯ ಮಂದಿರಗಳು ನೆಲಸಮವಾಗುವ ಸಂಭವವನ್ನು ಎಣಿಸಲಾಗಿ ನನ್ನ ಹೃದಯವು ಕಲಕಿ ಹೋಯಿತು. ಬಾಯಿಯಿಂದ ಮಾತು ಹೊರಡದಾಯಿತು'.

'ನಾನು ಅಸಂತುಷ್ಟನಾಗಿದ್ದೇನೆ. ಇಂತಹ ಭಯಂಕರ ಅತ್ಯಾಚಾರಗಳನ್ನು ಸಹಿಸುತ್ತಿರುವ ದೇವರೊಡನೆ ಜಗಳಾಡುತ್ತಿದ್ದೇನೆ. ನನ್ನ ಅಹಿಂಸೆಯು ನಿಷ್ಫಲ ಎಂಬಂತೆ ಭಾಸವಾಗುತ್ತದೆ. ಪ್ರತಿದಿನವೂ ಹೃದಯದಲ್ಲಾಗುವ ಘರ್ಷಣೆಗಳಿಗೆ ಆಗಾಗ ಉತ್ತರ ದೊರೆಯುವುದು ದೇವರು ಅಶಕ್ತನಲ್ಲ; ಅಹಿಂಸೆಯು ನಿಸ್ಸಾರವಲ್ಲ' ಎಂದು! ಅಶಕ್ತಿಯಿರುವುದು ಮನುಷ್ಯರಲ್ಲಿ. ನನ್ನ ಪ್ರಯತ್ನವು ನಿಷ್ಫಲವಾದರೂ ನಾನು ಅಹಿಂಸಾ ಸಾಧನೆಗಾಗಿ ಹೋರಾಡಲೇ ಬೇಕು'.

'ಮುಂದೆ ಬರಬಹುದಾದ ಕ್ರೂರ ಸಂಕಟಗಳನ್ನು ನಿರೀಕ್ಷಿಸಿ ಎಂಬಂತೆ ನಾನು ಕಳೆದ ತಿಂಗಳು 23ಕ್ಕೆ ಹಿಟ್ಲರರಿಗೊಂದು ಪತ್ರ ಬರೆದೆ ಆದರಲ್ಲಿ ಹೀಗೆ ಬರೆದಿದ್ದೆ'

'ನಾನು ನಿಮಗೆ ಪತ್ರ ಬರೆಯಬೇಕೆಂದು ಸ್ನೇಹಿತರು ಒತ್ತಾಯಿಸುತ್ತಿದ್ದರು ಆದರೆ ನನ್ನ ಪತ್ರವನ್ನು ಧಾರ್ಷ್ಟ್ಯದ ಲಕ್ಷಣವೆಂದು ನೀವು ಭಾವಿಸಬಹುದೆಂಬ ಭೀತಿಯಿಂದ ಇದುವರೆಗೆ ಬರೆಯಲಿಲ್ಲ ಇನ್ನು ಏನೇ ಆಗಲಿ, ಬರೆಯಬೇಕೆಂದು ನಿರ್ಧರಿಸಿರುವೆನು'

'ಮಾನವನನ್ನು ಜಂತು ಸ್ವರೂಪಕ್ಕೆ ಇಳಿಸುವ ಮಹಾ ಯುದ್ಧವನ್ನು ತಡೆಯುವ ಶಕ್ತಿ ಇಂದು ನಿಮ್ಮಲ್ಲಿ ಮಾತ್ರ ಇರುವುದೆಂಬುದು ಸ್ಪಷ್ಟ ನಿಮ್ಮ ಉದ್ದೇಶವು ಎಷ್ಟು ಉದಾತ್ತವಾಗಿದ್ದರೂ ಇಂಥ ಘೋರ ಉಪಾಯವನ್ನು ಕೈಕೊಳ್ಳಬೇಕೆ? ಯುದ್ಧವೆಂಬ ದನ್ನು ಉದ್ದೇಶಪೂರ್ವಕನಾಗಿ ನಿರಾಕರಿಸಿ, ಅದರಲ್ಲಿ ಜಯವನ್ನೂ ಸಂಪಾದಿಸಿದ ನನ್ನ ಪ್ರಾರ್ಥನೆಗೆ ನೀವು ಕಿವಿಗೊಡಲಾರಿರಾ?'

'ನಿಮಗೆ ಬರೆದುದು ನನ್ನ ತಪ್ಪಾದರೆ ಅದನ್ನು ಕ್ಷಮಿಸುವಿರೆಂದು ಭಾವಿಸುತ್ತೇನೆ'

'ಈಗಲಾದರೂ ಮಾನವ ವರ್ಗದ ಮೊರೆಯನ್ನೂ ಪ್ರಾರ್ಥನೆಯನ್ನೂ ಕೇಳಿ ಹಿಟ್ಲರರು ಯುದ್ಧವನ್ನು ನಿಲ್ಲಿಸಿದರೆ ಅದೆಷ್ಟು ಚಂದವಾದೀತು?'

'ಮನುಷ್ಯನ ದುರ್ಬುದ್ಧಿಯಿಂದಾಗುವ ಪ್ರಲಯಕ್ಕೆ ಹೆದರಿ, ಲಂಡನಿನಂತಹ ನಗರಗಳಿಂದ ಮಕ್ಕಳು ಮರಿಗಳನ್ನು ಸ್ಥಾನಾಂತರಕ್ಕೊಯ್ಯುವ ಪ್ರಸಂಗ ಬಂದೊದಗಿದುದನ್ನು ಜರ್ಮನಿಯ ಜನರು ಸುಖದಿಂದ ನೋಡುತ್ತಿರುವರೆಂದು ನಾನು ಭಾವಿಸಲಾರೆನು. ಇವರ ಭವ್ಯ ಮಂದಿರಗಳೂ ಜೀವನ ಸರ್ವಸ್ವವೂ ಇದೇ ರೀತಿಯಲ್ಲಿ ನಾಶವಾಗುವುದನ್ನವರು ಸಮಾಧಾನದಿಂದ ನೋಡಲಾರರು'

'ನಾನೀಗ ಹಿಂದೂದೇಶದ ಬಂಧವಿಮೋಚನೆಯ ಕುರಿತು ಆಲೋಚಿಸಿಲ್ಲ, ಅದು ಆಗುವುದೆಂಬುದರಲ್ಲಿ ನನಗೆ ಸಂದೇಹವಿಲ್ಲ. ಇಂಗ್ಲಂಡು ಫ್ರಾನ್ಸುಗಳು ನಾಶವಾದ ಮೇಲೆ, ಅಥವಾ ಜರ್ಮನಿಯು ಧ್ವಂಸವಾದ ಮೇಲೆ ಆ ಬಂಧವಿಮೋಚನೆಗೇನು ಬೆಲೆಯಿದ್ದೀತು?'

'ಹಿಟ್ಲರರಿಗೆ ದೇವರ ಪರಿಚಯವಿಲ್ಲ, ಪಶುಬಲವಲ್ಲದೆ ಬೇರಾವುದರ ತಿಳಿವೂ ಇಲ್ಲ. ಅವರು ವಿಚಾರಕ್ಕೆ ಎಡೆಗೊಡಲಾರರೆಂದು ಚೇಂಬರ್‌ಲೇನರು ಹೇಳಿದುದು ಸತ್ಯ. ಈ ಪರಿಸ್ಥಿತಿಯಲ್ಲಿ ಹಿಂದೀಯರು ವೈಯುಕ್ತಿಕವಾಗಿ ಸಾಮೂಹಿಕವಾಗಿ ವಿಚಾರಿಸಬೇಕು ರುದ್ರನಾಟಕದಲ್ಲಿ ಯಾವ ಪಾತ್ರವನ್ನು ವಹಿಸಬೇಕೆಂಬುದನ್ನು ನಿರ್ಣಯಿಸಬೇಕು'.

ಪೋಲೆಂಡಿಗೆ ಗಾಂಧಿಜಿಯವರ ಸಂದೇಶ

ಪೋಲೆಂಡಿನ ಹಿಂದಿನ ಅಧ್ಯಕ್ಷರಾದ ಪೇಡರ್ಸ್ಕಿಯವರು "ಜಗದ ಮಹಾ ಉಪದೇಶಿಗಳಾದ" ಮಹಾತ್ಮಾಜಿಯವರು "ಶತ್ರುಗಳ ಭಯಂಕರ ಹಿಂಸೆಯನ್ನು ತಡೆಯಲು ಹೋರಾಡುವ ಪೋಲೆಂಡಿನ ವೀರರಿಗೆ" ಒಂದು ಶುಭಸಂದೇಶವನ್ನು ಕಳುಹಿಸಬೇಕಾಗಿ ಕೇಳಿಕೊಂಡದ್ದಕ್ಕೆ,— ಗಾಂಧಿಜಿಯವರು ಹೀಗೆಂದು ತಿಳಿಸುತ್ತಾರೆ.–

"ನನ್ನ ಆತ್ಮವು ಪೋಲರ ಪರವಾಗಿ ಸಹಾನುಭೂತಿಯುಳ್ಳದ್ದಾಗಿದೆ. ಸ್ವಾತಂತ್ರ್ಯರಕ್ಷಣೆಗಾಗಿ ಅವರು ಹೂಡಿರುವ ಸಂಗ್ರಾಮದಲ್ಲಿ ನನ್ನ ಹೃದಯವು ಮಿಲಿತವಾಗಿದೆ. ಆದರೆ ನನ್ನ ಮಾತಿನಿಂದ ಇಂದು ಯುದ್ಧವನ್ನು ನಿಲ್ಲಿಸಲು ಸಾಧ್ಯವಿಲ್ಲವೆಂದು ನನಗೆ ತಿಳಿದಿದೆ. ಯೂರೋಪಿನಲ್ಲಿ ನಡೆಯುವ ಈ ಪ್ರಮತ್ತ ಕಾರ್ಯವನ್ನು ನಿಲ್ಲಿಸಲು ನನಗೆ ದೇವರು ಶಕ್ತಿ ಕೊಡಬೇಕೆಂದು ನನ್ನ ಹಂಬಲ. ಪೋಲೆಂಡಿನ ಸಂಕಷ್ಟವು ಬೇಗನೇ ನಿವಾರಣೆಯಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ ಯೂರೋಪನ್ನು ನಡೆಯುತ್ತಿರುವ ಹತ್ಯಾಕಾಂಡದಿಂದ ಯಾರಾದರೂ ನಡುಗಬೇಕಾಗಿದೆ ಪೋಲರು ನ್ಯಾಯಕ್ಕಾಗಿ ಕಾದಾಡುತ್ತಾರೆ ಅವರಿಗೆ ಖಂಡಿತ ಜಯವಾಗುವುದು ದೇವರು ಯಾವಾಗಲೂ ನ್ಯಾಯವನ್ನು ಪಾಲಿಸುತ್ತಾನೆ."

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore. And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE — ESTD 1906

CANARA BANK, LIMITED.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ನಿಸ್ಸಹಾಯಕಳಾದ ಆ ತರುಣಿಯು ನೆಲದ ಮೇಲೆ ಬಿದ್ದು ತನ್ನ ದುರವಸ್ಥೆಗಾಗಿ ಮರುಗುತ್ತಾ ತೋಳುಗಳೆಡೆಯಲ್ಲಿ ತಲೆಯಿರಿಸಿಕೊಂಡು ಕಂಬನಿ ಸುರಿಸುತ್ತಿದ್ದಳು. ಉಸ್ಮಾನ್‌ಖಾನನು ಆಕೆಯನ್ನು ಕುತೂಹಲದಿಂದ ನೋಡುತ್ತಿದ್ದನು. ಅವಳ ಹೃದಯದ ಸಂತಾಪ, ಮರುಕಗಳು ಆತನಿಗೆ ತಿಳಿದಿರಲಿಲ್ಲ. ಆಕೆ ಮುಗ್ಧಳಾಗಿ ಮೋಹಕಳಾಗಿ ಇದ್ದಳು. ಆಕೆಯ ಮುಂಗುರುಳು ಮನೋಹರವಾಗಿ ಹಾರಾಡುತ್ತಿತ್ತು! ಆದರೆ, ಅವಳನ್ನು ದಿಟ್ಟಿಸುತ್ತಿದ್ದಂತೆ, ಯಾವುದೋ ಒಂದು ತರದ ಭೀತಿಯು ಆತನ ಹೃದಯವನ್ನು ಆವರಿಸಿತ್ತು; ಬಹುಶಃ ಆಕೆಯ ಹೃದಯಶಕ್ತಿಯಿಂದ ಅವನ ಧೂರ್ತ ಹೃದಯವು ಹಾಗೆ ಭಯಗೊಂಡಿರಬೇಕು! ಖಂಡಿತವಾಗಿಯೂ ಆಕೆಯನ್ನು ತಾನು ಹೇಳಿದಂತೆ ಒಪ್ಪಿಸಿದರೆ, ಅದರಿಂದ ಬಹಳ ಬಹುಮಾನವನ್ನು ಪಡೆಯುವೆನೆಂಬ ಆತನ ಆಸೆಯಲ್ಲಿ ಏನೂ ಅಸಂಭವವಿರಲಿಲ್ಲ. ಹೇಗಿದ್ದರೂ, ಅವಳ ಕಡೆಗೆ ನೋಡುತ್ತಿದ್ದಂತೆ, ಏನೋ ಒಂದು ಸಂಶಯ —ಇದುವರೆಗೆ ತನ್ನ ಜೀವನದಲ್ಲಿ ಎಂದೂ ಅನುಭವಿಸಿರದ ಭೀತಿಯು ಆತನನ್ನು ಪೀಡಿಸುತ್ತಿತ್ತು!

ಸ್ವಲ್ಪ ಹೊತ್ತಿನ ಹಿಂದೆ, ಆಕೆಯು ಅಲ್ಲಿಗೆ ತರಲ್ಪಟ್ಟಿದ್ದಳು. ಪಲ್ಲಕ್ಕಿಯಿಂದ, ತನಗೆ ಪರಿಚಯವಿಲ್ಲದ ಈ ಮನೆಗೆ ಬಂದ ಕ್ಷಣದಲ್ಲಿಯೇ ಸಿಡಿಲು ಬಡಿದಂತಾಗಿ, ಅಲ್ಲಿಯೇ ನೆಲದ ಮೇಲೆ ಬಿದ್ದು ಬಹಳವಾಗಿ ಅಳತೊಡಗಿದಳು! ತನ್ನನ್ನು ಎಲ್ಲಿಗೆ ತಂದಿರುವರು? ಯಾರು, ಯಾತಕ್ಕಾಗಿ ಹೀಗೆ ಅನ್ಯಾಯವೆಸಗಿದರು? ತನ್ನ ಮುಂದಿನ ಗತಿಯೇನು? ಯಾವುದೂ ಆಕೆಗೆ ತಿಳಿಯಲೇ ಇಲ್ಲ! ನಿರಾಶಿತಳಾಗಿ ನಿರಾಶೆಯಾಗಿ—ದುಃಖಿಸುತ್ತಾ ಇದ್ದಳು.

"ಸುಂದರೀ, ನೀನು ಅಳುವುದು ಸುಮ್ಮನೆ" ಉಸ್ಮಾನ್‌ಖಾನನು ಹೇಳತೊಡಗಿದ, "ನಿನ್ನ ಜೀವಿತದಲ್ಲಿ, ಬಹಳ ಭಾಗ್ಯೋದಯದ ಕಾಲವು ಬಂದಿದೆ! ನಿನಗೆ ಈ ಲೋಕದಲ್ಲಿ ದೊರಕಬಹುದಾದ ಎಲ್ಲಾ ಸುಖಸೌಭಾಗ್ಯಗಳಿಗಿಂತಲೂ ಬಾದಶಹನ ಪ್ರೇಮಲಾಭವು ಹೆಚ್ಚು ಮಹತ್ವವಾದ್ದು. ನೀನು ಹಿಂದೂ ಸ್ತ್ರೀಯಾಗಿದ್ದರೂ ಮುಘಲ ಸಾಮ್ರಾಜ್ಯದ ಅಧಿರಾಜ್ಞಿಯಾಗಿ ಮೆರೆಯುವಿ"

ತರುಣಿಯು ಎದ್ದು ಕುಳಿತು ಉಸ್ಮಾನನ ಕಡೆಗೆ ಒಮ್ಮೆ ದಿಟ್ಟಿಸಿ ನೋಡಿದಳು. ಯಾವುದೋ ಒಂದು ಕೆಟ್ಟ ಸ್ವಪ್ನಲೋಕದಲ್ಲಿ ತಾನಿರುವಂತೆ ಆಕೆಗೆ ಭಾಸವಾಯಿತ್ತು. ದೃಷ್ಟಿಯನ್ನು ಅಚೀಚೆಗೆ ತಿರುಗಿಸಿ ನೋಡಿದಳು. ತಾನು ಅಲ್ಲಿ ಇರುವುದು ಒಂದು ಕನಸೇ ಇರಬಹುದೆಂದು ಆಕೆಗೆ ಒಮ್ಮೆ ಅನ್ನಿಸಿತು. ಉಸ್ಮಾನನ ಆ ಧೂರ್ತ ವಚನಗಳು ಆಕೆಯ ಕಿವಿಗೆ ಬೀಳಲೇ ಇಲ್ಲ! ಅವಳ ಮುಖದಲ್ಲಿ ಸುಖದ ಚಿಹ್ನೆಯೇ ಇರಲಿಲ್ಲ. ಕ್ರೋಧ, ಸಂತಾಪಗಳು ಆಕೆಯ ಹೃದಯದಲ್ಲಿ ಉಕ್ಕಿ ಬರುತ್ತಿದ್ದುವು. ಹಾಗೆ ಎದ್ದು ಕುಳಿತವಳೇ, ತಾನು ಹೇಗೆ ಈ ನರಕಸದೃಶವಾದ ಮನೆಗೆ ಬಂದೆನೆಂಬ ವಿಷಯವಾಗಿ ಚಿಂತಿಸತೊಡಗಿದಳು.

ಉಸ್ಮಾನನಿಗೆ ಅವಳ ಮನೋಭಿಪ್ರಾಯಗಳು ತಿಳಿದುವು.

"ನೀನು ಹೆದರದಿರು. ಭದ್ರವಾದ ಮನೆಯಲ್ಲಿ ನೀನೀಗ ಇರುತ್ತಿ. ಇಲ್ಲಿ ಯಾತರ ಅಂಜಿಕೆಯೂ ಬೇಡ. ನಿನ್ನ ಪಲ್ಲಕ್ಕಿ ಹೊರುವವರು, ಇಲ್ಲಿಗೆ ನಿನ್ನನ್ನು ತಂದಿರುವರು, ನಿನ್ನ ಅದೃಷ್ಟದಲ್ಲಿ, ಮಹಾ ಸಾಮ್ರಾಟನಾದ ಬಾದಶಹ ಹುಮಾಯೂನನ ಪಟ್ಟದ ರಾಣಿಯಾಗಿ ಮೆರೆಯುವ ಸೌಭಾಗ್ಯವು ಬರೆದಿದ್ದುದರಿಂದಲೇ ಇಂತಹ ಅಪೂರ್ವ ಸಂಭವವು ಒದಗಿತು. ನಿನ್ನ ಜೀವನದಲ್ಲಿ ಅಂತಹ ಭಾಗ್ಯೋದಯವು ಆಗುವುದರೊಡನೆ, ಈ ಬಡ ಉಸ್ಮಾನನೂ ಬಾದಶಹನ 'ಪ್ರಧಾನ ಮಂತ್ರಿ'ಯ ಪದವಿಗೆ ಏರುವನು!" ಉಸ್ಮಾನ್‌ಖಾನನು ಹೀಗೆಂದು ಹೇಳುತ್ತಾ, ಆಕೆಯ ಕನಸನ್ನು ಭೇದಿಸಿದನು!

ತನ್ನ ಅವಸ್ಥೆಯು ಈಗ ಅವಳಿಗೆ ತಿಳಿಯಿತು! ದೀರ್ಘ ಶ್ವಾಸವೊಂದನ್ನು ಬಿಟ್ಟಳು! ಆಕೆಯ ಶರೀರವು ಅತ್ಯಂತ ಹೆದರಿಕೆಯಿಂದ ನಡುಗುತಿತ್ತು.

ಒಂದು ಸಣ್ಣ ಕತೆ: ಮಹಿಳಾಪಹರಣ!

[ಭಾರತೀಯ ಮಹಿಳೆಯರಿಗೆ, ಮಾನ, ಕುಲೀನತೆಗಳಿಗಿಂತ ಮಿಗಿಲಾದ ಸೌಭಾಗ್ಯಗಳಿಲ್ಲ. ತಮ್ಮ ಪತಿದೇವನ ಜೀವನ ಸಹಭಾಗದಲ್ಲಿ ತಮಗೊದಗಿದ ದಾರಿದ್ರ್ಯಕ್ಕಾಗಿ, ಸಂಕಷ್ಟಗಳಿಗಾಗಿ ಅವರ ಮನನೋಯುವುದಿಲ್ಲ. ಯಾವ ಪ್ರಲೋಭನವೂ ಅವರ ಜೀವನ ನೈರ್ಮಲ್ಯವನ್ನು ಕೆಡಿಸಲಾರದು]

"ನಾನೀಗ ಎಲ್ಲಿ ಇದ್ದೇನೆ? ಯಾರು ನನ್ನನ್ನು ಇಲ್ಲಿಗೆ ತಂದರು, ಹೇಳು" ತರುಣಿಯು ಭಯಗ್ರಸ್ತಳಾಗಿ ಅತನೊಡನೆ ಪ್ರಶ್ನಿಸಿದಳು. ಬಾದಶಹ ಹುಮಾಯೂನನು, ಒಮ್ಮೆ ಸಂಜೆಯ ತಿರುಗಾಟಕ್ಕೆ ಹೊರಟಿದ್ದಾಗ, ಮನೆಯ ಕಿಟಕಿಯ ಬಳಿ ಕುಳಿತಿದ್ದ ಲಾವಣ್ಯಮಯಿಯಾದ ಆಕೆಯನ್ನು ಕಂಡು, ಅವಳ ರೂಪ ಲಾವಣ್ಯಗಳಿಗೆ ಬಾದಶಹನು ಮರುಳಾದ ವಿಷಯವನ್ನು ಉಸ್ಮಾನನು ಆಕೆಗೆ ತಿಳಿಸಿದನು. "ಆ ಮಹಾಪ್ರಭುವು, ನಿನ್ನ ಸುಂದರ ವದನವನ್ನು ದೃಷ್ಟಿಸಿದ ಕ್ಷಣದಲ್ಲಿಯೇ ಉಸ್ಮಾನನು ಮಾತನ್ನು ಮುಂದುವರಿಸಿದನು "ಇಡೀ ಸಾಮ್ರಾಜ್ಯದಲ್ಲಿ, ಅರಳಿದ ಹೂಗಳಲ್ಲಿ ನೀನು ಅತ್ಯಂತ ಚೆಲುವಾದ ಪುಷ್ಪವೆಂದು ಸಾರ್ವಭೌಮನ ಕಂಗಳಿಂದ ಪ್ರೇಮ ಹೊರಟಿತ್ತು. ಹೀಗಾಗಿ ಆಕೆಗೆ ಈ ಜಾಗೆಯ ಪದವಿಯನ್ನು ದೊರಕಿಸಲು ತಾನು ಹೇಗೆ ಹೇಗೆ ಯುಕ್ತಿಸಬೇಕಾಯಿತೆಂದೂ ಉಸ್ಮಾನನು ವಿವರಿಸಿ ಹೇಳಿದನು. ಭಾಗ್ಯವತಿಯಾದ ಸುಂದರಿಯೇ, ದೀರ್ಘದಿಂದ ನಿನ್ನನ್ನು ಈ ಮನೆಗೆ ಕಿಡಿಸಿ ಕೊಟ್ಟು ತಾವಂತೆ, ಪಲ್ಲಕ್ಕಿ ಹೊರುವವರಿಗ ಒಂದ ತ್ತು ಕರೆತಂದೆನು. ಇವೆಲ್ಲಾ ನಿನ್ನ ಸುಖಸೌಭಾಗ್ಯಗಳನ್ನು ಹೆಚ್ಚಿಸ ಲಿ ಸಲುವಾಗಿ, ಹೇಳು, ನಿನ್ನ ಜೀವನದಲ್ಲಿ ನೀನು ಈ ಸಂಪತ್ತನ್ನು ಎಂದಾದರೂ ಕನಸಿನಲ್ಲಿಯಾದರೂ ಕಂಡಿದ್ದೀಯಾ?"

"ನನ್ನ ಮನಸನ್ನು ಕೇಳು. ಇದರಿಂದ ಏನು ಶಾಶ್ವತವಾದ ಸುಖವು ಒದಗುವುದು. ನೀನು ನನ್ನನ್ನು ಬಾದಶಹನಲ್ಲಿ ಕರೆದುಕೊಂಡು ಹೋಗುವೆನು. ಅಲ್ಲಿ ನೀನು ತಾನೊಡನೆ ಬಾದಶಹನಿಗೆ ಸೇವೆ ಸಲ್ಲಿಸಲು ಒಂದಿರುವುದಾಗಿ ಹೇಳಿ ಮುಂದಿನ ಕಾರ್ಯಗಳನ್ನು ನಾನು ಮಾಡುವೆನು" ಹೀಗೆ ಉಸ್ಮಾನನು ಧಿರವಕೊಟ್ಟನು.

ಆಕೆಯು ಇದನ್ನು ಕೇಳಿ ಕಂಗೆಟ್ಟವಳಾಗಿದಳು. ನಿಮ್ಮವಳಾಗಿ, ಗಟ್ಟಿಯಾಗಿ ಆ ಕಿವಿಯು ಸಿದ್ಧವಿದ್ದರೂ, ಮಾತಿನ ಧ್ವನಿಯು ಬಹಳ ಕ್ಷೀಣವಾಗಿಯೇ ಇತ್ತು.

"ನಾನು ವಿವಾಹಿತ ಸ್ತ್ರೀಯಾಗಿದ್ದೇನೆ. ನನ್ನ ಪತಿಯು ಇನ್ನೂ ಬದುಕಿದ್ದಾನೆ. ಈ ಜೀವನದಲ್ಲಿ ನಾನು ಬೇರೊಬ್ಬನ ಪತ್ನಿಯಾಗುವುದು ಸಾಧ್ಯವೂ ಇಲ್ಲ, ಸಂಭವವೂ ಇಲ್ಲ"

ಈ ಮಾತನ್ನು ಕೇಳಿ ಉಸ್ಮಾನನು ಅವಳ ಕಡೆಗೆ ತಿರಸ್ಕಾರದೃಷ್ಟಿಯಿಂದ ನೋಡಿ, ಹೆದರುಸುವ ಸ್ವರದಲ್ಲಿ ಹೇಳಿದನು.

"ಹಾಗಾದರೆ, ಭಯಂಕರ ಮರಣವು ನಿನ್ನ ತಲೆ ಮೇಲೆ ಸುತ್ತಿದೆ! ತಿಳಿದಿರಲಿ"

ವಿಚಾರಮಗ್ನಳಾಗಿ, ಆಕೆ ಮೌನವಾದಳು. ಉಸ್ಮಾನನು, ಇದರಿಂದ ತನ್ನ ಮಾತಿಗೆ ಒಪ್ಪಿ ಹೀಗೆ ಅವಳು ಸುಮ್ಮನಾಗಿರುವಳೆಂದು ಭಾವಿಸಿಕೊಂಡನು. ಬಾದಶಹನ ಅಂತಃಪುರದಲ್ಲಿ ಸಿಗಬಹುದಾದ ಭೋಗವಿಲಾಸಗಳನ್ನೂ, ರತ್ನರಾಶಿಯಿಂದ, ಸುವರ್ಣ ಆಭರಣಗಳಿಂದ ಅಲಂಕೃತಳಾಗಿ ಸೇವಕ ಸೇವಕಿಯರಿಂದ ದಿನನಿತ್ಯದ ಉಪಚಾರ ವೈಭವದಲ್ಲಿ ಮೆರೆದು, ಹುಮಾಯೂನನ ಭವ್ಯವಾದ ಅರಮನೆಯಲ್ಲಿ ಜೀವಿತ ಸುಖವನ್ನು ಬೆಳಗಿಸಬಹುದಾದ ವಿಷಯವನ್ನೂ ಎಲ್ಲದಕ್ಕಿಂತಲೂ ಮಿಗಿಲಾಗಿ, ಬಾದಶಹನ ಹೃದಯರಾಣಿಯಾಗಿ, ಸಾಮ್ರಾಜ್ಯದ ಒಡತಿಯಾಗಿ, ಜಗತ್ತಿನ ಯಾವ ಸುಂದರಿಯಾದರೂ ಕನವರಿಸುವ ಪದವಿಯಲ್ಲಿ ಸುಖಿಸಬಹುದೆಂಬ ವಿಷಯ ಬಹಳವಾಗಿ ವರ್ಣಿಸಿದನು.

ಪಾಪಿಯ ಈ ಪಾಪಪೂರ್ಣವಾದ ಮಾತುಗಳನ್ನು ಕೇಳುತ್ತಿದ್ದಂತೆ ಅವಳ ಮೈ ಉರಿಯೇಳುತ್ತು. ಕಣ್ಣ ಮುಂದೆ ಕತ್ತಲು ಕವಿದಂತಾಯಿತು. ಯಾವುದೋ ದೂರದ ವಸ್ತುವೊಂದರ ಮೇಲೆ ಆಕೆಯ ದೃಷ್ಟಿಯು ನಟ್ಟಿದ್ದಂತೆ ಕಂಡು ಬರುತಿತ್ತು. "ಅರಮನೆ, ಅಂತಃಪುರ, ಬಂಗಾರ, ರತ್ನರಾಶಿ, ವಿಲಾಸ, ಇವುಗಳೆಲ್ಲಾ ನನ್ನ ಪ್ರೇಮಪಾತ್ರನಾದ ಬಡ ಪತಿಯ ಮಧುರ ಸ್ನೇಹ ಸುಖಕ್ಕೆ ಸರಿಯೇ?" ಆಕೆ ತನ್ನಲ್ಲಿಯೇ ಹೇಳಿಕೊಂಡಳು.

ಉಸ್ಮಾನನಿಗೆ ಅವಳ ವಿಚಾರವೊಂದೂ ತಿಳಿಯಲಿಲ್ಲ. ಅವಳ ಹೃದಯದಲ್ಲಿ ಮಸಗುತ್ತಿದ್ದ ಕೋಪದ ಜ್ವಾಲೆಯನ್ನೂ ಆತ ತಿಳಿಯಲಿಲ್ಲ. ಬಾದಶಹನಲ್ಲಿಗೆ ಹೋಗಲು ಹೊರಡಬೇಕಾಗಿ ಅವನು ಮತ್ತೆಯೂ ಹೇಳತೊಡಗಿದನು.

ತರುಣಿಯು ಸ್ವಲ್ಪ ಹೊತ್ತು ವಿಚಾರಮಾಡಿದಳು. ಕಡೆಗೆ, ಬಾದಶಹನಲ್ಲಿಗೆ ಹೋಗಲು ಒಪ್ಪಿಗೆಯಿತ್ತಳು. ಇದನ್ನು ಕೇಳಿ, ಉಸ್ಮಾನನ ಶರೀರವಿಡೀ ಸಂತೋಷ ಸಂಭ್ರಮಗಳಿಂದ ಪುಲಕಿತವಾಯಿತು. ಆತನು ತನ್ನ ಭಾಗ್ಯ ಛವಿ ಸ್ವಪ್ನಗಳನ್ನು ಕನವರಿಸತೊಡಗಿದನು. ಉಸ್ಮಾನದಲ್ಲಿ ತಾನು ಪಡೆಯುವ ಗೌರವದ ಪದವಿ, ಬಾದಶಹನ ವಿಶ್ವಾಸ ಪಾತ್ರನಾಗುವುದು. ಇವುಗಳನ್ನು ಯೋಚಿಸುತ್ತಾ, ಅದಕ್ಕೆಲ್ಲಾ ಕಾರಣವಾದ ಆ ಸುಂದರಿಗೆ ಮನಸಿನಲ್ಲಿಯೇ ಕೃತಜ್ಞತೆಗಳನ್ನರ್ಪಿಸಿದನು.

೨

ಮರುದಿನ ಮುಂಜಾನೆ ಬಾದಶಹನನ್ನು ಆಕೆಯು ಹೋಗಿ ಕಾಣಬೇಕಾಗಿ ಗೊತ್ತಾಗಿತ್ತು. ಪ್ರತ್ಯೇಕ ಒಂದು ಕೋಣೆಗೆ ಅವಳನ್ನು ಸೇವಕಿಯರು ಕರೆದೊಯ್ದರು. ಅಲ್ಲಿ ಶೃಂಗಾರ ಸಾಮಗ್ರಿಗಳು, ಸುಗಂಧ ದ್ರವ್ಯಗಳು, ಅನೇಕ ಆಭರಣಗಳು, ನೂತನ ದಿವ್ಯ ವಸ್ತ್ರಗಳು ಇರಿಸಲಾಗಿತ್ತು. ಸೇವಕಿಯರು ಸುತ್ತುಗಟ್ಟಿ, ಆಕೆಯನ್ನು ಶೃಂಗರಿಸಬಂದರು. ಆದರೆ ಆಕೆ ಯಾವುದನ್ನೂ ಅಂಗೀಕರಿಸಲಿಲ್ಲ. ತನ್ನ ಉಟ್ಟ ಉಡಿಗೆಯಲ್ಲಿಯೇ ತಾನು ಇರುವುದಾಗಿ ಖಂಡಿತ ಹೇಳಿದಳು.

ರಾತ್ರಿ ಅನೇಕ ಸ್ತ್ರೀಯರು ಆಕೆಯ ಬಳಿಗೆ ಬಂದು ಒಂದೊಂದೇ ವಿಷಯಗಳನ್ನೆತ್ತಿ ಉಲ್ಲಾಸದಿಂದ ಮಾತನಾಡತೊಡಗಿದರು. ಆಕೆಯು ಬಹಳ ಅದೃಷ್ಟಶಾಲಿನಿಯೆಂದೂ, ಅರಮನೆಯ ಸುಖ ಸೌಭಾಗ್ಯಗಳನ್ನೂ, ಬಾದಶಹನ ಮಹಾ ಪ್ರಭಾವವನ್ನೂ ಒಂದೊಂದಾಗಿ ವಿವರ ವಿವರವಾಗಿ ಹೇಳತೊಡಗಿದರು. ಅವಳು ಇವುಗಳನ್ನೆಲ್ಲಾ ಕೇಳಿ ನಗಾಡಿದಳು ಮಾತ್ರ!

"ಬಾದಶಹನ ಘನತೆ, ಮಹತ್ವಗಳಿಂದ, ಅರಮನೆಯ ವಿಲಾಸ ವೈಭವಗಳಿಂದ ನನಗೆ ಏನಾಗಬೇಕಾಗಿದೆ" ಆಕೆ ಉತ್ತರವಿತ್ತಳು.

ಕತ್ತಲು ಕವಿಯುತ್ತಾ ಬಂದಿತು. ಸುತ್ತು ಅನೇಕ ಹೆಂಗಳೆಯರು ಗೊರಕೆಹೊಡೆದು ನಿದ್ರಿಸುತ್ತಿದ್ದರು. ಆಕೆಗೆ ನಿದ್ರೆ ಬರಲೊಲ್ಲದು. ಬಹಳ ಹೊತ್ತು ಏನೇನೋ ವಿಚಾರ ಮಾಡುತ್ತಾ ಕುಳಿತಳು. ಒಂದೊಂದೇ ವಿಷಯಗಳನ್ನು ಗ್ರಹಿಸುತ್ತಿದ್ದಂತೆ ಹೃದಯವು ದುಃಖದಿಂದ ತುಂಬುತ್ತಿತ್ತು. ಧಾರಾಳವಾಗಿ ಅತ್ತಳು. ಬಹಳ ಕಾಲ ಅಳುತ್ತಿದ್ದಳು. ತನ್ನ ಮನೆ, ತನ್ನ ಪ್ರೇಮ ಪಾತ್ರನಾದ ಪತಿ ತನ್ನ ಒಂದು ಒಳ್ಳೆ ಇವೆಲ್ಲವನ್ನೂ ನೆನೆದು ಅವಳಿಗೆ ತಲೆಯು ಭಾರವಾದಂತಾಯಿತು. ಕಡೆಗೆ ಒಂದು ಚಾಪೆಯ ಮೇಲೆ ಬಿದ್ದು ಅಟ್ಟಿತ್ತ ಹೊರಳಾಡಿದಳು. ಕಣ್ಣಿಗೆ ನಿದ್ರೆಯು ಹತ್ತಲೊಲ್ಲದು. ಯಾವುದೋ ಒಂದ ದಿವ್ಯ ದೃಶ್ಯವನ್ನು ಕಂಡಂತೆ ಅವಳಿಗೆ ಅನಿಸಿತು. ಒಂದು ತೇಜೋಪುಂಜವಾದ ವ್ಯಕ್ತಿಯು ಹಿಂದ ಆಕೆಯ ಕಿವಿಯಲ್ಲಿ ಹೀಗೆಂದು ಹೇಳಿದಂತೆ ಆಯಿತು —

"ನಿನ್ನ ಜೀವನ ಕಷ್ಟದ ಕೇಡುಂತಕಾಲವು ಹೋಗುವುದು. ಅಳಿಲಿನ ಮಳೆಯು ನಿಲ್ಲುವುದು. ಪ್ರೇಮಮಯಿಯೇ, ನಿಲ್ಲೆಲ್ಲಿಯೂ ಪ್ರೇಮದ ಸುಖದ ವಸಂತಕಾಲವು ಬೀಸಲಿರುವುದು. ಹೂಗಳು ಅರಳುವವು ಇನ್ನೊಮ್ಮೆ ಸುಮಧುರ ಕಂಠಗಳಿಂದ ಹಕ್ಕಿಗಳು...

(ಆನೇ ಪುಟವನ್ನು ನೋಡಿರಿ)

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು ಅದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ

ಸ್ತ್ರೀಯರಿಗೆ ಋತು ಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ವಂತಾನವೂ, ಸೌಖ್ಯ ಜೀವನವೂ ತಪ್ಪದು

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯಸ್ವಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಹಿಟ್ಲರನನ್ನು ಜಗತ್ತು ನಂಬುವುದಿಲ್ಲ!

ಬ್ರಿಟನಿಗೆ ಜಗತ್ತಿನ ಬೆಂಬಲವಿದೆ!

ಪೋಲರು ಜರ್ಮನಿಯನ್ನು ಹೊಕ್ಕರು!

ಹಿಟ್ಲರನನ್ನು ನಂಬಬಾರದು ಜರ್ಮನರಿಗೆ ಚೆಂಬರ್ಲೀನರ ಸಂದೇಶ

ಜರ್ಮನ ಭಾಷೆಯಲ್ಲಿ, ಆಕಾಶವಾಣಿಯಿಂದ ಮಾತನಾಡುತ್ತಾ, ಜರ್ಮನ್ ಜನತೆಗೆ ಈ ರೀತಿಯಿಂದ ಚೆಂಬರ್ಲೀನರು ಸಂದೇಶ ಕಳುಹಿಸಿದ್ದಾರೆ.

"ನಾವೂ ನೀವೂ ಈಗ ಯುದ್ಧರಂಗಕ್ಕಿಳಿದಿದ್ದೇವೆ. ನಿಮ್ಮ ದೇಶವು ಸ್ವತಂತ್ರ ಪೋಲೆಂಡಿನ ಮೇಲೆ ಆಕ್ರಮಣ ಮಾಡಿ ಬಾಂಬು ಸುರಿಸಿದೆ. ನಮ್ಮ ಎಚ್ಚರಿಕೆಯಂತೆ ನಿಮ್ಮ ಸೈನ್ಯವನ್ನು ಹಿಂದೆಗೆಯದಿದ್ದುದರಿಂದ ಯುದ್ಧವು ಆರಂಭವಾಯಿತು. ನಿಮ್ಮ ಮುಖಂಡ ಹಿಟ್ಲರನ ಮಾತನ್ನು ಇಲ್ಲಿಯಾದರೂ ನಂಬುವುದಿಲ್ಲ. ನಿಮ್ಮ ಮುಖಂಡನು ಹಿಂದೆ ಲೊಕಾರ್ನೋ ಒಪ್ಪಂದವನ್ನು ಮುರಿದನು. ಆಸ್ಟ್ರಿಯಾದ ಕುರಿತೂ ಆತನು ಬಲಾತ್ಕಾರ ಮಾಡಿದನು ಚೆಕ್ಕರ ವಿಷಯ ಒಂದು ಹೇಳಿ, ಇನ್ನೊಂದು ಮಾಡಿದನು. ಮ್ಯೂನಿಕ್ ಆದ ವೇಳೆ ತಾನು ಇನ್ನು ಮುಂದೆ ಆಕ್ರಮಿಸುವುದಿಲ್ಲವೆಂದು ಹೇಳಿ, ಈಗ ಅದನ್ನೂ ತಪ್ಪಿದ್ದಾನೆ ಪೋಲೆಂಡಿನ ಪ್ರಾಂತ್ಯಗಳನ್ನು ಮುತ್ತುವುದಿಲ್ಲವೆಂದು ಅದನ್ನೂ ತಪ್ಪಿನಡೆದನು. ಹಲವು ವರ್ಷಗಳಿಂದ, ಬೋಲ್ಶೇವಿಸಮಿನ ಭಯಂಕರ ವೈರಿಯೆಂದು ಆತ ಹೇಳಿದ್ದ, ಈಗ ಅದರ ಸಹಾಯಕನಾಗಿದ್ದಾನೆ

ರಶ್ಯಾದೊಡನೆ ಒಪ್ಪಂದ

'ರಶ್ಯಾ ಜರ್ಮನಿ ಒಪ್ಪಂದವು ಬಲಾತ್ಕಾರವನ್ನು ಇದಿರಿಸುವ ರಾಷ್ಟ್ರಗಳನ್ನು ದುರ್ಬಲಗೊಳಿಸಲು ಹೂಡಿದ ಮಾಯೆ. ಆದರೆ ಇಂದು ಅದು ನಡೆಯದಾಗಿದೆ ನಮ್ಮ ಶಕ್ತಿಯು ಇನ್ನೂ ಬಲಗೊಂಡಿದೆ ನಾವು ಜರ್ಮನ್ ಜನತೆಗೆ ವಿರುದ್ಧವಾಗಿ ಕಾದಾಡುವುದಿಲ್ಲ, ನಾಗರಿಕ ರಾಷ್ಟ್ರಗಳ ಶಾಂತಿಯನ್ನು ಕದಡಿದ ಹಾಗೂ ಜರ್ಮನರಿಗೇ ಅನಿಷ್ಟಕಾರಿಯಾದ ಹಿಟ್ಲರ್ ಶಾಹಿಯೊಡನೆ ನಾವು ಎದುರಾಡುತ್ತೇವೆ ದೇವರು ನ್ಯಾಯವನ್ನು ಉಳಿಸಲಿ'

ಜರ್ಮನಿಯಲ್ಲಿ ಪರಿಣಾಮ

ಜರ್ಮನರು ಚೆಂಬರ್ಲೀನರ ಈ ಭಾಷಣವನ್ನು ಶಾಂತಚಿತ್ತದಿಂದ ಕೇಳಿದರು ಯಾರೂ ಹೆಚ್ಚು ಉತ್ಸಾಹಗೊಂಡಂತೆಯಾಗಿ, ಸಿಟ್ಟುಗೊಂಡಂತೆಯಾಗಲಿ ಕಂಡುಬರಲಿಲ್ಲ.

ಜೆಕೊಸ್ಲೋವೇಕಿಯದ ಮಾಜಿ ಅಧ್ಯಕ್ಷರ ಸಂದೇಶ

ಜೆಕೊಸ್ಲೋವೇಕಿಯದ ಮಾಜಿ ಅಧ್ಯಕ್ಷರಾದ ಡಾ. ಬೆನೆಸ್‌ರವರು ಚೆಂಬರ್ಲೀನರಿಗೆ ಒಂದು ಸಂದೇಶ ಕಳುಹಿಸುತ್ತಾ ಅದರಲ್ಲಿ ತಮ್ಮ ಬೆಂಬಲ ತಿಳಿಸಿರುವರು.

ಈಜಿಪ್ಟ್ ಬ್ರಿಟನಿಗೆ ಬೆಂಬಲ

ಈಜಿಪ್ಟ್ ಬ್ರಿಟನಿಗೆ ಬೆಂಬಲ ಕೊಡುವುದು. ಎಲ್ಲಾ ಕಡೆಗಳಲ್ಲಿಯೂ ಶತ್ರುಗಳ ಧಾಳಿಯು ನಡೆಯದಂತೆ ಮುಂಜಾಗ್ರತೆ ವಹಿಸಲಾಗಿದೆ.

ಯೆಹೂದ್ಯರ ಬೆಂಬಲ

ಯೆಹೂದ್ಯ ಸ್ತ್ರೀಪುರುಷರೆಲ್ಲರೂ ಹದಿನೆಂಟರಿಂದ ಐವತ್ತು ವರ್ಷ ಪ್ರಾಯದೊಳಗಿನವರೆಲ್ಲಾ ಸೈನ್ಯ ಶಿಕ್ಷಣವನ್ನು ಹೊಂದುತ್ತಿದ್ದಾರೆ! ಜರ್ಮನಿಯಲ್ಲಿದ್ದ ಅನೇಕ ಯೆಹೂದ್ಯರು ಹಿಟ್ಲರನಿಂದ ಹೊರಹಾಕಲ್ಪಟ್ಟವರು, ಈಗ ಹಿಟ್ಲರನನ್ನು ನಿರ್ನಾಮಮಾಡಲು ಬ್ರಿಟನು ಫ್ರಾನ್ಸುಗಳಿಗೆ ಬೆಂಬಲ ಕೊಡಲು ಸಿದ್ಧರಾಗಿದ್ದಾರೆ

ಜೆಕೊಸ್ಲೊವೇಕಿಯದ ಬೆಂಬಲ

'ಈಗ ಜೆಕೊಸ್ಲೋವೇಕಿಯ ನಾಗರಿಕರಾದ ನಾವೂ ಜರ್ಮನಿಯೊಡನೆ ಯುದ್ಧ ಮಾಡುತ್ತಿರುವುದಾಗಿ ತಿಳಿದಿದ್ದೇವೆ ಪಿತೃಭೂಮಿಯು ಸ್ವತಂತ್ರವಾಗುವ ತನಕ ನಾವು ನಿಮ್ಮ ಬೆಂಬಲವಾಗಿ ಬರುವೆವು'

ಪೋಲೆಂಡಿಗೆ ಜೆಕ್ಕರ ದಂಡು

ಪೋಲೆಂಡಿಗೆ ನೆರವಾಗಿ ಜೆಕೊಸ್ಲವೇಕಿಯದವರ ಒಂದು ದಂಡು ತಯಾರಾಗುತ್ತಿದೆ! ಇವರು ಅಗತ್ಯವಿದ್ದಾಗ ಪೋಲೆಂಡಿಗೆ ನೆರವಾಗಲು ಹೋಗುವರು.

ಸಾವಿರಾರು ಮಂದಿ ಜೆಕ್ಕರು ಮತ್ತು ಸ್ಲೊವಾಕರು ಈ ದಂಡಿನಲ್ಲಿ ಈಗಾಗಲೇ ಸೇರಿದ್ದಾರೆ ಜೆಕ್ ಜನರಲ್ ಪ್ರೊಚಾಲರವರು ಈ ದಂಡನ್ನು ನಡೆಸುವರು!

ಅಮೇರಿಕ ರಾಯಭಾರಿಯ ಮನೆಗೆ ಬಾಂಬು!

ಪೋಲೆಂಡಿನಲ್ಲಿರುವ ಅಮೇರಿಕದ ರಾಯಭಾರಿಯ ಮನೆಗೆ ಬಾಂಬು ಬಿದ್ದಿದೆ. ಈ ಅನಾಹುತವನ್ನು ನಿಷೇಧಿಸಿ, ಈ ಕುರಿತು ಅಮೇರಿಕಕ್ಕೆ ಆತನು ತಿಳಿಸಿರುವನು

ಹೋಲೆಂಡಿನ ಮೇಲೆ ವಿಮಾನ ಹಾರಾಟ

ಹೋಲೆಂಡಿನ ಮೇಲೆ ವಿದೇಶೀ ವಿಮಾನಗಳು ಹಾರಾಟ ಮಾಡಿದ ವಿಷಯದಲ್ಲಿ ಅಲ್ಲಿನ ಸರಕಾರವು ತನ್ನ ನಿಷೇಧವನ್ನು ತಿಳಿಸಿ, ತನ್ನ ತಟಸ್ಥಧೋರಣೆಯು ಇದರಿಂದ ಭಗ್ನವಾಗುವುದೆಂದು ತಿಳಿಸಿದೆ

ಪೋಲೆಂಡು ಜರ್ಮನಿಯನ್ನು ಮುತ್ತಿದೆ

ಇಕ್ಕಡೆಯವರಿಗೂ ಮಾರಾಮಾರಿ!

ಪೋಲೆಂಡು—ಜರ್ಮನುಗಳ ಗಡಿಯಲ್ಲಿ ಪೋಲ ಸೈನಿಕರು, ಜರ್ಮನರೊಡನೆ ಬಹಳ ವೀರಾವೇಶದಿಂದ ಕಾದಾಡುತ್ತಿರುವರೆಂಬ ವಾರ್ತೆ ಬಂದಿದೆ. ಜರ್ಮನ ಸೈನಿಕರ ಸಾಲನ್ನು ಭೇದಿಸಿ, ಪೋಲರ ಸೈನ್ಯದಳವು ಮುಂದುವರಿದುದಾಗಿ ತಿಳಿಯುತ್ತದೆ.

ಪೋಲೆಂಡಿನ ಕಾದಾಡುವ ತರುಣ ವೀರರೊಡನೆ ಮುದುಕರೂ ರಣನಾದ ಮಾಡುತ್ತಾ ಸೈನ್ಯದ ಮುಂಗಡೆಗಳಲ್ಲಿ ನುಗ್ಗಿ ಯೋಧರನ್ನು ಇನ್ನಷ್ಟು ಉತ್ಸಾಹಿಗಳಾಗಿ ಮಾಡುತ್ತಿರುವರು.

ಎರಡು ನಗರಗಳು ಕೈ ಬಿಟ್ಟುವು!

ಪೋಲೆಂಡಿನ ಸೈನ್ಯವು ಜರ್ಮನಿಯೊಡನೆ ಭಯಂಕರವಾಗಿ ಕಾದಾಡಿದರೂ, ಬಿಡ್ಗೋಸ್ಜೋಸ್ ಮತ್ತು ಗುಡ್ನಿಯಾಡ್ಸ್ ಎಂಬ ಕೊರಿಡರಿನ ದಕ್ಷಿಣದ ಎರಡು ನಗರಗಳನ್ನು ಜರ್ಮನರು ವಶಮಾಡಿರುವರೆಂದು ವಾರ್ತೆ.

ಪೋಲೆಂಡಿನ ವಿಮಾನದಳವು ಎಲ್ಲಾ ಭಾಗಗಳಲ್ಲಿಯೂ ಜರ್ಮನರ ಮೇಲೆ ಧಾಳಿಯಿಟ್ಟಿವೆ. ಪೂರ್ವ ಪ್ರಶಿಯಾದ ಮೇಲೆ ಪೋಲೆಂಡಿನ ಸೈನ್ಯವು ಮುತ್ತಿದೆ

ಜರ್ಮನ್ ಸೈನ್ಯವೂ ವಾರ್ಸೋವಿನ ಮೇಲೆ ಅನೇಕ ಸಲ ಧಾಳಿಯಿಟ್ಟಿದೆ ವಾರ್ಸೋವಿನಿಂದ ೪೪ ಮೈಲು ದೂರದಲ್ಲಿ ಇಕ್ಕಡೆಯವರಿಗೂ ಭಯಂಕರ ಕಾದಾಟವಾಗುತ್ತಿದೆ.

ವಾರ್ಸೋದ ಮೇಲೆ ಬಾಂಬು

ವಾರ್ಸೋ ನಗರದ ಮೇಲೆ ಜರ್ಮನ್ ವಿಮಾನಗಳು ತಿರಿಗಿ ಒಮ್ಮೆ ಬಾಂಬೆಸೆದಿವೆ. ನಗರದ ಹಲವು ಭಾಗಗಳಲ್ಲಿ ಇದರಿಂದ ಬೆಂಕಿ ಹಿಡಿದು ಸುಟ್ಟುಹೋಗಿವೆ ಎರಡು ಜರ್ಮನ್ ವಿಮಾನಗಳನ್ನು ಕೆಳಗುರುಳಿಸಿರುವರು.

ಮಕ್ಕಳ ಮರಣ!

ವಾರ್ಸೋನಗರದ ಮೇಲೆ ಬಾಂಬೆಸೆದ ನಿಮಿತ್ತ ನಿರಪರಾಧಿಗಳಾದ ಹಲವರು ಸತ್ತಿರುವರು ಮನೆಗಳು ನಿರ್ನಾಮವಾಗಿವೆ ಹತ್ತು ಮಂದಿ ಮಕ್ಕಳು ನಾಶವಾಗಿದ್ದಾರೆ ಇಪ್ಪತ್ತೆರಡು ಮಕ್ಕಳಿಗೆ ಬಹಳ ಗಾಯಗಳಾಗಿವೆ

ಜರ್ಮನ್—ಬ್ರಿಟನ್ ಯುದ್ಧ

ಕೈಲ್ ಕಾಲುವೆಯ ಮಾರ್ಗದಲ್ಲಿ, ಜರ್ಮನ್ ಹಡಗುಗಳ ಮೇಲೆ ಬ್ರಿಟಿಷ್ ವೈಮಾನಿಕರು ಬಾಂಬೆಸೆದಿರುವರು! ಜರ್ಮನ್ ಹಡಗುಗಳಿಗೆ ಬಹಳ ಆಘಾತವಾಗಿದೆ.

ಜರ್ಮನಿಯ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಬ್ರಿಟಿಷರ ವಿಮಾನಗಳು ಆಕ್ರಮಣಮಾಡಿವೆ ಆ ವಿಮಾನಗಳಿಂದ ಆರು ಮಿಲಿಯ ಜರ್ಮನರಿಗೆ ಎಚ್ಚರಿಕೆ ಕೊಡುವ ಕರಪತ್ರಗಳು ಕೆಳಗೆ ಹಾರಿಸಲಾಗಿವೆ

ಎಲ್ಲಾ ಸಮುದ್ರಗಳಲ್ಲಿಯೂ, ನೌಕಾಯುದ್ಧವೂ ಆರಂಭವಾಗಿದೆ. ವ್ಯಾಪಾರದ ಹಡಗುಗಳು ಹೋಗದಂತೆ ಡೋವರ್ ಬಂದರವನ್ನು ಮುಚ್ಚಿದೆ.

ಫ್ರಾನ್ಸು-ಜರ್ಮನ್ ಯುದ್ಧ

ಫ್ರಾನ್ಸಿನ ಪದಾತಿದಳ, ನೌಕಾವಿಮಾನದಳಗಳೂ ಎಲ್ಲ ಕಡೆಗಳಲ್ಲಿಯೂ ತಯಾರಾಗಿ ಗಡಿನಾಡಿನಲ್ಲಿ ಜರ್ಮನ್ ಸೈನ್ಯದೊಡನೆ ಕಾದಾಟವು ಆರಂಭವಾಗಿದೆ ಎಷ್ಟು ಸಮಯದ ಕಾದಾಟವಾದರೂ ಫ್ರಾನ್ಸು ಬೇಕಾದಷ್ಟು ಆಹಾರ ಸಾಮಗ್ರಿಗಳನ್ನು ಸೈನಿಕರಿಗೆ ಒದಗಿಸಿ ಕೊಡಲು ಸಿದ್ಧತೆಮಾಡಿದೆ. ಫ್ರಾನ್ಸಿನಲ್ಲಿ ಇನ್ನೂ ಎಷ್ಟೋ ತಿಂಗಳವರೆಗೆ ಸಾಕಾಗುವಷ್ಟು ಆಹಾರ ಸಾಮಗ್ರಿಯು ಕಳೆದ ಬೆಳೆಯಲ್ಲಿಯೇ ಒದಗಿದೆ.

ಡೆನ್ಮಾರ್ಕಿನ ಬಂದರದ ಮೇಲೆ ಬಾಂಬು

ಡೆನ್ಮಾರ್ಕ್ ಬಂದರದ ಮೇಲೆ ಬಾಂಬು ಬಿದ್ದಿದೆ ಯಾವ ರಾಷ್ಟ್ರದವರೆಂದು ತಿಳಿದಿಲ್ಲ. ಇದರಿಂದ ಹಲವರು ಮೃತಿಹೊಂದಿದ್ದಾರೆ.

ರಶ್ಯಾ—ಜಪಾನು ಒಪ್ಪಂದವೇ?

ಮಂಗೋಲಿಯದಲ್ಲಿ ರಶ್ಯಾ ಜಪಾನುಗಳೊಳಗೆ, ಅನ್ಯೋನ್ಯ ಯುದ್ಧ ನಿಲ್ಲಿಸುವ ಒಪ್ಪಂದವೊಂದು ಬೇಗನೇ ನಡೆಯಲಿರುವುದೆಂದು ವಾರ್ತೆ ಬಂದಿದೆ. ಈಗ ಜರ್ಮನ್ ರಾಯಭಾರಿಯು ಶ್ರಮಿಸುತ್ತಿರುವನು

ಬ್ರಿಟನು ಯುದ್ಧಮಂತ್ರಿಗಳು

ಬ್ರಿಟನು ಯುದ್ಧ ಮಂತ್ರಿಮಂಡಳವೊಂದನ್ನು ಮಾಡಿದೆ, ಚೆಂಬರ್ಲೀನರು ಪ್ರಧಾನ ಮಂತ್ರಿ, ಸರ್ ಜಾನ್ ಸೈಮನ್ನರು, ಆರ್ಥಿಕ ಮಂತ್ರಿ ಲಾರ್ಡ್ ಚಟ್‌ಫೀಲ್ಡರ ಸೈನ್ಯ ಮಂತ್ರಿ ಚರ್ಚಿಲ್ಲರು ಸೇನಾಧಿಕಾರಿಯ ಪ್ರಮುಖರು ಯುದ್ಧದ ಸೆಕ್ರೆಟರಿ ಒಫ್ ಸ್ಟೇಟ್ ಹೋರ್ ಬೆಲಿಶರು, ಡೊಮಿನಿಯನ್ಸ್ ಸೆಕ್ರೆಟರಿ ಅಂತೋನಿ ಏಡನ್ ಹೋಮ್ ಸೆಕ್ರೆಟರಿ ಸರ್ ಜಾನ್ ಎಂಡರ್ಸನ್, ವಿಮಾನದ ಸೆಕ್ರೆಟರಿ ಓಫ್ ಸ್ಟೇಟ್ ಸರ್ ಚಾರ್ಲ್ಸ್ ಕಿಂಗ್ಸ್ಲೀ ವುಡ್ ಲಾರ್ಡ್ ಪ್ರಿವಿಸೀಲರಾಗಿ ಸರ್ ಸಾಮ್ಯುವೆಲ್ ಹೋರರು, ಪೋರ್ಟಫೋಲಿಯೋ ಇಲ್ಲದ ಮಂತ್ರಿ ಲಾರ್ಡ್ ಹೇಂಕಿ

DIAMONDS! DIAMONDS!
BEST BRILLIANCY!
K. R. K. SHET,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳ ಬಜಾರ ಧಾರಣೆಗಿಂತ ಇದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯು ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ! ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ಮಂಗಳೂರು ಸಮಾಚಾರ

ಅಳಿಯ ಸಂತಾನ ಸುಧಾರಣಾ ಪರಿಷತ್ತು

ಅಳಿಯ ಸಂತಾನ ಸುಧಾರಣಾ ಕಮಿಟಿಯವರು ತಯಾರಿಸಿರುವ ಅಳಿಯ ಸಂತಾನ ಮಸೂದೆಯ ಕುರಿತು ಆಲೋಚಿಸುವರೆ ದಕ್ಷಿಣ ಕನ್ನಡ ಜಿಲ್ಲೆಯ ಕಟ್ಟಿನವರ ಪರಿಷತ್ತು ಇದೇ ತಾ. ೧೭ನೇ ಆದಿತ್ಯವಾರ ಪೂರ್ವಾಹ್ನ ಘಂಟೆ ೧೦ಕ್ಕೆ ಮಂಗಳೂರಿನ ಶ್ರೀರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ, ಜಿಲ್ಲಾ ಎಸೆಂಬ್ಲಿ ಮೆಂಬರರಾದ ಶ್ರೀ ಕೆ. ಬಿ. ಜಿನ್‌ರಾಜ ಹೆಗ್ಡೆ, ಎಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಪ್ರತಿ ತಾಲೂಕಿನ ಪ್ರತಿನಿಧಿಗಳಿಗೆ, ಪ್ರೇಕ್ಷಕರಿಗೆ ಈ ಪರಿಷತ್ತಿಗೆ ಸಕಾಲದಲ್ಲಿ ಬಂದು ಪ್ರೋತ್ಸಾಹಿಸಬೇಕಾಗಿ ಅಳಿಯ ಸಂತಾನ ಸುಧಾರಣಾ ಕಮಿಟಿಯ ಕಾರ್ಯದರ್ಶಿಯರಾದ ಕೆ. ಕೆ. ಶೆಟ್ಟಿಯವರು ತಿಳಿಸುತ್ತಾರೆ.

ಹಲವು ಕಾರಣಗಳಿಂದಾಗಿ ಆ ಪರಿಷತ್ತನ್ನು ಮುಂದುವರಿಸಬೇಕಾಗಿದೆ. ಆದ್ದರಿಂದ ತಾ. ೧೭ನೇ ಆದಿತ್ಯವಾರ ಕಮಿಟಿ ಮೀಟಿಂಗನ್ನು ಕರೆದು ಮುಂದಿನ ತಾರೀಕನ್ನು ನಿಶ್ಚೈಸಿ ಪ್ರಕಟಿಸುತ್ತೇವೆ. ತಾ. ೧೬ರ ಒಳಗೆ ಈಗ ಆರಿಸಿ ಬಂದಿರುವ ಪ್ರತಿನಿಧಿಗಳು ಅವರವರ ಪ್ರತಿನಿಧಿ ಹಾಸಲನ್ನು ಶ್ರೀ ಪಿ. ಎಂ. ಹೆಗ್ಡೆ, ಎಡಿಟರ್, ಮಂಗ್ಳೂರು ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಅಧ್ಯಕ್ಷರಾದ ಶ್ರೀ ಕೆ ಬಿ ಜಿನರಾಜ ಹೆಗ್ಡೆಯವರು ತಿಳಿಸುತ್ತಾರೆ.

ಕೊಂಚಾಡಿ

ಕೊಂಚಾಡಿ ಸೆಂಟರಿನ ಉಪಾಧ್ಯಾಯರ ಸಂಘದ ನಾಲ್ಕನೇ ಸಭೆಯು ಕೊಂಚಾಡಿ ಶ್ರೀರಾಮಾಶ್ರಮ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಪ್ಟಂಬರ ತಿಂಗಳ ೯ನೇ ತಾರೀಕು ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಶ್ರೀ ಎಡ್ವರ್ಡ್ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರ್ಥನೆಯಾದ ಬಳಿಕ ಕಾರ್ಯದರ್ಶಿಯವರು ಗತಮೀಟಿಂಗಿನ ವರದಿಯನ್ನು ಸಭೆಯ ಮುಂದಿಟ್ಟು, ಅದು ಸರ್ವಾನುಮತದಿಂದ ಸ್ವೀಕೃತವಾಯಿತು. ಅನಂತರ ವಿದ್ಯಾಧಿಕಾರಿಗಳಿಂದ ಬಂದ ಸರ್ಕ್ಯುಲಾರನ್ನು ಓದಿ ಹೇಳಲಾಯಿತು. ಕೂಳೂರ್ ಚರ್ಚ್ ಹಾಯರ್ ಎಲಿಮೆಂಟರಿ ಶಾಲೆಯ ಸಹಾಯಕ ಅಧ್ಯಾಪಕರಾದ ಶ್ರೀ ಬರ್ನಾರ್ಡ್ ಮೊಂತೆರೋರವರು ನಾಲ್ಕನೇ ಕ್ಲಾಸಿಗೆ ಇಂಗ್ಲಿಷ್ ಪ್ರಥಮ ಪಾಠದಲ್ಲಿ ಮಾದರಿ ಪಾಠ ಕೊಟ್ಟರು. ಸೆಂಟರ್ ಶಾಲಾ ಬಾಲಕರ ವಿವಿಧ ವಿನೋದಾವಳಿಗಳು ನಡೆದುವು. ಇದಾದ ಮೇಲೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಾದರಿ ಪಾಠವ ಶಾಲಾ ಬಾಲಕರ ಚಟುವಟಿಕೆಗಳನ್ನು ಅಭಿನಂದಿಸಿ ಭಾಷಣ ಮಾಡಿದರು.

ಉದ್ಘಾಟನಾ ಭಾಷಣ

ಸೈಂಟ್ ಎಲೋಶಿಯಸ್ ಕಾಲೇಜಿನ ಇಕನೋಮಿಕ್ಸ್ ಎಸೋಸಿಯೇಶನಿನ ಉದ್ಘಾಟನಾ ಭಾಷಣವು ಶ್ರೀ ಎಮ್. ಆನಂದ ತಲವಾರ್, ಬಿ. ಎ. ಬಿ. ಎಲ್., ಎಡಿಶನಲ್ ಪಬ್ಲಿಕ್ ಪ್ರೊಸಿಕ್ಯುಟರ್ ಇವರಿಂದ ಇದೇ ಮಂಗಳವಾರ ತಾ. ೫—೯—೧೯೩೯ರಲ್ಲಿ ಆಯಿತು. ರೆ ಫಾ ಎಲ್ ಮಸ್ಕರೇಂಞಾಸ್, ಎಸ್. ಜೆ., ಎಮ್. ಎ. ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಅಧ್ಯಕ್ಷರ ಮುಕ್ತಾಯ ಭಾಷಣವಾದ ಮೇಲೆ ಸಂಘದ ಕಾರ್ಯದರ್ಶಿಗಳಾದ ಶ್ರೀ. ಕೆ. ಕೇಶವ ಕಿಣಿಯವರು ಅಧ್ಯಕ್ಷರಿಗೂ, ಭಾಷಣಕರ್ತರಿಗೂ ಧನ್ಯವಾದಗಳನ್ನರ್ಪಿಸಿದರು.

ಸಾರ್ವಜನಿಕ ಸಭೆ
ಸಾಮಾನುಗಳ ದರ ಏರಿಸಬಾರದು

ಯುದ್ಧದ ಹೆಸರಲ್ಲಿ ಧವಸಧಾನ್ಯಗಳಿಗೆ ದರ ಏರಿಸಬಾರದೆಂದು ಮಹಾಜನರು ಈ ಕುರಿತು ಸರಕಾರವನ್ನು ಕೇಳಿಕೊಳ್ಳುವ ಬಗ್ಗೆ ಇದೇ ತಾ. ೧೦ನೇ ಸಂಜೆ ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರಗಿಸಿದರು. ಶ್ರೀ ಗೋವಿಂದರಾವ್ ಸರಂಗ್ ಅವರು ಸಭಾಧ್ಯಕ್ಷರಾಗಿದ್ದರು. ಮಹನೀಯರನೇಕರು ಭಾಷಣವನಿತ್ತರು.

ಆಹಾರಸಾಮಗ್ರಿ ಮುಖ್ಯವಾಗಿ ಅಕ್ಕಿ, ದೀಪ ಉರಿಸಲು ಬೇಕಾದ ಚಿಮಿಣಿ ಎಣ್ಣೆ, ಹಾಗೂ ಇತರ ಜೀನಸುಗಳ ಕ್ರಯವನ್ನು ಏರಿಸಬಾರದಾಗಿ ವರ್ತಕರಿಗೆ ಉಪದೇಶಕೊಡುವಂತೆ ಸರಕಾರಕ್ಕೆ ಮನವಿಮಾಡಿ ಕಲೆಕ್ಟರರನ್ನು ಈ ವಿಷಯದಲ್ಲಿ ಭೇಟಿಮಾಡುವ ಬಗ್ಗೆ ಶ್ರೀಗಳಾದ ಸಾರಂಗ್, ತಿಮ್ಮಪ್ಪ ಶೆಟ್ಟಿ, ಎಸ್. ಎನ್. ಹೊಳ್ಳ, ಕೇಶವ ಕಾಮತ್ ಅವರ ಕಮಿಟಿಯೊಂದನ್ನು ಆರಿಸಲಾಯಿತು.

ನಗರ ಸಭೆ

ಗೋಪಾಲ ರೆಡ್ಡಿಯವರು ಕಳೆದ ೧ನೇ ತಾರೀಕಿನ ದಿನ ಮಂಗಳೂರಿಗೆ ಆಗಮಿಸಿದ್ದರು. ಕೆಥೊಲಿಕ್ ಬೇಂಕಿನಲ್ಲಿ ಮಂತ್ರಿಗಳಿಗೆ ಸ್ವಾಗತವನ್ನು ನೀಡಲಾಯಿತು. ಮರುದಿನ ಸಂಜೆ ಶ್ರೀ ಭೋಜರಾಯರ ಗೃಹದಲ್ಲಿ ಮಂತ್ರಿಗಳ ಗೌರವಾರ್ಥವಾಗಿ ಸತ್ಕಾರಕೂಟವನ್ನು ಏರ್ಪಡಿಸಲಾಗಿದ್ದಿತು. ಆ ಮೇಲೆ ಮಂತ್ರಿಗಳು ಮುನ್ಸಿಪಲ್ ಭವನದಲ್ಲಿ ಮಿ। ಫೆಲಿಕ್ಸ್ ಅಲ್ಬುಕರ್ಕರ ತೈಲಚಿತ್ರದ ಅನಾವರಣವನ್ನು ಮಾಡಿದರು.

ರೈಲಿನಲ್ಲಿ ಅಪಾಯ

ತಾ ೧೦ರಂದು ಇಲ್ಲಿಂದ ಬೆಳಿಗ್ಗೆ ಹೊರಡುವ ಮಲಬಾರ್ ಎಕ್ಸ್‌ಪ್ರೆಸ್ ರೈಲುಗಾಡಿಗೆ ಓರ್ವ ತರುಣನು ಕಾಸರಗೋಡಿಗೆ ಟಿಕೇಟನ್ನು ಪಡಕೊಂಡು ಗಾಡಿಯ ಬಾಗಿಲುಗಳನ್ನು ತೆರೆದು ನಿಂತಿದ್ದನು. ಮಂಗಳೂರು ನಿಲ್ದಾಣವನ್ನು ಬಿಟ್ಟು ಗಾಡಿಯು ನೇತ್ರಾವತಿ ಸಂಕಕ್ಕೆ ಬರಲು ಬಾಗಿಲು ಹಿಂದಿನಿಂದ ಬಡಿದು, ನಿಂತಿದ್ದ ತರುಣನು ಕೆಳಕ್ಕೆ ಬಿದ್ದು, ತಕ್ಷಣವೇ ಮೃತಪಟ್ಟಿರುವನು. ವಿನೋದಕ್ಕಾಗಿ ರೈಲುಬಾಗಿಲುಗಳನ್ನು ತೆರೆದು ನಿಲ್ಲುವುದು ಬಹಳ ಅಪಾಯಕರವಾಗಿರುತ್ತದೆ.

ಕಡಿಮೆ ಕ್ರಯಕ್ಕೆ ಅಕ್ಕಿ ಮಾರಾಟ

ಈಗ ನಡೆಯುವ ಯುದ್ಧ ಸಂಬಂಧ ಜಮೀನುದಾರರು ಅಕ್ಕಿಯನ್ನು ಕಡಿಮೆ ಧಾರಣೆಗೆ ಕೊಡದೆ ಇದ್ದುದರಿಂದ, ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ಬಳಿ ಸಾಹುಕಾರ ಶ್ರೀ ಮರ್ಕಡ ಪದ್ಮನಾಭ ಕಾಮ್ತಿಯವರ ಅಂಗಡಿಯಲ್ಲಿ ಇದೇ ತಾ ೧೦-೯-೩೯ರಿಂದ ಬೇಕಾದಷ್ಟು ಅಕ್ಕಿ, ಸೇರು ಒಂದಕ್ಕೆ ೦-೧-೮ಯಂತೆ ದಿನವಾಗಲೂ ಮಾರಲ್ಪಡುತ್ತದೆ ಎಂದು ಅವರು ತಿಳಿಸುತ್ತಾರೆ.

ಸಾದರ—ಸ್ವೀಕಾರ

ಗ್ರಾಮಸೇವೆ (ಮಾಸಪತ್ರಿಕೆ) ಸಂಪುಟ ೫, ಸಂಚಿಕೆ ೧೨ ಸಂಪಾದಕರು—ಶ್ರೀ ನ ಭದ್ರಯ್ಯ. ಕ್ರೌನ್ ೧/೮ ಆಕಾರದ ೧೮ ಪುಟಗಳು ವಾರ್ಷಿಕ ಚಂದಾ ಅಂಚೆವೆಚ್ಚ ಸಹಿತ ಒಂದು ರೂಪಾಯಿ.

'ಗ್ರಾಮ ಪುನರುಜ್ಜೀವನಕ್ಕಾಗಿ' ಹೆಣಗುತ್ತಿರುವ ಮಾಸ ಪತ್ರಿಕೆಯಿದು. ಭಾರತವು ಇಂದು ರಾಷ್ಟ್ರೀಯತೆಯಲ್ಲಿ ಮುಂದುವರಿಯುತ್ತಿರಲು, ನಿಜವಾಗಿ ಗ್ರಾಮ ಪುನರುಜ್ಜೀವನದಲ್ಲಿಯೇ ಅಖಿಲಭಾರತದ ಉದ್ಧಾರವಿದೆ. ಇಂತಹ ರಚನಾತ್ಮಕ ಕಾರ್ಯವನ್ನು ಉದ್ದೇಶವಾಗಿಟ್ಟುಕೊಂಡು ಹೆಣಗುತ್ತಿರುವ ಪತ್ರಿಕೆಗಳು ಕನ್ನಡದಲ್ಲಿ ತೀರಾ ವಿರಳ. ಗ್ರಾಮಸೇವೆಯನ್ನು ಸಲ್ಲಿಸುವ ವಿಧಾನಗಳ ಕುರಿತು ಉಪಯುಕ್ತ ಲೇಖನಗಳೂ ಇವೆ. ಈ ಪತ್ರಿಕೆಯು ಜನಾದರಣೀಯವಾಗಿ ಬಹುಕಾಲ ಗ್ರಾಮಸೇವೆಯನ್ನು ಸಲ್ಲಿಸುವಂತಾಗಲಿ ಎಂದು ಹಾರೈಕೆ.

ಶ್ರೀ ಕೃಷ್ಣಜಯಂತಿ ಸಂಚಿಕೆ (ನವಯುಗ) ಉಡುಪಿಯ ಶ್ರೀ ಕೃಷ್ಣನ ದಿವ್ಯ ಸನ್ನಿಧಿಯಿಂದ ಹೊರಡುವ ಈ ಪತ್ರಿಕೆಯು ಶ್ರೀ ಕೃಷ್ಣ ಜನ್ಮ ದಿನೋತ್ಸವದ ಪುಣ್ಯ ಕಾಲದಂದು ಅಂದವಾದ ವಿಶೇಷ ಸಂಚಿಕೆಯೊಂದನ್ನು ಹೊರಡಿಸಿದೆ. ಶ್ರೀಗಳಾದ ಮುದವೀಡು ಕೃಷ್ಣರಾಯರು, ಕೊರಡ್ಕಲ್ ಶ್ರೀನಿವಾಸ ರಾವ್, ಎ. ಬಿ. ಶೆಟ್ಟಿ, ಎಸ್ ವೆಂಕಟರಾಜ ಮೊದಲಾದ ಮಹನೀಯರ ಲೇಖನಗಳಿವೆ. ಸಾಹಸವು ಸ್ತುತ್ಯವಾಗಿದೆ.

ತಾಲೂಕು ಸಮಾಚಾರ

ಉಡುಪಿ
ಹರಿಜನ ಅನಾಥಾಲಯದ ಸಹಾಯಾರ್ಥ ಪ್ರದರ್ಶನ.

ಹರಿಜನ ಅನಾಥಾಲಯದ ಸಹಾಯಾರ್ಥವಾಗಿ ಬ್ರಹ್ಮಾವರ ಶ್ರೀ ಚೆನ್ನಬಸವೇಶ್ವರ ಮೇಳದವರು ಕಾಡಬೆಟ್ಟು ಮೋಡರ್ನ್ ಹಾ। ಎ। ಶಾಲಾ ವಠಾರದಲ್ಲಿ ಕಳೆದ ತಾ. ೫ನೇ ರಾತ್ರಿ ಮಹಾಭಾರತದ ಅಶ್ವಮೇಧ ಪರ್ವದೊಳಗಣ 'ಭಕ್ತ ಸುಧನ್ವ' ಎಂಬ ಕಥಾಭಾಗವನ್ನು ದಶಾವತಾರದ ಒಂದು ವಿನೋದ ಪ್ರದರ್ಶನವಾಗಿ ಟಿಕೇಟಿಟ್ಟು ಪ್ರದರ್ಶಿಸಿದರು.

ಯೂನಿಯನ್ ಸ್ಥಾಪನೆ.

ಮುನಿಸಿಪಲ್ ಶಾಲಾ ಮಾಸ್ತರರುಗಳೆಲ್ಲರೂ ಕಳೆದ ತಾ. ೫ರಲ್ಲಿ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಸಭೆಗೂಡಿ ತಮ್ಮದೊಂದು ಯೂನಿಯನ್ ಸ್ಥಾಪಿಸಿಕೊಂಡರು.

ಜರ್ಮನರ ಸ್ವಾಧೀನತೆ

ಉಡುಪಿಯಲ್ಲಿ ವಾಸಿಸುತ್ತಿದ್ದ ಜರ್ಮನಿ ದೇಶಸ್ಥರಾದ ರೆವೆರೆಂಡ್ ಕ್ಲಿಂಗ್ ಮತ್ತು ರೆವೆರೆಂಡ್ ರೈಟನ್ ಬಾಚರ್ ಎಂಬವರನ್ನು ಸ್ಥಳೀಯ ಪೋಲೀಸಿನವರು ಸ್ವಾಧೀನಪಡಿಸಿಕೊಂಡು ಕಳೆದ ಸೋಮವಾರ ರಾತ್ರಿ ಸ್ಪೆಶಲ್ ಮೋಟಾರ್ ಕಾರಿನಲ್ಲಿ ಕುಳ್ಳಿರಿಸಿಕೊಂಡು ಮಂಗಳೂರಿಗೆ ತಂದರು.

ಶ್ರೀ ಕೃಷ್ಣ ಜಯಂತ್ಯುತ್ಸವ

ಭಗವಾನ್ ಶ್ರೀ ಕೃಷ್ಣ ಸನ್ನಿಧಾನದಲ್ಲಿ ಪರ್ಯಾಯ ಶ್ರೀ ಫಲಿಮಾರು ಮಠದ ಶ್ರೀ ರಘುವರ್ಯ ತೀರ್ಥ ಶ್ರೀ ಪಾದಂಗಳವರು ಶ್ರೀ ಕೃಷ್ಣ ಜಯಂತ್ಯುತ್ಸವವನ್ನೂ ವಿಟ್ಲಪಿಂಡಿ ಹಬ್ಬವನ್ನೂ ಸಂಭ್ರಮದಿಂದ ಆಚರಿಸಿದರು.

ಎಲ್ಲೂರು

ಕಳೆದ ತಿಂಗಳ ತಾ. ೩೧ನೇ ಗುರುವಾರ ರಾತ್ರಿ ಇಲ್ಲಿನ ಸುಪ್ರಸಿದ್ಧ ಜಮೀನುದಾರರೂ, ಎಲ್ಲೂರು ಕುಂಜೂರು ದೇವಸ್ಥಾನಗಳ ಆಡಳಿತದಾರರೂ ಆಗಿದ್ದ ಶ್ರೀ ಕುಂಜೂರು ವ್ಯಾಸರಾವ್— ಇವರು ತಮ್ಮ ೭೪ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಪರಮಾತ್ಮನು ಅವರ ಪವಿತ್ರಾತ್ಮಕ್ಕೆ ಚಿರಶಾಂತಿಯನ್ನೀಯಲಿ.

ಕಳೆದ ತಾ ೩ನೇ ಆದಿತ್ಯವಾರ ಎಲ್ಲೂರು ಬಂಡಸಾಲೆಯ ಬಳಿ ಎಲ್ಲೂರು ಪಂಚಾಯತ್ ಬೋರ್ಡಿನವರಿಂದ ಪ್ರಥಮ ವಾರಸಂತೆಯು ತೆರೆಯಲ್ಪಟ್ಟಿತು.

ಕಾರ್ಕಳ.

ತಾ ೧೦ರ ಪೂರ್ವಾಹ್ನ ಘಂಟೆ ೧೧ಕ್ಕೆ ಪಂಚಾಯತ ಡಿವಿಜನಲ್ ಆಫೀಸರವರ ಅಧ್ಯಕ್ಷತೆಯಲ್ಲಿ ಇಲ್ಲಿಯ ವ್ಯಾಪಾರಿಗಳ ಮತ್ತು ಮಹಾಜನರ ಸಭೆ ಸೇರಿ ಅಕ್ಕಿ ವಗೈರೆಗಳ ಧಾರಣೆಗಳನ್ನು ನಿರ್ಣಯಿಸಿ ಆ ಬಗ್ಗೆ ಮುಂದಿನ ವಿಚಾರ ನಡಿಸುವರೆ ಒಂದು ಕಮಿಟಿಯನ್ನು ಮೊಕ್ರುರು ಮಾಡಲಾಯಿತು.

ಕುಚ್ಚಿಗೆ ಅಕ್ಕಿ ಮುಡಿ ಒಂದಕ್ಕೆ ೪-೮-೦ ಸೇರಿಗೆ ದರ ೦—೧—೯, ಚಿಮಿಣಿ ಎಣ್ಣೆ ದಬ್ಬಿಗೆ ೩-೮-೦ ಬಾಟ್ಲಿಗೆ ೦—೨—೪ ಯಂತೆ ನಿರ್ಣಯಿಸಲಾಯಿತು. ಸದ್ರಿ ಕಮಿಟಿಗೆ ೧೨ ಮಂದಿ ಮೆಂಬರನ್ನು ಆರಿಸಲಾಯಿತು. ಮತ್ತು ಇತರ ಯಾವತ್ತು ಆಹಾರ ಜೀನಸುಗಳಿಗೆ ಖರೀದಿಯ ಮೇಲೆ ಟಕ್ಕೆಂಟ ಜಾಸ್ತಿ ಆಗದಂತೆ ಮಾರಾಟ ಮಾಡತಕ್ಕದಾಗಿಯೂ ನಿರ್ಣಯಿಸಲಾಯಿತು. ಈ ದರಗಳು ಬರುವ ಒಕ್ಟೋಬರ ತಾರೀಕು ೧೫ರ ವರೇಗೆ ಜಾರಿಯಲ್ಲಿರತಕ್ಕದ್ದಾಗಿಯೂ ಮ ಸರಕಾರದಿಂದ ಕಂಟ್ರೋಲ್ ಕಾನೂನು ನಿರ್ಣಯಿಸಲಾಯಿತು.

ಪುತ್ತೂರು ತಾಲೂಕು ಹರಿಜನ ಸಭೆಯ ವರದಿ.

ಕಳೆದ ತಾ. ೪ರಲ್ಲಿ ಪುತ್ತೂರು ತಾಲೂಕು ಕೊಂಗ್ರಿಸ್ ಕಮಿಟಿ ಆಫೀಸಿನಲ್ಲಿ ಕಮಿಟಿ ಅಧ್ಯಕ್ಷ ಶ್ರೀ ಯಸ್. ಚಿನ್ನಪ್ಪ ಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸು ಮಾಡಲಾಯಿತು:—

ಇಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಹರಿಜನ ಪ್ರವೇಶದ ಬಗ್ಗೆ ಸದ್ರಿ ದೇವಳದ ಅಧಿಕಾರಿಗಳನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳಬೇಕಾಗಿಯೂ ಸದ್ರಿ ಕೋರಿಕೆಯನ್ನು ಅಧಿಕಾರ ವರ್ಗದವರು ನಿರಾಕರಿಸಿದ್ದಲ್ಲಿ ಪ್ರತ್ಯಕ್ಷ ಚಳವಳ ಹೂಡಬೇಕಾಗಿಯೂ ನಿರ್ಣಯಿಸಲಾಯಿತು. ಇದರ ಪ್ರಚಾರಕ್ಕಾಗಿ ಕೆಮ್ಮಿಂಜೆ ವೆಂಕಪ್ಪನವರನ್ನು ಕಾರ್ಯ ನಿರ್ವಾಹಕರನ್ನಾಗಿ ನೇಮಿಸಲಾಯಿತು. ಮತ್ತು ಇದಕ್ಕೆ ಸಂಬಂಧಪಟ್ಟ ಎಲ್ಲಾ ಪತ್ರವ್ಯವಹಾರವನ್ನು ನಡಿಸುವರೆ ಸದ್ರಿ ವೆಂಕಪ್ಪನವರಿಗೆ ಅಧಿಕಾರ ಕೊಡಲಾಯಿತು.

ಪುತ್ತೂರು ತಾಲೂಕು ಗ್ರಾಮ ಉದ್ಯೋಗಸ್ಥರ ಸಂಘದ ಮಹಾ ಸಭೆಯನ್ನು ಇದೇ ತಿಂಗಳ ತಾರೀಕು ೨೫ನೇ ಸೋಮವಾರ ದಿವಸ ಸಾಯಂ ಘಂಟೆ ೨ಕ್ಕೆ ಸರಿಯಾಗಿ ಬೆಳ್ತಂಗಡಿ ವಾಚಕಮಂದಿರದಲ್ಲಿ ನಿಶ್ಚಯವಾಗಿರುವುದರಿಂದ ೬ ದಿವಸ ಮೆಂಬರರೆಲ್ಲರೂ ಅಲ್ಲದೆ ಮೆಂಬರರಲ್ಲದ ಗ್ರಾಮ ಉದ್ಯೋಗಸ್ಥರು ಕೂಡ ತಪ್ಪದೆ ಬರಬೇಕಾಗಿಯೂ, ಈ ಮೊದಲು ಮೆಂಬರರನ್ನು ಸೇರಿಸುವರೆ ಅರ್ಜಿಫೋರ್ಮುಗಳನ್ನು ಹುಂಡಿ ರಶೀದಿ ಪುಸ್ತಕವನ್ನೂ ತೆಗೆದುಕೊಂಡವರು ತಮ್ಮ ವರದಿ ಸಮೇತ ಬರಬೇಕಾಗಿಯೂ ಅಪೇಕ್ಷಿಸಲಾಗುತ್ತದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

NOTICE
In The Court of District Munsiff of MANGALORE.

O S. No 377/1939.
R I A No 842/1939

Between —

Kinyappu Hengsu, daughter of Thimmappa Marakala, residing at Bolooi of Mangalore town. — *Plaintiff*

and

1 Thimmappa Amin, son of Kanthu Gurikara, Ullal Kasba village, Mangalore Taluk

2 Thaniya Marakala, son of Manju Hengsu, residing at Kudroli of Mangalore town — *Defendants*

To all whom it may concern

Please take notice that the above suit filed by the plaintiff for a declaration that the registered sale-deed dated 23—5—1939 executed by the 2nd defendant in favour of the 1st defendant in respect of the suit-property is void and unenforceable being in fraud of Creditors and also the above application filed by her for permission to sue on behalf of herself and all other Creditors, if any, of the 2nd defendant stand posted to 7—10—1939. Any person interested in the matter may appear before the said Court in person or by pleader duly instructed at 11 a m on Saturday the said 7th day of October 1939 and apply to be made a party to the suit.

Mangalore, 13—9—39 } H. Vasudeva Kamath, Pleader for Plaintiff.

ಯೂರೋಪಿನ ಮಹಾ ಸಮರದ ಸಾರಾಂಶ!

ಬ್ರಿಟನು ಮೂರು ವರ್ಷ ಕಾದಾಡಲು ನಿಶ್ಚಯಿಸಿದೆ!

ಫ್ರೆಂಚರು ಜರ್ಮನರನ್ನು ಬೆನ್ನಟ್ಟಿದರು ಹಿಟ್ಲರನ ಮೇಲೆ ಗೋರಿಂಗನು ಸರ್ವಾಧಿಕಾರಿ

ಪೋಲರು ವೀರಾವೇಶದಿಂದ ಕಾದುವರು

ಮೊದಲ ದಿನ

ಸಪ್ಟಂಬರ ಒಂದರಂದು ಹಿಟ್ಲರನು ಪೋಲೆಂಡಿನ ನಗರವಾದ ಪಾರ್ಕೋವನ್ನು ಧಾಳಿಯಿಕ್ಕಿಸಿ, ಬಾಂಬಿನ ಸುರಿಮಳೆ ಬಿತ್ತು. ಆ ಸಮಯದಲ್ಲಿ, ಹಿಟ್ಲರನು ಜರ್ಮನ್ ಜನತೆಯನ್ನು ಆವೇಶಗೊಳಿಸಲು ಮಹಾ ಭಾಷಣವಿತ್ತನು.

ಡಾನ್ಜಿಗನ್ನು ತನಗೆ ಕೊಡಬೇಕೆಂದೂ, ಕಾರಿಡರಿನ ವಿಷಯವಾಗಿ ಮುಂದಕ್ಕೆ ಮಾತನಾಡಬಹುದಾಗಿಯೂ ಜರ್ಮನ್ ಹೇಳಿತು.

ಡಾನ್ಜಿಗಿನಲ್ಲಿರುವ ಜರ್ಮನ್ ಪ್ರತಿನಿಧಿ ಹೆರ್ ಫಾರ್‌ಸ್ಟರನು ಜರ್ಮನಿಗೆ ಡಾನ್ಜಿಗನ್ನು ಸೇರಿಸುವ ಕಾನೂನನ್ನು ತಯಾರಿಸುವುದಾಗಿಯೂ, ಹಿಟ್ಲರನನ್ನು ಡಾನ್ಜಿಗು ಸ್ವಾಗತಿಸುವುದಾಗಿಯೂ ಹೇಳಿದನು.

ಚೆಂಬರ್ಲೇನರ ಭಾಷಣ

ಇದನ್ನೆಲ್ಲಾ ನೋಡಿ ಚೆಂಬರ್ಲೇನರು, ಜರ್ಮನಿಗೆ ಕಡೆಯ ನುಡಿಯೊಂದನ್ನು ಕೊಟ್ಟು, ಬೇಗನೇ ಪೋಲೆಂಡಿನ ಮೇಲೆ ಜರ್ಮನಿಯು ಮಾಡಿದ ಮುತ್ತಿಗೆಯನ್ನು ಹಿಂತೆಗೆಯ ಬೇಕಾಗಿ ಹೇಳಿದರು. ಪಾರ್ಲಿಮೆಂಟು ಸಭೆಯಲ್ಲಿ ಚೆಂಬರ್ಲೇನ್ ಪ್ರಭೃತಿಗಳು ಬ್ರಿಟನು ಯುದ್ಧಕ್ಕೆ ಸಿದ್ಧವಾಗಿದೆಯೆಂದು ಸ್ಪಷ್ಟಪಡಿಸಿದರು.

ಹಿಟ್ಲರನ ಮೇಲೆ ಗೋರಿಂಗ್

ಹಿಟ್ಲರನು ಜರ್ಮನಿಯಲ್ಲಿ ಪ್ರಚಂಡ ಭಾಷಣ ಮಾಡುತ್ತಾ, ತನ್ನ ನೀತಿಯು ನ್ಯಾಯವೆಂದು ವಿವರಿಸಿ, ತಾನು ಜರ್ಮನಿಗಾಗಿ ಮಾಡುವ ಅತುಲ ಸ್ವಾರ್ಥತ್ಯಾಗದ ಸಮಯ, ದೇಶಬಾಂಧವರೆಲ್ಲರೂ ನೆರವಾಗಬೇಕೆಂದೂ ಇದರಲ್ಲಿ ತನಗೇನಾದರೂ ಅಪಾಯ ಸಂಭವಿಸಿದಲ್ಲಿ ಜನರಲ್ ಗೋರಿಂಗನು ಸರ್ವಾಧಿಕಾರಿಯಾಗಿರಬೇಕೆಂದೂ ವ್ಯಕ್ತಪಡಿಸಿದನು.

ನಾಗರಿಕರ ಮೇಲೆ ಧಾಳಿಮಾಡ ಕೂಡದು

ಪೋಲೆಂಡಿನ ಸೈನಿಕರು ಮಾತ್ರವಲ್ಲದೆ ಅನೇಕ ನಿರಪರಾಧಿ ನಾಗರಿಕರ ಮೇಲೆ ಧಾಳಿ ನಡೆಸಿದ ವಿಷಯದಲ್ಲಿ ಅಮೇರಿಕದ ಪ್ರೆಸಿಡೆಂಟ್ ರೂಸವೆಲ್ಟರು ನಾಗರಿಕರ ಮೇಲೆ ಧಾಳಿ ನಡೆಸಕೂಡದಾಗಿ ಬಿನ್ನಯಿಸಿದರು. ಬ್ರಿಟನು ಫ್ರಾನ್ಸುಗಳು ಇದಕ್ಕೆ ಒಪ್ಪಿದುವು.

ಇಟಲಿಯು ಇಷ್ಟರಲ್ಲಿ ತಾನು ತಟಸ್ಥವಾಗಿರುವುದಾಗಿ ಹೇಳಿತು. ಪೋಲೆಂಡು ಬ್ರಿಟನು ಫ್ರಾನ್ಸುಗಳು ಬೆಂಬಲಕ್ಕೆ ಬರಬೇಕಾಗಿ ವಿನಂತಿಸಿಕೊಂಡಿತು.

ಅನೇಕ ಕಡೆ ಜರ್ಮನರು ಮುಂದೊತ್ತಿ ಬಂದು ಡಾನ್ಜಿಗಿನ ವೆಸ್ಟರ್‌ಪ್ಲೇಟ್ ಮೊದಲಾದುವುಗಳನ್ನು ಮುತ್ತಿ ಜನರನ್ನೂ ಸೆರೆಹಿಡಿದಿರುವುದಾಗಿ ತಿಳಿದಿದೆ.

ಎರಡನೆಯ ದಿನ
ಪೋಲೆಂಡಿನಲ್ಲಿ

ಪೋಲೆಂಡು ಹೀಗೆ ಸ್ವಾತಂತ್ರ್ಯಕ್ಕಾಗಿ ಕಾದಾಡುತ್ತಿರುವಾಗ, ಅಲ್ಲಿನ ಅಧ್ಯಕ್ಷರಾದ ಕೌಂಟ್ ಮಾಸ್ಸಿಕಿಯವರು ತಾವು ಈ ಯುದ್ಧದಲ್ಲಿ ಅಪಾಯಗೊಂಡಲ್ಲಿ ತಮ್ಮ ಸ್ಥಾನಕ್ಕೆ ಮಾರ್ಶಲ್ ಸ್ಮಿಗ್ಲಿ ರಿಡ್ಜರನ್ನು ಆರಿಸಬೇಕಾಗಿ ಪ್ರಕಟಿಸಿದರು.

ಪೋಲೆಂಡಿನ ಮುಖ್ಯ ಪಟ್ಟಣವಾದ ವಾರ್ಸಾದ ಮೇಲೆ ನಿರಂತರ ಜರ್ಮನರ ಬಾಂಬು ಬೀಳಲು ಸುರುವಾಯಿತು. ಜರ್ಮನ್ ಪೋಲಿಷ್ ಗಡಿಯಲ್ಲಿ ಯುದ್ಧವಾದಾಗ ಪೋಲರು ಅತ್ಯಂತ ಉತ್ಸಾಹದಿಂದ ಕಾದಾಡಿದರು. ಪೂರ್ವಪ್ರಷ್ಯದ ಗಡಿಯಲ್ಲಿಯೂ ಕಾಳಗವಾಯಿತು.

ಅನೇಕ ಜರ್ಮನ್ ವಿಮಾನಗಳ ಮೇಲೆ ಗುಂಡು ಬಿತ್ತು. ಅನೇಕ ಪೋಲೆಂಡ್ ವಿಮಾನಗಳು ಧ್ವಂಸವಾದುವು.

ಪ್ರೆಸಿಡೆಂಟ ರೂಸವೆಲ್ಟರ ಮಾತಿಗೆ ಹಿಟ್ಲರನು, ಶತ್ರುಗಳು ಸೈನಿಕರ ಮೇಲೆ ಮಾತ್ರ ಧಾಳಿ ನಡೆಸುವಲ್ಲಿ ತಾವೂ ಹಾಗೆಯೇ ಮಾಡುವುದಾಗಿಯೂ ಹೇಳಿದರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಿಟ್ಲರ್ ಧೋರಣೆಯನ್ನು ಖಂಡಿಸಿ ಲಾರ್ಡ್ ಹೆಲಿಫಾಕ್ಸರೇ ಮೊದಲಾದವರು ಭಾಷಣವಿತ್ತರು.

ಟರ್ಕಿ, ಆಸ್ಟ್ರೇಲಿಯ, ನ್ಯೂಜಿಲೇಂಡ್, ಭಾರತದ ಹಲವರು ನರೇಂದ್ರರು ಬ್ರಿಟನಿಗೆ ಬೆಂಬಲ ಕೊಡುವುದಾಗಿ ಹೇಳಿದರು.

ಬ್ರಿಟಿಷ್ ಯುದ್ಧ ಮಂತ್ರಿಮಂಡಳಿ

ಇಷ್ಟರಲ್ಲಿ ಬ್ರಿಟಿಷ್ ಯುದ್ಧ ಮಂತ್ರಿಮಂಡಳವೊಂದು ರಚನೆಯಾಯಿತು. ಆಂಥೋನಿ ಈಡನ್ ಚರ್ಚಿಲ್ ಪ್ರಭೃತಿಗಳು ಇದರಲ್ಲಿ ಸೇರಿಸಲ್ಪಟ್ಟರು.

ಮೂರನೆಯ ದಿನ
ಯುದ್ಧ ಪ್ರಕಟನೆ

ಬ್ರಿಟಿಷರ ಕಡೆಯ ನುಡಿಗೆ ಜರ್ಮನಿಯು ಹೇಳಿದ ಸಾಯಿದೆಗೆ ಉತ್ತರ ಕೊಡಲಿಲ್ಲ. ೩—೯—೧೯೩೯ರಂದು ಪ್ರಾತಃಕಾಲ ೧೧-೧೫ ಗಂಟೆಗೆ ಚೆಂಬರ್ಲೇನರು 'ಜರ್ಮನಿಯೊಡನೆ ನಾವು ಯುದ್ಧಪ್ರಾರಂಭಿಸಿದ್ದೇವೆ'ಂದು ಪ್ರಕಟಿಸಿದರು. ಈ ಸಂದರ್ಭದಲ್ಲಿ ಚೆಂಬರ್ಲೇನರು ಬಿಂರಿಕ ಮಹತ್ವದ ಭಾಷಣಮಾಡಿ 'ಹಿಟ್ಲರ್‌ಶಾಹಿಯು ನಿರ್ನಾಮವಾಗುವ ವರೆಗೆ ನಾವು ಜೀವಿಸಿರುವೆನೆಂದೂ' ಹೇಳಿದರು. ಬ್ರಿಟಿಷ್ ಸರಕಾರದ ಈ ಧೋರಣೆಗೆ ಅನೇಕರು ಪ್ರೋತ್ಸಾಹಿಸಿದರು. ಲಾರ್ಡ್ ಹೆಲಿಫಾಕ್ಸರೂ, ಲಾರ್ಡ್ ಸಭೆಯಲ್ಲಿ ಅದೇ ಅರ್ಥದ ಭಾಷಣಮಾಡಿದರು.

ಫ್ರಾನ್ಸೂ ಬ್ರಿಟನಿನಂತೆ ಕಡೆಯ ನುಡಿಕೊಟ್ಟು ಅದಕ್ಕೂ ಹಿಟ್ಲರನು ಉತ್ತರ ಕೊಡದಿರಲು ಯುದ್ಧ ಪ್ರಕಟನೆ ಮಾಡಿತು.

ಪೋಲರ ಹರ್ಷ

ಬ್ರಿಟನು ಫ್ರಾನ್ಸುಗಳ ಈ ಯುದ್ಧ ನಿರ್ಧಾರವನ್ನೂ ಕೇಳಿ ಪೋಲೆಂಡಿನ ಜನತೆಯು ಅತ್ಯಂತ ಸಂತೋಷಗೊಂಡಿತು.

ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರು ತಾವು ತಾಟಸ್ಥ್ಯದಿಂದಿರುವುದಾಗಿ ಹೇಳಿದರು. ನಾರ್ವೆ ಮತ್ತು ಬೆಲ್ಜಿಯಮುಗಳೂ ತಾಟಸ್ಥ್ಯ ಧೋರಣೆಯನ್ನು ತಿಳಿಸಿದವು.

ಅಮೇರಿಕವು ಈ ಸಂದರ್ಭದಲ್ಲಿ ತನ್ನ ವ್ಯಾಪಾರವನ್ನೂ ಹೆಚ್ಚು ಮಾಡಲು ಮನಸ್ಸು ಮಾಡುತ್ತಿದೆ.

ಹಿಟ್ಲರನ ಉತ್ತರ

ಬ್ರಿಟಿಷ್ ಮತ್ತು ಫ್ರಾನ್ಸು ಸರಕಾರಗಳು ಕಡೆಯ ನುಡಿ ಕೊಟ್ಟ ವಿಚಾರವಾಗಿ ಖಂಡಿಸಿ, ಹಾಗೆ ಪತ್ರ ಬರೆದ ಧೋರಣೆಯೇ ಸಲ್ಲದೆಂದು ಹಿಟ್ಲರನು ಉತ್ತರವಿತ್ತನು. ಇದರಲ್ಲಿ ಬ್ರಿಟನೇ ಪೋಲೆಂಡಿಗೆ ಈ ಉದ್ಧಟತನವನ್ನು ಕಲಿಸಿರುವುದೆಂದೂ ತಿಳಿಸಿದನು. ಈ ಸಂದರ್ಭದಲ್ಲಿ ಹಿಟ್ಲರನು ಜರ್ಮನರಿಗೆ ಆವೇಶದ ಭಾಷಣವಿತ್ತನು.

ಹಿಟ್ಲರನು ನಿರಪರಾಧಿಗಳಾದ ಜನರ ಮೇಲೂ ಅನೇಕ ಗ್ರಾಮ ನಗರಗಳ ಮೇಲೂ ಬಾಂಬು ಹಾಕಿರುವನೆಂದು ತಿಳಿಯಿತು.

ಪೋಲ ಜರ್ಮನರ ವಿಮಾನಗಳು ಯುದ್ಧದಲ್ಲಿ ನಷ್ಟವಾದುವು. ಜರ್ಮನರು ವಿಷವಾಯು ಪ್ರಯೋಗಿಸಲು ಸುರು ಮಾಡಿದರು.

ಸಾರ್ವಭೌಮರ ಸಂದೇಶ

ಬ್ರಿಟಿಷ್ ಸಾರ್ವಭೌಮರು ಈ ಸಂದರ್ಭದಲ್ಲಿ ಪಶುಬಲವನ್ನಡಿಗಿಸಲು ಎಲ್ಲಾ ಸಾಮ್ರಾಜ್ಯದ ಮತ್ತು ಜಗತ್ತಿನ ಜನರು ಬ್ರಿಟನಿಗೆ ಬೆಂಬಲವೀಯಬೇಕಾಗಿ ಕೇಳಿಕೊಂಡರು.

ಭಾರತದೇಶದಲ್ಲಿ ವೈಸರಾಯರೂ ಭಾರತೀಯರು ಬ್ರಿಟನಿಗೆ ಬೆಂಬಲವೀಯಬೇಕಾಗಿ ಕೇಳಿಕೊಂಡರು.

ವೈಸರಾಯರೂ ಭಾರತದ ರಕ್ಷಣಾ ಮಸೂದೆಯನ್ನು ಜಾರಿ ಮಾಡಿದರು.

ಬೊಂಬಾಯಿಯಲ್ಲಿ ಮಿಲಿಟರಿಯ ಬಡಾವಣೆ

ಬೊಂಬಾಯಿ ಮಿಲಿಟರಿಯನ್ನು ಬಲಪಡಿಸಲು ಸೈನ್ಯದಳವೊಂದು ಮೊನ್ನೆ ಬಂದಿಳಿಯಿತು.

ನಾಲ್ಕನೆಯ ದಿನ
ಗಾಂಧಿಜಿ ವೈಸರಾಯರ ಭೇಟಿ

ವೈಸರಾಯರು ಮಹಾತ್ಮಾಜಿಯವರನ್ನು ಕರೆದು ಮಾತನಾಡಿದರು.

ಗಾಂಧಿಜಿಯವರೂ ಹಲವು ಮುಖಂಡರೊಡನೆ ಸಂಭಾಷಿಸಿದರು. ಬೇಗನೇ ಭಾರತದ ಮುಖಂಡರನ್ನು ಕೂಡಿಸಿ ವೈಸರಾಯರು ಸಭೆಯೊಂದನ್ನೂ ಜರಗಿಸುವುದಾಗಿ ವಾರ್ತೆ ಬಂತು.

ಭಾರತದ ಹಲವು ಕಡೆ ವ್ಯಾಪಾರಸ್ಥರು ಲಾಭ ಪಡೆವ ಆಸೆಯಿಂದ ದವಸ ಧಾನ್ಯಗಳಿಗೆ ಕ್ರಯ ಹೆಚ್ಚಿಸಿದರು.

ಹಿಂದೂದೇಶದಲ್ಲಿದ್ದ ಅನೇಕ ಜರ್ಮನರನ್ನು ಸೆರೆ ಹಿಡಿಯಲಾಯಿತು.

ಅಥೇನಿಯಾ ಹಡಗದ ಜೀವಸಮಾಧಿ

ಬ್ರಿಟಿಷ್ 'ಅಥೇನಿಯಾ' ಎಂಬ ಹಡಗವು ಯಾರಿಂದಲೋ ಧ್ವಂಸ ಮಾಡಲಾಯಿತು. ಇದರಲ್ಲಿ ಅನೇಕ ಅಮೇರಿಕನರೂ ಇದ್ದರು. ಅಮೇರಿಕದಲ್ಲಿ ಇದರಿಂದ ಭಾರಿ ಗೊಂದಲ ಹುಟ್ಟಿತು.

ಈಜಿಪ್ಟ, ಟ್ರಾನ್ಸ್‌ಜೋರ್ಡಾನ್, ಮತ್ತು ಆಫ್ರಿಕದ ವಸಾಹತುಗಳು ಬ್ರಿಟನಿಗೆ ಬೆಂಬಲದ ಭರವಸೆಯಿತ್ತುವು. ಐರ್ಲೆಂಡರೂ ಬ್ರಿಟನಿಗೆ ಬೆಂಬಲದ ಮಾತಿತ್ತಿದ್ದಾರೆ.

ಸ್ಪೈನ್, ರಶ್ಯಾ, ಯುಗೋಸ್ಲೇವಿಯಾ, ರುಮೇನಿಯಾ, ಬಲ್ಗೇರಿಯಾ, ಇರಾನ್ ಮತ್ತು ಫಿನ್ಲೆಂಡುಗಳು ತಟಸ್ಥವೆಂದು ಪ್ರಕಟವಾಯಿತು.

ಗ್ರೀಕ್ ಹಡಗೊಂದು ಬಾಲ್ಟಿಕ್ ಸಮುದ್ರದಲ್ಲಿ ಮುಳುಗಿತು.

ಜರ್ಮನಿಗೆ ಚೆಂಬರ್ಲೇನರ ಸಂದೇಶ

ಹಿಟ್ಲರನು ಲೋಕಕಂಟಕನೆಂದೂ, ಹಿಟ್ಲರನಿಂದ ಜಗತ್ತಿಗೆ ಮಾತ್ರವಲ್ಲದೆ ಜರ್ಮನಿಗೇ ಸಂಕಷ್ಟವು ಒದಗಬಹುದೆಂದೂ ಚೆಂಬರ್ಲೇನರು ಸಂದೇಶವಿತ್ತರು. ಅದರಲ್ಲಿ ತನಗೆ ಜರ್ಮನ್ ಜನತೆಯ ಮೇಲೆ ದ್ವೇಷವಿಲ್ಲವೆಂದೂ ಹೇಳಿದರು.

ಜರ್ಮನಿಯಿಂದ ಬ್ರಿಟಿಷ್ ಫ್ರೆಂಚ್ ರಾಯಭಾರಿಗಳೂ, ಲಂಡನಿನಿಂದ ಜರ್ಮನ್ ರಾಯಭಾರಿಯೂ ಹಿಂತಿರುಗಿದರು.

ಲಂಡನಿನಿಂದ ಮಕ್ಕಳನ್ನು ಹೆಂಗುಸರನ್ನೂ ಬೇರೆ ಬೇರೆ ಸ್ಥಳಗಳಿಗೆ ಒಯ್ದಿರುವರು.

ಪೋಲೆಂಡಿನ ಅಶ್ವ ಮತ್ತು ಪದಾತಿ ಸೈನಿಕರು ಜರ್ಮನ್ ಸೈನ್ಯವನ್ನು ನುಗ್ಗಿ ಕಾದಾಡಿದರು.

ವಾರ್ಸಾದ ಮೇಲೆ ಧಾಳಿನಡೆಯಿತು. ಅಮೇರಿಕದ ರಾಯಭಾರಿಯ ಮನೆಯ ಮೇಲೂ ಬಾಂಬು ಬಿತ್ತು.

ಜೆಕ್ಕರ ಬೆಂಬಲ

ಜೆಕೊಸ್ಲವೇಕಿಯದ ಮಾಜಿ ಅಧ್ಯಕ್ಷರಾದ ಡಾ|| ಬೆನೆಷರು ತಮ್ಮ ಬೆಂಬಲವನ್ನು ಸೂಚಿಸಿ ಜೆಕ್ ಸೈನ್ಯವೂ ಸಿದ್ಧವಾಯಿತು.

ಬ್ರಿಟಿಷರು ಜರ್ಮನರ ಆನ್ಯಾಯದ ಕುರಿತು ಅನೇಕ ಕರಪತ್ರಗಳನ್ನೂ ವಿಮಾನಗಳ ಮೂಲಕ ಹಂಚಿದರು.

ಡೋವರ್ ಒಂದರವನ್ನು ವ್ಯಾಪಾರ ಹಡಗುಗಳಿಗೆ ಮುಚ್ಚಲಾಯಿತು.

ಐದನೆಯ ದಿನ
— ಗಾಂಧಿಜಿಯವರ ಸ್ಪಷ್ಟತೆ —

ವೈಸರಾಯರಲ್ಲಿ 'ತಾನು ಕಾಂಗ್ರೆಸಿನ ಪ್ರತಿನಿಧಿಯಾಗಿ ಹೋಗಿಲ್ಲವೆಂದೂ, ತನ್ನ ಸಹಾನುಭೂತಿಯು ಬ್ರಿಟನು ಮತ್ತು ಫ್ರಾನ್ಸುಗಳಿಗಿದೆಯೆಂದೂ ಹೇಳಿದರು.

ಪೋಲಿಷ್ ಗಡಿಯಲ್ಲಿ ಜರ್ಮನರು ಹಾರಾಡುವ ಪೆರಚ್ಯೂಟ್‌ಗಳ ಮೂಲಕ ಇಳಿದರು.

ಆಫ್ರಿಕದಲ್ಲಿ ಹೊಸ ಮಂತ್ರಿಮಂಡಲವಾಯಿತು. ಸತ್ಯವು ಜಯಿಸುವುದೆಂದು ಚೆಂಬರ್ಲೇನರು ಡಲಾಡಿಯರರಿಗೆ ಸಂದೇಶ ಕಳುಹಿಸಿದರು.

ಜರ್ಮನಿಯು ಬಡವರಿಗೆ ಯುದ್ಧಮಾಡಲು ಮನಸ್ಸಿಲ್ಲವೆಂದು ಜರ್ಮನಿಯಿಂದ ವಾರ್ತೆ ಬಂತು.

ಎರಡು ಜರ್ಮನ್ ಹಡಗಗಳು ಮುಳುಗಿಸಲ್ಪಟ್ಟವು.

ಪೋಲೆಂಡಿಗೆ ಜಯವಾಗಲೆಂದು ಗಾಂಧಿಜಿಯವರು ಅಲ್ಲಿನ ಪ್ರೆಸಿಡೆಂಟರ ಕೇಳಿಕೆಯಂತೆ ಸಂದೇಶ ಕಳುಹಿಸಿದರು.

ಪೋಲೆಂಡ್ ವಿಮಾನಗಳು ಬರ್ಲಿನ್ ಮೇಲೆ ಹಾರಾಡಿದುವು. ಪೋಲರು ಜರ್ಮನರನ್ನು ಸೆರೆಹಿಡಿದರು. ಜರ್ಮನರು ಹಿಂತೆಗೆದರು.

ಆರನೆಯ ದಿನ

ಡಾನ್ಜಿಗಿನಲ್ಲಿ ಭಯಂಕರ ಕಾದಾಟವಾಯಿತು. ಪಶ್ಚಿಮದ ಗಡಿಯಲ್ಲಿ ಫ್ರೆಂಚರು ಮುನ್ನುಗ್ಗಿದರು. ೮೫ ಲಕ್ಷ ಪವನುಗಳ ಸಾಲವನ್ನು ಬ್ರಿಟನು ಪೋಲೆಂಡಿಗೆ ಕೊಟ್ಟಿತು.

[೧೧ನೇ ಪುಟಕ್ಕೆ ಮುಂದುವರಿಸಿಯದೆ]

ವಾರ್ಧಾದಲ್ಲಿ ಮುಖಂಡರು ರಾಷ್ಟ್ರದ ಭವಿಷ್ಯ ನಿರ್ಣಯಿಸುವರು

—ವರ್ಕಿಂಗ್ ಕಮಿಟಿಯ ಸಭೆ—

ಗಾಂಧಿಜಿಯವರು ಕಾಂಗ್ರೆಸನ್ನು ಮುನ್ನಡೆಸುವರೇ?

ಪ್ರಕೃತ ಫೆಡರೇಶನು ಬರುವುದಿಲ್ಲ

ವರ್ಕಿಂಗ್ ಕಮಿಟಿಯ ಸಭೆ

ವಾರ್ಧಾದಲ್ಲಿ ತಾ. ೮ರಂದು ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆಯು ಜರಗಿತು. ಈ ಸಭೆಯಲ್ಲಿ ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಕುರಿತು, ಹಾಗೂ ಯುದ್ಧದಲ್ಲಿ ಭಾರತದ ಸಹ ಭಾಗದ ವಿಷಯವಾಗಿ ಆಲೋಚಿಸತಕ್ಕದಿದ್ದು ದರಿಂದ ವರ್ಕಿಂಗ್ ಕಮಿಟಿಯ ಸದಸ್ಯರಲ್ಲದೆ

ಭೇಟಿಯ ಸಲುವಾಗಿ

'ಸಿಮ್ಲಾಕ್ಕೆ ವೈಸರಾಯರಿಗೆ ಭೇಟಿ ಕೊಡಲು ಸೇಗಾಂವದಿಂದ ಹೊರಬಿದ್ದ ಮಹಾತ್ಮಾಜಿಯವರು.

ಸುಭಾಸಬೋಸರು, ಜಯಪ್ರಕಾಶ ನಾರಾಯಣ, ಮಹಾತ್ಮಾಜಿ, ನೆಹರು ಮೊದಲಾದವರೂ ಆಮಂತ್ರಿತರಾಗಿದ್ದರು. ಫಾರ್ವರ್ಡ್ ಬ್ಲಾಕ್, ಸೋಶಲಿಸ್ಟ್ ಪಕ್ಷಗಳ ಬೇರೆ ಬೇರೆ ಮುಖಂಡರೂ ಬಂದಿದ್ದರು. ರಾಷ್ಟ್ರಪತಿಗಳು ತಮ್ಮ ಅಸೌಖ್ಯವನ್ನೂ ಗಮನಿಸದೆ ಸಭೆಗೆ ಬಂದಿದ್ದರು.

ಶ್ರೀ. ನರೇಂದ್ರದೇವ್ ಇವರು ಮೊದಲನೆಯ ದಿನದ ಸಭೆಯಲ್ಲಿ ತುಂಬಾ ಪ್ರಸ್ತಾಪನೆ ಮಾಡಿದರು. ಮಹಾದೇವ ದೇಸಾಯಿಗಳು ಸಭೆಯಲ್ಲಿ ಹಾಜರಿದ್ದು ಆ ಮೇಲೆ ಸೇಗಾಂವಿಗೆ ತೆರಳಿದರು.

ಮಹಾತ್ಮಾಜಿಯವರು ಹಿಂದೆ ಪ್ರಕಟಿಸಿದಂತೆ 'ಎಲ್ಲರೂ ಅವರಿಗೆ ಸಾಧ್ಯವಿದ್ದರೆ ನನ್ನೊಡನೆ ಬರಬಹುದು. ಆದರೆ ನಾನು ನನ್ನ ಆತ್ಮಸಂತೋಷಕ್ಕೆ ಕೆಲಸಮಾಡುವಂತೆ ಅವರೂ ಅವರ ಆತ್ಮಸಂತೋಷಕ್ಕೂ ಅವರು ಪ್ರತಿನಿಧಿಗಳಾಗಿರುವ ದೇಶಕ್ಕೂ ಸರಿಯಾಗಿ ವರ್ತಿಸಬೇಕು' ಎಂಬ ಈ ಹೇಳಿಕೆಯು ಎಲ್ಲಾ ಧುರೀಣರ ವಿಚಾರಗಳಲ್ಲಿ ಮಹಾ ಗೊಂದಲವನ್ನು ಹುಟ್ಟಿಸಿತ್ತು.

ರಾಷ್ಟ್ರದ ಗುರಿಯನ್ನು ಪಡೆಯಲು ಸರ್ವರಲ್ಲಿಯೂ ಏಕ ನಿರ್ಧಾರವು ಬರುವ ಯತ್ನವು ಮಾಡಲಾಗುವುದೆಂದು ಊಹಿಸಲಾಗಿತ್ತು.

ಪ್ರಾತಃಕಾಲ ಮೂರು ಗಂಟೆಗಳ ತನಕ ಮಾತುಕತೆಗಳಾದುವು. ಪ್ರಾಮುಖ್ಯ ವಿಷಯವನ್ನು ಅದು ವರೆಗೆ ಚರ್ಚಿಸಲಿಲ್ಲ. ವರ್ಕಿಂಗ್ ಕಮಿಟಿಯ ಸದಸ್ಯರು ಸುಮ್ಮಗಿದ್ದು ಆಮಂತ್ರಿತರಾದ ಇತರ ಮುಖಂಡರ ಅಭಿಪ್ರಾಯಗಳನ್ನು ಕೇಳಿದರು.

ಮಹಾತ್ಮಾಜಿ ಮತ್ತು ವೈಸರಾಯರ ಭೇಟಿಯ ಕುರಿತು ಚರ್ಚೆಯಾಯಿತು.

ಗಾಂಧಿಜಿಯವರು ತಮ್ಮ ಅಭಿಪ್ರಾಯಗಳನ್ನು ವಿವರಿಸಿದರು. ಬೋಸರು ಮತ್ತು ಜಯಪ್ರಕಾಶ ನಾರಾಯಣರು ತಮ್ಮ ಪಕ್ಷಗಳ ಅಭಿಪ್ರಾಯಗಳನ್ನು ವಿವರಿಸಿದರು.

ಶ್ರೀ ಅಣೆಯವರೂ ವೈಸರಾಯರೊಡನೆ ತಮ್ಮ ಮಾತುಕತೆಯ ವಿವರವನ್ನು ಹೇಳಿದರು.

ಫೊರ್ವರ್ಡ್ ಬ್ಲಾಕಿನವರು ಸಂಯುಕ್ತ ಪಕ್ಷಗಳ ವರ್ಕಿಂಗ್ ಕಮಿಟಿಯಾಗಬೇಕೆಂದೂ, ಹರಿಪುರ ಠರಾವಿನಂತೆ ಯುದ್ಧದ ಕುರಿತು ನಿರ್ಣಯ ಮಾಡಬೇಕೆಂದೂ ಪ್ರದರ್ಶನ ಮಾಡಿದ್ದಕ್ಕೆ ರಾಷ್ಟ್ರಪತಿಗಳು ಆಶ್ವಾಸನೆಯಿತ್ತರು.

ಜಮನ್ನಾಲಾಲ ಬಜಾಜರಿಗೆ ಸಭೆಗೆ ಒದಗಲಾಗಲಿಲ್ಲ. ತಾ. ೧೧ರ ಸಭೆಗೆ ಪಂಡಿತ ನೆಹರುಗಳೂ ಬಂದು ಮುಟ್ಟಿದರು. ಕಾಂಗ್ರೆಸು ಮಂತ್ರಿಗಳ ವಿಷಯ ಮತ್ತು ಕೇಂದ್ರ ಸರಕಾರ ಮತ್ತು ಕಾಂಗ್ರೆಸುಗಳ ಸಂಬಂಧದ ವಿಷಯ ವಿಚಾರ ಮಾಡಲಾಯಿತು.

ಪಂಡಿತ ನೆಹರುಗಳು ತಮ್ಮ ಅಭಿಪ್ರಾಯವನ್ನು ಸಭೆಯ ಮುಂದೆ ವಿವರಿಸಿ ಹೇಳಿದರು.

ಗಾಂಧಿಜಿಯವರಿಗೆ ಮೌನದ ದಿನವಾದುದರಿಂದ ಅವರು ಸಭೆಗೆ ಬರಲಿಲ್ಲ.

ಇಡೀ ದಿನ ಚರ್ಚೆಯಾಯಿತು. ಇಂತಹ ಪ್ರಧಾನ ವಿಷಯದಲ್ಲಿ ಒಂದು ನಿಶ್ಚಿತ ಅಭಿಪ್ರಾಯಕ್ಕೆ ಬರಲು ಸ್ವಲ್ಪ ಸಮಯ ಹೋಗಬಹುದು.

ರಾಷ್ಟ್ರಪತಿ, ಆಜಾದರು, ಸರ್ದಾರರು, ನೆಹರುಗಳು ಬಹಳ ಸಮಯ ಮಾತುಕತೆ ನಡೆಸಿದರು.

ಬೇರೆ ಬೇರೆ ಪಕ್ಷದವರೂ ತಮ್ಮ ನಿರ್ಧಾರದ ಬಗ್ಗೆ ಸಭೆ ಸೇರಿಸಿ ಚರ್ಚಿಸಿದರು.

ನೆಹರುಗಳು ಚೈನಾದ ಅನುಭವಗಳನ್ನು ವಿವರಿಸಿದ್ದು ಮಾತ್ರವಲ್ಲದೆ, ಬೇಗನೇ ಚೈನವು ವಿಜಯಹೊಂದುವುದೆಂದೂ ತಿಳಿಸಿದರು.

ಪ್ರಕೃತಕ್ಕೆ ಫೆಡರೇಶನು ಬರುವುದಿಲ್ಲ

ವೈಸರಾಯರ ಪ್ರಕಟನೆ

ಯುದ್ಧದ ಕುರಿತು, ಹಿಂದೂದೇಶದಲ್ಲಿ ಫೆಡರೇಶನನ್ನು ಜಾರಿಗೆ ತರುವ ವಿಷಯವು ತತ್ಕಾಲಕ್ಕೆ ಮುಂದುವರಿಸಲಾಗುವುದೆಂದೂ ವೈಸರಾಯರು ಪ್ರಕಟಿಸಿರುವರು.

ಫೆಡರೇಶನಿನ ಬದಲು ಬೇರೆ ಏನಾದರೂ ಆಗುವುದು ಸಂಭವವಿದೆ. ಅದರಲ್ಲಿಯೂ ಕೇಂದ್ರ ಸರಕಾರದ ವಿಷಯದಲ್ಲಿ ತಾತ್ಕಾಲಿಕ ಯೋಜನೆಯೊಂದು ಆಗಲಿದೆ. ಹೀಗೇದು ಕೇಂದ್ರ ಅಸೆಂಬ್ಲಿಯ ಸದಸ್ಯರ ಅಭಿಪ್ರಾಯವಾಗಿದೆ.

ಫ್ರೆಂಚರು ಮುಂದೊತ್ತುತ್ತಿದ್ದಾರೆ

ಜರ್ಮನರು ಹಿಂದೆಗೆದರು

ಪ್ಯಾರಿಸಿನಿಂದ ಬಂದ ವಾರ್ತೆಯಂತೆ, ಫ್ರೆಂಚ ಸೈನಿಕರು ಮುಂದೊತ್ತುತ್ತಿರುವರೆಂದೂ, ಜರ್ಮನರು ಹಿಂದೆಗೆಯುತ್ತಿರುವರೆಂದೂ ತಿಳಿಯುತ್ತದೆ.

ಯೂರೋಪಿನ ಮಹಾ ಸಮರದ ಸಾರಾಂಶ!

[೧ನೆಯ ಪುಟದಿಂದ]

ಪ್ಯಾರಿಸ, ಲಂಡನುಗಳಲ್ಲಿ ಶತ್ರುಗಳು ಬಂದು ನಿರ್ನಾಮ ಮಾಡದಂತೆ ಬೇಕಾದ ವ್ಯವಸ್ಥೆಗಳು ಮಾಡಲಾದುವು.

ಡ್ಯೂಕ್ ಓಫ್ ಗ್ಲಾಸ್ಟರು ಬ್ರಿಟಿಷ್ ಸೇನಾನಾಯಕರಾದರು.

ಕಾರಿಡರು ತಮ್ಮ ವಶವಾಯಿತೆಂದು ಜರ್ಮನಿಯಿಂದ ಸುದ್ದಿ ಬಂತು.

ಶತ್ರುಗಳ ಆರ್ಥಿಕ ಸ್ಥಿತಿಯನ್ನು ನಿರ್ನಾಮ ಮಾಡಲು ಬ್ರಿಟಿಷರು ಆರ್ಥಿಕ ರೀತಿಯ ಯುದ್ಧಕ್ರಮವನ್ನು ಸ್ಥಾಪಿಸಿದರು.

ಏಳನೆಯ ದಿನ

ಪಾರ್ಲಿಮೆಂಟು ಸಭೆಯಲ್ಲಿ ಯುದ್ಧದ ವಿವರವನ್ನು ಚೆಂಬರ್ಲೀನರು ಹೇಳಿದರು.

ಜರ್ಮನಿನಲ್ಲಿಯೇ ಯುದ್ಧ ನಿಷೇಧ ಪ್ರದರ್ಶನಗಳಾದುವು.

ನೌಕಾಪಡೆಗಳ ಭಯಂಕರ ಕಾದಾಟ ನಡೆಯಿತು. ಬ್ರಿಟನು ಫ್ರಾನ್ಸು ಹಡಗುಗಳು ಜರ್ಮನಿಯ ಹಡಗುಗಳನ್ನು ಮುಳುಗಿಸಿದ ವಾರ್ತೆ ಬಂತು.

ಭಾರತದಲ್ಲಿ ಅನೇಕ ಮುಖಂಡರು ಬ್ರಿಟನಿಗೆ ಸಹಾನುಭೂತಿ ತೋರಿಸಿದರೂ, ಸ್ವತಂತ್ರವಾದ ಹಿಂದೂದೇಶವು ಮಾತ್ರ ಸ್ವಾತಂತ್ರ್ಯಕ್ಕಾಗಿ ಕಾದಾಡಬಲ್ಲುದೆಂದು ಹೇಳಿದರು.

ಎಂಟನೆಯ ದಿನ

ಜರ್ಮನಿಯ ಪಶ್ಚಿಮ ಗಡಿಯಲ್ಲಿ ಫ್ರೆಂಚರು ಧಾಳಿ ನಡೆಸಿದರು. ಫ್ರೆಂಚರು ಜರ್ಮನಿಯ ಅನೇಕ ಮುಖ್ಯ ಸ್ಥಳಗಳ ಚಿತ್ರವನ್ನು ವಿಮಾನಗಳಿಂದ ತೆಗೆದು ಅಲ್ಲಿಗಲ್ಲಿಗೆ ಧಾಳಿನಡೆಸಿದ ಆದರೆ ಫ್ರೆಂಚರ ಮುಖ್ಯ ಸ್ಥಳಗಳು ಮೊದಲೇ ಸುತ್ತುಕಟ್ಟಲ್ಪಟ್ಟಿರುವುದರಿಂದ ಹಾಗೆ ಮಾಡಲು ಉಪಾಯವಿಲ್ಲದಾಯಿತು.

ಬ್ರಿಟಿಷರು ಎಲ್ಲಾ ಕಡೆಗಳಲ್ಲಿಯೂ ನೌಕಾಕ್ರಮಣದಲ್ಲಿ ಜಯಶಾಲಿಗಳಾದ ವಾರ್ತೆಬಂತು

ಯುದ್ಧವು ಮೂರು ವರ್ಷಗಳ ವರೆಗೆ ಸಾಗುವುದು ಎಂಬ ವಿಷಯ ಬ್ರಿಟಿಷ್ ಮಂತ್ರಿಮಂಡಳವು ಎಲ್ಲರಿಗೂ ತಿಳಿಸಿ ಅದಕ್ಕೆ ಬೇಕಾದ ಸಲಕರಣೆಯನ್ನು ಕೈಕೊಳ್ಳುವರೆ ಕೇಳಿಕೊಂಡಿತು. ಇದರಿಂದ ನಾಜೀ ಜರ್ಮನಿಯೊಡನೆ ಖಂಡಿತ ಯುದ್ಧ ಮಾಡಿಯೇ ತೀರಬೇಕೆಂಬ ಬ್ರಿಟಿಷ್ ನಿರ್ಧಾರವು ಸೂಚಿತವಾಯಿತು.

ವಾರ್ಸೋ ನಗರವು ತಮ್ಮ ಸ್ವಾಧೀನವಾಯಿತು ಎಂದು ಜರ್ಮನ್ ಅಧಿಕಾರಿಗಳು ಕೊಟ್ಟ ಪ್ರಕಟಣೆಯು ಸತ್ಯವಲ್ಲವೆಂದು ಪೋಲೆಂಡಿನ ಅಧಿಕಾರಿಗಳು ಪ್ರಕಟಿಸಿದರು. ಪೋಲರು ಭಯಂಕರ ಕಾದಾಡಿದರು. ಪೋಜ್‌ನಾನ್ ಪ್ರಾಂತವು ಜರ್ಮನರ ಕೈವಶವಾಯಿತೆಂದು ತಿಳಿಯಿತು.

ರಶ್ಯವು ಪೋಲೆಂಡಿನ ಗಡಿಯಲ್ಲಿ ತನ್ನ ಸೈನ್ಯವನ್ನಿಟ್ಟು ಭದ್ರತೆಯನ್ನು ಮಾಡಿತು.

ಕೆನಡವು ಜರ್ಮನಿಯೊಡನೆ ಯುದ್ಧ ಪ್ರಕಟಿಸುವ ಸೂಚನೆ ಮಾಡಿತು.

ಮಾರ್ಶಲ್ ಗೋರಿಂಗನು ನಾಲ್ಕು ವಾರದೊಳಗೆ ಪೋಲೆಂಡನ್ನು ಸ್ವಾಧೀನಪಡಿಸಬಹುದಾಗಿ ಹೇಳಿದನು. ಜರ್ಮನಿಯು ಶಾಂತಿಗೆ ತಯಾರಿದೆಯೆಂದೂ ಈ ಯುದ್ಧವಾಗಲು ಚೆಂಬರ್ಲೇನರು ಜವಾಬ್ದಾರರೆಂದೂ ಹೇಳಿದನು.

ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆ ವಾರ್ಧಾದಲ್ಲಿ ಸೇರಿತು. ಫಾರ್ವರ್ಡ್ ಬ್ಲಾಕಿನವರು ಎಲ್ಲಾ ಸಂಗಡಗಳ ಐಕ್ಯ ವರ್ಕಿಂಗ್ ಕಮಿಟಿಯನ್ನು ರಚಿಸಬೇಕೆಂದೂ, ಹರಿಪುರದ ಠರಾವಿನಂತೆ, ಯುದ್ಧ ನೀತಿಯ ನಿರ್ಣಯ ಮಾಡಬೇಕೆಂದೂ ಪ್ರದರ್ಶನ ಮಾಡಿದರು. ರಾಷ್ಟ್ರಪತಿಗಳು ಅವರಿಗೆ ವರ್ಕಿಂಗ್ ಕಮಿಟಿಯು ದೇಶಹಿತದ ದೃಷ್ಟಿಯಿಂದ ನಡೆಯುವದೆಂಬ ಭರವಸೆಯಿತ್ತರು.

ಗಾಂಧಿಜಿಯವರು ಉಪವಾಸದಿಂದಿದ್ದರು. ನೆಹರುಗಳ ಆಗಮನವು ನಿರೀಕ್ಷಿಸಲಾಗಿತ್ತು.

ಆಕಾಶವಾಣಿಯ ವರ್ತಮಾನವನ್ನು ಪ್ರಕಟಿಸಬಾರದಾಗಿ ಭಾರತ ಸರಕಾರವು ಪತ್ರಿಕೆಗಳನ್ನು ಎಚ್ಚರಿಸಿತು.

ಒಂಭತ್ತನೆಯ ದಿನ

ಕೆನಡವು ಜರ್ಮನ್ ವಿರುದ್ಧವಾಗಿ ಯುದ್ಧ ಪ್ರಕಟನೆ ಮಾಡಿತು.

ವಾರ್ಸೋದಿಂದ ಆರು ಮೈಲು ದೂರದಲ್ಲಿ ಜರ್ಮನರಿಗೂ ಪೋಲರಿಗೂ ಕಾದಾಟವಾಯಿತು.

ಲೋಡ್ಜನ್ನು ಸ್ವಾಧೀನಪಡಿಸಿರುವುದಾಗಿ ಜರ್ಮನರು ಹೇಳಿದರು.

ಸೆಲಿಸಿಯಾದಲ್ಲಿ ಜರ್ಮನ್ ಪಡೆಗೆ ಸ್ವತಃ ಹಿಟ್ಲರನೇ ಸೇರಿರುವುದಾಗಿ ವಾರ್ತೆ ಬಂತು.

ಜಪಾನಿನ ಪ್ರಧಾನ ಮಂತ್ರಿಯು ಮುಂದಕ್ಕೆ ರಶ್ಯ, ಬ್ರಿಟನು, ಫ್ರಾನ್ಸುಗಳೊಡನೆ ರಾಜಕೀಯ ವ್ಯವಹಾರದಲ್ಲಿ ಬದಲು ಧೋರಣೆಯೊಂದನ್ನು ಜಪಾನು ಮಾಡುವುದಾಗಿ ಹೇಳಿದನು.

ಸೋವಿಯಟ್ ಸರಕಾರವು ಸೈನ್ಯಸಿದ್ಧತೆ ಮಾಡಿತು.

ಅರಬರು ಬ್ರಿಟನಿಗೆ ಬೆಂಬಲದ ಭರವಸೆಯಿತ್ತರು. ಇನ್ನೆರಡು ಬ್ರಿಟಿಷ್ ಹಡಗುಗಳು ಮುಳುಗಿದವು.

ಫ್ರೆಂಚರು ಜರ್ಮನಿಯ ಗಡಿಯಲ್ಲಿ ಶೀಘ್ರವೇಗದಿಂದ ಮುಂದುವರಿದರು.

ವಾರ್ಸೋದ ಹತ್ತಿರ ಪೋಲರಿಗೂ ಜರ್ಮನರಿಗೂ ಭಯಂಕರವಾದ ಕಾದಾಟವಾಗಿ ಜರ್ಮನರು ಬಹಳ ಹಾನಿಪಡೆದಿರುವರು.

ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆಗೆ ಪಂಡಿತ ನೆಹರುಗಳೂ ಆಮಂತ್ರಿಸಿದಂತೆ ಬಂದರು. ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಕುರಿತು ಅವರು ವಿವರಿಸಿ ಹೇಳಿದರು.

ಬೇರೆ ಬೇರೆ ಪಕ್ಷಗಳ ಜನರಲ್ಲಿ ಬಹಳ ಉದ್ವೇಗವು ಕಂಡುಬಂತು!

ವೈಸರಾಯರು ಫೆಡರೇಶನನ್ನು ಈಗ ಜ್ಯಾರಿ ಮಾಡುವುದಿಲ್ಲವೆಂದು ಪ್ರಕಟನೆ ಹೊರಡಿಸಿದರು.

ಬೊಂಬಾಯಿಯಲ್ಲಿ ನಾಜೀ ಪಕ್ಷಕ್ಕಾಗಿ ಒಳ ಸಂಚಿನ ಉಪಾಯಗಳು ಒಟ್ಟುಗೂಡಿಸಿದುದನ್ನು ಪೋಲೀಸರು ಕಂಡುಹಿಡಿದರಾಗಿ ತಿಳಿಯಿತು.

ಗೋಕುಲಾಷ್ಟಮಿ

ಬೊಂಬಾಯಿಯಲ್ಲಿ ಗೋಕುಲಾಷ್ಟಮಿಯ ದಿವಸ ಜೇಡಿಮಾರು ಬೀದಿಯ ಮಧ್ಯಭಾಗದಲ್ಲಿ ಕಟ್ಟಿದ ಮೊಸರಿನ ಪಾತ್ರೆಯನ್ನು ಒಡೆಯುವುದು.

ಪಶುಶಕ್ತಿಯ ಬಲಾತ್ಕಾರಕ್ಕೆ ಸಂಸ್ಕೃತಿಯು ಅಳಿಯಲಾರದು

ಹಿಟ್ಲರನು ಉನ್ಮತ್ತ ಸಾಹಸ ಮಾಡುತ್ತಾನೆ

ಭಾರತೀಯರು ಒಂದಾಗಬೇಕು

ಹಿಟ್ಲರನ ಉನ್ಮತ್ತ ಸಾಹಸ!

“ಜನಾಂಗಗಳು ನ್ಯಾಯದ ಒಂದು ಆಡಳಿತೆಯಿಂದ ಇರಬೇಕೆಂದು ಪ್ರೆಸಿಡೆಂಟ್ ವಿಲ್ಸನರವರು ‘ಜನಾಂಗ’ ಸಂಘವನ್ನು ಸ್ಥಾಪಿಸಿದರು. ಮಹಾಯುದ್ಧವು ಕಳೆದ ಮೇಲೆ ಈ ಸಂಘವು ಸ್ಥಾಪಿತವಾಗಲು, ಎಲ್ಲಾ ಜಯಹೊಂದಿದ ರಾಷ್ಟ್ರಗಳು ಇದಕ್ಕೆ ಸೇರಿದುವು. ಆದರೆ ಇತ್ತೀಚೆಗೆ ಇಟೆಲಿಯು ಅಬಿಸೀನಿಯದ ಮೇಲೆಯೂ ಜಪಾನು ಚೈನದ ಮೇಲೆಯೂ ಆಕ್ರಮಣ ಮಾಡಿದ ವಿಷಯಗಳಿಂದ ಲೋಕದಲ್ಲಿ ನ್ಯಾಯದ ಆಡಳಿತೆಯು ಹೋಗಿ ಪಶುಶಕ್ತಿಯು ಮುಂದೆ ಬಂದಂತೆ ತೋರುತ್ತದೆ. ಒಪ್ಪಂದಗಳನ್ನು ಮುರಿಯಲಿಕ್ಕಾಗಿಯೇ ಮಾಡಿದ್ದೆಂದು, ಆಸ್ಟ್ರಿಯಾ ಜೆಕೊಸ್ಲವೇಕಿಯಾಗಳನ್ನು ಜರ್ಮನಿಯು ಆಕ್ರಮಿಸಿಕೊಂಡ ವಿಷಯದಿಂದ ತಿಳಿಯುವುದು. ಇತ್ತೀಚೆಗೆ ಪೋಲೆಂಡಿನ ಕೊರಿಡರ್ ಮತ್ತು ಡಾನ್ಜಿಗಿನ ಮೇಲೆ ಹಿಟ್ಲರನು ಕಣ್ಣಿಟ್ಟಿದನ್ನು ನೋಡುವಾಗ ಈ ಹುಚ್ಚು ಸಾಹಸದಿಂದ ಏನಾಗುವುದೋ ತಿಳಿಯದಾಗಿದೆ

“ಕೆಲವರು ಹಿಟ್ಲರನು ಇವುಗಳನ್ನೆಲ್ಲಾ ಅಹಿಂಸೆಯಿಂದಲೇ ಪಡೆದನೆಂದು ತಿಳಿಯಬಹುದು. ಆದರೆ, ಜನರು ಯುದ್ಧವೆಂದರೆ ಹೆದರಿರುವುದರಿಂದ, ಹಾಗೂ ಹಿಟ್ಲರನನ್ನು ತಡೆಯಲು ಶಕ್ತರಾಗಿರದಿದ್ದುದರಿಂದ ಪ್ರತಿಯೊಂದೂ ಯುದ್ಧವಿಲ್ಲದೆ ಹಿಟ್ಲರನಿಗೆ ಬಂತು ಹಾಗಲ್ಲದೆ ಹಿಟ್ಲರನು ಅಹಿಂಸೆಯನ್ನು ನಂಬಿದ ಕಾರಣ ಹೀಗಾಯಿತೆಂದು ಹೇಳುವುದು ಸರಿಯಲ್ಲ. ಹಿಟ್ಲರನ ಈ ಹುಚ್ಚು ಸಾಹಸವನ್ನು ತಡೆಯದಿದ್ದಲ್ಲಿ ಜಗತ್ತಿನ ಶಾಂತಿಯು ಭಗ್ನವಾಗುವುದು

“ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಜನಾಂಗಗಳು ನ್ಯಾಯದ ಆಡಳಿತೆಯನ್ನು ಬಿಟ್ಟುಕೊಟ್ಟಿವೆ. ಮುಂದಕ್ಕಾದರೂ ಇಂತಹ ದುರ್ಘಟನೆಯನ್ನು ನಾವು ಎಲ್ಲಾ ರಾಷ್ಟ್ರದವರೂ ಜನಾಂಗ ಸಂಘದ ಮೂಲಕ ತಡೆವ ಯತ್ನಮಾಡಬೇಕು. ಇಲ್ಲದಿದ್ದಲ್ಲಿ ಲೋಕದ ನಾಗರಿಕತೆಯೇ ನಾಶವಾಗುವ ಸಂಭವವಿದೆ” ಹೀಗೆಂದು ಮಾನ್ಯ ಡಾ॥ ಸುಬ್ಬರಾಯನರು ಮದ್ರಾಸು ಕಾಲೇಜಿನ ಪ್ರಾರಂಭ ಭಾಷಣಮಾಡುತ್ತಾ ಹೇಳಿದರು

ನಾವು ಮಹಾಯುದ್ಧದ ನೆರಳಿನಲ್ಲಿದ್ದೇವೆ

ಮಂಗಳೂರಲ್ಲಿ ಮಾನ್ಯ ರೆಡ್ಡಿಯವರ ಭಾಷಣ

“ಕಾಂಗ್ರೆಸು ಜನರ ಹಿತಕ್ಕಾಗಿ ಪ್ರತಿಜ್ಞೆ ತೊಟ್ಟಿದೆ. ಆ ಕಾರ್ಯದಲ್ಲಿ ಅವರು ಸಾಧ್ಯವಾದಷ್ಟು ಯತ್ನಮಾಡುವರು. ನಿನ್ನೆ ಮಲಬಾರು ಒಂದು ಹಳ್ಳಿಗೆ ಶ್ರೀ. ಕೇಳಪ್ಪನವರು ನನ್ನನ್ನು ಕೊಂಡೊಯ್ದರು ಅಲ್ಲಿನ ಜನರಲ್ಲಿ ಉಪ್ಪು ಪಡಕೊಳ್ಳಲು ಒಂದು ಕಾಸೂ ಇರಲಿಲ್ಲ. ಮಲಬಾರು ಸುಂದರವಾಗಿದೆ. ಆದರೆ ಅಲ್ಲಿನ ಮಿಲಿಯಾಂತರ ಮಂದಿ ಬಡಗರು ಉಪವಾಸದಲ್ಲಿದ್ದಾರೆ. ಅಂತಹವರಿಗಾಗಿ ಏನಾದರೂ ಸಹಾಯಮಾಡಲು ಕಾಂಗ್ರೆಸು ಅಧಿಕಾರಸ್ವೀಕರಿಸಿದೆ, ಎಷ್ಟೇ ವಿರುದ್ಧ ಬಂದರೂ, ನಾವು ಅವುಗಳನ್ನಿದಿರಿಸಿ, ಬಡಜನರ ಕಡೆಗಿರುವ ನಮ್ಮ ಕರ್ತವ್ಯವನ್ನು ಮಾಡಬೇಕಾಗಿದೆ.

“ನಾವಿಂದು ಯುದ್ಧದ ನೆರಳಲ್ಲಿದ್ದೇವೆ. ಫಲಿತಾಂಶವೇನೆಂದು ಹೇಳಬರುವುದಿಲ್ಲ. ಜರ್ಮನಿಯು ಲಾಭಪಡೆಯಲಿ ನಷ್ಟಹೊಂದಲಿ ಜಗತ್ತಿಗೆ ಅದರಿಂದ ಅಹಿತವೇ ಆಗುವುದು. ನಮ್ಮ ಸಂಸ್ಕೃತಿ ನಾಗರಿಕತೆಗಳು ಧ್ವಂಸಹೊಂದುವ ಸ್ಥಿತಿಯಲ್ಲಿದೆ. ಇದರಿಂದ ಏನು ಅನಾಹುತವಾಗಬಹುದೋ ತಿಳಿಯದಾಗಿದೆ. ಮಿಲಿಯಾಂತರ ನಿರಪರಾಧಿಗಳನ್ನು, ಸುಂದರ ಮಂದಿರಗಳನ್ನು, ಪುಸ್ತಕಭಂಡಾರಗಳನ್ನು ಯಾಕೆ ಹಾಳು ಮಾಡಬೇಕು. ಇವರು ಎಲ್ಲರೂ ಹೀನರಲ್ಲವೇ? ಅವರ ಅಭಿಪ್ರಾಯ ಭೇದಗಳನ್ನು ರಾಜಿಯಿಂದ ಯಿಂದ ತೀರಿಸಲು ಸಾಧ್ಯವಿಲ್ಲವೇ? ಹಿಟ್ಲರನು ತನ್ನ ಶಕ್ತಿಪ್ರದರ್ಶನದಲ್ಲಿದ್ದಾನೆ. ಇಡೀ ಜಗತ್ತೇ ಯುದ್ಧ ಸಂಕಷ್ಟದಲ್ಲಿದೆ ಆದರೆ ಈ ಶಕ್ತಿಯ ಪ್ರದರ್ಶನವು ನಮ್ಮ ಸಂಸ್ಕೃತಿ ನಾಗರಿಕತೆಗಳನ್ನು ನಿರ್ನಾಮ ಮಾಡಲು ಸಮರ್ಥವಾಗಲಾರದೆಂದು ನಾನು ನಂಬುತ್ತೇನೆ” ಹೀಗೆಂದು ಮಾನ್ಯ ರೆಡ್ಡಿಯವರು ಮಂಗಳೂರು ನಗರ ಸಭೆಯಲ್ಲಿ ಭಾಷಣ ಕೊಡುತ್ತಾ ಹೇಳಿದರು.

ಎಲ್ಲರೂ ಐಕ್ಯವಾಗುವುದೇ ಜಯದ ಪ್ರಥಮ ಉಪಾಯ

– ಮೌಲಾನಾ ಆಜಾದರ ಹೇಳಿಕೆ –

ಇಂದಿನ ಪರಿಸ್ಥಿತಿಯಲ್ಲಿ ದೇಶದ ಎಲ್ಲಾ ಜನರು ಜಾತಿ ಮತ್ತು ರಾಜಕೀಯ ಅಭಿಪ್ರಾಯದ ಭೇದವನ್ನು ಮರೆತು ಒಂದಾಗಬೇಕಾಗಿ ಮೌಲಾನಾ ಆಜಾದರು ಒಂದು ಪ್ರಕಟಣೆ ಹೊರಡಿಸಿರುವರು.

“ಇಂದು ಭಾರತವು ಪ್ರಜಾಪ್ರಭುತ್ವ ರಾಷ್ಟ್ರಗಳ ಮೇಲಿರುವ ಸಹಾನುಭೂತಿ ಮತ್ತು ಅದರ ಸ್ವಂತ ರಾಜಕೀಯ ಸ್ಥಾನ ಇವುಗಳೆರಡರ ಮಧ್ಯದಲ್ಲಿ ಬಹಳ ಸಂಕಷ್ಟದ ಸಂದರ್ಭದಲ್ಲಿ ಬಂದು ನಿಂತಿದೆ. ಇಂತಹ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಮತ್ತು ಜಾತೀಯ ಪಕ್ಷದವರೂ ಒಮ್ಮತದಿಂದಿರಬೇಕು ನಮ್ಮ ರಾಷ್ಟ್ರೀಯ ಸಂಗ್ರಾಮದಲ್ಲಿ ಐಕ್ಯವಿಲ್ಲದಿದ್ದುದೇ ಮಹಾದೋಷಕಾರಣವಾಗಿತ್ತು. ಇಂತಹ ಸಂದರ್ಭದಲ್ಲಿಯಾದರೂ ಹಿಂದಿನ ದುರವಸ್ಥೆಯನ್ನು ನೀಗಬೇಕು. ಎಲ್ಲಾ ಭೇದಭಾವಗಳನ್ನು ಮರೆತು, ಒಂದೇ ಅಭಿಪ್ರಾಯಕ್ಕೆ ಎಲ್ಲರೂ ಬರಬೇಕಾಗಿದೆ.”

“ನನ್ನ ನಿರ್ಧಾರವೇನೆಂಬುದು ಇನ್ನು ಮುಂದೆ ತಿಳಿಯಬೇಕಾಗಿದೆ. ಆದರೆ, ಅದು ಯಾವುದೇ ಇರಲಿ, ಅದು ಎಲ್ಲರ ಸಹಾಯ ಸಹಕಾರಗಳಿಂದ ಒಮ್ಮತದಿಂದಲೇ ಆಗಬೇಕು” ಎಂದು ಹೇಳುತ್ತಾರೆ.

ಬ್ರಿಟನಿಗೆ ಬೆಂಬಲಕೊಡಬೇಕು

“ಬ್ರಿಟಿಷರೊಡನೆ ನಮಗಿರುವ ಯಾವುದೇ ಜಗಳವಾಗಲಿ, ನಮ್ಮೆಲ್ಲರಿಗೆ ಒದಗಿರುವ ಈ ದುರಂತ ಘಟನೆಯು ಮುಗಿವವರೆಗೆ ದೂರವಾಗಿರತಕ್ಕದ್ದು ಇಂತಹ ಸಂದರ್ಭದಲ್ಲಿ ರಶ್ಯಾ ಜರ್ಮನಿ ಇಂತಹ ರಾಷ್ಟ್ರಗಳನ್ನು ಪ್ರೋತ್ಸಾಹಿಸುವ ಯಾವುದೇ ಮಾತಾಗಲಿ ಹೇಳುವುದು ಮಹಾನರ್ಥವನ್ನು ಉಂಟುಮಾಡುವುದು. ೧೫೦ ವರ್ಷಗಳಿಂದ ನಮಗೆ ಬ್ರಿಟಿಷರೊಡನೆ ಇದ್ದ ಸಂಬಂಧವು ನಿಮಿಷಮಾತ್ರದಲ್ಲಿ ಭಿನ್ನವಾಗಲಾರದು ಇದು ನಮ್ಮ ಅಭಿಪ್ರಾಯ ವ್ಯತ್ಯಾಸಗಳ ಕಲಹಕ್ಕೆ ಸಮಯವಲ್ಲ.

“ಸ್ಟೇಟ್ಸ್‌ಮೇನ್” ಪತ್ರಿಕೆಯಲ್ಲಿ, ಇಂದಿನ ದುರ್ಘಟನೆಯ ಕಾಲಕ್ಕೆ ತಾತ್ಕಾಲಿಕ ಫೆಡರಲ್ ಯೋಜನೆಯನ್ನು ಮಾಡುವ ಸೂಚನೆ ಬಂದ ವಿಷಯದಲ್ಲಿ, ಕೇಂದ್ರ ಸರಕಾರಕ್ಕೆ ಸಹಾಯವಾಗುವುದಿದ್ದರೆ, ನಾನದನ್ನು ವಿರೋಧಿಸಲಾರೆ” ಎಂದು ಸರ್, ಸಪ್ರುಗಳು ಹೇಳುತ್ತಾರೆ

ಹಿಟ್ಲರ್‌ಶಾಹಿಯು ನಿರ್ನಾಮವಾಗಬೇಕು

ಎಂ. ಎನ್. ರಾಯಿಗಳ ಹೇಳಿಕೆ

‘ಆಧುನಿಕ ನಾಗರಿಕತೆಯನ್ನು ಕಾಪಾಡಲು, ಪೇಸಿಸಮಿನೊಡನೆ ವಿರುದ್ಧಹೂಡಿದ ಯುದ್ಧದಲ್ಲಿ, ಸ್ವತಂತ್ರವಾದ ಭರತಭೂಮಿಯು ಸಂತೋಷದಿಂದ ಸೇರುವುದು’ ಹೀಗೆಂದು ಎಂ ಎನ್. ರಾಯಿಗಳು ಹೇಳುತ್ತಾರೆ.

‘ವೈಸರಾಯರು ತಮ್ಮ ಹೇಳಿಕೆಯಲ್ಲಿ, ಭರತ ದೇಶವು ಮಾನವ ಜನತೆಯ ಸ್ವಾತಂತ್ರ್ಯಕ್ಕಾಗಿ ಹೂಡುವ ಈ ಯುದ್ಧದಲ್ಲಿ ತನ್ನ ಸಹಾಯವನ್ನು ಕೊಡುವುದೆಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಹಿಟ್ಲರ್ ಶಾಹಿಯನ್ನು ಕೊನೆಗಾಣಿಸುವ ನಿರ್ಧಾರದಿಂದ ಯುದ್ಧಕ್ಕಿಳಿದ ಬ್ರಿಟಿಷರನ್ನು ಎಲ್ಲಾ ಸ್ವಾತಂತ್ರ್ಯಪ್ರಿಯರಾದ ಜನರೂ ಅಭಿನಂದಿಸಬೇಕು.’

ಮದ್ರಾಸು ಗವರ್ನರರ ಯುದ್ಧ ಪ್ರಕಟಣೆ

ಮದ್ರಾಸಿನ ಗವರ್ನರ್ ಲಾರ್ಡ್ ಎರ್ಸ್ಕಿನರು ಈ ಕೆಳಗಿನ ಸಾರಾಂಶದ ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ.—

‘ಇಂದಿನ ಮಹಾಯುದ್ಧದ ಎಲ್ಲಾ ಜವಾಬ್ದಾರಿಯೂ ನಾಜೀ ಮುಖಂಡರ ಮತ್ತು ಅವರ ಹಿತಸೂಚಕರ ತಲೆಯ ಮೇಲಿದೆ ಪೋಲೆಂಡಿನ ಸಮಸ್ಯೆಯನ್ನು ನ್ಯಾಯ ರೀತಿಯಲ್ಲಿ ಇತ್ಯರ್ಥಿಸಲು ಜರ್ಮನಿಗೆ ಇಚ್ಛೆಯಿಲ್ಲದೆ, ಪೋಲೆಂಡಿನ ಮೇಲೆ ನಿರ್ದಯವಾಗಿ ಕಾದಾಡುತ್ತಿದೆ. ಇಂದಿನ ಹಿಟ್ಲರನ ಉನ್ಮತ್ತ ಯುದ್ಧವನ್ನು ನಾಗರಿಕ ರಾಷ್ಟ್ರಗಳೆಲ್ಲವೂ ಇದಿರಿಸಬೇಕು ನಮ್ಮ ಜರ್ಮನರು ದ್ವೇಷಿಗಳಲ್ಲ; ನಮ್ಮ ವಿರೋಧವು ಲೋಕಕಂಟಕರಾದ ನಾಜೀ ಮುಂದಾಳುಗಳೊಡನೆ; ಲೋಕಶಾಂತಿಗಾಗಿ ಬ್ರಿಟಿಷ್ ಸರಕಾರವು ಯುದ್ಧಕ್ಕಿಳಿದಿದೆ ಪ್ರಾಂತದ ಪ್ರಜೆಗಳು ನ್ಯಾಯಕ್ಕಾಗಿ ಸರಕಾರಕ್ಕೆ ಬೆಂಬಲ ಕೊಡಬೇಕು!

ಸರದಾರ ಭವನ Sirdar Bhavan

ಫೆಲಿಕ್ಸ್‌ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿ ತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ಮೇಲ್ಪಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ.

Propriter— H. R Rao,

Bangalore Guit Emporuim Madras.

ರೂಪಾಯಿ 1-12-0ಕ್ಕೆ ಲಿವರ್ ರಿಸ್ಟ್ ವಾಚು



ಈ ಚಿತ್ರದಲ್ಲಿ ತೋರುವುದಕ್ಕಿಂತಲೂ ಅಂದವಾದ ಚೌಕ ಮತ್ತು ದುಂಡಾಕಾರದ ಮೋಹಕ ರಿಸ್ಟ್‌ವಾಚುಗಳು, ಸರಿಯಾದ ಸಮಯ ತೋರಿಸುವುದೆಂದು 5 ವರ್ಷದ ಗ್ಯಾರಂಟಿ. ಕ್ರಯ 1-12-0, ಸುಪೀರಿಯರ್ 1-14-0, ಸ್ಪೆಶಲ್ 2-8-0 ರೇಡಿಯಂ 3-8-0, ರೋಲ್ಡ್‌ಗೋಲ್ಡ್ 6-8-0, ಶ್ರೇಷ್ಠವಾದ್ದು 8-8-0 ಪೋಸ್ಟೇಜು ಮತ್ತು ಪೇಕಿಂಗ್ 0-10-0

3 ವಾಚುಗಳನ್ನು ಒಮ್ಮೆಲೇ ತರಿಸುವುದಾದರೆ ಪೋಸ್ಟೇಜು ಧರ್ಮಾರ್ಥ

Empire Trading Co.,

P. O. No. 6744 Calcutta. (A. B.)

ನಾಜೀ ಜರ್ಮನಿಗೆ ಕೊನೆಗಾಲ ಬಂದಿದೆ!

'ತೋಟಿ ಸಿಂಗಾರ, ಒಳಗೆ ಗೋಳಿ ಸೊಪ್ಪು'

ಜರ್ಮನಿಯಲ್ಲಿ ದಂಗೆಯಾಗುವುದು

ಹಿಟ್ಲರನು ಆತ್ಮಹತ್ಯೆ ಮಾಡದೆ ನಿರ್ವಾಹವಿಲ್ಲ!

೧ ೧೯೧೯ರಿಂದ ೧೯೩೪ರ ವರೆಗೆ ಜರ್ಮನಿಯಲ್ಲಿ ಯಾವ ತರದ ಒತ್ತಾಯದ ಸೈನಿಕ ಶಿಕ್ಷಣವೂ ಇರದ ಕಾರಣ ಈಗ ಜರ್ಮನಿಯಲ್ಲಿ ಕೇವಲ ೧,೦೦,೦೦೦ ಮಂದಿ ಮಾತ್ರ ಶಿಕ್ಷಣ ಹೊಂದಿದ ಸೈನಿಕರು ಇದ್ದಾರೆ. ಫ್ರಾನ್ಸಿನಲ್ಲಿ ಈಗ ೫,೦೦೦,೦೦೦ ಮಂದಿ ಸೈನಿಕರು ಇದ್ದಾರೆ!

೨ ಹಲವು ವರ್ಷಗಳಿಂದ ಜರ್ಮನಿಯಲ್ಲಿ ರೈಲ್ವೆ ದಾರಿಯು ಅಭಿವೃದ್ಧಿಯು ಆಗಲಿಲ್ಲ. ಮೋಟರು ವಾಹನಗಳ ಚಲಾವಣೆಯ ಸೌಕರ್ಯವೂ ಬಹಳ ಕಡಿಮೆಯಿದೆ. ಹೀಗಾಗಿ ಅಧಿಕ ಸಂಖ್ಯೆಯಿಂದ ಸೈನಿಕರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು ಕಷ್ಟವಾಗಿದೆ.

೩. ಅಲ್ಲಿ ಆಹಾರ ಸಂಪತ್ತಿನ ವೈಪುಲ್ಯವಿಲ್ಲ. ಇತ್ತೀಚೆಗೆ ಯುದ್ಧಕ್ಕಾಗಿ ಬೇರೆ ರಾಷ್ಟ್ರಗಳಲ್ಲಿ ಎಷ್ಟರ ಮಟ್ಟಿಗೆ ಆಹಾರ ವಸ್ತುಗಳು ಹೆಚ್ಚಿಸಲ್ಪಟ್ಟಿವೆಯೋ ಆ ಮಟ್ಟಿಗೆ ಹೋಲಿಸಿದರೆ ಜರ್ಮನಿಯು ಬಹಳ ದುರ್ಬಲವಾಗಿದೆ.

೧೯೩೪ರ ಒಂದು ವರ್ಷವನ್ನು ಬಿಟ್ಟು ಮಿಕ್ಕ ಎಲ್ಲಾ ವರ್ಷಗಳಲ್ಲಿಯೂ, ವರ್ಷಗಳು ಕಳೆದಂತೆ, ಅಲ್ಲಿನ ಬೆಳೆಯಲ್ಲಿ ಬಹಳ ನಷ್ಟ ಬಂದಿದೆ. ಕೃಷಿಯನ್ನು ಉತ್ತಮ ಮಾಡಲು ಸಾಕಷ್ಟು ಮೂಲಧನವಾಗಲಿ, ಪರಿಶ್ರಮವಾಗಲಿ ಕಂಡು ಬರುವುದಿಲ್ಲ. ಕೊಬ್ಬು ಮತ್ತು ದವಸಗಳು ಬಹಳ ಕಡಿಮೆ. ಇವುಗಳಿಗಾಗಿ ಜರ್ಮನಿಯು ವಿದೇಶಗಳನ್ನು ಆಶ್ರಯಿಸಿರಬೇಕಾಗಿದೆ.

೪. ಜರ್ಮನಿಯ ಆರ್ಥಿಕ ಪರಿಸ್ಥಿತಿಯು ನಿಜವಾಗಿಯೂ ಬಹಳ ಕೆಟ್ಟಿದೆ. ಕಳೆದ ಆರು ವರ್ಷಗಳಿಂದ ಬಜೆಟನ್ನು ಪ್ರಕಟಿಸಲೇ ಇಲ್ಲ. ರಾಷ್ಟ್ರ ನಿಧಿಯು ಖಾಲಿಯಾದಂತಿದೆ. ಸಾಲ ಪಡಕೊಂಡದ್ದು ಕಳೆದ ಮೂರು ವರ್ಷಗಳಿಂದ ದ್ವಿಗುಣವಾಗಿ ಏರುತ್ತದೆ. ವಿದೇಶ ವ್ಯಾಪಾರವೂ ಕಡಿಮೆಯಾಗಿದೆ.

೫ ಯುದ್ಧ ಸಾಮಗ್ರಿಗಳ ಕುರಿತೂ ಜರ್ಮನಿಯು ಬಲಹೀನವಾಗಿದೆ. ಖಂಡಿತ ಯುದ್ಧವು ಮುಂದುವರಿದರೆ ಜರ್ಮನಿಯ ಅವಸ್ಥೆಯು ನಿರ್ನಾಮವಾಗುವುದೆಂದು ತಿಳಿದಿದೆ. ಅಮೇರಿಕವು ಬಹಳ ಮಟ್ಟಿಗೆ ಯುದ್ಧ ಸಾಮಗ್ರಿಯಲ್ಲಿ ಊರ್ಜಿತಹೊಂದಿದೆ. ಎಂಜಿನಿಯರಿಂಗ್, ಕಬ್ಬಿಣ, ಉಕ್ಕು ಕೈಗಾರಿಕೆಗಳಲ್ಲಿಯೂ ಜರ್ಮನಿಗಿಂತ ಅಮೇರಿಕವು ಪ್ರಬಲವಾಗಿದೆ.

೬. ಬಹಳ ತೀವ್ರವಾಗಿ ಕಾರ್ಯಗಳನ್ನು ಕೈಗೊಳ್ಳದಿದ್ದರೆ ಈಗಿನ ತಾತ್ಕಾಲದ ಯುದ್ಧಕ್ಕೆ ಬೇಕಾದಷ್ಟು ಯುದ್ಧ ಸಾಮಗ್ರಿಗಳೂ ಒದಗಲಾರವು.

೭ ಇತರ ಎಲ್ಲಾ ರಾಷ್ಟ್ರಗಳಿಗಿಂತಲೂ, ಜರ್ಮನಿಯು ಅವಶ್ಯವಾಗಿ ಬೇಕಾಗಿರುವ ಎಣ್ಣೆಯ ಸಲಕರಣೆಯಲ್ಲಿ ಬಹಳ ಕಡಿಮೆಯಾಗಿದೆ. ರುಮೇನಿಯದ ೧/೪ರಷ್ಟು ಎಣ್ಣೆಯ ಉತ್ಪತ್ತಿಯು ವಿದೇಶೀಯರ ಸ್ವಾಧೀನದಲ್ಲಿದೆ. ವಿದೇಶೀಯ ವ್ಯವಹಾರವು ಇಲ್ಲದೆ ಇರುವುದರಿಂದ ಜರ್ಮನಿಯು ಹೆಚ್ಚು ಎಣ್ಣೆಯನ್ನೂ ಒದಗಿಸಿ ಇಟ್ಟುಕೊಂಡಿರುವುದೂ ಇಲ್ಲ.

೮ ಜರ್ಮನಿಯು ಎಲ್ಲಾ ಯುದ್ಧ ಸಾಮಗ್ರಿಗಳೂ ಹೊಸದಾಗಿ ತಯಾರಿಸಿದ್ದಲ್ಲಿ ಉಪಯೋಗಕ್ಕೆ ಬೀಳುವಂತಿಲ್ಲ. ಹಲವು ಜಲ ಅಂತರ್ಯಾಮಿ ನೌಕೆಗಳನ್ನು ತಿರುಗಿ ಕಟ್ಟಬೇಕಾಗಿದೆ.

೯ ನಾಜೀ ಜರ್ಮನಿಯಲ್ಲಿ ದೇಶೀಯ ಜಗಳವೂ ಇದೆ. ಹಿಟ್ಲರ್ ಶಾಹಿಯನ್ನು ಕಂಡರಾಗದ ಜನರು ತುಂಬಿದ್ದಾರೆ. ಜರ್ಮನರೇ ಜರ್ಮನಿನ ಇಂದಿನ ಅಧಿಕಾರದ ವಿರುದ್ಧ ದಂಗೆಯೇಳುವ ಸಂಭವವು ಇದೆ. ಯುದ್ಧ ಸಂಭವಿಸಿದಲ್ಲಿ ಅಲ್ಲಿನ ಶ್ರಮ ಜೀವಿಗಳು, ಕೆಲಸಗಾರರು ಖಂಡಿತ ದಂಗೆಯೇಳುವರು. ಹೀಗಾಗಿ ಜರ್ಮನಿಯು ಶತ್ರುಗಳೊಡನೆಯೂ, ಗೃಹಶತ್ರುಗಳೊಡನೆಯೂ ಏಕಕಾಲದಲ್ಲಿ ಯುದ್ಧ ಮಾಡಬೇಕಾಗುವುದು.

ಈ ಎಲ್ಲಾ ವಿಷಯಗಳೂ ಅಧಿಕಾರಿಕ ವಾರ್ತೆಗಳಿಂದಲೂ ಲೇಖನಗಳಿಂದಲೂ ಆಯ್ದುವುಗಳು.

ಹಿಟ್ಲರನು ಆತ್ಮಹತ್ಯೆಮಾಡಿಕೊಳ್ಳುವನೇ?

ಹಿಟ್ಲರನು ಯಾವಾಗಲೂ ತನ್ನೊಡನೆ ಒಂದು ಕೋವಿಯನ್ನು ಇಟ್ಟುಕೊಂಡು ಇರುವುದಾಗಿ ತಿಳಿಯುತ್ತದೆ. ಯಾವಾಗಲೂ ಅಪಾಯಗಳನ್ನು ಆತನು ನಿರೀಕ್ಷಿಸುತಿದ್ದಾನೆ. ಇಂದಿನ ಯುದ್ಧದಲ್ಲಿ ಜಯವಾಗುವುದಂತೂ ಬಹಳ ಸಂದೇಹದ ವಿಷಯವಾಗಿದೆ. 'ಮರಣ ಇಲ್ಲವೇ ಜಯ' ಇವುಗಳೆರಡರನ್ನು ಆತ ಇಷ್ಟಪೂರ್ವಕ ಆಲಂಗಿಸುವನು. ತಾನು ಸೋತುಹೋದರೆ, ಅದರ ಪರಿಣಾಮವು ಆಗುವುದರೊಡನೆ ತಾನು ಆತ್ಮಹತ್ಯೆ ಮಾಡಿಕೊಳ್ಳುವನು. ಅದಕ್ಕಿಂತ ಮೊದಲು ಮಾರ್ಶಲ್ ಗೋರಿಂಗನನ್ನು ಸರ್ವಾಧಿಕಾರದಲ್ಲಿ ಪ್ರತಿಷ್ಠಾಪಿಸುವನು.

ಈ ವಿಷಯವು ಫ್ರೆಂಚ್ ಪ್ರಧಾನ ಮಂತ್ರಿ ಡಲಾಡಿಯರರಿಗೆ ಹಿಟ್ಲರನು ಬರೆದ ಪತ್ರಗಳಿಂದ ತಿಳಿಯುವುದು.

Kanarese No 12

ಆರೋಗ್ಯ
ಮತ್ತು
ಸೌಂದರ್ಯಕ್ಕೆ
ಈ ಇಮ್ಮಡಿ ಗುಣದ
ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟು ಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು, ಕುಟಿಕೂರಾ ಟಾಯ್ಲೆಟ್ ಸಾಬೂನು (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ತಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ.

ಕುಟಿಕೂರಾ ಸಾಬೂನು (Cuticura Soap) ಬೆಣ್ಣೆಯಂತೆ ಗುಣವುಳ್ಳದ್ದಾಗಿದೆ. ದೊರಗಾದ ಚರ್ಮವನ್ನು ನುಣುಪಾಗಿರುಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು. ಮುದ್ದಣ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸಾಬೂನು
CUTICURA SOAP

ಸಾವಕಾರ ಶ್ರೀನಿವಾಸರಂಗಪೈ
[ಸ್ಥಾಪನೆ: ಕ್ರಿ ಶ 1858]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

THE PIE-MONEY BANK LTD.,
Maidan Road, MANGALORE.
Undertakes all kinds of Banking Business Current account at 2½% per annum Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction ... ranging from Rs 100/ to Rs. 5000/ run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director.*

ಮಹಿಳಾಪಹರಣ!

[೬ನೇ ಪುಟದಿಂದ ಮುಂದುವರಿದುದು]

ಾಡತೊಡಗುವವು, ಯಾವುದೂ ಶಾಶ್ವತವಾಗಿ ಉಳಿಯಲಾರದು, ಈ ಮಹಾ ಸಾಮ್ರಾಜ್ಯವೂ ರವಾಗಿ ಉಳಿಯಲಾರದು; ಪ್ರೇಮ! ಪ್ರೇಮ ಂದು ಮಾತ್ರ ಅಮರವಾದುದು; ದೇವರನ್ನು ಂಬು; ನಮ್ಮ ಜೀವನದ ದುರ್ದಿನವು ಮಾ ಯವಾಗುವುದು; ಇನ್ನೊಮ್ಮೆ ನಾವು ಒಂದಾಗು ವು! ಸುಖದಿಂದ ಕೂಡಿ ಬಾಳುವೆವು!'

ಕಣ್ತೆರೆದು ನೋಡಿದಳು' ಆಗ ಆಕೆಗೆ ಅದು ೇವಲ ಕನಸೆಂದು ತಿಳಿಯಿತು, ಆಗಲೇ ಬೆಳ ಹರಿದಿತ್ತು, ಅದೇ ದಿನ ಪ್ರಾತಃಕಾಲದಲ್ಲಿ ಳೆ ಬಾದಶಹನನ್ನು ಕಾಣಲು ಹೋಗಬೇಕಾ ತ್ತು'

೩

ಲೋಕದಲ್ಲಿ ಏನೇ ನಡೆಯುತ್ತಿರಲಿ, ಯಾ ದನ್ನೂ ಲೆಕ್ಕಿಸದವನಂತೆ ಸೂರ್ಯನು ದಿನ ತ್ಯದಂತೆ ಉದಿಸಿಬಂದನು. ಬಾದಶಹನ ಆಸ್ಥಾ ಕ್ಕೆ ಬರಬೇಕಾಗಿ ಆಕೆಗೆ ಸೂಚನೆಯೂ ಬಂತು ಉಸ್ಮಾನಖಾನ್ ಮತ್ತು ಸೇವಕಿಯರು, ಅಲ್ಲಿಗೆ ಹೋಗುವಾಗಲಾದರೂ ಅಲಂಕಾರ ಮಾಡಿಕೊ ಳ್ಳಬೇಕಾಗಿ ಒತ್ತಾಯಪಡಿಸಿದರು, ತನ್ನ ಸರ ಳವಾದ ದಾರಿದ್ರ್ಯ ವೇಷದಲ್ಲಿಯೇ ಬಾದಶಹ ನಲ್ಲಿಗೆ ಹೋಗುವುದಾಗಿ ಆಕೆ ಸ್ಪಷ್ಟ ತಿಳಿಸಿದಳು.

ಅವಳನ್ನು ಆಸ್ಥಾನಕ್ಕೆ ಕರತಂದಾಗ ಬಾದ ಶಹನು ಇನ್ನೂ ಬಂದಿರಲಿಲ್ಲ ಆಸ್ಥಾನದ ವೈಭ ವವನ್ನಾಗಲಿ, ಅಲ್ಲಿನ ಸಭಾಸದರನ್ನಾಗಲಿ ಅವ ಳು ಒಮ್ಮೆಯೂ ನೋಡಲಿಲ್ಲ ಬಾದಶಹನು ಬರುವುದನ್ನೇ ಎದುರು ನೋಡುತ್ತಿದ್ದಳು ಬಾದ ಶಹನು ಬಂದನು ಸಭಿಕರೆಲ್ಲರೂ ಎದ್ದು ನಿಂತು ಮನ್ನಣೆ ಸಲ್ಲಿಸಿದರು ರಾಜಪೀಠದಲ್ಲಿ ಹುಮಾ ಯೂನನು ಕುಳಿತುಕೊಂಡನು, ಉಸ್ಮಾನನು ಸಂತೋಷ ಸಂಭ್ರಮಗಳಿಂದ, ಬಾದಶಹನ ಬಳಿ ಬಂದನು, ಮೂರುಸಲ ಬಾಗಿ ವಂದಿಸಿ,

'ಮಹಾಪ್ರಭುವೇ, ನಿಮ್ಮ ನಮ್ರಸೇವಕನು ನಿಮ್ಮ ಸಾಮ್ರಾಜ್ಯದಲ್ಲಿ ಅರಳಿರುವ ಎಲ್ಲಾ ಹೂ ಗಳಿಗಿಂತಲೂ ಅಮೂಲ್ಯವಾದ ಪುಷ್ಪವೊಂದನ್ನು 'ನಿಮಗೆ' ಕಾಣಿಕೆಯಾಗಿ ತಂದಿರುವೆನು, ಈಕೆ ಪಾದಸೇವೆಗೆ ತಯಾರಾಗಿ ಬಂದಿರುವಳು'

ತಿರಿಗಿ ವಂದಿಸಿ, ಉಸ್ಮಾನನು ತನ್ನ ಸ್ಥಳದ ಲ್ಲಿ ಹೋಗಿ ನಿಂತುಕೊಂಡನು

ತರುಣಿಯೂ ಕೂಡಲೇ ಮುಂದುವರಿದಳು. ಆಕೆಯ ದೃಷ್ಟಿಯು ಬೆದರಿದ ಜಿಂಕೆಯಂತೆ ಚಲಿಸುತ್ತಿತ್ತು ಬಾದಶಹನಿಗೆ ಆಕೆಯೂ ಬಾಗಿ ವಂದಿಸಿದಳು ನಡುಗುವ ಧ್ವನಿಯಿಂದ ಹೀಗೆಂದು ಬಿನ್ನಯಿಸಿದಳು

'ನ್ಯಾಯಮೂರ್ತಿಯಾದ ಮಹಾಪ್ರಭುವೇ' ನಾನು ಒಬ್ಬ ಬಡ ಸ್ತ್ರೀಯಾಗಿದ್ದೇನೆ ನನ್ನ ಪತಿಯೇ ನನ್ನ ಪ್ರಭುವು, ಹಿಂದೂ ಸ್ತ್ರೀಯು ತನ್ನ ಜೀವನದಲ್ಲಿ ಬೇರೆ ಒಬ್ಬನನ್ನು ವರಿಸು ವುದು ಸಾಧ್ಯವಿಲ್ಲ ಪ್ರಭುವೇ, ನಿನ್ನ ಸೇವ ಕನು ನನ್ನನ್ನು ವಂಚಿಸಿ ಇಲ್ಲಿಗೆ ತಂದಿರುವನು ನನ್ನನ್ನು ರಕ್ಷಿಸಬೇಕೆಂದು ನಾನು ನಿನ್ನಲ್ಲಿ ಬೇಡಿ ಕೊಳ್ಳುತ್ತೇನೆ.'

ಎಲ್ಲರೂ ಮೌನವಾಗಿದ್ದರು. ಸಾಮ್ರಾಟ್ ಹುಮಾಯೂನನು ಎದ್ದು ನಿಂತಾಗ ಸಭೆಯೇ ಭಯಕಂಪಿತವಾಗಿ ನಡುಗಿತು, ಉಸ್ಮಾನನ ಕಡೆ ಗೆ ಬಾದಶಹನು ಉರಿವ ಕಣ್ಣಿನಿಂದ ನೋಡಿ ದನು. ಉಸ್ಮಾನನು ತಲೆ ತಗ್ಗಿಸಿ ನಿಂತಿರದಿದ್ದರೆ, ಬಾದಶಹನ ಕೋಪದ ಬೆಂಕಿಯಿಂದ ಆಗಲೇ ಆತನು ಭಸ್ಮವಾಗುತ್ತಿದ್ದನು.

'ನ್ಯಾಯಕ್ಕೆ ಜಯವಾಗಲಿ' ಬಾದಶಹನು ಸಿಟ್ಟಿನಿಂದ ಗರ್ಜಿಸಿ ಹೇಳಿದನು.

'ಧೂರ್ತನೇ, ನೀನು ಹುಮಾಯೂನನಿಗೆ ಮ ಹಾಪರಾಧ ಮಾಡಿದ್ದೀ, ನನ್ನ ರಾಜ್ಯದ ಪ್ರಜೆ ಯೊಬ್ಬಳಿಗೆ ನೀನು ದುಃಖವನ್ನುಂಟುಮಾಡಿರು ತ್ತೀ, ದಿನದ ಬೆಳಕನ್ನು ನೀನು ಇನ್ನುಮುಂದೆ ನೋಡಲು ಉಳಿಯಲಾರೆ'

ಉಸ್ಮಾನನ ಶರೀರವು ಅತ್ಯಂತ ನಡುಗಿತು. 'ಅವನನ್ನು ಬಂಧಿಸಿರಿ, ಕತ್ತಲು ಕೋಣೆಗೆ ದೂಡಿ, ನಾಳೆ ಗಲ್ಲಿಗೇರಿಸುವುದು'

'ಭಾವೀಪ್ರಧಾನ ಮಂತ್ರಿ'ಯನ್ನು ಅಂಗರಕ್ಷ ಕರು ಬಂಧಿಸಿದರು, ಬಾದಶಹನು ತರುಣಿಯ ಕಡೆಗೆ ತಿರುಗಿ

'ಕುಲೀನಳಾದ, ಗುಣವತಿಯಾದ ಮಹಿಳೆ ಯೇ, ಈ ಕ್ಷಣದ ಮೇಲೆ ನೀನು ನನ್ನ ಪುತ್ರಿ ಸಮಾನಳು, ಈ ಸೇವಕನು ಮಾಡಿದ ಅನ್ಯಾ ಯಕ್ಕಾಗಿ, ರಾಜನನ್ನು ಕ್ಷಮಿಸು ಮಗಳೇ, ಯಾವ ಅಭಿಲಾಷೆಯನ್ನಾದರೂ ಕೇಳು, ಈಗ ಲೇ ಕೊಡುತ್ತೇನೆ!' ಹೀಗೆ ಹೇಳುತ್ತಾ, ಬಾದ ಶಹನು ರಾಜ ಪಲ್ಲಕ್ಕಿಯನ್ನೂ ತರುವಂತೆ ಆಜ್ಞಾ ಪಿಸಿದನು

ತರುಣಿಯು ಕೃತಜ್ಞತೆಯಿಂದ ಬಾದಶಹನ ಮುಂದೆ ಮಣಿದಳು. ಅವಳ ಕಣ್ಣುಗಳಲ್ಲಿ ಆನಂದ ಬಾಷ್ಪವು ಸುರಿಯುತ್ತಿತ್ತು

'ಮಹಾ ಪ್ರಭುವೇ, ನಾನು ಒಂದು ಉಪ ಕಾರವನ್ನು ಬೇಡುತ್ತೇನೆ, ನಿನ್ನ ಸೇವಕನನ್ನು ಕ್ಷಮಿಸು, ತಪ್ಪು ಮಾಡುವುದು ಮನುಷ್ಯನ ಸ್ವಭಾ ವ' ನಿನ್ನ ನ್ಯಾಯದ ಸಿಂಹಾಸನವನ್ನು ದಯೆಯ ಕಾರ್ಯವು ಇನ್ನಷ್ಟು ಬೆಳಗಿಸಲಿ'

(ಆಧಾರದಿಂದ)

— ದುರ್ಗಾದಾಸ.

ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ

ಕ್ರಮನಂಬ್ರ 482/1935

REP 703 39 RLA 788/39

ಕೆ ವೆಂಕಟ್ರಾಯ ನಾಯ್ಕ—ವಾದಿ— ಅರ್ಜಿದಾರ

ಮತ್ತು

ಸರ್ವೋತ್ತಮ ಮಲ್ಯ ಕೂಡಾ ಪ್ರ ರು ಎದ್ರಿರು

2ನೇ ಎದ್ರಿ ಸ ಬಾ ಪ. ಶ್ಯಾನುಭಾಗ ಅನಂತ ಶ್ಯಾನುಭಾಗರ ಮಗ—ಕಾರ್ಕಳ ತಾಲೂಕು ಸಾಣೂರು ಗ್ರಾಮದ Tea shop, Keeper Dinda Kolwadi Khar Post, B B A C I Ry Bombay

ಮೇಲ್ಕಂಡ ಅಮ್ಲಜ್ಯಾರಿಯಲ್ಲಿ ಡಿಕ್ರಿ ಯಲ್ಲಿ ಸಾಲಾಖೈರು ಸಿಕ್ಕ ವಿಧಿಯನ ಕಾರ್ಕ ಳ ತಾಲೂಕು, ಕಲ್ಲಿಬೆಟ್ಟು ಗ್ರಾಮದ ಬಾಬ್ತು 1ನೇ ಎದ್ರಿಯ ಮೂಲಗೇಣಿ ವ ಕೃತದ ಹಕ್ಕಿನ ಸ್ಥಿರಾಸ್ತಿಯನ್ನು 2ನೇ ಎದ್ರಿಗೆ ಆದ ಪಂಚಾಯಿನ ಹುಜೂರುಶಿಪಾ ಅರ್ಜಿದಾರನು ಏಲಂಮಾಡುವುದಕ್ಕೆ ಅಪೇಕ್ಷಿಸಿ ಇಸ್ತಿಹಾರು ದಾಕ್ಲು ಮಾಡಿರುವುದರಿಂದ ಮತ್ತು ಸದ್ರಿ ಏಲಂ ಸಮಯ ಬಿಡ್ ಮಾ ಡುವರೇ ಈ ಪರ್ಮಿಶನ್ ಅರ್ಜಿ ದಾಕ್ಲು ಮಾಡಿರುವುದರಿಂದ ಆ ಕುರಿತು ಆಕ್ಷೇಪ ಇದ್ದಲ್ಲಿ ಸದ್ರಿ ಅಮ್ಲಜ್ಯಾರಿ ತಸ್ಕಿ ತಾ 26-9-1939ನೇ ದಿವಸ ಬೆಳಿಗ್ಯೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ 2ನೇ ಎದ್ರಿಯು ಸ್ವತಃ ವ ವಕೀಲದ್ವಾರಾ ಉಪಹಂಸಿಕೊಳ್ಳಬಹುದು. ತಪ್ಪಿದಲ್ಲಿ ಅಮ್ಲಜ್ಯಾರಿಯು ಕ್ರಮದಂತೆ ಮುಂದರಿ ಸೋಣಾಗುವುದು ಎಂಬ ಸಂಗ್ತಿ ಕೋ ರ್ಟು ಹುಕುಂ ಪ್ರಕಾರ ತಿಳಿಸೋಣಾಗಿ ಯದೆ.

ಕಾರ್ಕಳ 4-9-1939 | (Sd) K. Venkatesh Pai, ಅರ್ಜಿದಾರನ ಕಡೆ ವಕೀಲ

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/-, & 5,000/

are now issued at all our Branches

For particulars call at or write to any of our nearest Branches.



ಲೈಸೆನ್ಸ್ ಬೇಕಾಗಿಲ್ಲ

ಅಮೇರಿಕನ್ ರಿವಾಲ್ವರ್

ಆತ್ಮರಕ್ಷಣೆಗಾಗಿ 1939ನೇ ಇಸವಿಯ ಹೊಸ ನಮೂನೆಯ ... ಚಿತ್ರದಲ್ಲಿ ತೋರಿಸಿದಂತೆ ... 15 ನಿಮಿಷದಲ್ಲಿ 50 ಗುಂಡುಗಳನ್ನು ... ಬೆಲೆ ರೂ. 1-8-0 ... 1000ಕ್ಕೆ ರೂ 4 ... 1 12 0 ... 0 12 0 ... ಸಂಪೂರ್ಣ ಬೆಲೆಯ ಮೊತ್ತವನ್ನು ...

ಸೂಚನೆ: ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಪ್ರಯತ್ನಿಸಿರಿ

American Pistol Co (P M. H.)

Post Box No 27 Amritsar (India)

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಮಕ್ಕಳಾಗುವುದರಿಂದ ... ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ... ಶರೀರಕ್ಕೆ ಏನೂ ಅಪಾಯವಾಗದೆ ... ಗರ್ಭಧಾರಣ ಬಂದಾಗುವುದು ... ಏನು ಮಾಡಿದರೂ ಸುರುವಾಗುವುದಿಲ್ಲ ... ಎಲ್., ಸಿ. ಪಿ., ಎಸ್., ... ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ... ಕ್ರಯ ರೂ 4-0-0 ವಿ ಪಿ

ವಿಳಾಸ ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, (S.M C.

ಇಂದು ಮಿತಿಯಾಗಚ್ಚಿಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಹಿಂದಿನ ಮಹಾಯುದ್ಧವು ಮುಗಿದು ಇಂದಿನ ಮಹಾಯುದ್ಧವು ಆರಂಭವಾದಾಗ

ಬ್ರಿಟನಿನ ಯುದ್ಧಸಿದ್ಧತೆ ಹೇಗಿದೆ?

ಜರ್ಮನಿಯ ಸೈನ್ಯ ದೌರ್ಬಲ್ಯ! ಬ್ರಿಟನು-ಫ್ರಾನ್ಸುಗಳ ಸಂಯುಕ್ತ ಸೇನಾಸಿದ್ಧತೆ!!

೧೯೧೪ನೇ ಇಸವಿಯಲ್ಲಿ ಕಳೆದ ಲೋಕಯುದ್ಧವು ನಡೆಯಿತು. ಇಂದು ಪ್ರಪಂಚದ ಪರಿಸ್ಥಿತಿಯು ಎಲ್ಲ ವಿಧದಿಂದಲೂ ಹಿಂದಿಗಿಂತ ಬಹಳ ಭಿನ್ನವಾಗಿದೆ. ಅಂದು ಜರ್ಮನಿಯು ಇಡೀ ಯೂರೋಪಿನ ಎಲ್ಲಾ ರಾಷ್ಟ್ರಗಳೊಡನೆ ಏಕಾಂಗಿಯಾಗಿ ಕೈಕೊಟ್ಟು ಯುದ್ಧ ಹೂಡಲು ಸಾಕಷ್ಟು ಶಕ್ತಿಸಂಪನ್ನವಾಗಿರುವುದಾಗಿ ತಿಳಿದಿತ್ತು. ಇಂದು ಜರ್ಮನಿಯ ಸೈನ್ಯವು ೧೯೧೪ರ ಸೈನ್ಯ ಸಂಗ್ರಹಕ್ಕೆ ಸರಿಯಾಗಿ ಇರುವುದಿಲ್ಲ. ಜರ್ಮನಿಯು ಅಂದಿನ ನೌಕಾಶಕ್ತಿಯಷ್ಟು ಇಂದು ಆಗಬೇಕಾದರೆ ಎಷ್ಟೋ ಸಮಯಗಳು ಬೇಕಾಗುವುವು. ಇಂದು ಬ್ರಿಟನು ೧೯೧೪ಕ್ಕಿಂತ ಹೆಚ್ಚು ಯುದ್ಧಸನ್ನದ್ಧವಾಗಿದೆ. ಇಥಿಯೋಪಿಯದಲ್ಲಿ ಉಂಟಾದ ದುರ್ಘಟನೆಯನ್ನು ಕಂಡು ಎಚ್ಚತ್ತ ಬ್ರಿಟನು ಕಳೆದ ನಾಲ್ಕು ವರ್ಷಗಳಿಂದ ತನ್ನ ಬಲವನ್ನು ಹೆಚ್ಚಿಸಿದೆ. ಕಳೆದ ಮ್ಯೂನಿಕಿನ ಘಟನೆಯಾದ ಹತ್ತು ತಿಂಗಳು ಬ್ರಿಟನಿಗೆ ವಿಶ್ರಾಂತಿಯೇ ಇರಲಿಲ್ಲ. ಸಮಯದ ಈ ಪರಿಸ್ಥಿತಿಯು ಇಂತಹ ಪಾಠವನ್ನು ಬ್ರಿಟನಿಗೆ ಕಲಿಸಿದೆ.

ಅಪಾಯಕಾಲ

ಬರುವ ವಾರವು ಯೂರೋಪಿನಲ್ಲಿ 'ಅಪಾಯಕಾಲ'ವೆಂದು ಹೇಳಬೇಕಾಗಿದೆ. ಯೂರೋಪಿನ ಎಲ್ಲಾ ರಾಷ್ಟ್ರಶಕ್ತಿಗಳೂ ತಮ್ಮತಮ್ಮಲ್ಲಿ ಯುದ್ಧಕ್ಕೆ ಸಂಪೂರ್ಣ ಸಿದ್ಧವಾಗಿ ನಿಂತಿವೆ. ಯುದ್ಧ ಪ್ರದರ್ಶನವು ಈಗಾಗಲೇ ಆರಂಭವಾಗಿದೆ. ಕಳೆದ ವರ್ಷ ಬ್ರಿಟನು ಯುದ್ಧಸಾಮಗ್ರಿಗಳಿಗಾಗಿ ೧೬೨,೫೦೦,೦೦೦ ಪವನುಗಳಷ್ಟು ಖರ್ಚು ಮಾಡಿದೆ. ಈ ವರ್ಷ ಅದು ಮಾತ್ರವಲ್ಲದೆ ೨೫,೦೦೦,೦೦೦ ಪವನುಗಳಷ್ಟು ಇನ್ನೂ ಹೆಚ್ಚು ವ್ಯಯಿಸಲ್ಪಟ್ಟಿದೆ.

ಬ್ರಿಟನು ಐದು ವರ್ಷಗಳ ಯೋಜನೆಯನ್ನು ಆರಂಭಿಸಿತ್ತು. ವರ್ಷಾವಧಿ ೪೦೦,೦೦೦,೦೦೦ ಪವನುಗಳಷ್ಟು ಸೈನ್ಯಸಾಮಗ್ರಿಗಳಷ್ಟು ಖರ್ಚು ಮಾಡಿರುವುದಾಗಿ ನಿಶ್ಚಯಿಸಲ್ಪಟ್ಟಿತ್ತು. ಆದರೆ ಇಥಿಯೋಪಿಯಾದ ಮೇಲೆ ಮ್ಯೂನಿಕ್ ಸಂಘಟನೆಗಳಿಂದ ಬ್ರಿಟನು ಬಹಳ ಬೇಗ ಎಚ್ಚತ್ತಿದೆ. ಮೊದಲಿನ ಯೋಜನೆಯು ಈಗ ತಿದ್ದುಪಡಿಯಾಗಿ ಹಿಂದಿನ ಅಂದಾಜಿಗೆ ೪೦೦,೦೦೦,೦೦೦ ಪವನುಗಳಷ್ಟು ಈ ವರ್ಷವೇ ಹೆಚ್ಚಿಸಲು ನಿರ್ಣಯವಾಗಿದೆ.

ಯಾವುದಕ್ಕೂ ತಯಾರು

ಮ್ಯೂನಿಕಿನ ದುರಂತ ಪರಿಸ್ಥಿತಿಯಿಂದ ಜಾಗ್ರತಗೊಂಡ ಬ್ರಿಟನು ಮಾಡಿದ ತೀವ್ರ ಸಿದ್ಧತೆಯ ಫಲವಾಗಿ ಇಂದು ಎಂತಹ ದುರ್ಘಟನೆಯೇ ಒದಗಲಿ; ಅದನ್ನು ಎದುರಿಸಲು ಬ್ರಿಟನು ಸಂಪೂರ್ಣ ತಯಾರಿಯಾಗಿದೆ. ವೈಮಾನಿಕ ದಳದಲ್ಲಿ ಬ್ರಿಟನು ಮಾಡಿದ ಅಭಿವೃದ್ಧಿಯ ಕಾರ್ಯದಿಂದ ಜರ್ಮನಿಯನ್ನು ಕಿರುಕಾಲದಲ್ಲಿ ಮೀರುತ್ತುವ ಶಕ್ತಿಯನ್ನು ಅದು ಪಡೆದಿರುತ್ತದೆ. ಮ್ಯೂನಿಕಿನ ಮೇಲೆ ವೈಮಾನಿಕ ಶಕ್ತಿಯನ್ನು ಹೆಚ್ಚು ಮಾಡುವ ಸಲುವಾಗಿ, ಮೊದಲಿಗಿಂತ ಎರಡು ಪಾಲು ದ್ರವ್ಯವು ವ್ಯಯವಾಗಿದೆ. ಇದಕ್ಕಾಗಿಯೇ ಪ್ರತಿವಾರವೂ

ಯುದ್ಧರಂಗದಲ್ಲಿ ಗಾಯಗೊಂಡವರನ್ನು ಕೊಂಡುಹೋಗುವ ಕ್ರಮ

೫,೦೦೦,೦೦೦ ಪವನುಗಳಷ್ಟು ವ್ಯಯ ಮಾಡಲಾಗುತ್ತದೆ. ಸಮಯವು ಸನ್ನಿಹಿತವಾದರೆ ಈಗಾಗಲೇ ಕಡ್ಡಾಯದ ಸೈನಿಕ ಶಿಕ್ಷಣವನ್ನು ಕೊಟ್ಟ ಅಸಂಖ್ಯಾತ ಸ್ವಯಂಸೇವಕರು, ವೈಮಾನಿಕರು, ನೌಕಾಪಡೆಯವರು ಬ್ರಿಟನಿಗಾಗಿ ಕಾದಾಡಲು ಹೊರಡುವರು.

ಆಕಾಶದಲ್ಲಿ ಬಾಂಬುಗಳನ್ನು ತುಂಬಿ ಹಾರಾಡುವ ವಿಮಾನಗಳು, ನೆಲದಲ್ಲಿ ಸದಾ ಯುದ್ಧಕ್ಕೆ ಟೊಂಕಕಟ್ಟಿಕೊಂಡ ಪದಾತಿ ಬಲ, ಎಲ್ಲೆಲ್ಲಿಯೂ ಸೈನಶಿಕ್ಷಣ, ಆಸ್ಪತ್ರೆಗಳ ರಚನೆ, ಸಮುದ್ರಗಳಲ್ಲಿ ಓಡಾಡುವ ನೌಕಾಬಲ, ಎದುರಾಳಿಗಳನ್ನು ತಡೆಯುವ ಸರ್ವಸಿದ್ಧತೆಗಳು ಬ್ರಿಟನಿನಲ್ಲಿ ಆಗುತ್ತಾ ಇವೆ. ಇಂತಹ ಸಂಪೂರ್ಣ ಸಿದ್ಧತೆಯ ಫಲವಾಗಿ ಬ್ರಿಟನಿನ ವಿಜಾಸಿಯು, ಇಂದಿನ ಯುದ್ಧದ ಜಯದಲ್ಲಿ ಯಾವ ಸಂಶಯಗೊಂಡೂ ಇರುವುದಿಲ್ಲ.

ಫ್ರಾನ್ಸಿನೊಡನೆ ಸಹಕಾರ

ಬ್ರಿಟನಿಗೆ ವಿದೇಶದಲ್ಲಿಯೂ ಸ್ವದೇಶದಲ್ಲಿಯೂ ಅನುಕೂಲ ಪರಿಸ್ಥಿತಿಯೇ ಒದಗಿದೆ. ಮ್ಯೂನಿಕ್ ಘಟನೆಯು ಆದ ಮೇಲೆ ಫ್ರಾನ್ಸ್-ಬ್ರಿಟನುಗಳು ಅನ್ಯೋನ್ಯ ಸಹಕಾರ ಸೌಹಾರ್ದಗಳಿಂದ ಕೂಡಿ ನಡೆದಂತೆ ೧೯೧೪ರಲ್ಲಿ ಕೂಡಿ ನಡೆಯಲು ಅವಕಾಶಗಳಿರಲಿಲ್ಲ. ಇಕ್ಕಡೆಯ ಸೈನ್ಯ, ನೌಕಾಶಕ್ತಿ ಇವುಗಳು ಒಂದಾಗಿ ಯುದ್ಧದಲ್ಲಿ ಮುಂದೊತ್ತುವ ತಯಾರಿಯು ಆಗುತ್ತಿದೆ. ವಿಮಾನಗಳೂ ಹೀಗೆ ಒಂದಾಗಿ ಕಾರ್ಯ ಸಾಧಿಸುವ ಏರ್ಪಾಡೂ ಆಗಿದೆ. ಭೂಮಧ್ಯದ ಸಮಸ್ಯೆಯನ್ನು ಇಕ್ಕಡೆಯವರೂ, ಸರ್ವವಿಧದಿಂದಲೂ ತಿಳಿದುಕೊಂಡಿದ್ದಾರೆ. ಆಫ್ರಿಕದ ಸೊತ್ತಿನ ವಿಷಯದಲ್ಲಿಯೂ ಕೂಡಾ ಈ ಎರಡು ರಾಷ್ಟ್ರಗಳು ಐಕ್ಯಯೋಜನೆಯನ್ನು ಕೈಕೊಂಡಿವೆ.

ನೌಕಾಬಲದ ಉತ್ಕೃಷ್ಟತೆ

ಹಿಂದಿನ ಬ್ರಿಟಿಷ್ ಸಾರ್ವಭೌಮರು, ಅವರ ತಂದೆಯ ಸಿಂಹಾಸನಾರೋಹಣ ಮಾಡಿದ ಕಾಲಕ್ಕಿಂತ ಕೇವಲ ೧೫ರಷ್ಟು ಹೆಚ್ಚಿನ ಹಡಗುಗಳಲ್ಲಿ ತಮ್ಮ ಧ್ವಜವು ಹಾರಾಡುವುದನ್ನು ನೋಡುತ್ತಾರೆ. ಬ್ರಿಟನ ವಿದೇಶಗಳಲ್ಲಿ ೬,೦೦೦,೦೦೦,೦೦೦ ಪವನುಗಳಷ್ಟು ಸೈನ್ಯ ವೆಚ್ಚ ಮಾಡುತ್ತದೆ. ಬ್ರಿಟನು ಒಂದೇ ಇಡೀ ಜಗತ್ತಿನ ೧/೪ರಷ್ಟು ನೌಕಾಬಲವುಳ್ಳದ್ದಾಗಿದೆ. ವರ್ಷ ಒಂದಕ್ಕೆ ಬ್ರಿಟನಿನ ಬಂದರಗಳಿಗೆ ೭ ಮಿಲಿಯ ಟನ್ನುಗಳಷ್ಟು ಕಚ್ಚಾಮಾಲುಗಳೂ ಆಹಾರಸಾಮಗ್ರಿಗಳೂ ಬರುತ್ತವೆ. ಜಗತ್ತಿನ ಎಲ್ಲಾ ಆಸ್ತಿಯಲ್ಲಿ ನೇಕಡಾ ೨೫ರಷ್ಟು ಬ್ರಿಟನಿನ ಸ್ವಾಧೀನವಿದೆ. ಹೀಗೆ ಹಿಂದಿಗಿಂತ ಸರ್ವವಿಧದಿಂದಲೂ ಬ್ರಿಟನು ಇಂದು ಅಧಿಕಶಕ್ತಿಸಂಪನ್ನವಾಗಿದೆ

The Canara Industrial & Banking Syndicate Ltd.

Head Office: UDIPI (S. India)

ESTD) (1925

MEMBER: **Reserve Bank of India, Bankers' Clearing House, Bombay.**

Five Year Cash Certificates are issued at the price of Rs. 8, Rs. 80, Rs. 400 and Rs. 800, repayable on maturity at Rs. 10, Rs. 100, Rs. 500, and Rs. 1000 respectively.

You can cash the Certificates at any time before maturity.

AN INVESTMENT WHICH IS LIQUID AND YET VERY REMUNERATIVE.

Further particulars can be had from:

The Car Street Branch, Mangalore

GENERAL BANKING BUSINESS TRANSACTED.

ಅಮೇರಿಕದಲ್ಲಿ ಮದ್ಯನಿಷೇಧವು ಏಕೆ ಯಶಸ್ವಿಯಾಗಲಿಲ್ಲ?

ಅಧಿಕಾರಲಾಲಸೆಯು ಅನ್ಯಾಯಮಾಡಿತು

ಭಾರತದಲ್ಲಿ ಅದು ಅನ್ವಯಿಸಲಾರದು

ಅನುಭವಶಾಲಿಗಳೊಬ್ಬರ ಹೇಳಿಕೆ

ಮದ್ರಾಸಿನ ಡೇನಿಷ್ ಮಿಶನ್ ಹಾಲಿನಲ್ಲಿ ಬಹುಕಾಲ ಅಮೇರಿಕದಲ್ಲಿ ವಾಸವಾಗಿದ್ದ ರೆವರೆಂಡ್ ಡಬ್ಲ್ಯು. ಎಲ್. ವರ್ಗೀಸನರವರು ಅಮೇರಿಕದಲ್ಲಿ ಮದ್ಯಪಾನ ನಿಷೇಧವು ಯಶಸ್ವಿಯಾಗದಿರಲು ಕಾರಣವೇನು ಎಂಬ ವಿಚಾರದಲ್ಲಿ ಮಹತ್ವವಾದೊಂದು ಭಾಷಣವಿತ್ತರು. ಪ್ರಧಾನ ಮಂತ್ರಿ ರಾಜಾಜಿಯವರು ಅಧ್ಯಕ್ಷತೆ ವಹಿಸಿದ್ದರು. ಭಾಷಣಕರ್ತರು ಹೀಗೆಂದು ವಿವರಿಸಿದರು:—

"ಮಹಾಯುದ್ಧವಾದ ಮೇಲೆ ಅಮೇರಿಕದ ರಾಜಕೀಯ ಇತಿಹಾಸದಲ್ಲಿ ನವಕ್ರಾಂತಿಯು ಉಂಟಾಯಿತು. ಅಮೇರಿಕದ ಒಟ್ಟು ೪೮ ಸಂಸ್ಥಾನಗಳಲ್ಲಿ ೪೬ ಸಂಸ್ಥಾನಗಳೂ ಯಾವುದೇ ರೀತಿಯಿಂದ ಮದ್ಯದ ವ್ಯವಹಾರವು ಆಗಬಾರದೆಂದು ನಿರ್ಣಯಮಾಡಿದುವು. ಈ ಸುಧಾರಣೆಯು ಹದಿನಾಲ್ಕು ವರ್ಷಗಳ ತನಕ ಸಾಗಿತು. ಯಾವ ಕಡೆ ದರೋಡೆಗಾರರ ಜುಗಾರಿಗಾರರ ವಸತಿಯಿತ್ತೋ, ಎಲ್ಲಿ ಕೆಟ್ಟ ಜನರು ವಾಸಮಾಡುತ್ತಿದ್ದರೋ ಆ ಸ್ಥಳಗಳೇ ಸುಂದರವಾದ ಜನವಸತಿ ಯೋಗ್ಯವಾದ ಸ್ಥಳಗಳಾದುವು. ನಾನಿದ್ದ ೯ ವರ್ಷಗಳಲ್ಲಿ ಮದ್ಯ ಕುಡಿಕರ ಅನಾಹುತವಾದ ಒಂದೆರಡು ಸಂಗತಿಗಳನ್ನು ಮಾತ್ರ ಕೇಳಿದ್ದೇನೆ. ಕುಡುಕರನ್ನೂ, ಕುಡಿದು ಖೂನಿ ಮಾಡಿದವರನ್ನೂ, ಅಮಲಿನಿಂದ ಹುಚ್ಚರಾದವರನ್ನೂ ಉಪಚರಿಸಲು ತೆರೆದ ಆಸ್ಪತ್ರೆಗಳು ಮುಚ್ಚಲ್ಪಟ್ಟವು. ಮದ್ಯಪಾನ ನಿಷೇಧವು ಜಾರಿಯಲ್ಲಿದ್ದ ವರ್ಷಗಳಲ್ಲಿ ಅದನ್ನು ಉತ್ತಮ ವ್ಯಾಪಾರವು ಅಮೇರಿಕದಲ್ಲಿ ಬೇರೆ ಯಾವಾಗಲೂ ಇರಲಿಲ್ಲ. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಸಂಖ್ಯಾತವಾಗಿ ಬೆಳೆಯಿತು. ಬಡವರು, ಬೇಡುವವರು, ಧರ್ಮಕ್ಷೇತ್ರಗಳು ಕಡಿಮೆಯಾದುವು.

"ಹಾಗಾದರೆ, ಅಮೇರಿಕದಲ್ಲಿ ಈ ಸುಧಾರಣೆಯು ಯಾಕೆ ಯಶಸ್ವಿಯಾಗಲಿಲ್ಲವೆಂದು ಕೇಳಬಹುದು. ಇದು ಅಲ್ಲಿನ ಜನರು ಪದವಿಗಳನ್ನು ಪಡೆಯಲು ಮಾಡಿದ ಪಕ್ಷಭೇದಗಳಿಂದ ಹಾಳಾಯಿತು. ಮೊದಲಿದ್ದ ಜನರನ್ನು ಅಧಿಕಾರದಿಂದ ತಳ್ಳಲು ವಿರುದ್ಧ ಪಕ್ಷದವರು ಮದ್ಯಪಾನ ನಿಷೇಧ ಸುಧಾರಣೆಯನ್ನು ಖಂಡಿಸಿ ಪ್ರಚಾರ ಮಾಡಿದರು. ಅಧಿಕಾರದಲ್ಲಿದ್ದವರೇ ಕೆಲವರು ಈ ಸುಧಾರಣೆಯನ್ನು ಹೃತ್ಪೂರ್ವಕ ಕೈಗೊಳ್ಳಲಿಲ್ಲ. ಹೀಗೆ ಸುಧಾರಣೆಯನ್ನು ಖಡ್ಡಾಯವಾಗಿ ಜಾರಿಗೆ ತರುವಲ್ಲಿ ತೋರಿಸಿದ ನಿರುತ್ಸಾಹದಿಂದ ಕಾನೂನೇ ಹಾಳಾಯಿತು. ಅದರೊಡನೆ ಅಧಿಕಾರಕಾಂಕ್ಷಿಗಳಾದ ವಿರುದ್ಧ ರಾಜಕೀಯ ಪಕ್ಷದವರ ನಿರಂತರ ಪ್ರಚಾರವೂ ನಡೆಯಿತು. ಪತ್ರಿಕೆಗಳೂ ವಿರುದ್ಧ ಪ್ರಚಾರ ಸಾಗಿಸಿದುವು, ಹಿಂದೂದೇಶವು ಕೂಡಾ ಇಡೀ ದೇಶದಲ್ಲಿ ಈ ಸುಧಾರಣೆಯು ಸಂಪೂರ್ಣವಾದಾಗ ಇಂತಹ ಪರಿಸ್ಥಿತಿಯನ್ನು ಹೊಂದಬಹುದೋ ಎಂದು ತೋರುತ್ತದೆ. ಯಾಕೆಂದರೆ ರಾಜಕೀಯವೆಂಬುದು ಕೆಲವು ಸಲ ನ್ಯಾಯಾನ್ಯಾಯವಿಲ್ಲದೆ ಜನತೆಯನ್ನು ಹುಚ್ಚುಗಟ್ಟಿಸುತ್ತದೆ. ಹೀಗಾಗಿ ಜನತೆಯಲ್ಲಿ ಮದ್ಯಪಾನ ನಿಷೇಧದ ತತ್ವವು ದಿನದಿಂದ ದಿನಕ್ಕೆ ಕಡಿಮೆಯಾಯಿತು. ವಿರುದ್ಧ ಪಕ್ಷದವರು ೧೯೩೨ರಲ್ಲಿ ಅಧಿಕಾರಕ್ಕೆ ಬಂದಾಗ, ತಮ್ಮ ಪ್ರತಿಜ್ಞೆಯಂತೆ ಮೊದಲಾಗಿ ಮದ್ಯಪಾನವನ್ನು ಕ್ರಮಕ್ಕೆ ತಂದರು. ಸರಕಾರಕ್ಕೆ ಬಹಳ ಉತ್ಪತ್ತಿಯನ್ನು ತೋರಿಸಿದರು.

'ಜನತೆಯು ಇದರಿಂದ ಸುಮ್ಮಗಿರುವುದಿಲ್ಲ. ಈ ಹೊಸ ಮದ್ಯಪಾನ ಜಾರಿಯ ಅನಾಹುತವು ಜನರಿಗೆ ತಿಳಿದಿದೆ. ಇತ್ತೀಚೆಯ ಚುನಾವಣೆಗಳಲ್ಲಿ ಮದ್ಯಪಾನ ನಿಷೇಧ ಪಕ್ಷದವರು ಬಹುಮತದಿಂದ ಚುನಾಯಿತರಾಗಿ ಬರುತ್ತಾರೆ. ಮದ್ಯಪಾನವು ವಿಷಕಾರಕವಾದ ಭಯಂಕರ ಅಭ್ಯಾಸ. ಇದನ್ನು ಸಂಪೂರ್ಣ ನಿಲ್ಲಿಸುವುದರಿಂದ ತಮ್ಮ ರಾಷ್ಟ್ರದ ಹಿತಕ್ಕೂ ಲೋಕದ ಹಿತಕ್ಕೂ ಎಡೆಮಾಡಿದಂತಾಗುತ್ತದೆ. ಮೊದಲು ಮೊದಲು ಇದಕ್ಕಾಗಿ ಸ್ವಲ್ಪ ತೆರಿಗೆ ತೆರದೆ ನಿರ್ವಾಹವಿಲ್ಲ. ಅದಕ್ಕಾಗಿ ಜನರು ಬೇಸರಿಸಬಾರದು. ಹಾಗೆ ಮಾಡಿದರೆ ಮಾತ್ರ ನಮ್ಮ ಕೊಳಕು ಇಲ್ಲದಾಗುವುದು. ಜನರಿಗೂ ಉಸ್ಸಲುಂಡಲು ಸಿಗುವುದು.''

ಅಧ್ಯಕ್ಷತೆ ವಹಿಸಿದ್ದ ರಾಜಾಜಿಯವರು ಅಮೇರಿಕದ ಮದ್ಯಪಾನದ ಇತಿಹಾಸವನ್ನು ತಿಳಿಸಿದ್ದಕ್ಕಾಗಿ ಉಪನ್ಯಾಸಕರಿಗೆ ಕೃತಜ್ಞತೆ ಹೇಳುತ್ತಾ, ಸತ್ಯವು ಅಪಜಯ ಹೊಂದಿದರೂ ಅದರಿಂದ ನಿರಾಶರಾಗಬಾರದೆಂದೂ, ಇಡೀ ಜನತೆಯೇ ಸತ್ಯಕ್ಕೆ ವಿರುದ್ಧ ಮತವಿತ್ತರೂ, ಸತ್ಯಸಂಧನು ತನ್ನ ಪ್ರತಿಜ್ಞೆಯಿಂದ ಚ್ಯುತನಾಗುವುದಿಲ್ಲವೆಂದೂ ಹೇಳಿದರು.

"ಅಮೇರಿಕದಲ್ಲಿ ಮದ್ಯಪಾನ ನಿಷೇಧವು ಅಪಜಯ ಹೊಂದಿದ್ದು ಪಕ್ಷಗಳ ಅಧಿಕಾರಕಾಂಕ್ಷೆಯಿಂದ; ಆದರೆ ಭಾರತದಲ್ಲಿ ಅಂತಹ ಬೆದರಿಕೆಯಿರುವುದಿಲ್ಲ. ಅಲ್ಲಿನ ರಾಜಕೀಯಕ್ಕಿಂತ ನಮ್ಮ ರಾಜಕೀಯವು ಪ್ರತ್ಯೇಕ. ಗಾಂಧೀಜಿಯವರಿಗೆ ಅಂತಹ ರಾಜಕೀಯವು ಇಷ್ಟವಿಲ್ಲ. ಕೇವಲ ಅಧಿಕಾರಲಾಭಕ್ಕಿಂತ ಬೇರೆಯಾಗಿ, ಉತ್ತಮಧ್ಯೇಯದಿಂದ ಕೂಡಿದ್ದ ರಾಜಕೀಯವು ನಮ್ಮದು. ಮದ್ಯಪಾನ ನಿಷೇಧವು ಪಕ್ಷದ ವಿಷಯವಲ್ಲ. ಯಾರಿಗೆ ಅಮಲು ಹಿತವಾದೀತು? ಎಲ್ಲಾ ಪಕ್ಷದವರಿಗೂ ಮದ್ಯಪಾನವು ಹಿತವಿಲ್ಲದಿರುವುದರಿಂದ ಇಲ್ಲಿ ಅಂತಹ ಹೆದರಿಕೆಯು ಇರುವುದಿಲ್ಲ.

ನಾಚಿಕೆಯ ಕೆಲಸ

"ಅಮೇರಿಕದಲ್ಲಿ ಮದ್ಯಪಾನವು 'ಯಶಸ್ವಿ'ಯಾಗಲಿಲ್ಲವೆಂದು ಹೇಳುವುದಕ್ಕಿಂತ 'ಸೋಲಿಸಲ್ಪಟ್ಟಿತು' ಎನ್ನುವುದೇ ಮೇಲು. ಯಾಕೆಂದರೆ ಅದು ಅಲ್ಲಿ ಪಕ್ಷಗಳ ಕಾದಾಟದ ವಿಷಯವಾಗಿತ್ತು. ಅಲ್ಲಿ ಕುಡಿಯುವುದು ಯೂರೋಪಿನ ಇತರ ದೇಶಗಳಂತೆ ಮಿತಿಮೀರಿತ್ತು. ಬಹಿರಂಗ ಮದ್ಯದಂಗಡಿಗಳನ್ನು ಮುಚ್ಚಿದ್ದರೂ ಜನರು ಯಾವ ಭಯವಿಲ್ಲದೆ ಮನೆಗಳಲ್ಲಿ ಇಟ್ಟು ಧಾರಾಳ ಕುಡಿಯುತ್ತಿದ್ದರು. ಕುಡಿದು ಜನರ ರಾಜನೀತಿಜ್ಞರ ರಕ್ತಮೆದುಳುಗಳು ಕೆಟ್ಟು ಹೋಗಿದ್ದುವು. ಕಡೆಗೆ ಅವರು ತಪ್ಪು ಮಾಡಿದರು. ಹಿಂದೂದೇಶದಲ್ಲಿ ಮನೆಯಲ್ಲಿ ಮದ್ಯವನ್ನಿಟ್ಟುಕೊಳ್ಳುವುದು ಬಹಳ ನಾಚಿಕೆಯ ಕೆಲಸವೆಂದು ಊಹಿಸಲಾಗಿದೆ. ಅಲ್ಲಿ ಹಾಗಲ್ಲ. ಹಾಗಾಗಿ ಇಲ್ಲಿನ ಕ್ರಮವನ್ನು ಅಲ್ಲಿಗೆ ಹೋಲಿಸಕೂಡದು. ಅಮೇರಿಕದಲ್ಲಿಯಾದರೂ ಯಾವುದು ಯಶಸ್ವಿಯಾಗಲಿಲ್ಲವೋ, ಅದು ಹಿಂದೂದೇಶದಲ್ಲಿ ಯಶಸ್ವಿಯಾಗುವುದು ಸಾಧ್ಯವಿದೆ. ಯಾಕೆಂದರೆ ಜನರ ವಿಚಾರವು ಇಲ್ಲಿ ಅನುಕೂಲವಾಗಿದೆ" ಎಂದರು.

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ
"ಲಿವರ್ ಕ್ಯೂರ್''
ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು
ವಿಲಕ್ಷಣ ತಯಾರಿ: ಜಮ್ಮಿ ವೆಂಕಟರಮಣಯ್ಯ
ವಿಶೇಷ ಮಾಹಿತಿಗೆ ಬರೆಯಿರಿ
ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಲಿಸ್ಟ್,
ಮೈಲಾಪುರ, ಮದ್ರಾಸು.

ಸಾರ್ವಜನಿಕ ಸಂರಕ್ಷಣೆಯ ಹೊಸ ನಿರ್ಬಂಧ

— ವೈಸರಾಯರ ಪ್ರಕಟಣೆ —

ಯುದ್ಧ ಸುರುವಾಗಿದೆ. ಹಿಂದೂದೇಶದ ರಕ್ಷಣೆ, ಸಾರ್ವಜನಿಕ ಸಂರಕ್ಷಣೆಗಳ ಬಗ್ಗೆ ವೈಸರಾಯರು ಹೊಸ ನಿರ್ಬಂಧವನ್ನು ಪ್ರಕಟಿಸಿರುವರು. ಈ ಶಾಸನದಂತೆ, ಕೇಂದ್ರ ಸರಕಾರವು ಪದಾತಿ, ನೌಕಾ, ವಿಮಾನ ದಳಗಳನ್ನು ಬೇರೆ ಆಕ್ರಮಣದಿಂದ ರಕ್ಷಿಸುವಂತೆಯೂ, ಸೈನ್ಯದ ಹಿತಕ್ಕೆ ವಿರುದ್ಧವಾದ ಪ್ರತಿಯೊಂದು ಕಾರ್ಯಗಳನ್ನು ತಡೆಯುವಂತೆಯೂ, ಸರಕಾರದ ವಿಧೇಯತೆಗೆ ಆತಂಕ ಬರುವ ಪ್ರತಿಯೊಂದು ಕಾರ್ಯವನ್ನೂ ನಿಲ್ಲಿಸುವಂತೆಯೂ, ವಿರೋಧಿಗಳಿಗೆ ಬೆಂಬಲ ಕೊಡುವಂತಹ ಯಾವುದೇ ಕಾರ್ಯವನ್ನಾಗಲಿ, ತಡೆಯುವಂತೆಯೂ, ಸುಳ್ಳು ಸುದ್ದಿಯನ್ನು ಪ್ರಕಟಿಸದಂತೆಯೂ ಇವೇ ಮೊದಲಾಗಿ ಪ್ರತಿಯೊಂದು ಕಾರ್ಯಭಾಗದಲ್ಲಿ ಸರಕಾರವು ಹಿಡಿತವನ್ನು ಇಟ್ಟುಕೊಳ್ಳುವುದು.

ಕಳೆದ ಮಹಾಯುದ್ಧವಾದ ಮೇಲೆ ನಡೆದ ೧೭ ಯುದ್ಧಗಳು

೧೯೧೪-೧೮ರ ಯುದ್ಧವು ಕೊನೆಯಾದ ನಂತರ ಈ ವರೆಗೆ ಸುಮಾರು ೧೭ ಯುದ್ಧಗಳು ನಡೆದು ಈಗ ಹದಿನೆಂಟನೆ ಯುದ್ಧ ಪ್ರಾರಂಭವಾಗಿದೆ. ಜನಾಂಗಗಳು ೧೯೧೪—೧೮ರಲ್ಲಿ ಮಾಡಿದ ತ್ಯಾಗವು ೧೯೧೮ರ ವರ್ಸೇಲಿ ಒಪ್ಪಂದದಿಂದ ನಿಷ್ಪ್ರಯೋಜನವಾಯಿತೆಂದು ಇದರಿಂದ ವ್ಯಕ್ತವಾಗುತ್ತದೆ.

೧. ೧೯೧೮-೧೯ ಗೆಲಿಶಿಯಾ ಯುದ್ಧ
ಗೆಲಿಶಿಯಾದ ಪೂರ್ವ ಭಾಗವನ್ನು ಸ್ವಾಧೀನ ಮಾಡಲಿಕ್ಕೆ ಪೋಲಂಡೂ, ಉಕ್ರೇನಿಯವೂ ಯುದ್ಧ ಮಾಡಿದರು. ಪೋಲಂಗೆ ಆ ಸ್ಥಳವೊದಗಲಾಯಿತು.

೨. ೧೯೧೮-೨೧. ಐರ್ಲೇಂಡು
ಐರ್ಲೇಂಡದ ರಿಪಬ್ಲಿಕರಿಗೂ ಬ್ರಿಟಿಷ "ಬ್ಲೇಕ್ ಅಂಡ್ ಟೇನ್"ರಿಗೂ ಗುರಿಲ್ಲಾ ಯುದ್ಧ.

೩. ೧೯೧೯. ರಷ್ಯಾ.
ರೆಡ್ ರಷ್ಯನರು ವೈಟ್ ರಷ್ಯನರನ್ನು ನಿರ್ಮೂಲನಮಾಡಿದರು.

೪. ೧೯೧೯-೨೬. ಮೊರೋಕ್ಕೊ
ಮೊರೋಕ್ಕೋವಿನ ರಿಫ್ ಪ್ರದೇಶದಲ್ಲಿ ಸ್ಪೆಯಿನ್ ಯುದ್ಧ

೫. ೧೯೧೯-೨೫. ಅರೇಬಿಯಾ.
ಇಬ್ನ ಸಾವೂದನಿಗೂ ಅರಸ ಹುಸೇನನಿಗೂ ಯುದ್ಧ. ಹುಸೇನನು ಸಿಂಹಾಸನ ಭ್ರಷ್ಟನಾದನು

೬. ೧೯೨೦ ಪೋಲೆಂಡು
ಪೋಲೆಂಡಿಗೆ ರಷ್ಯದ ದಾಳಿ, ರಷ್ಯವು ವಾರ್ಸಾ ನಗರವನ್ನು ಸ್ವಾಧೀನ ಮಾಡಲು ಪ್ರಯತ್ನಿಸಿತು ರಷ್ಯವನ್ನು ಪೋಲೆಂಡು ಸೋಲಿಸಿತು

೭. ೧೯೨೦ ಆರ್ಮೇನಿಯಾ
ಆರ್ಮೇನಿಯಾ ಸರಕಾರವನ್ನು ಟರ್ಕಿಯು ಕೆಡಹಿತು. ಆ ಮೂಲಕ ರಷ್ಯಕ್ಕೆ ಒಂದು ಪ್ರಾಂತ ತೆರೆಯಲಾಯಿತು

೮. ೧೯೨೦-೨೬ ಚೈನಾ
ಚೈನಾದಲ್ಲಿ ಯಜಮಾನ ಕಲಹ. ಸೈನ್ಯಾಧಿಕಾರಿಗಳಲ್ಲಿಯೇ ಕಲಹ ಪ್ರಾರಂಭವಾಯಿತು

೯. ೧೯೨೨ ೨೩ ಏಶಿಯಾ ಮೈನರಿನಲ್ಲಿ
ಏಶಿಯಾ ಮೈನರಿಗೆ ಗ್ರೀಕರ ದಾಳಿ. ಅವರನ್ನು ಟರ್ಕರು ಸೋಲಿಸಿದರು

೧೦. ೧೯೨೫. ಸಿರಿಯಾ
ಫ್ರಾಂಚರ ಸ್ವಾಧೀನದಿಂದ ತಪ್ಪಿಸಿಕೊಳ್ಳಲು ದಂಗೆ

೧೧. ೧೯೨೫-೩೫ ದಕ್ಷಿಣ ಅಮೇರಿಕ.
ಬೊಲಿವಿಯಾ ಮತ್ತು ಪೆರೆಗ್ವೇಗಳೊಳಗೆ ದೀರ್ಘವಾದ ಯುದ್ಧ

೧೨. ೧೯೨೬-೨೮. ಚೈನಾ
ಚೈನಾ ಸೈನಿಕರಲ್ಲಿ ಪರಸ್ಪರ ಕಲಹ, ಚೈನಾ ರಿಪಬ್ಲಿಕ್ ಸರಕಾರದ ಸ್ಥಾಪನೆ

೧೩. ೧೯೩೧-೩೨. ಮಂಚೂರಿಯ
ಮಂಚೂರಿಯಾಕ್ಕೆ ಜಪಾನದ ದಾಳಿ.

೧೪. ೧೯೩೨ ಚೈನ
ಶಂಗಾಯಿಯಲ್ಲಿ ಜಪಾನ ಮತ್ತು ಚೀನಿಯರ ಯುದ್ಧ.

೧೫. ೧೯೩೫-೩೬. ಅಬಿಸೀನಿಯಾ
ಅಬಿಸೀನಿಯಾಕ್ಕೆ ಇಟಲಿಯ ಧಾಳಿ.

೧೬. ೧೯೩೬-೩೯ ಸ್ಪೈಯಿನ್ ಯುದ್ಧ.

೧೭. ೧೯೩೭. ಚೈನ-ಜಪಾನ ಯುದ್ಧ.

ಈಗ ಪ್ರಾರಂಭವಾದ ಜರ್ಮನ ಬ್ರಿಟಿಷ ಯುದ್ಧ.

ವಿಚಿತ್ರ-ಪ್ರಪಂಚ

'ಸೆರೆಮನೆಯೇ ಆದೀತು'

ರಾಜಕೀಯ ದಂಗೆಯೊಂದರಲ್ಲಿ ಸೆರೆಮನೆಯನ್ನು ಸೇರಿದ ಒಬ್ಬ ಮೆಕ್ಸಿಕೋದ ಸೆರೆಮನೆಯಲ್ಲಿರಿಸಲ್ಪಟ್ಟ ವೆರೆಂಜುವೆಲಾ ಸಾಂಡೋವಲ ಎಂಬವನು ತಾನು ಸೆರೆಮನೆಯಲ್ಲಿಯೇ ಉಳಕೊಳ್ಳುವನಾಗಿ ಹೇಳಿಕೊಂಡಿರುವನು

ಅವನ ಕಡೆಯ ವಕೀಲರು ಅಧಿಕಾರಿಗಳಲ್ಲಿ ವಾದಿಸಿ ಅವನಿಗೆ ಸೆರೆಮನೆಯ ವಾಸವೇ ಆಗಬೇಕೆಂದು ಸಂಧಾನ ಮಾಡಿ ವಿಜಯಿಗಳಾದರು. ಆತನ ಏಕಾಂತವಾಸದಲ್ಲಿ ಇರದಿದ್ದರೆ ಬದುಕಲಾರನೆಂದು ಅಧಿಕಾರಿಗಳಿಗೆ ಅವರು ತಿಳಿಸಿದರು. ಆತನನ್ನು ಬಿಡುಗಡೆ ಮಾಡಿದ ಪಕ್ಷದಲ್ಲಿ ತಾನು ಹಿಂದೆ ಸೇರಿದ ದಂಗೆಯ ವಿರುದ್ಧ ಪಕ್ಷದವರು ಆತನನ್ನು ಹಿಡಿದು ಕೊಂದುಬಿಡುವರೆಂದು ವಕೀಲರು ತರ್ಕಿಸಿದರು. ಅವನನ್ನು ಹಾಗೆ ಕೊಲ್ಲಲು ಬಯಸುವ ಕಾರಣವೇನೆಂದರೆ, ಅವನನ್ನು ಹಾಗೆ ಇರಲು ಬಿಟ್ಟರೆ, ಅವರನ್ನು ಖಂಡಿತವಾಗಿಯೂ ಆತನು ಕೊಲ್ಲುವನೆಂದು ಅವರ ಹೆದರಿಕೆಯಂತೆ

ಹೇಗೂ ಸರಕಾರಕ್ಕೆ ಅವನನ್ನು ಸೆರೆಯಿಂದ ಬಿಟ್ಟುಬಿಡಲು ನಿರ್ವಾಹವಿಲ್ಲವಾಗಿದೆ

ಮರವೇರಿದಾಕೆ ಕೆಳಗೆ ಇಳಿಯಲಿಲ್ಲ

ಕಲ್ಕತ್ತ ಆಸ್ಪತ್ರೆಯ ಆವರಣದಲ್ಲಿದ್ದ ಮರವೊಂದಕ್ಕೆ ಒಂದು ಹೆಂಗುಸು ಹತ್ತಿ ಕುಳಿತುಕೊಂಡಿದ್ದಳು. ಆಸ್ಪತ್ರೆಯ ಅಧಿಕಾರಿಗಳು ಹೋಗಿ, ಅವಳನ್ನು ಕೆಳಗಿಳಿಯಬೇಕೆಂತ ಹೇಳಿದರು. ಆದರೆ ಅವಳು ಅದಕ್ಕೆ ಎಷ್ಟುಮಾಡಿದರೂ ಒಪ್ಪಲಿಲ್ಲ

ಕಡೆಗೆ ಏಣಿಯೊಂದನ್ನು ತಂದು ಅವಳನ್ನು ಕೆಳಗೆ ಒಯ್ಯುವಂತೆ ಮಾಡಲಾಯಿತು. ಕಡೆಗೆ ಎಲ್ಲಾ ವಿಷಯಗಳನ್ನು ವಿಚಾರಿಸಿದ ಮೇಲೆ, ಅವಳಿಗೆ ಎದುರಾಳಿ ಸವತಿ ಇದ್ದಾಳೆಂದೂ ಇತ್ತೀಚೆಗೆ ಹುಚ್ಚು ಹಿಡಿದಿದೆಯೆಂದೂ ತಿಳಿದುಬಂತು!

೨೦೦ ವರ್ಷಗಳ ಶಿಕ್ಷೆ!

ದ್ರಾಕ್ಷಾ ಸಂಘಕ್ಕೆ ತೆರಬೇಕಾದ ತೆರಿಗೆಯನ್ನು ಕೊಡಲು ಆಗದೆ ಇದ್ದುದಕ್ಕಾಗಿ ಒಪೆರ್ಟೋದಲ್ಲಿದ್ದ ದ್ರಾಕ್ಷಾರಸ ವ್ಯಾಪಾರಿಯಾದ ಮಟ್ಟೋಸಿನೋಸ ಎಂಬವನಿಗೆ ೨೦೦ ವರ್ಷಗಳ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಮೊದಲನೆಯ ಸಲ ಅವನಿಗೆ, ಆತನು ತೆರಬೇಕಾಗಿದ್ದ ತೆರಿಗೆಯ ನೂರು ಪಾಲಷ್ಟು ಹಣ ಕೊಡುವ ಶಿಕ್ಷೆಯು ವಿಧಿಸಲಾಗಿತ್ತು. ಅದು ಸಾಧಾರಣ ೮೦೦೦ ಪವನುಗಳಷ್ಟಾಗುವುದು. ಆದರೆ ಆ ಸೆನುಯ, ಅಷ್ಟು ಹಣವನ್ನು ತೆರಲು ಆತನಿಗೆ ಸಾಧ್ಯವಿಲ್ಲವಾಗಲು, ಅವನಿಂದಲಾಗಿ ೨೦೦ ವರ್ಷಗಳ ವರೆಗೆ ದ್ರಾಕ್ಷಾ ಸಂಘಕ್ಕೆ ಆಗುವ ನಷ್ಟದ ಲೆಕ್ಕದಿಂದ ೨೦೦ ವರ್ಷಗಳ ಶಿಕ್ಷೆ ವಿಧಿಸಲ್ಪಟ್ಟಿತ್ತು!

THE
BANK OF MANGALORE LTD.,
MANGALORE.
ESTD 1931
Branches-
Mudabidri & Padubidri.
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.
Savings Bank deposit 3½% on daily balances.
All kinds of bankingbusiness transacted

ಹತ್ತು ಗಡಿಯಾರಗಳಿಗೆ ಬರೇ ಮೂರು ರೂಪಾಯಿ ಹತ್ತಾಣೆ ಮಾತ್ರ!



ನಾಲ್ಕು ಡಮ್ಮಿ ರಿಸ್ಟವಾಚ್‌ಗಳು, ಎರಡು ಡಮ್ಮಿ ಪಾಕೆಟ್ ವಾಚ್ ಮತ್ತು ಒಂದು ಬಲವಾದ ಮಿಶನ್ ಸಾಮಾನಗಳಿಂದ ತಯಾರಿಸಲ್ಪಟ್ಟ ಟೈಂಪೀಸ್, ಇವುಗಳು ಕಾಲ ನಡೆಯುವುದು ೧೨ ವರ್ಷ ಗ್ಯಾರಂಟೀ. ಈ ಗಡಿಯಾರಗಳನ್ನು ವಿಲಾಯತಿಯಿಂದ ಬಹಳವಾಗಿ ತರಿಸಿರತ್ತೇವೆ. ಆದರೂ ಈ ರಿಯಾಯ್ತಿ ದರದಂತೆ ೧೦ ಸಾವಿರ ಗಡಿಯಾರಗಳನ್ನು ಮಾರಲು ನಿಶ್ಚಯಿಸಿರುತ್ತೇವೆ. ಈ ಸಮಯದಲ್ಲಿ ಬೇಗನೆ ತರಿಸಿಕೊಳ್ಳುವುದು. ಇಲ್ಲವಾದರೆ ಎಲ್ಲಾ ಖರ್ಚಾಗಿ ಹೋಗುವವು. ಗಡಿಯಾರಗಳ ಜೊತೆಗೆ ಒಂದು ಫೌಂಟನ್ ಪೆನ್, ೧೪ ಕ್ಯಾರೆಟ್ ರೋಲ್ಡ್‌ಗೋಲ್ಡ್ ... ಸಹಿತ, ಒಂದು ಸುಂದರವಾದ ಹಾರವೂ, ... ಪ್ರತ್ಯೇಕವಾಗಿ ಕೊಡಲಾಗುವುವು. ... ಖರ್ಚು ಪ್ಯಾಕಿಂಗ್ ಖರ್ಚು ... ಸರಿಯಾಗಿ ... ಬೆಲೆ ... ಪತ್ರವ್ಯವಹಾರಗಳ ಇಂಗ್ಲಿಷಿನಲ್ಲಿ ಮಾಡಬೇಕು.
ಪತ್ತೆ
German Watch Co, (S. A M)
P B No 27 Amritsar (India

ನಷ್ಟರಹಿತ! ಸ್ವರ್ಣಸಂಧಿ! ಕಳಕೊಳ್ಳಬೇಡಿರಿ!!
ಸರ್ವೋತ್ತಮ ಸ್ಪರ್ಧೆ. ನಂ. ೧
ಪ್ರಥಮ ಬಹುಮಾನ ರೂ. 20. ದ್ವಿತೀಯ ಬಹುಮಾನ ರೂ. 5
2 ತಪ್ಪಿನವರಿಗೆಲ್ಲರಿಗೂ 12 ಆಣೆ ಕ್ರಯದ ಬ್ರಹ್ಮಿ ತೈಲ ಬಾಟ್ಲಿ 1, ... ತಪ್ಪಿನವರಿಗೆಲ್ಲರಿಗೂ ... ಆಣೆ ಕ್ರಯದ ಭೃಂಗರಾಜ ತೈಲ ಬಾಟ್ಲಿ 1, 4 ತಪ್ಪಿನವರಿಗೆಲ್ಲರಿಗೂ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆಲ್ಲರಿಗೂ 6 ಆಣೆ ಕ್ರಯದ ಆಂಬ್ರಾ ಹೇರ್ ಆಯಿಲ್ ಬಾಟ್ಲಿ 1. ರೂ. 1ರ ... ಉತ್ತರ ಕಳುಹಿಸಿದವರಿಗೆಲ್ಲರಿಗೂ ... ಚ್ಯವನಪ್ರಾಶ ಬಾಟ್ಲಿಯೊಂದು. ... ಆಯಾ ಊರಿನ ನಮ್ಮ ಏಜಂಟರ ಮುಖೇನವೂ ಕೊಡುವ ಏರ್ಪಾಡು ಮಾಡಲಾಗುವುದು.

—ಗಳೂರು	(1
ಅ—ಬಾದ್	(2
—ಲ್ಲೂರು	(3
——ಪುರ	(4
——ಶ್ವರ	(5
——ರು	(6

ನಿಯಮಗಳು:
—ಹಾಕಿದಲ್ಲಿ ಒಂದು ಅಕ್ಷರ ಕೂಡಿಸಿದರೆ ಒಂದು ರೈಲ್ವೇ ಸ್ಟೇಶನಿನ ಹೆಸರಾಗುವುದು. ಮೊಹರು ಮಾಡಿಟ್ಟ ಉತ್ತರಕ್ಕೆ ಸರಿಯಾಗಿ ಹೋಲುವ ಉತ್ತರಕ್ಕೆ 1ನೇ ಬಹುಮಾನ ಕೊಡಲಾಗುವುದು. ಆಯುರ್ವೇದ ಪ್ರಚಾರ ದೃಷ್ಟಿಯಿಂದ ಈ ಸ್ಪರ್ಧೆ ಪ್ರಾರಂಭಿಸಿರುತ್ತದೆ. ಪ್ರತಿಯೊಬ್ಬರಿಗೂ ಬಹುಮಾನವಿದೆ. ಸರಿಯಾದ ಉತ್ತರವು ತಾ. 29-9-39ರ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸುತ್ತದೆ. ಬಹುಮಾನ ಅದೇ ದಿವಸ ಹಂಚಲಾಗುತ್ತೆ. 0-1-0 ಸ್ಟಾಂಪು ಇಟ್ಟಲ್ಲಿ ಪತ್ರಮೂಲಕ ಹಾಕಲ್ಕೆ ಅವಕಾಶವಿದೆ. ಪ್ರವೇಶಧನ ಉತ್ತರಕ್ಕೆ 0-4-0, ಮೂರು ಉತ್ತರಕ್ಕೆ 0-8-0, ಮತ್ತು 1-0-0ಗೆ 6 ಉತ್ತರ. ಪ್ರವೇಶಧನ ಮನಿಯಾರ್ಡರ್ ಯಾ ಪೋಸ್ಟಲ್ ಆರ್ಡರ ಮುಖೇನ ಕಳುಹಿಸಬಹುದು. ಎಲ್ಲಾ ಉತ್ತರಗಳು 22-9-39ರೊಳಗೆ ನಮಗೆ ತಲುಪಬೇಕು.
Wanted Agents Apply to:
ವಿಳಾಸ. Sarvothuma Products, Bantval S. K

ಪೋಲೆಂಡು ರಾಷ್ಟ್ರದ (ಚಿತ್ರ) ಹಿಂದಿನ ಇತಿಹಾಸ!

ಕೌಂಟ್ ಪೊಟೊಸ್ಕಿ

ಪೋಲೆಂಡು ಇಂದು ಯೂರೋಪಿನ ಮಹಾ ಯುದ್ಧಕ್ಕೆ ಕಾರಣವಾಗಿ ಪರಿಣಮಿಸಿದೆ. ಪೋಲೆಂಡು ಈಗಲೇ ಅಲ್ಲದೆ ಹಿಂದಿನಿಂದಲೂ ಕೂಡ ಅನೇಕ ರೀತಿಯ ಆಕ್ರಮಣಗಳಿಗೆ ಒಳಗಾಗಿತ್ತು. ಪೋಲೆಂಡನ್ನು ಪಡೆಯಲು ಜರ್ಮನಿ ರಶ್ಯಾ ಹಂಗೇರಿ ಮುಂತಾದ ರಾಷ್ಟ್ರಗಳು ಯತ್ನಿಸಿ ಕೊನೆಗೆ ಕೆಲವು ವರ್ಷಗಳ ಕಾಲ ಪೋಲೆಂಡ್ ಹೆಸರನ್ನೇ ನಿರ್ನಾಮವಮಾಡಿ ಹರಿದು ಹಂಚಿಕೊಂಡಿದ್ದವು. ಕಳೆದ ೧೯೧೪–೧೮ರ ಮಹಾ ಯುದ್ಧವಾದಾಗಿನಿಂದೀಚೆಗೆ ಪೋಲೆಂಡು ಪುನಃ ಒಂದು ರಾಷ್ಟ್ರವಾಗಿ ಪರಿಣಮಿಸಿತು

ಆದರೂ ಪೋಲೆಂಡು ಪುರಾತನವಾದ ಸ್ವತಂತ್ರ ರಾಷ್ಟ್ರ ೧೦ನೇ ಶತಮಾನದಲ್ಲಿ ಪೋಲೆಂಡಿನ ರಾಜನಾದ ಮೈಸ್ಕೋವ್ ಅವನ ಜನಾಂಗವೂ ಸಂಪೂರ್ಣವಾಗಿ ಕ್ರೈಸ್ತಮತಕ್ಕೆ ಸೇರಿದರು. ೧೪ರಿಂದ ೧೬ನೇ ಶತಮಾನದ ವರೆಗೆ ಪೋಲೆಂಡ್ ದೇಶವು ಉತ್ತಮ ಸ್ಥಿತಿಯಲ್ಲಿತ್ತು ಜಗೆಲನ್ ವಂಶದ ರಾಜರುಗಳು ಈ ದೇಶವನ್ನು ಆಗ ಆಳುತ್ತಿದ್ದರು

ಆ ವಂಶದ ರಾಜರು ಪೋಲೆಂಡಿನ ಸಿಂಹಾಸನದಿಂದಿಳಿಸಲ್ಪಟ್ಟ ಮೇಲೆ ಉದ್ದಕ್ಕೂ ಚುನಾಯಿತ ರಾಜರನೇಕರು ನೇಮಕರಾಗುತ್ತಾ ಬಂದರು. ಚುನಾವಣೆಯಲ್ಲಿ ರಾಜರುಗಳನ್ನು ಆರಿಸುವ ಪದ್ಧತಿಯೇನೋ ಹೊಸದೂ ಮತ್ತು ಪ್ರಶಂಸನೀಯವಾದುದೂ ಆಗಿತ್ತು ಆದರೂ ಕೂಡ ಈ ಚುನಾವಣೆಯಲ್ಲಿ ನೋಬಲ್‌ಗಳಿಗೂ ದೊಡ್ಡ ಮನುಷ್ಯರಿಗೂ ಆ ಸ್ಥಾನವು ಮೀಸಲಾಗಿಟ್ಟುದರಿಂದ ಆಳ್ವಿಕೆಯಲ್ಲಿಯೂ ಆ ರಾಜ್ಯಾಂಗದಲ್ಲಿಯೂ ದೌರ್ಬಲ್ಯವು ತಲದೋರಿತು

ಇಳಿತದ ಕಾಲ

೧೮ನೇ ಶತಮಾನದ ಹೊತ್ತಿಗೆ ಪೋಲೆಂಡಿನ ಸ್ಥಿತಿಯು ಅಧಃಪಾತಾಳಕ್ಕೆ ಇಳಿಯಿತು ಪೋಲೆಂಡು ೧೭೭೨, ೧೭೯೩ ಮತ್ತು ೧೭೯೫ ಈ ಮೂರು ವರ್ಷಗಳಲ್ಲಿ ಕ್ರಮಕ್ರಮವಾಗಿ ಪ್ರಷ್ಯಾ, ರಷ್ಯಾ ಮತ್ತು ಆಸ್ಟ್ರಿಯಾ ರಾಷ್ಟ್ರಗಳಿಗೆ ಹರಿದು ಹಂಚಿಹೋಯಿತು ಇಷ್ಟರಲ್ಲಿ ನೆಪೋಲಿಯನನು ಪ್ರಾಬಲ್ಯಕ್ಕೆ ಬಂದ ಮೇಲೆ ಪೋಲೆಂಡನ್ನು ಪೂರ್ವ ಸ್ಥಿತಿಗೇ ತರಬೇಕೆಂದು ಯತ್ನಿಸಿದನು ಆದರೆ ಮೊದಲು ಇದ್ದಂತೆ ಪೋಲೆಂಡನ್ನು ಚುನಾಯಿತ ರಾಜರ ಅಧೀನದಲ್ಲಿ ಇಡಲಿಲ್ಲ ಸಾಕ್ಸನಿ ದಲ್ಲಿ ಒಬ್ಬ ಡ್ಯೂಕ್‌ನನ್ನು ನೇಮಿಸಿ ಅವನ ಅಧೀನದಲ್ಲಿ ಪೋಲೆಂಡು ಇರಬೇಕೆಂದು ನೆಪೋಲಿಯನನು ಏರ್ಪಡಿಸಿದನು.

ಪುನಃ ಭಾಗವಾಯಿತು

ಆದರೆ ನೆಪೋಲಿಯನನ ಹೊಸ ಪೋಲೆಂಡು ೧೮೧೫ರಲ್ಲಿ ಆದ ಶಾಂತಿಯ ಕೌಲಿನಿಂದ ವಿನಾಶಹೊಂದಿತು. ಅಂದಿನಿಂದ ಪೋಲೆಂಡು ಮೂರು ರಾಜ್ಯಗಳಿಗೆ ಒಡೆದು ಸೇರಿಹೋಯಿತು. ಬಹು ಹೆಚ್ಚಿನ ಭಾಗವು ರಷ್ಯಾವಿಗೂ ಗೆಲೀಷಿಯಾವು ಆಸ್ಟ್ರಿಯಾ ಹಂಗೇರಿಗೂ ಪೋಸೆನ್ ಪ್ರಾಂತವು ಜರ್ಮನಿಗೂ ಸೇರಿದವು. ಈ ಮೂರು ವಿಭಾಗಗಳಲ್ಲಿ ಆಸ್ಟ್ರಿಯಾದ ಆಳ್ವಿಕೆಗೆ ಸೇರಿದ್ದ ಗಲೀಷಿಯಾವು ಮಾತ್ರ ಸ್ವಲ್ಪವಟ್ಟಿನ ಸ್ವಾತಂತ್ರ್ಯವನ್ನು ಪಡೆದ್ದಿತ್ತು ಈ ಗಲೀಷಿಯಾದಲ್ಲಿ ಪೋಲಿಷ್ ಜನಗಳು ಹೆಚ್ಚಿನ ಪ್ರಾಬಲ್ಯ ಹೊಂದಿದ್ದರು ರುದೇಸಿಯಾದ ರೈತಾಪಿ ವರ್ಗದಲ್ಲಿ ಪೋಲಿಷ್ ಪ್ರಭಾವವು ಒಲವಾಯಿತು.

ಮಹಾಯುದ್ಧದ ಕಾಲ

೧೯೧೪ರ ಮಹಾಯುದ್ಧವು ಆರಂಭವಾದಾಗ ಪೋಲೀಷ್ ಜನರು ಮೂರು ದೇಶಗಳ ಸೈನ್ಯಗಳಲ್ಲಿ ಸೇರಿದ್ದರು ರಷ್ಯಾವಿಗೆ ಸೇರಿದ್ದ ಪೋಲಿಷ್ ಪ್ರದೇಶವನ್ನು ಆಸ್ಟ್ರಿಯಾ ಮತ್ತು ಜರ್ಮನಿಯ ಸೈನ್ಯಗಳು ಸ್ವಾಧೀನಪಡಿಸಿಕೊಂಡವು ೧೯೧೫ರಿಂದೀಚೆಗೆ ಸಾಮಾನ್ಯವಾಗಿ ಎಲ್ಲ ಪೋಲಿಷ್ ಜನರೂ ಕೂಡ ಜರ್ಮನಿ ಮತ್ತು ಆಸ್ಟ್ರಿಯಾ ಕಡೆಗೇ ಯುದ್ಧಮಾಡಬೇಕಾಯಿತು

ಈ ಮಧ್ಯೆ ಸರಿಯಾಗಿ ಮುಂದುವರಿಯಬೇಕಾದರೆ ಪೋಲೆಂಡಿನ ಜನರನ್ನೆಲ್ಲ ಶಾಂತರೀತಿಯಿಂದಿಡಬೇಕಾದುದು ಅತ್ಯಾವಶ್ಯಕ ಎಂಬಂಶವನ್ನು ಆಸ್ಟ್ರೋ ಜರ್ಮನ್ ಅಧಿಕಾರಿಗಳು ಅರಿತರು ಆದ್ದರಿಂದಲೇ ೧೯೧೬ರಲ್ಲಿ ಪೋಲೆಂಡಿಗ ಒಂದು ರೀತಿಯ ಸ್ವಾತಂತ್ರ್ಯವನ್ನು ಯುದ್ಧವು ಮುಗಿದ ಮೇಲೆ ಕೊಡುವುದಾಗಿ ಭರವಸೆಯಿತ್ತರ ೧೯೧೭ರಲ್ಲಿ ಆಸ್ಟ್ರಿಯಾ ಮತ್ತು ಜರ್ಮನಿ ರಾಷ್ಟ್ರಗಳ ಪರವಾಗಿ ಪೋಲೆಂಡಿನಲ್ಲಿ ಒಂದು ರೀಜನ್ಸಿಯನ್ನೇ ಏರ್ಪಡಿಸಲಾಯಿತು

ಭಿನ್ನಾಭಿಪ್ರಾಯಗಳು

ಇಷ್ಟರಲ್ಲಿ ಪೋಲೆಂಡಿನಲ್ಲಿ ತನ್ನ ರಾಷ್ಟ್ರೀಯತೆಯ ಬಗ್ಗೆ ಭಿನ್ನಾಭಿಪ್ರಾಯಗಳು ಉದಯಿಸಿದವು ಒಂದು ಪಂಗಡ ಜನರು ತಾವು ಜರ್ಮನಿಯ ಕಡೆಯೇ ಇರಬೇಕೆಂದು ಹೇಳಿದರು ಆದರೆ ಪ್ಯಾರಿಸ್ಸನ್ನು ಕೇಂದ್ರವನ್ನಾಗಿಟ್ಟುಕೊಂಡಿದ್ದ ಇನ್ನೊಂದು ಪಂಗಡವು ಪ್ರಾಸ್ಸಿಗ ಜಯವಾಗಲೆಂದು ಹಾರೈಸುತ್ತ. ಈ ಪಂಗಡಕ್ಕೆ ಪೋಲಿಷ್ ನ್ಯಾಷನಲ್ ಕಮಿಟಿ ಎಂದು ಹೆಸರಿಡಲಾಯಿತು.

ಮಾರ್ಷಲ್ ಸಿಲ್‌ಸಡ್ಮಿಯವರು ಎರಡನೆ ಪಂಗಡಕ್ಕೆ ಸೇರಿದವರಾಗಿದ್ದರು. ಮಾರ್ಷಲ್ ಪಿಲ್‌ಸಡ್ಸ್ಕಿಯವರು ೧೯೧೪ರಲ್ಲಿ ಗೆಲೀಷಿಯಾದಲಿ ಒಂದು ಯುವಸಗಿ ಸೈನ್ಯ ಮಾರ್ಷಲ್ ಸ್ಮಿಗ್ಲಿ ರಿಡ್ಸ್ ವನ್ನು ಏರ್ಪಡಿಸಿ ಆ ಪ್ರದೇಶವು ರಷ್ಯಾದ ಕಡೆಗೆ ಹೋಗುವಂತೆ ಪ್ರಯತ್ನ ನಡೆಸುತ್ತಿದ್ದರು. ಆದರೆ ೧೯೧೬ರಲ್ಲಿ ಅವರು ಆಸ್ಟ್ರಿಯಾ ಮತ್ತ ಜರ್ಮನಿಯ ಕಡೆಗೆ ಹೋರಾಡ ತೊಡಗಿದ್ದರು. ಅದೇ ವರ್ಷದ ಜುಲೈ ತಿಂಗಳಿನಲ್ಲಿ ಇವರ ಜರ್ಮನ್ ಅಧಿಕಾರವನ್ನು ಧಿಕ್ಕರಿಸಿ ಮಿತ್ರಮಂಡಳಿ ರಾಷ್ಟ್ರಗಳೊಡನೆ ಅಂದರೆ ಬ್ರಿಟನ್, ಫ್ರಾನ್ಸ್ ಮುಂತಾದವುಗಳೊಡನೆ ಸಂಧಾನ ನಡೆಸಲು ಪ್ರಾರಂಭಿಸಿದರು. ಆದರೂ ಕೂಡ ಅವರನ್ನು ಒತ್ತಾಯಪಡಿಸಿ ಮಧ್ಯ ಯೂರೋಪಿನ ರಾಷ್ಟ್ರಗಳ ಅಂದರೆ ಜರ್ಮನಿ ಆಸ್ಟ್ರಿಯಾಗಳ ಪರವಾಗಿಯೇ ಅವರು ಪೋಲೆಂಡಿನ ಯುದ್ಧಮಂತ್ರಿಯಾಗುವಂತೆ ಮಾಡಲಾಯಿತು. ಅವರೇ ಪೋಲೆಂಡಿನ ಆಡಳಿತ ನಡೆಸಬೇಕೆಂದು ನಿಷ್ಕರ್ಷೆಯಾಯಿತು ಅವರು ಗುಪ್ತವಾಗಿಯೇ ದೇಶದಲ್ಲೆಲ್ಲಾ ಬಹಳ ಪ್ರಚಾರಮಾಡಿ ೧೯೨೦ರೊಳಗೆ ದೇಶವನ್ನು ಸಂಪೂರ್ಣವಾಗಿ ತಮ್ಮ ಅಧೀನಕ್ಕೆ ತೆಗೆದುಕೊಂಡರು ಪುನಃ ಅವರು ಮಧ್ಯರಾಷ್ಟ್ರಗಳೊಡನೆ ಜಗಳವಾಡಿಕೊಂಡರು ಆದ್ದರಿಂದ ಅವರ ದಸ್ತಗಿರಿಯಾಗಿ ಜರ್ಮನಿಯಲ್ಲಿ ಬಂಧಿಸಲ್ಪಟ್ಟರು ಯುದ್ಧವು ಮುಗಿದ ಮೇಲೆ ಜರ್ಮನಿಯ ಕ್ರಾಂತಿಕಾರಕ ಅಧಿಕಾರಿಗಳ ಅವರನ್ನು ಬಿಡುಗಡೆ ಮಾಡಿದರು.

ಮಾರ್ಷಲ್ ಪಿಲ್‌ಸಡ್ಸ್ಕಿ

ಆ ಮೇಲೆ ಮಾರ್ಷಲ್ ಪಿಲ್‌ಸಡ್ಸ್ಕಿಯವರು ಪೋಲೆಂಡಿಗೆ ಹಿಂತಿರುಗಿ ಪೋಲೆಂಡಿನ ಸರ್ವಾಧಿಕಾರಿಯಾಗಿ ಚುನಾಯಿಸಲ್ಪಟ್ಟರು. ಅವರಿಗೆ ಸೈನ್ಯದ ಮೇಲ ಇದ್ದ ಪ್ರಭಾವ, ಅವರ ಕ್ರಾಂತಿಕಾರಕ ಕಾರ್ಯಕ್ರಮ ಇವೆಲ್ಲವೂ ಅವರ ಈ ಸ್ಥಾನಕ್ಕೆ ಬೆಂಬಲವಿತ್ತವು

ಮಾರ್ಷಲ್ ಪಿಲ್‌ಸಡ್ಸ್ಕಿಯವರು ಅಧಿಕಾರ ವಹಿಸಿದರೂ ಕೂಡ ಪೋಲೆಂಡ್ ದೇಶದ ಎಲ್ಲೆಯು ಯಾವುದು ಎಂಬುದ ಇನ್ನೂ ಸರಿಯಾಗಿ ನಿರ್ಧಾರವಾಗಿರಲಿಲ್ಲ ಆದ್ದರಿಂದ ಸರಹದ್ದಿನ ವ್ಯವಸ್ಥೆಯ ಬಗ ಸೋವಿಯಟ್ ರಷ್ಯಾವಿಗೂ ಪೋಲೆಂಡಿಗೂ ಕಾದಾಟಗಳು ನಡೆದವು ಪೋಲೆಂಡಿಗೆ ಫ್ರಾನ್ಸಿನ ಸಹಾಯವು ಒಂದಿತು ಕೊನೆಗೆ ಪೋಲೆಂಡಿಗೂ ರಷ್ಯಾವಿಗೂ ಒಪ್ಪಂದವಾಯಿತು.

ಪೋಲೆಂಡಿನ ಇತರ ಸರಹದ್ದಿನ ಪ್ರಶ್ನೆಗಳು ಸರಿಯಾಗಿ ಇತ್ಯರ್ಥವೇ ಆಗಲಿಲ್ಲ ಡ್ಯಾಂಜಿಗ್ ಮತ್ತು ಪೋಲಿಷ್ ಕಾರಿಡಾರಿನ ಪ್ರಶ್ನೆಯಂತೂ ಇತ್ಯರ್ಥಕ್ಕೆ ಬರಲಿಲ್ಲ ಆದರೆ ಲೀಗ್ ಆಫ್ ನೇಶನ್ಸ್‌ ತೀರ್ಮಾನದಂತೆ ಡ್ಯಾನ್‌ಜಿಗ್ಗು ಪೋಲೆಂಡಿನ ಆಡಳಿತಕ್ಕೆ ಸೇರಿದ ನಗರವೆಂದ ನಿರ್ಧರಿಸಲ್ಪಟ್ಟಿತು. ಇಾ.

ಅಸಾರವಾದ ಬೆಲೆಯ ಸಮ್ಮಾನದ ಉಡುಗೊರೆಗಳು!



ಬಹಳಕಾಲ ಬಾಳುವ ಸರಿಯಾದ ಸಮಯ ಸೂಚಿಸುವುದು

ಇತರ ಅನೇಕ ನಮೂನೆಗಳನ್ನು ನಮ್ಮ ಧರ್ಮಾರ್ಥದ ಕೆಟಲಾಗಿನಿಂದ ಆರಿಸಿರಿ

ವೆಸ್ಟ್ ಎಂಡ್ ವಾಚ್ ಕೊ., ಬೊಂಬಾಯಿ ಮತ್ತು ಕಲ್ಕತ್ತಾ.

WEST END WATCH Co

BOMBAY CALCUTTA

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಕಡಿಮೆ ಖರ್ಚು
ಬೆಂಗಳೂರಿಗೆ ಬಸ್ಸು
ಮತ್ತು
ರೈಲುಚಾರ್ಜು ಕೂಡಾ
ರೂ 5-9-0 ಮಾತ್ರ!

ಮಂಗಳೂರಿನಿಂದ—
ಬೆಂಗಳೂರು--ತಿರುಪತಿ--ಮದರಾಸು.
ಇತ್ಯಾದಿ ಸ್ಥಳಗಳಿಗೆ ಹೋಗಲು ಅತ್ಯನುಕೂಲವಾದ ಸರ್ವಿಸುಗಳ ವ್ಯವಸ್ಥೆ ಮಾಡಲಾಗಿದೆ

ಅತಿ ತೀವ್ರಪ್ರಯಾಣ
ಬೆಂಗಳೂರಿಗೆ
ಬರೇ 14 ತಾಸುಗಳೊಳಗೆ
ತಲ್ಪುವ ಏರ್ಪಾಡು

1) ಮಂಗಳೂರಿನಿಂದ ಬೆಂಗಳೂರಿಗೆ ಹೋಗುವವರು ಮಂಗಳೂರಿನಿಂದ ಬೆಳಿಗ್ಗೆ 5-15A M ಗೆ ಹೊರಡುವ ನಮ್ಮ ಮೋಡರ್ನ್ ಮೋಟಾರ್ ಸರ್ವಿಸಿನಲ್ಲಿ ಹೊರಟು 11A M ನವಳಗೆ ಮಡಿಕೇರಿಗೆ ತಲಪಿ, ಅಲ್ಲಿಂದ ಕೂಡಲೇ ಹೊರಟ ಮೈಸೂರು ರೈಲ್ವೆ ಸ್ಟೇಶನಿಗೆ 3-15P M ನವಳಗೆ ತಲಪಿ ಮೈಸೂರಿನಿಂದ 11 M ಗೆ ಹೊರಡುವ ಬೆಂಗಳೂರು ಮೈಲ್ ಟ್ರೈನಿನಲ್ಲಿ ಹೊರಟು ಸಂಜೆ 7-20P M ನವಳಗೆ ಬೆಂಗಳೂರಿಗೆ ತಲಪಬಹುದು ಮಂಗಳೂರಿನಿಂದ ಮೈಸೂರಿಗೆ ಬಸ್ಸು ಚಾರ್ಜು ರೂಪಾಯಿ 4-0-0 ಮತ್ತು ಮೈಸೂರಿನಿಂದ ಬೆಂಗಳೂರಿಗೆ ಮೈಲು ಟ್ರೈನು ಚಾರ್ಜು ರೂ 1-9-0 ಕೂಡಾ ಚಾರ್ಜು ರೂಪಾಯಿ 5-9-0 ಮಾತ್ರ

2) ಮಂಗಳೂರಿನಿಂದ ತಿರುಪತಿಗೆ ಹೋಗುವವರು, ಮೈಸೂರಿನಿಂದ ರೈಲುಚಾರ್ಜ ರೂ 5-11 0ನ್ನು ಕೊಟ್ಟು ತಿರುಪತಿಗೆ ಪ್ರಯಾಣ ಮಾಡಬಹುದು

3) ಮಂಗಳೂರಿನಿಂದ ಮದ್ರಾಸಿಗೆ ಹೋಗುವವರು ಮಡಿಕೇರಿ, ಮೈಸೂರು ಬೆಂಗಳೂರು ಇತ್ಯಾದಿ ಮನೋರಂಜಕ ಸ್ಥಳಗಳನ್ನು ನೋಡಿ ಪರ್ಯಾನಂದಭರಿತರಾಗಿ ಬೆಂಗಳೂರಿನಿಂದ 9P M ಗೆ ಬಿಡುವ ಟ್ರೈನಿನಲ್ಲಿ ಹೊರಟು ಮರುದಿನ ಬೆಳಿಗ್ಗೆ ಮದ್ರಾಸಿಗೆ ತಲಪಬಹುದು-ಬೆಂಗಳೂರಿನಿಂದ ಮದ್ರಾಸಿಗೆ ಚಾರ್ಜ ರೂ 5-2-0 ಮಾತ್ರ!

ಬಸ್ ಪ್ರಯಾಣವು

ಅತೀ ಸುಖಕರ — ನಿರಾಯಾಸಕರ — ಮನೋಲ್ಲಾಸಕರವಾಗಿದೆ

ಊರುಗಳ ಬದಲಾವಣೆ — ನೋಟಗಳ ಬದಲಾವಣೆ — ಜನತೆಯ ಸಂಪರ್ಕ — ಆಹಾರದ ಅನುಕೂಲತೆ

ಇವೆಲ್ಲವೂ ಬಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವವು

JOINT MANAGERS,

The Combined Booking Agency, MANGALORE

The Joint Booking Office, KODIALBAIL.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ವಾಯುಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟೆ ಬಜಾರ್, ಮಂಗಳೂರು

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ ಚಾರ್ಜು ಪ್ರತ್ಯೇಕ)

ಪಿ ಸಿ.ಎ. ಅಂಡ್ ಕೋ,
ಆಯುರ್ವೇದಿಕ ಸಮಾಜ, ಪೆರಿಡೇಪಿ,
P O. Peridepi (ನೆಲ್ಲೂರು ಜಿ.)

ಅತ್ಯಾಶ್ಚರ್ಯಕರವಾದ ಕನ್ನಡಿ!

ಯಾವುದೇ ವಯಸ್ಸಿನವನಾದರೂ ಮನುಷ್ಯನು ಈ ಕನ್ನಡಿಯನ್ನು ನೋಡಲು ಸಾಧ್ಯವಿದೆ ಕಳವು ಆಗಿರುವ ಸಾಮಾನ, ಅಸ್ವಸ್ಥತೆಯಿಂದ ಗುಣವಾಗದಿರುವಿಕೆ, ಮುಂದೆ ಸಂಭವಿಸಬಹುದಾದ ದುಃಖಗಳು ಮತ್ತು ಅವುಗಳಿಂದ ತಪ್ಪಿಸಲು ಉಪಾಯ, ಭೂಮಿಯಲ್ಲಿ ಇಟ್ಟಿರುವ ಹಣದಪತ್ತೆ, ಯಾವುದೇ ಕಷ್ಟತರವಾದ ಕೆಲಸಗಳು ಸಾಧ್ಯವಾಗುವಿಕೆ, ನೌಕರಿ, ಕೋರ್ಟುಕಚೇರಿ ಕೆಲಸಗಳಲ್ಲಿ ಯಶ, ಪರೀಕ್ಷೆ ಮುಂತಾದ ಕೈಕೊಂಡ ಕೆಲಸಗಳಲ್ಲಿ ಯಶಸ್ಸು ಉಂಟಾಗುತ್ತದೆ. ಸ್ವರ್ಗಸ್ಥರಾದ ತಂದೆತಾಯಿಗಳನ್ನು ಮತ್ತು ಆಪ್ತಮಿತ್ರರನ್ನು ಮತ್ತು ಸ್ವಪ್ನದಲ್ಲಿ ನೋಡಬೇಕೆಂಬ ವಸ್ತುಗಳನ್ನು ಇದರಲ್ಲಿ ಕಾಣಬಹುದು

ಬೆಲೆ ಬರೇ ೨॥ ಪೌಂಡು ಮತ್ತು ಟಪ್ಪಾಲು ಖರ್ಚು ಬೇರೆ ಇದು ನಿಜವಲ್ಲವೆಂದ ತೋರಿಸಿಕೊಟ್ಟಲ್ಲಿ ಬೆಲೆ ವಾಪಸು. ನಿಮ್ಮ ಪತ್ರ ಚೆನ್ನಾಗಿ ಬರೆಯಿರಿ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಸಿಕ್ಕುವ ಸ್ಥಳ —

American Mesmerism House,
P B. No. 27 P. M. H. Amritsar (India)

Date15-9-1939 ಬಿಡಿ ಸಂಚಿಕೆ ಒಂದಾಣೆ Regd. No. M 3406

ಸ್ವದೇಶಾಭಿಮಾನಿ

ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2-13-0

ಸಂಪುಟ 33] ತಾರೀಕು 15-9-1939 [ಸಂಚಿಕೆ 87

YOUR DAUGHTER'S MARRIAGE MADE EASY

GIRLS are more or less Lumpsum Liabilities unlike the BOYS who are Instalment Liabilities. You can not only convert Lumpsum Liabilities into Instalment Liabilities, but also guarantee the PURPOSE through Policies in

THE BOMBAY LIFE ASSURANCE CO., LIMITED

For details, please consult:-

KOCHIKAR BROTHERS LTD.,
Madras Branch Secretaries,
Bombay Life Building,
Sir Lalubhai Samaldas Road,
Gandhi Nagar, UDIPI.

OR ANY OF THEIR FOLLOWING OFFICES:—

Post Box No. 337 MOUNT ROAD, MADRAS
Visweshwarapuram Circle BANGALORE CITY
Charni Road, Girgaum, BOMBAY NO. 4
Car Street MANGALORE
Puthiyara, CALICUT
Central Station Road, TRIVENDRUM

MAKE LIFE WORTH-LIVING!

Indigestion — Insomnia — Dry Cough— Nervousness — Weak Heart &c.,
these make you wiery of Life!

CONSULT US AND BUY YOUR LIFE'S HAPPINESS!

Oils — that cool the brain and induce sleep.
Lehas — that build-up your wasted system.
Asavas = that regenerate your jaded nerves.

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು - ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ— ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಶಕ್ತಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani Estd 1906

ಸಂಪುಟ ೩೩ 8 ತಾರೀಕು ೨೨—೯—೧೯೩೯ (22—9—1939) 8 ಸಂಚಿಕೆ ೩೮

ಯೂರೋಪಿನ ರಣರಂಗ

ಪೋಲೆಂಡಿನ ಸಮರಸನ್ನಾಹ

ಇಟಲಿಯು ತಾಟಸ್ಥ್ಯಕ್ಕೆ ಕಾರಣವೇನು?

ಶತ್ರುಗಳ ರಕ್ತದಲ್ಲಿ ಹಿಟ್ಲರನು ಕೈತೊಳೆದನು

ವರ್ಕಿಂಗ್ ಕಮಿಟಿಯ ಮಹತ್ವವಾದ ನಿರ್ಣಯ

ಅಯೋಷೆ (ಸಣ್ಣ ಕತೆ)

ಕಳೆದ ಮಹಾಯುದ್ಧದ ವಿವರ

ಗಣೇಶ ಚತುರ್ಥಿ

ಫ್ರೆಂಚ ಜರ್ಮನರ ಅಭೇದ್ಯ ದುರ್ಗಗಳು

ಗಾಂಧಿಯವರ ಪ್ರಕಟಣೆ

ಅಗ್ರಲೇಖ

ನೋಟಗಳು, ಜಿಲ್ಲಾ ಸಮಾಚಾರ ಇತ್ಯಾದಿ.

ಬ್ರಿಟಿಷ್ ರಾಜಕುಮಾರಿ
ಎಲಿಜಬೆತ್ ಮತ್ತು ಮಾರ್ಗರೆಟ್ ರೋಸ್.

ಸಚಿತ್ರ ವಾರಪತ್ರಿಕೆ

ನೋಟಗಳು!

ಕೆಲದಿನಗಳಿಂದ ನಡೆಯುತ್ತಿರುವ ಘಟನೆಗಳೆಲ್ಲಾ ಹೆಚ್ಚಾಗಿ ಹಿಂದಿನ ಊಹನೆಗಳಿಗೆ ತೀರಾ ವಿಪರೀತವಾಗಿ ಸಂಭವಿಸಿರುವವು!

ಕೋಕನಾಡಿನಲ್ಲಿ ಯುದ್ಧದ ಭಯದಿಂದ ವ್ಯಾಪಾರಿಗಳು ಆಹಾರ ಸಾಮಗ್ರಿಗಳಿಗೆ ಕ್ರಯ ಹೆಚ್ಚಿಸಿದರು. ವ್ಯಾಪಾರಿಗಳು ಹೀಗೆ ಮಾಡಬಾರದಾಗಿ ಎಚ್ಚರಿಸಲು ಒಬ್ಬನನ್ನು ಬೀದಿಗಳಲ್ಲಿ ಕೂಗಿ ಹೇಳಲು ಕಳುಹಿಸಿದರು. ಆತನು ಬೇಗನೇ ದಂಗೆಯಾಗುವುದೆಂದೂ, ಅಂಗಡಿ ಸುಲಿಯು ಲಾಗುವುದೆಂದೂ ಕೂಗಿ ಹೇಳತೊಡಗಿದನು. ಹೇಗಿದ್ದರೂ ಕಡೆಗೆ ಆತನನ್ನು ಸೆರೆಯಲ್ಲಿ ಹಾಕಿ, ಸರಕಾರವು ಈ ಅನಾಹುತವನ್ನು ತಪ್ಪಿಸಿಕೊಂಡಿತು!

ಇದು ಒಬ್ಬ ಬೀದಿವಾಲನ ಕುರಿತು ನಡೆದ ಒಂದು ಘಟನೆ!

ಗಾಂಧಿಜಿಯವರಿಗೂ ಈ ವಾರದಲ್ಲಿ ದೊಡ್ಡದೊಂದು ಅಪಜಯ ವಾಯಿತು! ಬ್ರಿಟಿಷ್ ಸರಕಾರಕ್ಕೆ ಶರತವಿಲ್ಲದೆ ಸಹಾಯ ಕೊಡಬೇಕೆಂಬ ಅವರ ಮಾತಿಗೆ ವರ್ಕಿಂಗ್ ಕಮಿಟಿಯು ಮನ್ನಣೆ ಕೊಡದೆ, ತೆಗೆದು ಹಾಕಿತು!

ಸುಬಾಸ ಬೋಸರು, ವಾರ್ಧಾಕ್ಕೆ ಬಂದವರು, ನಮ್ಮ ಹಿಂದಿನ ಕೃತ್ಯಗಳನ್ನೆಲ್ಲಾ ಮರೆತು ಭವಿಷ್ಯದ ನಿರ್ಮಾಣಕ್ಕಾಗಿ ಒಂದಾಗುವ ಎಂದು ಹೇಳಿದರು!

ನೆಹರುಗಳು, ದೂರದ ಚೈನದಿಂದ, ಅಪೇಕ್ಷಿತರಾಗಿ, ಬಂದು ಕಮಿಟಿಯ ಸದಸ್ಯತೆಗೂ ಆರಿಸಲ್ಪಟ್ಟದ್ದು ಮಾತ್ರವಲ್ಲದೆ, ಬ್ರಿಟಿಷ್ ಸರಕಾರಕ್ಕಾದರೂ ಅಪೇಕ್ಷಿತವಾಗಿದ್ದ ರೀತಿಯ ಪ್ರಕಟಣೆಯೊಂದನ್ನು ಹೊರಡಿಸಿದರು!

ಈ ವಾರದಲ್ಲಿಯೇ ಸುಬಾಸಬೋಸರು ಒಂದು ಅವಾಚ್ಯವೂ ನಿಂದನೀಯವೂ ಆದ ಮಾತನ್ನು ಹೇಳಿದರು!

ಗಾಂಧಿಜಿಯವರ ಆರೋಗ್ಯವು ಚೆನ್ನಾಗಿಲ್ಲದಿರುವುದರಿಂದಲೂ, ಪ್ರಾಯವು ಮುದಿಯಾದುದರಿಂದಲೂ, ಭಾರತವು ಸ್ವಾತಂತ್ರ್ಯ ಸಂಗ್ರಾಮಕ್ಕೆ ತಯಾರಾಗಿದೆಯೇ ಇಲ್ಲವೋ' ಎಂಬ ಕುರಿತು ಅವರ ನಿರ್ಧಾರವು ಮಾನ್ಯಮಾಡತಕ್ಕದ್ದಲ್ಲವೆಂದು ಬೋಸರ ಹೇಳಿಕೆ

ಬೋಸರು ಈಗಲೂ ಕೂಡಾ ಬ್ರಿಟಿಷ್ ಸರಕಾರಕ್ಕೆ 'ಕಡೆಯನುಡಿ' (Ultimatum) ಕೊಡುವ ಅಭಿಪ್ರಾಯದಲ್ಲಿ ಅಚಲರಾಗಿದ್ದಾರೆ.

ಕೆಲವು ವಿಚಾರವಂತರು ವಾರ್ಧಾದ ನಿರ್ಣಯವನ್ನು ಬಹಳ ಸಮಯೋಚಿತವಲ್ಲವೆಂದೂ, ಆ ವಿಷಯದಲ್ಲಿ ಗಾಂಧಿಜಿಯವರಿಗಾಗಿ ಅಪಜಯವು ಒಂದು ವಿಶೇಷ ರೀತಿಯದ್ದಾಗಿಯೂ ಹೇಳಿದರು.

ವಿ. ಎಸ್. ಶಿವಸ್ವಾಮಿಯವರು, ಇಂದು ಯಾವ ಶರತವನ್ನು ಹಾಕುವುದೂ, ಯೋಗ್ಯವಲ್ಲವೆಂದೂ, ಬುದ್ಧಿವಂತಿಕೆಯಲ್ಲವೆಂದೂ ಹೇಳುತ್ತಾರೆ. ಮುಸ್ಲಿಂ ಲೀಗು, ಹಿಂದೂ ಮಹಾ ಸಭಾ, ನರೇಂದ್ರ ಮಂಡಳ ಮೊದಲಾದ ಬೇರೆ ಬೇರೆ ಸಂಗಡಗಳಿರುವಾಗ, ಅವುಗಳೆಲ್ಲವುಗಳಿಗೂ ಬೇರೆ ಬೇರೆ ಗೊತ್ತುಗುರಿಗಳಿರುವಾಗ, ಕಾಂಗ್ರೆಸು ರಾಷ್ಟ್ರದ ಪರವಾಗಿ ಒಂದು ನಿರ್ಧಾರದ ಶರತವನ್ನು ಹೇಳುವುದು ಸುವಿಚಾರವಲ್ಲವೆಂದು ಅವರ ಊಹನೆ!

ನೋಟಿಸು

ಕಾಸರಗೋಡು ಡಿ। ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 141/1939

ಶಿವರಾಮಯ್ಯ — ವಾದಿ

ಮತ್ತು

1 ಮಹಾದೇವ ಸಾಲೋಂಕರ್ ಶೇರಮ್ಮ ಲಿಂಗಪ್ಪನಾಯ್ಕರ ಮಗ
2 ದೇವಕಿ ವೆಂಕಟೇಶ ನಾಯ್ಕರ ವಿಧವೆ, ಕಾಸರಗೋಡು ತಾಲ್ಲೂಕು ಮೈರೆಗ್ರಾಮದ ಶೇಣಿಯಲ್ಲಿರುವವರು — ಪ್ರತಿವಾದಿ 1-2

ರಿಜಿಸ್ತ್ರಿ ಆದವು ದಸ್ತಾವೇಜಿನ ಬಡ್ಡಿಯ ರೂಪಾಯಿ 108-0 2ರ ವಸೂಲಿ ಕುರಿತು ವಾದಿಯು ದಾಖಲುಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 30-9-1939ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿದೆ ಆ ಕುರಿತು ಮೇಲೆ ಕಾಣಿಸಿದ ಪ್ರತಿವಾದಿರ ಆಕ್ಷೇಪವಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸುವದಾಗುತ್ತದೆ.

ಕಾಸರಗೋಡು, 19-9-39 — **C Rama Rao**, ವಾದಿಕಡೆ ವಕೀಲ.

Notice

In the Court of the District Munsif of Karkal

S C No 32 of 1939

Between
A Padmanabha Sharma — Plaintiff
and
B S Narayana Rao — Defendant

To the defendant B S Narayana Rao son of B Shanker Rao Saraswath Brahmin Exclerk of the Dt Educational Council Mangalore now residing in Kundapore Town Kundapore Taluk

Take notice that the plaintiff above named as assignee of the demand promissory note executed by you in favour of one K Narayana Rao of Karkal has filed a suit against you to recover Rs 113 7 2 in the said Court and the same is posted to 23 10 1939 for final hearing You are hereby informed that you may appear either in person or by pleader on the said date at 10 A M before the said Court and contest the some failing which the said suit will be decided declaring you exparte

Karkal dated 19-9 1939. — **A N S Achar**, *Pleader for Plaintiff*

Wanted

Wanted one Inspector, two Organisers and Agents in south Kanara Apply stating previous experience to.

The Bombay Co-operative Insurance Society Ltd.,
Office for Mysore, Coorg and South Kanara;
'Asiatic Building', Kempe Gowda Road, Bangalore city.

ಒಂದು ರುಚಿಕರವಾದ **ಪಾನೀಯ**
ತಂಪಾದ, ಪೋಷಿಸುವ ಮತ್ತು ಸಂರಕ್ಷಿಸುವ

ತಣ್ಣಗಿಂದ 'ಓವಲ್ಟಿನ್' ಪಾನೀಯವನ್ನು ಒಂದು ಗ್ಲಾಸ್ ತಣ್ಣಗಿನ ಹಾಲಿಗೆ ಎರಡು ಚಮಚೆಯಷ್ಟು 'ಓವಲ್ಟಿನ್'ನ್ನು ಬೆರಸಿ ಚನ್ನಾಗಿ ಕದಡಿಸಿ ಕೂಡಲೇ ತಯಾರಿಸಬಹುದು. ಇದರ ಗುಣವು ಮೆಚ್ಚುಗೆಯ ಪಾನೀಯ ಮಾತ್ರವಲ್ಲದೆ ದೇಹವನ್ನು ಪೋಷಿಸಿ ಬಲವನ್ನೂ ಧಾತುವನ್ನೂ ವೃದ್ಧಿ ಮಾಡುತ್ತದೆ

ಒಂದು ಗ್ಲಾಸ ತಂಪಾದ 'ಓವಲ್ಟಿನ್'ನ್ನು ಇಂದೇ ಪರೀಕ್ಷಿಸಿರಿ 'ಓವಲ್ಟಿನ್' ತಣ್ಣಗಾಗಿ ಯಾ ಬಿಸಿಯಾಗಿ ಸೇವಿಸಿದರೂ ಒಂದೇ ತೆರನಾಗಿರುತ್ತದೆ ಅದು ಮಾಗಿ ನನಹಂಕಿ ಹುರಿದ ಬಾರ್ಲಿ, ದನದ ಹಸಿಹಾಲ ಅಮೂಲ್ಯವಾದ ಪ್ರಾಕೃತಿಕ ವಿಟಮಿನ್ (ಆಹಾರ ಸತ್ವ) ಮತ್ತು ಅನೇಕ ರಂಜಕಗಳಿಂದ ಕೂಡಿದ ಪೌಷ್ಟಿಕ ಆಹಾರವಾಗಿರುತ್ತದೆ ಓವಲ್ಟಿನ 'ಸೊಬನೆ ಗುಣದಲ್ಲಿಯೂ, ಪರಿಮಾಣದಲ್ಲಿಯೂ, ಬೆಲೆಯಲ್ಲಿಯೂ ಇದರ ಹೋಲಿಕೆಯ ಬೇರೆ ಪಾನೀಯಗಳೇ ಇಲ್ಲ ಬದಲಿ ಪಾನೀಯಗಳ ಗೊಡವೆಯನ್ನೇ ಬಿಡಿ

'ಓವಲ್ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯ'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು **ಜೇಮ್ಸ್ ರೈಟ್ ಲಿಮಿಟೆಡ್,**
ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ.

'ಓವಲ್ಟಿನ್' ಬಿಸ್ಕುಟುಗಳು ರುಚಿಕರ, ಜೀರ್ಣಕ್ಕೆ ಮತ್ತು ಪೋಷಣಯುಕ್ತವಾದವು ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕುಟುಗಳು ಅವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ ನಾಲ್ಕು ಔನ್ಸು ಮತ್ತು 8 ಔನ್ಸು ಪೆಕೆಟುಗಳಲ್ಲಿಯೂ ಒಂದು ರಾತ್ತಲಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OVJ50/39

ಒಂದು ಸಣ್ಣ ಕತೆ

ಆಯೇಷಾ!

ಮಲಬಾರಿನಲ್ಲಿ ಮಾಪಿಳಾ ದಂಗೆಯೆದ್ದು, ಇಡಿಗೆ ನಾಡೇ ಗೊಂದಲಗೊಂಡ ಕಾಲವದು! ದೂಡಿನ ಅಬ್ದುಲ್ ರಹಿಮಾನನೆಂಬವನು ದಂಗೆಕಾರರ ಮುಖಂಡರಲ್ಲಿ ಬಹಳ ಧೈರ್ಯಶಾಲಿಯೂ, ಸಾಹಸಿಯೂ, ಚತುರನೂ ಎಂದು ಪ್ರಸಿದ್ಧನಾಗಿದ್ದನು. ದುಂಡಗಾಗಿದ್ದ ಮುಖ, ಕುಳ್ಳನ ಶರೀರ ಇತರ ಮಾಪಿಳೆಯವರಂತೆ ತಲೆಬೋಳಿಸದೆ, ಬೆಳಸಿದ್ದು ಭುಜದಲ್ಲಿ ಹರಡಿದ್ದ ಕಪ್ಪು ಕೂದಲ ರಾಶಿ, ಎದುರುಬಂದವರನ್ನು ಕಾಠಿಣ್ಯತೆಯಿಂದ ಇರಿಯುವಂತಿದ್ದ ಸಣ್ಣವೂ ವಿಶಾಲವೂ ಆಗಿದ್ದ ಕೆಂಪು ಕಣ್ಣುಗಳು, ಇವುಗಳಿಂದ ಅತನು ಒಬ್ಬ ಭಯಾನಕನಾದ ಅಸಾಮಾನ್ಯ ವ್ಯಕ್ತಿಯೇ ಆಗಿದ್ದನು. ಅಧಿಕಾರಿಗಳಿಗಾಗಲಿ, ಪೋಲೀಸರಿಗಾಗಲಿ, ಗುಪ್ತಚಾರರಿಗಾಗಲಿ ಅತನ ಹೆಸರು ಮಾತ್ರ ಕೇಳಿ ಗೊತ್ತೇ ವಿನಾ ಅತನನ್ನು ಕಂಡು ಹಿಡಿದುಕೊಳ್ಳುವುದು ಸಾಧ್ಯವಾಗಲಿಲ್ಲ! ದಂಗೆಯ ಆರಂಭ ಕಾಲದಲ್ಲಿಯೇ ಅತನು ಪ್ರಸಿದ್ಧಿಗೆ ಬಂದಿದ್ದನು. ಆ ಮೇಲೆ ಮಲಬಾರಿನ ನೂರಾರು ಹಳ್ಳಿಗಳಲ್ಲಿ, ನಗರ, ಗ್ರಾಮಗಳಲ್ಲಿ, ಗಿರಿಗಹ್ವರಗಳಲ್ಲಿ ಎಲ್ಲೆಲ್ಲಿಯೋ ವಾಸಿಸುತ್ತಿದ್ದನು. ಇಂದು ಒಬ್ಬ ಸರಕಾರೀ ಅಧಿಕಾರಿಯನ್ನು ಕೊಂದನೆಂಬ ವಾರ್ತೆ ಬರುತಿತ್ತು. ಇನ್ನೊಮ್ಮೆ ಒಬ್ಬ ಹಿಂದೂ ಶ್ರೀಮಂತನ ಮನೆಯನ್ನು ಸುಲಿಗೆ ಮಾಡಿದ ಸುದ್ದಿ ಕೇಳುತಿತ್ತು, ಅದರೆ, ಅವನಲ್ಲಿ ಒಂದು ಹೊಗಳತಕ್ಕಂಥಾದ ಗುಣವಿತ್ತು, ಅತನು ಎಂದೂ ನಿರಪರಾಧಿಗಳನ್ನು ಕೊಲ್ಲುತ್ತಿರಲಿಲ್ಲ, ಅನ್ಯ ಜಾತಿಯ ಹಿಂದುಗಳನ್ನು ಬಲಾತ್ಕಾರದಿಂದ ತನ್ನ ಜಾತಿಗೆ ಸೇರಿಸುತ್ತಲೂ ಇರಲಿಲ್ಲ. ಹೇಗಿದ್ದರೂ ಅತನ ಮನಸ್ಸು ಮಾತ್ರ ಕ್ರಿಯೆಗಳೆಲ್ಲವೂ ದಂಗೆಯ ಕಾರ್ಯಗಳಲ್ಲಿಯೇ ತಲ್ಲೀನವಾಗಿದ್ದುವು. ಮಲಬಾರಿನ ಎಲ್ಲೆಡೆಗಳಲ್ಲಿಯೂ, ನೆಲೆಸಿದ್ದ ದಂಗೆಗಾರರಿಗೆ, ಅತನು ಎಲ್ಲಾ ಬಗೆಯ ಸನ್ನಾಹಗಳನ್ನೂ ಒದಗಿಸಿ ಕೊಡುತ್ತಿದ್ದನು.

ಇಂತಹ ಘೋರ ಗೊಂದಲದ ಕಾಲದಲ್ಲಿ, ತಳಕಾರದವರು ಸಯ್ಯದ್ ಅಬ್ಬಾಸನಿಗೆ ಅಲ್ಲಿನ ದಂಗೆಗಾರರನ್ನು ಗೊತ್ತು ಹಚ್ಚುವ ಕಾರ್ಯವನ್ನು ಒಪ್ಪಿಸಿ ಮಲಬಾರಿಗೆ ಕಳುಹಿಸಿದರು. ಸಯ್ಯದನು ದಂಗೆಗಾರರ ಕೇಂದ್ರಸ್ಥಳವಾಗಿದ್ದ ಮಲಪ್ಪುರಮಿನಲ್ಲಿಯೇ ಬಂದು ಉಳಕೊಂಡನು. ಅಬ್ದುಲ್ ರಹಿಮಾನನನ್ನು ಜೀವಂತನಾಗಲಿ ಕೊಂದಾಗಲಿ ಹಿಡಿದು ಸರಕಾರಕ್ಕೊಪ್ಪಿಸಲು ಅವನಿಗೆ ಸರಕಾರದ ಅಜ್ಞೆಯಾಗಿತ್ತು. ಅಲ್ಲಿಗೆ ಹೋದವನೇ ಸಯ್ಯದನು, ರಹಿಮಾನನ ಎಲ್ಲಾ ವಿಚಾರಗಳನ್ನೂ, ಅತನ ಸಾಹಸ ಕಥೆಗಳನ್ನೂ, ಚಲನವಲನಗಳನ್ನೂ ಸೂಕ್ಷ್ಮವಾಗಿ ಕೇಳಿ ಪರೀಕ್ಷಿಸಿ ತಿಳಿಯತೊಡಗಿದನು. ತನ್ನ ಕೆಳ ನೌಕರರನೇಕರನ್ನು ತಿರೂರಿನಲ್ಲಿ ಎಲ್ಲ ಬೀದಿಗಳಲ್ಲಿಯೂ ಸುತ್ತುತಿರುವಂತೆಯೂ ದಂಗೆಗಾರರ ಕುರುಹನ್ನು ಕಂಡು ಹುಡುಕುವಂತೆಯೂ ಹೇಳಿ ಕಳುಹಿಸಿದನು. ಕೆಲವು ದಿನಗಳಲ್ಲಿಯೇ ಸಯ್ಯದ ರಹಿಮಾನನು ಕಲ್ಲಿಕೋಟೆಯ ಸಮೀಪ ತನ್ನ ಪ್ರಣಯಿನಿಯಾದ ಆಯೇಷಳೆಂಬ ಸುಂದರಿಯೋರ್ವಳ ಮನೆಯಲ್ಲಿ ಇರುವುದಾಗಿ ಸುದ್ದಿ ಸಿಕ್ಕಿತು. ಕೆಲಜನ ಪೋಲೀಸರನ್ನು ಕರಕೊಂಡು ಕೂಡಲೇ ಆ ತರುಣಿಯ ಮನೆಯನ್ನು ಕಂಡುಹುಡುಕಲು ಅತನು ಅಲ್ಲಿಗೆ ತೆರಳಿದನು ಅತನು ಅಲ್ಲಿಗೆ ಮುಟ್ಟಬೇಕಾದರೆ, ಯಾರೋ ಆಕೆಗೆ ಈ ವಾರ್ತೆಯನ್ನು ತಿಳಿಸಿದುದರಿಂದ, ಅವರು ಬರುವುದಕ್ಕೆ ಒಂದು ತಾಸಿನ ಮೊದಲು ಆ ತರುಣಿಯು ಮನೆಬಿಟ್ಟು ಇನ್ನೆಲ್ಲಿಗೋ ಓಡಿಹೋಗಿರುವುದಾಗಿ ತಿಳಿದು ಬಂತು. ಸುತ್ತು ಮನೆಗಳನ್ನೆಲ್ಲಾ ಶೋಧಿಸಿದನು. ಅವರು ಆಯೇಷಾಳ ವಿಷಯ ತಮಗೇನೂ ತಿಳಿದಿಲ್ಲವೆಂದೂ, ಕೆಲದಿನಗಳ ಹಿಂದೆ, ನೆರೆಯ ಮನೆಯೊಂದರಲ್ಲಿ ಒಬ್ಬ ಸುಂದರ ತರುಣಿಯು ವಾಸವಾಗಿದ್ದಳೆಂದೂ ತಿಳಿಸಿದರು. ಎರಡು ದಿನಗಳ ತನಕ ಹುಡುಕಾಡಿ ಬೇಸರಗೊಂಡು, ಕಡೆಗೆ ಸಯ್ಯದನು ಮಲಪ್ಪುರಕ್ಕೆ ಹಿಂತಿರುಗಿದನು. ಸಯ್ಯದನ ಸಾವಿರಾರು ಹಂಚಿಕೆಗಳೂ ವಿಫಲವಾಗಿ ದಿನದಿಂದ ದಿನಕ್ಕೆ ಸಮಸ್ಯೆಯು ಮತ್ತಷ್ಟು ಬಿಕ್ಕಟ್ಟಾಗುತ್ತಾ ಬಂತು!

ಒಬ್ಬ ಹಿಂದೂ ಕಾನ್‌ಸ್ಟೇಬಲನು, ತಾನು ಉಳಕೊಳ್ಳುವ ಹೋಟೆಲಿನಲ್ಲಿ, ಕೆಲಸಮಾಡುತ್ತಿದ್ದ ಒಬ್ಬ ಅಸಾಧಾರಣ ಸುಂದರಿಯೋರ್ವಳನ್ನು ಕಂಡನು! ಅವಳ ರೂಪಕ್ಕೆ ಅತನು ಮರುಳಾಗಿ ಹೋದನು. ಆಕೆ ಒಬ್ಬ ನಾಯರ್ ಹುಡುಗಿಯಿರಬಹುದೆಂದು ಅತನು ತಿಳಿದಿದ್ದನು. ಒಮ್ಮೆ ಹೊಳೆಯ ದಂಡೆಗೆ ಆಕೆ ಸ್ನಾನಕ್ಕೆಂದು ಹೋಗುತಿದ್ದಾಗ, ಅತನೂ ಅವಳನ್ನು ಹಿಂಬಾಲಿಸಿ ಬಂದನು. ದಾರಿಯಲ್ಲಿ ಆಕೆಯ ಮೇಲೆ ತನಗಿರುವ ಪ್ರೇಮವನ್ನು ಬಿಚ್ಚಿ ಹೇಳಿದನು. ಅವಳ ಹತ್ತಿರ ಬಂದಾಗ ಮಾಪಿಳೆ ಹುಡುಗಿಯರಂತೆ, ಆಕೆಯು ಕಿವಿಯು ತೂತು ಮಾಡಿರುವುದನ್ನು ಕಂಡು ಅವನಿಗೆ ಸಂದೇಹವಾಯಿತು. ಬುದ್ಧಿಶಾಲಿನಿಯಾದ ಆಕೆ, ಅದನ್ನು ಕೂಡಲೇ ತಿಳಿದು ದಂಗೆಗಾರರಾದ ಮಾಪಿಳೆಯವರು ತನ್ನ ಮನೆಹೊಕ್ಕು ಸುಲಿಗೆಮಾಡಿ, ತನ್ನ ತಂದೆ ತಾಯಿಗಳನ್ನು ನಿರ್ದಯವಾಗಿ ಕೊಂದು, ತನ್ನನ್ನು ಬಲಾತ್ಕಾರದಿಂದ ಅವರ ಜಾತಿಗೆ ಸೇರಿಸಿದರೆಂದೂ, ತಾನು ಹೇಗಾದರೂ ಕಡೆಗೆ ಅವರ ಹಿಂಸೆಯಿಂದ ತಪ್ಪಿಸಿಕೊಂಡೆನೆಂದೂ ಅವನಿಗೆ ಕತೆಕಟ್ಟಿ ಹೇಳಿದಳು. ಪಾಪ! ಅವಳ ಅವಸ್ಥೆಗಾಗಿ ಮರುಕಪಟ್ಟವನಾದನು; ಆಕೆಯ ಸಾಹಸಕ್ಕೆ ಮೆಚ್ಚಿದನು. ಅದರೊಡನೆ ಅವನು ಸುಂದರಿಯಾದ ಅವಳೊಡನೆ ಒಡನಾಡ ಮಾತನಾಡಿ, ಕಡೆಗೆ ಅವರಿಬ್ಬರೂ ಅಲ್ಲಿಂದ ಹಿಂತಿರುಗಿದರು.

ಸಹಜವಾಗಿ, ಪೋಲೀಸರು ಒಂದೆರಡು ದಿವಸ ದಂಗೆಗಾರರ ಅನಾಚಾರಗಳನ್ನು ವರ್ಣಿಸುವ ಸಂದರ್ಭದಲ್ಲಿ ಈ ಹುಡುಗಿಯ ಕತೆಯನ್ನೂ ಆಕೆಯ ಸಾಹಸವನ್ನೂ ತನ್ನ ಗೆಳೆಯರಿಗೆ ಅತನು ವಿವರಿಸಿ ಹೇಳಿದನು. ಈ ವೃತ್ತಾಂತವನ್ನು ಕೇಳಿದ ಸಯ್ಯದನು ಆಕೆ ಆಯೇಷಳೇ ಇರಬಹುದೆಂದು ತಿಳಿದು, 'ಕೂಡಲೇ ಅವಳನ್ನು ಕರೆದು ತರಲು ಪೋಲೀಸರನ್ನು ಕಳುಹಿಸಿದನು. ಅವರು ಆಕೆಯನ್ನು ಬಂಧಿಸಿ ತಂದರು. ಆಯೇಷೆಯ ಮೂಲಕ ರಹಿಮಾನನ ವಿಷಯ ತಿಳಿದು, ದಂಗೆಯನ್ನು ಅಡಗಿಸಲು ಸುಲಭವಾಯಿತೆಂದು ಸಯ್ಯದನು ಹಿಗ್ಗಿ ಹೋದನು.

ಸಯ್ಯದನಲ್ಲಿಗೆ ಆಯೇಷೆಯನ್ನು ಇಬ್ಬರು ಪೋಲೀಸರು ಬಂಧಿಸಿ ತಂದರು. ಆಕೆ ಈ ವಿಷಯಗಳಿಂದೆಲ್ಲಾ ಏನೂ ಗಾಬರಿಗೊಂಡಂತೆ ಕಾಣಲಿಲ್ಲ. ಆಕೆಯನ್ನು ನೋಡಿದವರಿಗೆ ಒಂದು ವಿಶಿಷ್ಟ ಸ್ತ್ರೀಯೆಂದು ತಿಳಿಯುವಂತಿತ್ತು. ಸಯ್ಯದನು, ಆಕೆಯೊಡನೆ ಹಲವು ಪ್ರಶ್ನೆಗಳನ್ನೂ ಕೇಳಿದನು. ಕಲ್ಲಿಕೋಟೆಯಲ್ಲಿ ಮಾಪಿಳೆಯರ ದಂಗೆಯು 'ಆರಂಭವಾಗುವ ವಾರ್ತೆ ಕೇಳಿ ತಾನು ಇಲ್ಲಿಗೆ ಓಡಿಬಂದಿರುವುದಾಗಿ ಆಕೆ ಹೇಳಿದಳು.

'ನಿನಗೆ ತಿರೂರಿನ ಅಬ್ದುಲ್ ರಹಿಮಾನನ ಪರಿಚಯವಿದೆಯೋ?' ಎಂದು ಸಯ್ಯದನು ಪ್ರಶ್ನಿಸಿದನು.

'ಅತನ ವಿಷಯ ಕೇಳಿದ್ದೇನೆ ವಿಶೇಷವೇನೂ ತಿಳಿಯದವಂತೆ ಆಕೆ ಉತ್ತರವಿತ್ತಳು.

'ನೀವಿಬ್ಬರೂ ಪರಿಚಿತರೆಂದು ನಾನು ತಿಳಿದಿದ್ದೇನೆ!' ಅಧಿಕಾರಿಯು ಸ್ಪಷ್ಟವಾಗಿ ಹೇಳಿದನು.

ಆಯೇಷೆಯು ಒಮ್ಮೆ ನಕ್ಕಳು.'

'ಇದು ಬಹಳ ಚಮತ್ಕಾರದ ವಿಷಯವಾಗಿದೆ, ನಾನೀಗ ಹೇಳಿದ್ದು, ಅತನ ವಿಷಯ ಕೇಳಿದ್ದೇನೆಂದು ಮಾತ್ರ, ಅತನನ್ನು ನೋಡಿಯೂ ಮಾತಾಡಿಯೂ ಇಲ್ಲದವಳಿಗೆ ಅವನ ಪರಿಚಯವಾಗುವುದು ಸಾಧ್ಯವುಂಟೇ?' ತರುಣಿಯು ನಗುಮುಖದಿಂದ ಕೇಳಿದಳು.

'ಹಾಗಾದರೆ ನಿನಗೆ ಅವನ ಚನ್ನಾಗಿ ಪರಿಚಯವಿಲ್ಲವೆಂದು ತೋರುತ್ತದೆ' ಸಯ್ಯದನು ತಿರುಗಿ ಪ್ರಶ್ನೆಹಾಕಿದನು.

'ನನಗೆ ಅತನ ಪರಿಚಯವೇನೂ ಇಲ್ಲ' ಆಕೆ ಸ್ಪಷ್ಟವಾಗಿ ಹೇಳಿದಳು.

'ಹಾಗಾದರೆ, ನಿನಗೆ ರಹಿಮಾನನು ಒಂದು ಪತ್ರ ಬರೆದಿದ್ದನೆಂದು ತಿಳಿ' ಸಯ್ಯದನು ಹೇಳತೊಡಗಿದ 'ಅದು ಈಗ ನಮ್ಮ ಕೈವಶವಾಗಿದೆ.'

ಇದಕ್ಕೆ ಆಯೇಷೆಯು ಉತ್ತರ ಕೊಡಲಿಲ್ಲ. ಕಣ್ಣರಳಿಸಿ, ಏನೂ ಅರಿಯದವಳಂತೆ ಒಮ್ಮೆ ಸಯ್ಯದನನ್ನೇ ದಿಟ್ಟಿಸಿ ಕಡೆಗೆ ಮೌನಿಯಾದಳು.

'ಹಾಗಿದ್ದರೆ ನೀನು ಈ ಕುರಿತು ಹೇಳುವುದೇನು?' ಸಯ್ಯದನು ಪ್ರಶ್ನಿಸಿದನು.

'ನಾನು ಏನು ಹೇಳಬೇಕು?' ತರುಣಿಯು ತಿರುಗಿ ಪ್ರಶ್ನಿಸಿದಳು.

'ಇದರಿಂದ ನಿಮ್ಮಿಬ್ಬರೊಳಗಿನ ಪರಿಚಯವಿದೆಯೆಂದೂ ನಿನಗೆ ಅತನು ಯಾವಾಗಲೂ ಪತ್ರ ಬರೆಯುತಿದ್ದನೆಂದೂ ರುಜುವಾಯಿತು.'

'ಇದರಿಂದ ರಹಿಮಾನನು ಯಾರಿಗೋ ಪತ್ರ ಬರೆಯುತ್ತಿರುವನೆಂದು ನೀವು ರುಜುವಾತು ಪಡಿಸಬಹುದು, ಅದರೆ, ನನಗೆ ಓದಲೂ ಬರೆಯಲೂ ತಿಳಿಯುವುದೇ ಇಲ್ಲವಲ್ಲಾ!'

ಸಯ್ಯದನ ಯಾವ ಯುಕ್ತಿಯು ಸಫಲವಾಗಲಿಲ್ಲ. ಅತನು ಮತ್ತೂ ಆಕೆಯನ್ನು ಪ್ರಶ್ನಿಸಿ ಅವಳಿಂದಲೇ ವಿಚಾರಗಳನ್ನು ಹೊರಗೆಡಹಲು ಯತ್ನಿಸಿದನು.

'ಅದರಲ್ಲಿ ರಹಿಮಾನನು ಈಗ ಎಲ್ಲಾ ಗಂಡಾಂತರಗಳಿಂದ ತಪ್ಪಿಸಿಕೊಂಡಿರುವುದಾಗಿಯೂ, ನಿನ್ನನ್ನು ಒಂದು ಗುಪ್ತ ಸ್ಥಳದಲ್ಲಿ ಕಾಣಬೇಕಾಗಿಯೂ ಸೂಚಿಸಿರುವನು' ಆಯೇಷೆಯು ಆ ವಾರ್ತೆಯನ್ನು ಅಗ್ರಹದಿಂದ ಕೇಳುತ್ತಿದ್ದಳು. 'ನಿನ್ನ ತಮ್ಮನಲ್ಲಿದೆ ನೀನು ಮೊಯಿನ್ ಕುಟ್ಟಿಯನ್ನು ನಂಬಬಾರದೆಂದೂ, ಅತನು ಸರಕಾರಕ್ಕೆ ಶರಣಾಗಿ ಹೋಗಿ ಸಿಕ್ಕಿ, ಕ್ಷಮೆ ಬೇಡಿದನೆಂದೂ ಬರೆದಿತ್ತು. ಈ ವಿಷಯವು ಸಯ್ಯದನ ಉಪಾಯವಾಗಿತ್ತು.

'ಮೊಯಿನ್ ಕುಟ್ಟಿಯನ್ನು ಇದುವರೆಗೆ ಸರಕಾರವು ಹಿಡಿದಿಲ್ಲ' ಆಯೇಷೆ ಗರ್ವದಿಂದ ಹೇಳಿದಳು.

ಸಯ್ಯದನು ಸಂತೋಷದಿಂದ ನೆಗೆದನು.

'ಹಾಗಾದರೆ, ದಂಗೆಗಾರರು ಏನು ಮಾಡುತ್ತಿದ್ದಾರೆಂದು ನಿನಗೆ ಗೊತ್ತಿದೆ. ರಹಿಮಾನನು ಒಂದು ವಾರದಿಂದ ಇಲ್ಲಿಯೇ ಇದ್ದಾನಂತಲ್ಲಾ ಅವನ ವಿಷಯ ಏನು ತಿಳಿದಿಲ್ಲವೇ'

'ನನಗೆ ಯಾರ ವಿಷಯವೂ ಗೊತ್ತಿಲ್ಲ. ಜನರು ಹೇಳುತ್ತಿರುವ ಸುದ್ದಿಗಳನ್ನು ನಾನೂ ಕೇಳಿದ್ದೇನೆ. ಅಷ್ಟೇ ನನಗೆ ಗೊತ್ತು. ಆ ಮಾಪಿಳೆಯರು ಅದಷ್ಟು ಬೇಗ ಮುಗಿದರೆ, ಲೋಕದ ಮಹಾ ಕಂಟಕವು ಪರಿಹಾರವಾದಂತಾದೀತು.

'ಅವನನ್ನು ಹಿಡಿದು ಕೊಲ್ಲುವುದು ಒಳ್ಳೆಯದೆಂದು ನಿನ್ನ ಅಭಿಪ್ರಾಯವಲ್ಲವೇ?'

'ನಿಜವಾಗಿಯೂ' ಒಡನೆಯೇ ಅವಳು ಒಪ್ಪಿ ಉತ್ತರವ ಕೊಡುತ್ತಾಳೆ. ಅದರೆ ಅತನನ್ನು ಮಾಪಿಳೆಯರೆಲ್ಲರೂ ಬಹಳ ಪ್ರೀತಿಸುತ್ತಾರೆಂದೂ ಮಾಪಿಳೆಯವರಾಗಿ ಹುಟ್ಟಿದವರು, ಯಾರೂ ಅತನನ್ನು ಸರಕಾರಕ್ಕೆ ಹಿಡಿದೊಪ್ಪಿಸಲು ಯತ್ನಿಸಲಾರರೆಂದೂ ನಾನು ಕೇಳುತ್ತೇನೆ" ಆಕೆ ಆತ್ಮಶಾಂತಿಯಿಂದ ಹೇಳಿದಳು.

ಈ ಮಾತನ್ನು ಕೇಳಿ, ಸಯ್ಯದನಿಗೆ ಮತ್ತಷ್ಟು ಸಂಶಯವು ಹೆಚ್ಚಿತು. ಆಕೆಯನ್ನು ಸೆರೆಯಲ್ಲಿಟ್ಟರೆ ರಹಿಮಾನನನ್ನು ಹಿಡಿಯಲು ಸುಲಭವೆಂದು ಸಯ್ಯದನು ಯೋಚಿಸಿದನು. ಊರಲ್ಲೆಲ್ಲಾ ರಹಿಮಾನನ ಪ್ರಣಯಿನಿಯನ್ನು ಸರಕಾರವು ಸೆರೆಯಲ್ಲಿಟ್ಟಿರುವುದೆಂದೂ, ಬೇಗನೇ ಫಾಶಿಗೆ ಕೊಡಲಾಗುವುದೆಂದೂ ಸುದ್ದಿಯು ಹರಡಿತು. ಪ್ರಣಯಿನಿಯ ಸಲುವಾಗಿ ಎಲ್ಲ ಜೀವವನ್ನಾದರೂ ಅರ್ಪಿಸುವನೆಂದು ಸಯ್ಯದನು ಊಹಿಸಿದ್ದನು.

ಸಂತತಿಯಿಲ್ಲದೆ ಶಿಥಿಲಿಸಿಹೋದ ಸಂಬಂಧಿಯ ಮನೆಯೊಂದು ಸರಕಾರದ ಸ್ವಾಧೀನದಲ್ಲಿದ್ದಿತ್ತು. ಸುತ್ತು ಬಯಲು, ಬಯಲ ಮಧ್ಯದಲ್ಲಿ ಎರಡು ನಾಳಿಗೆಯ ಒಂದೇ ಮನೆ, ಆಯೇಷೆಯನ್ನು ಅಲ್ಲಿ ಇಟ್ಟು ಸುತ್ತಲೂ ಪೋಲೀಸರು ಕಾದಿದ್ದರು. ಇನ್ನು ಒಂದು ವಾರದೊಳಗೆ ಆಕೆಯನ್ನು ಗಲ್ಲಿಗೇರಿಸುವುದೆಂದು ಸರಕಾರವು ತೀರ್ಮಾನ ಮಾಡಿರುವುದೆಂದೂ ಸುದ್ದಿ ಹರಡಿತು.

ರಹಿಮಾನನ ಬುದ್ಧಿಕೌಶಲ್ಯವನ್ನು ತಿಳಿದಿದ್ದ ಸಯ್ಯದನು ಎಲ್ಲಾ ಪ್ರಾಮುಖ್ಯ ಸ್ಥಳಗಳಲ್ಲಿಯೂ ಬಹಳ ಭದ್ರವಾದ ಕಾವಲನ್ನಿಟ್ಟಿದ್ದನು. ಮೂರನೆಯ ದಿನ ರಾತ್ರೆ, ಆ ಮನೆಯ ಕಾವಲುಗಾರರಿಗೆ ಹೊರಗಿನ ಗುಂಪಿನವರೊಡನೆ ಭಯಂಕರ ಕಾದಾಟವಾದ ವಾರ್ತೆ ಬಂತು. ಅವರಲ್ಲಿ ಇಬ್ಬರು ಮಡಿದು, ಬಾಕಿಯವರು ಓಡಿಹೋದರು. ಇದರಿಂದ ಸಯ್ಯದನಿಗೆ ತನ್ನ ಹಂಚಿಕೆಯ ವಿಷಯದಲ್ಲಿ ಮತ್ತಷ್ಟು ಕುತೂಹಲವು ಹೆಚ್ಚಿತು! ಖಂಡಿತವಾಗಿಯೂ ರಹಿಮಾನನನ್ನು ಈ ಸಂಧಿಯಲ್ಲಿ ಹಿಡಿದು ಬಿಡಬೇಕೆಂದು ಅತನು ನಿಶ್ಚಯಿಸಿದನು. ಆ ದಿನವೇ ಸೆರೆಮನೆಗೆ ಹೋಗಿ ಆಯೇಷೆಯನ್ನು ಕಂಡಾಗ ಆಕೆ ಕುತೂಹಲವನ್ನು ಅಡಗಿಸಲಾರದವಳಾಗಿ 'ನೀವು ರಹಿಮಾನನನ್ನು ಹಿಡಿದಿರಾ?' ಎಂದು ಕೇಳಿದಳು.

'ನಿನಗೂ ಅವನಿಗೂ ಪರಿಚಯವು ಇಲ್ಲದೇ ಇರುವಾಗ, ಒಬ್ಬ ಮಾಪಿಳಾ ದಂಗೆಗಾರನು, ನಿನ್ನನ್ನು ಸೆರೆಯಿಂದ ಬಿಡಿಸಬೇಕೆಂದು ನೀನು ಯಾತಕ್ಕೆ ಹಾರೈಸುತ್ತೀ?' ಕೂಡಲೇ ಸಯ್ಯದನು ಪ್ರಶ್ನಿಸಿದನು.

'ಅವನ ಸಲುವಾಗಿ, ಒಬ್ಬ ನಿರಪರಾಧಿನಿಯಾದ ಹೆಂಗುಸನ್ನು ಸರಕಾರವು ಗಲ್ಲಿಗೇರಿಸುತ್ತಿದೆಯೆಂದು ಕೇಳಿ ಯಾವನಾದರೂ ಒಬ್ಬ ಅಭಿಮಾನವುಳ್ಳವನು ಸಹಿಸಲಾರದಂತೆ, ಅತನೂ ಯತ್ನಿಸುವನು. ಅತನು ಒಳ್ಳೆಯ ಗೌರವಸ್ಥನಿರಬೇಕು. ಅದಲ್ಲದೆ ಇದ್ದರೆ, ಒಬ್ಬ ಮಾಪಿಳಾ ಹೆಂಗಸನ್ನು ಮೃತ್ಯುಮುಖದಿಂದ ಜೀವವನ್ನು ಸರ್ಗಿಸಿಯಾದರೂ ಬಿಡಿಸಲು ಅತನು ಸಿದ್ಧನಾಗುತ್ತಿರಲಿಲ್ಲ' ಹೀಗನ್ನುವಾಗ ಆಕೆ ಆವೇಶಗೊಂಡಿದ್ದಳು.

ಮರುದಿನವೇ ಸಯ್ಯದನು, ದಂಗೆಗಾರರು ಆಯೇಷೆಯನ್ನು ಬಿಡುಗಡೆ ಮಾಡಲು ಯತ್ನಿಸುವುದರಿಂದ, ಬೇಗನೇ ಆಕೆಯನ್ನು ಗಲ್ಲಿಗೇರಿಸುವುದಾಗಿ ಸುದ್ದಿ ಹರಡಿದನು. ರಾತ್ರಿ ಹಗಲು ಅತನಿಗೆ ನಿದ್ರೆಯಿರಲಿಲ್ಲ. ಆ ದಿನ ತಿರೂರಿನಿಂದ ಸುಮಾರು ಎಪತ್ತು ಮೈಲುಗಳ ದೂರದೊಂದು ಸ್ಥಳದಿಂದ 'ಪೋಸ್ಟು ಮಾಡಿದ ಒಂದು ಪತ್ರವು ಅತನಿಗೆ ತಲುಪಿತು. ಅದರಲ್ಲಿ ಹೀಗಿತ್ತು

(೬ನೇ ಪುಟವನ್ನು ನೋಡಿರಿ)

ನೋಟೀಸು

ಕಾರ್ಕಳ ಡಿ. ಮುಃ ಕೋರ್ಟಿನಲ್ಲಿ

O. S. No. 575 1938

R. I. A. No 966 1939

ಶೀತು ಬಾಯಿ . . . . . . ವಾದಿಳು

ಮತ್ತೆ

ಪಣಿಯಮ್ಮ ಸಹ . . . ಪ್ರತಿವಾದಿರು

ಇವರೊಳಗೆ

ಸಪ್ಲಮೆಂಟು 4ನೇ ಪ್ರತಿವಾದಿಳು ಲಕ್ಷ್ಮಿಯಾನ ಮರ್ಗಿಬ್ಬ, ಕಂಚಿಬೈಲು ನಿವಾಸಿ ಭಟ್ಟ ಹೆಂಡತಿ ಮನೆವಾರ್ತೆ ಜೀವನವುಳ್ಳ, ಕಾರ್ಕಳ ತಾಲೂಕು ಪುತ್ತಿಗೆ ಗ್ರಾಮದ ಕಂಚಿಬೈಲು ಎಂಬಲ್ಲಿರುವವಳು,

ಮಂತ್ರ ಕೋರ್ಟಿದವು ದಸ್ತಾವೇಜನ್ವಯ ಒಗ್ಗೆ ವಾದಿಳು ರೂಪ್ಯಾ 227–9–೧ಕ್ಕೆ ನೋಲ್ಕಂಬ ದಾವಾ ದಾಕಲು ಮಾಡಿರುತ್ತಾಳೆ. ಸದ್ರಿ ಕೋರ್ಟಿನ ವಿಗೆ ಸಂಬಂಧಪಟ್ಟ ಆಸ್ತಿಗಳ ಪೈಕಿ ಕೆಲವು ಆಸ್ತಿಯ ಸ್ವಾಧೀನಗಾರಳಾದ ಸದ್ರಿ ಲಕ್ಷ್ಮಿಯಾನ ಮರ್ಗಿಬ್ಬಾಯನ್ನು ಕೂಡಾ ಸದ್ರಿ ದಾವೆಯಲ್ಲಿ **ಸಪ್ಲಮೆಂಟು 4ನೇ ಪ್ರತಿವಾದಿಳನ್ನಾಗಿ** ಕಕ್ಷಿಯಲ್ಲಿ ಸೇರಿಸಿಕೊಳ್ಳಬೇಕಾಗಿ ವಾದಿಳು ಕೊಟ್ಟಿರುವ R. I. A. No. 966/1939ನೇ ಅರ್ಜಿಯು ಮ ಸದ್ರಿ ದಾವೆಯು ಕೂಡಾ ಸದ್ರಿ ಲಕ್ಷ್ಮಿಯಾನ ಮರ್ಗಿಬ್ಬಾಗೆ ನೋಟೀಸಿನ ಬಗ್ಗೆ ತಾ. **25–9–39ಕ್ಕೆ** ಇಟ್ಟಿರುತ್ತದೆ. ಅದುದರಿಂದ ಸದ್ರಿ ತಾರೀಕು 25—9—39ನೇ ದಿವಸ ಬೆಳಿಗ್ಗೆ 10 ಗಂಟೆಗೆ ನೋಲ್ಕಂಬ ಕೋರ್ಟಿನ ಮುಂದೆ ಅವಳು ಸ್ವತಃ ವ ವಕೀಲರ ಮುಖಾಂತರ ಹಾಜ್ರಾಗಿ ಸದ್ರಿ ದಾವೆಯಲ್ಲಿ ಅವಳನ್ನು ಸಪ್ಲಮೆಂಟು 4ನೇ ಪ್ರತಿವಾದಿಳನ್ನಾಗಿ ಯಾಕೆ ಕಕ್ಷಿಯಲ್ಲಿ ಸೇರಿಸಿಕೊಳ್ಳಕೂಡದು ಎಂಬ ಬಗ್ಗೆ ಆಕ್ಷೇಪವಿರುವುದಾದರೆ ಜ್ಯಾಹೀರು ಮಾಡಿಕೊಳ್ಳುವುದಲ್ಲದೆ ಸದ್ರಿ ದಾವೆಯ ಕುರಿತು ಕೂಡಾ ಅವಳಿಗಿರಬಹುದಾದ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯಲ್ಲಿ ಸದ್ರಿ ಲಕ್ಷ್ಮಿಯಾನ ಮರ್ಗಿಬ್ಬಾಯನ್ನು ಸಪ್ಲಮೆಂಟು 4ನೇ ಪ್ರತಿವಾದಿಳನ್ನಾಗಿ ಕಕ್ಷಿಯಲ್ಲಿ ಸೇರಿಸಿಕೊಂಡು ಸದ್ರಿ ದಾವೆಯಲ್ಲಿ ಕೇಳಿದ ನಿವೃತ್ತಿಗೆ ಕುರಿತು ಏಕಪಕ್ಷ ಡಿಕ್ರಿ ಕೊಡಲ್ಪಡುವುದು.

ಕಾರ್ಕಳ
ತಾ. 16-9-39

I. N. Naik,
Pleader for Plaintiff.

ಮಂಗಳೂರು

ಖಾದೀಕೇಂದ್ರ:—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಸಾಧಾರಣ ವರ್ಷಕ್ಕೆ ೩೦,೦೦೦ ರೂಪಾಯಿ ಬೆಲೆಬಾಳುವ ಖಾದಿಯ ವಿಕ್ರಯ ವಾಗುತ್ತಲಿರುವುದೆಂದು ತಿಳಿದು ಬಂದಿದೆ. ಈ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಈ ವರೆಗೆ ಇಲ್ಲಿಯೇ ಖಾದಿಯನ್ನು ತಯಾರಿಸುವರೆ ಯಾವ ತರದ ಪ್ರಯತ್ನವೂ ಮಾಡಲ್ಪಟ್ಟಿರುವುದಿಲ್ಲ. ಆದರೆ ಈಗ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಒಂದು ಖಾದಿಕೇಂದ್ರವನ್ನು ತೆರೆಯಬೇಕೆಂದು ಎಣಿಸಿರುತ್ತೇವೆ. ಆದರೆ ಒಂದೇ ತಡವೆ ಇದನ್ನು ದೊಡ್ಡ ರೀತಿಯಲ್ಲಿ ನಡಿಸಲು ಸಾಧ್ಯವಿರದೆ ಇರುವುದರಿಂದ ಸದ್ಯಕ್ಕೆ ಮಂಗಳೂರ ಶಹರದಲ್ಲಿ ಮಾತ್ರ ಒಂದು ಕೇಂದ್ರವನ್ನು ತೆರೆಯುವುದೆಂದು ನಿರ್ಣಯಿಸಿರುತ್ತದೆ. ಮಹಾಜನರು ಇದಕ್ಕೆ ತಮ್ಮ ಸಂಪೂರ್ಣ ಸಹಾನುಭೂತಿಯನ್ನೂ ಸಹಕಾರವನ್ನೂ ಕೊಡುವರೆಂದು ನಂಬಿದ್ದೇವೆ.

ಈ ಕೇಂದ್ರಕ್ಕೆ ಸೇರಿ ಇವರಿಂದಲೇ ಚರಕವನ್ನು ಪಡೆದು, ಹತ್ತಿಯನ್ನು ಕೊಂಡು, ನೂಲನ್ನು ನೂತು, ನೂಲನ್ನು ಈ ಕೇಂದ್ರಕ್ಕೆ ಹಿಂತಿರುಗಿ ಕೊಡುವವರೂ, ತಮ್ಮ ಹತ್ತಿರವೇ ಚರಕವಿದ್ದು, ಖಾಲಿ ಹತ್ತಿಯನ್ನು ಕೊಂಡು ಕೊಂಡು ನೂಲನ್ನು ಹಿಂದೆ ಕೊಡುವ ಮನಸ್ಸಿದ್ದವರೂ ತಮ್ಮ ಹೆಸರನ್ನು ಈ ಕೆಳಗೆ ಹೆಸರು ಕಾಣಿಸಿದವರೊಡನೆಯೂ ಜಿಲ್ಲಾ ಕಾಂಗ್ರೆಸ್ ಕಮಿಟಿಯೊಡನೆಯಾಗಲೀ ಕೂಡಲೇ ಕೊಡತಕ್ಕದ್ದು. ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಕಾಣಬೇಕೆಂದಿರುವವರು ಈ ಕೆಳಗೆ ಕಾಣಿಸಿದವರೊಡನಾಗಲೀ ಜಿಲ್ಲಾ ಕಾಂಗ್ರೆಸ್ ಕಮಿಟಿಯೊಡನಾಗಲೀ ಪಡೆಯಬಹುದು ಎಂದು ದ. ಕ. ಜಿ. ಕಾಂ. ಕಮಿಟಿಯ ಜ್ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕೇರಳ ಯುವಜನರ ಪರಿಷತ್ತು — ಮಲಬಾರಿನಿಂದ ಪ್ರತಿನಿಧಿಗಳಾಗಿ ಮಂಗಳೂರಲ್ಲಿ ಒಂದು ನೆಲೆಸಿರುವ ತರುಣರು ಸ್ಥಾಪಿಸಿದ ಮೇಲಿನ ಪರಿಷತ್ತಿನ ದ್ವಿತೀಯ ವಾರ್ಷಿಕೋತ್ಸವವು ಕಳೆದ ತಾ ೧೭ರಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಆಫೀಸಿನಲ್ಲಿ ನೆರವೇರಿತು. ಶ್ರೀ ಭೋಜರಾವ್ ಬೋಳಾರ್‌ರವರ ಅಧ್ಯಕ್ಷತೆ ನೇರಿತು.

ಡಾ ವಿಟ್ಠಲ ಶೆಟ್ಟಿ:—ಕಟೀಲ್ ಮತ್ತು ಶಿವಪುರ ಸೇತುವೆಗಳ ಉದ್ಘಾಟನೆಯನ್ನು ಮಾಡುವಂತೆ ಸಾ ರಾಜಾಜಿ ಮತ್ತು ಮೈಸೂರಿನ ದಿವಾನರನ್ನೂ ಆಮಂತ್ರಿಸಲು ಜಿಲ್ಲಾ ಬೋರ್ಡ್ ಅಧ್ಯಕ್ಷರು ಪ್ರಯಾಣ ಬೆಳೆಸಿರುವರಾಗಿ ತಿಳಿದು ಬಂದಿದೆ.

ವೈ. ಎಮ್. ಎಸ್. ಎ. ಮಂಗಳೂರು:—ಈ ಸಮಿತಿಯ ಮಹಾಸಭೆಯು ಕಳೆದ ತಾ ೯ರಲ್ಲಿ ಶ್ರೀ ಜಿ ಆರ್ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಉದ್ದೇಶ ನಿಯಮಗಳ ಮಂಜೂರಾತಿಯಾದ ಅನಂತರ ಕಾರ್ಯಕಾರಿ ಮಂಡಳಿಯ ಸದಸ್ಯರನ್ನು ಚುನಾಯಿಸಲಾಯಿತು.

ಮರುದಿನ (ತಾ ೧೦ನೇ) ಆಪರಾಹ್ನ ೪ಕ್ಕೆ ಶ್ರೀ ಟಿ. ಶ್ರೀನಿವಾಸಪ್ಪ, ಬಿ. ಎ. ವಿದ್ವಾನ್ (ಹಿಂದೀ) ಇವರ ಅಧ್ಯಕ್ಷತೆಯಲ್ಲಿ ತರ್ಕ ಮತ್ತು ಸಾಹಿತ್ಯ ವಿಭಾಗದ ಪ್ರಥಮ ಅಧಿವೇಶನವು ಜರಗಿತು. ಸಭಿಕರಲ್ಲಿ ಹಲವರು ಸಮಿತಿಯ ಉದ್ದೇಶ್ಯ ಧ್ಯೇಯಗಳನ್ನು ಕೊಂಡಾಡಿ, ಸಂಘದ ಶ್ರೇಯಸ್ಸನ್ನು ಬಯಸಿ ಮಾತಾಡಿದರು. ಅಧ್ಯಕ್ಷರು ಸಮಿತಿಯ ಏಳಿಗೆಯನ್ನು ಬಯಸಿ, ಭಾಷಣವನ್ನಿತ್ತರು.

ನಗರ ಸಭೆ:—ಕಳೆದ ತಾ. ೧೧ರಲ್ಲಿ ನಡೆದ ನಗರ ಸಭೆಯ ಮೀಟಿಂಗಿನಲ್ಲಿ ಚೇರ್‌ಮೇನರು, ಶ್ರೀ. ಬಿ. ಎಂ. ಡಿಸೋಜರ ನಿಧನದ ಕುರಿತಾಗಿ ತಂದ ಸಂತಾಪ ಸೂಚಕ ಠರಾವೂ, ದಿವಂಗತ ಉಳ್ಳಾಲ ಸಂಜೀವ ರಾಯರ ನಿಧನದ ಕುರಿತಾಗಿ ಡಾ. ಎಂ ಆರ್. ಛತ್ರೆಯರು ತಂದ ಠರಾವೂ ಮಂಜೂರಾದುವು.

ಹಿಂದುಳಿದವರ ಸಭೆ:—ಕಳೆದ ತಾ ೧೦ರಲ್ಲಿ ರಾ. ಬ. ಸುವರ್ಣರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳವರ ಸಂಘದ ಸಭೆ ಸೇರಿತು. ನಾಜಿಗಳ ಉಪಟಳವನ್ನು ಖಂಡಿಸಲಾಯಿತು. ಮತ್ತು ಬ್ರಿಟಿಷ್ ಸರಕಾರಕ್ಕೆ ಸಹಾಯ ಸಹಾನುಭೂತಿಯನ್ನು ಸೂಚಿಸಿ ಠರಾವು ಮಂಜೂರು ಮಾಡಲಾಯಿತು. ಆಹಾರ ಸಾಮಗ್ರಿಗಳಿಗೂ ಔಷಧಿಗಳಿಗೂ ಬೆಲೆಯೇರಿದ್ದಕ್ಕೆ ಅಸಮಾಧಾನ ವ್ಯಕ್ತಗೊಳಿಸಿ ಬೆಲೆಯಿಳಿಸಲು ಸರಕಾರದವರೇ ತಕ್ಕ ಕಾರ್ಯಕ್ರಮವನ್ನು ಬೇಗನೆ ಕೈಕೊಳ್ಳಬೇಕೆಂದೂ ಠರಾವಾಯಿತು.

ತಾಲೂಕುಗಳಿಂದ

ಪುತ್ತೂರು

ಪಂಚಾಯತ ಬೋರ್ಡ್ ಪರಿಷತ್ತು:—ನಮ್ಮ ಜಿಲ್ಲೆಯ ಪಂಚಾಯತುಗಳ ಒಂದು ಪರಿಷತ್ತನ್ನು ಪುತ್ತೂರಲ್ಲಿ ಇದೇ ಬರುವ ಆಕ್ಟೋಬರ ತಿಂಗಳ ತಾ. ೨೦ನೇ ಶುಕ್ರವಾರ ಮಧ್ಯಾಹ್ನ ೩ ಗಂಟೆಗೆ ಸರಿಯಾಗಿ ಬೋ. ಹೈ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಜರಗಿಸಲ್ಪಡುವುದಾಗಿ ನಿಶ್ಚೈಸಿರುತ್ತದೆ. ಸದ್ರಿ ಪರಿಷತ್ತು ಸರ್ ಟಿ ವಿಜಯ ರಾಘವಾಚಾರ್ಯರಿಂದ ತೆರೆಯಲ್ಪಟ್ಟು ಮಾನ್ಯ ದಿ ಬೋರ್ಡ ಪ್ರೆಸಿಡೆಂಟ್ ಶ್ರೀಮಾನ್ ಕೆ ವಿಟ್ಠಲ ಶೆಟ್ರವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಡುವುದಾಗಿ ನಿಶ್ಚೈಸಿರುತ್ತದೆ. ಎಲ್ಲಾ ಪಂಚ್ಯಾತ್ ಪ್ರೆಸಿಡೆಂಟರುಗಳು ತಮ್ಮ ಪಂಚ್ಯಾತ್ ಮೆಂಬರುಗಳೊಡನೆ ಒಂದು ಪರಿಷತ್ತು ಯಶಸ್ವಿಯಾಗಿ ಜರಗುವಂತೆ ಮಾಡಬೇಕಾಗಿ ಅಪೇಕ್ಷಿಸಲಾಗಿಯದೆ. ಪ್ರೆಸಿಡೆಂಟರ ಮತ್ತು ಡೆಲಿಗೇಟಾಗಿ ಬರಲಿಚ್ಛಿಸುವ ಒಬ್ಬ ಮೆಂಬರರ ಖರ್ತ್ತಯನ್ನು ಪಂಚ್ಯಾತದಿಂದ ಸೆಟಿಸಿ ಕೊಳ್ಳತಕ್ಕ ಬಗ್ಗೆ ಸರ್ಕಾರದಿಂದ ಮಧ್ರಾಸು ಇನ್ಸ್‌ಪೆಕ್ಟರರಿಗೇ ಬರಕೊಂಡವರೆ.

ಮಹಾಸಭೆಯಲ್ಲಿ ಇರಿಸತಕ್ಕ ವಿಷಯಗಳನ್ನು ಚರ್ಚಿಸುವರೆ ಮತ್ತು ಇತ್ಯರ್ಥಿಸುವರೆ ಸಬ್ಜೆಕ್ಟ ಕಮಿಟಿ ಮೀಟಿಂಗು ಅದೇ ೨೦ನೇ ತಾರೀಕಿನ ದಿವಸ ಬೆಳಗ್ಗೆ ೮ ಗಂಟೆಗೆ ಸದ್ರಿ ಶಾಲಾ ಕಟ್ಟೋಣದಲ್ಲಿ ಮಾನ್ಯ ಶ್ರೀಮಾನ್ ನೂಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗುವುದು. ಈ ಮೀಟಿಂಗಿಗೆ ಪಂಚಾಯ್ತದ ಡೆಲಿಗೇಟಾಗಿ ಬರಲಿಚ್ಛಿಸುವ ಮೆಂಬರರು ಹಾಜರಿರಲೇ ಬೇಕಾಗಿಯದೆ.

ಪಂಚ್ಯಾತುಗಳ ಅನುಭವದಲ್ಲಿ ಏನಾದರೂ ಕುಂದುಕೊರತೆಗಳ ಅವನ್ನು ನಿವೇದಿಸುವರೆ ಇರುವ ಸೂಚಿತಾ ಪತ್ರವನ್ನು ಬರುವ ಆಕ್ಟೋಬರ ತಿಂಗಳ ೧ನೇ ತಾರೀಕಿನೊಳಗೆ ತಪ್ಪದೆ ಪುತ್ತೂರು ವಕೀಲ್ ಶ್ರೀ ನೂಳಹಳ್ಳಿ ಶಿವರಾಯರವರಿಗೆ ಕಳುಹಿಸಿ ಕೊಡುವರೆ ತಪ್ಪಬಾರದು. ೧ನೇ ತಾರೀಕಿನ ನಂತರ ಬಂದ ವಿಷಯ ಸೂಚಿತ ಪತ್ರಗಳನ್ನು ಮಹಾಸಭೆಯ ಮುಂದಿರಿಸುವರೆ ಕಷ್ಟವಾದೀತು.

ಜಿಲ್ಲೆಯ ಎಲ್ಲಾ ಪಂಚ್ಯಾತುಗಳ ಸಂಕ್ಷಿಪ್ತ ವರದಿ ರಿಪೋರ್ಟನ್ನು ಸದ್ರಿ ಆತಿದಿ ಮಹಾಶಯರ ವರದಿಸುವರೆ ಅನುಕೂಲವಾಗುವ ಹಾಗೆ ಸಂಬಂಧಪಟ್ಟ ಸ್ಪೇರ್ಮನ್ನು ಬರಾಯಿಸಿ ಮದ್ರಾಸು ಇನ್ಸ್‌ಪೆಕ್ಟರರ ಆಫೀಸಿಗೆ ತಪ್ಪದಂತೆ ಕಳುಹಿಸಿ ಕೊಡಬೇಕು.

ಮೇಲೆ ಹೇಳಿದಂತೆ ಸೂಚಿತಾ ಪತ್ರವನ್ನು ಮುಂದಾಗಿ ಶ್ರೀ ಶಿವರಾಯರಿಗೆ ಕಳುಹಿಸಿ ಸಬ್ಜೆಕ್ಟ್ ಕಮಿಟಿಯಲ್ಲಿ ಭಾಗವಹಿಸುವಂತವರು ಪುತ್ತೂರಿಗೆ ೧೯ನೇ ತಾರೀಕಿಗೇನೇ ತಲ್ಪಬೇಕಾಗಿದೆ ಎಂದು ದ. ಕ. ಜಿಲ್ಲಾ ಪಂಚಾಯತ ಆಫೀಸರರಾದ ಶ್ರೀ ಸಂಜೀವ ತಳವಾರರು ತಿಳಿಸುತ್ತಾರೆ.

ಶಿರ್ವ:— ಕಳೆದ ಆದಿತ್ಯವಾರ ದಿವಸ ಸಾಯಂಕಾಲ ಗಂಟೆ ೩ಕ್ಕೆ ಶಿರ್ವಾ ಪಂಚ್ಯಾತ್ ಬೋರ್ಡ್ ಸಭೆಯ ಪ್ರೆಸಿಡೆಂಟರಾದ, ಪಟೇಲ್ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಚಕಲ್ ಮಾರ್ಕೆಟು ದುರಸ್ತಿ ಪಡಿಸುವರೆ ಹಣ ಮಂಜೂರು ಮಾಡಲಾಯಿತು. ಬಸ್ ಸ್ಟೇಂಡಿನ ಬಗ್ಗೆ ಸ್ಥಳವನ್ನು ಸಮ್ಮಂದಪಟ್ಟವರಿಂದ ಟ್ರಾನ್ಸ್‌ಫರ್ ಪಡಕೊಳ್ಳಬೇಕಾಗಿ ನಿರ್ಣಯಿಸಲ್ಪಾತು. ಹಳ್ಳಿಗಳಲ್ಲಿರುವ ತೋಡುಗಳಿಗೆ ಸಂಕ ಕಟ್ಟುವರೆ ಹಣ ಮಂಜೂರು ಮಾಡಲ್ಪಾತು.

ಕರ್ನಾಟಕ

ಕರ್ನಾಟಕ ಧರ್ಮಾರ್ಥ ಹೈಸ್ಕೂಲ್ ಮುಂಬಯಿ

‘ಈ ಮೇಲ್ಕಾಣಿಸಿದ ಶಾಲೆಯು ಹಲವು ವರ್ಷಗಳಿಂದ’ ಕರ್ನಾಟಕ ಧರ್ಮಾರ್ಥ ರಾತ್ರಿ ಶಾಲೆಯೆಂಬ ನಾಮಾಂಕಿತದಿಂದ ವಿದ್ಯಾರ್ಥಿಗಳಿಗೆ ಜಾತಿಮತ ಭೇದವನ್ನಿಡದೆ ವಿದ್ಯೆಯನ್ನು ಕೊಡುತಿತ್ತು. ಇತ್ತೀಚೆಗೆ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಶಾಲೆಯು ಅಭಿವೃದ್ಧಿಯನ್ನು ಹೊಂದಿಕೊಂಡು ಬಂದುದರಿಂದ ಉಪಾಧ್ಯಾಯರುಗಳೆಲ್ಲಾ ತಮ್ಮ ಪರಸ್ಪರ ಸಹಾಯದಿಂದ ಈ ಶಾಲೆಯನ್ನು ಹೈಸ್ಕೂಲನ್ನಾಗಿ ಮಾಡಿ ‘ಕರ್ನಾಟಕ ಧರ್ಮಾರ್ಥ ಹೈಸ್ಕೂಲ್’ ಎಂಬ ಹೆಸರನ್ನಿಟ್ಟು ಅದರ ಕ್ರಮ ನಿಬಂಧನೆಗಳಿಗನುಸರಿಸಿ ಇದೇ ತಿಂಗಳ ತಾರೀಕು ಒಂದರಿಂದ ಈ ಕೆಳಗಿನವರನ್ನು ಕೆಳಗಿನ ಸ್ಥಾನಗಳಿಗೆ ಟೀಚರ್ಸ್ ಬೋರ್ಡ್ ಮೀಟಿಂಗಿನಲ್ಲಿ ಚುನಾಯಿಸಲಾಗಿದೆ —

ಶ್ರೀಯುತರುಗಳಾದ, ಎಸ್ ಎಸ್. ಶೆಟ್ಟಿ ಅಧ್ಯಕ್ಷರು ಎಚ್ ಎಮ್ ಕಾಮತ್, ಪ್ರಿನ್ಸಿಪಾಲರು ಟಿ ಎಸ್ ಉಚ್ಚಿಲ್ ಮುಖ್ಯೋಪಾಧ್ಯಾಯರು ಎಸ್ ಸಂಜೀವ ಶೆಟ್ಟಿ ಗೌರವಾರ್ಥ ಕಾರ್ಯದರ್ಶಿಯವರು ಮತ್ತು ಜೈ ಜಿ ಬಂಗೇರರು ಗೌರವಾರ್ಥ ಕೋಶಾಧಿಕಾರಿಗಳು.

ಪ್ರೋಟರ್ ಆರ್ಯಸಮಾಜ

ಮುಂಬಾಯಿ ಉಪರೋಕ್ತ ಸಮಾಜ ಮಂದಿರದಲ್ಲಿ ತಾರೀಕು ೭—೯—೩೯ನೇ ಗುರುವಾರ ಮಧ್ಯಾಹ್ನೋತ್ತರ ಗಂಟೆ ೩ಕ್ಕೆ ಶ್ರೀಕೃಷ್ಣ ಜನ್ಮಾಷ್ಟಮಿ ಮಹೋತ್ಸವವು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಸದರಿ ಸಭೆಯಲ್ಲಿ ಶ್ರೀಮಾನ್‌ಗಳಾದ ದಾಮೋದರ ಟಿ ಕಾಂಚನರು, ಎರ.

ಕಾಸರಗೋಡು —ಇಲ್ಲಿಗೆ ಕೆಲವು ದಿನಗಳ ಮೊದಲು ಬಂದಿರುವ ಕುಂದಾಪುರದ ಶ್ರೀ ಬಿ ಮಹದೇವನವರ ಹರಿಕೀರ್ತನೆಯು ನಡಿಯುತ್ತಲಿದ್ದು ಇಲ್ಲಿಯ ಗೌ. ಸಾ ವೆಂಕಟ್ರಮಣ ದೇವಳದಲ್ಲಿ ಮೂರು ದಿನದ ಶ್ರೀನಿವಾಸ ಕಲ್ಯಾಣವೆಂಬ ಹರಿಕೀರ್ತನೆಯು ಬಹು ವಿಜೃಂಭಣೆಯಿಂದ ಜರಗಿರುತ್ತದೆ. ಸದ್ರಿ ಹರಿದಾಸರಿಗೆ ಇಲ್ಲಿಯ ಸುಕೃತೀಂದ್ರ ಭಜನಾಮಂಡಳಿಯವರು ಉಪಹಾರ ಕೂಟವೊಂದನ್ನು ಏರ್ಪಡಿಸಿದರು.

ಕಾರ್ಕಳ:— ಇಲ್ಲಿ ಕಳೆದ ೨೦ ವರ್ಷಗಳಿಂದ ಶ್ರೀ ಅನಂತಶಯನ ದೇವಸ್ಥಾನದ ಬಳಿಯಿದ್ದು ಜನತಾಸೇವೆ ಮಾಡುತಿದ್ದ ಶ್ರೀ ದುರ್ಗಾ ಪ್ರಸಾದ ಆಯುರ್ವೇದ ವೈದ್ಯಶಾಲೆಯು ಈಗ ಶ್ರೀಮಾನ್ ವಕೀಲ್ ಎ ಎಂ ಸೀತಾರಾಮಾಚಾರ್ಯ ಬಿ ಎ ಬಿ ಎಲ್, ಇವರ ಆಫೀಸಿನ ಬಳಿ ಇರುವ ಇದರ ಸ್ವಂತ ಕಟ್ಟಡಕ್ಕೆ ಒಯ್ಯಲ್ಪಟ್ಟಿದೆ.

ಕುಕ್ಕುಂದೂರು:—ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲಾ ೮ನೇ ದರ್ಜೆಯ ಸರ್ಟಿಫಿಕೇಟು ಪರೀಕ್ಷೆಯು ಕಾರ್ಕಳ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ ವೆಂಕಟ್ರಮಣ, ಬಿ ಎ., ಎಲ್. ಟಿ, ಯವರಿಂದ ನಡಿಸಲ್ಪಟ್ಟು ತೇರ್ಗಡೆ ಹೊಂದಿದ ೧೨ ಮಂದಿ ವಿದ್ಯಾರ್ಥಿಗಳಿಗೆ ಯೋಗ್ಯತಾ ಪತ್ರಗಳು ಕೊಡಲ್ಪಟ್ಟವೆ.

ಕುಂಬ್ಳೆ:—ಇಲ್ಲಿಯ ವ್ಯಾಪಾರಸ್ಥರು ಯುದ್ಧದ ನೆಪದ ಹೇಳಿ ಅಂಗಡಿಯಲ್ಲಿ ಸಾಮಾನುಗಳಿಗೆಲ್ಲಾ ವಿಪರೀತ ಕ್ರಯ ಹೆಚ್ಚುತ್ತಾ ಒಂದು ಬಡವರು ಕಂಗಾಲಾಗಿದ್ದರು. ನಿನ್ನೆ ಇಲ್ಲಿಗೆ ಚಿತ್ತಯಿಸಿದ ಮಾನ್ಯ ಡಿಪ್ಯುಟೀ ಕಲೆಕ್ಟರವರನ್ನು ರಾ. ಎಂ. ಸಿ. ಮಮ್ಮಿಯವರು ಕಂಡು ಈ ಭಯಂಕರ ಸ್ಥಿತಿಯನ್ನು ನಿವಾರಿಸಲು ಅಪೇಕ್ಷಿಸಿದ ಫಲವಾಗಿ ಕೂಡಲೇ ರೆವೆನ್ಯೂ ಇನ್ಸ್‌ಪೆಕ್ಟರನ್ನು ಕರೆಸಿ ಈ ದಿನ ೧೯-೯-೩೯ಕ್ಕೆ ಸಹುಕಾರ ಸಂಘದ ಆಫೀಸಿನಲ್ಲಿ ವ್ಯಾಪಾರಸ್ಥರ ಒಂದು ಸಭೆ ಸೇರಿ ಮಾನ್ಯ ಕಲೆಕ್ಟರವರು ವ್ಯಾಪಾರಸ್ಥರನ್ನೆಲ್ಲಾ ಕಠಿಣವಾಗಿ ಎಚ್ಚರಿಸಿದ ಫಲವಾಗಿ ಈಗ ದಿನ ಹೋಗುತ್ತಾ ಕ್ರಯ ಕಮ್ಮಿ ಆಗುತ್ತಿರುವುದು ಬಡವರ ಭಾಗ್ಯ.

ಕೆ. ಆಮೀನರು ಶ್ರೀ. ಎಂ. ಚಂದ್ರಶೇಖರರು, ಶ್ರೀಕೃಷ್ಣನ ಆದರ್ಶ ಜೀವನದ ಕುರಿತು ಭಾಷಣಗಳನ್ನಿತ್ತರು.

ಕಾಂಗ್ರೆಸ ಸದಸ್ಯರನ್ನು ಮಾಡುವದು

ಕಾಂಗ್ರೆಸ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಸೇರಿದ ಸಭೆಯಲ್ಲಿ ಪ್ರಾಥಮಿಕ ಸದಸ್ಯತ್ವದ ಕೊನೆಯ ತಾರೀಕನ್ನು ೧೫-೯-೩೯ರಿಂದ ೩೦-೯-೩೯ರ ವರೆಗೆ ಮುಂದುವರಿಸಿರುವರು.

ನಮ್ಮ ಚುನಾವಣೆಯ ಪತ್ರಿಕೆಯಲ್ಲಿಯ ಹಲಕೆಲವು ಬದಲಾವಣೆಗಳನ್ನು ಬೇಗನೆ ಪ್ರಕಟಿಸಲಿರುವೆವು ಎಂದು ಕ. ಪ್ರಾಂ ಕಾಂ. ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮುಡಿಮೆ, ತುರಿಕಜ್ಜಿಗಳಿಂದ ಬಾಧಿಸಲ್ಪಡುತಿದ್ದಳು
ಎರಡು ವರ್ಷಗಳ ಪರಿಶ್ರಮಹೊಂದಿದರೂ ಉಪಶಮನವಾಗಲಿಲ್ಲ
ಆರು ವಾರಗಳ ಕ್ರುಶನ್ ಸೇವನೆಯಿಂದ ಮುಖವರ್ಣವು ಪರಿಣತಿಯನ್ನು ಹೊಂದಿತು

ಈ ಸ್ತ್ರೀಯು ಮುಡಿಮೆಯಿಂದ ಮತ್ತು ತುರಿಕಜ್ಜಿಯಿಂದ ಬಹಳವಾಗಿ ಬಾಧಿಸಲ್ಪಡುತ್ತಿದ್ದಳು. ಅವುಗಳನ್ನು ನಾಶಗೊಳಿಸಲು ಆಕೆಯು ಹಲವು ತರದ ಯತ್ನಗಳನ್ನು ಮಾಡಿದಳು. ಕೊನೆಗೆ ಆಕೆಗೆ ತನ್ನ ಮುಖವರ್ಣವನ್ನು ಪರಿಣತಿಗೊಳಿಸುವ ಉಪಾಯವೊಂದು ದೊರಕಿತು. ಆಕೆಯು ಹೀಗೆ ಬರೆಯುತ್ತಾಳೆ —

‘ಕಳೆದ ಎರಡು ವರ್ಷಗಳಲ್ಲಿ ನನ್ನ ಮುಖದಲ್ಲಿ ತುಂಬಾ ಮುಡಿಮೆ ಮತ್ತು ಕೆಂಪು ಕಲೆಗಳಿದ್ದವು. ನನ್ನ ಕತ್ತಿನ ಮತ್ತು ರಟ್ಟೆಯ ಮೇಲೆ ತುರಿಕಜ್ಜಿಯಿದ್ದಿತು. ನಾನು ಹಲವು ತರದ ಮುಲಾಮು ಇತ್ಯಾದಿಗಳನ್ನು ಉಪಯೋಗಿಸಿದೆ. ಉಪಕಾರವಾಗಲಿಲ್ಲ. ನನ್ನಲ್ಲಿ ಹೃದಯಮಂಟಿಯಾಯಿತು. ಕಡೆಗೆ ಕ್ರುಶನ್ ಲವಣಗಳನ್ನು ಉಪಯೋಗಿಸಬೇಕೆಂದು ಸಂಕಲ್ಪ ಮಾಡಿದೆ. ಒರೆ ಆರು ವಾರಗಳ ಕ್ರುಶನ್ ಸೇವನೆಯಿಂದ, ನನ್ನ ಮುಖವರ್ಣವು ಸರಿಯಾಯಿತು. ನನ್ನಲ್ಲಿ ಈಗ ತುರಿಕಜ್ಜಿಯ ಕುರುಹೆ ಇರುವುದಿಲ್ಲ. ಈಗ ಕ್ರುಶನನ್ನು ಪ್ರತಿನಿತ್ಯ ಬೆಳಿಗೆ ಉಪಯೋಗಿಸುತ್ತೇನೆ. ಅವಿಲ್ಲದೆ ನನಗೆ ಸರಿಯಾಗುವುದಿಲ್ಲ.’

ಅಶುದ್ಧ ರಕ್ತವೆ ಮುಡಿಮೆ ಮತ್ತು ತುರಿಕಜ್ಜಿಗಳ ಕಾರಣವು. ದೇಹದೊಳಗಿರುವ ಕಲ್ಮಷಗಳು, ಸರಿಯಾಗಿ ಹೊರಗೆ ಹೋಗದಿರುವುದರಿಂದ ಸಂಬಂಧಪಟ್ಟ ದೇಹಾಂಗಗಳು ಸರಿಯಾಗಿ ಕಾರ್ಯಿಸದಿರುವುದರಿಂದ, ಕ್ರುಶನ್ ಲವಣಗಳು ಆ ಅಂಗಗಳು ಸರಿಯಾಗಿ ಕಾರ್ಯಿಸುವಂತೆ ಮಾಡುತ್ತದೆ. ನಿಮ್ಮ ದೇಹದೊಳಗೆ ಶುದ್ಧ ರಕ್ತವು ಸುತ್ತಾಡುತ್ತಿರುವಾಗ ಯಾವತರದ ಚರ್ಮ ಉರಿತ, ಮುಡಿಮೆ ಕಜ್ಜಿ ಇತ್ಯಾದಿಗಳಾಗವುದಿಲ್ಲ. ನಿಮ್ಮ ಚರ್ಮವು ಆರೋಗ್ಯವನ್ನು ಹೊಂದುವುದು

ಕ್ರುಶನ್ ಲವಣಗಳು ಎಲ್ಲಾ ದವಾಖಾನೆಗಳಲ್ಲಿ ಸ್ಟೋರುಗಳಲ್ಲೂ ಮಾರಲ್ಪಡುತ್ತದೆ.

ವರ್ಕಿಂಗ್ ಕಮಿಟಿಯ ಸಭೆಗೆ ಬಂದ ಭಾರತದ ಮುಖಂಡರು


ರಾಷ್ಟ್ರಪತಿಗಳು ಮತ್ತು ಖಾನ್ ಅಬ್ದುಲ್ ಗಫರ್‌ಖಾನರು

ಶ್ರೀ. ಎಂ ಎಸ್ ಅಣೆಯವರು

ಭೂಲಾಬಾಯಿ ದೇಸಾಯಿ, ಜಯರಾಮದಾಸ್ ದೌಲತರಾಮ್ ಮತ್ತು ಶಂಕರರಾವ್ ದೇವ್

ರಶ್ಯವು ಪೋಲೆಂಡನ್ನು ಆಕ್ರಮಿಸಿದೆ!

ಜಪಾನು ರಶ್ಯಗಳ ಒಪ್ಪಂದ!

ಹಿಟ್ಲರನ ಸೇನಾನಿಯ ಮರಣ!

ರಶ್ಯದ ಧೋರಣೆಯಿಂದ ಬ್ರಿಟನು ವಿಸ್ಮಯಗೊಂಡಿದೆ!

ಹತ್ತನೆಯ ದಿನ

ಫ್ರೆಂಚ್ ಸೈನಿಕರು ಜರ್ಮನ್ ಸೈನ್ಯ ಶಿಬಿರದ ಮೇಲೆ ಗುಂಡುಹಾರಿಸಿದರು ಫ್ರೆಂಚರು ಸಾರ್ ಪ್ರದೇಶದಲ್ಲಿ ಮುನ್ನುಗ್ಗಿದರು

ಪೂರ್ವ ಪ್ರಶ್ಯಿಯಾ ಮತ್ತು ಜರ್ಮನಿಗಳೊಳಗೆ ಸಮುದ್ರದ ಮೂಲಕ ವ್ಯವಹಾರ ನಡೆಯುವುದಾಗಿ ತಿಳಿಯಿತು

ಬ್ರಿಟಿಷ್ ಯುದ್ಧ ವಿಮಾನಗಳು ಹಿಂದೆ ಬರ್ಲಿನ ಆಣೆಕಟ್ಟಿನ ಮೇಲೆ ಧಾಳಿಯಿಟ್ಟವು

ಜರ್ಮನರು ವಾರ್ಸೋಗೆ ೧೫ ಸಲ ಆಕ್ರಮಿಸಿದರು ಹದಿನೈದು ಬೊಂಬು ವಿಮಾನಗಳನ್ನು ಪೋಲರು ಗುಂಡಿಕ್ಕಿ ಕೆಡವಿದರು

ಜರ್ಮನಿಯ ಹಡಗವೊಂದು ಆಸ್ಫೋಟನವಾಗಿ ಮುಳುಗಿತು ಲಾರ್ಡ್ ಹೆಲಿಪಾಕ್ಸರು ಜನಾಂಗ ಸಂಘಕ್ಕೆ ಪತ್ರ ಬರೆದು, ಅದರಲ್ಲಿ ಬ್ರಿಟನು ಯುದ್ಧಕ್ಕಿಳಿದುದು ಯಾತಕ್ಕೆಂದು ತಿಳಿಸಿದರು

'ಮಂಗ್ಯಾಪುರ್' ಎಂಬ ಬ್ರಿಟಿಷ್ ಹಡಗು ಮುಳುಗಿತು ಪ್ರಾಸ್ಪೋರ್ಡಲ್ಲಿ ಯುದ್ಧದಿಂದಾಗಿಯಾಗುವ ಸೂಚನೆ ಕಂಡುಬಂತು

ಮಾರ್ಶಲ್ ಗೋರಿಂಗನು ರಣರಂಗಕ್ಕೆ ಪ್ರವೇಶಿಸಿದನು ತರ್ಕಿಯು ಮುಂಜಾಗ್ರತೆ ವಹಿಸುವುದಾಗಿ ಪ್ರಕಟಿಸಿತು.

ಹನ್ನೊಂದನೆಯ ದಿನ

ವಿಮಾನಧಾಳಿಯಿಂದ ನಗರವನ್ನು ಕಾಪಾಡಲು ಮದ್ರಾಸಿನಲ್ಲಿ ಮುಂಜಾಗ್ರತೆ ತೆಕ್ಕೊಳ್ಳಲಾಯಿತು

ಬ್ರಿಟನಿಗೆ ಕೆನಡವು ಯುದ್ಧಸಹಾಯ ಮಾಡುವುದಾಗಿ ಪ್ರಕಟಿಸಿತು ಕಳೆದ ಯುದ್ಧದಲ್ಲಿ ಹೋರಾಡಿದ ಪ್ರಮುಖರನ್ನು ಜರ್ಮನಿಯು ಸೈನ್ಯಕ್ಕೆ ಕರೆಯಿತು

ಡ್ಯೂಕ್ ಮತ್ತು ಡಚೆಸ್ ಓಫ್ ವಿಂಡ್ಸರರು ಲಂಡನಿಗೆ ಬಂದರು

ಜರ್ಮನಿಯು ರುಮೇನಿಯದಿಂದ ೪೦೦೦೦ ಟನ್ನು ಧಾನ್ಯ ತೆಕ್ಕೊಂಡಿತು

ಪ್ಯಾರಿಸಿನಲ್ಲಿ ಪ್ರಧಾನ ಯುದ್ಧ ಸಮಿತಿಯ ಪ್ರಥಮ ಸಭೆ ನಡೆಯಿತು ಮಿ ಚೇಂಬರ್ಲಿನರೂ ಹೋಗಿದ್ದರು

ಸಿವ್‌ಪರ್‌ಲಿಪೆಯೆಂಬ ಹಡಗೂ ವ್ಯಾಪಾರದ ಹಡಗೊಂದೂ, ಟೈರ್‌ಲಾಗಿ ಎಂಬ ಇನ್ನೊಂದು ಹಡಗೂ ಹೀಗೆ ಬ್ರಿಟಿಷರ ಮೂರು ಹಡಗುಗಳು ಮುಳುಗಿದುವು

ಫ್ರೆಂಚರು ಜರ್ಮನ್ ಗಡಿಯಲ್ಲಿ ಮುಂದೊತ್ತಿದರು ಬ್ರಿಟಿಷ್ ಸೈನ್ಯವು ಫ್ರಾನ್ಸಿಗೆ ತಲಪಿತು

ವಾರ್ಸೋದ ಗಡಿಯಲ್ಲಿ ಪೋಲರು ಜರ್ಮನರೊಡನೆ ವೀರಾವೇಶದಿಂದ ಕಾದಾಡಿದರು

ಡಿಫೆನ್ಸ್ ಓಫ್ ಇಂಡಿಯಾ ಶಾಸನಂತೆ ಹಲವು ಕಡೆಗಳಲ್ಲಿ ಮುಖಂಡರನ್ನು ಬಂಧಿಸಲಾಯಿತು

ನಾಗರಿಕರು ಯುದ್ಧಕ್ಕೆ ಬರುವುದನ್ನು ತಡೆಯಲು ಅವರ ಮೇಲೂ ಬಾಂಬು ಎಸೆಯುವುದಾಗಿ ಹಿಟ್ಲರನು ಹೇಳಿದನು

ಹನ್ನೆರಡನೆಯ ದಿನ

ಚೇಂಬರ್ಲಿನರು ಪಾರ್ಲಿಮೆಂಟಿನಲ್ಲಿ ಯುದ್ಧದ ವಿವರವನ್ನು ತಿಳಿಸಿದರು ಜರ್ಮನಿಯ ಜಲಾಂತರ್ಯಾಮಿ ನಾವೆಗಳು ಬ್ರಿಟಿಷ್ ಹಡಗುಗಳನ್ನು ಮುಳುಗಿಸುವುದನ್ನೂ ತಿಳಿಸಿದರು

ಪೋಲೆಂಡಿನ ಗ್ರಾಮಗಳ ಮೇಲೆ ಜರ್ಮನ್ ಬಾಂಬು ಬಿದ್ದು ೬೦೦ ನಾಗರಿಕರು ಸತ್ತರು

ಡ್ಯೂಕ್ ಓಫ್ ವಿಂಡ್ಸರರು ಯುದ್ಧ ಚಟುವಟಿಕೆಗಳಲ್ಲಿ ಭಾಗವಹಿಸಿದರು

ಫ್ರೆಂಚ್ ಸರಕಾರವು ಯುದ್ಧಮಂತ್ರಿಮಂಡಳಿಯೊಂದನ್ನು ಸ್ಥಾಪಿಸಿತು

ಡ್ಯೂಕ್ ಆಫ್ ವಿಂಡ್ಸರರು ಬಕ್ಕಿಂಗಾಮ್ ಅರಮನೆಯಲ್ಲಿ ಚಕ್ರವರ್ತಿಗಳನ್ನು ಕಂಡು ಮಾತನಾಡಿದರು ರಾಜಸಹೋದರರು ಮೂರು ವರ್ಷಗಳಿಂದ ಅನ್ಯೋನ್ಯ ಬೇಟಿಯಾಗಿರಲಿಲ್ಲ

ಚೆಕೊಸ್ಲವೇಕಿಯದ ಸ್ವಾತಂತ್ರ್ಯವನ್ನು ಒಪ್ಪಿಕೊಂಡು ಬ್ರಿಟನು ಮತ್ತು ಫ್ರಾನ್ಸುಗಳು ಡಾ ಬೆನೆಸರ ಅಧ್ಯಕ್ಷತೆಯಿಂದ ಒಂದು ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಿದವು

ಆಸ್ಟ್ರಿಯದ ಮಾಜಿ ಛಾನ್ಸಲರಾದ ಡಾ ಶುಷ್ನಿಗರನ್ನು ಜರ್ಮನ್ ಸರಕಾರವು ಸೆಪ್ಟಂಬರ ತಾ ೧೪ರಂದು ಗುಂಡಿಕ್ಕಿ ಕೊಂದಿತು

ಹದಿಮೂರನೆಯ ದಿನ

ಸಿಡಿಯನರು ಬ್ರಿಟನಿಗೆ ಬೆಂಬಲ ಕೊಡುವರಾಗಿ ತಿಳಿಯಿತು

ಟರ್ಕಿ ಮತ್ತು ಫ್ರಾನ್ಸುಗಳೊಳಗೆ ಅನ್ಯೋನ್ಯ ಸಹಾಯದ ಒಪ್ಪಂದವಾಗುವುದಾಗಿ ವಾರ್ತೆ ಬಂತು

ವಾರ್ಸೋದ ಪೂರ್ವದಲ್ಲಿ ಭಯಂಕರ ಕಾಳಗವಾಯಿತು ಗ್ಡಿನಿಯವನ್ನು ಜರ್ಮನರು ಸ್ವಾಧೀನಪಡಿಸಿಕೊಂಡರೆಂದಾಗಿ ತಿಳಿಯಿತು

ವಾರ್ಸೋದ ಮೇಲೆ ಎಪ್ಪತ್ತು ಸಲ ಧಾಳಿ ನಡೆಸಿ ಅನೇಕ ಜನ ನಾಗರಿಕರನ್ನೂ ಹಲವು ಮನೆಗಳನ್ನೂ ಹಾಳುಗೆಡಹಿದರು ಐವತ್ತು ಜರ್ಮನ್ ಮೆಶಿನುಗಳನ್ನು ಗುಂಡಿಕ್ಕಿ ಕೆಡಹಲಾಯಿತು

ಪೋಲರು ಲೋಡ್ಜನ್ನು ಹಿಂದೆ ಪಡೆದರು ಪೋಲರು ಇದರಿಂದ ಬಹಳ ಆನಂದಿಸಿದರು

ವಾಸೋವ ಸಟ್ಟಿ ಎಂಬ ಬ್ರಿಟಿಷ್ ಹಡಗನ್ನು ಮುಳುಗಿಸಲಾಯಿತು ಆದರೆ ಪ್ರಯಾಣಿಕರನ್ನು ರಕ್ಷಿಸಲಾಯಿತು ಬೇರೆ ಹಡಗುಗಳು ಮುಳುಗಿದುವು

ಬ್ರಿಟಿಷ್ ವಿಮಾನಗಳು ಜರ್ಮನ್ ಹಡಗುಗಳ ಮೇಲೆ ಧಾಳಿಯಿಟ್ಟುವು

ರಶ್ಯಾದ ಯುದ್ಧಸಿದ್ಧತೆಯು ಕೇಳಿಬಂತು ರಶ್ಯದ ಸರಕಾರ ಪತ್ರಿಕೆಯು ಹೊಸ ತಪ್ಪು ಪೋಲೆಂಡನ್ನು ದೂರಿ ಪ್ರಧಾನ ಲೇಖನ ಬರೆಯಿತು

ಕಾಂಗ್ರೆಸು ವರ್ಕಿಂಗ್ ಕಮಿಟಿಯು ಯುದ್ಧದ ಕುರಿತು ಮಹತ್ವ ನಿರ್ಣಯವೊಂದನ್ನು ಮಾಡಿತು

ಹದಿನಾಲ್ಕನೆಯ ದಿನ

ಸೀಜ್‌ಫ್ರಿಡ್ ದುರ್ಗದ ಬಳಿ ಭಯಂಕರ ಕಾದಾಟ ನಡೆಯಿತು

ಸಮುದ್ರದಲ್ಲಿ ಎಲ್ಲ ಕಡೆಗಳಲ್ಲಿಯೂ ಹರಡಿದ್ದ ಅನೇಕ ಜರ್ಮನಿಯ ಜಲಾಂತರ್ಯಾಮಿ ನಾವೆಗಳು ಬೇರೆ ಬೇರೆ ಕಡೆಗಳಲ್ಲಿ ಬ್ರಿಟಿಷ್ ಹಡಗುಗಳನ್ನು ಧಾಳಿ ನಡೆಸಿದುವೆಂದಾಗಿ ತಿಳಿದುಬಂತು

ರಶ್ಯಾ ಮತ್ತು ಜಪಾನುಗಳೊಳಗೆ ರಾಜಿಯಾಯಿತು ಮಂಚುಕೋ ಗಡಿಯ ಕಾದಾಟವು ನಿಲ್ಲಿಸಲಾಯಿತು ಸೆರೆಸಿಕ್ಕಿದವರನ್ನು ಎರಡು ಕಡೆಯವರೂ ಬಿಟ್ಟುಕೊಟ್ಟರು

ಹದಿನೈದನೆಯ ದಿನ

ರಶ್ಯದ ಸೈನ್ಯವು ಪೋಲೆಂಡಿನ ಮೇಲೆ ನುಗ್ಗಿದ್ದು ಎಲ್ಲರನ್ನು ವಿಸ್ಮಯಗೊಳಿಸಿದೆ ಜಪಾನು ರಶ್ಯಗಳೊಳಗಿನ ಒಪ್ಪಂದವು ಮುಂದಕ್ಕೆ ಪೂರ್ವ ಮತ್ತು ಪಶ್ಚಿಮ ದೇಶಗಳ ವಿಷಯದಲ್ಲಿ ಹೇಗೆ ಪರಿಣಮಿಸಲಿದೆಯೋ ಆಗ್ರಹದಿಂದ ನೋಡಬೇಕಾಗಿದೆ

ಜರ್ಮನಿಯ ವಿಮಾನಗಳಿಂದ, ಪೋಲೆಂಡಿನ ಪ್ರಧಾನ ನಗರಗಳ ಮೇಲೆ ಬೇಗನೇ ಪೋಲೆಂಡು ಜರ್ಮನಿಗೆ ಶರಣಾಗಬೇಕೆಂದು ಕಡೆಯ ನೋಟೀಸು ಕೊಡಲಾಗಿದೆ ಪೋಲರು ಖಂಡಿತ ಎದುರಿಸುವ ನಿರ್ಧಾರವನ್ನು ವ್ಯಕ್ತಪಡಿಸಿದ್ದಾರೆ

ಸಾರ್ ಪ್ರದೇಶದಲ್ಲಿ ಫ್ರೆಂಚರು ಮುಂದೊತ್ತುತ್ತಿದ್ದಾರೆ ಫ್ರೆಂಚ್ ವಿಮಾನದ ಧಾಳಿಯನ್ನು ಕೇಳಿ ಸಾರ್ಬ್ರುಕೆನ್ ನಗರವು ಜನನಿವಾಸ ರಹಿತ ಮಾಡಲಾಯಿತು

ಕಾಂಗ್ರೆಸು ವರ್ಕಿಂಗ್ ಕಮಿಟಿಯ ನಿರ್ಣಯವು ಸಿದ್ಧವಾಗಿಲ್ಲ ಒಪ್ಪಿಗೆಗೆ ಕಾಯುತ್ತಿದೆಯಾಗಿದೆ ವೈಸರಾಯರು ಬೇಗನೇ ಗಾಂಧಿಜಿಯವರ ಭೇಟಿಯನ್ನು ಮಾಡುವರಲ್ಲದೆ, ಮಾತ್ರವಲ್ಲದೆ ಬೇರೆ ಬೇರೆ ಮುಖಂಡರನ್ನೂ ಕರೆದು ಮಾತನಾಡುವರು

ವಾರ್ಧಾದಲ್ಲಿ ಸೇರಿದ ವರ್ಕಿಂಗ್ ಕಮಿಟಿಯ ಸಭೆಯು ಕೊನೆಗೊಂಡಿತು ಎಲ್ಲಾ ಪಕ್ಷದವರೂ ಒಂದಾಗುವ ಹಾಗೆ ತೋರಿತು

ಹದಿನಾರನೆಯ ದಿನ

ರಶ್ಯವು ಪೋಲೆಂಡಿನ ಪೂರ್ವ ಗಡಿಯಲ್ಲಿ ಆಕ್ರಮಣವನ್ನು ನಡೆಸುತ್ತಿದೆ ರಶ್ಯನರ ಧಾಳಿಯನ್ನು ತಡೆಯಲು ಪೋಲರು ವೀರಾವೇಶದಿಂದ ಕಾದಾಡಿದರು

ಪಶ್ಚಿಮ ಉಕರಿನನನ್ನು ತನ್ನ ಸ್ವಾಧೀನಮಾಡಿಕೊಂಡು, ಕೊರಿಡರು ಡಾನ್ಜಿಗುಗಳನ್ನು ಜರ್ಮನಿಗೆ ಕೊಡುವ ಹಂಚಿಕೆಯನ್ನು ರಶ್ಯವು ಯೋಚಿಸಿದುವುದಾಗಿ ತಿಳಿಯಿತು

[೧೧ನೇ ಪುಟವನ್ನು ನೋಡಿರಿ]


ಶುಕ್ಲ, ಸರ್ದಾರ್ ಪಟೇಲ್, ಮಣಿಬೆನ್, ಮಿಶ್ರ, ಮತ್ತು ಪ್ರೊ. ರಂಗ,

ಮೌಲಾನ ಅಬುಲ್ ಕಲಾಮ್ ಅಜಾದ್, ಸರೋಜಿನಿ ನಾಯ್ಡು


ಪಂಡಿತ ಜವಾಹರಲಾಲ್ ನೆಹರು

ವರ್ಕಿಂಗ್ ಕಮಿಟಿಯ ಸಭೆಗೆ ಬಂದ ಭಾರತದ ಮುಖಂಡರು


ಆಚಾರ್ಯ ನಾರಾಯಣದೇವ್, ಮೆಹರಾಲಿ, ಜಯಪ್ರಕಾಶ ನಾರಾಯಣ

ಸುಭಾಸಚಂದ್ರ ಬೋಸರು,

ಗಫರ್‌ಖಾನ್ ನರೇಂದ್ರದೇವ್, ಮೆಹರಾಲಿ ಜಯಪ್ರಕಾಶ ನಾರಾಯಣ

ಬ್ರಿಟನು ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕು!

ಸತ್ಯಮೂರ್ತಿಯವರ ಹೇಳಿಕೆ:

ಬೋಸರ ದಕ್ಷಿಣಭಾರತ ಸಂಚಾರ!

ಇಂಡಿಯಾ ಡಿಫೆನ್ಸ್ ಆಕ್ಟಿನ ಜಾರಿ

ವರ್ಕಿಂಗ್ ಕಮಿಟಿಯ ಮುಂದಿನ ಸಭೆಯು ಪೂನಾದಲ್ಲಿ ಆಗಬೇಕೆಂದೂ, ಅಲ್ಲಾಹಾಬಾದಿನಲ್ಲಿ ಆಗಬೇಕೆಂದೂ ಎರಡು ಕಡೆಗಳಿಂದ ಆಮಂತ್ರಣ ಬಂದಿದೆ

ಯುದ್ಧದ ಸಂದರ್ಭದಲ್ಲಿ, ಹಿಂದೂದೇಶದ ಐಕ್ಯಮತವನ್ನು ಸ್ಥಾಪಿಸುವರೆ, ಅಖಿಲಭಾರತದ ಮುಖಂಡರ ಮಹಾಸಭೆಯೊಂದನ್ನು ಢಿಲ್ಲಿ ಅಥವಾ ಕಲ್ಕತ್ತದಲ್ಲಿ ಜರಗಿಸುವ ನಿಶ್ಚಯವಾಗಿದೆ

ಅಕ್ಟೋಬರ ಮೊದಲನೆಯ ವಾರ ನೆಹರು, ಗಾಂಧಿ, ಪ್ರಸಾದರು ವೈಸರಾಯರನ್ನು ಭೇಟಿ ಮಾಡುವರೆಂದು ತಿಳಿಯುತ್ತದೆ

ವರ್ಕಿಂಗ್ ಕಮಿಟಿಯ ಪ್ರಕಟಣೆಯನ್ನು ಪತ್ರಿಕೆಗಳು ಲಂಡನಿಗೆ ತಂತಿ ಮೂಲಕ ಕಳಿಸಿರುವರು

ವರ್ಕಿಂಗ್ ಕಮಿಟಿಯು ಪ್ರಾಂತದ ಮತ್ತು ಎಲ್ಲಾ ಅಧೀನ ಸಂಸ್ಥೆಗಳಿಗೂ ಪ್ರಕಟಣೆಯನ್ನು ಅನುಸರಿಸಿ ನಡೆಯುವಂತೆ ಹೇಳಿದೆ.

ಭಾರತ ರಕ್ಷಣಾ ಮಸೂದೆಯ ಕುರಿತು ಕೇಂದ್ರ ಎಸೆಂಬ್ಲಿಯಲ್ಲಿ ಚರ್ಚೆ ನಡೆಯಿತು.

ವರ್ಕಿಂಗ್ ಕಮಿಟಿಯ ೭ನೆ ಅಧಿವೇಶನವು ಅಕ್ಟೋಬರ ೭ಕ್ಕೆ ಜರಗುವುದು

ಢಿಲ್ಲಿಯ ಸೋಶಿಯಲಿಸ್ಟ್ ಮುಖಂಡರಾದ ಶ್ರೀಮತಿ ಸತ್ಯವತಿ ದೇವಿಯವರನ್ನು, ಭಾಷಣ ಕೊಟ್ಟದ್ದಕ್ಕಾಗಿ ಕೈದುಮಾಡಲಾಗಿದೆ

ಕಲ್ಕತ್ತದಲ್ಲಿ ತಾ. ೧೮ರಂದು ವಿಮಾನಧ್ವನಿಯು ನಡೆಯಿತು. ಯಾರ ವಿಮಾನವೆಂದು ತಿಳಿಯಲಿಲ್ಲ ತೆಂಕು ದಿಕ್ಕಿನಿಂದ ಈ ಗಾಳಿಯ ಕೂಗು ಕೇಳಿತ್ತು ಕೂಡಲೇ ಕಲ್ಕತ್ತದ ಎಲ್ಲಾ ಕಡೆಗಳಿಗೂ ಎಚ್ಚರಿಕೆಯ ಕೊಡಲಾಯಿತು ೪೦ ನಿಮಿಷಗಳ ಮೇಲೆ ಅಪಾಯವಿಲ್ಲವೆಂಬ ಸೂಚನೆಯ ಶಬ್ದವಾಯಿತು.

ಶಿವಮೊಗ್ಗದಲ್ಲಿ ಇಂಡಿಯಾ ರಕ್ಷಣೆಯ ಮಸೂದೆಯ ಅನ್ವಯದಂತೆ ಅಖಿಲಭಾರತ ಕಾಂಗ್ರೆಸು ಕಮಿಟಿಯ ಸದಸ್ಯರೊಬ್ಬರನ್ನೂ ಬಂಧಿಸಿದರು.

ಫಾರ್ವಾರ್ಡ್ ಬ್ಲಾಕಿನ ಕಾರ್ಯಕಾರೀ ಸಮಿತಿಯ ಸಭೆ ಸೇರಿ, ಹರಿಪುರ ಠರಾವಿನಂತೆ ವರ್ತಿಸಬೇಕಾಗಿ ನಿರ್ಣಯವಾಯಿತು

ಮದ್ರಾಸ್ ಮಂತ್ರಿ ಡಾ। ರಾಜನರು ಪ್ರಾಂತದ ಬೇರೆ ಬೇರೆ ಕಡೆಗಳಲ್ಲಿ ಸಂಚರಿಸುತ್ತಿದ್ದು, ಹರಿಜನ ದೇವಾಲಯ ಪ್ರವೇಶದ ವಿಷಯವಾಗಿ ಬಹಳ ಯತ್ನ ಮಾಡುತ್ತಿದ್ದಾರೆ

ಕಾಂಗ್ರೆಸು ಬಹಳ ಮುಂದರಿಕೆಯಿಂದ ಮುಂದೆ ಹೋಗುತ್ತಿದೆಯೆಂದು ಸುಭಾಸರು ಆತಂಕರಾಗಿದ್ದಾರೆ

ಬ್ರಿಟನಿಗೆ ಭಾರತದ ಸ್ವಾತಂತ್ರ್ಯವನ್ನು ಕೊಡುವುದು ಕಷ್ಟವಿಲ್ಲವೆಂದೂ, ಹಾಗೆ ಮಾಡುವುದು ನ್ಯಾಯವೆಂದೂ ಸತ್ಯಮೂರ್ತಿಯವರು ಹೇಳಿದರು

ಬೋಸರು ತಿರುಗಿ ದಕ್ಷಿಣಭಾರತದ ಸಂಚಾರವನ್ನು ಆರಂಭಿಸುವರು.

ರಶ್ಯದೊಡನೆ ಟರ್ಕಿಯ ಸಂಧಾನವೇ?

ಟರ್ಕಿಯ ವಿದೇಶಾಂಗ ಮಂತ್ರಿಯಾದ ಮಿ. ಸರದ್ಜೊಗ್ಲುವು ರಶ್ಯಕ್ಕೆ ತೆರಳುವನು. ರಶ್ಯಾ ಸರಕಾರವು ಆತನನ್ನು ಬರಲು ಆಮಂತ್ರಿಸಿತು

ಟರ್ಕಿಯು ರಶ್ಯದೊಡನೆ ಒಂದು ಒಪ್ಪಂದ ಮಾಡಿಕೊಳ್ಳುವುದಾಗಿ ವಾರ್ತೆ ಹರಡಿದೆ

ಉದ್ವೇಗ ಹೆಚ್ಚುತ್ತದೆ

ಫ್ರಾಂಚರ ಸೈನ್ಯ ಶಕ್ತಿಯ ಏಟಿನಿಂದ ಜರ್ಮನಿ ... ಆಗಿ ... ಅನರ್ಗ ಉದ್ವೇಗಗೊಂಡಿದೆ ಸಾರಾಬ್ರೂಕನ್ನು ಧ್ವಂಸ ಮಾಡುವುದಕ್ಕೆ ಫ್ರೆಂಚರು ಈಗ ಸಿದ್ಧರಿದ್ದರೂ, ಮುಂದಕ್ಕೆ ಸಂಪೂರ್ಣವಾಗಿ ಜಯವು ಲಭಿಸುವ ಸಮಯವನ್ನು ನಿರೀಕ್ಷಿಸುತ್ತಿದ್ದಾರೆ

ಜರ್ಮನರ ಗಡಿಯಲ್ಲಿರುವ ಫ್ರೆಂಚ್ ವಿಮಾನಗಳು ಜರ್ಮನ್ ವಿಮಾನಗಳಿಂದ ಆಕ್ರಾಂತವಾಗಿವೆ

ಜಪಾನು ರಶ್ಯಗಳ ಯುದ್ಧ ನಿವಾರಣಾ ಒಪ್ಪಂದ

ಮೊಸ್ಕೋದಲ್ಲಿ ಜಪಾನು ರಾಯಭಾರಿಯೂ ಎಂ. ಮೊಲೊಟೊವನೂ ಒಂದಕ್ಕೆ ರಶ್ಯಾ ಜಪಾನುಗಳು ಅನ್ಯೋನ್ಯ ಕಾದಾಡುವುದಿಲ್ಲವೆಂಬ ಒಂದು ಒಪ್ಪಂದಕ್ಕೆ ಸಹಿಮಾಡಿದರು.

ಮೊಂಗೋಲಿಯ ಗಡಿಯಲ್ಲಿ ಹಲವು ವರ್ಷಗಳಿಂದ ಆರಂಭವಾದ ಯುದ್ಧವು ಇದರಿಂದ ಕೊನೆಗೊಂಡಂತಾಯಿತು

ಈ ವಾರ್ತೆಯನ್ನು ಕೇಳಿ ಚೈನವು ಸಂತಾಪಗೊಂಡಿದೆ

ಹೊಸ ವಾರ್ತೆ.

ಪೋಲೆಂಡಿಗೆ ರಶ್ಯವು ಆಕ್ರಮಣ ಮಾಡಿದ್ದು ಜರ್ಮನಿಯೊಡನೆ ಆದ ಸಂಧಿಗೆ ಸರಿಯಾಗಿಯಲ್ಲವೆಂದೂ, ಪೋಲೆಂಡಿನವರ ಆಸ್ತಿಯನ್ನು ಕಾಪಾಡುವ ಶಾಂತಿಸ್ಥಾಪನೆಗಾಗಿ ಅವರು ಹಾಗೆ ಮಾಡಿದರೆಂದು ಜರ್ಮನ್ ಸರಕಾರವು ಪ್ರಕಟಿಸಿದೆ ರಶ್ಯದ ಸೈನ್ಯವು ಪೋಲೆಂಡಿನ ಗಡಿಯಲ್ಲಿ ಮುಂದುವರಿದಿದೆ

★

ರಶ್ಯದ ಚಲನೆಯು ಅನ್ಯಾಯವಾದುದೆಂದೂ, ಫ್ರಾನ್ಸ ಬ್ರಿಟನುಗಳು ಪೋಲೆಂಡಿಗೆ ಕೊಟ್ಟ ಪ್ರತಿಜ್ಞೆಯನ್ನು ಸಲ್ಲಿಸಲು ಖಂಡಿತ ನಿರ್ಧಾರವಾಗಿದೆಯೆಂದೂ ಬ್ರಿಟಿಶ್ ಮತ್ತು ಫ್ರೆಂಚ್ ಸರಕಾರಗಳು ಸ್ಪಷ್ಟಪಡಿಸಿವೆ

★

ಜರ್ಮನಿ ... ಮೇಲೆ ಬಾಂಬು ಹಾಕುವುದು ನ್ಯಾಯವಲ್ಲವೆಂದು ಯುದ್ಧಾರಂಭದ ರಾಷ್ಟ್ರಗಳಿಗೆ ಪ್ರೆಸಿಡೆಂಟ್ ರೂಸ್‌ವೆಲ್ಟರು ... ಕೊಟ್ಟಿದ್ದರು

★

ಜರ್ಮನಿಯು ... ಜರ್ಮನ ... ದವನ್ನು ಬಾಂಬಿಟ್ಟು ಮುಳುಗಿಸಲಾಗಿದೆ

★

ಪೋಲೆಂಡು ತನ್ನ ಮೇಲೆ ಆಕ್ರಮಣ ಮಾಡುವರೆ ಯಾವ ಕಾರಣವಿರಲಿಲ್ಲವೆಂದೂ ಇದು ರಶ್ಯದ ವಿಶ್ವಾಸಘಾತದ ಅನ್ಯಾಯದ ಆಕ್ರಮಣವೆಂದೂ ಪೋಲೆಂಡು ಸರಕಾರವು ಪ್ರಕಟಿಸಿದೆ

★

ಮುಸ್ಲಿಂಲೀಗಿನ ವರ್ಕಿಂಗ್ ಕಮಿಟಿಯ ಸಭೆ ಸೇರಿ, ವೈಸರಾಯರನ್ನು ... ಮುಂದುವರಿಸಿದ್ದಕ್ಕಾಗಿ ಅಭಿನಂದನೆಯನ್ನೂ ಸೂಚಿಸುತ್ತಾ, ಯುದ್ಧದಲ್ಲಿ ಬ್ರಿಟಿಶರಿಗೆ ಬೆಂಬಲ ಕೊಡುವರೆ ಕೆಲವು ಶರತ್ತುಗಳನ್ನೂ ಸೂಚಿಸಿದೆ

★

ಜರ್ಮನ್ ಸೋಶಿಯಲಿಸ್ಟ್ ಮುಖಂಡನಾದ ಬ್ರೀಟ್‌ಶೈಡನು ಮರಣಹೊಂದಿದನು ಇವನು ಹಿಟ್ಲರನ ಸರ್ವಾಧಿಕಾರ ಪದ್ಧತಿಯನ್ನು ದ್ವೇಷಿಸುವವನಾಗಿದ್ದನು ಮಾತ್ರವಲ್ಲದೆ, ಯುದ್ಧಾರಂಭದ ವಾರದಲ್ಲಿ ಜರ್ಮನಿಯ ಸೋಲಿನ ಲಕ್ಷಣವಾಗಿ ಜರ್ಮನಿಯ ಯುದ್ಧಾತುರತೆಯನ್ನು ಖಂಡಿಸಿ ಪ್ರಕಟಣೆ ಹೊರಡಿಸಿದ್ದನು.

★

ಪೋಲೆಂಡಿನ ಅಧ್ಯಕ್ಷರಾದ ಮೊಸಿಕಿಯವರು ತಮ್ಮ ಜನರಿಗೆ ಒಂದು ಸಂದೇಶಪೂರ್ಣವಾದ ಭಾಷಣವೀಯುತ್ತಾ, ಅದರಲ್ಲಿ ಖಂಡಿತವಾಗಿಯೂ ಪೋಲರು ವಿಜಯಿಗಳಾಗುವರೆಂದು ತಿಳಿಸಿದ್ದಾರೆ.

★

ಯುದ್ಧದಿಂದಾಗಿ ಜರ್ಮನಿಯಲ್ಲಿ ಆಹಾರ ವಸ್ತುಗಳು ಕಡಿಮೆಯಾಗಿರುವುದರಿಂದ ಆಹಾರ ವಿತರಣೆಯೂ ಕಡಿಮೆ ಮಾಡಲಾಗಿದೆ

★

ಜಪಾನಿನ ಕಡೆಗೆ ಅಮೇರಿಕದ ವರ್ತನೆಯನ್ನು ಬದಲಾಯಿಸದಿದ್ದರೆ ಶಾಂತ ಸಾಗರವು ಜಪಾನು ಅಮೇರಿಕಗಳ ಯುದ್ಧರಂಗವಾಗುವುದಾಗಿ ಜಪಾನು ಪತ್ರಿಕೆಯು ಹೇಳುತ್ತದೆ

★

(ಹಿಂದಿನ ಪುಟದಿಂದ ಮುಂದುವರಿಯುವುದು)

ಪೋಲೆಂಡಿನ ಪರಿಸ್ಥಿತಿಯು ಭೀಕರವಾಗಿದೆ ಪೋಲೆಂಡಿನ ಪ್ರೆಸಿಡೆಂಟ್ ಮೊಸಿಕಿಯವರು ರಾಷ್ಟ್ರದ ಗಡಿಯನ್ನು ದಾಟಿಹೋದರೆಂದು ವಾರ್ತೆ ಪೋಲೆಂಡು ಸರಕಾರವು ಕುಟಿಯೆಂಬಲ್ಲಿ ಸ್ಥಾಪಿಸಲಾಯಿತು

ಫ್ರೆಂಚ್ ಸೈನಿಕರು ೧೭,೦೦೦ ಜರ್ಮನರನ್ನು ಹಿಡಿದರೆಂದು ತಿಳಿಯಿತು.

ಪಾಶ್ಚಾತ್ಯ ಯುದ್ಧರಂಗಕ್ಕೂ ನಮ್ಮ ಒಪ್ಪಂದಕ್ಕೂ ಯಾವ ಸಂಬಂಧವೂ ಇಲ್ಲವೆಂದು ರಶ್ಯಾ ಜಪಾನುಗಳು ತಿಳಿಸಿದುವು.

ಹಿಟ್ಲರನ ಸೇನಾನಿ ಹೆರ್ ವಾನ್ ಫ್ರಿಟ್ಶನು ಯುದ್ಧರಂಗದಲ್ಲಿ ಥಟ್ಟನೇ ಮೃತಹೊಂದಿದನು

ರಶ್ಯವು ಪೋಲೆಂಡಿನ ಮೇಲೆ ಆಕ್ರಮಿಸಿದ ವಿಷಯವಾಗಿ ಇಂಗ್ಲಂಡಿನಲ್ಲಿ ಬಹಳ ಗೊಂದಲ ಹುಟ್ಟಾಗಿದೆ.

ಬ್ರಿಟನಿನ ಮಂತ್ರಿಮಂಡಲದ ಸಭೆಯೊಂದು ಸೇರಿತು.

ಬ್ರಿಟಿಶರ ಯುದ್ಧಹಡಗವಾದ 'ಕರೇಜಸ್' ಎಂಬುದು ಶತ್ರುಗಳ ಸಬ್‌ಮೆರಿನಿನಿಂದ ಮುಳುಗಿಸಲ್ಪಟ್ಟಿತು.

ಪಂಡಿತ ಜವಾಹಿರಲಾಲ್ ನೆಹರು ಮತ್ತು ಆಚಾರ್ಯ ಕೃಪಾಲಿನಿ

ಜಮ್ನಾದಾಸ್ ಮೆಹ್ತಾ

ಮಹಾತ್ಮಾಜಿ, ಜೈರಾಮದಾಸ್, ಮಣಿಬೆನ್, ಪ್ರಸಾದ್, ಗಫರ್‌ಖಾನ್, ಪಟೇಲ್.

ಫ್ರೆಂಚ್ ಜರ್ಮನ್ ರಾಷ್ಟ್ರಗಳ ಎರಡು ಅಭೇದ್ಯ ದುರ್ಗಗಳು!

ಮೆಜಿನೆಟ್ ಮತ್ತು ಸೀಜ್‌ಫ್ರೀಡ್ ಲೈನ್

ಅದ್ಭುತವೂ ದುರ್ಗಮವೂ ಆದ ರಚನೆ! ಆತ್ಮರಕ್ಷಣೆಗೂ ಶತ್ರುಹನನಕ್ಕೂ ಸಾಧನೆ! ವಿಶಾಲವಾದ ಕೋಟೆಗಳಲ್ಲಿ ವಿಷವಾಯುವೂ ಪ್ರವೇಶಿಸಲಾರದು!

[ಇಂದಿನ ಮಹಾಯುದ್ಧವು ಹಿಂದಿನ ಎಲ್ಲಾ ಯುದ್ಧರೀತಿಗಳಿಗಿಂತಲೂ ವಿಭಿನ್ನವೂ, ವಿಶೇಷವೂ, ವಿಚಿತ್ರವೂ ಆಗಿದೆ! ವಿಜ್ಞಾನದ ಮುಂದುವರಿಯುವಿಕೆಯಿಂದ ನೂತನ ಯುದ್ಧೋಪಕರಣಗಳು ಆಗಿವೆ ಸಾಹಸಗಳು ಸ್ಪರ್ಧೆಗಳಿಂದ ಒಂದು ರಾಷ್ಟ್ರವನ್ನು ಮೀರಿ ಇನ್ನೊಂದು ರಾಷ್ಟ್ರವು ಪ್ರಗತಿಹೊಂದಿದೆ. ಜರ್ಮನ್ ಫ್ರಾನ್ಸ್‌ಗಳು ಇಂತಹ ಸ್ಪರ್ಧೆಯಲ್ಲಿ ಆತ್ಮರಕ್ಷಣೆ, ಯುದ್ಧ ಸಾಧನೆಗಳಿಗಾಗಿ ಮಾಡಿದ ಭದ್ರವಾದ ಕೋಟೆಗಳ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ]

ಫ್ರೆಂಚರ ಮೆಜಿನಟ್ ಲೈನಿನ ಮೇಲೆ ಜರ್ಮನರು ಧಾಳಿ ನಡೆಸಲು ಯತ್ನಿಸುವುದರ ಕುರಿತು ಮತ್ತು ಜರ್ಮನಿಯ ಸೀಜ್‌ಫ್ರೀಡ್ ಲೈನಿನ ಮೇಲೆ ಫ್ರೆಂಚರ ಧಾಳಿಯ ಕುರಿತೂ ಪ್ರಕಟಿಸಲ್ಪಡುವ ವಾರ್ತೆಯು ಈಗ ಜಗತ್ತಿನ ದೃಷ್ಟಿಯನ್ನು ಆ ಕಡೆಗೆ ಆಕರ್ಷಿಸಿದೆ! ಇವುಗಳ ಮಹತ್ವವೇನು? ಇತಿಹಾಸವೇನು? ಎಂಬೀ ವಿಷಯಗಳ ಕುರಿತು ತಿಳಿಯುವುದು ನಮಗೆ ಅತ್ಯವಶ್ಯವಿದೆ!

ಮೆಜಿನೆಟ್ ಲ್ಯಾನ್

ಫ್ರಾನ್ಸಿನ ಉತ್ತರ-ಪೂರ್ವ ಗಡಿಯಲ್ಲಿ ಹರಡಿದ ಲಕ್ಸೆಂಬರ್ಗಿನಿಂದ ಸ್ವಿಜರ್ಲೆಂಡಿನ ವರೆಗೆ ಈ ಭದ್ರವಾದ ಕೋಟೆಯು ಹರಡಿದೆ! ಇದು, ಮಹಾಯುದ್ಧವಾಗುವ ಸಂದರ್ಭದಲ್ಲಿ, ವೈರಿಗಳಿಗೆ ಯಾವ ವಿಧದಿಂದಲೂ ಆಕ್ರಮಿಸಲು ಸಾಧ್ಯವಿಲ್ಲದೆ ಇರುವಂತೆ, ಫ್ರಾನ್ಸಿನ ಸೈನ್ಯ ಜನಗಳನ್ನೆಲ್ಲಾ ಭದ್ರವಾಗಿ ಇಡುವಲುವಾಗಿ ಈ ಕೋಟೆಯು ಕಟ್ಟಲಾಗಿದೆ! ಮೊದಲು ಇದನ್ನು ಸಣ್ಣ ರೂಪದಲ್ಲಿ ಕಟ್ಟಿದರು ಆ ಮೇಲೆ ವಿಸ್ತಾರವಾಗಿ ಬೆಳೆಸಿದ್ದಾರೆ!

ಇದರಿಂದ, ಶತ್ರುಗಳ ಧಾಳಿಯಿಂದ ತಪ್ಪಿಸುವುದು ಮಾತ್ರವಲ್ಲದೆ, ಶತ್ರುಗಳನ್ನು ಪೀಡಿಸಲೂ ಸಾಧ್ಯವಾಗುವಂತೆ, ಎರಡು ರೀತಿಯ ಕಾರ್ಯಗಳೂ ಆಗುತ್ತವೆ! ೧೯೧೪ರಲ್ಲಿ, ಶತ್ರುಗಳು ಎಲ್ಲಾ ಕಡೆಯಿಂದಲೂ ಒಂದು ಮುತ್ತಿಗೆ ಹಾಕಿ ಅನ್ಯಾಯಮಾಡುತ್ತಿರುವುದನ್ನು ಕಂಡು, ಇದರಿಂದ ಎಚ್ಚೆತ್ತ ಫ್ರಾನ್ಸು ಈ ಮುಂಜಾಗ್ರತೆಯನ್ನು ಮಾಡಿಕೊಂಡಿದೆ!

ಇದರ ರಚನೆ!

ಈ ಮೆಜಿನೆಟ್ ಲೈನನ್ನು ರಚಿಸುವ ಸಲುವಾಗಿ ೧೨,೦೦೦,೦೦೦ ಘನ ಮೀಟರ್ ಅಡಿ ನೆಲವು ಅಗೆಯಲ್ಪಾಗಿದೆ! ಈ ಕಾರ್ಯವು ೧೯೨೯ರಿಂದ ೧೯೩೪ರ ವರೆಗೆ ನಡೆಯಿತು! ೧,೫೦೦ ೦೦೦ ಘನ ಮೀಟರ್ ಕಾಂಕ್ರೀಟು ಉಪಯೋಗಿಸಲಾಯಿತು. ೫೦,೦೦೦ ಟನ್ನು ಉಕ್ಕಿನ ತಗಡುಗಳು ಇರಿಸಲಾದುವು ೧೫,೦೦೦ ಜನರು ಇದನ್ನು ರಚಿಸಲು ನಿರಂತರ ಕಾರ್ಯ ಮಾಡುತ್ತಿದ್ದರು! ಏಳು ಬಿಲಿಯನ್ ಫ್ರಾಂಕುಗಳನ್ನು ಖರ್ಚು ಮಾಡಲಾಯಿತು ಈ ಭದ್ರವಾದ ಕೋಟೆಯು ನೆಲಕ್ಕಿಂತ ಹೆಚ್ಚು ಎತ್ತರವಾಗಿಲ್ಲ ಹೀಗೆ ಇದು ಫ್ರಾನ್ಸಿನ ಉತ್ತರ ಪೂರ್ವ ಗಡಿಯಲ್ಲಿ ವಿಸ್ತಾರವಾಗಿ ಹರಡಿರುತ್ತದೆ

ವಿಷವಾಯುವಿಗೂ ಎಡೆಯಿಲ್ಲ!

ಮೇಲಿಂದಾಗಲಿ, ಕೆಳಗಿಂದಾಗಲಿ, ಸುತ್ತುಗಟ್ಟಿಯಾಗಲಿ ಶತ್ರುಗಳು ಒಂದು ಮೆಜಿನೆಟ್ ಲೈನನ್ನು ಭೇದಿಸುವ ಹೆದರಿಕೆಯು ಇಲ್ಲವೇ ಇಲ್ಲ. ಮಾತ್ರವಲ್ಲದೆ ವಿಷಗಾಳಿಯೂ ಕೂಡಾ, ಆ ಕೋಟೆಯ ಒಳಗೆ ಹೋಗಿ ಅಪಾಯವಾಗದಂತೆ ಬೇಕಾದ ಎಲ್ಲಾ ಸಿದ್ಧತೆಗಳೂ ಆಗಿವೆ ಅದಕ್ಕೆ ಬೇಕಾಗಿ ಹೊರಗಣ ಗಾಳಿಯಲ್ಲಿ ವಿಷಪ್ರಯೋಗವಾಗಲು ಇರುವ ಎಲ್ಲಾ ಕ್ರಿಯೆಗಳೂ ಇಲ್ಲದಂತೆ ಒಳಗಿನ ಗಾಳಿಯು ನಿರ್ಮಲವಾಗಿರಿಸಲು ಬೇಕಾದಂತೆ ವಿದ್ಯುತ್‌ಶಕ್ತಿಯಿಂದ ಕಾರ್ಯ ಮಾಡಲಾಗಿದೆ ಕೋಟೆಯ ಮೇಲೆ ವಿಮಾನ ಧಾಳಿಯನ್ನು ಎದುರಿಸುವ ಫಿರಂಗಿಗಳೂ ಹಲವಾರು ನಟ್ಟಿವೆ!

ರಕ್ಷಣೆ ಮತ್ತು ಸಂಗ್ರಾಮ

ಮನುಷ್ಯಕಲ್ಲಿಯೂ ಭದ್ರ ಕವಚಗಳಿಂದ ಮುಚ್ಚಲ್ಪಟ್ಟದ್ದಾರೆ ಸೈನ್ಯಾಧಿಕಾರಿಯೊಬ್ಬನು ಒಂದು ಪ್ರತ್ಯೇಕ ಕೋಣೆಯಲ್ಲಿ ಟೆಲಿಸ್ಕೋಪಿನ ಮೂಲಕವಾಗಿ ಆತನು ಹೊರಗಿನ ಶತ್ರುಗಳ ಚಲನವಲನಗಳನ್ನು ಪರೀಕ್ಷಿಸುತ್ತಾನೆ! ಆವನ ದಿಗ್ದರ್ಶನದಂತೆ ತೋಪಿನವರಿಗೆ, ಒಳಗಿರುವ ಒಂದು ಗಡಿಯಾರದಾಕಾರದ ಸಾಧನದಲ್ಲಿ ತಿರುಗುವ ಮುಳ್ಳಿನ ಮೂಲಕ ಶತ್ರುಗಳು ಯಾವ ಕಡೆ ಚಲಿಸುತ್ತಿರುವರೆಂದು ತಿಳಿಯುವುದು. ಅದಕ್ಕೆ ಸರಿಯಾಗಿ, ಅವರು ತಮಗೆ ಅಪಾಯವಿಲ್ಲದಂತೆಯೂ, ಶತ್ರುಗಳನ್ನು ಹೊಡೆದಟ್ಟುವಂತೆಯೂ ಏಕಕಾಲದಲ್ಲಿ ಎರಡು ಕೆಲಸಗಳನ್ನೂ ಮಾಡಬಲ್ಲವರಾಗಿದ್ದಾರೆ

ಯುದ್ಧದ ಮತ್ತು ಶತ್ರು ಸೈನ್ಯದ ವಿಷಯಗಳನ್ನು ಎಲ್ಲರಿಗೂ ತಿಳಿಸುವರೆ ಟೆಲಿಫೋನಿನ ಪ್ರಯೋಗವು ಇದೆ ಇದು ಬಹಳ ಚಮತ್ಕಾರವಾಗಿ ನಡೆಸಿದೆ ನೆಲದಡಿಯಲ್ಲಿ ೫ ಮೀಟರ್ ಆಳದಲ್ಲಿ ಟೆಲಿಫೋನಿನ ಚಲನವಾಗುವಂತೆ ಏರ್ಪಾಡು ಮಾಡಲಾಗಿದೆ!

ಹೀಗೆ, ಸೈನಿಕರನ್ನು ಎಂತಹ ಭಯಂಕರ ಬಾಂಬಿನ ಹೊಡೆತದಿಂದಲೂ ರಕ್ಷಿಸಲು ಸಾಧ್ಯವಾಗುವಂತೆ ಈ ಭದ್ರವಾದ ಕೋಟೆಯು ಕಟ್ಟಲಾಗಿದೆ!

ಕಾಕೀ ಶಿಸ್ತಿನ ಉಡಿಗೆಯ ಜನರು ಇದರಲ್ಲಿ ಯಾವಾಗಲೂ ಇರುವರು ಇವರು ಶಾಂತಿಯ ಕಾಲದಲ್ಲಿ ಸುಖವಾಗಿ ಶತ್ರುಸಂಚಲನವನ್ನು ಕಾಯುತ್ತಾ ಇರುವರು. ಯುದ್ಧ ಸಮಯದಲ್ಲಿ ಸರಿಯಾಗಿ ೧೫ ದಿನ ಯುದ್ಧ, ೧೫ ದಿನಗಳ ವಿಶ್ರಾಂತಿಯಂತೆ ಸಂಗ್ರಾಮ ಹೂಡುವರು.

ಇದು ಮಾತ್ರವಲ್ಲದೆ, ಅದರೊಳಗೆ ನಿರಂತರವಾಗಿ ಜನರು ಕಾರ್ಯ ನಿರಂತರಾಗಿಯೇ ಇರುತ್ತಾರೆ! ಅಂತೂ ಈ ಮೆಜಿನೆಟ್ ಲೈನ ಅಪಾಯವು ಸಾಧ್ಯವಿದ್ದಷ್ಟು ಕಡಿಮೆಯಾಗುವಂತೆಯೂ ಕಟ್ಟಲ್ಪಟ್ಟಿದೆ! ಮುಖ್ಯ ಕೋಟೆಯ ನಿವಾಸಿಕರು ಕೋಟೆಯ ಬದಿಯ ಮನೆಗಳಲ್ಲಿ ಉಳಕೊಳ್ಳುವರು. ಅಪಾಯ ಸೂಚನೆಯು ಕಂಡುಬರುತ್ತಿರುವಾಗ ಒಳಗಡೆ ಹೋಗಿ ಸುರಕ್ಷಿತವಾಗುವರು

ಸೀಜ್ ಫ್ರೀಡ್ ಲೈನ್

ಫ್ರಾನ್ಸಿನ ಈ ಸಾಹಸದ ಭದ್ರ ಕೋಟೆಗೆ ಸರಿಯಾಗಿ, ಜರ್ಮನಿಯು ಅಂತಹದೇ ಕೋಟೆಯೊಂದನ್ನು ಕಟ್ಟಿದೆ ಇದಕ್ಕೆ ಸೀಜ್ ಫ್ರೀಡ್ ಲೈನ್ ಎಂದು ಹೆಸರು ಇದು ಇತ್ತೀಚೆಗೆ ಆರಂಭವಾಗಿದ್ದರೂ, ಅದರ ಕೆಲಸಗಳು ಮುಗಿಯುತ್ತಾ ಬಂದುವು! ಹಿಟ್ಲರನು ಅದನ್ನು ಸಂದರ್ಶಿಸಿ ಭದ್ರವಾಗಿರುವುದಾಗಿ ಧೈರ್ಯ ಮಾಡಿಕೊಂಡಿದ್ದಾನೆ

೧೯೩೮ರ ಸಾಲಿನಲ್ಲಿ ಹೆರ್ ಹಿಟ್ಲರನು ಪ್ರಕಟಮಾಡಿದಂತೆ, ಜರ್ಮನ್ ಡಚ್ ಗಡಿನಾಡಿನಲ್ಲಿ ಹರಡಿದ್ದು, ಈ ಪಶ್ಚಿಮ ಗೋಡೆಯೆಂದು ಕರೆಯಲ್ಪಡುವ ಈ ಸೀಜ್ ಫ್ರೀಡ್ ಲೈನು ಅಚೆನ್ ಮತ್ತು ಸಾರ್ಬ್ರುಕೆನ್ ಜಿಲ್ಲೆಗಳ ಮುಖ್ಯ ಪಟ್ಟಣಗಳೂ ಈ ಕೋಟೆಯ ರಕ್ಷಣೆಯ ಒಳಗೇ ಸೇರಿರುತ್ತವೆ! ಇದರಲ್ಲಿ ಹಲವು ಮೆಶಿನ್ ಗನ್ನುಗಳೂ, ಜ್ವಾಲಾ ಪ್ರಸರಂಗಳೂ ಇನ್ನು ಅನೇಕ ಹೊಸ ಹೊಸ ಯುದ್ಧ ಸಾಧನಾ ಯಂತ್ರಗಳು ಇರಿಸಲಾಗಿದೆ. ಇದರೊಳಗೆ ವಿಹಾರ ನಿವಾಸ ಸೌಖ್ಯಗಳೆಲ್ಲಾ ಇವೆ. ಇಲ್ಲಿಯೂ ವಿಷವಾಯು ನಿವಾರಣೆಯ ಸಾಧನಗಳು ಮಾಡಲಾಗಿವೆ

ಇಂದಿನ ಮಹಾಯುದ್ಧದ ಭಯಂಕರ ಕದನದಲ್ಲಿ ಈ ಎರಡು ಭದ್ರವಾದ ಕೋಟೆಗಳ ಕಾರ್ಯದ ಮಹತ್ವವು ಇಷ್ಟೆಂದು ಹೇಳಲು ಬರುವಂತಿಲ್ಲ!

ನೋಟೀಸು

ಕಾರ್ಕಳ ಡಿ ಮು ಕೋರ್ಟಿನಲ್ಲಿ
ಕ್ರಮ ನಂಬ್ರ 2-9/1939

ಮಯನ ಗಂಗಪ್ಪಯ್ಯ — ವಾದಿ

ಮತ್ತು

1 ನಾರಾಯಣ, 2 ವೆಂಕಟ್ಟ } ಪಜ್ಜೆಬೆಟ್ಟು ಮಾಧವ ಭಟ್ಟರ ಮಕ್ಕಳು ಕಾರ್ಕಳ ತಾಲೂಕು ಬಡಗ ಮಿಜಾರ ಗ್ರಾಮಸ್ಥರು — ಪ್ರತಿವಾದಿಗಳು

ಮೇಲ್ಕಂಡ ವ್ಯವಹಾರದಲ್ಲಿ ತಾರೀಕು 1-7-1932ರಲ್ಲು ಮಹಾದೇವ ಭಟ್ಟರು ವಾದಿಗೆ ರುಪಾಯಿ 400/ಕ್ಕೆ ಬರೆದುಕೊಟ್ಟಿರುವ ಸಿಸ್ತು ಸಿರಿ ತೋರದವು ದಸ್ತವೇಜಿನ ಬಾಬ್ತು ಬರತಕ್ಕ ಬಾಕಿ ಹಣಗಳು ರುಪಾಯಿ 90-1-3ನ್ನು ಬರಮಾಡಿಕೊಳ್ಳುವರೇ ವಾದಿಯು ಹಾಕ್ಸಿ ಮಾಡಿರುವ ಮೇಲ್ಕಂಡ ವಾದೆಯು ತಾರೀಕು 10-10-39ಕ್ಕೆ ಅಯ್ಯೆ ತನಿಗೆ ಇಟ್ಟಿರುವುದರಿಂದ ಆ ಕುರಿತು ನಿಮಗೆ ಏನಾದರೂ ಆಕ್ಷೇಪವಿದ್ದಲ್ಲಿ ಸದ್ರೀ ದಿವಸ ರಾತ್ರಿ 11 ಗಂಟೆಗೆ ಸದ್ರೀ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ನಿವೇದಿಸಿಕೊಳತಕ್ಕದ್ದು. ಇಲ್ಲವಾದ್ರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರೀ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬುದಾಗಿ ಈ ಮೂಲಕ ತಿಳಿಸಲಾಗುತ್ತದೆ

Karkal 18-9-39 } A N S Achar. Pleader for Plaintiff.

ಮಕ್ಕಳಿಗೆ ಡೋಂಗರೆ ಬಾಲಾಮೃತವು ಆದರ್ಶಕರವಾದ ಪೌಷ್ಟಿಕ.

ಇದರಿಂದ ಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಡಾ. ಶುಶ್ನಿಗರ ರಕ್ತದಲ್ಲಿ ★ ★ ಹಿಟ್ಲರನು ಕೈ ತೊಳೆದನು!

ಒಂದು ಕರುಣಾಮಯ ಜೀವನ ವಧೆ!

ಸ್ವಾತಂತ್ರ್ಯವೀರರಿಗೆ, ಚಿತ್ರಹಿಂಸೆಯು ಯಮಯಾತನೆ ಮುಗಿಯಿತು!

ಪಾಪಿಯ ಪಾಪಕಾರ್ಯವು ಎಲ್ಲೆ ಮೀರಿತು!

'Never before a mortal man wielded power to bring sorrow and sufferings to such vast members of the human race and whatever happens--never should a single man have such powers again'. W. Churchil.

ಹಿಟ್ಲರನು ಕರುಣೆಯಿಲ್ಲದ ಪ್ರಾಣಿ! ಸಾಮ್ರಾಜ್ಯವಿಸ್ತರಣದ ದುರಾಕಾಂಕ್ಷೆಯೊಡನೆ ಆತನಲ್ಲಿ ಜನವಿದ್ರೋಹ ಬುದ್ಧಿಯೂ ತುಂಬಿದೆ. ತಾನು ಬಯಸಿದ ರಾಷ್ಟ್ರವನ್ನು ಸರ್ವಥಾ ಆತನು ಆಕ್ರಮಿಸದೆ ಇರುವುದಿಲ್ಲ. ತಾನು ದ್ವೇಷಿಸುವ ಜನರನ್ನು ನಿರ್ದಯವಾಗಿ ಆತ ಪೀಡಿಸದೆಯೂ ಇಲ್ಲ. ಹಿಟ್ಲರನ ಜೀವಿತವು ಇಂತಹ ರಕ್ತಮಯವಾದ ಕಾರ್ಯಗಳಿಂದ ಕಳಂಕಿತವಾಗಿದೆ!

ಆಸ್ಟ್ರಿಯದ ಅಧ್ಯಕರು

ಆಸ್ಟ್ರಿಯದ ಅಧ್ಯಕ್ಷರಾದ ಡಾ. ಶುಶ್ನಿಗರು ಈಗ ಹಿಟ್ಲರನ ಬಂಧನದಲ್ಲಿ ಬಳಲುತ್ತಿದ್ದರು! ಜೆಕೊಸ್ಲವೇಕಿಯವನ್ನು ಧ್ವಂಸಮಾಡಿ, ಡಾ. ಬೆನೆಸರನ್ನು ಪದಚ್ಯುತರನ್ನಾಗಿಸಿ ಗೋಳಾಡಿಸುವುದಕ್ಕಿಂತ ಮೊದಲೇ, ಹಿಟ್ಲರನು ಆಸ್ಟ್ರಿಯವನ್ನು ಬಲಿಗೊಳಿಸಿ ಅಲ್ಲಿನ ಸ್ವಾತಂತ್ರ್ಯವನ್ನು ಅಪಹರಿಸಿದ್ದನು. ಜೆಕ್ಕರಂತೆ, ಆಸ್ಟ್ರಿಯನರೂ ನಾಡಿನ ಸಲುವಾಗಿ ಅನುಪಮ ಸಾಹಸದಿಂದ ಕಾದಾಡಿದರು. ಆಸ್ಟ್ರಿಯದ ರಾಷ್ಟ್ರಾಧಿಪರಾಗಿದ್ದ ಡಾ. ಶುಶ್ನಿಗರ ಮುಂದಾಳುತನದಿಂದ ಬಹಳ ಕಾಲ ಹೋರಾಡಿದರು. ಆದರೆ ಜರ್ಮನಿಯ ನಿರಂಕುಶವಾದ ಆಕ್ರಮಣಕ್ಕೆ ಆಸ್ಟ್ರಿಯವು ತುತ್ತಾಯಿತು. ಡಾ. ಶುಶ್ನಿಗರು ಹಾಗೆ ಹೋರಾಡದೆ ಇರುತ್ತಿದ್ದರೆ ಅವರ ಜೀವ ಉಳಿಯುತ್ತಿತ್ತು. ಆದರೆ ದೇಶಾಭಿಮಾನದಿಂದ, ಪ್ರಜೆಗಳ ಹಿತಕ್ಕಾಗಿ ಹೋರಾಡಿದವರೆಂದು ತಿಳಿದು ಅವರನ್ನು ಕಠಿಣ ಕಾರಾಗೃಹದಲ್ಲಿರಿಸಿ ಯಮಯಾತನೆಯನ್ನು ಕೊಡುತ್ತಿದ್ದನು.

ಸನ್ನಿವೇಶಗಳಿಂದು, ಹಾಗೆ ಅವರನ್ನು ಚಿತ್ರಹಿಂಸೆಗೊಳಿಸುತ್ತಿದ್ದುದು ಸಾಲದೆ, ಜರ್ಮನಿಯು ಇಳಿದ ಯುದ್ಧದಲ್ಲಿ ಆಸ್ಟ್ರಿಯನರೂ ಹೋರಾಡಬೇಕೆಂದು ಮೇಲೆ ಅಭಿಮಾನ ಸ್ವಾಮಿಭಕ್ತಿಗಳಿರುವ ಆಸ್ಟ್ರಿಯನರಿಗೆ ಒಂದು ಪ್ರಕಟಣೆ ಕೊಡುವುದಕ್ಕೆ ಸಹಿಹಾಕಬೇಕೆಂದು ಒತ್ತಾಯ ಮಾಡಿದಕ್ಕಾಗಿ, ಅವರು ತಿರಸ್ಕರಿಸಲು, ನಾಜೀ ಸರಕಾರವು ಗುಂಡಿಟ್ಟು ಕೊಂದಿರುವುದಾಗಿ ತಿಳಿದು ಬರುತ್ತದೆ! ಶುಶ್ನಿಗರನ್ನು ಗುಂಡಿಟ್ಟು ಕೊಂದು, ಹಿಟ್ಲರನು ರಕ್ತದಲ್ಲಿ ಕೈತೊಳೆದನು! ಈ ನರರಾಕ್ಷಸನಿಗೆ ರಕ್ತಪಿಪಾಸೆಯು ಇನ್ನೆಷ್ಟು ಇದೆಯೋ? ಅವರನ್ನು ಮರಣಾಂತ ಬಂಧನದಲ್ಲಿರಿಸಿದ ಮೇಲೆ ಅವರ ವಿಷಯವಾಗಿ ಬಾಹ್ಯಪ್ರಪಂಚಕ್ಕೆ ಯಾವ ವಿವರವೂ ತಿಳಿಯಲಿಲ್ಲ. ವಿಯೆನ್ನಾದ ಹೊಟೇಲು ಒಂದರಲ್ಲಿ, ಏಕಾಂಗಿಯಾಗಿ, ಸುತ್ತು ಕಠಿಣ ಕಾವಲುಗಾರರು ಕಾಯುತ್ತಿರುವಂತೆ, ಅವರು ತಮ್ಮ ಜೀವಿತದ ಕೊನೆಯ ದಿನವನ್ನು ನಿರೀಕ್ಷಿಸುತ್ತಿದ್ದರು! ಡಾ. ಶುಶ್ನಿಗರ ಒಳಗೆ ಅವರ ಬಳಗದವರಿಗೆ ಯಾರನ್ನೂ ಹೋಗಲು ಅನುಮತಿಯಿರಲಿಲ್ಲ. ಅವರು ಉಸಿರಿಡುತ್ತಿದ್ದಾರೆ ಎಂಬ ಜರ್ಮನ್ ಸರಕಾರದ ಆಗಾಗ ಬರುವ ಪ್ರಕಟಣೆಯೊಂದನ್ನು ಉಳಿದು, ಜನತೆಯ ಕುತೂಹಲವನ್ನು ನಿಲ್ಲಿಸಲು ಇನ್ನು ಯಾವ ವಿವರವೂ ತಿಳಿಸುತ್ತಿರಲಿಲ್ಲ.

ಜೀವನ ಸ್ವಾಸ್ಥ್ಯವಿಲ್ಲ

'ಆಸ್ಟ್ರಿಯದ ಸ್ವಾತಂತ್ರ್ಯವೇ ತನ್ನ ಉಸಿರು' ಎಂದು ಡಾ. ಶುಶ್ನಿಗರು ಯುದ್ಧರಂಗದಲ್ಲಿ ಬಯಂಕರ ವೈರಿಗಳೆದುರು ಅತಿ ಸಾಹಸದಿಂದ ಕಾದಾಡಿದರು. ಆದರೆ ವಿಧಿಯು ಬೇರ್ಪಟ್ಟಿತು. ಆಸ್ಟ್ರಿಯವು ಅನ್ಯಾಯವಾಗಿ, ಹಿಟ್ಲರನ ನಿರ್ದಯವಾದ ತುಳಿದಲ್ಲಿ ಬವಣೆಗೊಳ್ಳುವಂತೆ ಅವರು ಬವಣೆಗೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ, ಅವರಿಗೆ ಬುದ್ಧಿಸ್ವಾಸ್ಥ್ಯವೂ ಚೆನ್ನಾಗಿರಲಿಲ್ಲವೆ ದೂ ವಾರ್ತೆ ಬಂದಿತ್ತು! ಆಸ್ಟ್ರಿಯದ ಪರವಾಗಿ ಅಭಿಮಾನದಿಂದ, ಆವೇಶದಿಂದ ಕಾದಾಡಿದ ಅವರ ದೇಶಪ್ರೇಮವೇ ಇಂದು ಹಿಟ್ಲರನ ದೃಷ್ಟಿಯಲ್ಲಿ ಮಹಾಪರಾಧವಾಯಿತು. ಆ ಮಹಾಪರಾಧದ ಸಲುವಾಗಿ ಅವರು ತನ್ನ ಜೀವನಾವಧಿ ನರಕಸಮಾನವಾದ ಬಂಧದಲ್ಲಿ ಸಂಕಟಪಡುವಂತಾಯಿತು. ರಣರಂಗದಲ್ಲಿ, ಶತ್ರುಗಳ ಬಾಣಕ್ಕೆ ವೀರಬಲಿಯಾಗುವುದನ್ನಾದರೂ ಒಬ್ಬ ವೀರನು ಸಂತೋಷದಿಂದ ಆಹ್ವಾನಿಸುವನು. ಆದರೆ ಈ ರೀತಿಯ ಜೀವನವನ್ನು ಡಾ. ಶುಶ್ನಿಗರು ಖಂಡಿತವಾಗಿ ಕನಸಿನಲ್ಲಿಯೂ ಇರಲಾರರು. ಆದರೆ ವಿಧಿವಿಲಾಸವು ಇಂತಹ ದುರ್ಮರಣವನ್ನು ಕಲ್ಪಿಸಿತು.

ಅಪರಾಧವಿಲ್ಲದಿದ್ದರೂ ಶಿಕ್ಷೆ!

ಶುಶ್ನಿಗರನ್ನು ಹೀಗೆ ಸೆರೆಮನೆಯಲ್ಲಿ ಕೊಳೆಯ ಹಾಕುವ ಮೊದಲು, ಅವರನ್ನು ವಿಚಾರಣೆ ನಡೆಸಲಾಗಿತ್ತು. ಅವರ ಖಾಸಗಿ ಹಾಗೂ ಬಹಿರಂಗ ಪತ್ರಿಕೆಗಳೆಲ್ಲವನ್ನೂ, ನಾಜೀ ಸರಕಾರವು ಸ್ವಾಧೀನಪಡಿಸಿಕೊಂಡು, ನ್ಯಾಯಸ್ಥಾನಕ್ಕೆ ಕಳುಹಿಸಿತು. ಅದನ್ನು ಎಲ್ಲಾ ವಿಚಾರಿಸಿದ ಮೇಲೆ ನ್ಯಾಯಾಧೀಶರು ಶುಶ್ನಿಗರು ಯಾವ ರಾಜದ್ರೋಹದ ಅಪರಾಧ ಮಾಡಿಲ್ಲವೆಂದೂ ನಿರಪರಾಧಿಗಳೆಂದೂ ಹೇಳಿದರು.

ಡಾ. ಶುಶ್ನಿಗರು ನ್ಯಾಯಸ್ಥಾನದ ಮುಂದೆ ಬರಬೇಕಾಗಿ ಆಜ್ಞೆ ಬಂತು. ತಾನು ಖಂಡಿತ ನಿರಪರಾಧಿಯೆಂಬುದು ಅವರಿಗೆ ಗೊತ್ತು! ತನ್ನನ್ನು ನಿಶ್ಚಯ ಹಿಂದೆ ಬಿಟ್ಟುಬಿಡುತ್ತಾರೆಂದು ತಿಳಿದು, ಅವರು ತನ್ನ ಉಟ್ಟವಸ್ತ್ರಗಳಲ್ಲಿಯೇ ನ್ಯಾಯಸ್ಥಾನದ ಮುಂದೆ ಬಂದು ನಿಂತರು! ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡುವಂತೆ, ಅವರಿಗೆ ಜೀವನಾವಧಿ ಶಿಕ್ಷೆ ವಿಧಿಸಲಾಗಿದೆಯೆಂದೂ ತೀರ್ಮಾನವು ಓದಲ್ಪಟ್ಟಿತು. ಕಾವಲುಗಾರರ ಭದ್ರವಾದ ಕಾವಲಿನಿಂದ, ವಿಯೆನ್ನಾದ ಏಕಾಂತ ಹೋಟೆಲೊಂದರ ನರಕನಿವಾಸಕ್ಕೆ ಅವರನ್ನು ಅಲ್ಲಿಂದಲೇ ತಳ್ಳಲ್ಪಟ್ಟಿತು. ಬಂಧುಬಾಂಧವರನ್ನು ಕಂಡು ಹೃದಯ ನಿವೇದನೆ ಮಾಡುವ ಸಂದರ್ಭವೂ ಅವಕಾಶವೂ ಅವರಿಗೆ ಒದಗಲಿಲ್ಲ! ಇಂತಹ ಆ ನರಕನಿವಾಸದಲ್ಲಿಯ ಅವರ ಚಿತ್ರಹಿಂಸೆಯು ಈಗ ಕೊನೆಗೊಂಡಿತು.

ಸೆರೆಮನೆಯಲ್ಲಿ ಚಿತ್ರಹಿಂಸೆ

ಜರ್ಮನಿಯ ಇತರ ಸೆರೆಮನೆಗಳಲ್ಲಿ ಕಳವು, ಕೊಲೆ ಖೂನಿಗಳನ್ನು ಪಡೆಸಿ, ಬಂಧನಕ್ಕೊಳಗಾದವರನ್ನು ನೋಡುವಂತೆ ಶುಶ್ನಿಗರನ್ನೂ ನೋಡಲಾಗಿತ್ತು. ಅವರಿಗೆ ಯಾವ ವಾರ್ತೆಯೂ ತಿಳಿಸುತ್ತಿರಲಿಲ್ಲ. ಹಿಂದೆ ಅರೆಗಳಿಗೆಯಾದರೂ ಸಿಗರೇಟು ಸೇದದೆ, ಹೊತ್ತುಗಳೆಯಲಾಗುತ್ತಿದ್ದ ಶುಶ್ನಿಗರ ಸುತ್ತು ಕಾವಲುಗಾರರು ಸಿಗರೇಟು ಸೇದಿ, 'ಗಮ್ಮತ್ತು' ಮಾಡುತ್ತಿದರೂ, ಅವರಿಗೆ ಅದನ್ನು ಒದಗಿಸುತ್ತಿರಲಿಲ್ಲ.

ಮೊನ್ನೆ ಕ್ರಿಸ್‌ಮಸ್ ರಜೆಯಲ್ಲಿ ಹೆಂಡತಿಯೊಡನೆ ಭೇಟಿಯಾಗಲು ಅವರಿಗೆ ಅನುಮತಿಯಾಗಿತ್ತು. ಅದರಿಂದ, ತನ್ನ ತಂದೆಯು ತೀರಿಹೋಗಿರುವನೆಂಬ ವಿಚಾರವೂ, ಮಗನು ಜರ್ಮನರ ಶಾಲೆಯಲ್ಲಿ ತಂದೆಯು (ಶುಶ್ನಿಗರು) ರಾಜದ್ರೋಹಿಯೆಂಬ ಪಾಠವನ್ನು ಕಲಿಯುತ್ತಿರುವುದಾಗಿಯೂ ತಿಳಿದು ಅವರಿಗೆ ಸಹಿಸಲಾರದ ಸಂಕಟವಾಯಿತು. ಬಹಳ ದಿನಗಳ ಅಗಲುವಿಕೆಯಿಂದ ನೊಂದ ಶುಶ್ನಿಗರು ಪತ್ನಿಯೊಡನೆ ಪ್ರಪಂಚದ ವಿವರವನ್ನು ಕೇಳಿದರೆ, ಕಾವಲುಗಾರರು ಅದಕ್ಕೆ ಉತ್ತರ ಸಿಗದಂತೆ ಅವರಿಬ್ಬರನ್ನೂ ಕೂಡಲೇ ಬೇರೆ ಬೇರೆ ಮಾಡಿದ್ದರು!

ಹೀಗಾಗಿ ಶುಶ್ನಿಗರಿಗೆ ಇಂದು ಹುಚ್ಚು ಹಿಡಿದಂತಾಗಿತ್ತು. ಹೀಗೆ ಹಾಸಿಗೆ ಹಿಡಿದು ನರಗಳ ದುರ್ಬಲತೆಯಿಂದ ಏಳಲಾರದವರಾಗಿದ್ದರು. ಹಿಂದಕ್ಕೆ ಸುಂದರನಾಗಿ ತೇಜಸ್ವಿಮೂರ್ತಿಯಾಗಿದ್ದ ಆಸ್ಟ್ರಿಯದ ರಾಷ್ಟ್ರಾಧ್ಯಕ್ಷರು, ಬಹಳಸಂಕಟಕ್ಕೆ ಗುರಿಯಾಗಿದ್ದರು!



ಇಟಲಿಯು ಯುದ್ಧರಂಗಕ್ಕೆ ಯಾಕೆ ಪ್ರವೇಶಿಸಲಿಲ್ಲ!

ಹಿಟ್ಲರ್ ಮುಸಲಿನಿ ದ್ವಂದ್ವ ಮುರಿಯುವುದೇ?

ಇಟಲಿಗೆ ವಿದೇಶ ವಸ್ತುಗಳು ಬೇಕು— ಇಲ್ಲದೆ ತಿಂಗಳು ಬದುಕುವ ಹಾಗಿಲ್ಲ

ಬ್ರಿಟನಿನ ವಿರೋಧದಿಂದ ಅಪಾಯವಿದೆ! ಅಬಿಸೀನಿಯವು ಕೈಬಿಟ್ಟು ಹೋಗಬಹುದು!

ಕಳೆದು ಇಟಲಿಯು ಆಕ್ರಮಣಕಾರಿಯ ಪಕ್ಷವಾಗಿ ಕಾದಾಡುವುದಿಲ್ಲವೆಂದು ಸ್ಪಷ್ಟವಾಗಿ ತಿಳಿದಿದೆ. ಇಟಲಿಯನ್ನು ತೊಂದರೆಗೊಳಿಸಲು ಯಾವಾದರೂ ಚಾಳಿದ ವಿನಾ ತಾನು ಯುದ್ಧರಂಗಕ್ಕೆ ಇಳಿಯುವುದಿಲ್ಲವೆಂದು ಅದು ಹೇಳಿದೆ. ರಾಜಕೀಯ ವಿಚಕ್ಷಣರು, ಕಳೆದ ಕೆಲವು ವಾರಗಳಿಂದ ಹಿಟ್ಲರನ ಬಲಗೈ ಬಂಟನಾದ ಮುಸಲನಿಯು ಹೀಗೆ ಯಾತಕ್ಕಾಗಿ ಮೌನವನ್ನು ತಾಳಿರುವನೆಂಬ ವಿಷಯವಾಗಿ ವಿಚಾರಮಗ್ನರಾಗಿರುತ್ತಾರೆ. ಕೆಲವಾರಗಳಿಂದ ಇಟಲಿಯು ಯಾವ ಪ್ರಜಾಪ್ರಭುತ್ವ ರಾಷ್ಟ್ರದವರಿಗಾದರೂ ವಿಷಕಾರಿ ಮಾತು ಹೇಳಿಲ್ಲ. ಜರ್ಮನಿಯೊಡನೆ ಹಿಂದೆ ಊಹಿಸಿದ್ದಂತೆ ಸಹಾಯ ನಿಲ್ಲಲೂ ಇಲ್ಲ. ಇದರ ಉತ್ತರವು ಬಹಳ ವಿಸ್ತಾರವಾದುದು ಮತ್ತು ವಿಚಾರಪೂರ್ಣವಾದುದು, ಆದರೆ, ಇದನ್ನು ಸರಳವಾದ ಮಾತಿನಲ್ಲಿ ಹೇಳುವುದಿದ್ದರೆ, ಇಂದಿನ ಯುದ್ಧದಲ್ಲಿ ಸೇರುವುದರಿಂದ, ಏನಾದರೂ ಲಾಭ ಪಡೆಯುವುದರ ಬದಲು, ಇಟಲಿಯು ನಷ್ಟವನ್ನೇ ಹೊಂದಬೇಕಾಗುವುದು. ಪ್ರಯೋಜನವಿಲ್ಲದೆ, ನಷ್ಟಹೊಂದಿಕೊಳ್ಳುವಷ್ಟು ಮುಸಲನಿಯು ಮೂರ್ಖನೆನ್ನಲಾಗುವುದಿಲ್ಲ! ಇಂದಿನ ಸಂದರ್ಭದ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ವಿಚಾರಮಾಡಿ, ಇಟಲಿ ಅತ್ತ ಜರ್ಮನಿಯೊಡನೆಯೂ, ಇತ್ತ ಬ್ರಿಟನು ಫ್ರಾನ್ಸುಗಳೊಡನೆಯೂ ರಾಜಿಯಿಂದಲೇ ಇದ್ದು ತಟಸ್ಥನಾಗಿರುವ ಹೊಸ ಪ್ರಯೋಗವನ್ನು ಮಾಡಿಕೊಂಡಿರುತ್ತದೆ.

ವಿದೇಶ ವ್ಯಾಪಾರ ಬೇಕು

ಇಟಲಿಯು ತನಗೆ ಬೇಕಾದ ಎಣ್ಣೆ, ಗೋದಿ, ಕಲ್ಲಿದ್ದಲು ಮೊದಲಾದವುಗಳ ವಿಷಯದಲ್ಲಿ ಪರರಾಷ್ಟ್ರಗಳ ಬೆಂಬಲವಿಲ್ಲದೆ ದಿನಗಳೆಯಲಾರದು. ಇಂದು ಬ್ರಿಟನು ಮತ್ತು ಅದರ ಬೆಂಬಲದ ರಾಷ್ಟ್ರಗಳು ಇವುಗಳನ್ನು ಹೊರಬಿಡದಿದ್ದರೆ ಇಟಲಿಯು ಜೀವಿಸಲಾರದು. ಮನೆಗೆ ಹೊಗೆ ಹಾಕುವುದಾಗಲಿ, ಯಂತ್ರಗಳು ನಡೆಯುವುದಾಗಲಿ, ಸಮುದ್ರದಲ್ಲಿ ಹಡಗು ಸಂಚರಿಸುವುದಾಗಲಿ ಸಾಧ್ಯವಾಗಲಾರದು. ಹೀಗಾಗಿ ಇಟಲಿಗೆ ಇಂದು ತನ್ನ ವ್ಯಾಪಾರದ ಹಡಗುಗಳು ವಿದೇಶದ ಹಡಗುಗಳೊಡನೆ ನಿರಾತಂಕವಾಗಿ ವ್ಯವಹಾರ ಬೆಳಸಬೇಕಾಗಿದೆ. ಇಟಲಿಗೆ ೯/೧೦ರಷ್ಟು ಸಾಮಗ್ರಿಗಳು ಭೂಮಧ್ಯ ಪ್ರದೇಶದಿಂದ ಬರಬೇಕಾಗಿದೆ. ಇದನ್ನು ಬ್ರಿಟಿಷರು ಜಿಬ್ರಾಲ್ಟರನ್ನು ಸ್ವಾಧೀನಪಡಿಸಿ ಮುಚ್ಚಿಬಿಟ್ಟರೆ, ಸುವೇಜ್, ಏಡನ್ ಮತ್ತು ಇಟಲಿಗಳು ಒಂದು ತಿಂಗಳ ಒಳಗೆ ಉಪವಾಸ ಬಿದ್ದು ಸಾಯಬೇಕಾಗುವುದು.

ಗೋದಿ ಮತ್ತು ಕಲ್ಲಿದ್ದಲು

ಅಲ್ಲಿಗೆ ಗೋದಿಯು ಹಂಗೇರಿ, ರುಮೇನಿಯಾ, ರಶ್ಯಾಗಳಿಂದ ಬರುವುದು ನಿಂತುಹೋಗುವುದು. ಇಟಲಿಯ ಹಡಗುಗಳು ದಕ್ಷಿಣ ಅಥವಾ ಉತ್ತರ ಅಮೇರಿಕಗಳಿಗೆ ಹೋಗುವುದಂತೂ ಸಾಧ್ಯವಾಗುವಂತೆಯೇ ಇಲ್ಲ. ಇಟಲಿಯಲ್ಲಿ ಒಂದು ಬೊಟ್ಟು ಎಣ್ಣೆಯೂ ಇಲ್ಲ. ಹತ್ತಿ, ಕಬ್ಬಿಣ ಮತ್ತು ಇತರ ವಸ್ತುಗಳ ವಿಷಯದಲ್ಲಿಯೂ ಹೀಗೆಯೇ ಆಶ್ರಯ ಸಿಗಬೇಕಾಗಿದೆ. ಹೀಗೆ ಪ್ರತಿಯೊಂದು ವಿಷಯಕ್ಕೂ ಅನ್ಯ ದೇಶವನ್ನು ಆಶ್ರಯಿಸಿರಬೇಕಾಗಿರುವಾಗ, ಇಟಲಿಯು ತಟಸ್ಥವಾಗಿರುವುದು ಹೊಸತಾದ ವಿಷಯವೇನೂ ಆಗಿಲ್ಲ.

ಕಲ್ಲಿದ್ದಲಿನ ಮಟ್ಟಿಗೆ, ಇಟಲಿಯು ಸಂಪೂರ್ಣ ಬ್ರಿಟನನ್ನು ಆಶ್ರಯಿಸಿರಬೇಕಾಗಿದೆ. ಭೂಮಧ್ಯದ ಮುಚ್ಚುವಿಕೆಯಿಂದ, ಕೆಲವೇ ದಿನಗಳಲ್ಲಿ ಇಟಲಿಯ ಹಡಗುಗಳು ಪ್ರಯೋಜನವಿಲ್ಲದ ಹಡಗುಗಳಾಗಿ, ಬ್ರಿಟನು ಮತ್ತು ಫ್ರಾನ್ಸುಗಳ ಹಡಗುಗಳೆದುರು ನಿಲ್ಲಲು ಶಕ್ತವಾಗಲಾರದು.

ಇಟಲಿಯು ಜರ್ಮನಿಯಿಂದ ಯಾವ ಸಾಮಗ್ರಿಯನ್ನೂ ಪಡೆಯಬಹುದೆಂಬ ಆಶೆಯೂ ಉಳಿದಿಲ್ಲ. ಜರ್ಮನಿಯು ಕಚ್ಚಾ ಮಾಲುಗಳನ್ನು ಒಂದಿಷ್ಟನ್ನಾದರೂ ಬಿಡಲು ತಯಾರಿಲ್ಲ. ಒಮ್ಮೆ ಅದರಲ್ಲಿ ಭದ್ರತೆಯಲ್ಲಿರುವ ಸಾಧನಗಳು ಮುಗಿದುಹೋದುವೆಂದರೆ, ಮುಂದಕ್ಕೆ ಜರ್ಮನಿಯು ತಲೆಯೆತ್ತುವಹಾಗೆಯೇ ಇಲ್ಲ. ಜರ್ಮನಿಯು ನಿರಂತರವಾಗಿ, ಬೇಕಾದಷ್ಟು ಗೋಧಿ, ಎಣ್ಣೆ, ಕಚ್ಚಾ ವಸ್ತುಗಳ ಮಟ್ಟಿಗೆ ಸ್ವತಂತ್ರವಾಗಿಯೇ ಇರುವುದಾದರೂ ಅನ್ಯ ರಾಷ್ಟ್ರಗಳಿಗೆ ಕೊಡುವಷ್ಟು ಅಲ್ಲಿ ಸಂಗ್ರಹವಿರುವುದಿಲ್ಲ. ಒಬ್ಬ ಅರೆಹೊಟ್ಟೆಯಿಂದ ಜೀವಿಸುವ ಮನುಷ್ಯನು ತನ್ನ ಬಳಿಯಲ್ಲಿದ್ದ ಬಿಸ್ಕತ್ತನ್ನಾದರೂ, ಒಣ ರೊಟ್ಟಿಯನ್ನಾದರೂ ಅನ್ಯರಿಗೆ ಕೊಡಲು ತಯಾರಿರುವುದಿಲ್ಲ. ಹೀಗುಂಟು ಜರ್ಮನಿ ಮತ್ತು ಇಟಲಿಗಳ ಸಂಬಂಧ!

ಅಬಿಸೀನಿಯದ ಪರಿಸ್ಥಿತಿ

ಇಟಲಿಯು ಇಂದು ಬೇರೆ ಇನ್ನೊಂದು ದೊಡ್ಡ ಸಮಸ್ಯೆಯನ್ನು ಇದಿರಿಸಿದೆ. ಇತ್ತೀಚೆಗೆ ಸ್ವಾಧೀನಪಡಿಸಿದ ಅಬಿಸೀನಿಯದೊಡನೆ ಸಂಬಂಧವನ್ನು ಇಟ್ಟುಕೊಳ್ಳಬೇಕಾದರೆ ಸುವೇಜ್ ಕಾಲುವೆ ಮತ್ತು ಭೂಮಧ್ಯ ಭಾಗದ ಆಶ್ರಯವನ್ನು ಬಿಟ್ಟಿರಲು ಸಾಧ್ಯವೇ ಇಲ್ಲ. ಅಬಿಸೀನಿಯದಲ್ಲಿ ಇಟಲಿಯು ಸಾಕಷ್ಟು ಸೈನ್ಯವನ್ನು ಇಟ್ಟಿರುತ್ತದೆ. ಯುದ್ಧಸಂದರ್ಭದಲ್ಲಿ ಅಲ್ಲಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಲೂ ಇಟಲಿಗೆ ಸಾಧ್ಯವಾಗಲಾರದು. ಇಷ್ಟರಲ್ಲಿ ಅಬಿಸೀನಿಯದಿಂದ, ಇಟಲಿಯು ಸೈನ್ಯವನ್ನು ಹಿಂದೆಗೆಯಲೂ ಸಾಧ್ಯವಿಲ್ಲ, ಏಕೆಂದರೆ, ಈಗಾಗಲೇ ಇಟಲಿಯ ಆಡಳಿತದ ಬಗ್ಗೆ ಅಬಿಸೀನಿಯದ ನಾಗರಿಕರು ಕ್ರಾಂತಿಗೆದ್ದಿರುವರು. ಅವರನ್ನು ತಡೆದು ಹಿಡಿಯದಿದ್ದಲ್ಲಿ, ಖಂಡಿತವಾಗಿಯೂ ಇಟಲಿಗೆ ಬಹುಕಾಲ ಅಬಿಸೀನಿಯವನ್ನು ಆಳುವುದು ಸಾಧ್ಯವಿಲ್ಲ.

ಹೀಗಾಗಿ ಫ್ರಾನ್ಸು ಮತ್ತು ಬ್ರಿಟನುಗಳೊಡನೆ ಸಂಬಂಧವನ್ನು ಇಟ್ಟುಕೊಂಡಲ್ಲಿ ಮಾತ್ರ ಇಟಲಿಯು ಅಬಿಸೀನಿಯದಲ್ಲಿ ತನ್ನ ಹಿಡಿತವನ್ನು ಇಟ್ಟುಕೊಳ್ಳಬಹುದು. ಫ್ರಾನ್ಸು ಬ್ರಿಟನುಗಳೊಡನೆ ವಿರೋಧ ನಿಂತ ಕ್ಷಣದಲ್ಲಿಯೇ, ಅಬಿಸೀನಿಯದ ಕುರಿತು ಇಟಲಿಯು ಮಾಡಿದ ಮಹಾಸಾಹಸಗಳೆಲ್ಲವೂ ನಿಷ್ಪ್ರಯೋಜಕಗಳಾಗುವವು. ಜರ್ಮನಿಯನ್ನು ಉದ್ಧರಿಸುವ ಸಲುವಾಗಿ, ಇಟಲಿಯು ಇಂತಹ ಪ್ರಾಣಾಂತಿಕ ಕಾರ್ಯವನ್ನು ಆರಂಭಿಸಲಾರದು. ಲಿಬಿಯ ಮತ್ತು ಟ್ರಿಪೋಲಿಗಳಲ್ಲಿಯೂ ಇಟಲಿಯು ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕಾದರೆ, ಭೂಮಧ್ಯ ಭಾಗದಲ್ಲಿ ಇಟಲಿಯು ವ್ಯವಹಾರವನ್ನು ಕಡಿದುಕೊಳ್ಳಲು ಸಾಧ್ಯವಿಲ್ಲ. ಇಲ್ಲದಿದ್ದಲ್ಲಿ ಬ್ರಿಟಿಷ್ ನೌಕಾದಳವು ಭಯಂಕರವಾಗಿ ಎದುರಿಸುವುದು.

ದ್ವಂದ್ವ ಮುರಿಯಿತು!

ಹಿಟ್ಲರ್ ಮುಸಲನಿ ದ್ವಂದ್ವವು ಮುರಿದಂತೆಯೇ ಆಯಿತು. ಎಷ್ಟೋ ವಿಷಯಗಳಲ್ಲಿ ಈ ಇಬ್ಬರು ಸರ್ವಾಧಿಕಾರಿಗಳು ಅನ್ಯೋನ್ಯ ಒಪ್ಪಂದದಲ್ಲಿ ಇರುವುದಿಲ್ಲ. ಹಿಂದಿನವರ ನೀತಿಸಂಹಿತೆ ಒಳ್ಳೆಯ ಮಿತ್ರರಾದರೂ ಸಮೀಪದ ನೆರೆಕರೆಯವರಾಗಿಬಿಟ್ಟಲ್ಲಿ ಮುಂದಕ್ಕೆ ಅವರ ಗೆಳೆತನವು ಉಳಿಯಲಾರದು ಎಂಬ ವಿಷಯದಲ್ಲಿ ಅರ್ಥವುಂಟು. ಆಸ್ಟ್ರಿಯವು ಇಟಲಿ ಜರ್ಮನಿಗಳನ್ನು ವಿಂಗಡಿಸಿದ್ದಾಗ, ಹಿಟ್ಲರ್ ಮುಸಲನಿಗಳು ಇಂದಿಗಿಂತ ಹೆಚ್ಚು ಅನ್ಯೋನ್ಯದಿಂದಿದ್ದರು.

ಇದು ಮಾತ್ರವಲ್ಲದೆ, ಹಿಟ್ಲರನಿಗೆ ಬೃಹತ್ ಜರ್ಮನಿಯನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯು ಇರುವಾಗ, ಇಟಲಿಯ ಸ್ವಾಧೀನದಲ್ಲಿರುವ ತಿರೋಲ್ ಮೊದಲಾದೆಡೆಗಳು ಮೊದಲು ಆಸ್ಟ್ರಿಯಾದ ಸ್ವಾಧೀನದಲ್ಲಿದ್ದು, ಆಸ್ಟ್ರಿಯವು ಈಗ ಜರ್ಮನಿಗೆ ಸೇರಿರುವಾಗ, ಆ ಭಾಗಗಳನ್ನು ಬೃಹತ್ ಜರ್ಮನಿಗೆ ಸೇರಿಸಿಕೊಳ್ಳಲು ಹಿಟ್ಲರನು ಕನವರಿಸುವನು. ಮಾತ್ರವಲ್ಲದೆ ಆ ಭಾಗಗಳಲ್ಲಿ ಜರ್ಮನರ ಜನಸಂಖ್ಯೆಯೂ ತುಂಬಾ ಇರುತ್ತದೆ.



ಇತ್ತೀಚೆ ಟಿರೋಲಿನ ಕೆಲವು ಕಡೆಗಳಲ್ಲಿ ಈ ಎರಡು ರಾಷ್ಟ್ರಗಳ ಜನರಿಗೆ, ಜನಾಂಗ ದ್ವೇಷದ ಕಾದಾಟವೂ ನಡೆದಿದೆ. ಇಟಲಿ ಸರಕಾರವು ಜರ್ಮನ್ ಪ್ರಜೆಗಳ ಅಭಿಮತಕ್ಕೆ ವಿರುದ್ಧವಾಗಿ ಜನಸಂಚಲನೆಯನ್ನೂ ಮಾಡಿಸುತ್ತದೆ. ಅನೇಕ ಜರ್ಮನ್ ಉದ್ಯೋಗಸ್ಥರ ಕೆಳಗೆ ಇರುವ ಇಟಲಿಯ ಇಟಲಿಯನರು ಬಹಳ ಬೇಸರಗೊಂಡಿರುತ್ತಾರೆ.

ಯುಗೋಸ್ಲೇವಿಯಾ

ಯುಗೋಸ್ಲೇವಿಯದ ಭವಿಷ್ಯದ ವಿಷಯವು ಹಿಟ್ಲರನ ಕಣ್ಣಮುಂದಿದೆ. ಜರ್ಮನಿಯು ಗುರಿಯಲ್ಲಿದೆ ಈ ನಾಡು. ಯುಗೋಸ್ಲೇವಿಯವನ್ನು ಮುತ್ತಿಗೆ ಹಾಕಲು ಜರ್ಮನಿಯು ಯತ್ನವಾಗಿದೆ. ಅಲ್ಲಿನ ರಾಜ್ಯಾಧಿಪತಿಯು ಇಟಲಿಯೊಡನೆ ಒಳ್ಳೆಯದರಲ್ಲಿದ್ದಾನೆ.

ಇಟಲಿಯ ಭವಿಷ್ಯವೂ ಬಹು ಸಂಶಯಾಸ್ಪದವಾಗಿದೆ. ಜರ್ಮನಿಯೊಡನೆ ಭುಜಕ್ಕೆ ಭುಜ ಕೊಟ್ಟು ಎದುರಿಸಬೇಕಾದ ಸಂದರ್ಭವು ಒದಗುವುದು ಅಸಂಭವವಲ್ಲ. ಇಟಲಿಯನರು ಇಂದು ಹೀಗೆ ಎಚ್ಚತ್ತಿರುವರು. ಅಲ್ಲಿನ ಶೇಕಡ ೧೦ ಪಾಲು ಸಹಾನುಭೂತಿಯು ಇಂದು ಬ್ರಿಟನಿನ ಪರವಾಗಿರುವುದು. ಪ್ರಜಾಪ್ರಭುತ್ವ ರಾಷ್ಟ್ರಗಳೊಡನೆ ಕಾದಾಡಲು ಅವರು ಹಿಂಜರಿಯುತ್ತಾರೆ, ಏಕೆಂದರೆ ಅದರಿಂದ ಪಡೆಯುವ ನಷ್ಟವು ಅವರಿಗೆ ಅತ್ಯಂತ ಕಷ್ಟದಾಯಕವಾಗಬಹುದು. ಹೀಗಾಗಿ ಬ್ರಿಟನಿನೊಡನೆ ರಾಜಿಯಿಂದಿರುವುದರಿಂದ ಇಟಲಿಯು ಶಾಂತಿಯಿಂದ ಇರಬಹುದು. ಸಾಧ್ಯವಾದರೆ ತನ್ನ ಸಾಮ್ರಾಜ್ಯವನ್ನು ಬೆಳೆಸಲೂ ಬಹುದು. ಜರ್ಮನಿಯೊಡನೆ ಬೆಂಬಲ ನಿಂತಲ್ಲಿ ಇಟಲಿಯು ಇದ್ದುದನ್ನೂ ಕಳೆದುಕೊಳ್ಳಬೇಕಾದೀತೆಂದು ಅದು ಭಯಗೊಂಡಿದೆ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

Constructive Banking

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding a Crore. . .And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE — ESTED 1906

CANARA BANK, LIMITED.

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರು ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್, ಮಂಗಳೂರು.

ದಕ್ಷಿಣ ಕನ್ನಡದಲ್ಲಿ ಸಾಕ್ಷರತಾ ಪ್ರಚಾರ

ಕಳೆದ ಎರಡು ವರ್ಷಗಳಿಂದ ನಮ್ಮ ದೇಶದಲ್ಲಿ ವಯಸ್ಕರಿಗೆ 'ಓದುಬರಹ ಕಲಿಸುವ ವಿಷಯದಲ್ಲಿ ಹೆಚ್ಚಿನ ಚಳವಳಿ ನಡೆಯುತ್ತಿದೆ. ನಮ್ಮ ಪ್ರಾಂತ್ಯದಲ್ಲಿ ಸರಕಾರದವರು ಈ ಕಡೆಗೆ ಹೆಚ್ಚು ಗಮನಕೊಟ್ಟಂತೆ ಕಾಣುವುದಿಲ್ಲ. ಆದರೂ ಅನೇಕ ಕಡೆಗಳಲ್ಲಿ ವಿದ್ಯಾವಂತರು ಈ ಕಾರ್ಯವನ್ನು ಮುಂದೊತ್ತುತ್ತಿದ್ದಾರೆ

ನಮ್ಮ ಜಿಲ್ಲೆಯವರೂ ಈ ಕಾರ್ಯದಲ್ಲಿ ಹಿಂದುಳಿಯಲಿಲ್ಲ. ದ. ಕ. ಗ್ರಾಮೋದ್ಧಾರ ಸಂಘದವರು ವಯಸ್ಕರಿಗಾಗಿ ಕೆಲವು ವಾಚನಾಲಯಗಳನ್ನು ನಡೆಸಿದರಲ್ಲದೆ ಕಳೆದ ಬೇಸಿಗೆಯಲ್ಲಿ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ವಯಸ್ಕರಿಗೆ ಓದುಬರಹ ಕಲಿಸುವ ಒಂದು ಯೋಜನೆಯನ್ನು ಕೈಗೊಂಡರು. ಇದರ ಪರಿಣಾಮವಾಗಿ ಐನ್ನೆರಡು ಸೆಂಟರುಗಳಲ್ಲಿ ಸ್ವಯಂಸೇವಕರು ಓದು ಬರಹ ಕಲಿಸುವ ತಾತ್ಕಾಲಿಕ ಶಾಲೆಗಳನ್ನು ನಿರ್ವಹಿಸಿ ಇನ್ನೂರು ಜನ ಓದುಬರಹವಿಲ್ಲದ ವಯಸ್ಕರಿಗೆ ಓದುಬರಹ ಕಲಿಸಿದರು. ಸಂಘದಿಂದ [illegible]ಲ ಪುಸ್ತಕ ಕಾಗದ ಪೆನ್ಸಿಲು ಇಷ್ಟುಮಾತ್ರ ಸಹಾಯ ಪಡೆದು ಇಷ್ಟು ಸಹಾಯ ಮಾಡಿದ ಸ್ವಯಂಸೇವಕರ ಕಾರ್ಯವು ಸ್ತುತ್ಯವಿದೆ. ಈಗ ಜಿಲ್ಲೆಯ ಅನೇಕ ಕಡೆಗಳಲ್ಲಿ ಖಾಯಮಾಗಿ ವಯಸ್ಕರ ಕ್ಲಾಸುಗಳು ನಡೆಯುತ್ತಿವೆ. ನಮ್ಮ ಜಿಲ್ಲೆಯವರು ಕೆಲವು ಮಟ್ಟಿಗೆ ಈ ಕಾರ್ಯದಲ್ಲಿ ಉತ್ಸಾಹ ತೋರಿಸುತ್ತಿದ್ದಾರೆ ಎಂಬುದು ಸಂತೋಷದ ವಿಷಯ

ದ. ಕ. ಗ್ರಾಮೋದ್ಧಾರ ಸಂಘದವರು ಇದೇ ಬರುವ ಮಾರ್ಚ ಮತ್ತು ಎಪ್ರಿಲ್ ತಿಂಗಳುಗಳಲ್ಲಿ ಇನ್ನೊಂದು ಸಾಕ್ಷರತಾ ಪ್ರಚಾರದ ಯೋಜನೆಯನ್ನು ಕೈಗೊಳ್ಳುವವರಿದ್ದಾರೆ. ಈ ಸಲವಾದರೂ ನಮ್ಮಲ್ಲಿ ೧೦೦೦ ಜನರನ್ನು ಅಕ್ಷರಜ್ಞರನ್ನಾಗಿ ಮಾಡಬೇಕು. ಈ ಬಗ್ಗೆ ತಮ್ಮ ತಮ್ಮ ಗ್ರಾಮಗಳಲ್ಲಿ ಒಬ್ಬನು ೬೦ ಜನರಿಗೆ ಓದುಬರಹ ಕಲಿಸಲು ಸಿದ್ಧರಿರುವ ೫೦ ಜನ ಸ್ವಯಂಸೇವಕರು ಬೇಕಾಗಿದ್ದಾರೆ. ಒಂದೊಂದು ಸೆಂಟರಿಗೆ ರೂ ೩೦ ಖರ್ಚಿಗೆ ಬೇಕಾಗುತ್ತದೆ. ದಶಂಬರ ಅಂತ್ಯದೊಳಗೆ ನಾವು ರೂ ೧೦೦೦ ಒದಗಿಸಬೇಕು. ಯಾವ ಕಡೆಯಲ್ಲಿ ಈ ಸಂಘಕ್ಕೆ ೧೦ ಜನ ಮೆಂಬರು ಸೇರಿಯುವರೋ ಅಲ್ಲಿ ಒಂದು ಕ್ಲಾಸನ್ನು ತೆರೆಯಲಾಗುವುದು. ಒಂದು ಕ್ಲಾಸು ತೆರೆಯುವಲ್ಲಿ ಹತ್ತು ಜನ ಸದಸ್ಯರಿಂದ ರೂ ೧೦ ದೊರೆತರೆ ಮಿಕ್ಕ ಖರ್ಚನ್ನು ಸಂಘದ ಕಡೆಯಿಂದ ನಡೆಯಿಸಬಹುದು. ಆದುದರಿಂದ ಬರುವ ಮಾರ್ಚ ಎಪ್ರಿಲ್ ತಿಂಗಳಲ್ಲಿ ಸಂಘದವರು ಕೈಗೊಳ್ಳಲಿರುವ ಯೋಜನೆಯಲ್ಲಿ ಭಾಗವಹಿಸಲಿರುವ ಸ್ವಯಂಸೇವಕರು ಬೇಗನೇ ಕಾರ್ಯದರ್ಶಿ, ದ. ಕ. ಗ್ರಾಮೋದ್ಧಾರ ಸಂಘ, ಇವರಿಗೆ ಬರೆಯಬೇಕು

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಸೇವಕರಲ್ಲಿ ವಿನಂತಿ

ಪ್ರಿಯ ಮಾನ್ಯ ಬಂಧುಗಳೇ,

ನಾನು ಈ ಮೂಲಕ ತಮ್ಮಲ್ಲಿ ಮುಂದೆ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿರುವ ಲೇಬರ್ ಇಲಾಖೆಯು, ನಮ್ಮ ಹರಿಜನರ ಸಲುವಾಗಿ ಪ್ರತ್ಯೇಕವಾಗಿ ಈ ಇಲಾಖೆಯನ್ನು ಸರಕಾರದವರು ತೆರೆದಿರುತ್ತಾರೆ. ನಮಗೆ ಬೇಕಾದ ಏಳಿಗೆಯ ಕೆಲಸವನ್ನು ಸರಕಾರದವರು ಇದರ ಮೂಲಕವಾಗಿ ನಡಿಸುತ್ತಾರೆ. ಶಾಲೆಗಳನ್ನು ತೆರೆಯುವುದು, ನೀರಿನ ಅನುಕೂಲತೆಯನ್ನು ಮಾಡಿಕೊಡುವುದು ಮತ್ತು ದರಖಾಸ್ತಿಗೆ ಸ್ಥಳಕೊಡುವುದು ಇವೇ ಮುಖ್ಯವಾದ ಕೆಲಸವಾಗಿರುತ್ತದೆ. ಅದ್ದರಿಂದ ನಾನು ತಮ್ಮೆಲ್ಲರ ಮುಂದೆ ಅರಿಕೆಮಾಡಿಕೊಳ್ಳುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿರುವ ಲೇಬರ್ ಶಾಲೆಗಳು ಬೇಕಾದಲ್ಲಿ ಇರುವುದಿಲ್ಲ, ಕೆಲವು ಹಳ್ಳಿಗಳಲ್ಲಿ ನಮ್ಮ ಬಡಹರಿಜನರಿಗೆ ವಿದ್ಯಾಭ್ಯಾಸದ ಗಾಳಿಯೇ ಈ ತನಕ ಬೀಸಲಿಲ್ಲ. ಕೆಲವು ಹಳ್ಳಿಗಳಲ್ಲಿರುವ ಹರಿಜನರನ್ನು ಯಾರೂ ಕೇಳಿ ಮಾತಾಡುವವರಿಲ್ಲ. ನಮ್ಮ ಜಿಲ್ಲೆಯಲ್ಲಿ ಅನೇಕಮಂದಿ ಹರಿಜನರಿರುತ್ತಾರೆ. ಆದುದರಿಂದ ಪ್ರತಿ ಒಬ್ಬ ಸೇವಕನೂ ನಮ್ಮ ಬಡ ಜನಾಂಗದ ಮೇಲೆ ಪ್ರೀತಿಯಿಟ್ಟು ಹರಿಜನರಿರುವ ಸ್ಥಳ, ಗ್ರಾಮ, ಮಕ್ಕಳ ಸಂಖ್ಯೆ ಇವುಗಳನ್ನು ಸರಿಯಾಗಿ ತೋರಿಸಿ ಪ್ರತಿಯೊಬ್ಬರು ಒಂದು ಅರ್ಜಿಯನ್ನು ಶ್ರೀ ಕೆ. ಈಶ್ವರ್, ಎಂ. ಎಲ್. ಎ.ಯವರಿಗೆ ಕಳುಹಿಸಿಕೊಡಬೇಕಾಗಿ ಸದ್ರಿಯವರು ಪ್ರಾರ್ಥಿಸಿಕೊಳ್ಳುತ್ತಾರೆ.

ಮಂಗಳೂರು ಮುನಿಸಿಪಾಲಿಟಿಯ ಕಮಿಶನರರಲ್ಲಿ ವಿನಂತಿ

ಮಹಾಸ್ವಾಮಿ,

ನಾನು ಹರಿಜನರ ಪರವಾಗಿ ತಮ್ಮ ಮುಂದೆಯೂ ಮತ್ತು ನಗರಸಭೆಯ ಮೆಂಬರರಲ್ಲಿಯೂ ಅರಿಕೆಮಾಡಿಕೊಳ್ಳುವುದೇನೆಂದರೆ, ನಮ್ಮ ಮುನಿಸಿಪಾಲಿಟಿಯೊಳಗೆ ಇರುವ, ಅತ್ತಾವರ ಮತ್ತು ಬಿಜೈ ಈ ಎರಡು ಸಂಸ್ಕಾರಭೂಮಿಯಲ್ಲಿರುವವರು ನಿಮ್ಮ ಕಾವಲುಗಾರರು ಹರಿಜನರ ಶವವನ್ನು ಈ ಸ್ಥಳಗಳಲ್ಲಿ ಸಂಸ್ಕಾರ ಮಾಡಲಿಕ್ಕೂ ಮತ್ತು ಈ ಕಾಂಪೌಂಡಿನಲ್ಲಿರುವ ಸಾರ್ವಜನಿಕ ಕಟ್ಟೋಣದಲ್ಲಿ ಶವವನ್ನು ಇಡಲಿಕ್ಕೂ ಕೂಡ ಪ್ರವೇಶವನ್ನು ಕೊಡುವುದಿಲ್ಲ. ಈ ಸಂಗತಿಯನ್ನು ನೋಡುವಾಗ ಆಶ್ಚರ್ಯದ ಸಂಗತಿಯೆಂದು ನಾನು ನಂಬುತ್ತೇನೆ. ಇಂಥಾ ದೊಡ್ಡ ಪಟ್ಟಣದಲ್ಲಿ ಈ ರೀತಿಯ ತೊಂದರೆಗಳು ಬಡ ಹರಿಜನರಿಗೆ ಸಿಕ್ಕಿದರೆ ಬಡ ಹಳ್ಳಿಯಲ್ಲಿರುವ ಹರಿಜನರ ಗತಿಯೇನೆಂದು ಹೇಳಲಿ. ನಮ್ಮ ಸಂಸ್ಥಾನದಲ್ಲಿ ಈ ಹೊತ್ತಿಗೆ ದೇವಾಲಯಗಳ ಬಾಗಿಲು ಹರಿಜನರಿಗೆ ತೆರೆದಿರುವಾಗ ನಮ್ಮ ಮಂಗಳೂರಿನಲ್ಲಿರುವ ಸಂಸ್ಕಾರ ಭೂಮಿಯ ಗೇಟು ಇನ್ನೂ ತೆರೆಯಲಿಲ್ಲವೆಂದು ನೋಡುವಾಗ ದುಃಖಪಡಬೇಕಾದ ಸಂಗತಿ. ಆದುದರಿಂದ ನಾನು ತಮ್ಮ ಮುಂದೆ ಅರಿಕೆಮಾಡಿಕೊಳ್ಳುವುದೇನೆಂದರೆ ಸಂಸ್ಥಾನದಲ್ಲಿ ಜಾರಿಯಾದ ಕಾನೂನು ಪ್ರಕಾರ, ಇದು ಶುದ್ಧ ತಪ್ಪು. ಇಂಥ ಅಲ್ಪ ಸಂಗತಿಗೆ ನಮ್ಮ ಮಂಗಳೂರು ಮುನಿಸಿಪಾಲಿಟಿಯೂ ಎಡೆಕೊಡಬೇಕೆ? ಈ ಸಂಸ್ಕಾರ ಭೂಮಿಯ ಗೇಟು ಎಲ್ಲರಿಗೂ ತೆರೆಯಬೇಕು ಮತ್ತು ನಗರಸಭೆಯವರು ಈ ಭೂಮಿಯಲ್ಲಿ ಒಂದು ನೋಟೀಸು ಹಾಕುವಂತೆ ಏರ್ಪಾಡು ಮಾಡಬೇಕೆಂದು ನನ್ನ ಕೋರಿಕೆ

ಕೆ ಈಶ್ವರ, ಎಂ ಎಲ್ ಎ.

ನೋಟೀಸು

ಕಾರ್ಕಳ ಡಿ ಮು ಕೋರ್ಟಿನಲ್ಲಿ

R. E P No 702/1939 in

O. S 475/1938

ಬಿ. ಅನಂತರಾವ್ . . ಡಿಕ್ರಿದಾರ

ಮತ್ತು

ಕೃಷ್ಣಯ್ಯ, ವಕ್ಕಿಲ್ಲಾಯ ಮಕ್ಕಳ ಬ್ರಾಹ್ಮಣಯ್ಯನವರ ಮಗ, ಉಡುಪಿ ತಾಲೂಕು ಬೆಳ್ಳಪು ಗ್ರಾಮಸ್ಥ, ಹಾಲಿ ಕೊಚ್ಚಿ ಸಂಸ್ಥಾನದ ಚೆನ್ನಮಂಗಲಂ ಈಶ್ವರ ಸೇವಾಪರಿ ಕರ್ಮಿಪಾಳ್ಯ ಎಂಬಲ್ಲಿರುವವ } ಜಿ. ಡಿ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಅರ್ಜಿದಾರನು ನಿಮ್ಮ ಮೇಲೆ ಪಡದ ಸದ್ರಿ O. S. 475/1938ನೇ ಡಿಕ್ರಿಯ ಮೇಲೆ ನಡಿಸಿದ ಮೇಲ್ಕಾಣಿಸಿದ ಅಮಲ್ದಾರಿಯಲ್ಲಿ ನಿಮ್ಮ ಆಸ್ತಿಯನ್ನು ಹಿಲಾಂಮಾಡಿಸುವ ಬಗ್ಗೆ ದಾಖಲು ಮಾಡಿದ ಹಿಲಾಂ ಇಸ್ತಿಹಾರಿನ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಅವುಗಳನ್ನು ತಾ. 4-10-39ನೇ ದಿನ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳುಹಿಸಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ವ್ಯವಹಾರವು ತಪ್ಪಿಯೂ ನಿಮ್ಮ ಪರೋಕ್ಷದಲ್ಲಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ.

(By order of the Court)

ಕಾರ್ಕಳ 11—9—39 } **P. V. Upadhyaya,** B. A., LL., B. *Vakil for Petitioner*

Kanarese No 2

ಚರ್ಮರೋಗಗಳು ಇಂದ್ರಜಾಲದಂತೆ ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವ ಗುಣದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಾಡಿಸುವ ದೀರ್ಘಕಾಲದ ಕಾಲ್ಮುರುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಗಾದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು.

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಪಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ರೂಪಾ 1-12-0ಕ್ಕೆ ಲಿವರ್ ರಿಸ್ಟ್ ವಾಚು



ಈ ಚಿತ್ರದಲ್ಲಿ ತೋರುವುದಕ್ಕಿಂತಲೂ ಅಂದವಾದ ಚೌಕ ಪತ್ತ ದ ಆಕಾರದ ವೇಳೆ ಕರಿಸ್ಟ್‌ವಾಚುಗಳು ಸರಿಯಾದ ಸಮಯ ತೋರಿಸುವುದೆಂದು 6 ವರ್ಷದ ಗ್ಯಾರಂಟಿ

ಕ್ರಯ 1-12-0, ಸುಪೀರಿಯರ್ 1-14-0, ಸ್ಪೆಶ್ಯಲ್ 2-8-0 ರೇಡಿಯಂ 3-8-0, ರೋಲ್ಡ್‌ಗೋಲ್ಡ್ 6-8-0,) ಶ್ರೇಷ್ಠವಾದ್ದು 8-8-0 ಪೋಸ್ಟೇಜು ಮತ್ತು ಪೇಕಿಂಗ್ 0-10-0

3 ವಾಚುಗಳನ್ನು ಒಮ್ಮೆಲೇ ತರಿಸುವುದಾದರೆ ಪೋಸ್ಟೇಜು ಧರ್ಮಾರ್ಥ

Empire Trading Co.,

P. O. No. 6744 Calcutta. (A. B.

THE PIE-MONEY BANK LTD.,

Maidan Road, MANGALORE.

Undertakes all kinds of Banking Business Current account at 1½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director.*

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಅಯೇಷಾ!

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

'ಪ್ರಿಯ ಸಯ್ಯದ್ ಅಬ್ಬಾಸ್,

ಒಬ್ಬ ಧೀರ ಮುಸಲ್ಮಾನ ಭ್ರಾತೃವೆಂದು ನಾನು ನಿನ್ನನ್ನು ಅಭಿನಂದಿಸುತ್ತೇನೆ, ಆದರೆ ನನ್ನನ್ನು ಹಿಡಿಯಲು ಯತ್ನಿಸುವವನೆಂದು, ಬಹು ದ್ವೇಷಿಸುತ್ತೇನೆ. ನೀನು ಒಬ್ಬ ತರುಣ ಮುಸಲ್ಮಾನನಿಗೆ ಆತನಿಗೆ ಇಡೀ ಜಗತ್ತಿನಲ್ಲಿ ಅತ್ಯಂತ ಪ್ರಿಯವಾಗಿರುವ ಏಕಮಾತ್ರ ವಸ್ತುವನ್ನು ಸೆರೆಯಲ್ಲಿಟ್ಟು, ಹೀಗೆ ಯಾತಕ್ಕೆ ಸಂಕಟಗೊಳಿಸುತ್ತೀ ನೀನು ಇಂತಹ ಸಂದರ್ಭದಲ್ಲಿ, ನನ್ನ ಪ್ರಣಯಿನಿಗಾಗಿ ಏನು ಮಾಡುವೆಯೆಂದು ವಿಚಾರಿಸಿರಿ, ಆದರಂತೆ ನನ್ನನ್ನು ಪರೀಕ್ಷಿಸುವ ಸಲುವಾಗಿ ಹೀಗೆ ಮಾಡುತ್ತೀಯಾ? ಇತ್ತೀಚೆಗೆ ನಾನು ರಕ್ತಪಾತ ಮಾಡುವುದಿಲ್ಲವೆಂದು ನಿರ್ಣಯಿಸಿದ್ದೆನು ಆದರೆ ನೀನು ನನ್ನನ್ನು ಕೆರಳಿಸುತ್ತಿದ್ದಿ ನಾನು ಪ್ರೇಮಿಸುವ ಸ್ತ್ರೀಗೆ ನಿನ್ನ ಮರಣದಿಂದ ಪ್ರಯೋಜನವಾದೀತೆಂದು ನಾನು ತಿಳಿಯುವುದಿಲ್ಲ, ನೀನು ಆಕೆಯನ್ನು ಗಲ್ಲಿಗೇರಿಸಿದರೆ, ಮುಂದಕ್ಕೆ ನನ್ನನ್ನು ಕೊಂದಾಗಲಿ ಜೀವಂತವಾಗಲಿ ಹಿಡಿವ ಯೋಚನೆಯನ್ನೇ ಬಿಟ್ಟುಬಿಡು ಮಹಾನರ್ಥವು ಸಂಭವಿಸಲಿದೆ ಈ ಕುರಿತು ನಿನಗೆ ಎಚ್ಚರಿಕೆಯಿರಲಿ,

'ಅಬ್ದುಲ್ ರಹಮಾನ್'

ಸೈಯ್ಯದನು ಈ ಪತ್ರವನ್ನು ಓದಿ ಒಮ್ಮೆ ದಿಗಿಲುಗೊಂಡನು ಹೇಗಿದ್ದರೂ, ರಹಮಾನನು ಈ ಸಂದರ್ಭದಲ್ಲಿ ಸ್ವತಃ ಬರದಿರಲಾರನೆಂದು ಆತನು ತಿಳಿದೇ ಇದ್ದನು ಆತನನ್ನು ಕಂಡ ಕೂಡಲೇ ಎಲ್ಲಾ ವಿಧದಿಂದಲೂ ಹಿಡಿಯುವಂತೆ ಸಯ್ಯದನು ಪೋಲೀಸಿನವರಿಗೆ ಆಜ್ಞಾಪಿಸಿದನು ಕಾವಲು ಮೊದಲಿಗಿಂತಲೂ ಬಲವಾಯಿತು. ರಹಮಾನನು ಸೆರೆಸಿಕ್ಕುವುದಿದ್ದರೆ ಆಯೇಷೆಯನ್ನು ಬಿಡುಗಡೆ ಮಾಡಬಹುದಾಗಿಯೂ ರಹಮಾನನಿಗೆ ತಿಳಿವಂತೆ ಸುದ್ದಿ ಹರಡಿದನು'

ಮಳೆಯೂ ಜೋರಾಗಿ ಸುರಿಯುತ್ತಿತ್ತು ಮಧ್ಯರಾತ್ರಿಯ ವೇಳೆಗೆ, ಗೇಟಿನಿಂದ ಮೂರು ಗಜ ದೂರದಲ್ಲಿ, ಒಂದು ವ್ಯಕ್ತಿಯು ನಿಂತಿರುವುದಾಗಿ ಕಂಡುಬಂತು ಕಾವಲುಗಾರರು ಯಾರೆಂದು ಕೇಳಿದಕ್ಕೆ ಅಬ್ದುಲ್ ರಹಮಾನನೆಂಬ ಉತ್ತರವೂ ಬಂತು. ಕಾವಲಿನವರು ಆತನನ್ನು ಅಪೇಕ್ಷಿಸಿದಂತೆ ಬಹಳ ಜಾಗ್ರತೆಯಿಂದ ಸಬ್ ಇನ್ಸ್‌ಪೆಕ್ಟರಲ್ಲಿಗೆ ರಹಮಾನನನ್ನು ಕರೆದುಕೊಂಡು ಹೋದನು ಹೊರಗೆ ಯಾರಾದರೂ ನಿನ್ನೊಡನೆ ಬಂದವರಿದ್ದಾರೆಯೇ ಇನಸ್ಪೆಕ್ಟರನು ಕೇಳಿದನು

'ಒಬ್ಬನು, ತಾನಾಗಿ, ಶತ್ರುಗಳ ಕೈವಶನಾಗಲು ಬರುವುದಿದ್ದರೆ ಆತನು ತನ್ನ ಸಂಗಡಿಗರನ್ನು ಕರಕೊಂಡು ಬರುವುದು ಅವಶ್ಯವಿಲ್ಲ ನನಗೆ ಅಯೇಷೆಯನ್ನು ನೋಡಬೇಕು. ಆತ ಹೇಳಿದ.

'ಆಫೀಸರರ ಒಪ್ಪಿಗೆಯಿಲ್ಲದೆ, ನಾನು ನಿನಗೆ ತೋರಿಸುವುದು ಸಾಧ್ಯವಿಲ್ಲ'

'ಕೇವಲ ಐದು ನಿಮಿಷ ಮಾತ್ರ'' ರಹಮಾನನು ದೈನ್ಯದಿಂದ ಕೇಳಿದ ಕರುಣೆಗೊಂಡು ಅಧಿಕಾರಿಯು ಒಪ್ಪಿ, ಆಯೇಷೆ ಇದ್ದ ಕೋಣೆಗೆ ಆತನನ್ನು ಕರೆದೊಯ್ದನು ಹೊರಗೆ ಕಾವಲುಗಾರರು ನಿಂತಿದ್ದರು 'ಆಯೇಷಾ, ನಾನು ನಿನ್ನನ್ನು ಬಿಡಿಸಲು ಬಂದಿದ್ದೇನೆ' ಗಂಭೀರವಾಗಿ ಹೇಳಿದನು ಆತನ ಕಡೆಗೆ ಆಯೇಷಳು ಕೃತಜ್ಞತೆಯಿಂದಲೂ ನೋಡಿದಳು ನೀನು ಹೀಗೆ ಯಾತಕ್ಕೆ ಮಾಡಿದಿ? ಆಕೆ ಕೇಳಿದಳು ಆತನು ಉತ್ತರ ಕೊಡಲಿಲ್ಲ ಅಧಿಕಾರಿಯು ಆತನಿಗೆ ಇನ್ನೊಂದು ಕೋಣೆಯನ್ನು ತೋರಿಸಿ, ಅಲ್ಲಿ ಇರುವಂತೆ ಹೇಳಿ ಆತನ ಬಳಿ, ಇನ್ನೊಬ್ಬ ಕಾವಲಿನವನನ್ನು ಇರಿಸಿದನು

'ನಾನು ತಪ್ಪಿಸುವುದೆಂದು ಹೆದರಿಕೆಯೆ?' ರಹಮಾನ್ ಕೇಳಿದನು. ಉತ್ತರಕೊಡದೆ ಅಧಿಕಾರಿಯು, ಕೋಣೆಯಿಂದ ಹೊರಬಂದನು ಈ ಸಂತೋಷದ ವಾರ್ತೆಯನ್ನು ಸಯ್ಯದನಿಗೆ ಹೇಳಿ ಕಳುಹಿಸುವ ಯೋಚನೆಯಲ್ಲಿ ಆತನು ಮುಳುಗಿದ್ದನು. ಮಳೆ ಜೋರಾಗಿ ಬರುತ್ತಿತ್ತು ನಿಬಿಡ ಅಂಧಕಾರವು ಸುತ್ತು ಆವರಿಸಿತ್ತು, ಅಲ್ಲಿ ಕೇವಲ ಹತ್ತೇ ಮಂದಿ ಕಾವಲುಗಾರರು ಮಾತ್ರ ಇದ್ದರು, ಒಬ್ಬಿಬ್ಬರು ಪೋಲೀಸರನ್ನು ಕಳುಹಿಸುವುದು ಅಪಾಯವೆಂದು ಗ್ರಹಿಸಿ, ಆತನು ಐದು ಜನರನ್ನು ಹೋಗಹೇಳಿ, ಆದಷ್ಟು ಬೇಗ ಮರಳಿ ಬರುವಂತೆ ಅವರಿಗೆ ತಿಳಿಸಿದನು.

ಅವರು ಹೊರಹೊರಟ ಮೇಲೆ, ಬಾಗಿಲನ್ನು ಭದ್ರವಾಗಿ ಮುಚ್ಚಿ, ಅವರು ತಿರುಗಿ ಯಾವಾಗ ಬರುವರೆಂದು, ಆಗ್ರಹಪೂರ್ವಕ ಇದಿರು ನೋಡುತ್ತಿದ್ದನು. ಕೇವಲ ಹತ್ತೇ ನಿಮಿಷ ಕಳೆಯುವಷ್ಟರಲ್ಲಿ ಮನೆಯ ಹೊರಗಡೆಯಿಂದ, ಗುಂಡಿನ ಧ್ವನಿಯು ಕೇಳಿಸಿತು. ಮೂರು ಬದಿಗಳಿಂದಲೂ ಜನರು ಮನೆಯನ್ನು ಮುತ್ತಿಗೆ ಹಾಕಿದ್ದರು. ಸಬ್ ಇನ್ಸ್ಪೆಕ್ಟರನಿಗೆ ಕೈಕಾಲು ಬರದಾಯಿತು. ಇದ್ದ ಕಾವಲುಗಾರರನ್ನಾದರೂ ತಯಾರಾಗಿರುವಂತೆ ಆಜ್ಞಾಪಿಸಿ, ಒಬ್ಬನು, ಆಯೇಷೆ ಮತ್ತು ರಹಮಾನರನ್ನು ನೋಡಿಕೊಂಡಿರುವಂತೆಯೂ, ಮಿಕ್ಕವರು ಮನೆಯನ್ನು ಮುತ್ತಿಗೆಯಿಂದ ರಕ್ಷಿಸುವಂತೆಯೂ ಆತ ನಿಯಮಿಸಿದನು.

ಈ ಗೊಂದಲದಲ್ಲಿ, ಒಳಗಿನ ಕಾವಲುಗಾರನೊಬ್ಬನೆ ಇನಸ್ಪೆಕ್ಟರನು ರಹಮಾನನ ಕೈಗೆ ಕೋಳಹಾಕಲು ಕೂಗಿ ಹೇಳಿದನು ಆತನು ಹಾಗೆ ಮಾಡುವಷ್ಟರಲ್ಲಿ, ರಹಮಾನನು ಆತನನ್ನು ನೆಲಕ್ಕೆ ಕೆಡವಿ, ಹತ್ತಿರದ ದೀಪವನ್ನು ನಂದಿಸಿ, ಹೊರ ದುಮುಕಿದನು ರಹಮಾನನು ಆಯೇಷೆಯೊಡನೆ ತಪ್ಪಿಸಿದನೆಂದು ಕಾವಲುಗಾರನು ಬೊಬ್ಬಿಟ್ಟನು ಇಷ್ಟರಲ್ಲಿ ಸಬ್ ಇನಸ್ಪೆಕ್ಟರನು ಒಳಗೆ ಹೋಗಿ ದೀಪ ಹಚ್ಚಲು, ರಹಮಾನನು ಎಲ್ಲಿಯೂ ಕಾಣಲಿಲ್ಲ ಆಯೇಷೆಯು ಚಕಿತಳಾಗಿ ಮೊದಲಿದ್ದಲ್ಲಿಯೇ ಕುಳಿತಿದ್ದಳು

ಅಷ್ಟರಲ್ಲಿ ಸೈಯ್ಯದನೂ ಅಲ್ಲಿಗೆ ಪೋಲೀಸು ದಳದೊಡನೆ ಬಂದಿದ್ದನು ಎಲ್ಲಾ ಕಡೆಯು ಶಾಂತತೆಯು ಹರಡಿ, ತಪ್ಪಿಸಿಹೋದ ರಹಮಾನನು ಯಾತಕ್ಕೆ ಆಯೇಷೆಯನ್ನು ಕೊಂಡುಹೋಗಲಿಲ್ಲವೆಂದು ಸಯ್ಯದನಿಗೆ ತಿಳಿಯಲಿಲ್ಲ'

ಒಳಹೋಗಿ ಎಲ್ಲಾ ಕಡೆ ಪರೀಕ್ಷಿಸಲು ಒಂದು ಕಾಗದವು ಬಿದ್ದಿತು ಅದರಲ್ಲಿ ಹೀಗಿತ್ತು

ಪ್ರಿಯ ಸಯ್ಯದ್ ಅಬ್ಬಾಸ,

ನಾನು ಇಂದು, ಸ್ವತಃ ನಿನಗೆ ಶರಣಾಗಿಯಾದರೂ ನನ್ನ ಆಯೇಷೆಯನ್ನು ಬದುಕಿಸಲು ಬಂದಿದ್ದೆನು ನೀನು ಬಹಳ ದೊಡ್ಡ, ವಿಚಾರಹೀನದ ಕೆಲಸ ಮಾಡಿದಿ' ಹಾಗೆಯೇ ನಾನೂ ಮಾಡಿದೆ. ನನ್ನ ಪ್ರಣಯಿನಿಯಾದ ಆಯೇಷೆಯು ಇವಳಲ್ಲ ಲೋಕದಲ್ಲಿ ನೂರಾರು ಆಯೇಷೆಯರಿರಬಹುದು. ಆದರೆ ನೀನು ಹಿಡಿದಾಕೆಗೂ ನನಗೂ ಯಾವ ಸಂಬಂಧವೂ ಇಲ್ಲ ನಿನಗೆ ಇಷ್ಟೆಲ್ಲಾ ಗೊಂದಲವುಂಟುಮಾಡಿದುದಕ್ಕಾಗಿ ನಿಜವಾಗಿಯೂ ನನಗೆ ಬಹಳ ಬೇಸರವಾಗಿದೆ

'ರಹಮಾನ್

ಸಯ್ಯದನಿಗೆ ಹಲವು ತಿಂಗಳ ತನಕ ಇದು ಸಮಸ್ಯೆಯಾಗಿಯೇ ಉಳಿಯಿತು ಕೆಲವು ಕಾಲ ಆಕೆಯನ್ನು ಆತನು ಸೆರೆಯಿಂದ ಬಿಡಲೇ ಇಲ್ಲ ಕಡೆಗೆ ಆಕೆಯ ಚಲನವಲನಗಳನ್ನು ಪರೀಕ್ಷಿಸಿಕೊಂಡಿರುವಂತೆ ಪೋಲಿಸರಿಗೆ ಹೇಳಿ ಬಿಟ್ಟು ಬಿಟ್ಟನು

ಕೆಲಕಾಲದ ಮೇಲೆ ಸಯ್ಯದನು ಮುಲಪುರವನ್ನು ಬಿಟ್ಟು ಮದ್ರಾಸಿನಲ್ಲಿ ಪೋಲೀಸು ಸುಪರಿಂಟೆಂಟನಾಗಿ ಅಧಿಕಾರ ವಹಿಸಿದನು ಆ ದಿನಗಳಲ್ಲಿಯೇ ಒಬ್ಬ ತರುಣ ಮಹಿಳೆಯು ಪೋಲೀಸು ಸುಪರಿಂಟೆಂಡೆಂಟರಲ್ಲಿಗೆ ಬಂದು ತಾನು ರಹಮಾನನೆಂದೂ, ತನ್ನ ಹೆಂಡತಿ ಆಯೇಷೆಯು ಈಕೆಯೆಂದೂ ಪರಿಚಯ ಹೇಳಿದನು' ಸಯ್ಯದನಿಗೆ ಆಶ್ಚರ್ಯವಾಯಿತು ತಾನು ಸೆರೆಯಲ್ಲಿಟ್ಟಿದ್ದ ಹೆಂಗುಸು ಅವಳೇ ಆಗಿದ್ದಳು.

ಆಯೇಷೆಯು ಸೆರೆಮನೆಯಲ್ಲಿಯೇ ಕೆಲವು ಕಾಲ ಸುರಕ್ಷಿತವಾಗಿರಬೇಕೆಂದು ತಾನು ಬಯಸಿದುದರಿಂದ, ಆ ದಿನ ಆವಳನ್ನು ಬಿಡುಗಡೆ ಮಾಡಲು ಬಯಸಲಿಲ್ಲವೆಂದು ಪೋಲೀಸು ಸುಪರಿಂಟೆಂಡೆಂಟರ ಸಮಸ್ಯೆಯನ್ನು ರಹಮಾನನೇ ಪರಿಹರಿಸಿದನು

'ಅಯ್ಯಾ, ಒಳ್ಳ ಮಹಿಳೆಯನ್ನು, ನಿಮ್ಮ ಯಾವ ಸರಕಾರವಾದರೂ ಮೋಸಗೊಳಿಸಲು ಸಾಧ್ಯವಿಲ್ಲ' ರಹಮಾನನು ನಗಾಡಿ ಹೇಳಿದನು

(ಆಧಾರದಿಂದ)

—ದುರ್ಗಾದಾಸ

ಕೆಟ್ಟ ಶೀತ ಮತ್ತು ಥಂಡಿಯಿಂದ ಪಾರಾಗಿರಿ!

ನಿಮ್ಮ ಗಂಟಲು ಬೇನೆಯಿಂದಿರುವಾಗ ಕಣ್ಣುಗಳಿಂದ ನೀರಿಳಿಯುವಾಗ, ಮೈಯು ಥಂಡಿಯಿಂದ ನಡುಗಿ ನೀನು ಬಂದು ಶೀತದಲ್ಲಿ ಮುಳುಗಿರುವಾಗ ಪೆಪ್ಸ ಗುಳಿಗೆಗಳು ನಿಮಗೆ ಸುಖವನ್ನುಂಟು ಮಾಡುವುವು

ಪೆಪ್ಸ ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ಶ್ವಾಸೇಂದ್ರಿಯಗಳನ್ನು ಆಳವಾಗಿ ಹೋಗಿ ಸೇರುತ್ತವೆ ಈ ಪ್ರಕಾರದಿಂದಾಗಿ ಪೆಪ್ಸ ಶೀತವನ್ನು ಹೊರಹಾಕಿ ಕಫದ ಕ್ರಿಮಿಗಳನ್ನು ನಾಶಮಾಡುತ್ತದೆ. ಶೀತದಿಂದಾಗಿ ಬಾತುಹೋದ ಶ್ವಾಸೇಂದ್ರಿಯಗಳನ್ನು ಗುಣಪಡಿಸುತ್ತದೆ ಮತ್ತು ಮುಂದೆ ಫಕ್ಕನೇ ಶೀತವು ನಿಮಗೆ ತಗಲದಂತೆ ರಕ್ಷಿಸುತ್ತದೆ

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂಪಾಯಿ 1ರಂತೆ ಮಾರುತ್ತಾರೆ

ಏಜಂಟ್ಸ್ ಮೆಸರ್ಸ್ ರಾಧಾ ಮತ್ತು ಕಂಪೆನಿ, ಪಾರ್ಕಟೌನು ಮದರಾಸು

ಯಾವಾಗಲೂ ಪೆಪ್ಸನ್ನು ಪಯೋಗಿಸಿರಿ

PEPS

ಕ್ರಿಮಿನಾಶಕ ಶ್ವಾಸನೀಯ ಗುಳಿಗೆಗಳು

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p a in denominations of

RS. 50/-, 100/-, 500/-, 1,000/-, & 5,000/

are now issued at all our Branches

For particulars call at or write to any of our nearest Branches.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು.

ವಿಲಕ್ಷಣ ತಯಾರಿ ಜಮ್ಮಿ ವೆಂಕಟ್ರಮ ಅಯ್ಯರ್

ವಿಶೇಷ ಮಾಹಿತಿಗೆ ಬರೆಯಿರಿ

ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಲಿಸ್ಟು,
ಮೈಲಾಪುರ, ಮದ್ರಾಸು

ಸರದಾರ ಭವನ Sirdar Bhavan

ಫೆಲಿಕ್ಸ್‌ಪೈ ಬಜಾರ್-ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೋಣೆಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳು.

Proprieter— H R Rao,

Bangalore Guit Emporuim Madras

ಯುದ್ಧಮಾಡುವ ಉದ್ದೇಶ ವೇನೆಂದು ಮೊದಲು ಸ್ಪಷ್ಟಪಡಿಸಬೇಕು

[೫ನೇ ಪುಟದಿಂದ]

ಸೈನ್ಯಗಳ ಸಂಬಂಧ ಇದೇ ತತ್ವರಕ್ಷಣೆಯ ಅವಸರಗಳಿದ್ದರೂ, ಅವುಗಳು ಪಾಲಿತವಾಗಲಿಲ್ಲ. ನಿಜವಾಗಿ ಪ್ರಜಾಪ್ರಭುತ್ವವು ವಿನಾಶಸ್ಥಿತಿಯಲ್ಲಿ ಉಂಟು. ಮನಃಪೂರ್ವಕವಾಗಿ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳಿಗಾಗಿ ಕಾದಾಡುವವರಿಗೆ ಅದನ್ನು ಕೊಟ್ಟಿಲ್ಲ.

೬ ಬ್ರಿಟಿಷರ ಸ್ವಂತದ ಸಲುವಾಗಿ ಯುದ್ಧ ಮಾಡುವುದಿದ್ದರೆ ಭಾರತೀಯರಿಗೆ ಅದರಲ್ಲಿ ಭಾಗವಹಿಸುವ ಅಗತ್ಯವಿಲ್ಲ. ಅದಲ್ಲದೆ ಪ್ರಜಾಪ್ರಭುತ್ವದ ಸಲುವಾಗಿ, ಅದರಿಂದ ಲೋಕನಿಯಮ ಪಾಲನೆಯ ಸಲುವಾಗಿ ಬ್ರಿಟಿಷರು ಯುದ್ಧ ಮಾಡುವುದಿದ್ದರೆ, ಭಾರತದ ಸ್ವಾತಂತ್ರ್ಯವು ಮೊದಲು ನಿಶ್ಚಯವಾಗಬೇಕು. ಸ್ವತಂತ್ರ ಭಾರತವು ಖಂಡಿತವಾಗಿಯೂ ಲೋಕ ಸ್ವಾತಂತ್ರ್ಯಕ್ಕಾಗಿ ಯುದ್ಧಮಾಡುವುದು.

೭ ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನು ಸುಲಿಯುವುದು ಬೆಳೆದು ಬಂದ ಕಾರಣವಾಗಿ ಇಂದು ಇಂತಹ ದುರ್ಘಟನೆ ಒಂದಿದೆ. ಭಾರತದಲ್ಲಿಯೇ ಈ ಸಮಸ್ಯೆ ಇದೆ. ಇದರ ಪರಿಹಾರವಾಗಿ ಭಾರತವು ತನ್ನ ಅಮಿತ ಶಕ್ತಿಯನ್ನು ಜನರ ಕಲ್ಯಾಣಕ್ಕಾಗಿ ಉಪಯೋಗಿಸುವುದು.

೮ ಈಗಾಗಲೇ ಹಲವು ರಾಜರು ಬೆಂಬಲ ಕೊಡಲು ಪ್ರಕಟಿಸಿದ್ದಾರೆ. ಪ್ರಜಾಪ್ರಭುತ್ವಕ್ಕಾಗಿ ಬೆಂಬಲ ಕೊಡುವ ರಾಜರ್ ಮೊದಲು ತಮ್ಮ ಸಂಸ್ಥಾನಗಳ ದಬ್ಬಾಳಿಕೆಯನ್ನು ನಿಲ್ಲಿಸಿ, ಅಲ್ಲಿ ಪ್ರಜಾಪ್ರಭುತ್ವವನ್ನು ಉಪಯೋಗಿಸಬೇಕು. ನರೇಂದ್ರರ ದಬ್ಬಾಳಿಕೆಗೆ, ಅವರಿಗಿಂತಲೂ ಬ್ರಿಟಿಷ ಸರಕಾರವು ಹೆಚ್ಚು ಜವಾಬ್ದಾರವಾಗಿದೆ.

೯ ಯುರೋಪ್, ಆಫ್ರಿಕ ಏಶ್ಯಾಗಳಲ್ಲಿ ನಡೆದ ಘಟನಗಳನ್ನು ನೋಡಿದರೆ ಪ್ರಜಾಪ್ರಭುತ್ವದ ಸಲುವಾಗಿ ಯಾವ ಯತ್ನವನ್ನೂ ಬ್ರಿಟಿಷ್ ಮೊದಲಾದ ಸರಕಾರದವರು ಮಾಡಿದ್ದು ಕಂಡುಬರುವುದಿಲ್ಲ. ನಿಜವಾದ ಪ್ರಜಾಪ್ರಭುತ್ವವು ಫಾಸಿಸಂ ಮತ್ತು ಸಾಮ್ರಾಜ್ಯ ಶಾಹಿಗಳ ಕೊನೆಯಾದಾಗ ಸ್ಥಾಪಿತವಾಗುವುದು. ಸಾಮ್ರಾಜ್ಯ ಶಾಹಿಯ ಸಲುವಾಗಿ ನೇರಿದ ಯುದ್ಧದಲ್ಲಿ ಭಾರತವು ಸಹ ಭಾಗವಹಿಸಲಾರದು.

೧೦ ವರ್ಕಿಂಗ್ ಕಮಿಟಿಯು ಈಗ ಇತ್ಯರ್ಥಕ್ಕೆ ಬಂದಿಲ್ಲ. ಅದಕ್ಕಿಂತ ಮೊದಲಿನ ನಿಜವಾದ 'ಯುದ್ಧದ' ಉದ್ದೇಶವೇನೆಂದು, ಭಾರತದ ವಿಷಯವಾಗಿ ಏನು ವಿಚಾರವಿದೆಯೆಂದೂ ಸ್ಪಷ್ಟಪಡಿಸಬೇಕು. ಆದರೆ ಇತ್ಯರ್ಥಮಾಡಲು ಹೆಚ್ಚು ತಡವಾಗಲಾರದು.

೧೧ ಭಾರತೀಯರಿಗೆ ಜಪಾನು ಜರ್ಮನ್ ಜನತೆಯ ಮೇಲಾಗಲಿ ಇನ್ನಾವ ಜನತೆಯ ಮೇಲಾಗಲಿ ದ್ವೇಷವಿಲ್ಲ. ಹಿಂಸೆ ಪಶುಶಕ್ತಿಗಳನ್ನು ಮಾತ್ರ ನಾವು ಇದಿರಿಸುವೆವು.

೧೨ ಇಂತಹ ಸಂದರ್ಭದಲ್ಲಿ ಭಾರತೀಯರು ತಮ್ಮ ಒಳಗಿನ ಎಲ್ಲಾ ಅಂತರ್ಗತ ಭೇದಭಾವನೆಗಳನ್ನು ಮರೆತು ಒಂದು ರಾಷ್ಟ್ರದವರಾಗಿ ಭಾರತದ ಸ್ವಾತಂತ್ರ್ಯವನ್ನು ಸಂಪಾದಿಸಲು ನಿರ್ಧಾರ ಮಾಡಬೇಕು.

ಆ ಮೇಲೆ ಯುದ್ಧದ ವಿಷಯವಾಗಿ ಮುಂದಿನ ವಿಚಾರಗಳನ್ನು ವರ್ಕಿಂಗ್ ಕಮಿಟಿಯ ಅಭಿಮತದಿಂದ ಚರ್ಚಿಸಲು ಒಂದು ಯುದ್ಧ ಉಪಸಮಿತಿಯು ಸರ್ದಾರ ಪಟೇಲ್, ನೆಹರು, ಅಜಾದರಿಂದ ನೇರಿ ಏರ್ಪಟ್ಟಿತು. ನೆಹರುಗಳು ಅಧ್ಯಕ್ಷರಾಗಿ ನೇಮಿತರಾದರು.

ನೆಹರುಗಳನ್ನು ವರ್ಕಿಂಗ್ ಕಮಿಟಿಯ ಸದಸ್ಯರಾಗಿಯೂ ಸೇರಿಸಲ್ಪಟ್ಟಿತು.

ಕಳೆದ ಮಹಾಯುದ್ಧವು ಹೇಗೆ ಸಂಭವಿಸಿತು?

[೬ನೇ ಪುಟದಿಂದ]

ಯು ತನ್ನ ಸಾಧ್ಯ, ಪರಾಕ್ರಮದಿಂದ ಬೆಲ್ಜಿಯಮಿನ ಮೂಲಕ ಧಾಳಿ ಹೂಡಿತು. ಫ್ರೆಂಚರು ಅವರಿಗೆ ಎದೆಯೊಡ್ಡಿ ಕಾದಾಡಿದರು. ರಕ್ತವು ಇಕ್ಕಡೆಗಳಲ್ಲಿಯೂ ಧಾರಾಕಾರವಾಗಿ ಹರಿಯಿತು. ಅನೇಕ ವೀರರು ರಣರಂಗದಲ್ಲಿ ಕಾದಿ ದಣಿದು ಚಿರ ವಿಶ್ರಾಂತಿಯನ್ನು ಪಡೆದರು.

ರಶ್ಯಾದ ಕದನ

ಇಷ್ಟರಲ್ಲಿ ಪೂರ್ವದಲ್ಲಿ ಇದರಂತೆಯೇ ಕಾಳಗವು ಆರಂಭವಾಗಿತ್ತು! ಬಾಲ್ಟಿಕ್ ಸಮುದ್ರದಿಂದ ರುಮೇನಿಯಾ ಗಡಿಯ ವರೆಗೆ ರಶ್ಯದ ಜಾರನ ಸೈನ್ಯವು ಆಸ್ಟ್ರಿಯ ಮತ್ತು ಜರ್ಮನ್ ಸೈನ್ಯಗಳ ವಿರೋಧ ಕಾದಾಡಿತು! ಲೆಂಬರ್ಗಿನಲ್ಲಿ ಹತ್ತು ದಿನಗಳ ಕದನವು ರಶ್ಯಾ ಮತ್ತು ಆಸ್ಟ್ರಿಯದ ಸೈನಿಕರಿಗೆ ನಡೆದು, ಆಸ್ಟ್ರಿಯನರು ಬಹಳ ಗಾಯಗೊಂಡು ಹಿಂದಾದರು!

ಉತ್ತರದಲ್ಲಿಯೂ ಕೂಡಾ ರಶ್ಯನ್ ಸೈನಿಕರು ಪೂರ್ವ ಪ್ರಶ್ಯಿಯದಲ್ಲಿ ಜರ್ಮನ್ ಸೈನ್ಯವನ್ನು ಇದಿರಿಸಿ ಪ್ರಥಮ ವಿಜಯವನ್ನು ಪಡೆದರು! ಪೂರ್ವದಲ್ಲಿ ರಶ್ಯವು ಜರ್ಮನ್ ಸೈನ್ಯವನ್ನು ಬಗ್ಗು ಬಡೆಯುತ್ತಿದ್ದಂತೆ, ಪಶ್ಚಿಮದಲ್ಲಿ ಜರ್ಮನರು ಫ್ರಾನ್ಸಿನ ಕಡೆ ಮುಂದೊತ್ತಿ ಬರುತ್ತಿದ್ದರು.

ಪ್ಯಾರಿಸಿನ ಆಕ್ರಮಣ!

ಫ್ರಾನ್ಸಿನಲ್ಲಿ ಭಯಂಕರ ಯುದ್ಧವು ನಡೆಯಿತು. ಜರ್ಮನರು ಇಡೀ ಫ್ರಾನ್ಸಿನ ಜನತೆಯನ್ನೇ ನಾಶಮಾಡಲು ನಿಶ್ಚಯ ಮಾಡಿದ್ದರು. ಆದರೆ ಫ್ರೆಂಚರು ಬ್ರಿಟಿಷರ ಬೆಂಬಲದಿಂದ ಜರ್ಮನರೊಡನೆ, ಅಭೂತಪೂರ್ವ ಉತ್ಸಾಹದಿಂದ ಕಾದಾಡಿದರು! ಪ್ಯಾರಿಸಿನಿಂದ ಇಪ್ಪತ್ತು ಮೈಲುಗಳ ದೂರದಲ್ಲಿ ಎರಡನೆಯ ಹೃದಯ ದ್ರಾವಕವಾದ ಯುದ್ಧವು ನಡೆಯಿತು.

ಜರ್ಮನ್ ಅಪಜಯ!

ಇಷ್ಟರಲ್ಲಿ ಜರ್ಮನ್ ಸೈನ್ಯದಲ್ಲಿ ಒಂದು ದೌರ್ಬಲ್ಯವುಂಟಾಯಿತು. ರಶ್ಯದ ಗಡಿಗೆ ಅವರ ಭದ್ರವಾಗಿರಿಸಿದ ಸೈನ್ಯವು ಹೋದಾಗ, ಇಲ್ಲಿ ಕಾದಾಡಲು ಸಾಕಷ್ಟು ಸೈನ್ಯವು ಸಿದ್ಧವಾಗಲಿಲ್ಲ. ಇಷ್ಟರಲ್ಲಿ ಇಂಗ್ಲಿಷರು ಮುಂದುವರಿದು ಬಂದು ಜರ್ಮನರೊಡನೆ ಹೋರಾಡಿ ಫ್ರಾನ್ಸಿಗೆ ಜಯವನ್ನು ತಂದರು! ಹೀಗೆ ಮಾರ್ನೆ ಕಾಳಗದಲ್ಲಿ ಜಯವಾಗಿ ಪ್ಯಾರಿಸು ಉಳಿಯುವಂತಾಯಿತು!

ಪೂರ್ವ ಪ್ರಶ್ಯಿಯಾದಲ್ಲಿ ರಶ್ಯವು ಬಹಳ ನಷ್ಟ ಹೊಂದಿತು! ಕಾಲು ಮಿಲಿಯ ಮಂದಿ ರಶ್ಯನರು ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಉತ್ತರದಲ್ಲಿ ರಶ್ಯವು ಹೀಗೆ ವಿಭಕ್ತವಾದರೂ ಪಶ್ಚಿಮದಲ್ಲಿ ಫ್ರಾನ್ಸು ಅಭೇದ್ಯವಾಗಿಯೇ ಉಳಿಯಿತು.

ಅದು ಯುದ್ಧ ಪೀಠಿಕೆ!

ಅಂದಿನ ಮಹಾ ಯುದ್ಧದಲ್ಲಿ ಹೀಗೆ ಎರಡು ಮಿಲಿಯ ಮಂದಿಗಿಂತ ಹೆಚ್ಚಿನವರು ತೀರಿಹೋದರು! ಕೆಲವು ಮಹನೀಯರು ಲೋಕ ಯುದ್ಧವು ಇಲ್ಲಿಗೇ ಕೊನೆಗೊಂಡಿತೆಂದೂ ಮುಂದಕ್ಕೆ ಜಗತ್ತಿನಲ್ಲಿ ಸ್ಥಿರವಾಗಿ ಶಾಂತಿ ಸಾಮ್ರಾಜ್ಯವೇ ಸ್ಥಾಪನೆಯಾಗುವದೆಂದೂ ಕನಸರಿಸುತ್ತಿದ್ದರು! ಆದರೆ ಅದು ಕೊನೆಯ ಯುದ್ಧವಾಗುವುದರ ಬದಲು ಕೇವಲ ಯುದ್ಧದ ಪೀಠಿಕೆ ಮಾತ್ರವೆಂಬುದನ್ನು ಇಂದಿನ ಯುದ್ಧ ಸಂಘಟನೆಯು ಖಚಿತ ಮಾಡಿತು.

ಇಕೊನೊಮಿ ಟಿನ್ನುಗಳಿಂದ ಉಳಿಯುವ ಹಣವನ್ನು ಗಮನಿಸಿರಿ

ದೊಡ್ಡ ಸೈಜು (8 ಔ.) ರೂ.1-4-0
ಸಣ್ಣ ಸೈಜು (4 ಔ.) ಆ 11

ಹಿಂದೆ ಬಾಟ್ಲಿಗಳಲ್ಲಿದ್ದಷ್ಟೆ ಪರಿಮಾಣದಲ್ಲಿದ್ದು ಕಡಿಮೆ ಕ್ರಯಕ್ಕೆ ಮಾರಲ್ಪಡುವ ಎಂಡ್ರೂಸ್ ಲವಣದ ಹೊಸ ಇಕೊನೊಮಿ ಟಿನ್ನುಗಳನ್ನೇ ಕೇಳಿರಿ.

ಅನೇಕ ವರ್ಷಗಳ ಅನ್ವೇಷಣದ ಫಲವಾಗಿ ಎಂಡ್ರೂಸ್ ಲವಣವು ಬಾಟ್ಲಿಗಳಿಗಿಂತಲೂ ಟಿನ್ನುಗಳಲ್ಲಿ ಉತ್ತಮವಾಗಿರುತ್ತದೆಂದು ಕಂಡುಹಿಡಿಯಲ್ಪಟ್ಟಿತು. ಇದರಿಂದ ನೀವು ಎಂಡ್ರೂಸ ಲವಣವನ್ನು ಟಿನ್ನುಗಳಲ್ಲಿಯೇ ಕೊಂಡುಕೊಳ್ಳುವುದುತ್ತಮ. ಇಡೀ ಜಗತ್ತಿನಲ್ಲಿ ಎಂಡ್ರೂಸ್ ಲವಣವು ಉತ್ತಮ ಗಿರಾಕಿಗಳಿರುತ್ತವೆ. 50 ವರ್ಷಗಳಿಂದಲೂ ಗ್ರೇಟ ಬ್ರಿಟನ್ನು ಮತ್ತು ಇತರ ಡೊಮಿನಿಯನುಗಳಲ್ಲಿ ಇತರ ಎಲ್ಲಾ ಲವಣಗಳಿಗಿಂತಲೂ ಹೆಚ್ಚಾಗಿ ಮಾರಲ್ಪಟ್ಟ ಅದೇ ಎಂಡ್ರೂಸ್ ಲವಣವು ಈಗ ಟಿನ್ನುಗಳಲ್ಲಿ ಸಿಕ್ಕುತ್ತವೆ.
ಈ ಲವಣದಲ್ಲಿ ಉತ್ತೇಜನವನ್ನೀಯುವ ಒಂದು ಶಕ್ತಿಯಿರುವುದಲ್ಲದೆ ಆರೋಗ್ಯ ವೃದ್ಧಿಗೆ ಉತ್ತಮವಾದ ಬೇದಿಯ ಟೋನಿಕ್ಕಾಗಿರುತ್ತದೆ. ಇದರ ನಿಧಾನವಾದ ಮತ್ತು ನಿರಂತರವಾದ ಉಕ್ಕಿ ಬರುವ ಗುಣದಿಂದಾಗಿ ಇದರಿಂದುಂಟಾದ ಕಾರ್ಬನ್ ಡೈ ಆಕ್ಸೈಡ್ ಹೊಟ್ಟೆಯೊಳಗಿನ ತೀವ್ರವಾದ ಆಮ್ಲವನ್ನು ಆರೋಗ್ಯವಲ್ಲಿರಿಸುತ್ತದೆ.

ಈ ಲವಣವನ್ನು ತಯಾರಿಸುತ್ತಿರುವಾಗ ಕೈಸೋಂಕಿರುವುದಿಲ್ಲ!



ಎಂಡ್ರೂಸ್ ಲಿವರ್ ಲವಣವು ನಾಲ್ಕು ತರದಲ್ಲಿ ಉಪಯೋಗವನ್ನೀಯುವುದು:—
1 ಆಂತರೇಂದ್ರಿಯಗಳನ್ನು ಸ್ವಚ್ಛಗೊಳಿಸಿ ಕೆಟ್ಟ ಪದಾರ್ಥಗಳನ್ನು ನೀಗಿಸುವುದು
2 ಯಕೃತ್ತಿನ ಮೇಲೆ ಒಳ್ಳೆ ಪರಿಣಾಮವನ್ನುಂಟುಮಾಡಿ ಪಿತ್ತವು ಸರಿಯಾಗಿ ಹರಿಯುವಂತೆ ಮಾಡುವುದು
3 ಕರುಳುಗಳಿಗೆ ಮಿತವಾದ ಉತ್ತೇಜನವನ್ನೀಯುವುದು.
4 ಹೊಟ್ಟೆಯೊಳಗಿನಂಟಾದ ಆಮ್ಲವನ್ನು ಹೋಗಲಾಡಿಸುವುದು.
ಈ ಕೆಳಗಿನವುಗಳಿಂದ ನೀವು ನರಳುತ್ತಿರುವುದಾದರೆ ನೀವು ಎಂಡ್ರೂಸನ್ನು ಕೊಳ್ಳಲೇಬೇಕು.

ಪಿತ್ತವಿಕಾರ — ಎದೆಯುರಿ
ಮಲಬದ್ಧತೆ — ಬಳಲಿಕೆ
ವಾತ — ರುಚಿ ಇಲ್ಲದಿರುವುದು
ತಲೆತಿರುಗುವುದು — ದುರ್ಬಲಜೀರ್ಣ
ತಲೆನೋವು — ಯಕೃತ್ತಿನ ರೋಗ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

705A

ANDREWS
LIVER SALT
for Inner Cleanliness

ಗಣೇಶಚತುರ್ಥಿ

[ಕಳೆದ ಶನಿವಾರ-ಹಿಂದುಗಳಿಗೆ ಬಹಳ ದೊಡ್ಡ ಹಬ್ಬವಾದ ಗಣೇಶಚತುರ್ಥಿಯು— ಭಾರತದಲ್ಲಿ ಎಲ್ಲೆಡೆಗಳಲ್ಲಿಯೂ, ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಮಹಾ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಗಣಪತಿಯ ಸುಂದರವಾದ ಕಲಾಮಯವಾದ ವಿಗ್ರಹಗಳನ್ನು ಮಾಡಿ ಆ ದಿನ ಅದಕ್ಕೆ ಮನೆಮನೆಗಳಲ್ಲಿ ಪೂಜೆಮಾಡುವರು ಗಣಪತಿಯು ಎಲ್ಲಾ ವಿಘ್ನಗಳನ್ನೂ ಪರಿಹರಿಸುವವನೆಂದೂ, ವಿದ್ಯಾಧಿದೇವತೆಯೆಂದೂ ಅವರ ನಂಬುಗೆ! ಎಲ್ಲಾ ಕಾರ್ಯಗಳನ್ನೂ ನಿರ್ವಿಘ್ನವಾಗಿ ಸಾಗಿಸಿ, ವಿಜಯವನ್ನು ಕೊಡುವ ಮಹಾಶಕ್ತಿಯನ್ನು ಸರ್ವರೂ ಹೀಗೆ ಭಕ್ತಿಯಿಂದ ಅರ್ಚಿಸಿ, ಸಂತೋಷದಿಂದ ನಲಿಯುವರು]

ಶಿವನ ಅರ್ಧಾಂಗಿಯಾದ ಪಾರ್ವತಿಯು, ತನ್ನ ಪತಿಯು ದೂರ ತೆರಳಿದಾಗ, ಬೇಸರಗೊಂಡವಳಾಗಿ ಮೈಯ್ಯಿ ಗಂಧವನ್ನು ತೆಗೆದು, ಅದರಿಂದ ಒಂದು ಮೂರ್ತಿಯನ್ನು ಮಾಡಿದಳು ಗಣೇಶನು ಮೊದಲು ಹುಟ್ಟಿದಾಗ, ಆ ಬಾಲಕನಿಗೆ, ಆನೆಯ ಮುಖವಿರಲಿಲ್ಲ, ಪಾರ್ವತಿಯು ಹಾಗೆ ತನ್ನ ಮೈಯಿಂದ ಗಣಪತಿಯನ್ನು ಮಾಡಿ, ಬಾಗಿಲನ್ನ ಕಾಯಲು ಇರಿಸಿದಳು. ಶಿವನು ಹೊರ ಹೋಗಿರುವುದರಿಂದ, ಯಾರಾದರೂ ಒಳಗೆ ಬರಲು ಬಿಡದಂತೆ ಆಜ್ಞಾಪಿಸಿದ್ದಳು ಶಿವನು ಮರಳಿ ಮನೆಗೆ ಬಂದಾಗ, ಬಾಗಿಲಲ್ಲಿ ಸಣ್ಣ ಹುಡುಗನೊಬ್ಬನು ಕಾದು ನಿಂತಿರುವುದನ್ನು ಕಂಡನು. ಹೆದರಿಸಿದರೂ, ಹೇಳಿದರೂ, ಯಾವುದರಿಂದಲೂ ಆ ಹುಡುಗನು ಶಿವನನ್ನು ಒಳಗೆ ಹೋಗಲು ಬಿಡಲೇ ಇಲ್ಲ ಶಿವನು ಸಿಟ್ಟುಗೊಂಡು, ಹುಡುಗನ ಶಿರಚ್ಛೇದ ಮಾಡಿದನು,

ಪಾರ್ವತಿಗೆ ಈ ವಿಷಯವು ತಿಳಿಯಲು, ಆಕೆ ಮಗನಿಗಾಗಿ ಬಹಳ ಮರುಗಿದ್ದಳು. ಶಿವನು, ತನ್ನ ಮಗುವನ್ನು ಪುನಃ ಜೀವಂತವಾಗಿ ಮಾಡಲು ಒಪ್ಪುವ ವರೆಗೆ ಪಾರ್ವತಿಯು ಸಮಾಧಾನಗೊಳ್ಳಲೇ ಇಲ್ಲ!

ಶಿವನು, ಕೂಡಲೇ, ತನ್ನ ಸೇವಕರಿಗೆ, ಉತ್ತರ ದಿಕ್ಕಿಗೆ ತಲೆಹಾಕಿ ಮಲಗಿರುವ ಮೊದಲನೆಯ ಜೀವಿಯ ತಲೆಯನ್ನು ಕಡಿದು ತರಬೇಕಾಗಿ ಆಜ್ಞೆಯಿತ್ತನು! ಅವರಲ್ಲಿ ಒಬ್ಬನು ಆನೆ ಮುಖವನ್ನು ತಂದನು! ಶಿವನು ಮಗುವಿನ ತಲೆಗೆ, ಅದನ್ನು ಸೇರಿಸಿ ಜೀವ ಕೊಟ್ಟನು! ಹೀಗೆ ಗಣೇಶನಿಗೆ ಆನೆಯ ಮುಖವಾಯಿತು!

ಪೂಜೆಯ ಮಹತ್ವ

ಹಿಂದೂ ಪುರಾಣಗಳಲ್ಲಿ, ಗಣಪತಿಗೆ ವಿಶೇಷವಾದೊಂದು ಸ್ಥಾನವಿದೆ, ಯಾವುದೇ ಕಾರ್ಯವನ್ನು ಆರಂಭಿಸಬೇಕಾದರೂ ಗಣಪತಿಯ ಪೂಜೆಯಾಗಿಯೇ ತೀರಬೇಕು. ಆತನು ಕಾರ್ಯಗಳನ್ನು ವಿಘ್ನವಿಲ್ಲದೆ ಸಾಗಿಸಲು ಆಶೀರ್ವದಿಸುವವನೆಂದು ಅವರ ನಂಬಿಕೆ. ಅಂತೆಯೇ ಆತನನ್ನು ಕಾರ್ಯಾರಂಭದಲ್ಲಿ ಸ್ತುತಿಸಲು ಮರೆತರೆ, ಕಾರ್ಯವು ಎಷ್ಟೇ ಚಟುವಟಿಕೆಗಳಿಂದ ಆರಂಭಿಸಿದರೂ, ಎಷ್ಟೇ ಕುಶಲತೆಯನ್ನೂ ತೋರಿಸಿದರೂ, ಅದರಲ್ಲಿ ವಿಘ್ನಗಳ ಕಂಡುಬರುವವು! ಮರೆತಾದರೂ ಗಣಪತಿಯನ್ನು ಪೂಜಿಸದೆ ಇದ್ದರೆ, ಅದರ ಫಲವು ತೋರಿಯೇ ತೋರುವುದು! ಹಿಂದುಗಳು ಗಣಪತಿಯನ್ನು ಹಾಗಾಗಿ ಯಾವಾಗಲೂ ಮರೆಯುವ ಹಾಗಿಲ್ಲ!

ಗಣಪತಿಯು ಏಕಾಂಗಿಯಾದವನ ಬ್ರಹ್ಮ, ವಿಷ್ಣು, ಶಿವ, ಇವರೆಲ್ಲರೂ ಸಂಸಾರಿಗಳ ಹಾಗಾಗಿ ಎಲ್ಲರಿಗಿಂತಲೂ ಮೊದಲ ಮನ್ನಣೆಯನ್ನು ಗಣೇಶನಿಗೆ ಸಲ್ಲಿಸುವರು! ಗಣೇಶನು ವಿದ್ಯಾಧಿದೇವತೆ ಜ್ಞಾನದಾನವನ್ನು ಆತನೇ ಕೊಡುವುದಾಗಿ, ವಿದ್ಯಾರಂಭದಲ್ಲಿ ಗಣಪತಿಯ ವಂದನೆ ಮಾಡುವರು

ಗಣೇಶನಿಗೆ ಅರ್ಪಿಸುವ ಎಲ್ಲಾ ನೈವೇದ್ಯಗಳಿಗಿಂತಲೂ ಆತನಿಗೆ ಅಪ್ಪ ಕಜ್ಜಾಯಗಳಲ್ಲಿ ಪ್ರೀತಿ ಹೆಚ್ಚು ಹರಕೆಯೆಂದು ಅಪ್ಪ ಕಜ್ಜಾಯಗಳನ್ನು ಸಲ್ಲಿಸುವುದು ಹಿಂದುಗಳಲ್ಲಿ ವಾಡಿಕೆಯಾಗಿದೆ!

ಭದ್ರವಾದ ಆಕಾರ

ಗಣೇಶನ ಆಕಾರವು ಭದ್ರವೂ ಗಂಭೀರವೂ ಆದುದು! ಸ್ಥಿರವಾದ ಆಸನದಲ್ಲಿ ಆತನು ಕುಳಿತಿರುವನು! ಶರೀರವು ವಿಶಾಲವಾದುದು! ಆನೆಯ ತಲೆಗೊಪ್ಪುವಂತಹುದೇ ಸೊಂಡಿಲ ಕಾಂತಿಯು, ಸೂರ್ಯನ ಉದಯ ಪ್ರಕಾಶದಂತೆ ಜಾಜ್ವಲ್ಯ ಮಾನವಾಗಿರುವುದು! ಹಣೆಗಿಟ್ಟ ಕುಂಕುಮದ ಸೌಂದರ್ಯವು ಅರುಣ ಕಾಂತಿಯನ್ನು ಹೋಲುವಂತಹುದು! ತಲೆಯಲ್ಲಿರುವ ರತ್ನರಂಜಿತವಾದ ಕಿರೀಟವು ಜಗತ್ತನ್ನು ಬೆಳಗಿಸುವ ಸೂರ್ಯನಷ್ಟು ಕಾಂತಿಯುತವಾದದು! ಹೀಗೆ ಶೋಭಾಯಮಾನವಾದ, ಭದ್ರಾಕಾರವಾದ ಮೂರ್ತಿ ಗಣೇಶನದು!

ಮೂರ್ತಿ ಶಿಲ್ಪಿಗಳು!

ಗಣೇಶ ಚತುರ್ಥಿಯಂದು, ಹೀಗೆ ಮನಮೋಹಕನಾಗಿ ಒಪ್ಪುವ ಗಣಪತಿಯ ಮೂರ್ತಿಯನ್ನು ಮಾಡಲು ಕಲಾವಂತರು ತಮ್ಮ ಎಲ್ಲಾ ಕಲಾ ಸಾಮರ್ಥ್ಯಗಳನ್ನೂ ಉಪಯೋಗಿಸುವರು! ಧರ್ಮದ ದೈವಿಕ ಭಾವನೆಯು ಹೊಳೆದು ತೋರುವಂತೆಯೂ, ತಮ್ಮ ಕಲಾಪ್ರತಿಭೆಯು ವ್ಯಕ್ತವಾಗುವಂತೆಯೂ ಮೂರ್ತಿಗೆ ಪೂರ್ಣತೆಯನ್ನು ತರುವಲ್ಲಿ ಅವರು ಸಾಕಷ್ಟು ಪರಿಶ್ರಮವಹಿಸುವರು!

ದೊಡ್ಡ ನಗರಗಳಲ್ಲಿ

ಭಾರತದ ದೊಡ್ಡ ನಗರಗಳಾದ ಬೊಂಬಯಿಯಂತಹ ಕಡೆಗಳಲ್ಲಿ, ಹೀಗೆ ಗಣೇಶ ಮೂರ್ತಿಯನ್ನು ಮಾಡುವುದು ಬಹಳ ದೊಡ್ಡ ವ್ಯಾಪಾರೋದ್ಯಮವೇ ಆಗಿದೆ! ಅವೆ ಮಣ್ಣಿನಿಂದ ಮೂರ್ತಿಯನು ಅವರು ಕೆತ್ತುವರು. ಆಕಾರವಿಲ್ಲದ ನಿಸ್ಸಾರವಾದ ಮಣ್ಣಿನಿಂದ, ಶಿಲ್ಪಿಯು ನಿರ್ವಿಘ್ನ ದೇವತೆಯಾದ ಗಣೇಶನ ಸುಂದರ ವಿಗ್ರಹವನ್ನು ಕೆತ್ತಿ ತಯಾರಿಸುವನು!

ಮಹಾ ರಾಷ್ಟ್ರದಲ್ಲಿ ಗಣೇಶ ಚತುರ್ಥಿ

ಮಹಾರಾಷ್ಟ್ರದಲ್ಲಿ ಗಣೇಶ ಚತುರ್ಥಿಯು ರಾಷ್ಟ್ರೀಯ ಹಬ್ಬವಾಗಿದೆ ಲೋಕಮಾನ್ಯ ತಿಲಕರು, ಇದನ್ನು ಮಹಾರಾಷ್ಟ್ರದ ನಾಡಹಬ್ಬವನ್ನಾಗಿ ಮಾಡಿದರು. ಸಾಧಾರಣ ಗಿರ್ಗಾಂವ ಮೇಲಂತೂ ಗಣೇಶ ಚತುರ್ಥಿಯ ಹಬ್ಬವು ಮಹಾರಾಷ್ಟ್ರದ ಮನೆ ಮನೆಯಲ್ಲಿ ವಿಶೇಷ ವಿಜೃಂಭಣೆಗಳಿಂದ ನಡೆಯುತ್ತಿದೆ! ಆ ದಿನ, ಇಡೀ ಮಹಾರಾಷ್ಟ್ರವು ಹೊಸ ಉತ್ಸಾಹ, ಗೆಲವು, ಆನಂದಗಳಿಂದ ತುಂಬಿರುತ್ತದೆ!

೧೦೦ ರೂಪಾಯಿ ಕ್ರಯದ ವಿಗ್ರಹ!

ಸಾಧಾರಣ ಸುಂದರವಾದ ಗಣೇಶ ವಿಗ್ರಹಕ್ಕೆ ಐದು ರೂಪಾಯಿ ಬೆಲೆಯಿರುತ್ತದೆ! ಆ ಮೇಲೆ ಕೆಲವು ವಿಗ್ರಹಗಳಿಗೆ, ೧೦೦ ರೂಪಾಯಿಗಳ ಬೆಲೆ ಬರುವುದೂ ಉಂಟು. ಅದು ಕೆಲಸದ ಉತ್ಕೃಷ್ಟತೆಯನ್ನು ಹೊಂದಿಕೊಂಡಿದೆ ಅಂತೂ ಇತ್ತೀಚೆಗೆ ಗಣೇಶ ಚತುರ್ಥಿಯು ಹಿಂದುಗಳ ಹಬ್ಬಗಳಲ್ಲಿ ಬಹಳ ಪ್ರಾಮುಖ್ಯ ಹಬ್ಬವಾಗಿ ಗಣಿಸಲ್ಪಟ್ಟಿದೆ.

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು. ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ

ಸ್ತ್ರೀಯರಿಗೆ ಋತು ಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಸಾಹುಕಾರ ಶ್ರೀನಿವಾಸರಂಗಪ್ಪೆ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾಹುಕಾರ ಮಹಾಲ್, ಮಂಗಳೂರು.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಕಡಿಮೆ ಖರ್ಚು
ಬೆಂಗಳೂರಿಗೆ ಬಸ್ಸು ಮತ್ತು ರೈಲು ಚಾರ್ಜು ಕೂಡಾ ರೂ. 5-9-0 ಮಾತ್ರ!

ಮಂಗಳೂರಿನಿಂದ—
ಬೆಂಗಳೂರು--ತಿರುಪತಿ--ಮದರಾಸು.
ಇತ್ಯಾದಿ ಸ್ಥಳಗಳಿಗೆ ಹೋಗಲು ಅತ್ಯನುಕೂಲವಾದ ಸರ್ವಿಸುಗಳ ವ್ಯವಸ್ಥೆ ಮಾಡಲಾಗಿದೆ.

ಅತಿ ಶೀಘ್ರಪ್ರಯಾಣ
ಬೆಂಗಳೂರಿಗೆ, ಬರೇ 14 ತಾಸುಗಳೊಳಗೆ ತಲ್ಪುವ ಏರ್ಪಾಡು.

1) ಮಂಗಳೂರಿನಿಂದ ಬೆಂಗಳೂರಿಗೆ ಹೋಗುವವರು ಮಂಗಳೂರಿನಿಂದ ಬೆಳಿಗ್ಗೆ 5-15A M ಗೆ ಹೊರಡುವ ನಮ್ಮ ಮೋಟಾರ್ ಸರ್ವಿಸಿನಲ್ಲಿ ಹೊರಟು 11A. M.ನವಳಗೆ ಮಡಿಕೇರಿಗೆ ತಲಪಿ, ಅಲ್ಲಿಂದ ಕೂಡಲೇ ಹೊರಟು ಮೈಸೂರು ರೈಲ್ವೆ ಸ್ಟೇಶನಿಗೆ 3-15P M.ನವಳಗೆ ತಲಪಿ, ಮೈಸೂರಿನಿಂದ 4P M ಗೆ ಹೊರಡುವ ಬೆಂಗಳೂರು ಮೈಲ್ ಟ್ರೈನಿನಲ್ಲಿ ಹೊರಟು ಸಂಜೆ 7-20P M ನವಳಗೆ ಬೆಂಗಳೂರಿಗೆ ತಲಪಬಹುದು. ಮಂಗಳೂರಿನಿಂದ ಮೈಸೂರಿಗೆ ಬಸ್ಸು ಚಾರ್ಜು ರೂಪಾಯಿ 4-0-0 ಮತ್ತು ಮೈಸೂರಿನಿಂದ ಬೆಂಗಳೂರಿಗೆ ಮೈಲು ಟ್ರೈನು ಚಾರ್ಜು ರೂ 1-9-0 ಕೂಡಾ ಚಾರ್ಜು ರೂಪಾಯಿ 5-9-0 ಮಾತ್ರ

2) ಮಂಗಳೂರಿನಿಂದ ತಿರುಪತಿಗೆ ಹೋಗುವವರು, ಮೈಸೂರಿನಿಂದ ರೈಲುಚಾರ್ಜು ರೂ 5-11 0ನ್ನು ಕೊಟ್ಟು ತಿರುಪತಿಗೆ ಪ್ರಯಾಣ ಮಾಡಲಿಕ್ಕನುಕೂಲ.

3) ಮಂಗಳೂರಿನಿಂದ ಮದ್ರಾಸಿಗೆ ಹೋಗುವವರು ಮಡಿಕೇರಿ, ಮೈಸೂರು, ಬೆಂಗಳೂರು ಇತ್ಯಾದಿ ಮನೋರಂಜಕ ಸ್ಥಳಗಳನ್ನು ನೋಡಿ ಪರಮಾನಂದಭರಿತರಾಗಿ ಬೆಂಗಳೂರಿನಿಂದ 9P M ಗೆ ಬಿಡುವ ಟ್ರೈನಿನಲ್ಲಿ ಹೊರಟು ಮರುದಿನ ಬೆಳಿಗ್ಗೆ ಮದ್ರಾಸಿಗೆ ತಲಪಬಹುದು-ಬೆಂಗಳೂರಿನಿಂದ ಮದ್ರಾಸಿಗೆ ಚಾರ್ಜು ರೂ 5-2-0 ಮಾತ್ರ!

ಬಸ್ ಪ್ರಯಾಣವು

ಅತೀ ಸುಖಕರ — ನಿರಾಯಾಸಕರ — ಮನೋಲ್ಹಾದಕರವಾಗಿದೆ

ಊರುಗಳ ಬದಲಾವಣೆ — ನೋಟಗಳ ಬದಲಾವಣೆ — ಜನತೆಯ ಸಂಪರ್ಕ — ಆಹಾರದ ಅನುಕೂಲತೆ

ಇವೆಲ್ಲವೂ ಬಸ್ ಪ್ರಯಾಣದಲ್ಲಿದೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು.

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS CALCUTTA MADRAS BOMBAY

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆಂಡೇಪಿ,
P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ ಅವ್ವಲ್ ಕರದ ಗುಡ್ಡು ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	5—4—0	—
,, ದುಯಂ ,, ,,	5—2—0	—
,, ಅವ್ವಲ್ ಸುಗ್ಗಿ ,,	5—2—0	—
,, ದುಯಂ ,, ,,	4—14—0	5—0—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	30—0—0	37—8—0
,, ಸಿಪ್ಪೆ ಇದ್ದದು ,,	32—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	55—0—0	—
,, ದಿಲ್‌ಪಸಂದ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—12—0	8—12—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—3—0	8—8—0
ಗೇರುಬೀಜ ಮುಡಿಗೆ	8—4—0	8—4—0
ಕಬ್ಬಿನ ಬೆಲ್ಲ ಖಂಡಿಗೆ	55—0—0	60—0—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	16—0—0	18—0—0

Date15—9—1939 ಬಿಡಿ ಸಂಚಿಕೆ ಒಂದಾಣೆ *Regd. No. M 3406*

ಸ್ವದೇಶಾಭಿಮಾನಿ

ವಾರ್ಷಿಕ ಚಂದಾ ರೂ. 2—0—0 | ಅಂಚೆ ವೆಚ್ಚ ಸೇ(ರೂ. 2—13—(

ಸಂಪುಟ 33] ತಾರೀಖು 22—9—1939 [ಸಂಚಿಕೆ 38

YOUR DAUGHTER'S MARRIAGE MADE EASY

GIRLS are more or less Lumpsum Liabilities unlike the BOYS who are Instalment Liabilities You can not only convert Lumpsum Liabilities into Instalment Liabilities but also guarantee the PURPOSE through Policies in

THE BOMBAY LIFE ASSURANCE CO., LIMITED

For details, please consult:—

KOCHIKAR BROTHERS LTD.,

Madras Branch Secretaries,
Bombay Life Building,
Sir Lalubhai Samaldas Road,
Gandhi Nagar, UDIPI.

OR ANY OF THEIR FOLLOWING OFFICES —

Post Box No. 337
MOUNT ROAD, MADRAS

Visweshwarapuram Circle
BANGALORE CITY

Charni Road, Girgaum,
BOMBAY NO 4

Car Street
MANGALORE

Puthiyara,
CALICUT

Central Station Road,
TRIVENDRUM

MAKE LIFE WORTH-LIVING!

Indigestion — Insomnia — Dry Cough— Nervousness — Weak Heart &c ,
these make you wiery of Life!

GONSULT US AND BUY YOUR LIFE'S HAPPINESS!

Oils — that cool the brain and induce sleep
Lehas — that build-up your wasted system
Asavas = that regenerate your jaded nerves

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S, Kanara.
(BRANCH—KUMTA, N, KANARA)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ
ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ -- ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ - ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ - ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, - ದ ಕನ್ನಡ

ಸ್ಥಳೀಯ ಸ್ಟೋಕಿಸ್ಟರು (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ
Swadeshabhimani Estd. 190

ಸಂಪುಟ ೩೩ 8 ತಾರೀಕು ೨೯—೯—೧೯೩೯ (29—9—1939) 8 ಸಂಚಿಕೆ

ಹಿಟ್ಲರನ ಯುದ್ಧ ಕಾರಣವೇನು?

ರುಮೋನಿಯದಲ್ಲಿ ನಾಜಿಗಳ ದಂಗೆ

ಯೂರೋಪಿನ ಯುದ್ಧ ಸಮಾಚಾರ

ಆಶ್ರಿತರಾಜರ ಘೋರ ನಿದ್ರೆ,

ಮರವೆಯಲ್ಲಿ! (ಸಣ್ಣ ಕಥೆ)

ಚೈನದಲ್ಲಿ ನೆಹರೂಗಳ ಅನುಭವ

ಭಾರತಕ್ಕೆ ಗೌರವ ಸಲಬೇಕು

ಅಗ್ರಲೇಖ

ಜರ್ಮನಿಯಲ್ಲಿ ಹಿಟ್ಲರ್ ವಿರೋಧ

ಮಾಲವೀಯರ ವಿಶ್ರಾಂತಿ

ಸ್ವಾಮಿ ಅಭೇದಾನಂದಜೀ

ಲೋಕಶಾಂತಿಯ ಆಂದೋಲನ

ವಿಜ್ಞಾನಯುಗ, ನೋಟಗಳು,
ಕರ್ನಾಟಕ, ಜಿಲ್ಲಾ ಸಮಾಚಾರ ಇತ್ಯಾದಿ.



ಇಂಗ್ಲೆಂಡಿನ ಬೇರೆ ಬೇರೆ ಕಡೆಗಳಲ್ಲಿ, ವಿಮಾನ ಧಾಳಿಯನ್ನು ತಡೆಯಲು ಸೈನಿಕರು ಫಿರಂಗಿಗಳನ್ನು ನಡುತ್ತಿದ್ದಾರೆ.

ಸಚಿತ್ರ ವಾರಪತ್ರಿಕೆ

ಸೋಟಿಗಳು!

ರಾಜನೀತಿ ಕುಶಲತೆಯೆಂಬುದು ನಿಜವಾಗಿಯೂ ಬಹಳ ರಹಸ್ಯಮಯವಾದುದು!

◆

ರಶ್ಯಾ-ಜರ್ಮನ್ ಒಪ್ಪಂದವಾದಾಗ, ಜಪಾನಿನ ಜವಾಬ್ದಾರೀ ರಾಜನೀತಿಜ್ಞರೊಬ್ಬರು, ಇನ್ನು ಮುಂದಕ್ಕೆ, ಜಪಾನು, ಜರ್ಮನಿ ಮತ್ತು ರಶ್ಯಗಳೊಡನೆ ಎಲ್ಲಾ ವಿಧದ ಸಂಬಂಧವನ್ನೂ ಇಟ್ಟುಕೊಳ್ಳಲಾರದು ಎಂದು ಹೇಳಿದ್ದರು.

◆

ಆದರೆ, ಈಗ ಸಿಡಿಲು ಬಡಿದಂತೆ ಒಂದು ಆಶ್ಚರ್ಯಕರವಾದ ವಾರ್ತೆ ಬಂದಿದೆ!

◆

ರಶ್ಯಾ-ಜಪಾನುಗಳೊಳಗೆ ಒಂದು ಒಪ್ಪಂದವಾಯಿತೆಂದೂ, ಮುಂದಕ್ಕೆ ಮಂಗೋಲಿಯದ ಗಡಿಯಲ್ಲಿ ಆ ಉಭಯ ರಾಷ್ಟ್ರಗಳೊಳಗೆ ಕಾದಾಟವು ನಿಲ್ಲಿಸಲ್ಪಲಾಗುವುದೆಂದೂ ತಿಳಿದಿದೆ!

◆

ಶ್ವೇತರಶ್ಯ ಮತ್ತು ಉಕರಿನ್ ಪ್ರಾಂತಗಳಲ್ಲಿರುವ ರಶ್ಯನರಿಗೆ ಪೋಲೆಂಡು ಸರಕಾರದಿಂದ ಬಹಳ ಉಪದ್ರವವಾಗುವುದೆಂದು ಬಹುಕಾಲದ ಮೌನವ್ರತವನ್ನು ಬಿಟ್ಟುಕೊಟ್ಟ ರಶ್ಯವೂ ಕೂಡಲೇ ತಿಳಿದುಕೊಂಡಿತು!

◆

ಹೀಗೆ ಶ್ವೇತರಶ್ಯನರನ್ನು ಪಾಲನೆ ಮಾಡುವ ನೆವಹೂಡಿ ರಶ್ಯವು ಪೋಲೆಂಡನ್ನು ಆಕ್ರಮಣಮಾಡಿತು.

◆

ರಶ್ಯ ಮತ್ತು ಜರ್ಮನ್‌ಗಳೊಳಗೆ ಪೋಲೆಂಡು ಹಂಚಲಾಗಿದೆಯೆಂಬ ಆಶ್ಚರ್ಯಕರವಾದ ವಾರ್ತೆ ಈಗ ಬಂದಿದೆ!

◆

ರಶ್ಯವು ಇನ್ನು ಮುಂದೆ ಏನು ಮಾಡುವುದೊ?

◆

ರಶ್ಯಾ-ಜರ್ಮನ್ ಒಪ್ಪಂದವಾದ ಮೇಲೆ ಹಿಟ್ಲರನ ತತ್ವ ಮತ್ತು ಕಾರ್ಯಧೋರಣೆಗಳಲ್ಲಿ ಬಹಳ ಆಶ್ಚರ್ಯಕರವಾದ ಬದಲಾವಣೆಯಾದಂತೆ ಕಂಡು ಬರುತ್ತದೆ!

◆

ಹಿಟ್ಲರನು ಯೆಹೂದ್ಯರನ್ನು ನಿರ್ದಯವಾಗಿ ಹಿಂಸಿಸಿದವನು! ಆದರೆ ಈಗ ಹಿಟ್ಲರನು ಯೆಹೂದ್ಯರ ಸಹಾಯವನ್ನೇ ಅಪೇಕ್ಷಿಸುತ್ತಾನಂತೆ!

◆

ಜರ್ಮನಿಯ ಸರ್ವಾಧಿಕಾರಿಯು ಯಾವ ಮುಖದಿಂದ, ಬೇಡಲಿಕ್ಕೆ ಹೋಗುತ್ತಾನೋ ತಿಳಿಯುವುದಿಲ್ಲ!

◆

ಜರ್ಮನಿಯ ಯೆಹೂದ್ಯರಿಗೆ ಸ್ವಲ್ಪವಾದರೂ, ಆತ್ಮಗೌರವವು ಇದ್ದಲ್ಲಿ, ನಿಜವಾಗಿಯೂ ಹಿಟ್ಲರನ ಬಿನ್ನಹಕ್ಕೆ ಅವರು ತಕ್ಕ ಮನ್ನಣೆಯನ್ನು ಕೊಡಲು ಮರೆಯಲಾರರು!

ಅಮೇರಿಕವು ಇಂದಿನ ತನ್ನ ನೀತಿಯನ್ನು ಬದಲಾಯಿಸದಿದ್ದಲ್ಲಿ, ಶಾಂತ ಸಾಗರವು ರಣ ಕೋಲಾಹಲ ಕ್ಷೇತ್ರವಾಗುವುದೆಂದು ಜಪಾನು ಹೆದರಿಸುತ್ತದೆ!

◆

ಬ್ರಿಟನು ತನ್ನ ನೀತಿಯನ್ನು ಬದಲಾಯಿಸದಿದ್ದಾಗ, ಜಪಾನು ಮಾಡಿದ್ದೇನೆಂದರೆ, ಟಿನ್ಸಿನ್ಸಿನಲ್ಲಿ ಅನೇಕ ಬ್ರಿಟಿಷರ ವಸ್ತ್ರಗಳನ್ನು ಕಳಚಿ ನೋಡಿದ್ದು!

◆

ಆದರೆ ಅಮೇರಿಕದ ವಿಷಯದಲ್ಲಿ ಮುಂದಕ್ಕೆ ಏನುಮಾಡುವುದೋ ನೋಡಬೇಕಾಗಿದೆ!

◆

ಯೂರೋಪಿನಲ್ಲಿ ಯುದ್ಧವು ಆರಂಭವಾದಂದಿನಿಂದ ಅಮೇರಿಕವು, ಏಶ್ಯಾದಲ್ಲಿ ವ್ಯವಸ್ಥೆಯನ್ನುಂಟು ಮಾಡಲು ತನಗೂ ಹೊಣೆಗಾರಿಕೆಯುಂಟೆಂದು ಹೇಳುತ್ತಿದೆಯೆಂದು ಜಪಾನಿನ ಅಭಿಮತ.

◆

ಜಪಾನೂ, ಚೈನದೊಡನೆ ಯುದ್ಧ ಮಾಡಿ, ಈಗ ಕಡೆಗೊಮ್ಮೆ ಹೇಗಾದರೂ ಒಂದು ವ್ಯವಸ್ಥೆಯಾದರೆ ಸಾಕೆಂದು ಅಮೇರಿಕದ ಸಹಾಯವನ್ನು ಅಪೇಕ್ಷಿಸುವುದೇ?

◆

ಜಪಾನು, ತಾನು ಮಾತ್ರ ಚೈನದಲ್ಲಿ ವ್ಯವಸ್ಥೆಯನ್ನು ಮಾಡುವ ರಾಷ್ಟ್ರವೆಂದು ಹಿಂದೆ ಹೇಳಿಕೊಂಡಿತ್ತು!

◆

ಆದರೆ, ಈಗ ಅದಕ್ಕೆ ಒಮ್ಮೆ ಶಾಂತಿಯಾದರೆ ಸಾಕೆಂದು ಆಗಿರುವುದರಿಂದ, ಅಮೇರಿಕವೂ ಚೈನದ ವ್ಯವಸ್ಥೆಯಲ್ಲಿ ಸಹಭಾಗಿಯಾಗಬೇಕೆಂದು ಕೋರುತ್ತದೆ ಎಂದು ಹೇಳುತ್ತದೆ.

◆

ಚೈನದ ಗಡಿಯಲ್ಲಿ, ಜಪಾನು ಒಂದು ಆಶ್ರಿತ ಸರಕಾರವನ್ನು ಸ್ಥಾಪಿಸಲು ಯತ್ನಿಸುತ್ತಿದೆ!

◆

ಈ ಸರಕಾರವು ವಿದೇಶಿಯರ ಹಕ್ಕುಬಾಧ್ಯತೆಗಳಿಗೆ ಗೌರವ ಕೊಡುವುದಂತೆ!

◆

ಹೀಗೆ ಹೇಳುತ್ತಾ, ಜಪಾನು ಚೈನದ ಪುನರ್ರಚನೆಮಾಡುವ ಸಲುವಾಗಿ, ವಿದೇಶೀಯ ಭಂಡವಾಳಗಳ ಸಹಾಯವನ್ನು ಪಡೆಯಲು ಉಪಾಯ ಮಾಡುತ್ತಿದೆ.

◆

ಈ ಹಂಚಿಕೆಗೆ ಪೌರ್ವಾತ್ಯ ರಾಷ್ಟ್ರಗಳು ಬಲಿಯಾಗುವುದು ಸಾಧ್ಯವಿದೆಯೋ ಎಂದು ನೋಡಬೇಕಾಗಿದೆ!

◆

ಬಂಗಾಳದ ಹಕ್ಕರ ಮಂತ್ರಿಮಂಡಳವು ಪತ್ರಿಕೆಗಳ ಮೇಲೆ ಉರಿದು ಬಿದ್ದಿದೆ!

'ಹಿಂದುಸ್ಥಾನ ಸ್ಟೇಂಡರ್ಡ್' 8 ಸಾವಿರ ರೂಪಾಯಿಗಳನ್ನು ಕಳಕೊಂಡಿತು! 'ಅಮೃತ ಬಜಾರ್' ಎರಡು ಸಾವಿರ ರೂಪಾಯಿಗಳನ್ನು ಕಳಕೊಂಡಿತು! ಅರ್ಚನಾ ಒಂದು ಸಾವಿರ ರೂಪಾಯಿ ಕೊಟ್ಟಿತು! ಆದರೆ ಎಲ್ಲರ ಅಪರಾಧವೂ 'ಹಕ್ಕ' ಮಂತ್ರಿಮಂಡಲದ 'ರಕ್ಷೆ' ತಿಳಿಸಿ


ನಿಮ್ಮ ಎಲ್ಲಾ ಚರ್ಮವ್ಯಾಧಿಗಳನ್ನು ನಾಶಮಾಡಿರಿ.
ರಾತ್ರಿ ಮಲಗುವ ಸಮಯ ಜಾಂಬಕನ್ನು ಸವರಿಸಿರಿ
ಅಸಹ್ಯವಾದ ಉದ್ದು, ಗಜ್ಜಿಯ ಸ್ಥಳ ಅಥವಾ ಕುರು ಮೊದಲಾದ್ದು ಜಾಂಬಕನ್ನು ಯಾವಾಗಲೂ ಸವರಿಸುವುದರಿಂದ ಸಂಪೂರ್ಣ ಗುಣಹೊಂದುವುದು. ರಾತ್ರಿ ಮಲಗುವಾಗ ಗಜ್ಜಿ, ಉದ್ದು ಯಾ ಕುರು ಆದ ಭಾಗಕ್ಕೆ ಜಾಂಬಕನ್ನು ಸವರಿಸಿದಿರಿ, ನೀವು ನಿದ್ದೆಹೋಗುತ್ತಿರುವಾಗ ಜಾಂಬಕು ಗುಣಪಡಿಸುತ್ತಿರಲಿ. ಜಾಂಬಕಿನಲ್ಲಿರುವ ಅತ್ಯಮೂಲ್ಯ ಗಿಡಮೂಲಿಕೆಗಳ ಎಣ್ಣೆಯು ನಿಮ್ಮ ನಾಡಿಗಳಿಂದ ಹೀರಲ್ಪಡುತ್ತದೆ, ಇದರಿಂದ ಬರುತ್ತಿರುವ ಕೆಟ್ಟ ನೀರು ಒಣಗುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳು ಜಾಂಬಕನ್ನು ರೂಪಾಯಿ 1ರಂತೆ ಅಥವಾ 2-4-0ರಂತೆಯೂ ಮಾರುತ್ತಾರೆ.
ಏಜಂಟ್ಸ್
ಮೆಸರ್ಸ್ ದಾಥಾ ಮತ್ತು ಕಂಪೆನಿ,
ಪಾರ್ಕ್‌ಟೌನ್, ಮದ್ರಾಸು

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ
ZAM-BUK
ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಗುಣಬಾರದಿದ್ದರೆ ಹಣ ವಾಪಾಸು
ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)
ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಶರೀರವು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತರುವಾಯ ಏನು ಮಾಡಿದರೂ ನಾಸುವಾಗುವುದಿಲ್ಲ. ಪೂರ್ಣ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪೂರ, ಇವರು ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣದಾರಿ ಡಬ್ಬಿಯ ಕ್ರಯದೂ. 1-0-0
ವಿ. ಪಿ.
ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, (S.M.C.

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore.......And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE
ESTED: 1906
CANARA BANK, LIMITED.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (ರಿಜ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

29—9—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೮—೯—೧೯೩೯

"ಅಸ್ಪೃಶ್ಯತೆಯು ಉಳಿದಲ್ಲಿ ಹಿಂದೂ ಧರ್ಮವೇ ಅಳಿಯುವುದು"

- ಗಾಂಧಿಜಿಯವರ ಹೇಳಿಕೆ -

ಇಂಗ್ಲೆಂಡಿಗೆ ನೆಹರುಗಳ ಸೂಚನೆ

"ದ್ವೇಷದ ಉದ್ದೇಶಗಳನ್ನು ಇಂದು ಹಲವರು ಇಟ್ಟಿರುವುದರಿಂದ ಹಲವು ಅನರ್ಥಗಳು ನಡೆಯುತ್ತಿವೆ. ಅಧಿಕಾರದಲ್ಲಿರುವವರು, ಪ್ರತಿಗಳನ್ನು ಹಿಂದಲು ನೋಡಿದರೂ ಅವರ ವಿಚಾರಕ್ರಾಂತಿಯು ಜಗತ್ತನ್ನು ಆವರಿಸಿದೆ! ನಾವೇನು ಮಾಡುತ್ತೇವೆ, ಮುಂದಕ್ಕೆ ಏನಾಗುವುದೆಂದು ತಿಳಿಯದಂತೆ ಜನರು ಅನ್ಯೋನ್ಯ ಕತ್ತಿ ಕಟ್ಟಿ ನಿಂತಿದ್ದಾರೆ. ಒಂದೇ ಕುಟುಂಬದಂತಿರುವ ಮಾನವ ಜನತೆಯು ದ್ವೇಷ ಸಾಧಿಸಿ ಯುದ್ಧ ಮಾಡುತ್ತಿದೆ ಏನಾಗುವುದೋ ಹೇಳಬರುವುದಿಲ್ಲ ಆದರೆ ಇಂದಿನ ಜಗತ್ತಿನ ಸ್ಥಿತಿಯು ಧ್ವಂಸದ ಹಾದಿಯನ್ನು ಹಿಡಿದಿದೆ

ಹಿಂದೂದೇಶದ ಭಾಗ?

"ನಮ್ಮ ದೇಶವು ಹಿಂದಿನಿಂದಲೇ ಚರಿತ್ರೆಯಲ್ಲಿ. ಮಹಾಕಾರ್ಯವನ್ನು ಸಾಧಿಸಿದೆ ಇಂದಿನ ಈ ದುರಂತದಲ್ಲಿ ಏನು ಮಾಡಲಿದೆಯೋ ವಿಚಾರಿಸಬೇಕು.

"ಶಾಂತಿಯುತವಾದ ಮತ್ತು ಗೌರವಪೂರ್ಣವಾದ ರೀತಿಯಿಂದ, ಕಾಂಗ್ರೆಸು ತನ್ನ ಮುಂದಿನ ಮಾರ್ಗವನ್ನು ತಿಳಿಸಿದ ಕೊನೆಯ ನಿರ್ಧಾರವು ಪ್ರಕಟವಾಗಿಲ್ಲವಾದರೂ, ಅದರ ಮೂಲತತ್ವಗಳು ಬಯಲಾಗಿವೆ ಮುಂದೆ ಇದರಂತೆ ಮಾಡಬೇಕಾದ ಕಾರ್ಯಗಳ ಭಾಗವು ಮಾತ್ರ ನಿರ್ಧಾರವಾಗಬೇಕಾಗಿದೆ ಈ ನಮ್ಮ ನಿರ್ಧಾರದ ಪ್ರಕಟನೆಯನ್ನು ಕೇಳಿ ಬ್ರಿಟಿಷ್ ಸರಕಾರವು ಯಾವ ರೀತಿಯ ಮನೋಗತಿಯುಳ್ಳದ್ದಾಗುವುದೆಂಬುದನ್ನು ಅನುಸರಿಸಿ ನಮ್ಮ ಮುಂದಿನ ಹೆಜ್ಜೆಯು ಇಡಲ್ಪಡುವುದು ಒಟ್ಟಿನಲ್ಲಿ ಹಿಂದೂದೇಶವು ಸಾಮ್ರಾಜ್ಯದ ಒಂದು ಪಾಲು ಎಂದು ಹೇಳಲ್ಪಡಲು ಸಾಧ್ಯವಿಲ್ಲ, ಶಾಂತಿಕಾಲದಲ್ಲಾಗಲಿ ಯುದ್ಧಕಾಲದಲ್ಲಾಗಲಿ ಹಿಂದೂದೇಶವು ಸ್ವತಂತ್ರರಾಷ್ಟ್ರವೆಂದು ಪರಿಗಣಿಸಲ್ಪಡಬೇಕು

'ಯುದ್ಧಾರಂಭಕ್ಕೆ ಮೊದಲು ಬ್ರಿಟಿಷರು ಮಾಡಿದ ಮರೆಮೋಸಗಳಿಗೆ ಲೆಕ್ಕವಿಲ್ಲ ಅದರಿಂದಲೇ ಇಂದಿನ ಈ ಗಂಡಾಂತರವನ್ನು ಅವರು ತಂದು ಹಾಕಿದರೆಂದು ತಿಳಿಯಬಹುದು

ಇಂಗ್ಲೆಂಡಿನ ಸಂದರ್ಭ

ಇಂದು ಹೇಗಿದ್ದರೂ ಇಂಗ್ಲೆಂಡು ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳಿಗಾಗಿ ಕಾದಾಡಲು ನಿರ್ಧರಿಸಿದೆ ಹಿಂದಿನ ಮತ್ತು ಮುಂದಿನ ಕಾರ್ಯಗಳಿಂದ ಇಂಗ್ಲೆಂಡಿನ ಧೋರಣೆಯನ್ನು ಅಳೆಯಬೇಕಾಗಿದೆ ಬ್ರಿಟನು ಇನ್ನಾದರೂ ತನ್ನ ಹಿಂದಿನ ಧೋರಣೆಯನ್ನು ಬಿಟ್ಟು ಸಾಮ್ರಾಜ್ಯಶಾಹಿಯ ತತ್ವವನ್ನು ತ್ಯಜಿಸಲಿ. ಅದಕ್ಕೆ ಸುಸಂದರ್ಭವು ಒದಗಿದೆ! ಇಂತಹ ರೀತಿಯಲ್ಲಿ ಆತ್ಮಸಂಶೋಧನದಿಂದ ಬ್ರಿಟನು ನಡೆಯುವುದೇ? ಹಾಗೆ ಮಾಡದೆ ಬೇರೆ ದಾರಿ ಇಲ್ಲ.

[illegible] ಯೋಗಾಶ್ರಮದ ವಿದ್ಯಾರ್ಥಿಗಳು ತಮ್ಮ ಯೋಗಪ್ರದರ್ಶನಗಳನ್ನು ತೋರಿಸಲು ಭಾರತ ಸಂಚಾರಕ್ಕೆ ಹೊರಟಿದ್ದಾರೆ

"ಹಿಂದೂದೇಶದ ವಿಷಯದಲ್ಲಿ ಇದುವರೆಗೆ ಬ್ರಿಟನು ಏನೂ ಸವಿಚಾರ ತೋರಿಸಲಿಲ್ಲ ಗೌರವಾರ್ಹವಾದ ಜನತೆಯು ಬ್ರಿಟನಿನ ಈ ವರ್ತನೆಯನ್ನು ಸಹಿಸಲಾರದು. ಹೊರಗಿನ ಆಜ್ಞೆಯಂತೆ ಹಿಂದೂದೇಶವು ಯುದ್ಧದಲ್ಲಿ ಕಲೆಬಾಗಿ ಮುಂದೆ ಹೋಗಲು ಸಾಧ್ಯವಿಲ್ಲ. ಹಿಂದೂದೇಶವು ಸಮಾನಾಧಿಕಾರದ ಸ್ವತಂತ್ರ ರಾಷ್ಟ್ರವೆಂದು ಬ್ರಿಟನು ಒಪ್ಪಿಕೊಳ್ಳದಿದ್ದಲ್ಲಿ ನಮ್ಮೊಳಗೆ ಘರ್ಷಣೆಯಾದೀತು.

ನಮ್ಮ ಐಕ್ಯ

"ಇದು ನಮ್ಮ ಸತ್ವಪರೀಕ್ಷೆಯ ಕಾಲವಾಗಿದೆ! ನಾವು ಇಂದು ಉತ್ತೀರ್ಣರಾಗದಿದ್ದರೆ ಹಿಂದುಳಿವೆವು ಇತರರು ಮುಂದುವರಿವರು. ನಮ್ಮಲ್ಲಿರುವ ಎಲ್ಲಾ ಪಕ್ಷ, ಮತಗಳ ಭೇದಭಾವನೆಗಳೂ ಅಡಗಬೇಕು ಮಹಾ ತತ್ವಧ್ಯೇಯಗಳು ಅಳಿದು ಉಳಿದು ಹೋಗುವ ಈ ಸಂದರ್ಭದಲ್ಲಿ ನಾವು ಹೀಗೆ ಸಂಕೋಚ ಮನಸ್ಸಿನಿಂದ, ಅನ್ಯೋನ್ಯ ಸಂಶಯಗೊಳ್ಳಬಾರದ

"ಕಾಂಗ್ರೆಸಿನ ಗೌರವಕ್ಕೆ ಧಕ್ಕೆ ತರುವ ಮತ್ತು ರಾಷ್ಟ್ರೀಯ ನಿರ್ಧಾರಕ್ಕೆ ಕುಂದು ತರುವ ಕಾರ್ಯಗಳನ್ನು ಯಾರೂ ಮಾಡಬಾರದು. ಸ್ವಾತಂತ್ರ್ಯದ ಕಡೆಗೆ ನಾವೆಲ್ಲರೂ ಒಟ್ಟಾಗಿ ಸಾಗುವ'' ಹೀಗೆಂದು ನೆಹರುಗಳು ನೇಶನಲ್ ಹೇರಾಲ್ಡ್ ಪತ್ರಿಕೆಯಲ್ಲಿ ಬರೆಯುತ್ತಾರೆ.

"ಎಲ್ಲಾ ಕಡೆಗಳಿಂದಲೂ, ದೇವಸ್ಥಾನಪ್ರವೇಶಕ್ಕೆ ವಿರುದ್ಧ ಮಾಡುವ ಸನಾತನಿಗಳ ವಿರೋಧವು ಬಹಳ ಕ್ಷುಲ್ಲಕವೆಂದೂ ಅವರಾದರೂ ನ್ಯಾಯವಲ್ಲದ ಕ್ರಮಗಳಿಂದ ತಮ್ಮ ನಿಷೇಧವನ್ನು ಮುಂದೊತ್ತಲು ಹಿಂಜರಿಯುವುದಿಲ್ಲವೆಂದೂ ಎಲ್ಲ ಕಡೆಗಳಿಂದಲೂ ಆಧಾರ ಸಹಿತವಾದ ವಿವರಗಳು ಬಂದಿವೆ ' ಹೀಗೆಂದು ಗಾಂಧಿಜಿಯವರು ಶ್ರೀರಂಗದ ಘಟನೆಯ ಕುರಿತು 'ಹರಿಜನ' ಪತ್ರಿಕೆಯಲ್ಲಿ ಬರೆಯುತ್ತಾರೆ.

ಮೀನಾಕ್ಷಿ ದೇವಾಲಯದಲ್ಲಿ ಆದ ಸುಧಾರಣೆಯನ್ನು ಪ್ರಶಂಸಿಸಿ ಬರೆಯುತ್ತಾ, ವಿರೋಧಿಗಳ ಕೈಯಲ್ಲಿ ಸುಧಾರಕರು ಬಂದ ಕಷ್ಟವನ್ನು ವಿವರಿಸುವ ಒಬ್ಬರ ಪತ್ರವು ತನಗೆ ಬಂದ ವಿಷಯವಾಗಿ ಹೇಳುತ್ತಾ, ಅದರೊಡನೆ ಡಾ. ರಾಜನರಿಂದ ಬಂದ ಪತ್ರವೊಂದರ ವಿಷಯವಾಗಿ ಸೂಚಿಸಿ ಶ್ರೀರಂಗದಲ್ಲಿ ಸನಾತನಿಗಳು ಹೆಂಗುಸರೇ ಮೊದಲಾದ ತಿಳುವಳಿಕೆಯಿಲ್ಲದವರನ್ನು ತಮ್ಮ ಕಾರಣಕ್ಕೆ ಸಹಾಯವಾಗಿ ಪ್ರದರ್ಶನ ಮಾಡುವಂತಹುದನ್ನು ನಿಷೇಧಿಸಿ ಬರೆದಿರುವರು ಅದುವಲ್ಲದೆ ಮಹಾತ್ಮಾಜಿಯವರು, ಹಿಂದೆ ಹರಿಜನ ಸಂಚಾರದಲ್ಲಿ ತನ್ನ ಮೇಲೆ ಹೊರಿಸಿದ ಸಾವಿರಾರು ಆರೋಪಗಳ ವಿಷಯ ಎತ್ತಿ ಹೇಳಿ, ಅಂತಹ ಆರೋಪಗಳಲ್ಲಿ ಯಾವ ಸತ್ಯವೂ ಇರುವುದಿಲ್ಲವೆಂದೂ, ದಕ್ಷಿಣ ಭಾರತದ ಸುಧಾರಕರಾದವರು ತಮ್ಮ ಮೇಲಿನ ಅಪವಾದಗಳನ್ನು ತಡೆಯುವಷ್ಟು ಶಾಂತಚಿತ್ತರಾಗಿರಬೇಕೆಂದೂ ಹೇಳಿರುವರು.

ಬಹಳ ಸ್ವಾರ್ಥತ್ಯಾಗಬೇಕು

"ಎದುರು ಪಕ್ಷದವರ [illegible]ವನ್ನು ನೋಡಿ, ನಾವು ಅಸ್ಪೃಶ್ಯತಾ ನಿವಾರಣೆಯಂತಹ ಕಾರ್ಯವನ್ನು ಜಯಶಾಲಿಯಾಗಿ ಮಾಡುವುದೇ. ನಮ್ಮಲ್ಲಿರುವ ನೈರ್ಮಲ್ಯ, ಕಷ್ಟಸಹನೆ, ಗೌರವ ಜ ಕಾರ್ಯ ಮತ್ತು ಅಳೆಯಲಾರದ ಕಾರ್ಯಶಕ್ತಿಗಳ ಜಯವು ಮೇಲೆ ಹೊಂದಿಕೊಂಡಿದೆ ವಿರೋಧಿಗಳ ನಿಷೇಧವು ಸುಧಾರಕರ ಜೀವಹಾನಿಯ ವರೆಗೆ ಸಂಭವಿಸಿದರೂ ನಾನು ಅದರಿಂದ ಆಶ್ಚರ್ಯಪಡಲಾರೆ ಅಸ್ಪೃಶ್ಯತೆಯ ಶಾಪದಿಂದ ಹಿಂದೂಧರ್ಮವನ್ನು ಮುಕ್ತಿಗೊಳಿಸುವ ಪವಿತ್ರಕಾರ್ಯಕ್ಕೆ ಎಷ್ಟು ಸ್ವಾರ್ಥತ್ಯಾಗ ಮಾಡಿದರೂ ಅದು ದೊಡ್ಡದಲ್ಲ ಅಸ್ಪೃಶ್ಯತೆಯು ಉಳಿದರೆ, ಹಿಂದೂಧರ್ಮವು ನಿಜವಾಗಿಯೂ ವಿನಾಶವಾದೀತೆಂದು ನಾನು ಸಾವಿರಸಲ ಹೇಳುತ್ತೇನೆ.

"ಅಸ್ಪೃಶ್ಯತೆಯು ಶಾಸನದ ಬಲಾತ್ಕಾರದಿಂದಲೂ ಪರಿಹರಿಸತಕ್ಕುದಲ್ಲ ಬಹುಮಂದಿ ಹಿಂದೀಯರು ಇದು ದೇವರ ಮತ್ತು ಮನುಷ್ಯರ ಮೇಲೆ ಪಾಪವೆಂದು ತಿಳಿದಾಗ ಮಾತ್ರ ಇದು ಹೋದೀತು. ಇದು ಅಭಿಪ್ರಾಯ ಬದಲಾವಣೆಯಿಂದ ಆಗತಕ್ಕ ಕಾರ್ಯವಾಗಿದೆ. ಎಂದರೆ ಹಿಂದೂ ಹೃದಯಗಳು ನಿರ್ಮಲವಾಗಬೇಕು. ಜನತೆಯು ಮತ್ತು ದೇವಳದ ಯಜಮಾನರ ಇಚ್ಛೆಯಿದ್ದರೂ ಕೂಡಾ, ತೊಂದರೆಯಾದಲ್ಲಿ ಆಗ ಮಾತ್ರ ಕಾನೂನು ಉಪಯೋಗಿಸಲ್ಪಡಬೇಕು."

ಸ್ವದೇಶಾಭಿಮಾನಿ

ತಾರೀಖು 29—9—1939.

ಭಾರತದ ಔದ್ಯೋಗಿಕ ಸಮಸ್ಯೆ!

ಯುದ್ಧದ ಗೊಂದಲದಿಂದ, ಹಿಂದೂ ದೇಶದಲ್ಲಿ ತಲೆಯೆತ್ತಿದ ಅನೇಕ ಸಮಸ್ಯೆಗಳಲ್ಲಿ, ದೇಶದ ಉದ್ಯೋಗ ಅಭಿವೃದ್ಧಿಯ ವಿಷಯವು ಎಲ್ಲದಕ್ಕಿಂತಲೂ ಹೆಚ್ಚಿನ ಮಹತ್ವದ್ದಾಗಿದೆ. ಯುದ್ಧಕೋಲಾಹಲದ ನಿಮಿತ್ತ, ಹಡಗುಗಳ ಚಲಾವಣೆಯು ಅಸಾಧ್ಯವಾಗುವ ಕಾರಣ, ವಿದೇಶದ ವ್ಯಾಪಾರವು, ನಿಂತುಹೋಗುವ ಸಂಭವವಿರುವುದರಿಂದ, ದೇಶೀಯ ಅನೇಕ ಕೈಗಾರಿಕೆಗಳು ಏಳಿಗೆಯಾಗಬಹುದು. ಈಗಾಗಲೇ, ಬ್ರಿಟಿಷ್ ಸರಕಾರವು ಇಂದಿನ ಯುದ್ಧವು ಮೂರು ವರ್ಷಗಳ ತನಕ ನಿರಂತರ ಸಾಗುವುದೆಂದು ನಿರ್ಧಾರಪೂರ್ವಕವಾದ ಪ್ರಕಟಣೆಯನ್ನು ಹೊರಡಿಸಿದೆ! ಜರ್ಮನಿಯು ಅದಕ್ಕೆ ಉತ್ತರವಾಗಿ ಏಳು ವರ್ಷ ವರೆಗೆ ಸಾಗಿಸಿದರೂ ತಾನು ಹಿಂತೆಗೆಯುವುದಿಲ್ಲವೆಂದು ಹೇಳಿದೆ! ಹೇಗಿದ್ದರೂ, ಈ ಸಂದರ್ಭದಲ್ಲಿ, ಯುದ್ಧವು ಯೂರೋಪಿನ ಪ್ರಬಲರಾಷ್ಟ್ರಗಳೊಳಗೆ ಬಹುಕಾಲ ನಡೆಯುವುದು ಸಾಧ್ಯವುಂಟೆಂದು ತಿಳಿಯಲು ಎಲ್ಲಾ ವಿಧದಿಂದಲೂ ಎಡೆಯಿದೆ! ಇಂತಹ ಅವಕಾಶದಲ್ಲಿ ಕಾಗದ, ಕಬ್ಬಿಣ, ಸಕ್ಕರೆ ಮೊದಲಾದ ದೇಶೀಯ ಕೈಗಾರಿಕೆಗಳು ಹೆಚ್ಚಿನ ಅಭಿವೃದ್ಧಿಗೆ ಬರಲು ಆಸ್ಪದವಿದೆ!

ವಿದೇಶಗಳ ವ್ಯಾಪಾರ ಸ್ಪರ್ಧೆಯ ನಿಮಿತ್ತ, ಭಾರತೀಯ ಉದ್ಯೋಗಪಟುಗಳು ದೇಶೀಯ ಕೈಗಾರಿಕೆಗಳನ್ನು ಆರಂಭಿಸಲು ಸಾಹಸಮಾಡುವುದಿಲ್ಲ ಆದುದರಿಂದ ಸರಕಾರವು ಇಂತಹ ಉದ್ಯೋಗಗಳಿಗೆ ರಕ್ಷಣೆ ಕೊಟ್ಟು ಜನರಿಗೆ ಕೈಗಾರಿಕೆಗಳ ಮೇಲೆ ವೆಚ್ಚಮಾಡಲು ಸಹಾಯ ಮಾಡಬೇಕು ಯೂರೋಪಿನ ಹಲವು ಕಡೆಗಳಿಂದ ಹಿಂದೂದೇಶಕ್ಕೆ ಸಾಮಾನುಗಳು ಬರುವುದು ನಿಂತುಹೋದರೂ, ಜಪಾನು ಜಾವಾಗಳ ವ್ಯವಹಾರ ಸ್ಪರ್ಧೆಯು ತಡೆಯಿಲ್ಲದೆ ನಡೆಯಬಹುದು. ಭಾರತದ ವಸ್ತ್ರ, ಕಬ್ಬಿಣ ಮೊದಲಾದವುಗಳಿಗೆ ಜಪಾನಿನ ಸ್ಪರ್ಧೆಯೂ, ಸಕ್ಕರೆಗೆ ಜಾವಾದ ಸ್ಪರ್ಧೆಯು ಇದ್ದೇ ಇದೆ.

ಹಿಂದೂದೇಶದ ರಕ್ಷಣೆಯ ಬಗ್ಗೆ ಈಗಾಗಲೇ ಚಟಪಿಲ್ಡ್ ಕಮಿಟಿಯು ೪೦ ಕೋಟಿ ರೂಪಾಯಿಗಳನ್ನು ವ್ಯಯ ಮಾಡಲು ನಿಶ್ಚಯಿಸಿರುವುದರಿಂದ, ಭಾರತದ ಕಬ್ಬಿಣದ ಕೈಗಾರಿಕೆಯು ಹೆಚ್ಚಿನ ಮಟ್ಟಿಗೆ ಊರ್ಜಿತವಾಗಬಹುದೆಂದು ನಿರೀಕ್ಷಿಸಬಹುದು. ಆದರೆ ಜಪಾನು ಜಾವಾ ಮೊದಲಾದ ಹಲವು ಕಡೆಗಳ ಸ್ಪರ್ಧೆಯನ್ನು ತಪ್ಪಿಸದಿದ್ದಲ್ಲಿ ಭಾರತದ ಬಂಡವಾಳಗಾರರು ಯಾವುದೇ ರೀತಿಯ ಹೊಸ ಸಾಹಸವನ್ನಾದರೂ ಮಾಡಲು ಧೈರ್ಯಪಡುವಂತಿಲ್ಲ!

ಭಾರತ ಸರಕಾರವು ಈಗ ಈ ಕಡೆಗೆ ಅವಶ್ಯ ಗಮನ ಕೊಡಬೇಕಾಗಿದೆ. ದೇಶೀಯ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಸರ್ವವಿಧದ ಪ್ರೋತ್ಸಾಹವನ್ನು ಸರಕಾರವು ಕೊಡುವುದು ಅತ್ಯವಶ್ಯವಾಗಿದೆ! ಬಂಡವಾಳಗಾರರಿಗೆ ಹೊರಗಿನ ಸ್ಪರ್ಧೆ ಬಾರದು ತಮ್ಮ ಸಾಹಸದಲ್ಲಿ ನಷ್ಟ ಬಾರದ ಹಾಗೆ ಭರವಸೆ ಕೊಡುವುದು ಸರಕಾರದ ಕರ್ತವ್ಯವಾಗಿರುತ್ತದೆ. ಏಕೆಂದರೆ, ಈಗಾಗಲೇ ಅಲ್ಲಲ್ಲಿ ಆರಂಭಮಾಡಿದ ಹಲವು ದೇಶೀಯ ಕೈಗಾರಿಕೆಗಳು ಯಾವ ತರದ ಪ್ರೋತ್ಸಾಹಜನಕವಾಗದಿರುವುದರಿಂದ, ಇನ್ನು ಮುಂದೆಯಾದರೂ ಸರಕಾರವು ಇದೇ ರೀತಿಯ ನಿರುತ್ಸಾಹವನ್ನು ತೋರ್ಪಡಿಸುತ್ತಿದ್ದಲ್ಲಿ ಖಂಡಿತವಾಗಿಯೂ ಭಾರತದ ಉದ್ಯೋಗವು ಊರ್ಜಿತಗೊಳ್ಳುವ ಹಾದಿಯು ಕಾಣುವುದಿಲ್ಲ. ಇತ್ತೀಚೆಗೆ ಕಲ್ಕತ್ತದಲ್ಲಿ ಸೇರಿದ ವಾಣಿಜ್ಯ ಸಂಘದವರು, ವಿದೇಶೀಯ ಸ್ಪರ್ಧೆಯಿಂದ, ಭಾರತದ ಕೈಗಾರಿಕೆಗಳು ಪಡುವ ನಷ್ಟವನ್ನು ಪರಿಹರಿಸುವ ಬಗ್ಗೆ ಸರಕಾರದ ದೃಷ್ಟಿಯನ್ನು ಸೆಳೆದಿರುವರು.

ಇಂತಹ ಸಂದರ್ಭದಲ್ಲಿ, ಭಾರತ ರಾಷ್ಟ್ರೀಯ ಯೋಜನಾ ಸಮಿತಿಯವರೂ ತೀವ್ರ ಆಂದೋಲನವನ್ನು ಆರಂಭಿಸಬೇಕು ಭಾರತದ ಕೈಗಾರಿಕೆಯು, ವಿದೇಶದ ಹಿಡಿತ ಸ್ಪರ್ಧೆಗಳಿಂದ ತಪ್ಪುವ ಈ ಸಂದರ್ಭದಲ್ಲಿ, ದೇಶದಲ್ಲಿ ಎಲ್ಲಾ ವಿಧದಿಂದಲೂ ಕೈಗಾರಿಕೆಗಳು ಹೆಚ್ಚಿ, ಆ ರೀತಿಯಿಂದ, ರಾಷ್ಟ್ರವು ಸ್ವತಂತ್ರವೂ ಸತ್ವಪೂರ್ಣವೂ ಆಗುವಂತೆ ಮಾಡುವ ಮಹತ್ವದ ಜವಾಬ್ದಾರಿಯು ಅವರ ಮೇಲೆ ಬಿದ್ದಿದೆ! ಉದ್ಯೋಗದ ಊರ್ಜಿತ ದೃಷ್ಟಿಯಿಂದಲಾದರೂ ಈ ಸಂದರ್ಭದಲ್ಲಿ ಭಾರತದ ಏಳಿಗೆಯಾಗಬಹುದೆಂದು ನಾವು ಹಾರೈಸಬಹುದು

ಹತಾಶ ಹಿಟ್ಲರ್!

ರುಮೇನಿಯದ ಪ್ರಧಾನ ಮಂತ್ರಿಗಳಾದ ಮಿ। ಕೆಲಿನೆಸ್ಕುರವರನ್ನು, ಬುಕಾರೆಸ್ಟಿನ ನಡು ರಸ್ತೆಯಲ್ಲಿ, ದಂಗೆಗಾರರು ಕೊಲೆ ಮಾಡಿದ ಮೇಲೆ ಯೂರೋಪಿನಲ್ಲಿ ರುಮೇನಿಯವು ಅಪಾಯದ ಸ್ಥಳವಾಗಿ ನಮ್ಮ ದೃಷ್ಟಿಯು ಆ ಕಡೆಗೆ ಸೆಳೆಯುವಂತಾಗಿದೆ ಅದರ ಇತಿಹಾಸವೇನು? ಜರ್ಮನಿಯು ರುಮೇನಿಯದಲ್ಲಿ ದಂಗೆ ಹುಟ್ಟಿಸಲು ಕಾರಣವೇನೆಂಬುದನ್ನು ವಿಚಾರಿಸತಕ್ಕದ್ದು ಅವಶ್ಯವಾಗಿದೆ, ಹಿಟ್ಲರನು ರಶ್ಯಾದೊಡನೆ ಮಾಡಿದ ಒಪ್ಪಂದ ಮತ್ತು ವಿಭಾಗಗಳ ಫಲವಾಗಿ, ಪೋಲೆಂಡಿನ ಯಾವ ಫಲವತ್ತಾದ ನೆಲವನ್ನು ಪಡೆಯಲು ಆತನು ಅಪೇಕ್ಷಿಸಿದ್ದನೋ, ಆ ಉಕರಿನ್ ಪ್ರಾಂತವೇ ಇಂದು ಆತನ ಕೈಬಿಟ್ಟು ಹೋಗಿ ರಶ್ಯದ ವಶವಾಗಿದೆ. ರಶ್ಯವಾದರೂ, ಈಗಾಗಲೇ ಉಕರಿನ್ ಪ್ರಾಂತವನ್ನು ಹೊಕ್ಕು, ಅಲ್ಲಿ ಪ್ರಬಲವಾದ ಎರಡು ಮಿಲಿಯ ಸೈನಿಕರೊಡನೆ ಭದ್ರವಾಗಿ ತಳವೂರಿಕೊಂಡಿದೆ. ಆದಕಾರಣ, ಹಿಟ್ಲರನು, ಮುಂದಕ್ಕೆ ಉಕರಿನನ್ನು ಸ್ವಾಧೀನಪಡಿಸುವ ವಿಷಯವಾಗಿ ಕನವರಿಸುವುದೂ ಸಾಧ್ಯವಿಲ್ಲ. ಇದು ಜರ್ಮನಿಯು ಅಭಿಲಾಷೆ ಪಡುವಂತಹ ಇನ್ನೊಂದೇ ಒಂದು ಭೂಮಿಯೆಂದರೆ ರುಮೇನಿಯಾ ಮಾತ್ರ

ರುಮೇನಿಯದ ಸ್ಥಾನವು ಯೂರೋಪಿನ ರಾಜಕೀಯದಲ್ಲಿ ಬಹಳ ಪ್ರಾಶಸ್ತ್ಯವನ್ನು ಪಡೆಯತಕ್ಕದ್ದಾಗಿದೆ. ಗೋದಿ, ಎಣ್ಣೆಗಳನ್ನು, ಅದು ಬೇಕಾದಷ್ಟು ಒದಗಿಸುವುದು ಮಾತ್ರವಲ್ಲದೆ, ರುಮೇನಿಯವನ್ನು ಯಾರು ಸ್ವಾಧೀನಪಡಿಸುವರೋ, ಅವರು ಕಪ್ಪು ಸಮುದ್ರದಲ್ಲಿ ಪ್ರಬಲರಾಗಿ, ಆ ಮೂಲಕ ಮುಂದಕ್ಕೆ ಪೂರ್ವ ಭೂಮಧ್ಯಭಾಗದಲ್ಲಿಯೂ ಹೆಚ್ಚಿನ ಹಿಡಿತವನ್ನು ಇಟ್ಟುಕೊಳ್ಳುವುದು ಸಾಧ್ಯವಿದೆ ಹಾಗಾಗಿ ಇದು, ರುಮೇನಿಯವನ್ನು ಜರ್ಮನಿ ರಶಿಯ ಆಡಳಿತೆಗೆ ಒಳಪಡಿಸುವ ಸಾಧನೆಯೆನ್ನಲು ಯಾವ ಆತಂಕವೂ ಇರುವುದಿಲ್ಲ ಮೊನ್ನೆ ವಧೆಮಾಡಲ್ಪಟ್ಟ ಪ್ರಧಾನ ಮಂತ್ರಿ ಕೆಲಿನೆಸ್ಕುರವರು ನಾಜೀ ಪ್ರಚಾರದ ತೀವ್ರ ವಿರೋಧಿಗಳಾಗಿದ್ದರು ರುಮೇನಿಯದಲ್ಲಿ ನಾಜೀ ಆಂದೋಲನವನ್ನು ಬಗ್ಗುಬಡಿಯಲು ಅವರು ಪ್ರತಿಜ್ಞಾಬದ್ಧರಾಗಿದ್ದರು ಅವರು ರಶ್ಯದೊಡನೆ, ಅನ್ಯೋನ್ಯ ಕಾದಾಟವಿಲ್ಲವೆಂಬ ಒಪ್ಪಂದವನ್ನೂ ಮಾಡಿಕೊಂಡಿದ್ದರು ಈ ಒಪ್ಪಂದದ ಅನುಸಾರವಾಗಿ, ರಶ್ಯವು ರುಮೇನಿಯದ ಸ್ವಾತಂತ್ರ್ಯ ರಕ್ಷಣೆಯ ವಿಷಯ, ಅನೇಕರೀತಿಯಿಂದ ಆಸಕ್ತಿಗೊಂಡಿದೆಯೆಂಬ ಸೂಚನೆಯು ತೋರಿಬರುತ್ತಿದೆ. ರುಮೇನಿಯದ ಗಡಿಯಲ್ಲಿಯೂ ರಶ್ಯವು ಒಂದು ಬಲವಂತವಾದ ಸೈನ್ಯವನ್ನು ಇಟ್ಟುಕೊಂಡಿರುತ್ತದೆ ಇದು, ರುಮೇನಿಯಕ್ಕೆ ಜರ್ಮನಿಯು ಆಕಸ್ಮಾತ್ ಆಕ್ರಮಣ ಮಾಡದಂತೆ ರಕ್ಷಿಸುವ ಸಲುವಾಗಿ ಎಂಬುದು ನಿರ್ವಿವಾದವಾಗಿದೆ

ಹೀಗೆ ಉಕರಿನನ್ನು ಕಳಕೊಂಡ ಜರ್ಮನಿಯು, ರುಮೇನಿಯವನ್ನು ಆಕ್ರಮಿಸುವ ವಿಷಯದಲ್ಲಿಯೂ ತಿರಿಗಿ ರಶ್ಯವೇ ತನಗೆ ತಡೆಯಾಗಿ ನಿಂತಿರುವ ವಿಷಯ ತಿಳಿದು ಬೇಸರಪಟ್ಟಿರಬಹುದು ಇಂದು ಎಲ್ಲಾ ವಿಧದ ಜರ್ಮನಿಯ ಚಟುವಟಿಕೆಗಳನ್ನೂ ರಶ್ಯವು ಹಿಡಿದುನಿಲಿಸಿದೆ ಏನೇ ಆಗಲಿ ಜರ್ಮನಿಯು ರಶ್ಯವು ಹೇಳಿದಂತೆ ಕೇಳುವುದಲ್ಲದೆ ಬೇರೆ ಉಪಾಯವಿಲ್ಲವೆಂಬ ಅವಸ್ಥೆಗೆ ಬಂದಿದೆ ಹೀಗಾಗಿ, ಇಂದು ತನ್ನ ಮೇಲೆ ಬಿದ್ದಿರುವ ರಶ್ಯದ ಬಹಳ ಅಧಿಕಾರವನ್ನು ತಪ್ಪಿಸಲು ಹಿಟ್ಲರನು ಯತ್ನಮಾಡುತ್ತಿದ್ದಾನೆ ಆದರೆ ಸ್ಟಾಲಿನನಾದರೂ, ಮುಂದಕ್ಕೆ ಹಿಟ್ಲರನನ್ನು ಇನ್ನೂ ಹೆಚ್ಚು ಅಧಿಕಾರಕ್ಕೇರುವುದು ತನಗೇ ಅಪಾಯಕರವೆಂದು ಈಗ ಎಚ್ಚೆತ್ತಿರುವನು ಎಲ್ಲಾ ವಿಚಾರಗಳನ್ನೂ ಬಹಳ ಮುಂಜಾಗ್ರತೆಯಿಂದ ತಿಳಿದುಕೊಂಡ ಸ್ಟಾಲಿನನು, ಮುಂದಕ್ಕೆ ಜರ್ಮನಿಯು ಬಾಲ್ಕನ್ ರಾಷ್ಟ್ರಗಳ ಮೇಲೆ ಆಕ್ರಮಣ ಮಾಡದಂತೆಯೂ, ಈಗಲೇ ರುಮೇನಿಯದೊಡನೆ ತಾನು ಮಾಡಿದ ಒಪ್ಪಂದದಂತೆ, ಅದರ ಸ್ವಾತಂತ್ರ್ಯ ರಕ್ಷಣೆಯ ಪ್ರತಿಜ್ಞೆ ತೊಟ್ಟು ನಿಂತಿದ್ದಾನೆ

ಈ ಸಂದರ್ಭದಲ್ಲಿ, ಪೋಲೆಂಡು ರುಮೇನಿಯಗಳ ಗಡಿನಾಡನ್ನು ರಶ್ಯವು ಸ್ವಾಧೀನಪಡಿಸಿಕೊಂಡಿರುವುದು, ಜರ್ಮನಿಯ ಪ್ರಗತಿಯನು ತಡೆಯುವ ಸಲುವಾಗಿಯೇ ಎಂದು ತಿಳಿಯಬಹುದು ಆದರೆ ರಶ್ಯವು ರುಮೇನಿಯವನ್ನು ರಕ್ಷಿಸದೆ, ಜರ್ಮನಿಯ ಮುಂದೊತ್ತುವಿಕೆಯನ್ನು, ತಡೆಯಿಲ್ಲದೆ ಬಿಟ್ಟುಕೊಟ್ಟಲ್ಲಿ ಮುಂದಕ್ಕೆ ಯುರೋಪಿನ ಪರಿಸ್ಥಿತಿಯಲ್ಲಿ ಮಹಾಕ್ರಾಂತಿಯು ಉಂಟಾಗಬಹುದು. ಹಾಗಾಗಿ ಇಂದು ಜರ್ಮನಿಯ ಉನ್ನತಿಯಾಗಲಿ, ಅವನತಿಯಾಗಲಿ, ರಶ್ಯದ ನಿರ್ಧಾರ ಮತ್ತು ನಿರೂಪಣೆಯನು ಹೊಂದಿಕೊಂಡಿದೆ

ಹಿಟ್ಲರನ ಪ್ರಾಣಾಪಾಯ!

ಇಂದು ಜಗತ್ತಿನಲ್ಲಿ - ರಾಷ್ಟ್ರಗಳ ಮುಖ್ಯಾಧಿಕಾರಿಗಳು ಕೊಲೆಯಾಗುತ್ತಿದ್ದಾರೆ ಮೊನ್ನೆ ತಾನೇ ರುಮೇನಿಯಾ ಮುಖ್ಯಮಂತ್ರಿಗಳಾದ ಕಾಲಿನೆಸ್ಕುರವರನ್ನು 'ಐರನ್ ಗಾರ್ಡ್' ಗಳೆಂಬ ಕೆಲವು ಕ್ರಾಂತಿಕಾರರು—ಇವರು ಹಿಂಸೆ ಕೃತ್ಯವನ್ನೂ ಮಾಡಲು ಹೆದರುವುದಿಲ್ಲ. ನಡುರಸ್ತೆಯಲ್ಲಿ ಗುಂಡಿನಿಂದ ಹೊಡೆದುಕೊಂದರು ಇತ್ತೀಚಿನ ಶತಮಾನದ ಪ್ರಪಂಚದ ಇತಿಹಾಸದಲ್ಲಿ ಇಂತಹ ಘೋರಕೃತ್ಯಗಳು ಅನೇಕವಾಗಿ ನಡೆದುದನ್ನು ನೋಡಬಹುದು. ಸ್ಪೈನಿನ ಅಲ್ಫಾನ್ಸೋ ರಾಜನನ್ನು ಕೊಲೆಮಾಡಲು ಹತ್ತು ಬಾರಿ ಪ್ರಯತ್ನಗಳು ನಡೆದುವು ಮಾರ್ಸೇಲ್ಸ್‌ದಲ್ಲಿ ಯುಗೊಸ್ಲಾವಿಯಾ ದೊರೆಯಾದ ಅಲೆಕ್ಸಾಂಡರನನ್ನು ಶಿರಚ್ಛೇದನ ಮಾಡಲಾಯಿತು ಲೆನಿನ್ ಮತ್ತು ಕ್ಲೆಮ್ಯಾನ್ಸ್ಯೂರವರ ಮೇಲೆ ಹಲವು ಬಾರಿ ಗುಂಡುಗಳು ಹಾರಿದವು. ಹ್ಯೂಲಾಂಗ್ ಎಂಬುವನ ಖೂನಿಯಾಯಿತು ಇಟಲಿಯ ಸರ್ವಾಧಿಕಾರಿಯಾದ ಮುಸೋಲಿನಿಯ ಮೇಲೆ ೧೦—೧೨ ಬಾರಿ ಪ್ರಯತ್ನಗಳು ನಡೆದವು

ಅನೇಕರು ಇಂತಹ ದುರಂತಗಳಿಗೆ ಗುರಿಯಾದರೂ ಹೆರ್ ಹಿಟ್ಲರನೊಬ್ಬನು—ಅವನನ್ನು ಇತರರಿಗಿಂತ ಹೆಚ್ಚಾಗಿ ಎಲ್ಲರೂ ದ್ವೇಷಿಸಿದರೂ—ಆ ದುರ್ಘಟನೆಗಳಿಗೆ ತುತ್ತಾಗಿಲ್ಲ

ಹಿಟ್ಲರನು ಸಾರ್ವಜನಿಕ ಸಭೆಯ ಮುಂಭಾಗದಲ್ಲಿ ಕೆಲವರನ್ನು ಆರಿಸಿ ಕುಳ್ಳಿರಿಸಲಾಗುತ್ತದೆ. ಪೋಲಿಸ್ ಜನರಲ್ ಹಿಮ್ಲರ್‌ನ 'ಗೆಸ್ಟಾಪೊ' ಎಂಬ ಗುಪ್ತಚಾರರು ಎಲ್ಲೆಲ್ಲಿಯೂ ತಿರುಗಿ ಶತ್ರುಗಳನ್ನು ಹೇಗಾದರೂ ಪತ್ತೆ ಮಾಡುವರು ಇವರ. ಪ್ರಧಾನ ರಸ್ತೆಗಳಲ್ಲಿ ಕಾರಿನಲ್ಲಿ ಕುಳಿತು ಹೋಗುವಾಗಲೂ ಕೈಸನ್ನೆ ಮಾಡಿಕೊಂಡು ನಿಂತಿರುವಾಗಲೂ ವಿಶೇಷವಾಗಿ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ಸಾದರ-ಸ್ವೀಕಾರ

ಹೊಸ ಪಾಠಪಟ್ಟಿ. ಪ್ರಕಾಶಕರು — ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡ್ ಮಂಗಳೂರು. ಕ್ರೌನ್ ೧ ಆಕಾರದ ೧೦೨ ಪುಟಗಳು ಬೆಲೆ ಮೂರಾಣೆ.

ಪ್ರಾಥಮಿಕ ಶಾಲೆಗಳಿಗೆಂದು ಸರಕಾರದವರು ೧೯೩೯ರಲ್ಲಿ ಪ್ರಕಟಿಸಿದ ಪಾಠಪಟ್ಟಿಯ ಕನ್ನಡ ಭಾಷಾಂತರವೂ ಜಿಲ್ಲಾ ಟೀಚರ್ಸ್ ಗಿಲ್ಡಿನ ಕಮಿಟಿಯವರ ಉಪಯುಕ್ತ ಸೂಚನೆಗಳೂ ಇವರಲ್ಲಿವೆ ಪ್ರಾಥಮಿಕ ಶಾಲೆಗಳಿಗೆ ಇದು ಬಹಳ ಉಪಯುಕ್ತವಾಗಿದೆ

ಫೋರ್ಟ್ ಆರ್ಯಸಮಾಜ—ಮುಂಬಯಿ ಹನ್ನೆರಡನೆಯ ವಾರ್ಷಿಕ ವರದಿ (೧೯೩೯)

'ದೈವಭಕ್ತಿ, ಸಮಾಜಸೇವೆಗಳ ದೃಷ್ಟಿಯಿಂದ ದುಡಿಯುತ್ತಿರುವ ಈ ಸಮಾಜವು ಹಿಂದಿನಂತೆ ಮುಂದೆಯೂ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ ಅನೇಕ ಕನ್ನಡಿಗರು ಈ ಸಂಸ್ಥೆಯಲ್ಲಿ ಹೆಚ್ಚು ಪರಿಶ್ರಮ ವಹಿಸಿ ದುಡಿಯುತ್ತಿರುವುದು ಆನಂದದ ವಿಷಯವಾಗಿದೆ.

ಲೋಕದ ಶಾಂತಿಗಾಗಿ ಆರಂಭಿಸಿದ ಹೊಸ ಆಂದೋಲನ!

ಶ್ರೀನಗರದಲ್ಲಿ ನೈತಿಕ ಸೈನ್ಯ ಶಿಬಿರ

ಕಳೆದ ಅಗಸ್ಟ್ ಮತ್ತು ಸಪ್ಟಂಬರ ತಿಂಗಳಲ್ಲಿ, ಬೇರೆ ಬೇರೆ ವರ್ಣಗಳ ಬೇರೆ ಬೇರೆ ಜಾತಿಮತ ಧರ್ಮಗಳ ಸ್ತ್ರೀಪುರುಷರು ಕಾಶ್ಮೀರದ ಶ್ರೀನಗರವೆಂಬಲ್ಲಿ ದಾಲ್ ಸರೋವರದ ಬಳಿಯಲ್ಲಿ ಅಖಿಲ ಭಾರತ ನೈತಿಕ ಸೈನ್ಯ ಶಿಕ್ಷಣ ಶಿಬಿರವನ್ನು (Moral Rearmament Training Camp) ಸ್ಥಾಪಿಸಿದರು. ಇವರು ಅಲ್ಲಿ ಭಾರತದ ಹಲವು ಸಮಸ್ಯೆಗಳನ್ನು ದೇವರಲ್ಲಿ ಪರಮಭಕ್ತಿಯನ್ನಿಟ್ಟು, ಆತನ ಆದರ್ಶದಂತೆ, ಪರಿಹರಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಈಗಾಗಲೇ ಜಗದ ನೈತಿಕ ಸೈನ್ಯದಲ್ಲಿ ಸಹಭಾಗಿಗಳಾಗಿ ಭಾರತೀಯರು ಯಾವ ಕಾರ್ಯವನ್ನು ಮಾಡಬಲ್ಲರೆಂಬ ವಿಷಯವು ಸ್ಪಷ್ಟವಾಗಿದೆ. ಕಾಲಿಫೋರ್ನಿಯೋದಲ್ಲಿ ಸೇರಿದ ಲೋಕಪರಿಷತ್ತಿಗೆ ಭಾರತದ ಪ್ರತಿನಿಧಿಗಳು ಹೋಗಿ ಭಾಗವಹಿಸಿದ್ದರು. ಹೋಲಿವುಡ್ಡಿನ ರೋಸೆಭೌಲಿನಲ್ಲಿ ಇದು ಸೇರಿತ್ತು. ಸಾಧಾರಣ ೩೦,೦೦೦ ಮಂದಿ ಕೂಡಿದ್ದರು. ಸುಮಾರು ೧೦,೦೦೦ ಮಂದಿಯು ಒಳಹೋಗಲು ಸ್ಥಳ ಸಿಗದೆ ಹೊರಗೆಯೇ ಇರಬೇಕಾಯಿತು.

ಆಂದೋಲನದ ಆರಂಭ

ಈ ಚಳವಳವು ಮಹಾಯುದ್ಧವು ಆದ ನಂತರ ಆರಂಭವಾಯಿತು. ಜಗತ್ತು ನಿಷ್ಠುರವಾಗಿ ಅನ್ಯಾಯವಾಗಿ ಯುದ್ಧವನ್ನು ಆರಂಭಿಸಿ, ಜನಾಂಗ ಜನಾಂಗಗಳು ಅನ್ಯೋನ್ಯ ಕತ್ತಿಕಟ್ಟಿ, ಜೀವಹಾನಿಯಾಗುವುದನ್ನು ಕಂಡು, ಅದರ ನಿವೃತ್ತಿಗಾಗಿ ಇದು ಆರಂಭವಾಯಿತು. ಲೋಕದ ಜನರ ಹೃದಯದಲ್ಲಿ ತುಂಬಿದ್ದ ನಿರಾಶೆಯ ಸ್ಥಾನದಲ್ಲಿ ಶಾಂತಿಯನ್ನು ಬಿತ್ತಲು ಈ ಸಂಘವು ಉದ್ದೇಶಿಸಿದೆ. ಇದು ಸ್ಥಾಪಿತವಾದ ಕೆಲವೇ ತಿಂಗಳಲ್ಲಿಯೇ ಜಗತ್ತಿನ ಅತಿಸಾಮಾನ್ಯ ಜನರಿಂದ ಆರಂಭಿಸಿ, ಮಹಾಪ್ರಭಾವಶಾಲಿಗಳಾದ ರಾಜಕಾರಣ ನಿಪುಣರ ವರೆಗೆ ಎಲ್ಲರ ಮನಸ್ಸಿನಲ್ಲಿಯೂ ಇದರ ತತ್ವಗಳು ನೆಲೆಸಿದುವು. ಕಾಲಿಫೋರ್ನಿಯೋದಲ್ಲಿ ಸೇರಿದ ಕಳೆದ ಮಹಾ ಪರಿಷತ್ತಿಗೆ ಒಟ್ಟು ಮೂವತ್ತು ರಾಷ್ಟ್ರಗಳ ಪ್ರತಿನಿಧಿಗಳು ಬಂದು ಸೇರಿ ಭಾಗವಹಿಸಿದ್ದರು.

ಶ್ರೀನಗರದ ಶಿಬಿರ

ಶ್ರೀನಗರದಲ್ಲಿ ಸ್ಥಾಪಿತವಾದ ಶಿಬಿರವೆಂದರೆ, ಅದು ಒಂದು ರೀತಿಯಿಂದ ಇಡೀ ಭರತಭೂಮಿಯನ್ನು ಸಂಕೋಚ ರೂಪವಾಗಿ ತೋರಿಸಿದಂತೆ! ನ್ಯಾಯಸ್ಥಾನದ ಅಧಿಕಾರಿಯಿಂದ ಅಂಚೆಯ ಗುಮಾಸ್ತನ ವರೆಗೆ, ಒಬ್ಬ ವಿದೇಶೀಯನಿಂದ ಸ್ವದೇಶೀಯನ ವರೆಗೆ, ಒಬ್ಬ ನಿವೃತ್ತ ರೈಲ್ವೆಯ ಉತ್ತಮ ಅಧಿಕಾರಿಯಿಂದ, ನಿರುದ್ಯೋಗೀ ಶಿಕ್ಷಿತ ತರುಣನ ವರೆಗೆ, ಒಬ್ಬ ಪಂಜಾಬಿ ವಿದ್ಯಾರ್ಥಿಯಿಂದ ಬಂಗಾಳೀ ಬಾರಿಸ್ಟರನ ವರೆಗೆ, ಒಬ್ಬ ಯೂರೋಪಿಯನ್ ಐ. ಸಿ. ಎಸ್. ಆಫೀಸರನಿಂದ ಒಬ್ಬ ಭಾರತೀಯ ಪತ್ರಿಕೋದ್ಯಮಿಯ ವರೆಗೆ, ಹೀಗೆ, ಟೀಪ್ಲಾಂಟರ್, ಬನಿಯಾಯುವತಿ, ಜಿಲ್ಲಾ ಕಮಿಶ್ನರ್, ನ್ಯೂಯಾರ್ಕ್ ಪತ್ರಿಕೋದ್ಯಮಿ, ಆಸ್ಪತ್ರೆಯ ಅಧಿಕಾರಿ ಡೇನಿಷ್ ಪ್ರತಿನಿಧಿ, ಹೀಗೆ ಎಲ್ಲಾ ತರದ ಎಲ್ಲಾ ಉದ್ಯೋಗದ ಜನರೂ ಅಲ್ಲಿ ಒಂದಾಗಿ ದೇವರ ಮೇಲೆ ಅಚಲ ಶ್ರದ್ಧೆಯನ್ನಿಟ್ಟು, ಜಗತ್ತಿನ ಶಾಂತಿಯ ಸಾಧನೆಗಾಗಿ ಶ್ರದ್ಧೆಯಿಂದ ದುಡಿಯಲು ನಿರ್ಧಾರ ಮಾಡಿರುತ್ತಾರೆ. ಕೆಲವರು, ಅಂತಹ ಪರಮೋಚ್ಚ ಕಾರ್ಯಸಾಧನೆಯ ಸಲುವಾಗಿ, ತಮ್ಮ ಏಕಮಾತ್ರ ವೃತ್ತಿಯನ್ನೂ ಬಿಟ್ಟುಕೊಟ್ಟಿದ್ದಾರೆ. ಇನ್ನು ಅನೇಕರು ಅನೇಕ ಸಾಹಸ ಸ್ವಾರ್ಥತ್ಯಾಗಗಳನ್ನು ಮಾಡಿದ್ದಾರೆ!

ಅಲ್ಲಿದ್ದ ಒಬ್ಬ ಯೂರೋಪಿಯನ್ ಆಫೀಸರನನ್ನು, ಈಗ ಉಂಟಾದ, ಯೂರೋಪಿಯನ ಅನಾಹುತದ ನಿಮಿತ್ತ ಸೈನ್ಯಕ್ಕೆ ಕರೆದರು. ಆತನು ಹೀಗೆಂದನು "ನಾನು ಈ ಶಿಬಿರದಲ್ಲಿ, ಹಿಂದೆ ಎಂದೂ ಕನವರಿಸಿಯೂ ಇರದಂತಹ, ಆಂಗ್ಲ-ಭಾರತೀಯ ಮಧುರ ಬಾಂಧವ್ಯವನ್ನು ಕಂಡೆನು. ನಿಜವಾಗಿ ನವಭಾರತದ ನಿರ್ಮಾಣಕ್ಕೆ ಹಾಗೂ ಜಗದ ಶಾಂತಿಗೆ ನಾವು ಈ ಸಂಸ್ಥೆಯ ಮೂಲಕ ಕಾರ್ಯರೂಪವಾಗಿ ಸಾಧಿಸಬಹುದು. ನಾನು ೩,೦೦೦ ಮೈಲುಗಳ ದೂರದಿಂದ ಬಂದೆನು. ನಾನಿಲ್ಲಿ ಶೋಧಿಸಿದ ಅಮೂಲ್ಯ ಜ್ಞಾನಲಾಭಕ್ಕಾಗಿ ಅದಕ್ಕಿಂತ ಇಮ್ಮಡಿ ದೂರದಿಂದಲೂ ಬರುತ್ತಿದ್ದೆನು."

ದಿನದ ನಿಯಮ

ಇಡೀ ಶಿಬಿರದಲ್ಲಿ ಪ್ರಶಾಂತವಾದ ಪ್ರಾತಃಕಾಲದಲ್ಲಿ ದಿನದ ಕಾರ್ಯವು ಆರಂಭವಾಗುತ್ತದೆ. ಎಲ್ಲರೂ ಎದ್ದು ದೇವರಿಗೆ ತಮ್ಮ ಭಕ್ತಿಯ ಪ್ರಾರ್ಥನೆ ಸಲ್ಲಿಸುತ್ತಾರೆ. ೫-೩೦ಕ್ಕೆ ಇಡೀ ಶಿಬಿರದಲ್ಲಿ ಹಣತೆಗಳು ಬೆಳಗುವುದನ್ನು ಕಾಣಬಹುದು. ಇಂಗ್ಲೀಷರೂ ಕೂಡಾ ತಮ್ಮ ಮಾಂಸಹಾರವನ್ನು ಬಿಟ್ಟು ಚಪಾತಿ, ಅನ್ನಸಾರುಗಳನ್ನು ಉಪಯೋಗಿಸುವರು.

ಒಂದು ದಿನ ಸಾಯಂಕಾಲ ನೆರೆದ ಸಭೆಗೆ "ಚಿತ್ರಮಯ ಭಾರತ" ಎಂದು ಹೆಸರಿಡಲಾಗಿತ್ತು. ಇದಕ್ಕೆ ಪೇಶಾವರದ ಜೂಡಿಶಿಯಲ್ ಕಮಿಶನರಾದ ಮಾನ್ಯ ಖಾನ್ ಬಹದ್ದೂರ್ ಖಾಜಿ ಮೀರ್ ಹಮ್ಮದರವರು ಆಮಂತ್ರಿತರಾಗಿದ್ದರು. ಬಂದವರೆಲ್ಲರೂ ಈ ಆಂದೋಲನದ ವಿಷಯ ಹೆಚ್ಚು ಹೆಚ್ಚಾಗಿ ಕೇಳಲು ಆತುರರಾಗಿದ್ದರು. ಕಾಶ್ಮೀರ ಮತ್ತು ಗಡಿನಾಡು ಪ್ರಾಂತ್ಯಗಳ ಅನೇಕ ಉಚ್ಚ ಸರಕಾರೀ ಅಧಿಕಾರಿಗಳೂ ಹಾಜರಾಗಿದ್ದರು.

ನವದರ್ಶನ

ಆ ದಿನ ಮಾತನಾಡುವ ಮಹನೀಯರನ್ನು ಪರಿಚಯ ಮಾಡಿಕೊಡುತ್ತಾ ಪೇಶಾವರದ ರೆವೆನ್ಯೂ ಕಮಿಶನರಾದ ಮಿ. ಎಲ್. ಜಾರ್ಡೆನರು ಇಂದು ಇಲ್ಲಿ ಧರ್ಮಜಾತಿಗಳ ಸಂಕೋಚವಿಲ್ಲದ ನವಭಾರತದ ನವದರ್ಶನವನ್ನು ನಾವು ಕಾಣಬಹುದೆಂದು ಹೇಳಿದರು. ಮಿ. ಜಾರ್ಡೆನರು ಮಾತನಾಡುತ್ತಾ ಪ್ರಾರಂಭದ ತನ್ನ ಉದ್ಯೋಗ ಜೀವನದಲ್ಲಿ ತಾನು ಬ್ರಿಟಿಷ್ ಜನರೊಡನೆ ಸೇರಿರುವಾಗ ಯಾವ ರೀತಿಯ ಸಂಕೋಚದಿಂದ ನಡೆಯುತ್ತಿದ್ದೆನೆಂದೂ, ಒಮ್ಮೆ ನಮ್ಮ ಜೀವನದಲ್ಲಿ ಅಂತಹ ನೈಚ್ಛತಾ ಭಾವವು ಅಡಗಿ ಸಮಾನತೆಯು ಸ್ಥಾಪಿತವಾಗಲು, ಭಾರತದ ಎಲ್ಲಾ ಸಮಸ್ಯೆಗಳೂ ಪರಿಹಾರವಾಗುವುದೆಂದು ಹೇಳಿದರು.

ಆ ವೇಳೆ ರೈಲ್ವೆ ಡಿವಿಜನಲ್ ಸುಪರಿಂಟೆಂಡೆಂಟರಾದ ಮಿ. ಡಬ್ಲ್ಯೂ. ಟಿ. ಬಿಸ್ಕೋರವರು ಮಾತನಾಡುತ್ತಾ ತಾನು ಇಪ್ಪತ್ತೊಂದು ವರ್ಷಗಳ ಹಿಂದೆ ಒಂದಾಗ ಜನರಲ್ಲಿದ್ದ ವಿಚಾರ ಇಂದಿನ ಇಲ್ಲಿನ ಜಾಗೃತಿಗಳ ವಿಷಯವಾಗಿ ವಿವರಿಸಿದರು.

ಆ ಮೇಲೆ ಕ್ರಿಶ್ಚಿಯನ್ ಪ್ರಚಾರಕರೊಬ್ಬರು ಮಾತನಾಡುತ್ತಾ, ತಾನು ಹಿಂದಕ್ಕೆ ಹಿಂದೂದೇಶವು ಕ್ರಿಶ್ಚಿಯನ್ ಮತವನ್ನು ಅಂಗೀಕರಿಸಲಾರದೆಂದು ತಿಳಿದಿದ್ದ ಅಭಿಪ್ರಾಯವು ತಪ್ಪೆಂದೂ, ಆಗ ತಾನು ದೇವರಲ್ಲಿ ಅಚಲ ವಿಶ್ವಾಸವಿಟ್ಟಿರಲಿಲ್ಲವೆಂದೂ ಹೇಳಿದರು.

ಬಂಗಾಳದ ಬ್ಯಾರಿಸ್ಟರು ಮಾತನಾಡುತ್ತಾ ಇಂದಿನ ವಿದ್ಯಾರ್ಥಿಗಳ ಸಮಸ್ಯೆಯ ಕುರಿತು ದೀರ್ಘ ಭಾಷಣಮಾಡಿ, ವಿದ್ಯಾರ್ಥಿಗಳು ದೇವರಲ್ಲಿ ನಿಶ್ಚಲ ಶ್ರದ್ಧೆಯಿಟ್ಟು ನಡೆಯುವುದು ಅವಶ್ಯವೆಂದರು.

ಪ್ರಾಯಶ್ಚಿತ್ತ

ಎಲ್ಲರೂ ಒಟ್ಟುಗೂಡಿ ಅಲ್ಲಿ ತಾವು ಹಿಂದೆ ಮಾಡಿದ ದುಷ್ಕೃತ್ಯಗಳನ್ನು ಕ್ಷಮಿಸುವರೆ ದೇವರನ್ನು ಪ್ರಾರ್ಥಿಸುವರು. ಆಂಗ್ಲೇಯರು ತಾವು ಹಿಂದೆ ಭಾರತೀಯರಿಗಿಂತ ಉತ್ತಮರೆಂದು ತಿಳಿದು ಅಹಂಭಾವ ಪಟ್ಟಿದ್ದಕ್ಕಾಗಿ ಪಶ್ಚಾತ್ತಾಪ ಪಡುವರು!

ಬ್ರಹ್ಮಸಮಾಜ ಸ್ಥಾಪಕರಲ್ಲಿ ಪ್ರಸಿದ್ಧರಾದವರ ಪುತ್ರರಾದ ಶ್ರೀ. ಎಚ್. ಎ. ಬೋಸರೆಂಬವರು ತಾವಿದುವರೆಗೆ ಭಾರತದ ಹಾಗೂ ಜಗತ್ತಿನ ಕ್ಷೇಮದ ದೃಷ್ಟಿಯಲ್ಲಿ ಯಾವ ಕಾರ್ಯವನ್ನು ಮಾಡಿಲ್ಲವೆಂದೂ ಈಗ ಈ ನೈತಿಕ ಸೈನ್ಯ ಶಿಬಿರಕ್ಕೆ ಸೇರಿದ್ದಾರೆ!

ನವಯುಗದ ನವೋದಯ

"ಭಾರತದ ನವನಿರ್ಮಾಣದ ನವೋದಯವನ್ನು ನಾನು ಇಲ್ಲಿ ಕಾಣುತ್ತೇನೆ. ಸರ್ವಶಕ್ತನಾದ ದೇವನ ಶಕ್ತಿ ಮಹತ್ವಗಳನ್ನು ಹಿಂದಕ್ಕೆ ತಿಳಿಯದೆ ಇದ್ದು ನಮ್ಮ ಕಾರ್ಯಗಳು ಇಂದು ಹೊಸ ದಾರಿಯನ್ನು ಹಿಡಿದಿವೆ" ಹೀಗೆಂದು ಒಬ್ಬ ಮಹಿಳೆಯು ಹೇಳಿದಳು.

ಒಬ್ಬ ಪ್ರಸಿದ್ಧ ಕಾಂಗ್ರೆಸು ಧುರೀಣರೂ ಮತ್ತು ಒಬ್ಬ ಐ.ಸಿ. ಯಸ್ ಆಫೀಸರರೂ ಈ ಚಳವಳದಲ್ಲಿ ಬಹು ಆಸಕ್ತಿಯಿಂದ ಕಾರ್ಯ ಮಾಡುತ್ತಿದ್ದಾರೆ. ಅಲ್ಲಿನ ಜನರು, ಪಾರ್ಸಿಗಳು, ಹಿಂದುಗಳು, ಕ್ರಿಶ್ಚನರು ಅವರವರ ಧರ್ಮಗ್ರಂಥಗಳನ್ನು ಶ್ರದ್ಧೆಯಿಂದ ಓದುತ್ತಾರೆ. ಒಬ್ಬರು ಕಂಡ ಸತ್ಯವನ್ನು ಇನ್ನೊಬ್ಬರಿಗೆ ತಿಳಿಸುತ್ತಾರೆ.

ಇದರಲ್ಲಿ ಕಾಣುವ ಒಂದು ವೈಶಿಷ್ಟ್ಯವೆಂದರೆ ಭಾರತೀಯರೆಂದೂ ಯುರೋಪಿಯನರೆಂದೂ ಶಿಬಿರದ ನಿವಾಸಿಗಳು ಭೇದಭಾವಗಳನ್ನು ಇಡದೆ ಏಕ ಸಹೋದರ ಪ್ರೇಮ ಬುದ್ಧಿಯಿಂದ ನಡೆಯುತ್ತಾರೆ.

ಐಕ್ಯ ಪ್ರತಿಜ್ಞೆ!

ಇಂದು ಅಂತರ್ ರಾಷ್ಟ್ರೀಯ ಅವಗಡದ ಕಾಲ. ಜನಾಂಗ ಮತ್ತು ಜನತೆಗಳು 'ಏನು ಮಾಡಲಿ?' ಎಂಬ ಪ್ರಶ್ನೆಯನ್ನು ಕೇಳುತ್ತಾರೆ. ನೈತಿಕ ಸೈನ್ಯ ಶಿಬಿರವೇ ಇದರ ಉತ್ತರ. ಈ ಶಿಬಿರದ ಉದ್ದೇಶವೆಂದರೆ ಜಗತ್ತಿನಲ್ಲಿ ನಿತ್ಯಶಾಂತಿಯನ್ನು ಸ್ಥಾಪಿಸುವುದು. ಇದರ ಪ್ರತಿಯೊಬ್ಬ ಸದಸ್ಯನೂ ಜಗತ್ತಿನ ಐಕ್ಯ ಮತ್ತು ಶಾಂತಿ ಪ್ರಚಾರಕ್ಕಾಗಿ ಪ್ರತಿಜ್ಞೆ ತೊಟ್ಟಿರುವನು. ಸಂಪೂರ್ಣ ಗೌರವ್ಯ ನೈರ್ಮಲ್ಯ, ನಿಸ್ವಾರ್ಥ, ಪ್ರೇಮ, ದೈವಭಕ್ತಿ, ಇವುಗಳಿಂದ ಹಿಂದೂ, ಮುಸ್ಲಿಂ, ಸಿಕ್ಖ, ಪಾರ್ಶಿ, ಕ್ರಿಶ್ಚಿಯಾನ್ ಪ್ರತಿಯೊಬ್ಬನೂ, ಹೆಂಗುಸಾಗಲಿ ಹುಡುಗನಾಗಲಿ ದೇವರ ಕರೆಯನ್ನು ಕೇಳಬಹುದು. ಹೀಗೆ ಎಲ್ಲವರೂ ದೇವರಿಗೆ ಐಕ್ಯಮತದಿಂದ ವಿಧೇಯರಾಗಬೇಕು.

ಪೇಶಾವರದ ಒಬ್ಬ ಮುಸ್ಲಿಂ ನ್ಯಾಯಾಧೀಶರು ಹೀಗೆನ್ನುತ್ತಾರೆ.

"ಈ ಶಿಬಿರವು ಇಡೀ ಭಾರತದ ಹಳ್ಳಿ ಹಳ್ಳಿಗಳಲ್ಲಿಯೂ ಪ್ರಚಾರವಾಗಬೇಕು. ಪ್ರತಿಯೊಬ್ಬ ಹಳ್ಳಿಯವನೂ ದೇವರ ಕರೆಯನ್ನು ಅವನ ಸ್ವಂತ ಭಾಷೆಯಲ್ಲಿ ಕೇಳುವಂತಾಗಬೇಕು. ಪ್ರತಿಯೊಂದು ಹಳ್ಳಿಗಳಲ್ಲಿಯೂ ಈ ಶಿಬಿರವು ಸ್ಥಾಪಿತವಾಗಬೇಕು. ಜಗತ್ತಿನ ತನ್ನ ಕಾರ್ಯಗಳನ್ನು ನಡೆಸುವ ಶಕ್ತಿಯುಳ್ಳ ಸರ್ವಾಂತರ್ಯಾಮಿಯಾದ ಒಬ್ಬ ದೇವನಿರುವನೆಂಬುದು ನಮಗೆ ಇದರಿಂದ ತಿಳಿಯುವುದು".

NOTICE

In the Court of the District Munsif of MANGALORE.

Small Cause Suit No 292 of 1939,

Between —

P. K. N R S Muthayan Chettiar & Co. by partner M. Swammiappa Chettiar .. .. .. } *Plaintiff*

and

Mandara Ballal, brother of Potail Sri Bhujanga Ballal residing in Hebri village, Karkal Taluk. .. } *Defendant*

To The Defendant abovenamed.

Please take notice that the abovenamed Plaintiff has filed the above suit in the Court of the District Munsiff of mangalore, for the recovery of Rs. 299—15—0 due in respect of dealings carried on by you with the Plaintiff and that the said suit stands posted for 2-10-1939 for your appearance. If you fail to appear on that day the suit will be decided exparte.

Mangalore, } **A. C. Gonsalves,**
19-9-1939. } *Advocate for Plaintiff.*

ರುಮೇನಿಯದ ಮೇಲೆ ಜರ್ಮನಿಯ ಬಲಾತ್ಕಾರವೇ?

ಪ್ರಧಾನ ಮಂತ್ರಿಗಳ ಕೊಲೆ

ರುಮೇನಿಯದ ಪರಿಸ್ಥಿತಿ — ಸ್ವಾತಂತ್ರ್ಯಕ್ಕೆ ಧಕ್ಕೆ!

ಯೂರೋಪಿನ ಇಂದಿನ ಕ್ರಾಂತಿಯ ಇತಿಹಾಸದಲ್ಲಿ ರುಮೇನಿಯವೂ ಮಹತ್ವವಾದ ಸ್ಥಾನವನ್ನು ಪಡೆದಿದೆ. ರುಮೇನಿಯದ ಪ್ರಧಾನ ಮಂತ್ರಿ ಎಂ. ಕೆಲಿನೆಸ್ಕುರವರನ್ನು ನಾಜಿ ಅಯರ್ನ್ ಗಾರ್ಡ್ ಇವರು ಗುಂಡಿಕ್ಕಿ ಕೊಂದಿರುವುದಾಗಿ ವಾರ್ತೆ ಬಂದಿದೆ. ಕೆಲಸಮಯಗಳ ಹಿಂದೆ, ನಾಜಿಗಳ ಮೇಲೆ ರುಮೇನಿಯ ಸರಕಾರವು ತೋರಿಸುತ್ತಿದ್ದ ಉಗ್ರತೆಯ ಫಲವಾಗಿ ಈ ವಧಾ ಕಾರ್ಯವು ನಡೆಯಿತೆಂದು ಊಹಿಸಬೇಕಾಗಿದೆ.

ಪ್ರಧಾನ ಮಂತ್ರಿಗಳ ಕೊಲೆ!

ಎಂ. ಕೆಲಿನಿಸ್ಕು ಇವರನ್ನು ಕಿಂಗ್ ಕಾರಲರು ಕಳೆದ ಮಾರ್ಚಿಯಲ್ಲಿ ಪ್ರಧಾನ ಮಂತ್ರಿಯಾಗಿ ಆರಿಸಿದ್ದರು. ಇವರು ರುಮೇನಿಯದಲ್ಲಿ ನಾಜೀ ಚಳವಳದ ಕುರಿತು ಬಹಳ ತೀಕ್ಷ್ಣರಾಗಿದ್ದರು.

ಇವರು ಕಾರಿನಲ್ಲಿ ಹೋಗುತ್ತಿದ್ದಾಗ ಎದುರಿಗೆ ಒಂದು ಬಂಡಿಯು ಬಂದು ಕಾರಿಗೆ ತಡೆಯಾಯಿತು ಕೂಡಲೇ ಆಚೀಚೆಗೆ ಎರಡು ಕಾರುಗಳು ಬಂದು ನಿಂತವು. ಶಸ್ತ್ರಸಿದ್ಧರಾದ ಕರುಣರ ಗುಂಪೊಂದು ಕೂಡಲೇ ಕಾರಿನಿಂದ ಇಳಿದು ಪಿಸ್ತೂಲು ಹೊಡೆಯಿತು. ಎಂ. ಕೆಲಿನೆಸ್ಕುರವರಿಗೆ ಹನ್ನೊಂದು ಗುಂಡುಗಳು ತಾಗಿದ್ದುವು ಅವರೊಡನಿದ್ದ ಒಬ್ಬ ಪೋಲಿಸ್ ಅಧಿಕಾರಿಗೂ ಬಹಳ ಗಾಯವಾಯಿತು.

ಪೋಲೀಸು ಪಡೆಯು ಕೂಡಲೇ ಖೂನಿಯರನ್ನು ಅರಸಲು ಆರಂಭಿಸಿತು. ಕಿಂಗ್ ಕಾರಲರು, ಮಂತ್ರಿಮಂಡಳದ ಸಭೆಯನ್ನು ಕರೆದು, ಕಳೆದ ವರ್ಷದಿಂದ ನಾಜೀ ಪ್ರಚಾರವನ್ನು ತಡೆವ ಸಾಹಸವನ್ನು ಮಾಡುತ್ತಿದ್ದ ಎಂ ಕೆಲಿನೆಸ್ಕುರವರನ್ನು ಬಹಳ ಪ್ರಶಂಸಿಸಿದರು

ಕೆಲಿನೆಸ್ಕುರನ್ನು ಕೊಂದ ಇಬ್ಬರು ಅಯರ್ನ್‌ಗಾರ್ಡರರು ತಾವು ಅಡಗಿದ್ದ ಮನೆಯಲ್ಲಿಯೇ ಆತ್ಮಹತ್ಯೆ ಮಾಡಿಕೊಂಡರು

ಈ ಕೊಲೆಯ ನಿಮಿತ್ತ ಹನ್ನೊಂದು ಮಂದಿಯನ್ನು ಹಿಡಿದು ಕೊಂದಿರುವುದಾಗಿ ತಿಳಿದಿದೆ

ಸ್ವಾತಂತ್ರ್ಯಕ್ಕೆ ಧಕ್ಕೆ!

ಜಗತ್ತಿನ ರಾಷ್ಟ್ರಗಳು ತಮ್ಮ ತಮ್ಮಲ್ಲಿ ಸ್ವಾತಂತ್ರ್ಯವನ್ನು ಸ್ಥಾಪಿಸಿ, ಅಭಿವೃದ್ಧಿ ಹೊಂದುತ್ತಿರುವ ಸಂದರ್ಭದಲ್ಲಿ ಪ್ರಬಲ ರಾಷ್ಟ್ರಗಳ ಪೆಟ್ಟಿನಿಂದ ಅವುಗಳ ಸ್ವಾತಂತ್ರ್ಯವು ನಿರ್ನಾಮವಾಗುತ್ತಿರುವ ವಿಷಯವು ನಿಜವಾಗಿಯೂ ಬೇಸರದ ಸಂಗತಿಯಾಗಿದೆ! ಅಬಿಸೀನಿಯದ ಸ್ವಾತಂತ್ರ್ಯವನ್ನು ಇಟಲಿಯು ನುಂಗಿತು, ಜೆಕೊಸ್ಲವೇಕಿಯವನ್ನು ಜರ್ಮನಿಯು ಆಹುತಿ ಪಡೆಯಿತು, ಚೈನವು ಜಪಾನಿನ ಹೊಡೆತಕ್ಕೆ ಬಹಳ ತತ್ತರಿಸಿದೆ! ಜರ್ಮನಿಯು ಇಂದು ಪೋಲೆಂಡನ್ನು ಬಲಿಗೊಂಡಿದೆ! ರುಮೇನಿಯದ ಸ್ವಾತಂತ್ರ್ಯದ ವಿನಾಶವೂ ಈಗ ಸನ್ನಿಹಿತವಾಯಿತೇ ಎಂದು ಕಳವಳಿಸಬೇಕಾಗಿದೆ. ಬಹಳ ಸಮಯಗಳಿಂದ ಈ ರಾಷ್ಟ್ರವು ತನ್ನ ರಾಷ್ಟ್ರೀಯತೆಯನ್ನು ಉಜ್ವಲ ಚರಿತ್ರೆಯನ್ನು ಸ್ಥಾಪಿಸಿಕೊಂಡಿದೆ.

ರುಮೇನಿಯದ ಪರಿಸ್ಥಿತಿ!

ರುಮೇನಿಯದ ವೀರ ಚರಿತ್ರೆಯು ಬಹಳ ಪ್ರಶಂಸಾರ್ಹವಾಗಿದ್ದರೂ, ಅಲ್ಲಿನ ಇಂದಿನ ಸರಕಾರವು ಸಾಕಷ್ಟು ಪ್ರಬಲವಾಗಿಲ್ಲ. ಸೈನ್ಯಶಕ್ತಿ, ಸರಕಾರದ ಆಡಳಿತೆ ಮೊದಲಾದವುಗಳ ವಿಷಯ ಅದೂ ಇನ್ನೂ ದುರ್ಬಲವಾಗಿದೆ.

೧೯೧೮ರ ಮೇಲೆ ರುಮೇನಿಯ ಇತರ ಹಲವು ರಾಷ್ಟ್ರಗಳಂತೆ ಸ್ವತಂತ್ರವಾಯಿತು ಸ್ವತಂತ್ರ ರಾಜ್ಯ ಸುಖವನ್ನನುಭವಿಸುವಲ್ಲಿ ರುಮೇನಿಯನರು ಸಾಕಷ್ಟು ಸಂಕಷ್ಟವನ್ನು ಎದುರಿಸಿದರು. ಮೊದಲು ಅಲ್ಲಿ ಗೋಗಾ ಸರಕಾರವು ಸ್ಥಾಪಿತವಾಯಿತು ಅದು ಹೋದಮೇಲೆ ಕಿಂಗ್ ಕಾರೆಲರ ಸರ್ವಾಧಿಕಾರವು ನಡೆಯಿತು. ಪತ್ರಿಕೆಗಳಲ್ಲಿ ಹೆಚ್ಚಿನ ಪ್ರಚಾರ ಬರುವುದಿಲ್ಲವಾದರೆ ಕಿಂಗ್ ಕಾರಲರ ಸರ್ವಾಧಿಕಾರವು ಜರ್ಮನಿ ಇಟಲಿಗಳ ಸರ್ವಾಧಿಕಾರಕ್ಕೆ ಹೊರತಾಗಿಲ್ಲವೆಂದು ತಿಳಿಯುತ್ತದೆ! ಆದರೆ ಇದರ ವೈಶಿಷ್ಟ್ಯವೆಂದರೆ ಕೇವಲ ಸ್ವದೇಶ ಪ್ರೇಮದ ಅಂಚಿನಲ್ಲಿ ಮಾತ್ರ ಇವರು ಸರ್ವಾಧಿಕಾರ ನಡೆಸುತ್ತಾರೆ, ಸಾಮ್ರಾಜ್ಯ ವಿಸ್ತಾರದ ಆಕಾಂಕ್ಷೆಯು ಇವರಿಗಿಲ್ಲ

ಮೂರು ಹಾದಿಗಳಿಂದ

ನಾಜೀ ಉಪದ್ರವವು ರುಮೇನಿಯಕ್ಕೆ ಈಗ ಬಲವಂತವಾಗಿದೆ! ಹಿಟ್ಲರನ ಸರ್ವಾಧಿಕಾರದ ಬಲಪ್ರಯೋಗವನ್ನು ತಡೆಯಲು ಕಿಂಗ್ ಕಾರಲರ ಸರ್ವಾಧಿಕಾರವು ಬದ್ಧ ಕಂಕಣವಾಗಿದೆ

ಜರ್ಮನಿಯು ತ್ರಿಮಾರ್ಗವಾಗಿ ರುಮೇನಿಯವನ್ನು ಹೊಗಲು ಯತ್ನವಾಡಿ ಫಲಕಾರಿಯಾಗಿದೆ. ಜಾತೀಯ, ಧ್ಯೇಯ ಪ್ರಚಾರದ, ಮತ್ತು ಆರ್ಥಿಕ ದೃಷ್ಟಿಯ ಈ ಮೂರು ಹಾದಿಗಳಲ್ಲಿ ನಾಜೀ ತತ್ವವು ರುಮೇನಿಯಕ್ಕೆ ದಾಳಿ ಇಟ್ಟಿದೆ. ರುಮೇನಿಯದಲ್ಲಿ ಜರ್ಮನ್ ಅಲ್ಪ ಸಂಖ್ಯಾಕರು ಅಲ್ಲಲ್ಲಿ ತುಂಬಿದ್ದಾರೆ. ಇತ್ತೀಚೆಗೆ ಜರ್ಮನಿಯಿಂದ ಬಂದ ವಂಶದ ಪರಂಪರೆಯವರಾದುದರಿಂದ ಅವರು ಇನ್ನೂ ಅಲ್ಲಿ ಜರ್ಮನ್ ಭಾಷೆಯನ್ನೇ ಆಡುತ್ತಾರೆ; ಮಾತ್ರವಲ್ಲದೆ, ಅವರು ಜರ್ಮನ್ ರಿಶಿನ ಪ್ರಗತಿಯನ್ನು ಬಹಳ ಉದ್ವೇಗ ಸಂಭ್ರಮಗಳಿಂದ ನೋಡುತ್ತಿದ್ದಾರೆ.

ಧ್ಯೇಯ ಭೇದಗಳು

ತಕ್ಕ ಪ್ರಚಾರ ಭೇದಭಾವನೆಗಳು ಕಳೆದ ಆರು ತಿಂಗಳಿಂದ ರುಮೇನಿಯದಲ್ಲಿ ಬಹಳ ತೀವ್ರವಾಗಿ ಹೆಚ್ಚಿವೆ. ನಾಜೀ ಪಕ್ಷಕ್ಕೆ ಸೇರಿದ ಅಯರ್ನ್ ಗಾರ್ಡ್ ಸಂಘದ ಮುಂದಾಳು ಕೋಡ್ರಿಯನುವಿನ ಕೊಲೆಯಾದಮೇಲೆ ಅಯರ್ನ್ ಗಾರ್ಡರ ಚಟುವಟಿಕೆಯೂ ಅದನ್ನು ತಡೆಯುವ ಕಾರ್ಯವೂ ಹೀಗೆ ಇವೆರಡು ಭರದಿಂದ ಸಾಗುತ್ತಿವೆ ಅಯರ್ನ್ ಗಾರ್ಡರು ಮಾಡುವ ಪ್ರತಿಯೊಂದು ಕಾರ್ಯವನ್ನೂ ರುಮೇನಿಯ ಸರಕಾರವು, ಸಮೀಪದ ಜೆಕೊಸ್ಲವೇಕಿಯವನ್ನು ಜರ್ಮನು ಆಕ್ರಮಣ ಮಾಡಿದ ಮೇಲೆ ಎಚ್ಚರತ್ತು ಸಂಪೂರ್ಣ ಅಡಗಿಸುತ್ತಿದೆ. ಅಯರ್ನ್ ಗಾರ್ಡರು ಸಾರಿದ ಪ್ರಚಾರವೆಂದರೆ ಯೆಹೂದ್ಯ ದ್ವೇಷವು. ರುಮೇನಿಯದ ಹೆಚ್ಚಿನ ಭಂಡವಾಳಗಳು ಯೆಹೂದ್ಯರ ಕೈವಶದಲ್ಲಿವೆ!

ಇದು ಮಾತ್ರವಲ್ಲದೆ ಆರ್ಥಿಕ ವ್ಯವಹಾರದಿಂದಲೂ ಜರ್ಮನ್ ಧಾಳಿಯು ರುಮೇನಿಯದ ಮೇಲೆ ಬಲವಂತವಾಗಿ ನಡೆಯುತ್ತಿದೆ. ರುಮೇನಿಯವು ತನ್ನ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು, ಕಚ್ಚಾಮಾಲುಗಳ ಬದಲು ಬೇರೆ ವಸ್ತುಗಳನ್ನು ವಿದೇಶಗಳಿಂದ ವಿನಿಮಯವಾಗಿ ಪಡೆಯಲು ಅಪೇಕ್ಷಿಸುತ್ತದೆ. ಆದರ ಎಲ್ಲಾ ಬಗೆಯ ಅಪೇಕ್ಷೆಗಳೂ ಜರ್ಮನಿಯೊಂದರ ವ್ಯವಹಾರದಿಂದಲೇ ಸಂಪೂರ್ಣವಾಗುವುದು. ಜರ್ಮನಿಗೆ ರುಮೇನಿಯದ ಎಣ್ಣೆಯು ಅಗತ್ಯವಾಗಿ ಬೇಕಾಗಿದೆ ಆದರೆ ಜರ್ಮನಿಯೊಡನೆ ಮಧುರಬಾಂಧವ್ಯವನ್ನು ಇಟ್ಟುಕೊಳ್ಳಲು ರುಮೇನಿಯವು ಬೆದರಿದೆ. ಈಗ ಜರ್ಮನಿ-ಬ್ರಿಟನುಗಳೊಳಗೆ ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡಿರುವುದಾದರೂ ಈ ಒಪ್ಪಂದಗಳಲ್ಲಿ ಬಹಳ ಭೇದವಿದೆ.

ಬ್ರಿಟನಿನೊಡನೆ ಆದ ಒಪ್ಪಂದದಿಂದ ರುಮೇನಿಯದ ವ್ಯಾಪಾರ ಸ್ವಾತಂತ್ರ್ಯದ ರಕ್ಷಣೆಯೂ ಮಾತ್ರವಲ್ಲದೆ, ಹಿಂದಿಗಿಂತ ಇಂದು ಈ ಉಭಯ ರಾಷ್ಟ್ರಗಳೊಳಗೆ ಅನ್ಯೋನ್ಯ ಪ್ರೀತಿಯು ವ್ಯವಹಾರವೂ ಬೆಳೆದಿದೆ.

ಮುಂದಕ್ಕೆ ಜರ್ಮನಿಯು ರುಮೇನಿಯವನ್ನು ಹೇಗೆ ಬಲಾತ್ಕರಿಸುವುದೋ? ಯಾವ ರೀತಿಯಿಂದ ಜರ್ಮನಿಯ ಈ ಒತ್ತಾಟವನ್ನು ತಡೆಯಲು ರುಮೇನಿಯವು ಸಶಕ್ತವಾಗುವುದೋ, ರುಮೇನಿಯದ ಎಣ್ಣೆ ಮೊದಲಾದವುಗಳು ಹೇಗೆ ಸೂರೆಯಾಗುವುವೋ ಹೇಳಬಲ್ಲವರಿಲ್ಲ. ಕಡೆಗೆ ದೇಶದ ಗೌರವ ಸ್ವಾತಂತ್ರ್ಯಗಳನ್ನು ಬದಿಗೊತ್ತಿ ರುಮೇನಿಯವು ಜರ್ಮನಿಗೆ ಶರಣಾಗಬೇಕಾದೀತೇ ಹೇಳಬರುವುದಿಲ್ಲ

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—
K. R. GURU, *Managing Director*.

The Calicut Tile Co.,
FEROKE

NOTICE

Messrs The Calicut Tile Company' Feroke, S Malabar, have been manufacturing tiles under the trade name "The Queen Brand" ("Rani Mudi' or 'Rani Mark in Tamil and 'Rani Chap in Gujarathi) with the trade mark similar to that printed above for the last forty years. The Trade Mark has been registered, and the tiles of the Company under that trade mark and name have been in the open market for the last forty years and have gained a reputation for distinctive quality It has come to the knowledge of the said Company that recently some of the other tile manufacturers have been infringing their trade name and have been putting tiles in the market under that trade mark and trade name This is clearly in violation of the legal rights of the said company and the said company will be compelled to take necessary legal action against all the persons who may persist in manufacturing and putting in the market tiles under the trade name the "Queen Brand" in English or in any other language, or with a trade mark similar to that printed here above This notice is given in order to intimate to all whom it may concern to desist from such a course.

K. Sadashiva Rao,
Advocate.

ಒಂದು ಸಣ್ಣ ಕತೆ:

ಮರವೆಯುಲ್ಲಿ!

[ಎಷ್ಟೋ ಘಟನೆಗಳು ಮಾನವನ ಗೋಚರಕ್ಕೆ ಬರದೇ ಸಾಗುವವು. ಆತನು ಅವುಗಳನ್ನು ಅರಿಯದಿರುವುದೇ ಒಳ್ಳಿತು! ಗೊತ್ತಾಗುವ ಘಟನೆಗಳಿಂದಲೇ ಆತನ ಹೃದಯವು ಅಶಾಂತಿಯಿಂದ ಕದಡುತ್ತಿರುವಾಗ, ಅಗೋಚರವಾದ ಸಾವಿರಾರು ಸಂಭವಗಳಿಂದ ಉಂಟಾಗಬಹುದಾಗಿದ್ದ ಆಶೆ, ನಿರಾಶೆ, ಸಂತೋಷ, ಸಂಕಷ್ಟ ಇವುಗಳು ಆತನಿಗೆ ಹುಚ್ಚು ಹಿಡಿಸಲು ಸಾಕಾಗುತ್ತಿದ್ದುವು! ಹೇಗಿದ್ದರೂ ಮಾನವನ ಸಾಹಸಕ್ಕೂ ಒಂದು ಮಿತಿಯುಂಟು; ಆದರೆ ಅದೃಷ್ಟದ ಆಟಕ್ಕೆ ಅಂತ್ಯವಿಲ್ಲ!]

ಬಾಳುವೆಯ ಹಾದಿಯಲ್ಲಿ ನಮ್ಮನ್ನು ಮುನ್ನಡೆಸಿಯೂ, ಹಿಂದೆ ತಳ್ಳಿಯೂ, ಹೀಗೆ ಅನುಕೂಲ ಪ್ರತಿಕೂಲಗಳೆರಡನ್ನೂ ಒದಗಿಸುವ ಹಲವು ಘಟನೆಗಳನ್ನು, ನಾವು ಇದಿರಿಸುತ್ತೇವೆ. ಸಮಯವು ಸಾಗಿದಂತೆ, ಅವುಗಳಲ್ಲಿ ಹಲವು ಮರೆತೇ ಹೋಗುವವು. ಸಂತೋಷ-ಸಂಕಷ್ಟ, ಸಂಪತ್ತು, ವಿಪತ್ತು ಇವುಗಳ ನೆರಳನ್ನು ನಮ್ಮ ಮೇಲೆ ಬೀರಿ ಹಲವು ವಿಷಯಗಳು ನಮಗೆ ಅಗೋಚರವಾಗಿಯೇ ಸಾಗುತ್ತಿವೆ. ಇವುಗಳನ್ನೆಲ್ಲಾ ಮಾನವನು ತಿಳಿಯದಿರುವುದೇ ಒಳ್ಳಿತು! ಇಲ್ಲವಾದರೆ, ಆತನ ಜೀವನದಲ್ಲಿ ಆಶೆ, ನಿರಾಶೆ, ಭಯ, ಔತ್ಸುಕ್ಯ ಹೀಗೆ ವಿವಿಧ ಭಾವನೆಗಳು ನಿಮಿಷ ನಿಮಿಷಗಳಲ್ಲಿಯೂ ಮುತ್ತಿಗೆ ಹಾಕಿ ಗೊಂದಲವನ್ನು ಹುಟ್ಟಿಸಿ ಮರುಳುಮಾಡುತ್ತಿದ್ದುವು. ಗೋಚರಕ್ಕೆ ಬಂದ ವಿಷಯಗಳಿಂದಲೇ ಹೃದಯವು ಅಶಾಂತಿಯಿಂದ ಕದಡುತ್ತಿರುವಾಗ, ಮಾನವನಿಗೆ ತಿಳಿಯದೇ ಸಾಗುತ್ತಿರುವ ಸಾವಿರಾರು ಸಂಭವಗಳು ಖಂಡಿತವಾಗಿ ನಮ್ಮನ್ನು ಹುಚ್ಚು ಹಿಡಿಸಲು ಸಾಕಾಗುತ್ತಿದ್ದುವು.

ದಾವಿದನು ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ, ಹುಟ್ಟೂರನ್ನು ಬಿಟ್ಟು, ಮುಂದಕ್ಕೆ ಪೇಟೆಗೆ ಹೋಗಿ ತನ್ನ ಮುಂದಿನ ಜೀವನವನ್ನು ಯಾವುದಾದರೊಂದು ಉದ್ಯೋಗದಲ್ಲಿ ಸಾಗಿಸಬೇಕೆಂದು ಹೊರಟಿದ್ದನು. ಕೆಲವರ್ಷಗಳ ಹಿಂದೆ ಆತನ ಚಿಕ್ಕಪ್ಪನೊಬ್ಬನೂ ಹಾಗೆ ಪೇಟೆಗೆ ಹೋಗಿ, ಮೊದಲು ತನ್ನ ವಶವಿದ್ದ ಅಲ್ಪಸ್ವಲ್ಪ ಹಣದಿಂದಲೂ, ಅಲ್ಲಿನ ಪ್ರಸಿದ್ಧ ವ್ಯಾಪಾರಸ್ಥರೊಬ್ಬರ ಉದಾರ ಆಶ್ರಯದಿಂದಲೂ, ಒಂದು ಸಣ್ಣ ತರದ ಅಂಗಡಿಯಿಟ್ಟು ವ್ಯಾಪಾರ ನಡೆಸಿ ಈಗ ತಕ್ಕಮಟ್ಟಿಗೆ ಸುಧಾರಿಸಿ ಉದ್ಯೋಗ ಮಾಡುತ್ತಿದ್ದನು. ಯಾವುದಕ್ಕೂ ತನ್ನ ಅದೃಷ್ಟವನ್ನು ಪರೀಕ್ಷಿಸಲು ಪೇಟೆಗೇ ಹೋಗಿ ನೋಡಬೇಕೆಂದು ಆತನು ಹೊರಟು, ಹದಿನೈದು ಮೈಲು ಸಾಗಿ ಬಂದಿದ್ದನು. ಇನ್ನೂ ಅರ್ಧ ದಿನದ ಹಾದಿಯುಳಿದಿತ್ತು. ದಣಿವನ್ನು ಆರಿಸಿಕೊಂಡು ಬಿಸಿಲು ಕಡಿಮೆಯಾಗುವಷ್ಟರಲ್ಲಿ ಯಾವುದಾದರೂ ಬಂಡಿ ಬಂದರೆ ಮುಂದಿನ ಪ್ರಯಾಣವನ್ನು ಅದರಲ್ಲಿ ಸಾಗಿಸಬೇಕೆಂದೂ ನಿರ್ಧಾರ ಮಾಡಿ ಮಾರ್ಗದ ಬಳಿಯ ತಂಪಾದ ಮರದ ನೆರಳಲ್ಲಿ ವಿಶ್ರಮಿಸಿಕೊಂಡನು. ಕಣ್ಣಿಗೆ ಜೊಂಪು ಹತ್ತಲು ಅಲ್ಲಿಯೇ ಮರದ ನೆರಳಲ್ಲಿ ಮಲಗಿ ನಿದ್ರಿಸಿದನು.

ಜನರು ಮಾರ್ಗದಲ್ಲಿ ಹೋಗುತ್ತಲೇ ಇದ್ದರು. ಕೆಲವರು ಕಾಲ್ನಡಿಗೆಯಿಂದ, ಕೆಲವರು ಬಂಡಿಗಳ ಮೇಲೆ, ಕೆಲವರು ಇನ್ನಿತರ ವಾಹನಗಳಲ್ಲಿ ಹೀಗೆ ಮಾರ್ಗದಲ್ಲಿ ಜನಸಂಚಾರವು ತಪ್ಪಿರಲಿಲ್ಲ. ಹಲವರು ಎಡ ಬಲ ನೋಡದೆ ನೇರಾ ಸಾಗಿದ್ದರು. ಕೆಲವರು ಮಲಗಿ ನಿದ್ರಿಸುತ್ತಿದ್ದ ತರುಣನ ಕಡೆಗೊಮ್ಮೆ ಕಣ್ಣೆತ್ತಿ ನೋಡಿ ಮುಂದೆ ಸಾಗುತ್ತಿದ್ದರು. ನಿದ್ರೆಮಾಡುವವನ ಕುರಿತು ವಿಚಾರಮಾಡುವುದಕ್ಕಿಂತ ಅವರ ಚಿಂತೆಯೇ ಅವರಿಗೆ ಸಾಕಾಗಿತ್ತು! ಇನ್ನು ಕೆಲವರು, ಹೀಗೆ ಯೋಚನೆಯಿಲ್ಲದೆ ಮಲಗಿ ನಿದ್ರಿಸುವ ದಾರಿಗನ ವಿಷಯ ಮತ್ಸರಪಡುತ್ತಾ, ಅವನನ್ನು ನಿಂದಿಸಿ ಮುನ್ನಡೆದಿದ್ದರು. ಒಬ್ಬ ಮಧ್ಯ ಪ್ರಾಯದ ವಿಧವೆಯು, ಶಾಂತನಾಗಿ ಮಲಗಿ ನಿದ್ರಿಸುತ್ತಿದ್ದ ಸುಂದರ ತರುಣನ ಚೆಲುವಾದ ಮುಖವನ್ನೊಮ್ಮೆ ಕಣ್ಣರಳಿಸಿ ನೋಡಿದಳು. ಒಬ್ಬ ಧಾರ್ಮಿಕನೂ ತತ್ವಜ್ಞನೂ ಆದ ಉಪಾಧ್ಯಾಯನು ಆತನನ್ನು ನೋಡಿ, ಕುಡಿದು ಮಲಗಿರಬೇಕೆಂದು ನಿರ್ಧರಿಸಿ ಅಮಲಿನ ಹಾನಿಯ ಕುರಿತು ತನ್ನ ವಿದ್ಯಾರ್ಥಿಗಳಿಗೆ ಒಂದು ನಡೆದ ಸಂಗತಿಯನ್ನು ಕತೆ ಕಟ್ಟಿ ವಿವರಿಸಲು ಸಿದ್ಧತೆ ಮಾಡಿಕೊಂಡನು. ಆದರೆ ನಿರ್ಲಕ್ಷ್ಯತೆ, ಬೇಸರ, ಒಲವು, ಮತ್ಸರ, ನಿಂದೆ, ಊಹನೆ, ಇವುಗಳು ಎಲ್ಲವೂ ಶಾಂತವಾಗಿ ಮಲಗಿ ನಿದ್ರಿಸುತ್ತಿದ್ದ ದಾವಿದನಿಗೆ ಒಂದೇ ಆಗಿದ್ದುವು!

ನಡುಪ್ರಾಯದ ಗಂಡಹೆಂಡರಿಬ್ಬರು ಆ ದಾರಿಯಾಗಿ ಬಂದರು. ಬಂಡಿಯ ಚಕ್ರವೊಂದು ಸ್ವಲ್ಪ ಕೀಲು ತಪ್ಪಿಹೋಗಿರಲು, ಬಂಡಿಯಾಳು ಅದನ್ನು ಸರಿಪಡಿಸುವ ವರೆಗೆ ಮರದ ನೆರಳಲ್ಲಿ ಹೋಗಿ ಕುಳ್ಳಿರುವ ಎಂದು, ದಾವಿದನು ಮಲಗಿದ್ದಲ್ಲಿಗೇ ಅವರೂ ಬಂದರು. ಸಹಜವಾಗಿ ಒಬ್ಬ ಬಡಪಾಯಿಯು, ದಣಿದು ಮಲಗಿರಬಹುದೆಂದು ತಿಳಿದು, ಆತನಿಗೆ ನಿದ್ರಾಭಂಗ ಮಾಡಬಾರದೆಂದು ಗಟ್ಟಿಯಾಗಿಯೂ ಮಾತನಾಡದೆ, ಕಾಲಸಪ್ಪಳವನ್ನೂ ಮಾಡದೆ ಆತನನ್ನು ಸಮೀಪಿಸಿದರು.

'ಚಿಂತೆ ಬೇಸರಗಳಿಲ್ಲದೆ ನಿರ್ಮಲ ಹೃದಯದ ಆಳದಿಂದ ಹೀಗೆ ಎಷ್ಟು ಸುಖವಾಗಿ ಆತನು ಉಸಿರೆಳೆಯುತ್ತಾನೆ. ಇಂತಹ ಸುಖನಿದ್ರೆಯೊದಗುವ ಪಕ್ಷದಲ್ಲಿ ತನ್ನ ಸೊತ್ತಿನ ಅರ್ಧ ಪಾಲನ್ನಾದರೂ ನಾನು ವ್ಯಯಮಾಡಬಲ್ಲೆನು' ಆತನು ತನ್ನಷ್ಟಕ್ಕೇ ಹೇಳಿಕೊಂಡನು. ಆಕೆಯೂ ದಾವಿದನ ಪ್ರಸನ್ನ ಮುಖವನ್ನೂ, ನಿಶ್ವಾಸೋಚ್ಛ್ವಾಸದಲ್ಲಿ ಆತನು ಪಡೆಯುವ ಆನಂದವನ್ನೂ ನೋಡುತ್ತಾ ತಮಗೆ ಅಂತಹ ಸುನಿದ್ರೆಯು ಒಮ್ಮೆಯೂ ಬಂದಿರಲಾರದೆಂದೇ ಭಾವಿಸಿಕೊಂಡಳು. ದಾವಿದನನ್ನು ದಿಟ್ಟಿಸಿ ನೋಡುತ್ತಿದ್ದಂತೆ ಇಬ್ಬರಿಗೂ ಮಮತೆ ಹೆಚ್ಚುತ್ತಿತ್ತು. ಅಷ್ಟರಲ್ಲಿ ಸೂರ್ಯಕಿರಣವು ಮರದ ನೆರಳನೆಡೆಯಿಂದ ಆತನ ಕಣ್ಣಿಗೆ ನೇರಾಗಿ ಬೀಳುವಂತಾಯಿತು. ಮರದ ಶಾಖೆಯನ್ನು ಬಾಗಿಸಿ, ಆಕೆ ಆತನ ಮುಖವನ್ನು ಕಿರಣದಿಂದ ಮರೆಮಾಡಿದಳು. ಹೀಗೆ ಮಾಡುತ್ತಿರುವಾಗ, ಆ ಅಜ್ಞಾತ ಯುವಕನ ವಿಷಯದಲ್ಲಿ ಆಕೆಗೆ ಮಾತೃಪ್ರೇಮವೇ ಉಕ್ಕಿ ಬಂದಿತು.

'ಅದೃಷ್ಟವು ನಮ್ಮನ್ನು ಇಲ್ಲಿಗೆ ಕರೆತಂದಿರಬೇಕು' ಹೀಗೆಂದು ಆಕೆ ತನ್ನ ಗಂಡನೊಡನೆ ಮೆಲ್ಲನೆಯಿಂದ ಹೇಳತೊಡಗಿದಳು. 'ಮಗು ಹೆನ್ರಿಯು ತೀರಿಹೋದ ಮೇಲೆ, ದತ್ತಕ್ಕೆ ತೆಗೆದುಕೊಳ್ಳಲು ನಮಗೆ ಹಲವು ಕಡೆ ಹುಡುಕಿ ದಣಿದು ಸಾಕಾಯಿತು. ಇವನ ಮುಖವೂ ನಮ್ಮ ಮಗು ಹೆನ್ರಿಯ ಮುಖವನ್ನೇ ಹೋಲುವುದು. ಅಲ್ಲವೇ? ಇವನನ್ನು ನಾವು ಎಬ್ಬಿಸೋಣ?'

'ಈತನ ಗುಣನಡತೆಗಳ ವಿಷಯ ನಮಗೆ ಏನೂ ಗೊತ್ತಿಲ್ಲ.' ಆತನ ಮಾತು ಮುಗಿಯಬೇಕಾದರೆ ಆವಳು ಹೀಗೆಂದಳು 'ಇಂತಹ ಪ್ರಸನ್ನ ಮುಖಭಾವ, ಈ ಶಾಂತ ನಿರ್ಮಲ ನಿದ್ರೆ ಇವುಗಳು ಪಾಪಹೃದಯದವರಿಗೆ ಇರಲು ಸಾಧ್ಯವುಂಟೇ?'

ಹೀಗೆ ಆ ಐಶ್ವರ್ಯವಂತರಾದ ಗಂಡಹೆಂಡರು ಮಾತನಾಡುತ್ತಿದ್ದಾಗ, ದಾವಿದನ ಹೃದಯವು ತನ್ನ ಭಾಗ್ಯಕ್ಕಾಗಿ ಹಿಗ್ಗಿ ಹಾರಲಿಲ್ಲ! ನಿಜವಾಗಿ ಭಾಗ್ಯವು ಆವನ ಮೇಲೆ ದಯಾದೃಷ್ಟಿಯನ್ನೇ ಬೀರಿತ್ತು! ಆ ಐಶ್ವರ್ಯವಂತರಾದ ಗಂಡಹೆಂಡರ ಏಕಮಾತ್ರ ಪುತ್ರನು ತೀರಿಹೋಗಿದ್ದುದರಿಂದ, ದೂರದ ಬಂಧುಗಳಿದ್ದರೂ, ಅವರ ನಡತೆಯ ವಿಷಯದಲ್ಲಿ ಅವರು ಬೇಸರಗೊಂಡಿದ್ದು, ಯಾರನ್ನಾದರೂ ಒಬ್ಬನನ್ನು ದತ್ತಕ್ಕೆ ತೆಗೆದುಕೊಳ್ಳುವ ನಿರ್ಧಾರ ಮಾಡಿದ್ದರು. ಇಂತಹ ಸಂದರ್ಭದಲ್ಲಿ, ಜನರು ಇಂದ್ರಜಾಲಕ್ಕಿಂತಲೂ ಆಶ್ಚರ್ಯಕರವಾದ ಕಾರ್ಯಗಳನ್ನು ನಡೆಸುವುದುಂಟು! ಬಡತನದಲ್ಲಿಯೇ ಹುಟ್ಟಿ ಬೆಳೆದಿದ್ದ ದಾವಿದನು, ಹೀಗೆ ನಿದ್ರೆಯಿಂದೆದ್ದಾಗ, ಅಕಸ್ಮಾತ್ ಈ ಸೌಭಾಗ್ಯವನ್ನು ಪಡೆಯಬಹುದಾಗಿದ್ದಿತು!

'ನಾನು ಅವನನ್ನು ಎಚ್ಚರಿಸಲೇ?' ಆಕೆ ಗಂಡನೊಡನೆ ತಿರಿಗಿ ಒಮ್ಮೆ ಪ್ರಶ್ನಿಸಿದಳು.

'ಸ್ವಾಮೀ, ಗಾಡಿಯು ಸಿದ್ಧವಾಯಿತು' ಹಿಂದಿನಿಂದ ಬಂಡಿಯಾಳು ಕೂಗಿ ಹೇಳಿದನು.

ಅವರಿಬ್ಬರೂ ಕೂಡಲೇ ಆ ಕಡೆಗೆ ಧಾವಿಸಿದರು. ಆತನು ಗಾಡಿಯಲ್ಲಿ ಕೂತುಕೊಂಡು ತನ್ನ ಬಂಡಸಾಲೆ, ಸಾಮಾನುಗಳು ಮಾರಾಟ, ಲಾಭ ಇವುಗಳನ್ನು ಲೆಕ್ಕಹಾಕುತ್ತಾ ಕುಳಿತನು. ದಾವಿದನು ಗಾಢವಾಗಿ ನಿದ್ರಿಸುತ್ತಲೇ ಇದ್ದನು. ಆಕೆ ನಿಸರ್ಗ ಸೌಂದರ್ಯವನ್ನು ನೋಡುವುದರಲ್ಲಿ ತನ್ಮಯಳಾಗಿದ್ದಳು. ಗಾಡಿಯು ಮುಂದೆ ಸಾಗುತ್ತಾ ಹೋಯಿತು.

ಹತ್ತು ನಿಮಿಷವಾಗಿರಲಿಲ್ಲ. ಒಬ್ಬ ಸುಂದರ ತರುಣಿಯು ಆ ದಾರಿಯಾಗಿ ಬಂದಳು. ಅವಳ ಒಯ್ಯಾರದ ನಡಿಗೆಯೇ, ಆಕೆಯ ಹೃದಯದ ಪ್ರೇಮನಾಟ್ಯವನ್ನು ತೋರಿಸುವಂತಿತ್ತು. ಸೀರೆಯ ಸೆರಗು ಬಳಿಯ ಪೊದರಿಗೆ ಸಿಕ್ಕಿಕೊಂಡಿತು. ಅದನ್ನು ಬಿಡಿಸಲು ತಿರುಗಿ ನೋಡಿದಾಗ, ಮಲಗಿ ಶಾಂತನಾಗಿ ನಿದ್ರಿಸುತ್ತಿದ್ದ ಸುಂದರ ತರುಣನನ್ನು ಕಂಡಳು. ಆಗ ಆಕೆಯ ಮುಖವು ಕೆಂಪು ಗುಲಾಬಿಗಿಂತಲೂ ರಕ್ತವರ್ಣವಾಗಿ ರಂಜಿಸಿತು. ಮರದಿಂದ ಹಾರಿಬಂದ, ಒಂದು ತುಂಬಿಯು ಅವನ ಮುಖದ ಬಳಿ ನಿಷ್ಠುರವಾಗಿ ಶಬ್ದಮಾಡುತ್ತಿತ್ತು. ಅವನ ಚೆಲುವಾದ ಕಣ್ಣಿಗೆ ಎಲ್ಲಿಯಾದರೂ ತುಂಬಿಯು ಕಚ್ಚಿಬಿಡಬಹುದೇ ಎಂದು ಆಕೆಯು ಉದ್ವಿಗ್ನಳಾದಳು! ತನ್ನ ಸೀರೆಯ ಸೆರಗಿನಿಂದ ಬೀಸಿ ಮೆಲ್ಲನೆ ತುಂಬಿಯನ್ನು ಅಲ್ಲಿಂದ ಓಡಿಸಿದಳು. ತಾನು ತರುಣನ ದಣಿವಾರಿಸಲು ಗಾಳಿಹಾಕುತ್ತಿದ್ದೇನೆಯೋ ಎಂದು ಗ್ರಹಿಸಿ ಒಮ್ಮೆ ಆನಂದದಿಂದ ಪರವಶಳಾದಳು.

'ಈತ ಚೆಲುವಿನ ಮೂರ್ತಿಯಂತಿದ್ದಾನೆ' ಹೀಗೆ ಮೆಲ್ಲನೆಯಿಂದ ಹೇಳುವಾಗ ಆಕೆಯ ಮುಖವು ಮತ್ತಷ್ಟು ಕೆಂಪಡರಿತ್ತು! ಒಂದೇ ಒಂದು ಮಂದಸ್ಮಿತದಿಂದಲಾದರೂ ಆತನು ಆಕೆಯ ಪ್ರೇಮಸಂಭಾವನೆಗೆ ಸ್ವಾಗತವೀಯಲಿಲ್ಲ. ಅಂತಹ ಅನುಪಮ, ಅನುರೂಪ ಸುಂದರಿಯು ಆತನಿಗೆ ಬೇರೆ ದೊರಕುವುದೂ ಸಾಧ್ಯವಿರಲಿಲ್ಲ. ಆತನನ್ನಲ್ಲದೆ, ಆಕೆ ಬೇರೆ ಕೈ ಹಿಡಿಯುತ್ತಲೂ ಇರಲಿಲ್ಲ. ಆತನ ಚೆಲುವಿನ ಮೂರ್ತಿ ಅವಳ ಹೃದಯದಲ್ಲಿ ಪ್ರತಿಬಿಂಬಿಸಿ ಹೋಗಿತ್ತು. ಆದರೆ ಅವನಿಗೆ ಇದರ ಯಾವುದರ ಅರಿವೂ ಇರಲಿಲ್ಲ.

'ಎಷ್ಟು ಪ್ರಶಾಂತನಾಗಿ ನಿದ್ರಿಸುತ್ತಿದ್ದಾನೆ' ಹೀಗೆಂದು ಹೇಳಿ, ಒಂದು ನಿಟ್ಟುಸಿರೆಳೆದು ಆಕೆ ಮೆಲ್ಲನೇ ಅಲ್ಲಿಂದ ಹೊರಟು ತನ್ನ ದಾರಿ ಹಿಡಿದು ಸಾಗಿದಳು!

ಆಕೆಯು ಒಬ್ಬ ಬಹಳ ದೊಡ್ಡ ಜಮೀನ್ದಾರನ ಏಕಮಾತ್ರ ಪುತ್ರಿಯಾಗಿದ್ದಳು. ಪ್ರಾಯ ತುಂಬಿದವಳಿದ್ದುದರಿಂದ ತಂದೆಯು ವರಾನ್ವೇಷಣಕ್ಕೆ ತೊಡಗಿದ್ದನು. ಆಕೆ ಸ್ವತಃ ದಾವಿದನನ್ನು ಮದುವೆಯಾಗಬೇಕೆಂದು ಬಯಸಿದ್ದರೆ ತಂದೆಯು ಸಂತೋಷದಿಂದ ಅದಕ್ಕೆ ಒಪ್ಪುತ್ತಿದ್ದನು. ಜಮೀನಿನ ಮೇಲ್ವಿಚಾರಣೆ ಮಾಡಿಕೊಂಡಿದ್ದು ಜಮೀನ್ದಾರನ ಅನಂತರ ದಾವಿದನೇ ಇಡೀ ಆವನ ಉತ್ತರಾಧಿಕಾರಿಯಾಗಬಹುದಿತ್ತು! ಹೀಗೆ ದಾವಿದನನ್ನು ಅರಸಿ ಬಂದ ಸೌಭಾಗ್ಯವು ಇನ್ನೊಮ್ಮೆ, ಆತನಿಗೆ ತಿಳಿಯದೆಯೇ ಅಳಿಸಿ ಮಾಯವಾಗಿ ಹೋಯಿತು!

ತರುಣಿಯು ಕಣ್ಮರೆಯಾಗುವಷ್ಟರಲ್ಲಿ, ಒಂದೇ ರೀತಿಯ ಮಾಸಿದ ಹರಕು ಉಡಿಗೆ ತೊಟ್ಟಿದ್ದು, ಕೈಗಳಲ್ಲಿ ಬಲವಾದ ದೊಣ್ಣೆಗಳನ್ನು ಹಿಡಕೊಂಡಿದ್ದು, ಕರಿಯ ಮುಖದ ಇಬ್ಬರು, ಜನರ ದೃಷ್ಟಿಯಿಂದ ತಪ್ಪಿಸಲು ಬಯಸುವವರಂತೆ ಅದೇ ಮರದ ಮರೆಗೆ ಬಂದರು. ಇವರಿಬ್ಬರೂ, ಸೈತಾನನು ಪ್ರೇರೇಪಿಸಿದ ಯಾವುದೇ ಕೃತ್ಯವನ್ನಾದರೂ ಮಾಡಿ ಯಾವ ರೀತಿಯಿಂದಲಾದರೂ ಜೀವನ ಸಾಗಿಸುತ್ತಿದ್ದ ಧೂರ್ತರಾಗಿದ್ದರು. ಯಾರನ್ನೋ ದಾರಿಹೋಕರನ್ನು ಹಿಡಿದು ಸುಲಿಗೆ ಮಾಡಿ, ಅದನ್ನು ಹಂಚಿಕೊಳ್ಳಲು ಅವರು ಅಲ್ಲಿಗೆ ಬಂದಿದ್ದರು. ದಾವಿದನು ಮಲಗಿ ನಿದ್ರಿಸುವುದನ್ನು ಕಂಡು ಒಬ್ಬನು ಇನ್ನೊಬ್ಬನ ಕಿವಿಯಲ್ಲಿ ಹೀಗೆಂದು ಹೇಳಿದನು:

'ಕದ್ರಿ, ಆತನ ತಲೆಯ ಕೆಳಗಿರುವ ಗಂಟನ್ನು ನೋಡಿದಿಯಾ?' ತನ್ನ ಗೆಳೆಯನ ಸೂಕ್ಷ್ಮಬುದ್ಧಿಗೆ ಮೆಚ್ಚಿ ಮತ್ತೊಬ್ಬನೂ ಹಿಗ್ಗಿಹೋದನು.

ಇಬ್ಬರೂ ಹಾಯಾಗಿ ಮಲಗಿ ನಿದ್ರಿಸುತ್ತಿದ್ದ ದಾವಿದನ ಬಳಿಗೆ ಬಂದರು. ಒಬ್ಬನು ಕಯ್ಯ ಕತ್ತಿಯನ್ನು ದಾವಿದನ ಕಡೆಗೆ ಎತ್ತಿ ಹಿಡಿದು ನಿಂತಿದ್ದನು. ಇನ್ನೊಬ್ಬನು ಆತನ ಗಂಟನ್ನು ಹುಡುಕಿ ನೋಡಲು ತೊಡಗಿದನು. ದಾವಿದನು ಥಕ್ಕನೇ ಎಚ್ಚರಗೊಂಡರೆ ಏನಾಗಬಹುದೋ, ಏನು ಮಾಡಬೇಕೋ ಎಂಬಿವೇ ವಿಚಾರಗಳಿಂದ ಅವರ ಮುಖಭಾವವು ಪಿಶಾಚಿಸದೃಶವಾಗಿ ಹೋಗಿತ್ತು!

'ಗಂಟನ್ನು ನಾನು ಮೊದಲು ಬಿಚ್ಚಿ ನೋಡುತ್ತೇನೆ' ಒಬ್ಬನು ಹೇಳಿದನು.

'ಆದಾಗದು, ನಾನೇ ಬಿಚ್ಚಿ ನೋಡುತ್ತೇನೆ' ಎರಡನೆಯವನು ಉತ್ತರವಿತ್ತನು.

ಅಷ್ಟರಲ್ಲಿ ಒಂದು ನಾಯಿಯು ನೆಲವನ್ನು ಮೂಸುತ್ತಾ ಆ ಕಡೆಗೆ ಬಂತು. ಇಬ್ಬರು ಕಳ್ಳರ ಚಕಿತ ಮುಖಭಾವವನ್ನೂ, ಮಲಗಿ ನಿದ್ರಿಸುತ್ತಿದ್ದ ದಾವಿದನನ್ನೂ ಹೀಗೆ ಆಚೀಚೆ ಹೊರಳಿ ನೋಡಿತು.

'ನಾಯಿಯ ಹಿಂದೆ ಅದರ ಯಜಮಾನನೂ ಇರಬಹುದು, ತಡಿ, ಗಂಟು ಅಲ್ಲಿಯೇ ಇರಲಿ' ಹೀಗೆಂದು ಕತ್ತಿಯನ್ನು ಸೊಂಟದಲ್ಲಿ ಅಡಗಿಸಿ ಅವರಿಬ್ಬರೂ ಅಲ್ಲಿಂದ ಸರಿದುಹೋದರು. ದಾವಿದನು ಮತ್ತೂ ಅಲ್ಲಿಯೇ ಮಲಗಿದ್ದನು. ತನ್ನ ತಲೆ ಮೇಲೆ ಸುತ್ತುತ್ತಿದ್ದ ಮರಣವೂ ಆವನಿಗೆ ತಿಳಿದಿರಲಿಲ್ಲ, ಕಡೆಗೆ ಅಪಾಯವು ತಪ್ಪಿದ್ದೂ ಆತನ ಗೋಚರಕ್ಕೆ ಬಂದಿರಲಿಲ್ಲ!

ಒಂದು ತಾಸು ಕಳೆದಾಗ ಆತನಿಗೆ ಮೆಲ್ಲನೆ ಎಚ್ಚರವಾಯಿತು. ತನ್ನ ಸುತ್ತು ಸುಳಿದ ಯಾವ ಸಂಗತಿಗಳೂ ಆತನಿಗೆ ತಿಳಿಯಲಿಲ್ಲ. ದೂರದಲ್ಲಿ ಬಂಡಿ ಬರುವ ಶಬ್ದವೊಂದು ಕೇಳಿಸಿತು. ಮಾರ್ಗದ ಬಳಿಗೆ ಓಡಿಹೋಗಿ ಕೈ ತೋರಿಸಿದನು. ಬಂಡಿ ನಿಂತಿತು.

'ಒಳಗೆ ಜಾಗವುಂಟೇ?' ಆತ ವಿನಯದಿಂದ ಪ್ರಶ್ನಿಸಿದನು.

'ಕುಳಿತುಕೊಳ್ಳಿ' ಉತ್ತರ ಬಂತು.

ಬಂಡಿಯಲ್ಲಿ ಕುಳಿತ ದಾವಿದನು, ತನ್ನ ಪೇಟೆಯ ಭವಿಷ್ಯ ಜೀವನದ ವಿಷಯವಾಗಿ ಯೋಚಿಸತೊಡಗಿದನು. ತಾನು ಪಡಬೇಕಾದ ಕಷ್ಟವೂ ಆತನಿಗೆ ನೆನಪಾಯಿತು. ಸಾಹಸ ಮಾಡಬೇಕೆಂದೂ ನಿರ್ಧರಿಸಿಕೊಂಡನು. ಭವಿಷ್ಯದ ಹಲವಾರು ವಿಚಾರಗಳನ್ನು ಹೀಗೆ ಕಲ್ಪಿಸಿಕೊಂಡು ಆತನು ಮುಂದೆ ಮುಂದೆ ಸಾಗಿದನು.

ಮಾನವನ ಸಾಹಸಗಳಿಗೂ ಒಂದು ಮಿತಿಯುಂಟು! ಆದರೆ ಅದೃಷ್ಟದ ಆಟಕ್ಕೆ ಅಂತ್ಯವಿಲ್ಲ! [ಆಧಾರದಿಂದ]

—ದುರ್ಗಾದಾಸ.

ನೆಟಸನ್
ಗೊನೋರಿಯವನ್ನು
ಗುಣಪಡಿಸುವುದು

ಯುದ್ಧಕ್ಕೆ ಇಳಿಯುವಿದ್ದರೂ

ಹಿಟ್ಲರನಿಗೆ ಉಳಿಗಾಲವಿರಲಿಲ್ಲ!

ಜರ್ಮನರು ಅತೃಪ್ತಿಗೊಂಡಿದ್ದಾರೆ!

ಜರ್ಮನಿಯಲ್ಲಿ ಗೊಂದಲವುಂಟಾಗಿದೆ!

ಆರ್ಥಿಕ ಪರಿಸ್ಥಿತಿಯು ಅವನತಿಹೊಂದಿದೆ!

ಸಾಮ್ರಾಜ್ಯ ವಿಸ್ತಾರವು ದುರ್ಬುದ್ಧಿಯಾಯಿತು!

[ಹಿಟ್ಲರನು ಯಾತಕ್ಕಾಗಿ ಯುದ್ಧಕ್ಕಿಳಿದನು? ಇದು ಆತನ ಪ್ರಮತ್ತ ಕಾರ್ಯವೇ? ಅಥವಾ ನಿಜವಾದ ಕಾರಣವೇನಾದರೂ ಇದೆಯೆ? ತನಗೆ ಹೇಗಿದ್ದರೂ ಇನ್ನು ಉಳಿಗಾಲವಿಲ್ಲವೆಂದು ತಿಳಿದು ಹಿಟ್ಲರನು ತನ್ನನ್ನೂ ಜರ್ಮನ ರಾಷ್ಟ್ರವನ್ನೂ ಇಂದು ವಿನಾಶದ ದಾರಿಗೆ ಹಚ್ಚಿದ್ದಾನೆ!]

ಕಳೆದ ಮಹಾಯುದ್ಧವು ನಾಲ್ಕು ವರ್ಷಗಳ ವರೆಗೆ ಸಾಗಿತು. ಜರ್ಮನಿಯು ಅದರಿಂದ ಭಗ್ನರಾಷ್ಟ್ರವಾಯಿತು. ಅದನ್ನು ತಿರಿಗಿ ಒಂದು ರೂಪಕ್ಕೆ ತರಲು ಹಿಟ್ಲರನಿಗೆ ಆರು ವರ್ಷಗಳ ಅವಧಿಯು ಬೇಕಾಯಿತು. ಆದರೆ ಜರ್ಮನಿಯನ್ನು ತಿರಿಗಿ ಸ್ವರೂಪಕ್ಕೆ ತರುವಾಗ ಆತನು ಇತರ ಜನಾಂಗಗಳಿಗೆ ಹಿಂಸೆ ಕೊಟ್ಟು, ಅನ್ಯಾಯ ಮಾಡಿಯೇ ಮುಂದುವರಿದನು. ಈಗ ತಿರಿಗಿ, ಒಮ್ಮೆ ಜರ್ಮನಿಯು ಹಿಂದಿನ ಧ್ವಂಸವಾಗುವ ಅವಸ್ಥೆಗೆ ಬಂದಿದೆ. ಇದನ್ನು ಹಿಟ್ಲರನಿಗೇ ತಪ್ಪಿಸಲು ಸಾಧ್ಯವಿಲ್ಲದೆ ಆತನು ಹೀಗೆ ರಣರಂಗಕ್ಕೆ ಇಳಿಯ ಬೇಕಾಯಿತು. ಡಾನ್ಜಿಗನ್ನು ಪೋಲೆಂಡುಗಳನ್ನು ಪ್ರತಿ ಮಾಡುವುದು ಮಾತ್ರವಲ್ಲದೆ ಜರ್ಮನಿಯ ಅಂತರ್ಯದ ಕಲಹಗಳೂ, ಆರ್ಥಿಕ ದೌರ್ಭಾಗ್ಯಗಳೆಲ್ಲಾ ಇಂದು ಆತನನ್ನು ಯುದ್ಧಕ್ಕೆ ಇಳಿಯುವಂತೆ ಮಾಡಿದುವು. ಬ್ರಿಟನು ಫ್ರಾನ್ಸುಗಳಂತಹ ಸಮೃದ್ಧ ರಾಷ್ಟ್ರಗಳೊಡನೆ ಜರ್ಮನಿಯ ಬಲವನ್ನು ಹೋಲಿಸಿದರೆ ಜರ್ಮನಿಯು ಬಹಳ ದುರ್ಬಲವಾಗಿದೆಯೆಂದು ತಿಳಿಯುವುದು.

ಸಾಮ್ರಾಜ್ಯ ವಿಸ್ತಾರ

ಹಿಟ್ಲರ್ ಮುಂದಾಳುತನದಿಂದ, ಅಧಿಕಾರಕ್ಕೆ ಬಂದ ನೇಶನಲಿಸ್ಟ್ ಪಕ್ಷವು ಸಾಮ್ರಾಜ್ಯ ವಿಸ್ತಾರದ ಒಂದೇ ಉದ್ದೇಶದಿಂದ ಸ್ಥಾಪಿತವಾಗಿತ್ತು. ಇದಕ್ಕಾಗಿ ಬಲವನ್ನು ಸೈನ್ಯವನ್ನು ಹೆಚ್ಚಿಸಲು ಬಹು ಸಾಹಸಮಾಡಿದ ಪರಿಣಾಮವಾಗಿ ಜರ್ಮನಿಯ ಜನರಿಗೆ ಕೆಲಸ ಮಾಡಬೇಕಾದುದು ಅವರ ಕರ್ತವ್ಯವೆಂಬುದು ಹೋಗಿ "ಸರಕಾರಕ್ಕಾಗಿ ಕೆಲಸಮಾಡಲೇ ಬೇಕೆಂಬ" ಹಾಗಾಗಿ, ತುಂಬಾ ತುಂಬಾ— ತರುಣಿಯರು, ಮುದುಕರು ಮಕ್ಕಳೆಲ್ಲಾ, ನಿರಂತರವಾಗಿ ಸರಕಾರವು ಅಪೇಕ್ಷೆ ಪಟ್ಟಂತೆ ಯಂತ್ರದಂತೆ ಕೆಲಸ ಮಾಡಬೇಕಾಯಿತು. ಈ ತರದ ಐದು ವರ್ಷಗಳಲ್ಲಿ ನಾಜಿಗಳು ಜರ್ಮನಿಯ ಆರ್ಥಿಕತೆಯನ್ನು ಸಂಪೂರ್ಣ ಹಾಳು ಮಾಡಿದರು. ಜರ್ಮನಿಯ ಸಾರ್ವಜನಿಕ ಸಾಲ, ವಿಪರೀತ ತೆರಿಗೆಯು ಅತಿಕ್ರಮವಾಗಿ ಬೆಳೆಯಿತು.

ಜರ್ಮನಿಯು ಅಧಿಕಾರಕ್ಕೇರಿದುದು

ನಾಜೀ ಅಧಿಕಾರವು ಮೇಲಕ್ಕೆ ಬಂದ ಕೂಡಲೇ, ಹಿಟ್ಲರನು ಇಡೀ ದೇಶದ ಎಲ್ಲಾ ಸೊತ್ತು ಹಣ ಕಾರ್ಯ ರಸ್ತೆಗಳನ್ನು ಸೈನ್ಯ ಯುದ್ಧ ಸಂಗ್ರಹ, ರಾಜಕೀಯ ಪ್ರಚಾರಗಳಿಗೆ ಉಪಯೋಗಿಸಿದನು. ಅದನ್ನು ಮುಂದಾಗಿ ತಿಳಿದು ಹಲವರು ಆತನನ್ನು ಆಗಲೇ ಎಚ್ಚರಿಸಿದ್ದರು. ಆದರೆ ರಾಜಕೀಯ ಪ್ರಚಾರವು ಅಷ್ಟು ಬಲವತ್ತವಾಗಿ ಮುಂದುವರಿಯಿತು. ಅದಕ್ಕಾಗಿ ರಾಷ್ಟ್ರದ ಸಂಪತ್ತು ವ್ಯಯವಾಯಿತು. ಕಡೆಗೊಮ್ಮೆ ಇಡೀ ಜರ್ಮನಿಯೇ ಹೀಗೆ ಮಹಾ ಸಮಸ್ಯೆಯಲ್ಲಿ ಗೊಂದಲದಲ್ಲಿ ಇದ್ದಿರಲು ತಪ್ಪಿಸಲಾರದೆ ಯುದ್ಧವು ಸನ್ನಿಹಿತವಾಯಿತು.

ಹಿಟ್ಲರನು ತನ್ನ ತಪ್ಪನ್ನು ತಿಳಕೊಂಡದ್ದು ಬಹಳ ಕಾಲ ಕಳೆದ ಮೇಲೆ. ಆದರೆ ಆಗ ಉಪಾಯಹೀನನಾಗಿದ್ದನು. ಕಡೆಗೆ ಯುದ್ಧ ಭೂಮಿಗೆ ಧುಮುಕುವ ಹುಚ್ಚು ದಾರಿಯನ್ನು ಆತನು ಅನುಸರಿಸಿದನು. ಜರ್ಮನಿಯ ಜನರ ಮನಸ್ಸಿನಲ್ಲಿ ಬೇಸರ, ಅತೃಪ್ತಿಗಳು ಬೇಕಾದಷ್ಟು ತುಂಬಿ ಹೋಗಿದ್ದುವು. ನಾಜೀ ಅಧಿಕಾರವು ರಕ್ತ ಮತ್ತು ಹೊಡೆತಗಳ ಆಳಿಕೆಯಾಗಿತ್ತು. ವೈಯುಕ್ತಿಕ ಸ್ವಾತಂತ್ರ್ಯವು ಹಾಳು ಮಾಡಲ್ಪಟ್ಟು, ಪ್ರತಿಯೊಬ್ಬನೂ ಈ ದುಷ್ಪ್ರಭುತ್ವಕ್ಕಾಗಿ ಬೇಸರಗೊಂಡಿದ್ದನು.

ಜನತೆಯಲ್ಲಿ ತೀವ್ರ ಅತೃಪ್ತಿ!

ಜರ್ಮನಿಯಲ್ಲಿ ಅರ್ಧಪಾಲು ಜನಸಂಖ್ಯೆಯು ಕೆಥೋಲಿಕರು. ಚರ್ಚುಗಳನ್ನು ಹಾಳುಮಾಡಿ, ದೈವ ಹೀನನಾಗಿ ಆಳುವ ಹಿಟ್ಲರನ ಬಗೆ ಅವರು ತೀವ್ರ ಅತೃಪ್ತಿಗೊಂಡಿದ್ದಾರೆ. ಆಸ್ಟ್ರಿಯವನ್ನು ಹಿಟ್ಲರನು ಸ್ವಾಧೀನ ಗೊಳಿಸಿದ್ದಕ್ಕಾಗಿ, ಅಲ್ಲಿಯೂ ದಂಗೆಯೆದ್ದಿದೆ. ಪಾಸ್ಟರ್ ನಿಮೋಲರನ ಅನುಯಾಯಿಗಳು ಅಲ್ಲಿ ಹಲವು ಮಿಲಿಯ ಜನರು ಇದ್ದಾರೆ. ಆ ಮೇಲೆ ಜೆಕೊಸ್ಲವಿಯದ ಅದೃಷ್ಟವೂ ಹಿಟ್ಲರನಿಗೆ ವಿಪರೀತ ನಿಂತಿದೆ. ಅದು ಮಾತ್ರವಲ್ಲದೆ ಜರ್ಮನಿಯಿಂದ ಕಮ್ಯೂನಿಸಂ ಸಂಪೂರ್ಣ ಬಾಹಿರವಾಗಿಲ್ಲ. ರಶ್ಯಾ–ಜರ್ಮನ್ ಒಪ್ಪಂದದ ಮೇಲೆ ಅವರು ತಮ್ಮ ತಲೆಯನ್ನು ಎತ್ತಿದ್ದಾರೆ. ಯೆಹೂದ್ಯರು ತಮ್ಮ ಪ್ರಬಲ ಧನಸಹಾಯದಿಂದ, ಹಿಟ್ಲರನ ಅಧಃಪತನಕ್ಕಾಗಿ ಯತ್ನಮಾಡುತ್ತಿದ್ದಾರೆ. ಈ ಎಲ್ಲಾ ಶತ್ರುಗಳಿಂದ ಮುತ್ತಲ್ಪಟ್ಟ ಹಿಟ್ಲರನು ತನ್ನ ಅವಸ್ಥೆಯನ್ನು ತಿಳಿದು, ಈಗ ಅನ್ಯ ಉಪಾಯವಿಲ್ಲದೆ, ತನ್ನನ್ನೂ ಜರ್ಮನಿಯನ್ನೂ ವಿನಾಶದ ದಾರಿಗೆ ಹಚ್ಚಿದ್ದಾನೆ.

ಜರ್ಮನಿಯ ವಿಧ್ವಂಸಬುದ್ಧಿ

– ಕಳೆದ ಮಹಾಯುದ್ಧದಲ್ಲಿ, ಜರ್ಮನಿಯ ವಿಧ್ವಂಸಬುದ್ಧಿಯು ಅಖಿಲ ಜಗತ್ತಿಗೇ ಪ್ರದರ್ಶಿತವಾಗಿದೆ. ಹಲವು ಸುಂದರ ಭವನಗಳು, ಅಸದೃಶ ಶಿಲ್ಪ ಕಲಾವೈಭವದಿಂದ ಮೆರೆದ ಸೌಭಾಗ್ಯದ ಹಲವು ದೇವಾಲಯಗಳು, ಸಾರ್ವಜನಿಕ ಕಟ್ಟಡಗಳು ಜರ್ಮನಿಯ ಶತಘ್ನಿಗಳಿಂದುರಿಗೆ ಭಸ್ಮವಾಗಿವೆ!

ಹಿಟ್ಲರನು ಇಂದೂ ಅದೇ ನೀತಿಯನ್ನು ಅನುಸರಿಸುವಂತೆ ತೋರುತ್ತದೆ. ಮಾರ್ಶಲ್ ಪಿಸುಡ್ಸ್ಕಿ ಪ್ರದರ್ಶನಾಲಯವಾಗಿ ಮಾರ್ಪಟ್ಟ, ಸುಪ್ರಸಿದ್ಧ ಚಿತ್ರಪಡಿರೆ ಭವನವನ್ನು ಹಿಟ್ಲರನು ನಿರ್ನಾಮಮಾಡಿರುವನು. ಲೆಥ್ವಿಯದ ಒಬ್ಬ ಪತ್ರಿಕೋದ್ಯಮಿಯು "ಇಂದು ಪೋಲೆಂಡಿಗೆ ಜರ್ಮನಿಯ ಧಾಳಿಯು ಅದ್ಯಂತವಿವರವು ಒಂದು ದೀರ್ಘ ವಧಾಕಾಂಡವಾಗಿದೆ. ದಾರಿಯನಗರ, ಗ್ರಾಮಗಳು, ಸುಂದರ ಮಂದಿರಗಳು, ನಿರಪರಾಧಜನರು ಹೀಗೆ ನಿರ್ದಯವಾಗಿ ಜರ್ಮನ್ ಸೈನಿಕರಿಂದ ನಾಶಗೊಳಿಸಲ್ಪಡುತ್ತಾರೆ. ಎಲ್ಲೋ ಕಡೆ ಹಳ್ಳಿ ಹಳ್ಳಿಗಳಿಗೇ ಬೆಂಕಿಕೊಟ್ಟು ಉರಿಸುತ್ತಾರೆ" ಹೀಗೆಂದು ಬರೆಯುತ್ತಾನೆ! ಇವುಗಳೆಲ್ಲಾ ಆಕ್ರಮಣಮಾಡುವ ಜರ್ಮನರ ದುರ್ಬುದ್ಧಿಯನ್ನು ತಿಳಿಸಲು ಸಾಕಾಗುವುವು. ಜರ್ಮನರು ನಿರಪರಾಧಿಗಳ ಮೇಲೂ ಬಾಂಬೆಸೆಯುವುದರಿಂದ, ಜರ್ಮನರಲ್ಲದವರು ಜಗತ್ತಿನಲ್ಲಿ ಬದುಕುವುದೇ ಬೇಡವೆಂದು ಅಭಿಪ್ರಾಯ ಪಟ್ಟಹಾಗೆ ತೋರುತ್ತದೆ. ಈ ಜರ್ಮನರ ಕಾರ್ಯವನ್ನು ಪೋಲೆಂಡಿನ ಸರಕಾರವು ಜಗತ್ತಿಗೆ ಸಾರಿದೆ!

ಜರ್ಮನಿಯು ಹೀಗೆ ಅಮಾನುಷವಾಗಿ ಎಷ್ಟು ಕಾಲ ಮುಂದುವರಿಯುವುದೋ?

ಯುದ್ಧಕ್ಕೆ ಯಾರು ಕಾರಣರು?

ಗೋರಿಂಗನು ಕನೆಪ್ಪಂದು ಭಾಷಣದಲ್ಲಿ, ಇಂದಿನ ಯುದ್ಧಕ್ಕೆ ಚೆಂಬರ್ಲೀನರೇ ಕಾರಣರೆಂದೂ, ಅವರು ಪೋಲೆಂಡನ್ನು ಬೆಂಬಲಕೊಟ್ಟು ಹೀಗೆ ಜರ್ಮನಿಗೆ ವಿರುದ್ಧ ಕೆರಳಿಸಿರುವರೆಂದೂ ಹೇಳಿರುವನು. ಅದಕ್ಕೆ ಉತ್ತರಕೊಡುತ್ತಾ ಬ್ರಿಟಿಷ್ ಪ್ರಚಾರಶಾಖೆಯ ಮಂತ್ರಿಗಳು ಇಂದಿನ ಜರ್ಮನಿಯ ಯಾವ ನಿರ್ಧಾರ ಭರವಸೆ ಇವುಗಳನ್ನು ನಾವು ನಂಬಲು ಸಾಧ್ಯವಿಲ್ಲ. ಬ್ರಿಟನು ಇನ್ನೊಂದು ವಾರ್ಸೇಲಿಯನ್ನು ಮಾಡುವುದಾಗಲಿ, ಜರ್ಮನ್ ರಾಷ್ಟ್ರವನ್ನು ವಿಧ್ವಂಸಗೊಳಿಸುವುದನ್ನಾಗಲಿ ಇಚ್ಛಿಸುವುದಿಲ್ಲ, ಇಂದಿನ ದುರ್ಘಟನೆಗಳು ನ್ಯಾಯಪ್ರಕಾರ ಕೊನೆಗೊಂಡು ಶಾಂತಿಯಾಗುವುದನ್ನೇ ಹಾರೈಸುತ್ತದೆ. ಆದರೆ, ಜರ್ಮನಿಯು ಎಲ್ಲಾ ಸಮಯವೂ ಗೌರವದಿಂದ ವರ್ತಿಸುತ್ತದೆಂಬುದರ ಬಗೆಗೆ ಯಾವನಿರ್ಧಾರವೂ ಇಲ್ಲ. ಹಿಂದೆ ಜರ್ಮನ್ ಸರಕಾರವು ವರ್ಸೇಲಿಯ ಒಪ್ಪಂದವನ್ನು ಗೌರವದ ಕಾರ್ಯವನ್ನಾಗಿ ಒಪ್ಪಿಕೊಂಡುದು, ಮಾತ್ರವಲ್ಲದೆ, ಆಗಿನ ಜರ್ಮನ್ ಅಧ್ಯಕ್ಷರಾದ ಫೀಲ್ಡ್ ಮಾರ್ಶಲ್ ವಾನ್ ಹಿಂಡನ್‌ಬರ್ಗರು ಆ ಗೌರವದ ಒಪ್ಪಂದವನ್ನು ಸರಿಯಾಗಿ ನಡೆಸಿದರು. ಆದರೆ ಹಿಟ್ಲರನು ಪ್ರತಿಯೊಂದನ್ನೂ ತಲೆಕೆಳಗು ಮಾಡಿದನು. ತರಿತ್ರೆಯು ಮುಂದಕ್ಕೆ ಯಾವುದನ್ನು ಮಾಡಲಿದೆಯೋ ನೋಡಲಿದೆ" ಹೀಗೆನ್ನುತ್ತಾರೆ.

ಜೆಕ್ಕರ ಹಕ್ಕುಪಾಲನೆ

ಜರ್ಮನಿಯು ಜೆಕ್ಕರ ಹಕ್ಕುಪಾಲನೆಯ ವಿಷಯದಲ್ಲಿ ಒಂದು ಪ್ರತ್ಯೇಕವಾದ ಸ್ವಕೀಯ ಕ್ರಮವನ್ನು ಮಾಡಿಕೊಂಡಿದೆ! ಬೊಹೇಮಿಯಾ ಮತ್ತು ಮೊರೋವಿಯಾಗಳನ್ನು ಬಿಟ್ಟು ಹೋಗಬೇಕೆಂದು ಇಚ್ಛೆಮಾಡುವ ಪ್ರತಿಯೊಬ್ಬನೂ, ತನ್ನ ಆಸ್ತಿಯನ್ನು ಜರ್ಮನ್ ಸರಕಾರವು ನೋಡಿಕೊಳ್ಳಬೇಕೆಂದು ಬರೆದುಕೊಡಬೇಕು. ಅವನು ತನ್ನ ಆಸ್ತಿಯನ್ನು ಅಗತ್ಯವಿದ್ದರೆ, ಸರಕಾರವು ಮಾರಾಟ ಮಾಡಬಹುದೆಂದೂ ಬರೆಕೊಡಬೇಕು. ಕಡೆಗೆ, ತನ್ನ ಆಸ್ತಿಯ ವಿಷಯದಲ್ಲಿ ಸರಕಾರವು ತೆಗೆದುಕೊಂಡ ಯಾವುದೇ ಕಾರ್ಯಕ್ಕಾದರೂ, ವ್ಯಾಜ್ಯ ನಡೆಸುವ ಹಕ್ಕುದಾರನಾಗಿಲ್ಲ ಎಂದರೆ ಈ ದೇಶಗಳನ್ನು ಬಿಟ್ಟುಹೋಗುವ ಜೆಕ್ಕನು ಆತನಿಗಿರುವ ಪ್ರತಿಯೊಂದು ಆಸ್ತಿಯ ಅಂಶವನ್ನು ತನಗೆ ಹಿಂದಿರಿಗಿಸಿಕ್ಕುವ ಹಕ್ಕುಗಳನ್ನೆಲ್ಲಾ ಬಿಟ್ಟೇ ಸರಕಾರಕ್ಕೆ ಒಪ್ಪಿಸಿಹೋಗಬೇಕು.

ಜೆಕ್ಕರು ಇಂದು ಮಿತ್ರರಾಷ್ಟ್ರಗಳೊಡನೆ ಯುದ್ಧದಲ್ಲಿ ಸೇರುವುದರಲ್ಲಿ ಯಾವ ಆಶ್ಚರ್ಯವುಂಟು?

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ: ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ — ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸು.

ಜಿಲ್ಲಾ ಸಮಾಚಾರ

ಮಂಗಳೂರು

ನಗರ ಸಭೆ

ನಮ್ಮ ನಗರ ಸಭೆಯು ಕಳೆದ ಸೋಮವಾರ ಸಂಜೆ ೫||ಗೆ ಚೆಯರ್‌ಮ್ಯಾನರಾದ ಶ್ರೀ| ಬಿ. ವೆಂಕಟ್ರಾಯ ಬಾಳಿಗ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಜಿಲ್ಲಾ ಬೋರ್ಡಿನ ಸಭೆ

ಶ್ರೀಮತಿ, ಕಮಲಾದೇವಿಯವರ ಸ್ಥಾನಕ್ಕೆ, ಬೋರ್ಡಿನ 'ವರ್ಕ್ಸ್ ಎಂಡ್ ಕೊಮ್ಯುನಿಕೇಶನ್ಸ್' ಕಮಿಟಿಗೆ ಬೇರೊಬ್ಬ ಸದಸ್ಯರನ್ನು ಚುನಾಯಿಸುವ ನಿಮಿತ್ತ ವಿಶೇಷ ಸಭೆಯೊಂದು ಚೆಬ್ರಿಯಲ್ಲಿ, ಅಕ್ಟೋಬರ ತಾ. ೭ನೇ ಶನಿವಾರ ಮುಂಜಾನೆ ೮||ಗೆ ಕೂಡಲಿದೆ.

ಹಣ್ಣು ಹಂಪಲುಗಳ ಮಾರಾಟದ ಏರ್ಪಾಡು

ದಿ. ಸೌತ್ ಕೆನರಾ ಫ್ರುಟ್ ಗ್ರೋವರ್ಸ್ ಮಾರ್ಕೆಟಿಂಗ್ ಕೊವೊಪರೇಟಿವ್ ಸೊಸ್ಯಾಟಿ ಲಿಮಿಟೆಡ್—ನಂಬ್ರ L 411-ಕೊಡಿಯಾಲಬೈಲ್ ಪೋಸ್ಟು ಮಂಗಳೂರು.

ನಮ್ಮ ಜಿಲ್ಲೆಯ ಹಣ್ಣುಹಂಪಲುಗಳ ಮಾರಾಟದ ಬಗ್ಗೆ ಯೋಗ್ಯವಾದ ಏರ್ಪಾಡನ್ನು ಜಿಲ್ಲೆಯೊಳಗೂ ಹೊರಗೂ ಮಾಡಬೇಕೆಂಬ ಉದ್ದಿಷ್ಟದಿಂದ ಮೇಲಿನ ಹೆಸರಿನ ಒಂದು ಸಹಕಾರಿ ಸಂಘವನ್ನು ಇದೇ ತಿಂಗಳ ತಾ. ೧೭ನೇ ಆದಿತ್ಯವಾರ ಮಂಗಳೂರಿನಲ್ಲಿ ತೆರೆಯಲಾಗಿತ್ತು. ಉತ್ತಮವಾದ ಹಣ್ಣುಗಳನ್ನು ನ್ಯಾಯವಾದ ಕ್ರಯಕ್ಕೆ ಜನರಿಗೆ ಸಿಗುವ ಹಾಗೆ ಮಾಡಿದ್ದಲ್ಲಿ, ಸಾರ್ವಜನರೆಲ್ಲರೂ ಹಣ್ಣುಹಂಪಲುಗಳ ಉಪಯೋಗದಿಂದ ದೇಹಾರೋಗ್ಯವನ್ನು ಹೆಚ್ಚಿಸಿಕೊಳ್ಳುವುದಲ್ಲದೆ, ಅವುಗಳನ್ನು ಬೆಳಸುವ ಅನೇಕ ಮಾಲಿಕರಿಗೂ ಉತ್ತೇಜನ ಕೊಟ್ಟಂತಾಗುವುದು. ಈ ಸಂಘದ ಅಧಿಕೃತ ಪಾಲು ಭಂಡವಾಳವು ೫ ರೂಪಾಯಿ ಮೌಲ್ಯದ ೧೦೦೦-ಪಾಲುಗಳು. ಪ್ರವೇಶ ಫೀಸು ಪಾಲು ೧ರ ೦-೪-೦ ಮಾತ್ರ. ಇದರ ವಿಷಯ ಹೆಚ್ಚಿನ ಮಾಹಿತಿಗಾಗಲೀ ಅಥವಾ ಈ ಸಂಘಕ್ಕೆ ಸೇರಲು ಮನಸ್ಸುಳ್ಳವರಾಗಲೀ ಇದರ ಕಾರ್ಯದರ್ಶಿಯವರಿಗೆ ಬರಕೊಳ್ಳಬೇಕಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಖಾದಿ ಪ್ರೇಮಿಗಳು

ಖಾದಿ ಪ್ರೇಮಿಗಳ ಸಭೆಯೊಂದು ಕಳೆದ ಮಂಗಳವಾರ, ಸ್ಥಳೀಯ ಥಿಯಾಸಫಿಕಲ್ ಲಾಜನಲ್ಲಿ ಶ್ರೀ. ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಅಕ್ಟೋಬರ ತಿಂಗಳಲ್ಲಿ ಗಾಂಧಿ ಸಪ್ತಾಹ, ದಸರಾ ಮೊದಲಾದುವು ಬರುವದರಿಂದ ಖಾದಿಯನ್ನು ವಿಕ್ರಯಿಸಬೇಕೆಂದು ನಿರ್ಣಯವಾಗಿ, ಖಾದಿಯನ್ನು ಕೊಳ್ಳುವವರಿಗಾಗಿ 'ಹುಂಡಿ' ಯೋಜನೆ ಮತ್ತು ಮನೆ ಮನೆ ಮಾರಾಟದ ಯೋಜನೆ ಕೈಕೊಳ್ಳಬೇಕೆಂದು ತೀರ್ಮಾನವಾಯಿತು.

ಖಾದಿ ಮಾರಾಟ

ಅಕ್ಟೋಬರ ತಿಂಗಳಲ್ಲಿ ಖಾದಿ ಕೊಳ್ಳುವವರಿಗೆ, ರೂಪಾಯಿಯಲ್ಲಿ ಒಂದಾಣೆಯ ಕಮಿಷನು ಕೊಡಲಾಗುವುದೆಂದು ಎ. ಸ. ಎಸ್. ಎ. ಯ ಮಂಗಳೂರಿನ ಖಾದಿ ಭಂಡಾರದ ಮೆನೇಜರರು ತಿಳಿಸುತ್ತಾರೆ.

ತಾ. ೨೮-೯ರಲ್ಲಿ ಶ್ರೀ. ಯು. ಶ್ರೀನಿವಾಸ ಮಲ್ಯರ ...

ಕಾರ್ಕಳ

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸಪ್ಟಂಬರ ತಿಂಗಳ ಹಿಂದೀ ಪರೀಕ್ಷೆಗಳು ಶ್ರೀ ವೆಂಕಟ್ರಮಣ ಪಾಯರ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಯಂ. ಸರ್ವೋತ್ತಮ ಕಾಮತ ಬಿ. ಎ. ಎಲ್. ಟಿ.ಯವರ ವ್ಯವಸ್ಥಾಪಕತ್ವದಲ್ಲಿ ಜರಗಿದುವು. ಪ್ರಥಮಾ ೫, ಮಧ್ಯಮಾ ೧೨, ಮತ್ತು ರಾಷ್ಟ್ರಭಾಷಾ ೧೪ ಹೀಗೆ ೩೧ ಮಂದಿ ಪರೀಕ್ಷೆಗಳನ್ನು ಕೊಟ್ಟಿದ್ದರು. ಅವರ ಪೈಕಿ ೧೨ ಮಂದಿ ಮಹಿಳೆಯರಿದ್ದರೆಂದು ಸ್ಥಳೀಯ ಹಿಂದೀ ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ.

ಇಲ್ಲಿಯ ಪುಲ್ಕೇರಿಯಲ್ಲಿ, ಶ್ರೀ| ಕೆ. ಕೋಮಯ್ಯ ಹೆಗ್ಡೆಯರಿಗೆ ಸೇರಿದ ೬೦ ಅಕ್ಕಿ ಮುಡಿಗಳನ್ನು ಕೆಲವರು ತಾ. ೧೩ರಂದು ಬಲಾತ್ಕಾರದಿಂದ ಒಯ್ದುರೆಂದೂ, ಈ ವಿಚಾರದಲ್ಲಿ ರಿಜರ್ವ ಪೋಲೀಸ್, ಸಾಣೂರು ಪಟೇಲರು ಮೂಡಬಿದಿರೆ ಸಬ್ ಇನ್ಸ್‌ಪೆಕ್ಟರ್ ಮತ್ತು ಕಾರ್ಕಳ ಸಬ್ ಇನ್ಸ್‌ಪೆಕ್ಟರ್ ಮೊದಲಾದವರು ತನಿಖೆ ನಡೆಸಿ, ಹಲವು ಮಂದಿಯನ್ನು ಗುಮಾನಿನ ಮೇಲೆ ಸೆರೆಹಿಡಿದಿದ್ದಾರೆಂದೂ ತಿಳಿದುಬರುತ್ತದೆ.

ಸರಕಾರವು ಸಕಾಲದಲ್ಲಿ ತಕ್ಕ ಕಾರ್ಯಕ್ರಮಗಳನ್ನು ಕೈಕೊಂಡುದರಿಂದ ಯೂರೋಪಿನ ಯುದ್ಧದ ದೆಸೆಯಿಂದಾಗಿ ಇಲ್ಲಿ ಆಹಾರ ಸಾಮಗ್ರಿಗಳ ಬೆಲೆಯು ವಿಶೇಷ ಏರುವದಿಲ್ಲ. ವ್ಯಾಪಾರಿಗಳು ಬಹಳ ಮಟ್ಟಿಗೆ ಮಂಗಳೂರು ಪೇಟೆ ಧಾರಣೆಯನ್ನು ಅನುಸರಿಸಿ ಇಲ್ಲಿ ಆಹಾರಸಾಮಗ್ರಿಗಳ ವ್ಯಾಪಾರ ಮಾಡುತಿದ್ದಾರೆ.

ಸ್ಥಳೀಯ ಹೆಲ್ತ್ ಇನ್ಸ್‌ಪೆಕ್ಟರರು ಒಂದು ಸಾರ್ವಜನಿಕ ಸಭೆಯನ್ನು ಕರೆದು ಕಾರ್ಕಳ ಊರಿನ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವುದಕ್ಕೋಸ್ಕರ ಪಬ್ಲಿಕ್ ಹೆಲ್ತ್ ಏಕ್ಟಿಗನುಗುಣವಾಗಿ ತಕ್ಕ ಉಪಾಯಗಳನ್ನು ಕೈಕೊಳ್ಳುವರೆ ಪ್ರತಿಷ್ಠಿತ ಸದ್ಗೃಹಸ್ಥರಿಂದ ಕೂಡಿದ ಕೆಲವು ಸಮಿತಿಗಳನ್ನು ರಚಿಸಿರುವರಾಗಿ ಕೇಳುತ್ತೇವೆ.

ದ ಗಾಂಧಿ ಜಯಂತಿ ಖಾದಿ ಮಾರಾಟ ಕಮಿಟಿಯಲ್ಲಿ ಕೆಳಗಿನ ನಿರ್ಣಯಗಳು ಪಾಸಾದುವು.

ಖಾದಿ ಹೊತ್ತು ಮಾರಾಟ ಮಾಡಲು ಒಂದು ಉಪಸಮಿತಿಯನ್ನು ನಾಡಿತು. ಈ ಉಪಸಮಿತಿಯ ಸಭೆಯು ತಾ ೩೦-೯-೩೯ನೆ ಸಾಯಂಕಾಲ ಗಂಟೆ ೫-೩೦ಕ್ಕೆ ಕಾಂಗ್ರೆಸು ಕಛೇರಿಯಲ್ಲಿ ಸೇರುವುದು (ಈ ಸಭೆಗೆ ಖಾದಿ ಹೊತ್ತು ಮಾರಾಟ ಮಾಡಲು ಅನುಕೂಲವಿರುವ ಎಲ್ಲಾ ಮಹನೀಯರು ಬರಬೇಕಾಗಿ ವಿನಂತಿ.)

ಮಂಗಳೂರಿನ ಪತ್ರಿಕೆಗಳು ಮತ್ತು ಸಿನೆಮಾ ಕಂಪೆನಿಯ ಮಾಲಿಕರು ಪ್ರಚಾರ ಕಾರ್ಯದಲ್ಲಿಯೂ, ಮಂಗಳೂರು ಮುನ್ಸಿಫಲ್ ಕಾಂಗ್ರೆಸು ಪಾರ್ಟಿಯವರು ಮತ್ತು ಇತರ ಎಲ್ಲಾ ಕಾಂಗ್ರೆಸು ಮೆಂಬರರು ಹುಂಡಿ ಮತ್ತು ಖಾದಿ ಮಾರಾಟದಲ್ಲಿಯೂ ಸಹಾಯವನ್ನು ಕೊಡಬೇಕೆಂದು ವಿನಂತಿ.

ಹಿಂದೂಸ್ಥಾನ ಸ್ಕೌಟ್ ವಾರ

ಆಕ್ಟೋಬರ ಒಂದರಿಂದ ೭ರ ವರೆಗೆ ಹಿಂದೂಸ್ಥಾನ ಸ್ಕೌಟ್ ದಳದವರು ಸ್ಕೌಟ್ ವಾರವನ್ನು ಆಚರಿಸುವರು. ವಿವಿಧ ಚಟುವಟಿಕೆಗಳೂ ಇವೆ. ಖಾದಿ, ಹರಿಜನ ಸೇವೆಯಂತಹ ಮಹತ್ವದ ಧ್ಯೇಯಗಳಿಂದ ಭಾರತದಲ್ಲಿ ಯೋಗ್ಯ ಸ್ವಾತಂತ್ರ್ಯವನ್ನು ಸಂಪಾದಿಸುವ ಕಾರ್ಯಗಳನ್ನು ಬಾಲ ದಲದವರು ಕೈಕೊಳ್ಳುವರು.

'ಬೆಸೆಂಟ್' ದಿನಾಚರಣೆ

ಮಂಗಳೂರಿನ ಬೆಸೆಂಟ್ ನೇಶನಲ್ ಗರ್ಲ್ಸ್ ಸ್ಕೂಲಿನಲ್ಲಿ, ಬೆಸೆಂಟ್ ದಿನಾಚರಣೆಯು, ಅಕ್ಟೋಬರ ತಾ. ೧ರಂದು, ಸಂಜೆ ಸ್ವಾಮಿ ಸುವಿಚಾರನಂದರ ಅಧ್ಯಕ್ಷತೆಯಲ್ಲಿ ಜರುಗಲಿದೆ.

ಉಡುಪಿ

ಅಳಿಯಸಂತಾನ ಸುಧಾರಣ ಮಸೂದೆ

ಕಳೆದ ತಾ. ೨೭ರಲ್ಲಿ ಎಡ್ವಕೇಟ್ ಬಿ. ಹಿರಿಯಣ್ಣ ಹೆಗ್ಡೆಯವರ ಮನೆಯಲ್ಲಿ ಅಳಿಯಸಂತಾನಿಗರ ಸಭೆಯೊಂದು ಶ್ರೀ. ಬಸ್ರೂರು ಹಿರಿಯಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸೇರಿ ಪ್ರಕೃತ ಅಳಿಯಕಟ್ಟಿನ ಸಮಾಜದಲ್ಲಿ ಯಾವ ಸುಧಾರಣೆಯೂ ಅನಗತ್ಯವೆಂದೂ ಒಂದು ವೇಳೆ ಸುಧಾರಣೆ ಅಗತ್ಯವೆಂದಾದಲ್ಲಿ ಬಹುಸಂಖ್ಯಾತ ಜನರ ಪ್ರಯೋಜನಾರ್ಥವಾದ ಮಸೂದೆಯನ್ನು ತಯಾರಿಸುವುದು ನ್ಯಾಯವೆಂದೂ ಮುಂತಾಗಿ ಅಭಿಪ್ರಾಯಗಳು ಸೂಚಿಸಲ್ಪಟ್ಟು ಅಂತೆಯೇ ನಿರ್ಧಾರಗಳಾದುವು.

ಕುಂದಾಪುರ

ಹಿಂದೀಪರೀಕ್ಷೆ

ಕಳೆದ ವಾರ ಇಲ್ಲಿ ನಡೆದ ಹಿಂದೀ ಪರೀಕ್ಷೆಗಳಿಗೆ ೩೫ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕುಳಿತಿದ್ದರು.

ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯು ಶ್ರೀ ಬಿ. ಸುಬ್ಬಣ್ಣಶೆಟ್ರ ಅಧ್ಯಕ್ಷತೆಯಲ್ಲಿ ತಾ. ೧೯ರಂದು ಕೂಡಿತು. ಗತವರ್ಷದ ವರದಿಯ ನಂತರ ಹರಿಜನ ಪ್ರಚಾರಕ್ಕಾಗಿ ಶ್ರೀ. ಗಳಾದ ಸುಬ್ಬಣ್ಣಶೆಟ್ಟಿ, ಸಂಜೀವಶೆಟ್ಟಿ ಮತ್ತು ಕೃಷ್ಣರಾಯ ಕೊಡಗಿಯವರನ್ನೊಳಗೊಂಡ ಕಮಿಟಿಯೊಂದರ ನೇಮಕವಾಯಿತು.

ಕಾಸರಗೋಡು

ಬದಿಯಡ್ಕ

ಇಲ್ಲಿ ಹೊಸತಾಗಿ ತೆರೆಯಲ್ಪಟ್ಟ ಡಿಸ್ಟ್ರಿಕ್ಟ್ ಬೋ| ಹಾ| ಎ| ಶಾಲೆಯಲ್ಲಿ ಕಳೆದ ತಾ. ೧೧ರಲ್ಲಿ ಸದ್ರಿ ಶಾಲಾ ಸಹಾಯಕರಾಗಿಯೂ, ಹಿರಿಯ ಉಪಾಧ್ಯಾಯರಾಗಿಯೂ ಇರುವ ಶ್ರೀ| ಪಿ ಅನಂತಭಟ್ಟರ ಅಧ್ಯಕ್ಷತೆಯಲ್ಲಿ, ಈಗ ತಾನೇ ಮಂಗಲಪಾಡಿ ಹಾ| ಎ| ಶಾಲೆಯಿಂದ ಸದ್ರಿ ಶಾಲೆಗೆ ಹೆಡ್‌ಮಾಸ್ತರಾಗಿ ವರ್ಗಾಯಿಸಲ್ಪಟ್ಟ ಶ್ರೀ| ಎಂ. ರಾಮಕೃಷ್ಣರಾಯರಿಂದ ಶಿಕ್ಷಣಪಡೆದ ಮತ್ತು ಇದೇ ಸರಹದ್ದಿನಲ್ಲಿರುವ ಹಳೆ ವಿದ್ಯಾರ್ಥಿಗಳ ಸ್ವಾಗತಸಭೆಯೊಂದು ಜರಗಿತು. ಸಭೆಯಲ್ಲಿ ಊರ ಮಹನೀಯರಾದ ಶ್ರೀ| ಪಿ. ವಿ ಭಟ್ಟ ಡಾ| ಪಿ. ಎಸ್. ಶಾಸ್ತ್ರಿ, ಶ್ರೀ| ಐ. ಕೃಷ್ಣ ಭಟ್ಟ ಮೊದಲಾದವರು ದಯಮಾಡಿದ್ದರು.

ಏರ್ಕಟ್ಟೆ ಶಾಲಾಮಾಸ್ತರಾದ ಶ್ರೀ ಅಣ್ಣಯ್ಯ ಸೆಟ್ಟರು ಸೂಚಿಸಿ, ಹಳೆ ವಿದ್ಯಾರ್ಥಿಗಳ ಪರವಾಗಿ ಮಾನಪತ್ರವನ್ನು ಶ್ರೀ. ಎಂ ರಾಮಕೃಷ್ಣರಾಯರಿಗೆ ಅರ್ಪಿಸಿದರು. ಸದ್ರಿಯವರು ಶಿಷ್ಯಪ್ರೇಮಪೂರ್ವಕವಾದ ಭಾಷಣವನ್ನಿತ್ತರು. ಅಧ್ಯಕ್ಷರ ಭಾಷಣದ ತರುವಾಯ, ಛಾಯಚಿತ್ರ ತೆಗೆಯಲಾಯಿತು. ಲಘುಫಲಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಪುತ್ತೂರು

ಕಳೆದ ತಾ. ೧೫ರಲ್ಲಿ ಇಲ್ಲಿಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶ್ರೀ. ಕರ್ಗಲ್ಲು ತಿಮ್ಮಣ್ಣಭಟ್, ಇವರ ಅಧ್ಯಕ್ಷತೆಯಲ್ಲಿ ಸೇರಿದ ಅಳಿಯ ಕಟ್ಟನ್ನಾರಿಸುವವರ ಸಭೆಯಲ್ಲಿ ಸುಧಾರಣಾ ಮಸೂದೆಗೆ ವಿರೋಧಿಸಿ ಠರಾವು ಮಾಡಿರುತ್ತಾರೆಂದು ತಿಳಿದುಬರುತ್ತದೆ.

ಸಂಪಾಜೆ

ಕಳೆದ ತಾ. ೧೬ನೇ ರಾತ್ರಿ ಕಾಡಾನೆಗಳ ಗುಂಪೊಂದು ಶ್ರೀ. ಕಿಲಾರು ರಾಮಚಂದ್ರಯ್ಯನವರ ತೋಟಕ್ಕೆ ನುಗ್ಗಿ ಸುಮಾರು ೧೦೦ ಅಡಿಕೆ ಮರಗಳನ್ನು ಹಾಗೂ ತುಂಬಾ ಬಾಳೆಗಳನ್ನೂ ನಾಶ ಮಾಡಿ ಬಹಳ ನಷ್ಟಪಡಿಸಿವೆ.

ಕರ್ನಾಟಕ

ಮೈಸೂರು

ಪ್ರತಿಬಂಧಕ ಆಜ್ಞೋಲ್ಲಂಘನೆ

ಪ್ರಚಂಡ ಸಾರ್ವಜನಿಕ ಸಭೆ—ಮೈಸೂರು ಕಾಂಗ್ರೆಸಿನ ೫ನೇ ಡಿಕ್ಟೇಟರಾದ ಶ್ರೀವರನ್ ಬಸಿಗೌಡರು ಹೋದ ೧೮ನೇ ತಾರೀಕಿನ ಸಂಧ್ಯಾಕಾಲ ಟೌನ್‌ಹಾಲ್ ಮೈದಾನದಲ್ಲಿ ಭಾಷಣಮಾಡಿ ಸರಕಾರದವರು ಹಾಕಿರುವ ಪ್ರತಿಬಂಧಕ ಆಜ್ಞೆಯನ್ನು ಉಲ್ಲಂಘಿಸಿದರು. ಶ್ರೀಯುತರು ತಮಗೆ ಶ್ರೀಮನ್ಮಹಾರಾಜರವರಲ್ಲಿ ಭಕ್ತಿಯಿದೆಯೆಂದೂ ಕಾಂಗ್ರೆಸ್ ಹೋರಾಡುವುದು ಈಗಿನ ಸರಕಾರದ ನೀತಿ ಹೋಗಿ ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಸ್ವಂತ ಜವಾಬ್ದಾರಿ ಸರಕಾರ ಸ್ಥಾಪನೆಯಾಗುವುದಕ್ಕಾಗಿ ಎಂದರು. ಪ್ರಸ್ತುತ ಸರಕಾರದ ನೀತಿಯು ಕೊನೆಗಾಣಲೆಂದೂ ಸ್ವಂತ ಜವಾಬ್ದಾರಿ ಸರಕಾರವು ಕೂಡಲೇ ಬರಲೆಂದೂ ಬಯಸಿದರು. ಮಹಾಜನರು ಸರ್ವ ವಿಧದಿಂದಲೂ ಸಹಾಯಮಾಡಿ ಕಾಂಗ್ರೆಸಿನವರು ಕೈಕೊಂಡಿರುವ ಕಾರ್ಯವು ಫಲಿಸುವಂತೆ ಮಾಡಬೇಕಾಗಿ ಪ್ರಾರ್ಥಿಸಿ, ತಮ್ಮ ಭಾಷಣವನ್ನು ಮುಗಿಸಿದರು.

ಶ್ರೀ| ಮೂಡ್ಲಗಿರಿ ಗೌಡರಿಗೆ ಶಿಕ್ಷೆ

ಮೈಸೂರು ಕಾಂಗ್ರೆಸಿನ ೪ನೇ ಡಿಕ್ಟೇಟರು ಶ್ರೀ| ಮೂಡ್ಲಗಿರಿ ಗೌಡರು ಹೋದ ೧೫ನೇ ತಾರೀಕಿನ ಸಂಧ್ಯಾಕಾಲ ಟೌನ್ ಹಾಲ್ ಮೈದಾನಿನಲ್ಲಿ ಭಾಷಣಮಾಡಿ ಪ್ರತಿಬಂಧಕಾಜ್ಞೆಯನ್ನು ಮುರಿದುದಕ್ಕಾಗಿ ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟರು ಹೋದ ೨೫ನೆ ತಾರೀಕಿನ ದಿವಸ ಶ್ರೀಯುತರಿಗೆ ೪ ತಿಂಗಳು ಕಠಿಣ ಸಜಾ ಮತ್ತು ೩೦೦ ರೂಪಾಯಿ ಜುಲುಮಾನೆ ತಪ್ಪಿದರೆ ಮತ್ತೊಂದು ತಿಂಗಳು ಕಠಿಣ ಸಜಾ ವಿಧಿಸಿದರು.

ಮುಂಬಯಿ

ದುಃಖಸೂಚಕ ಸಭೆ

ಪ್ರೋಟೆಸ್ಟ ಆರ್ಯ ಸಮಾಜದ ಉತ್ಸಾಹೀ ಕಾರ್ಯಕರ್ತರಲ್ಲೊಬ್ಬರೂ ಮತ್ತು ಭೂತಪೂರ್ವ ಕಾರ್ಯದರ್ಶಿಯವರೂ ಆಗಿದ್ದ ಶ್ರೀ ಮಾನ್ ಯಬ್ ಪರಮೇಶ್ವರ ಶ್ರೀಧರರ ಅಕಾಲ ಮರಣಕ್ಕಾಗಿ ಇಲ್ಲಿಯ ಪ್ರೋಟೆಸ್ಟ ಆರ್ಯ ಸಮಾಜದಲ್ಲಿ ತಾ. ೧೭ನೇ ರವಿವಾರ ಶ್ರೀ. ಸತ್ಯಾರ್ಥಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯು ದುಃಖಪಟ್ಟಿತು. ಮಾತ್ರವಲ್ಲದೆ ಮೃತರ ಕುಟುಂಬಿಕರೊಡನೆ ಸಹಾನುಭೂತಿಯನ್ನು ತೋರಿಸಿ, ಗತಆತ್ಮಕ್ಕೆ ಈಶ್ವರನು ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತದೆ.

ಸರಸ್ವತಿ.

ನವರಾತ್ರಿ ವಿಶೇಷ ಸಂಚಿಕೆ.

ಶ್ರೀಯುತರುಗಳಾದ ಹೊಯಿಸಳರು. ಎಂ. ಜಿ. ವೆಂಕಟೇಶಯ್ಯನವರು. ಪಂಡಿತ ತಾರಾನಾಥರು—ಕಟ್ಪಾಡಿ ಶ್ರೀನಿವಾಸ ಶೆಣೈ ಅವರು. ಮು. ವೆಂಕಟಕೃಷ್ಣಪ್ಪನವರು — ಕಲಾಕುಮಾರರು. ಹೆಚ್—ವೈ ಯೋಗನರಸಿಂಹ—ಅವರು. ಸೀತಾರಾಮಶಾಸ್ತ್ರಿಗಳು—ಶ್ರೀಮತಿ — ಶಿವನಾಗಮ್ಮ—ಅವರು—ಗೌರೀದೇವಿ ಇಂಚಲಮರೆ ಅವರು—ಸಾವಿತ್ರಿ—ವಿದ್ವಾನ್—ಅವರು ಇನ್ನು ಅನೇಕ ಮಹನೀಯರ ಲೇಖನಗಳು ಕಥೆ ' ಕವಿತೆ, ನಾಟಕಗಳು ಮಕ್ಕಳ ನಾಟಕಗಳು ಪ್ರಕಟವಾಗುವವಲ್ಲದೆ ಭಾರತದ ಸುಪ್ರಸಿದ್ಧ ಮಹಿಳೆಯರ ಭಾವಚಿತ್ರಗಳನ್ನು ಪ್ರಕಟಿಸಲ್ಪಡುವವು. ಬೆಲೆ ನಾಲ್ಕಾಣೆ ಮಾತ್ರ.

ಅಕ್ಟೋಬರ್ ತಿಂಗಳಿನಿಂದ ಚಂದಾದಾರರಾಗಲಿಚ್ಛಿಸುವವರಿಗೆ ಉಚಿತ, ಏಜಂಟರುಗಳಿಗೆ ಧಾರಾಳವಾಗಿ ಕಮಿಷನ್ ದೊರೆಯುತ್ತದೆ.

ವಾರ್ಶೋ ನಗರದ ಮೇಲೆ ಬಾಂಬಿನ ಸುರಿಮಳೆ!

ಪಶ್ಚಿಮ ರಣರಂಗದಲ್ಲಿ ಕಾದಾಟ!

ರಷ್ಯ ಜರ್ಮನುಗಳು ಪೋಲೆಂಡನ್ನು ಹಂಚಿಕೊಳ್ಳುವವು

ರುಮೇನಿಯದ ಮಂತ್ರಿಯ ಕೊಲೆ!

ಪೋಲರು ಧೈರ್ಯದಿಂದ ಕಾದಾಡುತ್ತಿದ್ದಾರೆ!

ಯುದ್ಧ ವಾರ್ತೆ!



ಹದಿನೇಳನೆಯ ದಿನ

ಡ್ಯೂಕ್ ಓಫ್ ವಿಂಡ್ಸರರು ಮೇಜರ್ ಜನ ರಲ್ರಾದರು

ರಷ್ಯವು ಪೋಲೆಂಡಿನೊಡನೆ ಯುದ್ಧ ಮಾಡಿ ದರೂ ನಮ್ಮ ಮತ್ತು ರಷ್ಯದ ಒಪ್ಪಂದಕ್ಕೂ ಯಾವ ಸಂಬಂಧವೂ ಇಲ್ಲವೆಂದು ಜರ್ಮನರು ಪ್ರಕಟಿಸಿದರು

ಬ್ರಿಟಿಷರು ರಷ್ಯವು ಪೋಲೆಂಡನ್ನು ಆಕ್ರಮಿಸಿ ದ್ದನ್ನು ಖಂಡಿಸಿದರು ಮಾತ್ರವಲ್ಲದೆ ತಾವು ಖಂ ಡಿತ ತಮ್ಮ ನಿರ್ಧಾರವನ್ನು ಮುಂದೊತ್ತುವುದಾಗಿ ಯೂ ತಿಳಿಸಿದರು ಫ್ರೆಂಚರೂ ಹೀಗೆಯೇ ತಮ್ಮ ಖಂಡನೆಯನ್ನು ತಿಳಿಸಿದ್ದಾರೆ

ರಷ್ಯ ಜರ್ಮನ್ ಸೈನಿಕರು ಬ್ರೆಸ್ಟ್‌ಲಿಟೊ ವಸ್ಕಿನಲ್ಲಿ ಸಂಧಿಸಿದರು

ಪೋಲೆಂಡು ರುಮೇನಿಯಾ ಗಡಿಯನ್ನು ರಷ್ಯ ಸೈನಿಕರು ಆಕ್ರಮಿಸಿದರು

ಪೋಲಿಷ್ ಯುದ್ಧವು ಕೊನೆಗೊಂಡಿತೆಂದು ಜರ್ಮನ್ ಅಧಿಕಾರಿಗಳು ಪ್ರಕಟಿಸಿದರು

ದೋಹೋಬಿಜ್ ನಗರವು ಜರ್ಮನಿಯ ವಶ ವಾಯಿತು ಪಶ್ಚಿಮ ಯುದ್ಧ ಭೂಮಿಯಲ್ಲಿ ಭಯಂಕರ ಕಾದಾಟವಾಯಿತು

ಜರ್ಮನಿಯಲ್ಲಿ ಆಹಾರ ವಸ್ತುವು ಕಡಿಮೆ ಯಾಗಿ ಅವರ ದಿನನಿತ್ಯದ ಆಹಾರವು ಕಡಿಮೆ ಯಾಯಿತು

ಹದಿನೆಂಟನೆಯ ದಿನ

ಪೋಲೆಂಡಿನ ರಾಷ್ಟ್ರಾಧ್ಯಕ್ಷರಾದ ಎಂ [illegible] ಯವರು ಸರ್ [illegible]ಗೆ ಬಂದು ಅಲ್ಲಿ ಬಿಡಾರ ಮಾಡಿದರು

ವಾರ್ಸಾ ನಗರವನ್ನು ಜರ್ಮನರು ಬಲವಂತ ವಾಗಿ ಆಕ್ರಮಿಸಿದರು

ವಿಲ್ನಾ ನಗರದಲ್ಲಿ ರಷ್ಯದ ಟ್ಯಾಂಕುಗಳೂ ಮತ್ತು ಕಾಲಾಳುಗಳು ಪ್ರವೇಶಮಾಡಿದವು

ಪಶ್ಚಿಮ ರಣರಂಗದಲ್ಲಿ ಜರ್ಮನರು ಹಿಮ್ಮೆಟ್ಟಿದರು

ಬ್ರಿಟಿಷ್ ಸರಕಾರವು ಬೇರೆ ಬೇರೆ ತಟಸ್ಥ ರಾಷ್ಟ್ರಗಳೊಡನೆ ವ್ಯಾಪಾರ ಮೈತ್ರಿಯ ಒಪ್ಪಂದ ಮಾಡಿತು

ರಷ್ಯದ ಸೈನ್ಯವು ಪೋಲೆಂಡು ರುಮೇನಿಯಾ ಗಡಿಯನ್ನು ಸಂಪೂರ್ಣ ವಶಪಡಿಸಿಕೊಂಡಿತು

ಎರಡು ಬ್ರಿಟಿಷ್ ಟ್ರಾಲರುಗಳು ಜಲಾಂತರ್ಯಾಮಿ ನಾವೆಗಳು ಹಲವು ಬ್ರಿಟಿಷ್ ಹಡಗುಗಳ ಮೇಲೆ ಆಕ್ರಮಣ ಮಾಡಿದುವು

ಮುಳುಗಿದ ಕರೇಜಸಿನಿಂದ ೫೭೮ ಜನರು ಸತ್ತಿರುವುದಾಗಿ ತಿಳಿಯಿತು

ಜರ್ಮನಿಯ ಪ್ರಚಾರ ಮಂತ್ರಿ ಗಾಬೆಲ್ಸರ ಸುದ್ದಿಯಿಲ್ಲವೆಂದು ವಾರ್ತೆ ಬಂತು

ಇಟಲಿಯ ರಾಯಭಾರಿಯು ಫ್ರೆಂಚ್ ಬ್ರಿಟಿಷ್ ಸರಕಾರಗಳೊಡನೆ ಮಾತುಕತೆ ನಡೆಸಿದನು

ಈಜಿಪ್ಟು ಇಟಲಿಯೊಡನೆ ವಾಣಿಜ್ಯ ಒಪ್ಪಂದ ಮಾಡಿಕೊಳ್ಳಲು ಇಚ್ಛಿಪಟ್ಟಿತು

ಹತ್ತೊಂಬತ್ತನೆಯ ದಿನ

ಪೋಲೆಂಡಿನಲ್ಲಿ ಹೋರಾಡಲು ಪೋಲಿಷ್ ಸೈನಿಕರೇ ಇಲ್ಲ ಅಲ್ಲಿ ನನ್ನ ಯುದ್ಧವು ಮುಗಿಯಿತು' ಎಂದು ಜರ್ಮನ್ ಸೇನಾನಿಯು ಪ್ರಕಟಿಸಿದನು

ಬ್ರಿಟನಿಗೆ ಕೆನಡವು ಸಹಾಯವನ್ನು ಕಳುಹಿಸಿತು

ಬೊಹೇಮಿಯಾ ಮತ್ತು ಮೊರೇವಿಯಾಗಳಲ್ಲಿ ದಂಗೆಯು ಆರಂಭವಾಯಿತು ಜರ್ಮನರಿಗೂ ಅವರಿಗೂ ತಿಕ್ಕಾಟವಾಯಿತು ಅನೇಕರಿಗೆ ಗಾಯಗಳಾದುವು

ಬ್ರಿಟಿಷ್ ಕಥಿರ್ ಸ್ಟ್ಯಾನ್ ಹಡಗು ಮುಳುಗಿತು

ಡಾನ್ಜಿಗಿನ ಹಿಟ್ಲರ್ ಭಾಷಣದ ಕುರಿತು ಚೆಂಬರ್ಲೈನರು ಇದು ಕೇವಲ ಕೂಗೆಂದು ಹೇಳಿದರು

ಹಿಟ್ಲರ್‌ಶಾಹಿಯು ನಾಶವಾಗಲಿ ಎಂದು ಫ್ರೆಂಚ್ ಸರಕಾರವು ಪ್ರಕಟಿಸಿತು

ಡಾ ಗೋಬೆಲ್ಸನರನ್ನು ಕೈದುಮಾಡಿ ಮಾರ್ಶಲ್ ಗೋರಿಂಗರ ಅಂಗರಕ್ಷಕರು ಕಾಯುತ್ತಿರುವರೆಂದು ತಿಳಿಯಿತು

ಸೀಜ್‌ಫ್ರಿಡ್ ಲೈನಿನ ಒಳಗೆ ಜರ್ಮನ್ ಸೈನ್ಯವ್ಯೂಹ

ಇಪ್ಪತ್ತನೆಯ ದಿನ

ರುಮೇನಿಯದ ಮುಖ್ಯ ಮಂತ್ರಿ ಕಲಿನೆಸ್ಕರನ್ನು ಬುಕಾರೆಸ್ಟ್ ನಗರದಲ್ಲಿ ಜರ್ಮನ್ ಅಯರ್ನ್‌ಗಾರ್ಡ್ ಜನರು ಕೊಂದರು

ವಾರ್ಸಾದಲ್ಲಿ ಕದನವು ನಡೆಯುತ್ತಾ ಇರುವುದಾಗಿ ತಿಳಿಯಿತು ವಿಸ್ತುಲದ ಬಳಿ ಅನೇಕ ಪೋಲರು ಸೆರೆಯಾಗಿ ಅನೇಕ ಯುದ್ಧ ಸಾಮಗ್ರಿಗಳು ಅವರ ವಶವಾದುವೆಂದು ತಿಳಿಯಿತು

ಬ್ರಿಟಿಷ್ ನಿರ್ಧಾರದ ಕುರಿತು ಲಾರ್ಡ್ ಹೇಲಿಫಾಕ್ಸರು ಮಾತನಾಡಿದರು

ಬ್ರಿಟಿಷ್ ಹಡಗನ್ನೊಂದು ಮುಳುಗಿತು

ರಷ್ಯದ ಸೈನ್ಯವು ರುಥೇನಿಯಾ ಗಡಿಗೆ ಪ್ರವೇಶಿಸಿತು

ಪೋಲೆಂಡನ್ನು ಹಂಚಿಕೊಳ್ಳುವ ಬಗ್ಗೆ ಜರ್ಮನ್ ರಷ್ಯಾಗಳೊಳಗೆ ಮಾತುಕತೆಯಾಯಿತು

ಇಂಗ್ಲೆಂಡು ಫ್ರಾನ್ಸುಗಳಲ್ಲಿ ಶಸ್ತ್ರಾಸ್ತ್ರ ಸರಬರಾಯಿಯ ವ್ಯವಸ್ಥೆ ನಡೆಯಿತು

ಐಯರ್ಲೆಂಡಿನ ಅಧ್ಯಕ್ಷರಾದ ಡಿವೇಲರಾರು ತಮ್ಮ ಅಮೇರಿಕದ ಪ್ರವಾಸವನ್ನು ರದ್ದುಪಡಿಸಿದರು

ಜಾರ್ಜ್ ಬರ್ನಾರ್ಡುಶಾರವರು ಒಂದು ಲೇಖನ ಬರೆಯುತ್ತಾ ರಷ್ಯವು ಯುದ್ಧಕ್ಕಿಳಿದದ್ದು ಬ್ರಿಟನಿಗೆ ಅನುಕೂಲವೆಂದರು

ಇಪ್ಪತ್ತೊಂದನೆಯ ದಿನ

ಜರ್ಮನ್ ಮತ್ತು ರಷ್ಯ ಸರಕಾರಗಳು ಪೋಲೆಂಡನ್ನು ಈ ಕೆಳಗಿನಂತೆ ವಿಭಾಗಮಾಡಿಕೊಳ್ಳಲು ನಿಶ್ಚಯವಾಯಿತು

ವಿಸ್ತುಲಾ ಬಿಜಾಸ್ಸಾರು [illegible] ನದಿಗಳ ಪೂರ್ವವು ರಷ್ಯನಿಗೂ, ಪಶ್ಚಿಮ ಭಾಗವು ಜರ್ಮನಿಗೂ ಸೇರಬೇಕಾಗಿ ನಿರ್ಧಾರವಾಯಿತು

ರುಮೇನಿಯದ ಪ್ರಧಾನ ಮಂತ್ರಿಗಳನ್ನು ಕೊಂದ ನಿಮಿತ್ತ ಅದೇ ಸ್ಥಳದಲ್ಲಿ ಅದೇ ಪಿಸ್ತೂಲಿನಿಂದ ಹಲವರನ್ನು ಗುಂಡಿಕ್ಕಿ ಕೊಂದರು ಜನರ ನೆನಪಿಗಾಗಿ ಸತ್ತವರ ಹೆಣವು ದಾರಿಯಲ್ಲಿ ಬಿದ್ದಿತ್ತು ಎಂ ಅರ್ಗಿಸೆನರು ರುಮೇನಿಯದ ಹೊಸ ಪ್ರಧಾನ ಮಂತ್ರಿಗಳಾದರು

ಪಾರ್ಲಿಮೆಂಟಿನಲ್ಲಿ ಭಾರತವು ಯುದ್ಧದ ಬಗೆಗೆ ಯಾವ ನಿರ್ಧಾರದಲ್ಲಿದೆಯೆಂಬ ಕುರಿತು ಕೇಳಿದ ಪ್ರಶ್ನೆಗೆ ಆ ಕುರಿತು ವೈಸರಾಯರು ದೇಶದ ಮುಖಂಡರೊಡನೆ ನಿಷ್ಕರ್ಷಿಸುತ್ತಿರುವರಾಗಿ ಉತ್ತರ ಬಂತು

ಫ್ರೆಂಚರು ಸೀಜ್ ಫ್ರೀಡ್ ಲೈನಿನಲ್ಲಿ ಮುಂದೊತ್ತುವರಾಗಿ ತಿಳಿಯಿತು

ರಷ್ಯ ಮತ್ತು ಟರ್ಕಿಗಳೊಳಗೆ ಅನ್ಯೋನ್ಯ ಸಹಾಯ ಒಪ್ಪಂದವಾಗುವದಾಗಿ ತಿಳಿಯಿತು

ಜರ್ಮನ್ ಸೇನಾ [illegible] ವಾರ್ಶಾ ಗಡಿಯಲ್ಲಿ ಯುದ್ಧಮಾಡುತ್ತಿರುವಾಗ [illegible] ಹೋದನು

[illegible]



ಪೋಲೆಂಡನ್ನು ಆಕ್ರಮಿಸಿದ ರಷ್ಯದ ಸೈನ್ಯ

ನಿಯದಲ್ಲಿ ಮಂತ್ರಿಯ ಕೊಲೆಯ ನಿಮಿತ್ತ ಕೊಂದರು

ಇಪ್ಪತ್ತೆರಡನೆಯ ದಿನ

ಫ್ರೆಂಚರು ಪಶ್ಚಿಮ [illegible]ಯಲ್ಲಿ ಜರ್ಮನರೊಡನೆ ಭಯಂಕರ ಕಾದಾಡಿದರು

ಸೀಜ್‌ಫ್ರಿಡ್ ಲೈನಿನ ಗಡಿಯಲ್ಲಿ ಕಾದಾಟವು ಜೋರಾಗಿ ನಡೆಯಿತು

ಸೀಜ್ ಫ್ರೀಡ್ ಲೈನಿನಲ್ಲಿರುವ ಹೆಚ್ಚು ಜನರು ಈಗ ಹವಾಮಾನವು ಕೆಟ್ಟದರಿಂದ ಅಸ್ವಸ್ಥರಾಗಿ ಕಾದಾಡಲು ಅಶಕ್ತರಾಗಿರುವರೆಂದು [illegible] ಬಂತು

ರಷ್ಯದ ಸೈನ್ಯವು ಪೋಲೆಂಡಿನ [illegible] ಭಾಗವನ್ನು ಆಕ್ರಮಿಸಿತು ಪೋಲೆಂಡನ್ನು ರಷ್ಯದ ಪ್ರಾಂತವಾಗಿ ಮಾರ್ಪಡಿಸುವ ಕಾರ್ಯವು ಭರದಿಂದ ನಡೆಯಿತು [illegible]೦೦೦೦ ಜನರನ್ನು [illegible] ಸೆರೆಹಿಡಿದರು

ಇಟಲಿಯ ವಾರ್ತೆಯಂತೆ ಮುಸ[illegible] ತನ್ನ [illegible] ಯನ್ನು ವ್ಯಕ್ತಪಡಿಸಿದನು

ರುಮೇನಿಯದ ಪ್ರಧಾನ ಮಂತ್ರಿಯ ಕೊಲೆಗೆ [illegible] ಕಾರಣವೆಂದು ಜರ್ಮನಿಯು ಹೇಳಿತು

ಇಪ್ಪತ್ತಮೂರನೆಯ ದಿನ

[illegible]ಂಡನ್ನು ಜರ್ಮನ್ [illegible] ವಿಭಜನೆ ಮಾಡಿಕೊಳ್ಳುವ ಯೋಚನೆ [illegible] ದುರ್ನೀತಿಯ ಕೆಲಸವೆಂದು ಫ್ರೆಂಚ್ ಬ್ರಿಟಿಷ್ ಸರಕಾರಗಳು ಹೇಳಿದುವು

ಪೋಲೆಂಡಿನಲ್ಲಿ ಆಕ್ರಮಿಸಿದ ಸ್ಥಳದಿಂದ ಜರ್ಮನ್ ಸೈನ್ಯಗಳು ಹಿಂದಕ್ಕೆ ಅಟ್ಟಲ್ಪಟ್ಟವು

ವಾರ್ಶೋ ನಗರಕ್ಕೆ ಜರ್ಮನರು ನಿರ್ದಯರಾಗಿ ಬಾಂಬಿಕ್ಕಿ ೧೮೦೦ ಮಂದಿ ನಾಗರಿಕರನ್ನು ಕೊಂದರು

ರಷ್ಯದ ರಾಯಭಾರಿಯು ಲಾರ್ಡ್ ಹೇಲಿಫಾಕ್ಸರ ಭೇಟಿ ಮಾಡಿದನು

ಮುಸಲೀನಿಯು ರಾಷ್ಟ್ರಗಳ ರಾಜನೀತಿ [illegible] ಬೇಕೆಂದೂ ತಾನು ತಟಸ್ಥನಾಗಿರುವೆನೆಂದೂ ಹೇಳಿದನು

ಯುದ್ಧವು ಆಗುವ ಸಂಭವದಲ್ಲಿ ಪ್ರಧಾನ ಯುದ್ಧ ಸಮಿತಿಯಲ್ಲಿ ಎಲ್ಲರೂ ಭಾರತೀಯರೇ ಇರಬೇಕೆಂದೂ ಯುದ್ಧಕಾಲದಲ್ಲಿ ಒಂದು ನ್ಯಾಶನಲ್ ಡೈರೆಕ್ಟರೇಟ್‌ನ್ನು ವೈಸರಾಯರ ಕಾಂಗ್ರೆಸು ಮುಸ್ಲಿಂ ಲೀಗು ಮತ್ತು ನರೇಂದ್ರರ ಕೂಟದಿಂದ ಮಾಡಬೇಕೆಂದು ಡಾ ಸಿ ಆರ್ ರೆಡ್ಡಿಯವರ ಹೇಳಿದರು

ಶ್ರೀ ಸಿ ರಾಜಗೋಪಾಲಾಚಾರ್ಯರ ಪೋಲರ [illegible] ತಂತ್ರ ಪ್ರೇಮವ [illegible] ಕೊಂಡಾಡಿ ಮಾತಾಡಿದರು

ಪಂಜಾಬಿನ [illegible] ಗವರ್ನರರಾದ ಲಾರ್ಡ್ ಹೈಲಿಯವರ ಭಾರತವು ಬ್ರಿಟನಿಗೆ ಶರ್ತವಿಲ್ಲದೆ ಸಹಾಯ ಕೊಡಬೇಕೆಂದು ಗಾಂಧಿಜಿಯವರ ಅಭಿಪ್ರಾಯವನ್ನು [illegible] ಮಾತನಾಡಿದರು [illegible] ಭಾರತದಿಂದ ೧೫೦೦೦೦ ಜನ ೧೫೦೦೦೦೦ ಟನ್ ಸಾಮಗ್ರಿ [illegible] ೧೬೦೦೦೦೦೦೦ ಹವನ [illegible] ಸಹಾಯವಾಗಿದೆಯೆಂದೂ ಹೇಳಿದರು

ಅನೇಕ ರಾಜರು ತಮ್ಮ ವೈಯುಕ್ತಿಕ ಸಹಾಯವನ್ನು ಸೂಚಿಸಿದರು

ಮುಸ್ಲಿಂ ಲೀಗ ವರ್ಕಿಂಗ್ ಕಮಿಟಿಯು ಯುದ್ಧದ ಬಗ್ಗೆ [illegible] ಮಾಡುತ್ತಾ ಫೆಡರೇಶನನ್ನು ಮುಂದುವರಿಸಿದ [illegible] ಸಂಕ್ಷೇಪ [illegible] ಕಾಂಗ್ರೆಸ [illegible] ಮುಸಲ್ಮಾನರಿಗಾಗುವ [illegible]ಯನ್ನು ಪರಿಹರಿಸಿದರೆ ಮುಸ್ಲಿಂ [illegible] ಸಹಾಯ ಮಾಡ [illegible] ಹೇಳಿತು

ಕಾಂಗ್ರೆಸ ಪ್ರಾಂತಗಳಲ್ಲಿ [illegible] ಇಂಡಿಯಾ [illegible] ಬೇಕಾದರೆ ಪ್ರಾಂತದ ಸರಕಾರದ [illegible]ಯನ್ನು ಗವರ್ನರರು ಕೇಳಬೇಕೆಂದು [illegible] ಕಾಂಗ್ರೆಸು ಯುದ್ಧ ಸಮಿತಿಯು ಪ್ರಕಟಿಸಿತು

ಕಾಶಿಯಲ್ಲಿ ವಿಶ್ವವಿದ್ಯಾಲಯದ ಸಭೆಯು ಪಂಡಿತ ಮಾಲವ್ಯರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳಿಗಾಗಿ ಜಯವನ್ನು ಆಶಂಸಿಸಿ ಈ ತತ್ವವನ್ನು ಬ್ರಿಟನು ಭಾರತಕ್ಕೂ ಅನ್ವಯಿಸುವಂತೆ ಮಾಡಬೇಕೆಂದು ನಿರ್ಣಯ ಮಾಡಿತು

ಗಾಂಧಿಜಿಯವರ ಆಮಂತ್ರಣದಂತೆ ರಾಜಗೋಪಾಲಾಚಾರ್ಯರು ವಾರ್ಧಾಕ್ಕೆ ತೆರಳಿದರು

ಜರ್ಮನಿಯೊಡನೆ ರಾಜಿಮಾಡುವದು ಸಾಧ್ಯವಿಲ್ಲವೆಂದು ಬ್ರಿಟನು ಫ್ರಾನ್ಸುಗಳು ಉತ್ತರ ಕೊಟ್ಟವು

ಜಲಾಂತರ್ಯಾಮಿ ನಾವೆಯ ಬಡಿತದಿಂದ ಬ್ರಿಟಿಷರ ಹಡಗವೊಂದು ಮುಳುಗಿತು

ಡಾ ಗೋಬೆಲ್ಸನು ಜರ್ಮನದ ಪೋಲೆಂಡಿನ ಕುರಿತು ಭಾಷಣಮಾಡಿದನು

ಪಶ್ಚಿಮ ರಣರಂಗದಲ್ಲಿ ಜರ್ಮನಿಯು ಕಾದಾಡಿತು ಫ್ರೆಂಚರ ಎದೆ ಸಾಗಿ ಹೋರಾಡಿದರು

ಟರ್ಕಿಯು ಮತ್ತು ರಷ್ಯಗಳೊಳಗೆ ವಾಣಿಜ್ಯ ಒಪ್ಪಂದವಾಗುವ ವಾರ್ತೆ ಬಂತು

ಜರ್ಮನಿಯು ಬಾಂಬುಗಳಿಂದ ವಾರ್ಶೋ ನಗರದ ಮನೆಗಳೆಲ್ಲಾ ಬೆಂಕಿಯಿಂದ ದಹಿಸಿದುವು

ಈ ವಾರದಲ್ಲಿ ಹಿಟ್ಲರನು ಪಶ್ಚಿಮ ರಣರಂಗಕ್ಕೆ ಬರುವುದಾಗಿ ತಿಳಿಯಿತು

ತಿರಿಗಿ ಒಮ್ಮೆ ಗಾಂಧಿಜಿ-ವೈಸರಾಯಿ ಭೇಟಿ!

ರಾಷ್ಟ್ರೀಯ ಸೈನ್ಯದಳವಾಗಬೇಕು

ಪಂಡಿತ ನೆಹರುಗಳ ಸೂಚನೆ

ವಾರ್ಧಾದಲ್ಲಿ ರಾಜಾಜಿಯವರು

ಭಾರತಕ್ಕೆ ಡೊಮಿನಿಯನ್ ಸ್ಟೇಟ್ ದೊರಕುವುದೆ?

[illegible] ತನ್ನ ಕಾರ್ಯ[illegible] ಕಾರ್ಯಕ್ಕೆ [illegible] ದಲ್ಲಿ ಸೇರಿತು

ಸುಪ್ರಸಿದ್ಧ ಪ್ರಧಾನ ಮಂತ್ರಿ ರಾಜಾಜಿಯವರು ವಾರ್ಧಾಕ್ಕೆ ಬಂದು ಅಲ್ಲಿ ರಾಷ್ಟ್ರಪತಿ ಗಾಂಧಿ ಮೊದಲಾದವರೊಡನೆ [illegible] ಸಿದರು

ಸೀಜ್ ಫ್ರೀಡ್ [illegible]

[illegible] ನಮ್ಮ ಹವು ನಿಲ್ಲಿಸ[illegible] ವು [illegible] ಇಂಗ್ಲೆಂಡ್ ದಿವಾನರನ್ನು ತೆಗೆದು ಭಾರತೀಯ ದಿವಾನರನ್ನು ನೇಮಿಸಬೇಕೆಂದು ಗಾಂಧಿಜಿಯವರು ಸೂಚಿಸಿದರು

ಬ್ರಿಟಿಷ್ ಸಮತಾವಾದೀ ಮುಖಂಡರಾದ [illegible] ಅಟ್ಲಿಯವರಿಗೆ ತಂತಿಯಿಡುತ್ತಾ ಶ್ರೀ ಜಯಪ್ರಕಾಶ ನಾರಾಯಣರು ಅವರ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಧ್ಯೇಯವನ್ನು [illegible] ತವಲ್ಲಿ ಬ್ರಿಟಿಷರ [illegible] ಯನ್ನು ಕೇಳಿದರು

ವೈಸರಾಯರು ಗಾಂಧಿಜಿಯವರನ್ನು ಆಮಂತ್ರಿಸಿದರು

ಶೇಗಾಂವಿನಲ್ಲಿ ರಾಜಗೋಪಾಲಾಚಾರಿ ಮೊದಲಾದವರು ಕಾಂಗ್ರೆಸಿನ ಯುದ್ಧ ನಿರ್ಧಾರದ ಕುರಿತು ಮಾತುಕತೆ ಮಾಡಿದರು

ಪ್ರಾಂತಿಕಾಂಗ್ರೆಸ ಶ್ರೀ ಪೃಥ್ವಿಸಿಂಗರ ಒಡನೆ ಗಡೆಯಾಯಿತು ಯುದ್ಧ [illegible] ಅವರು ಬಿಡುಗಡೆಯಾದ ಕೂಡಲೇ ಶೇಗಾಂವಿಗೆ ಬಂದು ಮಹಾತ್ಮರನ್ನು ಸಂದರ್ಶಿಸಿದರು

ಡಾ ಪಟ್ಟಾಭಿಯವರು ಸಾರ್ವಜನಿಕ ಭಾಷಣ ಮಾಡುತ್ತಾ ಗಾಂಧಿಜಿಯವರ ಜಯಂತಿಯ ವಾರದಲ್ಲಿ ಖಾದಿಯನ್ನು ತೆಕ್ಕೊಳ್ಳಬೇಕೆಂದೂ, ಗಾಂಧಿಜಿಯವರು ಜೀವಿಸಿದ್ದ ಕಾಲದಲ್ಲಿಯೇ ನಾವು ಜೀವಿಸುತ್ತಿರುವುದು ನಮ್ಮ ಭಾಗ್ಯವೆಂದೂ, ನಾವು ಇಂದು ಗಾಂಧಿಜಿಯವರನ್ನು ಆಶೋಂದು ಪ್ರೀತಿಸುತ್ತಿರುವಾಗ ಅವರ ಬೋಧನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಹಿಂದಾಗುವುದು ಧರ್ಮವಲ್ಲವೆಂದೂ ಅಖಿಲಭಾರತ ಚರಕಾಸಂಘದ ಖಾದಿಯನ್ನು ಪಡೆದು ಆ ಮೂಲಕ ಬಡಜನರ ಸೇವೆ ಮಾಡಬೇಕೆಂದು ಹೇಳಿದರು

ದಿವಂಗತರಾದ ಶ್ರೀ [illegible] ಹಾಯಿಕೋರ್ಟ್ [illegible] ಜಸ್ಟಿಸ್ [illegible] ಮಾಡಿಯವರು [illegible] ಕೆಟ್ಟ [illegible] ನಡೆಯುತ್ತಿದೆ

ರಾಜಗೋಪಾಲಾಚಾರ್ಯರು [illegible]ದಿಂದ [illegible]

ಸಂಯುಕ್ತ ಪ್ರಾಂತ ಕಾಂಗ್ರೆಸ ಕಮಿಟಿಯು [illegible]

[illegible] ಥಿ [illegible]

ಮೈಸೂರ ಕಾಂಗ್ರೆಸು [illegible] ಶ್ರೀ [illegible] ಮೊದಲಿಗರನ್ನು ಬಂಧಿಸಿ ಶಿಕ್ಷಿಸಿದರು

ಯುದ್ಧದ ಕುರಿತು [illegible] ದೇಶ [illegible] ವಿಶೇಷ [illegible] ಬೇಕೆಂದೂ [illegible] ಹೇಳಿದ

[illegible] ವಿದ್ಯಾರ್ಥಿ [illegible] ಭಾಷಣ ಮಾಡುತ್ತಾ [illegible] ವೇದಗಳನ್ನು ಮುಂದಿಡಲು [illegible] ಬೇಕಾ [illegible] ಹೇಳಿದರು

[illegible] ಗಾಂಧಿ [illegible] ದು ಸಂಗತಿಗಳಲ್ಲಿ [illegible] ದ್ದಾರೆ

ಮಹಾತ್ಮಜಿಯವರು ವೈಸರಾಯರ ಆಮಂತ್ರಣದಂತೆ ಸಿಮ್ಲಾಕ್ಕೆ ತೆರಳುವ [illegible] ಜಿಯವರೊಡನೆ ಮಹಾದೇವ [illegible] ಕ [illegible] ಉನ್ನತ [illegible]

ವಾಯವ್ಯಪ್ರಾಂತದ ಮಂತ್ರಿ ಮಂಡಲವು [illegible] ಪ್ರಪತಿ ಮತ್ತು ಸರ್ದಾರ ಪಟೇಲ [illegible]

ಕೋಣಪುರದ [illegible] ಸಭೆಯವರು ವಿಶ್ವವಿದ್ಯಾಲಯದ [illegible] ವಿಷಾಗವು [illegible] ಸಾಗಿ ಮುಖರದ ಯೋಚನೆ ಮಾಡಿದ್ದಾರೆ

ಲಾಹೋರಿನಲ್ಲಿ, ರಾಷ್ಟ್ರೀಯ ಮುಸ್ಲಿಮರ ಸಮ್ಮೇಳನವೊಂದು ಜರುಗಿ, ಅದರಲ್ಲಿ ಮುಸ್ಲಿಂ ಲೀಗಿನ ಠರಾವನ್ನು [illegible] ಯಿತು

ಹೊಸ ವಾರ್ತೆ

ಪಶ್ಚಿಮ ರಣಭೂಮಿಯಲ್ಲಿ [illegible] ಸೀಜ್‌ಫ್ರಿಡ್ [illegible] ಬಿಟ್ಟ

★

ಗಾಂಧಿಜಿಯವರು [illegible] ವೈಸರಾಯರನ್ನು ಸಂದರ್ಶಿಸಿದರು [illegible] ಫಲಿತಾಂಶವೇ [illegible]

★

ಜರ್ಮನಿಯು [illegible] ಫ್ರೆಂಚರು [illegible]

★

ಪಂಡಿತ ನೆಹರುಗಳು ರಾಷ್ಟ್ರೀಯ ಸೈನ್ಯವನ್ನು ಭಾರತದಲ್ಲಿ [illegible] ಬೇಕೆಂದೂ [illegible] ಹೇಳಿದರು

★

[illegible] ಸಹಾಯವನ್ನು [illegible]

★

[illegible] ಜರ್ಮನಿಯು [illegible]

★

ಜರ್ಮನ್ [illegible] ಕಡೆಗೆ [illegible]

[illegible] ಭಾರತವು ಸ್ವಾತಂತ್ರ್ಯವನ್ನು [illegible] ಹೇಳಿದ

★

ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ [illegible] ವನ್ನು ಬ್ರಿಟಿಷ್ ಸರಕಾರವು [illegible] ಇಂಗ್ಲೆಂಡು ಮತ್ತು ಹಿಂದೂದೇಶಗಳಲ್ಲಿ [illegible] ವಾರ್ತೆ [illegible]

★

ವೈಸರಾಯ [illegible] ಹಿಂದೂ [illegible] ಕಾಂಗ್ರೆಸು ಮತ್ತು ಮುಸ್ಲಿಂ ಲೀಗ [illegible]

★

[illegible] ಮುಂದುವರಿದುದು] [illegible] ನಮಗೆ [illegible] ಸಹಾಯ [illegible] ಸಾಧ್ಯವಿಲ್ಲ [illegible] ಎಂದು [illegible] ಇಂದಿನ ಈ ಸಹಾಯವು ಮುಂದುವರಿಯುತ್ತದೆ [illegible] ನಮ್ಮ ಆರ್ಥಿಕ [illegible] ಸಹಾಯ [illegible] ಹಿಂಜರಿಯಲಾರದೆಂದು ನಾನು ನಂಬುತ್ತೇನೆ"

ಸಹನೆ ನಿರ್ಧಾರಗಳಿಂದ ಚೈನ ಕಾದಾಡುತ್ತಿದೆ

ನೆಹರುಗಳ ವಿವರಣೆ

ಚೈನ ಭಾರತ ಬಾಂಧವ್ಯ — ನಾನು ರಣರಂಗವನ್ನು ಕಂಡೆ

ಭಾರತ ಬೆಂಬಲ ಕೊಡಬೇಕು

"ಎರಡು ವರ್ಷಗಳ ತನಕ ಯುದ್ಧ ನಡೆದು ಬಂದುದರಿಂದ ಚೈನದ ಜನರು ಬಹಳ ಆಯಾಸಗೊಂಡಿರಬೇಕೆಂದು ತಿಳಿಯುವುದು ಸಂಭವನೀಯವಾಗಿದೆ. ಆದರೆ, ಈ ಯುದ್ಧದ ಆಯಾಸವನ್ನಾದರೂ ಅವರು ಎಷ್ಟು ಸಹನೆಯಿಂದ ತಡೆಯುತ್ತಿರುವರೆಂದು ತಿಳಿಯುವಾಗ ಆಶ್ಚರ್ಯವಾಗುವುದು. ನನಗೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಹೊಳೆದ ವಿಷಯವೆಂದರೆ, ಅವರ ಶಾಂತತೆ ಮತ್ತು ನಿರ್ಧಾರ ಇವುಗಳು. ಮಾರ್ಶಲ್ ಚಿಯಾಂಗ್ ಕೈಶೇಕರು ಇವರು ಈ ಧೈರ್ಯ ನಿರ್ಧಾರಗಳ ಮೂರ್ತಿಯಾಗಿದ್ದಾರೆ." ಹೀಗೆಂದು ತನ್ನ ಚೈನದ ವಿಜಯ ಯಾತ್ರೆಯ ಕುರಿತು ಪಂಡಿತ ನೆಹರುಗಳು ಅಭಿಪ್ರಾಯಪಿತ್ತರು.

"ನಾನು ಚೈನದ ಬಹಳ ಸ್ವಲ್ಪ ಭಾಗವನ್ನು ಮಾತ್ರ ನೋಡಿದ್ದೇನೆ. ಆದರೆ, ನಾನು ಚೈನದ ಯುದ್ಧದ ಪ್ರಧಾನ ಪಟ್ಟಣದಲ್ಲಿ ಇದ್ದೆ. ಅಲ್ಲಿ ಚೈನದ ಎಲ್ಲಾ ಮುಖ್ಯ ಧುರೀಣರನ್ನು ನೋಡಿದ್ದೇನೆ. ಅವರ ಸೈನ್ಯ ಶಿಕ್ಷಣ ಶಿಬಿರಗಳನ್ನು ಸಂದರ್ಶಿಸಿದೆ. ಸಾವಿರಾರು ಯುವಕರಿಗೆ ಅಲ್ಲಿ ಸೈನ್ಯ ಮತ್ತು ಶಿಕ್ಷಣಗಳು ಕೊಡಲ್ಪಡುತ್ತವೆ. ರಾಜಕೀಯ ರೀತಿಯಿಂದ ಸೈನ್ಯ ಶಿಕ್ಷಣವನ್ನು ಪಡೆದವರನ್ನು ಸೈನ್ಯಕ್ಕೆ ಕಳುಹಿಸುವರು.

'ನಾನು ಅನಾಥಾಲಯಗಳನ್ನು ಸಂದರ್ಶಿಸಿದೆ, ಶಾಲೆ, ಕಾರ್ಖಾನೆ, ವಿದ್ಯಾರ್ಥಿ ಶಿಬಿರ ಮತ್ತು ವಿಶ್ವವಿದ್ಯಾಲಯಗಳನ್ನು ನೋಡಿದೆ. ಕೆಲವು ಉತ್ತರದ ವಿಶ್ವವಿದ್ಯಾನಿಲಯಗಳನ್ನು ದಕ್ಷಿಣಕ್ಕೆ ಸಾಗಿಸಿದ್ದಾರೆ. ಸಾವಿರಾರು ವಿದ್ಯಾರ್ಥಿಗಳೊಡನೆ, ಅವರ ಪ್ರೊಫೆಸರರನ್ನೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಿದ ವಿಷಯವು ನಿಜವಾಗಿಯೂ ಅದ್ಭುತದ ಕಾರ್ಯವೇ ಆಗಿದೆ.

ಪ್ರಾಂತಗಳ ಅಭಿವೃದ್ಧಿ

"ಈ ಯುದ್ಧವು ಚೈನವನ್ನು ಭೌಗೋಳಿಕ ರೀತಿಯಿಂದ ಭಾರತಕ್ಕೆ ಸಮೀಪವೆಳೆದಿದೆ. ಅದರ ಅಪ್ರಾಗತಿಕವಾಗಿದ್ದ ಪಶ್ಚಿಮ ಪ್ರಾಂತಗಳು ಇಂದು ಅಭಿವೃದ್ಧಿಗೊಂಡಿವೆ. ಇಂತಹ ಪ್ರಾಂತಗಳಲ್ಲಿ ಯೇ ಈಗ, ಚೈನದ ಉದ್ಯೋಗ ಶಾಲೆ, ಮತ್ತು ಆಡಳಿತ ಇವುಗಳು ನಡೆಯುತ್ತಿವೆ. ಆದುದರಿಂದ ಭಾರತ ಮತ್ತು ಚೈನಗಳೊಳಗೆ ನಿಕಟ ಸಂಬಂಧವು ಬೆಳೆಯಲು ಒಳ್ಳೆಯ ಅನುಕೂಲವಾಗಿದೆ. ಹಿಂದೆ ಚೈನಕ್ಕೆ ಹೋಗುತ್ತಿದ್ದವರು ಹೊಂಕೊಂಗ್, ಷಾಂಗಾಯಿ ಅಥವಾ ಟಿನ್‌ಸ್ಟಿನ್ ಬಂದರುಗಳನ್ನು ಮೊದಲಾಗಿ ಸಂದರ್ಶಿಸುವುದಿತ್ತು. ಆದರೆ ಈಗ ಬರ್ಮಾದ ಮೂಲಕ ಹೋಗುವುದು ಬಹಳ ಸುಲಭವಾಗಿದೆ. ಕಲ್ಕತ್ತೆಯಿಂದ ಚುಂಕಿಂಗಿಗೆ ಸೀದಾ ವಾಯು ಮಾರ್ಗವಿದ್ದರೆ, ವಿಮಾನದಿಂದ ಒಂದೇ ದಿವಸದಲ್ಲಿ ಚೈನಕ್ಕೆ ಹೋಗಬಹುದು. ಇವೆಲ್ಲವೂ ಚೈನದ ಪ್ರಾಕೃತಿಕ ಪರಿಸ್ಥಿತಿಯಲ್ಲಿಯೂ ಬಹು ವ್ಯತ್ಯಾಸವನ್ನು ಉಂಟುಮಾಡಿವೆ. ಚೈನವು ಇಂದು ಭಾರತದ ಕಡೆಗೆ ಹೆಚ್ಚು ಜಿಜ್ಞಾಸೆಯಿಂದ ನೋಡುವಂತಾಗಿದೆ. ನಮ್ಮ ಸಂಬಂಧವು ಹೆಚ್ಚು ಹೆಚ್ಚಾಗಿ ಬೆಳೆದೀತೆಂದು ನಾನು ನಂಬುತ್ತೇನೆ.

ಭಾರತ–ಚೈನ ಬಾಂಧವ್ಯ

"ಚೈನದ ಜನರು ಭಾರತದೊಡನೆ, ಸಾಂಸ್ಕೃತಿಕ, ಶೈಕ್ಷಣಿಕ, ಕಲಾ ವಿಜ್ಞಾನಗಳ ರೂಪದಲ್ಲಿ ಹೀಗೆ ಸರ್ವ ವಿಧದಿಂದಲೂ ಬಾಂಧವ್ಯವನ್ನು ಬೆಳೆಸಲು ಹಾರೈಸುತ್ತಾರೆ. ಸ್ತ್ರೀಯರ ಸಂಸ್ಥೆ ಯುವಕ ಸಂಘಗಳೊಡನೆಯೂ ಸಂಬಂಧವಿಟ್ಟುಕೊಳ್ಳಲು ಇಚ್ಛಿಸುತ್ತಾರೆ. ಚೈನದ ಪತ್ರಿಕೋದ್ಯಮಿಗಳೊಡನೆ ಸಂಬಂಧವಿಟ್ಟುಕೊಳ್ಳಬೇಕೆಂದು ಬಯಸುತ್ತಾರೆ. ಈ ವಿಧದ ಹೃದಯ ಭಾವನೆಯು ದಿನದಿಂದ ದಿನಕ್ಕೆ ಬೆಳೆದು ಉಭಯ ರಾಷ್ಟ್ರಗಳ ಕ್ಷೇಮವು ಉಂಟಾಗಬಹುದೆಂದು ನಾನು ಹಾರೈಸುತ್ತೇನೆ.

'ಅಲ್ಲಿನ ವಿಶ್ವವಿದ್ಯಾಲಯಗಳು ಪ್ರೊಫೆಸರರನ್ನೂ ವಿದ್ಯಾರ್ಥಿಗಳನ್ನೂ ವಿನಿಮಯ ಮಾಡಲು ಬಯಸುತ್ತವೆ. ಇಂದು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವು ಎಲ್ಲದಕ್ಕಿಂತಲೂ ಹೆಚ್ಚಾಗಿ ಅಮೇರಿಕದ ಪ್ರಭಾವವು ಚೈನದ ಮೇಲೆ ಬಲವಂತವಾಗಿ ಬೀರಿದ್ದರೂ, ಪೌರ್ವಾತ್ಯ ಸಂಸ್ಕೃತಿಗಳ ಬಗ್ಗೆ ಅವರ ಆದರವು ಬೆಳೆಯುತ್ತಿದೆ.

ಚೈನ ಮತ್ತು ಭಾರತವು ಒಂದಾಗುವುದು, ಕೇವಲ ಈ ಉಭಯ ರಾಷ್ಟ್ರಗಳ ಅಭ್ಯುದಯಕ್ಕಾಗಿ ಮಾತ್ರವಲ್ಲ, ಇದೀ ಜಗತ್ತಿನ ಕ್ಷೇಮಕ್ಕೆ ಎಂಬ ಭಾವನೆಯು ಅವರಲ್ಲಿ ಬಲವಂತವಾಗಿ ಇದೆ. ಈ ಉಭಯ ರಾಷ್ಟ್ರಗಳ ವಿಶಾಲವಾದ ಬುದ್ಧಿ, ಸಂಸ್ಕೃತಿ, ಉತ್ಪತ್ತಿಗಳು ಒಂದು ಕೂಡಿದಲ್ಲಿ ಜಗತ್ತಿಗೇ ಕ್ಷೇಮ ಉಂಟು.

ನೆಲ ಮಾಳಿಗೆಯಲ್ಲಿ

'ನಾನು ಐದು ವಿಮಾನ ಧಾಳಿಗಳನ್ನು ಕಂಡಿದ್ದೇನೆ. ನಾಲ್ಕು ಚುಂಕಿಂಗಿನಲ್ಲಿ, ಮತ್ತೊಂದು ಚೆಂಗ್ ಟಿನ್ನಿನಲ್ಲಿ. ನಾನು ರಾತ್ರಿಯಲ್ಲಿ ನೆಲ ಮಾಳಿಗೆಗೆ ಒಯ್ಯಲ್ಪಟ್ಟೆನು. ಜಪಾನ್ಯರ ವಿಮಾನ ಧಾಳಿಯ ಭಯವು ಇತ್ತು. ಆದರೆ ವಿಮಾನಗಳು ಬರಲಿಲ್ಲ. ಹೀಗೆ ವಿಮಾನಧಾಳಿಯನ್ನು ರಕ್ಷಿಸಲು ಮಾಡಿದ ನೆಲಮಾಳಿಗೆಗಳು ನಿಜವಾಗಿ ಬಹಳ ಬೇಸರದವುಗಳು. ಆದರೆ, ನನಗೆ ವಿಮಾನಧಾಳಿಯನ್ನು ಕಣ್ಣಾರೆ ಕಾಣುವ ಭಾಗ್ಯ ಒದಗಲಿಲ್ಲ. ಏಕೆಂದರೆ ನನ್ನ ಚೈನೀ ಮಿತ್ರರು; ನನ್ನ ರಕ್ಷಣೆಯ ವಿಷಯವಾಗಿ ಬಹಳ ಜಾಗ್ರತೆಯಿಂದ ಕಾಯುತ್ತಿದ್ದರು; ನಾನು ಹೊರಗೆ ಹೋಗಿ ನೋಡಲು ಅವರು ಬಿಡಲಿಲ್ಲ.

ರಣರಂಗವನ್ನು ಕಂಡೆ

'ಆದರೆ, ಒಂದುಸಲ ನಾನು ಚೈನಾ ಮತ್ತು ಜಪಾನು ವಿಮಾನಗಳ ಕಾದಾಟವನ್ನು ಕಂಡೆನು. ಒಂದು ಸಾಯಂಕಾಲ ಮಾರ್ಶಲ್ ಚಿಯಾಂಗ್ ಕೈಶೇಕರೊಡನೆ ನಾನು ಮಾತನಾಡುತ್ತಿರುವಾಗ ವಿಮಾನದಾಳಿಯ ಸುದ್ದಿ ಬಂತು. ನಾವು ಪತ್ಯೇಕ ನೆಲಮಾಳಿಗೆಗೆ ಹೋದೆವು. ಚಿಯಾಂಗ್ ಕೈಶೇಕರು, ಏನು ನಡೆಯುತ್ತಿದೆಯೆಂಬುದನ್ನು ನೋಡಲು ಆತುರಗೊಂಡಿದ್ದರು. ನಾನು ಅಲ್ಲಿರುವಾಗಲೆ, ಎರಡು ಮೂರು ಜಪಾನೀ ವಿಮಾನಗಳನ್ನು ಚೈನೀಯರು ಕೆಡಹಿದ್ದರು.

ನಮ್ಮ ವೈದ್ಯಕೀಯ ಸಹಾಯ

'ನಾವು ಇಲ್ಲಿಂದು ಕಳುಹಿಸಿದ ವೈದ್ಯಕೀಯ ಸಹಾಯದ ಕುರಿತು ಚೈನೀಯರು ತುಂಬಾ ಅಭಾರಿಗಳಾಗಿದ್ದಾರೆ. ಉತ್ತರ ಪಶ್ಚಿಮ ಭಾಗದಲ್ಲಿ ವೈದ್ಯಕೀಯ ಸಹಾಯವು ಕಡಿಮೆಯುದ್ದಲ್ಲಿ ಅವರು ಒಳ್ಳೆಯ ಉತ್ಸಾಹದಿಂದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರ ಪ್ರತ್ಯಕ್ಷ ಸಹಾಯಕ್ಕಿಂತಲೂ, ಚೈನೀಯರ ಧರ್ಮಯುದ್ಧದಲ್ಲಿ ಜಗತ್ತಿನ ಸಹಾನುಭೂತಿಯ ಮೂರ್ತಿ

(ಹನ್ನೊಂದನೆ ಪುಟವನ್ನು ನೋಡಿರಿ)



U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿ.

36,000 ರೂಪಾಯಿಗಳ ಬಹುಮಾನ!

ಎಲ್ಲಾ ಸರಿಯಾದ 18 ಉತ್ತರಗಳಿಗೆ ಹಂಚಲಾಗುವುದು.

ನಮ್ಮ ಮುದ್ರೆಹಾಕಿ ಇಟ್ಟ ಉತ್ತರದ ಯಾವುದಾದರೂ ಒಂದು ಪಂಕ್ತಿಗೆ ಸರಿಬೀಳುವ ಉತ್ತರ ಕಳುಹಿಸಿದವರಿಗೆ 20ರೂ.ಗಳು 50 ಕೊನ್ಸೊಲೇಷನ್ ಬಹುಮಾನಗಳೂ ನಮ್ಮ ಉತ್ತರದ ಮೊದಲನೇ ಎರಡು ಪಂಕ್ತಿಗಳಿಗೆ ಯಾರ ಉತ್ತರದ ಮೊದಲನೇ ಎರಡು ಪಂಕ್ತಿಗಳು ಸರಿಬೀಳುತ್ತವೋ ಅವರಿಗೆ 50 ರೂಪಾಯಿಗಳ ಬಹುಮಾನವನ್ನು ಖಂಡಿತ ಕೊಡಲಾಗುವುದು. ಹೆಚ್ಚು ಉತ್ತರಗಳನ್ನು ಕಳುಹಿಸಿದವರಿಗೆ 200ರೂಪಾಯಿಗಳ ಪ್ರತ್ಯೇಕ ಬಹುಮಾನ ಕೊಡಲಾಗುವುದು.

ಮೇಲೆ ಕಾಣುವ ಸಣ್ಣ ಚಚ್ಚೌಕದಲ್ಲಿ 6ರಿಂದ 21ರ ವರೆಗಿನ ಅಂಕೆಗಳನ್ನು ಬರೆಯಿರಿ. ಯಾವ ಪಂಕ್ತಿಯನ್ನು ಯಾ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕೂಡಿಸಿದರೆ 54 ಬರಬೇಕು. ಒಮ್ಮೆ ಉಪಯೋಗಿಸಿದ ಅಂಕೆಯನ್ನು ಇನ್ನೊಮ್ಮೆ ಉಪಯೋಗಿಸಕೂಡದು. ಉತ್ತರವನು ಕಳುಹಿಸುವ ಕಡೇ ತಾರೀಕು 10-10-39 ಫಲಿತಾಂಶ ತಾ. 18-10-39. ಪ್ರವೇಶಹಾಸಲು ಒಂದು ಉತ್ತರಕ್ಕೆ ರೂ. 1, ಮೂರು ಉತ್ತರಗಳಿಗೆ ರೂ. 2, ಎಂಟು ಉತ್ತರಗಳ ಸೆಟ್ಟಿಗೆ ರೂ.5 ನಿಯಮ: ಮೇಲೆ ಕಾಣಿಸಿದ ಪ್ರವೇಶಹಾಸಲಿನೊಂದಿಗೆ ಎಷ್ಟೂ ಉತ್ತರಗಳನ್ನೂ ಖಾಲಿ ಕಾಗದದ ಮೇಲೆ ಬರೆದು ಕಳುಹಿಸಬಹುದು. ಹಣವನ್ನು ಮನಿಯಾರ್ಡರ ಯಾ ಪೋಸ್ಟಲ್ ಆರ್ಡರು ದ್ವಾರಾ ಕಳುಹಿಸಬೇಕು. ಹಣ ಸಂಗ್ರಹವಾದುದನ್ನು ನಿರೀಕ್ಷಿಸಿ ಇನಾಮುಗಳನ್ನು ವ್ಯತ್ಯಾಸಮಾಡಬಹುದು. ಆದರೆ ಮುಂಬ್ಬಾಯಿ ಪ್ರಧಾನ ಬೇಂಕೊಂದರಲ್ಲಿ ಭದ್ರವಾಗಿರಿಸಿದ ಉತ್ತರವನು ಹೋಲುವ ಉತ್ತರಗಳಿಗೆ ಕಡಿಮೆ ಎಂದರೆ 2000ರೂ.ಗಳ ಬಹುಮಾನವು ಗ್ಯಾರಂಟಿಯಾಗಿ ಕೊಡಲಾಗುವುದು. ಉತ್ತರಗಳಿಗೆ ನಿಮ್ಮ ಹೆಸರು ಬರೆದ ಅಂಚೇ ಕವರೊಂದನ್ನು ಕಳುಹಿಸಿರಿ. ಎಲ್ಲಾ ವಿಷಯಗಳಲ್ಲಿಯೂ ಮನೇಜರರ ತೀರ್ಮಾನವೇ ನ್ಯಾಯಬದ್ಧವೂ ಕಡೆಯದ್ದೂ ಆಗಿದೆ.

ಹಿಂದಿನ ಒಗಟಿನ 50ರ ಮೊಹರುಮಾಡಿದ ಉತ್ತರ.

1ನೇ ಸಾಲು	5	16	10	10
2ನೇ ,,	11	18	8	13
3ನೇ ,,	20	9	15	6
4ನೇ ,,	14	7	17	12

ಎಲ್ಲಾ ಉತ್ತರಗಳನ್ನು ಪ್ರವೇಶಹಾಸಲಿನೊಂದಿಗೆ ಈ ಕೆಳಗಿನ ಎಡ್ರೆಸಿಗೆ ಕಳುಹಿಸಿರಿ.

The Manager,
Presidency Commercial Syndicate,
Mumbadevi, Bombay 2.

ಜಗತ್ತಿನ ನವ ನಿರ್ಮಾಣದಲ್ಲಿ ಭಾರತಕ್ಕೆ ಗೌರವ ಬರಬೇಕು

ಯುದ್ಧದ ಕುರಿತು ನೆಹರುಗಳ ಹೇಳಿಕೆ

ನರೇಂದ್ರರ ವರ್ತನೆಯಲ್ಲಿ ಅರ್ಥವಿಲ್ಲ

ಭಾರತದ ಸ್ಥಾನಮಾನಗಳು ನಿರ್ಧಾರವಾಗಬೇಕು

ಅಲ್ಲಹಾಬಾದಿನಲ್ಲಿ ಸಾಧಾರಣ ಹತ್ತುಸಾವಿರ ಮಂದಿಗಿಂತ ಹೆಚ್ಚಿನ ಸಭಿಕರು ನೆರೆದಿದ್ದ ಸಭೆಯಲ್ಲಿ ಮಾತನಾಡುತ್ತಾ ಪಂಡಿತ ನೆಹರುಗಳು ಇಂದಿನ ಜಗತ್ತಿನ ಯುದ್ಧದ ವಿಷಯ, ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಹಾಗೂ ಭಾರತದ ಸಹಭಾಗದ ಕುರಿತು, ಈ ಮಹತ್ವದ ಈ ಕೆಲವು ವಿಷಯಗಳನ್ನು ಹೇಳಿದರು.

'ಇಂದು ಇಡೀ ಜಗತ್ತೇ ಕ್ರಾಂತಿಯ ವೇಗದಲ್ಲಿ ಪ್ರಬಲ ಮಾರ್ಪಾಡು ಹೊಂದುತ್ತಿದೆ. ನಾವು ಇಂದು, ಜಗತ್ತಿನ ರಾಜಕೀಯ, ಆರ್ಥಿಕ ಜಾಗೃತಿ ಗೊಂದಲಗಳ ಕುರಿತು ಮರೆತಿರಬಾರದು. ಇಂದಿನ ಈ ಘಟನೆಗಳೆಲ್ಲಾ ನಮಗಿಂತ ಬಹಳ ದೂರದಲ್ಲಿ ನಡೆಯುವವುಗಳೆಂದೂ ಅವುಗಳಿಂದ ನಮಗೆ ಪ್ರತ್ಯಕ್ಷ ಪರಿಣಾಮವಾಗುವದಿಲ್ಲವೆಂದೂ ನಾವು ತಿಳಿದಿದ್ದರೆ ತಪ್ಪು. ಕಾಂಗ್ರೆಸ್ಸಾದರೂ ತನ್ನ ವಿದೇಶೀಯ ಧೋರಣೆಯನ್ನು, ಕಳೆದ ಹದಿನೆಂಟು ವರ್ಷಗಳಿಂದ, ಕಡಿಮೆಯೆಂದರೆ ಗಯಾದ ಮಹಾಸಭೆಯ ಕಾಲದಿಂದಾದರೂ ಸ್ಪಷ್ಟೀಕರಿಸುತ್ತಾ ಬಂದಿದೆ. ನಮ್ಮ ಬೇರೆ ಬೇರೆ ನಿರ್ಣಯಗಳು ಜಗತ್ತಿನಲ್ಲಿ ಆಗುವ ಬೇರೆ ಬೇರೆ ಕ್ರಾಂತಿಗಳಿಗೆ ಅನುಗುಣವಾಗಿ ವ್ಯಕ್ತವಾಗಿದೆ.

ಹಿಟ್ಲರನ ಅಧಿಕಾರ ಪ್ರಾಬಲ್ಯ

'ಇಂಗ್ಲೆಂಡು ಅಂತರ್ಯುದ್ಧದಲ್ಲಿ ಹಿಟ್ಲರ್ ಮತ್ತು ಮುಸಲೀನಿಗಳ ಅಧಿಕಾರಾರೋಹಣದಿಂದ, ಇಂಗ್ಲೆಂಡು ಎಚ್ಚರಗೊಂಡಿದೆ. ಜೆಕೊಸ್ಲವೇಕಿಯವನ್ನು ಹಿಟ್ಲರನ ತುತ್ತಿಗೆ ಬಲಿಕೊಡುವ ಮ್ಯೂನಿಕ್ ಒಪ್ಪಂದದ ಸಂದರ್ಭದಲ್ಲಿ ಇಂಗ್ಲೆಂಡು ಮತ್ತು ಫ್ರಾನ್ಸುಗಳು ರಶ್ಯವನ್ನು ಸಂಪೂರ್ಣ ಮರೆತು ಬಿಟ್ಟವು. ಬ್ರಿಟನು ಫ್ರಾನ್ಸುಗಳ ಶಾಂತಿ ಸಾಧನೆಯ ತತ್ವವೇ ಹಿಟ್ಲರನಿಗೆ ಅಧಿಕಾರ ಪ್ರಾಬಲ್ಯಗೊಳಿಸಲು ಕಾರಣವಾಯಿತು. ಆ ಕಾಲದಲ್ಲಿ ಇಂಗ್ಲೆಂಡು ಜರ್ಮನಿಯೊಡನೆ, ವರ್ಸೇಲ್ಸಿನ ಒಪ್ಪಂದಕ್ಕೆ ತೀರಾ ವಿರುದ್ಧವಾಗಿ ಫ್ರಾನ್ಸಿಗೆ ಅನ್ಯಾಯವಾಗಿ ಒಂದು ನೌಕಾ ಒಪ್ಪಂದವನ್ನು ಮಾಡಿಕೊಂಡಿತು. ಇದು ಫ್ರಾನ್ಸನ್ನು ಎಚ್ಚರಗೊಳಿಸುವುದರಿಂದ, ಇಟಲಿಯೊಡನೆ ಅದು ಒಂದು ಒಪ್ಪಂದ ಮಾಡಿಕೊಂಡು, ಇಟಲಿಯು ಅಬಿಸೀನಿಯವನ್ನು ಆಕ್ರಮಿಸುವುದರಲ್ಲಿ, ತಾನು ತಟಸ್ಥವಾಗಿರುವೆನೆಂದು ಭರವಸೆ ಕೊಟ್ಟಿತು. ಕಡೆಗೆ, ಹೀಗೆ ಹಿಟ್ಲರ್ ಮುಸಲೀನಿಗಳನ್ನು ಬಲಗೊಳಿಸಬಿಟ್ಟು, ಕಡೆಗೆ ಎಚ್ಚತ್ತ ಇಂಗ್ಲೆಂಡು ಫ್ರಾನ್ಸುಗಳು ರಶ್ಯದೊಡನೆ ಒಪ್ಪಂದದ ಪ್ರಯತ್ನಕ್ಕೆ ಆರಂಭಿಸಿದುವು.

ರಶ್ಯಾ-ಜರ್ಮನ್ ಒಪ್ಪಂದ

'ರಶ್ಯ ಮತ್ತು ಜರ್ಮನಿಯು ಈಗ ಮಾಡಿಕೊಂಡಿದ್ದು ಅನ್ಯೋನ್ಯ ಕಲಹವಿಲ್ಲವೆಂಬ ರೀತಿಯ ಒಪ್ಪಂದವನ್ನು'. ಈ ಒಪ್ಪಂದವು ಬಹಳ ಬುದ್ಧಿವಂತಿಕೆಯದ್ದಾಗಿದೆ. ಇದರಿಂದ ಹಿಟ್ಲರನಿಗೆ ಒಂದು ಕಡೆಯ ಧಾಳಿಯು ತಪ್ಪಿದಂತೆ ಆಗಿದೆ. ಈ ಒಪ್ಪಂದವೇ ಯುದ್ಧವನ್ನು ತಂದಿತು ಎಂಬುದು ಮಾತ್ರ ಸ್ಪಷ್ಟ. ಈ ಒಪ್ಪಂದವಾಗದಿದ್ದರೂ ಕಡೆಗೆ ಯುದ್ಧವನ್ನು ತಪ್ಪಿಸುವುದಂತೂ ಸಾಧ್ಯವೇ ಇರಲಿಲ್ಲ.

ಪೋಲೆಂಡಿಗೆ ರಶ್ಯದ ಆಕ್ರಮಣ

ರಶ್ಯವು ಪೋಲೆಂಡನ್ನು ಆಕ್ರಮಣ ಮಾಡಿದ ವಿಷಯದ ಕಾರ್ಯ ಕಾರಣಗಳು ಇನ್ನೂ ಸ್ಪಷ್ಟವಾಗಿಲ್ಲ. ಹಿಟ್ಲರನು ಬಲಶಾಲಿಯಾಗುವುದನ್ನು ತಡೆಯಲು ರಶ್ಯವು ಈ ಮುಂಜಾಗ್ರತೆ ತೆಗೆದುಕೊಂಡಿದ್ದರೂ ಇರಬಹುದು. ನಿಜವಾಗಿ ಇದರ ವಿಷಯ ಯಾರೂ ಸ್ಪಷ್ಟ ಹೇಳಬಹುದಂತಿಲ್ಲ. ಇದರ ಸ್ಪಷ್ಟತೆಯನ್ನು ನಾವು ಮುಂದೆ ತಿಳಿಯುವೆವು.

ಅಮೇರಿಕವು ಬ್ರಿಟನಿಗೆ ಬೆಂಬಲ ಕೊಡುವುದು

'ಜರ್ಮನಿಗಿಂತ ಇಂದು ಇಂಗ್ಲೆಂಡು ಫ್ರಾನ್ಸುಗಳು ಬಲಶಾಲಿಯಾಗಿವೆ. ಪ್ರತ್ಯಕ್ಷವಾಗಿ ಅಮೇರಿಕವು ರಣರಂಗಕ್ಕಿಳಿಯದಿದ್ದರೂ, ಮುಂದಕ್ಕೆ ಯುದ್ಧ ಸಾಮಗ್ರಿ, ಆಹಾರ ಹಣಮೊದಲಾದವುಗಳಿಂದ ಅದು ಬ್ರಿಟನಿಗೆ ಸಹಾಯ ಒದಗಿಸಬಹುದು. ಇಂಗ್ಲೆಂಡು ಮತ್ತು ಫ್ರಾನ್ಸುಗಳು ದೀರ್ಘ ಕಾಲದ ಯುದ್ಧಕ್ಕೆ ಸಿದ್ಧತೆ ಮಾಡಿವೆ. ಜರ್ಮನಿಯು ಅಷ್ಟು ದೀರ್ಘಕಾಲ ಹೋರಾಡಲು ಸಿದ್ಧವಾಗಿಲ್ಲ. ಇಂತಹ ಸಂದರ್ಭದಲ್ಲಿ ರಶ್ಯವು ಏನು ಮಾಡಬಹುದೆಂಬುದು ಪ್ರಧಾನ ವಿಷಯವಾಗಿದೆ.

ಭಾರತವೂ ಯುದ್ಧವೂ

'ಯುದ್ಧಕ್ಕೆ ಹೋಗಬೇಕೋ ಬೇಡವೋ ಎಂಬ ವಿಷಯ ನಿರ್ಧರಿಸಲು ನಾವು ಸ್ವತಂತ್ರವುಳ್ಳವರಾಗಬೇಕೆಂದು ನಾವು ಹೇಳಿದ್ದೇವೆ. ನಮ್ಮ ಸಹಾನುಭೂತಿಯು ಹಿಟ್ಲರ್ ನಾಹಿಗೆ ಇಲ್ಲ, ಹಾಗೆಯೇ ನಾವು ಸಾಮ್ರಾಜ್ಯಶಾಹಿಗೆ ಬೆಂಬಲ ಕೊಡಲೂ ತಯಾರಾಗಿಲ್ಲ. ಭಾರತವು ಸ್ವತಂತ್ರವಿದ್ದರೆ ಯುದ್ಧಕ್ಕೆ ನಾವು ಕೂಡಲೇ ಇಳಿಯಲೂ, ಇಳಿಯದಿರಲೂ ಬಹುದಿತ್ತು' ಸ್ವಲ್ಪ ಸಮಯ ಕಳೆದು ಇಳಿಯಲೂ ಬಹುದಾಗಿತ್ತು. ಭಾರತದ ಸೈನ್ಯವನ್ನು ಹೊರಗಡೆ ಕಳುಹಿಸಿದಾಗ, ಸೆಂಟ್ರಲ್ ಎಸೆಂಬ್ಲಿಯ ಕಾಂಗ್ರೆಸು ಸದಸ್ಯರು ಎಸೆಂಬ್ಲಿಯ ಸಭೆಯಲ್ಲಿ ಸಹಕರಿಸಬಾರದಾಗಿ ಕಾಂಗ್ರೆಸು ಹೇಳಿದೆ. ಬ್ರಿಟನೊಡನೆ ನಮ್ಮ ಧೋರಣೆಯನ್ನು ನಾವು ಸ್ಪಷ್ಟಗೊಳಿಸಿದ್ದೇವೆ. ನಮ್ಮ ನಿರ್ಣಯವು ಪರಿಣಾಮಕಾರಿಯಾದೀತು. ನಾವು ಸಾಮ್ರಾಜ್ಯಶಾಹಿಗೆ ಬೆಂಬಲ ಕೊಡಲಾರೆವೆಂಬುದನ್ನು ಸಂಪೂರ್ಣ ಸ್ಪಷ್ಟಪಡಿಸಿದ್ದೇವೆ.

ನಮ್ಮನ್ನು ಸ್ವತಂತ್ರ ಜನರಾಗಿ ನೋಡಲಿಲ್ಲ

'ಯುದ್ಧವು ಆರಂಭವಾಗಲು, ಗವರ್ನಮೆಂಟ್ ಆಫ್ ಇಂಡಿಯಾ ಅಮೆಂಡ್‌ಮೆಂಟ್ ಆಕ್ಟ್ ಕೇವಲ ಹನ್ನೊಂದು ನಿಮಿಷಗಳಲ್ಲಿ ಜಾರಿಗೆ ಬಂದು, ನಿರ್ಣಯವಾಯಿತು. ಅದರ ಪರಿಣಾಮವು ಏನಾದೀತೆಂಬ ವಿಚಾರವೂ ಅವರು ಮಾಡಲಿಲ್ಲ. ಆರ್ಡಿನೆನ್ಸುಗಳು ಬಂದುವು. ಕಾನೂನುಗಳು ಜಾರಿಗೆ ಬಂದುದನ್ನು ನೋಡಿದಾಗ, ನಮ್ಮನ್ನು ಸ್ವತಂತ್ರ ಜನಾಂಗದವರೆಂಬ ಹಾಗೆ ಸರಕಾರವು ನೋಡುವುದಿಲ್ಲ.

ನರೇಂದ್ರರ ವರ್ತನೆ

'ನರೇಂದ್ರರು ತಮ್ಮ ರಾಜಭಕ್ತಿಯನ್ನು ತೋರಿಸಿದ್ದಾರೆ. ಅದೇನೂ ಆಶ್ಚರ್ಯದ ವಿಷಯವಲ್ಲ. ಆದರೆ, ಅವರು, ತಮ್ಮ ಸಂಸ್ಥಾನಗಳಲ್ಲಿಯೇ ಇಲ್ಲದಿರುವ, ಪ್ರಜಾಪ್ರಭುತ್ವ ತತ್ವದ ಪಾಲನೆಗಾಗಿ ತಾವು ಬ್ರಿಟನಿಗೆ ಸಹಾಯ ಕೊಡುವೆವು ಎಂದು ಹೇಳುವುದು ಆಶ್ಚರ್ಯವಾಗಿದೆ.

ನವನಿರ್ಮಾಣವಾಗಬೇಕು

'ಕೆಲವು ಕಾಂಗ್ರೆಸ್ ಕೆಲಸಗಾರರು, ಕೂಡಲೇ ನಮ್ಮ ನಿರ್ಣಯದಂತೆ ಕಾರ್ಯವನ್ನು ಮುಂದುವರಿಸಬೇಕೆಂದು ಹೇಳುತ್ತಾರೆ. ಆದರೆ, ಸಂಕಷ್ಟಗಳನ್ನು ನಾವಿದನ್ನು ಒಂದು ವಿಚಾರವಾಹಿನಿಯಾಗಿ ತಿಳಿಯಬಾರದು. ನಾವು ಇಂದಿನ ಈ ದುರ್ಘಟನೆಗಳನ್ನೆಲ್ಲಾ ಕೊನೆಗೊಳಿಸಿ, ಹೊಸ ರೀತಿಯಲ್ಲೇ ಜಗತ್ತಿನಲ್ಲಿ ನವನಿರ್ಮಾಣ ಮಾಡಲು ಯತ್ನವಾಗಬೇಕು. ಇಂದಿನ ಯುದ್ಧದ ಪರಿಣಾಮವು ಏನೇ ಆಗಲಿ ಮುಗಿದ ಮೇಲೆ ಲೋಕದ ನವನಿರ್ಮಾಣವಾಗುವುದು. ನಾವು ಈ ಸಂದರ್ಭದಲ್ಲಿ ಉದ್ವಿಗ್ನರಾಗಿ, ಜಗತ್ತಿನ ಪರಿಸ್ಥಿತಿಯಿಂದ, ಕಾರ್ಯದೂರದೃಷ್ಟಿ ಒದಗಿಸಬಾರದ ಯಾವುದೇ ಕೃತ್ಯವನ್ನೂ ಕೈಕೊಳ್ಳಬಾರದು.

ಕಾಂಗ್ರೆಸಿನ ನಿರ್ಧಾರ

''ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು, ಪ್ರಕಟನೆಯನ್ನು ಹೊರಡಿಸುವುದಕ್ಕಿಂತ ಮೊದಲು, ಈ ಎಲ್ಲಾ ವಿಷಯಗಳನ್ನು ಅವರು ಸುದೀರ್ಘ ವಿಚಾರಿಸಿದರು. ನೀವೆಲ್ಲರೂ ಇದನ್ನು ಚೆನ್ನಾಗಿ ಓದಿ, ಅನುಸರಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಂಗ್ಲೆಂಡು ಫ್ರಾನ್ಸುಗಳು ಪ್ರಜಾಪ್ರಭುತ್ವಕ್ಕಾಗಿ ಕಾದಾಡುವವುಗಳೆಂದು ಹೇಳುತ್ತವೆ. ನಾವು ಅರಣ್ಯ ನಿಯಮವು ಕೊನೆಗಾಣುವುದನ್ನು ನೋಡಲು ಬಯಸುವುದರೊಡನೆ, ಸಾಮ್ರಾಜ್ಯ ಶಾಹಿಯ ಕೊನೆಯ ಉಸಿರನ್ನು ನೋಡಲು ಆತುರ ಪಡುತ್ತೇವೆ. ನಮಗೆ ಸ್ವಾತಂತ್ರ್ಯವು ಸಿಗಬೇಕು. ಅಂತಹ ಸ್ವಾತಂತ್ರ್ಯ ಕೊಡುವಂತಹುದು ಬರಿಯ ಬಾಯಿ ಮಾತಾಗಿರದೆ, ಕಾರ್ಯತಃ ತೋರಬೇಕು. ನಾವು ಸ್ವತಂತ್ರ್ಯರಾಗಿದ್ದರೆ ಒಂದು ರಾಷ್ಟ್ರೀಯ ಸೈನ್ಯವನ್ನಾದರೂ ಸಿದ್ಧಗೊಳಿಸಬಹುದಿತ್ತು.

'ಕಳೆದ ಯುದ್ಧದ ಸಮಯದಲ್ಲಿ, ಇಂಗ್ಲೆಂಡು ಬಹುಶಃ ಬಯಸದಂತೆ, ನಮ್ಮ ದೇಶದ ಉದ್ಯೋಗ ಕೈಗಾರಿಕೆಗಳು ವಿಶೇಷ ಅಭಿವೃದ್ಧಿಗೊಂಡಿವೆ. ಈ ಸಲವೂ ನಮ್ಮ ದೇಶದ ಕೈಗಾರಿಕೆಯು ಇನ್ನಷ್ಟು ಅಭಿವೃದ್ಧಿ ಹೊಂದಬಹುದು.

'ಭಾರತವು ತನ್ನ ಸ್ವಂತ ವಿಷಯದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನ ನವನಿರ್ಮಾಣದಲ್ಲಿಯೂ ಸ್ವತಂತ್ರ ಅಭಿಪ್ರಾಯವನ್ನು ಹೇಳಲು ಅರ್ಹದವಾಗಬೇಕು. ನಾವು ಇಂದು ಗೌರವದ ಒಂದು ನಿರ್ಧಾರ ಮಾಡಿದ್ದೇವೆ. ಜಗತ್ತಿಗೆ ನಮ್ಮ ಗೌರವದ ಕಾರ್ಯವನ್ನು ತೋರಿಸಬೇಕು. ಜಗತ್ತಿನ ದೃಷ್ಟಿಯಲ್ಲಿ ನಾವು ಇಂದಿನ ಯೋಗ್ಯತೆಯನ್ನು ಪಡೆದವರಾಗಿದ್ದೇವೆ. ಜಗತ್ತೇ ಬದಲಾಗುತ್ತಿದ್ದರೂ ಭಾರತದಲ್ಲಿನ ಬ್ರಿಟಿಷ ಸರಕಾರದ ಪ್ರತಿನಿಧಿಗಳ ನೀತಿ ಮಾತ್ರ ಬದಲಾಗಲಿಲ್ಲವೆಂಬುದು ಆಶ್ಚರ್ಯದ ವಿಷಯವಾಗಿದೆ. ಜಗತ್ತಿನ ಸಂಭವಗಳನ್ನು ತಿಳಿದು ನಾವು ಗೌರವದಿಂದ ಕೆಲಸ ಮಾಡಬೇಕು.

ನಾವು ಬ್ರಿಟನ್ನಿಂದ ಬೇರೆಯಾಗಿ ಸ್ವತಂತ್ರರಾಗಬೇಕು. ಇದು ಒಮ್ಮೆಲೇ ಕೇವಲ ವ್ಯವಹಾರ ಮಾಡುವಂತಹುದಲ್ಲ. ಸ್ವಾತಂತ್ರ್ಯವು ವ್ಯವಹಾರಕ್ಕೂ ವ್ಯಕ್ತವಾಗಬೇಕು. ಇದಕ್ಕೆ ಸಾಧ್ಯವಿಲ್ಲವಾದರೆ, ಯುದ್ಧದಲ್ಲಿ ನಾವು ಸಹಾಯಕರಾಗುವುದೂ ಸಾಧ್ಯವಿಲ್ಲ.

ನಮ್ಮ ತಲೆಯ ಮೇಲೆ ನಡೆದಿದ್ದೇ ನಮಗೆ ಗೊತ್ತಿಲ್ಲ. ನಮ್ಮ ಬಿಟ್ಟರೆ ಭೇದಭಾವಗಳನ್ನು ಮರೆತು ಈಗ 'ಒಂದಾಗಿ' ರಾಜಕೀಯ ಪಕ್ಷಗಳ ಭೇದಗಳು ಮರೆತು ಹೋಗಲಿ! ಬ್ರಿಟನು ಇಂದು ಕೊನೆಗಾಣುತ್ತಿರುವ ಸಾಮ್ರಾಜ್ಯ ಶಾಹಿಯು. ಜರ್ಮನಿಯು ಹೊಸ ಮತ್ತು ಅಭಿವೃದ್ಧಿ ಹೊಂದುತ್ತಿರುವ ಸಾಮ್ರಾಜ್ಯ ಶಾಹಿಯು. ನಾವು ಇವೆರಡರಿಂದಲೂ ರಕ್ಷಣೆಗೊಂಡು ತಯಾರಾಗಬೇಕು. ಇದು ವರೆಗೆ ನಾವು ಪಡೆದ ಬಲವು ನಮ್ಮ ದಕ್ಷತೆ ಬಲಿದಾನಗಳಿಂದ ಮಾತ್ರ ಆಗಿದೆ'



ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಬಳಲಿಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವಿದ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟು ಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇಧವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.
ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ :: ಮದರಾಸು

ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

Wanted

Wanted one In person, two Organisers and Agents in South Kanara. Apply stating previous experience to

The Bombay Co-operative Insurance Society Ltd.,
Office for Mysore, Coorg and South Kanara
'Asiatic Building' Kempe Gowda Road, Bangalore city

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಸ್ವಾಮಿ ಅಭೇದಾನಂದರು

[ಒಂದು ಪುಣ್ಯ ಜೀವನ ಸ್ಮರಣೆ]

ರಾಮಕೃಷ್ಣ ಪರಮಹಂಸರ ಪ್ರಿಯ ಶಿಷ್ಯರು!
ಸ್ವಾಮಿ ವಿವೇಕಾನಂದರ ಒಡನಾಡಿಗಳು!
ಅಖಿಲ ಭಾರತವನ್ನು ಕಾಲ್ನಡೆಯಿಂದಲೇ ಸಂಚರಿಸಿದರು
ಯೂರೋಪುಖಂಡದಲ್ಲಿ ವಿಜಯಯಾತ್ರೆ ಮಾಡಿದರು

[ಶ್ರೀ ರಾಮಕೃಷ್ಣ ಪರಮಹಂಸರ ಅಮೋಘ ಧಾರ್ಮಿಕ ತತ್ವಗಳನ್ನು ವಿಶಾಲ ಜಗತ್ತಿಗೆ ಸಾರಿದ ಅವರ ಪ್ರತ್ಯಕ್ಷ ಶಿಷ್ಯರಲ್ಲಿ ಸ್ವಾಮಿ ವಿವೇಕಾನಂದರೂ, ಸ್ವಾಮಿ ಅಭೇದಾನಂದರೂ ಪ್ರಸಿದ್ಧರು! ಗುರುದೇವರ ಆಶೀರ್ವಾದವನ್ನು ಪಡೆದು ವಿವೇಕಾನಂದರ ಒಡನಾಟವನ್ನು ಹೊಂದಿ ಅಖಿಲ ಭಾರತದಲ್ಲಿ ತತ್ವಾನ್ವೇಷಣಕ್ಕಾಗಿ ತಿರಿಗಿ, ಹಿಮಾಲಯದ ಗುಹೆಯಲ್ಲಿ ಯೋಗನಿರತನಾಗಿ, ಕಡೆಗೆ ಯೂರೋಪಿನಲ್ಲಿ ೨೫ ವರ್ಷಗಳ ತನಕ ಧಾರ್ಮಿಕ ತತ್ವ ಪ್ರಸಾರ ಮಾಡಿದ್ದ ಪಾವನ ಜೀವಿಯಾದ, ಸ್ವಾಮಿ ಅಭೇದಾನಂದರು ಇಂದು ನಮ್ಮ ಕಣ್ಮರೆಯಾದರು!]



ಶ್ರೀ ರಾಮಕೃಷ್ಣ ಪರಮಹಂಸರು

೧೮೬೬ನೇ ಅಕ್ಟೋಬರ್ ೨ನೇ ತಾರೀಕು ಸ್ವಾಮಿ ಅಭೇದಾನಂದರವರು ಕಲ್ಕತ್ತಾದಲ್ಲಿ ಜನ್ಮಿಸಿದರು. ಇವರು ತತ್ವಶಾಸ್ತ್ರಜ್ಞರೂ ಮತ್ತು ಓರಿಯಂಟಲ್ ಸೆಮಿನರಿ ಸ್ಕೂಲಿನ ಇಂಗ್ಲೀಷ್ ಅಧ್ಯಾಪಕರೂ ಆಗಿದ್ದ ರಸಿಕಲಾಲ್ ಚಂದ್ರರವರ ಪುತ್ರರು. ೧೮ ವರ್ಷ ವಯಸ್ಸಿನಲ್ಲಿಯೇ ಸ್ವಾಮಿ ಅಭೇದಾನಂದಜಿಯವರು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ವಿಷಯ ಜಿಜ್ಞಾಸೆ

ಚಿಕ್ಕಂದಿನಿಂದಲೂ ಇವರು ಯಾವ ವಿಷಯವೇ ಆಗಲಿ ಅದು ಹೇಗೆ ಮತ್ತು ಅದು ಏಕೆ ಎಂಬುದನ್ನು ಅರಿಯಲು ಬಹಳ ಉತ್ಸುಕರಾಗಿದ್ದರು. ಶಂಕರಾಚಾರ್ಯರವರು ತತ್ವಶಾಸ್ತ್ರಜ್ಞರೆಂದೂ ಆಚಾರ್ಯ ಪುರುಷರೆಂದೂ ವಿಲ್‌ಸನ್‌ರವರ ಇತಿಹಾಸ ಪುಸ್ತಕದಲ್ಲಿ ಓದಿ ಅಭೇದಾನಂದಜಿಯವರು ಶಂಕರಾಚಾರ್ಯರನ್ನು ಪ್ರಶಂಸಿಸತೊಡಗಿದರು ಮತ್ತು ಅವರ ವಿಷಯವಾಗಿ ಹೆಚ್ಚು ಅರಿಯಲು ಪ್ರಯತ್ನಿಸತೊಡಗಿದರು

ಮುಗ್ಧಬೋಧ ಎಂಬ ಸಂಸ್ಕೃತ ವ್ಯಾಕರಣವನ್ನು ಸಂಪೂರ್ಣ ಕಂಠಪಾಠ ಮಾಡಿ ಸಂಸ್ಕೃತ ಭಾಷೆಯ ಮೇಲೆ ಸಂಪೂರ್ಣ ಪಾಂಡಿತ್ಯವನ್ನು ಸಂಪಾದಿಸಿದರು ಅವರಿಗೆ 'ಭಗವದ್ಗೀತಾ' ಪುಸ್ತಕವು ತಮ್ಮ ತಂದೆಯ ಕೊಠಡಿಯಲ್ಲಿ ಸಿಕ್ಕಿತು ಅದನ್ನು ತೆಗೆದುಕೊಂಡು ಅವರು ಓದುತ್ತಿದ್ದಾಗ ತಂದೆಯು 'ಭಗವದ್ಗೀತೆಯು ಹುಡುಗರಿಗಲ್ಲ, ಅದನ್ನು ಓದಿ ನೀನು ಹುಚ್ಚನಾಗುವೆ' ಎಂದರು

ಆದರೆ ಅದರಿಂದ ಅವರು ಓದುವುದನ್ನು ನಿಲ್ಲಿಸಲಿಲ್ಲ.

ತತ್ವಶಾಸ್ತ್ರದಲ್ಲಿ ಆಸಕ್ತಿ

ಪ್ರಸಿದ್ಧ ಹಿಂದೂ ತತ್ವಜ್ಞಾನಿಯಾದ ಪಂ॥ ಶಶಧರ ತರ್ಕಚೂಡಾಮಣಿ ಎಂಬವರು ಕಲ್ಕತ್ತಾದ ಆಲ್‌ಬರ್ಟ್ ಹಾಲ್‌ನಲ್ಲಿ ಅನೇಕ ಉಪನ್ಯಾಸಗಳನ್ನು ಮಾಡಿದರು ಹಿಂದೂ ತತ್ವಶಾಸ್ತ್ರದಲ್ಲಿರುವ ವಿವಿಧ ಸಿದ್ಧಾಂತಗಳನ್ನು ವಿವರಿಸಿದರು ಆಗ ಬಂಕಿಂಚಂದ್ರ ಚಾಟರ್ಜಿಯವರು ಈ ಉಪನ್ಯಾಸಗಳಿಗೆ ಅಧ್ಯಕ್ಷತೆ ವಹಿಸಿದ್ದರು. ಅಭೇದಾನಂದಜಿಯವರು ವೈಶೇಷಿಕ ಮತ್ತು ಸಾಂಖ್ಯ ದರ್ಶನಗಳ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಿದ್ದಾಗ ಬಂದರು. ಗ್ರೀಕ್ ತತ್ವಗಳಿಗೂ ಇವಕ್ಕೂ ಇದ್ದ ಸಾಮ್ಯ ರಸ್ಯವನ್ನು ಅಭೇದಾನಂದಜಿಯವರು ನೋಡಿದರು. ಈ ಉಪನ್ಯಾಸಗಳಿಂದ ಅಭೇದಾನಂದಜಿಯವರಿಗೆ ಪ್ರಾಚೀನ ಮತ್ತು ಅರ್ವಾಚೀನ ತತ್ವ ಸಿದ್ಧಾಂತಗಳಲ್ಲಿ ಪರಿಶ್ರಮ ಪಡೆಯಬೇಕೆಂಬ ಮನಸ್ಸು ಹೋಯಿತು. ಪತಂಜಲಿಯ "ಯೋಗ" ಸಿದ್ಧಾಂತವನ್ನು ಕುರಿತು ಪಂಡಿತ ಶಶಧರರು ಉಪನ್ಯಾಸ ಮಾಡಿದಾಗ ಅದನ್ನು ಕೇಳಿ ಅಭೇದಾನಂದಜಿಯವರು ಹಿಂದೂ ಮನಶ್ಶಾಸ್ತ್ರ ಮತ್ತು ಯೋಗ ಪದ್ಧತಿಯ ಉಪಯೋಗಗಳನ್ನು ಮನಗಾಣತೊಡಗಿದರು.

ಯೋಗಾಭ್ಯಾಸ

ಆಗತಾನೇ ಕಲಿಚಾರ ವೇದಾಂತವಾಗೀಶ್ ಎಂಬವರು ಯೋಗಸೂತ್ರಗಳನ್ನು ಬಂಗಾಳಿಗೆ ಪರಿವರ್ತಿಸಿ ಪ್ರಕಟಿಸತೊಡಗಿದ್ದರು ಅವರ ಸಹಾಯದ ಮೇಲೆ ಅಭೇದಾನಂದರೂ ಕೂಡ ಪತಂಜಲಿಯವರ ಪದ್ಧತಿಯನ್ನು ಕಲಿಯತೊಡಗಿದರು ಪತಂಜಲಿಯವರ ಯೋಗಸೂತ್ರವನ್ನು ಕಲಿತದ್ದಾದ ಮೇಲೆ ಅವರು ತಮ್ಮ ಮನಸ್ಸನ್ನೇ ಆಳಿಯತೊಡಗಿದರು. ಹಠಯೋಗ ಮತ್ತು ರಾಜಯೋಗಗಳಿಂದ ಮನಸ್ಸಿನ ಮೇಲೆ ಹತೋಟಿ ಹೊಂದಿ ನಿರ್ವಿಕಲ್ಪ ಸಮಾಧಿಯನ್ನು ಪಡೆಯುವ ಪ್ರಯತ್ನವನ್ನು ಅವರು ನಡೆಸಿದರು.

ನಂತರ ಅವರು ಶಿವಸಂಹಿತೆಯನ್ನು ಕಲಿಯತೊಡಗಿದರು. ಆ ಮೇಲೆ ಈ ಯೋಗ ಮಾರ್ಗಗಳನ್ನು ಅನುಸರಿಸಲು ಸರಿಯಾದ ಗುರುವನ್ನು ಹುಡುಕಹತ್ತಿದರು ಇವರ ಸಹಪಾಠಿಯಾಗಿದ್ದ ಜ್ಞಾನೇಶ್ವರ ಭಟ್ಟಾಚಾರ್ಯರವರು ರಾಮಕೃಷ್ಣ ಪರಮಹಂಸರ ಹತ್ತಿರ ಹೋಗುವಂತೆ ಸೂಚಿಸಿದರು.

ಗುರುದರ್ಶನ

ರಾಮಕೃಷ್ಣ ಪರಮಹಂಸರ ಹತ್ತಿರ ಹೋದಾಗ ಅಭೇದಾನಂದರು 'ನನಗೆ ಯೋಗಾಭ್ಯಾಸ ಮಾಡಿಸುವಿರಾ' ಎಂದು ಕೇಳಿದರು 'ಅಗತ್ಯವಾಗಿ, ನೀನು ಪೂರ್ವಜನ್ಮದಲ್ಲಿ ಯೋಗಿಯಾಗಿದ್ದೆ, ಬಾ ಮಗು, ಯೋಗಾಭ್ಯಾಸವನ್ನು ಕಲಿಸುತ್ತೇನೆ' ಎಂದು ಪರಮಹಂಸರೆಂದರು

೧೮೮೬ರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಪರಂಧಾಮವನ್ನೈದಿದ ಮೇಲೆ ಅಭೇದಾನಂದರು ಸನ್ಯಾಸವನ್ನು ಸ್ವೀಕರಿಸಿದರು ಅಂದಿನಿಂದ ಅವರು ಸ್ವಾಮಿ ಅಭೇದಾನಂದರೆಂದು ಕರೆಯಲ್ಪಟ್ಟರು

ಸನ್ಯಾಸ ಜೀವನ

ಅಂದಿನಿಂದ ಅವರು ಬರಿಯ ಕಾಲಿನಲ್ಲಿಯೇ ಸ್ಥಳದಿಂದ ಸ್ಥಳಕ್ಕೆ ಪ್ರಯಾಣಮಾಡುತ್ತ ಬರೇ ಭಿಕ್ಷೆಯಿಂದಲೇ ಜೀವಿಸುತ್ತ ಉಪದೇಶಕಾರ್ಯದಲ್ಲಿ ತೊಡಗಿದರು ಅವರ ಪ್ರವಾಸದಲ್ಲಿ ಅನೇಕ ರೀತಿಯ ಕಷ್ಟಗಳನ್ನೂ ತೊಂದರೆಗಳನ್ನೂ ವಹಿಸಿದರು. ಯಮುನಾ ಮತ್ತು ಗಂಗಾ ನದಿಗಳು ಜನ್ಮಿಸುವ ಸ್ಥಳಕ್ಕೆ ನಡೆದೇ ಹೋದರು ಸಮುದ್ರ ಮಟ್ಟಕ್ಕೆ ೧೮,೦೦೦ ಅಡಿಗಳೆತ್ತರದಲ್ಲಿ ಹಿಮಾಲಯದ ಗುಹೆಯ ಪ್ರದೇಶಗಳಲ್ಲಿ ಮೂರು ತಿಂಗಳ ಕಾಲ ಅವರು ಇದ್ದರು ಹೀಗೆಯೇ ಅವರು ೧೦ ವರ್ಷಗಳ ಕಾಲ ಭಾರತ ದೇಶದ ವಿವಿಧ ಪ್ರದೇಶಗಳಲ್ಲಿ ಪ್ರವಾಸ ಮಾಡಿದರು ಕೇದಾರನಾಥ್, ಬದರೀನಾಥ್, ದ್ವಾರಕಾ, ರಾಮೇಶ್ವರ, ಪೂರಿ ಮುಂತಾದ ಕಡೆಗಳಲ್ಲೆಲ್ಲಾ ಅಲೆದರು ತ್ರಿಲಿಂಗಸ್ವಾಮಿ, ಕಾಶಿಯ ಸ್ವಾಮಿ ಭಾಸ್ಕರಾನಂದ, ಗಾಜಿಪುರದಲ್ಲಿ ಪವಹಾರಿಬಾಬಾ, ಬೃಂದಾವನದಲ್ಲಿ ಮಹಾ ವೈಷ್ಣವ ಸನ್ಯಾಸಿಗಳು, ಹೃಷೀಕೇಶದಲ್ಲಿ ಮಹಾ ವೇದಾಂತ ತತ್ವಜ್ಞಾನಿಗಳು ಇವರನ್ನೆಲ್ಲಾ ಭೇಟಿಯಾಗಿ ವೇದಾಂತ ತತ್ವಗಳ ವಿಷಯವಾಗಿ ಅನೇಕ ಅಂಶಗಳನ್ನೂ ತಿಳಿದರು.

ಯೂರೋಪು ಸಂಚಾರ

ಸ್ವಾಮಿ ವಿವೇಕಾನಂದರವರು ಅಮೆರಿಕಾದಲ್ಲಿ ಜಯಪ್ರದವಾದ ಪ್ರವಾಸ ಮಾಡಿಕೊಂಡು ಲಂಡನ್ನಿಗೆ ಹಿಂತಿರುಗಿ ಬಂದಾಗ ಸ್ವಾಮಿ ಅಭೇದಾನಂದರನ್ನು ತಮ್ಮ ಸಹಾಯಕ್ಕಾಗಿ ಲಂಡನ್ನಿಗೆ ಕರೆಸಿಕೊಂಡರು ೧೮೯೬ರಲ್ಲಿ ಲಂಡನ್ನಿನಲ್ಲಿ ಅಭೇದಾನಂದಜಿಯವರು 'ಪಂಚದಶಿ' ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ಲಂಡನ್ನಿನಲ್ಲಿ ಇದೇ ಮೊದಲು ಅವರು ಉಪನ್ಯಾಸ ಮಾಡಿದುದು ೧೮೯೭ರ ವರೆಗೆ ಅವರು ಲಂಡನ್ನಿನಲ್ಲಿ 'ವೇದಾಂತ' ಮತ್ತು 'ರಾಜಯೋಗ' ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಅಲ್ಲಿಯೇ ಮ್ಯಾಕ್ಸ್‌ಮುಲ್ಲರ್‌ರವರ ಭೇಟಿಯೂ ಇವರಿಗೆ ಆಯಿತು.

ಸ್ವಾಮಿ ವಿವೇಕಾನಂದರು

೧೮೯೭ರಲ್ಲಿ ಇವರು ಅಮೆರಿಕಾಕ್ಕೆ ಹೋದರು. ಅಲ್ಲಿ ನ್ಯೂಯಾರ್ಕ್‌ನಲ್ಲಿ ವೇದಾಂತ ಸಂಘದ ಅಧಿಕಾರದಲ್ಲಿದ್ದರು ಅವರು ಅಮೆರಿಕಾದಲ್ಲಿ ಸಂಯುಕ್ತ ಸಂಸ್ಥಾನ, ಕೆನಡಾ, ಅಲಾಸ್ಕಾ, ಮೆಕ್ಸಿಕೊ ಮುಂತಾದ ದೇಶಗಳಲ್ಲೆಲ್ಲಾ ಬಹಳವಾಗಿ ಪ್ರವಾಸಮಾಡಿದರು ೧೯೨೧ರ ವರೆಗೂ ಅವರು ಅಲ್ಲಿಯೇ ಇದ್ದರು. ೧೯೨೧ರಲ್ಲಿ ಅವರು ಜಪಾನಿಗೆ ಬಂದರು ೧೯೨೨ರಲ್ಲಿ ಟಿಬೆಟಿಗೆ ಹೋದರು ಟಿಬೆಟ್‌ನಲ್ಲಿ ಕಾಲುನಡೆಯಲ್ಲಿಯೇ ಹಿಮಾಲಯವನ್ನು ದಾಟಿದರು

ಮಾತೃಭೂಮಿಗೆ ಆಗಮನ

೧೯೨೩ರಲ್ಲಿ ಇಂಡಿಯಾಕ್ಕೆ ಬಂದರು ಇಲ್ಲಿ ಆಗಿನಿಂದ ಅನೇಕ ರಾಮಕೃಷ್ಣಾಶ್ರಮಗಳನ್ನೂ ಸಂಘಗಳನ್ನೂ ಸ್ಥಾಪಿಸಿದರು ಅನೇಕ ಪುಸ್ತಕಗಳನ್ನು ಬರೆದು ಪ್ರಕಟಿಸಿದರು

ಪರಂಧಾಮ

ಸ್ವಾಮಿ ಅಭೇದಾನಂದಜಿಯವರ್ ಕಳೆದ ತಾ ೮—೯—೧೯೩೯ನೇ ಗುರುವಾರ ಹದಿನಾಲ್ಕಾಗಿ ಅಸ್ವಸ್ಥತೆಯುಂಟಾಗಿ ಏಕವಾರ ಪರಂಧಾಮವನ್ನೈದಿದರು

ವ್ಯಾಪಾರ ವೃದ್ಧಿಯಾಗಬೇಕಾದರೆ, ಸ್ವದೇಶಾಭಿಮಾನಿಗೇನೇ ನಿಮ್ಮ ಜಾಹಿರಾತುಗಳನ್ನು ಕೊಡಿರಿ.

The Canara Industrial & Banking Syndicate Ltd.

Head Office: UDIPI (S. India)

ESTD) (1925

MEMBER: Reserve Bank of India, Bankers' Clearing House, Bombay.

Five Year Cash Certificates are issued at the price of Rs. 8, Rs. 80, Rs. 400 and Rs. 800, repayable on maturity at Rs. 10, Rs 100, Rs. 500, and Rs. 1000 respectively.

You can cash the Certificates at any time before maturity

AN INVESTMENT WHICH IS LIQUID AND YET VERY REMUNERATIVE.

Further particulars can be had from:

The Car Street Branch, Mangalore

GENERAL BANKING BUSINESS TRANSACTED.

ಪಂಡಿತ ಮಾಲವೀಯರಿಗೆ ೧೫ ಲಕ್ಷ ರೂಪಾಯಿಗಳ ನಿಧಿ!

ಮಹಾತ್ಮಾಜಿಯವರ ಸೂಚನೆ

ರಾಜಗರದಲ್ಲಿ ಪ್ರಜಾಪೀಡೆ ಯುರೋಪಿನ ಭ್ರಾಂತಿಗೆ ಮದ್ದು

ಗಫರ್ ಖಾನರಿಗೆ ಗಾಂಧಿಜಿಯವರ ಸೂಚನೆ

ರಾಜಗರ ಸಂಸ್ಥಾನದಲ್ಲಿ ಅಮಾನುಷ ಪ್ರಜಾಪೀಡೆ!

ರಾಜಗರ ಸಂಸ್ಥಾನದಲ್ಲಿ ಅನೇಕ ಮಂದಿ ಪ್ರಜಾ ಮಂಡಲದ ಮುಖಂಡರು ಬಹಳ ರೀತಿಯಿಂದ ಪೀಡೆಗೆ ಒಳಗಾಗಿರುವರೆಂದು ತಿಳಿದಿದೆ

ನರಸಿಂಗಗರ ಎಂಬಲ್ಲಿನ ಶ್ರೀ ಬಾರ್ದಿಲಾಲ ಎಂಬ ವ್ಯಾಪಾರಸ್ಥರು ಖದ್ದರು ಧರಿಸಿರುವರೆಂದು ಅವರನ್ನು ಸಂಸ್ಥಾನದ ಪೋಲೀಸು ಅಧಿಕಾರಿಯು ಹಿಡಿದು ನಿಲ್ಲಿಸಿ, ಪೆಟ್ಟಿನಿಂದ ಲಾಠಿಯಿಂದ ಹೀಗೆ ಅಮಾನುಷವಾಗಿ ಹೊಡೆದು ಅವರ ಡ್ರೆಸ್ಸನ್ನು ಬಿಚ್ಚಿ ಚಿತ್ರಹಿಂಸೆಗೀಡಿಸಿರುವುದಾಗಿ ತಿಳಿದಿದೆ ಕಡೆಗೆ ಬಲಾತ್ಕಾರವಾಗಿ ಅವರನ್ನು ಸಂಸ್ಥಾನದ ಹೊರಗಡೆಗೆ ಎಲ್ಲಿಗೋ ಲಾರಿಯಲ್ಲಿ ಹಾಕಿ ಒಯ್ದಿರುವರು

ಅನೇಕ ಜನರ ಮನೆಗಳನ್ನು ಹೊಕ್ಕು ಹುಡುಕಿ, ಪ್ರಜಾಮಂಡಳದ ಯಾವುದೇ ದಾಖಲೆಗಳನ್ನಾದರೂ ಸಿಕ್ಕಿದರೆ ಅಂತಹವರನ್ನು ಬಂಧಿಸಲಾಯಿತು ಯಾವ ಯಾವ ಸಂಸ್ಥಾನದ ಅಧಿಕಾರಿಗಳು ಪ್ರಜಾಮಂಡಳದ ಕುರಿತು ಸಹಾನುಭೂತಿ ತೋರಿಸುತ್ತಾರೋ ಅಂತಹವರನ್ನು ಕೆಲಸದಿಂದ ತೆಗೆದು ಹಾಕಲಾಯಿತು

ಮಂಡಳಿಯ ಕಾರ್ಯದರ್ಶಿಯಾದ ಮುಸ್ಲಿಹವೊದ ಆಲಿಯವರನ್ನು ಎರಡು ವರ್ಷಗಳ ಶಿಕ್ಷೆಗೆ ಗುರಿ ಮಾಡಲಾಗಿದೆ!

ಗಫರ್ ಖಾನರಿಗೆ ಗಾಂಧಿಜಿಯವರ ಸೂಚನೆ

ವಾರ್ಧಾದ ವರ್ಕಿಂಗ್ ಕಮಿಟಿಯ ಸಭೆಮುಗಿದು ಗಾಂಧಿಜಿಯವರನ್ನು ಬಿಟ್ಟು ಅಬ್ದುಲ್ ಗಫರ್ ಖಾನರು ತೆರಳುವ ಸಂದರ್ಭದಲ್ಲಿ ಒಂದು ವಿಶೇಷವು ನಡೆಯಿತು.

'ನಾನೊಬ್ಬ ಯೋಧನು ನಾನೇನು ಮಾಡಬೇಕೆಂಬುದು ನಿರ್ದಿಷ್ಟವಾಗಿದೆ' ಹೀಗೆಂದು ಅಬ್ದುಲ್ ಗಫರ್ ಖಾನರು ಗಾಂಧಿಜಿಯವರೊಡನೆ ಹೇಳಿದರು. ಅದಕ್ಕೆ ಉತ್ತರವಾಗಿ ಗಾಂಧಿಜಿಯವರು 'ನನಗೆ ಏನು ಗೊತ್ತುಂಟು; ಅದೆಲ್ಲಾ ನಿಮ್ಮ ಮತ್ತು ನೆಹರುಗಳೊಳಗೆ ಇತ್ಯರ್ಥವಾಗಬೇಕು' ಎಂದು ಅಲ್ಲಿಯೇ ನಿಂತಿದ್ದ ಜವಾಹಿರಲಾಲರ ಕಡೆಗೆ ಕೈ ತೋರಿಸಿ ಹೇಳಿದರು

ಸಂಜೆಹೊತ್ತು, ಸ್ವಲ್ಪ ಸಮಯ ಗಾಂಧಿ, ನೆಹರು ಅಬ್ದುಲ್ ಗಫರ್ ಖಾನರು, ಗುಡಿಸಲಿಂದ ಕೇಳಿ ಬರುತ್ತಿರುವ ಪ್ರಾರ್ಥನಾ ಪದ್ಯಗಳನ್ನು ಕೇಳುತ್ತಾ ಕುಳಿತಿದ್ದರು.

ಎಲ್ಲಾ ಪಕ್ಷಗಳ ಒಂದು ಸಮ್ಮೇಳನವಾಗುವುದೆಂಬ ವಿಷಯದಲ್ಲಿ ನೆಹರುಗಳೊಡನೆ ಮಾತನಾಡಿದಾಗ ಇಂತಹ ಹುಚ್ಚು ಸುದ್ದಿ ಹರಡಲು ಯಾರು ಜವಾಬ್ದಾರರು ಎಂದು ಅವರು ಕೇಳಿದರು. ವಾರ್ಧಾದಲ್ಲಿ ಸೇರಿದ ಹಲವು ಮಂದಿ ಮುಖಂಡರು ಅಂತಹ ಸಮ್ಮೇಳನವಾಗುವ ಸಾಧ್ಯವಿಲ್ಲವೆಂದು ತಿಳಿಯುತ್ತಾರೆ.

ಯೂರೋಪಿನ ಭ್ರಾಂತನ್ನು ಗುಣಮಾಡುವ ಉಪಾಯ'

'ವಿಜ್ಞಾನವು ಮಾನವನನ್ನು ಇನ್ನಷ್ಟು ಉನ್ನತಿಗೆ ಎತ್ತಲು ಸಹಾಯ ಮಾಡುವುದು ಆದರೆ ಇಂದು ಯೂರೋಪಿನಲ್ಲಿ ಇದು ಮಾನವನನ್ನು ಪಶುಜೀವಿತಕ್ಕೆ ಇಳಿಸಲು ಉಪಯೋಗಿಸಲ್ಪಡುತ್ತದೆ' ಹೀಗೆಂದು ಬೊಂಬಾಯಿಯ ಪ್ರಧಾನ ಮಂತ್ರಿ ಬಿ. ಜಿ ಖೇರರ ಹೇಳಿದರು ಅವರು ಮಾತನಾಡುತ್ತಾ 'ಗಾಂಧಿಜಿಯವರು ಕೇವಲ ರಾಜಕೀಯ ಮುಖಂಡರು ಮಾತ್ರವಲ್ಲ, ಮಹಾತತ್ವಜ್ಞಾನಿ ಗಾಂಧಿಜಿಯವರು ಮಾನವನು ಪಶುವಿಗಿಂತ ಬೇರೆಯೆಂಬುದನ್ನು ಸತ್ಯ ಅಹಿಂಸೆಗಳ ಪ್ರಚಾರದಿಂದ ತೋರಿಸಲು ಯತ್ನಿಸುತ್ತಾರೆ! ಆದರೆ ಯೂರೋಪಿನ ಮಾನವ್ಯತೆಯು ನಿರ್ನಾಮವಾಗಿ ಪಶುಬದ್ಧಿಯು ಮಾತ್ರ ಸ್ಥಳಯ ನರ್ತನ ಮಾಡುತ್ತಿದೆ ಅಹಿಂಸೆಯ ತತ್ವವು ತಿಳಿದಿದ್ದರೆ, ಇಂದು ಯೂರೋಪಿನಲ್ಲಿ ಈ ರೀತಿಯ ಅನರ್ಥವು ಉಂಟಾಗುತ್ತಿರಲಿಲ್ಲ. ಇಂದಿನ ಭಾರತದ ಯುವಕರು ಅಹಿಂಸೆಯ ಪ್ರಚಾರ ಮಾಡುವುದು ಮಾತೃಭೂಮಿಯ ಪರವಾಗ ಅವರು ಮಾಡತಕ್ಕ ಕರ್ತವ್ಯವಾಗಿದೆ' ಎಂದರ

ಮಾಲವೀಯರಿಗೆ ಹದಿನೈದು ಲಕ್ಷ ರೂಪಾಯಿಗಳ ನಿಧಿಯ ಅರ್ಪಣೆ!

ಮಹಾತ್ಮಾಜಿಯವರ ಸೂಚನೆ ಐವತ್ತು ವರ್ಷಗಳ ನಿರಂತರ ಸಾರ್ವಜನಿಕ ಕಾರ್ಯ ಮಾಡುತ್ತಿದ್ದ ಈಗ ವಿಶ್ರಾಂತಿ ಹೊಂದುವ ಪಂಡಿತ ಮದನಮೋಹನ ಮಾಲವಿಯರಿಗೆ ಹದಿನೈದು ಲಕ್ಷ ರೂಪಾಯಿಗಳ ನಿಧಿಯನ್ನು ಅರ್ಪಿಸಬೇಕೆಂದು ದರ್ಬಂಗದ ಮಹಾರಾಜಾಧಿರಾಜ, ಬಿಕಾನೀರ್, ಕೊಚ್ಚಿ, ಪಾಟಿಯಾಲ, ಕೋಟ ಮೊದಲಾದ ರಾಜರೇ ಮುಖ್ಯರ ಸಹಿಯಿಂದ ನಿಧಿಸಂಗ್ರಹಕ್ಕಾಗಿ ಒಂದು ವಿನಂತಿ ಪತ್ರವು ಹೊರಟಿದೆ!

ಮಾಲವೀಯರಿಗೆ ಅರ್ಪಿಸತಕ್ಕ ನಿಧಿಯು ಹದಿನೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯದಾಗಿರಬಾರದೆಂದು ಮಹಾತ್ಮಾಜಿಯವರು ಸೂಚಿಸಿದುದಾಗಿ ತಿಳಿದಿದೆ ನಿಧಿಸಂಗ್ರಹದ ಯತ್ನವು ತ್ವರೆಯಿಂದ ಜರುಗುತ್ತಿದೆ ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಈಗಾಗಲೇ ನಗದಾಗಿ ಬಂದಿದೆ.

ಈ ಹಣವು ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಸಾಲವನ್ನು ತೀರಿಸಲು ಸಹಾಯಕವಾಗುವುದಾಗಿ ತಿಳಿದಿದೆ.

Kanarese No 6



ನಾವೆಲ್ಲರೂ ಅದನ್ನು ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ. ಕುಟಿಕೂರಾ ಟಾಲ್ಕಮು (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ. ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೇ ಶಿಫಾರಸು ಮಾಡುತ್ತಾರೆ. ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು

ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ. ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮು (Cuticura Talcum) ಬಹಳ ಹರ್ಷದಾಯಕವಾದುದು

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಪಸೆಲ್ಲಾ ಬೆಳಕು, ಬೆಳದಿಂಗಳು. ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತುಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯಸ್ಟಾಕಿಸ್ಟರು: ಪಾಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಜರ್ಮನಿಯಲ್ಲಿ ಹಿಟ್ಲರ್ ವಿರೋಧವು ಹೆಚ್ಚಾಗುತ್ತಾ ಬರುತ್ತಿದೆ!

ಮುಸಲನಿಯ ಮೌನವ್ರತ! ಜಪಾನಿನ ಯೋಚನೆಯೇನು?

ಜರ್ಮನಿಯಲ್ಲಿ ಹಿಟ್ಲರ್ ವಿರೋಧ

ಜರ್ಮನಿಯಲ್ಲಿ ಹಿಟ್ಲರನನ್ನು ಪದಚ್ಯುತನನ್ನಾಗಿ ಮಾಡುವ ಹಂಚಿಕೆಯು ಹಲವಾರು ನಡೆಯುತ್ತಾ ಇವೆ. ಹಲವರು ಹಗಲು ರಾತ್ರಿಯೆನ್ನದೆ, ಈ ಹಂಚಿಕೆಯಲ್ಲಿ ತನ್ಮಯರಾಗಿದ್ದಾರೆ. ಹಿಟ್ಲರನ ಅವಸಾನವನ್ನು ಅವರು ಸರ್ವಥಾ ಇದಿರು ನೋಡುತ್ತಿದ್ದಾರೆ.

ಇಂದು ಮಿತ್ರ ರಾಷ್ಟ್ರಗಳು ಸೀಧಾ ಜರ್ಮನಿಯನ್ನು ಮುತ್ತಿ ಅಲ್ಲಿ ಯುದ್ಧವನ್ನು ಹೂಡದ ನಿಮಿತ್ತವಾಗಿ, ಆ ಚಳವಳಗಾರರು ಅಶಾಂತರಾಗಿದ್ದಾರೆ. ೧೯೩೨ರಿಂದಲೇ ಅವರು ಮುಂದಕ್ಕೆ ಹಿಟ್ಲರನು ಒಂದು ಮಹಾ ಸಂಕಟವನ್ನು ಇದಿರಿಸಬಹುದೆಂದು ನಿರೀಕ್ಷಿಸುತ್ತಿದ್ದು, ಆ ಕಾಲದಲ್ಲಿ ನಾಜೀ ಪಕ್ಷಕ್ಕೆ ವಿರುದ್ಧವಾದ ಚಳವಳವನ್ನು ಆರಂಭಿಸಬೇಕೆಂದೂ ಅವರು ಬಗೆದಿದ್ದರು.

ಅವರ ಅಪಜಯ

೧೯೩೭ರಿಂದು ಈ ಗುಪ್ತ ಕ್ರಾಂತಿಕಾರರು ಬಹಳ ತೀವ್ರವಾಗಿ ಕಾರ್ಯವನ್ನು ಮಾಡುತ್ತಿದ್ದರು. ಕ್ರಾಂತಿಕಾರರ ಮುಖಂಡರಿಗೆ ತಮ್ಮ ಕಾರ್ಯದಲ್ಲಿ ಜಯವೊದಗುವ ಭರವಸೆಯೂ ಇತ್ತು. ಆದರೆ, ಇದು ಮ್ಯುನಿಕಿನ ಒಪ್ಪಂದದಿಂದ ಸಂಪೂರ್ಣ ಅಡಗಿ ಹೋಯಿತು. ಆದರೂ ಇವರು ಬೇರೆ ಬೇರೆ ರಾಷ್ಟ್ರಗಳೊಡನೆಯೂ ಜೆಕ್ಕರೇ ಮೊದಲಾದ ಸ್ವಾತಂತ್ರ್ಯ ವೀರರೊಡನೆಯೂ ಸಹಾನುಭೂತಿಯನ್ನು ತೋರಿಸಿ ತಮ್ಮ ಕಾರ್ಯವನ್ನು ಭರದಿಂದ ಸಾಗಿಸುತ್ತಿದ್ದಾರೆ.

ಇಂದು ಜರ್ಮನಿಯಲ್ಲಿ ಸೇಕಡಾ ೮೦ಕ್ಕಿಂತ ಹೆಚ್ಚಿನ ಜನರು ಹಿಟ್ಲರ ಧೋರಣೆಯನ್ನು ಪ್ರತ್ಯಕ್ಷ ನಿಷೇಧಿಸುತ್ತಾರೆ. ಇನ್ನು ಸೇಕಡಾ ೧೦ ಮಂದಿಯು ಎದುರಿಗೆ ಹಾಗೆನ್ನಲು ಅಂಜುವರಾದರೂ, ಹೃದಯದಲ್ಲಿ ಹಿಟ್ಲರ್ ವಿರೋಧಿಗಳಾಗಿದ್ದಾರೆ. ಬಾಕಿಯುಳಿದ ಸೇಕಡಾ ೫೦ರಷ್ಟು ಮಂದಿ ನಾಜಿಗಳಿದ್ದಾರೆ!

ಕ್ರಾಂತಿ ಗೆಲ್ಲುವುದು

ಹೀಗಾಗಿ ದಿನದಿಂದ ದಿನಕ್ಕೆ ಜರ್ಮನಿಯಲ್ಲಿ ಹಿಟ್ಲರ್ ದ್ವೇಷವು ಬೆಳೆಯುತ್ತಾ ಇದೆ. ಅವರ ಹಂಚಿಕೆಗಳನ್ನು ತಡೆದು ನಿಲ್ಲುವುದು ಯಾರಿಂದಲೂ ಸಾಧ್ಯವಿಲ್ಲದಷ್ಟು ಬಲವಂತವಾಗಿ ಬೆಳೆದಿದೆ ಒಂದು ದಿನ ಹಿಟ್ಲರ ಶಾಹಿಯನ್ನು ಕಳೆಕಳಗು ಮಾಡಲು ಇವರು ಭರದಿಂದ ಕಾರ್ಯ ಸಾಧಿಸುತ್ತಿದ್ದಾರೆ! ಆ ದಿನವು ಬಹು ದೂರವಿರಲಾರದು! ಮೊದಲಾಗಿ ಇವರು ಹಿಟ್ಲರನನ್ನೇ ಪದಚ್ಯುತನನ್ನಾಗಿ ಮಾಡುವ ಅಥವಾ ಅದಕ್ಕೆ ತಕ್ಕ ಪ್ರತೀಕಾರ ಮಾಡುವ ಸಾಧನೆಯಲ್ಲಿದ್ದಾರೆ!

ಮುಸಲನಿಯ ಮೌನವ್ರತ

ಮುಸಲನಿಯು ಮಾತನಾಡುವುದಿಲ್ಲವೆಂದು ಮೌನವ್ರತವನ್ನು ಕೈಗೊಂಡಿರುವನೇ? ಅಬ್ಬೀನಿಯದ ಬಲಾತ್ಕಾರವಾದ ಮೇಲೆ ಆತನು ಮಾತೆತ್ತುವುದಿಲ್ಲ. ಇತ್ತೀಚೆಗೆ ಅವನ ವಿಷಯವಾಗಿ ಕೇಳಿದ್ದೆಂದರೆ ಯುದ್ಧ ಪ್ರಾರಂಭವಾಗಲು, ಪೋಲೆಂಡು ಜರ್ಮನುಗಳ ಜಗಳವನ್ನು ಶಾಂತಿಯಿಂದ ಕೊನೆಗಾಣಿಸಲು ಪಂಚರಾಷ್ಟ್ರಗಳ ಒಂದು ಕೂಟಸಭೆಯು ನಡೆಯಬೇಕೆಂಬ ವಿಚಾರ. ಈ ಮುಸಲನಿಯ ಸೂಚನೆಯನ್ನು ಮಿತ್ರರಾಷ್ಟ್ರಗಳು ತಿರಸ್ಕರಿಸಿದುವೆಂದು ತಿಳಿಯುತ್ತದೆ! ಆ ಮೇಲೆ ಆತನ ಯಾವುದೊಂದು ಚಟುವಟಿಕೆಯು ಮಾತುಕತೆಯಾಗಲಿ, ಕೇಳಿದಂತೆ ಕಂಡು ಬರುವುದಿಲ್ಲ.

ಈಗ ಆಗುವ ಆಟವನ್ನು ನಿರೀಕ್ಷಿಸುತಿದ್ದು, ತನ್ನ ಸ್ವಂತ ಯೋಜನೆಯೊಂದನ್ನು ಸಿದ್ಧಗೊಳಿಸುತ್ತಿರಬಹುದೇ? ಅಥವಾ, ಇದುವರೆಗೆ ತಾನು ಅವಸರವಾಗಿ ನುಂಗಿದ ರಾಷ್ಟ್ರಗಳನ್ನು ಈಗ ಚೆನ್ನಾಗಿ ಕರಗುವಂತೆ ಮಾಡಲು ಮೆಲುಕು ಹಾಕುತ್ತಿರಬಹುದೇ? ಅಬ್ಬೀನಿಯದ ಪರ್ವತ ನಿವಾಸಿಗಳಂತೂ ಸುಮ್ಮಗೆ ಕುಳಿತುಕೊಳ್ಳುವ ಜನರೇನೂ ಅಲ್ಲ. ಈಚೆಗೆ ಅಬಿಸೀನಿಯವರು ಕೂಡಾ ತಾವು ಕಪ್ಪಾಗಿದ್ದರೂ, ಬಿಳಿಯರಾದ ಇಟೆಲಿಯನರಿಗಿಂತ ತಾವು ನೀಚರು ಎಂದು ತಿಳಿಯಲು ಇಷ್ಟಪಡುವುದಿಲ್ಲವೆಂಬ ಹಾಗೆ ತೋರುತ್ತದೆ.

ಆದರೆ, ಇತ್ತೀಚೆಗೆ ಅಬಿಸೀನಿಯದ ಮಾಜಿ ಅರಸರನ್ನು ತಿರಿಗಿ ಅಬಿಸೀನಿಯಕ್ಕೆ ಬಂದು ಅವರು ಜನರನ್ನು ಸಮಾಧಾನಗೊಳಿಸಬೇಕಾಗಿ ಮುಸಲನಿಯು ಹೇಳಿರುವನೆಂದು ದಟ್ಟಸುದ್ದಿ ಹರಡಿತು. ಆ ವಿಷಯವೇನಾಯಿತೋ ತಿಳಿಯುವದಿದೆ.

ಜಪಾನಿನ ಯೋಚನೆಯೇನು?

ಚೈನಾ ಜಪಾನು ಯುದ್ಧ ಮುಗಿಯಿತೇ? ಎಂಬುದೊಂದು ಪ್ರಶ್ನೆ ಎದ್ದು ನಿಂತಿದೆ. ಜರ್ಮನರು ತಿಳಿಸಿದಂತೆ ಜಪಾನು ರಶ್ಯದೊಡನೆ ಸೇರಿಕೊಂಡು ಸಹಾಯ ಮಾಡುವುದೆಂಬ ಪ್ರಕಟಣೆಯು ಸುಳ್ಳೆಂದು ಜಪಾನಿನ ಅಧಿಕಾರ ವಾರ್ತೆಯು ಬಂದಿದೆ. ಇದು ಕ್ಷೇಮವೇ ಆಯಿತು ಆದರೆ ಚೈನದೊಡನೆ ಜಗಳ ನಿಲ್ಲುವುದೆಂದೂ, ಜಪಾನು ಪ್ರಾನ್ಸ್ ಬ್ರಿಟನುಗಳಿಗೆ ಬೆಂಬಲಕೊಡುವುದೆಂದೂ ಇರುವ ಬಲವಾದ ವಾರ್ತೆಯ ವಿಷಯ ಆಗ್ರಹಪೂರ್ವಕ ನಿರೀಕ್ಷಿಸಬೇಕಾಗಿದೆ. ತಮ್ಮ ಜನ್ಮಶತ್ರುವಾದ ರಶ್ಯದೊಡನೆ ಜರ್ಮನು ಒಪ್ಪಂದ ಮಾಡಿಕೊಂಡಿರುವುದು ಖಂಡಿತ. ಜಪಾನು ಜರ್ಮನಿಯೊಡನೆ ಕೆರಳಿ ಅದಕ್ಕೆ ವಿರುದ್ಧ ಸಹಾಯ ಮಾಡಬಹುದೆಂಬುದು ನಂಬತಕ್ಕದ್ದೇ ಆಗಿದೆ

ಚೈನದಲ್ಲಿ ಯುದ್ಧದ ಗೊಂದಲವು ಬಹಳ ಕಡಿಮೆಯಾಗಿದೆಯೆಂದು ಸುದ್ದಿ ಬರುವುದರಲ್ಲಿ ಸತ್ಯಾಂಶವುಂಟೇ? ಚೈನದಿಂದ ಜಪಾನು ಸೈನ್ಯವು ಹಿಂದೆಗೆಯಲಾಯಿತು ಎಂಬ ಪ್ರಕಟಣೆಯು ಸರಿಯೇ? ಹಾಗಾದರೆ ದುರ್ಭಾಗ್ಯ ಚೈನದ ಪೀಡೆಯು ಕೊನೆಗೊಂಡಿತೇ? ಅಥವಾ ಹಿಂದಿನಂತೆ ಇಂದೂ ಅಲ್ಲಿ ವಿಧ್ವಂಸಕಾರ್ಯವು ನಡೆಯುತ್ತಾ ಇರುವುದೇ?

ಯಾವುದಕ್ಕೂ ಸರಿಯಾದ ವಾರ್ತೆಯು ನಮಗೆ ಬರುವುದಿಲ್ಲವೆಂಬುದೂ ಬಂದ ವಾರ್ತೆಗಳನ್ನು ನಂಬಲಾಗುವುದಿಲ್ಲವೆಂಬುದೂ ಬಹಳ ಖೇದದ ಸಂಗತಿಯಾಗಿದೆ

ರಶ್ಯದಲ್ಲಿ ಓದುಗರು

೧೯೧೭ರಿಂದೀಚೆಗೆ ರಶ್ಯದಲ್ಲಿ ಓದುವವರ ಸಂಖ್ಯೆ ಬಹು ಹೆಚ್ಚಿದೆ. ಅಂದಿನಿಂದ ಇಂದು ೭೦೦ ಕೋಟಿ ಪುಸ್ತಕಗಳು ಅಚ್ಚಾಗಿ ಮಾರಲಾಗಿವೆ. ಅಲ್ಲದೆ ವರ್ಷಕ್ಕೆ ೮೦೦ ಕೋಟಿ ವೃತ್ತಪತ್ರಿಕೆಗಳು ಮಾರಾಟವಾಗುತ್ತಿವೆ ಪುಸ್ತಕಗಳಲ್ಲಿ ಸಮಾಜ ಸಮತಾವಾದಕ್ಕೆ ಸಂಬಂಧಪಟ್ಟ ಮಾರ್ಕ್ಸ್ ಲೆನಿನ್ ಸ್ಟೆಲಿನ್ ಇವರುಗಳ ಕೃತಿಗಳೇ ೨೫ ಕೋಟಿಯಷ್ಟು ಖರ್ಚಾಗಿವೆ ೧೯೩೭ರಲ್ಲಿ ಸ್ಟೆಲಿನ್ ಒಬ್ಬನ ಕೃತಿಯೇ ೪ ಕೋಟಿಯಷ್ಟು ಖರ್ಚಾದವು ಈ ಪುಸ್ತಕಗಳ ಪ್ರಕಟಣೆಯಿಂದ ಹಿಟ್ಲರ್ 'ಮೇನ್ ಕೇಂಫ್'ಗೆ ಸಿಗುವಂತೆ ಸ್ಟೆಲಿನನ ಸ್ವಂತಕ್ಕೆ ಹಣ ಸಿಗುವದಿಲ್ಲ.



DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎನ್ಟ್ವರ್ಪ್ ಡಚ್ಚಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪ್ರಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಜಗತ್ತೆ ಎಚ್ಚತ್ತಿರುವಾಗ ಆಶ್ರಿತರಾಜರು ನಿದ್ರಿಸುವರೆ?

ಗಾಂಧಿಜಿಯವರ ಸೂಚನೆ --

ಡಾನ್ಜಿಗಿನಲ್ಲಿ ಹಿಟ್ಲರನ ಭಾಷಣ! ನೆಹರುಗಳ ಎಚ್ಚರಿಕೆ!

ನರೇಂದ್ರರಿಗೆ ಮಹಾತ್ಮರ ಉಪದೇಶ

ಮಹಾತ್ಮಾಜಿಯವರು 'ಹರಿಜನ'ದಲ್ಲಿ ಒಂದು ಲೇಖನ ಬರೆಯುತ್ತಾ, ಅದರಲ್ಲಿ ಇಂದು ರಾಷ್ಟ್ರಗಳು ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿರುವ ಸಮಯದಲ್ಲಿ, ನರೇಂದ್ರ ಮಂಡಳಿಗಳು ಮಾತ್ರ ತಮ್ಮ ಪ್ರಜೆಗಳಿಗೆ ಯಾವ ವಿಧದ ಹಕ್ಕುಬಾಧ್ಯತೆಗಳನ್ನೂ ಕೊಡದಿರುವುದು ಆಶ್ಚರ್ಯವೆಂದು ಹೇಳುತ್ತಾರೆ. ಇದು ಪಾಟಿಯಾಲದ ಮಹಾರಾಜರು ಮತ್ತು ಅಲ್ಲಿನ ಪ್ರಜಾಪರಿಷತ್ತಿನ ಸಂಬಂಧದಲ್ಲಿ ಹೊರಡಿಸಿದ ಪ್ರಕಟಣೆಯಾಗಿರುತ್ತದೆ.

ಮಹಾತ್ಮರಿಗೆ ಅಲ್ಲಿನ ಪ್ರಜಾಪರಿಷತ್ತಿನವರು ಬರೆದ ಒಂದು ಕಾಗದದಲ್ಲಿ, ಸರಕಾರವು ಸಾರ್ವಜನಿಕ ಕೆಲಸಗಾರರ ಮೇಲೆ ಹಲವು ನಿರ್ಬಂಧಗಳನ್ನು ಹಾಕಿರುವುದಾಗಿಯೂ, 'ಮಹಾತ್ಮಾಜಿಯವರ ಹೇಳಿಕೆಯಂತೆ ಪ್ರಜಾಪರಿಷತ್ತು ಸತ್ಯಾಗ್ರಹವನ್ನು ಹಿಂತೆಗೆದರೂ ಸರಕಾರವು ನಿರ್ಬಂಧಗಳನ್ನು ಹಿಂತೆಗೆಯಲಿಲ್ಲವೆಂದೂ ತಿಳಿಸಿದ್ದು ಮಾತ್ರವಲ್ಲದೆ, ಪ್ರಜಾಪರಿಷತ್ತಿನ ಮುಖಂಡರು ಮಹಾರಾಜರನ್ನು ಸಂದರ್ಶಿಸಿದಾಗ ಅವರು ಉದ್ಧಟತನದಿಂದ, ರಾಜ್ಯವನ್ನು ಹಿಂದಿನ ತನ್ನ ಹಿರಿಯರು ಖಡ್ಗದ ಮೊನೆಯಿಂದ ಪಡೆದರೆಂದೂ ಆ ದೇಶವನ್ನು ತಾನು ಖಡ್ಗದ ಮೊನೆಯಿಂದಲೇ ಖಂಡಿತ ಉಳಿಸುವೆನೆಂದು ಹೇಳಿದರೆಂದೂ, ತನ್ನ ರಾಜ್ಯದ ಗಡಿಯಲ್ಲಿ, ಸಂಸ್ಥಾನದ ಧ್ವಜವಲ್ಲದೆ ಬೇರೆ ಧ್ವಜವು ಹಾರಕೂಡದೆಂದು ಹೇಳಿದರೆಂದೂ, ಸಾರ್ವಜನಿಕ ಕಾರ್ಯಕರ್ತರು ಅವರ ಚಟುವಟಿಕೆಗಳನ್ನು ನಿಲ್ಲಿಸದಿದ್ದರೆ, ತಾನು ಅವರ ಪ್ರತೀಕಾರವನ್ನು ಅವರ ಸಂತತಿಯವರೆಗೂ ಮಾಡಲು ಮರೆಯಲಾರನೆಂದು ಹೇಳಿದರೆಂದೂ, ತಾನು ತನ್ನ ಸೈನಿಕರ ಗುಂಡು ಬಾಣಗಳಿಂದ ಅವರ ಚಟುವಟಿಕೆಗಳನ್ನು ತಡೆಯುವೆನೆಂದು ಹೇಳಿದರೆಂದೂ ಬರೆದಿತ್ತು.

ನೆಹರುಗಳ ಎಚ್ಚರಿಕೆ

ಈ ಹೇಳಿಕೆಯ ಕುರಿತು ನೆಹರುಗಳು ಬಹಳ ಉಗ್ರವಾಗಿ ಟೀಕಿಸಿರುವರೆಂದು ತಿಳಿದಿದೆ.

ಮಹಾತ್ಮಾಜಿಯವರು ನೆಹರುಗಳ ಟೀಕೆಯನ್ನು ಎತ್ತಿ ಹೇಳುತ್ತಾ, ಅವರು ಕಾಂಗ್ರೆಸಿನ ನಿರ್ಣಯಕ್ಕೆ ಅನುಕೂಲವಾಗಿ ನರೇಂದ್ರರನ್ನು ಟೀಕಿಸುವರೆಂದೂ, ಅದನ್ನು ಮಿಕ್ಕಿ ಹೇಳಲಾರರೆಂದೂ, ಪತ್ರಿಕೆಗಳಲ್ಲಿ ಬಂದ ವಾರ್ತೆಯಿಂದ ಸತ್ಯವನ್ನು ತಿಳಿಯಲು ಸಾಧ್ಯವಿಲ್ಲವೆಂದೂ, ಹೇಗಿದ್ದರೂ, ಆಶ್ರಿತ ರಾಜ್ಯಗಳ ಕುರಿತು, ಕಾಂಗ್ರೆಸು ಸೇರುವುದಿಲ್ಲವಾಗಿ ತಿಳಿಸಿದ್ದರೂ, ಅಲ್ಲಿನ ಪ್ರಜೆಗಳ ಹಿತದ ಮೇಲೆ ಕಾಂಗ್ರೆಸಿನ ದೃಷ್ಟಿಯಿರುವುದರಿಂದ, ಕಾಂಗ್ರೆಸು ಅವರಿಗೆ ಹಿತಸೂಚನೆಯನ್ನು ಕೊಡಲು ಮರೆಯಲಾರದೆಂದೂ ಹೇಳಿರುವರು..

ಮಹಾರಾಜರ ಉತ್ತರ

ಇದಕಾರಣ, ಮಹಾರಾಜರು, ತಮ್ಮ ಸಂಸ್ಥಾನಗಳಲ್ಲಿ ಇರುವ ಚಳವಳಿಗಾರರನ್ನು ತಮ್ಮ ಶತ್ರುಗಳೆಂದು ತಿಳಿಯದೆ, ಅವರ ಆಡಳಿತೆಯ ನೆರಳಲ್ಲಿ ಸಂಪೂರ್ಣ ಜವಾಬ್ದಾರಿಯನ್ನು ಹೊಂದುವ ಜವಾಬ್ದಾರೀ ಜನರೆಂದು ತಿಳಿಯಬೇಕೆಂದೂ, ನರೇಂದ್ರರ ಮತ್ತು ಅವರ ಪ್ರಜೆಗಳ ಇತ್ಯರ್ಥದಲ್ಲಿ ಕಾಂಗ್ರೆಸಿನ ಮಧ್ಯಸ್ಥಿಕೆಯು ಸಹಕಾರಿಯಾಗುವುದೆಂದೂ, ಅಥವಾ ಅವರು ಕಾಂಗ್ರೆಸನ್ನು ನಂಬದಿದ್ದರೂ ಚಿಂತೆಯಿಲ್ಲ, ತಮ್ಮ ಪ್ರಜೆಗಳಲ್ಲಿ ಯೋಗ್ಯ ಸುಧಾರಣೆಗಳನ್ನು ಕೊಡಲು ಅವರು ಮನಸ್ಸು ಮಾಡಿದರೆ ಸಾಕೆಂದೂ ಹೇಳಿರುವರು.

ಡಾನ್ಜಿಗಿನಲ್ಲಿ ಹಿಟ್ಲರನ ಭಾಷಣ!

ರಶ್ಯ-ಜರ್ಮನರ ಬಾಂಧವ್ಯ

ಜರ್ಮನಿಯ ಸರ್ವಾಧಿಕಾರಿ ಹಿಟ್ಲರನು ಡಾನ್ಜಿಗಿಗೆ ಹೋಗಿ ತಾ. ೧೯ರಲ್ಲಿ ಒಂದು ಭಾಷಣಮಾಡಿದನು. ಬ್ರಿಟಿಷ್ ಸರಕಾರವನ್ನು ಖಂಡಿಸಿ ದರ್ಪದಿಂದ ಮಾತನಾಡಿದನು. ವರ್ಸಲೆಯ ಒಪ್ಪಂದದ ವಿಷಯವನ್ನು ಹೇಳಿ ಈ ಒಪ್ಪಂದದಂತೆ ಮುಂದಕ್ಕೆ ಪೋಲೆಂಡು ಎಂದಿಗೂ ತಲೆ ಎತ್ತಿ ನಿಲ್ಲಲಾರದೆಂದೂ ಹೇಳಿ ರಶ್ಯ-ಜರ್ಮನ್ ಸಂಬಂಧವನ್ನು ವಿವರಿಸಿದನು.

ಜರ್ಮನಿಯು ರಾಜಿಯಿಂದ ಪೋಲೆಂಡಿನೊಡನೆ ಇತ್ಯರ್ಥಮಾಡಲು ಯತ್ನಿಸಿರುವುದಾಗಿಯೂ, ಆದರೆ ಇಂಗ್ಲೆಂಡು ಪೋಲೆಂಡನ್ನು ಕೆರಳಿಸಿ ಯುದ್ಧಕ್ಕೆ ಇಳಿಸಿರುವುದಾಗಿಯೂ ಹೇಳಿದನು. ಪೋಲೆಂಡು ಧ್ವಂಸವಾಯಿತೆಂದೂ ಅಲ್ಲಿನ ಸೈನ್ಯವು ಬೇಗನೇ ಜರ್ಮನಿಗೆ ಶರಣಾಗುವುದೆಂದೂ ಹೇಳಿದನು.

ಜರ್ಮನ್ ರಶ್ಯಗಳ ಒಪ್ಪಂದದ ವಿಷಯ ಮಾತನಾಡುತ್ತಾ ಇವೆರಡು ಪ್ರಜಾಪ್ರಭುತ್ವ ರಾಷ್ಟ್ರಗಳ ತತ್ವಕ್ಕೆ ಭಿನ್ನವಾಗಿದ್ದು ಅವುಗಳನ್ನು ಅಭಿವೃದ್ಧಿಗೊಳ್ಳಲು ಬಿಡಲಾರವೆಂದೂ ಹೇಳಿದನು.

ಕಡೆಗೆ ಜರ್ಮನಿಗೆ ಇಂಗ್ಲೆಂಡಿನೊಡನೆ ಯುದ್ಧ ಮಾಡುವ ಕಾತುರತೆಯಿಲ್ಲವೆಂದೂ ಯುದ್ಧವನ್ನು ಮುಂದೊತ್ತಿದರೆ ಇಂಗ್ಲೆಂಡಿನ ಉದ್ದೇಶವು ಗೊತ್ತಾಗುವುದೆಂದೂ, ಯುದ್ಧವು ಮೂರಲ್ಲ ಏಳು ವರ್ಷಗಳ ವರೆಗೆ ನಡೆದರೂ ಜರ್ಮನಿಯು ಸೋಲಲಾರದೆಂದೂ ಹೇಳಿದನು.

THE
Canara Banking Corporation Ltd.,
(INCORPORATED IN BRITISH INDIA).
THREE YEARS' CASH CERTIFICATES
bearing interest at 4% p. a.
in denominations of
RS. 50/-, 100/-, 500/-, 1,000/-, & 5,000/-
are now issued at all our Branches.
For particulars call at or write to any of our nearest Branches.

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.
ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

THE
BANK OF MANGALORE LTD.,
MANGALORE.
ESTD 1931
Branches:-
Mudabidri & Padubidri.
Fixed Deposits will be received at following rates of interest.

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly.
Savings Bank deposit 3½% on daily balances.
All kinds of banking business transacted

ವಿಜ್ಞಾನಯುಗ

ಬಾಂಬು ವಿಮಾನಧಾಳಿಯ ರಕ್ಷಣೆ

ವಿಮಾನದಿಂದ ಬಂದು, ನಗರಗಳಿಗೆ ಬಾಂಬಿಕ್ಕಿ ಧ್ವಂಸಮಾಡುವುದನ್ನು ತಡೆಯಲು, ಲಂಡನ್ ಮೊದಲಾದ ಬ್ರಿಟಿಷ್ ನಗರಗಳಲ್ಲಿ ವಿಮಾನಗಳ ತಡೆಯು ಮಾಡಲಾಗಿದೆ. ಯುದ್ಧವು ಸುರುವಾಗುವುದಕ್ಕಿಂತ ಮೊದಲೇ ಇಂತಹ ತಡೆಯ ರಕ್ಷಣಾ ವಿಧಾನವು ಮಾಡಲ್ಪಟ್ಟಿತು. ಇವುಗಳಿಂದ ಹೇಗೆ ವಿಮಾನಗಳ ಹೊಡೆತವನ್ನು ತಪ್ಪಿಸಲಾಗುತ್ತದೆ ಎಂಬ ವಿಷಯವು ಅತ್ಯಂತ ಕುತೂಹಲದ್ದಾಗಿದೆ!

ಶತ್ರು ವಿಮಾನಗಳು ತಮ್ಮ ತೀವ್ರವಾದ ಬಾಂಬುಗಳನ್ನು ನಗರಗಳ ಮೇಲೆಸೆದು ಇಡೀ ನಗರದ ಜೀವಕಳೆಯನ್ನೇ ಹಾಳುಮಾಡಬಹುದು ಆದರೆ ಅಂತಹ ಪ್ರಾಮುಖ್ಯ ಸ್ಥಳಗಳಿಗೆ ಗುಂಡಿಕ್ಕಬೇಕಾದರೆ ಬಹುದೂರದಿಂದ ಗುಂಡು ಹಾಕುವುದರಿಂದ ಪ್ರಯೋಜನವಿಲ್ಲ. ಬಾಂಬುಗಳು ಎಲ್ಲೆಲ್ಲಿಗೋ ತಾಗಿ ಗುರಿತಪ್ಪಿ ಬೀಳುವುದರಿಂದ, ಆಯಾಸವು ವ್ಯರ್ಥವಾಗಬಹುದು. ಅದಕ್ಕೆ ಒದಲಾಗಿ, ಹತ್ತಿರಕ್ಕೆ ಬಂದು ಗುರಿಯಿಟ್ಟು ಹೊಡೆದಲ್ಲಿ ಅಂತಹ ವಿಮಾನಗಳು ತಪ್ಪಿಸಿ ಹೋಗದಂತೆ ಎಲ್ಲೆಡೆಗಳಲ್ಲಿಯೂ, ಬಲವಾದ ರಕ್ಷಣೆಯು ಕಟ್ಟಲ್ಪಟ್ಟಿದೆ.

ವಿಮಾನವು ಮೈಲು ಒಂದರ ಎತ್ತರದಲ್ಲಿ ಹಾರಾಡುವುದಿದ್ದರೂ ಕೆಳಗಿಂದ ನೋಡಿಕೊಂಡಿರಬಹುದು ಮಾತ್ರವಲ್ಲದೆ ಅವುಗಳಿಗೆ ನೋಟವಾಗಿ ಕೋವಿಯನ್ನು ಹಿಡಿದಿರಬಹುದು ಅವುಗಳು ಹತ್ತಿರಕ್ಕೆ ಬಂದು ಗುಂಡುಹೊಡೆಯ ಬೇಕೆಂದು ಇಚ್ಛೆಪಟ್ಟಲ್ಲಿ ತಿರಿಗಿ ಮೇಲಕ್ಕೆ ಹಾರುವ ಆಶೆಯೇ ಇಲ್ಲ.

ಬೆಲೂನುಗಳು ಭೂಮಿಗೆ ಒಹು ಬಲವಂತವಾದ ಸರಿಗೆಯಿಂದ ತಾಗಿಸಿರುತ್ತವೆ! ಇಡೀ ನಗರದಲ್ಲಿ ಅವುಗಳು ಹಾರಾಡುತ್ತವೆ ಇಡೀ ಲಂಡನಿಗೆ ಸುತ್ತು ಊಂಕೈ ಮಿಕ್ಕಿದ ಬೆಲೂನುಗಳು ಇವೆ ಅವುಗಳ ಸರಿಗೆಗಳು ನಗರಕ್ಕಿಂತ ಸಾವಿರ ಫೀಟು ಎತ್ತರದಲ್ಲಿ ವಿಶಾಲವಾಗಿ ಹರಡಿಕೊಂಡಿವೆ. ಅವುಗಳಿಂದ ಹೊರಗಡೆ ವಿಮಾನಗಳು ಹೋಗಬೇಕಾದರೆ ಬಹಳ ಚಮತ್ಕಾರವಿರಬೇಕು ರಾತ್ರಿ ಸಮಯದಲ್ಲಿ ಅದೂ ಸಾಧ್ಯವಾಗುವಂತಿಲ್ಲ ಹಕ್ಕಿಯೊಂದು ವಿಮಾನಕ್ಕೆ ಎದುರುತಾಗಿದರೆ, ಹಕ್ಕಿಯ ಅವಸ್ಥೆ ಯೇನಾದಿತೆಂದು ನಾವು ತಿಳಿಯಬಹುದು. ಅಂತೆಯೇ ಶತ್ರುಗಳ ವಿಮಾನಗಳು ಈ ಸರಿಗೆಗಳಿಗೆ ತಗಲಿದರೆ ಆಗುವವು. ಅವುಗಳ ರೆಕ್ಕೆಯು ಕಡಿದು ಹೋಗುವುದು ಬಾಲನ್ಸ್ ತಪ್ಪುವುದು. ತಿರಿಗಿ ಮೇಲೇರಲು ಸಾಧ್ಯವಿಲ್ಲದಾಗಿ ನಿರ್ನಾಮವಾಗುವವು.

ಬಾಂಬುಗಳ ಹಾವಳಿಗೆ ರಕ್ಷಣಾ ಮಂದಿರ

ಇಡೀ ರಾಷ್ಟ್ರದ ದೃಷ್ಟಿಯಿಂದ ನೋಡಿದಲ್ಲಿ ಒಬ್ಬ ವ್ಯಕ್ತಿಯ ಮರಣವು ದೊಡ್ಡದಲ್ಲ ಆದರೆ, ಜನರ ಗುಂಪು ಗುಂಪೇ ನಾಶವಾಗುವುದು ಇಡೀ ರಾಷ್ಟ್ರದ ದೃಷ್ಟಿಯಿಂದ ಸರ್ವಥಾ ಕಡೆಗಣಿಸತಕ್ಕುದಲ್ಲ. ಇಂದಿನ ಯುದ್ಧಕ್ರಮಗಳಲ್ಲಿ ವಿಮಾನಗಳಲ್ಲಿ ಬಂದು, ಬಾಂಬುಗಳನ್ನು ಎಸೆಯುವುದರಿಂದ ಆಗುವ ಮರಣ ಸಂಖ್ಯೆಗೆ ಮಿತಿಯಿಲ್ಲ ಅವುಗಳನ್ನು ತಡೆದು ಸಾವಿರಾರು ನಿರಪರಾಧಿ ಜನರ ಜೀವವನ್ನು ಕಾಪಾಡುವುದು ಸರಕಾರದ ಕರ್ತವ್ಯವಾಗಿರುವುದು.

ಹೀಗೆ ಮೇಲಿಂದ ಬೀಳಬಹುದಾದ ಘೋರವಾದ ಬಾಂಬುಗಳನ್ನು ತಡೆದು ಜನತೆಯನ್ನು ರಕ್ಷಿಸುವ ಕಾರ್ಯವು ಸುಲಭವಾದ ಸಾಹಸವಲ್ಲ ಆದರೂ ದೇಶವಿಡೀ ಈ ರೀತಿಯ ಸಂರಕ್ಷಣೆಯ ಕಾರ್ಯವನ್ನು ಮಾಡದೆ ನಿರ್ವಾಹವಿಲ್ಲ ಹಾಗೆ ಮಾಡುವಾಗ ದೇಶದ ಸಂಪತ್ತನ್ನು ಗಣಿಸಿ, ದೇಶದ ವ್ಯವಹಾರಕ್ಕೆ ಧಕ್ಕೆ ತಗಲದಂತೆಯೂ ನೋಡಿಕೊಳ್ಳಬೇಕು

ಇವುಗಳೆಲ್ಲದಕ್ಕೂ ಈಗ ಕಂಡಿರುವ ಪರಿಹಾರವೆಂದರೆ, ಕಾಂಕ್ರೀಟಿನ ಘನವಸ್ತುವಿನಿಂದ ಆಶ್ರಯಗಳನ್ನು ಕಟ್ಟಿಸುವುದು ಒಂದು ನೆಲಮಾಳಿಗೆಯನ್ನು ರಚಿಸುವುದು ಇನ್ನೊಂದು ಮನೆಗಳ ಸಮೀಪವೇ ಆವೃತವಾಗಿ ಯಾವ ಗುಂಡಿಗೂ ಅಭೇದ್ಯವಾಗಿರುವ ಕಟ್ಟಡಗಳನ್ನು ಎಲ್ಲೆಡೆಗಳಲ್ಲಿಯೂ ಕಟ್ಟಿರುವುದು ಎಲ್ಲಿಯಾದರೂ ವಿಮಾನಧಾಳಿಯಾಗುವುದೆಂದು ಕಂಡು ಬಂದರೆ ಕೂಡಲೇ ಆ ಮಂದಿರಗಳಲ್ಲಿ ಹೋಗಿ ಅವಿತುಕೊಳ್ಳಬಹುದು

ಬಾಂಬುಗಳು ಅಂತಹ ಕೊಂಕ್ರೆಟ್ ಕಟ್ಟಡಗಳ ಮೇಲೆ ಬೀಳುವಾಗ ಸರಿಯಾಗಿ ಪ್ರವೇಶಿಸ ಒಡೆದು ಹೋಗುವುದಕ್ಕಿಂತ ನಿಷ್ಪ್ರಯೋಜನವಾಗಿ ಹಾರಿಹೋಗುವವು

ಮುಂದೆ ಕಟ್ಟಡ, ಮನೆಗಳನ್ನು ಕಟ್ಟಿಸುವಾಗ ಅದರೊಡನೆಯೇ ಇಂತಹ ರಕ್ಷಣಾಗೃಹವನ್ನು ಕಟ್ಟಿಸುವ ಏರ್ಪಾಡು ಮಾಡುವುದು ಇದರಿಂದ ಖರ್ಚು ಮಾಡುವುದು ಮಾತ್ರವಲ್ಲದೆ ಸುಲಭವೂ ಆಗುವುದು.

ಜರ್ಮನಿಯ ಸಮುದ್ರದಲ್ಲಿ ಆಹಾರ

ಜರ್ಮನ್ ವಿಜ್ಞಾನಿಗಳು ಈಗ ಬಹಳ ಪ್ರಗತಿಯನ್ನು ತೋರಿಸುತ್ತಿದ್ದಾರೆ ಬ್ರಿಟನಿನೊಡನೆ ಯುದ್ಧವು ಆರಂಭವಾಗಿರುವ ನಿಮಿತ್ತ, ಎಲ್ಲಾ ಕಡೆಗಳಿಂದಲೂ ಜರ್ಮನಿಗೆ ಯಾವ ಆಹಾರ ವಸ್ತುಗಳಾಗಲಿ ಹೋಗದಂತೆ ಬ್ರಿಟನು ಸಂಬಂಧಿಸಲು ಸಾಧ್ಯವಿರುವಾಗ ಆಹಾರಕ್ಕಾಗಿ ಜರ್ಮನಿಯು ಕಷ್ಟಪಡಬಾರದೆಂದು ಅವರು ಈ ಹಂಚಿಕೆಯನ್ನು ಮಾಡಿದ್ದಾರೆ.

ಅನೇಕ ಬೆಳೆಗಳನ್ನು, ಆಹಾರ ಉಪಯೋಗೀ ವಸ್ತುಗಳನ್ನು ಸಮುದ್ರದಿಂದ ತೆಗೆಯುವುದು ಸಾಧ್ಯವುಂಟೆಂದೂ, ಹೀಗೆ ಅನ್ಯರಾಷ್ಟ್ರಗಳನ್ನು ಆಹಾರದ ಸಲುವಾಗಿ ಜರ್ಮನಿಯು ಆಧರಿಸಿರಬೇಕಾದ ಅವಶ್ಯವಿಲ್ಲವೆಂದೂ ಅವರು ಶೋಧಿಸಿ ತಿಳಿಸಿದ್ದಾರೆ

ಹಲವು ಆಹಾರಗಳ ಬದಲಾಗಿ ಬೇರೆ ಬೇರೆ ಪದಾರ್ಥಗಳನ್ನು ಕಂಡು ಹುಡುಕಿದ್ದಾರೆ

ಡಾಕ್ಟರ್ ಜೋರ್ಜ್ F. ಎಲ್. ಕ್ಲಾರ್ಕ ಎಂಬ ಅಮೇರಿಕದ ವಿಜ್ಞಾನಿಗಳು ಈ ಜರ್ಮನಿಯ ಪ್ರಯೋಗವು ಪ್ರಯೋಜನಕ್ಕೆ ಬೀಳಲಾರದೆಂದು ತಿಳಿಸುತ್ತಾರೆ.

ಮಾರ್ಗ ಸಂಚಾರಕರಿಗೆ ವಿಮಾನದ ಅಪಘಾತವನ್ನು ತಪ್ಪಿಸಲು ತೋಟದ ಮುಚ್ಚಳದ ಅಡಿಯಲ್ಲಿ ಕಟ್ಟಿಂದ ನೆಲಮಂದಿರ

ಅವರು ಹೇಳುವಂತೆ, ರತ್ನರಾಶಿಗಳಿಗೆ ಸ್ಥಳವಾದ ಸಮುದ್ರದಿಂದ ಬಂಗಾರ ವಜ್ರ ವೈಢೂರ್ಯಗಳನ್ನು ತೆಗೆಯಲು ಎಷ್ಟರ ಮಟ್ಟಿಗೆ ಕಷ್ಟವುಂಟೋ ಅಷ್ಟೇ ಈ ಜೂಪ್ಲಾಂಕ್ಟನುಗಳನ್ನು ತೆಗೆಯಲೂ ಆಯಾಸವುಂಟು.

ಸಮುದ್ರದಲ್ಲಿ ಮೆಗ್ನೇಶಿಯಮ್

ಭೂಮಧ್ಯ ಸಮುದ್ರದಲ್ಲಿ ಪರಿಶೋಧನೆ ಮಾಡಿದಾಗ ಬ್ರಿಟಿಷ್ ವಿಜ್ಞಾನಿಗಳ ಒಂದು ಕೂಟವು ಸಮುದ್ರದಲ್ಲಿ ಮೆಗ್ನೇಶಿಯಮ್ ಒಕ್ಸೈಡನ್ನು ಕಂಡು ಹುಡುಕಿರುವರು!

ಯುದ್ಧದ ಸಮಯದಲ್ಲಿ ಮೆಗ್ನೇಶಿಯಮಿನ ಅಗತ್ಯವು ತುಂಬಾ ಇದೆ ಬ್ರಿಟನಿಗೆ ಬೇಕಾದ ಈ ಮೆಗ್ನೇಶಿಯಮ್ ಆಸ್ಟ್ರಿಯ, ರಶ್ಯ ಮತ್ತು ಅಮೇರಿಕಗಳಿಂದ ಬರುವುದು ಯುದ್ಧವು ಉಂಟಾದ ಕಾರಣದಿಂದ ಅವುಗಳ ಆಮದು ನಿಂತು ಹೋದಲ್ಲಿ ಈ ಹೊಸ ಶೋಧನೆಯಿಂದ ತುಂಬಾ ಸಹಾಯವಾಗಲಿದೆ ವೆಸ್ಟ್ ಮಿನ್‌ಸ್ಟರ್ ಸಾಗರಲವಣ ಪ್ರೊಡಕ್ಟ್ ಕಂಪೆನಿಯ ಚ್ಯಾರ್ ಮಾನ್ಯರು ಹೀಗೆನ್ನುತ್ತಾರೆ:—

"ನಮಗೆ ಬೇಕಾದಷ್ಟು ಮೆಗ್ನೇಶಿಯಮುಗಳನ್ನು ಕಡಿಮೆ ಕ್ರಯದಿಂದ ಖಂಡಿತವಾಗಿ ತೆಗೆಯಬಹುದು ಇನ್ನು ಮುಂದಕ್ಕೆ ನಮ್ಮ ಹಲವರು ಕೈಗಾರಿಕೆಗಳಿಗೆ ಬೇಕಾದ ಈ ವಸ್ತುವನ್ನು ವಿದೇಶದಿಂದ ತರಿಸುವ ಅಗತ್ಯವು ಬೀಳಲಾರದು"

ಟೆಲ್ವಿಶನ್

ದೂರದ ಸಂಭವಗಳನ್ನು ಕಾಣಲು ಕೇಳಲೂಬಹುದು

ಇಂದಿನ ಪ್ರಗತಿ ಹೊಂದುತ್ತಿರುವ ವಿಜ್ಞಾನದ ಪ್ರಭಾವದಿಂದ ಮಾನವನು ಮಹಾವೇಗದಲ್ಲಿ ಸಿಕ್ಕಿದ್ದಾನೆ ದಡ್ಡತನಕ್ಕೆ ಅವಸರವಿಲ್ಲ ಮಾನವನ ಗತಿಯು ವಾಯುಗತಿಯಾಗಿದೆ! ಮಾನವನ ಕಿವಿಯು ಬಹುದೂರದ ಸ್ವರವನ್ನು ಕೇಳುವುದು ಆದರೆ, ಈಚೀಚೆಗೆ ಸಿದ್ಧವಾದ ಟೆಲ್ವಿಶನಿನಿಂದ ಮಾನವನು ದೂರದ ದೃಶ್ಯಗಳನ್ನು ಒಮ್ಮೆಗೆ ಕಾಣುವುದು ಕೇಳುವುದೂ ಸಾಧ್ಯವಿದೆ ರೇಡಿಯೋ ಮೂಲಕ ಪ್ರಪಂಚದ ಹಲವು ವಿಷಯಗಳನ್ನು ಆದೇಕ್ಷಣದಲ್ಲಿ ಕೇಳುವುದು ಸಾಧ್ಯವಿತ್ತು ಸಿನೆಮಾ, ಫೊಟೋಗ್ರಫಿಗಳ ಮೂಲಕ, ಬೇರೆ ಬೇರೆ ವಿಷಯಗಳನ್ನು ಕಣ್ಣ ಮುಂದೆ ಕುಣಿಯುವಂತೆ ನೋಡಬಹುದಾಗಿತ್ತು ಆದರೆ ಈ ಎರಡು ಸಂಭವಗಳೂ ಏಕಕಾಲದಲ್ಲಿ ಕಂಡು ಕೇಳುವ ಭಾಗ್ಯವನ್ನು ಒದಗಿಸಿದುದು ಟೆಲ್ವಿಶನ್ ಯಂತ್ರವು!

ಚಲನಚಿತ್ರಗಳಲ್ಲಿ ನಾವು ಕಾಣುವ ಅಥವಾ ಅದರೊಡನೆ ಕೇಳುವ ಸಂಭವಗಳಿಗಿಂತ ಟೆಲ್ವಿಶನಿನ ದೃಶ್ಯವು ಹೆಚ್ಚು ಪರಿಪೂರ್ಣವಾದದ್ದು ಯಾಕೆಂದರೆ, ಸಿನೆಮಾವು ಕಳೆದಕಾಲದ ಸಂಗತಿಯನ್ನು ತಿಳಿಸುವುದು, ಆದರೆ ಟೆಲ್ವಿಶನ್ ಈಗ ಆಗುವ ವಿಷಯಗಳನ್ನು ಕಣ್ಣಾರೆ ತೋರಿಸಿ ಕಿವಿಯಾರೆ ತಿಳಿಸುವುದು. ಇಂದು ಯಾವುದಾದರೂ ಒಂದು ಸ್ಥಳದಲ್ಲಿ ಆಗುವ ಘಟನೆಯನ್ನು ಒಮ್ಮೆ ಕೇಳಿದರೆ ಅದನ್ನು ಕಣ್ಣಾರೆ ಕಾಣಬೇಕೆಂದರೆ ಸಿನಿಮಾಗಳ ಮೂಲಕ ಬಹುಕಾಲಹೋಗುವುದು ಆಗ ನಿಜವಾದ ಆ ಸಂಭವದ ಸ್ವಾರಸ್ಯವು ಅಳಿದುಹೋಗುವುದುಂಟು. ಆದರೆ ಟೆಲ್ವಿಶನು ಆ ದೃಷ್ಟಿಯಲ್ಲಿ ಪ್ರಪಂಚದ ಯಾವ ಮೂಲೆಯಲ್ಲಿ ಆಗುವ ಕೇಳುವ ವಿಷಯಗಳನ್ನೂ ಅದೇ ಮುಹೂರ್ತದಲ್ಲಿ ನಮ್ಮ ಕಣ್ಣುಮುಂದೆ ಕಿವಿಯ ಮುಂದೆ ತರುವುದೆಂದರೆ ಅದರ ಆನಂದವಾದರೂ ಎಷ್ಟಿರಬಹುದು?

ರೇಡಿಯೋದಿಂದ ಕೇವಲ ಕಿವಿಗೆ ಹಿತವಾದ ವಿಷಯಗಳು ಮಾತ್ರ ನಾವಿಂದ ಕೇಳಿ ಆನಂದಪಡುತ್ತೇವೆ ಆದರೆ ಕಿವಿ ಕಣ್ಣುಗಳೆರಡರ ಆನಂದವನ್ನು ಏಕಕಾಲದಲ್ಲಿ ಕೊಡುವ ಟೆಲ್ವಿಶನಿಂದ ನಿಜವಾಗಿಯೂ ಹೆಚ್ಚಿನ ಲಾಭವಾಗಬಹುದು. ಇಂದು ರೇಡಿಯೋದಿಂದ, ವರ್ತಮಾನ, ಭಾಷಣ ಸಂಗೀತಗಳನ್ನು ನಾವು ಕೇಳಿದರೆ, ಮುಂದಕ್ಕೆ ಟೆಲಿವಿಶನಿನಿಂದ ನಾಟಕ, ಆಟ, ಮೊದಲಾದವುಗಳನ್ನು ಅನುಭವಿಸಬಹುದು.

ಇದರಿಂದ ಜಗತ್ತಿನ ವಿವಿಧ ಭಾಗಗಳು, ಅಲ್ಲಿನ ಜನರ ನಡೆನುಡಿಗಳು, ದಿನನಿತ್ಯದ ಆಚಾರವಿಚಾರಗಳು ಅವರ ಕಡೆಗೆ ಸಂಸ್ಕೃತಿಗಳು ನಮಗೆ ಅಭ್ಯಾಸವಾಗಿ ವಿಶ್ವಸಹೋದರಭಾವವು ಹೆಚ್ಚಬಹುದೆಂದು ನಿರೀಕ್ಷಿಸಲಾಗಿದೆ.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತುಲಾಕಾವೇರಿ ಸಂಕ್ರಮಣ ತಾರೀಕು ೧೭-೧೦-೧೯೩೯ | **ತಾರೀಕು 22-10-'39ರಲ್ಲು** | **ಮೈಸೂರು ದಸರಾಮಹೋತ್ಸವದ ಸಮಾರಂಭ** ತಾ. ೧೩-೧೦-'೩೯ರಿಂದ ೨೨-೧೦-'೩೯ರ ವರೆಗೆ

ಮೈಸೂರು ಶ್ರೀಮನ್ಮಹಾರಾಜರವರ ಜಂಬೂ ಸವಾರಿ ಮೆರವಣಿಗೆಯು ಚಿತ್ತಾಕರ್ಷಣೀಯ ನೋಟ, ಇವೆಲ್ಲಕ್ಕೂ ಒಂದೇ ಬಾರಿ ಅತ್ಯಲ್ಪ ಖರ್ಚಿನಿಂದ ನೋಡಲು ಬಂದೊದಗಿರುವ ಸುಸಂದರ್ಭವನ್ನು ಕಳಕೊಳ್ಳದಿರಿ—

ತಾರೀಕು ೧೭—೧೦—೧೯೩೯ರಲ್ಲು ಭಾಗಮಂಡಳದ ಸಮೀಪದಲ್ಲಿರುವ ಪುಣ್ಯಪ್ರದವಾದ ತಲಕಾವೇರಿ ತೀರ್ಥದಲ್ಲಿ, ಮುಹೂರ್ತಕಾಲದಲ್ಲಿ ಮಿಂದು, ಪುಣ್ಯಾರ್ಜನೆಯನ್ನು ಮಾಡಿ ಅಲ್ಲಿಂದ ಹಿಂತಿರುಗಿ ಮಡಿಕೇರಿಗೆ ಬಂದು, ಮಡಿಕೇರಿಯಿಂದ ಮೈಸೂರಿಗೆ ಹೋಗಿ ಅಲ್ಲಿ ಅತೀ ವಿಜೃಂಭಣೆಯಿಂದ ನಡೆಯುವ ದಸರಾ ಮಹೋತ್ಸವವನ್ನು ನೋಡಿ ನೇತ್ರಾನಂದವನ್ನು ಹೊಂದುವರೆ ಇದು ಅತ್ಯುತ್ತಮವಾದ ಸಂದರ್ಭ..

ವಿದ್ಯುದ್ದೀಪಗಳಿಂದಲಂಕೃತವಾದ ಅರಮನೆಯ ನೋಟ-ಚಾಮುಂಡಿ ಬೆಟ್ಟದ ಸೊಬಗು-ಶ್ರೀ ಚಾಮುಂಡೇಶ್ವರಿಯ ದರ್ಶನಲಾಭ-ಕನ್ನಂಬಾಡಿ ಕಟ್ಟೆಯ ನಿರ್ಮಾಣ ಚತುರತೆ-ವಿದ್ಯುದ್ದೀಪಗಳಿಂದ ಶೋಭಿಸುವ ಕಾರಂಜಿಗಳ ದೃಶ್ಯ-ಶ್ರೀ ರಂಗಸ್ವಾಮಿಯ ದರ್ಶನ-ಟಿಪ್ಪುವಿನ ಕೋಟೆಯ ನಿರ್ಮಾಣ ಚತುರತೆ-ಶ್ರೀ ನಂಜುಂಡೇಶ್ವರನ ದರ್ಶನ-ಶಿವಸಮುದ್ರದ ಸೊಬಗು-ಸುವ್ಯವಸ್ಥಿತ ಅಶ್ವಶಾಲೆ-ವಿವಿಧ ವಸ್ತು ಪ್ರದರ್ಶನಾಲಯದ ಪ್ರೇಕ್ಷಣೀಯ ನೋಟ-ಲಲಿತಮಹಾಲ ಅರಮನೆಯ ಬೆಡಗು-ಪ್ರಾಣಿ ಪ್ರದರ್ಶನಾಲಯದ ಸೊಬಗು-ಇವೆಲ್ಲವನ್ನು ಒಂದೇ ಬಾರಿ ಅತ್ಯಲ್ಪ ಖರ್ಚಿನಿಂದ ನೋಡಲು ಇದೇ ಅತ್ಯುತ್ತಮ ಸಂದರ್ಭ—

ಹೆಚ್ಚಿನ ಮಾಹಿತಿಬಗ್ಗೆ-ಈ ಕೆಳಗಿನ ವಿಳಾಸಕ್ಕೆ ಪತ್ರಮುಖಾಂತರವಾಗಲಿ, ಅಥವಾ ಸ್ವತಹ ಬಂದು ತಿಳಕೊಳ್ಳಬಹುದು.

ಪ್ರಯಾಣಿಕರಿಗೆ ಉಳಕೊಳ್ಳಲು ಮಡಿಕೇರಿ ಮತ್ತು ಮೈಸೂರಲ್ಲಿ ನಮ್ಮ ವಿಶ್ರಾಂತಿ ಗೃಹಗಳಿವೆ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL,

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ, ಗ್ಲೋಳಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ, ಪೆರಿಡೇಪಿ,

P. O. Peridepi (ನೆಲ್ಲೂರು ಜಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	5—4—0	—
,, ದುಯಂ ,, ,,	5—2—0	—
,, ಅವ್ವಲ್ ಸುಗ್ಗಿ ,,	5—2—0	—
,, ದುಯಂ ,, ,,	4—14—0	5—0—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	30—0—0	37—8—0
,, ಸಿಪ್ಪೆ ಇದ್ದದು ,,	32—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	55—0—0	—
,, ದಿಲ್‌ಪಸಂದ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—12—0	8—12—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	2—8—0	3—8—0
ಗೇರುಬೀಜ ಮುಡಿಗೆ	8—4—0	8—4—0
ಕಬ್ಬಿನ ಬೆಲ್ಲ ಖಂಡಿಗೆ	55—0—0	60—0—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	16—0—0	18—0—0

Date 29—9—1939 | ಬಿಡಿ ಸಂಚಿಕೆ ಒಂದಾಣೆ | Regd. No. M 3406

ಸ್ವಾಭಿಮಾನಿ

ವಾರ್ಷಿಕ ಚಂದಾ ರೂ. 2—0—0 | ಅಂಚೆ ವೆಚ್ಚ ಸೇರಿ ರೂ. 2—13—0

ಸಂಪುಟ 33] | ತಾರೀಖು 29—9—1939 | [ಸಂಚಿಕೆ 39

YOUR DAUGHTER'S MARRIAGE MADE EASY

GIRLS are more or less Lumpsum Liabilities unlike the BOYS who are Instalment Liabilities. You can not only convert Lumpsum Liabilities into Instalment Liabilities, but also guarantee the PURPOSE through Policies in

THE BOMBAY LIFE ASSURANCE CO., LIMITED

For details, please consult:-

KOCHIKAR BROTHERS LTD.

Madras Branch Secretaries,
Bombay Life Building,
Sir Lalubhai Samaldas Road,
Gandhi Nagar, UDIPI.

OR ANY OF THEIR FOLLOWING OFFICES:—

Post Box No. 337 MOUNT ROAD, MADRAS	Visweshwarapuram Circle BANGALORE CITY	Charni Road, Girgaum BOMBAY NO. 4.
Car Street MANGALORE	Puthiyara, CALICUT	Central Station Road, TRIVENDRUM

MAKE LIFE WORTH-LIVING!

Indigestion—Insomnia—Dry Cough—Nervousness—Weak Heart &c.,
these make you wiery of Life!

CONSULT US AND BUY YOUR LIFE'S HAPPINESS!

Oils—that cool the brain and induce sleep.
Lehas—that build-up your wasted system.
Asavas—that regenerate your jaded nerves.

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ – ನಿದ್ರಾವಿಹೀನತೆ – ಒಣ ಕೆಮ್ಮು –
ನರಗಳ ಅಬಲತೆ – ದುರ್ಬಲ ಹೃತ್ಕೋಶ – ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

ಸಂಪುಟ ೩೩ | ತಾರೀಕು ೬—೧೦—೧೯೩೯ (6—10—1939) | ಸಂಚಿಕೆ ೪

ವಿಮಾನದ ಪ್ರಗತಿ



೧೯೦೯—೧೯೧೯—೧೯೨೯—೧೯೩೯ ವರ್ಷಗಳಲ್ಲಿ ವಿಮಾನದ ಪ್ರಗತಿಯು ಇಲ್ಲಿ ತೋರಿಸಲಾಗಿದೆ. ೧೯೦೯ರಲ್ಲಿನ ವಿಮಾನವು ಕೇವಲ ೬ ಅಶ್ವಶಕ್ತಿಯದಾಗಿತ್ತು. ೧೯೩೯ರಲಿ ೬೦೦ ಅಶ್ವಶಕ್ತಿಯುಳ್ಳದ್ದಾಗಿದೆ!

ಸಚಿತ್ರ ವಾರಪತ್ರಿಕೆ

ಸಾಮ್ರಾಜ್ಯಶಾಹೀ ಭಾಷೆಯನ್ನು ಬಿಟ್ಟುಬಿಡಿರಿ

(ಝೆಟ್ಲೆಂಡರಿಗೆ ಮಹಾತ್ಮರ ಉತ್ತರ)



ಲಾರ್ಡ್ಸ ಸಭೆಯಲ್ಲಿ ಭಾರತ ಮಂತ್ರಿಗಳಾದ ಲಾರ್ಡ ಝೆಟ್ಲೆಂಡರು ಈ ಯುದ್ಧದ ಪ್ರಸಂಗದಲ್ಲಿ ಹಿಂದುಸ್ತಾನದ ಕರ್ತವ್ಯವನ್ನು, ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡಿದ್ದನ್ನು ನೋಡಿ ಮಹಾತ್ಮ ಗಾಂಧಿಯವರು ಈ ಕೆಳಗಿನ ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ಝೆಟ್ಲೆಂಡರವರು ಮಾಡಿದ ಭಾಷಣವನ್ನು ಕೇಳಿ ನಾನು ಸುಮ್ಮನೇ ಕೂಡುವದೆಂದರೆ ಹಿಂದುಸ್ಥಾನಕ್ಕೇ ಅಲ್ಲ ಇಂಗ್ಲಂಡದ ದೃಷ್ಟಿಯಿಂದಲೂ ದ್ರೋಹ ಬಗೆದಂತಾಗುತ್ತದೆ. ಕಾಂಗ್ರೆಸ್ಸಿಗೆ ಬಗೆದ ಅವರ ದೂಷಣೆಗಳನ್ನು ಕೇಳಿ ಸುಮ್ಮನೇ ವಾದವಿವಾದ ಮಾಡುವದರಲ್ಲಿ ಕಾಲ ಕಳೆಯಲು ನನಗೆ ಇಚ್ಛೆ ಇಲ್ಲ.

"ಕಾಂಗ್ರೆಸ್ ಅಂದರೆ ಭಾರತದ ಏಕಮೇವ ಪ್ರಾತಿನಿಧಿಕ ಸಂಸ್ಥೆಯುಂಟುದನ್ನು ನಾನು ಈಗಲೂ ಸಾರುತ್ತೇನೆ. ಕಾಂಗ್ರೆಸ್ ಸಂಸ್ಥೆಯು ಎಲ್ಲ ಜಾತಿಗಳ ಎಲ್ಲ ಜನಾಂಗಗಳ ಪ್ರತಿನಿಧಿ ಎಂಬುದು ಎಲ್ಲರಿಗೂ ಅರಿಯದ ವಿಷಯವಲ್ಲ. ಈಗ್ಗೆ ಹಲವು ವರ್ಷಗಳಿಂದ ಕಾಂಗ್ರೆಸ್ಸು ಸತತ ಯಾವ ಆತಂಕವೂ ಇಲ್ಲದೆ ಯಾವದೆ ಜಾತಿ ಪಂಗಡಗಳ ಭೇದಭಾವವಿಲ್ಲದೆ ಇಡೀ ಹಿಂದುಸ್ತಾನದ ಪ್ರತಿನಿಧಿಯಾಗಿ ಕೆಲಸ ಮಾಡಹತ್ತಿದ್ದು ಗೊತ್ತಿದ್ದದ್ದೇ ಇದೆ. ಈ ಸಂಸ್ಥೆಯಲ್ಲಿ ಯಾವ ಮುಸಲ್ಮಾನರದಾಗಲೀ ಅಥವಾ ಸಂಸ್ಥಾನಿಕರದಾಗಲೀ ಒಂದೇ ತರಹದ ಸಂಬಂಧವಿರುವದಿಲ್ಲ. ಎಲ್ಲ ಜಾತಿಗಳ ಎಲ್ಲ ಜನಾಂಗಗಳ ಒಂದೇ ಒಂದು ಸಂಸ್ಥೆಯಂದರೆ ಕಾಂಗ್ರೆಸ್ ಒಂದೇ. ಈ ನಮ್ಮ ಕಾಂಗ್ರೆಸ್ಸು ಸಂಸ್ಥಾನದ ಹಿತವನ್ನೂ ಬಯಸುತ್ತದೆ.

ಈಗಿನ ಪ್ರಸಂಗದಲ್ಲಿ ಬ್ರಿಟಿಷರಿಗೆ ಅವರ ಸ್ಪಷ್ಟಾಭಿಪ್ರಾಯಗಳ ಆಹ್ವಾನ ಮಾಡಿದ್ದು ಕಾಂಗ್ರೆಸ್ಸು ಸಂಸ್ಥೆಯೇ. ಬ್ರಿಟಿಷರು ಎಲ್ಲ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ ಹೋರಾಡುವದೇ ನಿಜವಿದ್ದಲ್ಲಿ ಯುದ್ಧದ ಅವರ ಉದ್ದೇಶಗಳಲ್ಲಿ ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಮಾನ್ಯ ಮಾಡಬೇಕು. ಮತ್ತು ಸ್ಪಷ್ಟ ಅಭಿಪ್ರಾಯಗಳನ್ನು ಕೊಡಬೇಕು. ಎಂದು ಮುಂತಾಗಿ ಕೇಳಿದ್ದು ಕಾಂಗ್ರೆಸ್ಸು. ಸ್ವಾತಂತ್ರ್ಯದ ಕಲ್ಪನೆಯನ್ನು ಹಿಂದೀಯರೇ ನಿರ್ಣಯ ಮಾಡತಕ್ಕವರಾಗಿರುವರು.

ನಿಶ್ಚಯವಾಗಿ ಝೆಟ್ಲೆಂಡ ಸಾಹೇಬರು ಈ ಕುಂಟ ನೆವಗಳನ್ನು ಮುಂದೆ ಮಾಡುವದು ಯೋಗ್ಯವಲ್ಲ. ಬ್ರಿಟಿಷರ ಸ್ಪಷ್ಟಾಭಿಪ್ರಾಯಗಳನ್ನು ಇಂಥ ಯುದ್ಧದ ಬಿಕ್ಕಟ್ಟಿನ ಪ್ರಸಂಗದಲ್ಲಿ ಕಾಂಗ್ರೆಸ್ಸು ಕೇಳಿಕೊಂಡದ್ದು ಯೋಗ್ಯವಲ್ಲೆಂಬ ಅವರ ಅಭಿಪ್ರಾಯವು ತೀರ ನಿರಾಧಾರವಾದದ್ದಾಗಿದೆ. ಕಾಂಗ್ರೆಸ್ಸು ಈ ಬಗೆಯ ಬೇಡಿಕೆಗಳನ್ನೊಡ್ಡಿದ್ದು ಇದೇನು ಆಶ್ಚರ್ಯದ ಸಂಗತಿಯಲ್ಲ. ಮತ್ತು ಅದು ಯೋಗ್ಯ ಮಾರ್ಗವನ್ನೇ ಕೈಕೊಂಡಿದೆ. ಕಾಂಗ್ರೆಸ್ಸು ಜನತೆಯ ಮುಂದೆ ಹೋಗಿ ಯುದ್ಧದ ಪರಿಣಾಮವಾಗಿ ಹಿಂದುಸ್ಥಾನವು ಸ್ವಾತಂತ್ರ್ಯವನ್ನು ದೊರಕಿಸಿತೆಂದು ಹೇಳಲು ಬಯಸುತ್ತದೆ.

ಆದುದರಿಂದ ಬ್ರಿಟಿಷರ ಮಿತ್ರನೆಂದು ನಾನು ಬ್ರಿಟಿಷ ಮುತ್ಸದ್ದಿಗಳಿಗೆ ಸಾಮ್ರಾಜ್ಯ ಶಾಹಿಗಳ ಭಾಷೆಯನು ಮರೆಯಲು ಬಿನ್ನವಿಸುತ್ತೇನೆ. ಮತ್ತು ಸಾಮ್ರಾಜ್ಯ ಶಾಹೀ ದಾಸ್ಯಶೃಂಖಲೆಯಲ್ಲಿ ಬದ್ಧವರಿಗೆಲ್ಲ ಸ್ವಾತಂತ್ರ್ಯವನ್ನು ಕೊಟ್ಟು ಲೋಕದಲ್ಲಿ ಹೊಸ ಮನ್ವಂತರವನ್ನು ಆರಂಭಿಸಲು ಸೂಚಿಸುತ್ತೇನೆ.

ಉತ್ತಮ ಆರೋಗ್ಯ ಮತ್ತು ಏಳಿಗೆಯು



ನಿಮ್ಮ ಕೆಲಸ ಮತ್ತು ಜೀವನೋಪಾಯದಲ್ಲಿ ಏಳಿಗೆಯು ದೊರಕಬೇಕಾದರೆ ನಿಮ್ಮ ಆರೋಗ್ಯವು ಉತ್ತಮವಾಗಿರಬೇಕು — ಉತ್ತಮ ಆರೋಗ್ಯದಿಂದಿರಬೇಕಾದರೆ ದೇಹದ ಒಳಭಾಗಗಳೆಲ್ಲವೂ ನಿರ್ಮಲವಾಗಿರಬೇಕು.

ನಿರ್ಮಲವಾದ ಹೊಟ್ಟೆಯೇ ಆರೋಗ್ಯದ ಪ್ರಥಮ ಸೂತ್ರವೆಂದು ಪ್ರತೀ ಡಾಕ್ಟರರಾದರೂ ಒಪ್ಪುತ್ತಾರೆ. ಪ್ರತಿನಿತ್ಯವೂ ಒಂದು ಗ್ಲಾಸು ಉಕ್ಕಿ ಬರುವ ಗುಣವುಳ್ಳ ಎಂಡ್ರೂಸ್ ಲವಣವನ್ನು ಸೇವಿಸಿದಲ್ಲಿ ಪ್ರತೀ ಒಬ್ಬರು ತಮ್ಮ ಹೊಟ್ಟೆಯು ಸ್ವಚ್ಛವಾಗಿರಿಸಬಹುದು.

ಎಂಡ್ರೂಸ್ ಲವಣವು ದೇಹದ ಒಳಭಾಗವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವುದು. ಇಷ್ಟು ಮಾತ್ರವಲ್ಲದೆ ಇದು ನಾಲಿಗೆ, ಬಾಯಿ, ಪ್ಲೀಹ, ಹೊಟ್ಟೆಯನ್ನು ನಿರ್ಮಲವಾಗಿರಿಸಿ, ಎಲ್ಲಕ್ಕಿಂತಲೂ ಮುಖ್ಯವಾಗಿ ಹೊಟ್ಟೆಯಲ್ಲಿರುವ ಮಲೀನ ಪದಾರ್ಥಗಳನ್ನು ಸಾವಕಾಶವಾಗಿ ಹೊರದೂಡಿ ಮಲಬದ್ಧತೆ, ಉದರವೇದನೆ, ಪ್ಲೀಹಬಾಧೆಗಳನ್ನು ನಿವಾರಿಸಿ ರಕ್ತವನ್ನು ಶುದ್ಧಗೊಳಿಸುವುದು.

ಎಂಡ್ರೂಸ್ ಲವಣವು ನಿಮ್ಮ ದೇಹದ ಒಳಭಾಗವನ್ನು ಸ್ವಚ್ಛಗೊಳಿಸುವುದು ● ಚರ್ಮವನ್ನು ನಿಚ್ಚಳವಾಗಿರಿಸುವುದು ● ರಕ್ತವನ್ನು ಶುದ್ಧಗೊಳಿಸುವುದು ● ಉದರ, ಪ್ಲೀಹ, ಮಲಬದ್ಧತೆಯ ಬಾಧೆಗಳಿಂದ ವಿಮುಕ್ತಗೊಳಿಸುವುದು ● ಇದು ಅಭ್ಯಾಸವಾಗುವಂತಿಲ್ಲ. ಚಿಕ್ಕ ಮಕ್ಕಳಿಂದ ಪ್ರಾರಂಭಿಸಿ ಇಡೀ ಕುಟುಂಬಕ್ಕೆ ತಕ್ಕುದಾಗಿದೆ.

ವಿರೇಚಕ
ಉಕ್ಕಿ ಬರುವುದು
ನಿರ್ಮಲಗೊಳಿಸುವುದು



ಎಂಡ್ರೂಸ್
ಲಿವರ್ ಸೋಲ್ಟ್

ANDREWS LIVER SALT

ದೇಹದ ಒಳಭಾಗವನ್ನು ಸ್ವಚ್ಛವಾಗಿರಿಸುವುದು

ಒಬ್ಬ ಗ್ರಾಹಕನ ಕಾಗದವನ್ನೋದಿರಿ:
'ಎಂಡ್ರೂಸ್ ಲವಣವನು ಸೇವಿಸಲು ಪ್ರಾರಂಭಿಸಿದಂದಿನಿಂದ ನನ್ನ ಮಲಬದ್ಧತೆ ಪಿತ್ತದೋಷಗಳು ಮಾಯವಾಗಿ ಬೆಳಿಗ್ಗೆ ಏಳುವಾಗ ಅತ್ಯಂತ ಸಂತೋಷದಿಂದಿರುತ್ತೇನೆ. ಈ ಎಂಡ್ರೂಸ್ ಲವಣವನ್ನು ಎಂದೂ ಬಿಡುವವನಲ್ಲ'

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

6—10—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೬—೧೦—೧೯೩೯

ಪಂಡಿತ ನೆಹರೂರವರನ್ನು ಪ್ರಧಾನರಾಗಿ ಮಾಡಿರಿ

ಲಂಡನ್ ಪತ್ರಿಕೆಯ ಹೇಳಿಕೆ

ಹಿಂದುಸ್ಥಾನವು ಯುದ್ಧದಲ್ಲಿ ಭಾಗವಹಿಸುವುದರ ಕುರಿತು, ಲಂಡನಿನ 'ನ್ಯೂ ಸ್ಟೇಟ್ಸ್‌ಮನ್ ಅಂಡ್ ನೇಶನ್' ಎಂಬ ಪತ್ರಿಕೆಯು ಈ ಕೆಳಗಿನ ಸಾರಾಂಶದ ಒಂದು ಸಂಪಾದಕೀಯ ಲೇಖನ ಬರೆದಿದೆ —

ಕಾಂಗ್ರೆಸಿನ ಕೇಳಿಕೆಯನ್ನು ಇಂಗ್ಲೆಂಡು ಒರಟುತನದಿಂದ ತಿರಸ್ಕರಿಸಲೂ, ಆ ವಿಷಯ ವಿಳಂಬವಾಗಲೂ ಕೂಡದು. ಒರೇ ಭರವಸೆಗಳಿಂದ ಪ್ರಯೋಜನವಿಲ್ಲ. ದೈವವಶಾತ್ ಪ್ರತಿಕಾರ ಸ್ವರೂಪದ ಫೆಡರಲ್ ಯೋಜನೆಯು ಮೂಲೆಗಾಯಿತು. ಹಿಂದೀಯರಿಗೆ ಸ್ವರಾಜ್ಯ ಸರಕಾರದ ಅನುಭವ ಅಧಿಕಾರ ಇರಬೇಕು. ನಮ್ಮ ಯುದ್ಧಯೋಜನೆಯಲ್ಲಿ ಅಡಗಿರಬೇಕು. ಈಗ ತತ್‌ಕ್ಷಣ ಕೇಂದ್ರ ಸರಕಾರದಲ್ಲಿ ಹೆಚ್ಚು ಬದಲಾವಣೆ ಮಾಡದೆ ಇದನ್ನು ಅನುಭವಿಸಲಿಕ್ಕೆ ಅವಕಾಶ ಇದೆ. ಕೆಲವು ಹಿಂದೀ ಮುಖಂಡರನ್ನು ವೈಸರಾಯರ ಕೌನ್ಸಿಲಿಗೆ ಈಗಲೇ ನೇಮಿಸಬಹುದು. ಈಗಿನ ಕೇಂದ್ರ ಸಭೆಯನ್ನು ಬರಖಾಸ್ತು ಮಾಡಿ, ಪ್ರಾಂತಿಕ ಮಂಡಲದಿಂದ ಚುನಾಯಿಸಲ್ಪಟ್ಟವರಿಂದ ಹೊಸ ಸಭೆಯನ್ನು ಸ್ಥಾಪಿಸಬಹುದು.

'ನಿಜಸ್ಥಿತಿಯನ್ನು ಎದುರಿಸಲು ನಮಗೆ ಧೈರ್ಯವಿದ್ದರೆ, ಹೇಡಿತನದಿಂದ ಸಾಮಾನ್ಯ ವರ್ಗದ ಜನರನ್ನು ಆರಿಸಿ ನಮ್ಮ ಸಂದರ್ಭವನ್ನು ಹಾಳುಮಾಡಿಕೊಳ್ಳಬಾರದು. ಹೊಸ ದಾರಿಗೆ ಹಿಂದುಸ್ಥಾನವನ್ನು ಸಾಗಿಸಲು ಈಗ ಒಬ್ಬರೇ ಅರ್ಹರಾಗಿದ್ದಾರೆ. ಗಾಂಧಿಯವರ ನಂತರ ಹಿಂದೀಯರ ಗೌರವಕ್ಕೂ ವಿಶ್ವಾಸಕ್ಕೂ ಯೋಗ್ಯನಾಗಿ ಪಂಡಿತ ನೆಹರು ಮಾತ್ರ ಇದ್ದಾರೆ. ಈಗಿನ ಮುಂದಾಳಾಗಿ ಕಾಂಗ್ರೆಸ್ ಅವರನ್ನು ಆರಿಸಿದೆ. ಅವರನ್ನು ವಾಸ್ತವ್ಯವಾದ ಪ್ರಧಾನ ಮಂತ್ರಿಯಾಗಿ ಮಾಡಿದರೆ ಹಿಂದುಸ್ಥಾನವನ್ನು ಒಲಿಸಿ ಕೊಂಡಂತಾಗುವುದು, ನಮ್ಮ ಪ್ರಾಮಾಣಿಕತನದಿಂದ ಲೋಕವೇ ಆಶ್ಚರ್ಯಗೊಳ್ಳುವುದು.

'ಈ ಯುದ್ಧವು ಸಾಮ್ರಾಜ್ಯಸತ್ತೆಯ ರಕ್ಷಣೆಗಾಗಿಯೋ, ಎಂದು ಅಮೇರಿಕದಿಂದ ರಶ್ಯದ ವರೆಗಿನ ಎಲ್ಲಾ ತಟಸ್ಥ ರಾಷ್ಟ್ರಗಳೂ ಕೇಳುತ್ತಿವೆ. ಈ ಯುದ್ಧದಲ್ಲಿ ಆತ್ಮಸ್ಫೂರ್ತಿ ಹುಟ್ಟಿಸಿ ನಾವು ಬಲಾತ್ಕಾರ ನಡೆಸಿದರೆ ನಾವು ಪ್ರಜಾಸತ್ತಾತ್ಮಕ ರಾಷ್ಟ್ರದ ರಕ್ಷಕರೆಂಬ ದರಲ್ಲಿ ಅಮೇರಿಕಕ್ಕೂ ಯುರೋಪಿಗೂ ಸಂಶಯ ಉಂಟಾಗುವುದು.

ಕಾಂಗ್ರೆಸಿನ ನಿರ್ಣಯವು ನ್ಯಾಯವೆಂದು ಬ್ರಿಟಿಷ್ ಮುಂದಾಳುಗಳ ಹೇಳಿಕೆ!

ನೆಹರುಗಳನ್ನು ಪ್ರಧಾನರಾಗಿ ಮಾಡಿರಿ

ಭಾರತಕ್ಕೆ ಬ್ರಿಟನು ಸ್ವಾತಂತ್ರ್ಯ ಕೊಡಬೇಕು

ದಲ್ಲಡಗಿರುವ ವಿಷಯಗಳು ಹೊರಬರಬೇಕಾದರೆ ಹಲವು ವರ್ಷಗಳ ಬೇಕಾಗಬಹುದು. ಹಿಂದೀಯರಿಗೆ ಸ್ವಾತಂತ್ರ್ಯ ಕೊಟ್ಟರೆ ಲೋಕದ ಎಲ್ಲಾ ಸ್ವತಂತ್ರ ರಾಷ್ಟ್ರಗಳ ಸಹಾನುಭೂತಿಯನ್ನು ನಾವು ಸಂಪಾದಿಸಿದ ಹಾಗಾಯಿತು. ಹಿಂದೀಯರ ಧಾನ್ಯಗಳು ನಾಶವಾದರೆ, ನಮಗೆ ಸ್ವಾತಂತ್ರ್ಯವು ದೊರೆತುಯೇನು ಪ್ರಯೋಜನ ಎಂಬ ಮಹಾತ್ಮರ ವರ ಮಾತು ಭಾರತೀಯರ ವಿಶಾಲ ಹೃದಯ ದ್ಯೋತಕವಾಗಿದೆ. ನಿಜವಾಗಿಯೂ ಇಂದು ಭಾರತದ ಮುಖಂಡರು, ನ್ಯಾಯದ ನಿರ್ಣಯಕ್ಕೆ ಬಂದಿದ್ದಾರೆ, ಹೀಗೆ ಅವರಿಗೆ ಯೋಗ್ಯ ಉತ್ತರವನ್ನು ಕೊಟ್ಟು ಸಮಾಧಾನ ಪಡಿಸತಕ್ಕದ್ದು ನಮ್ಮ ಕರ್ತವ್ಯವೇ ಆಗಿರುತ್ತದೆ. ಇದು ಸ್ವಾತಂತ್ರ್ಯಕ್ಕಾಗಿ ಕಾದಾಡುವ ಸಂದರ್ಭದಲ್ಲಿ, ಸಾಮ್ರಾಜ್ಯಶಾಹಿಯ ಹಿಡಿತದಿಂದ, ಪ್ರಜಾಪ್ರಭುತ್ವರಾಷ್ಟ್ರಗಳನ್ನು ಉಳಿಸಬೇಕಾದ ಕಾಲದಲ್ಲಿ ನಾವು ಸ್ವಾತಂತ್ರ್ಯ ಪ್ರಜಾಪ್ರಭುತ್ವಕ್ಕಾಗಿ ಕಾದಾಡುತ್ತಿದ್ದೇವೆಯೆಂಬುದನ್ನು ಸ್ಪಷ್ಟಪಡಿಸುವುದು ಅವಶ್ಯವಿದೆ. ಯುದ್ಧದ ಉದ್ದೇಶದ ಬಗ್ಗೆ ಅವರಿಗೆ ಬಂದಿರತಕ್ಕ ಕುತೂಹಲವು ನ್ಯಾಯವಾದದ್ದು, ಅದನ್ನು ಪರಿಹರಿಸುವುದೂ ಅವಶ್ಯವಿದೆ. ಇದೇ ಕಾಂಗ್ರೆಸಿನ ಪ್ರಕಟಣೆಯ ಅರ್ಥವಾಗಿರುವುದು.

"ಕಾಂಗ್ರೆಸು ಬ್ರಿಟನಿನೊಡನೆ ಬೆಂಬಲವಿಲ್ಲಲು ತನ್ನ ಅಭಿಪ್ರಾಯ ವ್ಯತ್ಯಾಸವನ್ನು ಸೂಚಿಸಿತು. ಯುದ್ಧದ ಉದ್ದೇಶವೇನೆಂದು ತಿಳಿಸಬೇಕಾಗಿ ಕೇಳಿದೆ. ಮಾತ್ರವಲ್ಲದೆ ಅಂತಹ ಯುದ್ಧದ ಉದ್ದೇಶವು ಭಾರತದ ಭಾಗಕ್ಕಾದರೂ ಹೇಗೆ ಅನ್ವಯಿಸುತ್ತವೆಯೆಂಬುದನ್ನು ತಿಳಿಸಬೇಕಾಗಿ ಕೇಳಿದೆ. ಇಂದು ಬ್ರಿಟಿಷ್ ಸರಕಾರವು ಕೊಡುವ ಸ್ಪಷ್ಟವಾದ ಭಾವನೆಯನ್ನು ಕಾಂಗ್ರೆಸ ಕೇವಲ ವ್ಯವಹಾರದ ಲಾಭದ ದೃಷ್ಟಿಯಿಂದ ನೋಡಲಾರದು ಎಂದು ತಿಳಿಸಲು ಸಾಕಷ್ಟು ಆಧಾರಗಳಿವೆ. ಆದರೆ ಇದುವರೆಗೆ ಕಾಂಗ್ರೆಸ್ಸಿನ ಪ್ರಶ್ನೆಗೆ ಸಮರ್ಪಕವಾದ ಉತ್ತರಕೊಡಲಿಲ್ಲ. ಹೌಸ್ ಒಫ್ ಲಾರ್ಡ್ಸಿನಲ್ಲಿ ಜೆಟ್ಲೆಂಡರು ಯಾವುದಕ್ಕಾಗಿ [illegible] ಅದು [illegible] ದರ್ಭವಾಗಿತ್ತು. ಇದು [illegible] ತನ್ನ ಕೇಳಿಕೆಯನ್ನು [illegible] ಅನುಚಿತ ಸಮಯವೆಂದ ಜೆಟ್ಲೆಂಡರ [illegible]

[illegible] ನ್ಯಾಯವಾದ [illegible] ಪ್ರತ್ಯುತ್ತರ [illegible] ಸಿಕ್ಕಿದ ತ್ತೇವೆ' ಹೀಗೆಂದು ಹೇಳುತ್ತದೆ ಲಂಡನ್ ಗಾರ್ಡಿಯನ್ ಪತ್ರಿಕೆ, ಜೆಟ್ಲೆಂಡರ ಅಸಂಬದ್ಧತೆಗೆ ಉತ್ತರವಾಗಿ

ಲಂಡನಿನಲ್ಲಿ ವಿಮಾನ ದಾಳಿಯಿಂದ ಸಾರ್ವಜನಿಕ ಸ್ಥಳಗಳನ್ನು ರಕ್ಷಿಸಲು ಮರಳಿನ ಚೀಲಗಳನ್ನು ಉಪಯೋಗಿಸುವರು. ಇಂಗ್ಲೆಂಡಿನ ರೇಡಿಯೋ ಭವನದ ಮುಂಗಡೆಯಲ್ಲಿರಿಸಿದ ಮರಳಿನ ಚೀಲಗಳ ದೃಶ್ಯ

ಕಾಂಗ್ರೆಸಿನ ಕೇಳಿಕೆಯು ನ್ಯಾಯವಾದದ್ದು!

ಬ್ರಿಟನು ಭರವಸೆ ಕೊಡಬೇಕು

ಲಂಡನ್ ಪತ್ರಿಕೆಯ ಅಭಿಪ್ರಾಯ

ಮ್ಯಾಂಚಸ್ಟರ್ ಗಾರ್ಡಿಯನ್ ಪತ್ರಿಕೆಯು ಭಾರತದ ಇಂದಿನ ಯುದ್ಧ ನೀತಿಯ ಕುರಿತು ಒಂದು ಲೇಖನವನ್ನು ಬರೆಯುತ್ತಾ, ಅದರಲ್ಲಿ ಭಾರತದ ಕೇಳಿಕೆಯ ಕಡೆಗೆ ಬ್ರಿಟನು ಯೋಗ್ಯವಾದ ಉತ್ತರವನ್ನು ಕೊಡಬೇಕೆಂದು ಹೇಳುತ್ತದೆ.

"ನಮ್ಮದೇಶವು ಯಾವುದರ ಉದ್ದೇಶಕ್ಕಾಗಿ ಯುದ್ಧಕ್ಕಿಳಿದಿದೆಯೋ ಆ ಬಗ್ಗೆ ಭಾರತದ ಮುಖಂಡರು ಸಹಾನುಭೂತಿಯನ್ನು ತೋರಿಸಿದ್ದಾರೆ. "ಬ್ರಿಟನು

ನೆಟಸನ್

ಗೊನೋರಿಯಾವನ್ನು

ಗುಣಪಡಿಸುವುದು

ನೆಟ್‌ಸನ್ ಗೊನೋರಿಯವನ್ನು ಗುಣಪಡಿಸುವುದು

ಅದು ದೀರ್ಘಕಾಲದ್ದಿರಲಿ, ಸೌಮ್ಯದ್ದಿರಲಿ, ತೀಕ್ಷ್ಣದ್ದಿರಲಿ ನೋವನ್ನು ಕೂಡಲೇ ನಿಲ್ಲಿಸಿ ಖಂಡಿತವಾಗಿ ಗುಣವನ್ನುಂಟುಮಾಡುವುದು. ಎಲ್ಲಾ ಉತ್ತಮ ಕೆಮಿಸ್ಟರಲ್ಲಿ ದೊರಕುತ್ತದೆ

ಇಡೀ ಇಂಡಿಯದ ಏಜಂಟರು

Messrs 'LAMF & Co

Round Building Princess St BOMBAY 2

ಕ್ರಯ ೩-11-0 ಪೋಸ್ಟೇಜು ಪ್ರತ್ಯೇಕ

ಕ್ರಿಸ್ಟಲ್ ಕೆಮಿಕಲ್ ಕಂಪೆನಿ ಲಿಮಿಟೆಡ್

ಇವರ ವಿಚಕ್ಷಣ ತಯಾರಿ

ಸ್ವದೇಶಾಭಿಮಾನಿ

ತಾರೀಕು 6—10—1939.

ಸಂಧಿ ಪ್ರಸ್ತಾಪವೇ?

ಪೋಲೆಂಡನ್ನು ನುಂಗಿ ನೀರು ಕುಡಿದ ಮೇಲೆ, ಈಗ ರಶ್ಯ–ಜರ್ಮನುಗಳು, ತಮ್ಮ ಒಪ್ಪಂದದ ಇತರ ನಿಬಂಧನೆಗಳ ಕಡೆಗೆ ಗಮನ ಕೊಟ್ಟಂತೆ ಕಂಡುಬರುತ್ತದೆ. ಅದರಲ್ಲಿ ಮೊದಲನೆಯದಾಗಿ ಈಗ ತೋರಿಬರುವುದೆಂದರೆ, ಈ ಉಭಯ ರಾಷ್ಟ್ರಗಳಿಗೆ ಹಿತವಾಗುವ ರೀತಿಯಲ್ಲಿ ಇನ್ನು ಶಾಂತಿಮಾಡಬೇಕೆಂಬ ವ್ಯೂಹರಚನೆ. ಇಟಲಿಯು ಈ ಮಧ್ಯಸ್ಥಿಕೆಯನ್ನು ವಹಿಸಿರುವಂತೆ ಕಂಡುಬರುತ್ತದೆ. ಕೌಂಟ್ ಸಿಯಾನೋ, ಯೂರೋಪಿನ ಪರಿಸ್ಥಿತಿಯ ಕುರಿತು ಚರ್ಚಿಸಲು ಜರ್ಮನಿಗೆ ತೆರಳಿರುವುದಾಗಿ ವಾರ್ತೆ ಬಂದಿದೆ. ಹಾಗಾಗಿ ಇನ್ನು ಎರಡು ಮೂರು ದಿನಗಳಲ್ಲಿ ಜಗತ್ತಿನ ಮಹಾ ಯುದ್ಧದ ಪ್ರಶ್ನೆಯು ಇತ್ಯರ್ಥವು ಲೋಕದ ಎದುರು ಬರಬಹುದೆಂದು ನಿರೀಕ್ಷಿಸಬಹುದಾಗಿದೆ. ಹಿಟ್ಲರನು ಶಾಂತಿ ಸ್ಥಾಪನೆಯ ಸೂಚನೆಯನ್ನು ಮುಂದೊತ್ತಬಹುದು. ಶಾಂತಿ ಮಾಡಲು ಹಿಂದಿಗೆ ದಲ್ಲಿ ರಶ್ಯವು ಬೆದರಿಕೆ ಹುಟ್ಟಿಸಬಹುದು, ಕಡೆಗೆ ಇಟಲಿಯು ಆ ಕುರಿತು ಎಚ್ಚರಿಸಬಹುದು. ಹೇಗಿದ್ದರೂ ಸರ್ವಾಧಿಕಾರಿಗಳ ಹೇಳಿಕೆಗೆ ಅನುಗುಣವಾಗಿ, ತಲೆಬಗ್ಗಿಸಿ ನಡೆಯಬೇಕೆಂದು ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ನ್ಯಾಯದ ಹೆಸರಿನಲ್ಲಿ ಬೆದರಿಕೆಯನ್ನು ಹುಟ್ಟಿಸಲು ಸಂಪೂರ್ಣ ಯೋಜನೆಗಳು ಸಿದ್ಧವಾಗಿವೆ. ನಿಜವಾಗಿಯೂ ಹೆದರಿಸಿಯೇ ಕೆಲಸ ಮಾಡಿಕೊಳ್ಳುವುದು ಯುರೋಪಿನ ರಾಜಕುಶಲತೆಯ ಒಂದು ಗುಟ್ಟು!

ರಶ್ಯಾ ಜರ್ಮನಿಗಳು ಯುದ್ಧದ ಸಂದರ್ಭದಲ್ಲಿ ಪೋಲೆಂಡಿನ ಬಲಿಗಾಗಿ ಹೀಗೆ ತಮ್ಮ ತಮ್ಮ ಸೈನ್ಯಗಳ ಅನ್ಯೋನ್ಯ ಸಹಾಯವನ್ನು ಉಪಯೋಗಿಸಿಕೊಂಡಿವೆ. ಹೀಗೆ ಅವರ ಐಕ್ಯವು ಮುಂದುವರಿದ ಪಕ್ಷದಲ್ಲಿ ಪೂರ್ವ ಯೂರೋಪಿನಲ್ಲಿ, ಬಾಲ್ಟಿಕ್‌ನಿಂದ ಕಪ್ಪು ಸಮುದ್ರದ ವರೆಗೆ ರಶ್ಯಾ ಜರ್ಮನಿಗಳು ತಮ್ಮ ಅಧಿಕಾರವನ್ನು ಸ್ಥಾಪಿಸಿ, ಆ ಮೇಲೆ ಇತರ ಯೂರೋಪಿನ ರಾಷ್ಟ್ರಗಳು ಅನುಸರಿಸಿಯೇ ತೀರಬೇಕಾದ ಶರತಗಳನ್ನು ಅಧಿಕಾರವಾಣಿಯಿಂದ ಮುಂದಿಡುವವು. ಈ ಉಭಯ ರಾಷ್ಟ್ರಗಳ ಇಂತಹ ಐಕ್ಯ ಕಾರ್ಯದಲ್ಲಿಯೂ, ಜರ್ಮನಿಯ ಪ್ರತಿಯೊಂದು ಚಟುವಟಿಕೆಯ ಮೂಗುದಾಣವನ್ನು ಹಿಡಕೊಂಡು ಜರ್ಮನಿಯನ್ನು ಕುಣಿಸಬಲ್ಲ ರಶ್ಯದ ಪ್ರಾಧಾನ್ಯತೆಯು ಗಮನಿಸ ತಕ್ಕದಾಗಿದೆ. ಆದರೆ ಹಿಟ್ಲರನು ರಶ್ಯದ ಅಧೀನತೆಯಲ್ಲಿ ಮತ್ತು ಬಲೆಯಲ್ಲಿ ಸಿಕ್ಕಿಕೊಳ್ಳಲು ಸಮ್ಮತಿಸುವುದು ಸಾಧ್ಯವಿಲ್ಲ. ಹಾಗಾಗಿ, ಇಂದಿನ ರಶ್ಯಾ ಜರ್ಮನ್ ಒಪ್ಪಂದವೇ ಅವುಗಳೊಳಗೆ ಮುಂದಕ್ಕೆ ಬೆಳೆಯತಕ್ಕ ಕಲಹದ ವಿಷ ವೃಕ್ಷಕ್ಕೆ ಬೀಜ ಹೇತುವಾಗಬಹುದಾಗಿದೆ.

ರಶ್ಯಾ–ಜರ್ಮನಿಗಳು ಇತ್ತೀಚೆಗೆ ಮಾಡಿಕೊಂಡ ಒಪ್ಪಂದದ ಮೇಲಾದರೂ ಬ್ರಿಟನು ಫ್ರಾನ್ಸುಗಳು, ಯುದ್ಧದ ವಿಷಯವಾಗಿ ತಮ್ಮ ನಿರ್ಧಾರವನ್ನು ಬದಲಾಯಿಸಿಕೊಂಡಿಲ್ಲ. ರಶ್ಯಾ ಜರ್ಮನುಗಳ ಒಪ್ಪಂದವು ಯಾವ ರೀತಿಯಲ್ಲಿಯೂ ಬ್ರಿಟನ್ ಫ್ರಾನ್ಸುಗಳಿಗೆ ಗೊಂದಲವನ್ನು ಹುಟ್ಟಿಸಲು ಕಾರಣವಿಲ್ಲವೆಂಬ ರೀತಿಯಲ್ಲಿ ಈಗ ಅವುಗಳು ವರ್ತಿಸುತ್ತಿವೆ. ಇದು ನಿಜವಾಗಿಯೂ ಬ್ರಿಟನು ಫ್ರಾನ್ಸುಗಳ ಉದ್ದೇಶ ಗೌರವದ ದೃಷ್ಟಿಯಿಂದ ಬಹಳ ಪ್ರಶಂಸಾರ್ಹವಾದ ವಿಷಯವಾಗಿದೆ. ಹೀಗಿರಲು, ಬ್ರಿಟನು ಫ್ರಾನ್ಸುಗಳು ಯುದ್ಧವನ್ನು ನಿಲ್ಲಿಸಬಹುದೆಂಬ ವಿಚಾರಕ್ಕೆ ಯಾವ ಎಡೆಯೂ ಇಲ್ಲ. ಇಟಲಿಯು ಈಗ ವಹಿಸಿರುವ ಮಧ್ಯಸ್ಥಿಕೆಯ ವಾರ್ತೆಯಲ್ಲಿ ಅವುಗಳು ಸೇರುವಂತೆಯೂ ಕಂಡುಬರುವುದಿಲ್ಲ. ಹರ್ ವಾನ್‌ರಾಬಿನ್‌ಟ್ರಾಪನ ಹೇಳಿಕೆಯಂತೆ, ನಮ್ಮ ಈ ಎರಡು ರಾಷ್ಟ್ರಗಳು ಪೂರ್ವ ಯೂರೋಪಿನಲ್ಲಿ ಯಾವ ರಾಷ್ಟ್ರದ ವ್ಯವಹಾರವನ್ನೂ ನಡೆಯಗೊಡೆವು ಎಂಬುದೇ ಬ್ರಿಟಿಷ್ ಫ್ರೆಂಚರ ಯುದ್ಧ ನಿರ್ಧಾರಕ್ಕೆ ಸಾಕಷ್ಟು ಆಧಾರವಾಗಬಹುದು. ಹೀಗಾಗಿ, ಇಂದು ಪೋಲೆಂಡಿಗಿತ್ತ ಬೆಂಬಲದ ದೃಷ್ಟಿಯಿಂದ, ಯುದ್ಧಕ್ಕಿಳಿದ ರಾಷ್ಟ್ರಗಳು, ತಿರಿಗೊಮ್ಮೆ, ಈಗ ಸರ್ವಾಧಿಕಾರಿಗಳ ಈ ಶಾಂತಿಸ್ಥಾಪನೆಯಲ್ಲಿ ಸೇರಲು ಮನಸ್ಸುಮಾಡುವುದು ಏನೇನೂ ನ್ಯಾಯವಾಗಿಯೂ, ಸಂಭವವಾಗಿಯೂ ಕಂಡುಬರುವುದಿಲ್ಲ.

ಮಹಾತ್ಮಾಜಿಯವರು ಚಿರಾಯುಗಳಾಗಲಿ

ಕಳೆದ ತಾ. ೨ರಂದು ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಯವರಿಗೆ ೭೦ ವರ್ಷಗಳು ತುಂಬಿದ ಸುದಿನದಂದು ಅಖಿಲ ಭಾರತದಲ್ಲಿ ಆ ಮಹೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿಸಿತು. ಮಹಾತ್ಮಾ ಗಾಂಧಿಜಿಯವರಂತಹ ವಿಶ್ವಮಾನ್ಯ ವ್ಯಕ್ತಿಯು ಜೀವಿಸಿದ್ದ ಕಾಲದಲ್ಲಿ ಬದುಕಿರುವುದು ನಮ್ಮ ಭಾಗ್ಯ! ಯೂರೋಪಿನಲ್ಲಿ ಸಾಮ್ರಾಜ್ಯ ಲಾಲಸೆಯು ಜನರು ಜನವಿದ್ರೋಹ ಬುದ್ಧಿಯಿಂದ ಪರಸ್ಪರ ಕತ್ತಿ ಕಟ್ಟಿ ನಿಂತಿರಲು ಅಖಿಲ ಜಗತ್ತಿಗೇ ಸತ್ಯ ಅಹಿಂಸೆಗಳ ಶಾಂತಿ ಸಂದೇಶವನ್ನು ಸಾರಿ ಮಹಾತ್ಮರು ಲೋಕ ಕಲ್ಯಾಣದ ನಿರ್ಮಲ ಮಾರ್ಗದರ್ಶಕರಾಗಿ ಮನ್ನಣೆ ಪಡೆದಿದ್ದಾರೆ! ಭಾರತದಲ್ಲಿ ರಾಜಕೀಯ ಜಾಗೃತಿಯನ್ನು ಹುಟ್ಟಿಸಿ, ದೇಶಸೇವೆಯ ತತ್ವವನ್ನು ಕಾರ್ಯತಃ ಮಾಡಿತೋರಿಸಿ, ಭಾರತೀಯರ ಹೃದಯಮಂದಿರಗಳಲ್ಲಿ ಗೌರವದ ಪ್ರತಿಷ್ಠೆಯನ್ನು ಪಡೆದಿದ್ದಾರೆ. ಭಾರತದ ಹಿತಸಾಧನೆಗಾಗಿಯೂ ಲೋಕ ಕಲ್ಯಾಣಕ್ಕಾಗಿಯೂ ಗಾಂಧಿಜಿಯವರು ಚಿರಾಯುಗಳಾಗಿ ಬದುಕಲಿ ಎಂದು ಹಾರೈಸುತ್ತೇವೆ.

ಮಂಗಳೂರು ಸಮಾಚಾರ

ಹರಿಜನವಾರ ಮತ್ತು ಗಾಂಧಿಜಯಂತಿ

ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಹರಿಜನ ವಾರವು ಕಳೆದ ತಾ. ೨೪–೯–೩೯ರಿಂದ ತಾ. ೩–೧೦–೩೯ ವರೆಗೆ ವಿವಿಧ ಚಟುವಟಿಕೆ, ಭಾಷಣ, ಮೆರವಣಿಗೆ ಮೊದಲಾದವುಗಳಿಂದ ಬಹಳ ವಿಜೃಂಭಣೆಯಿಂದ ಜರಗಿತು. ತಾ. ೨ರಂದು ಮೈದಾನಿನಲ್ಲಿ ಸಾರ್ವಜನಿಕ ಸಭೆಯು ಡಾ| ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿತು.

ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಯ ಸಭೆ

ತಾ. ೧ರಂದು ಜಿಲ್ಲಾ ಕಾಂ. ಕಮಿಟಿಯ ಸಭೆಯು ಜರುಗಿ, ಮೈಸೂರು ದಬ್ಬಾಳಿಕೆಯ ತೀವ್ರ ನಿಷೇಧ ಸೂಚಿಸಿ, ಇಂತಹ ಸಂದರ್ಭದಲ್ಲಿ ಪ್ರಜೆಗಳು ಚಳವಳ ಹೂಡುವಲ್ಲಿ, ಅವರ ಮೇಲೆ ದಬ್ಬಾಳಿಕೆ ನಡೆಸುತ್ತಿರುವ ಮೈಸೂರು ಸರಕಾರದ ಮುಖ್ಯಾಧಿಕಾರಿಗಳಾದ ಸರ್ ಮಿರ್ಜಾ ಇಸ್ಮಾಯಿಲ ಸಾಹೇಬರನ್ನು ನಮ್ಮ ಜಿಲ್ಲಾ ಬೋರ್ಡಿನವರು ಆಹ್ವಾನಿಸಿ ಗೌರವ ಕೊಡುವ ವಿಷಯ ತೀವ್ರ ವಿಷಾದವನ್ನು ಪ್ರಕಟಿಸಿ, ಇಂತಹ ಅವಿಚಾರಗಳು ಮುಂದಕ್ಕೆ ಸಂಭವಿಸದಂತೆ, ಕ. ಪ್ರಾಂ. ಕಮಿಟಿಯನ್ನು ಪ್ರಾರ್ಥಿಸುವಂತೆಯೂ, ವರ್ಕಿಂಗ್ ಕಮಿಟಿಯವರ ಸೂಚನೆಯಂತೆಯೇ ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಶ್ರೀ. ಸುಭಾಸ ಬೋಸರ ಮೇಲೆ ಜ್ಯಾರಿ ಮಾಡಿದ ಶಿಸ್ತನ್ನು ಪುನರಾಲೋಚಿಸಿಕೊಳ್ಳಬೇಕಾಗಿ ಪ್ರಾರ್ಥಿಸುವಂತೆಯೂ, " ನಿರ್ಣಯಗಳಾದುವು. ಗೈರು ಹಾಜರಿನ ನಿಮಿತ್ತ ಶ್ರೀ.ಗಳಾದ ಬಿ. ಜಿ. ಶೆಟ್ಟಿ ಮತ್ತು ವೈ. ಎಸ್. ಶೆಣೈ ಇವರ ಖಾಲಿಬಿದ್ದ ಕಾಂ. ಕ. ಸದಸ್ಯತನಕ್ಕೆ ಶ್ರೀ.ಗಳಾದ ಎಂ. ಡಿ. ಅಧಿಕಾರಿ ಮತ್ತು ಕೆ. ಆರ್. ಕುದ್ವ ಇವರುಗಳನ್ನು ಆರಿಸಲಾಯಿತು. ಜಿಲ್ಲೆಯಲ್ಲಿ ಖಾದಿ, ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಕೆಲಸ ಮಾಡಲು ಬೇಕಾದ ಮಾಹಿತಿಪಡೆಯುವರೆ ಒಂದು ಕಮಿಟಿಯೂ ಆಯಿತು.

ಉಪನ್ಯಾಸ

ಕಳೆದ ತಾ ೧ರಂದು ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ 'ವಿಶ್ವಧರ್ಮ'ವೆಂಬ ವಿಷಯದ ಕುರಿತು ಶ್ರೀ. ಕಯ್ಯಾರ ಕಿಂಞಣ್ಣ ರೈಗಳು ಭಾಷಣವಿತ್ತರು. ಪ್ರಪಂಚದ ಆದಿಯಾಗಿ ಮಾನವನು ಅನಾಗರಿಕತೆಯ ಸ್ಥಿತಿಯಿಂದ ನಾಗರಿಕ ಸ್ಥಿತಿಗೆ ಏರಿದಂತೆ, ಅತನಲ್ಲಿ ಮತಧರ್ಮಗಳ ಭಾವನೆ ಪೂಜಾತತ್ವ ದೈವಭಕ್ತಿ, ಇವುಗಳು ಪ್ರಕೃತಿ ಸಹಜವಾಗಿ ಒಡಮೂಡಿ ಬಂದವುಗಳೆಂದೂ, ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿಯೂ ಜೀವನ ಮಾರ್ಪಾಟು ಒಂದೇ ನಿಯಮಾನುಸಾರಿಯಾಗಿ ನಡೆದಿರಬೇಕಾದುದರಿಂದ ಬೇರೆ ಬೇರೆ ಮತಧರ್ಮಗಳು ಉಂಟಾದುವೆಂದೂ, ಎಲ್ಲಾ ಮತಧರ್ಮಗಳೂ ಒಂದೇ ಸತ್ಯವನ್ನು ಸಾರುವವೆಂದೂ ಇಂತಹ ವಿಶ್ವಧರ್ಮದ ಬುದ್ಧಿಯಿಂದಲೇ ಲೋಕಕಲ್ಯಾಣವಾಗುವುದೆಂದೂ ವಿವರಿಸಿ ಹೇಳಿದರು.

ದುಃಖಸೂಚಕ ಸಭೆ

ಒಕ್ಟೋಬರ ತಾ. ೧ನೇ ಆದಿತ್ಯವಾರ ಬೆಳಿಗ್ಗೆ ಗಂಟೆ ೯ಕ್ಕೆ ದಕ್ಷಿಣ ಕನ್ನಡ ಸ್ತ್ರೀಯಾ ಶಕ್ತಿ ಸಂಘವು ಕುಮಾರಿ ಸೀತಾಬಾಯಿ (ಶ್ರೀ. ಯಂ. ಕೆ. ವೈದ್ಯರ ಪುತ್ರಿ) ಯವರ ಅಕಾಲ ಮತ್ತು ಶೋಚನೀಯ ನಿಧನಕ್ಕಾಗಿ ದುಃಖಸೂಚಕ ಸಭೆಯನ್ನೇರ್ಪಡಿಸಿತು. ಶ್ರೀಮತಿಯವರ ಆತ್ಮಕ್ಕೆ ಶಾಂತಿಯನ್ನು ಬಯಸಿ, ಎರಡು ನಿಮಿಷ ಮೌನವ್ರತವನ್ನಾಚರಿಸಿದ ತರುವಾಯ, ಒಂದು ವಿಶೇಷ ಪ್ರಾರ್ಥನೆಯಲ್ಲಿ ಸಭೆ ಮುಕ್ತಾಯವಾಯಿತು.

ಮಿತ್ರಮಂಡಳಿಯ ದಸರಾ ಮಹೋತ್ಸವ

ಮಂಗಳೂರಿನ ಮಿತ್ರ ಮಂಡಳಿಯವರು ಈ ವರುಷ ದಸರಾ ಮಹೋತ್ಸವವನ್ನು ಒಕ್ಟೋಬರ್ ತಾ. ೧೯, ೨೦ ಮತ್ತು ೨೧ರಲ್ಲಿ ಭಾಷಣ, ನಾಟಕ ಇತ್ಯಾದಿಗಳೊಡನೆ ಮಂಗಳೂರಿನಲ್ಲಿ ಜರಗಿಸುವರು. ಭಾಷಣಗಳನ್ನು ಕೊಡಲಿಕ್ಕೆ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಕನ್ನಡದ ಕಿಡಿಗಳನ್ನು ಆಹ್ವಾನಿಸಲಿಕ್ಕಿರುವರು. ಮಂಗಳೂರಿನ ಮಹಾಜನರು ಪ್ರೋತ್ಸಾಹಿಸಬೇಕೆಂದು ವಿನಂತಿಸಿಕೊಳ್ಳುವರು.

ಸರ್| ಮಿರ್ಜಾ ಇಸ್ಮಾಯಿಲ್ ಸಾಹೇಬರು

ಮೈಸೂರು ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ತಾ. ೮ರಂದು ಗವರ್ನಮೆಂಟ್ ಕಾಲೇಜಿನಲ್ಲಿ ಫಲಪುಷ್ಪ ಪ್ರದರ್ಶನದ ಉದ್ಘಾಟನೆ ಮಾಡುವರೆಂದೂ ಅದೇ ದಿನ ಶಿವಪುರ ಸಂಕದ ಉದ್ಘಾಟನೆ ಮತ್ತು ಮರುದಿನ ಕಟಿಲ್ ಸಂಕದ ಉದ್ಘಾಟನೆ ಮತ್ತು ಮೂಡಬಿದ್ರೆ ಆಸ್ಪತ್ರೆಯ ಉದ್ಘಾಟನೆಯನ್ನೂ ಮಾಡುವರು.

ಇಂಟರ್ ಹೈಸ್ಕೂಲ್ ಕ್ರಿಕೆಟ್ ಮ್ಯಾಚಿನಲ್ಲಿ ಮಿಶ್ಶನ್ ಹೈಸ್ಕೂಲಿಗೆ ವಿಜಯ!

ಇಂಟರ್ ಹೈಸ್ಕೂಲ್ ಸೀನಿಯರ್ ಕ್ರಿಕೆಟ್ ಮ್ಯಾಚಿನಲ್ಲಿ ಮೊದಲು ಕೆನರಾ ಹೈಸ್ಕೂಲಿನವರು, ಗಣಪತಿ ಹೈಸ್ಕೂಲಿನವರನ್ನು ಇನ್ನಿಂಗ್ ರೌಟ್ ಕೊಟ್ಟು ಸೋಲಿಸಿದರು; ಸೈಂಟ್ ಎಲೋಸಿಯಸ್ ಕಾಲೇಜಿನವರು ಗವರ್ನಮೆಂಟ್ ಕಾಲೇಜಿನವರನ್ನು ಸೋಲಿಸಿದರು. ಮಿಶ್ಶನ್ ಹೈಸ್ಕೂಲಿನವರು ಗವರ್ನಮೆಂಟ್ ಕಾಲೇಜಿನವರನ್ನು ಸೋಲಿಸಿದರು. ಕಡೆಯ ಆಟದಲ್ಲಿ ಕೆನರಾ ಹೈಸ್ಕೂಲ್ ಮತ್ತು ಮಿಶನ್ ಹೈಸ್ಕೂಲ್‌ಗಳೊಳಗೆ ಸ್ಪರ್ಧೆಯಾಗಿ ಮಿಶನ್ ಹೈಸ್ಕೂಲಿಗೆ ಕಪ್ಪು (Cup) ದೊರೆಯಿತು.

ಒಂದು ಸಣ್ಣ ಕತೆ

ಧ್ವಜವಂದನೆ!

[ಸುಮಿತ್ರೆಯನ್ನು ನಾನು ಮಿತಿಮೀರಿ ಪ್ರೀತಿಸುತ್ತಿದ್ದೆ. ನಮ್ಮಿಬ್ಬರ ಅಗಾಧ ಪ್ರೇಮವನ್ನು ನೋಡಿ ವಾಚಕರು ಮತ್ಸರ ಪಡಬಹುದು. ಅವಳ ಮಾತಿನ ಗೆರೆ ಮೀರಿ ನಾನು ನಡೆಯುತ್ತಿರಲಿಲ್ಲ. ಶಾಲೆಗೆ ಹೋಗಬೇಡಿರೆಂದರೆ ಶಾಲೆಗೆ ಹೋಗುತ್ತಿದ್ದಿಲ್ಲ; ಸಿನೆಮಾಕ್ಕೆ ಹೊರಡಿ ಎಂದರೆ ತಯಾರಾಗಿ ಹೊರಟುಹೋಗುತ್ತಿದ್ದೆ. ಸುಮಿತ್ರೆ ಮಗುವನ್ನು ಆಡಿಸಹೇಳಿ, ಕಾಂಗ್ರೆಸಿನ ಧ್ವಜವಂದನೆಗೆ ನಡೆದಳು. ಮನೆಯಲ್ಲಿ ಮಗುವಿನ ತಂಟೆಯೋ ತಂಟೆ. ಮಗು ನನ್ನ ಮುಖಕ್ಕೆ ಮಸಿ ಹಚ್ಚಿತ್ತು. ಧ್ವಜವಂದನದಿಂದ ತಿರುಗಿಬಂದ ಸುಮಿತ್ರೆ ನನ್ನ ಮುಖ ನೋಡಿ ಗಟ್ಟಿಯಾಗಿ ನಕ್ಕಳು.



ಸುಮಿತ್ರೆಯನ್ನು ನಾನೆಷ್ಟು ಪ್ರೀತಿಸುತ್ತಿದ್ದೆ ಎಂಬುದನ್ನು ತಿಳಕೊಳ್ಳಲಿಕ್ಕೆ ಬೇರೆ ಪ್ರಮಾಣಗಳು ಬೇಕಾಗಿಲ್ಲ. ನಾನು ಗಜ ೧ರ ನಾಲ್ಕಾಣೆಯ ವಸ್ತ್ರದಿಂದಲೇ ತೃಪ್ತನಾಗುತ್ತಿದ್ದೆ. ಆದರೆ ಸುಮಿತ್ರೆಗಾಗಿ ಗಜ ೧ರ ಆರು ರೂಪಾಯಿಗಿಂತ ಕಡಿಮೆ ಬೆಲೆಯ ವಸ್ತ್ರಗಳನ್ನು ತರುವುದು ನನಗೆಷ್ಟು ಮಾತ್ರಕ್ಕೂ ಮೆಚ್ಚುಗೆಯಾಗುತ್ತಿರಲಿಲ್ಲ. ನನ್ನ ಮೈಮೇಲಿದ್ದ ಒಂದೇ ಒಂದು ಆಭರಣವೆಂದರೆ ವಿವಾಹದ ಕಾಲದಲ್ಲಿ ತೊಟ್ಟುಕೊಂಡಿದ್ದ ಅದೊಂದು ಚಿಕ್ಕ ಉಂಗುರವಾಗಿತ್ತು. ಆದರೆ ಚಿನ್ನಕ್ಕೆ ಬೆಲೆ ಏರಿದ ಈ ಕಾಲದಲ್ಲಿ ಕೂಡ ಅದರ ಮೌಲ್ಯವು ೬-೧೦ ರೂಪಾಯಿಗಳನ್ನು ಮೀರುತ್ತಿರಲಿಲ್ಲ. ಆದರೆ ಸುಮಿತ್ರೆಯ ಕಿವಿ ಬೆಂಡೋಲೆಯ ವಜ್ರದ ಒಂದೊಂದು ಹರಳಿನ ಬೆಲೆ ೨೦೦ ರೂಪಾಯಿಗಳಾಗುತ್ತಿದ್ದುವು. ನನಗೆ ಸಂದುರಾಯನ ಕಾಲದ ಅಜ್ಜನ ಕ್ರಯದ ಒಂದೇ ಒಂದು ಮೆಟ್ಟಿನ ಜೋಡು ಸಾಕಾಗಿತ್ತು. ಸುಮಿತ್ರೆಯ ಹತ್ತಿರವಾದರೋ ವಿಲಾಯತಿ ಹಿಂದುಸ್ಥಾನದ ಸೆಟ್ಟು, ಸ್ಲಿಪ್ಪರು ಇತ್ಯಾದಿ ಎಂದು ಬೇರೆ ಬೇರೆ ಬಣ್ಣದ ೧೫ ಜೊತೆ ಪಾದರಕ್ಷೆಗಳಿದ್ದುವು. ಅವುಗಳನ್ನೆಲ್ಲಾ ಸಾಲಾಗಿಡಲಿಕ್ಕೆ, ನನ್ನ ಮಲಗುವ ಕೋಣೆಯಷ್ಟು ದೊಡ್ಡದಾದ ಒಂದು ಪ್ರತ್ಯೇಕ ಕೋಣೆಯೇ ಬೇಕಾಗಿತ್ತು. ಇವೆಲ್ಲ ನನ್ನ ಸ್ವಂತ ಸಂಪಾದನೆ ಮತ್ತು ಉಳಿಕೆಯ ಹಣದಿಂದ ಕೊಂಡುಕೊಂಡವುಗಳಾಗಿದ್ದುವು. ಇವೆಲ್ಲವು ಸುಮಿತ್ರೆಯಮೇಲಿನ ನನ್ನ ಪ್ರೇಮದ ಪ್ರಮಾಣಗಳಷ್ಟೆ. ಬೇಕಾದರೆ ೬ ಪ್ರೇಮದ ಇನ್ನೂ ಅನೇಕ ಪ್ರಮಾಣಗಳನ್ನು ಕೊಡಬಹುದಾಗಿತ್ತು. ಪರಂತು ಅವುಗಳನ್ನು ಕೊಡುವ ಇಚ್ಛೆ ನನಗಿಲ್ಲ. ಅವೆಲ್ಲ ಗೋಪ್ಯವಾಗಿಡಬೇಕಾದ ಸಂಗತಿಗಳು. ಅವುಗಳನ್ನು ಬರೆದು ಪ್ರಕಟಿಸಿದರೆ ಸುಮಿತ್ರೆಯ ಕೋಮಲ ಹೃದಯವು ದುಃಖಾಗ್ನಿಯಿಂದ ಬೆಂದುಹೋಗಬಹುದು, ನಮ್ಮಿಬ್ಬರೊಳಗಿನ ಅಗಾಧ ಪ್ರೇಮವನ್ನು ನೋಡಿ ವಾಚಕರೊಳಗೆ ಮತ್ಸರಾಗ್ನಿಯು ಪ್ರಜ್ವಲಿಸಲೂ ಬಹುದು.

ಹೀಗೆ ನಮ್ಮಿಬ್ಬರೊಳಗೆ ಅಷ್ಟು ಪ್ರೇಮವು ಇದ್ದಿರುವಾಗ ನಾವು ಸುಮಿತ್ರೆಯ ಮಾತುಗಳನ್ನಾದರೂ ಹೇಗೆ ಮೀರುತ್ತಿರಬಹುದು? ಅವಳ ಪ್ರೇಮಪಾಶವನ್ನು ಸವಿದು ನಾನವಳ ಸ್ನೇಹಕ್ಕೆ ಪೂರ್ಣರೂಪದಿಂದ ಆಸಕ್ತನಾಗಿದ್ದೆ. ಈ ಕಾಂಗ್ರೆಸಿನವರು ಮುಸಲ್ಮಾನರ ಮಾತುಗಳನ್ನು ೧೦೦ ವಾದ ಮೇಲೆ ಒಂದರಂತೆ ಹೇಗೆ ಒಪ್ಪಿ ಸ್ವೀಕರಿಸುತ್ತ ಹೋಗುತ್ತಾರೋ ಹಾಗೆಯೇ ಅವಳು ನನ್ನ ಮುಂದೆ ಬಂದು ನಿಂತುಕೊಂಡಾಗ ನಾನವಳ ಮಾತುಗಳನ್ನು ಒಪ್ಪಿಕೊಳ್ಳುತ್ತಿದ್ದೆ. ಅವಳ ಮಾತುಗಳು ನನಗೆ ಸಮ್ಮತವಾಗುತ್ತಿದ್ದಿಲ್ಲವಾದರೂ ನಾನವುಗಳನ್ನು ಒಪ್ಪಿಕೊಳ್ಳುತ್ತಿದ್ದೆ. ಮಹಾತ್ಮಾಜಿಯವರ ಮುಂದೆ ಜವಾಹರಲಾಲರಿರುವಂತೆ ಅವಳಮುಂದೆ ನನ್ನ ಸ್ಥಿತಿಯಾಗುತಿತ್ತು. ಅವಳು ಬಂದು—'ನಡೆಯಿರಿ, ಈಹೊತ್ತು ಸಿನೇಮಕ್ಕೆ ಹೋಗಬೇಕು' ಎಂದಾಗ ಮೃತ್ಯುವನ್ನಾದರೂ ತಪ್ಪಿಸಬಹುದಾಗಿತ್ತು, ಆದರೆ ಸಿನೇಮಕ್ಕೆ ಹೋಗುವುದನ್ನು ಎಷ್ಟು ಮಾತ್ರಕ್ಕೂ ತಪ್ಪಿಸಲಾಗುತ್ತಿರಲಿಲ್ಲ. ಅವಳು ಬಂದು—'ನೋಡಿ, ಈ ಹೊತ್ತು ಶಾಲೆಗೆ ಹೋಗಬಾರದು, ಮನೆಯಲ್ಲೇ ಇರಿ' ಎಂದಳಾದರೆ, ಸ್ವರ್ಗವಾಗಲಿ, ಸಂಬಳ ಬರುತ್ತಿ ನಿಂತುಹೋಗಲಿ, ಕೆಲಸವು ಕೈಬಿಟ್ಟು ಹೋಗಲಿ—ಆದರೂ ಕೂಡ ನಾನು ಮನೆಯಲ್ಲೇ ಇರುವುದು ಅನಿವಾರ್ಯವಾಗುತಿತ್ತು.

ಆದಿತ್ಯವಾರದ ದಿನವಾಗಿತ್ತು. ಬೆಳಗ್ಗೆ ಆರು ಗಂಟೆಯಾಗಬೇಕಾದರೆ-ಮಾನ್ಯ ವಾಯ್ಸರಾಯರ ಎಕ್ಸ್‌ಟ್ರಾ-ಆರ್ಡಿನರಿ ಗಜೇಟಿನ ಹಾಗೆ ನನಗೆ ಸೂಚನೆ ಬಂದಿತು, 'ಈ ಹೊತ್ತು ಧ್ವಜಾಭಿವಂದನಕ್ಕೆ ಹೋಗಬೇಕು' ಎಂದು. ನಾನು ಹೇಳಿದೆ 'ಇತ್ತ ಆರೇಳು ತಿಂಗಳುಗಳಿಂದ ನೀನು ಧ್ವಜಾಭಿವಂದನಕ್ಕೆ ಹೋಗುವುದನ್ನು ನೋಡಲೇ ಇಲ್ಲ!'

ಸುಮಿತ್ರೆ ಅಂದಳು—ಈಚೆಗೆ ಕೆಲವು ದಿನಗಳಿಂದ ಕಾಂಗ್ರೆಸಿನೊಳಗೆ ಕೆಲವು ಇಂಥ ಜನರು ನುಸುಳಿಕೊಂಡಿದ್ದರು, ಅಂಥವರ ನಡುವೆ ಹೋಗಲಿಕ್ಕೆ ನನಗೆ ಸಂಕೋಚವಾಗುತಿತ್ತು; ಇಷ್ಟವೂ ಇರಲಿಲ್ಲ. ಆ ಜನರು—ಎಲ್ಲರೂ ನನ್ನ ಕಡೆಗೆನೇ ದಿಟ್ಟಿಸಿ ನೋಡುತ್ತಿದ್ದರು. ನಾನೇನೋ ಪೂರಿ-ರೊಟ್ಟಿಗಳಂತೆ ರುಚಿಕರ ಪದಾರ್ಥವಾಗಿರಬಹುದೆಂದು ಅವರು ಬಾಯಿನೀರು ಸುರಿಸುತ್ತಿದ್ದಿರಬಹುದು. ಅತ್ತ 'ಝಂಡಾ ರಹೇ ಊಂಚಾ ಹಮಾರಾ' ಎಂದು ಗೀತವು ಹಾಡಲಾರಂಭವಾದಾಗ ಆ ಜನರ ಲಕ್ಷ್ಯವು ಗೀತದ ಕಡೆಗೆ ಇರುತ್ತಿರಲಿಲ್ಲ. ಪರಂತು, ನನ್ನ ಕಪೋಲದ ಮೇಲೆ ಹಾರಾಡುತ್ತಿದ್ದ ಈ ನಾಲ್ಕಾರು ತಲೆಕೂದಲುಗಳ ಮೇಲೆ ಇರುತಿತ್ತು. ಏನು? ಸ್ತ್ರೀಯು ಹೀಗೆ ಒಂದು ವಿಚಿತ್ರ ವಸ್ತುವಾಗಿರುವಳೆ?' ಎಂದು ಅವಳು ಗಂಭೀರಳಾಗಿ ನನ್ನನ್ನು ಪ್ರಶ್ನಿಸಿದಳು.

ನಾನು ಹೇಳಿದೆ—ಸ್ತ್ರೀಯು ವಿಚಿತ್ರವಸ್ತುವೇ ಆಗಿರುವಳು. ಅವಳನ್ನು ನೋಡಲಿಕ್ಕೆ ಜನರಲ್ಲಿ ಉತ್ಸುಕತೆ ಉಂಟಾಗುವುದಾದರೆ ಆಶ್ಚರ್ಯವಿಲ್ಲ. ಆದರೆ ಈ ಹೊತ್ತು ಧ್ವಜಾಭಿವಂದನಕ್ಕೆ ಆ ಜನರು ಬರುತ್ತಿಲ್ಲವೇನು? ಈ ಹೊತ್ತು ಪ್ರತ್ಯೇಕವಾಗಿ ಕೈಯಿಂದ ಧ್ವಜಾಭಿವಂದನವಾಗುವುದೇನು?

ಅವಳು ಹೇಳಿದಳು—'ಇಲ್ಲ, ಈ ಹೊತ್ತು ಬಹಳ ದೊಡ್ಡ ಕಾಂಗ್ರೆಸ್ ಮುಖಂಡರಾದ ಮೌಲಾನಾ ಸರಫರಾಜ್ ಹುಸ್ಸೇನ ಫರೂಕೀಯವರು ಧ್ವಜಾಭಿವಂದನಕ್ಕೆ ಬರುವರು. ಅದ್ದರಿಂದ ಈ ಹೊತ್ತು ಹೋಗುವುದು ಅಗತ್ಯವಾಗಿದೆ'

ನಾನ ನ್ಯತಾ ಒಬ್ಬ ಸ್ತ್ರೀಯು 'ಅಗತ್ಯವಾಗಿದೆ ಎಂದಾಗ ಆಗುವುದಿಲ್ಲ' ಎಂದು ಹೇಳಲಿಕ್ಕೆ ಯಾವ ಸಹೃದಯನಿಗೂ ಬಾಯಿಬಾರದು. ಅದರಲ್ಲೂ ಸುಮಿತ್ರೆ ಹಾಗೆ ಹೇಳಿದ ಬಳಿಕ 'ಆಗುವುದಿಲ್ಲ' ಎಂದು ನನ್ನ ಬಾಯಿಯಿಂದ ಹೇಗೆ ತಾನೇ ಬರಬಹುದು? ಅಷ್ಟನ್ನು ಅವಳ ಎದುರಿನಲ್ಲಿ ಹೇಳಬೇಕಾದರೆ ನನಗೆ ನೆಪೋಲಿಯನ ಅಥವಾ ರಾಣಾ ಸಂಗ್ರಾಮಸಿಂಹನ ಸಾಹಸವೇ ಬೇಕಾದೀತು. ಧ್ವಜಾಭಿವಂದನದೊಂದಿಗೆ ನನಗೆ ತಾತ್ಪರ್ಯವಿದ್ದಿರಲಿಲ್ಲ, ಪರಂತು ಸುಮಿತ್ರೆ ಹೋಗುವುದು ಬೇಕಾಗಿತ್ತು. ನಿರುಪಾಯನಾಗಿ ನೌಕರನೊಡನೆ ಹೇಳಿದೆ—'ಗಾಡಿ ತಾ'

ಅಲ್ಲಾಗುವುದು ಬರೇ ಧ್ವಜಾಭಿವಂದನವಾಗಿತ್ತು, ಆದರೆ ಇಲ್ಲಿ ಮಾತ್ರ ಎರಡನೆ ವಿವಾಹವಾಗುತ್ತಿರುವ ಹಾಗೆ ಸುಮಿತ್ರೆ ತನ್ನ ಅಲಂಕಾರ ಶೃಂಗಾರ ಮಾಡಿಕೊಳ್ಳಲಾರಂಭಿಸಿದಳು. ಹೋಗುತ್ತಾ ಅವಳು ಹೇಳಿದಳು—'ನೋಡಿ, ವಸಂತಿಯನ್ನು ಸ್ವಲ್ಪ ನೋಡಿಕೊಳ್ಳಿ. ನಾನು ಈಗಲೇ ಬರುವೆನು' ನಾನು ಹೇಳಿದೆ—'ಬೇಡ, ಅವಳನ್ನು ಸಂಗಡವೇ ಕರಕೊಂಡು ಹೋಗು'. ಅವಳು ಉತ್ತರಕೊಟ್ಟಳು—'ಅವಳನ್ನು ಕರಕೊಂಡು ಹೋಗಲಿಕ್ಕೆ ನನಗೆ ಲಜ್ಜೆಯಾಗುತ್ತದೆ'

ಆಗ ನಾನು ಕೇಳಿದೆ—'ನಿನ್ನದೇ ಮಗು, ಲಜ್ಜೆ ಯಾಕಾಗಿ? ಕಾಂಗ್ರೆಸಿನ ಜನರಿಗೆ ಮಕ್ಕಳುಮರಿ ಆಗುತ್ತಿರುವುದಿಲ್ಲವೆ?'

'ಇಲ್ಲ, ಅಲ್ಲಿ ಜನರು ನಗುವರು. ನಾನು ಈಗ ತಾನೇ ೧೦-೧೫ ಮಿನಿಟುಗಳಲ್ಲಿ ಬರುವೆನಷ್ಟೆ' ಎಂದು ಹೇಳುತ್ತ ಅವಳು ಟ್ಯಾಕ್ಸಿಲ್ ಗುಂಡಿನ ಹಾಗೆ ಹೊರಟಾದಳು.

ಅವಳು ಹೋಗಿ ಒಂದು ಮಿನಿಟು ಕೂಡ ಆಗಿರಲಿಲ್ಲ, ಇತ್ತ ವಸಂತಿ ರೋದನ ಆಲಾಪನಕ್ಕೆ ಆರಂಭಮಾಡಿದಳು. ಎರಡುವರೆ ವರ್ಷ ಪ್ರಾಯದಲ್ಲಿ ಅವಳು ಕೂಗುವ ಆತುರವನ್ನು ನೋಡಿದಾಕ್ಷಣ, ಮುಂದೆ ದೊಡ್ಡವಳಾದಾಗ, ಸಭೆ ಸಮಾರಂಭಗಳಲ್ಲಿ 'ಇಂಕಿಲಾಬ್ ಜಿಂದಾಬಾದ್ ಕ್ರಾಂತಿಯು ಜಯವಾಗಲಿ' ಎಂದು ಇಡೀ ಸಭೆ ತಲ್ಲಣಗೊಳ್ಳುವ ಹಾಗೆ ಕೂಗಲಿಕ್ಕೆ ಅವಳೊಬ್ಬಳೇ ಸಾಕೆಂದು ನನಗೆ ತೋರುತಿತ್ತು.

ವಸಂತಿಯನ್ನು ಒಮ್ಮೆ ಈ ತೊಡೆಯಮೇಲೆ ತೆಗೆದುಕೊಳ್ಳುತ್ತಿದ್ದೆ, ಇನ್ನೊಮ್ಮೆ ೬ ತೊಡೆಯ ಮೇಲೆ. ಒಮ್ಮೆ ಅವಳನ್ನು ಎತ್ತಿಕೊಂಡು ನಿಲ್ಲುತ್ತಿದ್ದೆ. ಇನ್ನೊಮ್ಮೆ ಕುಳಿತುಕೊಳ್ಳುತ್ತಿದ್ದೆ. ಆದರೆ ಅವಳ ಅಳುವುದು ಮಾತ್ರ ಜಿನ್ನಾ ಸಾಹೇಬರ ಬೇಡಿಕೆಗಳಂತೆ ಹೆಚ್ಚುತ್ತಾ ಹೋಗುತ್ತಿತ್ತೇ ಹೊರತು ಕಡಿಮೆಯಾಗುತ್ತಿರಲಿಲ್ಲ. ಗೊಂಬೆ ತೋರಿಸಿದೆ, ಮಿಠಾಯಿ ಕೊಟ್ಟೆ, ಚಿತ್ರಪಟಗಳ ಕಡೆಗೆ ಬೆರಳು ಮಾಡಿದೆ, ಅಂಗಳಕ್ಕೆ ಬಂದು ಆ ಹೂವಿನ ಮರಗಳನ್ನು ತೋರಿಸಿದೆ. ಆದರೆ ವಸಂತಿ ಅಳುವುದನ್ನು ಮಾತ್ರ ನಿಲ್ಲಿಸಲಿಲ್ಲ. ಮನೆಯ ಪ್ರತಿಯೊಂದು ಕೋಣೆ, ಸಂದುಗೊಂದುಗಳನ್ನು ತಿರುಗಾಡಿ ಬಂದೆ. ಆದರೂ ಅವಳು ಮೊದಲಿನಂತೆಯೇ ಅಳುತ್ತಿದ್ದಳು. ಈ ಮಧ್ಯೆ ಎರಡು ಡಜನ್ ಆಟದ ಗೊಂಬೆಗಳ ಕಣ್ಣು, ಕಿವಿ, ಕೈಕಾಲು ಬೇರೆ ಬೇರೆ ಕಳಚಿ ಹೋದುವು. ನಾನು ಕತೆ ಬರೆದು ಇದ್ದ ಫೌಂಟನಪೆನು ಮುರಿದು ಹೋಯಿತು. ಕಾಗದ ನೂರಾರು ಚೂರುಗಳಾಗಿ ಗಾಳಿಗೆ ಹಾರಿಹೋದುವು.

ಎಲ್ಲಿಯಾದರೂ ಹುಳು ಕಚ್ಚಲಿಲ್ಲವಷ್ಟೆ, ಚೇಳು ಕಡಿಯಲಿಲ್ಲವಷ್ಟೆ ಎಂದು ನನಗೆ ಕೊಂಚ ಸಂದೇಹವಾಗಿ ನಾನು ವಸಂತಿಯ ಅಂಗೋಪಾಂಗಗಳನ್ನು ಹುಡುಕಿ ನೋಡಿದೆ, ಆದರೆ ಏನೂ ಕಾಣಲಿಲ್ಲ. ಎಲ್ಲಿಯಾದರೂ ಕಾಣದ ಸ್ಥಾನದಲ್ಲಿ ಕಡಿದಿರಬಹುದೆಂದು ಊಹಿಸಿ ನಾನು ಜಾಂಬಕಿನ ಕರಡಿಗೆಯನ್ನು ಕೈಗೆ ತೆಗೆದುಕೊಂಡು ವಸಂತಿಯ ಇಡೀ ಶರೀರವನ್ನು ಆ ಮುಲಾಮಿನಿಂದ ತಿಕ್ಕತೊಡಗಿದೆ. ಆಗಲಾದರೂ ವಸಂತಿ ಅಳುವದನ್ನು ನಿಲ್ಲಿಸಬಹುದೆಂದು ನನ್ನ ಭಾವನೆಯಾಗಿತ್ತು. ಆದರೆ ಎಷ್ಟರ ತನಕ ನಾನು ಅವಳ ಮೈಯನ್ನು ಜಾಂಬಕಿನಿಂದ ತಿಕ್ಕುತ್ತ ಇದ್ದೆ-ಅಷ್ಟರ ತನಕ ಅವಳು ಸುಮ್ಮಗಿದ್ದಳು. ಆದರೆ ಮುಲಾಮಿನ ಕರಡಿಗೆ ಖಾಲಿಯಾದ ಆಕ್ಷಣವೇ ಪುನಃ ವಸಂತಿಯ ಆಲಾಪನಕ್ಕೆ ಆರಂಭವಾಯಿತು. ಅಳುವುದು ಮೊದಲು ಯಾವ ಮಟ್ಟದಲ್ಲಿ ನಿಂತಿತ್ತೋ, ಪುನಃ ಅದು ಅದೇ ಮಟ್ಟಕ್ಕೆ ಮೆಲ್ಲಮೆಲ್ಲಗೆ ಏರತೊಡಗಿತು. ಒಂದು ರೂಪಾಯಿಯ ಕರಡಿಗೆ ಅಗಲೇ ಖಾಲಿಯಾಗಿ ಮೂಲೆ ಸೇರಿತ್ತು. ಈಗ ಏನು ಮಾಡುವುದೆಂದು ತಿಳಿಯಲಿಲ್ಲ. ಸ್ವಲ್ಪ ಹುಷ್ಷ ನವರಲೇ ಎಂದು ನಾನು ಆಲೋಚಿಸುತ್ತಾ ಇದ್ದೆ. ಅಷ್ಟರಲ್ಲೇ ವಸಂತಿಯ ದೃಷ್ಟಿ ನನ್ನ ೬೦ ರೂಪಾಯಿ ಬೆಲೆಯ ರಿಸ್ಟ್‌ವಾಚಿನ ಕಡೆಗೆ ಹರಿಯಿತು. ನಾನದನ್ನು ಅಡಗಿಸಲಿಕ್ಕೆ ಪ್ರಯತ್ನಿಸುತ್ತಿದ್ದಾಗಲೇ ಅವಳು ಅದರ ಕಡೆಗೆ ಬೆರಳು ನೀಡಿ ಮತ್ತಷ್ಟು ಕೂಗತೊಡಗಿದಳು. ವಾಚನ್ನು ಕೊಟ್ಟೊಡನೆ ಅವಳ ಅಳುವುದು ನಿಂತಿತು. ಅವಳು ಅದನ್ನು ತೆಗೆದುಕೊಂಡು ಎರಡು ಮುಕ್ಕಾಲಿನ ರಬ್ಬರ ಚೆಂಡಿನ ಹಾಗೆ ಆಡಿಸತೊಡಗಿದಳು. ಅದನ್ನು ನೋಡಿ ನನ್ನ ಎದೆ ಗುಡುಗುಡಿಸಹತ್ತಿತು.

ವಾಚು ಒಂದು ಇಂಚು, ಎರಡು ಇಂಚು, ಆರು ಇಂಚು, ಮಂದಡಿ ಎತ್ತರಕ್ಕೆ ಹಾರತೊಡಗಿತು. ಆದರೆ ಅದನ್ನು ಕಸಕೊಳ್ಳುವ ಸಾಹಸ ನನಗೆ ಬರಲಿಲ್ಲ. ಸುಮಿತ್ರೆಯಾದರೋ, ಒಕ್ಕಿಜಾತಿಯ ಸುಮಿತ್ರೆಯಾಗಿದ್ದಳು. ೧೦-೧೫ ಮಿನುಟುಗಳಲ್ಲಿ ಹೋಗಿ ಬರುವೆನೆಂದಿದ್ದಳು. ಆದರೆ ತಾಸು ಎರಡು ಕಳೆದರೂ ಅವಳ ಸುಳಿವು ಇರಲಿಲ್ಲ. ಇವೆಂಥ ಸುಮಿತ್ರೆ? ನನ್ನ ಮನಸ್ಸಿನಲ್ಲಿ ತುಂಬಾ ಬೇಸರವಿದ್ದಿತಾದರೂ, ವಸಂತಿ ಸುಮ್ಮಗಿದ್ದಳು. ಅದ್ದರಿಂದ ಕೊಂಚ ಸಮಾಧಾನವೆನ್ನಿಸುತಿತ್ತು. ವಾಚು ಮುರಿದು ಹೋಗುವ ಬೇಸರವಿದ್ದಿರಲಿಲ್ಲ. ಆದರೆ ವಾಚನ್ನು ಹಾರಿಸುವುದು ಮಾತ್ರ ನಿಲ್ಲುತ್ತಲೇ ಇಲ್ಲ. ಕಟ್ಟಕಡೆಗೆ ಅವಳು ವಾಚು ಹಾರಿಸುವುದನ್ನು ನಿಲ್ಲಿಸಿ, ಅದನ್ನೇ ದಿಟ್ಟಿಸಿ ನೋಡತೊಡಗಿದಳು. ಆ ಮೇಲೆ ಅವಳು ನನ್ನನ್ನೇ ಕಾಣತೊಡಗಿದಳು. ಕ್ರಿಮಿನಲ್ ವ್ಯವಹರಣೆಯಲ್ಲಿ ಫಿರ್ಯಾದಿಯು ತನ್ನ ಪರಿಚಯವಾಗುವಾಗ ಜಜ್ಜರು ಪೆನ್ನು ಅಲೆಯನ್ನು ಮತ್ತೊಮ್ಮೆ ಮುದ್ದೆಯಾಲೆಯನ್ನು ದೃಷ್ಟಿಸಿ

[೧೫ನೆಯ ಪುಟವನ್ನು ನೋಡಿರಿ]

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ!

ವಜ್ರಗಳು!

ಎವರ್ಸ್ಟ್ಯಾಡಮ್ಸಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯವಾಗುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಪ್ರಪಂಚದ ಮಹಾ ದುರ್ಭಾಗಿ ಬೆನೀಟೋ ಮುಸಲೋನಿ!

ಇಂದು ಜಗತ್ತಿನ ಮಹಾ ದುರ್ಭಾಗಿಯು ಯಾರೆಂದು ಕೇಳಿದರೆ, ಕೆಲವರು ಹಿಟ್ಲರನ ಕಡೆಗೆ, ಇನ್ನು ಕೆಲವರು ಚೆಂಬರಲೇನರ ಕಡೆಗೆ ಮತ್ತೆ ಕೆಲವರು ಗ್ಲ್ಯಾಕ ಆಫ ವಿಂಡ್ಸರರ ಕಡೆಗೆ ಬೆರಳು ನೀಡಬಹುದು. ಹಿಟ್ಲರನ ಅಧಿಕಾರದ ಮಧ್ಯಾಹ್ನವು ಕಳೆದು ಈಗ ಸಂಧ್ಯಾಕಾಲವು ಸನ್ನಿಹಿತವಾಗಿದೆ. ಅವನೀಗ ಯುದ್ಧವಿಲ್ಲದೆ 'ಬೊಲ್ ಬಜು'ವಿನಿಂದ ಇತರ ಚಿಕ್ಕ ಚೊಕ್ಕ ರಾಷ್ಟ್ರಗಳನ್ನು ನುಂಗಿ ನೀರು ಕುಡಿಯುವ ಬದಲಿಗೆ, ಲೋಕ ಯುದ್ಧವನ್ನು ಸಾರಿ, ಲಕ್ಷಾಂತರ ಜರ್ಮನರ ಬಿಸಿರಕ್ತದ ಕಾಲುವೆಯನ್ನು ಹರಿಸಿ ತನ್ನ ಮಹತ್ವಾಕಾಂಕ್ಷೆಯನ್ನು ತೀರಿಸಬೇಕಾಗಿ ಬಂದಿದೆ. ಚೆಂಬರಲೇನರು ಸರ್ವಾಧಿಕಾರಿಗಳ ಮನಸ್ಸನ್ನು ಪ್ರೀತಿಯಿಂದ ಒಲಿಸಿ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೋಸ್ಕರ ಒಂದು ವರ್ಷ ಕಾಲ ಭಗೀರಥ ಪ್ರಯತ್ನ ಮಾಡಿದರು. ಆದರೂ ಅವರು ಕೃತಾರ್ಥರಾಗಲಿಲ್ಲ. ಡ್ಯೂಕ್ ಆಫ್ ವಿಂಡ್ಸರರು ಒಬ್ಬ ಹೆಣ್ಣಿನ ಕೈಹಿಡಿಯುವುದಕ್ಕಾಗಿ ಅಷ್ಟು ದೊಡ್ಡ ಬ್ರಿಟಿಷ ಸಮ್ರಾಟ ಪದವಿಗೆ ತಿಲಾಂಜಲಿಯನ್ನು ಕೊಟ್ಟು ಮೂರು ವರ್ಷ ಕಾಲ ದಿಗ್ದೇಶಗಳಲ್ಲಿ ಅಲೆಯ ಬೇಕಾಯಿತು. ಮತ್ತೆ ಅವರು ಮೊನ್ನೆ ಸ್ವದೇಶಕ್ಕೆ ಮರಳಿದಾಗ ಅವರ ಆಗಮನ ಸಂಬಂಧ ಸ್ವಾಗತೋಪಚಾರಗಳೊಂದೂ ನಡೆಯಲಿಲ್ಲ. ಒಂದು ಸಮಯ ಬ್ರಿಟಿಷ ಸಮ್ರಾಟರಾಗಿದ್ದವರು, ಮೊನ್ನೆ ಸಾಮಾನ್ಯ ಮನುಷ್ಯರಂತೆ ಬ್ರಿಟನಿಗೆ ಬಂದರು. ಈಗ ಅವರಿಗೆ ಸೈನ್ಯದಲ್ಲಿ ಒಂದು ಅಧಿಕಾರ ಪದವಿಯನ್ನು ಕೊಡುತ್ತಾರಂತೆ. ಇವರು ದುರ್ಭಾಗಿಗಳು ನಿಜ. ಆದರೆ ಇವರನ್ನು ಜಗತ್ತಿನ ಮಹಾದುರ್ಭಾಗಿಗಳೆಂದು ಕರೆಯಲಾಗುವುದಿಲ್ಲ. ಹಾಗಾದರೆ ಜರ್ಮನರ ಪ್ರಚಂಡ ಆಕ್ರಮಣವನ್ನು ಸಾಹಸಪಟ್ಟು ಎದುರಿಸಿ, ಪೋಲಾಂಡನ್ನು ರಕ್ಷಿಸಲಿಕ್ಕೆ ತನ್ನ ಪ್ರಾಣಗಳನ್ನೀಯಲಿಕ್ಕೂ ಸಿದ್ಧನಾಗಿ ನಿಂತು ದೈವೀದುರ್ವಿಲಾಸದಿಂದ ಕೃತಾರ್ಥನಾಗದೆ ಈಗ ರುಮೇನಿಯದಲ್ಲಿ ಬಂದಿತನಾಗಿರುವ ಪೋಲಾಂಡಿನ ಸರ್ವಸೇನಾಧಿಪತಿ ಮಾರ್ಶಲ್ ಸ್ಮಿಗ್ಲೀರಿಜ್ ಅಂಥ ಮಹಾದುರ್ಭಾಗಿಯೇ? ಅವನೂ ಅಲ್ಲ! ಹಾಗಾದರೆ ಜಗತ್ತಿನ ಮಹಾದುರ್ಭಾಗಿ-ಮತ್ತೆ ಯಾರಿರಬಹುದು? ಸರಿ—ಅವನೇ ಇಟಲಿಯ ಸರ್ವಾಧಿಕಾರಿ ಬೆನಿಟೋ ಮುಸಲೋನಿ ಆಗಿದ್ದಾನೆ. ಹೇಗೆಂಬಿರಾ? ಕೇಳಿ!!

ಕೈಕಸಾಯಿತು—ಆದರೆ ಬಾಯಿ ಹೊಸದಾಯಿತು.

ಮುಸಲೋನಿ ಫೆಸಿಜಮಿನ ಜನ್ಮದಾತ. ಹಿಟ್ಲರ ಅವನ ಪಟ್ಟ ಶಿಷ್ಯ. ಮುಸಲೋನಿಯನ್ನು ಅನುಕರಿಸಿ ಹಿಟ್ಲರನು ಜರ್ಮನಿಯಲ್ಲಿ ನಾಝೀ ತತ್ವಗಳನ್ನು ಅನುಷ್ಠಾನಕ್ಕೆ ತಂದನು, ಅವುಗಳ ಪ್ರಚಾರಮಾಡಿದನು. ಹಿಟ್ಲರನು ಜರ್ಮನಿಯ ಸರ್ವಾಧಿಕಾರತ್ವವನ್ನು ಪಡೆಯಲಿಕ್ಕೆ ಬೇಕಾದ ಪ್ರೇರಕ ಶಕ್ತಿಯು ಅವನಿಗೆ ಮುಸಲೋನಿಯಿಂದಲೇ ಪ್ರಾಪ್ತವಾಗಿತ್ತು. ಆದರೆ ಈಗ, ಹಿಟ್ಲರ ದೊಡ್ಡದೊಂದು ಜರ್ಮನ್ ಸಾಮ್ರಾಜ್ಯವನ್ನೇ ಕಟ್ಟಲಿಕ್ಕಾಗಿ ರಣರಂಗದಲ್ಲಿ ತಾಂಡವ ನೃತ್ಯವನ್ನಾಡುತ್ತಿರುವಾಗ, ಮುಸಲೋನಿ ರೋಮಿನ ತನ್ನ ಅರಮನೆಯಲ್ಲಿ ಬೆಸ್ತನಂತೆ ಬೆಪ್ಪಾಗಿ ಕೂತು ಶಾಂತಿ ಮಂತ್ರವನ್ನು ಜಪಿಸುತ್ತಾ ಇದ್ದಾನೆ. ಮುಸಲೋನಿಯಂಥ ಶಕ್ತಿಸಂಪನ್ನ ಅಧಿಕಾರ ಪುರುಷನಿಗೆ ಇಂದು ಪ್ರಾಪ್ತವಾಗಿರುವಂಥ ದೀನಸ್ಥಿತಿಯು ನಮ್ಮ ವಿಲು ಜನ್ಮದ ವೈರಿಗಳಿಗೂ ಬರಕೂಡದು.

ಪ್ರಕೃತ ಯುದ್ಧದಲ್ಲಿ ಇಟಲಿಯು ಉದಾಸೀನ ಪಕ್ಷವನ್ನು ಸೇರಿರುವುದೆಂದು ಮುಸಲೋನಿ ಸಾರಿದ್ದಾನೆ. ಆದರೆ ಸೂಕ್ಷ್ಮವಾಗಿ ವಿಚಾರ ಮಾಡಿದರೆ, ಮುಸಲೋನಿಯದು ನಿಜವಾದ ಉದಾಸೀನ ಪಕ್ಷವಾಗಿರುವುದಿಲ್ಲ. ಒಳಗಿಂದೊಳಗೆ ಅವನು ಹಿಟ್ಲರನಿಗೆ ಸಹಾಯವನ್ನು ಒದಗಿಸುತ್ತಲೇ ಇದ್ದಾನೆ. ಹೀಗೆ ಮಾಡದೆ ಅವನಿಗೆ ಉಪಾಯವಿಲ್ಲವಾಗಿದೆ. ಆದರೂ ಈ ಸಹಾಯದ ಬದಲಿಗೆ ಅವನಿಗೆ ದೊರೆಯುವ ಪ್ರತಿಫಲವು ಮಾತ್ರ ಸೊನ್ನೆಯಾಗಿದೆ.

ಮುಸಲೋನಿ, ಹಿಟ್ಲರ, ಅಥವಾ ಸ್ಟಾಲೀನ—ಇತ್ಯಾದಿ ಯಾವ ಸರ್ವಾಧಿಕಾರಿಯೇ ಆಗಿರಲಿ, ತಮ್ಮ ಸದಾಚಾರ ಸದ್ವರ್ತನದ ಮೂಲಕ ಯಾರೂ ಆ ಪದವಿಯನ್ನು ಪಡೆಯಲಿಲ್ಲ. ಸದಾಚಾರ ಸದ್ವರ್ತನದ ಮೂಲಕ ಸರ್ವಾಧಿಕಾರಿಗಳಾಗಿರುವುದು ಸಾಧ್ಯವೂ ಅಲ್ಲ. ಧೂರ್ತತನದ, ದುಷ್ಟತನ, ಮರೆಮೋಸ, ಖೂನಿಕೊಲೆ ಇತ್ಯಾದಿ ದುರಾಚಾರ ದುರ್ವರ್ತನಗಳೇ ಸರ್ವಾಧಿಕಾರಿಗಳಿಗೆ ಆ ಅಧಿಕಾರ ಪದವಿಯನ್ನು ಸಂಪಾದಿಸಿ ಕೊಟ್ಟಿವೆ. ಈ ದುರಾಚಾರ ದುರ್ವರ್ತನೆಗಳ ಮೂಲಕವೇ ಅವರು ಆ ಪದವಿಯನ್ನು ಸಂರಕ್ಷಿಸುತ್ತಲೂ ಇದ್ದಾರೆ. ಈ ತರದಿಂದ ಸಂಪಾದಿಸಿದ ಸರ್ವಾಧಿಕಾರದಲ್ಲಿ ತನ್ನ ಶ್ರದ್ಧೆ ವಿಶ್ವಾಸಗಳನ್ನು ತೋರಿಸಿದವರಲ್ಲಿ ಮುಸಲೋನಿ ಮೊದಲಿಗನು. ಅವನನ್ನೇ ಹಿಟ್ಲರ ಅನುಕರಿಸಿ ಈಗ ಮುಸಲೋನಿಯ ಕೈಬಿಟ್ಟಿದ್ದಾನೆ. ಮುಸಲೋನಿ ಹೊಡೆದ ಬಾಣದಿಂದಲೇ ಹಿಟ್ಲರನು ಪುನಃ ಮುಸಲೋನಿಯನ್ನು ಹೊಡೆದಿದ್ದಾನೆ. ಆದರೆ ಇದಕ್ಕಾಗಿ ಪಶ್ಚಾತ್ತಾಪವಾಗುವುದಿಲ್ಲ. ಯಾಕೆಂದರೆ ಸರ್ವಾಧಿಕಾರಿಗಳಿಗೆ ಈ ರೀತಿಯಲ್ಲಿ ಮೋಸಕೊಟ್ಟು ಮೋಸಹೊಂದಿ ಅಭ್ಯಾಸವಾಗಿ ಬಿಟ್ಟಿದೆ.

ಮುಸಲೋನಿಯ ದುಃಖದ ಕಾರಣ

ಮುಸಲೋನಿಯ ಹೃದಯವು ಇಂದು ದುಃಖಾಗ್ನಿಯಿಂದ ಸುಟ್ಟು ಸುಣ್ಣವಾಗುತ್ತಾ ಇದೆ. ಆದರೆ ಅವನ ದುಃಖದ ಕಾರಣವು ಹಿಟ್ಲರನು ಅವನಿಗೆ ಮೋಸಕೊಟ್ಟಿದ್ದಾನೆಂಬುದಕ್ಕಾಗಿ ಅಲ್ಲ. ಪರಂತು, ರಾಜಕೀಯ, ಧ್ಯೇಯಾದರ್ಶಗಳ ದೃಷ್ಟಿಯಿಂದ ಮುಸಲೋನಿಯ ತತ್ವಗಳಿಗೇ ಇಂದು ಬಲವಾದ ಆಘಾತವುಂಟಾಗಿದೆ. ಯಾವ ತತ್ವಗಳ ಮೂಲಕ ಅವನು ಅಧಿಕಾರಕ್ಕೆ ಬಂದನೋ, ಅವೇ ಇಂದು ಮಣ್ಣುಪಾಲಾಗುವ ಹಾಗಿವೆ. ರಷ್ಯಾ ಜರ್ಮನ ಒಪ್ಪಂದವಾದ ಮರುಕ್ಷಣದಲ್ಲಿಯೇ ಇಟಲಿಗೂ ಜರ್ಮನಿಗೂ ಆದ ಸ್ನೇಹ ಸಂಬಂಧವು ಕಡಿದು ಹೋದಂತಾಗಿದೆ. ಆದರೆ ಅದು ಕಡಿದು ಹೋಗಿದೆ ಎಂದು ಮುಸಲೋನಿ ಜಗತ್ತಿಗೆ ಸಾರಿ ಹೇಳಲಾರ. ಹಿಟ್ಲರ ಸ್ಟಾಲೀನರೊಳಗೆ ಸ್ನೇಹವುಂಟಾಗಿರುವದರಿಂದ ಬೊಲ್ಶೆವಿಜಮು ಅಥವಾ ಉಗ್ರ ಸಮತಾವಾದದ ಮೂಲಕ ಫೆಸೀಜಮ್ ಅಥವಾ ಉಗ್ರ ಸಾಮ್ರಾಜ್ಯವಾದಕ್ಕೆ ಆಘಾತವಾಗದೆ ಇರುವ ಸಂಭವವೇ ಇಲ್ಲ. ಜರ್ಮನಿಯ ಹಿಟ್ಲರನು ಮಾತ್ರ ಮುಸಲೋನಿಯ ಕೈ ಬಿಟ್ಟದ್ದಲ್ಲ! ಅತ್ತ ಜಪಾನ ಸರಕಾರವು ಕೂಡ ಈ ವರೆಗೆ ಫೆಸಿಸ್ಟ ನೀತಿ ಕ್ರಮಗಳನ್ನು ಅನುಸರಿಸಿದ್ದರೂ, ಈಗ ಅದಕ್ಕೆ ಎಳ್ಳು ನೀರು ಬಿಟ್ಟು ಹಿಟ್ಲರ ಮುಸಲೋನಿ ಸಂಬಂಧವನ್ನು ಕಡಿದುಕೊಂಡಿದೆ. ತನ್ನದೇ ಆದ ಒಂದು ಸ್ವತಂತ್ರ ನೀತಿಯನ್ನು ತನ್ನ ವ್ಯವಹಾರಗಳಲ್ಲಿ ಅನುಸರಿಸುತ್ತಾ ಇದೆ. ಹೀಗಾದ್ದರಿಂದ ಈಗ ಮುಸಲೋನಿ ಏಕಾಂಗಿಯಾಗಿದ್ದಾನೆ.

ಮುಸಲೋನಿಗೆ ಇಟಲಿಯಲ್ಲಿಯೇ ಈಗ ಜನತೆಯ ಹಾರ್ದಿಕ ಬೆಂಬಲ ಅಥವಾ ಸಹಾನುಭೂತಿ ಇರುವದೆಂದು ಹೇಳಲಾಗುವದಿಲ್ಲ. ಇಟಲಿಯ ಜನರು ರೋಮನ ಕೆಥೋಲಿಕರು, ದೇವಧರ್ಮಗಳಲ್ಲಿ ಭಕ್ತಿ ಶ್ರದ್ಧೆ ವಿಶ್ವಾಸವುಳ್ಳವರು. ರಶ್ಯವು ನಾಸ್ತಿಕವಾಗಿದೆ. ಅದಕ್ಕೆ ದೇವಧರ್ಮಗಳಲ್ಲಿ ವಿಶ್ವಾಸವಿರುವದಿಲ್ಲ. ಅಂತಿರುವಾಗ ರಶ್ಯದ ಸ್ಟಾಲೀನನೊಂದಿಗೆ ಒಪ್ಪಂದ ಮಾಡಿಕೊಂಡ ಹಿಟ್ಲರನ ಸಂಬಂಧವನ್ನು ಮುಸಲೋನಿ ಇನ್ನೂ ಇಟ್ಟುಕೊಂಡಿರುವದು ರೋಮನರಿಗೆ ಬೇಸರವಾಗಿದೆ. ಹಾಗೆಯೇ ಅಬಿಸೀನಿಯ, ಅಥವಾ ಸ್ಪೈನದ ಆಕ್ರಮಣಗಳನ್ನು ಪೋಪಸ್ವಾಮಿಯವರು ಆಶೀರ್ವದಿಸುವಂತೆ ಒತ್ತಾಯ ಮಾಡುವದರಲ್ಲಿ ಮುಸಲೋನಿ ಕೃತಾರ್ಥನಾದನಾದರೂ ಈಗ ಹಿಟ್ಲರ ಸ್ಟಾಲೀನರ ಆಕ್ರಮಣಗಳಲ್ಲಿ ಮುಸಲೋನಿಗೆ ಪೋಪರ ಆಶೀರ್ವಾದಗಳನ್ನೂ ಪಡೆಯುವದು ಕಷ್ಟವಾಗಿದೆ. ಪೋಪರಿಗೆ ಸ್ಟಾಲೀನನ ಹೆಸರು ಕೇಳಿದರೆ ಆಗುವದಿಲ್ಲ. ಆದ್ದರಿಂದ ಮುಸಲೋನಿ ಹಿಟ್ಲರ ಸ್ನೇಹ ಸಂಬಂಧಕ್ಕೆ ಪೋಪರ ವಿರೋಧವೂ ಕಂಡುಬರುತ್ತಲಿದೆ. ಹೀಗಾಗಿ ಯೂರೋಪಿನ ಇಂದಿನ ರಾಜಕಾರಣಗಳಲ್ಲಿ ಮುಸಲೋನಿಗೆ ಇತ್ತ ಹೋದರೆ ಹೊಳೆ, ಅತ್ತ ಹೋದರೆ ದರಿ ಎಂಬಂತಾಗಿರುವದು. ಅವನೇ ನೆಟ್ಟು ಬೆಳಸಿದ ಫೆಸಿಸ್ಟ ಗಿಡವು ಅವನಿಗೆ ಈ ಫಲವನ್ನು ಕೊಟ್ಟಿದೆ—ಪಾಪ!

ತಾನೇ ಸಾಹಸ ಪಟ್ಟು—ತಾನು ಹಿಟ್ಲರನ ಮಿತ್ರ ಮತ್ತು ಸಹಕಾರಿ ಎಂದು ಮುಸಲೋನಿಗೆ ಘೋಷಿಸಲಿಕ್ಕೂ ಇಲ್ಲ. ಯಾಕೆಂದರೆ ಇಟಲಿಯ ಜನರು ಹಿಟ್ಲರ ಮತ್ತು ಜರ್ಮನರನ್ನು ಮೆಚ್ಚುವದಕ್ಕಿಂತ ಹೆಚ್ಚಾಗಿ ಬ್ರಿಟಿಷರು ಮತ್ತು ಫ್ರೆಂಚರನ್ನು ಪ್ರೀತಿಸುತ್ತಾರೆ. ಹೇಗಿದ್ದರೂ ಪೋಲಾಂಡದ ಯುದ್ಧ ಪ್ರಕರಣದಲ್ಲಿ ಇಟಲಿಯು ಜರ್ಮನ್ ಪಕ್ಷವನ್ನು ಸೇರುವದು ಜನರಿಗೆ ಬೇಡವಾಗಿದೆ. ಮುಸಲೋನಿಗೆ ಕೌಟುಂಬಿಕ ಸುಖವು ಅಷ್ಟು ಚೆನ್ನಾಗಿ ಇರುವದಿಲ್ಲ. ಅವನ ಪ್ರೀತಿಯ ಮತ್ತು ಮಗಳು ಎಡ್ಡಾ ಮತ್ತು ಅವಳ ಪತಿ ಕೌಂಟ ಸಿಯಾನೋ ಇಬ್ಬರೂ ಅವನನ್ನು ಜನಮತಕ್ಕೆ ವಿರುದ್ಧ ಜರ್ಮನಿಯ ಬೆಂಬಲಕ್ಕೆ ಹೋಗಲಿಲ್ಲಬೇಕೆಂದು ಒತ್ತಾಯಿಸುತ್ತಿರುವರು. ಮುಸಲೋನಿಯ ಮಗ ಯಾವನಿಗಿಂತಲೂ ಅಳಿಯ ದೊಡ್ಡ ಮಹತ್ವಾಕಾಂಕ್ಷಿಯಾಗಿದ್ದಾನೆ. ಅವನೂ ಹಿಟ್ಲರನ ಬಲಗೈ ಮತ್ತು ಭಾವೀ ಆತಂಕನಿಯ ಸರ್ವಾಧಿಕಾರಿ ಗೋರಿಂಗ—ಇವರಿಬ್ಬರು ಮೆಚ್ಚಿದ ಮಿತ್ರರಾಗಿರುವರೆಂದು ಹೇಳಲಾಗುತ್ತದೆ.

ತಾನು ಯುದ್ಧಕ್ಕೆ ಹೋಗುವದಿಲ್ಲವೆಂದು ಮುಸಲೋನಿ ಹೇಳಿದ್ದನಾದರೂ ಅವನ ಮಾತನ್ನು ನಂಬುವವರು ಮಾತ್ರ ಯಾರೂ ಇಲ್ಲ. ಬ್ರಿಟಿಷರು ಭೂಮಧ್ಯ ಸಮುದ್ರದಲ್ಲಿ ಪ್ರಬಲ ಕಾವಲನ್ನಿಟ್ಟಿರುವರು. ಅತ್ತ ಟರ್ಕಿ ಈಜಿಪ್ತಗಳು ಕೂಡಾ ಮಿತ್ರಮಂಡಳಿಯ ಸಹಾಯಕ್ಕೆ ಸಿದ್ಧವಾಗಿ ನಿಂತಿವೆ. ಆದ್ದರಿಂದ ಮುಸಲೋನಿ ಹಿಟ್ಲರನ ಪಕ್ಷದಲ್ಲಿ ಯುದ್ಧಕ್ಕೆ ಹೋದನಾದರೆ ಹಿಟ್ಲರನೊಂದಿಗೆ ಅವನ ಸರ್ವನಾಶವೂ ಖಂಡಿತ. ಒಮ್ಮೆ ನುಂಗಿದ ಅಬೀಸೀನಿಯವನ್ನು ಜೀರ್ಣಿಸಿಕೊಳ್ಳುವರೇ ಕಷ್ಟವಾಗಿ ಅದನ್ನು ವಾಂತಿ ಮಾಡಿ ಹೊರಗೆ ಹಾಕಲು ಸಿದ್ಧನಾಗಿರುವ ಮುಸಲೋನಿ ಈಗ ಹಲ್ಲು ಉದುರಿದ ಸಿಂಹದಂತಾಗಿರುವನು. ಇವನ ಮಹತ್ವಾಕಾಂಕ್ಷೆಯ ಪೂರ್ಣವಾಗುವ—ಪೂರ್ವ ರೋಮನ ಸಾಮ್ರಾಜ್ಯವನ್ನು ಪುನಃಕಟ್ಟುವ—ಯಾವ ಸಾಧ್ಯತೆಯೂ ಕಂಡುಬರುವದಿಲ್ಲ.

ಯೂರೋಪದ ಯುದ್ಧವು ಬಿಸಿನೀರಿನ ಗುಟುಕು

ಯೂರೋಪದ ಪ್ರಕೃತ ಯುದ್ಧವು ಮುಸಲೋನಿಗೆ ಬಿಸಿನೀರಿನ ಗುಟುಕಾಗಿ ಪರಿಣಮಿಸಿ ಅವರು ಆ ಯುದ್ಧದಲ್ಲಿ ಅವನು ಸೇರಿದರೆ ಅವನ ನಾಶವು ಆ ಕ್ಷಣಕ್ಕೇ ಆಗುವದು. ಸೇರದೇ ಉದಾಸೀನನಾಗಿ ಇರುವನಾದರೂ ಇನ್ನು ಅವನು ಉತ್ಥಾನಕ್ಕೆ ಬರುವ ಹಾಗಿಲ್ಲ. ಅವನ ನಾಶವು ಈಗಲೂ ಮೆಲ್ಲಮೆಲ್ಲನೆ ಆಗುತ್ತಲೇ ಇರುವದು. ಯಾಕೆಂದರೆ ತ್ರೋರಿಕೆಗೆ ಈಗ ಮುಸಲೋನಿ ಉದಾಸೀನನಾಗಿದ್ದನಾದರೂ, ಗೋಪ್ಯದಲ್ಲಿ ಅವನು ಹಿಟ್ಲರನಿಗೆ ಆಹಾರ ಮತ್ತು ಯುದ್ಧ ಸಾಮಗ್ರಿಗಳನ್ನು ಕೊಟ್ಟು ಸಹಾಯ ಮಾಡಬೇಕಾಗಿದೆ. ಹೀಗೆ ಗೋಪ್ಯದಲ್ಲಿ ಅವನು ನಾಝಿ ಕ್ಷಸನ ಎಷ್ಟು ದಿನಗಳ ತನಕ ಹೊಟ್ಟೆ ತುಂಬಿಸುತ್ತ ಇರಬಹುದು? ಅಥವಾ ಯುದ್ಧದಲ್ಲಿ ಸೇರಿದನಾದರೂ ಭೂಮಧ್ಯ ಸಮುದ್ರದಲ್ಲಿ ಬ್ರಿಟಿಷರು ಮತ್ತು ಅವರ ಮಿತ್ರಮಂಡಳಿ ಪ್ರಚಂಡ ಮುತ್ತಿಗೆಯಿಂದ ತನ್ನನ್ನೂ ತನ್ನ ದೇಶವನ್ನೂ ಕಾಪಾಡಿಕೊಳ್ಳಬಹುದು?

ವೃದ್ಧಾಪ್ಯದಲ್ಲಿ ಮುಸಲೋನಿಯ ಈ ಕರುಣಾಜನಕ ಸ್ಥಿತಿ! ಮುಸಲೋನಿಯ ಫೆಸೀಜಮು ಈಗ ಜೀವನ ಮರಣ ಸಂಗ್ರಾಮದಲ್ಲಿ ಸಿಲುಕಿಕೊಂಡಿದೆ. ಅದರ ಈ ದೀನಾವಸ್ಥೆಯನ್ನು ಅದರ ಜನ್ಮದಾತನಾದ ಮುಸಲೋನಿ ಕಣ್ಣಿನಿಂದ ನೋಡಿಕೊಂಡಿರಬೇಕು! ಯಾವದನ್ನು ಮುಸಲೋನಿ ಪ್ರೇಮದಿಂದ ನೆಟ್ಟು ಬೆಳಸಿ, ಸಾಕಿ ಸಲಹಿದನೋ, ಆದೇ ಫೆಸೀಜಮು ವೃಕ್ಷವು ಬಾಡಿ, ಕಮರಿ ಅವನ ಕಣ್ಣ ಮುಂದೆಯೇ ನಷ್ಟವಾಗುತ್ತಲಿರುವದು. ಅದರೂ ಅವನು ಕೈಎತ್ತಿ ಕೊಂಚಮಟ್ಟಿಗಾದರೂ ಅದರ ಸಹಾಯಕ್ಕೆ ಒದಗುವಂತಿಲ್ಲ. ಆದ್ದರಿಂದಲೇ ಮುಸಲೋನಿ ಪ್ರಪಂಚದ ಮಹಾ ದುರ್ಭಾಗಿಯಾಗಿದ್ದಾನೆ. ಅವನ ಆ ಸರ್ವಾಧಿಕಾರದ ಪದವಿಯೊಂದನೆ ಸ್ವರ್ಗ ರಾಜ್ಯವನ್ನು ಕೊಡುತ್ತೇನೆಂದರೂ, ಅವನ ಆ ಪದವಿಯು ನನಗೆ ಬೇಡವಾಗಿದೆ.

THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction Chit Funds ranging from Rs. 100/ to Rs 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director.*

TO LET.

From 1st November, 1939 Spacious building well known as 'VARTHAKA VILAS' in Bunder of Mangalore EMINENTLY SUITED FOR Offices or Mercantile Firms or banks With a comfortable accommodation go downs, gabling and curing sheds In the centre of business quarters Facing the sea WITH ALL CONVENIENCES for residential purposes also With motor garage On short or long lease Inspection can be arranged

Apply to

1 Sri A. Srinivasa Pai, B A, B L, "*Hill House*", *Kasargod*, *S Kanara*

OR

2 Sri B Vaikunta Baliga, B A, B L, "*Loretto Villa*", *Kodialbail*, *Mangalore.*

ಜಿಲ್ಲಾ ಸಮಾಚಾರಗಳು

ಕಾರ್ಕಳ

ಲಾಹೋರಿನ ಶ್ರೀ ದಯಾನಂದ ಉಪ ದೇಶಕ ಮಹಾ ವಿದ್ಯಾಲಯಕ್ಕೆ ಕಲಿಯ ಹೋಗುವ ಶ್ರೀ. ಸಾಣೂರು ಮಂಜುನಾಥ ಪೈಯವರನ್ನು ಬೀಳ್ಕೊಡುವ ಒಂದು ಸಮಾರಂಭವು ತಾ. 23-9-1939 ರ ದಿನ ಸ್ಥಳೀಯ ಆರ್ಯಸಮಾಜಮಂದಿರದಲ್ಲಿ ನಡೆದು ಅವರಿಗೆ ಸಾರ್ವಜನಿಕ ವಂತಿಗೆಯಾಗಿ ಸಂಗ್ರಹವಾದ 50ರೂಪಾಯಿಗಳ ಸಹಾಯ ದ್ರವ್ಯವೂ ಒಪ್ಪಿಸಲ್ಪಟ್ಟಿತು. ತತ್ಸಂಬಂಧ ಕೂಡಿದ ಅನೇಕ ಮಂದಿಯ ಭಾಷಣಗಳಿದ್ದುವು

ಅಖಿಲಭಾರತ ಹರಿಜನ ವಾರವು ಇಲ್ಲಿಯೂ ತಾ 24-9-39 ರಿಂದ ತಾ. 2-10-39 ರ ತನಕ ಪ್ರತಿದಿನ ಹರಿಜನ ಮಕ್ಕಳ ಆಟಸ್ಪರ್ಧೆ, ಸ್ಥಳೀಯ ಹರಿಜನ ಮಕ್ಕಳ ಆಟಸ್ಪರ್ಧೆ, ಸ್ಥಳೀಯ ಹರಿಜನ ಸಂಘಕ್ಕೆ ಧನ ಸಹಾಯವನ್ನೆತ್ತುವರು, ಹರಿಜನ ವಿದ್ಯಾರ್ಥಿಗಳಿಗೆ ವೃಷ್ಟಾನ್ನ ಭೋಜನ ಇತ್ಯಾದಿ ಕಾರ್ಯ ಕ್ರಮಗಳಿಂದ ಆಚರಿಸಲ್ಪಟ್ಟಿತು

ಹಿಂದೀ ಪ್ರಚಾರ ಸಪ್ತಾಹ ಸಂಬಂಧ ತಾ. 1-10-39 ರ ದಿನ ಸಾಯಂಕಾಲ ಇಲ್ಲೊಂದು ಹಿಂದೀ ಪ್ರೇಮಿಗಳ ಸಭೆ ಕೂಡಿ ಸಪ್ತಾಹವನ್ನಾಚರಿಸುವ ಕುರಿತು ಕಾರ್ಯ ಕ್ರಮದ ರಚನೆಯಾಯಿತು

ಕಟಪಾಡಿ

ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. 28-9-39ರಂದು "ದಿವಂಗತ ಶೀ ಪಾಂಗಾಳ ಶ್ರೀನಿವಾಸ ನಾಯಕರ ದಿನಾಚರಣೆಯು" ವಿಜೃಂಭಣೆಯಿಂದ ಉಡ್ಪಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ 'ಎಚ್. ಸಂಜೀವರಾವ್ ಬಿ ಎ, ಎಲ್ ಟಿ, ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಸಂಕ್ಷಿಪ್ತ ಇತಿಹಾಸ, ದಿವಂಗತರ ಜೀವನ ಚರಿತ್ರೆಗಳ ವಾಚನವಾದ ತರುವಾಯ ಸಭಿಕರ ಭಾಷಣ, ಭಾಷಣ ಸ್ಪರ್ಧೆಯಲ್ಲಿಗೆ ವಿದ್ಯಾರ್ಥಿಗಳಿಗೆ ಬಹುಮಾನ ಹಂಚೋಣ, ಅಧ್ಯಕ್ಷರ ಭಾಷಣ ಮೊದಲಾದುವುಗಳಾದ ಬಳಿಕ ವಿದ್ಯಾರ್ಥಿನಿಯರಿಂದ ಲೆಜಿಂಡ್ರಿಲ್ ವಿದ್ಯಾರ್ಥಿಗಳಿಂದ ಶ್ರೀಕೃಷ್ಣ ಸಂಧಾನ ಯಕ್ಷಗಾನ ಪ್ರದರ್ಶನ ಗಳಾಗಿ ಸಭೆಯು ಮುಕ್ತಾಯವಾಯಿತು

ಶ್ರೀ ಧರ್ಮಸ್ಥಳ

ಮಲ್ಪೆಯ ಹರಿದಾಸ ಸಾಮುಕರವರು ಕಳೆದ ವಾರ ಶ್ರೀ ಧರ್ಮಸ್ಥಳಕ್ಕೆ ಬಂದು ಯಕ್ಷಗಾನ ಬಯಲಾಟದಲ್ಲಿ ಪಾತ್ರಾಭಿನಯ, ಮೂರು ಹರಿಕೀರ್ತನೆಗಳನ್ನೂ ಮಾಡಿದರು. ದಾಸರು ತಮ್ಮ ತರುಣ ವಯಸ್ಸಿನಲ್ಲಿ "ಸಾಹಿತ್ಯದ ಅಂಗಗಳಾದ ಯಕ್ಷಗಾನ, ಮತ್ತೂ ಹರಿಕೀರ್ತನೆಯಲ್ಲಿ ತೋರಿಸುವ ಪ್ರತಿಭೆಯು ವಿಶೇಷ ಮಹತ್ವದ್ದಾಗಿದೆ.

ಕುಂದಾಪುರ

ಇಲ್ಲಿಯ ಕೆಲಜನ ನವಯುವಕರು ಒಂದಾಗಿ ಹಿಂದೀ ಪ್ರಚಾರದ ಸಲುವಾಗಿ ಒಂದು ಹಿಂದೀ ವಾಚನಾಲಯವನ್ನು ತೆರೆಯುವ ಬಗ್ಗೆ ಹಣ ಕೂಡಿಸಲು "ಭಾರತ ರಮಣಿ" ಎಂಬ ಒಂದು ಹಿಂದೀ ನಾಟಕವನ್ನು ಅಭಿನಯಿಸಿದರು ನಾಟಕಕ್ಕೆ ಅಷ್ಟೇನೂ ಹಣವು ಕೂಡದಿದ್ದರೂ ಜನರ ಸಹಕಾರವು ಒಳ್ಳೇತರದಲ್ಲಿ ಸಿಕ್ಕಿತೆಂದು ತಿಳಿದುಬರುತ್ತದೆ ಖರ್ಚುಕಳೆದು ಉಳಿದ ಹಣವನ್ನು ಕುಂದಾಪುರ ಕೋಓಪರೇಟಿವ್ ಬೇಂಕಿನಲ್ಲಿ ಇಟ್ಟಿದ್ದಾರಾಗಿಯೂ ಅಕ್ಟೋಬರ ತಾ ಒಂದರಿಂದ ಹಿಂದೀ ಕ್ಲಾಸುಗಳು ಪ್ರಾರಂಭವಾಗುವುದಾಗಿಯೂ ತಿಳಿದು ಬರುತ್ತದೆ

ಕಾಸರಗೋಡು

ಪೆರಡಾಲ- ಇಲ್ಲಿನ ಎಂ ಎಸ್ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ಕಮಿಟಿಯ ಸಭೆಯು ಕಾಸರಗೋಡಲ್ಲಿ ಜರಗಿತು ಸಂಘದ ಲೈಬ್ರರಿಗೆ ಉಚಿತವಾಗಿ ಪುಸ್ತಕ ಕೊಟ್ಟವರಿಗೂ ಸಂಘಕ್ಕೆ ಕಪಾಟೊಂದನ್ನು ಉಚಿತವಾಗಿ ಕೊಟ್ಟ ಡಾ! ಕೆ ಸಿ. ಆಳ್ವರಿಗೂ ಕೃತಜ್ಞತೆಯ ನಿರ್ಣಯಗಳಾದುವು

ಫರಂಗಿಪೇಟೆ

ಇಲ್ಲಿಯ ಶ್ರೀ ರಾಮ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳಿಂದ ಹೊರಡಿಸಲ್ಪಡುವ "ರಸವಲ್ಲೀ" ಎಂಬ ಮಾಸಪತ್ರಿಕೆಯ ನವಮ ವಾರ್ಷಿಕ ಸಮಾರಂಭವು ಇದೇ ಬರುವ ಒಕ್ಟೋಬರ 7ನೇ ಶನಿವಾರ ಅಪರಾಹ್ನ 3 ಗಂಟೆಗೆ ಸರಿಯಾಗಿ ಸದರಿ ಶಾಲೆಯಲ್ಲಿ ಶ್ರೀ ಜಿ. ಆರ್ ಶೆಟ್ಟಿ M A L T ಯವರ ಅಧ್ಯಕ್ಷತೆಯಲ್ಲಿ ನೆರವೇರುವುದಾಗಿ ನಿಶ್ಚಯಿಸಿರುತ್ತದೆ ಸರ್ವರೂ ಆದರಿಸಿ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಕಂಡು ಪ್ರೋತ್ಸಾಹಿಸಬೇಕಾಗಿ ವಿನಂತಿ

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. 258/1939

ಕೃಷ್ಣ ಹೆಬ್ಬಾರ - ವಾದಿ

1 ತುಲಸಿ ಅಮ್ಮ. 2. ಅನಂತರಾವ್.

— ಪ್ರತಿವಾದಿರು.

ಸದ್ರಿ 2ನೇ ಪ್ರತಿವಾದಿಗೆ ತಿಳಿಸುವುದೇನೆಂದರೆ ವಾದಿಯು ಏರ್ಪಡಿಸಿದ ಒಂದು ಚಿಟ್ಟಿ ಫಂಡಿಗೆ 1ನೇ ಪ್ರತಿವಾದಿಯ ಗಂಡನು ಸಿಟ್ಟು ಮೆಂಬರನಾಗಿದ್ದು, ಸದ್ರಿ ಫಂಡನ್ನು ತಾ. 5 3-35 ರಲ್ಲು ದರ್ಖಾಸ್ತಿಗೆ ಪಡೆದು ಮುಂದಿನ ಕಂತು ತೆರುವಿಕೆ ಬಗ್ಗೆ ಬರಕೊಟ್ಟ ಸ್ಥಿರ ಆಸ್ತಿ ಜವಾಬ್ದಾರಿ ಕಂತು ಕರಾರು ಪ್ರಕಾರ ಬರತಕ್ಕ ಹಣ ಬಡ್ಡಿ ವಗೈರೆ ಬರಮಾಡಿಕೊಳ್ಳುವಬಗ್ಗೆ ಸದ್ರಿ ಜವಾಬ್ದಾರಿಯಿರುವ ಆಸ್ತಿ ಕುರಿತು 2ನೇ ಪ್ರತಿವಾದಿಗಾದ ಫಾದೀನದ ಉಜೂರು ಶಿಕ್ಷಾ ಡಿಕ್ರಿ ಕೊಡಿಸಬೇಕೆಂತ ದಾಕ್ಲು ಮಾಡಿದ ಮೇಲಿನ ದಾವಾ. ತಾ. 9-10-39ಕ್ಕೆ ತಕ್ಕರಿಯುಟ್ಟಿದೆ. ಆಕ್ಷೇಪ ಇದ್ದರೆ ಸದ್ರಿ ದಿನ ಹಾಜರು ಮಾಡಿಕೊಳ್ಳ ತಕ್ಕದ್ದು. ತಪ್ಪಿದರೆ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

Kundapoor 2—10—39 } K. Seerappa Shetty, Advocate for Plaintiff.

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು
ಮನೆಗೆಲ್ಲಾ ಬೆಳಕು ಬೆಳದಿಂಗಳು
ಆದ್ದರಿಂದಲೇ ಸ್ತ್ರೀಯರ ಆರೋಗ್ಯವು
ಅಷ್ಟು ಮುಖ್ಯ

ಸ್ತ್ರೀಯರಿಗೆ ಋತು ಸಂಬಂಧವಾದ
ದೋಷಗಳಿಂದ ಶರೀರವು ಕೃಶಿಸಿ
ಸಂತಾನ ವಾಂಛೆಯು ಸಫಲತೆ
ಹೊಂದದು ಆದರೆ ಲೋಧ್ರವನ್ನು
ಸೇವಿಸಿದರೆ ಸ್ತ್ರೀಯರಿಗೆ ಸತ್ಸಂ
ತಾನವೂ, ಸೌಖ್ಯ ಜೀವನವೂ ತಪ್ಪದು

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

NACET

De Luxe

SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳ ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸಾಧ್ಯವಾದ ಉತ್ತಮ ಕ್ಷೌರದ ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ ಆದರೆ ಈ ಬಾರಿ ಕೆಲವು ಸುಧಾರಣೆಯ ಒಡಗೂಡಿದೆ ಈ ಹೊಸ ಬ್ಲೇಡುಗಳ ನಡುವಿನಲ್ಲಿ "ಸಿಗಿಯಲ್ಪಟ್ಟಿವೆ" ಇದನ್ನು ಒಂದು ಸಾರಿ ನೀವೆ ಪರೀಕ್ಷಿಸಿರಿ ಆಗ ಇದರ ಕೊಂಚ ಪ್ರಸಲ್ಪಟ್ಟ ಬೆಲೆಯ ಯೋಗ್ಯತೆಯು ನಿಮಗೆ ತಿಳಿಯುವುದು ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ

★ ★ ★

ಧರ್ಮಾರ್ಥ ಇಸ್ತ್ರೀಟು ಪೆಟ್ಟಿಗೆಯನ್ನು ಪಡೆಯಿರಿ

ಈ ಧರ್ಮಾರ್ಥದ ಇಸ್ತ್ರಿಟು ಪೆಟ್ಟಿಗೆಯನ್ನು ಪಡೆಯಲು 'NACET BLADES ಒಂದು ಬರುವಂತೆ ಉಪಯೋಗಿಸಿದ 10 ಬ್ಲೇಡುಗಳನ್ನು ಕೂಡಿಸಿ ಇಡೀ ಸೆಟ್ಟನ್ನು

ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯಾ) ಲಿಮಿಟೆಡ್,

1, ಸಂಕುರಾಮ ಚೆಟ್ಟಿ ಸ್ಟ್ರೀಟ್,

ಮದ್ರಾಸು ಇವರಿಗೆ ಕಳುಹಿಸಿರಿ

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ,

ಸ್ವದೇಶಾಭಿಮಾನಿಗೆ

ಜಾಹೀರಾತುಗಳನ್ನು ಕೊಡಿರಿ.—

ಯುದ್ಧವಾರ್ತೆ!



ಪಶ್ಚಿಮ ರಣರಂಗದಲ್ಲಿ ವಿಮಾನ ಯುದ್ಧವು ನಡೆಯುತ್ತಿದೆ!

ಜರ್ಮನಿಯು ಸಂಧಿಗೊಡಂಬಟ್ಟಿದೆ

ಜರ್ಮನಿಯು ಅಮೇರಿಕವನ್ನು ಹೆದರಿಸುತ್ತದೆ!

ಚರ್ಚಿಲ್ಲರು ಸಾರ್ವಭೌಮರನ್ನು ಕಂಡರು

ಮಿ ಚೇಂಬರ್ಲೇನರು

ಇಪ್ಪತ್ತನಾಲ್ಕನೆಯ ದಿನ

ವಶಪಡಿಸಿದ ಪೋಲೆಂಡಿನ ಗಡಿಯಲ್ಲಿ ರಶ್ಯವು ೩೬೫೦ ಜನರನ್ನು ಸೆರೆಹಿಡಿಯಿತು ಸಾರ್‌ಬ್ರಕನ್ ಆಗ್ನೇಯ ಭಾಗದಲ್ಲಿ ಜರ್ಮನ್ ಫ್ರೆಂಚ್ ಸೈನ್ಯಗಳ ಕಾದಾಟವಾಯಿತು

ಲಾರ್ಡ್ ಜೆಟ್ಲೆಂಡರು ಪಾರ್ಲಿಮೆಂಟಿನಲ್ಲಿ ಭಾಷಣಮಾಡುತ್ತಾ ತಮಗೆ ಭಾರತದ ಬೆಂಬಲವುಂಟೆಂದೂ, ಕಾಂಗ್ರೆಸಿನ ಅಧಿಕಾರಿ ಮಂಡಳದ ಪ್ರಕಟಣೆಯು ಸಮಯೋಚಿತವಲ್ಲವೆಂದೂ ಹೇಳಿದರು

ನಾರ್ವೆಯ ಗಡಿಯಲ್ಲಿ ನೌಕಾಧಾಳಿ ನಡೆಯಿತು

ಯುದ್ಧದ ವಿಷಯವಾಗಿ ಗಾಂಧಿಜಿಯವರನ್ನು ಆಮಂತ್ರಿಸಿದಂತೆ ವೈಸರಾಯರ ಭೇಟಿಮಾಡಿದರು ಕಾಂಗ್ರೆಸಿನೊಡನೆ ವೈಸರಾಯರು ನೇರವಾಗಿ ಮಾತುಕತೆ ನಡೆಸಬೇಕೆಂದು ಗಾಂಧಿಜಿಯವರು ಸೂಚಿಸಿದಂತೆ ಮುಂದೆ ರಾಷ್ಟ್ರಪತಿ ಮತ್ತು ನೆಹರುಗಳನ್ನು ಕರೆದು ವೈಸರಾಯರು ಮಾತುಕತೆ ನಡೆಸಲಿರುವರೆಂದು ತಿಳಿಯಿತು

ಇರಾಕಿನ ಮುಖ್ಯ ಮಂತ್ರಿಗಳು ಬ್ರಿಟಸಿಗೆ ಸಹಾಯ ನೀಡುವುದಾಗಿ ಹೇಳಿದರು

ಸ್ಟಾಲಿನನ ಆಮಂತ್ರಣದಂತೆ ರೊಬಿನ್ ಟ್ರಾಪರು ಮಾಸ್ಕೋಗೆ ತೆರಳುವರಾಗಿ ತಿಳಿದುಬಂತು

ಇಪ್ಪತ್ತೈದನೆಯ ದಿನ

ರುಮೇನಿಯಾ ಸರಕಾರವು ಪೋಲೆಂಡಿನ ಅರ್ಥ ಚಿನ್ನದ ಸೊತ್ತನ್ನು ಸ್ವಾಧೀನಪಡಿಸಿಕೊಂಡಿತು.

ಬ್ರಿಟನು ಯುದ್ಧದ ನಿಮಿತ್ತ ೬೦೦ ಲಕ್ಷ ಪೌಂಡುಗಳ ಸಾಲ ಮಾಡಬೇಕಾಗಿ ನಿರ್ಧರಿಸಿತು

ವಾರ್ಸಾವು ಸಂಪೂರ್ಣ ಶರಣಾಗತವಾಯಿತು ಪಶ್ಚಿಮ ರಣರಂಗದ ಸೀಜ್‌ಫ್ರಿಡ್ ಲೈನಿನ ಬಳಿಯಲ್ಲಿ ಫ್ರೆಂಚ್ ಆರ್ಟಿಲರಿಯು ತೀವ್ರ ಧಾಳಿ ನಡೆಯಿತು

ರಶ್ಯದ ಸೈನ್ಯಗಳು ರುಮೇನಿಯದ ಗಡಿಯಲ್ಲಿ ಹಂಗೇರಿಯ ರಕ್ಷಕರನ್ನು ಸಂಧಿಸಿದುವು!

ಎಸ್ಟೋನಿಯವನ್ನು ರಶ್ಯವು ಆಕ್ರಮಣ ಮಾಡಿದ ಫ್ರೆಂಚರು ಕಮ್ಯುನಿಸ್ಟ್ ಪ್ರಚಾರವನ್ನು ತಡೆಯಲು ನಿರ್ಧರಿಸಿದರು ಡಿ. ವೆಲರಾನರು ಯುದ್ಧದ ಕುರಿತು ತಮ್ಮ ರಾಷ್ಟ್ರವು ಎಚ್ಚತ್ತಿರಬೇಕಾಗಿ ಹೇಳಿದರು

ಮೆಟರಿಶ್ ಎಂಬ ಸೋವಿಯೆಟ್ ಹಡಗವು ದು ಒಂದು ಜಲಾಂತರ್ಯಾಮಿ ನಾವೆಯಿಂದ ಮುಳುಗಿಸಲ್ಪಟ್ಟಿತು

ಲೋರ್ಡ್ ಹೆಲಿಫಾಕ್ಸರು

ಸಾರಾಬ್ರ್ಕನಿನಲ್ಲಿ ಜನ ವಿರಹಿತ ಮಾಡಲಾಯಿತು ಸೀಜ್‌ಫ್ರಿಡ್ ಲೈನಿಗೆ ಜಹಳ ಆಘಾತವಾಯಿತ

ಇಪ್ಪತ್ತಾರನೆಯ ದಿನ

ರಶ್ಯಕ್ಕೂ ಎಸ್ಟೋನಿಯಕ್ಕೂ ಹತ್ತು ವರ್ಷಗಳ ಅವಧಿಯ ವ್ಯಾಪಾರ ಒಪ್ಪಂದವಾಯಿತು

ಪೋಲೆಂಡಿಗೆ ಸಂಬಂಧಿಸಿದ ಮಾತುಕತೆಯು ಮಾಸ್ಕೋದಲ್ಲಿ ಹೆರ್ ವಾನ್ ರಾಬಿನ್ ಟ್ರೋಪರು ನಡೆಸಿದರು ಸ್ಟಾಲಿನರೊಡನೆಯೂ ಸಂಭಾಷಿಸಿದರು

ಬ್ರಿಟನಿನ ಕೌರೇಜಸ್ ಹಡಗವನ್ನು ಮುಳುಗಿಸಿದ ಜರ್ಮನ್ ನೌಕಾ ಸೈನಿಕರಿಗೆ ಜರ್ಮನಿಯು ಬಹುಮಾನ ವಿತರಣೆ ಮಾಡಿತು

ಯುದ್ಧ ರಾಷ್ಟ್ರಗಳಿಗೆ ಬೇಕಾದ ಯುದ್ಧ ಸಾಮಗ್ರಿಗಳನ್ನು ಅಮೇರಿಕವು ಕಳುಹಿಸಲು ನಿರ್ಣಯ ಮಾಡಿತು. ಸ್ವೀಡನ್ನಿನ 'ನೈಲೆಂಜ್' ಎಂಬ ಹಡಗೂ ಮುಳುಗಿಸಲಾಯಿತು.

ಇಪ್ಪತ್ತೇಳನೆಯ ದಿನ

ಜರ್ಮನ್ ಮತ್ತು ರಶ್ಯಗಳ ಒಪ್ಪಂದವು ಮುಗಿಯಿತು ಇವುಗಳೆರಡೂ ಸಂದರ್ಭದಲ್ಲಿ ಸಂಯುಕ್ತ ಬಲದಿಂದ ಎದುರಾಳಿಗಳನ್ನು ತಡೆಯುವ ಕಾರ್ಯವನ್ನು ಕೈಕೊಳ್ಳುವುದಾಗಿ ನಿರ್ಣಯವಾಯಿತು ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ ಹೆರ್ ವಾನ್ ರಾಬಿನ್ ಟ್ರಾಪನು ಮರಳಿಬಂದನು

ಫ್ರೆಂಚರು ಸೀಜ್‌ಫ್ರೀಡ್ ಲೈನಿನ ಒಂದು ಮೈಲು ಸಮೀಪದ ವರೆಗೆ ಬಂದರು

ಲಂಡನಿನ ನ್ಯೂ ಸ್ಟೇಟ್ಸ್‌ಮೆನ್ ಪತ್ರಿಕೆಯು ಭಾರತದ ವಿಷಯವಾಗಿ ಬ್ರಿಟನು ವಿಚಾರ ಮಾಡಬೇಕೆಂದೂ ಕೇಂದ್ರದಲ್ಲಿ ಬದಲಾವಣೆಯಾಗಬೇಕೆಂದೂ ಪಂಡಿತ ನೆಹರುಗಳನ್ನು ಪ್ರಧಾನ ಮಂತ್ರಿಗಳಾಗಿ ಮಾಡಬೇಕೆಂದೂ ಬರೆಯಿತು

ಬ್ರಿಟಿಷರ ವಿಮಾನದಲ ಜರ್ಮನ್ ನೌಕಾದಲಕ್ಕೆ ಬಾಂಬಿಕ್ಕಿತು

ಪೋಲೆಂಡಿನ ಆತ್ಮಯಜ್ಞವು ಫಲಿಸುವಂತೆ ಮಾಡುವೆವೆಂದು ಬ್ರಿಟನಿನ ಪತ್ರಿಕೆಯೊಂದು ಬರೆಯಿತು

ರಶ್ಯಾ ಜರ್ಮನ್ ಒಪ್ಪಂದದಿಂದ ಬ್ರಿಟನಿನಲ್ಲಿ ಯಾವ ಕೌತುಕವೂ ಆಗಲಿಲ್ಲವೆಂದು ತಿಳಿಯಿತು

ಸ್ಲೊವೇಕಿಯವು ಯುದ್ಧದಲ್ಲಿ ಸೇರುವುದಿಲ್ಲವಾಗಿ ತಿಳಿಯಿತು

ಇಪ್ಪತ್ತೆಂಟನೆಯ ದಿನ

ಪಶ್ಚಿಮ ರಣಭೂಮಿಯ ಕಾದಾಟವು ಮುಂದುವರಿಯಿತ

ಮಿ ಡಲಾಡಿಯರ್

ಇಟೆಲಿಯ ಮಂತ್ರಿ ಸಿಯಾನೋ ಜರ್ಮನಿಗೆ ಶಾಂತಿ ಸಾಧಕನಾಗಿ ಹೋಗಿರುವುದಾಗಿ ತಿಳಿಯಿತು ಬಾಲ್ಕನ್ ರಾಷ್ಟ್ರಗಳಲ್ಲಿ ರಶ್ಯದ ಆಸಕ್ತಿಯನ್ನು ಕಂಡು ಇಟೆಲಿಯು ಕಳವಳಗೊಂಡಿತು ಲಂಡನಿಗೆ ಟರ್ಕಿಯ ಪ್ರತಿನಿಧಿಯು ಒಪ್ಪಂದದ ಸಲುವಾಗಿ ಬಂದನು

ಫ್ರೆಂಚರು ಐವತ್ತು ಜರ್ಮನ್ ಹಳ್ಳಿಗಳನ್ನು ಆಕ್ರಮಿಸಿ ಸ್ವಾಧೀನಪಡಿಸಿದರು

ರಶ್ಯದ ಸೈನಿಕ ಶಕ್ತಿಗೆ ಇದಿರುನಿಲ್ಲಲು ತಮಗೆ ಸಾಧ್ಯವಿಲ್ಲವೆಂದೂ, ಆದಕಾರಣ ತಾವು ರಶ್ಯಕ್ಕೆ ಶರಣಾಗಿ, ನಿರರ್ಥಕ ರಕ್ತಪಾತವನ್ನು ತಪ್ಪಿಸಿದೆವೆಂದೂ, ಎಸ್ಟೋನಿಯದ ಅಧ್ಯಕ್ಷರು ವಿವರಿಸಿದರು

ಉತ್ತರ ಸಮುದ್ರದಲ್ಲಿ ಜರ್ಮನಿಯ ಜಲಾಂತರ್ಯಾಮಿ ನಾವೆಗಳ ಓಡಾಟವು ಹೆಚ್ಚಿತು.

ಸ್ಲೊವೇಕಿಯ ಬ್ರಿಟನು ಫ್ರಾನ್ಸುಗಳ ವಿರುದ್ಧ ಹೋರಾಡುವುದಿಲ್ಲವೆಂದು ಹೇಳಿತು

ಇಪ್ಪತ್ತೊಂಭತ್ತನೆಯ ದಿನ

ಮಿ। ವಿನ್‌ಸ್ಟನ್ ಚರ್ಚಿಲ್ಲರು ಆಕಾಶ ಭಾಷಣವೊಂದನ್ನು ಮಾಡಿ ಅದರಲ್ಲಿ ನಾಲ್ಕು ವಾರಗಳ ಯುದ್ಧದ ವಿವರವನ್ನು ತಿಳಿಸಿದರು 'ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯವು ನಾಜೀ ಸರಕಾರದೊಡನೆ ಒಂದು ತಿಂಗಳಿಂದ ಕಾದಾಡುತ್ತಿದೆಯೆಂದು ಹೇಳಿದರು ಅವರು ತಮ್ಮ ಭಾಷಣದಲ್ಲಿ ರಶ್ಯದ ನೀತಿಯನ್ನು ಖಂಡಿಸಿದರು

ಪಶ್ಚಿಮ ರಣರಂಗದಲ್ಲಿ ಫ್ರೆಂಚರು ಮುಂದುವರಿಯುತ್ತಿರುವರಾಗಿ ತಿಳಿದುಬಂತು ಫ್ರಾನ್ಸಿನ ಪ್ರಧಾನ ಮಂತ್ರಿ ಎಂ ಡಲಾಡಿಯರು ಸೇನಾಧಿಕಾರಿಗಳೊಡನೆ ಸಂಭಾಷಣೆ ನಡೆಸಿದರು

ಟರ್ಕಿಯ ಮಂತ್ರಿಗಳು ರಶ್ಯದ ಆಹ್ವಾನದಂತೆ ರಶ್ಯಕ್ಕೆ ತೆರಳಿದರು

ಲಂಡನಿನ ರೈನಾಲ್ಡ್ಸ್ ನ್ಯೂಸ್ ಪತ್ರಿಕೆಯಲ್ಲಿ ಮಿ। ಬ್ರೈಲ್ಸ್‌ಪೋರ್ಡ ರೆಂಬ ಮಹಸೀಯರು ಇಂದು ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಒಕ್ಕಣಿಸಿದರು

ಸೀಜ್‌ಫ್ರೀಡ್ ಲೈನಿನ ಹತ್ತಿರ ವಿಮಾನಧಾಳಿ ನಡೆಯಿತು

ಇಟೆಲಿಯ ಪರವಾಗಿ, ಶಾಂತಿಗಾಗಿ ಎಂದು ಕೌಂಟ್ ಸಿಯಾನೋ ಜರ್ಮನಿಗೆ ತೆರಳಿ, ಅಲ್ಲಿ ಜರ್ಮನ್ ಸರಕಾರದೊಡನೆ ಮಾತುಕತೆ ಬೆಳೆಸುವನು

ಬ್ರಿಟನು ಯುದ್ಧಸಿದ್ಧತೆ ಮಾಡುತ್ತಿದೆ

ಮೂವತ್ತನೆಯ ದಿನ

ಜರ್ಮನಿಯ ಕಡೆಗೆ ಶಾಂತಿ ಪ್ರಸ್ತಾಪದಲ್ಲಿ ತೆರಳಿದ ಕೌಂಟ್ ಸಿಯಾನೋ, ಅಲ್ಲಿ ಮಾತನಾಡಿ ರೋಮಿಗೆ ಹಿಂತೆರಳಿದನು

ಪಶ್ಚಿಮ ರಣರಂಗದಲ್ಲಿ ವಿಮಾನ ಯುದ್ಧವು ನಡೆಯುವುದು

ಜರ್ಮನರ ದಂಡು ವಾರ್ಸೋವನ್ನು ಪ್ರವೇಶಿಸಿತು ಬ್ರಿಟನು ಸಂಧಿಪ್ರಸ್ತಾಪಕ್ಕೆ ಒಪ್ಪಲಾರದು ಎಂದು ತಿಳಿದುಬಂತು

ಜಪಾನು ತಟಸ್ಥವಾಗಿರುವುದಾಗಿ ಖಂಡಿತ ಹೇಳಿತು ಟರ್ಕಿಯ ಮಂತ್ರಿಯು ರಶ್ಯಕ್ಕೆ ತೆರಳಿದರು

ಬ್ರಿಟಿಷ್ ಹಡಗವೊಂದು ಮುಳುಗಿಸಲ್ಪಟ್ಟಿತು

ರಶ್ಯವು ಬಾಲ್ಟಿಕ್ ರಾಷ್ಟ್ರಗಳೊಡನೆ ಸಂಧಿಮಾಡಿಕೊಳ್ಳುವುದೆಂದು ತಿಳಿಯಿತು

ಫ್ರಾನ್ಸು ಮತ್ತು ಬ್ರಿಟನುಗಳ ಸುತ್ತು ಸಮುದ್ರಗಳಲ್ಲಿ ಅಮೇರಿಕದ ಹಡಗುಗಳು ಮಾಡುತ್ತಿರುವ ಉಪಟಳವನ್ನು ನೋಡಿ ಜರ್ಮನಿಯು ಅಮೇರಿಕಕ್ಕೆ ಒಂದು ಹೆದರಿಕೆಯ ಸೂಚನೆಯನ್ನು ಕಳುಹಿಸಿದೆ

ಪೋಲೆಂಡಿನಲ್ಲಿ ಜರ್ಮನರು ಮುಕ್ಕುಹುಕ್ಕಗೋಸ್ಕರ ಕಣಿವೆಗಳನ್ನು ತೋಡುತ್ತಿರುವರು

ಸ್ವದೇಶ ಸಮಾಚಾರ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ತಾ 2ರಂದು ಸೇರುವುದು ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಸಭೆಯು ಜರಗುವ ದಿನವು ಪ್ರಕಟವಾಗಲಿಲ್ಲ

ವಾರ್ಧಾದಲ್ಲಿ ಮುಖಂಡರು ಒಂದು ನಿರ್ದಿಷ್ಟ ನಿರ್ಣಯವನ್ನು ತಯಾರಿಸಿದ್ದಾರೆ ಇಂಗ್ಲೆಂಡರ ಭಾವನೆಗೆ ಉತ್ತರರೂಪವಾಗಿಯೂ, ಭಾರತದ ಕೊನೆಯ ಮಾತಾಗಿಯೂ ಇದು ಇರಬಹುದೆಂದು ಯೋಚಿಸಲಾಗಿದೆ

ಗಾಂಧಿಜಿ ವೈಸರಾಯರ ಭೇಟಿಯಾಗಿ ವರ್ಕಿಂಗ್ ಕಮಿಟಿಯು ರಠಾವಿನ ವಿಮರ್ಶೆಯಾಯಿತು ಗಾಂಧೀಜಿಯವರ ಸೂಚನೆಯಂತೆ, ನೆಹರು ರಾಷ್ಟ್ರಪತಿ ಇವರೊಡನೆ ವೈಸರಾಯರು ಮಾತನಾಡಲು ಅವರನ್ನು ಆಮಂತ್ರಿಸಿದರು

ಶ್ರೀ ಬೋಸರು ದಿನ ವಿಟ್ಠಲಬಾಯಿಯವರ ಮರಣ ಶಾಸನ ಕುರಿತು ತನಗೆ ವಿರುದ್ಧವಾಗಿದ್ದ ತೀರ್ಮಾನಕ್ಕೆ ಬೊಂಬಾಯಿಯ ಹೈಕೋರ್ಟಿನಲ್ಲಿ ಮಾಡಿದ ಅಪೀಲೂ ತೆಗೆದು ಹಾಕಲಾಯಿತು

ವೈಸರಾಯರು ಭಾರತದ ಮುಖಂಡರ ಅಭಿಪ್ರಾಯವನ್ನು ತಿಳಿದು ಸಾರ್ವಭೌಮ ಸರಕಾರಕ್ಕೊಂದು ವರದಿಯೊಪ್ಪಿಸುವರೆಂದು ತಿಳಿದಿದೆ

ಮೈಸೂರಿನಲ್ಲಿ ಕಾಂಗ್ರೆಸಿನ ಕಾರ್ಯಗಳನ್ನು ತಡೆಯುವ ದಬ್ಬಾಳಿಕೆಯು ತೀವ್ರವಾಗಿ ನಡೆಯುತ್ತದೆ ಹಲವಂದಿ ರಾಷ್ಟ್ರಭಕ್ತರನ್ನು ಮಹಿಳೆಯರನ್ನೂ ಬಂಧಿಸಿರುವರು

ಮಹಾತ್ಮಾಜಿಯವರ ೭೧ನೇ ವಾರ್ಷಿಕ ಜನ್ಮೋತ್ಸವವು ತಾ ೨ರಂದು ರಾಷ್ಟ್ರದ ವಿಶಾಲತೆಯಲ್ಲಿ ಗಾಂಧಿಜಿಯವರ ಜನ್ಮದಿನೋತ್ಸವವು ಬಹು ವಿಜೃಂಭಣೆಯಿಂದ ಜರಗಿತು

ಗಾಂಧೀ ಸೇವಾಸಂಘದ ಆರನೇ ವಾರ್ಷಿಕೋತ್ಸವವು ಒರಿಸಾ ಫೆಬ್ರುವರಿಯಲ್ಲಿ ಡಕ್ಕಾ ಜಿಲ್ಲೆಯಲ್ಲಿ ಜರಗುವುದು

ಪ್ರತಿ ವರ್ಷವೂ ಕ್ರಿಸ್‌ಮಸಿನಲಿ ಮದ್ರಾಸಿನಲ್ಲಿ ಜರಗುತ್ತಿದ್ದ ಖಾದಿ ಮತ್ತು ಸ್ವದೇಶೀ ಪ್ರದರ್ಶನವು ಈ ವರ್ಷ ಯುದ್ಧದ ನಿಮಿತ್ತ ಜರಗುವುದಿಲವಾಗಿ ತಿಳಿದಿದೆ

ಉತ್ತರ ಆರ್ಕಾಟಿನಲ್ಲಿ ಮದ್ರಾಸು ಸರಕಾರವು ಮದ್ಯಪಾನ ನಿಷೇಧವನ್ನು ಜ್ಯಾರಿಮಾಡಿತು.

ಮಿ। ಜಿನ್ನರು ಭಾಷಣ ಮಾಡುತ್ತಾ ಭಾರತವು ಪ್ರಜಾಪ್ರಭುತ್ವ ಸ್ವಾತಂತ್ರ್ಯಕ್ಕೆ ಯೋಗ್ಯವಾಗಿಲ್ಲವೆಂದು ಒದರಿದರು

ಬಿರ್ಲಾ ಮತ್ತು ಬಜಾಜರು ಜಯಪುರದ ರಾಜರನ್ನು ಸಂದರ್ಶಿಸಿದರು.

ಕೌನ್‌ಪುರದಲ್ಲಿ ೬೦೦೦ ಮಂದಿ ಕೂಲಿಗಾರರು ಮುಷ್ಕರ ಹೂಡಿದರು

ಡಿಲ್ಲಿಗೆ ಭಾರತದ ಮುಖಂಡರಾದ ಮೌಲಾನಾ ಅಜಾದ, ಪಟೇಲ ನೆಹರು, ರಾಷ್ಟ್ರಪತಿ, ಗಾಂಧಿ ಇವರು ಬಂದರು ಕಾಂಗ್ರೆಸು ಯುದ್ಧ ಸಮಿತಿಯ ಸಭೆ ಸೇರಿತು

ಡಿಲ್ಲಿಯಲ್ಲಿ ಭಾರತ ಮುಖಂಡರನ್ನೇಕರು ಬಂದು ಸೇರಿದರು

ರಾಜೇಂದ್ರ ಪ್ರಸಾದ ನೆಹರು ಪ್ರಭೃತಿಗಳು ವೈಸರಾಯರೊಡನೆ ಸುಮಾರು ಮೂರು ತಾಸುಗಳ ತನಕ ಮಾತನಾಡಿದರು

ಕಾಂಗ್ರೆಸ್ ಮತ್ತು ಮಸ್ಲಿಂ ಲೀಗುಗಳಿಗೇ ಭಾರತದ ಪೂರ್ಣ ಪ್ರಾತಿನಿಧ್ಯವಿಲ್ಲವೆಂದೂ ಅವರನ್ನು ಮಾತ್ರ ಕರೆದದ್ದು ಸರಿಯಲ್ಲವೆಂದೂ ಹಿಂದೂ ಮಹಾಸಭೆಯ ಮುಖಂಡರು ಪ್ರಕಟಿಸಿರುವರು

ಕಾನ್‌ಪುರದಲ್ಲಿ ೨೦,೦೦೦ ಕೆಲಸಗಾರರು ಮುಷ್ಕರ ಹೂಡಿದ್ದಾರೆ

ಗಾಂಧಿಜಿಯವರ ಜಗತ್ತಿನ ಶಾಂತಿ ಸಾಧಕರೆಂದೂ, ಇಂದು ಬ್ರಿಟಿಷರು ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡಬೇಕೆಂದೂ ಲಂಡನಿನ ಗಾರ್ಡಿಯನ್ ಪತ್ರಿಕೆಯು ಪ್ರಕಟಿಸಿದೆ,

ಕಾಂಗ್ರೆಸು ಯುದ್ಧ ಸಮಿತಿಯ ಸಭೆ ಜರಗಿತು

ಗಡಿನಾಡಿನಲ್ಲಿ ದಂಗೆ ಮುಖಂಡರಿಗೆ ಗಾಯ

ಗಫರ್ ಖಾನರನ್ನು ರಕ್ಷಿಸಿದರು

ಉಸ್ಮೋದ ಸಭೆಯೊಂದರಲ್ಲಿ ಭಾಷಣಮಾಡುತ್ತಿದ್ದಾಗ ಸಭೆಯಿಂದ ಸುಮಾರು ೩೫ ಮಂದಿ ಬಂದು ಹಲವರಿಗೆ ಗಾಯಗೊಳಿಸಿದರು ಅವರಲ್ಲಿ ಡಾ. ಚಿತ್ತೋರಾಮ ಗಿದ್ವಾನಿ, ಮಿ ಮಹಮ್ಮದ್ ಅಮಿನ್ ಕೋಸೋ (ಎಸೆಂಬ್ಲಿ ಸದಸ್ಯರು) ಇವರಿಗೂ ಗಾಯವಾಗಿದೆ

ದಂಗೆಯವರ ಖಾನ್ ಅಬ್ದುಲ್ ಗಫರ್ ಖಾನರನ್ನು ಗಾಯಗೊಳಿಸಲು ಬಂದಾಗ, ಮಿ ಕೋಸೋರವರು ಅದನ್ನು ತಡೆದರು



ರೂಸ್‌ವೆಲ್ಟ್

ಇಂದಿನ ಯುದ್ಧವು ರಾಮ ರಾವಣರ ಯುದ್ಧ

ಪ್ರಧಾನ ಮಂತ್ರಿ ರಾಜಾಜಿಯವರ ತುಲನೆ

ತಿಂದಿವನಂ ಎಂಬಲ್ಲಿನ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ರಾಜಾಜಿಯವರು ಹಿಂದಿನ ಕಾಲದಲ್ಲಿ, ನಿರಂತರವಾಗಿ ಭಾರತದೇಶವು ಇಡೀ ಜಗತ್ತಿಗೇ ಉತ್ತಮ ಆದರ್ಶ ಸಂಸ್ಕೃತಿಗಳ ಸಂದೇಶಗಳನ್ನು ಕಳುಹಿಸಿರುತ್ತದೆಯೆಂದೂ, ಸಂದರ್ಭವಾದರೆ, ಇಂದಾದರೂ ಅಂತಹ ಸಂದೇಶವನ್ನು ಕಳುಹಿಸಲು ಹಿಂದಾಗಲಾರದೆಂದೂ ಹೇಳಿದರು ಭಾಷಣವನ್ನು ಮುಂದುವರಿಸುತ್ತಾ ಅವರು ಇಂದಿನ ಯುದ್ಧವನ್ನು ರಾಮ, ರಾವಣರ ಯುದ್ಧಕ್ಕೆ ಹೋಲಿಸಿ ಹೀಗಂದರು

'ಇಂದಿನ ಯುದ್ಧವು ರಾಮರಾವಣರೊಳಗಿನ ಯುದ್ಧ' ರಾವಣನನ್ನು ಕೊಲ್ಲಲು ರಾಮನು ವಾಲಿವಧೆ ಮಾಡಬೇಕಾಯಿತು, ಹಾಗೆ ಮಾಡಿ ಸುಗ್ರಿವನನ್ನು ಪಟ್ಟಕ್ಕೇರಿಸಿ, ಹನುಮಂತನ ಸಹಾಯವನ್ನು ಪಡೆದನು ಈ ಸಹಾಯ

ದಿಂದ ರಾಮನು ಲಂಕಾಯುದ್ಧದಲ್ಲಿ ವಿಜಯಶಾಲಿಯಾದನು ಬ್ರಿಟಿಷ ಸರಕಾರದ ಮುಂದೆ ಅದೇ ಪ್ರಶ್ನೆಯಿದೆ ಭಾರತಕ್ಕೆ ಸ್ವರಾಜ್ಯ ಕೊಡುವುದೆಂದರೆ, ಶ್ರೀರಾಮನ್ಯವಾಗಿ ಸುಗ್ರೀವನಿಗೆ ಪಟ್ಟಕಟ್ಟಿದ ಹಾಗೆ ಗಾಂಧಿಜಿಯವರೂ ಇದನ್ನೇ ಅಪೇಕ್ಷಿಸಿದ್ದರು ಭಾರತವು ಸ್ವತಂತ್ರವಾದಾಗ ತನ್ನ ಸಹಾಯವನ್ನು ಕೊಡಲು ಖಂಡಿತವಾಗಿ ಮುಂದು ಬರುವುದು ಯುದ್ಧವು ಫಿರಂಗಿಗಳಿಂದ ಮಾತ್ರ ಗೆಲ್ಲತಕ್ಕುದಲ್ಲ ಪ್ರಜೆಗಳು ಅವರ ಕರ್ತವ್ಯವನ್ನು ಮಾಡಬೇಕು ಆದ್ದರಿಂದ ಸಾಕಷ್ಟು ಶಸ್ತ್ರ ಸಂಗ್ರಹವು ನಮ್ಮಲ್ಲಿಲ್ಲವೆಂಬುದಕ್ಕಾಗಿ ಜನರು ಸಿಂಹಕರಾಗಬಾರದು ಎಂದರು

ನೋಟೀಸು

Canara Bank Ltd., Manjeshwar

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಜೇಶ್ವರ

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ತಿನ್ನ ... ಕಾಣಿಸಿದ ಮೇರೆ ಪಡೆದ ಮೊಬಲಗುಗಳಿಗೆ, ವ ಅವುಗಳ ಒಡ್ಡಿಯನ್ನಾಗಲಿ ಕ್ಲಪ್ತ ಸಮಯಕ್ಕೆ ಕೊಡದೆಯಿದ್ದುದರಿಂದ ಆ ಕುರಿತು ಸದ್ರಿಯವರಿಗೆ ರಿಜಿಸ್ಟ್ರೀ ನೋಟೀಸು ಕೊಟ್ಟಲ್ಲಿ ಕೆಲವರಿಗೆ ಜ್ಯಾರಿಯಾಗಿಯೂ ಕೆಲವರಿಗೆ ಜ್ಯಾರಿಯಾಗದೆ ವಾಪಾಸು ಬಂದಿರ ಪದರಿಂದಲೂ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಸದ್ರಿ ಸಾಲಗಾರರು ಅವರಿಂದ ಸಲ್ಲತಕ್ಕ ಬಡ್ಡಿ ಅಸ್ಲು ಒಡ್ಡಿ ವಗೈರೆಯನ್ನು ಇದೇ ಬರುವ ಅಕ್ಟೋಬರ ತಿಂಗಳ ತಾರೀಕು 1೬ರ ಒಳಗೆ ಸಲ್ಲಿಸಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ಸದ್ರಿ ನಗಗಳನ್ನು ... ಅಕ್ಟೋಬರ ತಿಂಗಳ ತಾರೀಕು ೨೦ನೇ ಶುಕ್ರವಾರ ಮಧ್ಯಾಹ್ನ ಘಂಟೆ ೩ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಬೇರೆ ಯಾವುದಾದರೂ ಒಂದು ದಿವಸ ಪುನಃ ನೋಟೀಸು ಕೊಡದೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹರಾಜ ಮಾಡಲಾಗುವದು

ಜಂಪ್ತಾ ನಂಬ್ರ	ಲೋನ್ ನಂಬ್ರ	ಹೆಸರು ವ ವಿಳಾಸ	ಅಸ್ಲು ...
1	S L 303/36	ಮುಹಮ್ಮದ ಬ್ಯಾರಿ ಅರಬಿ ಬ್ಯಾರಿ ಮಗ ... ಹಿತ್ಲು, ಮಜಿ ಬೈಲು ಗ್ರಾಮ, ಪೋಸ್ಟ್ ಮಂಗಲಪಾಡಿ	ರೂ 12
2	S L 106/37	ತೋಮು ಡೊಲ್ಸಿ, ಕೋಯಿ ಕೊಲೆಯನ ಸೂಸ್ಸ, ದರಕಾಸ್ತ ಸ್ಥಳ, ಬಂಗ್ರಮಂಜೇಶ್ವರ ಪೋಸ್ಟು, ಮಂಜೇಶ್ವರ	„ 5
3	S L 197/38	ಆಮದೆ ಬ್ಯಾರಿ, ಎದಮುಲ್ಲ ಬ್ಯಾರಿ ಮಗ ಕಡಪರ, ಪೋಸ್ಟು ಮಂಜೇಶ್ವರ	„ 21

ಈ ನೋಟೀಸು ಖರ್ಚು ಅಲ್ಲಾದಾ

Office of the Bank
Manjeshwar
Date 27 9 39

S V Kini

ಮಹಾತ್ಮಾ ಗಾಂಧಿ

[ಜೀವನ ಪರಿಚಯ]

(ಲೇಖಕ: ಕಯ್ಯಾರ ಕಿಞ್ಞಣ್ಣ ರೈ)

(ಮಹಾತ್ಮಾಗಾಂಧಿ)' ಎಂತಹ ಪ್ರಭಾವಶಾಲಿಯಾದ ಶಕ್ತಿ! ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿಶ್ಶಸ್ತ್ರ ವೀರ-ಯೋಧನಾಗಿ, ಸತ್ಯ-ಅಹಿಂಸೆಗಳ ಪವಿತ್ರ ಶಾಂತ ಸಂದೇಶವನ್ನು ಜಗತ್ತಿಗೆ ಸಾರುತ್ತಿರುವ ಮಹಾವಿಭೂತಿ ಪುರುಷನಾಗಿ, ಸತ್ಯಸಂಶೋಧನೆಯಿಂದ ದೈವಸಾಕ್ಷಾತ್ಕಾರವನ್ನು ಸಾಧಿಸುವ ಉಜ್ವಲ ತಪಸ್ವಿಯಾಗಿ ಪತಿತರ, ದೀನರ ಅಸ್ಪೃಶ್ಯರ ಭಾಗ್ಯವಿಧಾತನಾಗಿ, ಹೀಗೆ 'ಜನ, ಗಣ, ಮನ ಅಧಿನಾಯಕ'ನಾಗಿ ಮೆರೆವ ಮಹಾತ್ಮಾಗಾಂಧಿಯವರ ವರ್ಚಸ್ಸು ಇಡೀ ಜಗತ್ತಿಗೇ ವಿದಿತವಾಗಿದೆ! ಇಂದು ಮಹಾಯುದ್ಧದ ಅಲ್ಲೋಲ ಕಲ್ಲೋಲದಲ್ಲಿ ಅದ್ದಿರುವ ಲೋಕವೇ ಶಾಂತಿಗಾಗಿ ಇವರ ಕಡೆಗೆ ಉತ್ಕಂಠಿತವಾಗಿ ನಿರೀಕ್ಷಿಸುತ್ತದೆ! ಸ್ವಾತಂತ್ರ್ಯದ ಹಾದಿಯಲ್ಲಿ ಇದುವರೆಗೆ ಭಾರತವನ್ನು ಜಯದಿಂದ ಜಯದ ಸಂಧಿಗೆ ಮುನ್ನಡಸಿ, ಸ್ವರಾಜ್ಯದ ಸುಂದರ ಮಂದಿರವನ್ನು ಮುಗಿಲು ಮುಟ್ಟಿಸಿದ ಮೇಲೆ, ಇಂದು ಅದರ ಪ್ರವೇಶೋತ್ಸವದ ಸುಮುಹೂರ್ತದ ಸೂಚನೆಗಾಗಿ ಪೂಜ್ಯ ಗಾಂಧಿಜಿಯವರ ಅಮೃತವಾಣಿಯನ್ನೇ ಆಲಿಸಲು ಭಾರತೀಯರು ಹಾರೈಸಿಕೊಂಡಿದ್ದಾರೆ! ೧೯೩೯ನೇ ಇಸವಿ, ಅಕ್ಟೋಬರ ಎರಡನೆಯ ತಾರೀಕಿಗೆ, ಆ ಯುಗಪುರುಷರಿಗೆ ೭೦ ವರ್ಷಗಳು ತುಂಬಿದವು! ಅವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಮನನಮಾಡುವುದು ನಿಜವಾಗಿಯೂ ನಮಗೆ ಶ್ರೇಯಸ್ಕರವಾದುದು.

ಜನನ—ಬಾಲ್ಯ

ಗಾಂಧಿ ಮನೆತನದವರು ಬನಿಯರು. ಪೋರಬಂದರ ರಾಜಕೋಟೆಗಳ ದಿವಾನರಾಗಿದ್ದು, ನ್ಯಾಯ ಪಕ್ಷಪಾತಿಯೂ, ಸಚ್ಚರಿತರೂ, ಸತ್ಯಸಂಧರೂ, ಶೂರ ಉದಾರಿಗಳೆಂದು ಹೆಸರಾದ ಕರಮಚಂದಗಾಂಧಿ ಮತ್ತು ದೈವಭಕ್ತೆ, ಸದಾಚಾರಶೀಲೆ, ಸಾಧ್ವೀಮಣಿಯೂ ಆದ ಪುತಲೀಬಾಯಿ, ಇವರ ಪುತ್ರರಾಗಿ ಮೋಹನದಾಸ ಗಾಂಧಿಯವರು ೧೮೬೯ನೇ ಇಸವಿ ಅಕ್ಟೋಬರ ಎರಡನೆಯ ತಾರೀಕಿನ ದಿನ ಜನ್ಮವೆತ್ತಿದರು. ಇವರಿಗೆ ಇಬ್ಬರು ಸಹೋದರರೂ ಒಬ್ಬ ಸೋದರಿಯೂ ಇದ್ದರು.

ಹುಟ್ಟೂರಲ್ಲಿಯೇ ಅವರಿಗೆ ಮೆಟ್ರಿಕ್ ತನಕ ವಿದ್ಯಾಭ್ಯಾಸವಾಯಿತು. ಆ ತರಗತಿಯಲ್ಲಿ ಓದುತ್ತಿರುವಾಗಲೇ ಸಮಾಜದಲ್ಲಿ ಪ್ರಚಾರದಲ್ಲಿದ್ದ ಬಾಲ್ಯವಿವಾಹ ಪದ್ಧತಿಗೆ ಸರಿಯಾಗಿ ಗಾಂಧಿಯವರಿಗೂ ತನ್ನ ಹದಿಮೂರನೆಯ ವಯಸ್ಸಿನಲ್ಲಿಯೇ ಕಸ್ತೂರಿಬಾಯಿಯವರೊಡನೆ ವಿವಾಹವಾಯಿತು. ಮೆಟ್ರಿಕ್‌ನಲ್ಲಿ ಉತ್ತೀರ್ಣರಾದ ಮೇಲೆ ಮುಂದೆ ಕಾಲೇಜ್ ವಿದ್ಯಾಭ್ಯಾಸವನ್ನು ಮುಂದುವರಿಸದೆ, ಆಪ್ತಬಂಧುಗಳೊಬ್ಬರ ಹಿತವಚನದಂತೆ, ಗಾಂಧಿಜಿಯವರನ್ನು ವಕಾಲತ್ ಕಲಿಯಲಿಕ್ಕಾಗಿ ವಿಲಾಯತಿಗೆ ಕಳುಹಿಸಿದರು. ಸಣ್ಣದಿರುವಾಗಲೇ ಗಾಂಧಿಯವರಲ್ಲಿ ಸತ್ಯಸಂಧತೆ, ನಿಶ್ಚಲವೃತ್ತಿ, ಹೆತ್ತವರ ಮೇಲೆ ಭಕ್ತಿಯು ಒಡಮೂಡಿತ್ತು. ವಿಲಾಯತಿಗೆ ವಕಾಲತು ಕಲಿಯಲು ಹೋಗುವಾಗ ಗಾಂಧಿಯವರು ತಾನು ಅಲ್ಲಿಯೂ ಮದ್ಯಮಾಂಸಗಳನ್ನು ಮುಟ್ಟುವುದಿಲ್ಲವೆಂದೂ ದುರಭ್ಯಾಸಕ್ಕೆ ಸರ್ವಥಾ ಇಳಿಯಲಾರೆನೆಂದೂ ತಾಯಿಗೆ ಪ್ರತಿಜ್ಞೆ ಕೊಟ್ಟಿದ್ದರು. ಯೂರೋಪಿನ ವಿದ್ಯಾಜೀವನದ ಕಾಲದಲ್ಲಿ ತನ್ನ ಪ್ರತಿಜ್ಞೆಯನ್ನು ಅವರು ತಪ್ಪದೆ ಪಾಲಿಸಿದರು. ೧೮೯೧ನೇ ಇಸವಿ ಜೂನ್ ಹತ್ತನೆಯ ತಾರೀಕಿನ ದಿನ ಅವರು ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆ ಮೇಲೆ ಸ್ವದೇಶಕ್ಕೆ ಮರಳಿಬಂದರು.

ವಕಾಲತ್ತು, ಆಫ್ರಿಕಾಯಾತ್ರೆ, ಅಲ್ಲಿ ಸತ್ಯಾಗ್ರಹ

ಸ್ವದೇಶಕ್ಕೆ ಮರಳಿಬಂದ ಗಾಂಧಿಜಿಯವರು ಕೆಲಸಮಯ ಬೊಂಬಾಯಿಯಲ್ಲಿ ವಕಾಲತ್ತು ನಡೆಸಿ, ಆ ಮೇಲೆ ರಾಜಕೋಟೆಗೆ ಹೋಗಿ ಅಲ್ಲಿ ಉದ್ಯೋಗ ಮಾಡಿಕೊಂಡಿದ್ದು, ಆಫ್ರಿಕಾದಲ್ಲಿ ವ್ಯಾಪಾರಿಗಳಾಗಿದ್ದ ದಾದಾ ಅಬ್ದುಲ್ಲಾ ಕಂಪೆನಿಯವರ ಒಂದು ವ್ಯವಹರಣೆಯನ್ನು ನಡೆಸಲು ಆಮಂತ್ರಿತರಾಗಿ ಆಫ್ರಿಕಾಕ್ಕೆ ತೆರಳಿದರು. ಹೋದ ಎರಡು ಮೂರು ದಿನಗಳಲ್ಲಿಯೇ ಗಾಂಧಿಯವರಿಗೆ ಅಲ್ಲಿನ ಬಿಳಿಯರ ಸರಕಾರದೊಡನೆ ಹೋರಾಟ ಸುರುವಾಯಿತು. ಅಲ್ಲಿ ನೆಲಸಿದ್ದ ಭಾರತೀಯರನ್ನು ಬಿಳಿಯ ಜನರು, ಕೇವಲ ಕೂಲಿ ದರ್ಜೆಗಿಳಿಸಿಕೊಂಡಿದ್ದ ಆಪದ್ಯುಗದ ಮೇಲೆ ತಮ್ಮ ಸಾಹಸದಿಂದ ಅಲ್ಲಿ ವ್ಯಾಪಾರ ಉದ್ಯೋಗ ನಡೆಸಲಿಕ್ಕಾಗಲಿ, ಅಲ್ಲಿ ಭೂಮಿಯನ್ನು ಪಡೆದುಕೊಳ್ಳಲಿಕ್ಕಾಗಲಿ, ಎಲ್ಲ ಬಿಟ್ಟು ಅಲ್ಲಿನ ಮಾರ್ಗದಲ್ಲಿ ನಡೆದುಕೊಂಡು ಹೋಗುವುದಕ್ಕಾಗಲಿ ಭಾರತೀಯರಿಗೆ ಸ್ವಾತಂತ್ರ್ಯವಿರಲಿಲ್ಲ. ಸ್ವದೇಶ ಬಾಂಧವರ ಈ ಸಂಕಷ್ಟದ ಪರಿಸ್ಥಿತಿಯನ್ನು ನೋಡಿ, ಅವರ ಹಕ್ಕು ಪಾಲನೆಗಾಗಿ ಗಾಂಧಿಜಿಯವರು ಅಲ್ಲಿ ಸಹನಾತೀತವಾದ ೨೦ ಕಷ್ಟವೆಲ್ಲ ಅನುಭವಿಸಿ ಹೋರಾಡಬೇಕಾಯಿತು.

ತಾನು ಹೋಗಿದ್ದ, ದಾದಾ ಅಬ್ದುಲ್ಲಾ ಕಂಪೆನಿಯವರ ದಾವೆಯು ರಾಜಿಯಿಂದ ಇತ್ಯರ್ಥವಾಗಿ, ಉಭಯಪಕ್ಷದವರಿಗೂ ಕ್ಷೇಮವಾಗಲು, ಗಾಂಧಿಜಿಯವರು ಅಂತರಾತ್ಮನ ಪ್ರೇರಣೆಯಂತೆ ಸಮಾಜಸೇವೆಗೆ ಮನಸ್ಸು ಮಾಡಿದರು. ಅಲ್ಲಿ ಎಲ್ಲಾ ಮತಧರ್ಮಗಳನ್ನು ಮನನ ಮಾಡಿಕೊಂಡರು. ಅಲ್ಲಿನ ಭಾರತೀಯರಿಗೆ, ಪ್ರತಿನಿಧಿಸಭೆಗೆ, ತಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಹಕ್ಕಿರಲಿಲ್ಲ. ಹೀಗೆ ಅಲ್ಲಿನ ಭಾರತೀಯರ ಹಿತಕ್ಕಾಗಿ ದುಡಿಯಲು ೧೮೯೪ನೇ ಇಸವಿ ಮೇ ತಿಂಗಳ ೨೨ನೇ ತಾರೀಕಿನ ದಿನ 'ನೇಟಾಳದ ಭಾರತೀಯರ ಕಾಂಗ್ರೇಸು' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅದಕ್ಕೆ ಅಲ್ಲಿನ ಭಾರತೀಯರು ಹೆಚ್ಚು ಮಂದಿ ಸದಸ್ಯರಾದರು. ವ್ಯವಹಾರ ಕುಶಲರಾದ ಭಾರತೀಯರನ್ನು ದ್ರೋಹಗೊಳಿಸುವ ಬುದ್ಧಿಯಿಂದ ಅಲ್ಲಿನ ಸಂಯುಕ್ತ ಸರಕಾರವು ಪ್ರತಿಯೊಬ್ಬ ಭಾರತೀಯನ ಮೇಲೆ ವರ್ಷ ಒಂದರ ೩ ರೂಪಾಯಿಗಳ ತಲೆತೆರಿಗೆ ಹೊರಿಸಿತ್ತು. ಇಂತಹ ಸಂದರ್ಭದಲ್ಲಿ ಜನಸೇವೆಯೇ ದೇವಸಾಕ್ಷಾತ್ಕಾರವೆಂದು ಮನಗಂಡ ಗಾಂಧಿಜಿಯವರು ಸಮಾಜಸೇವೆಗಿಳಿದರು. ಭಾರತೀಯರ ಪರವಾಗಿ ಸಹಾನುಭೂತಿ ಹುಟ್ಟುವಂತೆ ದೇಶವಿದೇಶಗಳಲ್ಲಿ ಪ್ರಚಾರ ಕಾರ್ಯ ಮಾಡಿದರು. ಈ ಸಮಯದಲ್ಲಿ ಗಾಂಧಿಜಿಯವರು ಎಷ್ಟೋ ಸಲ ಮರಣಾಂತಿಕವಾದ ಸಂಕಷ್ಟವನ್ನು ಎದುರಿಸಬೇಕಾಗಿತ್ತು. ಭಾರತೀಯರನ್ನು ಒಗ್ಗಟ್ಟುಗೂಡಿಸಿ ಅಹಿಂಸೆಯ ಮೂಲಕ ಸತ್ಯಾಗ್ರಹ ಮಾಡುವಂತೆ ಗಾಂಧಿಜಿಯವರು ಬೋಧಿಸಿದರು. ಭಾರತೀಯ ಕೆಲಸಗಾರರು ಮುಷ್ಕರ ಹೂಡಿದರು. ಅನೇಕ ಭಾರತೀಯ ಮಹಿಳೆಯರೂ ಸೆರೆಮನೆಗೊಯ್ಯಲ್ಪಟ್ಟರು. ಈ ಸುದ್ದಿಯಿಂದ ಎಲ್ಲಾ ಕಡೆ ಅತ್ಯಂತ ಜಾಗೃತಿ ಹೆಚ್ಚಿತು. ಗಾಂಧಿಜಿಯವರ ಬಂಧನವಾಯಿತು. ಇತ್ತ ಭಾರತದಲ್ಲಿ ಆಫ್ರಿಕ ಸರಕಾರದ ಈ ವರ್ತನೆಯನ್ನು ಭಾರತೀಯ ಮುಖಂಡರೂ ಅಂದಿನ ವೈಸರಾಯರೂ ಖಂಡಿಸಿದರು. ಕಡೆಗೆ ಆಫ್ರಿಕಾ ಸರಕಾರವು ಗಾಂಧಿಜಿಯವರ ಕೂಡೆ ತನ್ನ ಅಪಜಯವನ್ನು ಒಪ್ಪಿಕೊಂಡಿತು. ಇದೇ ಸಂದರ್ಭದಲ್ಲಿಯೇ ಗಾಂಧಿಜಿಯವರು, ಅಲ್ಲಿ ಟಾಲ್‌ಸ್ಟಾಯ್‌ಫಾರಂ ಆಶ್ರಮವನ್ನು ಸ್ಥಾಪಿಸಿ, ಶಿಕ್ಷಣವೇ ಮೊದಲಾದ ರಚನಾತ್ಮಕ ಕಾರ್ಯಗಳನ್ನು ಕೈಕೊಂಡು. ದೇಶಸೇವೆಯ ಮೂಲಭೂತ ತತ್ವಗಳನ್ನು ಜನತೆಗೆ ನಿದರ್ಶಿಸಿದ್ದರು!

ಹಿಂದುಸ್ಥಾನದಲ್ಲಿ–ಸಾರ್ವಜನಿಕ ಸೇವೆ–

ಗಾಂಧಿಜಿಯವರು ಹಿಂದೂಸ್ಥಾನಕ್ಕೆ ಬರುವ ಹೊತ್ತಿನಲ್ಲಿ, ಇಲ್ಲಿಯೂ ರಾಷ್ಟ್ರೀಯ ಜಾಗೃತಿಯು ಆರಂಭವಾಗಿತ್ತು. ಪರಕೀಯರ ಬಂಧನದಲ್ಲಿ ಬೇಸತ್ತ ಭಾರತೀಯರು ತಮ್ಮ ನ್ಯಾಯವಾದ ಹಕ್ಕು ಸ್ವಾತಂತ್ರ್ಯಗಳಿಗಾಗಿ ಯತ್ನಿಸುತ್ತಿದ್ದರು! ಕಾಂಗ್ರೆಸು ಸಂಸ್ಥೆಯು ಸ್ಥಾಪಿತವಾಗಿ, ಹಲವು ವರ್ಷಗಳು ಕಳೆದಿದ್ದುವು. ಗೋಖಲೆ, ತಿಲಕ ಮೊದಲಾದವರ ನೇತೃತ್ವದಲ್ಲಿ ಭಾರತೀಯರು ಸ್ವಾತಂತ್ರ್ಯವನ್ನು ಪಡೆಯಲು ಹೆಣಗುತ್ತಿದ್ದರು! ಇಂತಹ ಸಂಧರ್ಭದಲ್ಲಿ ಮಾತೃಭೂಮಿಗೆ ಮರಳಿಬಂದ ಗಾಂಧಿಜಿಯವರು, ತಮ್ಮ ವಕಾಲತ್ತು ಜೀವನಕ್ಕೆ ತಿಲಾಂಜಲಿಯಿತ್ತು, ರಾಷ್ಟ್ರಸೇವೆಗೆ ಬದ್ಧ ಕಂಕಣರಾದರು. ಗಾಂಧಿಜಿಯವರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದ ಮೇಲೆ, ರಾಜಕೀಯದಲ್ಲಿ ನೂತನ ಚೇತನವು ಹರಿಯಿತು. ಇದುವರೆಗೆ ಕೇವಲ ಬಿನ್ನಹಗಳಿಂದ ಕಾಂಗ್ರೆಸಿನವರು ಸರಕಾರದೊಡನೆ ಬಿನ್ನವಿಸಿಕೊಳ್ಳುತ್ತಿದ್ದರು. ಗಾಂಧಿಜಿಯವರು ಪರದೇಶಿ ವಸ್ತು ಬಹಿಷ್ಕಾರ, ಅಸಹಕಾರ, ಸ್ವದೇಶೀ ಪ್ರೋತ್ಸಾಹ ಮೊದಲಾದ ಕಾರ್ಯರೂಪಗಳಿಂದ ಸ್ವಾತಂತ್ರ್ಯದ ಕೇಳಿಕೆಯನ್ನು ಬಲಶಾಲಿಯಾಗಿ ಮುಂದೊತ್ತಿದರು.

ಸತ್ಯಾಗ್ರಹದ ಶಿಕ್ಷಣಕೊಡಲು ಒಂದು ಆಶ್ರಮವನ್ನು ನಡೆಸಿದರು; ಕೂಲಿಕಾರರ ಹೇತುವಾಗಿ, ಚಂಪಾರಣ್ಯದಲ್ಲಿ ಸತ್ಯಾಗ್ರಹವು ನಡೆಯಿತು. ಆ ಮೇಲೆ ಯುರೋಪಿನ ಮಹಾಯುದ್ಧವು ಆರಂಭವಾಗಲು ಗಾಂಧಿಜಿಯವರು ಸರಕಾರಕ್ಕೆ ಬೆಂಬಲವಿತ್ತರು. ಆದರೆ ಮಹಾಯುದ್ಧವು ಮುಗಿದ ಮೇಲೂ ಭಾರತದ ಪರಿಸ್ಥಿತಿಯು ಊರ್ಜಿತಗೊಳ್ಳಲಿಲ್ಲ. ರೌಲತ್ ಕಾನೂನ್ನು ಸರಕಾರದವರು ಜಾರಿಗೆ ತಂದರು. ಗಾಂಧಿಜಿಯವರು ಸರಕಾರದ ನೀತಿಯನ್ನು ವಿರೋಧಿಸಲು ಸತ್ಯಾಗ್ರಹ ಆಂದೋಲನವನ್ನು ಹೂಡಲು ನಿರ್ಧಾರಮಾಡಿದರು. ೧೯೨೦-೨೧ರ ಕಾಲಕ್ಕೆ ಇಡೀ ಭಾರತದ ವಿಶಾಲತೆಯಲ್ಲಿ ಅಸಹಕಾರ ಚಳವಳವು ನಡೆಯಿತು. ಸರಕಾರವು ತೀವ್ರ ದಬ್ಬಾಳಿಕೆ ನಡೆಸಿತು. ಭಾರತೀಯರು ಸತ್ಯಾಗ್ರಹಮಾಡಿ, ಅನೇಕ ಮುಖಂಡರು ಬಂಧನಕ್ಕೊಳಗಾದರು. ಗಾಂಧಿಜಿಯವರೂ ಸೆರೆಹಿಡಿಯಲ್ಪಟ್ಟರು. ಅನೇಕ ಮಹಿಳೆಯರೂ ಜೈಲುವಾಸವನ್ನು ಸಂತೋಷದಿಂದ ಅನುಭವಿಸಿದರು. ಭಾರತದಲ್ಲಿ ಸ್ವಾತಂತ್ರ್ಯ ಪ್ರೇಮವು ಉಕ್ಕಿ ಹರಿಯತೊಡಗಿತು. ಅನೇಕರು ತಮ್ಮ ಪದವಿ ಬಿರುದು, ಸ್ಥಾನಮಾನಗಳಿಗೆ ತಿಲಾಂಜಲಿಯಿತ್ತು, ಸರಕಾರದೊಡನೆ ಅಸಹಕಾರ ಹೂಡಿದರು. ಕೆಲವೊಂದು ಘಟನೆಗಳಿಂದ, ಜನತೆಯು ಸತ್ಯಾಗ್ರಹ ಸಮರವನ್ನು ಸರಿಯಾಗಿ ನಡೆಸಲು ಸಿದ್ಧವಾಗಿಲ್ಲವೆಂದು ಎಣಿಸಿ ಚಳವಳವನ್ನು ನಿಲ್ಲಿಸಿದರು. ಆ ಮೇಲೆ ಗಾಂಧಿಜಿಯವರು ನಿಜವಾದ ರಚನಾತ್ಮಕ ಕಾರ್ಯಗಳ ಕಡೆಗೆ ಮನಸ್ಸುಕೊಟ್ಟರು. ಖಾದಿಪ್ರಚಾರ, ಗ್ರಾಮ ಕೈಗಾರಿಕೆಗಳ ಅಭ್ಯುದಯ ಇವುಗಳಿಂದ ರಾಷ್ಟ್ರದ ಏಳಿಗೆಯೆಂದು ತಿಳಿದು ಆ ಕಡೆಗೆ ತಮ್ಮ ಚಟುವಟಿಕೆಗಳನ್ನು ಕೈಕೊಂಡರು.

೧೯೩೦ರಲ್ಲಿ ಗಾಂಧಿಜಿಯವರು ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿದರು. ಅದು ದೇಶದ ವಿಶಾಲತೆಯಲ್ಲಿ ಪ್ರಚಂಡವಾಗಿ ನಡೆಯಿತು. ಹಲವರು ದೇಶಾಭಿಮಾನಿಗಳು ಸ್ವಾತಂತ್ರ್ಯದ ಯಜ್ಞಕುಂಡದಲ್ಲಿ ಬಲಿಯಾದರು! ಬಂಧನಗಳಿಗೆ ಲೆಕ್ಕ ಮಿತಿಯಿರಲಿಲ್ಲ, ದಬ್ಬಾಳಿಕೆಗೆ ಮೇರೆಯಿರಲಿಲ್ಲ. ಆದರೂ ಜನರು ಸಹನೆ ಸತ್ಯಾಗೃಹಗಳನ್ನು

[೧೫ನೇ ಪುಟವನ್ನು ನೋಡಿ]

ಮಹಾತ್ಮಾಜಿಯವರ ಸನ್ನಿಧಿಗೆ—

ಎನಿತು ಶತಮಾನಗಳ ನಿಶ್ಚಲ ತಪೋನಿಷ್ಠೆ
ಫಲಿಸಿತೋ, ಭಾರತಿಯ ಸೌಭಾಗ್ಯ ಬೆಳಗಿತೋ,
ಸತ್ಯನಿರ್ಮಲ ಶಾಂತಮೂರ್ತಿ ಗಾಂಧಿಜಿ! ನಿಮ್ಮ-
ಪುಣ್ಯ ಜನ್ಮೋದಯ ಮಂಗಲೋತ್ಸವದಂದು!
ಅಸ್ತೇಯ-ಶುದ್ಧಿ-ದಯೆ-ಸ್ಥಿರ-ಸತ್ಯ ವ್ರತಗಳಲಿ
ಸಿದ್ಧಿಗೊಂಡಿಹ ನಿಮ್ಮ ಜೀವ ಪಾವನವಾಯ್ತು!
ಹೆತ್ತೊಡಲಿಗಮೃತಸಿಂಚನವಾಯ್ತು! ನಿಮ್ಮಿಂದ
ರಾಷ್ಟ್ರ ಸರ್ವಾಂಗದಭ್ಯುದಯ ಸಾಧನೆಯಗಾಯ್ತು!
ದರ್ಪಮದಮೋಹಿತರು, ಸ್ವಾರ್ಥಸುಖಸಾಧಕರು
ಮತಿಗೆಟ್ಟ ಮಾನವರು, ಜಗವ ಪೀಡಿಸುತಿರಲು,
ಪಶ್ಚಿಮದ ಭೂದೇವಿ ಕೆರಳಿದಳೆ? ಪ್ರಳಯ ಪಂ-
ಥವ ತೊಟ್ಟು ಲೋಕನಾಶಕೆ ಮನವಮಾಡಿಹಳೆ?
ಜೀವಿಗಳು ಕೂಗುತಿವೆ! "ಕಾಪಾಡಿ ಕಾಪಾಡಿ
ರೆಂ"ದನ್ನ ಗತಿಯಿಲ್ಲ ದಿಂದು ನಿಮ್ಮನು ನೋಡಿ!

೨-೧೦-೧೯೩೯

—ದುರ್ಗಾದಾಸ.

ಸಾಹುಕಾರ ಶ್ರೀನಿವಾಸರಂಗಪ್ಪೈ
[ಸ್ಥಾಪನೆ: ಕ್ರಿ. ಶ. 1858]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾಹುಕಾರ ಮಹಾಲ್, ಮಂಗಳೂರು.

ಮೈಸೂರಿನ ಕೆಲವು ಮಾದರಿಗಳನ್ನು ನಮ್ಮ ಜಿಲ್ಲೆಯಲ್ಲಿಯೂ ಅನುಸರಿಸಬೇಕು

ಸರಕಾರವು ಈ ಕಡೆ ಗಮನ ಕೊಡುವುದೇ?

ಜಾನುವಾರುಗಳ ಮೇವು

ಜಾನುವಾರುಗಳಿಗೆ ಸಾಕಷ್ಟು ಮೇವಿಲ್ಲದ ಕಾರಣ ಕೃಷಿಯು ದಿನದಿಂದ ದಿನಕ್ಕೆ ಕ್ಷೀಣ ಸ್ಥಿತಿಗೆ ಇಳಿಯುತ್ತಿದೆಯೆಂದು ಹಳ್ಳಿಗಳ ಪರಿಸ್ಥಿತಿಯನ್ನು ಬಲ್ಲವರೆಲ್ಲರಿಗೂ ತಿಳಿದಿದೆ. ಸಮೃದ್ಧವೂ ಆರೋಗ್ಯಕರವೂ ಆದ ಜಾನುವಾರುಗಳಿಂದ ನಮ್ಮ ದೇಶದ ಭಾಗ್ಯವು ತೆರೆಯುವುದು. ನಮ್ಮ ಜಿಲ್ಲೆಯಂತೂ ಈ ವಿಷಯ ಆಲೋಚಿಸಿದಂತೆ ಇಲ್ಲ. ನಮ್ಮ ಸ್ಥಳೀಕ ಸಂಸ್ಥೆಗಳೂ, ಜಮೀನ್ದಾರರೂ, ಸರಕಾರದವರೂ, ಜಾನುವಾರುಗಳಿಗೆ ಸಾಕಷ್ಟು ಮೇವನ್ನು ಒದಗಿಸಿ ನಾಡನ್ನು-ನಾಡಿನ ಜೀವನವನ್ನು ಉತ್ತಮಗೊಳಿಸಬೇಕಾಗಿದೆ. ಈ ದೃಷ್ಟಿಯಲ್ಲಿ ಮೈಸೂರಿನ ಸರಕಾರದವರು ಮಾಡಿದ ಸುಧಾರಣೆಯು ಇಲ್ಲಿ ಕೊಡಲಾಗಿದೆ.—

ಕೆಲಿಫೋರ್ನಿಯಾದಿಂದ ತಂದು ಮೈಸೂರಿನಲ್ಲಿ ಒಳಕೆಗೆ ತಂದಿರುವ 'ನೇಪಿಯರ್ ಗ್ರಾಸ್' ಎಂಬ ಒಂದು ಬಗೆಯ ಹುಲ್ಲಿನ ವ್ಯವಸಾಯವನ್ನು ಮಾಡಿದರು.

ಈ ಬಗೆಯ ಹುಲ್ಲನ್ನು ಅಷ್ಟು ಫಲವತ್ತಾಗಿಲ್ಲದ ಭೂಮಿಯಲ್ಲಿಯೂ ಸಹ ಬೆಳೆಯಬಹುದು. ಉತ್ತರ ಇಂಡಿಯಾದಲ್ಲಿ ಈ ಬಗೆಯ ಹುಲ್ಲಿನ ವ್ಯವಸಾಯವು ಜನಾದರಣೀಯವಾಗಿದೆ. ತಕ್ಕಷ್ಟು ನೀರಿಲ್ಲದೆ ಉಳಿದ ಬಗೆಯ ಹುಲ್ಲುಗಳೆಲ್ಲವೂ ಒಣಗಿಹೋದರೂ, ನೇಪಿಯರ್ ಜಾತಿಯ ಹುಲ್ಲು ಮಾತ್ರ ಕೇವಲ ಮಳೆಯ ನೀರಿನ ಸಹಾಯದಿಂದಲೇ ಹುಲುಸಾಗಿ ಬೆಳೆಯುತ್ತದೆ.

ಪ್ರಸಕ್ತ ವರ್ಷದಲ್ಲಿ, ವ್ಯವಸಾಯದ ಇಲಾಖೆಯವರು, 2,400 ಎಕರೆಗಳ ಪ್ರದೇಶದಲ್ಲಿ ಈ ಬಗೆಯ ಹುಲ್ಲನ್ನು ಬೆಳೆಯಬೇಕೆಂದುದ್ದೇಶಿಸಿ ತಕ್ಕ ಏರ್ಪಾಡನ್ನು ಮಾಡಿರುತ್ತಾರೆ.

ನಮ್ಮ ನೆರೆಕೆರೆಯ ಮೈಸೂರಿನಲ್ಲಿ ಈ ವ್ಯವಸಾಯವನ್ನು ಕೈಕೊಂಡಿರುವಾಗ, ನಾವಾದರೂ ಅದರಿಂದ ಪ್ರಯೋಜನ ಪಡೆಯುವುದು ಅವಶ್ಯಕ. ಕೆಲಿಫೋರ್ನಿಯಾದಿಂದ ಸಾಹಸಪಟ್ಟು ಆ ಹುಲ್ಲನ್ನು ಮೈಸೂರಿಗೆ ತಂದು ಬೆಳೆಸಿದ್ದರೆ, ನಾವು ಮೈಸೂರಿನಿಂದಲಾದರೂ ತರಿಸಿ ಇಲ್ಲಿ ಬೆಳೆಸಲು ಸಾಧ್ಯವಿಲ್ಲವೇ?

ಹರಿಜನ ಸಮಸ್ಯೆ

ಶತಮಾನಗಳಿಂದ ಅನ್ಯಾಯಕ್ಕೆ ತುತ್ತಾದ, ಹರಿಜನರನ್ನು ಎಲ್ಲಾ ವಿಧದಿಂದಲೂ ಉದ್ಧರಿಸಬೇಕು. ಬರಿಯ ಭಾಷಣಗಳು-ಲೇಖನಗಳು ಪ್ರಯೋಜನವಿಲ್ಲ. ನಮ್ಮ ಜಿಲ್ಲೆಯ ಹರಿಜನ ಸುಧಾರಕರು, ಕಾರ್ಯರೂಪದಲ್ಲಿ ಏನನ್ನಾದರೂ ಮಾಡಿ ತೋರಿಸದೆ ಇದ್ದಲ್ಲಿ ಆ ಕೆಲಸವು ಆಗುವಂತಿಲ್ಲ. ಈ ವಿಷಯದಲ್ಲಿ, ಮೈಸೂರಿನ ಬದನವಾಳ ಕೇಂದ್ರದಲ್ಲಿ ಯಾವ ರೀತಿ ಹರಿಜನರ ಉದ್ಧಾರ ಮಾಡುವ ಕಾರ್ಯಗಳನ್ನು ಮಾಡುತ್ತಿರುವರೆಂಬುದು ನಮ್ಮ ಜಿಲ್ಲೆಯ ಹರಿಜನ ಸುಧಾರಕರಿಗೆ ಮಾದರಿಯಾಗಿದೆ. ಅದರ ವಿಷಯ ಈ ಕೆಳಗೆ ಇದೆ.—

ಬದನವಾಳು ಪ್ರಾಂತದಲ್ಲಿ ಸುಮಾರು 100 ಮಂದಿ ನೂಲುವವರಿದ್ದಾರೆ, ಇವರ ಪೈಕಿ 400 ಮಂದಿ ಹರಿಜನರು. ಈ ಉಪಕಸಬಿನಿಂದ ಹೆಚ್ಚಿನ ಲಾಭವು ಬರುವುದೆಂದು ಅವರಿಗೆ ಮನವಟ್ಟಾದರೆ ಅವರ ಪೈಕಿ ನೂಲುವವರ ಸಂಖ್ಯೆಯು ಬಹುಬೇಗನೆ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಈ ಉಪಕಸಬಿನಲ್ಲಿ ನಿರತರಾದವರ ವರಮಾನವು ಸರಾಸರಿ ವರ್ಷಕ್ಕೆ 8 ರೂಪಾಯಿಗಳಿಗೆ ಹೆಚ್ಚಾಗಿರುತ್ತದೆಂದು ಲೆಕ್ಕಾಚಾರ ಮಾಡಿದೆ. ಸುಧಾರಿಸಿದ ಸಲಕರಣೆಗಳನ್ನು ಪ್ರಯೋಗಿಸಿ ಅರಳೆಯನ್ನು ಎಕ್ಕುವುದು ಇವೇ ಮೊದಲಾದ ವಿಷಯಗಳಲ್ಲಿ 1 ಮಂದಿ ಹರಿಜನರ ಹೆಂಗಸರಿಗೆ ಶಿಕ್ಷಣವನ್ನು ಕೊಡಲಾಯಿತು. ಶಿಕ್ಷಣದ ಅವಧಿಯಲ್ಲಿ ದಿನವೊಂದಕ್ಕೆ 2½ ಆಣೆಗಳಂತೆ ಅವರಿಗೆ ಕೂಲಿಯನ್ನು ಕೊಡಲಾಯಿತು. ಈಗ ಅವರು ತಮಗೆ ಬೇಕಾದ ಬಟ್ಟೆಗಳೆಲ್ಲವನ್ನೂ ತಾವೇ ಒದಗಿಸಿಕೊಳ್ಳುವುದೂ ಅಲ್ಲದೆ, ಈ ಕಸಬಿನಿಂದ ತಮ್ಮ ಆಹಾರಕ್ಕೂ ಸಹ ತಕ್ಕಷ್ಟು ಹಣವನ್ನು ಒದಗಿಸಿಕೊಳ್ಳುತ್ತಿದ್ದಾರೆ.

ನಮ್ಮ ಜಿಲ್ಲೆಯ ಮುಂದಾಳು, ಕಾಂಗ್ರೆಸು ಭಕ್ತರು, ಹರಿಜನ ಸೇವಕರು ಈ ರೀತಿಯಲ್ಲಿ ಹರಿಜನಸೇವೆ, ಖಾದಿ ಪ್ರೋತ್ಸಾಹ, ಇವುಗಳಿಂದ ದೇಶಸೇವೆಯ ರಚನಾತ್ಮಕ ಕಾರ್ಯವನ್ನು ಕೈಕೊಂಡು ದೇಶಸೇವೆ ಮಾಡಲು ಮನಸ್ಸು ಮಾಡಬೇಕು.

ಆರೋಗ್ಯ ಪ್ರಚಾರ

ನಿಜವಾಗಿ, ಆರೋಗ್ಯಕ್ಕಿಂತ ಹೆಚ್ಚಿನ ಭಾಗ್ಯವಿಲ್ಲ. ನಮ್ಮ ಜೀವನ ನಿರ್ವಾಹಕರಾದ ವ್ಯಕ್ತಿ ವ್ಯಕ್ತಿಗಳ ಆರೋಗ್ಯವೇ ಇಡೀ ದೇಶದ ಸಂಪತ್ತು. ನಮ್ಮಲ್ಲಿ ಸಾಕಷ್ಟು ಆರೋಗ್ಯ ನಿಯಮಗಳ ಜ್ಞಾನವು ಜನರಿಗಿಲ್ಲದೆ ಇರುವುದರಿಂದ ದಿನದಿಂದ ದಿನಕ್ಕೆ ಜನಾಂಗವು ಕ್ಷೀಣವಾಗುತ್ತಾ ಬರುತ್ತದೆ. ಇದು ಮಹಾ ಅನರ್ಥ ಕಾರಣವು. ಈ ಬಗ್ಗೆ ಸರಕಾರವೂ, ಜನತೆಯೂ ಎಷ್ಟು ಗಮನ ತೆಗೆದುಕೊಂಡರೂ ಸಾಲದು. ಮೈಸೂರಲ್ಲಿ ಈ ಕಾರ್ಯಕ್ಕಾಗಿ ನಡೆಸುವ ಪ್ರಚಾರಕಾರ್ಯದ ಒಂದು ಮಾದರಿಯು ಇಲ್ಲಿ ಕೊಡಲಾಗಿದೆ.

"ಕ್ಲೋಸ್ಪೇಟೆ ಆರೋಗ್ಯ ಕೇಂದ್ರದಲ್ಲಿ, ಉಪಾಧ್ಯಾಯರುಗಳಿಗೆ ಆರೋಗ್ಯಶಾಸ್ತ್ರ ಮತ್ತು ಸ್ಥಳ ನೈರ್ಮಲ್ಯ ಇವುಗಳಲ್ಲಿ ಆಧುನಿಕ ವಿಷಯಗಳನ್ನು ತಿಳಿಸಲು ಒಂದು ತರಗತಿಯನ್ನೇರ್ಪಡಿಸಿರುತ್ತಾರೆ.

ವಾರಕ್ಕೊಂದು ಬಾರಿ ಅಥವಾ ಎರಡು ವಾರಗಳಿಗೊಮ್ಮೆ ಆರೋಗ್ಯವಿಷಯಗಳನ್ನು ಬೋಧಿಸುವ ಉಪನ್ಯಾಸಗಳನ್ನೇರ್ಪಡಿಸಬೇಕೆಂದೂ, ಮತ್ತು ಗ್ರಾಮಸ್ಥರು ಒಂದೆಡೆ ಸೇರಲು ನಾಟಕ ಮುಂತಾದ ಮನರಂಜನೆಗಳನ್ನೇರ್ಪಡಿಸಿ ತನ್ಮೂಲಕ ಆರೋಗ್ಯ ಪ್ರಚಾರ ಮಾಡಬೇಕೆಂದೂ, ಇಲಾಖೆಯವರು ಆಲೋಚಿಸುತ್ತಾರೆ. ನಾಟಕಗಳು, ಉಪನ್ಯಾಸಗಳು ಇವುಗಳನ್ನು ಏರ್ಪಡಿಸುವುದಾದಲ್ಲಿ ಗ್ರಾಮಸ್ಥರೊಬ್ಬರು ಮುಂದೆ ಬಂದಿರುತ್ತಾರೆ. ಈ ಸಂಬಂಧದಲ್ಲಿ ವೆಚ್ಚಕ್ಕಾಗಿ ಇಲಾಖೆಯವರೂ ಸಹ 200 ರೂಪಾಯಿಗಳನ್ನು ಮಂಜೂರು ಮಾಡಬಹುದೆಂದು ನಿರೀಕ್ಷಿಸಲಾಗಿದೆ."

ನಮ್ಮ ಜಿಲ್ಲೆಯ ಆರೋಗ್ಯಖಾತೆಯವರು ಈ ಕಡೆಗೆ ಗಮನಕೊಡುವರೇ? ಹಳ್ಳಿ ಹಳ್ಳಿಗಳಲ್ಲಿ, ಗ್ರಾಮ ನಗರಗಳಲ್ಲಿ ಆರೋಗ್ಯಪ್ರಚಾರ, ಉಪನ್ಯಾಸಗಳು ನಾಟಕಗಳನ್ನು ಏರ್ಪಡಿಸಬೇಕು. ಇಂದಿನ ವಿದ್ಯಾರ್ಥಿಗಳಿಗೆ ಆಗಾಗ ಈ ವಿಷಯದಲ್ಲಿ ಉಪಾಧ್ಯಾಯರೂ, ಆರೋಗ್ಯ ಖಾತೆಯ ಪ್ರಚಾರಕರೂ, ಮುಖಂಡರೂ, ವೈದ್ಯ ಡಾಕ್ಟರರೂ ಬಂದು ಒತ್ತಿ ತಿಳಿಸಬೇಕು. ಈ ವಿಷಯವಾಗಿ ಗ್ರಾಮಸ್ಥರನ್ನೂ ಒಟ್ಟುಸೇರಿಸಿ ನಮ್ಮ ಜಿಲ್ಲೆಯಲ್ಲಿಯೂ ಹೀಗೆ ನಡೆಯಬೇಕಾಗಿ ಹಾರೈಸುವೆವು.

ಹಳ್ಳಿ ಕೈಗಾರಿಗೆ ಪ್ರೋತ್ಸಾಹ

ನಮ್ಮ ಹಳ್ಳಿಯ ಕೈಗಾರಿಕೆಗಳು ಇದು ಸಾಕಷ್ಟು ಪ್ರೋತ್ಸಾಹವಿಲ್ಲದೆ ದಿನದಿಂದ ದಿನಕ್ಕೆ ಕ್ಷೀಣವಾಗುತ್ತಿದೆ. ಇದರಿಂದ ಇಡೀ ದೇಶವೇ ಬಡತನಕ್ಕೆ ಬಲಿಯಾಗಿದೆ. ನಮ್ಮ ಸರಕಾರದವರು ಈ ಕುರಿತು ವಿಶೇಷ ಗಮನ ತೆಕ್ಕೊಂಡಂತೆ ಕಂಡುಬರುವುದಿಲ್ಲ. ಈ ವಿಷಯದಲ್ಲಿ ಮೈಸೂರಿನ ಒಂದು ಮಾದರಿಯು ಇಲ್ಲಿ ಕೊಡಲಾಗಿದೆ.

ಕೈಗಾರಿಕೆಯ ಇಲಾಖೆಯವರು ಗ್ರಾಮಾಂತರ ಪ್ರದೇಶಗಳಲ್ಲಿರುವ ಕಮ್ಮಾರರಿಗೂ ಸಹ, ಅವರ ಕೈಚಳಕವನ್ನು ಉತ್ತಮಗೊಳಿಸಲು ಸಾಧಕವಾಗ ಹಲವು ಸಲಹೆಗಳನ್ನು ಕೊಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕಮ್ಮಾರರುಗಳಿಗೆ ಮೂರು ತಿಂಗಳು ಕಾಲ ಶಿಕ್ಷಣವನ್ನು ಕೊಡಲು ತಕ್ಕ ಏರ್ಪಾಡನ್ನು ಮಾಡಲಾಗಿದೆ.

ಕ್ಲೋಸ್‌ಪೇಟೆ ಕೇಂದ್ರದಲ್ಲಿ ಉಪಕಾರಿಗಳೊಬ್ಬರು ಗುಡಿಸಲುಗಳನ್ನು ಇಟ್ಟು ನಡೆಯಿಸಲು ಒಪ್ಪಿರುತ್ತಾರೆ. ಇಲಾಖೆಯವರು ಸ್ವಲ್ಪಕಾಲದವರೆಗೂ ಬೇಕಾದ ಬೆಂಬಲವನ್ನು ಕೊಡಲು ಒಪ್ಪಿರುತ್ತಾರೆ.

ಈ ರೀತಿ ಕಮ್ಮಾರರಿಗೆ ಶಿಕ್ಷಣವನ್ನು ಕೊಡುವುದರ ಪರಿಣಾಮವಾಗಿ ಅವರು ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವುದು. ಇವರು ತಯಾರುಮಾಡಿದ ನೇಗಿಲುಗಳು ಎತ್ತಿನ ಕಾಲಿಗೆ ಹಾಕುವ ಲಾಳಗಳು ಇವುಗಳಿಗೆ ಚೆನ್ನಾಗಿ ಗಿರಾಕಿಯಿದೆ. ಕ್ಲೋಸ್‌ಪೇಟೆ ಕೇಂದ್ರವೊಂದರಲ್ಲಿಯೇ ಸುಮಾರು ೩೦೦ ರೂಪಾಯಿಗಳ ಸಾಮಾನುಗಳು ಈಗಾಗಲೇ ಮಾರಾಟವಾದುವು. ಮೈಸೂರಿನ ಕಮ್ಮಾರನ ವೈಶಿಷ್ಟ್ಯವೇನೆಂದರೆ, ಅವನು ಮೂರೇ ತಿಂಗಳುಗಳ ಶಿಕ್ಷಣದಿಂದ ಪರದೇಶದಿಂದ ಬರುವ ಸರಕುಗಳಿಗೆ ಎಲ್ಲ ವಿಧದಲ್ಲಿಯೂ ಸಮಾನವಾದ ಸಾಮಾನುಗಳನ್ನು ಸುಲಭವಾಗಿ ತಯಾರಿಸುತ್ತಿದ್ದಾನೆ. ಆದರೆ, ಗುಣದಲ್ಲಿ ಪರದೇಶದ ಸಾಮಾನುಗಳಿಗೆ ಇವು ಸಮನಾಗಿದ್ದರೂ ಇವುಗಳ ಬೆಲೆಯು ಮಾತ್ರ ಪರದೇಶದ ಸಾಮಾನುಗಳಿಗಿಂತ ಕಡಿಮೆಯಾಗಿರುತ್ತದೆ."

ಕಮ್ಮಾರರಿಗಾದರೂ, ತಮ್ಮ ಉದ್ಯೋಗವನ್ನು ನಡೆಸಲು ಸಾಕಷ್ಟು ಉತ್ತಮ ಶಿಕ್ಷಣವೂ ಬೇಕು. ಮಹಾಜನರ ಸರಕಾರದವರ ಪ್ರೋತ್ಸಾಹವೂ ಬೇಕು. ನಮ್ಮ ದಿನನಿತ್ಯದ ವ್ಯವಹಾರಕ್ಕೆ ಕಮ್ಮಾರನ ಅವಶ್ಯವೆಷ್ಟಿದೆಯೆಂಬುದು ನಮಗೆಲ್ಲರಿಗೂ ಗೊತ್ತು. ನಮ್ಮ ಜಿಲ್ಲೆಯ ಅಧಿಕಾರಿಗಳೂ ಈ ಕಡೆಗೆ ಗಮನಕೊಡುವರೇ?

THE
Canara Banking Corporation Ltd.,
(INCORPORATED IN BRITISH INDIA)

THREE YEARS' CASH CERTIFICATES

bearing interest at 4%p. a
in denominations of

RS. 50/-, 100/-, 500/-, 1,000/-, & 5,000/
are now issued at all our Branches.

For particulars call at or write to any of our nearest Branches.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

To Let.

Whole property well known ARYASHRAM Near City Post Office Facing Navayath Galli to the West, and Azizuddin Road to the East. EXCELLANT ACCOMMODATION FOR residential quarters Also suited for eating and factory purposes with improvements Necessary improvements will be effected Also separate houses available according to conveniences.

Apply to:

1 Sri A. Srinivasa Pai, B.A., B.L., *"Hill House", Kasargod, S. Kanara.*

OR

2 Sri B. Vaikunta Baliga, B.A., B.L., *"Lorretto Villa", Kodialbail, Mangalore.*

ರಾಜಾ ರಾಮಮೋಹನ ರಾಯ್

[ರಾಜಾ ರಾಮಮೋಹನರಾಯರ ಜೀವನವು ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಚಿತ್ರಿತವಾಗಿದೆ. ಅವರು ಅನೇಕ ಸಾಮಾಜಿಕ ಸುಧಾರಣೆಗಳನ್ನು ಮಾಡಿದರು. ರಾಜಕೀಯದಲ್ಲಿಯೂ ನುರಿತವರಾಗಿದ್ದರು. ಆದರೆ ಅವರ ಎಲ್ಲಾ ಲೌಕಿಕ ಚಟುವಟಿಕೆಗಳ ಮೇಲೆ ಅವರ ವಿಶಾಲ ವಿಶ್ವಪ್ರೇಮದ ಭಾವನೆಯು ಮಕುಟವಿರಿಸಿತ್ತು. ಸರ್ವ ಧರ್ಮಗಳ ಐಕ್ಯವನ್ನು–ಸರ್ವಶಕ್ತನಾದ ಏಕ ಪ್ರಭುವಿನ ಸತ್ಯದರ್ಶನವನ್ನು ಅವರು ಸಾರಿದರು.]

ಸಪ್ಟಂಬರ ಇಪ್ಪತ್ತ ಏಳನೆಯ ತಾರೀಕು ಭಾರತದ ಧಾರ್ಮಿಕ ಚರಿತ್ರೆಯಲ್ಲಿ ಬಹಳ ಮಹತ್ವವಾದ ದಿನವಾಗಿದೆ. ೧೦೬ ವರ್ಷಗಳ ಹಿಂದೆ ರಾಜಾ ರಾಮಮೋಹನ ರಾಯರವರು ಬ್ರಿಸ್ಟಲಿನಲ್ಲಿ ತನ್ನ ಕಡೆಯುಸಿರನ್ನು ಆರಿಸಿ ಮುಗಿಸಿದರು. ಹಿಂದೂದೇಶದಲ್ಲಿ ಎಲ್ಲೆಲ್ಲಿಯೂ ಅವರ ಅನುಯಾಯಿಗಳು ಆ ದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸುವರು.

ಹಿಂದೂ ಧರ್ಮದ ವಿಶಾಲತೆಯು ಒಬ್ಬ ಧಾರ್ಮಿಕ ವಿದ್ಯಾರ್ಥಿಯನ್ನು ಆಶ್ಚರ್ಯಮುಗ್ಧನನ್ನಾಗಿ ಮಾಡುವುದು. ಯಾವನೊಬ್ಬನೂ ಒಂದು ಧಾರ್ಮಿಕ ಮುಂದಾಳುವೆನಿಸಬಹುದು. ಕೂಡಲೇ ಹತ್ತಾರು ಮಂದಿ ಆತನ ಅನುಯಾಯಿಗಳೂ ಅವನನ್ನು ಹಿಂಬಾಲಿಸಿ ಬರುವರು. ಜಗತ್ತಿನ ಎಲ್ಲಾ ಉತ್ಕ್ರಾಂತಿ ತತ್ವಗಳ ಸಮೀಪವರ್ತಿಯಾಗಿ ಅದ್ವೈತ ತತ್ವವೂ ಇದೆ. ಹಿಂದೂಮತವು ಎಲ್ಲಾ ಭಾವನೆ, ತತ್ವ, ಬೋಧನೆಗಳನ್ನು ಅಡಕವಾಗಿ ಮಹಾಸಾಗರದಂತೆ ಇದೆ. ಈ ಎಲ್ಲಾ ಧಾರ್ಮಿಕ ಮುಖಂಡರೂ ತಮ್ಮ ತಮ್ಮ ಕಾರ್ಯಗಳನ್ನು ತಾವು ಕಂಡ ಸತ್ಯಕ್ಕೆ ಸರಿಯಾಗಿ ಮಾಡುವರು. ಜನತೆಗೆ ಅವರು ಲೌಕಿಕ ಮತ್ತು ತಾತ್ವಿಕ ಜ್ಞಾನದಾನವನ್ನು ಮಾಡುವರು. ಇಂತಹ ಹಲವು ಮಂದಿ ಧಾರ್ಮಿಕ ಗುಣಗಳಲ್ಲಿಯೂ ರಾಜಾ ರಾಮಮೋಹನ ರಾಯರವರ ಸ್ಥಾನವು ಅಸದೃಶವಾದುದು!

ಅವರು ಅನೇಕ ಚಟುವಟಿಕೆಗಳನ್ನು ಕೈಕೊಂಡಿದ್ದರು. ಹಲವು ಕಾರ್ಯಗಳಲ್ಲಿ ವಿಜಯಗಳಿಸಿದರು. ಸತೀ ಪದ್ಧತಿಯಂತಹ ನಿಷ್ಠುರ ಆಚಾರವನ್ನು ಶಾಸನ ಮೂಲಕ ಕಿತ್ತೊಗೆದು, ಎಷ್ಟೋ ನಿರಪರಾಧೀ ನಿರ್ಭಾಗ್ಯ ಬಾಲವಿತಂತುಗಳ ಜೀವನವನ್ನು ಉಳಿಸಿದ ಕೀರ್ತಿ ಅವರದು. ಆದರೆ ಈ ಎಲ್ಲಾ ಕಾರ್ಯಗಳಲ್ಲಿಯೂ ಅವರ ಪರಮೋಚ್ಚವಾದ ಧಾರ್ಮಿಕ ಮನೋಭಾವವೇ ಮಹತ್ವವಾಗಿ ಮೆರೆಯುತ್ತದೆ. ಯಾವುದು ಅವರನ್ನು ಇಂತಹ ಮಹತ್ವ ಕಾರ್ಯರಂಗಕ್ಕೆ ಇಳಿಸಿತೋ ಯಾವುದರ ಸಲುವಾಗಿ ಅವರು ತಮ್ಮ ಜೀವನವನ್ನು ಸವೆದರೋ ಆ ಧರ್ಮಜ್ಞಾನವು ಅವರ ದೇಶವಾಸಿಗಳ ಹೃದಯವನ್ನು ಇಂದು ಶತಮಾನಗಳು ಕಳೆದರೂ ಮುಟ್ಟಿಲ್ಲವೆಂಬುದು ನಿಜವಾಗಿಯೂ ಶೋಚನೀಯ ವಿಷಯವಾಗಿದೆ!

ತುಲನಾತ್ಮಕ ಅಭ್ಯಾಸ

ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳನ್ನು ಅವರು ತುಲನಾತ್ಮಕ ದೃಷ್ಟಿಯಿಂದ ಅಭ್ಯಾಸ ಮಾಡಿದರು. ಕಡೆಗೆ ಈ ಮೂರು ಧರ್ಮಗಳೂ ಒಂದೇ ಪ್ರಾಚೀನ ಸತ್ಯವನ್ನು ಸಾರುವವೆಂದು ನಿರ್ಧಾರವಾಯಿತು. ಭೂಗೋಳ, ಚರಿತ್ರೆಗಳ ಭೇದದಿಂದ ವೇದ, ಕುರಾನ್, ಬೈಬಲುಗಳ ವರ್ಣನೆಯು ಭಿನ್ನಭಿನ್ನವಾಗಿ ಕಂಡರೂ ಎಲ್ಲವುಗಳೂ ಒಂದೇ ದೃಷ್ಟಿಯನ್ನು ತೋರಿಸುತ್ತಿರುವುದು ಅವರಿಗೆ ವೇದ್ಯವಾಯಿತು.

ಹೀಗೆ ತುಲನಾತ್ಮಕ ಧರ್ಮಾಭ್ಯಾಸದಿಂದ ಅವರು ವಿಶ್ವಧರ್ಮವನ್ನು ಬೋಧಿಸಿದರು. ಚರಿತ್ರೆಯ ಪುಸ್ತಕ ಮತ್ತು ಜ್ಞಾನಗಳು ವಿಶ್ವಜ್ಞಾನ ತತ್ವಗಳಿಗಿಂತ ಮಹತ್ವವಲ್ಲವೆಂದು ಅವರು ನಿರ್ಧರಿಸಿಕೊಂಡರು.

ಬೇರೆ ಬೇರೆ ದೇಶಕಾಲದ ಚರಿತ್ರೆಗಳಲ್ಲಿ ಒಂದೇ ವಿಶ್ವಧರ್ಮವು ವಿಭಕ್ತವಾಗಿ ಕಂಡುಬರುವುದೆಂದು ಅವರು ಸಾರಿದರು. ಇವೆಲ್ಲವೂ ಒಂದು ಸತ್ಯವನ್ನು ಸಂಪೂರ್ಣವಾಗಿ ತಿಳಿಸಲು ಸಾಕಾಗುವವೆಂದೂ ಆದುದರಿಂದ ಅವುಗಳನ್ನು ಇದ್ದಕ್ಕಿದ್ದಂತೆ ಬೆಳೆಸುವುದರಿಂದ ವಿಶ್ವಧರ್ಮಕ್ಕೆ ಹಾನಿಯಿಲ್ಲವೆಂದೂ ಅವರು ಮನಗಂಡರು.

ಪ್ರೇಮ, ಸೇವೆ, ದೈವಭಕ್ತಿಯ ವಿಶ್ವತತ್ವಗಳಿಂದ ಎಲ್ಲಾ ಧರ್ಮದವರನ್ನೂ ಒಂದೇ ಸಿದ್ಧಾಂತಕ್ಕೆ ಒಲವಂತೆ ಅವರು ಬೋಧಿಸಿದರು. ಜೀವನ ಧರ್ಮವು ಇದಕ್ಕಿಂತ ಬೇರಿಲ್ಲವೆಂದು ಅವರು ತಿಳಿಸಿದರು.

ಬ್ರಹ್ಮಸಮಾಜ

ಅವರು ಹೀಗಿದ್ದು ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ಎಲ್ಲಾ ಜಾತಿಯ ಮಾನವರೂ ಅಲ್ಲಿ ಏಕದೇವನನ್ನು ಪೂಜಿಸುವುದೇ ಅದರ ತತ್ವವಾಗಿದೆ. ವಿಶ್ವವ್ಯಾಪಕನಾದ ದೇವನ ಆರಾಧನೆಗೆ ಅದೊಂದೇ ಮುಕ್ತದ್ವಾರವಾದ ಸಂಘವಾಗಿದೆ!

ಅವರು ತಮ್ಮ ಭವಿಷ್ಯ ದೃಷ್ಟಿಯಲ್ಲಿ ಲೋಕದ ಸಕಲ ಮತದ ಐಕ್ಯಸ್ಥಾಪನೆಯಿಂದ ಒಂದು ವಿಶ್ವ ಸಹೋದರತೆಯನ್ನು ತಿಳಿಸುವ ವಿಶ್ವಧರ್ಮದ ಸ್ಥಾಪನೆಯಾಗುವುದನ್ನು ಕಂಡಿದ್ದರು.

Wanted

Wanted one Inspector, two Organisers and Agents in south Kanara. Apply stating previous experience to:

The Bomboy Co-operative Insurance Society Ltd.,
Office for Mysore, Coorg and South Kanara.
'Asiatic Building', Kempe Gowda Road, Bangalore city

ಎದೆಯ ಬಾಧೆ, ಕೆಮ್ಮು, ಕಫಗಳನ್ನು ಗುಣಪಡಿಸಿರಿ

ಕೆಮ್ಮು, ಶ್ವಾಸಕೋಶಗಳನ್ನು ದುರ್ಬಲಗೊಳಿಸುವ ಶೀತ ಥಟ್ಟನೆ ಬರುವ ಥಂಡಿಯಿಂದ ನೀವು ನರಳುವಿರಾದರೆ ಖಂಡಿತವಾಗಿಯೂ ಪೆಪ್ಸನ್ನು ಸೇವಿಸಿರಿ.

ಪೆಪ್ಸು ನಿಮ್ಮ ಬಾಯಲ್ಲಿ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳಿಗೆ ಆಳವಾಗಿ ಹೋಗುತ್ತವೆ. ಈ ಪ್ರಕಾರವಾಗಿ ಪೆಪ್ಸು ನಿಮ್ಮ ಶ್ವಾಸಕೋಶಗಳಲ್ಲಿರಬಹುದಾದ ಶೀತದ ಮತ್ತು ಕಫದ ಕ್ರಿಮಿಗಳನ್ನು ನಾಶಮಾಡುತ್ತದೆ, ಕೆಮ್ಮಿನಿಂದಾಗಿ ಹರಿದಂತಾದ ಎದೆಯ ತೆಳುವಾದ ಚರ್ಮದ ಪರೆಯನ್ನು ಸರಿಗೊಳಿಸುತ್ತವೆ ಗಂಟಲು ನೋವನ್ನು ಗುಣಪಡಿಸುತ್ತದೆ ಬ್ರೊಂಕ್ಯಾಟಿಸ್, ಶೀತ, ಕೆಮ್ಮು ಮೊದಲಾದ ಶ್ವಾಸಕೋಶಗಳನ್ನು ದುರ್ಬಲಗೊಳಿಸುವ ಬಾಧೆಗಳಿಗೆ ಖಂಡಿತ ಗುಣಕಾರಿ ಔಷಧಿ.

ಪೆಪ್ಸು ಸೀಲುಹಾಕಲ್ಪಟ್ಟ ಬಾಟ್ಲಿಗಳಲ್ಲಿ ರೂಪಾಯಿ ಒಂದರಂತೆ ಮಾರಲ್ಪಡುತ್ತದೆ.

ಏಜಂಟ್ಸ್

ಮೆಸರ್ಸ್ ದಾಥಾ ಮತ್ತು ಕಂಪೆನಿ,
ಪಾರ್ಕ್‌ಟೌನ್ ಮದರಾಸ

ಯಾವಾಗಲೂ ಪೆಪ್ಸನ್ನೇ ಉಪಯೋಗಿಸಿರಿ

PEPS

ವಿಷಹಾರಿ ಕ್ರಿಮಿನಾಶಕ ಗುಳಿಗೆಗಳು

THE

BANK OF MANGALORE LTD.,

MANGALORE

ESTD 1931

Branches- Mudabidri & Padubidri.

Fixed Deposits will be received at following rates of interest.

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly

Savings Bank deposit 3½% on daily balances.

All kinds of bankingbusiness transacted

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಮಹಾತ್ಮಾ ಗಾಂಧಿ

[೧೩ನೆಯ ಪುಟದಿಂದ]

ನಿಶ್ಚಲವ್ರತವಾಗಿ ಕಾಪಾಡಿದ್ದರು. ಸರಕಾರವು ಎಚ್ಚತ್ತು, ವೈಸರಾಯರು ಗಾಂಧಿಜಿಯವರೊಡನೆ ಒಪ್ಪಂದಕ್ಕೆ ಬಂದು, ಗಾಂಧಿ–ಆರ್ವಿನ್ ಒಪ್ಪಂದ ವಾಯಿತು. ಜನತೆಯು ನಿರೀಕ್ಷೆಯು ಆದರಿಂದ ತೃಪ್ತಿಗೊಳ್ಳಲಿಲ್ಲ. ಆದರೂ ಗಾಂಧಿಜಿಯವರು ಆ ಮೇಲೆ ಸತ್ಯಾಗ್ರಹವನ್ನು ನಿಲ್ಲಿಸಿಬಿಟ್ಟರು.

ರಾಜಕೀಯ ಸನ್ಯಾಸಿ

ಇಷ್ಟರಲ್ಲಿ ಕಾಂಗ್ರೆಸಿನಲ್ಲಿ ಗಾಂಧಿಜಿಯವರದೇ ಏಕೈಕ ಅಧಿಕಾರವೆಂಬಂತಿತ್ತು. ಇಂತಹ ಪರಿಸ್ಥಿತಿಯಲ್ಲಿ, ತನ್ನ ಒಬ್ಬನೆ ಮಾತೇ ನಡೆಯಬಾರದೆಂದೂ, ಬೇರೆ ಬೇರೆ ರಾಜಕೀಯ ಪಕ್ಷದವರಿಗೂ ಅಲ್ಲಿ ಅಶ್ರಯ ಸಿಗಬೇಕೆಂದೂ, ಅವರು ಕಾಂಗ್ರೆಸಿನ ಸದಸ್ಯತೆಯಿಂದಲೇ ದೂರ ನಿಂತು ವಾರ್ಧಾದ ಶೇಗಾಂವ್ ಎಂಬ ಹಳ್ಳಿಯಲ್ಲಿ ಆಶ್ರಮ ಕಟ್ಟಿ ನೆಲಸಿದರು. ತೀವ್ರಗಾಮಿಗಳು, ಸಮತಾವಾದಿಗಳು, ಉಗ್ರಗಾಮಿಗಳು ಪ್ರಗತಿ ಪಕ್ಷದವರೇ ಮೊದಲಾದ ಪಕ್ಷದವರು ಇಂದು ಬೇರೆ ಬೇರೆ ರಾಜಕೀಯ ಭಿನ್ನಾಭಿಪ್ರಾಯದಿಂದ ಕಾಂಗ್ರೆಸಿನಲ್ಲಿ ಬಂದಿರುವುದಿದ್ದರೂ, ಈಗಲೂ, ಕಾಂಗ್ರೆಸಿನ, ಭಾರತದ ನಾಡಿಯು ಗಾಂಧಿಜಿಯವರು ಹೇಳಿದಂತೆಯೇ ಮಿಡಿಯುತ್ತದೆ. ಕಾಂಗ್ರೆಸಿನ ಪ್ರತಿಯೊಂದು ಕಾರ್ಯವನ್ನೂ ಅವರ ಸಲಹೆ ಸೂಚನೆಗಳನ್ನು ಕೇಳಿಕೊಂಡೇ ನಡೆಸುತ್ತಿದ್ದಾರೆ.

ಹರಿಜನೋದ್ಧಾರ

ಮಹಾತ್ಮಾಜಿಯವರು 'ಹರಿಜನರೆಂದು' ಕರೆಯುವ ಅಸ್ಪೃಶ್ಯರ ಉದ್ಧಾರಕ್ಕಾಗಿ ಬಹಳ ಯತ್ನವಾಡಿದರು. ಅಖಿಲಭಾರತ ಪ್ರಚಾರವಾಡಿ, ಅದಕ್ಕಾಗಿ ನಿಧಿಯೆತ್ತಿದರು. ಹರಿಜನ ಸೇವಕ ಸಂಘವೆಂಬ ಅಖಿಲಭಾರತ ಸಂಘವೊಂದನ್ನು ಸ್ಥಾಪಿಸಿದರು 'ಹರಿಜನ'ವೆಂಬ ಹೆಸರಿನ ವಾರ ಪತ್ರಿಕೆಯ ಮೂಲಕ ಅವರು ಈ ಬಗ್ಗೆ ವಾರ ವಾರಗಳೂ ಅಮೃತ ಸಂದೇಶವನ್ನು ಪ್ರಕಟಿಸುತ್ತಾರೆ.

ಈಗ ಗಾಂಧಿಯುಗವೇ ಆರಂಭವಾಗಿದೆ. ಖಾದಿ, ಗ್ರಾಮ ಕೈಗಾರಿಕೆ, ಅಸ್ಪೃಶ್ಯತಾ ನಿವಾರಣೆ ಮೊದಲಾದ ರಚನಾತ್ಮಕ ಕಾರ್ಯಗಳನ್ನು ಮಾಡಿ ತೋರಿಸಿದ ಗಾಂಧೀಜಿಯವರು, ಭಾರತೀಯ ರಾಜಕೀಯಕ್ಕೆ ಅನ್ವಯಿಸುವ ಹೊಸ ರಾಜಕೀಯ ತತ್ವವನ್ನು ತಿಳಿಸಿದ್ದಾರೆ. ಜನತೆಗೆ ಅವರ ತತ್ವವು ಎಷ್ಟು ಹಿತವಾಗುವುದೋ ಅಷ್ಟು ಬೇರೆ ರಾಜಕೀಯ ಮುಖಂಡರ ಸಂದೇಶವು ಹಿತವಾಗುವುದಿಲ್ಲ. ಕಾರಣವೆಂದರೆ ಗಾಂಧೀಜಿಯವರ ಮಾತು ಕೃತಿಗಳಲ್ಲಿ ಭಾರತದ ಸಂಸ್ಕೃತಿಯ ಜೀವ ಜೀವಾಳವೇ ಅಡಕವಾಗಿದೆ. ಅವರು ಯಾವುದನ್ನು ಹೇಳುತ್ತಾರೋ ಅದನ್ನು ಮಾಡಿ ತೋರಿಸುತ್ತಾರೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರಷ್ಟು ಸಾಧನೆಮಾಡಿದ ಮಹಾಪುರುಷರು, ಕಿಚ್ಚಿನ ಹಾಗೆ ಜಾಗೃತಿಯನ್ನು ಹುಟ್ಟಿಸಿದ ಮುಖಂಡರು ಬೇರೆ ಕಂಡುಬರುವಂತಿಲ್ಲ. ಆದುದರಿಂದಲೇ ಅವರು ಮಹಾತ್ಮರಾಗಿ ಮನ್ನಿಸಲ್ಪಡುವರು.

ಶಾಂತಿಸಂದೇಶ

ಗಾಂಧಿಜಿಯವರ ರಾಜಕೀಯವು ಅಪೂರ್ವವಾದುದು. ಸಾಮ್ರಾಜ್ಯಲಾಲಸೆಗಾಗಿ, ಅಧಿಕಾರಕ್ಕಾಗಿ, ಸ್ವಾರ್ಥಕ್ಕಾಗಿ ಇಂದು ಕತ್ತಿಕಟ್ಟಿ ನಿಂತ ಜನರು ಇಂದು ಗಾಂಧಿಜಿಯವರ ಸಂದೇಶಕ್ಕೆ ಕಿವಿಗೊಡುವ ಸಂದರ್ಭದಲ್ಲಿ, ಜಗತ್ತಿನಲ್ಲಿ ಎಂತಹ ಅಪೂರ್ವ ಆನಂದವು ಹರಿದೀತು? ಆಯಾಯ ರಾಷ್ಟ್ರಗಳ ಸ್ವಾತಂತ್ರ್ಯವು ಆಯಾಯ ದೇಶೀಯರ ಪಾಲಿಗಿರಬೇಕು. ಯುದ್ಧ ಉಪಕರಣಗಳನ್ನು ಕೆಳಗಿಟ್ಟು ಪ್ರತಿಯೊಬ್ಬರೂ ಪ್ರೇಮ ಸೌಹಾರ್ದಗಳಿಂದ ನಡೆಯಬೇಕು. ವಿಶ್ವಬಾಂಧವ್ಯವು ಬೆಳೆಯಬೇಕು. ಸತ್ಯ–ಅಹಿಂಸೆಗಳು ನಮ್ಮ ಜೀವನದ ಮಾರ್ಗದರ್ಶಕಗಳಾಗಿರಬೇಕು. ಅನ್ಯಾಯ, ವಂಚನೆ, ಕಾಪಟ್ಯ, ಅಸತ್ಯ, ಹಿಂಸೆಗಳಿಗೆ ಗಾಂಧಿಜಿಯವರಲ್ಲಿ ಆಶ್ರಯವಿಲ್ಲ. ಸ್ವಾರ್ಥದಿಂದ ಅಂಧತೆಯನ್ನು ಹೊಂದಿದ ಜಗತ್ತು, ಎಂದು ಈ ಪವಿತ್ರ ಸಂದೇಶದ ಕಡೆಗೆ ಕಿವಿಗೊಡುವುದೋ ಅಂದೇ ಲೋಕ ಕಲ್ಯಾಣವಾಗುವುದು.

ಧ್ವಜವಂದನೆ

[೭ನೆಯ ಪುಟದಿಂದ]

ನೋಡುವ ಹಾಗೆ ವಸಂತ ಒಮ್ಮೆ ನನ್ನನ್ನು, ಮತ್ತೊಮ್ಮೆ ನನ್ನ ಆ ಪಾಚನ್ನು ನೋಡುತ್ತಿದ್ದಳು. ಆ ಮೇಲೆ ಅವಳ ಮನಸ್ಸಿಗೆ ಏನು ತೋರಿತೋ–ಥಟ್ಟನೆ ಪಾಚನ್ನು ತೆಗೆದು ಅಂಗಳದ ಶಿಲೆಯ ಮೆಟ್ಟಲಿಗೆ ಬಡಿದುಬಿಟ್ಟಳು. ಗೇಸ್ ತುಂಬಿದ ಸೋಡಾ ಬಾಟಲಿ ಚೂರುಚೂರಾಗಿ ಬೀಳುವ ಹಾಗೆ ಪಾಚಿನ ಸ್ಥಿತಿಯಾಯಿತು. ಇಲ್ಲಿಯೇ ನಾಟಕವು ಮುಗಿಯುತ್ತಿದ್ದರೆ ಸ್ವಲ್ಪ ಶಾಂತಿ ದೊರೆಯುತಿತ್ತು. ಆದರೆ ಅದು ಮುಗಿಯಲಿಲ್ಲ. ಅವಳ ದೃಷ್ಟಿ ಮೇಜಿನ ಮೇಲಿದ್ದ ಫೌಂಟನ ಪೆನ್ನ ಶಾಯಿ ಬಾಟಲಿಯ ಕಡೆಗೆ ಹರಿಯಿತು. ಅದನ್ನೂ ತೆಗೆದುಕೊಂಡು ಆಡಿಸತೊಡಗಿದಳು. ಬೂದು ಬಾವಿ ನೆಲದ ಮೇಲೆಲ್ಲ ಶಾಯಿಯಾಯಿತು. ಅದನ್ನೆಲ್ಲಾ ಕೈಗೆ ತೆಗೆದುಕೊಂಡು, ತಾನು ಮೈಗೆ ಹಚ್ಚಿಕೊಳ್ಳುತಿದ್ದಳು, ನನ್ನ ಮುಖಕ್ಕೂ ಹಚ್ಚಬರುತಿದ್ದಳು. ನಾನು ತಕರಾರು ಮಾಡುತಿದ್ದಾಗ ತಾಟಕಿಯ ಹಾಗೆ ಅರಚುತಿದ್ದಳು. ಆದರೂ ಅವಳು ಅಳುವುದನ್ನು ನಿಲ್ಲಿಸಲಿ ಎಂದು ನನ್ನ ಚವತಿಯ ಗಣಪತಿಯ ಹಾಗೆ ಅವಳ ಮುಂದೆ ಸುಮ್ಮಗೆ ಕೂತುಕೊಂಡೆ. ಅವಳು ನಿಲ್ಲುತ್ತ ಬಗ್ಗುತ್ತ ನನಗೆ ಶಾಯಿಯ ಬಣ್ಣ ಹಚ್ಚತೊಡಗಿದಳು. ಸ್ವಲ್ಪ ಸಾಬೂನಿನ ಖರ್ಚು–ಅಷ್ಟೇ ತಾನೇ'– ಎಂದು ನಾನು ಅವಳ ಕೈ ಬತ್ತಿದ ಹಾಗೆ ನಾನು ಮುಖ ಕೊಡುತ್ತಿದ್ದೆ. ಮೆಲ್ಲಗೆ ನೆಲದ ಮೇಲೆ ಚೆಲ್ಲಿದ್ದ ಇವಾಣೆ ಶಾಯಿ ಮುಗಿಯಿತು. ಈಗ ವಸಂತ 'ಜಿಲೇಬಿ ಬಾಕು' ಎಂದು ಪುನಃ ಕೂಗ ಆರಂಭಿಸಿದಳು. ಈಗಿನ ಕೂಗು ಹಿಂದಿನ ರಣಗರ್ಜನೆಗಿಂತಲೂ ಒಂದು ವತ್ತರವಾಗಿತ್ತು. ಮನೆಯಲ್ಲಿ ಯಾರು ಇಲ್ಲ. ವಸಂತ ಅಳುವುದನ್ನು ನಿಲ್ಲಿಸಬೇಕಾದರೆ ನಾನೇ ಪೇಟೆಯ ಮಿಠಾಯಿ ಅಂಗಡಿಗೆ ಹೋಗಿ ಜಿಲೇಬಿ ಲಾಡು ತರಬೇಕು. ವಸಂತಿಯನ್ನು ಒಬ್ಬಳೇ ಆಗಿ ಮನೆಯಲ್ಲಿ ಬಿಟ್ಟು ಹೋಗುವಂತಿರಲಿಲ್ಲ. ಎಲ್ಲಿಯಾದರೂ ನಾಯಿ ಬೆಕ್ಕುಗಳನ್ನು ಕಂಡು ಹೆದರಿ ಬಿಟ್ಟರೆ, ಮತ್ತೆ ನಾನು ಸುಮಿತ್ರೆಯ ಬಾಯಿಗೆ ಬೀಳಬೇಕು. 'ಇನ್ನು ಎರಡು ನಿಮಿಷ ತಡೆಯುತಿದ್ದೆನಾದರೆ ಅತ್ತು ಅತ್ತು ವಸಂತಿಯ ಪ್ರಾಣೋತ್ಕ್ರಮಣವಾಗುತಿತ್ತೊ ಏನೊ'. ಉಪಾಯವಾಗಿ ನಾನು ಧ್ವಜಾಭಿವಂದನದ ಮೇಲು ಬೈಗಳ ಸುರಿಮಳೆಯನ್ನು ಕರೆಯುತ್ತ ವಸಂತಿಯನ್ನು ಸೊಂಟದ ಮೇಲೆ ತೆಗೆದುಕೊಂಡ ಜಿಲೇಬಿ ಲಾಡು ಕೊಳ್ಳಲಿಕ್ಕೆ ಪೇಟೆಗೆ ಹೊರಟೆ. ದಾರಿಯಲ್ಲಿ ಜನರು ನಮ್ಮನ್ನು ನೋಡುತ್ತಿದ್ದರೋ ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ಮರೆತು ಸ್ತಂಭೀಭೂತರಾಗುತ್ತಿದ್ದರು. ರಾತ್ರಿ ಸಮಯವಾಗಿರಲಿಲ್ಲ. ಇಲ್ಲವಾದರೆ ನನ್ನನ್ನು ಮತ್ತು ನನ್ನ ಆಸುಮಿತ್ರೆಯ ಮಗಳು ವಸಂತಿಯನ್ನು ಭೂತಗಳೆಂದೇ ತಿಳಿದು ಜನರು ಇದ್ದಲ್ಲಿಂದ ಪಲಾಯನಮಾಡುತಿದ್ದರು. ಮಿಠಾಯಿಯವನು ಆಶ್ಚರ್ಯಭರಿತನಾಗಿ ನನ್ನನ್ನು ನೋಡಿದ. ಆದರೆ ಏನನ್ನೂ ಕೇಳಲಿಲ್ಲ. ಮನೆಗೆ ಬರುವಾಗ ಸುಮಿತ್ರೆಯ ಗಾಡಿ ಬಾಗಲಲ್ಲಿ ನಿಂತಿತ್ತು. ಒಳಗೆ ಕಾಲಿಡುತಿದ್ದಂತೆಯೇ ಅವಳು ನಸುನಗುತ್ತ ಹೇಳಿದಳು 'ಈ ಹೊತ್ತಿನ ಧ್ವಜಾಭಿವಂದನವು ಬಹಳ ಫಲವಾಯಿತು. ಮತ್ತು ನನ್ನ ಮುಖವನ್ನು ನೋಡಿ ಅವಳು ಬೋ ಬೋ ಎಂದು ನಗುವನ್ನು ತಡೆಯಲಾರದೆ ನೆಲದ ಮೇಲೆ ಹೊರಳಿದಳು.

"ವಿಶ್ವಮಿತ್ರ"

ಇಂತಹ ಸಂದರ್ಭದಲ್ಲಿ, ಗಾಂಧಿಜಿಯವರ ಬಗ್ಗೆ ಅಭಿಮಾನಪಡುವವರು ಅವರ ಜೀವನೋದ್ದೇಶಗಳ ಕಡೆಗೆ ಗಮನಕೊಡಬೇಕು. ವಿಶ್ವಪ್ರೇಮಿಗಳಾಗಬೇಕು. ಸತ್ಯ–ಅಹಿಂಸೆಗಳನ್ನು ಪಾಲಿಸಬೇಕು. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಆತ್ಮ ಯಜ್ಞಮಾಡಲು ಸಿದ್ಧರಿರಬೇಕು. ಖಾದಿ, ಅಸ್ಪೃಶ್ಯತಾನಿವಾರಣೆ, ಇಂತಹ ಕಾರ್ಯಗಳನ್ನು ಕಾರ್ಯತಃ ಆಚರಿಸಬೇಕು. ಇವುಗಳಿಂದ ಮಾತ್ರ ಅವರಿಗೆ ಗೌರವವನ್ನು ಸಲ್ಲಿಸಿದಂತಾಗುವುದು.

Kanarese No. 1



ಕೋಮಲವಾದ ಚರ್ಮಕ್ಕೆ
ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನಿನಿಂದ (Cuticura Medicated Toilet Soap) ಹೆಚ್ಚಿನ ರಕ್ಷಣೆಯನ್ನು ಕೊಡಿರಿ ಇತರ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ, ಗುಣಪಡಿಸುವ ಗುಣವುಳ್ಳ ಔಷಧಿಯು ಮೈಯ ಚರ್ಮವನ್ನು ನಿರ್ಮಲವಾಗಿಯೂ ಕೋಮಲವಾಗಿಯೂ ಇಡುವುದು

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನುಣುಪಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಹಾಕಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸೋಪ್
CUTICURA SOAP

ಮಕ್ಕಳಿಗೆ
ಡೊಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಹಿಳಜ್ವರ ಮತ್ತು ಕಷ್ಟ ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ
"ಲಿವರ್ ಕ್ಯೂರ್"
ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ: ಜನ್ನಿ ವೆಂಕಟ್ರಮಣಯ್ಯ
ವಿಶೇಷ ಮಾಹಿತಿಗೆ ಬರೆಯಿರಿ
ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ,
ಮೈಲಾಪೂರ, —ಮದ್ರಾಸು.

ಭಾರತದ ರಾಜಕೀಯ ಕುರಿತು ಜೆಟ್ಲೆಂಡರ ಹೇಳಿಕೆ

ಹಿಂದೂದೇಶದ ರಾಜಕೀಯದಲ್ಲಿ ಸುಧಾರಣೆಯುಂಟಾಗಬಹುದೆಂಬ ನಿರೀಕ್ಷೆಯುಂಟಷ್ಟೆ? ಆದರೆ ಪಾರ್ಲಿಮೆಂಟಿನಲ್ಲಿ ಭಾರತ ಸಚಿವರಾದ ಜೆಟ್ಲೆಂಡರು ಈ ನಿರಾಶಾಂಶದ ಮಾತು ಹೇಳಿದರು.

'ಸರಕಾರಕ್ಕೆ ಭಾರತದ ಎಲ್ಲರೂ ಸಹಾಯ ಕೊಡಲು ಮುಂದೆ ಬಂದಿದ್ದಾರೆ. ಅಲ್ಲಿನ ನರೇಂದ್ರರು ತಮ್ಮ ಉದಾರ ಸಹಾಯವನ್ನು ವ್ಯಕ್ತಪಡಿಸಿದ್ದಾರೆ. ಪಂಜಾಬ್ ಮತ್ತು ಬಂಗಾಳ ಮಂತ್ರಿಮಂಡಳಗಳು (ಕಾಂಗ್ರೆಸ್ಸಲ್ಲ) ತಮ್ಮ ಸಹಾಯದ ಪ್ರತಿಜ್ಞೆಯನ್ನು ಕೊಟ್ಟಿವೆ.

'ಆದರೆ, ಅಖಿಲಭಾರತದ ಕಾಂಗ್ರೆಸಿನ ಅಧಿಕಾರ ಮಂಡಳಿಯವರು, ಭಾರತದ ವಿಷಯಗಳ ಇತ್ಯರ್ಥವಾಗದಿದ್ದಲ್ಲಿ ತಮ್ಮ ಬೆಂಬಲವನ್ನು ಕೊಡಲು ಸಿದ್ಧರಿಲ್ಲವೆಂಬ ಒಂದು ಪ್ರಕಟಣೆಯನ್ನು ಕೊಟ್ಟಿದ್ದಾರೆ. ಆದರೆ ಅವರಿಗೆ ಯಾವ ರೀತಿಯ ಸಹಾಯ ಕೊಡಬಹುದೆಂಬ ಕುರಿತು ನನ್ನ ಅಭಿಪ್ರಾಯವನ್ನು ನಾವು ಹಿಂದೆಯೇ ಪ್ರಕಟಪಡಿಸಿರುವೆವು. ವೈಸರಾಯರು ಭಾರತದ ಮುಖಂಡರೊಡನೆ ವ್ಯಕ್ತಿಶಃ ಕಂಡು ಮಾತುಕತೆ ನಡೆಸುವರು. ಕೆಲವೇ ದಿನಗಳಲ್ಲಿ ಯುದ್ಧದ ಕುರಿತು ಅವರ ನಿರ್ಧಾರವು ಪ್ರಕಟವಾದೀತು' ಎಂದರು.

ದೌರ್ಭಾಗ್ಯ ಮತ್ತು ಅದೂರದರ್ಶಿತ್ವ

ಮರುದಿನದ ಪಾರ್ಲಿಮೆಂಟ ಸಭೆಯಲ್ಲಿ ಮಾತನಾಡುತ್ತಾ ಜೆಟ್ಲೆಂಡರು, ಕಾಂಗ್ರೆಸಿನವರು, ಯುದ್ಧದ ಸಂದರ್ಭವನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಳ್ಳುವುದು ಸಹಜವಾದರೂ, ಹಲವು ಭಾರತೀಯ ಮುಖಂಡರು ಉಜ್ವಲ ದೇಶಾಭಿಮಾನಿಗಳಾದರೂ, ಅವರಲ್ಲಿ ಹಲವೊಮ್ಮೆ ದೂರದರ್ಶಿತ್ವವಿಲ್ಲದಿರುವುದನ್ನು ನಾನು ನೋಡುತ್ತೇನೆ. ಇಂತಹ ಸಮಯದಲ್ಲಿ ಅವರ ವಿಷಯವನ್ನು ಮುಂದಿರಿಸುವುದು ದೌರ್ಭಾಗ್ಯವಾಗಿದೆ. ಬ್ರಿಟಿಷರು ಸಮಯ ಸಮೀಪಿಸಿದಾಗ ಖಂಡಿತವಾಗಿಯೂ ಆ ಕುರಿತು ವಿಚಾರಿಸುವರು. ಈ ಇಂದಿನ ಜೀವನ-ಮರಣದ ಸಂದರ್ಭದಲ್ಲಿ ನಮ್ಮನ್ನು ಒತ್ತಾಯಗೊಳಿಸುವುದು ದುರ್ಭಾಗ್ಯವಾಗಿದೆ'

ಮಂತ್ರಿಗಳ ಪ್ರಶಂಸೆ

'ಇಂದು ಭಾರತದ ಅನೇಕ ರಾಷ್ಟ್ರೀಯವಾದಿಗಳು ಬಹಳ ನಿಪುಣತೆಯಿಂದ ಆಡಳಿತೆ ನಡೆಸುತ್ತಾರೆ. ಅವರು ಈ ಸಂದರ್ಭದಲ್ಲಿ ರಾಜೀನಾಮೆಕೊಟ್ಟು ಹೋದರೆ ನಿಜವಾಗಿಯೂ ಅದು ಕಷ್ಟದ ಕೆಲಸವಾದೀತು. ಇದು ವರೆಗೆ ಅವರು ಕೊಟ್ಟ ಸಹಾಯಕ್ಕಾಗಿ ನಾನವರನ್ನು ಹೊಗಳುತ್ತೇನೆ. ಕಾಂಗ್ರೆಸಿನ ಧುರೀಣರು ತಮ್ಮ ಕೇಳಿಕೆಗಳನ್ನು ಮುಂದಿಡಲು ಆರಿಸಿದ ಸಮಯವು ಒಳ್ಳೆಯದಾಗಲಿಲ್ಲ' ಹೀಗೆಂದು ಹೇಳಿ ವೈಸರಾಯರು ಭಾರತದ ಮುಖಂಡರೊಡನೆ ಮಾಡುವ ಮಾತುಕತೆಯು ಯಶಸ್ವಿಯಾಗಬಹುದೆಂಬ ನಿರೀಕ್ಷೆಯುಳ್ಳವನಾಗಿದ್ದೇನೆ ಎಂದರು.

ಜೆಟ್ಲೆಂಡರು ತಮ್ಮ ಭಾಷಣವನ್ನು ೨೦ ವರ್ಷಗಳ ಹಿಂದೆ ಮಾಡಬೇಕಿತ್ತು!

ಜೆಟ್ಲೆಂಡರಿಗೆ ನೆಹರುಗಳ ಖಂಡತುಂಡ ಉತ್ತರ

ಜೆಟ್ಲೆಂಡರಿಗೆ ನೆಹರುಗಳ ಸ್ಪಷ್ಟ ಉತ್ತರ

ಜೆಟ್ಲೆಂಡರ ಪಾರ್ಲಿಮೆಂಟು ಭಾಷಣಕ್ಕೆ ಉತ್ತರಕೊಡುತ್ತಾ, ಪಂಡಿತ ನೆಹರುಗಳು ಹೀಗೆ ಹೇಳಿದರು.

'ಪಾರ್ಲಿಮೆಂಟಿನಲ್ಲಿ ಜೆಟ್ಲೆಂಡರು ಹೇಳಿದ ಮಾತನ್ನು, ನಾನು ವಿಷಾದದಿಂದ ಓದಿದೆ. ಈ ವಿಷಯದಲ್ಲಿ ಅವರೊಡನೆ ಚರ್ಚೆಮಾಡಲು ನಾನು ಸಿದ್ಧನಿಲ್ಲ. ವರ್ಕಿಂಗ್ ಕಮಿಟಿಯು, ತನ್ನ ಸುದೀರ್ಘ ಪ್ರಕಟನೆಯಲ್ಲಿ ತನ್ನ ನಿರ್ಧಾರವನ್ನು ಸ್ಪಷ್ಟವಾಗಿಯೂ, ಗೌರವಾರ್ಹವಾಗಿ ಪ್ರಕಟಿಸಿದೆ. ವರ್ಕಿಂಗ್ ಕಮಿಟಿಯವರು ಎಷ್ಟು ವಿಶಾಲತೆಯಿಂದ, ಈ ಪ್ರಶ್ನೆಯನ್ನು ವಿಚಾರಿಸಿದರೋ ಅಷ್ಟು ವಿಶಾಲತೆಯ ದೃಷ್ಟಿಯಿಂದ ಜೆಟ್ಲೆಂಡರು ನೋಡಲಿಲ್ಲ. ವರ್ಕಿಂಗ್ ಕಮಿಟಿಯವರು, ವಿಶ್ವದ ವಿಶಾಲತೆಯಲ್ಲಿ ಶಾಂತಿಸ್ಥಾಪನೆಯ ದೃಷ್ಟಿಯಿಂದ, ಯುದ್ಧದ ಉದ್ದೇಶವನ್ನು ಅಸ್ವಯಿಸಿ, ಆ ದೃಷ್ಟಿಯಿಂದ ಭಾರತದ ಪ್ರಶ್ನೆಯನ್ನು ನಾವು ಮುಂದಿಟ್ಟಿದ್ದೇವೆ.

'ಇಂಗ್ಲೆಂಡಿನ ಸಂಕಷ್ಟದ ಸಮಯದಲ್ಲಿ ನಾವು ಲಾಭಪಡೆಯಲು ಮನಸ್ಸುಳ್ಳವರಾಗಿಲ್ಲವೆಂಬುದನ್ನು ವರ್ಕಿಂಗ್ ಕಮಿಟಿಯು ಸ್ಪಷ್ಟಪಡಿಸಿದೆ. ಆದರೆ ಭಾರತದ ಮತ್ತು ಜಗತ್ತಿನ ಹಿತದ ದೃಷ್ಟಿಯಲ್ಲಿ ಯುದ್ಧಮಾಡುವ ಉದ್ದೇಶವೇನೆಂಬುದನ್ನು ಸ್ಪಷ್ಟಮಾಡುವುದು ಅಗತ್ಯವಾಗಿದೆ. ಹಾಗಾದರೆ ಮಾತ್ರ ಜನತೆಯು ಸರಿಯಾಗಿ ತಿಳಿದ ಕಾರ್ಯಮಾಡಬಹುದು. ಇಂತಹ ರೀತಿಯಲ್ಲಿ ನಾವು ಮಾಡಿದ ವಿನಂತಿಯು ಸಮಯಕ್ಕೆ ಸರಿಯಾದದ್ದಲ್ಲ ಉಚಿತವಲ್ಲವೆಂದು ಹೇಳಿದ್ದು ಆಶ್ಚರ್ಯಕರವಾಗಿದೆ. ಯುದ್ಧಮಾಡುವ ಉದ್ದೇಶವೇನೆಂದು ತಿಳಿಯಲು, ನಾವು ಈ ಯುದ್ಧದಲ್ಲಿ ಕಣ್ಣು ಮುಚ್ಚಿ ಭಾಗವಹಿಸುತ್ತಿದ್ದು, ಕಡೆಗೆ ಈ ಪ್ರಲಯಜನಕವಾದ ಯುದ್ಧವು ಮುಗಿವ ತನಕ ಕಾಯಬೇಕೆ? ಯಾವುದಕ್ಕಾಗಿ ನಾವು ಸಾಯಬೇಕೆಂಬುದನ್ನು ತಿಳಿಯದೆ ಜನತೆಯು ನಿರ್ನಾಮವಾಗಬೇಕೆ?

ಬಹಳ ಘೋರ ಉದಾಹರಣೆ

'ಕಳೆದ ಪ್ರತಿಯೊಂದು ಯುದ್ಧದಲ್ಲಿಯೂ ನ್ಯಾಯ ಸತ್ಯಗಳ ಭರವಸೆ ಬಂದಿತ್ತು, ಆದರೆ ಯುದ್ಧವು ಮುಗಿದಾಗ, ಆ ಹಿಂದಿನ ಭರವಸೆಗಳೆಲ್ಲಾ ಮರೆತು ಹೋದವು. ಕಳೆದ ಮಹಾಯುದ್ಧದಲ್ಲಿ ಕೊಟ್ಟ ಭರವಸೆಯನ್ನು ಮರೆತದ್ದೇ ಇಂತಹ ಒಂದು ಭಯಂಕರ ಉದಾಹರಣೆಯಾಗಿದೆ' ಇದನ್ನು ತಿಳಿದೂ ತಿಳಿದೂ ನಾವು ಅನ್ಯಾಯಕ್ಕೆ ಬಲಿಯಾಗುವುದೇ? ಈ ವಿಷಯವು ಕೇವಲ ಭಾರತದ ಮಟ್ಟಿಗಲ್ಲ. ಇಡೀ ಪ್ರಪಂಚದ ಮಟ್ಟಿಗೆ ನಾವು ಮುಂದಿರಿಸಿದ್ದೇವೆ. ಮಾನವ ಜೀವನದ ಉದ್ಧಾರಕ್ಕಾಗಿ ರಾಷ್ಟ್ರಗಳು ಯುದ್ಧದ ಉದ್ದೇಶವನ್ನು ಸ್ಪಷ್ಟವಾಗಬೇಕು.

'ಇಂತಹ ಸಮಸ್ಯೆಯಲ್ಲಿ ಈ ಉದ್ದೇಶವು ಭಾರತದ ಬಗ್ಗೆ ಹೇಗೆ ಅನ್ವಯಿಸುವುದೆಂದು ತಿಳಿಯಲು ಉದ್ದೇಶಪಟ್ಟೆವು. ಸಾಮ್ರಾಜ್ಯಶಾಹಿಯು ಹರಡಿದ್ದ ಯೂರೋಪಿನ ರಾಷ್ಟ್ರಗಳ ವಿಷಯದಲ್ಲಿ, ಚೈನಾ ಮೊದಲಾದ ದೇಶಗಳ ವಿಷಯದಲ್ಲಿಯೂ, ಈ ಕುರಿತು ಸ್ಪಷ್ಟತೆಯೇನೆಂದು ತಿಳಿಯಲು ಇಚ್ಛಿಸಿದೆವು. ನಾವು ನಾಜಿಸಮ್ಮನ್ನು ಖಂಡಿಸಿದ್ದೇವೆ. ಆದರೆ ನಾಜಿಸಮ್ಮನ್ನು ಖಂಡಿಸುವವರು ಸಾಮ್ರಾಜ್ಯಶಾಹಿಯನ್ನು ಖಂಡಿಸದಿರಲು ಸಾಧ್ಯವಿಲ್ಲ.

'ಕಾಂಗ್ರೆಸು ಸರಕಾರಗಳು ರಾಜೀನಾಮೆ ಕೊಟ್ಟರೆ ಅದು ಮಹಾನರ್ಥವೆನ್ನುತ್ತಾರೆ ಜೆಟ್ಲೆಂಡರು. ಆದರೆ ರಾಷ್ಟ್ರದಲ್ಲಿ ಆಗುವ ಅವಸ್ಥೆಯನ್ನು ಕುರಿತ, ಅವುಗಳು ಸುಮ್ಮಗಿದ್ದರೆ ಜನತೆಯ ವಿಶ್ವಾಸವನ್ನು ಅವು ಕಳಕೊಳ್ಳುವವು. ಈ ಯುದ್ಧದ ಉದ್ದೇಶವು ಸ್ಪಷ್ಟಪಡಿಸದಿದ್ದರೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳ-ಹೆಸರಲ್ಲಿ ಅನ್ಯಾಯ ನಡೆದರೆ ಅದು ಅದಕ್ಕಿಂತ ದೊಡ್ಡ ಅನರ್ಥವಾಗಿದೆ.

ಸ್ಪಷ್ಟ ಪ್ರಶ್ನೆ

'ವರ್ಕಿಂಗ್ ಕಮಿಟಿಯು ಸ್ಪಷ್ಟ ಪ್ರಶ್ನೆಯನ್ನು ಕೇಳಿದೆ. ಜೆಟ್ಲೆಂಡರು ಅರ್ಥಕ್ಕೆ ಸಂಪರ್ಕವಾದ ಉತ್ತರವನ್ನು ಯಾಕೆ ಕೊಡಬಾರದು. ಜಗತ್ತಿನಲ್ಲಿ ಇಂತಹ ದುರ್ಘಟನೆ ಒಂದಾಗ, ಭಾರತೀಯರಾಗಲಿ, ಆಂಗ್ಲೇಯರಾಗಲಿ ಒಬ್ಬ ಜವಾಬ್ದಾರಿಯುಳ್ಳ ಮನುಷ್ಯನು ಅಂತಹ ಪ್ರಶ್ನೆಗಳನ್ನು ಮರೆತು ಮೂಲೆ ಸೇರಿಸಲು ಸಾಧ್ಯವಿಲ್ಲ. ಅಂತಹ ಕಾರ್ಯಗಳನ್ನು ಮಾಡುವುದರಿಂದಲೇ ಸಂಶಯವೂ ಹುಟ್ಟುವುದು. ಇಂತಹ ದುರ್ಘಟವಾದ ಸಮಯದಲ್ಲಿ ಯಾರ ಕೂಡಾ, ವ್ಯವಹಾರ ಮಾಡರು. ಆದರೆ ಇಂತಹ ಸಮಯದಲ್ಲಿ ಯಾರೂ ಕೂಡಾ, ೨೦ ವರ್ಷಗಳ ಹಿಂದಿನಂತೆ ಮಾತನಾಡಲಾರರು. ಏಕೆಂದರೆ ವ್ಯತ್ಯಾಸಗೊಳ್ಳುವ ಜಗತ್ತಿನೊಡನೆ ಭಾರತವೂ ವ್ಯತ್ಯಾಸಗೊಂಡಿದೆ. ಜಗತ್ತು ಬದಲಾವಣೆಯಾದರೂ ಜೆಟ್ಲೆಂಡರು ಬದಲಾವಣೆ ಹೊಂದಿಲ್ಲ. ಅವರು ತಮ್ಮ ಭಾಷಣವನ್ನು ೨೦ ವರ್ಷಗಳ ಹಿಂದೆ ಮಾಡಬೇಕಿತ್ತು. ಇಂದು ಬದಲಾವಣೆಯ ಪ್ರವಾಹವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ನಾವು ಬುದ್ಧಿವಂತರಾದರೆ ಈ ಪ್ರವಾಹವನ್ನು ಒಳ್ಳೆಯದಾರಿಗೆ ತಿರುಗಿಸಬಹುದು. ನಾವು ಏನಾದರೂ ಪಡೆದುಕೊಳ್ಳಬೇಕೆಂಬ ವ್ಯಾಪಾರ ದೃಷ್ಟಿಯಿಂದ ಯಾವುದನ್ನೂ ಕೇಳಿಲ್ಲ. ಭಾರತದ ಜವಾಬ್ದಾರೀ ಜನರಾಗಿ ನಮ್ಮ ಸ್ವಾತಂತ್ರ್ಯವನ್ನು ವಿಚಾರ ಮಾಡುವುದು ನಮ್ಮ ಕೆಲಸ. ಅದೇ ಕಾಂಗ್ರೆಸಿನ ಮುಖ್ಯ ಗುರಿಯಾಗಿದೆ. ಆದರೆ ನಾವು ಸಮಸ್ಯೆಯನ್ನ ಪ್ರಪಂಚ ಸಮಸ್ಯೆಯ ದೃಷ್ಟಿಯಿಂದಲೇ ವಿಚಾರಿಸಿದ್ದೇವೆ. ನಾವು ಜಗತ್ತಿನ ಸ್ವಾತಂತ್ರ್ಯ ರಕ್ಷಣೆಗಾಗಿ ರಾಷ್ಟ್ರದ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾದಲ್ಲಿ ಹಿಂಜರಿಯಲಾರೆವು. ಏಕೆಂದರೆ ಜಗತ್ತು ಶಾಂತಿಯಲ್ಲಿ ಇಲ್ಲವಾದರೆ ನಮಗಾದರೂ ಶಾಂತಿ ಸಿಗಲಾರದು. ಆದರೆ ಜಗತ್ತಿನ ಸ್ವಾತಂತ್ರ್ಯದ ವಿಷಯವಾಗಿ ನಮಗೆ ಭರವಸೆಬೇಕು. ಆದರೆ ಇಂದಿನ ಯುದ್ಧದ ಅಂತಹ ಉತ್ತಮ ಆದರ್ಶಗಳಿಲ್ಲವಾದರೆ ನಾವು ಯಾತಕ್ಕೆ ಕಾದಾಡಬೇಕು? ಸಾಮ್ರಾಜ್ಯಶಾಹಿಗಳೊಡನೆ ಆಗುವ ಅಮಾನುಷ ಯುದ್ಧದಲ್ಲಿ ನಾವು ಯಾಕೆ ಪ್ರವೇಶಿಸಬೇಕು. ರಾಜನೀತಿ ಕುಶಲರ ತಲೆಗೆ ಬುದ್ಧಿವಂತಿಕೆ ಬರದಿದ್ದಲ್ಲಿ ಈ ಸಾಮ್ರಾಜ್ಯಶಾಹಿಗಳ ಯುದ್ಧಕ್ಕೆ ಭಾರತವು ಬೆಂಬಲ ಕೊಡಲಾರದು. ಸ್ವತಂತ್ರವಾದ ಒಪ್ಪಿಗೆಯಿಂದ ಭಾರತವು ಮಾತ್ರ ತನ್ನ ನಿರ್ಧಾರವನ್ನು ಆದರ್ಶ ಸಾಧನೆಗಾಗಿ ಮುಂದುವರಿಸುವುದು.'

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore. And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE

ESTD 1906

CANARA BANK, LIMITED.

ನೋಟೀಸು

ದಿ ಜವಾಹರ ಬೇಂಕ್ (ರಿಜಿ.) ಪೆಂಟ್ಲ್ಯಾಂಡ್ ಪೇಟೆ ಮಂಗಳೂರು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಅಡವಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ಸ್ವಾದಿಗೆ ಅಸಲು ಬಡ್ಡಿ ಕೊಡದೆ ಈ ವರೆಗೆ ಬಾಕಿವಿರಿಸಿರುವುದರಿಂದಲೂ, ಸದರಿ ಸಾಲಗಳನ್ನು ಬರವಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಜಾರಿಯಾಗಿಯೂ, ಕೆಲವರು ಮೃತಪಟ್ಟಿರುವುದರಿಂದ ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾ. 18-10-39ನೇ ಬುಧವಾರ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸ್ ಚಾರ್ಜು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ ತಾ. 20-10-39ನೇ ಶುಕ್ರವಾರ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಬಹಿರಂಗವಾಗಿ ಏಲಂಮಾಡಲ್ಪಡುವುದು

	ಸಾಲದ ನಂಬ್ರ ಮತ್ತು ಅಡವಿಟ್ಟ ತಾರೀಕು	ಸಾಲಪಡಕೊಂಡವರ ಹೆಸರು ಮತ್ತು ವಿಳಾಸ	ಅಸಲು ಮೊಬಲಗು
1.	1012-37 10—10—37	ಯಂ. ಅಚ್ಯುತ s. o. ದುರ್ಗಣ್ಣ, ಕೊಡಿಯಾಲಬೈಲು, ಲಾಲ್‌ಬಾಗ್ ರೋಡ್, ಮಂಗಳೂರು	ರೂ. 9-0-0
2.	94-38 21—1—38	ಸುಬ್ಬಶೆಟ್ಟಿ s. o. ಕೇಸಣ್ಣಶೆಟ್ಟಿ ಕೊಡಿಯಾಲಬೈಲು, ದೇವುಶೆಟ್ರ ಮನೆಯ ಬಳಿ, ಮಂಗಳೂರು.	,, 7-0-0
3.	250-38 21—2—38	ವೆಂಕಪ್ಪ, s. o. ಬಸಣ್ಣ, ಕಲ್ಲಿನ ಕೆಲಸ, ಉರ್ವ ಇಗರ್ಜಿಯ ಹಿಂದುಗಡೆ ಮಂಗಳೂರು	,, 6-0-0
4.	257-38 23—2—38	ವಿ ಶಿವಣ್ಣ, ಪೋಸ್ಟ್ ಮೇನ್, H. O ಮಂಗಳೂರು	,, 22-0-0
5.	356-38 13—3—38	ಸುಬ್ಬಶೆಟ್ಟಿ, s. o ಕೇಸಣ್ಣ ಶೆಟ್ಟಿ, ಕೊಡಿಯಾಲಬೈಲು, ಮಂಗಳೂರು	,, 6-0 0
6.	381-38 18—3—38	ಸೀಂತ್ರ, s o ತನಿಯ, ಉರ್ವ ಮಾರಿಗುಡಿ ಎದುರು, ಮುನ್ಸಿಪಾಲ್ ಕೆಲಸ, ಮಂಗಳೂರು	,, 6 0 0
7	384 38 19—3—38	ಚೀಯು ಪೂಜಾರಿ n. o ಅಂಗರ ಪೂಜಾರಿ, ಮುಚ್ಚೂರು ಗ್ರಾಮ, ಹೊಸಮನೆ, P. o ಮಿಜಾರ್	,, 5 0-0
8.	413-38 28—3—38	ಕೊರಗಸೆಟ್ಟಿ, n o. ತ್ಯಾಂಪ ಮಾರ್ಲ, ಮಣ್ಣಗುಡ್ಡೆ, ಕೊಡಿಯಾಲಬೈಲು, ಹೊಸಮಾರ್ಗ ಲಚ್ಚಿಲು, ಮಂಗಳೂರು	,, 5 0 0
9	623 38 8—5—38	ಕೊರಗ ಶೆಟ್ಟಿಗಾರ s o ರಾಮು ಶೆಟ್ಟಿಗಾರ, ಕೊಡಿಯಾಲಬೈಲು ಮಂಗಳೂರು	,, 4-0 0
10.	640 38 6—5—38	ತ್ಯಾಂಪ ಮ್ಯೊಲಿ, n o ಅಪ್ಪಣ್ಣ ಮ್ಯೊಲಿ, ಮಣ್ಣಗುಡ್ಡೆ ಮಂಗಳೂರು	,, 6 0 0
11	643 38 6—5—38	ರಾಮಯ್ಯ, s o ಐತಪ್ಪ, ಕೊಡಿಯಾಲಬೈಲು, ಮಂಗಳೂರು	,, 2 0 0
12	863 38 14—6—38	ಕೊರಗಪ್ಪ s o ಐತ್ತಪ್ಪ ಕೊಡಿಯಾಲಬೈಲು P O ಬಿಜೈ	,, 3 0 0
13	865 38 14—6—38	ಮಂಜುನಾಥ, ಬೋರ್ಡ್ ಶಾಲಾ ಎದುರು, ಉಳ್ಳಾಲ, P. O ಉಳ್ಳಾಲ	, 17 0 0
14	882,38 18—6—38	ತೋಮು, s. o ಐತ, ವಯರ್‌ಲೆಸ್ ಮೈದಾನ್ ಮಂಗಳೂರು	, 5-0 0
15	916 38 23—6—38	ರಾಮುದಾಸ s o ರಾಮುದಾಸ ಮಣ್ಣಗುಡ್ಡೆ, ಶಾರದಾ ದಾಸರ ಮನೆಯಲ್ಲಿರುವುದು, ಮಂಗಳೂರು	, 2 0 0
16	920 38 23—6—38	ಕುಂಞಶೆಟ್ಟಿ s o ಸುಬ್ಬಶೆಟ್ಟಿ ಕೊಡಿಯಾಲಬೈಲು ಮಂಗಳೂರು	, 4 0 0
17	945 38 29—6—38	P ಗೋಪಾಲಕೃಷ್ಣರಾವ್, s o ನರಸಿಂಗರಾವ್ ಸೋಜಾವರ ನಾಗಣೆ, ಕೆಂಜಾರು ಗ್ರಾಮ P O ಬಜಪೆ	, 5 0 0
18.	1066 38 11—7—38	ಬೈರಪೂಜಾರಿ n o ತ್ಯಾಂಪ್ರಪೂಜಾರಿ ಕೊಡಿಯಾಲಬೈಲು ಲಾಲ್‌ಬಾಗ್ ರೋಡ್, P. O ಕೊಡಿಯಾಲ್‌ಬೈಲು	, 4 0-0
19	1015-38 11—7—38	ಕೃಷ್ಣ ಶೆಟ್ಟಿಗಾರ s o ಕೋರ ಶೆಟ್ಟಿಗಾರ ಒಕ್ಕೆ, ಹೊಸ ಮಾರ್ಗ, ಮಣ್ಣಗುಡ್ಡೆ, ಮಂಗಳೂರು	,, 2 0-0
20.	1062-38 18—7—38	ಇದಿನಬ್ಯಾರಿ s o. ತವುಲೆಬ್ಯಾರಿ, ಕಡೆಮನೆ, ತೋಕೂರು ಗ್ರಾಮ P O. ಬಜಪೆ	,, 5 0 0
21	1107 38 25—7—38	ದೂಮುಪೂಜಾರಿ s o ಐತಪೂಜಾರಿ, ಕೋಡಿಕಲ್, ಬೋಳೂರು, P O ಉರ್ವ	, 7 0 0
22	1182 38 8—8—38	ಉಗ್ಗಪ್ಪು ಹೆಂಗ್ಸು, D o ಚೆನ್ನಯ ಪೂಜಾರಿ, ಮಾಸಕೀಟ್ ಕಂಪೆನಿಬಳಿ, P O ಉರ್ವ ಮಂಗಳೂರು	, 5-0-0
23	1291-38 25—8—38	ಶೇಕಬ್ಯಾರಿ, s o ಸಾಯದ್‌ಬ್ಯಾರಿ, ಜವುಳಿ ವ್ಯಾಪಾರಿ, ತೋಕೂರು ಗ್ರಾಮ, P O. ಬಜಪೆ.	,, 3-0-0
24	1346 38 6—9—38	ಬಿ ಶೀನ n. o ಗುರುವಪ್ಪಪೂಜಾರಿ, ಉರ್ವ ಮಾರಿಗುಡಿ ಬಳಿ, ಮಂಗಳೂರು.	,, 2 0-0
25.	1369-38 8—9—38	ಸೋಮಪ್ಪಶೆಟ್ಟಿ n. o. ಲಿಂಗು ಭಂಡಾರಿ, ಬೈಲು, ಅಡ್ಯಪಾಡಿ ಗ್ರಾಮ, P. O. ಗುರುಪುರ	,, 2-0-0
26.	1387-38 12—9—38	ಬಿ. ಸೇಸಪ್ಪ n. o ಬಾಬು, ಕ್ಲಾರ್ಕ, ಕುದ್ರೋಳಿ, ಮಂಗಳೂರು	,, 7 0-0
27.	1426-38 17—9—38	ವೆಂಕಪ್ಪ n. o ಉಮ್ಮತಿ, ಕೊಳೂರು, ಪಂಜಿಮೊಗ್ರು ಗ್ರಾಮ, P O. ಕೂಳೂರು	,, 2-0-0
28.	1555-38 13—10—38	ಎಮ್. ಸಂಜೀವಮಲ್ಯ, s. o. ಕೇಶಪ್ಪಮಲ್ಯ, ಸೆಲೂನ್, ಮಣ್ಣಗುಡ್ಡೆ, ಮಂಗಳೂರು.	,, 8 0-0
29	1833-38 17—12—38	ಚಾಡಪ್ಪ ಶೆಟ್ಟಿ s. o ಮುದ್ದಯ್ಯ ಶೆಟ್ಟಿ, ಲಾಲ್‌ಬಾಗ್ ರೋಡ್, ಕೊಡಿಯಾಲಬೈಲು, ಮಂಗಳೂರು.	,, 3-0-0
30.	1845-38 20—12—38	ಮಾಧವರಾವ್, s. o. ಸೀತಾರಾಮ ಭಟ್ಟ, ಮಣ್ಣಗುಡ್ಡೆ, ಮಂಗಳೂರು.	,, 5-0-0
31.	79-39 18—1—39	ಕೆ. ಗಣಪತಿ s. o. ಐತಪ್ಪ, ಹಿಲ್ಡ್ ಕೆಂಟ್ ರೋಡ್, ಮಂಗಳೂರು.	,, 3-0-0

ಆಫೀಸು—ಪೆಂಟ್ಲೆಂಡ್ ಪೇಟೆ,
ಮಂಗಳೂರು.
30—9—1939

A Vaikunta Prabhu
ಮೆನೆಜಿಂಗ್ ಡೈರೆಕ್ಟರ್,
ದಿ. ಅತ್ತೂರು ಮತ್ತು ಜವಾಹರ
ಬೇಂಕ್ ಲಿಮಿಟೆಡ್.
ಮಂಗಳೂರು

ನಿಮ್ಮ ಮನೆಯಲ್ಲಿ ಜ್ಯಾಂಬಕು ಅವಶ್ಯವಿದೆ



ಮಹತ್ತಾದ ಕ್ರಿಮಿನಾಶಕ ಮುಲಾಮು

ಕಜ್ಜಿ, ಕುರು, ಗಾಯ, ವ್ರಣ ಮೊದಲಾದ ಬಾಧೆಗಳಿಂದ ವಿಮುಕ್ತರಾಗಬೇಕಾದರೆ ಅಂಥ ಬಾಧೆಯುಳ್ಳ ಭಾಗದ ಮೇಲೆ ಪ್ರತೀ ರಾತ್ರೆಯೂ ಜ್ಯಾಂಬಕನ್ನು ಸವರಿಸಿರಿ ಇದರಲ್ಲಿರುವ ಉತ್ತಮವಾದ ಗಿಡಮೂಲಿಕೆಗಳ ಎಣ್ಣೆಯು ಆಳವಾಗಿ ನರನಾಡಿಗಳನ್ನು ಪ್ರವೇಶಿಸಿ ನೋವನ್ನು ಕಡಿಮೆಮಾಡಿ, ಬಾತುಹೋಗದಂತೆ ನೋಡುತ್ತದೆ ಮತ್ತು ರಸಿಗೆಯು ಬಾರದಂತೆ ಮಾಡುತ್ತದೆ. ಜ್ಯಾಂಬಕು ವಿಷಕ್ರಿಮಿಗಳನ್ನು ನಾಶಮಾಡಿ, ಚರ್ಮವನ್ನು ಆರೋಗ್ಯವಾಗಿರಿಸಿ ಒಂದೂ ಕಲೆಯುಳಿಯದಂತೆ ಗುಣಮಾಡುವುದು ಆದಕಾರಣ ಆರೋಗ್ಯಕರವಾದ ಮೈಚರ್ಮವು ಬೇಕಾದರೆ ಜ್ಯಾಂಬಕನ್ನುಪಯೋಗಿಸಿರಿ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ದೊರಕುತ್ತದೆ ಬೆಲೆ ರೂಪಾಯಿ 1—0—0 ಮತ್ತು 2—4—0

ಏಜಂಟ್ಸ್—ಮೆಸರ್ಸ್ ರಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದರಾಸು.
ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ.

ZAM-BUK
ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಪಂಡಿತ ಡಿ. ಗೋಪಾಲಾಚಾರುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು
ಆಯುರ್ವೇದಾಶ್ರಮ :: ::
ಮದರಾಸು

ಸ್ಟಾಕಿಸ್ಟರು
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯಿ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಇದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬಯಿ ಸರ್ಟಿಫಿಕೇಟು ಡಾ. ವೈದ್ಯ ಎಲ್. ಸಿ. ಬಿ. ಎಸ್. ಕೆಳವೀಮಾಡಿದ್ದು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ದಪ್ಪಿಯ ಕ್ರಯರೂ. ೪—೦—೦
ವಿ. ಪಿ. ಅ

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ವಿರಜ, (S.M C

ಪಪ್ಪಾಯಿ ವ್ಯವಸಾಯವು ಲಾಭಕರವಾದದ್ದು

ಅದರ ಸತ್ವದ ಔಷಧಿ ಗುಣಗಳು!

ಪಪ್ಪಾಯಿ ಹಣ್ಣು (ಬಪ್ಪಂಗಾಯಿ)

ಪಪ್ಪಾಯಿಹಣ್ಣು (ಬಪ್ಪಂಗಾಯಿ) ನಮ್ಮ ದೇಶದಲ್ಲಿ ಧಾರಾಳವಾಗಿ ಬೆಳೆಯುತ್ತದೆ. ಅದು ಆಹಾರವಾಗಿಯೂ ಮದ್ದಾಗಿಯೂ ನಮಗೆ ಅತ್ಯಂತ ಉಪಯುಕ್ತವಾಗಿದೆಯೆಂಬ ವಿಷಯ ಮಾತ್ರ ಹೆಚ್ಚು ಜನರಿಗೆ ತಿಳಿದಿಲ್ಲ. ಆದರೆ ಇತ್ತೀಚೆಗೆ ಮಾಡಿದ ಸಂಶೋಧನೆಯಿಂದ, ಇದು ಅತ್ಯುತ್ತಮ ಆಹಾರ ಮತ್ತು ಔಷಧಿಯಾಗಿ ಎಷ್ಟರಮಟ್ಟಿಗೆ ಉಪಯುಕ್ತವಾಗುವುದು ಎಂಬ ವಿಷಯ ಕಂಡುಹಿಡಿಯಲಾಗಿದೆ.

ಪಪ್ಪಾಯಿಯಲ್ಲಿ ದೊರಕುವ ಪೆಪಿನ್ ಎಂಬ ಪುಡಿಯು ಬಹಳ ಆರೋಗ್ಯಕರವಾದ ಔಷಧಿಯಾಗಿದೆ. ಸಿಲೋನಿನಲ್ಲಿ ಇಂದು ಇಂತಹ ಪುಡಿಯನ್ನು ತೆಗೆದು ಅವರು ವಿದೇಶಗಳಿಗೆ ಕಳುಹಿಸಿ ರಾಷ್ಟ್ರೀಯ ಕೈಗಾರಿಕೆಯಾಗಿ ಮಾಡಿಕೊಂಡಿದ್ದಾರೆ. ಯೂರೋಪಿನಲ್ಲಿಯೂ ಇದಕ್ಕೆ ಬಹಳ ಗಿರಾಕಿ ಇರುವುದರಿಂದ, ಉತ್ಪತ್ತಿಗಿಂತ ಹೆಚ್ಚು ಇಂದು ಅದಕ್ಕೆ ಗಿರಾಕಿಯಿರುತ್ತದೆ. ನಮ್ಮ ದೇಶದಲ್ಲಿಯೂ ನಾವು ಪಪ್ಪಾಯಿಯಿಂದ ಪೆಪಿನ್ ಪೌಡರನ್ನು ಬಹಳ ಸುಲಭವಾಗಿ ತೆಗೆಯಲು ಸಾಧ್ಯವು ಇದೆ. ನಮ್ಮಲ್ಲಿಯೂ ಪಪ್ಪಾಯಿಹಣ್ಣು ಧಾರಾಳವಾಗಿ ಬೆಳೆಯುತ್ತದೆ. ಗ್ರಾಮ ಕೈಗಾರಿಕೆಗಳಲ್ಲಿ ಇದು ಒಂದಾಗಿ ಇನ್ನು ಮುಂದೆ ಗ್ರಾಮಸ್ಥರ ಜೀವನದಲ್ಲಿ ಬಹಳ ಸಹಕಾರಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ಜನರು ಈ ಕಡೆಗೆ ಅವಶ್ಯ ಗಮನಕೊಡಬೇಕಾಗಿದೆ.

ರಸತೆಗೆಯುವ ವಿಧಾನ

ಪಪ್ಪಾಯಿಯು ಹಣ್ಣು ಆಗುವುದಕ್ಕಿಂತ ಮೊದಲು ಅದರ ಮೇಲೆ ಗಾಯ ಮಾಡುವುದರಿಂದ ಬಿಳಿಯ ರಸವು ಅದರಿಂದ ಜಿನುಗುವುದು. ಈ ರಸವನ್ನು ಸಂಗ್ರಹಿಸಿದಾಗ ಅದು ಮಂದವಾಗುತ್ತದೆ. ಆ ಮೇಲೆ ಒಣಗಿಸಿ ಪೌಡರ್ ಮಾಡಿ, ಮಾರಾಟ ಮಾಡಬಹುದಾಗಿದೆ.

ಪಪ್ಪಾಯಿ ಕಾಯಿಯನ್ನು ಕಬ್ಬಿಣ ಅಥವಾ ಸಾಮಾನ್ಯ ಇತರ ಲೋಹಗಳಿಂದಾಗಲಿ ಗಾಯಗೊಳಿಸಿ ರಸ ತೆಗೆಯಬಾರದು. ಅಥವಾ ಲೋಹಗಳ ಪಾತ್ರಗಳಲ್ಲಿಯಾಗಲಿ ಆ ದ್ರವವನ್ನು ಇಡಬಾರದು. ಕಬ್ಬಿಣ ಅಥವಾ ಇನ್ನಿತರ ಲೋಹಗಳ ಸಂಸ್ಪರ್ಶದಿಂದ ಈ ದ್ರವವು ಕೆಟ್ಟುಹೋಗುವುದು. ಹಾಗಾಗಿ ಯಾವುದಾದರೂ ಹರಿತ ತುದಿಯ ವಸ್ತುವಿನಿಂದ ಎಲುಬಿನ ತುದಿಯಿಂದಾಗಲಿ ಗ್ಲಾಸಿನ ತುಂಡಿನಿಂದಾಗಲಿ ಅದರ ರಸವನ್ನು ತೆಗೆಯಬೇಕಾಗಿದೆ.

ಈ ರಸವನ್ನು ಲೋಹವಲ್ಲದ ಶುದ್ಧ ಪಾತ್ರೆಯಲ್ಲಿ ಸಂಗ್ರಹಿಸಬೇಕು.

ಪಪ್ಪಾಯಿಯ ಕಾಯಿಗೆ ಗೆರೆಹಾಕಿ, ಅದರ ರಸವನ್ನು ಸಂಗ್ರಹಿಸುತ್ತಾನೆ.

ಒಣಗಿಸುವುದು

ಸಾಧ್ಯವಾದಷ್ಟು ಬೇಗನೇ ದ್ರವವನ್ನು ಒಣಗಿಸಬೇಕು. ಸೂರ್ಯನ ಬೆಳಕಿನಲ್ಲಿ ಒಣಗಿಸಬಹುದು. ಹೀಗೆ ಒಣಗಿಸಿದ ಮೇಲೆ ಗಟ್ಟಿಯಾಗುವ ಅದನ್ನು ಪುಡಿ ಮಾಡಬೇಕು. ಆ ಮೇಲೆ ಪಾತ್ರೆಗಳಲ್ಲಿ ತುಂಬಿಸಿ ಮಾರಾಟ ಮಾಡಬಹುದು.

ಇದು ಎಷ್ಟು ಸುಲಭವಾದ ಕೆಲಸ! ಎಲ್ಲಾ ಹಳ್ಳಿಗಳಲ್ಲಿಯೂ ಇದನ್ನು ಮಾಡಬಹುದು. ಪಪ್ಪಾಯಿ ಮರಗಳನ್ನು, ಅದರ ಬೀಜ ತಂದು ನಮ್ಮ ದೇಶದಲ್ಲಿ ಎಷ್ಟು ಬೇಕಾದರೂ ಹಣ ಬೆಳೆಸಬಹುದು. ಬೀಜ ಹಾಕಿದ ಒಂದೇ ವರ್ಷದಲ್ಲಿ ಫಲವಾಗುತ್ತದೆ! ಕಡಿಮೆ ಯೆಂದರೆ ನಾಲ್ಕು ವರ್ಷಗಳ ವರೆಗೆ ಇದು ಫಲಬಿಡುತ್ತದೆ. ವರ್ಷ ಒಂದಕ್ಕೆ ಒಂದು ಮರವು ಸಾಧಾರಣ ನೂರು ಹಣ್ಣುಗಳನ್ನು ಬೆಳೆಸುತ್ತದೆ!

ಉತ್ಪತ್ತಿ — ಲಾಭ

ಪೆಪಿನಿಗೆ ಪೌಂಡಿಗೆ ಆರು ರೂಪಾಯಿಗಳ ಕ್ರಯವಿದೆ. ಹತ್ತು ಎಕ್ಕರೆಯಲ್ಲಿ ಬೆಳೆಸಿದ, ಪಪ್ಪಾಯಿ ಮರದಿಂದ ಪಡೆದ ಪೆಪಿನ್ ಪುಡಿಯಿಂದ 5,000 ರೂಪಾಯಿಗಳಷ್ಟು ಖರ್ಚು ಕಳೆದು ಲಾಭ ಒದಗುವುದೆಂದು ಗೊತ್ತಾಗಿದೆ. ಸೀಲೋನ್ ದೇಶವು ವರ್ಷ ಒಂದರ ಆರೇಳು ಲಕ್ಷ ರೂಪಾಯಿಗಳಷ್ಟು ಇದರ ವ್ಯಾಪಾರವು ಮಾಡುವುದು.

ಗ್ರಾಮ-ಕೈಗಾರಿಕೆಗಳನ್ನು ಅಭಿವೃದ್ಧಿಸಲು ಇಚ್ಛೆಪಡುವವರು ಈ ಕಡೆಗೆ ಗಮನಕೊಡುವುದು ಅವಶ್ಯ.

ಹೃದ್ರೋಗ ಉಂಟೇ ಎಂದು ಪರೀಕ್ಷಿಸುವ ವಿಧಾನ

ವಿಶ್ರಾಂತಿಯಿಂದ ಕುಳಿತುಕೊಳ್ಳಬೇಕು. ಬಾಯಿಯನ್ನು ಮುಚ್ಚಬೇಕು. ದೀರ್ಘ ಶ್ವಾಸವನ್ನು ಒಳಗೆ ತೆಗೆದುಕೊಳ್ಳಬೇಕು. ಶ್ವಾಸವನ್ನು ತೆಕ್ಕೊಂಡ ಮೇಲೆ, ಮೂಗು ಮುಚ್ಚಿಕೊಂಡು, ಎಷ್ಟು ಸಮಯಗಳ ವರೆಗೆ ಸಾಧ್ಯವುಂಟೋ ಅಷ್ಟು ಕಾಲ ಶ್ವಾಸವನ್ನು ಹೊರಬಿಡದೆ ಶ್ವಾಸ ಬಂಧಿಸಿ ಕುಳಿತುಕೊಳ್ಳಬೇಕು.

ಹೀಗೆ ೩೫ ಸೆಕುಂಡು ವರೆಗೆ ಅಥವಾ ಅದಕ್ಕಿಂತ ಹೆಚ್ಚು ಸಮಯ ಶ್ವಾಸವನ್ನು ಕಟ್ಟಿ ನಿಲ್ಲಲು ಸಾಧ್ಯವಾದರೆ ಆತನು ಆರೋಗ್ಯವಂತನಾಗಿರುವನು. ೩೫ ಸೆಕುಂಡುಗಳ ಒಳಗೆ ಅವರು ಶ್ವಾಸ ತಡೆಯಬಲ್ಲರಾದರೆ ಪಥ್ಯದಲ್ಲಿರಬೇಕು. ೧೫ ಸೆಕೆಂಡುಗಳಿಗಿಂತಲೂ ಕಡಿಮೆಯಾಗಿದ್ದರೆ ಕೂಡಲೇ ಡಾಕ್ಟರರಲ್ಲಿ ಹೋಗಿ ಪರೀಕ್ಷೆ ಮಾಡಿಸಬೇಕು.

ಚಾ, ಕಾಫಿ, ಹೊಗೆಸೊಪ್ಪುಗಳ ಸೇವನೆಗಳಿಂದ ಜನರ ಹೃದಯ ದೌರ್ಬಲ್ಯ ಹೆಚ್ಚುತ್ತಿದೆ! ಅಂತಹವರು ಜಾಗ್ರತೆ ತೆಕ್ಕೊಳ್ಳಬೇಕಾಗಿದೆ.

Test of Sebrasez in the American Journal of Surgery K. M. S.

ದೇಹದಲ್ಲಿ ದಪ್ಪವಾಗಿ ಬೆಳೆದು ರಕ್ತದ ಒತ್ತಾಟುವಿಕೆಯು ಹೆಚ್ಚಿದ್ದವರು ಕ್ರುಶನ್ ಲವಣವನ್ನು ಉಪಯೋಗಿಸಬೇಕು.

೨೦ ಪೌಂಡುಗಳಿಂದ ದೇಹದಲ್ಲಿನ ರಕ್ತದ ಒತ್ತಾಟುವಿಕೆಯನ್ನು ಓರ್ವ ಸ್ತ್ರೀಯು ಹೇಗೆ ಕಡಿಮೆ ಮಾಡಿದಳೆಂದು ಕೇಳಿರಿ.

ಮೈಯಲ್ಲಿ ದಪ್ಪ ಬೆಳೆದವರಲ್ಲಿ ರಕ್ತದ ಮಿತಿಮೀರಿನ ಒತ್ತಾಟುವಿಕೆಯು ಇರುವುದು. ರಕ್ತ ಒತ್ತಾಟುವಿಕೆಯು ನಮ್ಮ ದೇಹಪ್ರಗತಿಗೆ ಅಪಾಯಕರವು. ಮೈಯಲ್ಲಿರುವ ಹೆಚ್ಚಾದ ಕೊಬ್ಬು ಹೋಗಲಾಡಿಸದಲ್ಲಿ ಈ ಅಪಾಯಕರ ರಕ್ತ ಒತ್ತಾಟುವಿಕೆಯಿಂದ ಪಾರಾಗಬಹುದು.

ಮೇಲೆ ಹೇಳಿದ ಸ್ತ್ರೀಯ ವೃತ್ತಾಂತವನ್ನು ಕೇಳಿರಿ.

"ನಾನು ಮೈಯಲ್ಲಿ ದಪ್ಪ ಬೆಳೆದಿದ್ದುದರಿಂದ ರಕ್ತ ಒತ್ತಾಟುವಿಕೆಯಿಂದಲೂ, ಬೆನ್ನು ನೋವಿನಿಂದಲೂ ನರಳುತಿದ್ದೆನು; ನರಳಿ ಬೆಂಡಾಗುತ್ತಿದ್ದೆನು.

"ನನ್ನ ಮೈಭಾರವು ೨೦ ಪೌಂಡುಗಳಿಗೆ ಅಧಿಕವಾಗಿತ್ತು. ಹೀಗಿದ್ದುದರಿಂದ ಕ್ರುಶನ್ ಲವಣವನ್ನು ಸೇವಿಸಿದೆನು. ಬರೇ ಒಂದು ವಾರದಲ್ಲಿ ನನ್ನ ಮೈಯಲ್ಲಿದ್ದ ಅತ್ಯಧಿಕ ಕೊಬ್ಬು ಅರ್ಧ ಅಂಶದಷ್ಟು ಇಳಿಯಿತು. ಹಾಗೆಯೇ ಕೆಲವೇ ವಾರಗಳಲ್ಲಿ ಮೈಯಲ್ಲಿದ್ದ ಕೊಬ್ಬೆಲ್ಲವೂ ಸಂಪೂರ್ಣವಾಗಿ ಇಳಿಯಿತು. ಬೆನ್ನು ನೋವು, ಉದರವೇದನೆ ಮುಂತಾದುವೆಲ್ಲವೂ ನಿಂತುಹೋಯಿತು. ಈಗ ಚುರುಕಾಗಿ ನಡೆಯಬಲ್ಲೆನು. ನನ್ನ ಆರೋಗ್ಯವು ಅಭಿವೃದ್ಧಿಹೊಂದಿದೆ.

"ಕ್ರುಶನ್ ಲವಣಕ್ಕೆ ನನ್ನ ಕೃತಜ್ಞತೆಯು ಸಲ್ಲಬೇಕಾದುದೇ. ಕ್ರುಶನ್ ಲವಣವನ್ನು ನಾನು ಎಂದೆಂದಿಗೂ ಪ್ರಶಂಸಿಸುವೆನು."

ಮಿಸೆಸ್. ಡಿ. ಡಬ್ಳ್ಯು

ದಿವಸಾಗಲು ಬೆಳಿಗ್ಗೆ ಒಂದು ಚಮಚ ಕ್ರುಶನ್ ಲವಣವನ್ನು ಬಿಸಿ ನೀರಲ್ಲಿ ಸೇವಿಸಿದರೆ ಮೈಯಲ್ಲಿರುವ ಅತ್ಯಧಿಕ ಕೊಬ್ಬನ್ನು ಹೋಗಲಾಡಿಸುವುದು. ಸುಲಭವೂ, ಅಲ್ಪ ವ್ಯಯಕವೂ ಆಗಿರುವುದು.



ದೇಹಪ್ರಗತಿಯು ನೆಟ್ಟಗಾಗಬೇಕಾದಲ್ಲಿ ಪ್ರತಿಯೊರ್ವನು ಕ್ರುಶನ್ ಲವಣವನ್ನು ಸೇವಿಸಿದರಾಯಿತು. ಭೂಲೋಕದ ಮಿಲಿಯಾವಧಿ ಜನರು ಅಜೀರ್ಣ, ವಾಂತಿಭೇದಿ, ತಲೆನೋವು, ಸೋಮಾರಿತನ, ಉದರವೇದನೆ ಮುಂತಾದುವು ತೊಲಗಲು ಕ್ರುಶನ್ ಲವಣವು ನಿಮ್ಮ ದೇಹದೊಳಗಿನ ಅಂಗಾಂಗಗಳ ಸರಿನಡತೆಯನ್ನು ಕ್ರಮದಲ್ಲಿಡುವುದು.

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಶಾಪುಗಳಲ್ಲಿಯೂ ಸಿಗುವುದು.

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು. ಬ್ರೇಂಚ್: ಸೆಂಟ್ರಲ್ ಪೇಟೆ.

ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100.

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½%

" 6 ತಿಂಗಳಿಗೆ 4% " 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು:—

ಅತ್ತೂರು ವೈಕುಂಠಪ್ರಭು, ಮೇನೇಜಿಂಗ್ ಡೈರೆಕ್ಟರ್.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತುಲಾಕಾವೇರಿ ಸಂಕ್ರಮಣ
ತಾರೀಕು ೧೭-೧೦-೧೯೩೯

ತಾರೀಕು 22-10-'39ರಲ್ಲು

ಮೈಸೂರು ದಸರಾ ಮಹೋತ್ಸವದ ಸಮಾರಂಭ
ತಾ. ೧೩-೧೦-'೩೯ರಿಂದ ೨೨-೧೦-'೩೯ರ ವರೆಗೆ

ಮೈಸೂರು ಶ್ರೀಮನ್ಮಹಾರಾಜರವರ ಜಂಬೂ ಸವಾರಿ ಮೆರವಣಿಗೆಯ ಚಿತ್ತಾಕರ್ಷಣೀಯ ನೋಟ, ಇವೆಲ್ಲಕ್ಕೂ ಒಂದೇ ಬಾರಿ ಅತ್ಯಲ್ಪ ಖರ್ಚಿನಿಂದ ನೋಡಲು ಬಂದೊದಗಿರುವ ಸುಸಂದರ್ಭವನ್ನು ಕಳಕೊಳ್ಳದಿರಿ—

ತಾರೀಕು ೧೭—೧೦—೧೯೩೯ರಲ್ಲು ಭಾಗಮಂಡಲದ ಸಮೀಪದಲ್ಲಿರುವ ಪುಣ್ಯಪ್ರದವಾದ ತಲಕಾವೇರಿ ತೀರ್ಥದಲ್ಲಿ, ಮುಹೂರ್ತಕಾಲದಲ್ಲಿ ಮಿಂದು, ಪುಣ್ಯಾರ್ಜನೆಯನ್ನು ಮಾಡಿ ಅಲ್ಲಿಂದ ಹಿಂತಿರುಗಿ ಮಡಿಕೇರಿಗೆ ಬಂದು, ಮಡಿಕೇರಿಯಿಂದ ಮೈಸೂರಿಗೆ ಹೋಗಿ ಅಲ್ಲಿ ಅತೀ ವಿಜೃಂಭಣೆಯಿಂದ ನಡೆಯುವ ದಸರಾ ಮಹೋತ್ಸವವನ್ನು ನೋಡಿ ನೇತ್ರಾನಂದವನ್ನು ಹೊಂದುವರೆ ಇದು ಅತ್ಯುತ್ತಮವಾದ ಸಂದರ್ಭ.

ವಿದ್ಯುದ್ದೀಪಗಳಿಂದಲಂಕೃತವಾದ ಅರಮನೆಯ ನೋಟ-ಚಾಮುಂಡಿ ಬೆಟ್ಟದ ಸೊಬಗು-ಶ್ರೀ ಚಾಮುಂಡೇಶ್ವರಿಯ ದರ್ಶನಲಾಭ-ಕನ್ನಂಬಾಡಿ ಕಟ್ಟೆಯ ನಿರ್ಮಾಣ ಚತುರತೆ-ವಿದ್ಯುದ್ದೀಪಗಳಿಂದ ಶೋಭಿಸುವ ಕಾರಂಜಿಗಳ ದೃಶ್ಯ-ಶ್ರೀ ರಂಗಸ್ವಾಮಿಯ ದರ್ಶನ-ಟಿಪ್ಪುವಿನ ಕೋಟೆಯ ನಿರ್ಮಾಣ ಚತುರತೆ-ಶ್ರೀ ನಂಜುಂಡೇಶ್ವರನ ದರ್ಶನ-ಶಿವಸಮುದ್ರದ ಸೊಬಗು-ಸುವ್ಯವಸ್ಥಿತ ಅಶ್ವಶಾಲೆ-ವಿವಿಧ ವಸ್ತು ಪ್ರದರ್ಶನಾಲಯದ ಪ್ರೇಕ್ಷಣೀಯ ನೋಟ-ಲಲಿತಮಹಾಲ ಅರಮನೆಯ ಬೆಡಗು-ಪ್ರಾಣಿ ಪ್ರದರ್ಶನಾಲಯದ ಸೊಬಗು-ಇವೆಲ್ಲವನ್ನು ಒಂದೇ ಬಾರಿ ಅತ್ಯಲ್ಪ ಖರ್ಚಿನಿಂದ ನೋಡಲು ಇದೇ ಅತ್ಯುತ್ತಮ ಸಂದರ್ಭ—

ಹೆಚ್ಚಿನ ಮಾಹಿತಿಬಗ್ಗೆ-ಈ ಕೆಳಗಿನ ವಿಳಾಸಕ್ಕೆ ಪತ್ರಮುಖಾಂತರವಾಗಲಿ, ಅಥವಾ ಸ್ವತಹ ಬಂದು ತಿಳಕೊಳ್ಳಬಹುದು.

ಪ್ರಯಾಣಿಕರಿಗೆ ಉಳಕೊಳ್ಳಲು ಮಡಿಕೇರಿ ಮತ್ತು ಮೈಸೂರಲ್ಲಿ ನಮ್ಮ ವಿಶ್ರಾಂತಿ ಗ್ರಹಗಳಿವೆ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ವಕ್ರವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS. CALCUTTA. MADRAS. BOMBAY.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಯಂಟೈನ್ ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟೆ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ.
P. O. Peridepi (ನೆಲ್ಲೂರು ಜಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—14—0	—
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	5—4—0	—
,, ದುಯಂ ,, ,,	5—2—0	—
,, ಅವ್ವಲ್ ಸುಗ್ಗಿ ,,	5—2—0	—
,, ದುಯಂ ,, ,,	4—14—0	5—0—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	30—0—0	37—8—0
,, ಸಿಪ್ಪೆ ಇದ್ದದು ,,	32—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	55—0—0	—
,, ದಿಲ್‌ಪಸಂದ ,,	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—12—0	8—12—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	2—8—0	8—8—0
ಗೇರುಬೀಜ ಮುಡಿಗೆ	8—4—0	8—4—0
ಕಬ್ಬಿನ ಬೆಲ್ಲ ಖಂಡಿಗೆ	55—0—0	60—0—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	16—0—0	18—0—0

Date 6—10—1939

Regd. No. M 3406

ಸ್ವದೇಶಾಭಿಮಾನಿ

ಪು ೩೩] ತಾರೀಖು 6—10—1939 [ಸಂಚಿಕೆ 40

YOUR AMBITION TO BUILD UP A BRIGHT FUTURE IN YOUR RETIRED LIFE,
YOUR DESIRE TO EDUCATE YOUR CHILDREN SO THAT THEY MAY STAND ON THEIR OWN LEGS,
YOUR ANXIETY TO PROVIDE YOUR DEAR WIFE AND CHILDREN WITH A MINIMUM MONTHLY ALLOWANCE,
YOUR MORAL LIABILITY TO PROVIDE FOR THE MARRIGE OF YOUR DAUGHTERS,

may all be only a dream if you do not avail of modern scientific Life Insurance Schemes, which will satisfy your Ambition, Desire, Anxiety and Moral Liabilty and make the whole thing a reality by small contribution out of your own Monthly Savings towards the Payment of Premiums

THE BOMBAY LIEF ASSURANCE CO., LIMITED

To Insure or to Represent, pleese consult

MESSRS. KOCHIKAR BROTHERS LTD.,

Madras Branch Secretaries,
Bombay Life Building,
Gandhi Nagar, UDIPI.

OR ANY OF THEIR FOLLOWING OFFICES,

Puthiyara, Calicut.
Car Street, Mangalore.
Visweswarapuram Circle, Bangalore City
Post Box No. 337 Mount Road Madras.
Gautam Nivas, Charni Road, Girgaum, Bombay No. 4.
Central Station Road, Trivandrum

MAKE LIFE WORTH-LIVING!

Indigestion – Insomnia – Dry Cough— Nervousness – Weak Heart &c.,
these make you wiery of Life!

CONSULT US AND BUY YOUR LIFE'S HAPPINESS!

Oils – that cool the brain and induce sleep,
Lehas – that build-up your wasted system
Asavas = that regenerate your jaded nerves

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara.
(BRANCH—KUMTA, N. KANARA)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು - ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಶೇಷಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

KANNADA ILLUSTRATED WEEKLY

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

ಸಂಪುಟ ೩೩ 8 ತಾರೀಕು ೧೩—೧೦—೧೯೩೯ (13—10—1939) 8 ಸಂಚಿಕೆ ೪೧



ಲಂಡನ್ ನಗರದ ಒಂದು ದೃಶ್ಯ

ಸಚಿತ್ರ ವಾರಪತ್ರಿಕೆ

Date 6-10-1939 Regd. No: M 3406

ಸ್ವದೇಶಾಭಿಮಾನಿ

ಸಂಪುಟ-೩೫] ತಾರೀಖು 6-10-1939 [ಸಂಚಿಕೆ 40

YOUR AMBITION TO BUILD UP A BRIGHT
FUTURE IN YOUR RETIRED LIFE,
YOUR DESIRE TO EDUCATE YOUR CHILDREN SO
THAT THEY MAY STAND ON THEIR OWN LEGS,
YOUR ANXIETY TO PROVIDE YOUR DEAR WIFE AND
CHILDREN WITH A MINIMUM MONTHLY ALLOWANCE,
YOUR MORAL LIABILITY TO PROVIDE FOR THE
MARRIGE OF YOUR DAUGHTERS,

may all be only a dream if you do not avail of modern scientific Life Insurance Schemes, which will satisfy your Ambition, Desire, Anxiety and Moral Liabilty and make the whole thing a reality by small contribution out of your own Monthly Savings towards the Payment of Premium in

THE BOMBAY LIEF ASSURANCE CO., LIMITED

To Insure or to Represent, please consult

MESSRS. KOCHIKAR BROTHERS LTD,

Madras Branch Secretaries,
Bombay Life Building,
Gandhi Nagar, UDIPI.

OR ANY OF THEIR FOLLOWING OFFICES,

Puthiyara, Calicut.
Car Street, Mangalore.
Visweswarapuram Circle, Bangalore City
Post Box No 337 Mount Road, Madras.
Gautam Nivas, Charni Road, Girgaum, Bombay No. 4.
Central Station Road, Trivandrum.

MAKE LIFE WORTH-LIVING!

Indigestion – Insomnia – Dry Cough – Nervousness – Weak Heart &c.,
these make you wiery of Life!

GONSULT US AND BUY
YOUR LIFE'S HAPPINESS!

Oils – that cool the brain and induce sleep.
Lehas – that build-up your wasted system.
Asavas = that regenerate your jaded nerves

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S, Kanara.
(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ – ನಿದ್ರಾವಿಹೀನತೆ – ಒಣ ಕೆಮ್ಮು –
ನರಗಳ ಅಬಲತೆ – ದುರ್ಬಲ ಹೃತ್ಕೋಶ – ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು
ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮುಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

KANNADA ILLUSTRATED WEEKLY

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Est^d 1906

ಸಂಪುಟ ೩೩ — ತಾರೀಕು ೧೩—೧೦—೧೯೩೯ (13—10—1939) — ಸಂಚಿಕೆ ೪೧



ಲಂಡನ್ ನಗರದ ಒಂದು ದೃಶ್ಯ

ಸಚಿತ್ರ ವಾರಪತ್ರಿಕೆ

ದೇಶದ ಸಲುವಾಗಿ-ಸುಖಭೋಗಗಳಿಗೆ ತಿಲಾಂಜಲಿ ಕೊಟ್ಟ ಬ್ರಿಟನಿನ ಲಲನಾಮಣಿ

ದೇಶದ ಪರವಾಗಿ ತನ್ನ ಪಾಲಿನ ಕರ್ತವ್ಯವನ್ನು ಪೂರ್ಣಾಡಿ ಮುಗಿಸಬೇಕೆಂಬ ಪವಿತ್ರ ಭಾವನೆಯಿಂದ ಪ್ರೇರಿತಳಾಗಿ ಒಬ್ಬ ಲಲನಾಮಣಿಯು ಜರ್ಮನಿಯಲ್ಲಿ ಬ್ರಿಟಿಷ ಸರಕಾರದ ಗೂಢಚಾರ ಸೇನೆಯಲ್ಲಿ ಸೇರಿ, ಮತ್ತೆ ತನ್ನ ಪ್ರಾಣಗಳನ್ನೇ ನಾಜಿಗಳ ಕ್ರೋಧದ ಬಲಿವೇದಿಯ ಮೇಲೆ ಅರ್ಪಿಸಿದ ಒಂದು ದುಃಖಾಂತ ಇತಿಹಾಸವು 'ಪೀಪಲ್ಸ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅವಳು ಲಂಡನಿನ ಸಭ್ಯ ಸಮಾಜದ ಶ್ರೀಮಂತ ಸದಸ್ಯೆಯಾಗಿದ್ದಳು. ವಿವಾಹದ ನಿಶ್ಚಯವಾಗಿದ್ದು, ಲಂಡನಿನ ಒಂದು ಪ್ರಸಿದ್ಧ ಇಗರ್ಜಿಯಲ್ಲಿ ಆ ವಿವಾಹ ಸಮಾರಂಭವು ನೆರವೇರುವ ಮೊದಲೇ ವಿದೇಶವೊಂದರಲ್ಲಿ ಬ್ರಿಟಿಷರ ಪರವಾಗಿ ಗೂಢಚಾರ ವೃತ್ತಿಯನ್ನು ಅವಲಂಬಿಸುವ ತನ್ನಿಚ್ಛೆಯನ್ನು ಪೂರ್ತಿ ಮಾಡಿಕೊಳ್ಳುವ ಸಲುವಾಗಿ-ಕೆಲವೇ ದಿನಗಳ ಪೂರ್ವದಲ್ಲಿ-ಆ ಸಂಬಂಧವನ್ನು ಕಡಿದುಕೊಂಡಳು. ಈಗ ಅವಳ ಜೀವನ ಚರಿತ್ರವು ಬ್ರಿಟಿಷ ಗೂಢಚಾರರಿಗೆ ಸ್ಫೂರ್ತಿ ಉತ್ಸಾಹಗಳನ್ನು ತುಂಬಿಸುವ ಪುಣ್ಯದಾಯಕ ಪುರಾಣವಾಗಿ ಪರಿಣಮಿಸಿದೆ.

ಹಿಡಿಯಲು ಪ್ರಯತ್ನ

ಆ ಸುಂದರ ಲಲನಾಮಣಿಯನ್ನು ಕೈಸೆರೆ ಹಿಡಿಯಬೇಕೆಂದು ಜರ್ಮನ ಗೂಢಚಾರರು ಭಗೀರಥ ಪ್ರಯತ್ನ ಮಾಡಿದ್ದರು. ಆದರೆ ವಿಶ್ವಾಸಪಾತ್ರನೆಂದು ನಂಬಿದ್ದ ಒಬ್ಬ ದುರಾತ್ಮನು ಅವಳ ರಹಸ್ಯಮಯ ಚಲನವಲನಗಳನ್ನು ಅವರಿಗೆ ತಿಳಿಸಿ ವಿಶ್ವಾಸಘಾತ ಮಾಡಿದಲ್ಲವಾಗಿದ್ದರೆ ಅವಳನ್ನು ಹಿಡಿಯುವುದು ಜರ್ಮನ ಗೂಢಚಾರರಿಗೆ ಈಗಲೂ ಅಸಾಧ್ಯವಾಗುತ್ತಿತ್ತು. ಆದರೆ ಸಾಯುವ ಮೊದಲು ಜರ್ಮನಿಯ ಶಸ್ತ್ರಾಸ್ತ್ರಗಳ ತಯಾರಿಯ ಕೆಲವು ಅತ್ಯಂತ ಮಹತ್ವದ ಗೋಪ್ಯ ಸಂಗತಿಗಳನ್ನು ತಿಳಿದು ಬ್ರಿಟಿಷ ಸರಕಾರಕ್ಕೆ ಅರುಹಿ ಅವಳು ಕೃತಾರ್ಥಳಾಗಿದ್ದಳು— ಪುಣ್ಯ ಜೀವಿ ಎನ್ನಿಸಿಕೊಂಡಳು. ಕೊನೆಗೆ ಅವಿಶ್ವಾಸ ಘಾತುಕನ ದೆಸೆಯಿಂದಾಗಿ ಒಂಭತ್ತು ಮಂದಿಯವರೊಳಗೆ ತಾನೂ ಒಬ್ಬಳಾಗಿ ಅವಳು ಜರ್ಮನ ಕೊಲೆಗಡುಕನ ಕೊಡಲಿಯ ಬಾಯಿಗೆ ತನ್ನ ತಲೆಯನ್ನು ಕೊಟ್ಟು, ಸಾಮಾನ್ಯವಾಗಿ ಗೂಢಚಾರರು ಹೊಂದಬೇಕಾದ ಪರಿಣಾಮವನ್ನೇ ಹೊಂದಿದಳು.

ನಾಲ್ಕು ತಿಂಗಳುಗಳ ತನಕ ಅವಳು ನಾಝಿಗಳ ಕಣ್ಣುಗಳಿಗೆ ಮುಳ್ಳಾಗಿದ್ದಳು. ಯಾಕೆಂದರೆ ಜರ್ಮನ ನಾಝಿಗಳ ಅನೇಕ ಗೋಪ್ಯ ಸಂಗತಿಗಳ, ತಿಳಿಯಲಿಕ್ಕೆ ಅವಳು ಬ್ರಿಟಿಷ ಗೂಢಚಾರರಿಗೆ ಸಹಾಯಕಳಾಗಿದ್ದಳು. ನೋಡಲಿಕ್ಕೆ ಸುಂದರಳು, ಸುಸಂಸ್ಕೃತಳು, ಪರಿಶುದ್ಧವಾದ ಜರ್ಮನ ಭಾಷೆಯನ್ನು ಅವಳು ತಪ್ಪು ತಡೆಗಳಿಲ್ಲದೆ ಆಡಬಲ್ಲವಳಾಗಿದ್ದಳು. ಆದ್ದರಿಂದ ಈ ಲಲನಾಮಣಿಗೆ, ಜರ್ಮನಿಯನ್ನು ಪ್ರವೇಶಿಸಿದೊಡನೆಯೇ ಬರ್ಲಿನಿನ ಸಭ್ಯ ಸಮಾಜದಲ್ಲಿ ಸ್ಥಾನವನ್ನು ಪಡೆಯಲಿಕ್ಕೆ ಕಷ್ಟವಾಗಲಿಲ್ಲ. ಅಲ್ಲಿಯವರೆಲ್ಲರೂ ಅವಳನ್ನು—ಪ್ರಸ್ಯದ ಒಂದು ಪ್ರತಿಷ್ಠಿತ ಕುಟುಂಬದವಳೆಂದೇ ಭಾವಿಸಿದ್ದರು.

ಗುಟ್ಟು ರಟ್ಟಾಯಿತು

ಆದರೆ ಫ್ರೆಂಚನಂತೆ ವೇಷವಲ್ಲಟಿಸಿಕೊಂಡಿದ್ದ ಒಬ್ಬ ಜರ್ಮನ ಸಹಚರನಿಂದಾಗಿ ಅಲ್ಲಿಯ ಗೂಢಚಾರರಿಗೆ ಅವಳ ಮೇಲೆ ಸಂದೇಹವುಂಟಾಯಿತು. ಅವನು ಒಂದು ದಿನ ಮೆಲ್ಲಗೆ ಬಂದು ಅವಳು ಜರ್ಮನ ಗೂಢಚಾರ ಸೇನೆಯಲ್ಲಿ ಸೇರಬೇಕೆಂದು ಸೂಚಿಸಿದುದಕ್ಕೆ ಅವಳು ಕೂಡಲೇ ಒಪ್ಪಿಕೊಂಡುದರಿಂದ ಸಂದೇಹವು ಇನ್ನಷ್ಟು ಬಲವಾಯಿತು. ಜರ್ಮನ ಗೂಢಚಾರರಿಟ್ಟ ಬೋನಿನಲ್ಲಿ ಈ ಪ್ರಕಾರ ಅವಳು ಗೊತ್ತಿಲ್ಲದೆ ಸಿಲುಕಿಕೊಂಡಳು. ಆದರೂ ಅವಳ ಇತರ ಸಹಕಾರಿಗಳನ್ನು ಕಂಡುಕೊಳ್ಳುವ ತನಕ ಅವರು ಅವಳಿಗೆ ಒಂದು ಹುದ್ದೆಯನ್ನು ಕೊಟ್ಟು ಕೆಲವು ದಿನಗಳನ್ನು ಕಳೆದರು.

ಕೊನೆಗೆ ಆ ಎಂಟು ಮಂದಿಯೂ ಸಿಕ್ಕಿದರು. ಅವರನ್ನು ಸ್ವದೇಶಕ್ಕೆ ಮರಳಿಸುವದು ನಾಝಿಗಳಿಗೆ ಹಿತಕರವಾಗಿ ತೋರಲಿಲ್ಲ. ಒಂದು ದಿನ ರಾತ್ರಿಕಾಲದಲ್ಲಿ ಯಾರಿಗೂ ತಿಳಿಯದ ಹಾಗೆ ಅವರೆಲ್ಲರನ್ನು ಹಿಡಿದು ಪೂರ್ವಪ್ರಸ್ಯಕ್ಕೆ ಒಯ್ದರು. ಅಲ್ಲಿಂದ ಮತ್ತೆ ಅವರನ್ನು ಬರ್ಲಿನಿಗೆ ಸಾಗಿಸಿದರು. ಕ್ಷಣಕಾಲದೊಳಗಾಗಿ ಹೆಸರು ಪೂರ್ತಿಯ ವಿಚಾರಣೆಯಾಗಿ ಆ ಒಂಭತ್ತು ಮಂದಿಗೆ ಪ್ರಾಣಾಂತ ಶಿಕ್ಷೆಯನ್ನು ಕೊಟ್ಟರು. ತಲೆಕಡಿಯುವ ಮೊದಲು ಹೆಚ್ಚು ಸಮಯವನ್ನೂ ಕಳೆಯಲಿಲ್ಲ. ಒಂದೇ ರಾತ್ರಿಯೊಳಗಾಗಿ ಇಡೀ ನಾಟಕವು ಮುಗಿಯಿತು.

ಅಂದು ಯಾರ ಯಾರ ತಲೆ ಕಡಿದಿದ್ದರೆಂದು ಇದುವರೆಗೆ ಪ್ರಕಟವಾಗಿಲ್ಲ. ಆದರೂ ಆ ಲಲನಾಮಣಿ ಲಂಡನಿನ ಸಭ್ಯ ಸಮಾಜದಲ್ಲಿ ಎಲ್ಲರ ಪರಿಚಯದವಳಾಗಿದ್ದಳೆಂಬ ಪ್ರತೀತಿ ಇದೆ. ಅವಳಿಗೆ ರಾಜದರ್ಬಾರಿನಲ್ಲಿ ಸಮ್ಮಾನವೂ ದೊರಕಿತ್ತೆಂದೂ ಹೇಳಲಾಗುತ್ತದೆ.

**HALFTONE & LINE
BLOCK MAKING
UNDERTAKEN
Sharadha Press,
MANGALORE**

ರಾತ್ರೆ ಸುಖವಾದ ನಿದ್ದೆ ಬೀಳಬೇಕಾದರೆ ಒಂದು ಕಪ್ಪು "ಓವಲ್‌ಟಿನ್" ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್‌ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯು ಉಂಟಾಗುತ್ತದೆಂದು ಖಂಡಿತ ಹೇಳಬಹುದು

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ಬಲಿತು ಮಾಗಿದ ಬಾರ್ಲಿ, ದನದ ಹಾಲು ಮತ್ತು ಇತರ ಅಮೋಘವಾದ ವಿಟಮಿನ್ ಮತ್ತು ಫೋಸ್ಫೇಟ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್‌ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ರೆಯನ್ನೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ. ಇತರ ನಕಲಿ ಪಾನೀಯಗಳನ್ನು ಬಿಡಿರಿ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆಡ್,
149 ಬ್ರೋಡ್‌ವೇ, ಮದ್ರಾಸು
ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು, ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು, ಇವುಗಳಲ್ಲಿ ನೈಶಿಷ್ಟ ಬೆಲೆಯ 'ಓವಲ್‌ಟಿನ್' ಸೇರಿರುವುದು, 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV/66/39

ಒಂದು ಸಣ್ಣ ಕತೆ:—

ನಿರ್ಮಲ ಹೃದಯ

ಮನೆ ತುಂಬ ಸಂಸಾರವಿದ್ದು, ಹಿಂದೆ ಒಮ್ಮೆ ಆತನ ಜೀವನವು ಸುಖಮಯವಾಗಿತ್ತು! ಮೀನು ಹಿಡಿವ ತನ್ನ ಕುಲವೃತ್ತಿಯಿಂದಲೇ ಆತ ಮನೆ, ಹಿತ್ತಲು ಇವುಗಳನ್ನು ಗಳಿಸಿಕೊಂಡಿದ್ದ. ತನ್ನ ಮಗನೂ ಪ್ರಾಯಕ್ಕೆ ಬಂದು ತನ್ನ ಕಸುಬಿನಲ್ಲಿ ಕೈಗೊಟ್ಟು ನಿಂತಾಗ, ನಿಜವಾಗಿ ಅವನ ಸಂಪಾದನೆ ಏರಿಹೋಯಿತು. ಅಂತಹ ಸಮಯದಲ್ಲಿ ತನ್ನ ಒಬ್ಬಳೇ ಒಬ್ಬ ಮಗಳು ಗಂಡನ ಮನೆಯಲ್ಲಿ, ಹತ್ತಾರು ಮಂದಿಯೊಡನೆ, ಕಷ್ಟದಿಂದ ದಿನ ಕಳೆಯುತ್ತಿರುವುದನ್ನು ನೋಡಿ, ಆಕೆಯನ್ನೂ ಆಕೆಯ ಗಂಡನನ್ನೂ ತನ್ನಲ್ಲಿಗೇ ಕರೆಸಿಕೊಂಡಿದ್ದ. ಆದರೆ, ಜೀವನದಲ್ಲಿ ಇಂತಹ ಸಂತಸದ ದಿನಗಳು ಬಹು ಸಮಯ ಉಳಿಯುವುದಿಲ್ಲ. ದೊಡ್ಡ ರೋಗವು ಹರಡಿ ಊರಿಗೆ ಊರೇ ಸಾವಿನ ಬಾಯಿಗೆ ಬಲಿಯಾಗುತ್ತಾ ಬಂತು. ಪ್ರಪ್ರಥಮ— ಆತನ ಹೆಂಡತಿ ಮೊದಲು ರೋಗಕ್ಕೆ ತುತ್ತಾದಳು. ಬಹು ಕಾಲದ ಸಂಗಾತಿ, ಜತೆಯ ಜೀವ, ಹೀಗೆ ಅಗಲಿ ಹೋದುದು ಬೀರನಿಗೆ ಸಹಿಸಲಾರದ ವೇದನೆಯಾಯಿತು. ಆದರೆ, ತನ್ನ ವಂಶವನ್ನು ಬೆಳಗಿಸುವ ಮಗನ ಮುಖವನ್ನು ನೋಡಿ, ಮಗಳು, ಅಳಿಯ ಈ ಸಂಸಾರದ ಮಮತೆಯಲ್ಲಿ ಆತ ಅದನ್ನು ಮರೆತುಬಿಟ್ಟಿದ್ದ. ಆದರೆ, ಆತನ ಹೆಂಡತಿ ಪ್ರಪ್ರಮ್ಮ ತೀರಿಹೋದದ್ದೇ ತಡ, ಜೀವನ ಮನೆಯ ಬೆಳಕೇ ನಂದಿಹೋದಂತೆ ಆಯಿತು. ಕೆಲವೇ ದಿನಗಳಲ್ಲಿ ಅಳಿಯನೂ ತೀರಿಹೋದ. ಮಗಳ ವೈಧವ್ಯವನ್ನು ಕಂಡು ಆತ ಬಹಳವಾಗಿ ಮರುಗಿದ. ಅವಳ ಗಂಡನ ನೆನಪಿಗಾಗಿ, ಆಕೆಗಾದರೂ ಒಂದು ಮಗುವಿದೆ. ಜೀವನಕ್ಕಾಗಿ ಆಕೆ ದುಡಿಯಬೇಕಾಗಿಲ್ಲ. ತನ್ನ ಮನೆಯಲ್ಲಿ ಸುಖವಾಗಿ ಇರಬಹುದೆಂದು ತಿಳಿದು ತಾನೂ ಸಮಾಧಾನಗೊಂಡಿದ್ದ, ಮಗಳನ್ನೂ ಹಾಗೆ ಸಂತೈಸಿದ್ದ. ಅದೃಷ್ಟವು ಅವನನ್ನು ಅಷ್ಟರಲ್ಲಿಯೇ ಬಿಡಲಿಲ್ಲ. ಕೆಲವು ದಿನಗಳಲ್ಲಿ ಆತನ ಮಕ್ಕಳಿಬ್ಬರೂ ರೋಗಕ್ಕೆ ಬಲಿಯಾದರು. ಇದು ಅಸಹ್ಯ ಸಂಕಷ್ಟದ ಪರಮಾವಧಿಯಾಗಿತ್ತು. ಇದೇ ಸ್ಥಿತಿಯಲ್ಲಿ ತನ್ನ ಮೊಮ್ಮಗಳು, ಆ ಎಳೆ ವರ್ಷದ ಹಸುಳೆಯೊಂದು ತಾನೊಬ್ಬ. ಹೀಗೆ ಯಾವ ಆಧಾರವೂ ಇಲ್ಲದೆ, ಸಂಕಷ್ಟಕ್ಕೆ ಗುರಿಯಾದ ಅವರಿಬ್ಬರೇ! ಬೀರನು ಆತ್ಮಹತ್ಯೆ ಮಾಡಿಕೊಳ್ಳಲು ಬಯಸಿದ. ಕಡಲು ಜೋರಾಗಿ ಗರ್ಜಿಸಿ, ಎಷ್ಟು ನೊಂದವರಿಗೂ ತನ್ನೊಡಲಲ್ಲಿ ಆಶ್ರಯವೀಯುವುದಾಗಿ ಕರೆಯುತ್ತಿತ್ತು. ಬೀರ, ಕಡಲಿಗೆ ಹಾರಿ ಬೇಸರಗೊಂಡ ಜೀವನವನ್ನು ಮುಗಿಸಿಬಿಡಬೇಕೆಂದು ನಿರ್ಧರಿಸಿ ಎಷ್ಟೋ ಸಲ ಕಡಲ ದಂಡೆಗೆ ಬಂದು ನಿಲ್ಲುವಷ್ಟರಲ್ಲಿ ಆತನಿಗೆ ನಿರಪರಾಧಿನಿಯಾದ ಹಸುಳೆ ತನ್ನ ಮೊಮ್ಮಗಳ ನೆನಪಾಗಲು, ಆಕೆಗೆ ಮುಂದೆ ಗತಿಯಿಲ್ಲವಲ್ಲಾ ಎಂದು ಹೊಳೆದಾಗ, ತನ್ನ ನಿರ್ಧಾರವನ್ನೆಲ್ಲಾ ಮರೆತು ಮಮತೆ ಉಕ್ಕಿ, ತಿರುಗಿ ತನ್ನ ಮನೆಗೆ ಓಡಿಹೋಗಿ, ಮೊಮ್ಮಗಳನ್ನು ಮುದ್ದಿಸಿ ತನ್ನ ಕರುಳಿನ ವೇದನೆಯನ್ನು ಹಾಗೆ ಸಂತೈಸುತ್ತಿದ್ದ.

ಹೀಗೆ, ದಿನ, ಮಾಸ, ವರ್ಷಗಳು ಗತಿಸಿದವು.

ಬೀರನ ಪಾಲನೆಯಲ್ಲಿ ಆತನ ಮೊಮ್ಮಗಳು ಚೆನ್ನಿ ಬೆಳೆಯುತ್ತಾ ಬಂದಳು. ಪ್ರಾಯವು ಹೆಚ್ಚುವುದರೊಡನೆ ಬೀರನಿಗೆ ಕಾಲು ಕೈಗಳ ಗಂಟುಗಳಲ್ಲಿ ನೀರು ಬಂದು, ಮುಂದೆ ದುಡಿಯುವುದೂ ಆಗಲಿಲ್ಲ. ಚೆನ್ನಿಗೆ ಹದಿನಾರು ವರ್ಷ, ಆಕೆ ದುಡಿದು ಮುದುಕನನ್ನೂ ಸಾಕುತ್ತಿದ್ದಳು.

ಕಡಲ ತಡಿಯಲ್ಲಿದ್ದ, ಎತ್ತರವಾದ ಬಂಡೆಯೊಂದರ ಮೇಲೆ ತೆರೆಗಳ ಹೊಡೆತದಿಂದ ರಾಶಿಯಾಗುತ್ತಿದ್ದ ಹಸಿ ಹುಲ್ಲನ್ನು ಹೆಕ್ಕಿ ತಂದು, ಹಳ್ಳಿಗೆ ಹೋಗಿ ಮಾರಾಟ ಮಾಡಿ, ಚೆನ್ನಿ ತನ್ನ ಮತ್ತು ಅಜ್ಜನ ಜೀವನ ನಡೆಸುತ್ತಿದ್ದಳು. ಪೈರಿಗೆ ಆ ಹುಲ್ಲು ಒಳ್ಳೆಯ ಗೊಬ್ಬರವಾಗುತ್ತಿದ್ದುದರಿಂದ, ಚೆನ್ನಿಗೆ ಅದರಿಂದ ಸಾಕಷ್ಟು ಉತ್ಪತ್ತಿಯಿತ್ತು. ಸಮುದ್ರದ ಅಲೆಗಳು ಬಂಡೆಯ ಮೇಲೆ ಬಲವಂತವಾಗಿ ಬಡಿಯುತ್ತಿದ್ದರೂ, ಏಕಾಂಗಿನಿಯಾಗಿ ಆಕೆ ದಿನವಿಡೀ ಅಲ್ಲೇ ನಿಂತುಕೊಂಡಿದ್ದು ಹುಲ್ಲನ್ನು ಹೆಕ್ಕುತ್ತಾ ಇರುವಳು. ಜನರು, ನಿಜವಾಗಿಯೂ ಆಕೆಯ ಸಾಹಸವನ್ನು ಮೆಚ್ಚುವಂತಿತ್ತು. ಆದರೆ ನೆರೆಕರೆಯವರು ಕೆಲವರು ಮತ್ಸರಪಡುತ್ತಿದ್ದರು, ಒಂದು ದಿನ ಅಪ್ಪಳಿಸುವ ತೆರೆಯೆದ್ದು ಆಕೆಯನ್ನು ಕೊಚ್ಚಿಕೊಂಡು ಹೋದರೆ, ಮುಂದಕ್ಕೆ ಆ ಸ್ಥಳವನ್ನು ಆಕ್ರಮಿಸಿ ತಾವು ಜೀವನ ನಡೆಸಬಹುದಿತ್ತೆಂದು ಅವರ ದುರಾಗ್ರಹದ ಬಯಕೆಯಾಗಿತ್ತು. ಆದರೆ ಎಷ್ಟೋ ಸಮಯಗಳಿಂದ ತಾವು ಆ ಬಂಡೆಯಲ್ಲಿ ಹುಲ್ಲು ಹೆಕ್ಕುತ್ತಿದ್ದುದರಿಂದ ಇತರರಿಗದರೂ ಅಲ್ಲಿಗೆ ಬರಲು ಹಕ್ಕಿಲ್ಲವೆಂದೂ, ಅದು ತಮ್ಮ ಸ್ವಂತ ಜಾಗವೆಂದೂ ಚೆನ್ನಿ ತಿಳಿದಿದ್ದಳು. ಮಾತ್ರವಲ್ಲದೆ ಯಾರಾದರೂ, ಅಪ್ಪಿ ತಪ್ಪಿ ಬಂಡೆಯ ಬಳಿ ಸುಳಿದರೆ ಸಾಕು, ಆಕೆ ಸಿಡಿದು ಬೀಳುತ್ತಿದ್ದಳು. ಆಕೆಗೆ ಹೆದರಿಯೇ ಜನರು ಯಾರೂ ಅಲ್ಲಿಗೆ ಬರುತ್ತಿರಲಿಲ್ಲ. ಎಣ್ಣೆ, ಬಾಚಣಿಗೆಗಳನ್ನು ಕಾಣದ ಕಪ್ಪು ದಟ್ಟ ತಲೆಗೂದಲುಗಳು, ಪುಷ್ಟವಾದ ಶರೀರ, ಹೆಚ್ಚು ಕಿರಿದೂ, ಬಹಳ ಹಿರಿದೂ ಅಲ್ಲದ ಗಾತ್ರ, ಕುಳ್ಳವಾದ ಕಪ್ಪು ಕಣ್ಣುಗಳು, ಚೆನ್ನಿ ಹೀಗೆ ಒಂದು ವಿಶೇಷ ತರದ ಹೆಂಗುಸಾಗಿದ್ದಳು! ಸುತ್ತಲಿನ ಜನರು, ಆಕೆ ಬಹಳ ಶಕ್ತಿವಂತಳೆಂದೂ, ಧೈರ್ಯಶಾಲಿನಿಯೆಂದೂ, ಹಗಲಿರುಳೆನ್ನದೆ, ಅವಿಶ್ರಾಂತಳಾಗಿ ದುಡಿದರೂ, ಅವಳಿಗೆ ಆಯಾಸವೇ ಇಲ್ಲವೆಂದೂ ಹೇಳುತ್ತಿದ್ದರು.

ನ್ಯೂ ಥಿಯೇಟರ್ಸ್‌ನವರ 'ಹಾವಾಡಿಗ' ಚಿತ್ರದ ಒಂದು ದೃಶ್ಯ.

ಮತ್ಸರಿಸುವ ಜನರು, ಆಕೆಯ ಕುರಿತು ಏನೇನೋ ಹೇಳುತ್ತಿದ್ದರೂ, ಸುತ್ತಲಿನ ಹಳ್ಳಿಯ, ಪ್ರಾಯ ತುಂಬಿದ ಯುವಕರು ಆಕೆಯನ್ನು, ಅವಳು ತನ್ನ ಮುದಿ ಅಜ್ಜನನ್ನು ಅಷ್ಟು ಪ್ರೀತಿಯಿಂದ ಸಾಕುತ್ತಿರುವುದನ್ನು ನೋಡಿ ಬಹಳವಾಗಿ ಕೊಂಡಾಡುತ್ತಿದ್ದರು. ಹೀಗಿದ್ದರೂ, ಸುತ್ತಲಿನ ಜನರ ವಿಷಯ ಆಕೆ ಒಮ್ಮೆಯೂ ಏನೊಂದೂ ವಿಚಾರ ಮಾಡಿದವಳೇ ಅಲ್ಲ. ಅವರೊಡನೆ ಮಮತೆಯಿಂದ ಮಾತನಾಡಿ ಆಕೆಗೆ ಗೊತ್ತಿಲ್ಲ. ಯಾವುದೇ ಹಬ್ಬ ಹುಣ್ಣಿಮೆ ಬರಲಿ, ಜಾತ್ರೆಯಲ್ಲಿ ಏನೇ ನಡೆಯುತ್ತಿರಲಿ, ಅವಳದು ಒಂದೇ ರೀತಿಯ ಉಡಿಗೆ, ಅದೇ ಕಸಬು, ಅದೇ ವ್ಯವಹಾರ. ಸಹಜವಾಗಿಯೂ ಜನರು ಆಕೆಯ ವಿಚಿತ್ರ ನಡತೆಯ ವಿಷಯ ಆಶ್ಚರ್ಯಗೊಂಡಿದ್ದರು. ತರುಣರಂತೂ ಆಕೆಯನ್ನು ಕಂಡರೆ ಒಂದು ರೀತಿಯಿಂದ ಹೆದರಿಕೊಳ್ಳುತ್ತಿದ್ದರು!

ಬಸಪ್ಪ ಒಂದು ದಿನ ಚೆನ್ನಿಯೊಡನೆ, ಹುಲ್ಲಿನ ಕ್ರಯದ ವಿಷಯವಾಗಿ ಜಗಳ ಹೂಡಿದ. ಅವನು ಹೇಳಿದ ಬೆಲೆಗೆ ಹುಲ್ಲನ್ನು ಮಾರುವುದಕ್ಕಿಂತ, ತಾನು ಅದನ್ನು ತಿರುಗಿ ಸಮುದ್ರಕ್ಕೇ ಎಸೆದುಬಿಡುವೆನೆಂದು ಚೆನ್ನಿ ಹೇಳಿದಳು. ಒಂದು ಚಿಕ್ಕಾಸೂ ಬೆಲೆ ಹೆಚ್ಚು ಕೊಡಲಾರೆನೆಂದು ಬಸಪ್ಪನೂ ಹೇಳಿದ. ಚೆನ್ನಿ ಮುಂದೆ ಮಾತನಾಡದೆ ಅಲ್ಲಿಂದ ಹೊರಟು ಬಂದಿದ್ದಳು. ಸರಿ, ಆ ಮೇಲೆ, ಚೆನ್ನಿಯ ಕುರಿತು ಬಸಪ್ಪನಿಗೆ ದ್ವೇಷ ಹೆಚ್ಚಿತು. ಆಕೆಗೆ ತಿಳಿಯದಂತೆ, ಬಂಡೆಗೆ ಹೋಗಿ ಅಲ್ಲಿನ ಹುಲ್ಲನ್ನೆಲ್ಲಾ ಕದ್ದು ತರಬೇಕಾಗಿ ತನ್ನ ಮಗ ನರಸನನ್ನು ಕಳುಹಿಸಿದ. ತನ್ನ ಬಂಡೆಯ ಮೇಲಿಂದ ಹುಲ್ಲಿನ ಕಳವು ಆಗುತ್ತಿರುವುದು ಚೆನ್ನಿಯ ಗಮನಕ್ಕೆ ಬಂತು. 'ಒಮ್ಮೆ ನಾನೇ ಮೆಲ್ಲನೆ ಹಿಂದಿನಿಂದ ಹೋಗಿ, ಕಳ್ಳನನ್ನು ಬಂಡೆಯಿಂದ ಕೆಳಗೆ ಕಡಲಿಗೆ ದೂಡಿಬಿಡುತ್ತೇನೆ' ಚೆನ್ನಿ ಒಮ್ಮೆ ತನ್ನಜ್ಜ ಬೀರನೊಡನೆ ದುಡುಕಿನಿಂದ ಹೇಳಿದ್ದಳು. ಒಮ್ಮೆ ನರಸನನ್ನು ಬೆಳಗು ಮುಂಜಾನೆಯ ಹೊತ್ತು ಆಕೆಯು ಆ ಬಂಡೆಯ ಮೇಲೆ ಕಂಡಳು. ಸೀದಾ ಆತನ ಬಳಿಗೆ ಹೋದವಳೇ 'ನಿನಗೆ ಇನ್ನೆಲ್ಲಿಯಾದರೂ ಹೋಗಿ ಹುಲ್ಲು ಹೆಕ್ಕಲು ಮಾರಿಯೆ? ಅಲ್ಲಿ ಎಲ್ಲ ತುಂಬಾ ಇದೆ, ಕಳ್ಳತನ ಮಾಡಿ ನೀನು ಎಂದೂ ನನ್ನ ಕಣ್ಣು ತಪ್ಪಿಸಿಕೊಳ್ಳಲಾರೆ' ಆಕೆ ಸಿಟ್ಟಿನಿಂದ ಹೇಳಿದಳು.

'ಚೆನ್ನೀ, ಇಲ್ಲಿನಷ್ಟು ಹುಲ್ಲು ಇನ್ನೆಲ್ಲಿಯೂ ಸಿಗುವುದಿಲ್ಲ. ಸಮುದ್ರದಲ್ಲಿರುವ ಬಂಡೆಗೆ ನೀನು ಬರುವಂತೆ ನಾನೂ ಬರುತ್ತೇನೆ. ಇದರಲ್ಲಿ ಕಳ್ಳತನವೇನಿದೆ?' ನರಸ ಆಕೆಯೊಡನೆ ಸರಸವಾಗಿ ನಗಾಡಿ ಹೇಳಿದ. ಕಡೆಗೆ ಆಕೆಯನ್ನು ಸಮಾಧಾನಪಡಿಸಲು, ನರಸನು, ಅದೇ ಬಂಡೆಯ ಸಮೀಪದಲ್ಲಿದ್ದ ಇನ್ನೊಂದು ಬಂಡೆಯ ಕಡೆಗೆ ಕೈ ತೋರಿಸಿ, ಮುಂದಕ್ಕೆ ತಾನು ಅಲ್ಲಿ ಹುಲ್ಲನ್ನು ಹೆಕ್ಕುವುದಾಗಿಯೂ, ಆಕೆ ಈ ಬಂಡೆಯಲ್ಲಿ ಹೆಕ್ಕುವ ಹುಲ್ಲಿನ ಇಮ್ಮಡಿಯಷ್ಟು ತಾನು ಅಲ್ಲಿ ಸಂಗ್ರಹಿಸಿ, ಮುಂದೆ, ಆಕೆಗಿಂತ ಕಡಿಮೆ ಕ್ರಯದಲ್ಲಿಯೇ ತಾನು ಹುಲ್ಲು ಮಾರುವುದಾಗಿಯೂ ತಿಳಿಸಿ ಹೇಳಿದ. ಇದೆಲ್ಲವನ್ನೂ ಕೇಳಿದಂತೆ ಚೆನ್ನಿಗೆ ಸಿಟ್ಟು ಮತ್ತು ಸಂತಸ ಎರಡೂ ಹುಟ್ಟಿತು. ಆತನು ತನ್ನ ಬಂಡೆಯ ಸಮೀಪದಲ್ಲಿಯೇ ಹುಲ್ಲು ಹೆಕ್ಕುವುದಾಗಿಯೂ ತನ್ನೊಡನೆ ಸ್ಪರ್ಧೆ ಮಾಡುವುದಾಗಿಯೂ ತನಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವುದಾಗಿಯೂ ಹೇಳಿದಕ್ಕಾಗಿ ಸಿಟ್ಟುಗೊಂಡಿದ್ದಳು. ಆದರೆ, ಒಳಿಯ ಬಂಡೆಗೆ ಹೋಗಿ ಆತನು ಬಹು ಕಾಲ ಹುಲ್ಲು ಹೆಕ್ಕಲಾರನೆಂದು ತಿಳಿದು ಆಕೆ ಸಂತಸಗೊಂಡಳು! ಅವಳ ಸಿಟ್ಟು ಧಾರ್ಷ್ಟ್ಯಕ್ಕಾಗಿಯೂ, ಅವಳ ಸೇಡಕ್ಕಾಗಿಯೂ, ನರಸ ಆಕೆಯನ್ನು ತವಕದಿ ನೋಡಿ, ಹುಲ್ಲಿನ ಕಟ್ಟನ್ನು ತಲೆಯ ಮೇಲೆ ಹೊತ್ತುಕೊಂಡು, ಮನೆಯ ದಾರಿ ಹಿಡಿದು ನಡೆದ. ಚೆನ್ನಿ ಆತನ ಕಡೆಗೇ ಕಣ್ಣರಳಿಸಿ ನೋಡುತ್ತಿದ್ದಳು. ವಿಶಾಲವಾದ ಹಣೆ, ಹಣೆಯ ಮೇಲೆ ಕೆದರಿದ್ದ ಮುಂಗುರುಳುಗಳು, ದೀರ್ಘವಾದ ಆಕಾರ, ಗಟ್ಟಿಮುಟ್ಟಾದ ತೋಳುಗಳು, ಹೀಗೆ ತುಂಬು ಜವ್ವನದ ತರುಣ; ಆತನನ್ನು ನೋಡುತ್ತಿದ್ದಂತೆ ಚೆನ್ನಿಗೆ ಏನೋ ಒಂದು ಅಪೂರ್ವ ಆನಂದದ ಅನುಭವವಾಯಿತು! ತಿರುಗಿ, ಆಕೆ ತನ್ನ ಕೆಲಸಕ್ಕೆ ಸುರು ಹಚ್ಚಿದಳು. ಪೂರ್ವ ದಿಕ್ಕಿನಲ್ಲಿ ಅರುಣ ಕಾಂತಿಯನ್ನು ಚೆಲ್ಲಿ, ಸೂರ್ಯನು ಉದಿಸಿ ಬರುತ್ತಿದ್ದನು, ಅವನ ಕಿರಣಗಳು ಸಮುದ್ರದ ತೆರೆಗಳ ಮೇಲೆ, ಸುಂದರವಾಗಿ ನರ್ತನವಾಡುತ್ತಿದ್ದುವು! ಕಡಲು ಗಂಭೀರವಾಗಿ ಶಬ್ದಮಾಡುತ್ತಿದ್ದಾಗ, ಆನಂದದ ಸಮಯದಲ್ಲಿ ಆಕೆಯ ಅಜ್ಜ ಹೇಳುತ್ತಿದ್ದ ಹಾಡನ್ನೊಂದನ್ನು, ಚೆನ್ನಿ ಗಟ್ಟಿಯಾಗಿ ಹಾಡುತ್ತಾ ಹುಲ್ಲು ಸಂಗ್ರಹ ಮಾಡುತ್ತಿದ್ದಳು.

ಮರುದಿನ ಮುಂಜಾನೆ, ನರಸ ಬರುವುದಕ್ಕಿಂತ ಮೊದಲೇ ಚೆನ್ನಿ ತನ್ನ ಬಂಡೆಯ ಮೇಲೆ ಬಂದು ನಿಂತಿದ್ದಳು. ಆತ ಬಂದಾಗ, ಇನ್ನು ಬೇರೆ ಉಪಾಯವಿಲ್ಲದೆ, ನಿನ್ನೆ ಆಕೆಯೊಡನೆ ಮಾತು ಕೊಟ್ಟಂತೆ, ಈಗ ಹತ್ತಿರದ ಇನ್ನೊಂದು ಬಂಡೆಗೆ ಹೋಗಲೇಬೇಕಾಯಿತು. ನರಸ ಒಂದವನೇ ಹಿಂದು ಮುಂದು ನೋಡದೆ ಸಮುದ್ರಕ್ಕಿಳಿದು ಆ ಬಂಡೆಯ ಕಡೆಗೆ ಈಜತೊಡಗಿದ. ಆತ ಬಂದದ್ದನ್ನು ಚೆನ್ನಿ ತಿಳಿದಿದ್ದರೂ, ಅವನೊಡನೆ ಮಾತನಾಡದೆಯೇ ಆಕೆ ತನ್ನ ಕೆಲಸವನ್ನು ಮಾಡುತ್ತಾ ಇದ್ದಳು. ಆತನೇ ಮೊದಲು ಮಾತನಾಡಿಸಬೇಕೆಂದೂ, ಈ ದಿನ ತಾನು ಆತನನ್ನು ಮೊದಲು ಒಂದು ಸೋಲಿಸಬೇಕೆಂದೂ ಆಕೆ ಗ್ರಹಿಸಿದ್ದಳು. ಆದರೆ ನರಸನು ಸೀದಾ ಸಮುದ್ರಕ್ಕೆ ಇಳಿದು, ಬಂಡೆಯ ಕಡೆಗೇ ಈಜುವುದನ್ನು ನೋಡಿ, ಅವಳ ನಿರ್ಧಾರವು ತಪ್ಪಿಹೋಯಿತು.

'ಅಯ್ಯೋ! ನಿನಗೆ ಹುಚ್ಚು! ನೀನು ಆ ಬಂಡೆಯ ಕಡೆಗೆ ಈಜಿ ಹೋದರೆ, ತಿರುಗಿ ಬರುವ ಹಾಗಿಲ್ಲ!' ಚೆನ್ನಿ ಕೂಗಿ ಹೇಳಿದಳು.

'ನೀನು ನಿನ್ನ ಕೆಲಸ ಮಾಡು, ನನ್ನ ವಿಷಯ ನಿನಗೆ ಯೋಚನೆ ಬೇಡ' ಹೀಗೆಂದು ಹೇಳಿ ನರಸ ಈಜುತ್ತಾ ಮುಂದೆ ಹೋಗುತ್ತಿದ್ದ.

'ಒಳ್ಳೆಯದಾಯಿತು, ಅವನ ದರ್ಪ ಈಗ ಇಳಿಯುತ್ತದೆ' ಹೀಗೆಂದು ಆಕೆ ತನ್ನ ಕೆಲಸದಲ್ಲಿಯೇ ಮಗ್ನಳಾದಳು.

ಎರಡು ನಿಮಿಷ ಕಳೆದಿರಲಿಲ್ಲ! ಸಮೀಪದ ಬಂಡೆಯ ಕಡೆಯಿಂದ ಕೂಗಿದ ಶಬ್ದ ಕೇಳಿತು! ಚೆನ್ನಿ ಹೊರಳಿ ನೋಡಿದಳು! ಎದ್ದ ಹಾವಿನ ತೆರೆಗಳ ನಡುವೆ ನರಸನ ಶರೀರವು ಹೊಡೆದಾಡುತ್ತಿತ್ತು! ಒಂದು ತೆರೆಯೆದ್ದು, ಆತನ ಶರೀರವನ್ನು ಬಂಡೆಗೆ ಬಡಿಯಿತು! ಚೆನ್ನಿ ಚೀರಿದಳು! ತಿರುಗಿ ಆತನ ಶರೀರವು ತೆರೆಗಳ ನಡುವೆ ಎದ್ದು ಮುಳುಗಿ ಒಮ್ಮೆ ಕಂಡಿತು! ಆತನ ತಲೆಗೆ ಗಾಯವಾಗಿ ನೆತ್ತರು ಚಿಮ್ಮುವುದೂ ಆಕೆಗೆ ತೋರದಿರಲಿಲ್ಲ!

[೧೧ನೆಯ ಪುಟವನ್ನು ನೋಡಿರಿ]

ಸಾವಕಾರ ಶ್ರೀನಿವಾಸರಂಗಪ್ಪೈ
[ಸ್ಥಾಪನೆ: ಕ್ರಿ. ಶ. 1858]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

ದೇಶದ ಸಲುವಾಗಿ ಪ್ರಾಣಭೋಗಗಳಿಗೆ ತಿಲಾಂಜಲಿ ಕೊಟ್ಟ ಬ್ರಿಟನಿನ ಅಬಲಾ ಮಣಿ

ದೇಶದ ಪರವಾಗಿ ತನ್ನ ಪಾಲಿನ ಕರ್ತವ್ಯವನ್ನು ಮಾಡಿ ಮುಗಿಸಬೇಕೆಂಬ ಪವಿತ್ರ ಭಾವನೆಯಿಂದ ಪ್ರೇರಿತಳಾಗಿ ಒಬ್ಬ ಲಲನಾಮಣಿಯು ಜರ್ಮನಿಯಲ್ಲಿ ಬ್ರಿಟಿಷ ಸರಕಾರದ ಗೂಢಚಾರ ಸೇನೆಯಲ್ಲಿ ಸೇರಿ, ಮತ್ತೆ ತನ್ನ ಪ್ರಾಣಗಳನ್ನೇ ನಾಜಿಗಳ ಕ್ರೋಧದ ಬಲಿವೇದಿಯ ಮೇಲೆ ಅರ್ಪಿಸಿದ ಒಂದು ದುಃಖಾಂತ ಇತಿಹಾಸವು 'ಪೀಪಲ್ಸ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅವಳು ಲಂಡನಿನ ಸಭ್ಯ ಸಮಾಜದ ಶ್ರೀಮಂತ ಸದಸ್ಯೆಯಾಗಿದ್ದಳು. ವಿವಾಹದ ನಿಶ್ಚಯವಾಗಿದ್ದು, ಲಂಡನಿನ ಒಂದು ಪ್ರಸಿದ್ಧ ಇಗರ್ಜಿಯಲ್ಲಿ ಆ ವಿವಾಹ ಸಮಾರಂಭವು ನೆರವೇರುವ ಮೊದಲೇ ವಿದೇಶವೊಂದರಲ್ಲಿ ಬ್ರಿಟಿಷರ ಪರವಾಗಿ ಗೂಢಚಾರ ವೃತ್ತಿಯನ್ನು ಅವಲಂಬಿಸುವ ತನ್ನಿಚ್ಛೆಯನ್ನು ಪೂರ್ತಿ ಮಾಡಿಕೊಳ್ಳುವ ಸಲುವಾಗಿ–ಕೆಲವೇ ದಿನಗಳ ಪೂರ್ವದಲ್ಲಿ–ಆ ಸಂಬಂಧವನ್ನು ಕಡಿದುಕೊಂಡಳು. ಈಗ ಅವಳ ಜೀವನ ಚರಿತ್ರವು ಬ್ರಿಟಿಷ ಗೂಢಚಾರರಿಗೆ ಸ್ಫೂರ್ತಿ ಉತ್ಸಾಹಗಳನ್ನು ತುಂಬಿಸುವ ಪುಣ್ಯದಾಯಕ ಪುರಾಣವಾಗಿ ಪರಿಣಮಿಸಿದೆ.

ಹಿಡಿಯಲು ಪ್ರಯತ್ನ

ಆ ಸುಂದರ ಲಲನಾಮಣಿಯನ್ನು ಕೈಸೆರೆ ಹಿಡಿಯಬೇಕೆಂದು ಜರ್ಮನ ಗೂಢಚಾರರು ಭಗೀರಥ ಪ್ರಯತ್ನ ಮಾಡಿದ್ದರು. ಆದರೆ ವಿಶ್ವಾಸಪಾತ್ರನೆಂದು ನಂಬಿದ್ದ ಒಬ್ಬ ದುರಾತ್ಮನು ಅವಳ ರಹಸ್ಯಮಯ ಚಲನವಲನಗಳನ್ನು ಅವರಿಗೆ ತಿಳಿಸಿ ವಿಶ್ವಾಸಘಾತ ಮಾಡದಿದ್ದಲ್ಲವಾಗಿದ್ದರೆ ಅವಳನ್ನು ಹಿಡಿಯುವುದು ಜರ್ಮನ ಗೂಢಚಾರರಿಗೆ ಈಗಲೂ ಅಸಾಧ್ಯವಾಗುತ್ತಿತ್ತು. ಆದರೆ ಸಾಯುವ ಮೊದಲು ಜರ್ಮನಿಯ ಶಸ್ತ್ರಾಸ್ತ್ರಗಳ ತಯಾರಿಯ ಕೆಲವು ಅತ್ಯಂತ ಮಹತ್ವದ ಗೋಪ್ಯ ಸಂಗತಿಗಳನ್ನು ತಿಳಿದು ಬ್ರಿಟಿಷ ಸರಕಾರಕ್ಕೆ ಅರುಹಿ ಅವಳು ಕೃತಾರ್ಥಳಾಗಿದ್ದಳು–ಪುಣ್ಯ ಜೀವಿ ಎನ್ನಿಸಿಕೊಂಡಳು. ಕೊನೆಗೆ ಅವಿಶ್ವಾಸ ಘಾತುಕನ ದೆಸೆಯಿಂದಾಗಿ ಒಂಭತ್ತು ಮಂದಿಯವರೊಳಗೆ ತಾನೂ ಒಬ್ಬಳಾಗಿ ಅವಳು ಜರ್ಮನ ಕೊಲೆಗಡುಕನ ಕೊಡಲಿಯ ಬಾಯಿಗೆ ತನ್ನ ತಲೆಯನ್ನು ಕೊಟ್ಟು, ಸಾಮಾನ್ಯವಾಗಿ ಗೂಢಚಾರರು ಹೊಂದಬೇಕಾದ ಪರಿಣಾಮವನ್ನೇ ಹೊಂದಿದಳು.

ನಾಲ್ಕು ತಿಂಗಳುಗಳ ತನಕ ಅವಳು ನಾಝಿಗಳ ಕಣ್ಣುಗಳಿಗೆ ಮುಳ್ಳಾಗಿದ್ದಳು. ಯಾಕೆಂದರೆ ಜರ್ಮನ ನಾಝಿಗಳ ಅನೇಕ ಗೋಪ್ಯ ಸಂಗತಿಗಳ ತಿಳಿಯಲಿಕ್ಕೆ ಅವಳು ಬ್ರಿಟಿಷ ಗೂಢಚಾರರಿಗೆ ಸಹಾಯಕಳಾಗಿದ್ದಳು. ನೋಡಲಿಕ್ಕೆ ಸುಂದರಳು, ಸುಸಂಸ್ಕೃತಳು, ಪರಿಶುದ್ಧವಾದ ಜರ್ಮನ್ ಭಾಷೆಯನ್ನು ಅವಳು ತಪ್ಪು ಕಡೆಗಳಿಲ್ಲದೆ ಅಡಬಲ ವಳಸಿದಳು. ಅದ್ದರಿಂದ ಈ ಲಲನಾಮಣಿಗೆ, ಜರ್ಮನಿಯನ್ನು ಪ್ರವೇಶಿಸಿದೊಡನೆಯೇ ಬರ್ಲಿನಿನ ಸಭ್ಯ ಸಮಾಜದಲ್ಲಿ ಸ್ಥಾನವನ್ನು ಪಡೆಯಲಿಕ್ಕೆ ಕಷ್ಟವಾಗಲಿಲ್ಲ. ಅಲ್ಲಿಯವರೆಲ್ಲರೂ ಅವಳನ್ನು–ಪ್ರಸಿದ್ಧ ಒಂದು ಪ್ರತಿಷ್ಠಿತ ಕುಟುಂಬದವಳೆಂದೇ ಭಾವಿಸಿದ್ದರು.

ಗುಟ್ಟು ರಟ್ಟು....

ಆದರೆ ಫ್ರೆಂಚನಂತೆ ವೇಷಪಲ್ಲಟಿಸಿಕೊಂಡಿದ್ದ ಒಬ್ಬ ಜರ್ಮನ ಸಹಚರನಿಂದಾಗಿ ಅಲ್ಲಿಯ ಗೂಢಚಾರರಿಗೆ ಅವಳ ಮೇಲೆ ಸಂದೇಹವುಂಟಾಯಿತು. ಅವನು ಒಂದು ದಿನ ಮೆಲ್ಲಗೆ ಬಂದು ಅವಳು ಜರ್ಮನ ಗೂಢಚಾರ ಸೇನೆಯಲ್ಲಿ ಸೇರಬೇಕೆಂದು ಸೂಚಿಸಿದುದಕ್ಕೆ ಅವಳು ಕೂಡಲೇ ಒಪ್ಪಿಕೊಂಡುದರಿಂದ ಸಂದೇಹವು ಇನ್ನಷ್ಟು ಬಲವಾಯಿತು. ಜರ್ಮನ ಗೂಢಚಾರರಿಟ್ಟ ಬೋನಿನಲ್ಲಿ ಈ ಪ್ರಕಾರ ಅವಳು ಗೊತ್ತಿಲ್ಲದೆ ಸಿಲುಕಿಕೊಂಡಳು. ಆದರೂ ಅವಳ ಇತರ ಸಹಕಾರಿಗಳನ್ನು ಕಂಡುಕೊಳ್ಳುವ ತನಕ ಅವರು ಅವಳಿಗೆ ಒಂದು ಹುದ್ದೆಯನ್ನು ಕೊಟ್ಟು ಕೆಲವು ದಿನಗಳನ್ನು ಕಳೆದರು.

ಕೊನೆಗೆ ಆ ಎಂಟು ಮಂದಿಯೂ ಸಿಕ್ಕಿದರು. ಅವರನ್ನು ಸ್ವದೇಶಕ್ಕೆ ಮರಳಿಸುವದು ನಾಝಿಗಳಿಗೆ ಹಿತಕರವಾಗಿ ತೋರಲಿಲ್ಲ. ಒಂದು ದಿನ ರಾತ್ರಿ ಕಾಲದಲ್ಲಿ ಯಾರಿಗೂ ತಿಳಿಯದ ಹಾಗೆ ಅವರೆಲ್ಲರನ್ನು ಹಿಡಿದು ಪೂರ್ವ ಪ್ರಶ್ಯಕ್ಕೆ ಒಯ್ದರು. ಅಲ್ಲಿಂದ ಮತ್ತೆ ಅವರನ್ನು ಬರ್ಲಿನಿಗೆ ಸಾಗಿಸಿದರು. ಕ್ಷಣಕಾಲದೊಳಗಾಗಿ ಹೆಸರು ಪೂರ್ತಿಯ ವಿಚಾರಣೆಯಾಗಿ ಆ ಒಂಭತ್ತು ಮಂದಿಗೆ ಪ್ರಾಣಾಂತ ಶಿಕ್ಷೆಯನ್ನು ಕೊಟ್ಟರು. ತಲೆ ಕಡಿಯುವ ಮೊದಲು ಹೆಚ್ಚು ಸಮಯವನ್ನೂ ಕಳೆಯಲಿಲ್ಲ. ಒಂದೇ ರಾತ್ರಿಯೊಳಗಾಗಿ ಇಡೀ ನಾಟಕವು ಮುಗಿಯಿತು.

ಅಂದು ಯಾರ ಯಾರ ತಲೆ ಕಡಿದಿದ್ದರೆಂದು ಇದುವರೆಗೆ ಪ್ರಕಟವಾಗಿಲ್ಲ. ಆದರೂ ಆ ಲಲನಾಮಣಿ ಲಂಡನಿನ ಸಭ್ಯ ಸಮಾಜದಲ್ಲಿ ಎಲ್ಲರ ಪರಿಚಯದವಳಾಗಿದ್ದಳೆಂಬ ಪ್ರತೀತಿ ಇದೆ. ಅವಳಿಗೆ ರಾಜದರ್ಬಾರಿನಲ್ಲಿ ಸನ್ಮಾನವೂ ದೊರಕಿತ್ತೆಂದೂ ಹೇಳಲಾಗುತ್ತದೆ.

HALFTONE & LINE
BLOCK MAKING
UNDERTAKEN
Sharadha Press,
MANGALORE

ರಾತ್ರೆ ಸುಖವಾದ ನಿದ್ದೆ ಬೀಳಬೇಕಾದರೆ ಒಂದು ಕಪ್ಪು 'ಓವಲ್‌ಟಿನ್' ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್‌ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯೂ ಉಂಟಾಗುತ್ತದೆಂದು ಖಂಡಿತ ಹೇಳಬಹುದು.

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ಬಲಿತು ಮಾಗಿದ ಬಾರ್ಲಿ, ದನದ ಹಾಲು ಮತ್ತು ಇತರ ಆರೋಗ್ಯದಾಯಕ ವಿಟಮಿನ್ ಮತ್ತು ಫಾಸ್ಫೇಟ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್‌ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ದೆಯೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ. ಇತರ ನಕಲಿ ಪಾನೀಯಗಳನ್ನು ಬಿಡಿರಿ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆಡ್,
149 ಬ್ರೋಡ್‌ವೇ, ಮದ್ರಾಸು
ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ನ್ಯಶಿಷ್ಟ ಬೆಲೆಯ 'ಓವಲ್‌ಟಿನ್' ಸೇರಿರುತ್ತದೆ. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV/64/34

MISSING

PAGE 3,4,5,6,

MISSING

PAGE 3, 4, 5, 6,

ಒಂದು ಸಣ್ಣ ಕತೆ:—

ನಿರ್ಮಲ ಹೃದಯ

ಸ್ವಂತ ದುಡಿಮೆಯ ಸರಕಾರವಿದ್ದು, ಹೊಟ್ಟೆ ತುಂಬ ಊಟವಿದ್ದು ಆತನ ಜೀವನವು ಸುಖಮಯವಾಗಿತ್ತು! ಧೀನನು ಹಿರಿಯ ತನ್ನ ಕುಲವೃತ್ತಿಯಿಂದಲೇ ಆತ ಮನೆ, ಹಿತ್ತಲು ಇವುಗಳನ್ನು ಗಳಿಸಿಕೊಂಡಿದ್ದ. ತನ್ನ ಮಗನೂ ಪ್ರಾಯಕ್ಕೆ ಬಂದು ತನ್ನ ಕಸುಬಿನಲ್ಲಿ ಕೈಗೊಟ್ಟು ಅಂತಾಗ ಸಹಜವಾಗಿ ಆವನ ಸಂಪಾದನೆ ಏರಿಹೋಯಿತು. ಅಂತಹ ಸಮಯದಲ್ಲಿ ತನ್ನ ಒಬ್ಬಳೇ ಒಬ್ಬ ಮಗಳು ಗಂಡನ ಮನೆಯಲ್ಲಿ, ಹತ್ತಾರು ಮಂದಿಯೊಡನೆ, ಕಷ್ಟದಿಂದ ದಿನ ಕಳೆಯುತ್ತಿರುವುದನ್ನು ನೋಡಿ, ಆಕೆಯನ್ನೂ ಆಕೆಯ ಗಂಡನನ್ನೂ ತನ್ನಲ್ಲಿಗೇ ಕರೆಸಿಕೊಂಡಿದ್ದ. ಆದರೆ, ಜೀವನದಲ್ಲಿ ಇಂತಹ ಸಂತಸದ ದಿನಗಳು ಬಹು ಸಮಯ ಉಳಿಯುವುದಿಲ್ಲ. ದೊಡ್ಡ ರೋಗವು ಹರಡಿ ಊರಿಗೆ ಊರೇ ಸಾವಿನ ಬಾಯಿಗೆ ಬಲಿಯಾಗುತ್ತಾ ಬಂತು. ಪುಟ್ಟಮ್ಮ—ಆತನ ಹೆಂಡತಿ ಮೊದಲು ರೋಗಕ್ಕೆ ತುತ್ತಾದಳು ಬಹು ಕಾಲದ ಸಂಗಾತಿ, ಜತೆಯ ಜೀವ, ಹೀಗೆ ಅಗಲಿ ಹೋದಾಗ ಬೀರನಿಗೆ ಸಹಿಸಲಾರದ ವೇದನೆಯಾಯಿತು. ಆದರೆ, ತನ್ನ ವಂಶವನ್ನು ಬೆಳಗಿಸುವ ಮಗನ ಮುಖವನ್ನು ನೋಡಿ, ಮಗಳು, ಅಳಿಯ ಈ ಸಂಸಾರದ ಮಮತೆಯಲ್ಲಿ ಆತ ಅದನ್ನು ಮರೆತುಬಿಟ್ಟಿದ್ದ. ಆದರೆ, ಆತನ ಹೆಂಡತಿ ಪುಟ್ಟಮ್ಮ ತೀರಿಹೋದದ್ದೇ ತಡ, ಬೀರನ ಮನೆಯ ಬೆಳಕೇ ನಂದಿಹೋದಂತೆ ಆಯಿತು. ಕೆಲವೇ ದಿನಗಳಲ್ಲಿ ಅಳಿಯನೂ ತೀರಿಹೋದ ಮಗಳ ವೈಧವ್ಯವನ್ನು ಕಂಡು ಆತ ಬಹಳವಾಗಿ ಮರುಗಿದ ಆದರೆ ಗಂಡನ ನೆನಪಿಗಾಗಿ ಆಕೆ ಗಾಗರೂ ಒಂದು ಮಗುವಿದೆ ಜೀವನಕ್ಕಾಗಿ ಆಕೆ ದುಡಿಯಬೇಕಾಗಿಲ್ಲ ತನ್ನ ಮನೆಯಲ್ಲಿ ಸುಖವಾಗಿ ಇರಬಹುದೆಂದು ತಿಳಿದು ತಾನೂ ಸಮಾಧಾನಗೊಂಡಿದ್ದ, ಮಗಳನ್ನೂ ಹಾಗೆ ಸಂತೈಸಿದ್ದ ಅದೃಷ್ಟವು ಅವನನ್ನು ಅಷ್ಟರಲ್ಲಿಯೇ ಬಿಡಲಿಲ್ಲ ಕೆಲದಿನಗಳಲ್ಲಿ ಆತನ ಮಕ್ಕಳಿಬ್ಬರೂ ರೋಗಕ್ಕೆ ಬಲಿಯಾದರು ಇದು ಆತನ ಸಂಕಷ್ಟದ ಪರಮಾವಧಿಯಾಗಿತ್ತು ಇಡೀ ಪ್ರಪಂಚದಲ್ಲಿ ತನ್ನ ಮೊಮ್ಮಗಳು ಆ ಐದು ವರ್ಷದ ಹಸುಳೆಯೊಂದು, ತಾನೊಬ್ಬ ಹೀಗೆ ಯಾವ ಆಧಾರವೂ ಇಲ್ಲದೆ, ಸಂಕಷ್ಟಕ್ಕೆ ಗುರಿಯಾದ ಅವರಿಬ್ಬರೇ! ಬೀರನು ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸಿದ ಕಡಲು ಜೋರಾಗಿ ಗರ್ಜಿಸಿ ಎಷ್ಟು ನೊಂದವರಿಗೂ ತನ್ನೊಡಲಲ್ಲಿ ಆಶ್ರಯವೀಯುವುದಾಗಿ ಕರೆಯುತ್ತಿತ್ತು ಬೀರ, ಕಡಲಿಗೆ ಹಾರಿ ವೇದನೆಯ ಜೀವನವನ್ನು ಮುಗಿಸಿಬಿಡಬೇಕೆಂದು ನಿರ್ಧರಿಸಿ ಎಷ್ಟೋ ಸಲ ಕಡಲ ದಂಡೆಗೆ ಬಂದು ನಿಲ್ಲುವಷ್ಟರಲ್ಲಿ ಆತನಿಗೆ ನಿರಪರಾಧಿಯಾದ ಹಸುಳೆ ತನ್ನ ಮೊಮ್ಮಗಳ ನೆನಪಾಗಲು, ಆಕೆಗೆ ಮುಂದೆ ಗತಿಯಿಲ್ಲವಲ್ಲಾ ಎಂದು ಹೊಳೆದಾಗ, ತನ್ನ ನಿರ್ಧಾರವನ್ನೆಲ್ಲಾ ಮರೆತು, ಮಮತೆ ಉಕ್ಕಿ, ತಿರುಗಿ ತನ್ನ ಮನೆಗೆ ಓಡಿಹೋಗಿ, ಮೊಮ್ಮಗಳನ್ನು ಮುದ್ದಿಸಿ ತನ್ನ ಕರುಳಿನ ವೇದನೆಯನ್ನು ಹಾಗೆ ಸಂತೈಸುತ್ತಿದ್ದ

ಹೀಗೆ, ದಿನ, ವಾರ, ವರ್ಷಗಳು ಗತಿಸಿದವು

ಬೀರನ ಪಾಲನೆಯಲ್ಲಿ ಆತನ ಮೊಮ್ಮಗಳು ಚೆನ್ನಿ ಬೆಳೆಯುತ್ತಾ ಬಂದಳು ಪ್ರಾಯವು ಹೆಚ್ಚುವುದರೊಡನೆ ಬೀರನಿಗೆ ಕಾಲು ಕೈಗಳ ಗಂಟುಗಳಲ್ಲಿ ನೀರು ಬಂದು, ಮುಂದೆ ದುಡಿಯುವುದೂ ಆಗಲಿಲ್ಲ. ಚೆನ್ನಿಗೆ ಹದಿನಾರು ವರ್ಷ, ಆಕೆ ದುಡಿದು ಮುದುಕನನ್ನೂ ಸಾಕುತ್ತಿದ್ದಳು.

ಕಡಲ ತಡಿಯಲ್ಲಿದ್ದ ಎತ್ತರವಾದ ಬಂಡೆಯೊಂದರ ಮೇಲೆ ತೆರೆಗಳ ಹೊಡೆತದಿಂದ ರಾಶಿಯಾಗುತ್ತಿದ್ದ ಹಸಿ ಹುಲ್ಲನ್ನು ಹೆಕ್ಕಿ ತಂದು, ಹಳ್ಳಿಗೆ ಹೋಗಿ ವ್ಯಾಪಾರ ಮಾಡಿ, ಚೆನ್ನಿ ತನ್ನ ಮತ್ತು ಅಜ್ಜನ ಜೀವನ ನಡೆಸುತ್ತಿದ್ದಳು. ಸ್ವಂತ ಆ ಹುಲ್ಲು ಬಳ್ಳಿಯ ಗೊಬ್ಬರವಾಗುತ್ತಿದ್ದುದರಿಂದ, ಚೆನ್ನಿಗೆ ಅದರಿಂದ ಸಾಕಷ್ಟು ಉತ್ಪತ್ತಿಯಿತ್ತು. ಸಮುದ್ರದ ಅಲೆಗಳು ಬಂಡೆಯ ಮೇಲೆ ಬಲವಂತವಾಗಿ ಬಡಿಯುತ್ತಿದ್ದರೂ, ನಿರಾತಂಕವಾಗಿ ಆಕೆ ದಿನವಿಡೀ ಅಲ್ಲಿ ನಿಂತುಕೊಂಡಿದ್ದು ಹುಲ್ಲನ್ನು ಹೆಕ್ಕುತ್ತಾ ಇರುವಳು. ಜನರು, ನಿಜವಾಗಿಯೂ ಆಕೆಯ ಸಾಹಸವನ್ನು ಮೆಚ್ಚುವಂತಿತ್ತು. ಆದರೆ ನೆರೆಕರೆಯವರು ಕೆಲವರು ಮತ್ಸರಪಡುತ್ತಿದ್ದರು. ಒಂದು ದಿನ ಆಕ್ಷೇಪ ಸುವ ತೆರೆಯೆದ್ದು ಆಕೆಯನ್ನು ಕೊಚ್ಚಿಕೊಂಡು ಹೋದರೆ, ಮುಂದಕ್ಕೆ ಆ ಸ್ಥಳವನ್ನು ಆಕ್ರಮಿಸಿ ತಾವು ಜೀವನ ನಡೆಸಬಹುದೆಂದು ಅವರದು ದುರಾಗ್ರಹದ ಬಯಕೆಯಾಗಿತ್ತು. ಆದರೆ ಎಷ್ಟೋ ಸಮಯಗಳಿಂದ ತಾವು ಆ ಬಂಡೆಯಲ್ಲಿ ಹುಲ್ಲು ಹೆಕ್ಕುತ್ತಿದ್ದುದರಿಂದ ಇತರರಿಗಾದರೂ ಅಲ್ಲಿಗೆ ಬರಲು ಹಕ್ಕಿಲ್ಲವೆಂದೂ, ಅದು ತಮ್ಮ ಸ್ವಂತ ಜಾಗವೆಂದೂ ಚೆನ್ನಿ ತಿಳಿದಿದ್ದಳು ಮಾತ್ರವಲ್ಲದೆ ಯಾರಾದರೂ, ಅಪ್ಪಿ ತಪ್ಪಿ ಬಂಡೆಯ ಬಳಿ ಸುಳಿದರೆ ಸಾಕು, ಆಕೆ ಸಿಡಿದು ಬೀಳುತ್ತಿದ್ದಳು ಆಕೆಗೆ ಹೆದರಿಯೇ ಜನರು ಯಾರೂ ಅಲ್ಲಿಗೆ ಬರುತ್ತಿರಲಿಲ್ಲ ಎಣ್ಣೆ, ಬಾಚಣಿಗೆಗಳನ್ನು ಕಾಣದ ಕಪ್ಪು ದಟ್ಟ ತಲೆಗೂದಲುಗಳು, ಪುಷ್ಟವಾದ ಶರೀರ, ಹೆಚ್ಚು ಕಿರಿದೂ, ಬಹಳ ಹಿರಿದೂ ಅಲ್ಲದ ಗಾತ್ರ, ಶುಭ್ರವಾದ ಕಪ್ಪು ಕಣ್ಣುಗಳು, ಚೆನ್ನಿ ಹೀಗೆ ಒಂದು ವಿಶೇಷ ತರದ ಹೆಂಗುಸಾಗಿದ್ದಳು! ಸುತ್ತಲಿನ ಜನರು, ಆಕೆ ಬಹಳ ಶಕ್ತಿವಂತಳೆಂದೂ, ಧೈರ್ಯಶಾಲಿನಿಯೆಂದೂ ಹಗಲಿರುಳೆನ್ನದೆ, ಅವಿಶ್ರಾಂತಳಾಗಿ ದುಡಿದರೂ ಅವಳಿಗೆ ಆಯಾಸವೇ ಇಲ್ಲವೆಂದೂ ಹೇಳುತ್ತಿದ್ದರು

ಚೆನ್ನಿ ಒಮ್ಮೆ ತನ್ನಜ್ಜ ಬೀರನೊಡನೆ ದುಡುಕಿನಿಂದ ಹೇಳಿದ್ದಳು. ಒಮ್ಮೆ ನರಸನನ್ನು ಬೆಳಗು ಮುಂಜಾನೆಯ ಹೊತ್ತು ಆಕೆಯು ಆ ಬಂಡೆಯ ಮೇಲೆ ಕಂಡಳು. ಸೀದಾ ಆತನ ಬಳಿಗೆ ಹೋದವಳೇ 'ನಿನಗೆ ಇನ್ನೆಲ್ಲಿಯಾದರೂ ಹೋಗಿ ಹುಲ್ಲು ಹೆಕ್ಕಲು ದಾರಿಯೆ? ಅಲ್ಲಿ ಎಲ್ಲ ಕುಂಬಾ ಇದೆ ಕಳ್ಳತನ ಮಾಡಿ ನೀನು ಎಂದೂ ನನ್ನ ಕಣ್ಣು ತಪ್ಪಿಸಿಕೊಳ್ಳಲಾರೆ' ಆಕೆ ಸಿಟ್ಟಿನಿಂದ ಹೇಳಿದಳು.

'ಚೆನ್ನೀ, ಇಲ್ಲಿನಷ್ಟು ಹುಲ್ಲು ಇನ್ನೆಲ್ಲಿಯೂ ಸಿಗುವುದಿಲ್ಲ ಸಮುದ್ರದಲ್ಲಿರುವ ಬಂಡೆಗೆ ನೀನು ಬರುವಂತೆ ನಾನೂ ಬರುತ್ತೇನೆ ಇದರಲ್ಲಿ ಕಳ್ಳತನವೇನಿದೆ?' ನರಸ ಆಕೆಯೊಡನೆ ಸರಸವಾಗಿ ನಗಾಡಿ ಹೇಳಿದ ಕಡೆಗೆ ಆಕೆಯನ್ನು ಸಮಾಧಾನಪಡಿಸಲು ನರಸನು, ಅದೇ ಬಂಡೆಯ ಸಮೀಪದಲ್ಲಿದ್ದ ಇನ್ನೊಂದು ಬಂಡೆಯ ಕಡೆಗೆ ಕೈ ತೋರಿಸಿ, ಮುಂದಕ್ಕೆ ತಾನು ಅಲ್ಲಿ ಹುಲ್ಲನ್ನು ಹೆಕ್ಕುವುದಾಗಿಯೂ, ಆಕೆ ಈ ಬಂಡೆಯಲ್ಲಿ ಹೆಕ್ಕುವ ಹುಲ್ಲಿನ ಇಮ್ಮಡಿಯಷ್ಟು ತಾನು ಅಲ್ಲಿ ಸಂಗ್ರಹಿಸಿ, ಮುಂದೆ, ಆಕೆಗಿಂತ ಕಡಿಮೆ ಕ್ರಯ



ನ್ಯೂ ಥಿಯೇಟರ್ಸ್‌ನವರ ಹಾವಾಡಿಗ' ಚಿತ್ರದ ಒಂದು ದೃಶ್ಯ

ದಲ್ಲಿಯೇ ತಾನು ಹುಲ್ಲು ಮಾರುವುದಾಗಿಯೂ ತಿಳಿಸಿ ಹೇಳಿದ ಇದೆಲ್ಲವನ್ನೂ ಕೇಳಿದಂತೆ ಚೆನ್ನಿಗೆ ಸಿಟ್ಟು ಮತ್ತು ಸಂತಸ ಇವೆರಡೂ ಒಟ್ಟಿಗೆ ಆತನು ತನ್ನ ಬಂಡೆಯ ಸಮೀಪದಲ್ಲಿಯೇ ಹುಲ್ಲು ಹೆಕ್ಕುವುದಾಗಿಯೂ ತನ್ನೊಡನೆ ಸ್ಪರ್ಧೆ ಮಾಡುವುದಾಗಿಯೂ ತನಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವುದಾಗಿಯೂ ಹೇಳಿದ್ದಕ್ಕಾಗಿ ಸಿಟ್ಟುಗೊಂಡಿದ್ದಳು ಆದರೆ, ಒಳಿಯ ಬಂಡೆಗೆ ಹೋಗಿ ಆತನು ಬಹಳ ಕಾಲ ಹುಲ್ಲು ಹೆಕ್ಕಲಾರನೆಂದು ತಿಳಿದು ಆಕೆ ಸಂತಸಗೊಂಡಳು' ಅವಳ ಸಿಟ್ಟು ಧಾಷ್ಟ್ಯಗಳಿಗಾಗಿಯೂ, ಅವಳ ವೇಷಕ್ಕಾಗಿಯೂ, ನರಸ ಆಕೆಯನ್ನು ತಮಾಷೆಮಾಡಿ, ಮತ್ಸರಪಡುವ ಜನರು ಆಕೆಯ ಕುರಿತು ಏನೇನೋ ಹೇಳುತ್ತಿದ್ದರೂ, ಸುತ್ತಲಿನ ಹಳ್ಳಿಯ ಪ್ರಾಯ ತುಂಬಿದ ಹುಡುಗರು ಆಕೆಯನ್ನು ಅವಳು ತನ್ನ ಮುದಿ ಅಜ್ಜನನ್ನು ಅಷ್ಟು ಪ್ರೀತಿಯಿಂದ ಸಲಹುತ್ತಿರುವುದನ್ನು ನೋಡಿ ಬಹಳವಾಗಿ ಕೊಂಡಾಡುತ್ತಿದ್ದರು. ಹೇಗಿದ್ದರೂ ಸುತ್ತಲಿನ ಜನರ ವಿಷಯ ಆಕೆ ಒಮ್ಮೆಯೂ ಏನೊಂದೂ ವಿಚಾರ ಮಾಡಿದವಳೇ ಅಲ್ಲ ಅವರೊಡನೆ ಮಮತೆಯಿಂದ ಮಾತನಾಡಿ ಆಕೆಗೆ ಗೊತ್ತಿಲ್ಲ ಯಾವುದೇ ಹಬ್ಬ ಹುಣ್ಣಿಮೆ ಬರಲಿ ಜಗತ್ತಿನಲ್ಲಿ ಏನೇ ನಡೆಯುತ್ತಿರಲಿ, ಅವಳದು ಒಂದೇ ರೀತಿಯ ಉಡಿಗೆ, ಅದೇ ಕಸುಬು, ಅದೇ ವ್ಯವಹಾರ ಸಹಜವಾಗಿಯೂ ಜನರು ಆಕೆಯ ವಿಚಿತ್ರ ನಡತೆಯ ವಿಷಯ ಆಶ್ಚರ್ಯಗೊಂಡಿದ್ದರು ತರುಣರಂತೂ ಆಕೆಯನ್ನು ಕಂಡರೆ ಒಂದು ರೀತಿಯಿಂದ ಹೆದರಿಕೊಳ್ಳುತ್ತಿದ್ದರು'

ಬಸಪ್ಪ ಒಂದು ದಿನ ಚೆನ್ನಿಯೊಡನೆ, ಹುಲ್ಲಿನ ಕ್ರಯದ ವಿಷಯವಾಗಿ ಜಗಳ ಹೂಡಿದ ಆವನು ಹೇಳಿದ ಬೆಲೆಗೆ ಹುಲ್ಲನ್ನು ಮಾರುವುದಕ್ಕಿಂತ, ತಾನು ಅದನ್ನು ಎರಿಗಿ ಸಮುದ್ರಕ್ಕೇ ಎಸೆದುಬಿಡುವೆನೆಂದು ಚೆನ್ನಿ ಹೇಳಿದಳು. ಒಂದು ಚಿಕ್ಕಾಸೂ ಬೆಲೆ ಹೆಚ್ಚು ಕೊಡಲಾರೆನೆಂದು ಬಸಪ್ಪನೂ ಹೇಳಿದ. ಚೆನ್ನಿ ಮುಂದೆ ಮಾತನಾಡದೆ ಅಲ್ಲಿಂದ ಹೊರಟು ಬಂದಿದ್ದಳು. ಸರಿ, ಆ ಮೇಲೆ, ಚೆನ್ನಿಯ ಕುರಿತು ಬಸಪ್ಪನಿಗೆ ದ್ವೇಷ ಹೆಚ್ಚಿತು ಆಕೆಗೆ ತಿಳಿಯದಂತೆ, ಬಂಡೆಗೆ ಹೋಗಿ ಅಲ್ಲಿನ ಹುಲ್ಲನ್ನೆಲ್ಲಾ ಕದ್ದು ತರಬೇಕಾಗಿ ತನ್ನ ಮಗ ನರಸನನ್ನು ಕಳುಹಿಸಿದ, ತನ್ನ ಬಂಡೆಯ ಮೇಲಿಂದ ಹುಲ್ಲಿನ ಕಳವು ಆಗುತ್ತಿರುವುದು ಚೆನ್ನಿಯ ಗಮನಕ್ಕೆ ಬಂತು. 'ಒಮ್ಮೆ ನಾನು ಮೆಲ್ಲನೆ ಹಿಂದಿನಿಂದ ಹೋಗಿ, ಕಳ್ಳನನ್ನು ಬಂಡೆಯಿಂದ ಕೆಳಗೆ ಕಡಲಿಗೆ ದೂಡಿಬಿಡುತ್ತೇನೆ'

ಛತ್ರಿಯ ಕಟ್ಟನ್ನು ತಲೆಯ ಮೇಲೆ ಹೊತ್ತುಕೊಂಡು, ಮನೆಯ ದಾರಿ ಹಿಡಿದು ನಡೆದ. ಚೆನ್ನಿ ಆತನ ಕಡೆಗೇ ಕಣ್ಣರಳಿಸಿ ನೋಡುತ್ತಿದ್ದಳು. ವಿಶಾಲವಾದ ಹಣೆ, ಹಣೆಯ ಮೇಲೆ ಕೆದರಿದ್ದ ಮುಂಗುರುಳುಗಳು, ದೀರ್ಘವಾದ ಆಕಾರ, ಗಟ್ಟಿಮುಟ್ಟಾದ ತೋಳುಗಳು; ಹೀಗೆ ತುಂಬು ಜವ್ವನದ ತರುಣ; ಆತನನ್ನು ನೋಡುತ್ತಿದ್ದಂತೆ ಚೆನ್ನಿಗೆ ಏನೋ ಒಂದು ಅಪೂರ್ವ ಆನಂದದ ಅನುಭವವಾಯಿತು! ತಿರುಗಿ, ಆಕೆ ತನ್ನ ಕೆಲಸಕ್ಕೆ ಸುರು ಹಚ್ಚಿದಳು ಪೂರ್ವ ದಿಕ್ಕಿನಲ್ಲಿ ಅರುಣ ಕಾಂತಿಯನ್ನು ಚೆಲ್ಲಿ, ಸೂರ್ಯನು ಉದಿಸಿ ಬರುತ್ತಿದ್ದನು. ಅವನ ಕಿರಣಗಳು ಸಮುದ್ರದ ತೆರೆಗಳ ಮೇಲೆ, ಸುಂದರವಾಗಿ ನರ್ತನವಾಡುತ್ತಿದ್ದುವು! ಕಡಲು ಗಂಭೀರವಾಗಿ ಶಬ್ದಮಾಡುತ್ತಿದ್ದಾಗ, ಆನಂದದ ಸಮಯದಲ್ಲಿ ಆಕೆಯ ಅಜ್ಜ ಹೇಳುತ್ತಿದ್ದ ಪಾಡ್ದನವೊಂದನ್ನು, ಚೆನ್ನಿ ಗಟ್ಟಿಯಾಗಿ ಹಾಡುತ್ತಾ ಹುಲ್ಲು ಸಂಗ್ರಹ ಮಾಡುತ್ತಿದ್ದಳು.

ಮರುದಿನ ಮುಂಜಾನೆ, ನರಸ ಬರುವುದಕ್ಕಿಂತ ಮೊದಲೇ ಚೆನ್ನಿ ತನ್ನ ಬಂಡೆಯ ಮೇಲೆ ಬಂದು ನಿಂತಿದ್ದಳು ಆತ ಬಂದಾಗ, ಇನ್ನು ಬೇರೆ ಉಪಾಯವಿಲ್ಲದೆ, ನಿನ್ನೆ ಆಕೆಯೊಡನೆ ಜಂಬ ಕೊಚ್ಚಿದಂತೆ, ಈಗ ಹತ್ತಿರದ ಇನ್ನೊಂದು ಬಂಡೆಗೆ ಹೋಗಲೇಬೇಕಾಯಿತು. ನರಸ ಬಂದವನೇ ಹಿಂದು ಮುಂದು ನೋಡದೆ ಸಮುದ್ರಕ್ಕಿಳಿದು ಆ ಬಂಡೆಯ ಕಡೆಗೆ ಈಜತೊಡಗಿದ. ಆತ ಬಂದದ್ದನ್ನು ಚೆನ್ನಿ ತಿಳಿದಿದ್ದರೂ, ಅವನೊಡನೆ ಮಾತನಾಡದೆಯೇ ಆಕೆ ತನ್ನ ಕೆಲಸವನ್ನು ಮಾಡುತ್ತಾ ಇದ್ದಳು ಆತನೇ ಮೊದಲು ಮಾತನಾಡಿಸಬೇಕೆಂದೂ, ಈ ದಿನ ತಾನು ಆತನನ್ನು ಮೊದಲು ಬಂದು ಸೋಲಿಸಿದೆನೆಂದೂ ಆಕೆ ಗ್ರಹಿಸಿದ್ದಳು ಆದರೆ ನರಸನು ಸೀದಾ ಸಮುದ್ರಕ್ಕೆ ಇಳಿದು, ಬಂಡೆಯ ಕಡೆಗೇ ಈಜುವುದನ್ನು ನೋಡಿ, ಅವಳ ನಿರ್ಧಾರವು ತಪ್ಪಿಹೋಯಿತು

'ಅಯ್ಯೋ! ನಿನಗೆ ಹುಚ್ಚು! ನೀನು ಆ ಬಂಡೆಯ ಕಡೆಗೆ ಈಜಿ ಹೋದರೆ, ತಿರುಗಿ ಬರುವ ಹಾಗಿಲ್ಲ' ಚೆನ್ನಿ ಕೂಗಿ ಹೇಳಿದಳು

'ನೀನು ನಿನ್ನ ಕೆಲಸ ಮಾಡು, ನನ್ನ ವಿಷಯ ನಿನಗೆ ಯೋಚನೆ ಬೇಡ' ಹೀಗೆಂದು ಹೇಳಿ ನರಸ ಈಜುತ್ತಾ ಮುಂದೆ ಹೋಗುತ್ತಿದ್ದ.

'ಒಳ್ಳೆಯದಾಯಿತು, ಅವನ ದರ್ಪ ಈಗ ಇಳಿಯುತ್ತದೆ' ಹೀಗೆಂದು ಆಕೆ ತನ್ನ ಕೆಲಸದಲ್ಲಿಯೇ ಮಗ್ನಳಾದಳು.

ಎರಡು ನಿಮಿಷ ಕಳೆದಿರಲಿಲ್ಲ' ಸಮೀಪದ ಬಂಡೆಯ ಕಡೆಯಿಂದ ಕೂಗಿದ ಶಬ್ದ ಕೇಳಿತು' ಚೆನ್ನಿ ಹೊರಳಿ ನೋಡಿದಳು. ಎದ್ದು ಹಾರುವ ತೆರೆಗಳ ನಡುವೆ ನರಸನ ಶರೀರವು ಹೊಡೆದಾಡುತ್ತಿತ್ತು. ಒಂದು ತೆರೆಯೆದ್ದು, ಆತನ ಶರೀರವನ್ನು ಬಂಡೆಗೆ ಒಡೆಯಿತು. ಚೆನ್ನಿ ಚೀರಿದಳು! ತಿರುಗಿ ಆತನ ಶರೀರವು ತೆರೆಗಳ ನಡುವೆ ಎದ್ದು ಮುಳುಗುವುದು ಕಂಡಿತು' ಆತನ ತಲೆಗೆ ಗಾಯವಾಗಿ ನೆತ್ತರು ಚಿಮ್ಮುವುದೂ ಆಕೆಗೆ ತೋರದಿರಲಿಲ್ಲ'

[...ನೆಯ ಪುಟವನ್ನು ನೋಡಿರಿ]

ಸಾವಕಾರ ಶ್ರೀನಿವಾಸ ರಂಗಪ್ಪೈ
[ಸ್ಥಾಪನೆ: ಕ್ರಿ ಶ 1858]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

ಸೋವಿಯಟ್ ರಶ್ಯದ ರಕ್ಷಣೋಪಾಯಗಳು

★ ರಶ್ಯದ ಪ್ರಬಲ ಶಕ್ತಿಯು ಜಗತ್ತಿಗೆ ತಿಳಿದಿಲ್ಲ!
★ ೪೦೦೦ಕ್ಕಿಂತ ಮಿಕ್ಕಿದ ವಿಮಾನಗಳು!

ರಶ್ಯದ ಸೇನಾಪತಿ ವೊರೊಶಿಲೊವ್

1936ನೆ ಇಸವಿಯ ಮೇ ದಿನಾಚರಣೆಗಳಾಗುವ ಸಂದರ್ಭದಲ್ಲಿ ಸೋವಿಯಟ್ ಸರಕಾರವು ತನ್ನ ಮಿಲಿಟರಿ ಶಕ್ತಿಯ ಕೆಲವು ಪ್ರದರ್ಶನಗಳನ್ನು ಮಾಡಿತು ಏಳು ಠಾಣ್ಯಗಳಲ್ಲಿ ಒಂದೇ ದಿನ ಒಂದೇ ಸಮಯಕ್ಕೆ ಈ ಪ್ರದರ್ಶನಗಳು ನಡೆದುವು. ಬೇರೆ ಬೇರೆ ಪ್ರದರ್ಶಕರು ತಾವು ನೋಡಿದುದನ್ನು ಚೆನ್ನಾಗಿ ಪರಿಶೀಲಿಸಿ ರಶ್ಯದ ಸೇನಾ ಶಕ್ತಿಯು ಎಷ್ಟೆಂದು ಅಂದಾಜು ಮಾಡಿಕೊಂಡರು. ಆ ದಿನ ಅವರು ೪೦೦೦ಕ್ಕೆ ಕಡಿಮೆಯಾಗದಷ್ಟು ಯುದ್ಧ ವಿಮಾನಗಳನ್ನು ಕಂಡಿದ್ದರು ಆದರೆ ಈ ಪ್ರದರ್ಶನಗಳು ನಡೆದದ್ದು, ಪೂರ್ವ ಪ್ರಶ್ಯಕ್ಕೆ ಹೊಂದಿಕೊಂಡಿರುವ ರಶ್ಯದ ಏಳು ಮಿಲಿಟರಿ ಠಾಣ್ಯಗಳಲ್ಲಿ ಮಾತ್ರ. ಆದರೆ ಪೂರ್ವ ಪ್ರಶ್ಯದಿಂದಾರಂಭಿಸಿ ಮಂಚುಕೋವದ ತನಕ ಇರುವ ಬಹು ವಿಸ್ತಾರವಾದ ರಶ್ಯದಲ್ಲಿ ಇನ್ನೆಷ್ಟೋ ಗುಪ್ತ ಮತ್ತು ಅತರ ಠಾಣ್ಯಗಳು ಇರುವವು. ಅವುಗಳಲ್ಲಿ ಎಷ್ಟೆಷ್ಟು ವಿಮಾನಗಳಿವೆ ಎಂಬುದು ಯಾವಾತನಿಗೂ ತಿಳಿದಿಲ್ಲ. ಆದರೂ ಯುದ್ಧಕಾಲದಲ್ಲಿ ಪ್ರಯೋಜನಕ್ಕೆ ಬೀಳುವಂಥವುಗಳಾಗಿ ಸೋವಿಯಟ ರಶ್ಯದಲ್ಲಿ ೧೬೦೦೦ದಿಂದ ೧೮೦೦೦ದ ತನಕ ವಿಮಾನಗಳಿರುವವೆಂದು ಒಬ್ಬ ಮಿಲಿಟರಿ ತಜ್ಞರು ಹೇಳಿದ್ದಾರೆ.

ವಿಮಾನ ಸಂಚಾರ ಸಂಚಾಲನಗಳಲ್ಲಿ ಸೋವಿಯಟ ರಶ್ಯದ ಸರ್ವಸಾಧಾರಣ ಜನತೆಯು ಕೂಡ ಅಭಿರುಚಿ ಉಳ್ಳದ್ದಾಗುವಂತೆ ಮಾಡುವ ದಕ್ಷ್ಯೋದ್ದೇಶದ ಸರಕಾರದ ನೆಲೆಯಲ್ಲಿ ಒಂದು ಪ್ರತ್ಯೇಕ ಸಂಸ್ಥೆಯೇ ಇರುವದು. ಈ ಸಂಸ್ಥೆಯ ಹಲವು ವರ್ಷಗಳ ಪ್ರಯತ್ನಗಳಿಂದಾಗಿ ವಿಮಾನ ದಳಗಳಲ್ಲಿ ಪ್ರಕೃತ ಕೆಲಸಮಾಡುತ್ತಿರುವವರು ಮಾತ್ರವಲ್ಲದೆ ಇನ್ನೆಷ್ಟೋ ಸಾವಿರ ಜನರು ವಿಮಾನ ಸಂಚಾಲನ ಮತ್ತು ಅದರ ರಚನಾಕ್ರಮ ಇತ್ಯಾದಿಯಲ್ಲಿ ತರಬೇತಿ ಪಡೆದವರಾಗಿ ಇರುತ್ತಾರೆ. ವಿಮಾನ ಸಂಚಾಲಕರಿಗೆ ತರಬೇತಿಯನ್ನು ಕೊಡುವ ರಶ್ಯದ ಸೇನಾವಿಮಾನ ಪಾಠಶಾಲೆಯು ಜಗತ್ತಿನಲ್ಲಿ ದೊಡ್ಡದು ಮಾತ್ರವಲ್ಲ, ಸರ್ವತ್ರ ಪ್ರಸಿದ್ಧಿಯನ್ನು ಪಡೆದುದಾಗಿರುವದು. ಇಲ್ಲಿ ಶಿಕ್ಷಣಕ್ಕಾಗಿ ಬರುವ ವಿದ್ಯಾರ್ಥಿಗಳು ಮೊದಲು ಎತ್ತರದಲ್ಲಿ ಹಾರಾಡುವ ವಿಮಾನಗಳಿಂದ, ಗಾಳಿ ಕೊಡೆಗಳ ಮೂಲಕ ಕೆಳಗೆ ಹಾರುವ ಅಭ್ಯಾಸಗಳನ್ನು ಕಲಿತುಕೊಳ್ಳುವರು. ಹೀಗೆ ಕೆಳಗೆ ಹಾರಲು ಒಬ್ಬನಿಗೆ ಅಸಾಧಾರಣ ಧೈರ್ಯ ಬಲ ಸಾಹಸ ಮತ್ತು ಮನೋಸ್ಥೈರ್ಯಗಳು ಬೇಕಾಗುವವು. ಆದರೂ ರಶ್ಯದಲ್ಲಿ ಬಹು ಎತ್ತರದಿಂದ ಹೀಗೆ ಕೆಳಗೆ, ಒಂದೆರಡು ಬಾರಿಯಲ್ಲಿ ನೂರಾರು ವಾರಿ ಕೆಳಗೆ ಹಾರಿ ಬಂದವರು ಸಾವಿರಾರು ಮಂದಿ ಇರುವರು. ಇಂಥ ಎದೆಗಾರಿಕೆ ಉಳ್ಳವರನ್ನು ಸರಕಾರವು ವಿಶೇಷ ಪುರಸ್ಕಾರ-ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತದೆ. ಗಾಳಿ ಕೊಡೆಗಳ ಮೂಲಕ ಕೆಳಗೆ ಹಾರಲು ಅಭ್ಯಾಸವುಳ್ಳವರ ಸಂಖ್ಯೆ, ಜಗತ್ತಿನ ಇತರ ದೇಶಗಳಲ್ಲಿರುವದಕ್ಕಿಂತ ರಶ್ಯದಲ್ಲಿ ಅತ್ಯಂತ ಮಿಗಿಲಾಗಿರುತ್ತದೆ.

ಇತರ ದೇಶಗಳಲ್ಲಿ ಕ್ಲಬ್ಬು, ಮನೋರಂಜನ ಮಂದಿರಗಳಿಗೆ ಸಂಬಂಧಪಟ್ಟ ಗರಡಿ ಮನೆಗಳು ಇರುವವಾದರೆ ರಶ್ಯದಲ್ಲಿ ಇಂಥ ವಿಹಾರ ಮಂದಿರಗಳಿಗೆ ಹೊಂದಿಕೊಂಡು ಸಣ್ಣ ದೊಡ್ಡ ವಿಮಾನ ಮನೆಗಳಿವೆ. ಅಲ್ಲಿ ವಿಹಾರ ಮಂದಿರಗಳಿಗೆ ಬರುವವರು ಗಾಳಿ ಕೊಡೆಗಳ ಮೂಲಕ ಹಾರಾಟದ ಅಭ್ಯಾಸ ಮಾಡಿ ತಮ್ಮ ಮನೋಬಲ, ಶರೀರ ಬಲಗಳನ್ನು ಬೆಳೆಸಿಕೊಳ್ಳುವರು. ಇಂಥ ವಿಹಾರ ಮಂದಿರಗಳು ರಶ್ಯದಲ್ಲಿ ಸಣ್ಣ ದೊಡ್ಡ ಪಟ್ಟಣಗಳಲ್ಲಿ ಮಾತ್ರವಲ್ಲ, ಪ್ರತಿಯೊಂದು ಹಳ್ಳಿಯಲ್ಲಿ ಎಂಬಂತೆ ಇರುತ್ತವೆ. ಇವೆಲ್ಲ ಪ್ರಯತ್ನಗಳಿಂದ ರಶ್ಯದಲ್ಲಿ ಎರಡು ಮಿಲಿಯಕ್ಕೆ ಕಡಿಮೆಯಾಗದ ವಿಮಾನಗಾರರು ತಯ್ಯಾರಾಗಿದ್ದಾರೆ. ಇವರಲ್ಲಿ ಸುಮಾರು ಅರ್ಧ ಮಿಲಿಯ ಜನರು ವಿಮಾನ ಸಂಚಾಲನ ವಿದ್ಯೆಯಲ್ಲಿ ಬೇರೆ ಹೆಚ್ಚಿಗೆ ಅಭ್ಯಾಸಗಳನ್ನು ಪಡೆದವರಿದ್ದಾರೆ. ಹೀಗೆ ಯುದ್ಧಕಾಲದಲ್ಲಿ ಮೊದಲು ವಿಮಾನಗಾರರಾಗಿದ್ದವರಷ್ಟೇ ಅಲ್ಲ, ಈ ಮಿಲಿಯಾಂತರ ಮಂದಿಯೂ ವಿಮಾನ ದಳಗಳಲ್ಲಿ ಪ್ರವೇಶ ಪಡೆಯಲು ಯೋಗ್ಯತೆಯುಳ್ಳವರಾಗಿದ್ದಾರೆ. ಇವರ ಅನುಭವ ಜ್ಞಾನಗಳು ಮಾಸಿ ಹೋಗದಂತೆ, ಅವರಿಗೆ ಆಗಾಗ ಹೊಸ ಜ್ಞಾನವನ್ನು ಕೊಡಲಿಕ್ಕೆ ರಶ್ಯದಲ್ಲಿ ತರಬೇತಿ ಶಾಲೆಗಳ ಒಂದು ಬಲೆಯೇ ಹರಡಿಕೊಂಡಿದೆ.

ಇತರ ಉಪಾಯಗಳಿಂದ ವ್ಯಾಪಾರ ವಹಿವಾಟುಗಳಾಗುವದಕ್ಕಿಂತ ರಶ್ಯದಲ್ಲಿ ವಿಮಾನಗಳ ಮೂಲಕ ಇವು ಆಗುವದೇ ಹೆಚ್ಚು. ಇದಕ್ಕಾಗಿ ಅನೇಕಾನೇಕ ವಿಮಾನ ದಾರಿಗಳು ರಶ್ಯದ ನಗರ ಪೇಟೆಗಳನ್ನು ಹಳ್ಳಿ ಹಳ್ಳಿಗಳನ್ನು ಒಂದಕ್ಕೊಂದು ಜೋಡಿಸಿವೆ. ಈ ಅಸಂಖ್ಯಾತ ವಿಮಾನ ದಾರಿಗಳಲ್ಲದೆ, ಸರಕಾರದ ಮತ್ತು ಮಿಲಿಟರಿಯ ಉಪಯೋಗಕ್ಕಾಗಿಯೇ ರಶ್ಯದಲ್ಲಿ ಬೇರೆ ಎಷ್ಟೋ ಗುಪ್ತ ವಿಮಾನ ದಾರಿಗಳು ಇರುತ್ತವೆ. ರಶ್ಯದಲ್ಲಿ ವ್ಯಾಪಾರ ವಹಿವಾಟುಗಳಿಗೆ ಉಪಯೋಗಿಸುವಂಥ ವಿಮಾನಗಳು ಮಿಲಿಟರಿ ಉಪಯೋಗಕ್ಕೆ ಒದಗುವಂತೆಯೂ ರಚಿಸಲ್ಪಟ್ಟಿವೆ. ಅವುಗಳ ಸಂಚಾಲಕರು ಕೂಡ ಸೇನಾ ಶಿಕ್ಷಣವನ್ನು ಪಡೆದವರಿರುತ್ತಾರೆ. ಆದ್ದರಿಂದ ರಶ್ಯದ ವಿಮಾನಬಲವು ಅಸಾಧಾರಣ ಮತ್ತು ಅಪ್ರತಿಮವಾಗಿರುವದು.

ರಶ್ಯದ ಭೌಗೋಲಿಕ ರಚನೆಯು ಕೂಡಾ ಶತ್ರುಗಳ ಆಕ್ರಮಣಗಳಿಂದ ಅದನ್ನು ಕಾಪಾಡಲಿಕ್ಕೆ ಅನುಕೂಲವಾಗಿರುವುದು. ರಶ್ಯವು ವಿಶಾಲವಾದ ಮತ್ತು ಜನವಿರಳವಾದ ದೇಶವಾಗಿದೆ. ಅದರಲ್ಲಿ ನಗರ ಪಟ್ಟಣಗಳು ಕಡಿಮೆ. ಹಳ್ಳಿಪಳ್ಳಿಗಳು ಹೆಚ್ಚು. ವಿಮಾನ ದಾಳಿಯಿಂದ ಹಳ್ಳಿಪಳ್ಳಿಗಳ ನಾಶಮಾಡಿ ಶತ್ರುಗಳಿಗೆ ದೊರೆಯುವ ಪ್ರಯೋಜನ ಕಡಿಮೆ. ಕಾಡುಗುಡ್ಡ, ಬಯಲು ಜವುಗು ನೆಲಗಳ ಮೇಲೆ ಬಾಂಬುಗಳನ್ನು ಎಸೆದು ಶತ್ರುಗಳು ಯಾವ ಪುರುಷಾರ್ಥವನ್ನು ಸಂಪಾದಿಸಬಹುದು? ಪಶ್ಚಿಮದ ಗಡಿನಾಡಿನಲ್ಲಿರುವ ಒಂದೆರಡು ಸಣ್ಣ ಪಟ್ಟಣಗಳನ್ನು ಶತ್ರುಗಳು ಸುಟ್ಟು ಬೂದಿ ಮಾಡುವುದಾದರೂ ಅದರಿಂದ ರಶ್ಯಕ್ಕೆ ವಿಶೇಷ ಹಾನಿಯಿಲ್ಲ. ಯಾಕೆಂದರೆ ಆಕ್ರಮಣಗಳಾಗುವ ಮೊದಲೇ ಅಲ್ಲಿಯ ಯುನಿವರ್ಸಿಟಿಗಳನ್ನು ಬೇರೆ ಕಡೆಗಳಿಗೆ ಸಾಗಿಸುವುದು ಸಾಧ್ಯ. ಮತ್ತು ಅವುಗಳಿಗಾದ ಹಾನಿಯಿಂದ ಮಿಲಿಟರಿಯಾಗಲಿ ಜನರಾಗಲಿ ಧೈರ್ಯಗೆಡುವಂತಿಲ್ಲ. ಶತ್ರುಗಳು ಮೋಸ್ಕೋ ನಗರಕ್ಕೆ ವಿಮಾನಗಳಿಂದ ಬರಲಿಕ್ಕೆ ಅದು ೧೬-೧೮ ಘಂಟೆಗಳ ಪ್ರಯಾಣದ ದೂರದಲ್ಲಿದೆ. ಆದ್ದರಿಂದ ಶತ್ರುವಿಮಾನಗಳು ಮೋಸ್ಕೋವಿಗೆ ಬರಬೇಕಾದರೆಯೇ ಅವುಗಳನ್ನು ಗುರುತಿಸಿ ಗುಂಡಿಟ್ಟು ಕೆಳಗೆ ಕೆಡಹಿ ಹಾಕುವುದು ರಶ್ಯಕ್ಕೆ ಬಹುಸುಲಭ ಕೆಲಸವಾಗಿದೆ. ಅಲ್ಲದೆ ಈ ರಾಜಧಾನಿಯ ಸುತ್ತಲೂ ಗುಪ್ತ ರಕ್ಷಣೋಪಾಯಗಳು ಇರುವವು. ಇವುಗಳಿಂದಾಗಿ ಶತ್ರುವಿಮಾನಗಳನ್ನು ಮೋಸ್ಕೋವಿನ ಸುತ್ತಮುತ್ತಲಿಂದ ಸಿಮಿತಾರ್ಧದಲ್ಲಿ ನೆಲಕ್ಕೆ ಉರುಳಿಸಬಹುದು. ಒಂದು ಲೆನಿನ್‌ಗ್ರಾಡ ಪಟ್ಟಣಕ್ಕೆ ಮಾತ್ರ ಶತ್ರುಗಳ ವಿಮಾನದಾಳಿಯ ಭಯವಿದೆ. ಆದರೆ ಅಂಥ ಆಕ್ರಮಣವಾಗಬಹುದೆಂಬುದನ್ನು ರಶ್ಯವು ಮೊದಲಿಂದಲೂ ತಿಳಿಕೊಂಡಿದೆ. ಲೆನಿನ್‌ಗ್ರಾಡವು ಒಂದು ವೇಳೆ ಶತ್ರುಗಳ ಕೈಗೆ ಬಿದ್ದರೂ ಸಂಕಟಕ್ಕೆ ಬಹಳ ಹಾನಿಯಿಲ್ಲ. ಯಾಕಂದರೆ ಆ ವರ್ತಮಾನವು ರಶ್ಯದ ಜನರಿಗೆ ತಿಳಿಯದಂತೆಯೇ ಸರಕಾರವು ಮಾಡಬಹುದು. ಅದರಿಂದ ಸೇನೆ ಮತ್ತು ಜನತೆಯು ಧೈರ್ಯಗುಂದಲಾರವು.

ಭೌಗೋಲಿಕ ಅನುಕೂಲತೆಯ ನಿಮಿತ್ತ ರಶ್ಯದ ರಕ್ಷಣೆಗೆ ಕೇವಲ ವಿಮಾನಗಳು ಸಾಕಾದರೂ ಅದು ಸಮರ ವಿಮಾನಗಳನ್ನು ಹೆಚ್ಚಿಸುವದೇಕೆ? ಆ ಅಸಾಧಾರಣ ವಿಮಾನ ಬಲವು ರಶ್ಯದ ಆತ್ಮರಕ್ಷಣೆಗೆ ಇರುವುದು ಮಾತ್ರವಲ್ಲದೆ ಶತ್ರುಗಳನ್ನು ಆಕ್ರಮಿಸಲಿಕ್ಕಾಗಿಯೂ ಇದೆ. ರಶ್ಯದ ಭೌಗೋಲಿಕ ರಚನೆಯು ಅದರ ಆತ್ಮರಕ್ಷಣೆಗೆ ಅನುಕೂಲವಾಗಿದ್ದಂತೆ ಯುರೋಪಿಯದ ಸುತ್ತಮುತ್ತಲಿನ ವಿಮಾನಬಲದ ಮೂಲವನ್ನು ಸೋಲಿಸಲಿಕ್ಕೂ ಅನುಕೂಲವುಳ್ಳದ್ದಾಗಿದೆ. ಕೆಲವೇ ಘಂಟೆಗಳ ಹಾರಾಟದಿಂದ ಜರ್ಮನಿ ಜಪಾನ ಇತ್ಯಾದಿ ರಾಷ್ಟ್ರಗಳನ್ನು ಸೇರಿ ಅವುಗಳ ದೊಡ್ಡ ದೊಡ್ಡ ಪಟ್ಟಣಗಳನ್ನು ರಶ್ಯವು ಸುಟ್ಟು ಬೂದಿ ಮಾಡಬಹುದು. ಆದರೆ ಈ ಅನುಕೂಲವು ಆ ರಾಷ್ಟ್ರಗಳಿಗೆ ಇರುವುದಿಲ್ಲ.

ಈಗ ಯುದ್ಧಕ್ರಮವೇ ಬೇರೆಯಾಗಿದೆ. ಸೈನಿಕರು ಎದುರೆದುರಾಗಿ ಕತ್ತಿ ಕುಠಾರಿಗಳನ್ನು ಹಿಡಿದು ಯುದ್ಧ ಮಾಡುವದರ ಮೇಲೆ ಸೋಲು ಗೆಲವುಗಳ ನಿರ್ಧಾರವಾಗುವುದಿಲ್ಲ. ಯಾವ ರಾಷ್ಟ್ರದ ಸೇನೆಯೂ, ಜನತೆಯೂ ಅಧಿಕ ಸಮಯದ ತನಕ ಧೈರ್ಯ ಸ್ಥೈರ್ಯಗಳುಳ್ಳದಾಗುವುದೋ, ಅದೇ ರಾಷ್ಟ್ರವು ಕೊನೆಗೆ ವಿಜಯಿಯಾಗುವುದು. ಆದ್ದರಿಂದ ರಶ್ಯದ ಸುತ್ತುಮುತ್ತಲಿನ ಇತರ ರಾಷ್ಟ್ರಗಳ ಸೇನಾಬಲವು ಎಷ್ಟೇ ಅಧಿಕವಾಗಿರಲಿ ರಶ್ಯವು ತನ್ನ ವಿಮಾನದಾಳಿಗಳ ಮೂಲಕ ಆ ಸೇನೆ ಮತ್ತು ಜನತೆಯ ಧೈರ್ಯ ಸ್ಥೈರ್ಯಗಳನ್ನು ಸುಲಭದಲ್ಲಿ ಕುಂದಿಸಿ ಆ ರಾಷ್ಟ್ರಗಳನ್ನು ಸೋಲಿಸಬಹುದಾಗಿದೆ.

ಅಷ್ಟು ಮಾತ್ರವಲ್ಲ, ರಶ್ಯದ ಜಲಸೇನೆಯ ಶಕ್ತಿಯೂ ಅಪರಿಮಿತವಾಗಿದೆ. ಆಧುನಿಕ ಕ್ರಮದಲ್ಲಿ ಕಟ್ಟಿಸಿದ ಅಸಂಖ್ಯಾತ ಯುದ್ಧಹಡಗುಗಳೂ ನಾವೆಗಳೂ, ದೋಣಿಗಳೂ ರಶ್ಯದ ಬಳಿ ಇರುವವು. ಈ ಜಲಸೇನೆಯ ಸೈನಿಕರೂ ಕೆಲಸಗಾರರೂ ಅತ್ಯಂತ ವಿಶ್ವಾಸ ಪಾತ್ರರಾಗಿದ್ದಾರೆ. ಅವರಿಗೆ ಶಿಕ್ಷಣವನ್ನು ಕೊಡಲಿಕ್ಕೆ ರಶ್ಯದಲ್ಲಿ ಶಾಲೆಗಳಿವೆ. ವಿಮಾನದಳದ ವಿಷಯವಾಗಿ ನಮಗೆ ತಿಳಿದಿರುವದಕ್ಕಿಂತಲೂ ರಶ್ಯದ ಯುದ್ಧಹಡಗಗಳ ವಿಷಯವಾಗಿ ನಮಗೆ ತಿಳಿದಿರುವದು ಕಡಿಮೆ. ಯಾಕಂದರೆ ಅದಕ್ಕಿಂತ ಈ ವಿಷಯವು ಹೆಚ್ಚು ಗೋಪ್ಯವಾಗಿದೆ. ವರ್ಷದಲ್ಲಿ ಎಷ್ಟು ಹಡಗುಗಳೂ ಸ್ಟೀಮರುಗಳೂ ನಾವೆಗಳೂ ಹೊಸದಾಗಿ ಕಟ್ಟಲ್ಪಡುತ್ತಿವೆ ಎಂಬುದೂ ಯಾರಿಗೂ ಗೊತ್ತಿಲ್ಲ. ಇವುಗಳನ್ನು ಕಟ್ಟುವ ಕೆಲಸಗಾರರು ಹೊರಗೆ ಬರುವುದಿಲ್ಲ. ಆದರೂ ಬಾಲ್ಟಿಕ ಸಮುದ್ರ, ಕಪ್ಪು ಸಮುದ್ರ ಮತ್ತು ಶಾಂತಸಾಗರಗಳ ಮೂಲಕ ಆಗುವ ಎಲ್ಲಾ ಶತ್ರು ಆಕ್ರಮಣಗಳನ್ನು ತಡೆಯಲಿಕ್ಕೂ ಶತ್ರುಪಕ್ಷದ ಜಲಸೇನೆಯನ್ನು ಸೋಲಿಸಲಿಕ್ಕೂ ಇದು ಸಮರ್ಥವಾಗಿದೆ. ನದಿಗಳ ಮೂಲಕ ಆಗುವ ಆಕ್ರಮಣಗಳನ್ನು ತಡೆಯಲಿಕ್ಕೆ ಸ್ವತಃ ಜಲಸೇನೆಯಲ್ಲಿದೆ. ಅದರ ಹತ್ತಿರ ಜಲಾಂತರ್ಗಾಮಿ ನಾವೆಗಳೂ ಇವೆ. ಈ ನಾವೆಗಳು, ನಾವೆ ದೋಣಿ ಮೊದಲಾದವುಗಳನ್ನು ರಶ್ಯವು ತನ್ನ ಸ್ವಂತದ ಕಾರ್ಖಾನೆಗಳಲ್ಲಿಯೇ ಕಟ್ಟುತ್ತಿರುವುದರಿಂದ ಅವುಗಳ ಸರಿಯಾದ ಸಂಖ್ಯೆಗಳನ್ನು ಕೊಡುವುದು ಯಾವ ಪತ್ರಿಕೆಗೂ ಅಸಾಧ್ಯವಾಗಿದೆ. ರಶ್ಯದ ಜಲಸೇನೆಯು ಕೂಡ ಅಧಿಕ ಆತ್ಮರಕ್ಷಣೆಗೆ ಮಾತ್ರವಲ್ಲ ಶತ್ರುಗಳನ್ನು ಆಕ್ರಮಿಸಲಿಕ್ಕೂ ತಕ್ಕದಾಗಿದೆ. ಇನ್ನು ಕೆಲವೇ ವರ್ಷಗಳಲ್ಲಿ ರಶ್ಯದ ಈ ನಾವಿಕಪಡೆಯು ಜಗತ್ತಿನ ಇತರ ನಾವಿಕಪಡೆಗಿಂತಲೂ ಉತ್ತಮವೆನ್ನಿಸಬಹುದು.

ಈಗ ಯೂರೋಪದಲ್ಲಿ ಯುದ್ಧವು ಆರಂಭವಾಗಿದೆ. ಈ ಯುದ್ಧದಲ್ಲಿ ಸೋಲು ಗೆಲವುಗಳು ಬಹಳ ಮಟ್ಟಿಗೆ ರಶ್ಯದ ಮನೋಗತಿಯ ಮೇಲೆ ನಿರ್ಧರವಾಗಿದೆ. ಅದು ಯಾವ ಪಕ್ಷ ಸೇರುವದೋ, ಆ ಪಕ್ಷವೇ ಗೆದ್ದು ಬರುವ ಸಂಭವವು ಹೆಚ್ಚಾಗುತ್ತದೆ. ಆದ್ದರಿಂದಲೇ ರಶ್ಯವನ್ನು ಒಲಿಸಿಕೊಳ್ಳುವ ಪ್ರಯತ್ನಗಳು ಇಕ್ಕಡೆಗಳಿಂದಲೂ ನಡೆದಿರುವ ರಹಸ್ಯವು ಇದುವೇ ಆಗಿದೆ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಕಡೆನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾ. ಮಾಹಿಮ, ಮುಂಬೈ. ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪ ೦-೦ ವಿ. ಪಿ. ೧

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, (S M C

Wanted

Wanted one Inspector, two Organisers and Agents in South Kanara. Apply stating previous experience to:

The Bombay Co-operative Insurance Society Ltd.,

Office for Mysore, Coorg and South Kanara

'Asiatic Building', Kempe Gowda Road, Bangalore city



ಜಿಲ್ಲಾ ಸಮಾಚಾರ

ನಗರ ಸಭೆ:—ನಗರ ಸಭೆಯು ತಾ. [illegible] ರಂದು ಡಾ। ಯು [illegible] ಮಲ್ಯರ ಅಧ್ಯಕ್ಷತೆಯಲ್ಲಿ ಜರುಗಿತು.

ಭಗಿನೀ ಸಮಾಜದವರಿಗೆ ಶಿಶುಕೇಂದ್ರ ನಡೆಸಲು ಜಪ್ಪಿನ ಹೆಲ್ತ್ ಕಡ್ಡಿನಲ್ಲಿ ಎಡೆಕೊಡಲಾಯಿತು. ನಗರಸಭೆಗೆ ಶ್ರೀ. ವಿಠಲ್ ಕಾಂತಾರಾಮರು ಕೊಡಲೆಳಸಿದ ರೇಡಿಯೋ ವಿಚಾರದಲ್ಲಿ ಸರಕಾರವನ್ನು ಕೇಳಬೇಕೆಂದಾಯಿತು.

ದ ಕ ದಲ್ಲಿ ಮೈಸೂರು ದಿವಾನರು:— ಮಂಗಳೂರಲ್ಲಿ ಫಲಪುಷ್ಪ ಪ್ರದರ್ಶನಗಳ ಉದ್ಘಾಟನೆ, ಕಟಲು ಶಿವಪುರ ಸಂಕಗಳ ಉದ್ಘಾಟನೆ, ಮೂಡಬಿದ್ರೆ ಆಸ್ಪತ್ರೆಯ ಅಸ್ತಿವಾರ ಶಿಲಾಸ್ಥಾಪನೆ, ಮೊದಲಾದ ಕೆಲಸಗಳನ್ನು ಮಾಡಿದರು

ಲೇಬರ್ ಯೂನಿಯನುಗಳ ಸಂಯುಕ್ತ ಕಮಿಟಿ:—ಜಿಲ್ಲೆಯ ಎಲ್ಲಾ ಲೇಬರ್ ಯೂನಿಯನುಗಳನ್ನು ಒಂದಾಗಿ ಸೇರುವ ಉದ್ದೇಶದಿಂದ ಎಲ್ಲ ಯೂನಿಯನುಗಳ ಸಂಯುಕ್ತ ಸಮಿತಿಯನ್ನು ರಚಿಸುವ ಬಗೆ ಕಳೆದ ತಾ [illegible]ನೇ ಸಾಯಂ [illegible] ಕಮಿಟಿಯ ಆಫೀಸಿನಲ್ಲಿ ಸಭೆಸೇರಿತು

ಬಿ ಇ. ಎಂ ಹೈಸ್ಕೂಲು—[illegible] ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಇದೇ ಬರುವ ನವಂಬ್ರ [illegible]ನೇ ವಾರದಲ್ಲಿ ಸದ್ರಿ ಸಂಘದ "ವಿವಿಧ ವಿನೋದಾವಳಿ ಸಮಿತಿ"ಯವರು ಒಂದು ಸಂಗೀತ ನಾಟಕ ಸಹಿತ ವಿವಿಧ ವಿನೋದಾವಳಿಗಳನ್ನು ಶಾಲಾ [illegible]ದಲ್ಲಿ ಪ್ರದರ್ಶಿಸಲಿರುವರ ಮಹಾಜನರೆಲ್ಲರೂ ಉದಾರಾಶ್ರಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ವಿನಂತಿ

ದ ಕ. ಜಿಲ್ಲಾ ಹರಿಜನ ಪರಿಷತ್ತಿನ ಸ್ವಾಗತ ಕಮಿಟಿಯ ಸಭೆ:—ಕಳೆದ ತಾ [illegible]ನೇ ಮಧ್ಯಾಹ್ನ ಹರಿಜನ ಪರಿಷತ್ತಿನ ಸ್ವಾಗತ ಕಮಿಟಿಯ ಸಭೆಯು ಹರಿಜನ ಲೇಬರ್ ಲೀಗಿನ ಆಫೀಸಿನಲ್ಲಿ ಶ್ರೀ ಕೆ ಅಂಗರ ಕರ್ಕೇರ ಯಾನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ ಈಶ್ವರ, ಎಂ ಎಲ್ [illegible]ರವರು ಪರಿಷತ್ತಿನ ಮುಂದಿನ ಕೆಲಸದ ಕುರಿತು ಮಾತಾಡಿದರು. ನೆರೆದ ಸಭಿಕರ ಪೈಕಿ ಶ್ರೀ ಗಳಾದ [illegible] ಮಾಸ್ತರ್, ಬಿ ಕೇಶವ, ಕೆ ಗುರ್ಕ ಜಿ ರಾಧಾಕೃಷ್ಣ ಮಾಸ್ತರ್ ಇವರುಗಳು ಈ ಪರಿಷತ್ತನ್ನು ನಾವು ಮಾಡಲೇ ಬೇಕೆಂದು ಸೂಚಿಸಿದರು ಒಂದು ಹೊಸ ಕಮಿಟಿಯು ರಚನೆ ಮಾಡಲಾಯಿತು. ಈ ಕಮಿಟಿಗೆ ಪ್ರತಿ ಒಂದು ಹರಿಜನ ಕೊಲನಿಯ ಭಜನೆಸಂಘದಿಂದ ಇಬ್ಬರು ಪ್ರತಿನಿಧಿಗಳನ್ನು ಸ್ವಾಗತ ಸಮಿತಿಗೆ ಸೇರಬೇಕಾಗಿ ಕೇಳಿಕೊಳ್ಳಬೇಕೆಂತಲೂ ನಿರ್ಧಾರವಾಗಿ ಕೂಡಿದ ಮೆಂಬರರ ಪೈಕಿ ಕೆಲವರನ್ನು ಆರಿಸಲಾಯಿತು ಈ ಕಮಿಟಿಗೆ ಅಧ್ಯಕ್ಷ ಮತ್ತು ಕಾರ್ಯಕಾರಿ ಮಂಡಳಿಯ ಸದಸ್ಯರನ್ನು ಆರಿಸುವ ಬಗ್ಗೆ ಮುಂದಿನ ಆದಿತ್ಯವಾರ ಸಭೆ ಸೇರಬೇಕೆಂದಾಯಿತು

ಜಿಲ್ಲಾ ಬೋರ್ಡು ಸಭೆ:—ನಮ್ಮ [illegible] ಬೋರ್ಡು ಸಭೆಯು ಕಳೆದ ಶನಿವಾರ [illegible] ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಜರುಗಿತು

ಪಂಚಿಕಲ್‌ನಲ್ಲಿ ಕಡವು ತೆರಯುವ, ಬೋರ್ಡು ಕೂಲಿಗಾರರಿಗೆ ಆದಿತ್ಯವಾರ ಮತ್ತು ಹಬ್ಬದ ದಿನಗಳಲ್ಲಿ ರಜೆಕೊಡುವ ವಿಷಯದಲ್ಲಿ ಸರಕಾರವನ್ನು ಕೇಳುವ, ಸೀತಾನದೀ ಜಾನುವಾರುಸಂತೆಯ ಕಾಲ, ಆರೋಗ್ಯ ವ್ಯವಸ್ಥೆಗೆ ಹೆಬ್ರಿ ಪಂಚಾಯತ್ ಬೋರ್ಡಿಗೆ ರೂ [illegible] ಕೊಡುವ ವಿಚಾರಗಳು ಮಂಜೂರಾದುವು ಜಿಲ್ಲೆಯಲ್ಲಿ ಹೆರಿಗೆ ಮತ್ತು ಶಿಶುಸಂಗೋಪನಾ ವಿಚಾರದ ಕೆಲಸಕ್ಕೆ ಇಬ್ಬರು ಮಿಡ್‌ವೈಫರನ್ನು ನೇಮಿಸುವಂತೆ ಈ ವಿಚಾರ ನಿರ್ಧಾರವಾಯಿತು.

ಕಾರ್ಕಳ ತಾಲೂಕಿನ ಸೀರೆ ಗ್ರಾಮದಲ್ಲಿ ತಾ [illegible]ರಿಂದ ವಾರಂಪ್ರತಿ ಜರುಗುವ ಸಂತೆ ತೆರೆಯಬಹುದೆಂದೂ ತೀರ್ಮಾನವಾಯಿತು

ಜಿಲ್ಲಾ ಬೋರ್ಡು ಅಧ್ಯಕ್ಷರು ಮಾದಕದ್ರವ್ಯ ನಿಷೇಧದ ವಿಚಾರದಲ್ಲಿ ಜಿಲ್ಲೆಯ ಜನತೆಯ ಅಭಿಪ್ರಾಯ ಪಡೆಯಬೇಕೆಂದಾಯಿತು ಜಿಲ್ಲೆಯಲ್ಲಿ ನೈಗೆ ಕೈಗಾರಿಕೆಯನ್ನು ಸ್ಥಾಪಿಸುವ ಸಾಧ್ಯಾಸಾಧ್ಯ [illegible]ಕ್ಕಾಗಿ ರೂ [illegible] ಮಂಜೂರು ಮಾಡಬೇಕೆಂದಾಯಿತು

[illegible] ಬೋರ್ಡು ಸ್ಥಾನದಿಂದ ಚ್ಯುತರಾದ ಶ್ರೀಮತಿ ಕಮಲಾದೇವಿಯವರ ಸ್ಥಾನಕ್ಕೆ (ವರ್ಕ್ ಎಂಡ್ ಕಮ್ಯುನಿಕೇಶನ್ ಕಮಿಟಿಗೆ) ಶ್ರೀ [illegible] ಶ್ರೀನಿವಾಸ ಮಲ್ಯರನ್ನು ನೇಮಿಸಲಾಯಿತು ಇದೇ ಕಮಿಟಿಯ ಸ್ಟೇಂಡಿಂಗ್ ಕಮಿಟಿಯ ಅಧ್ಯಕ್ಷರಾಗಿ ಶ್ರೀ ಬಿ ವೈಕುಂಠ [illegible] ಆರಿಸಲ್ಪಟ್ಟರು.

ಕೊಂಚಾಡಿ:— ಕೊಂಚಾಡಿ [illegible] ಎಲಿಮೆಂಟರಿ ಶಾಲಾ ಅಧ್ಯಾಪಕರ ಅಸೋಸಿಯೇಶನ್ [illegible] ಸಭೆಯು ಶ್ರೀ ರಾಮಕೃಷ್ಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ [illegible]ನೇ ಶನಿವಾರ ಅಪರಾಹ್ನ [illegible] ಗಂಟೆಗೆ ಜಿಲ್ಲಾ ಬೋರ್ಡು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಿತು.

Notice

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No [illegible]/1939

1 ಕೈಜಮ್ಮ 2 ಮಮ್ಮದೆ 3 ಬಡವ್ಯ ಕುಂಞ 4 ಅಬ್ದುಲ್ಲ 5 ಅಬ್ಬಾಸೆ	1ನೇ [illegible] ವಪ್ಪ ಪಿಲಿಗುಂಡಿ ಬ್ಯಾರಿಯ [illegible] ಮತ್ತು 2ರಿಂದ 5 ವರೆಗಿನವರು ಆತನ ಪ್ರಾಯಸ್ಥ ಮಕ್ಕಳು	ಅರ್ಜಿದಾರರು

ಮತ್ತು

ಮಮ್ಮಿಬ್ಯಾರಿ **ರೆಸ್ಪಾಂಡೆಂಟ**

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ

ಕಾಸರಗೋಡು ತಾಲೂಕು [illegible] ಗ್ರಾಮದಲ್ಲಿರುವ ಅಲೋಡಿ ಮಮ್ಮದೆ ಬ್ಯಾರಿಗಳ ಮಗ ಪಿಲಿಗುಂಡಿಬ್ಯಾರಿಯವರು ಸುಮಾರು ಒಂದು ವರ್ಷದ ಮೊದಲು ಮೃತಪಟ್ಟು ಸದ್ರಿಯವರಿಗೆ ಬರತಕ್ಕ ಹಣವನ್ನು ವಸೂಲು ಪಡೆಯುವರೆ ಮೃತನ ವಾರಿಸ್ದಾರರಾದ ಅರ್ಜಿದಾರರು ಸಕ್ಸೆಶನ್ ಸರ್ಟಿಫಿಕೇಟು ತಮಗೆ ಕೊಡಬೇಕಾಗಿ ಮೇಲಿನ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲೆ ನಮೂದಿಸಿದ ಅರ್ಜಿಯು ತನಿಖೆ ಬಗ್ಗೆ ತಾ. 25 10 39ಕ್ಕೆ ಇಟ್ಟಿರುವುದರಿಂದ ಅ[illegible] ಆಕ್ಷೇಪವುಳ್ಳವರು ಸದ್ರಿ ತನಿಖೆ ತಾ 25 10 39ನೇ ದಿನ ಪೂರ್ವಾಹ್ನ ಘಂಟೆ 11ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಸ್ವತಹ ಅಥವಾ ವಕೀಲರ ಮುಖಾಂತರ ಉದಹರಿಸಿ ಕೊಳ್ಳತಕ್ಕದ್ದು ತಪ್ಪಿದಲ್ಲಿ ಸದ್ರಿ ಅರ್ಜಿಯು ಕ್ರಮಪ್ರಕಾರ ತನಿಖೆಯಿಂದ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿದೆ

Kasaragod 9-10-1939 | Sd/ K. Ganesh Rao, B A L L B
Vakil for Petitioners

ಉಡುಪಿ

ಹರಿಜನವಾರ ಮತ್ತು ಗಾಂಧಿ ಜಯಂತಿ ಆಚರಣೆ:—ಉಡುಪಿ ತಾಲೂಕು ಹರಿಜನ ಸೇವಾಸಂಘದ ಆಶ್ರಯದಲ್ಲಿ ಕಳೆದ ತಾ [illegible]ರಿಂದ ಇದೇ ತಾ [illegible]ರ ತನಕ ಹರಿಜನ ವಾರವು ಯಶಸ್ವಿಯಾಗಿ ಆಚರಿಸಲಾಯಿತು ಸಂಘದ ಕಾರ್ಯದರ್ಶಿಯರಾದ ಶ್ರೀ ಬಿ ಅಂತಯ್ಯ ಸೆಟ್ಟರು ಕುಂಜಿಬೆಟ್ಟು, ಕಾಡುಬೆಟ್ಟು, ಬ್ರಹ್ಮಾವರ, ಚಿಟ್ಪಾಡಿ, ಕಲ್ಯಾಣಪುರ ಪುತ್ತೂರು, ಕೆಮ್ಮಣ್ಣು ಮೊದಲಾದ ಹರಿಜನಕೇರಿಗಳನ್ನು ಸಂದರ್ಶಿಸಿ ಶುಚಿತ್ವದ ಕುರಿತು ನೀತಿಬೋಧೆಗಳ ನ್ನಿತ್ತರು [illegible]ನೇ ಸೋಮವಾರ ಗಾಂಧಿ ಜಯಂತಿ ದಿನ ಪೂರ್ವಾಹ್ನ [illegible] ಕೊಲನಿಯ ಕೊರಗರು ವಿದ್ಯಾರ್ಥಿಗಳ ಮೆರವಣಿಗೆಯೊಂದು ಶ್ರೀ. ಅಂತಯ್ಯ ಸೆಟ್ಟರ ನೇತೃತ್ವದಲ್ಲಿ ಹೊರಟು ಸದ್ರಿ [illegible] ಉಪಾಧ್ಯಾಯರಾದ [illegible] ಸಹಕಾರದಿಂದ ಪಟ್ಟಣದ ಪ್ರಧಾನ [illegible] ಸುತ್ತಾಡಿ ಅಜ್ಜರಕಾಡು [illegible] ಗಾಂಧಿ ಮೈದಾನಿಗೆ ಬಂದು ಸೇರಿತು ನವಯುಗ ಪತ್ರಿಕೆಯ ಸಂಪಾದಕರಾದ ಶ್ರೀ ಕೆ ಕೆ ಸೆಟ್ಟರು ಹರಿಜನರಲ್ಲಿ [illegible]ತೆಯು ಇನ್ನೂ ಬೆಳೆಯಬೇಕೆಂದೆಂದೂ ಹರಿಜನರು ಮತ್ತು ಕೊರಗರು ಒಂದೇ ಭೇದಭಾವವನ್ನು ತೊರೆಯಬೇಕೆಂದೂ ನೆರೆದಿದ್ದ ಹರಿಜನ ಮತ್ತು ಕೊರಗರನ್ನು ಉದ್ದೇಶಿಸಿ ಮಾತಾಡಿದರು.

ಕಾಸರಗೋಡು

[illegible]—ಗಾಂಧಿ ಜಯಂತಿ: ಕಳೆದ ವಾರ ಇಲ್ಲಿ ಗಾಂಧಿ ಜಯಂತಿಯು [illegible] ಸಾಹಿತ್ಯಸಂಘದ ಆಶ್ರಯದಲ್ಲಿ [illegible] ಯಿಂದ ಜರಗಿತು

ಪೆರ್ಲ:— **ಗಾಂಧಿಜಯಂತಿ:** — ಶ್ರೀ. ಯಂ. ವೆಂಕಟ್ರಮಣ ಭಟ್ಟರ ಅಧ್ಯಕ್ಷತೆಯಲ್ಲಿ ಕಳೆದ ತಾ [illegible] ಶ್ರೀ [illegible] ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಾರ್ವಜನಿಕ ಸಭೆ ಭಾಷಣ ವ ರವಣಿಗೆಯಿಂದ ಮಹಾತ್ಮರ ಜಯಂತ್ಯುತ್ಸವವು ಆಚರಿಸಲ್ಪಟ್ಟಿತು.

ಕಾರ್ಕಳ

ಗಾಂಧಿಜಯಂತಿ:—ಇದೇ ತಾರೀಕು [illegible] ದಿನ ಬೋರ್ಡ ಹೈಸ್ಕೂಲಿನಲ್ಲಿ ಗಾಂಧಿಜಯಂತಿಯು ಆಚರಿಸಲ್ಪಟ್ಟಿತು ಆ ದಿನ ಮಕ್ಕಳಿಗೆ ಮಿಠಾಯಿ ಹಂಚಿಯಾದ ತರುವಾಯ ಸಾಯಂಕಾಲ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಕೆ ಪಿ. ನರಸಿಂಹ ವೆಂಕಟೇಶ ಶೆಣೈಯವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಸಭೆ ಕೂಡಿ ಮಹಾತ್ಮರ ಜೀವನ ಮತ್ತು ತತ್ವಗಳ ಕುರಿತು ಭಾಷಣಗಳಾದವು

ಹಿಂದೀ ಪ್ರಚಾರ:—ಇದೀ ದಕ್ಷಿಣ ಭಾರತದಲ್ಲಿ ಆಚರಿಸಲ್ಪಡುವಂತೆ ಇಲ್ಲಿಯೂ ಹಿಂದೀ ಪ್ರಚಾರ ಸಪ್ತಾಹವು ಸ್ಥಳೀಕ ಬೋರ್ಡ ಮೈನ ಎಲಿಮೆಂಟರಿ ಶಾಲೆಯಲ್ಲಿ ಆಚರಿಸಲ್ಪಟ್ಟಿತು. [illegible] ದಿನ ವಿದ್ಯಾರ್ಥಿಗಳ ಲೇಖನ ಮತ್ತು ಭಾಷಣ ಸ್ಪರ್ಧೆಯೂ ಮರುದಿನ ಸಾಯಂಕಾಲ ಜನಾಬ್ ಎಚ್. ಎಸ್ ಹುಸ್ಸೇನ ಎಂ ಎಲ್ ಎ ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀಗಳಾದ ಕಟೀಲು ಗಣಪತಿ ಶರ್ಮಾ, ಕೇಶವ ರಾಮಚಂದ್ರ ಶೆಣೈ, ಪಟ್ಟ ಹಸನಸಾಹೇಬ, ಶ್ರೀಮತಿ ಲಲಿತಾ ದೇವಿ ಮೊದಲಾದ ಹಿಂದೀ ಪ್ರೇಮಿಗಳು ಭಾಷಣಗಳು, ಸಂಗೀತ, ಬಹುಮಾನ ಹಂಚೋಣ ಇತ್ಯಾದಿ ಕಾರ್ಯಕ್ರಮಗಳು ಇದ್ದುವು.

ಕುಂದಾಪುರ

ಜಾನುವಾರು ಜಾತ್ರೆ:—ದಕ್ಷಿಣ ಕನ್ನಡ ಜಿಲ್ಲಾ ಕಾರ್ಕಳ ತಾಲೂಕಿನ ಸೋಮೇಶ್ವರದ ಬಳಿ ಸೀತಾನದಿ [illegible]ಂಬಳ್ಳಿ ಈ ಜಿಲ್ಲೆಯ ಕುಂದಾಪುರ ರೆವಿನ್ಯೂ ಡಿವಿಜನಿನ ರೈತರ ಅಪೇಕ್ಷೆಯ ಮೇರೆಗೆ ಮುಖ್ಯವಾಗಿ, ಉಡುಪಿ ಕುಂದಾಪುರ ಮತ್ತು ಕಾರ್ಕಳ ತಾಲೂಕಿನವರಿಗೆ ಅನುಕೂಲವಾಗುವಂತೆ ಹೆಬ್ರಿ ಸೀತಾನದಿ ರಸ್ತೆಯು, ಮಂಗಳೂರು ಆಗುಂಬೆ ರಸ್ತೆಗೆ ಕೂಡುವಲ್ಲಿ ಸೋಮೇಶ್ವರವಂಬಳ್ಳಿ ಜಾನುವಾರು ಜಾತ್ರೆಯು ಈ ಹಿಂದೆ ಆದ್ದೇಶದಂತೆ ನಿರ್ಣಯದ ಮೇರೆಗೆ ವರ್ಷಂಪ್ರತಿ ವೈಕುಂಠ ಏಕಾದಶಿ ದಿನ ಪ್ರಾರಂಭವಾಗಿ [illegible] ದಿನಗಳ ತನಕ ಜರಗುವುದು

ಮೈಸೂರು ದಕ್ಷಿಣ ಕನ್ನಡದ ಇತರ ಎಲ್ಲಾ ಪ್ರಾಂತ್ಯಗಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಬೇಕಾಗಿ ಸಮ್ಬಂಧಪಟ್ಟವರು ತಿಳಿಸುತ್ತಾರೆ

ಭಾಷಣಗಳು: ಹೈಸ್ಕೂಲಿನ ಸಾಯನ್ಸ್ [illegible]ರಾದ ಶ್ರೀ ಕೆ ಎಲ್ [illegible] ಬಿ [illegible] ಎಲ್ ಟಿ ಯವರು ಈಗಿನ ಯುದ್ಧ ಮತ್ತು [illegible] ಮೊದಲಾದ ಸಾಮಗ್ರಿಗಳ ವಿಷಯದಲ್ಲಿ [illegible] ಭಾಷಣಗಳನ್ನು ಹೈಸ್ಕೂಲು ಹಾಲಿನಲ್ಲಿ ಕಳೆದ ವಾರದಲ್ಲಿ ಮಾಡಿದರು ಅನೇಕ ಮಹಾಜನರೂ ವಿದ್ಯಾರ್ಥಿಗಳೂ ನೆರೆದಿದ್ದರು

ಕೋಟೆ:—[illegible] ಸ್ಥಳೀಯ ಕೇಂದ್ರ ಕಾಂಗ್ರೆಸ್ ಕಮಿಟಿಯವರು ತಾ [illegible]ನೇ ಸೋಮವಾರ [illegible] ಹೊರಟೀಕ್ಕೆ [illegible] ಶ್ರೀ ಕಾಂಭಾವೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮಹಾತ್ಮಾಜಿಯವರ [illegible]ನೇ ವಾರ್ಷಿಕ ಜಯಂತ್ಯುತ್ಸವವನ್ನು ಬಹು ವಿಜೃಂಭಣೆಯಿಂದ ಜರಗಿಸಿದರು

ಪುತ್ತೂರು

ಬೆಳ್ತಂಗಡಿ:—ಬೆಳ್ತಂಗಡಿಯಲ್ಲಿ ಈ ವರ್ಷ ಮಹಾತ್ಮಾಜಿಯವರ ಜನ್ಮದಿನಾಚರಣೆಯು ಬಹಳ ವಿಜೃಂಭಣೆಯಿಂದ ಒಂದು ವಾರದ ತನಕ ಆಚರಿಸಲ್ಪಟ್ಟಿತು

NOTICE

In the Court of the District munsif of Mangalore

R I A No 199/39 in O S 396/38

Between

Mahamood Beary Petitioner — (*Plaintiff*)

and

Puthamma . . Respondent (*Defendant*)

To

The Respondent Puthamma, daughter of Chanda Belchada, residing at Someshwar Village Mangalore Taluk.

Notice is hereby given that the Petitioner (*Plaintiff*) has applied to this court to set aside the order of dismissal passed in the above suit and to restore the same on file for disposal according to law. The said application stands posted to 14—10—1939 at 11 A M in the above court and you may appear on that date in person or by pleader and oppose the same or else it will be decided in your absence.

Mangalore 11 10 39 } **A. Shanker Alva**
Vakil for Petitioner (*Plaintiff*)

ಯುದ್ಧವಾರ್ತೆ!



ಯೂರೋಪಿನ ಶಾಂತಿಗಾಗಿ ರೂಸ್‌ವೆಲ್ಟರು ಯತ್ನಿಸುವರೆ?

ರಶ್ಯವು ಮಹಾ ದುರ್ಗವೊಂದನ್ನು ರಚಿಸುವುದು

ಬಾಲ್ಟಿಕ್ ರಾಷ್ಟ್ರಗಳೊಡನೆ ರಶ್ಯದ ಒಪ್ಪಂದ

ಬಾಗ್‌ಸಾರೆಸ್ಸನ್ನು ಫ್ರೆಂಚರು ಆಕ್ರಮಿಸಿದರು

ಮೂಹತ್ತೊಂದನೆಯ ದಿನ

ಜರ್ಮನ್ ರಶ್ಯಗಳೊಳಗೆ ವ್ಯಾಪಾರದ ವಿಷಯವಾಗಿ ಮಾತನಾಡಲು, ಜರ್ಮನಿಯಿಂದ ಡಾ. ಶಾಟರವರು ರಶ್ಯಕ್ಕೆ ತೆರಳಿದರು.

ಜರ್ಮನರು ಇನ್ನೂ ಕೆಲವು ಸ್ವೀಡನಿನ ಹಡಗುಗಳನ್ನು ಹಿಡಿದಿರುವುದಾಗಿ ತಿಳಿಯಿತು

ಪಾರ್ಲಿಮೆಂಟಿನ ಹೌಸ್ ಓಫ್ ಲಾರ್ಡ್ಸ್ ಸಭೆಯಲ್ಲಿ ಯುದ್ಧದ ವಿಷಯವಾಗಿ ಹಿಟ್ಲರನು ಸಾರಿದ ಶಾಂತಿ ಮಾತುಕತೆಯ ಕುರಿತು ಚರ್ಚೆ ನಡೆಯಿತು ಹೆಲಿಫಾಕ್ಸರು ಹಿಟ್ಲರನ ಮಾತನ್ನು ನಂಬಲು ಸಾಧ್ಯವಿಲ್ಲವೆಂದು ಹೇಳಿದರು

ಲಾರ್ಡ್ ಸ್ನೆಲ್ಲರು ಭಾರತದ ಹಿತದ ಕುರಿತು ಮಾತನಾಡಿದರು

ಫ್ರೆಂಚರು ಪಶ್ಚಿಮ ರಣರಂಗದಲ್ಲಿ ಮುಂದುವರಿದು ಕಾದಿದರು

ಯುದ್ಧದ ಕುರಿತು ಮಾತನಾಡಲು ಡೋಮಿನಿಯನ್ನು ಪ್ರತಿನಿಧಿಗಳನ್ನು ಲಂಡನಿಗೆ ಕರೆಯುವ ಸಿದ್ಧತೆ ನಡೆಯಿತು

ಪೋಲೆಂಡಿನ ಕಾಳಗ ನಡೆಯ ತ್ತಾ ಇತ್ತು. ಇಟೆಲಿಯು ಆತ್ಮ ರಕ್ಷಣೆಗಲ್ಲದೆ ಶಸ್ತ್ರ ಹಿಡಿವುದಿಲ್ಲವೆಂದು ಸ್ಪಷ್ಟ ಮಾಡಿತು

ಜಪಾನು ಜರ್ಮ್ಮನಿಯೊಡನೆ ಮಾಡಿದ ಒಪ್ಪಂದವನ್ನು ಹಿಂದೆಗೆಯಿತು

ಮೂಹತ್ತೆರಡನೆಯ ದಿನ

ರಶ್ಯಾ-ಜರ್ಮನಿಗಳೊಳಗೆ ಪೋಲೆಂಡು ವಿಭಕ್ತವಾಗಲು ಗೊತ್ತಾದ ವೇಲೆಗೆ ಅದರ ಹೊಸಗಡಿಯು ತೀರ್ಮಾನವಾಯಿತು

ನ್ಯೂಜಿಲೆಂಡಿನಲ್ಲಿ ಕೆಲಸಗಾರರ ಮುಷ್ಕರ ಬೊಡಲಾದವು ಸಿಯು ಬಾಹಿರವೆಂದು ನಿರ್ಬಂಧ ಹೊರಡಿಸಲಾಯಿತು

ಹಿಟ್ಲರನ ವಾರ್ತೆಗೋಸ್ಕರ ಬಂದು ಅಲ್ಲಿನ ಸೈನ್ಯದಲವನ್ನು ಸಂದರ್ಶಿಸಿದನ

ಲಕ್ಸೆಂಬರ್ಗಿನ ಹತ್ತಿರ ಫ್ರೆಂಚರು ಮುಂದುವರಿದರಿಂದ ಜರ್ಮನರು ಸಾಧ್ಯಸಾಹಸವನಾಡಿ ತಡೆದರು

ರಶ್ಯಾ ಮತ್ತು ಲಿಟ್ವಿಯನ್ ಒಪ್ಪಂದವು ನಡೆಯಿತು ಇದು ವ್ಯಾಪಾರ ಸಹಾಯ ಮತ್ತು ಸೈನ್ಯ ಸಹಾಯದ್ದಾಗಿದೆ

ಮೂಹತ್ತಮೂರನೆಯ ದಿನ

ಸಿಂಕಿಯಾಂಗಿಗೆ ರಶ್ಯದ ಪಡೆಯು ಚಲಿಸುತ್ತಿದೆಯೆಂಬ ಸುದ್ದಿಯನ್ನು ಜೈನವು ಸುಳ್ಳೆಂದು ಹೇಳಿತು.

ವ್ಯಾಪಾರ ಮಂತ್ರಿಯನ್ನು ನೇಮಿಸುವ ಒಂದು ಮಾತುಕತೆಯಿಂದಲಾಗಿ, ಕಂ ಜನ ವಿದೇಶೀಯ ಆಫೀಸಿನ ಉದ್ಯೋಗಸ್ಥರು ಜಪಾನಿನಲ್ಲಿ ರಾಜಿ ಕೊಟ್ಟರು

ನಾಜೀ ಮುಖಂಡರಿಗೆ ಲಂಡನಿಂದ ಗುಪ್ತವಾಗಿ ಚೀಟಿಯನ್ನು ಕಳುಹಿಸಲಾಗುತ್ತದೆಯೆಂದು ತಿಳಿದುಬಂತು.

ರಶ್ಯಾನಿನಲ್ಲಿ ಹಿಟ್ಲರನು ಒಂದು ಭಾಷಣ ಮಾಡಿದನು ಅದರಲ್ಲಿ ಪೋಲೆಂಡಿನವರ ವ್ಯರ್ಥವಾಗಿ ತಾವು ಜರ್ಮನಿಯ ಅಜೇಯ ಸೈನ್ಯವನ್ನು ಧ್ವಂಸಮಾಡುವೆವೆಂದು ಕನಸಗಿಸಿದ್ದರಿಂದೂ, ಆ ದುರಾಶೆಯ ಫಲವಾಗಿ ಈಗ ಪೋಲೆಂಡಿನ ಸೈನ್ಯ ಸಂಪೂರ್ಣ ಪುಡಿಯಾಗಿ ಹೋಯಿತೆಂದೂ ಹೇಳಿದನು.

ಅಮೇರಿಕದ ಹಡಗೊಂದು ಯೂರೋಪಿನ ಇತರ ಭಾಗದ ಜನರನ್ನು ಕೊಂಡುಹೋಗುತ್ತಿರವದನ್ನು, ಜರ್ಮನಿಯು ಮುಳುಗಿಸುವುದೆಂದು ಎಚ್ಚರಿಕೆ ಕೊಟ್ಟ ಕಾರಣ, ಅಮೇರಿಕದ ಜನತೆಯು ಬಹಳವಾಗಿ ಉದ್ವೇಗಗೊಂಡಿತ್ತು

ಮೂಹತ್ತನಾಲ್ಕನೆಯ ದಿನ

ಪಶ್ಚಿಮ ರಣರಂಗದ ಯುದ್ಧದಲ್ಲಿ ಫ್ರೆಂಚರು ಬೋರ್ಗ್ ವಾರೆಸ್ಸನ್ನು ಆಕ್ರಮಿಸುವಂತಾಗಿ ತಿಳಿಯಿತು

ಜರ್ಮನಿಯ ಜಲಾಂತರ್ಯಾಮಿ ನಾವೆಗಳ ಉಪದ್ರವವು ಕಡಿಮೆಯಾಗುತ್ತಿದೆ

ಪ್ರಾನ್ಸಿನಲ್ಲಿ ಕಮ್ಯೂನಿಸ್ಟರ ವಿರೋಧವಾಗಿ ಸರಕಾರವು ತೀವ್ರ ಕಾರ್ಯವನ್ನು ನಡಸುತ್ತಿದೆ

ಜರ್ಮನಿಯು ತಟಸ್ಥ ರಾಷ್ಟ್ರಗಳೊಡನೆ ವ್ಯಾಪಾರವನ್ನು ಆರಂಭಿಸಲು ಹೊಸ ಯೋಜನೆ ಮಾಡಿದೆ

ಪ್ರಾನ್ಸಿನ ಪ್ರಧಾನ ಮಂತ್ರಿಗಳು ವಿದೇಶೀಯ ವಿಚಾರದ ಸಮಿತಿಯಲ್ಲಿ ಭಾಷಣ ಮಾಡುತ್ತಾ, ಜಗತ್ತಿನ ಶಾಂತಿಯ ಸಲುವಾಗಿ ಯುದ್ಧವನ್ನು ಬಹುಕಾಲ ಬೆಳೆಸಬೇಕೆಂದು ಹೇಳಿದರು

ಗ್ರೇಟ್ ವಾರ್ಗ್ ಎಂಬ ಇನ್ನೊಂದು ಬ್ರಿಟಿಷ್ ಹಡಗವು ಜರ್ಮನ್ ಜಲಾಂತರ್ಯಾಮಿ ನಾವೆಯಿಂದ ಮುಳುಗಿಸಲ್ಪಟ್ಟಿತು

ಬಾಂಗ್ಕಾದ ಬಳಿಯ ಪ್ರಾಮುಖ್ಯ ನಗರವೊಂದನ್ನು ಜೈನೀಯರು ತಿರಿಗಿ ವಶಪಡಿಸಿದರೆಂದು ತಿಳಿದುಬಂತು

ಸೀಜ್‌ಫ್ರೆಡ್ ಲೈನಿನ ಬಳಿ ವಿಮಾನ ದ್ವಂದ್ವ ಯುದ್ಧವು ನಡೆಯಿತು.

ಲಂಡನಿನಲ್ಲಿ ಅನೇಕ ಪಾರ್ಲಿಮೆಂಟು ಸದಸ್ಯರು ಭಾರತಕ್ಕೆ ಸ್ವಾತಂತ್ರ್ಯ ಕೊಡುವ ವಿಷಯ ಚೇಂಬರ್ಲೆನರೊಡನೆ ಮಾತುಕತೆ ನಡಿಸಿದರು

ಮೂಹತ್ತೈದನೆಯ ದಿನ

ಹಿಟ್ಲರನು ಶಾಂತಿಗಾಗಿ ಕಳುಹಿಸಿದ ಸೂಚನೆಯು ಬರಿಯ ವ್ಯರ್ಥವಾದುದೆಂದು ಲಂಡನಿನಲ್ಲಿ ಅಭಿಪ್ರಾಯಪಟ್ಟರು ಹಿಟ್ಲರನ ಶಾಂತಿ ಸೂಚನೆಯಲ್ಲಿ ಯೂರೋಪು ಇನ್ನೂ ಸಂಕಷ್ಟದಿಂದ ಮುಕ್ತವಾಗುವ ದಾರಿಯಿಲ್ಲವೆಂದು ಅಭಿಪ್ರಾಯವಾಯಿತು

ಬೋರ್ಗ್ ವಾರೆಸ್ಸಿಂಟ ಪ್ರಾಮುಖ್ಯ ಸ್ಥಳವನ್ನು ಫ್ರೆಂಚರು ಆಕ್ರಮಿಸಿರಲು ಜರ್ಮನರು ಅನೇಕ ಸಲ ಆಶ್ಚರ್ಯಕರವಾದ ಧಾಳಿಯನ್ನು ಮಾಡಿದರು

ಏಡನ್ನರು ಭಾಷಣಮಾಡುತ್ತಾ ಹಿಂದೆಸಿಂದ ಲೋಕವನ್ನು ಆಳುವ ನೀತಿಯು ಸಂಪೂರ್ಣ ಇಲ್ಲದೆ ಆಗಬೇಕೆಂದು ಹೇಳಿದರು

ರಶ್ಯವು ಯುದ್ಧದಲ್ಲಿ ಸೇರಿದರೂ ಟರ್ಕಿಯು ತಟಸ್ಥವಾಗಿಯೇ ಇರುವುದಾಗಿ ತಿಳಿಯಿತು

ಶಾರದಾಪೂಜೆಯ ಸಂಬಂಧವಾಗಿ, ವಾಡಿಕೆಯಂತೆ, ನಮ್ಮ ಬರುವ ವಾರದ ಸಂಚಿಕೆಯು (ತಾ. ೨೦—೧೦—೧೯೩೯) ಪ್ರಕಟಿಸಲಾಗುವುದಿಲ್ಲ.

ಹಿಟ್ಲರನು ರಶ್ಯಾನಿನ ಭಾಷಣದಲ್ಲಿ ಇಂಗ್ಲೆಂಡು ಇನ್ನೂ ಯುದ್ಧ ಮಾಡುವುದು ಅಗತ್ಯವಿಲ್ಲವೆಂದ ಪೋಲೆಂಡನ್ನು ತಿರಿಗಿ ಕೊಡುವಂತಿಲ್ಲವೆಂದೂ ಅದ್ದರಿಂದ ಶಾಂತಿಯಾಗಬೇಕೆಂದೂ ಹೇಳಿದನು

ಸೋವಿಯೆಟ್ ರಶ್ಯವೂ ಕೂಡಾ ಜರ್ಮನ್ ಪ್ರಾನ್ಸುಗಳಂತೆ ಬಾಲ್ಟಿಕ್ ವಲಯದಲ್ಲಿ ಒಂದು ಭದ್ರವಾದ ದುರ್ಗವನ್ನು ಕಟ್ಟಿಸುವುದಾಗಿ ತಿಳಿಯಿತ

ಹೊಸ ಚೆಕ್ಕರ ಸರಕಾರವೊಂದು ಲಂಡನಿನಲ್ಲಿ ರಚಿತವಾಗುವುದಾಗಿ ತಿಳಿಯಿತು

ಮೂಹತ್ತಾರನೆಯ ದಿನ

ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ಯೂರೋಪಿನಲ್ಲಿ ಶಾಂತಿ ಸಂಧಾನ ಮಾಡುವರಾಗಿ ವರ್ತಿಸುವರೆಂದು ತಿಳಿದುಬಂತು.

ಬ್ರಿಟಿನಿನ ಲಿಬರಲ್ ಮುಖಂಡರು ಭಾರತದ ಸ್ವಾತಂತ್ರ್ಯಕ್ಕಾಗಿ ತಾವು ದುಡಿಯುವೆವೆಂದು ಒಂದು ಪ್ರಕಟಣೆ ಹೊರಡಿಸಿದರು.

ಇಕ್ವೆಟರ್ ನೌಕಾ ದಳದ ನಾಯಕರೂ, ಎರಡು ವೈಮಾನಿಕ ದಳಪತಿಗಳೂ ವಿಮಾನದ ಅವಗಡದಿಂದ ಸತ್ತು ಹೋದರು.

ಜಪಾನಿನ ವಿದೇಶೀಯ ಆಫೀಸಿನಲ್ಲಿ ರಾಜಿಕೊಟ್ಟ ೬೦ ಮಂದಿ ಉದ್ಯೋಗಸ್ಥರು ತಮ್ಮ ರಾಜಿನಾಮೆಯನ್ನು ಹಿಂತೆಗೆದರು

ಪಶ್ಚಿಮ ರಣರಂಗದಲ್ಲಿ ಜರ್ಮನರ ಧಾಳಿಯನ್ನು ಫ್ರೆಂಚರು ಹಿಂದಟ್ಟಿದರು ಸಾರ್ ಬ್ರೂಕೆನಿನ ಬಳಿ ಭಯಂಕರ ಕಾದಾಟವಾಯಿತು

ಮೂಹತ್ತೇಳನೆಯ ದಿನ

ಲಾಯ್ಡ್ ಜಾರ್ಜರು, ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು, ಶಾಂತಿ ಪ್ರಸ್ತಾಪವೆತ್ತಲಾಗಿ ನಿಲ್ಲುವುದಿದ್ದರೆ ಬ್ರಿಟನು ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ಹೇಳಿದರು

ಸೀಜ್‌ಫ್ರೆಡ್ ಲೈನಿನ ರಚನೆಯು ಸಂಪೂರ್ಣವಾಗಲಿಲ್ಲವೆಂದು, ತಿಳಿದುಬಂತು

ಗಂಡರಿಲ್ಲದ ಮತ್ತು ಉದ್ಯೋಗವಿಲ್ಲದ ಜರ್ಮನ್ ಮಹಿಳೆಯರು, ನಾಜೀ ಗುಂಪಿನ ಮುಖಂಡರ ವೀಲೆ ಕೆರಿದು ಬಿದ್ದರು

ಇಂಗ್ಲಿಷ್ ಕಾಲುವೆಯಲ್ಲಿ ಡಚ್ ಹಡಗವೊಂದು ಮುಳುಗಿಸಲ್ಪಟ್ಟಿತು

ರಶ್ಯಾ ಜರ್ಮನ್ ಒಪ್ಪಂದದನ್ನಯದಂತೆ ಜರ್ಮನಿಗೆ ರಶ್ಯದಿಂದ ಕಚ್ಚಾ ಮಾಲು ಬರುತ್ತಿದೆ

ಬ್ರಿಟನು ಪ್ರಾನ್ಸುಗಳೊಡನೆ ಸಂಬಂಧವಿಟ್ಟುಕೊಂಡಿರುವ ಸಲುವಾಗಿ ತಟಸ್ಥ ರಾಷ್ಟ್ರಗಳ ಹಡಗುಗಳನ್ನು ಜರ್ಮನಿಯು ಬೆದರಿಸಿದೆ

ರಶ್ಯವು ಬಾಲ್ಟಿಕ್ ರಾಷ್ಟ್ರಗಳಾದ ಲೇಟ್ವಿಯಾ, ಎಸ್ಟೋನಿಯಗಳೊಡನೆ ಒಪ್ಪಂದ ಮಾಡಿಕೊಂಡು ಫಿನ್‌ಲೇಂಡಿನೊಡನೆಯೂ ಒಪ್ಪಂದ ಮಾಡಲು ಯತ್ನ ಮಾಡುತ್ತಿದೆ

ಹೊಸ ದಲಾಯಿಲಾಮ

ತಿಬೇಟಿನ ಅರಸನೂ, ಧಾರ್ಮಿಕ ಪ್ರಧಾನ ಪುರುಷನೂ ಆದ ಆರನೆಯ ದಲಾಯಿಲಾಮನ ಪಟ್ಟಾಭಿಷೇಕ ಮಹೋತ್ಸವವು ವಿಜೃಂಭಣೆಯಿಂದ ಜರಗಿತು. ಈ ಮಹೋತ್ಸವಕ್ಕೆ ಬ್ರಿಟಿಷರ, ನೇಪಾಲಿಯನರ, ಜೈನೀಯರ ಪ್ರತಿನಿಧಿಗಳು ಬಂದಿದ್ದರು.

ಕಾನ್‌ಪುರದಲ್ಲಿ ಮುಷ್ಕರ

ಕಾನ್‌ಪುರದ ಕೆಲಸಗಾರರು ನಗರದ ಮಿಲ್ಲುಗಳ ಬಾಗಿಲಲ್ಲಿ ಪಿಕೆಟಿಂಗನ್ನು ಮಾಡಿದರು

ಅನೇಕರ ಬಂಧನವಾಗಿದೆ ನಗರ ಕಾಂಗ್ರೆಸ್ ಕಮಿಟಿಯು ಈ ಸಗಾರರಿಗೆ ಬೆಂಬಲ ಕೊಡುವುದಾಗಿ ಹೇಳಿದೆ

ಮೈಸೂರಲ್ಲಿ ರಾಜಕೀಯ ವಿಪ್ಲವ

ಮೈಸೂರಲ್ಲಿ ಜವಾಬ್ದಾರೀ ಸರಕಾರಕ್ಕಾಗಿ ರಾಜಕೀಯ ಆಂದೋಲನವು ಪ್ರಚಂಡವಾಗಿ ನಡೆಯುತ್ತಿದೆ ಇದುವರೆಗೆ ಎಂಟುಮಂದಿ ಕಾಂಗ್ರೆಸು ಸರ್ವಾಧಿಕಾರಿಗಳು ಬಂಧಿತರಾದರು

ಮೈಸೂರ, ಸತ್ಯಾಗ್ರಹದಲ್ಲಿ ಶಿಕ್ಷೆಗೆ ಗರಿಯಾದ ಶ್ರೀಮತಿ ನಾಗರತ್ನಮ್ಮ ಶ್ರೀಮತಿ ಬಳ್ಳಾರಿ ಸಿದ್ಧಮ್ಮ ಮೊದಲಾದವರನ್ನು ಸೆಂಟ್ರಲ್ ಜೈಲಿಗೆ ಸಾಗಿಸಲಾಯಿತು.

ಶಿವನಗೌಡ ಮೊದಲಾದ ಐದು ಮಂದಿಗ ಮೈಸೂರಿನಿಂದ ಬಿಟ್ಟುಹೋಗ ವರಿ ಆಜ್ಞೆ ಹೊರಟಿದೆ

ಕೋಲಾರದ ಕುರುಪೆ ಹೋಟೆಲಿನ ಮಾಲೀಕರಿಗೆ ಅನ್ನದ ಸಂಗಣು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕೂ ಅನ್ನ ಸತ್ಯಾಗ್ರಹಿಗಳಿಗೆ ಹೋಟೆಲಲ್ಲಿ ಅನ್ನಹಾಕಿದ್ದಕ್ಕೂ ಮೈಸೂರು ಸರಕಾರವು ಅವರನ್ನು ಮೈಸೂರಿಂದ ಹೊರಹೋಗಲು ನೋಟೀಸು ಕೊಟ್ಟಿತು

ಶಿವಮೊಗ್ಗ ಕೋಲಾರಗಳಲ್ಲಿ ಪ್ರತಿಬಂಧಕಾಜ್ಞೆಗಳನ್ನುಲ್ಲಂಘಿಸಿ ಸತ್ಯಾಗ್ರಹಿಗಳು ಸೆರೆ ಸಿಕ್ಕಿದ್ದಾರೆ

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಆಹಾರವು ಸರಿಯಾಗಿಲ್ಲವೆಂದು ಸತ್ಯಾಗ್ರಹಿಗಳು ಉಪವಾಸ ಹಿಡಿದಿದ್ದಾರೆ

ಶಿಂಷಾ, ತಿರುಮನೂರು, ದೊಡ್ಡನೆಹಳ್ಳಿ, ಚಿತ್ರದುರ್ಗ ಮೊದಲಾದೆಡೆಗಳಲ್ಲಿ ಅರಣ್ಯ ಸತ್ಯಾಗ್ರಹವು ಭರದಿಂದ ನಡೆಯುತ್ತಿದೆ

ರಾಷ್ಟ್ರಪತಿಗಳ ಪ್ರಕಟಣೆ

ಬ್ರಿಟನಿಗೆ ಸವಾಲ್

ವರ್ಕಿಂಗ್ ಕಮಿಟಿಯ ಆರಂಭದ ಸಮಯದಲ್ಲಿ ರಾಷ್ಟ್ರಪತಿ ರಾಜೇಂದ್ರಪ್ರಸಾದರು, ಇಂಡಿಯನ್ ಚರಿತ್ರೆಯ ಪಂಕ್ತಿಯನ್ನು ವಿವರಿಸಿ ಹೇಗೆ ಸ್ವಾತಂತ್ರ್ಯ ನಾಶವು ಬಲಾತ್ಕಾರವನ್ನು ಖಂಡಿಸಿ, ದಲಿತ ಪೋಲೆಂಡಿನ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ ಬಳಿಕ ನಿಜವಾಗಿಯೂ ಇಂದು ಬ್ರಿಟನು ಪ್ರಾಜಾಪ್ರಭುತ್ವಗಳು ಯುದ್ಧಕ್ಕಿಳಿದ ಉದ್ದೇಶವೇನೆಂದೂ ಇದೂ ಕಳೆದ ಯುದ್ಧದಂತೆಯೇ ಪರಿಣಮಿಸುವುದೇ ಎಂದ ಸಂಶಯನಡೆತ್ತಾ ಪ್ರಜಾಪ್ರಭುತ್ವ ರಕ್ಷಣೆಗಾಗಿ ಬ್ರಿಟನ ಕಾದಾಡುವುದಾದರೆ ಅದನ್ನು ಸ್ಪಷ್ಟವಾಗಿ ತಿಳಿಸಬೇಕೆಂದೂ, ಅಂತಹ ಬ್ರಿಟನ ಉದ್ದೇಶದ ವಿಶಾಲತೆಯು ಇದೇ ಯುತ್ತಿಗೆ ಸಮದೃಷ್ಟಿಯಿಂದ ಅನ್ವಯಿಸುವಂತೆ ಹುದಾಗಿರಬೇಕೆಂದೂ ಹೇಳಿದರು

'ನಮ್ಮನ್ನು ಸ್ವತಂತ್ರ ಜನಾಂಗದವರನ್ನಾಗಿ ನೋಡಬೇಕು ನಮ್ಮ ಪಕ್ಷ ಟನೆಯು ನ್ಯಾಯ ರೀತಿಯದೆಂದ ಇಡೀ ಜಗತ್ತೇ ಮೆಚ್ಚಿದೆ. ಎದರಿಂದ ಪ್ರಜಾಪ್ರಭುತ್ವದ ಸ್ವಾತಂತ್ರ್ಯ ರಕ್ಷಣೆಯ ಉದ್ದೇಶ ನಮ್ಮ ದೇಶಕ್ಕೆ ಹೇಗೆ ಸರಿಯಾಗುತ್ತದೆಯೆಂಬ ಕುರಿತ ವಿವರಿಸಿ ಹೇಳಲು ಬ್ರಿಟನಿಗೆ ಯಾವತರದ ಕಷ್ಟವು ಇರುವುದಿಲ್ಲ. ನಮ್ಮಲ್ಲಿ ಬೇರೆ ಬೇರೆ ಪಕ್ಷದವರ ಅನೇಕ ವಿಷಯಗಳಲ್ಲಿ ಒಮ್ಮತದಿಂದಿಲ್ಲದಿದ್ದರೂ, ನಮಗೆ ಸ್ವಾತಂತ್ರ್ಯವು ಬೇಕೆಂಬ ಬಗ್ಗೆ ಎಲ್ಲರೂ ಒಮ್ಮತದವರೇ ಆಗಿರುವರೆಂದೂ, ಸ್ವಾತಂತ್ರ್ಯವೆಂಬುದು ಆ ಪಕ್ಷ ಈ ಪಕ್ಷದವರ ಲಾಭವಾಗಿರದೆ ಇಡೀ ರಾಷ್ಟ್ರದ ಲಾಭವೆಂದೂ ಹೇಳಿದರು ಆದರಿಂದ ಈ ಸಮಯದಲ್ಲಿ ಬ್ರಿಟನು ತನ್ನ ಧೋರಣೆಯನ್ನು ಬದಲಾಯಿಸಬೇಕಾದುದ ಅವಶ್ಯವೆಂದರು

ಮೈಸೂರಾಯ ರೊಡನೆ ಭೇಟಿಯಾದ ವಿಷಯದಲ್ಲಿ ತಾವು ಕಾಂಗ್ರೆಸಿನ ಅಭಿವಕ್ತವನ್ನು ಅವರ ಮುಂದಿರಿಸಿರುವುದಾಗಿ ಹೇಳಿದರು.

ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕು

ಲಂಡನ್ ಪತ್ರಿಕೆಯ ಹೇಳಿಕೆ

ಡೈಲಿ ಹೆರಾಲ್ಡ್ ಪತ್ರಿಕೆಯ ಒಂದು ಅಗ್ರಲೇಖನ ಬರೆಯುತ್ತಾ ಅವರಲ್ಲಿ ಹಿಂದೂದೇಶವನ್ನು ತೃಪ್ತಿಗೊಳಿಸುವುದು ಅವಶ್ಯವೆಂದೂ, ಅದಕ್ಕೆ ಬ್ರಿಟನು ಸ್ವಾತಂತ್ರ್ಯ ಪ್ರಕಟಣೆಮಾಡಲು ಮನಸ್ಸು ಮಾಡದಿದ್ದಲ್ಲಿ ಅದು ಬ್ರಿಟಿಷ್ ಸರಕಾರದ ದುರ್ಭಾಗ್ಯವೆಂದೂ ಹೇಳಿದೆ

ಮದ್ರಾಸ್ ಪ್ರಾಂತದಲ್ಲಿ ಮದ್ಯಪಾನ ನಿಷೇಧ

ಮದ್ರಾಸು ಕಾಂಗ್ರೆಸು ಸರಕಾರವು ಸೇಲಂ, ಚಿತ್ತೂರು, ಮತ್ತು ಕಡಪಾ ಜಿಲ್ಲೆಗಳಲ್ಲಿ ಜಾರಿಗೆ ತಂದ ಮದ್ಯಪಾನ ನಿಷೇಧ ಕಾನೂನ ಯೋಗ್ಯವಾಗಿ ಪರಿಣಾಮಕಾರಿಯಾಗಿದೆಯೆಂದೂ, ಜನತೆಯು ಇದರಿಂದ ಪ್ರಯೋಜನ ಹೊಂದಿದ ವಿಷಯವು ಸ್ಪಷ್ಟವಾಗಿ ತಿಳಿದು ಬಂದಿದೆಯೆಂದೂ ಅಲ್ಲಿ ಈ ಕೆಲಸಗಳಲ್ಲಿ ನಿಯುಕ್ತರಾದ ಅಧಿಕಾರಿಗಳು ತಮ್ಮ ಕಾರ್ಯಗಳನ್ನು ಸಮರ್ಪಕ ರೀತಿಯಿಂದ ಮಾಡಿರುವರೆಂದೂ, ಜನರ ಆರ್ಥಿಕ ಸಾಮಾಜಿಕ ಸ್ಥಿತಿಯು ಅಭಿವೃದ್ಧಿ ಹೊಂದಿದೆಯೆಂದೂ ಸರಕಾರದ ರಿಪೋರ್ಟ್ ವರದಿಯಿಂದ ತಿಳಿದ ಬರುತ್ತದೆ.

ಭಾರತದ ಉದ್ಯೋಗವನ್ನು ಹೆಚ್ಚಿಸಿರಿ

ತಂಜಾವೂರಿನ ಜಿಲ್ಲಾ ಉದ್ಯೋಗ ಪ್ರದರ್ಶನವನ್ನು ತೆರೆಯುವ ಸಂದರ್ಭದ ...

NOTICE

Canara Bank, Limited. Moolky

ಕೆನರಾ ಬೇಂಕ್. ಲಿಮಿಟೆಡ್. ಮುಲ್ಕಿ

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಅವಧಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ವ್ಯಾಂಗಿ ಅಸಲು ಬಡ್ಡಿ ಕೊಡದೆ ಈ ವರೆಗೆ ಬಾಕಿ ಇರಿಸಿದ್ದರಿಂದಲೂ ಸದ್ರಿ ಸಾಲಗಳನು ... ಇದೇ ತಾ 25 10 39ನೇ ಶನಿವಾರ ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ನೋಟೀಸ್ ... ಇದೇ ತಾ 30 10 39ನೇ ಸೋಮವಾರ ದ ಅನಂತರ ಸಮಗೆ ಯುಕ್ತಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಸಂಟೆ 1ಕೆ ಬಹಿರಂಗವಾಗಿ ಏಲಂ ಮಾರಲ್ಪಡುವುದು.

ಸೀರಿಯಲ್ ನಂಬ್ರು	ಲೋನ್ ನಂಬ್ರು	ಹೆಸರು ಹತ್ತು ವಿಳಾಸ	ಪಾವತಿಕೊಂಡ ಅಸಲು ಹಣ
1	L 339 14 10 3	ಕೆ ೧೦ ಬಟ್ಟು ಶೆಟ್ಟಿ ಓಮಯ್ಯ ಶೆಟ್ಟಿ ಅಳಿಯ ಲೇಂಡ್ ಲೋರ್ಡ್ ಕಿನ್ನಿಗೋಳಿ	Rs 220 0 0
2	L 524 37 1 9 37	ತಿಮ್ಮಪ್ಪ ಪೂಜಾರಿ ಕುಜ್ಞ ಪೂಜಾರಿ ಮಗ, ಪಟ್ಟಿ ಅಧಿಕಾರಿ ಬೆಟ್ಟುಗ್ರಾಮ, ಪೋ ಮುಲ್ಕಿ	, 7 0 0
3	L 596– 22 9 37	ಎನ್ ರುಗ್ಗಪ್ಪ ಶೆಟ್ಟಿ ಕಪ್ಪ ಶೆಟ್ಟಿ ಅಳಿಯ, ಪಕ್ಕಬೈಲ್ ಮನೆ ಪೋಸ್ಟ್ ಕಲ್ಲವಂ ಡ್ಕಾರು	25 0 0
4	L 138–38 15 7 38	ಎ ಸದಾನಂದ ಹೆಗ್ಡೆ ಎನ್ ಕೃಷ್ಣ ಶೆಟ್ಟಿ ಅಳಿಯ C/o ಟಿ ರಿ ಮುಣ್ಣ ಶೆಟ್ಟಿ ಪೋಸ್ಟ್ ಕಿನ್ನಿಗೋಳಿ	, 80 0-0
5	L 157–38 28 7 38	ಸುಬ್ಬಯ್ಯ ಶೆಟ್ಟಿ ಮುತ್ತಯ್ಯ ಶೆಟ್ಟಿ ಅಳಿಯ ಮುಡ್ಡಗ್ರಾಮ, ಪೋಸ್ಟ್ ಮುಂಗ್ಲೂರು	, 6 0 0
6	L 622 38 1 10 38	ಸೀತರಾಮಯ್ಯ ಕೃಷ್ಣಯ್ಯರ ಮಗ, ಅಧಿಕಾರಿ ಬೆಟ್ಟು ಗ್ರಾಮ, ಪೋಸ್ಟ್ ಮೂಲ್ಕಿ	,, 12-0-0
7	L 696–38 29 10 38	ಟಿ ರಾಮಣ್ಣ ಶೆಟ್ಟಿ, ರಾಮಯ್ಯ ಶೆಟ್ಟಿ ಮಗ, ಸಾಸ್ತಾವು ಕಾರ ಪೋಸ್ಟ್ ಕಿನ್ನಿಗೋಳಿ	,, 60 0 0
8	L 9—39 3-1-39	ಶ್ರೀನಿವಾಸ ಶಿಬರಾಯ, ವಾಸುದೇವ ಶಿಬರಾಯರ ದತ್ತು ಪುತ್ರ, ದೇಲಂತಬೆಟ್ಟು ಗ್ರಾಮ, ಪೋಸ್ಟ್ ಮೂಲ್ಕಿ	,, 175 0 0
9	L 51—39 20 1 39	,, ,, ,,	,, 95-0 0
10	L 209 39 27-3 39	,, ,, ,,	,, 50 0 0
11	L 384-39 22-6 39	,, ,, ,,	,, 80 0-0
12	L 54—39 20-1 39	ಕಾಂತಪ್ಪ ಪೂಜಾರಿ, ತಿಮ್ಮಪ್ಪ ಪೂಜಾರಿ ಅಳಿಯ, ಅಧಿಕಾರಿಬೆಟ್ಟು ಗ್ರಾಮ ಪೋಸ್ಟ್ ಮೂಲ್ಕಿ	,, 35 0-0

ಬೇಂಕಿನ ಆಫೀಸು ಮುಲ್ಕಿ 10—10—1939 M. RAMANATH PRABHU Agent.

'ಕಾಂಗ್ರೆಸಿನ ಹೇಳಿಕೆಯು ನ್ಯಾಯವೆಂದು ಅಖಿಲ ಜಗತ್ತೇ ಸಾರಿದೆ!'

ರಾಷ್ಟ್ರಪತಿಗಳ ಪ್ರಕಟಣೆ—

ಭಾರತದ ಉದ್ಯೋಗವನ್ನು ಹೆಚ್ಚಿಸಿರಿ

ಮೈಸೂರು ರಾಜಕೀಯ ವಿಪ್ಲವ! ಪೋಲಿಸರು ಗುಂಡುಹಾರಿಸಿದರು!!

ಲ್ಲಿ ಭಾಷಣ ಮಾಡುತ್ತಾ ನಾನು ಮಂತ್ರಿ ಟಿ. ಪ್ರಕಾಶಂರವರು ನಮ್ಮ ದೇಶದ ಹಣಗಾರರು ತಮ್ಮ ಹಣವನ್ನು ದೇಶದ ಕೈಗಾರಿಕೆ ಉದ್ಯೋಗಗಳನ್ನು ಬೆಳೆಸಲು ಉಪಯೋಗಿಸಬೇಕೆಂದು ಹೇಳಿದರು

ಪೋಲೀಸರು ಗುಂಡು ಹಾರಿಸಿದರು

ಸಂಯುಕ್ತ ಪ್ರಾಂತದ ಕಾಕ್ಸರ ಚಳವಳಗಾರರು ಜೈಲಿನಲ್ಲಿ ಗಲಭೆ ಮಾಡಿದ ನಿಮಿತ್ತ ಪೋಲೀಸರು ಗುಂಡುಹಾರಿಸಿ ಅವರಲ್ಲಿ ಐದು ಜನರು ಸ್ವರ್ಗ ಹೊಂದಿರುವರಾಗಿ ತಿಳಿದ ಬರುತ್ತದೆ

ಕಾಕ್ಸಾರ ಚಳವಳದ ಕುರಿತು ಜಿನ್ನರ ವ್ಯವಹಾರ

ಸಂಯುಕ್ತ ಪ್ರಾಂತದಲ್ಲಿ ಕಾಕ್ಸಾರ ಚಳವಳಗಾರರ ವಿಷಯ ಸರಕಾರವು ಕೈಕೊಂಡ ವಿಷಯದಲ್ಲಿ ಮಿ। ಜಿನ್ನಾರವರು ದಿಲ್ಲಿಯ ಸಂಭಾಷಣೆಯ ಸಮಯ ಪಂಡಿತ ನೆಹರುರೊಡನೆ ಹೇಳಿದ್ದಕ್ಕೆ ಅವರು ಆ ಕುರಿತು ಅಲಹಾಬಾದಿ ... ಅದಕ್ಕೆ ಸಂಬಂಧಪಟ್ಟ ಪತ್ರಗಳನ್ನು ಮಿ। ಜಿನ್ನಾರಿಗೆ ಕಳುಹಿಸಬೇಕೆಂದ ಪ್ರಧಾನ ಮಂತ್ರಿಗಳಿಗೆ ತಂತಿ ಬಿಟ್ಟು ತಿಳಿಸಿದರು ಕಾಕ್ಸಾರರ ಮುಖಂಡರಾದ ಮಿ। ಅಲಾಮ ಮುಶರಫರು ಬಿಡುಗಡೆ ಮಾಡಲು ಅವರನ್ನು ಭೆಟ್ಟಿಯ ಸಲುವಾಗಿ ಸಂದರ್ಶಿಸಲು ಮಿ। ಜಿನ್ನರು ಸರಕಾರದೊಡನೆ ಕೇಳಿಕೊಂಡಲ್ಲಿ ಸರಕಾರವು ಅದಕ್ಕೆ ಒಪ್ಪಿಗೆಯಿತ್ತಿರುವುದೂ, ಆದರೆ ಮಾತುಕತೆಯ ವರದಿಯನ್ನು ಯಾರೊಡನೆಯೂ ಮಾತನಾಡಲು ಇಚ್ಛಿಸಿರುವುದಿಲ್ಲವೆಂದೂ ಹೇಳಿದರು

ನೋಟೀಸು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

ಕೇ. ಮ. ನಂ. 50 36

ಕ್ರಮ ಅಮ್ಮಣ್ಣಿ ... ಬ ... ಗ್ರಾಮಸ್ಥರು – ವಾದಿರು ಅರ್ಜೀದಾರರು

1 ... 2 ಬೋವಿನಾನ ಮರ್ಟಿನ ... ಕ್ಕೆಂಡರ್ ... ಪ್ರತಿವಾದಿರು ಎದ್ರಿರು

ಸದ್ರಿ ಎದ್ರಿಗೆ ... ಅರ್ಜೀದಾರರು ... 7-11 1939ನೇ ... ಶಿಸ್ಪಕ್ ... ಬರೆದಿದ್ದ ... ಪ್ರತಿವಾದಿಗಳು ಇಟ್ಟುಕೊಳ್ಳುವುದು

ಕಾರ್ಕಳ 11-10-39 A. N. S. Achar, ಅರ್ಜೀದಾರರ ಕಡೆ ವಕೀಲ್

ನೋಟೀಸು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

S C No 207 1939

ಶ್ರೀಕೃಷ್ಣೇಂದ್ರ ತೀರ್ಥ ಸ್ವಾಮಿ ವಾದಿರು ಮತ್ತು

ಪುತ್ತೂರಿನ ಭಟ್ಟ್ ಕೂಡ ... ಪ್ರತಿವಾದಿರು

ಸದ್ರಿ ಪ್ರತಿವಾದಿಗಳಿಗೆ ... ದೊರೆತಿದೆ. 1939 ನವೆಂಬರ್ 6-11-39ಕ್ಕೆ ... ಬೆಳಿಗ್ಗೆ 10 ಘಂಟೆಗೆ ... ಆಕ್ಷೇಪಣೆಗಳನ್ನು ಸಲ್ಲಿಸಬೇಕು ...

Karkal 10 10 39 A. N. S Achar

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore. . .. And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE — ESTD 1906

CANARA BANK, LIMITED.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ — ಜವ್ವಿ ವೆಂಕಟ್ರಮಣಯ್ಯ

ವಿಶೇಷ ವಾಹಿತಿಗೆ ಬರೆಯಿರಿ — ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸ್

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡ — ಬ್ರೇಂಚ್ ಪೇಟೆ ಲೆಂಡ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ 1,00 000 — [illegible] ಮೂಲಧನ ರೂ ,0 100

ಎಲ್ಲಾ ವಿಧದ ಬೇಂಕ್ ವ್ಯವಹಾರಗಳು ನಮ್ಮಲ್ಲಿ ನಡೆಯುತ್ತವೆ [illegible]

[illegible]

ಡಿಪಾಜಿಟುಗಳು ... ಠೇವಣಾತಿಗಳ ಮೇಲಿನ ದರ :

ಚಾಲ್ತಿ ಠೇವಣಾತಿ 2 ಸೇವಿಂಗ್ಸ್ ಬೇಂಕ್ ಠೇವಣಿ [illegible]

ನಿರಖು ಠೇವಣಿ 3 ತಿಂಗಳಿಗೆ 3½ ... 12 ತಿಂಗಳಿಗೆ 4½

6 ತಿಂಗಳಿಗೆ 4 ... 24 ತಿಂಗಳಿಗೆ 5

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು —

ಅತ್ತೂರು ವೈಕುಂಠಪ್ರಭು, ಮ್ಯಾನೇಜಿಂಗ್ ಡೈರೆಕ್ಟರ್

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/-, & 5,000/

are now issued at all our Branches

For particulars call at or write to any of our nearest Branches.

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು
ಮನೆಗೆಲ್ಲಾ ಬೆಳಕು, ಬಳದಿಂಗಳು
ಆದ್ದರಿಂದಲೇ ಸ್ತ್ರೀಯರ ಆರೋಗ್ಯವು
ಅಷ್ಟು ಮುಖ್ಯ
ಸ್ತ್ರೀಯರಿಗೆ [illegible] ಬಂಧವಾದ
ದೋಷಗಳಿಂದ ಶರೀರವು ಕೃಶಿಸಿ
[illegible] ಸಫಲತೆ
[illegible] ಲೋಧ್ರವನ್ನು
ಸೇವಿಸಿದರೆ [illegible]
[illegible] ಜೀವನವೂ [illegible]

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಟೋಕಿಸ್ಟರು ಪ್ರೊಪ್ರೈಟರ್ ಸ್ಟೋರ್ಸ್ ರಥಬೀದಿ ಮಂಗಳೂರು

ಲೋಕಪ್ರಸಿದ್ಧವಾದ ಉತ್ತಮ.



ನೀಲಿ ಬಣ್ಣದ ಜಿಲೆಟ್ ಬ್ಲೇಡುಗಳನ್ನು ಉಪಯೋಗಿಸಿ [illegible]

[illegible]

ನೀಲವರ್ಣ ಜಿಲ್ಲೆಟ್ಟು ಬ್ಲೇಡುಗಳು

GB.2

ನಿರ್ಮಲ ಹೃದಯ!

[೬ನೆಯ ಪುಟದಿಂದ]

ಕೂಡಲೇ ಆ ಕಡೆ ಓಡಿಹೋಗಿ ದಡದ ಮೇಲಿಟ್ಟಿದ್ದ, ಆತನ ಅಂಗಿಯನ್ನು ಹರಿದು, ಹಗ್ಗಮಾಡಿ, ಆತ ತಂದಿದ್ದ ಹಗ್ಗ ಮತ್ತು ತಾನು ತಂದಿದ್ದ ಹಗ್ಗ ಇವುಗಳನ್ನು ಸೇರಿಸಿ ಆತನ ಸಮೀಪದ ಒಂದು ಬಂಡೆಯ ಕಡೆಗೆ ಈಜಿ ಹೋಗಿ ಒಂದು ಕೈಯಿಂದ ಬಂಡೆಯನ್ನೂ ಹಗ್ಗದ ತುದಿಯೊಂದನ್ನೂ ಹಿಡಕೊಂಡು, ಇನ್ನೊಂದು ತುದಿಯನ್ನು ಆತನು ಮುಳುಗೇಳುತ್ತಿರುವಲ್ಲಿಗೆ ಎಸೆದಳು. 'ನರಸಾ, ಹಗ್ಗದ ತುದಿ ಹಿಡಿದುಕೋ' ಆಕೆ ಕೂಗಿ ಹೇಳಿದಳು. ಹೇಗೋ ಮಾಡಿ, ಆತನು ಹಗ್ಗದ ತುದಿಯನ್ನು ಹಿಡಿಕೊಂಡನು. ಚೆನ್ನಿ ಗಟ್ಟಿಯಾಗಿ ಎಳೆದಳು. ಅಲೆಗಳು ಇನ್ನೂ ಕೆರಳಿದ್ದುವು. ನರಸನು ಹೇಗೂ ಕಟ್ಟಕಡೆಗೆ ದಡದ ಕಡೆಗೆ ಬರುತ್ತಿದ್ದನು. ಹಗ್ಗವನ್ನು ಬಾಯಲ್ಲಿ ಕಚ್ಚಿಕೊಂಡು ಚೆನ್ನಿಯೂ ತನ್ನ ಬಂಡೆಯ ಕಡೆಗೆ ಈಜಿ ಬಂದಳು. ನರಸನ ತಲೆಯನ್ನು ತನ್ನ ತೊಡೆಯ ಮೇಲಿಟ್ಟು, ರಕ್ತ ಸುರಿಯುತ್ತಿದ್ದ ಗಾಯಕ್ಕೆ ವಸ್ತ್ರವನ್ನು ಗಟ್ಟಿಯಾಗಿ ಕಟ್ಟಿದಳು. ಮುಂದೆ ಏನು ಮಾಡುವುದೆಂದು ಆಕೆಗೆ ತಿಳಿಯಲಿಲ್ಲ. ಇನ್ನು ಐದು ನಿಮಿಷದಲ್ಲಿ ಸಮುದ್ರದ ಭರತದಿಂದ, ನೀರು ಆಕೆ ಕುಳಿತಿದ್ದ ಬಂಡೆಯನ್ನೂ ಸಂಪೂರ್ಣ ಮುಚ್ಚಬಹುದಿತ್ತು. ಮೃತ್ಯುಮುಖದಿಂದ ಒಮ್ಮೆ ಅವನನ್ನು ಪಾರುಗೊಳಿಸಿದ ಮೇಲೆ ಇನ್ನು ಆತನನ್ನು ಸಂಪೂರ್ಣ ಸುರಕ್ಷಿತನನ್ನಾಗಿ ಮಾಡಲು ಆಕೆ ತನ್ನ ಜೀವವನ್ನೇ ಅರ್ಪಿಸುತ್ತಿದ್ದಳು. ಮೆಲ್ಲನೇ ಆತನನ್ನು ಎತ್ತಿ ದಡಕ್ಕೆ ತಂದಳು. ಅಷ್ಟರಲ್ಲಿ ಬೀರನೂ ದಡಕ್ಕೆ ಬಂದಿದ್ದನು.

'ನರಸ ಆ ಹೊಂಡಕ್ಕೆ ಹೋಗಿದ್ದ, ತೆರೆಯ ಹೊಡೆತದಿಂದ ಬಂಡೆಗೆ ಬಡಿದು. ನೋಡು, ಆತನ ತಲೆಗೆ ಎಷ್ಟು ಗಾಯವಾಗಿದೆ' ಎಂದು ಮುದುಕನೊಡನೆ ಚೆನ್ನಿ ಹೇಳಿದಳು. 'ಹಾಗೂ ಆತನು ಜೀವಿಸಿದ್ದಾನಷ್ಟೆ' ಮುದುಕ ಕೇಳಿದ. 'ಹೌದು, ನಾನು ಇಲ್ಲಿ ಇರದಿದ್ದರೆ ಅವನು ಸಾಯಬಹುದಿತ್ತೇನೋ? ಈಗ ನಾನು ಅವರ ಮನೆಗೆ ಹೋಗಿ ತಿಳಿಸಿ ಬರುತ್ತೇನೆ' ಹೀಗೆಂದು ಚೆನ್ನಿಯು ಹೊರಡಲು ಸಿದ್ಧಳಾದಳು. 'ಚೆನ್ನೀ, ಆತನನ್ನು ನಾವೇ ಕೊಲ್ಲಲು ಯತ್ನಿಸಿದೆವೆಂದು ಆತನ ಮನೆಯವರು ಹೇಳಿದರೆ' ಮುದುಕನು ಸಾವಧಾನವಾಗಿ ಪ್ರಶ್ನಿಸಿದ. 'ನಾವು ಕೊಲ್ಲುವುದೇ? ಯಾರಿಗೆ ಹಾಗೆ ಸುಳ್ಳು ಹೇಳಲು ನಾಲಿಗೆ ಬಂದೀತು? ನಾನು ನಿಜವಾಗಿ ಅವನನ್ನು ಬದುಕಿಸಿದ್ದಲ್ಲವೇ?' ಮುಂದಿನ ಉತ್ತರವನ್ನು ಕಾಯದೆ ಆಕೆ ನರಸನ ಮನೆಯ ಕಡೆಗೆ ಓಡಿಹೋದಳು. ಅವರ ಮನೆಗೆ ಓಡಿ ಹೋಗಬೇಕಾದರೆ, ಸಂಭ್ರಮದಲ್ಲಿಯೂ ಆಯಾಸದಲ್ಲಿಯೂ ಅವಳಿಗೆ ಮಾತು ಬರಲು ತಡವರಿಸಿತ್ತು. ಬಹಳ ಕಷ್ಟದಿಂದ ನರಸನ ಅವಸ್ಥೆಯನ್ನು ಅಲ್ಲಿ ತಿಳಿಸಿದಳು. ಅದನ್ನು ಕೇಳಿ ನರಸನ ತಾಯಿ ಅಳಲು ಆರಂಭಿಸಿದಳು. ಬಸಪ್ಪನು ಬಂದು ಚೆನ್ನಿಯೊಡನೆ ಪ್ರಶ್ನೆಮಾಡುವಷ್ಟರಲ್ಲಿ, ಅವಳು ನರಸನು ಗಾಯಗೊಂಡಿರುವುದಾಗಿಯೂ, ಬೇಗನೇ ವೈದ್ಯರನ್ನು ಕರೆದುಕೊಂಡು ಬರಬೇಕಾಗಿಯೂ ಹೇಳಿ ತಿರುಗಿ ನರಸನು ಇದ್ದಲ್ಲಿಗೆ ಓಡಿಬಂದಳು. ಅವರೂ ಆಕೆಯನ್ನು ಹಿಂಬಾಲಿಸಿ ಬಂದರು. ನರಸನನ್ನು ಹೊತ್ತು ಮನೆಗೆ ತರುವಾಗ ಚೆನ್ನಿಯೂ ಅವರನ್ನು ಹಿಂಬಾಲಿಸಿ ಬಂದಳು. ಸ್ವಲ್ಪ ದೂರದ ವರೆಗೆ ಎಲ್ಲರೂ ಮೌನವಾಗಿ ನಡೆದರು. ಬಸಪ್ಪನ ಕಿವಿಯಲ್ಲಿ ಯಾರೋ ಏನೋ ಹೇಳಿದರು.

'ಆತನ ಜೀವಕ್ಕೆ ನಿಮ್ಮಿಂದೇನಾದರೂ ಅಪಾಯವು ಆಗಿದ್ದರೆ, ನಿನ್ನ ಜೀವವೂ ಉಳಿಯಲಾರದು' ನರಸನ ತಂದೆ ಬಸಪ್ಪ ನಿಷ್ಠುರನಾಗಿ ಚೆನ್ನಿಯೊಡನೆ ಹೇಳಿದ. 'ಅಯ್ಯೋ, ಈ ಕಾಳಿಯೇ ನನ್ನ ಮಗನನ್ನು ಕೊಂದಳಲ್ಲಾ' ಎಂದು ನರಸನ ತಾಯಿ ಬೊಬ್ಬಿಟ್ಟಳು. ಈಗ ಚೆನ್ನಿಗೆ ತನ್ನ ಅಜ್ಜನು ಹೇಳಿದ ಮಾತಿನ ಸತ್ಯವು ಹೊಳೆಯಿತು. 'ಈ ಜನರು ಪಾಪಿಗಳು, ಸುಳ್ಳುಗಾರರು, ಮಾಡಿದ ಉಪಕಾರವಿಲ್ಲದವರೆಂದು' ಅವರನ್ನು ಬೈಯ್ಯುತ್ತಾ ಚೆನ್ನಿ ತನ್ನ ಮನೆಯ ಕಡೆಗೆ ಓಡಿಬಂದಳು. ಪಾಪ! ಲೋಕದ ಅನುಭವ ಅವಳಿಗೆ ಏನೂ ಇರಲಿಲ್ಲ!

ಹತ್ತು ದಿನಗಳು ದಾಟಿದುವು. ಒಂದು ದಿನ ಸಂಜೆ ಬಸಪ್ಪ ಚೆನ್ನಿಯ ಮನೆಯ ಕಡೆಗೆ ಬಂದ. ಮುದುಕ ಬೀರನಿಗೆ ಏನು ಅನಾಹುತವಾಯಿತೋ ಎಂಬ ಭಯ! ಚೆನ್ನಿಗೆ ನರಸನ ವಿಷಯ ತಿಳಿವ ಕುತೂಹಲ. ಬಂದವನೇ ಬಸಪ್ಪನು ನರಸನು ಮೂರ್ಛೆ ತಿಳಿದು, ಗುಣಹೊಂದಿರುವುದಾಗಿಯೂ, ಈಗ ಕೆಲದಿನಗಳಿಂದ ಚೆನ್ನಿಯನ್ನೇ ಕನವರಿಸುತ್ತಿರುವನಾಗಿಯೂ, ನಿಜವಾಗಿಯೂ ತನ್ನ ಹುಡುಗನ ಜೀವವನ್ನು ಉಳಿಸಿದ ಚೆನ್ನಿಯ ವಿಷಯ ತಾನು ಮಹಾಪರಾಧ ಮಾಡಿದ ಬಗ್ಗೆ ತನ್ನನ್ನು ಕ್ಷಮಿಸಬೇಕಾಗಿಯೂ, ಆಕೆಗೆ ಮುಂದಕ್ಕೆ ತಾನು ಎಂದೆಂದೂ ಕೃತಜ್ಞನಾಗಿರುವೆನೆಂದೂ ತಿಳಿಸಿದ್ದು ಮಾತ್ರವಲ್ಲದೆ ತನ್ನ ಎಲ್ಲಾ ತಪ್ಪುಗಳನ್ನು ಕ್ಷಮಿಸಿ ಒಮ್ಮೆ ಆಕೆ, ತನ್ನ ಮನೆಗೆ ಬಂದು ನರಸನನ್ನು ಕಂಡು ಸಂತೈಸಿ ಬರಬೇಕಾಗಿಯೂ ಕೇಳಿಕೊಂಡನು. ಚೆನ್ನಿಗೆ ನಿಜವಾಗಿ ತನಗೆ ಇಷ್ಟೆಲ್ಲಾ ಉಪಚಾರ ಬೇಕಿರಲಿಲ್ಲವಾಗಿ ಆಕೆ ನಾಚಿಹೋದಳು. ಏಕೆಂದರೆ ನರಸನ ಜೀವವನ್ನುಳಿಸಿದ್ದು ತನ್ನ ಮನಸ್ಸಿನ ಪ್ರೇರಣೆಯಂತೆ, ಕರ್ತವ್ಯದಂತೆಯೆಂದು ಆಕೆ ವಿಚಾರಿಸಿದ್ದಳು. ಆತನನ್ನು ನೋಡ ಹೋಗುವಲ್ಲಿ ಚೆನ್ನಿಯೂ ಸಹಜವಾಗಿಯೂ ಉತ್ಸುಕಳೇ ಆಗಿದ್ದಳು. ಬಸಪ್ಪನು ಹೀಗೆ ಹೇಳಿ ಮುಗಿಸಬೇಕಿದ್ದರೆ ಚೆನ್ನಿ ಮುನ್ನಡೆದಿದ್ದಳು. ಬಸಪ್ಪ ಆಕೆಯ ಹಿಂದೆ ಹೊರಟ!

'ಅಮ್ಮಾ, ಚೆನ್ನಿ ಬಂದಳೇ' ನರಸ ತಾಯಿಯೊಡನೆ ಕೇಳಿದ. ಅಷ್ಟರಲ್ಲಿ ಬಸಪ್ಪನೂ ಚೆನ್ನಿಯೂ ಒಳಗೆ ಬಂದಿದ್ದರು. ಚೆನ್ನಿ ಬಂದವಳೇ ನರಸನ ಹಾಸಿಗೆಯ ಬಳಿ ಬಂದು ಕುಳಿತುಕೊಂಡಳು. 'ನನ್ನ ಚೆನ್ನೀ, ಬಂದೆಯಾ' ಆಕೆಯ ಕೈಯನ್ನು ಹಿಡಿದು ನರಸ ತಲೆಗೆ ಒತ್ತಿಕೊಂಡ. 'ಅಮ್ಮಾ, ಇವಳಿಲ್ಲದಿದ್ದರೆ ನಾನು ಬದುಕುತ್ತಿರಲಿಲ್ಲವಮ್ಮಾ. ಚೆನ್ನಿ, ಇನ್ನು ಮುಂದೆ ನಿನ್ನ ಬಂಡೆಯ ಬಳಿ ಬಂದು ನಾನು ಎಂದಿಗೂ ನಿನಗೆ ತೊಂದರೆ ಮಾಡುವುದಿಲ್ಲ' ಹೀಗೆ ಹೇಳುವಾಗ ನರಸನ ಕಂಠವು ಬಿಗಿದು ಬಂದಿತ್ತು.

'ಮಗೂ ಚೆನ್ನಿ, ನಿನ್ನ ವಿಷಯ ಹಗಲು ರಾತ್ರಿ ಹೇಳಿಕೊಂಡ. ಆತ ನಿನ್ನ ಮಾತನ್ನೇ ಇಲ್ಲಿ ನಿದ್ದೆಮಾಡದಿದ್ದರೆ, ಆರೋಗ್ಯವು ಇನ್ನಷ್ಟು ಕೆಡುವುದೆಂದು ವೈದ್ಯರು ಹೇಳುತ್ತಾರೆ. ನೀನು ಕೆಲ ಸಮಯ ನಮ್ಮ ಮನೆಯಲ್ಲಿಯೇ ಇರುತ್ತೀಯೇ ನಮ್ಮ?' ನರಸನ ತಾಯಿ ಕಂಬನಿ ತುಂಬಿ, ಚೆನ್ನಿಯ ತಲೆ ನೇವರಿಸಿ ಕೇಳಿಕೊಂಡಳು. 'ಚೆನ್ನೀ, ಮುಂದಕ್ಕೆ ನೀನು ನನ್ನ ಮಗಳಾಗಿ ಇರು. ನನ್ನ ಮಗನ ಪ್ರಾಣ ಉಳಿಸಿದ ಉಪಕಾರವನ್ನು ನಾನು ಬೇರೆ ಸಲ್ಲಿಸುವಂತಿಲ್ಲ' ಬಸಪ್ಪ ಕೃತಜ್ಞತೆಯಿಂದ ಹೇಳಿದ. ಇಷ್ಟರಲ್ಲಿ ನರಸನು ನಿದ್ರೆ ಹೋಗಿದ್ದ. ಚೆನ್ನಿಗೆ ತನ್ನ ಮನೆಯ ಹಾಗೂ ಅಜ್ಜನ ನೆನಪಾಯಿತು. ಯಾರು ಏನೆಂದರೂ ಕೇಳದೆ ತನ್ನ ಮನೆಗೆ ಹಿಂತೆರಳಿ ಬಂದಳು. ಬಸಪ್ಪನೂ ಆಕೆಯ ಮನೆಯ ವರೆಗೆ ಬಿಡಲು ಬಂದಿದ್ದನು. ಬರುವಾಗ ದಾರಿಯಲ್ಲಿ 'ತಾನು ಅವರ ಮಗಳಾಗುವುದೇ? ಅದು ಹೇಗೆ?' ಇದೇ ವಿಚಾರ ಅವಳಲ್ಲಿ ತುಂಬಿತ್ತು. ಈ ಯೋಚನೆಯಿಂದಲೇ ರಾತ್ರಿ ಇಡೀ ಆಕೆಗೆ ನಿದ್ರೆ ಹತ್ತಲಿಲ್ಲ!

★

ಚೆನ್ನಿಯೆಂದರೆ ನರಸನ ತಂದೆ ತಾಯಿಗಳಿಗೆ ಜೀವವಾದಳು. ನರಸ ತನ್ನ ಹೆಂಡತಿ ಚೆನ್ನಿಯನ್ನು ಅರೆಕ್ಷಣ ಬಿಟ್ಟಿರಲಾರದಾದ. ಆಕೆ ಒಂದು ಗಂಡು ಮಗುವನ್ನು ಹೆತ್ತಳು. ಹೊಲದ ಬೇಸಾಯ ಮಾಡಿಕೊಂಡು ನರಸ ತಂದೆತಾಯಿಗಳನ್ನೂ ಸಂಸಾರವನ್ನೂ ಸಾಕುತ್ತಿದ್ದ. ಹುಲ್ಲು ಸಂಗ್ರಹಿಸುವ ಆ ಬಂಡೆಯ ವಿಷಯ ಚೆನ್ನಿಗೆ ಮರತೇ ಹೋಯಿತು. ಮುದುಕ ಬೀರ ಕಡೆಗೊಮ್ಮೆ ತನ್ನ ಬಾಳುವೆಯ ಇಳಿತದ ಸಮಯದಲ್ಲಿ ಸೌಭಾಗ್ಯವನ್ನೇ ಅನುಭವಿಸಿ ಚೆನ್ನಿಯ ಮಗುವನ್ನು ಎತ್ತಿ ಆಡಿಸಿ ಸಂತೋಷಪಡುತ್ತಿದ್ದ!

[ಆಧಾರದಿಂದ].

— ದುರ್ಗಾದಾಸ.

Kanarese No. 3

ತಾಯಿಯೇ! ನಿನಗೆ ಆಗಾಗ ಅಗತ್ಯಬೀಳುವ ಸ್ನೇಹಿತಳಿಲ್ಲಿರುವಳು.

ಮಕ್ಕಳಿಗೆ ಆಗಾಗ ಕೆಳಗೆ ಬಿದ್ದು ಗಾಯ, ಪೆಟ್ಟುಗಳಾಗುತ್ತವೆ. ಇದಕ್ಕಾಗಿ ಪ್ರತೀ ಒಂದು ಮನೆಯಲ್ಲಿಯೂ ಅಗತ್ಯ ಬೇಕಾಗುವುದಾವುದೆಂದರೆ ಕ್ರಿಮಿನಾಶಕ ಔಷಧಿ. ಒಂದು ಟಿನ್ನು ಕುಟಿಕೂರಾ ಮುಲಾಮನ್ನು (Cuticura Ointment) ನಿಮ್ಮ ಬಳಿಯಲ್ಲಿರಿಸಿ ನಂತರ ಯಾವ ಪೆಟ್ಟು ಗಾಯಗಳಿಗೂ ತಯಾರಾಗಿರಿ.

ಗಾಯವು ಕೂಡಲೇ ಗುಣವಾಗಬೇಕಾದರೆ, ಬಾತುವಿಕೆಯು ಮಾಯವಾಗಬೇಕಾದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಗಾಯ, ಪೆಟ್ಟು, ಪರಚುವಿಕೆ, ಮುದ್ದಣ ಇವುಗಳಿಗೆ ಹಚ್ಚಿರಿ. ರಸಿಗೆಯಾದೀತೆಂಬ ಬೆದರಿಕೆಯಿಲ್ಲ. ಕುಟಿಕೂರಾ ಮುಲಾಮು (Cuticura Ointment) ಸುಟ್ಟುಹೋದ ಯಾ ಬೆಂದುಹೋದ ಭಾಗಗಳಿಗೆ ಹಚ್ಚಲು ಕೂಡಾ ಬಹಳ ಉತ್ತಮ. ಸಹಿಸಲಸದಳವಾದ ವೇದನೆಯನ್ನು ನಿಲ್ಲಿಸಿ ಗಾಯಗಳು ಕುರದದಂತೆ ಮಾಡುತ್ತದೆ. ಚರ್ಮರೋಗಗಳಿಗೆ ಕೂಡಾ ಉತ್ತಮ ಔಷಧಿ. ಅಸಹ್ಯವಾದ ತುರಿಗಜ್ಜಿಗಳು ಇದರ ಸ್ಪರ್ಶದಿಂದಲೇ ಮಾಯವಾಗುತ್ತವೆ. ಇಷ್ಟಲ್ಲದೆ ದೀರ್ಘಕಾಲದ ಚರ್ಮವ್ಯಾಧಿಗಳು ಕೂಡ ಕುಟಿಕೂರಾ ಮುಲಾಮಿನಿಂದ (Cuticura Ointment) ಗುಣವಾಗುತವೆ. ನಿಮ್ಮ ಕೆಮಿಸ್ಟರಲ್ಲಿಂದ ಒಂದು ಟಿನ್ನನ್ನು ಕೊಂಡುಕೊಳ್ಳಿರಿ.

ಕುಟಿಕೂರಾ ಮುಲಾಮನ್ನು (Cuticura Ointment) ಕಜ್ಜಿ, ಕುರು, ಗಾಜು, ಪೆಟ್ಟು, ವ್ರಣ, ಮುದ್ದಣ, ಬಾತುವಿಕೆ, ತುರಿಕಜ್ಜಿ ವಿಷಪ್ರಾಯವಾದ ಗಾಯ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉಪಯೋಗಿಸಿರಿ

ಕುಟಿಕೂರಾ ಮುಲಾಮು

Cuticura Ointment

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಬಳಲಿಕೆ ನರಗಳ ದುರ್ಬಲತೆ ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವಿರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ



ಸ್ತ್ರೀಪುರುಷರು ವಯೋಭೇಧವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:

ಆಯುರ್ವೇದಾಶ್ರಮ :: ಮದರಾಸು

ಸ್ಟಾಕಿಸ್ಟರು:

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಸರ್ ಜಗದೀಶಚಂದ್ರ ಬೋಸ್

[ಒಂದು ಉಜ್ವಲ ಜೀವರತ್ನ!]

ಸಸ್ಯಜಾತಿಗೂ ಜೀವವುಂಟೆಂದು ಸಾರಿದ ವೈಜ್ಞಾನಿಕ ಮಹಾಪುರುಷ!

[ಇಪ್ಪತ್ತನೆಯ ಶತಮಾನದ ಭಾರತದ ಇತಿಹಾಸವು ಅದ್ಭುತ ರಮಣೀಯವಾಗಿದೆ! ರಾಷ್ಟ್ರದ ನಾನಾ ಜೀವನದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿದ ಅನೇಕ ಮಹಾಪುರುಷರು ಜನ್ಮವೆತ್ತಿ, ದೇಶ ಜಾಗೃತಿಯನ್ನು ಹುಟ್ಟಿಸಿದರು! ವಿಜ್ಞಾನ, ಸಾಹಿತ್ಯ, ಕಲೆ, ರಾಜಕೀಯ, ಧಾರ್ಮಿಕ ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಾಪುರುಷರು ಜನ್ಮವೆತ್ತಿ ಜನತೆಗೆ ಮಾರ್ಗದರ್ಶಕರಾದರು. ಯೂರೋಪು ಇಂದಿನ ಈ ಯುದ್ಧದಲ್ಲಿ ಕ್ರಾಂತಿ ಪ್ರಳಯದ ಕಡೆಗೆ ಸಾಗುವುದಿದ್ದರೆ, ಭಾರತವು ಶಾಂತಿ ವಿಶ್ವಬಾಂಧವ್ಯದ ಸಂದೇಶವನ್ನು ಸಾರುತ್ತಿದೆ! ಹೀಗೆ ಮಾಡಿದ ಪುಣ್ಯಜೀವಿಗಳಲ್ಲಿ ಭಾರತಕ್ಕೆ ಕೀರ್ತಿತಂದ ಮಹಾಪುರುಷರಲ್ಲಿ ಸರ್ ಜಗದೀಶ ಚಂದ್ರ ಬೋಸರೂ ಒಬ್ಬ ಗಣನೀಯ ವ್ಯಕ್ತಿಯಾಗಿದ್ದಾರೆ.]

ಭಾರತದ ಪ್ರಸಿದ್ಧ ಮಹಾ ವಿಜ್ಞಾನಿಗಳಾಗಿದ್ದ ಸರ್ ಜಗದೀಶ ಚಂದ್ರ ಬೋಸರು ಇಂದಿಗೆ ...ರು ವರ್ಷಗಳ ಹಿಂದೆ ನವಂಬರ ಮಾಸದ ...ದು ಪ್ರಶಾಂತ ಸೂರ್ಯೋದಯದ ಸಮಯ ... ಅವರ ವಯಸ್ಸಿನಲ್ಲಿ ಶಾಂತಚಿತ್ತರಾಗಿ ...ರಕಾಲದ ಸಾಹಸ ಸಂಶೋಧನೆಗಳನ್ನು ಮುಗಿ... ಪರಲೋಕದ ದಾರಿ ಹಿಡಿದು ನಡೆದರು. ...ವರು ತಮ್ಮ ಜೀವಿತಾವಧಿಯನ್ನು ಬಹಳ ...ರ್ತಿಯಿಂದ ಕಳೆದರು. ಕೊನೆಗಾಲವನ್ನೂ ...ಗೆ ಸುಖಮಯವಾಗಿ ತೀರಿಸಿದರು. ಆದರೆ ...ಭಾಗ್ಯಪುತ್ರನನ್ನು ಅಗಲಿದ ಮಹಾ ನಷ್ಟ...ಂದ ಆದ ಭಾರತಮಾತೆಯ ಅಳಲು ಮಾತ್ರ ...ರ್ಣಿಸಲು ಅಳವಲ್ಲ! ಅಂತಹ ಸುಪುತ್ರನನ್ನು, ...ಹಾ ಮೇಧಾವಿಯನ್ನು, ಪ್ರಖ್ಯಾತ ವಿಜ್ಞಾನಿ...ಯನ್ನು ಇನ್ನೊಮ್ಮೆ ಆಕೆ ಪಡೆಯುವುದು ಸಾ...ವೆ? ನಿಜವಾಗಿಯೂ ಅದೆಂತಹ ಅಪಾರ ನಷ್ಟ!

ಅಪೂರ್ವ ಸ್ಮಶಾನಯಾತ್ರೆ

ಅವರ ಆ ದಿನದ ಸ್ಮಶಾನಯಾತ್ರೆಯು ಅಪೂರ್ವದೃಶ್ಯವಾಗಿತ್ತು. ಅವರ ವಿಧನೆ ಅಬಲಾ ಬೋಸ...ರ ದುಃಖದಲ್ಲಿ ನಾಡಿಗೆ ನಾಡೇ ಮರುಗಿ ಗೋಳಾಡುತ್ತಿತ್ತು! ಜನಸಂದಣಿಯು ಅವರ ಸ್ಮಶಾನಯಾತ್ರೆಯಲ್ಲಿ ಅಸಂಖ್ಯಾತವಾಗಿ ಸೇರಿ ಅದು ಒಂದು ಗಂಭೀರ ದೃಶ್ಯವಾಗಿ ತೋರಿತು! ಬಾಲ್ಕನಿಗಳಲ್ಲಿ ತೊಲೆಗೆಗಳಲ್ಲಿ ಹೆಂಗಸರೂ ಮಕ್ಕಳೂ, ಮುದುಕರೂ, ತರುಣರೂ ಹೀಗೆ ಎಲ್ಲರೂ ನಿಂತು ಈ ದುಃಖಯಾತ್ರೆಯನ್ನು ನೋಡುತ್ತ ಅಶ್ರುಧಾರಾವರ್ಷವನ್ನು ಸುರಿಸುತ್ತಿದ್ದರು. ಬ್ರಹ್ಮ ಸಮಾಜ ಮಂದಿರದಲ್ಲಿ ಸರ್ ನೀಲರತ್ನ ಸರ್ಕಾರ ಮತ್ತು ಶ್ರೀ ರಮಾನಂದ ಚಟರ್ಜಿಯವರು ಕಂಬನಿಗರೆಯುತ್ತಾ ಅವರ ಸಲುವಾಗಿ ಅಂತಿಮ ಪ್ರಾರ್ಥನೆ ಮಾಡಿದರು ಸರೋಜಿನಿ ದೇವಿಯವರು ಬಂದು, ಅವರ ಕಡೆಯ ಪಾದಧೂಳಿಯನ್ನು ತಲೆಯಲ್ಲಿ ಹೊತ್ತು ಸ್ಮಶಾನಯಾತ್ರೆಯೊಡನೆ ಹಿಂಬಾಲಿಸಿದರು ಯಾವ ಕಲಾಶಾಲೆಯಲ್ಲಿ ಅವರು ತಮ್ಮ ತಾರುಣ್ಯದ ಸಂಶೋಧನೆ ನಡೆಸಿದ್ದರೋ ಅಲ್ಲಿನ ತರುಣ ವಿದ್ಯಾರ್ಥಿಗಳು ಗುರುವೃಂದದೊಡನೆ ಗೈತಿಸಿದ ಆ ಗುರುದೇವನಿಗೆ ತಮ್ಮ ಭಕ್ತಿಯನ್ನು ಸಲ್ಲಿಸಬಂದರು! ಮೆಡಿಕಲ್ ಕಾಲೇಜಿನವರು, ಕಾಂಗ್ರೆಸು ಮುಖಂಡರು, ಹೀಗೆಲ್ಲರೂ ಗತಿಸಿದ ದೇಶ ಪುತ್ರನಿಗಾಗಿ ಮರುಕ ತೋರಿಸಿದರು. ಅವರ ಮಾತೃಶಾಲಾ ಮಂದಿರವಾದ ಸೈಂಟ್ ಕ್ಸೇವಿಯರ್ ವಿದ್ಯಾ ಮಂದಿರದ ಬಳಿ ಮೆರವಣಿಗೆಯು ನಿಲ್ಲಿಸಲ್ಪಟ್ಟು, ತಮ್ಮ ಶಾಲೆಗೆ ಕೀರ್ತಿ ತಂದ, ಪುಣ್ಯ ಜೀವಿಗಾಗಿ ಶಾಲಾಮಾತೆಯು ಕಂಬನಿಗರೆದಂತೆ ಅಲ್ಲಿನ ವಿದ್ಯಾರ್ಥಿ ಗುರುವೃಂದಗಳು ಕಡೆಯ ಗೌರವ ಸಲ್ಲಿಸಿದರು. ಹೀಗೆ ಅಂದಿನ ದೃಶ್ಯವು ಕರುಣೆಯು, ಭಕ್ತಿಯು, ಪ್ರಾರ್ಥನೆಯ ಒಂದು ಅಪೂರ್ವ ದಿನವಾಗಿತ್ತು.

'ನಾನು ರಿಕ್ತಹಸ್ತನಾಗಿ ಬಂದಿದ್ದೇನೆ. ಹಾಗೆಯೇ ಹಿಂತಿರುಗುವೆನು. ಈ ಮಧ್ಯದಲ್ಲಿ ಏನಾದರೂ ಸತ್ಕಾರ್ಯವನ್ನು ಮಾಡಲು ನನ್ನಿಂದ ಆಗುವುದಿದ್ದರೆ, ನಿಜವಾಗಿಯೂ ಅದೇ ಒಂದು ಮಹಾ ಭಾಗ್ಯ' 'ಪದಾರ್ಥ ಸ್ವಾಧೀನತೆಯಲ್ಲಾಗಲಿ, ಬಹಳ ಸೌಭಾಗ್ಯದ ಸಂಪತ್ತಿನಲ್ಲಾಗಲಿ ಪ್ರಯೋಜನವಿಲ್ಲ ಜ್ಞಾನ, ವಿವೇಕ ಆದರ್ಶ ತತ್ವಗಳಲ್ಲಿ ಅಮರತೆಯಿದೆ' ಹೀಗೆಂದು ಸಾರಿದ ಮಹಾ ವಿಜ್ಞಾನಿಯು ಹಾಗೆಯೇ ಸಾಗಿಹೋಗಿದ್ದಾರೆ! ಅವರು ಬಹಳ ಉದಾತ್ತ ಆದರ್ಶವಾದಿಗಳಾಗಿದ್ದರು, ಅವರಲ್ಲಿ ಮಹಾ ಯೋಗಿಯಲ್ಲಿರತಕ್ಕ ದಿವ್ಯ ದರ್ಶನವಿತ್ತು, ಕವಿಯ ಪ್ರತಿಭೆಯಿತ್ತು, ವಿಜ್ಞಾನಿಯ ವಿಚಾರ ಸಂಶೋಧನೆಗಳ ಶಕ್ತಿಯಿತ್ತು ಹೀಗೆ ಭಾರತದ ಸಂಸ್ಕೃತಿಯ ಪ್ರತಿರೂಪವನ್ನು ಸರ್ ಜಗದೀಶ ಬೋಸರಲ್ಲಿ ನಾವು ಕಾಣಬಹುದಾಗಿತ್ತು

ಜನನ–ಬಾಲ್ಯ

ಇಂದಿಗೆ ೮೨ ವರ್ಷಗಳ ಹಿಂದೆ ಢಕ್ಕಾ ಜಿಲ್ಲೆಯ ವಿಕ್ರಮಪುರದಲ್ಲಿ ಅವರು ಜನ್ಮವೆತ್ತಿದರು. ಬಾಲ್ಯ ಕಾಲದಲ್ಲಿಯೇ ಅವರಿಗೆ ಏನಾದರೊಂದು ಹೊಸತನ್ನು ಕಂಡುಹಿಡಿಯುವ ಕುತೂಹಲವು ಇದ್ದೇ ಇತ್ತು ಅದೇ ಮುಂದಕ್ಕೆ ಅಭಿವೃದ್ಧಿಗೊಂಡು ಸಸ್ಯಜಾತಿಗೆ ಜೀವವುಂಟೆಂಬ ಮಹಾ ಶೋಧನೆಯನ್ನು ಕಂಡುಹಿಡಿಯಲು ಸಹಕಾರಿಯಾಯಿತು. ಅವರ ತಂದೆಯವರು ಸಬ್ ಡಿವಿಜನಲ್ ಮೆಜಿಸ್ಟ್ರೇಟರಾಗಿದ್ದರು ಭಗವಾನ್ ಚಂದ್ರಬೋಸರೆಂಬುದು ಅವರ ಹೆಸರು ತನ್ನ ವಿಪುಲ ಕಾರ್ಯಗಳ ಗೊಂದಲಗಳೆಡೆಯಲ್ಲಿಯೂ, ತನ್ನ ಒಬ್ಬನೇ ಒಬ್ಬ ಕುಮಾರನ ಬೆಳವಣಿಗೆಯ ವಿಷಯದಲ್ಲಿ ಅವರು ಬಹಳ ಜಾಗರೂಕತೆ ವಹಿಸಿದ್ದರು ಅವರ ತಂದೆಯವರು ದರೋಡೆ(?) ಕೆಲಸದಲ್ಲಿದ್ದ ಒಬ್ಬ ರಕ್ಕಸನನ್ನು ಹಿಡಿದು ಜೈಲಿನಲ್ಲಿ ಹಾಕಬೇಕಾಯಿತು ಕಡೆಗೆ ಆ ದರೋಡೆಗಾರನ ಜೀವನ ಪಶ್ಚಾತ್ತಾಪವನ್ನು ತಿಳಿದು, ಅವನನ್ನು ಸೆರೆಯಿಂದ ಬಿಡಿಸಿ ತನ್ನ ಮಗನ ಸಾಕಣೆಗಾಗಿ ಇಟ್ಟುಕೊಂಡರು ಬೋಸರು ತಮ್ಮ ಜೀವನದಲ್ಲಿ, ಸಂಶೋಧನೆಗಳಲ್ಲಿ ಇನ್ನೂ ಅನೇಕ ದುರ್ಘಟನೆಗಳಲ್ಲಿ ತೋರಿಸುತ್ತಿದ್ದ ಅಸಮಾನ ಧೈರ್ಯಗಳ ಕುರಿತು ಯಾರಾದರೂ ಆಶ್ಚರ್ಯಪಡುವಂತಿತ್ತು! ಆದರೆ ಇದರ ಕುರಿತು ಅವರ ಬಾಲ್ಯಜೀವನದ ಕಡೆಗೆ ನೋಡಿದವರು ಸಮಾಧಾನ ಪಡಬೇಕು' ಹೇಗಿದ್ದರೂ ಪೂರ್ವ ಬಂಗಾಲದ ಮಣ್ಣಿನ ಗುಣವೇ ಅವರಲ್ಲಿ ಆ ರೀತಿಯ ಧೈರ್ಯ ಸಾಹಸಗಳನ್ನು ಒದಮೂಡಿಸಿತ್ತು

ವಿದ್ಯಾಜೀವನ–ಲಂಡನಿನಲ್ಲಿ

ಗ್ರಾಮ ಪಾಠಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದು, ಕಲ್ಕತ್ತದ ಸೈಂಟ್ ಕ್ಸೇವಿಯರ್ ಕಾಲೇಜಿಗೆ ಅವರು ಸೇರಿದರು ಅಲ್ಲಿಂದ ಬಿ. ಎ. ಪಾಸಾಗಿ ಉಚ್ಛ ಶಿಕ್ಷಣಕ್ಕೆಂದು ವಿಲಾಯತಿಗೆ ತೆರಳಿದರು ಅವರ ತಂದೆಯವರಿಗೆ, ಮಗನ ವಿಷಯದಲ್ಲಿ ಸ್ವತಃ ಮಗನಿಗೇ ತಿಳಿದದ್ದುದಕ್ಕಿಂತಲೂ ಹೆಚ್ಚು ಗೊತ್ತಿತ್ತು! ಹಾಗಾಗಿ ತರುಣ ಜಗದೀಶನು ಸಿವಿಲ್ ಸರ್ವಿಸಿಗೆ ಸೇರಬೇಕೆಂದು ತನ್ನಿಚ್ಛೆಯನ್ನು ವ್ಯಕ್ತಪಡಿಸಿದರೂ, ಅದಕ್ಕೆ ತಂದೆಯು ಸಮ್ಮತಿ ಕೊಡಲಿಲ್ಲ. ಮೊದಲು ಅವರು ವಿಲಾಯತಿಯಲ್ಲಿ ಮೆಡಿಕಲ್ ವಿದ್ಯಾಭ್ಯಾಸವನ್ನು ಪಡೆದರು. ಒಂದು ವರ್ಷಗಳ ತನಕ ಅದು ಸಾಗಿತು, ಅಷ್ಟರಲ್ಲಿ ಆರೋಗ್ಯವು ಹಾಳಾಗಲು ಅದನ್ನು ಬಿಟ್ಟು ಕ್ರೈಸ್ಟ್ ಕಾಲೇಜಿಗೆ ಸೇರಿದರು. ಅಲ್ಲಿ ಪ್ರಾಕೃತಿಕ ವಿಜ್ಞಾನದಲ್ಲಿ ಅವರು ಸ್ನಾತಕರಾಗಿ ವಿದ್ಯಾರ್ಥಿ ವೇತನವನ್ನೂ ಪಡೆದರು. ಮರುವರ್ಷದಲ್ಲಿಯೇ ತನ್ನ ವಿಜ್ಞಾನದ ಪದವಿಯನ್ನೂ ಪಡೆದುಕೊಂಡು ಲಂಡನ್ ವಿಶ್ವವಿದ್ಯಾಲಯದಿಂದ ಅವರು ಹೊರಬಿದ್ದರು.

ಭಾರತದಲ್ಲಿ – ಉದ್ಯೋಗ.

ಭಾರತಕ್ಕೆ ತಿರಿಗಿ ಬಂದವರು, ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿಜ್ಞಾನ ಪ್ರೊಫೆಸರರಾಗಿ ಸೇರಿದರು, ಅಲ್ಲಿ ತಾನು ಅಭಿಲಾಷಿಸಿದ ಸಂಶೋಧನೆಗೆ ಅವರಿಗೆ ಸಾಕಷ್ಟು ಸಹಕಾರಗಳೂ ಒದಗಲಿಲ್ಲ ಒಬ್ಬ ಭಾರತೀಯ ಪ್ರೊಫೆಸರನೆಂದು ಕಾಲೇಜಿನಲ್ಲಿ ಹೆಚ್ಚಿನ ಗೌರವದ ಸ್ಥಾನವೂ ಸಿಗಲಿಲ್ಲ ಮೂರು ವರ್ಷಗಳ ತನಕ ತನಗೆ ಬೇಕಾದ ಸೌಕರ್ಯ ಸ್ಥಾನಗಳು ದೊರಕದಿದ್ದ ಪಕ್ಷದಲ್ಲಿ ತಾನು ಸಂಬಳವನ್ನು ಮುಟ್ಟಲಾರೆನೆಂದು ಅವರು ಹಠ ಹಿಡಿದರು. ಕಡೆಗೆ ಅವರಿಗೆ ಅಲ್ಪ ಸ್ವಲ್ಪ ಸೌಕರ್ಯಗಳು ಒದಗಿಸಲ್ಪಡುವು ಆದರೂ, ಅಂದಿನ ಬಂಗಾಳದ ವಿದ್ಯಾ ವಿಚಕ್ಷಣರು ಬೋಸರನ್ನು ದೂರದಿರಲಿಲ್ಲ ಏಕೆಂದರೆ ಅವರು ಒಬ್ಬ ಪ್ರೊಫೆಸರನ ಕೆಲಸವು ಬರಿಯ ಕಲಿಸುವುದು ಮಾತ್ರವೆಂದೂ ಸಂಶೋಧನೆಯು ಆತನಿಗೆ ಹೇಳಿದ್ದಲ್ಲವೆಂದೂ ವಾದಿಸುತ್ತಿದ್ದರು ಹೀಗೆ ಅವರಿಗೆ ಸಾಕಷ್ಟು ಸೌಕರ್ಯವು ಸಿಕ್ಕದಿದ್ದುದೇ ಮುಂದಿನ ಅವರ ಜೀವನದಲ್ಲಿ ಮಹತ್ವವಾದ ಪಾಠವನ್ನು ಕೊಟ್ಟಿತು ಹೇಕೆಂದರೆ ಸರಳ ಜೀವನ ಅತ್ಯಂತ ಕಡಿಮೆಯ ವಸ್ತುಗಳಲ್ಲಿಯೇ ಸಾಕಷ್ಟು ಲಾಭ, ಪಾಶ್ಚಾತ್ಯ ಸಂಶೋಧಕರು ವೆಚ್ಚಮಾಡುತ್ತಿರುವುದರ ಬಹಳ ಅಲ್ಪ ಅಂಶದ ವ್ಯಯ ಇವುಗಳಿಂದಲೇ ಅವರು ಕೀರ್ತಿಯನ್ನು ಪಡೆದರು.

ವಿಜ್ಞಾನ ಸಂಶೋಧನೆಗಳು

ಏಕಾಗ್ರತೆಯಿಂದ ಅವರ ಮನಸ್ಸು ವೈಜ್ಞಾನಿಕ ಸಂಶೋಧನೆಯ ಕಡೆಗೆ ತಿರುಗಿತು ಪದಾರ್ಥ ವಿಜ್ಞಾನ ಮತ್ತು ಸಸ್ಯ ಶಾಸ್ತ್ರಗಳಲ್ಲಿ ಅವರು ಅತ್ಯಂತ ಆಸಕ್ತಿಯನ್ನಿಟ್ಟು ಅಭ್ಯಾಸಿಸತೊಡಗಿದರು. ಅವರ ವೈಜ್ಞಾನಿಕ ದೃಷ್ಟಿಯು ವಿಶಾಲವಾಗಿತ್ತು. ತನ್ನ ಸಂಶೋಧನಾಲಯದ ಸಂಕುಚಿತೆಯ ಗಡಿಯನ್ನು ದಾಟಿ ಅವರು ವಿಶ್ವದ ಸತ್ಯವನ್ನು ಪ್ರಕೃತಿಯಲ್ಲಿ ಕಂಡಿದ್ದರು, ಆದುದರಿಂದಲೇ ಒಂದೇ ಸತ್ಯ ಒಂದೇ ವಿಜ್ಞಾನ ಇವುಗಳಿಂದ ಪ್ರಕೃತಿಯಲ್ಲಿ ದೈವಸಾಕ್ಷಾತ್ಕಾರದ ಅಪೂರ್ವ ದರ್ಶನಗಳೇ ಮೊದಲಾದ ಅವರ ಸಂಶೋಧನೆಗಳು ಬೆಳೆದುವು, ಸಸ್ಯ ಜಾತಿಗೂ ಜೀವವು ಉಂಟು ಎಂಬುದರಲ್ಲಿ ಎಷ್ಟರ ಮಟ್ಟಿಗೆ ದೈವವಾದ ಈಶ್ವರವಾದ ಅಡಕವಾಗಿದೆಯೆಂಬುದನ್ನು ಜ್ಞಾನಿಗಳೆಲ್ಲರೂ ತಿಳಿಯಬಲ್ಲರು.

ಎರಡು ಸಂಸ್ಕೃತಿಗಳ ಮಿಲನ

ಅವರಲ್ಲಿ ಪಾಶ್ಚಾತ್ಯ ಪೌರ್ವಾತ್ಯ ಉಭಯ ಸಂಸ್ಕೃತಿಗಳ ಮಿಲನವನ್ನೂ ನಾವು ಕಾಣಬಹುದಿತ್ತು. ಈ ಉಭಯ ಸಂಸ್ಕೃತಿಗಳ ಮಿಲನದಿಂದ ಅಪೂರ್ವವಾದೊಂದು ಹೊಸ ಸಂಸ್ಕೃತಿಯ ಸ್ವರೂಪವನ್ನೇ ಅವರು ಜಗತ್ತಿಗೆ ಪ್ರದರ್ಶಿಸಿದರು. ಅವರ ಸಂಶೋಧನೆಯ ಮಂದಿರದಲ್ಲಿ, ಅವರೊಡನೆ ಕೆಲಸಮಾಡಲು ಸಂದರ್ಭವೊದಗಿದ ಪುಣ್ಯಶಾಲಿಗಳಿಗೆ ಆ ಹೃದಯ ನೈರ್ಮಲ್ಯ, ದೈವ. ಭಕ್ತಿ, ವಿಶಾಲ ಮನಸ್ಸು, ಪುಣ್ಯ ಜೀವನಗಳ ವಿಷಯ ಚೆನ್ನಾಗಿ ಗೊತ್ತಿದೆ!

ಇಪ್ಪತ್ತನೆಯ ಶತಮಾನದಲ್ಲಿ ಭರತಮಾತೆಯ ಕೀರ್ತಿಧ್ವಜವನ್ನು ಉನ್ನತಿಗೇರಿಸಿ ಮೆರೆಸಿದ ಮಹಾಮೇಧಾವಿಗಳಲ್ಲಿ ಸರ್ ಜಗದೀಶ ಚಂದ್ರರೂ ಒಬ್ಬ ಗಣನೀಯ ವ್ಯಕ್ತಿಯಾಗಿದ್ದಾರೆ! ಅವರ ಜೀವನಾದರ್ಶವು ನಮಗೆ ಮಾರ್ಗದರ್ಶಕವಾದ ನಿರ್ಮಲ ಧ್ರುವತಾರೆಯಾಗಿದೆ!

To Let.

Whole property well known "ARYASHRAM" Near City Post Office Facing Navayath Galli to the West, and Azizuddin Road to the East. EXCELLANT ACCOMMODATION FOR residential quarters Also suited for curing and factory purposes with improvements Necessary improvements will be effected Also separate houses available according to convenience

Apply to .

1 Sri A Srinivasa Pai, B.A.,B.L., *"Hill House", Kasargod, S. Kanara.*

OR

2 Sri B Vaikunta Baliga, B.A.,B.L. *'Lorretto Villa", Kodialbail, Mangalore,*

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಜರ್ಮನ್ ರಶ್ಯಗಳು, ಪೂರ್ವ ಯೂರೋಪನ್ನು ಹಂಚಿಕೊಳ್ಳುವವೇ?

ಮಾಸ್ಕೋದಲ್ಲಿ ಆದ ಜರ್ಮನಿ ರಶ್ಯಾ ಒಪ್ಪಂದದ ಹಲವು ಗುಪ್ತ ಸಂಗತಿಗಳು ಬ್ರಿಟಿಷ್ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಅಲ್ಲಿ ಆದ ಗುಪ್ತ ಒಪ್ಪಂದದಲ್ಲಿ ಐದು ಪ್ರಾಮುಖ್ಯ ವಿಷಯಗಳು ಸೇರಿರುವುದಾಗಿ ತಿಳಿಯುತ್ತದೆ.

ರಶ್ಯಕ್ಕೆ ಪೂರ್ವ ಯೂರೋಪಿನಲ್ಲಿ ಸ್ವಾತಂತ್ರ್ಯ ಕೊಟ್ಟು ಜಪಾನು ಚೈನಕ್ಕೆ ನುಗ್ಗದಂತೆ ನಿರ್ಬಂಧಿಸಲು ಸಹಾಯ ಮಾಡುವುದು, ಬಾಲ್ಕನ್ ರಾಷ್ಟ್ರಗಳು ರಶ್ಯಾ ಜರ್ಮನಿಗಳೊಳಗೆ ಹಂಚಲ್ಪಡುವುದು; ಜರ್ಮನಿಗೆ ಹಂಗೇರಿ, ರುಮೇನಿಯಾ ಯುಗೋಸ್ಲೇವಿಯಾ ಮತ್ತು ಗ್ರೀಸುಗಳು ಸೇರುವವು, ರಶ್ಯಕ್ಕೆ ಟರ್ಕಿ ಬಲ್ಗೇರಿಯಾಗಳು ಸೇರುವವು; ಬಾಲ್ಟಿಕ್ ರಾಷ್ಟ್ರಗಳಲ್ಲಿ ರಶ್ಯದ ಒಡೆತನವಿರುವುದು, ಪೋಲೆಂಡ ಜರ್ಮನ್ ರಶ್ಯಗಳೊಳಗೆ ವಿಭಕ್ತವಾಗುವುದು, ಉಕ್ರೇನಿನಲ್ಲಿ ರಶ್ಯದ ಒಡೆತನವಿರುವುದು, ಮಹಾಯುದ್ಧದ ಅನಂತರ ರಶ್ಯ ಕಳಕೊಂಡ ಪ್ರಾಂತ್ಯಗಳನ್ನು ರಶ್ಯವು ಸ್ವಾಧೀನಪಡಿಸುವುದು.

ಇಟೆಲಿಗೆ ಏನೂ ಇಲ್ಲ!

ಈ ಜರ್ಮನ್ ರಶ್ಯಗಳ ಯೋಜನೆಯಲ್ಲಿ ಇಟೆಲಿಗೆ ಯಾವ ಪ್ರವೇಶವೂ ಇಲ್ಲ. ಹಿಟ್ಲರನು ಅಂತರ್ಯದಲ್ಲಿ ಮುಸಲೊನಿಯ ಉದ್ದೇಶಗಳನ್ನು ಬಲವಾಗಿ ಖಂಡಿಸುವನೆಂದು ತಿಳಿಯುತ್ತದೆ. ಇಟಲಿಯು ಇಂದು ಯೂರೋಪಿನ ರಾಷ್ಟ್ರಗಳಲ್ಲಿ ಶಾಂತಿ ಸೂಚನೆ ಮಾಡಿದೆ. ಆದರೆ ಪ್ರಜಾಪ್ರಭುತ್ವ ರಾಷ್ಟ್ರಗಳು ಈ ಸೂಚನೆಯನ್ನು ಅಂಗೀಕರಿಸುವಂತೆ ಕಂಡು ಬರುವುದಿಲ್ಲ. ಇದರಿಂದ ಇಟಲಿಯಲ್ಲಿ ಗೊಂದಲಗಳು ಹುಟ್ಟಿವೆ.

ಪೋಲೆಂಡನಲ್ಲಿ ಸ್ವಾಧೀನಪಡಿಸಿದ ಪ್ರಾಂತ್ಯಗಳಲ್ಲಿ ರಶ್ಯವು ನಡಿಸಿದ ತೀವ್ರ ಬದಲಾವಣೆಗಳಿಂದ ಬಾಲ್ಕನಿನಲ್ಲಿ ಹೆದರಿಕೆ ಹುಟ್ಟಿದೆ. ಆದರೆ ಹಂಗೇರಿಯು ಯಾವ ರೀತಿಯಿಂದಲೂ ಹೆದರಿಕೆಗೊಳಗಾಗಲಿಲ್ಲವೆಂದು ತಿಳಿಯುತ್ತದೆ. ಹಂಗೇರಿಯು ಬಹುಕಾಲದಿಂದಲೇ ವಿದೇಶೀಯರ ತುಳಿತಕ್ಕೆ ಬಿದ್ದಿದ್ದು, ಇನ್ನೂ ಅದಕ್ಕಿಂತ ಹೆಚ್ಚಿನ ಪರದೇಶಿಯರ ತುಳಿತ ಬಂದರೂ ಅದು ಸಹಿಸಲು ಸಿದ್ಧವೇ ಆಗಿದೆ.

ಸ್ವಿಜರ್ಲೆಂಡಿನ ಸಿದ್ಧತೆ!

ಎಲ್ಲಾ ರಾಷ್ಟ್ರಗಳೂ ಆತ್ಮರಕ್ಷಣೆಯನ್ನು ಮಾಡಿಕೊಂಡಿರುವಾಗ, ಸ್ವಿಜರ್ಲೆಂಡು ಸುಮ್ಮಗೆ ಇರುವುದಿಲ್ಲ. ಮೆಜಿನೋ ಸೀಜ್‌ಫ್ರೀಡ್ ಲೈನುಗಳಂತೆ ಅದೂ ಕೂಡಾ ತನ್ನ ಗಡಿಭೂಮಿಯಲ್ಲಿ ಬಲವಂತವಾದ ಕೋಟೆಯನ್ನು ಕಟ್ಟಲು ಆರಂಭಿಸಿದೆ. ೧೯೩೭ರಿಂದ ಈ ಕಾರ್ಯದ ಸಿದ್ಧತೆ ನಡೆಯುತ್ತಾ ಇದೆ. ಸಾಕಷ್ಟು ಸೈನ್ಯ ಸಾಮಗ್ರಿಗಳನ್ನಿಟ್ಟು, ಭದ್ರವಾಗಿ ರಚಿತವಾದ ಕೋಟೆಗಳುಳ್ಳ ಸ್ವಿಜರ್ಲೆಂಡು ಪರರಾಷ್ಟ್ರದ ಧಾಳಿಯನ್ನು ತಡೆಯಲು ಸಾಕಷ್ಟು ಸಾಮರ್ಥ್ಯವುಳ್ಳದ್ದಾಗುವುದು.

ನಾಜೀವಿರುದ್ಧ ಆಂದೋಲನ

ಇದೀಗ ಜರ್ಮನಿಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಈಗ ಹರಡಿರುವ ಆಂದೋಲನವನ್ನು ತಡೆಯುವ ಪ್ರಯತ್ನಗಳನ್ನು ಮಾಡುವಲ್ಲಿ ನಾಜೀ ಸರಕಾರವು ಬಹುಕಾಲವನ್ನು ವ್ಯಯಿಸಬೇಕಾಗಿದೆ. ಬರ್ಲಿನ್ ಮೊದಲಾದೆಡೆಗಳಲ್ಲಿ ನಾಜೀ ವಿರುದ್ಧ ದಂಗೆಗಾರರನ್ನು ಕಂಡು ಹುಡುಕಲು ಅನೇಕ ನಾಗರಿಕರು ಸ್ವಯಂಸೇವಕರಾಗಿ ಮುಂದೆ ಬಂದಿರುವರು.

ಆಂಗ್ಲ-ಜಪಾನು ಸಂಧಿ?

ಆಂಗ್ಲ ಜಪಾನು ರಾಷ್ಟ್ರಗಳೊಳಗೆ ಸಂಧಿಮಾಡುವ ಯೋಜನೆಯು ನಡೆಯುತ್ತಿದೆ ಎಂಬ ವಾರ್ತೆಯು ಹರಡಿದೆ.

ಟರ್ಕಿಯ ಸ್ಥಿತಿ

'ಸ್ವಾತಂತ್ರ್ಯವು ನಾಶವಾಗುತ್ತಿದೆ, ಅದನ್ನು ಹೇಗಾದರೂ ಮಾಡಿ ರಕ್ಷಿಸಿರಿ' ಹೀಗೆಂದು ಲಂಡನಿನಲ್ಲಿ ರಶ್ಯ ಜರ್ಮನ್ ಒಪ್ಪಂದ ಕರಪತ್ರಗಳು ಇವೆ.

ಇಂದು ಟರ್ಕಿಯ ಸ್ಥಿತಿಯು ಬಹಳ ವಿಷಮ ಸ್ಥಿತಿಯಲ್ಲಿದೆ. ಆದರೆ ಅದು ಬ್ರಿಟನಿನೊಡನೆ ಮಾಡಿಕೊಂಡ ಒಪ್ಪಂದಕ್ಕೆ ವಿರುದ್ಧವಾಗಿ ರಶ್ಯದೊಡನೆ ಮಾಡುವುದು ಸಾಧ್ಯವಿಲ್ಲ.

ಜರ್ಮನಿಯ ಭವಿಷ್ಯ ಹೇಗಿದೆ?

'ಜರ್ಮನಿಯಲ್ಲಿ ಏನು ನಡೆಯುತ್ತಿದೆಯೆಂಬುದನ್ನು ಯಾರೂ ತಿಳಿಯುವುದಿಲ್ಲ. ಸ್ವತಃ ಹಿಟ್ಲರನಿಗೇ ಆ ಕುರಿತು ಅನುಭವವಿಲ್ಲ. ಯುದ್ಧವು ಮುಂದುವರಿದಲ್ಲಿ ಏನಾಗುವುದೋ ಹೇಳಬರುವುದಿಲ್ಲ. ಕಡೆಗೆ ಒಂದು ದಿನ ಇದನ್ನು ಜನತೆಯೇ ನಿರ್ಧರಿಸುವುದು. ಕಳೆದ ಮಹಾಯುದ್ಧದಲ್ಲಿಯೂ ಹಾಗೆಯೇ ಆಯಿತು' ಹೀಗೆಂದು ಜರ್ಮನಿಯಲ್ಲಿ ಹಲವು ವರ್ಷ ವಾಸಮಾಡುತ್ತಿದ್ದು ಅಲ್ಲಿ ಜನತೆ ಸರಕಾರದ ಕ್ರಮಗಳನ್ನು ಕಂಡು ಪರೀಕ್ಷಿಸಿದ ಡಾ ಮೆನ್‌ಪೇಯವರು ಹೇಳುತ್ತಾರೆ.

'ಈ ಯುದ್ಧದಲ್ಲಿ ಜರ್ಮನ್ ಸೈನ್ಯವು ಅತುಲ ವಿಜಯವನ್ನು ಸಂಪಾದಿಸುವುದೆಂದು ನಾನು ನಂಬುವುದಿಲ್ಲ. ನಿಜವಾಗಿಯೂ ಜರ್ಮನಿಯ ಇಂದಿನ ಪ್ರಶ್ನೆ ಎಂದರೆ ಹಿಟ್ಲರನನ್ನು ಜನರು ಎಷ್ಟರ ಮಟ್ಟಿಗೆ ಮೆಚ್ಚುತ್ತಿದ್ದಾರೆ ಎಂಬುದು.

'ಕೆಲವು ವರ್ಷಗಳ ಹಿಂದೆ ನೇಶನಲ್ ಸೋಶಿಯಲಿಸ್ಟ್ ಪಾರ್ಟಿಯೊಂದನ್ನು ಬಿಟ್ಟು ಜರ್ಮನಿಯಲ್ಲಿ ಸರ್ವರೂ ಹಿಟ್ಲರ್ ಆರಾಧಕರೇ ಆಗಿದ್ದಾರೆಂದು ನಿರ್ಧಾರವಾಗಿ ಹೇಳಬರುವಂತಿತ್ತು. ಜರ್ಮನಿಯ ಉದ್ಧಾರಕ್ಕಾಗಿ ಹಿಟ್ಲರನು ದುಡಿಯುತ್ತಿದ್ದಾನೆ ಎಂದು ಎಲ್ಲರೂ ಬಗೆದಿದ್ದರು. ಹಿಟ್ಲರನು ಅವರಿಗೆ ಉಣಲು ಅನ್ನವನ್ನು ಕೊಟ್ಟನು, ತನ್ನ ರಾಷ್ಟ್ರ ಮತ್ತು ಜನಾಂಗವನ್ನು ಗೌರವಕ್ಕೆ ಏರಿಸಿದನು.

'ಆದರೆ ಈಗ ಕೆಲವು ವರ್ಷಗಳಿಂದ ಜರ್ಮನಿಯಲ್ಲಿ ಆಹಾರದ ಕೊರತೆಯುಂಟಾಗಿದೆ; ಇದರಿಂದ ಜನತೆಯ ಮನಸ್ಸು ಉದ್ವೇಗಗೊಂಡಿದೆ.

ಕೋವಿ' ಆಹಾರವಿಲ್ಲ?

ಇಂದಿನ ಕಾಲದಲ್ಲಿ ಜನರು ನಿರಂತರ ದುಡಿಯಬೇಕು. ಆದರೆ ಅವರಿಗೆ ಉಣ್ಣಲು ಸಾಕಷ್ಟು ಆಹಾರವಿಲ್ಲ. ಜರ್ಮನ್ ಸರಕಾರವಾದರೂ ಇಂದಿನ ಕಾಲಕ್ಕೆ ಅನ್ನಕ್ಕಿಂತ ಕೋವಿಯೇ ಹೆಚ್ಚು ಪ್ರಾಧಾನ್ಯವೆಂದು ಹೇಳುತ್ತಿದೆ. ಹೇಗಿದ್ದರೂ ಜರ್ಮನಿಯೊಳಗೆ ಶಾಂತತೆಯೆಂಬುದು ಇಲ್ಲವೇ ಇಲ್ಲ.

ಜರ್ಮನಿಯನ್ನು ಯುದ್ಧಕ್ಕೆ ಇಳಿಸಿದವರು

ಲಂಡನಿನಲ್ಲಿ ಜರ್ಮನ್ ರಾಯಭಾರಿಯಾಗಿದ್ದು ೧೯೩೮ರಿಂದ ಜರ್ಮನಿಯ ಮಂತ್ರಿಯಾಗಿದ್ದ ಜೋಕಿಂ ವಾನ್ ರಿಬ್ಬನ್ ಟ್ರಾಪನ ಅಧಿಕಾರಕ್ಕೆ ಬಂದದ್ದೇ ಹಿಟ್ಲರನನ್ನು ಯುದ್ಧ ಪಿಶಾಚಿ ಹಿಡಿಸಿಬಿಟ್ಟನು.

ಆತನು ದೊಡ್ಡ ಮನೆತನದಿಂದ ಮದುವೆಯಾದನು. ಇದರಿಂದ ಅವನು ಜಗತ್ತಿನ ಹಣವಂತರ ಬೇಂಕಿನವರ ಪರಿಚಯ ಬೆಳೆಯಿತು. ಯುದ್ಧ ಸಾಮಗ್ರಿಗಳನ್ನು ಒದಗಿಸಲು ಆತನು ನಿಧಿ ಸಂಗ್ರಹ ಮಾಡಿದನು. ಆತನು ಬೇಕಾದಷ್ಟು ಹಣವನ್ನು ಕೂಡಿಸಿಕೊಂಡು, ಹಿಟ್ಲರನನ್ನು ಶಕ್ತಿಯಿಂದ ಕಾಪಾಡಿದನು.

ಇಂದಿನ ರಶ್ಯ ಜರ್ಮನ್ ಒಪ್ಪಂದಕ್ಕೂ ರಿಬನ್ ಟ್ರಾಪನೇ ಕಾರಣನಾಗಿದ್ದಾನೆ. ಹೆನ್‌ರಿಚ್ ಹಿಮ್ಲರೆಂಬ ಗೆಸ್ಟೆಪೋ ಮುಖಂಡನು ಇನ್ನೊಬ್ಬ ಯುದ್ಧಾಕಾಂಕ್ಷಿಯಾದವನು. ಹೀಗೆ ಹಿಟ್ಲರನನ್ನು ಯುದ್ಧದಲ್ಲಿ ಇಳಿಸಿದವರು ಹಲವರಿದ್ದಾರೆ. ಪರಿಣಾಮವೇನೋ ತಿಳಿಯುವುದಿಲ್ಲ.

THE
BANK OF MANGALORE LTD.,
MANGALORE.
ESTD 1931
Branches-
Mudabidri & Padubidri.
Fixed Deposits will be received at following rates of interest.

For	3 months		4½%
„	6	„	4%
„	12	„	5%
„	24	„ & upwards	5½%

Interest Payable Quarterly.
Savings Bank deposit* 3½% *on daily balances.
All kinds of banking business transacted

DIAMONDS! DIAMONDS!
BEST BRILLIANCY!
K. R. K. SHET,
MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!
ವಜ್ರಗಳು!
ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.
ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ. ಆರ್. ಕೆ. ಶೆಟ್ಟಿ, ಜುವೆಲ್ಲರ್,
ಮಂಗಳೂರು.

ಯುದ್ಧಕಾಲದಲ್ಲಿ ಪಾರಿವಾಳಗಳ ಸೇವೆ

ಯೂರೋಪದಲ್ಲಿ ಈಗ ಪುನಃ ಯುದ್ಧ ಪ್ರಾರಂಭವಾಗಿದೆ. ಈ ಕಾರಣದಿಂದಲೇ ಪಾರಿವಾಳಗಳ ಮೂಲಕ ಪತ್ರವ್ಯವಹಾರವನ್ನು ಮಾಡುವ ಕಡೆಗೆ ಯೂರೋಪದ ರಾಷ್ಟ್ರಗಳ ಲಕ್ಷ್ಯವು ಸೆಳೆಯಲ್ಪಟ್ಟಿದೆ. ಕೆಲವು ದಿನಗಳ ಹಿಂದೆ ತಾನೇ ಕೆಂಟನ ಡಚೆಸರವರು ಬರ್ಮಿಂಗ್ಹಾಮಿನಲ್ಲಿ ಡನ್ಲಪ ಟಾಯರ ಕಂಪೆನಿಯ ಪರವಾಗಿ ಪಾರಿವಾಳಗಳ ಒಂದು ಅಂಚೆಕಟ್ಟೆಯನ್ನು ತೆರೆದರು. ಆದರಿಂದಲೇ ಯುದ್ಧಕಾಲದಲ್ಲಿ ಪಾರಿವಾಳಗಳು ಮಾಡುವ ಸೇವೆಯು ಎಷ್ಟು ಮಹತ್ವದ್ದಾಗಿದೆ ಎಂಬುದು ತಿಳಿಯುತ್ತದೆ. ಯುದ್ಧಕಾಲದಲ್ಲಿ-ಯುದ್ಧದಲ್ಲಿ ಸೇರಿಕೊಂಡ ಅಥವಾ ತಟಸ್ಥ ರಾಷ್ಟ್ರವು ಪತ್ರವ್ಯವಹಾರ ಮಾಡುವುದು ಅಥವಾ ಸಂದೇಶಗಳನ್ನು ಕಳುಹಿಸಿ ಕೊಡುವುದು ಕಷ್ಟವಾಗುತ್ತದೆ. ಆಗ ಅಂಚೆಕಟ್ಟೆಯ ಕೆಲಸಗಳನ್ನು ಪಾರಿವಾಳಗಳು ಮಾಡುವವು.

ಕಳೆದ ಮಹಾಯುದ್ಧ ಕಾಲದಲ್ಲಿ ಬೇರೆ ಬೇರೆ ಸೈನಿಕ ಠಾಣೆಗಳಿಗೆ ಸಂದೇಶಗಳನ್ನು ಕಳುಹಿಸಿಕೊಡುವುದಕ್ಕೋಸ್ಕರ ಪಾರಿವಾಳಗಳನ್ನು ಉಪಯೋಗಿಸಿದ್ದರು. ಆಗ ಅಕ್ಕಿಯ ಅಂಟಿನಿಂದ ತಯಾರಿಸಿದ ಬಹಳ ಹಗುರವಾದ ಕಾಗದದಲ್ಲಿ ಸಂದೇಶಗಳನ್ನು ಬರೆದು, ಅದನ್ನು ಸುರುಳಿ ಸುತ್ತಿ ಪಾರಿವಾಳದ ಕಾಲಿಗೆ ಕಟ್ಟಿ ಪಾರಿವಾಳವನ್ನು ಹಾರಿಸುತ್ತಿದ್ದರು. ಪಾರಿವಾಳವು ಗೊತ್ತಾದ ಸ್ಥಳಕ್ಕೆ ಹಾರಿ ಆ ಸಂದೇಶಗಳನ್ನು ಒಪ್ಪಿಸುತ್ತಿದ್ದಿತು. ಆದರೆ ಈಗ ಸಂದೇಶಗಳನ್ನು ಕಳುಹಿಸಿಕೊಡುವ ಕ್ರಮದಲ್ಲಿ ಬಹಳ ಸುಧಾರಣೆಗಳಾಗಿರುವವು. ಮೊದಲು ಕಾಗದದ ದೊಡ್ಡ ಹಾಳೆಗಳಲ್ಲಿ ಬರೆದು ಮುಗಿಸುತ್ತಿದ್ದ ಸಂದೇಶಗಳನ್ನೇ ಅಂಚೆ ಚೀಟಿಗಿಂತ ಹೆಚ್ಚು ದೊಡ್ಡದಾಗಿರದ ಸಣ್ಣ ಕಾಗದ ತುಂಡುಗಳಲ್ಲಿ ಫೋಟೋ ತೆಗೆದು, ಅಂಥ ೨೫ ತುಂಡುಗಳನ್ನು ಎಲ್ಯುಮಿನಿಯಮಿನ ಸಣ್ಣ ಕರಡಿಗೆಯಲ್ಲಿ ಇಟ್ಟು, ಆ ಕರಡಿಗೆಯನ್ನು ಪಾರಿವಾಳದ ಕಾಲಿಗೆ ಕಟ್ಟುವರು. ಹೀಗೆ ಒಂದೊಂದು ಬಾರಿಗೆ ೩೫೦೦೦ ಶಬ್ದಗಳಷ್ಟು ದೀರ್ಘ ಸಂದೇಶವನ್ನು ಈಗ ಕಳುಹಿಸಿಕೊಡುವುದು ಸಾಧ್ಯವಾಗಿರುವುದು. ಇಂಥ ಸಣ್ಣ ಕಾಗದ ತುಂಡುಗಳು ಬಂದು ಮುಟ್ಟಿದೊಡನೆ ದುರ್ಬೀನು ಇರುವ ಒಂದು ಯಂತ್ರದಲ್ಲಿಟ್ಟು, ಕಾಗದದ ದೊಡ್ಡ ಹಾಳೆಯ ಮೇಲೆ ಪ್ರತಿಲಿಪಿ ತೆಗೆದು ಓದುವರು. ಶಸ್ತ್ರಾಸ್ತ್ರ ಯಂತ್ರೋಪಕರಣಗಳ ಮೂಲಕವೇ ಯುದ್ಧವಾಗುವ ಈ ವೈಜ್ಞಾನಿಕ ಕಾಲದಲ್ಲಿ ಕೂಡ ಯುದ್ಧಕಾಲದಲ್ಲಿ ಪಾರಿವಾಳಗಳ ಸೇವೆಯನ್ನು ತೆಗೆದುಕೊಳ್ಳುವ ಪುರಾತನ ಪದ್ಧತಿಯು ಇನ್ನೂ ಅನುಸರಣೆಯಲ್ಲಿದೆ ಎಂಬುದು ಆಶ್ಚರ್ಯದ ಸಂಗತಿಯಲ್ಲವೆ?

ಹೌದು, ಅದಕ್ಕೆ ಕೆಲವು ಕಾರಣಗಳಿವೆ. ಸಂದೇಶಗಳನ್ನು ಮನುಷ್ಯರ ಮೂಲಕ ಕಳುಹಿಸಿಕೊಡುವ ಸಂದರ್ಭದಲ್ಲಿ ಆ ಸಂದೇಶಗಳು ಶತ್ರುಪಕ್ಷದವರ ಕೈಗೆ ಬೀಳುವ ಸಂಭವಗಳು ಹೆಚ್ಚು ಇರುತ್ತವೆ. ಅಲ್ಲದೆ ಆ ಸಂದೇಶಗಳು ಮುಟ್ಟಲಿಕ್ಕೆ ಕಾಲವಿಳಂಬವೂ ಆಗುತ್ತದೆ. ಅನೇಕ ಸಂದರ್ಭಗಳಲ್ಲಿ ಅವು ತಲಪಬೇಕಾದ ಠಾಣೆಯನ್ನು ತಲಪದೆಯೇ ಇರಬಹುದು. ಆದರೆ ಪಾರಿವಾಳಗಳ ಮೂಲಕ ಹೀಗಾಗುವುದು ಅಪರೂಪ. ಅವು ಸಂದೇಶಗಳನ್ನು ತೆಗೆದುಕೊಂಡು ಆಕಾಶಮಾರ್ಗವಾಗಿ ಹಾರಿಹೋಗುವಾಗ ಅವುಗಳು ಬಹು ಸಣ್ಣ ಚುಕ್ಕಿಗಳಂತೆ ಕಾಣುವವಾದ್ದರಿಂದ ಶತ್ರುಗಳು ಅವುಗಳನ್ನು ಗುರುತಿಸುವುದೂ, ಹಿಡಿಯುವುದೂ ಕಷ್ಟತರವಾಗಿದೆ. ಆದ್ದರಿಂದ ಸಂದೇಶಗಳು ಶತ್ರುಪಕ್ಷದವರ ಕೈಗೆ ಬಿದ್ದು ಹಾನಿಯಾಗುವ ಅಥವಾ ಅವು ನಷ್ಟವಾಗುವ ಸಂದರ್ಭಗಳು ಕಡಿಮೆ. ಎಂಥ ಪ್ರತಿಕೂಲ ಪರಿಸ್ಥಿತಿ ಇದ್ದರೂ ತಮ್ಮ ದಾರಿಯನ್ನೇ ಗುರುತಿಸಿಕೊಂಡು ಹೋಗುವ ಒಂದು ವಿಶೇಷ ತರದ ಸ್ವಾಭಾವಿಕ ಗುಣವು ಪಾರಿವಾಳಗಳಿಗಿರುವುದರಿಂದ ಅವು ದಾರಿ ತಪ್ಪುವುದೂ ಕಡಿಮೆ. ಮನುಷ್ಯನು ಒಂದೂರಿಂದ ಇನ್ನೊಂದೂರಿಗೆ ಹೋಗಬೇಕಾದರೆ ನೆಟ್ಟಗೆ ಒಂದೇ ದಿಕ್ಕನ್ನು ಹಿಡಿದು ಹೋಗಲಾರನು. ಸುತ್ತುಮುತ್ತಿನ ದಾರಿಯನ್ನು ಹಿಡಿದು ಹೋಗಬೇಕು. ಪಾರಿವಾಳಗಳು ಒಂದೇ ದಿಕ್ಕು ಹಿಡಿದು ಹೋಗಬಲ್ಲುವಾದ್ದರಿಂದ ಸಂದೇಶಗಳು ಮುಟ್ಟಲಿಕ್ಕೆ ಕಾಲವಿಳಂಬವಾಗುವುದಿಲ್ಲ. ಇವೇ ಕಾರಣಗಳಿಂದ ಈ ಪುರಾತನ ಪದ್ಧತಿಯು ಈಗಲೂ ಅನುಸರಣೆಯಲ್ಲಿದೆ.

ಪಾರಿವಾಳಗಳ ಮೂಲಕ ಪತ್ರವ್ಯವಹಾರವನ್ನು ನಡೆಸುವ ಕ್ರಮವು ಬಹಳ ಹಿಂದಿನಿಂದಲೂ ಇತ್ತೆಂಬುದಕ್ಕೆ ಕೆಲವು ಆಧಾರಗಳು ಇವೆ. ಪುರಾತನ ಕಾಲದ ಪರ್ಶಿಯನರು ಪತ್ರವ್ಯವಹಾರಕ್ಕೆ ಪಾರಿವಾಳಗಳನ್ನು ಉಪಯೋಗಿಸುತ್ತಿದ್ದರು. ಆ ಕಾಲದಲ್ಲಿ ಸ್ಪರ್ಧೆಯಾಟಗಳು ನಡೆಯುತ್ತಿದ್ದಾಗ ಗ್ರೀಸ ದೇಶದ ಜನರು ಸೋಲು ಗೆಲವುಗಳ ಸಮಾಚಾರಗಳನ್ನು ದೂರದೂರದ ಪಟ್ಟಣಗಳಿಗೆ ಕೂಡ ಪಾರಿವಾಳಗಳ ಮೂಲಕ ಕಳುಹಿಸಿಕೊಡುತ್ತಿದ್ದರು. ದೀರ್ಘ ಸಮಯದ ತನಕ ಮುತ್ತಿಗೆಗಳಾದಾಗ ಮುತ್ತಲ್ಪಟ್ಟವರಿಗೆ ಪಾರಿವಾಳಗಳ ಮೂಲಕವಲ್ಲದೆ ಹೊರಗಿನ ಪ್ರಪಂಚದೊಂದಿಗೆ ಪತ್ರವ್ಯವಹಾರ ಮಾಡುವ ಬೇರೆ ಉಪಾಯವೇ ಇರಲಿಲ್ಲ.

೧೮೭೦-೭೧ರಲ್ಲಿ ಫ್ರಾನ್ಸ ಮತ್ತು ಜರ್ಮನಿಗಳೊಳಗೆ ಭೀಕರ ಯುದ್ಧವು ನಡೆದಿದ್ದಾಗ ಪೇರಿಸಿಗೆಂದು ಬರೆಯಲ್ಪಟ್ಟ ಪತ್ರಗಳು ಮೊದಲು ಟೋರ್ಸ ಅಂಚೆಖಾನೆಗೆ ಹೋಗುತ್ತಿದ್ದುವು. ಅಲ್ಲಿ ಸಣ್ಣ ಕಾಗದ ತುಂಡುಗಳ ಮೇಲೆ ಅವುಗಳ ಫೋಟೊ ತೆಗೆಯಲ್ಪಟ್ಟು ಅಚ್ಚಾಗುತ್ತಿದ್ದುವು. ಅನಂತರ ಅವುಗಳನ್ನು ಸುರುಳಿ ಸುತ್ತಿ ಪಾರಿವಾಳಗಳ ಕಾಲಿಗೆ ಕಟ್ಟಿ ಅವನ್ನು ಬಿಟ್ಟುಬಿಡುತ್ತಿದ್ದರು. ೨೦ ಶಬ್ದಗಳಿಗೆ ಮೀರದ ಒಂದೊಂದು ಪತ್ರಕ್ಕೆ ೫ ಪೆನ್ನಿ ಫೀಸು ಕೊಡಬೇಕಾಗುತ್ತಿತ್ತು. ಈ ಯುದ್ಧವಾದ ಅನಂತರ ಅನೇಕ ರಾಷ್ಟ್ರಗಳ ಲಕ್ಷ್ಯವು ತರಬೇತಿ ಕೊಟ್ಟ ಇಂಥ ಪಾರಿವಾಳಗಳ ಕಡೆಗೆ ಹರಿಯಿತು.

ಮುಂದೆ ಬೋವರ ಯುದ್ಧಕಾಲದಲ್ಲಿ ಕೂಡ ಪಾರಿವಾಳಗಳನ್ನು ಅಂಚೆಕಟ್ಟೆಯ ಕೆಲಸ ಕಾರ್ಯಗಳನ್ನು ನಿರ್ವಹಿಸಲಿಕ್ಕೆ ಉಪಯೋಗಿಸಿದ್ದರು. ಆಗ ಅವುಗಳು ಬಹಳ ಸೇವೆಯನ್ನು ಸಲ್ಲಿಸಿದ್ದುವು. ಆ ಸಮಯದಲ್ಲಿ ಫ್ರಾನ್ಸ ಒಂದೇ ದೇಶವು ೫೦೦೦ ಪಾರಿವಾಳಗಳನ್ನು ಈ ಕಾರ್ಯಕ್ಕೆ ಉಪಯೋಗಿಸುತ್ತಿದ್ದಿತು. ಆಗ ರೇಡಿಯೋ, ತಂತಿ ಇಲ್ಲದ ತಂತಿ ಇತ್ಯಾದಿಗಳ ಆವಿಷ್ಕಾರಗಳಾಗಿರಲಿಲ್ಲ. ಈಗಲಾದರೂ ಅವುಗಳ ಮೂಲಕ ಸಂದೇಶಗಳನ್ನು ಕಳುಹಿಸುವುದಾದರೆ, ಆ ಸಂದೇಶಗಳನ್ನು ಶತ್ರುಪಕ್ಷದವರು ತಿಳಿಯುವುದು ಸುಲಭ. ಆದ್ದರಿಂದ ಬೋವರ ಯುದ್ಧಕಾಲದಲ್ಲಿ ಪಾರಿವಾಳಗಳು ಯುದ್ಧಹಡಗುಗಳಿಗೆ ಅಮೂಲ್ಯ ಸೇವೆಯನ್ನು ಕೊಟ್ಟವು. ಕಳೆದ ಮಹಾಯುದ್ಧ ಕಾಲದಲ್ಲಿ ಕೂಡ ಅವುಗಳು ಮಾಡಿದ ಸೇವೆಯು ಅಲ್ಪವಾಗಿರಲಿಲ್ಲ.

ಆದರೆ ಆಕಾಶಮಾರ್ಗವಾಗಿ ಪಾರಿವಾಳಗಳ ಈ ಸೇವೆಯು ನಮಗೆ ಹೆಚ್ಚು ಅನುಕೂಲವಾಗಿ ಕಂಡುಬಂದರೂ, ಪಾರಿವಾಳಗಳಿಗೆ ಅದು ತ್ರಾಸದಾಯಕವಾಗಿರುತ್ತದೆ. ವಾತಾವರಣವು ಪ್ರತಿಕೂಲವಾಗಿದ್ದರೂ, ಮಳೆ ಬರುತ್ತಲಿದ್ದರೂ, ಶೀತ ಗಾಳಿಯು ಬೀಸುತ್ತಲಿದ್ದರೂ, ಕತ್ತಲೆಯಾಗಿದ್ದಾಗಲೂ ಪಾರಿವಾಳಗಳು ಆಕಾಶಮಾರ್ಗವಾಗಿ ಹೋಗಲಾರವು. ಅಲ್ಲದೆ ಸಂದೇಶಗಳನ್ನು ತೆಗೆದುಕೊಂಡು ಹೋಗುವ ಮಿತ್ರಮಂಡಲಿಯ ಈ ಪಕ್ಷಿಗಳನ್ನು ನಡುದಾರಿಯಲ್ಲಿಯೇ ಹಿಡಿದುಕೊಂಡು ತಿನ್ನಲಿಕ್ಕೆ ಕಳೆದ ಮಹಾಯುದ್ಧ ಕಾಲದಲ್ಲಿ ಜರ್ಮನರು ಗಿಡುಗಗಳನ್ನು ಸಾಕಿ ಪಳಗಿಸಿ ಇಟ್ಟಿದ್ದರು. ಮತ್ತೆ ಆ ಗಿಡುಗಗಳನ್ನು ಹೆದರಿಸಿ ಓಡಿಸಲಿಕ್ಕೆ ಪಾರಿವಾಳಗಳ ಕಾಲುಗಳಿಗೆ ಬಿಗಿಲುಗಳನ್ನೂ ಗೆಜ್ಜೆಗಳನ್ನೂ ಕಟ್ಟಲಾರಂಭಿಸಿದರು. ಇವುಗಳ ಶಬ್ದಗಳಿಗೆ ಹೆದರಿ ಗಿಡುಗಗಳು ಪಾರಿವಾಳಗಳ ಸುದ್ದಿಗೆ ಬರುತ್ತಿದ್ದಿಲ್ಲ.

ಈಗಲೂ ಬ್ರಿಟಿಷ ಸೇನೆಯಲ್ಲಿ ಪಳಗಿಸಿದ ಪಾರಿವಾಳಗಳು ಈ ಕಾರ್ಯಕ್ಕೆ ಉಪಯೋಗಿಸಲ್ಪಡುತ್ತಿವೆ.

TO LET.

From 1st November, 1939. Spacious building well know as "VARTHAKA VILAS" Bunder of Mangalor EMINENTLY SUITED F Offices or Mercantile Fir or Banks. With a comfo able accommodation, go downs, garbling and curing sheds In the centre of business quarters Facing the sea WITH ALL CONVENIENCES for residental pur poses also With motor garage On short or long lease, Inspection can be arranged

Apply to

1 Sri A Srinivasa Pai, B.A.,B.L.,
'*Hill House*', *Kasargod*,
S. Kanara

OR

2 Sri B Vaikunta Baliga, B.A.,B.L.,
"*Loretto Villa*", *Kodialbail*
Mangalore.



ನೋಟಗಳು

ಮಿ॥ ಜಿನ್ನರು 'ಡೆಮೊಕ್ರಸಿ'ಗೆ ವಿರೋಧಿಯಾಗಿದ್ದಾರೆ! 'ಫ್ಯಾಸಿಸಂ'ನ್ನು ಕಂಡರೆ ಅವರಿಗೆ ಆಗುವುದಿಲ್ಲವಂತೆ! ಹಾಗಾದರೆ, ಅವರು ಏನುಬಯಸುತ್ತಾರೆ? ಎಂದು ಹಲವರ ಸಂದೇಹವಾಗಿದೆ.

◈

'ಶಕ್ತಿಯಲ್ಲಿಯೇ ನ್ಯಾಯ ನಿಂತಿದೆ!' ಎಂದು ಹಿಟ್ಲರನು (ತನ್ನ ಆತ್ಮಚರಿತ್ರೆಯಲ್ಲಿ) ಗರ್ಜಿಸಿದನು!

ಹಾಗಾದರೆ ಇಂದಿನ ಹಿಟ್ಲರನ ಶಾಂತಿ ಸೂಚನೆಯಲ್ಲಿಯೂ ಶಕ್ತಿಗೆ ವಿಜಯ ದೊರಕುವ ಶರ್ತವುಂಟೆ?

◇

ಕಾಮನ್ಸ್ ಸಭೆಯಲ್ಲಿ ಮಿ॥ ಸಂಡೆರ್ಲಾನ್ ಎಲಿನರು ಇತರ ರಾಷ್ಟ್ರಗಳಿಗೆ ಇಂಡಿಯಾದ ಮೇಲೆ ಕಣ್ಣಿದೆ! ನಿಜವಾಗಿಯೂ ಇತರರಿಗಿಂತ ನಮ್ಮ ಆಳ್ವಿಕೆಯಲ್ಲಿ ಹಿಂದೂಸ್ಥಾನರು ಸುಖದಿಂದಲೂ ಸಂರಕ್ಷಣದಲೂ ಇಲ್ಲವೇ?' ಎಂಬ ಮಹಾ ಸೂಚನೆಯೊಂದನ್ನು ಮಾಡಿದರು.

ಆದರೆ ಇಂಡಿಯವು ಇತರರ ಮತ್ತು ಬ್ರಿಟಿಷರ ಆಳ್ವಿಕೆಯನ್ನು ಹೋಲಿಸಿ ನೋಡಿ ಯಾವುದು ಒಳ್ಳೆಯದು ಯಾವುದು ಕೆಟ್ಟದು ಎಂಬುದನ್ನು ವಿಚಾರಿಸುತ್ತಿಲ್ಲ! ತನ್ನನ್ನು ತಾನೇ ಆಳಿಕೊಳ್ಳುವುದು ಎಲ್ಲದಕ್ಕಿಂತಲೂ ಅದಕ್ಕೆ ಸುರಕ್ಷಿತವೂ ಸುಖದಾಯಕವೂ ಆಗಿದೆಯೆಂಬುದನ್ನು ಅದು ತಿಳಿದಿದೆಯೆಂದು ಅವರು ಮರೆತು ಬಿಟ್ಟಂತಿದೆ

◈

ಗಾಂಧಿಜಿಯವರ ಜನ್ಮ ದಿನೋತ್ಸವ ಸುಮುಹೂರ್ತದಲ್ಲಿ ಅಖಿಲ ಭಾರತವೇ ಅವರನ್ನು ಕೊಂಡಾಡುತ್ತಿರುವಾಗ, ಲಿಬರಲ್ ಪಕ್ಷದವರು ಮತ್ತು ಹಿಂದೂ ಮಹಾಸಭೆಯವರು ಗಾಂಧಿಜಿಯವರನ್ನು ದೂರುತ್ತಾ ಒಂದು ಜತೆಯ ಪ್ರಕಟಣೆಯನ್ನು ಹೊರಡಿಸಿದರು.

ಇವರಲ್ಲಿ ಮುಖ್ಯರಾದವರಿಬ್ಬರೂ ಸರ್. ಬಿರುದು ಪಡೆದವರು. ಆದರೆ ಕೆಲವರಿಗೆ ಅದೂ ಇಲ್ಲ. ಹಿಂದೆ ಹೊಗಳಿದ್ದಕ್ಕೆ 'ಸರ್' ಬಿರುದು ಪಡೆದರು. ಮೊದಲನೆಯಿಬ್ಬರು ಬಾಕಿಯುಳಿದವರು ಗಾಂಧಿಜಿಯವರನ್ನು ದೂರಿ ತಮ್ಮ ಹೆಸರನ್ನು ಹಾಳು ಮಾಡಿಕೊಳ್ಳುತ್ತಿದ್ದಾರಲ್ಲ ಎಂಬುದೊಂದು ವ್ಯಸನದ ವಿಷಯ!

ಆದರೆ ದೂರಿದವರನ್ನೂ ಹೊಗಳುವುದು ಗಾಂಧಿಜಿಯವರ ತತ್ವ! ಹಾಗಾಗಿ ದೂರಿಯಾದರೂ ಅವರಿಂದಹೊಗಳಿಸಿಕೊಳ್ಳೋಣವೆಂದು ಅವರುಭಾವಿಸಿರಬಹುದು.

ಆದರೆ ಬಿರುದು ಹೆಸರುಗಳನ್ನು ಗಾಂಧಿಜಿಯವರು ಕೊಡುವುದಿಲ್ಲವಂತೆ!

◈

ಶ್ರೀ ಸಾವರ್ಕಾರರು ಹೇಳುತ್ತಾರೆ 'ಕಾಂಗ್ರೆಸನ್ನು ದೇಶದ ಏಕಮಾತ್ರ ಪ್ರತಿನಿಧಿ ಸಂಸ್ಥೆಯೆಂದು ಬಹುಮಾನಿಸುವುದು ಭಾರತದ ಪ್ರಜಾಪ್ರಭುತ್ವವನ್ನು ಹಾಳು ಮಾಡಿದಂತೆ'ಯೆಂದು.

ಇದು ಯಾತಕ್ಕೆಂದುಗೊತ್ತೆ?

ಕೆಲಸಮಯದ ಹಿಂದೆ ಹಿಟ್ಲರನಿಗೆ ಪ್ರಜಾಪ್ರಭುತ್ವವಾದೀ ಸಾವರ್ಕಾರರು ಅಭಿನಂದನೆಯ ತಂತಿಯನ್ನು ಕಳುಹಿಸಿದಂತೆ ಕಾಂಗ್ರೆಸು ಕಳುಹಿಸಲಿಲ್ಲವಷ್ಟೆ?

ಹಿಟ್ಲರ್ ಧೋರಣೆಗೂ ಭಾರತದ ಪ್ರಜಾಪ್ರಭುತ್ವಕ್ಕೂ ಜತೆಯುಂಟೇ? ಎಂಬುದು ಬ್ಯಾರಿಸ್ಟರ್ ಸಾವರ್ಕಾರರಿಗೇ ಗೊತ್ತು!

◈

ಡಿಲ್ಲಿಯಲ್ಲಿ ಕಾಂಗ್ರೆಸು ಧುರೀಣರು ಮತ್ತು ಮುಸ್ಲಿಂ ಲೀಗು ಮುಖಂಡರೂ ಒಂದಾಗಿ ಮಾತುಕತೆ ಮಾಡುತ್ತಿರುವುದರ ಫಲಿತಾಂಶವೇನೆಂಬುದು ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ.

◇

ಆದರೆ, ಕಾಂಗ್ರೆಸು ಮತ್ತು ಮುಸ್ಲಿಂ ಲೀಗುಗಳು ಅನ್ಯೋನ್ಯ ಒಟ್ಟುಗೂಡುವ ಚಿಹ್ನೆಯೇನೋ ತೋರುತ್ತದೆ!

◈

ಪಾಪ! ಜೆಟ್ಲೆಂಡ್ ಸಾಹೇಬರು ಇದರಿಂದ ದುಃಖಿಸುತ್ತಿರಬಹುದು.

ಸರ್. ಪನ್ನೀರಸೆಲ್ವರವರು ಮದ್ರಾಸಿನಲ್ಲಿ ಕಾಂಗ್ರೆಸು ಸರಕಾರವನ್ನು ದೂಷಿಸುತ್ತ, ತಮಿಳರಿಗೆ ಇಂದು ಸ್ವಾತಂತ್ರ್ಯವು ಬೇಕಾಗಿದೆಯೆಂದು ಬೊಬ್ಬಿಟ್ಟರು.

◈

ಅದಕ್ಕೆ ಉತ್ತರವಾಗಿ ಶ್ರೀ. ಅರುಂಡಲೆಯವರು ಪನ್ನೀರಸೆಲ್ವರವರು ಮದ್ರಾಸಿನ ಕಾಂಗ್ರೆಸಿನವರಲ್ಲಿ ರಾಷ್ಟ್ರಪ್ರೇಮವಾದರೂ ಉಂಟೆಂದೂ, ಇಂತಹ ಜಾತೀಯತೆಯ ಸಂಕೋಚ ಮನೋಭಾವದವರು ಅಧಿಕಾರಕ್ಕೆ ಬರುವುದು ಸರ್ವಥಾ ಬೇಡವೆಂದೂ ಹೇಳಿದರು.

◇

ಮದ್ರಾಸಿನಲ್ಲಿ ತಮಿಳರಿಗೆ ಸ್ವಾತಂತ್ರ್ಯ ಬೇಕೆಂದು ವಾದಿಸಿದ ಮಹಾಶಯರನ್ನು ವೈಸರಾಯರು ಈಗ ಡಿಲ್ಲಿಗೆ ಕರೆದಿರುವರಷ್ಟೆ? ಅಲ್ಲಿ ತಮಿಳರಿಗೂ ಸ್ವಾತಂತ್ರ್ಯ ಬೇಡ, ಸ್ವಾತಂತ್ರ್ಯ ಕೊಡುವುದಿದ್ದರೆ ನನಗೆ ಕೊಡಿ ಎಂದು ವೈಸರಾಯರೊಡನೆ ಬೇಡಬಹುದು.

ದಸರಾ ಮಹೋತ್ಸವ, ಪುತ್ತೂರು ೧೯೩೯

ಉಪನ್ಯಾಸಗಳು ಪ್ರತಿದಿನ ಸಾಯಂಕಾಲ ೬ಕ್ಕೆ ಹೈಯರ್ ಎಲಿಮೆಂಟರಿ ಹುಡುಗಿಯರ ಶಾಲೆಯಲ್ಲಿ; ವಿನೋದಗಳು ಸಾಯಂಕಾಲ ೭ ಘಂಟೆಗೆ ಹುಡುಗರ ಶಾಲೆಯಲ್ಲಿ ನಿತ್ಯ ಸಾಯಂಕಾಲದಿಂದ ೬ ಘಂಟೆಯ ತನಕ ವ್ಯಾಯಾಮ ಪ್ರದರ್ಶನ

ಅಕ್ಟೋಬರ ತಾರೀಖು	ಉಪನ್ಯಾಸಗಳು	ವಿನೋದಗಳು
೧೩	'ಬ್ರಿಟಿಷ್ ಸಾಮ್ರಾಜ್ಯತತ್ವ' ಶ್ರೀ ನಾ. ಕಸ್ತೂರಿ, ಎಂ. ಎ. ಮೈಸೂರು	'ಅಲ್ಲಾವುದ್ದೀನ' (ನೃತ್ಯ)
೧೪	'ವಿಜಯ ನಗರದ ದಿನಗಳು' ಶ್ರೀ ಎಚ್. ರಾಮರಾಯರು, ಮಂಗಳೂರು.	'ಯಕ್ಷಗಾನ'
೧೫	'ಚೀನದ ಸಂಸ್ಕೃತಿ' ಶ್ರೀ. ಹನುಮಂತರಾವ್, ಕೊಣ್ಣೂರು, ಎಂ. ಬಿಜಾಪುರ	'ಬಿಜಾಪುರದ ಲಾವಣಿಗಳು' (ಶ್ರೀ ಮಧುಲಿಂಗ ಹಲಸಂಗಿ)
೧೬	'ಆರೋಗ್ಯ ಜೀವನ' ಪ್ರೊ. ಕೆ ವಿ. ಅಯ್ಯರ್, ಬೆಂಗಳೂರು	'ಇಸ್ಪೀಟು ಗುಲಾಮ' (ಗದ್ಯ ನಾಟಕ)
೧೭	'ಸಾಹಿತ್ಯದಲ್ಲಿ ವಿಡಂಬನ, ವ್ಯಂಗ್ಯ, ಪರಿಹಾಸಗಳ ಸ್ಥಾನ' ಶ್ರೀ. ಜಿ. ಪಿ. ರಾಜರತ್ನಂ, ಎಂ. ಎ. ಬೆಂಗಳೂರು	'ಯುಗ ಪಶು' (ದೃಶ್ಯಾವಳಿ)
೧೮	'ಸಾರಜನಕ' ಶ್ರೀ. ಎಚ್. ಸುಬ್ಬಾಜೋಯಿಸ್. ಎಂ ಎಸ್. ಸಿ. ಬೆಂಗಳೂರು	'ಒಂದೇ ಹಾಡು' (ಗದ್ಯ ನಾಟಕ)
೧೯	'ಭರತಖಂಡದ ಆರ್ಥಿಕ ಸಮಸ್ಯೆಗಳು' ಶ್ರೀ. ವಿ. ಸೀತಾರಾಮಯ್ಯ, ಎಂ. ಎ., ಬೆಂಗಳೂರು	'ಹಿಂದಿನ ಕಾಲ' (ಗೀತಾ ನಾಟಕ)
೨೦	'ಪಾಶ್ಚಾತ್ಯರಿಂದ ನಮಗೇನು ಲಾಭ?' ಸರ್ ಟಿ. ವಿಜಯರಾಘವಾಚಾರ್ಯರವರು	'ಸೀತಾಪಹರಣ' (ಕಿನ್ನರ ನೃತ್ಯ)
೨೧	'ಅನ್ನ ಸಮಸ್ಯೆ' ಶ್ರೀ. ದ. ರಾ. ಬೇಂದ್ರೆ ಎಂ. ಎ, ಧಾರವಾಡ	'ಭಾರತವಾಚನ' (ಶ್ರೀ. ಸಂಪತ್ಕುಮಾರಾಚಾರ್ಯರಿಂದ)
೨೨	'ನಾಳಿನ ಸಂಸ್ಕೃತಿ' ಶ್ರೀ. ವಿ. ಕೃ. ಗೋಕಾಕ್, ಎಂ. ಸಾಂಗ್ಲಿ.	'ಸೀತಾಪಹರಣ' (ಭುವನರಾವರ್ತನೆ)

ಶ್ರೀ. ಎಂ. ಸದಾಶಿವ ರಾವ್, ಅಧ್ಯಕ್ಷರು.

ಶ್ರೀ. ಸಿ. ಎಸ್. ಶಾಸ್ತ್ರಿ, ಶ್ರೀ. ಬಿ. ರಾಮಚಂದ್ರ ರಾವ್, ಕಾರ್ಯದರ್ಶಿಯರು.



ಯುದ್ಧಕಾಲದಲ್ಲಿ ಪಾರಿವಾಳಗಳ ಸೇವೆ

ಯುರೋಪದಲ್ಲಿ ಈಗ ಪುನಃ ಯುದ್ಧವಾರಂಭವಾಗಿದೆ. ಈ ಕಾರಣದಿಂದಲೇ ಪಾರಿವಾಳಗಳ ಮೂಲಕ ಪತ್ರವ್ಯವಹಾರವನ್ನು ಮಾಡುವ ಕಡೆಗೆ ಯುರೋಪದ ರಾಷ್ಟ್ರಗಳ ಲಕ್ಷ್ಯವು ಸೆಳೆಯಲ್ಪಟ್ಟಿದೆ. ಕೆಲವು ದಿನಗಳ ಹಿಂದೆ ತಾನೇ ಕೆಂಟನ ಡಚೆಸರವರು ಬರ್ಮಿಂಗ್ಹಾಮಿನಲ್ಲಿ ಡನ್ಲಪ ಟಾಯರ ಕಂಪೆನಿಯ ಪರವಾಗಿ ಪಾರಿವಾಳಗಳ ಒಂದು ಅಂಚೆಕಟ್ಟೆಯನ್ನು ತೆರೆದರು. ಆದರಿಂದಲೇ ಯುದ್ಧಕಾಲದಲ್ಲಿ ಪಾರಿವಾಳಗಳು ಮಾಡುವ ಸೇವೆಯು ಎಷ್ಟು ಮಹತ್ವದ್ದಾಗಿದೆ ಎಂಬುದು ತಿಳಿಯುತ್ತದೆ. ಯುದ್ಧಕಾಲದಲ್ಲಿ ಯುದ್ಧದಲ್ಲಿ ಸೇರಿಕೊಂಡ ಅಥವಾ ತಟಸ್ಥ ರಾಷ್ಟ್ರವು ಪತ್ರವ್ಯವಹಾರ ಮಾಡುವುದು ಅಥವಾ ಸಂದೇಶಗಳನ್ನು ಕಳುಹಿಸಿ ಕೊಡುವುದು ಕಷ್ಟವಾಗುತ್ತದೆ. ಆಗ ಅಂಚೆಕಟ್ಟೆಯ ಕೆಲಸಗಳನ್ನು ಪಾರಿವಾಳಗಳು ಮಾಡುವವು.

ಕಳೆದ ಮಹಾಯುದ್ಧ ಕಾಲದಲ್ಲಿ ಬೇರೆ ಬೇರೆ ಸೈನಿಕ ಠಾಣೆಗಳಿಗೆ ಸಂದೇಶಗಳನ್ನು ಕಳುಹಿಸಿಕೊಡುವುದಕ್ಕೋಸ್ಕರ ಪಾರಿವಾಳಗಳನ್ನು ಉಪಯೋಗಿಸಿದ್ದರು. ಆಗ ಅಕ್ಕಿಯ ಅಂಟಿನಿಂದ ತಯಾರಿಸಿದ ಬಹಳ ಹಗುರವಾದ ಕಾಗದದಲ್ಲಿ ಸಂದೇಶಗಳನ್ನು ಬರೆದು, ಅದನ್ನು ಸುರುಳಿ ಸುತ್ತಿ ಪಾರಿವಾಳದ ಕಾಲಿಗೆ ಕಟ್ಟಿ, ಪಾರಿವಾಳವನ್ನು ಹಾರಿಸುತ್ತಿದ್ದರು. ಪಾರಿವಾಳವು ಗೊತ್ತಾದ ಸ್ಥಳಕ್ಕೆ ಹಾರಿ ಆ ಸಂದೇಶಗಳನ್ನು ಒಪ್ಪಿಸುತ್ತಿದ್ದಿತು. ಆದರೆ ಈಗ ಸಂದೇಶಗಳನ್ನು ಕಳುಹಿಸಿಕೊಡುವ ಕ್ರಮದಲ್ಲಿ ಬಹಳ ಸುಧಾರಣೆಗಳಾಗಿರುವವು. ಮೊದಲು ಕಾಗದದ ದೊಡ್ಡ ಹಾಳೆಗಳಲ್ಲಿ ಬರೆದು ಮುಗಿಸುತ್ತಿದ್ದ ಸಂದೇಶಗಳನ್ನೇ ಅಂಚೆ ಚೀಟಿಗಿಂತ ಹೆಚ್ಚು ದೊಡ್ಡದಾಗಿರದ ಸಣ್ಣ ಕಾಗದ ತುಂಡುಗಳಲ್ಲಿ ಫೋಟೋ ತೆಗೆದು, ಅಂಥ ೨೫ ತುಂಡುಗಳನ್ನು ಎಲ್ಯುಮಿನಿಯಮಿನ ಸಣ್ಣ ಕರಡಿಗೆಯಲ್ಲಿ ಇಟ್ಟು, ಆ ಕರಡಿಗೆಯನ್ನು ಪಾರಿವಾಳದ ಕಾಲಿಗೆ ಕಟ್ಟುವರು. ಹೀಗೆ ಒಂದೊಂದು ಬಾರಿಗೆ ೩೫೦೦೦ ಶಬ್ದಗಳಷ್ಟು ದೀರ್ಘ ಸಂದೇಶವನ್ನು ಈಗ ಕಳುಹಿಸಿಕೊಡುವುದು ಸಾಧ್ಯವಾಗಿರುವುದು. ಇಂಥ ಸಣ್ಣ ಕಾಗದ ತುಂಡುಗಳು ಬಂದು ಮುಟ್ಟಿದೊಡನೆ ದುರ್ಬೀನು ಇರುವ ಒಂದು ಯಂತ್ರದಲ್ಲಿಟ್ಟು, ಕಾಗದದ ದೊಡ್ಡ ಹಾಳೆಯ ಮೇಲೆ ಪ್ರತಿಲಿಪಿ ತೆಗೆದು ಓದುವರು. ಶಸ್ತ್ರಾಸ್ತ್ರ ಯಂತ್ರೋಪಕರಣಗಳ ಮೂಲಕವೇ ಯುದ್ಧವಾಗುವ ಈ ವೈಜ್ಞಾನಿಕ ಕಾಲದಲ್ಲಿ ಕೂಡ ಯುದ್ಧಕಾಲದಲ್ಲಿ ಪಾರಿವಾಳಗಳ ಸೇವೆಯನ್ನು ತೆಗೆದುಕೊಳ್ಳುವ ಪುರಾತನ ಪದ್ಧತಿಯು ಇನ್ನೂ ಅನುಸರಣೆಯಲ್ಲಿದೆ ಎಂಬುದು ಆಶ್ಚರ್ಯದ ಸಂಗತಿಯಲ್ಲವೇ?

ಹೌದು; ಅದಕ್ಕೆ ಕೆಲವು ಕಾರಣಗಳಿವೆ. ಸಂದೇಶಗಳನ್ನು ಮನುಷ್ಯರ ಮೂಲಕ ಕಳುಹಿಸಿಕೊಡುವ ಸಂದರ್ಭದಲ್ಲಿ ಆ ಸಂದೇಶಗಳು ಶತ್ರುಪಕ್ಷದವರ ಕೈಗೆ ಬೀಳುವ ಸಂಭವಗಳು ಹೆಚ್ಚು ಇರುತ್ತವೆ. ಅಲ್ಲದೆ ಆ ಸಂದೇಶಗಳು ಮುಟ್ಟುವುದಕ್ಕೆ ಕಾಲವಿಳಂಬವೂ ಆಗುತ್ತದೆ. ಅನೇಕ ಸಂದರ್ಭಗಳಲ್ಲಿ ಅವು ತಲಪಬೇಕಾದ ಠಾಣೆಯನ್ನು ತಲಪದೆಯೇ ಇರಬಹುದು. ಆದರೆ ಪಾರಿವಾಳಗಳ ಮೂಲಕ ಹೀಗಾಗುವುದು ಅಪರೂಪ. ಅವು ಸಂದೇಶಗಳನ್ನು ತೆಗೆದುಕೊಂಡು ಆಕಾಶಮಾರ್ಗವಾಗಿ ಹಾರಿಹೋಗುವಾಗ ಅವುಗಳು ಬಹು ಸಣ್ಣ ಚುಕ್ಕಿಗಳಂತೆ ಕಾಣುವವಾದ್ದರಿಂದ ಶತ್ರುಗಳು ಅವುಗಳನು ಗುರುತಿಸುವುದೂ, ಹಿಡಿಯುವುದೂ ಕಷ್ಟಕರವಾಗಿದೆ. ಆದ್ದರಿಂದ ಸಂದೇಶಗಳು ಶತ್ರುಪಕ್ಷದವರ ಕೈಗೆ ಬಿದ್ದು ಹಾನಿಯಾಗುವ ಅಥವಾ ಅವು ನಷ್ಟವಾಗುವ ಸಂದರ್ಭಗಳು ಕಡಿಮೆ. ಎಂಥ ಪ್ರತಿಕೂಲ ಪರಿಸ್ಥಿತಿ ಇದ್ದರೂ ತಮ್ಮ ದಾರಿಯನ್ನೇ ಗುರುತಿಸಿಕೊಂಡು ಹೋಗುವ ಒಂದು ವಿಶೇಷ ತರದ ಸ್ವಾಭಾವಿಕ ಗುಣವು ಪಾರಿವಾಳಗಳಿಗಿರುವದರಿಂದ ಅವು ದಾರಿ ತಪ್ಪುವದೂ ಕಡಿಮೆ. ಮನುಷ್ಯನು ಒಂದೂರಿಂದ ಇನ್ನೊಂದೂರಿಗೆ ಹೋಗಬೇಕಾದರೆ ನೆಟ್ಟಗೆ ಒಂದೇ ದಿಕ್ಕನ್ನು ಹಿಡಿದು ಹೋಗಲಾರನು. ಸುತ್ತುಮುತ್ತಿನ ದಾರಿಯನ್ನು ಹಿಡಿದು ಹೋಗಬೇಕು. ಪಾರಿವಾಳಗಳು ಒಂದೇ ದಿಕ್ಕು ಹಿಡಿದು ಹೋಗಬಲ್ಲುವಾದ್ದರಿಂದ ಸಂದೇಶಗಳು ಮುಟ್ಟಲಿಕ್ಕೆ ಕಾಲವಿಳಂಬವಾಗುವುದಿಲ್ಲ. ಇವೇ ಕಾರಣಗಳಿಂದ ಈ ಪುರಾತನಪದ್ಧತಿಯು ಈಗಲೂ ಅನುಸರಣೆಯಲ್ಲಿದೆ.

ಪಾರಿವಾಳಗಳ ಮೂಲಕ ಪತ್ರವ್ಯವಹಾರವನ್ನು ನಡೆಸುವ ಕ್ರಮವು ಬಹಳ ಹಿಂದಿನಿಂದಲೂ ಇತ್ತೆಂಬುದಕ್ಕೆ ಕೆಲವು ಆಧಾರಗಳು ಇವೆ. ಪುರಾತನ ಕಾಲದ ಪರ್ಶಿಯನರು ಪತ್ರವ್ಯವಹಾರಕ್ಕೆ ಪಾರಿವಾಳಗಳನ್ನು ಉಪಯೋಗಿಸುತ್ತಿದ್ದರು. ಆ ಕಾಲದಲ್ಲಿ ಸ್ಪರ್ಧೆಯಾಟಗಳು ನಡೆಯುತ್ತಿದ್ದಾಗ ಗ್ರೀಸ ದೇಶದ ಜನರು ಸೋಲು ಗೆಲವುಗಳ ಸಮಾಚಾರಗಳನ್ನು ದೂರದೂರದ ಪಟ್ಟಣಗಳಿಗೆ ಕೂಡ ಪಾರಿವಾಳಗಳ ಮೂಲಕ ಕಳುಹಿಸಿಕೊಡುತ್ತಿದ್ದರು. ದೀರ್ಘ ಸಮಯದ ತನಕ ಮುತ್ತಿಗೆಗಳಾದಾಗ ಮುತ್ತಲ್ಪಟ್ಟವರಿಗೆ ಪಾರಿವಾಳಗಳ ಮೂಲಕವಲ್ಲದೆ ಹೊರಗಿನ ಪ್ರಪಂಚದೊಂದಿಗೆ ಪತ್ರವ್ಯವಹಾರ ಮಾಡುವ ಬೇರೆ ಉಪಾಯವೇ ಇರಲಿಲ್ಲ.

೧೮೭೦-೭೧ರಲ್ಲಿ, ಫ್ರಾನ್ಸು ಮತ್ತು ಜರ್ಮನಿಗಳೊಳಗೆ ಭೀಕರ ಯುದ್ಧವು ನಡೆದಿದ್ದಾಗ ಪೇರಿಸಿಗೆಂದು ಬರೆಯಲ್ಪಟ್ಟ ಪತ್ರಗಳು ಮೊದಲು ಟೋರ್ಸ ಅಂಚೆಖಾನೆಗೆ ಹೋಗುತ್ತಿದ್ದುವು. ಅಲ್ಲಿ ಸಣ್ಣ ಕಾಗದ ತುಂಡುಗಳ ಮೇಲೆ ಅವುಗಳ ಫೋಟೊ ತೆಗೆಯಲ್ಪಟ್ಟು ಅಚ್ಚಾಗುತ್ತಿದ್ದುವು. ಅನಂತರ ಅವುಗಳನ್ನು ಸುರುಳಿ ಸುತ್ತಿ ಪಾರಿವಾಳಗಳ ಕಾಲಿಗೆ ಕಟ್ಟಿ ಅವನ್ನು ಬಿಟ್ಟುಬಿಡುತ್ತಿದ್ದರು. ೨೦ ಶಬ್ದಗಳಿಗೆ ಮೀರಿರದ ಒಂದೊಂದು ಪತ್ರಕ್ಕೆ ೫ ಪೆನ್ನಿ ಫೀಸು ಕೊಡಬೇಕಾಗುತ್ತಿತ್ತು. ಈ ಯುದ್ಧವಾದ ಅನಂತರ ಅನೇಕ ರಾಷ್ಟ್ರಗಳ ಲಕ್ಷ್ಯವು ತರಬೇತಿ ಕೊಟ್ಟ ಇಂಥ ಪಾರಿವಾಳಗಳ ಕಡೆಗೆ ಹರಿಯಿತು.

ಮುಂದೆ ಬೋವರ ಯುದ್ಧಕಾಲದಲ್ಲಿ ಕೂಡ ಪಾರಿವಾಳಗಳನ್ನು ಅಂಚೆಕಟ್ಟೆಯ ಕೆಲಸ ಕಾರ್ಯಗಳನ್ನು ನಿರ್ವಹಿಸಲಿಕ್ಕೆ ಉಪಯೋಗಿಸಿದ್ದರು. ಆಗ ಅವುಗಳು ಬಹಳ ಸೇವೆಯನ್ನು ಸಲ್ಲಿಸಿದ್ದುವು. ಆ ಸಮಯದಲ್ಲಿ ಫ್ರಾನ್ಸು ಒಂದೇ ದೇಶವು ೫೦೦೦ ಪಾರಿವಾಳಗಳನ್ನು ಈ ಕಾರ್ಯಕ್ಕೆ ಉಪಯೋಗಿಸುತ್ತಿದ್ದಿತು. ಆಗ ರೇಡಿಯೋ, ತಂತಿ ಇಲ್ಲದ ತಂತಿ ಇತ್ಯಾದಿಗಳ ಆವಿಷ್ಕಾರಗಳಾಗಿರಲಿಲ್ಲ. ಈಗಲಾದರೂ ಅವುಗಳ ಮೂಲಕ ಸಂದೇಶಗಳನ್ನು ಕಳುಹಿಸುವುದಾದರೆ, ಆ ಸಂದೇಶಗಳನ್ನು ಶತ್ರುಪಕ್ಷದವರು ತಿಳಿಯುವುದು ಸುಲಭ. ಆದ್ದರಿಂದ ಬೋವರ ಯುದ್ಧಕಾಲದಲ್ಲಿ ಪಾರಿವಾಳಗಳು ಯುದ್ಧಹಡಗುಗಳಿಗೆ ಅಮೂಲ್ಯ ಸೇವೆಯನ್ನು ಕೊಟ್ಟವು. ಕಳೆದ ಮಹಾಯುದ್ಧ ಕಾಲದಲ್ಲಿ ಕೂಡ ಅವುಗಳು ಮಾಡಿದ ಸೇವೆಯು ಅಲ್ಪವಾಗಿರಲಿಲ್ಲ.

ಆದರೆ ಆಕಾಶಮಾರ್ಗವಾಗಿ ಪಾರಿವಾಳಗಳ ಈ ಸೇವೆಯು ನಮಗೆ ಹೆಚ್ಚು ಅನುಕೂಲವಾಗಿ ಕಂಡುಬಂದರೂ, ಪಾರಿವಾಳಗಳಿಗೆ ಅದು ತ್ರಾಸದಾಯಕವಾಗಿ ಇರುತ್ತದೆ. ವಾತಾವರಣವು ಪ್ರತಿಕೂಲವಾಗಿದ್ದರೂ, ಮಳೆ ಬರುತ್ತಲಿದ್ದರೂ ಶೀತ ಗಾಳಿಯು ಬೀಸುತ್ತಲಿದ್ದರೂ ಕತ್ತಲೆಯಾಗಿದ್ದಾಗಲೂ ಪಾರಿವಾಳಗಳು ಆಕಾಶಮಾರ್ಗವಾಗಿ ಹೋಗಲಾರವು. ಅಲ್ಲದೆ ಸಂದೇಶಗಳನ್ನು ತೆಗೆದುಕೊಂಡು ಹೋಗುವ ಮಿತ್ರಮಂಡಲಿಯ ಈ ಪ[ಾರಿವಾಳ]ಗಳನ್ನು ನಡುದಾರಿಯಲ್ಲಿಯೇ ಹಿಡಿ[ದು]ಕೊಂಡು ತಿನ್ನಲಿಕ್ಕೆ ಕಳೆದ ಮಹಾಯು[ದ್ಧ]ಕಾಲದಲ್ಲಿ ಜರ್ಮನರು ಗಿಡುಗಗಳ[ನ್ನು] ಸಾಕಿ ಪಳಗಿಸಿ ಇಟ್ಟಿದ್ದರು. ಮತ್ತೆ ಗಿಡುಗಗಳನ್ನು ಹೆದರಿಸಿ ಓಡಿಸಲಿಕ್ಕೆ ಪಾ[ರಿ]ವಾಳಗಳ ಕಾಲುಗಳಿಗೆ ಚಿಗಲುಗಳನ[್ನೂ] ಗೆಜ್ಜೆಗಳನ್ನೂ ಕಟ್ಟಲಾರಂಭಿಸಿದರು. ಇ[ವು]ಗಳ ಶಬ್ದಗಳಿಗೆ ಹೆದರಿ ಗಿಡುಗಗ[ಳು] ಪಾರಿವಾಳಗಳ ಸುದ್ದಿಗೆ ಬರುತ್ತಿದ್ದಿಲ್ಲ.

ಈಗಲೂ ಬ್ರಿಟಿಷ ಸೇನೆಯಲ್ಲಿ ಪ[ಳಗಿ]ಸಿದ ಪಾರಿವಾಳಗಳು ಈ ಕಾರ್ಯ[ಕ್ಕೆ] ಉಪಯೋಗಿಸಲ್ಪಡುತ್ತಿವೆ.

TO LET.

From 1st November, 193[illegible] Spacious building well know[n] as "VARTHAKA VILAS" [illegible] Bunder of Mangalor[e] EMINENTLY SUITED F[or] Offices or Mercantile Fir[ms] or Banks. With a comfo[rt]able accommodation, g[o]downs, garbling and curi[ng] sheds. In the centre [of] business quarters. Facing t[he] sea. WITH ALL CONVE[N]IENCES for residentail pu[r]poses also. With mo[tor] garage. On short or lo[ng] lease. Inspection can [be] arranged.

Apply to:

1 Sri A. Srinivasa Pai, B.A.,[illegible]
"Hill House", Kasarg[od]
S. Kana[ra]

OR

2 Sri B. Vaikunta Baliga, B.A.,B[illegible]
"Loretto Villa", Kodial[bail]
Mangal[ore]





ನೋಟಗಳು

ಮಿ। ಜಿನ್ನರು 'ಡೆಮೊಕ್ರಸಿ'ಗೆ ವಿರೋಧಿಯಾಗಿದ್ದಾರೆ! 'ಫ್ಯಾಸಿಸಂ'ನ್ನು ಕಂಡರೂ ಅವರಿಗೆ ಆಗುವುದಿಲ್ಲವಂತೆ! ಹಾಗಾದರೆ, ಅವರು ಕಮ್ಯುನಿಸ್ಟರೆ? ಹೀಗೆಂಬ ಹಲವರ ಸಂದೇಹವಾಗಿದೆ.

◈

'ಶಕ್ತಿಯಲ್ಲಿಯೇ ನ್ಯಾಯ ನಿಂತಿದೆ' ಹೀಗೆಂದು ಹಿಟ್ಲರನು (ತನ್ನ ಆತ್ಮ ಚರಿತ್ರೆಯಲ್ಲಿ) ಗರ್ಜಿಸಿದನು!

ಹಾಗಾದರೆ ಇಂದಿನ ಹಿಟ್ಲರನ ಶಾಂತಿ ಘೋಷಣೆಯಲ್ಲಿಯೂ ಶಕ್ತಿಗೆ ವಿಜಯ ದೊರಕುವ ಶರ್ತವುಂಟೆ?

◈

ಕಾಮನ್ಸ್ ಸಭೆಯಲ್ಲಿ ಮಿ। ಸಂಡೆರ್ಸನ್ ಎಲಿನರು ಇತರ ರಾಷ್ಟ್ರಗಳಿಗೆ ಇಂಡಿಯಾದ ಮೇಲೆ ಕಣ್ಣಿದೆ! ನಿಜವಾಗಿಯೂ ಇತರರಿಗಿಂತ ನನ್ನ ಆಳ್ವಿಕೆಯಲ್ಲಿ ಹಿಂದೂಸ್ಥಾನವು ಸಮಧಿಕ ಸಂರಕ್ಷಣೆಯಿಲ್ಲವೇ? ಎಂಬ ಮಹಾ ಘೋಷಣೆಯೊಂದನ್ನು ಮಾಡಿದರು.

ಆದರೆ ಇಂಡಿಯವು ಇತರರ ಮತ್ತು ಬ್ರಿಟಿಷರ ಆಳ್ವಿಕೆಯನ್ನು ಹೋಲಿಸಿ ನೋಡಿ ಯಾವುದ ಒಳ್ಳೆಯದು ಯಾವುದು ಕೆಟ್ಟದು ಎಂಬುದನ್ನು ವಿಚಾರಿಸುತ್ತಿಲ್ಲ! ತನ್ನನ್ನು ತಾನೇ ಆಳಿಕೊಳ್ಳುವುದು ಎಲ್ಲದಕ್ಕಿಂತಲೂ ಅದಕ್ಕೆ ಸುರಕ್ಷಿತವೂ ಸುಖದಾಯಕವೂ ಆಗಿದೆಯೆಂಬುದನ್ನು ಅದು ತಿಳಿದಿದೆಯೆಂದು ಅವರು ಮರೆತು ಬಿಟ್ಟಂತಿದೆ.

◈

ಗಾಂಧಿಜಿಯವರ ಜನ್ಮ ದಿನೋತ್ಸವ ಸುಮುಹೂರ್ತದಲ್ಲಿ ಅಖಿಲ ಭಾರತವೇ ಅವರನ್ನು ಕೊಂಡಾಡುತ್ತಿರುವಾಗ, ಲಿಬರಲ್ ಪಕ್ಷದವರು ಮತ್ತು ಹಿಂದೂ ಮಹಾಸಭೆಯವರು ಗಾಂಧಿಜಿಯವರನ್ನು ದೂರುತ್ತಾ ಒಂದು ಜತೆಯ ಪ್ರಕಟಣೆಯನ್ನು ಹೊರಡಿಸಿದರು.

ಇವರಲ್ಲಿ ಮುಖ್ಯರಾದವರಿಬ್ಬರೂ ಸರ್ ಬಿರುದು ಪಡೆದವರು. ಆದರೆ ಕೆಲವರಿಗೆ ಅದೂ ಇಲ್ಲ. ಹಿಂದೆ ಹೊಗಳಿದ್ದಕ್ಕೆ 'ಸರ್' ಎಂದು ಪಡೆದರು ಮೊದಲನೆಯಿಬ್ಬರು. ಬಾಕಿಯುಳಿದವರು ಗಾಂಧಿಜಿಯವರನ್ನು ದೂರಿ ತಮ್ಮ ಹೆಸರನ್ನು ಹೇಳಿ ಮಾಡಿಕೊಳ್ಳುತ್ತಾರಲ್ಲ ಎಂಬುದೊಂದು ಸಂತಸದ ವಿಷಯ!

ಆದರೆ ದೂರಿದವರನ್ನೂ ಹೊಗಳುವುದು ಗಾಂಧಿಜಿಯವರ ತತ್ವ! ಹಾಗಾಗಿ ದೂರಿಯಾದರೂ ಅವರಿಂದ ಹೊಗಳಿಸಿಕೊಳ್ಳೋಣವೆಂದು ಅವರು ಭಾವಿಸಿರಬಹುದು.

ಆದರೆ ಬಿರುದು ಹೆಸರುಗಳನ್ನು ಗಾಂಧಿಜಿಯವರು ಕೊಡುವುದಿಲ್ಲವಂತೆ!

◈

ಶ್ರೀ ಸಾವರ್ಕಾರರು ಹೇಳುತ್ತಾರೆ 'ಕಾಂಗ್ರೆಸನ್ನು ದೇಶದ ಏಕಮಾತ್ರ ಪ್ರತಿನಿಧಿ ಸಂಸ್ಥೆಯೆಂದು ಬಹುಮಾನಿಸುವುದು ಭಾರತದ ಪ್ರಜಾಪ್ರಭುತ್ವವನ್ನು ಹಾಳು ಮಾಡಿದಂತೆ'ಯೆಂದು.

ಇದು ಯಾತಕ್ಕೆಂದು ಗೊತ್ತೆ?

ಕೆಲಸಮಯದ ಹಿಂದೆ ಹಿಟ್ಲರನಿಗೆ ಪ್ರಜಾಪ್ರಭುತ್ವವಾದೀ ಸಾವರ್ಕಾರರು ಅಭಿವಂದನೆಯ ತಂತಿಯನ್ನು ಕಳುಹಿಸಿದಂತೆ ಕಾಂಗ್ರೆಸು ಕಳುಹಿಸಲಿಲ್ಲವಷ್ಟೆ?

ಹಿಟ್ಲರ್ ಧೋರಣೆಗೂ ಭಾರತದ ಪ್ರಜಾಪ್ರಭುತ್ವಕ್ಕೂ ಜತೆಯುಂಟೇ? ಎಂಬುದು ಬ್ಯಾರಿಸ್ಟರ್ ಸಾವರ್ಕಾರರಿಗೇ ಗೊತ್ತು!

◈

ದಿಲ್ಲಿಯಲ್ಲಿ ಕಾಂಗ್ರೆಸು ಧುರೀಣರು ಮತ್ತು ಮುಸ್ಲಿಂ ಲೀಗು ಮುಖಂಡರೂ ಒಂದಾಗಿ ಮಾತುಕತೆ ನಡೆಸುತ್ತಿರುವುದರ ಫಲಿತಾಂಶವೇನೆಂಬುದು ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ.

◈

ಆದರೆ, ಕಾಂಗ್ರೆಸು ಮತ್ತು ಮುಸ್ಲಿಂ ಲೀಗುಗಳು ಅನ್ಯೋನ್ಯ ಒಟ್ಟುಗೂಡುವ ಚಿಹ್ನೆಯೇನೋ ತೋರುತ್ತದೆ!

◈

ಪಾಪ! ಜೆಟ್ಲೆಂಡ್ ಸಾಹೇಬರು ಇದರಿಂದ ದುಃಖಿಸುತ್ತಿರಬಹುದು.

ಸರ್ ಪನ್ನೀರಸೆಲ್ವರವರು ಮದ್ರಾಸಿನಲ್ಲಿ ಕಾಂಗ್ರೆಸು ಸರಕಾರವನ್ನು ದೂಷಿಸುತ್ತ, ತಮಿಳರಿಗೆ ಇಂದು ಸ್ವಾತಂತ್ರ್ಯವು ಬೇಕಾಗಿದೆಯೆಂದು ಬೊಬ್ಬಿಟ್ಟರು.

◈

ಅದಕ್ಕೆ ಉತ್ತರವಾಗಿ ಶ್ರೀ ಅರುಂಡೇಲಿಯವರು ಮಿಸ್ಸಲ್ಮಾಡರೆ ಕಾಂಗ್ರೆಸಿನವರಲ್ಲಿ ರಾಷ್ಟ್ರಪ್ರೇಮವಾದರೂ ಉಂಟೆಂದೂ, ಇಂತಹ ಜಾತೀಯತೆಯ ಸಂಕೋಚಿತ ಮನೋಭಾವನವರು ಅಧಿಕಾರಕ್ಕೆ ಬರುವುದು ಸರ್ವಥಾ ಬೇಡವೆಂದೂ ಹೇಳಿದರು.

◈

ಮದ್ರಾಸಿನಲ್ಲಿ ತಮಿಳರಿಗೆ ಸ್ವಾತಂತ್ರ್ಯ ಬೇಕೆಂದು ವಾದಿಸಿದ ಮಹಾಶಯರನ್ನು ಪೈಸರಾಯರು ಈಗ ದಿಲ್ಲಿಗೆ ಕರೆದಿರುವರಷ್ಟೆ? ಅಲ್ಲಿ ತಮಿಳರಿಗೂ ಸ್ವಾತಂತ್ರ್ಯ, ಬೇರೆ ಸ್ವಾತಂತ್ರ್ಯ ಕೊಡುವುದಿಷ್ಟರೆ ನನಗೆ ಕೊಡಿ ಎಂದು ಪೈಸರಾಯರೊಡನೆ ಬೇಡಬಹುದು.

ದಸರಾ ಮಹೋತ್ಸವ, ಪುತ್ತೂರು ೧೯೩೯

ಉಪನ್ಯಾಸಗಳು ಪ್ರತಿದಿನ ಸಾಯಂಕಾಲ ೬ಕ್ಕೆ ಹೈಯರ್ ಎಲಿಮೆಂಟರಿ ಹುಡುಗಿಯರ ಶಾಲೆಯಲ್ಲಿ; ವಿನೋದಗಳು ಸಾಯಂಕಾಲ ೭ ಘಂಟೆಗೆ ಹುಡುಗರ ಶಾಲೆಯಲ್ಲಿ ನಿತ್ಯ ಸಾಯಂ. ೫ರಿಂದ ೬ ಘಂಟೆಯ ತನಕ ವ್ಯಾಯಾಮ ಪ್ರದರ್ಶನ

ಅಕ್ಟೋಬರ ತಾರೀಕು	ಉಪನ್ಯಾಸಗಳು	ವಿನೋದಗಳು
೧೩	'ಬ್ರಿಟಿಷ್ ಸಾಮ್ರಾಜ್ಯತ್ವ' ಶ್ರೀ ನಾ ಕಸ್ತೂರಿ ಎಂ ಎ ಮೈಸೂರು	ಅಲ್ಲಾವುದ್ದೀನ, (ನೃತ್ಯ)
೧೭	'ವಿಜಯ ನಗರದ ದಿನಗಳು' ಶ್ರೀ ಎಚ್ ರಾಮರಾಯರು, ಮಂಗಳೂರು	ಯಕ್ಷಗಾನ
೧೫	'ಚೀನದ ಸಂಸ್ಕೃತಿ' ಶ್ರೀ ಹನುಮಂತರಾವ್, ಕೊಣ್ಣೂರು, ಎಂ ಬಿಜಾಪುರ	'ಬಿಜಾಪುರದ ಲಾವಣಿಗಳು' (ಶ್ರೀ ಮಧುಲಿಂಗ ಹಲಸಂಗಿ)
೧೬	'ಆರೋಗ್ಯ ಜೀವನ' ಪ್ರೊ ಕೆ ವಿ ಐಯ್ಯರ್, ಬೆಂಗಳೂರು	'ಇಸ್ಪೀಟು ಗುಲಾಮ' (ಗದ್ಯ ನಾಟಕ)
೧೭	'ಸಾಹಿತ್ಯದಲ್ಲಿ ವಿಡಂಬನ, ವ್ಯಂಗ್ಯ, ಪರಿಹಾಸಗಳ ಸ್ಥಾನ' ಶ್ರೀ ಜಿ ಪಿ ರಾಜರತ್ನಂ, ಎಂ ಎ ಬೆಂಗಳೂರು	'ಯುಗ ಪಶು' (ಪ್ರಹ್ಸನ)
೧೮	'ಸಾರಜನಕ' ಶ್ರೀ. ಎಚ್ ಸುಬ್ಬಾ ಜೋಯಿಸ್, ಎಂ. ಎಸ್ ಸಿ. ಬೆಂಗಳೂರು	'ಬಂದೇ ಹಾಡು' (ಗದ್ಯ ನಾಟಕ)
೧೯	'ಭರತಖಂಡದ ಆರ್ಥಿಕ ಸಮಸ್ಯೆಗಳು' ಶ್ರೀ ವಿ ಸೀತಾರಾಮಯ್ಯ, ಎಂ ಎ, ಬೆಂಗಳೂರು	'ಹಿಂದಿನ ಕಾಲ' (ಗೀತ ನಾಟಕ)
೨೦	'ಪಾಶ್ಚಾತ್ಯರಿಂದ ನಮಗೇನು ಲಾಭ?' ಸರ್ ಟಿ ವಿಜಯರಾಘವಾಚಾರ್ಯರವರು	'ಸೀತಾಪಹರಣ' (ಕಿನ್ನರ ನೃತ್ಯ)
೨೧	'ಅನ್ನ ಸಮಸ್ಯೆ' ಶ್ರೀ ದ ರಾ ಬೇಂದ್ರೆ ಎಂ ಎ, ಧಾರವಾಡ	'ಭಾರತವಾಚನ' (ಶ್ರೀ ಸಂಪತ್ಕುಮಾರಾಚಾರ್ಯರಿಂದ)
೨೨	'ನಾಳಿನ ಸಂಸ್ಕೃತಿ' ಶ್ರೀ ವಿ ಕೃ ಗೋಕಾಕ್, ಎಮ್ಮ್ ಎ (ಆಕ್ಸನ್)	'ಸೀತಾಪಹರಣ' (ಪುನರಾವರ್ತನೆ)

ಶ್ರೀ. ಎಂ ಸದಾಶಿವ ರಾವ್, ಅಧ್ಯಕ್ಷರು.

ಶ್ರೀ ಸಿ. ಎಸ್. ಶಾಸ್ತ್ರಿ, ಶ್ರೀ. ಬಿ. ರಾಮಚಂದ್ರ ರಾವ್, ಕಾರ್ಯದರ್ಶಿಯರು.

'SECUNDUS'

ವೆಸ್ಟ್ ಎಂಡ್ ಇಕೊನಮಿ ಗ್ರೇಡ್!

'ಸೆಕುಂಡಸ್' ವಾಚುಗಳು

ಸುಂದರವಾದ ಅನೇಕ ಕಾಲ ಬಾಳುವ ಭರವಸೆಯ ವಾಚುಗಳು ಬಹಳ ಕಡಿಮೆ ಕ್ರಯ!

ನಿಕ್ಕಲ್ ಚೆಕ್ಕ್ ರೂ 26
ರೋಲ್ಡ್ ಗೋಲ್ಡ್ ,, 1



'ಸೆಕುಂಡಸ್' ಚಚ್ಛಿಕ



'ಸೆಕುಂಡಸ್' ನ್ಯೂ ಗೆಲ್ಲಿಬರ್ ಟನ್ನೊ
ನಿಕ್ಕಲ್ ಚೆಕ್ಕ್ ರೂ 2೯ ರೋಲ್ಡ್ ಗೋಲ್ಡ್ ರೂ 38
ಎವರ್‌ಬ್ರೈಟ್ ಸಿ ರೂ ೩೨ ೧ ಕೆರೆಟ್ ಚಿನ್ನ ರೂ ೬೩
18,, ,, 93

ಬೆಲೆಯಲ್ಲಿಯೂ ಐಯ್ಕೆಯಲ್ಲಿಯೂ ಸರಿಸಾಟಿಯಿಲ್ಲದ ಆದರ್ಶ ಬಹುಮಾನಗಳು!



ಸೆಕುಂಡಸ್ ಮಿನಿಯೇಚರ್ ಆಯತಾಕಾರ
MINI
ಎ. ಬ್ರೈ ಸ್ಟೀಲ್ ರೂ 32
ರೋಲ್ಡ್ ಗೋಲ್ಡ್ ,, 34
9 ಕೆರೆಟ್ ಚಿನ್ನ ,, 45
18 ,, ,, ,, 65
ಕೆಟಲಾಗು ಧರ್ಮಾರ್ಥ
ವೆಸ್ಟ್ ಎಂಡ್ ವಾಚ್ ಕೊ
ಬೊಂಬಾಯಿ ಮತ್ತು ಕಲ್ಕತ್ತ.

WEST END WATCH Co.
BOMBAY CALCUTTA

ನಮ್ಮ ವೈದ್ಯಕೀಯ ಸಂಶೋಧನೆ ನಂ. ೨

ನಮ್ಮ ದಿನನಿತ್ಯದ ಆಹಾರವು ಹೇಗಿರಬೇಕು?

ಹೊಟೇಲುಗಾರರಿಗೆ ಒಂದು ಮುಖ್ಯ ಸಲಹೆ

ನಮ್ಮ ತಾಯಂದಿರಲ್ಲಿ ಒಂದು ಸೂಚನೆ!

ನಮ್ಮ ದೇಶಕ್ಕೆ ಗೋದಿಗಿಂತ ಅಕ್ಕಿಯ ಅನ್ನವೇ ಉತ್ತಮವಾದದ್ದು ಬೇಯಿಸಿದ ಅಕ್ಕಿಯ ಆಹಾರದಲ್ಲಿ ಹೆಚ್ಚು ಜಲಾಂಶವಿರುವುದರಿಂದ ಶರೀರಕ್ಕೆ ಸೇರಿ ಬೇಗನೇ ಕರಗುವಂತಹುದಾಗಿ ಕಡಿಮೆ ಕಶ್ಮಲವುಳಿಸುವಂತಹುದೂ ಆಗಿರುತ್ತದೆ.

ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿಯನ್ನೇ ನಾವು ಅನ್ನಕ್ಕೆ ಉಪಯೋಗಿಸಬೇಕು ಅಜೆ ಮಸ್ಕತಿ, ಸುಗ್ಗಿ, ಗುಡ್ಡ ಇತ್ಯಾದಿಗಳನ್ನು ನಾವು ಉಪಯೋಗಿಸಬೇಕು ಮಿಲ್ಲಿನಿಂದ ಒದಗಿಸಿದ ಅಕ್ಕಿಯು ನೋಡಲಿಕ್ಕೆ ಚೊಕ್ಕಟವಾಗಿ ಬಾಳಿಕೆಯಾಗಿ ಕಂಡರೂ ಅದರಲ್ಲಿ ದೇಹದ ಬೆಳವಣಿಗೆಗೆ ಸಾಕಷ್ಟು ಪುಷ್ಟಿಕರವಾದ ವಸ್ತುಗಳಿಲ್ಲ.

ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿಯಲ್ಲಿ ವೈಟಮಿನ್ ಬಿ ಮತ್ತು ಬೇಕಾದಷ್ಟು ಪ್ರೊಟೀನು ಇವೆ (ಅಕ್ಕಿಯ ಪ್ರೋಟಿನಿನಲ್ಲಿ ಗೋದಿಗಿಂತ ಹೆಚ್ಚಿನ ಪ್ರಾಣಜೀವನ ಸತ್ವ (Protein) ಇದೆ) ಹೀಗಾಗಿ ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿಯು ಗೋದಿಗಿಂತ ಯಾವ ತರದಲ್ಲಿಯೂ ಕಡಿಮೆ ಜೀವನ ಸತ್ವವುಳ್ಳದ್ದಾಗಿರುವುದಿಲ್ಲ (The Protien of rice is of a comparatively high biological value than that of wheat)

ಮಿಲ್ಲಿನಿಂದ ತಯಾರಿಸಿದ ಅಕ್ಕಿಯಲ್ಲಿ ವೈಟಮಿನ್ ಬಿ ಮತ್ತು ಪ್ರೊಟೀನುಗಳು ಏನೂ ಇರುವುದಿಲ್ಲ ಕೈಯಿಂದ ಕುಟ್ಟಿ ಮಾಡಿದ ಅಕ್ಕಿಯನ್ನಾದರೂ ಹೆಚ್ಚು ಸಮಯ ದಾಸ್ತಾಸಿಟ್ಟಲ್ಲಿ ಅದರಲ್ಲಿರುವ ಜೀವಸಾರವು ಹಾಳಾಗಿ ಕಡೆಗೆ ಅದು ನಿಸ್ಸತ್ವವಾಗುವುದು.

ಗೋಧಿಯೊಡನೆ ಅಕ್ಕಿ (ಕೈಯಿಂದ ಕುಟ್ಟಿದ್ದಾಗಲಿ, ಮಿಲ್ಲಿನಲ್ಲಿ ತಯಾರಿಸಿದ್ದಾಗಲಿ)ಯನ್ನು ಹೋಲಿಸಿದರೆ, ಅಕ್ಕಿಯಲ್ಲಿ ಕೇಲ್‌ಶಿಯಂ ಸಾಲ್ಟ್ ಎಂಬ ಲವಣ ಇರುವದಿಲ್ಲ. ಅಕ್ಕಿಯಲ್ಲಿ ಇಲ್ಲದಿರುವ ಈ ಲವಣವನ್ನು ಬೇಕಾದಷ್ಟು ಹಾಲು ಕುಡಿಯುವುದರಿಂದ ಪೂರ್ತಿ ಮಾಡಬಹುದು ಹಾಲು ಸಿಕ್ಕದಿದ್ದಲ್ಲಿ ರಾಗಿಯನ್ನು ಅದರ ಬದಲಾಗಿ ಉಪಯೋಗಿಸಬಹುದು ಕೇಲ್ಶಿಯಂ ಸಾಲ್ಟ್ ಎಂಬ ಈ ಅತ್ಯುತ್ತಮ ಜೀವನಾಧಾರ ವಸ್ತುವಿರುವ ದವಸಗಳಲ್ಲಿ ರಾಗಿಯು ಹೆಚ್ಚು ಪ್ರಾಮುಖ್ಯದ್ದಾಗಿದೆ.

ಹೀಗಾಗಿ ಒಂದು ಹೊತ್ತು ರಾಗಿ, ಎರಡು ಹೊತ್ತು ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿ ಇವುಗಳನ್ನು ನಮ್ಮ ದಿನನಿತ್ಯದ ಆಹಾರವಾಗಿ ತೆಕ್ಕೊಳ್ಳುವುದು ಆರೋಗ್ಯಕ್ಕೂ ದೇಹ ಪುಷ್ಟಿಗೂ ಉತ್ತಮವಾಗಿದೆ ಈ ರೀತಿಯು ನಮ್ಮ ದಿನನಿತ್ಯದ ಆಹಾರ ಕ್ರಮವು ನಮ್ಮಲ್ಲಿನ ವರೆಗೆ ಗೋದಿಯ ಉಪಯೋಗಕ್ಕಿಂತಲೂ ಒಳ್ಳೆಯದು.

ನಮ್ಮ ತಾಯಂದಿರು, ತಮ್ಮ ಮಕ್ಕಳ ಗಂಜಿ ಊಟಕ್ಕೆ ರಾಗಿಯ ಗಂಜಿಯನ್ನೂ, ಮಧ್ಯಾಹ್ನ ರಾತ್ರೆಯ ಊಟಗಳಿಗೆ ಕೈಯಿಂದ ಕುಟ್ಟಿದ ಅಕ್ಕಿಯ ಅನ್ನವನ್ನೂ ಕೊಡುವ ಮನಸ್ಸು ಮಾಡುವರೆ?

[ನಮ್ಮ ಹೋಟೇಲುಗಳ ಮಾಲಿಕರಾದರೂ ರಾಗಿ ಉಪ್ಪಿಟ್ಟು ರಾಗಿ ದೋಸೆಗಳನ್ನು ತಯಾರಿಸಿ, ನಮ್ಮ ದಿನನಿತ್ಯದ ಆಹಾರದಲ್ಲಿ ಜೀವ ಸತ್ವವನ್ನು ಹೆಚ್ಚಿಸಲು ಸಹಾಯ ಮಾಡುವರೆ?]

Ref The Indian Medical Gazette

K. M. S.

ಜಲಾಂತರ್ಯಾಮಿ ನಾವೆಗಳನ್ನು ಕಂಡು ಹಿಡಿಯುವ ಉಪಾಯ

ಬ್ರಿಟಿಷ್ ಫ್ರೆಂಚ್ ವಿಜ್ಞಾನ ಪುರುಷರು, ಪ್ರೊಫೆಸರ್ ಲೇಂಗಿ ವಿಸರ ಧುರೀಣತೆಯಲ್ಲಿ ಜಲಾಂತರ್ಯಾಮಿ ನಾವೆಗಳನ್ನು ಹಿಡಿವ ಸಾಧನೆಯ ಕುರಿತು ಸಂಶೋಧನೆ ಮಾಡುತ್ತಿದ್ದಾರೆ!

ಕತ್ತಲು ಕವಿದ ಆಕಾಶದಂತರದಿಂದ ಹಾರುವ ಕಿರಿಯ ವಿಮಾನವೊಂದನ್ನು ಕಂಡು ಹುಡುಕುವಂತಹ್ದು ಸಾಹಸವಿದು! ವಿಶಾಲ ಸಾಗರದಲ್ಲಿ ಓಡಾಡುವ ಈ ಜರ್ಮನ್ ಜಲಾಂತರ್ಯಾಮಿ ನಾವೆಗಳನ್ನು ಕಂಡುಹುಡುಕುವ ಪ್ರಯತ್ನವೆಂದರೆ!

ಬೆಳಕಿನ (ಕಿರಣದ) ಮೂಲಕ ಅವುಗಳನ್ನು ಕಂಡುಹಿಡಿಯುವುದೆ? ಅದರ ನೀರನ್ನು ಭೇಧಿಸಿ ಕಿರಣಗಳು ಹೋಗಲಾರವು. ಶಬ್ದದಿಂದಲೆ? ಆದರೆ ಯಾವ ರೀತಿಯಲ್ಲಿ ಶಬ್ದವನ್ನು ಆಲಿಸುವುದು?

ಮನುಷ್ಯರ ಕಿವಿಗೆ ಕೇಳಲು ಸಾಧ್ಯವಿಲ್ಲದಷ್ಟು ಸೂಕ್ಷ್ಮ ಶಬ್ದಗ್ರಹಣದಿಂದ ನಾವು ಜಲಾಂತರ್ಯಾಮಿ ನಾವೆಗಳನ್ನು ಚಲನೆಯ ಕುರಿತು ತಿಳಿಯಬೇಕಾಗಿದೆ.

ನೀರಿನ ಅಡಿಯಲ್ಲಿ ಜಲಾಂತರ್ಯಾಮಿ ನಾವೆಗಳ ಚಲನವಾಗುವ ಸ್ಥಳಕ್ಕಿಂತಲೂ ಕೆಳಗಾಗಿ ಒಂದು ಯಂತ್ರವನ್ನು ನಡುತ್ತಾರೆ, ಅದರ ಮೂಲಕ ಆ ಹಡಗ ಗಳ ಚಲನೆಯ ಶಬ್ದವನ್ನು ಹಿಡಿದು ಮೇಲೆ ದಡದಲ್ಲಿ ಕುಳಿತವನು, ಅಲ್ಲಿ ಇಟ್ಟಿರುವ ಒಂದು ಯಂತ್ರದ ಮೂಲಕವಾಗಿ, ಆ ಶಬ್ದವನ್ನು ಹೆಚ್ಚು ವಿವರವಾಗಿ ಕೇಳುತ್ತಾನೆ ಇದರಿಂದ ಎಲ್ಲಿ ಯಾವ ಕಡೆಗೆ ಜಲಾಂತರ್ಯಾಮಿ ನಾವೆಗಳು ಚಲಿಸುತ್ತಿವೆಯೆಂದು ಈಗ ಕಂಡು ಹಿಡಿಯಬಹುದಾಗಿದೆ

ಹಿಟ್ಲರನ ಕೊನೆಯ ಬ್ರಹ್ಮಾಸ್ತ್ರ!

ಡಾನ್ಜಿಗಿನ ಭಾಷಣದಲ್ಲಿ ಹಿಟ್ಲರನು ತನ್ನ ಕೊನೆಯ ಒಂದು ಅಸ್ತ್ರವಿದೆಯೆಂದೂ ಅದನ್ನು ಎದುರಿಸಲು, ಯಾರಿಗೂ ಸಾಧ್ಯವಿಲ್ಲವೆಂದೂ ಹೇಳಿರುವನು ಹಿಟ್ಲರನ ಈ ಗುಪ್ತವಾದ ಬ್ರಹ್ಮಾಸ್ತ್ರ ಯಾವುದಿರಬಹುದೆಂದು ಜಗತ್ತೇ ದಿಗ್ಭ್ರಮೆಗೊಂಡಿರುತ್ತದೆ!

ವಿದ್ಯುತ್‌ತರಂಗ ಮತ್ತು ಕಿರಣಗಳೆ?

ವಿದ್ಯುತ್ ತರಂಗಗಳು ಮತ್ತು ಕಿರಣಗಳನ್ನು ಬಿಟ್ಟು ಆತನು ಲೋಕಸಂಹಾರ ಮಾಡಲಿಕ್ಕೆ ಇಚ್ಛಿಸಿದ್ದರೆ, ಅದು ಆತನ ಮಹಾ ಭ್ರಮೆಯಾಗಿದೆ! ಏಕೆಂದರೆ, ಅಂತಹುದನ್ನು ಬ್ರಿಟಿಷ ಫ್ರಾನ್ಸುಗಳೂ ಅಮೇರಿಕವೂ ತಯಾರಿಸಿವೆ ಅವುಗಳು ಆ ವಿಧವನ್ನು ತಿಳಿದಿದ್ದರೂ, ಜೀವಿಗಳ ಪಾಲನೆಯ ವಿಷಯವಾಗಿ ಅವುಗಳನ್ನು ಖಂಡಿತ ಉಪಯೋಗಿಸುವುದಿಲ್ಲ

ಮರಣ ಕಿರಣಗಳು

ಇಂತಹ ಮರಣ ಕಿರಣಗಳನ್ನು ಮೊಟ್ಟಮೊದಲು ಎಚ್ ಗ್ರಿಂಡೆಲ್ ಮೆತ್ಯೂಸ್ ಎಂಬ ಬ್ರಿಟನಿನ ವೈಜ್ಞಾನಿಕರು ಕಂಡುಹಿಡಿದರು ಈ ಕಿರಣವನ್ನು ಒಡುವುದರಿಂದ ಅದು ಸ್ಪರ್ಶವಾಗುವ ಪದಾರ್ಥವೇ ಸುಟ್ಟು ಹೋಗುವುದು. ಮೇಲೆ ಹಾರುವ ವಿಮಾನಕ್ಕೆ ಈ ಬೆಳಕನ್ನು ಬಿಟ್ಟಲ್ಲಿ, ಅದರ ಜನರು ಮರಣ ಹೊಂದುವುದಿಲ್ಲ, ಆದರೆ ಅದರ ಎಂಜಿನು ಕೆಟ್ಟು ಹೋಗಿ, ಅದು ಕೆಳಗೆ ಬೀಳುವುದು

ಆ ಮೇಲೆ ಮಿ। ಆರ್ ಸಿ ಚೇಡಾ ಸೇಲ್ಸ್ ಎಂಬ ವಿಜ್ಞಾನಿಗಳು ಈ ಸಂಶೋಧನೆಯನ್ನು ಮುಂದುವರಿಸಿದರು

ಜರ್ಮನಿಯಲ್ಲಿಯೂ ಇದೇ ರೀತಿಯ ಶೋಧನೆ ನಡೆಸಿದ್ದಾರಾಗಿ ತಿಳಿದುಬರುತ್ತದೆ ಆದರೆ ಅವುಗಳಿಗೆ ಮೇಲೆ ಹಾರುವ ವಿಮಾನಗಳಿಗೆ ಯಾವ ಹಾನಿ ಮಾಡಲೂ ಶಕ್ತಿ ಸಾಲದೆಂದೂ ತಿಳಿಯುತ್ತದೆ.

ಇಟಲಿಯಲ್ಲಿಯೂ ಕೂಡಾ ಒಂದು ಸಂಶೋಧನೆಯು ನಡೆಯಿತು ಸಿನೆಟರ್ ಮಾರ್ಕೋನಿಯೆಂಬವನು ಓಡುತ್ತಿರುವ ಮೋಟರು ಕಾರುಗಳನ್ನು ನಿಲ್ಲಿಸುವ ದರ್ಶನ ಒಂದನ್ನು ತೋರಿಸಿದನು. ಅದು ಒಂದರೆ ಕ್ಷಣ ನಿಂತು, ತಿರಿಗಿ ಆ ಮೋಟರುಗಳು ಮೊದಲಿನಂತೆಯೇ ಚಲಿಸಲು ಸುರು ಮಾಡುವವು

ಫ್ರಾನ್ಸಿನಲ್ಲಿಯೂ ಇದೇ ರೀತಿ ಸಂಶೋಧನೆಗಳು ಆಗಿವೆ.

ಅವುಗಳ ರಕ್ಷಣೆ

ಫ್ರಾನ್ಸು ಬ್ರಿಟನುಗಳು ಇಂತಹ ಮರಣ ಕಿರಣಗಳ ರಕ್ಷಣೆಯ ಸಲುವಾಗಿ ಸಾಕಷ್ಟು ಭದ್ರತೆ ವಹಿಸಿವೆ ಅಂತಹ ಕಿರಣಗಳಿಂದ ಯಾವ ಅಪಾಯ ಸಂಭವಿಸದಂತಹ ಸಂಶೋಧನೆಯು ನಡೆಯುತ್ತಿದೆ ಆದರೆ ಬಹುಶಃ ಇತರ ದೇಶಗಳು ತನ್ನಂತೆ ನಿರ್ದಯ ಮಾನವ ಸಂಹಾರಕ್ಕೆ ಅಂಜುವವೆಂದ ಹಿಟ್ಲರನ ತಿಳುವಳಿಕೆ.

ನೋಟೀಸು

ಕಾರ್ಕಳ ಡಿ ಮು ಕೋರ್ಟಿನ

ಕ್ರಮ ನಂಬ್ರ 2??/19

R E P No 821/1?

R E A No 880/1?

ಅಂಬಲಿಸಾ ಮೋರಿಸಿಕೇರಾಬಾಯಿ ವಾದಿ — ಅರ್ಜಿದಾರಳು

ಮತ್ತು

1 ಶ್ರೀನಿವಾಸ ಜೋಯಿಶಿ 2 ರಾಮಚಂದ್ರ ಜೋಯಿಶಿ 3 ಗಣಪತಿ ಜೋಯಿಶಿ	ಪ್ರತಿವಾದಿರು
4 ಗೋಪಾಲಕೃಷ್ಣ ಮಲ್ಯನು ಇವನ ಗಾರ್ಡಿಯಾನ ಇವನ ತಾಯಿ ಶಂಕರಿಯಾನೆ ಶಾಂಭವಿ ಅಮ್ಮ	ಎದ್ರಿ ಅರ್ಜಿದಾರರು

ಇವರೊಳಗೆ

2ನೇ ಎದ್ರಿ ರಾಮಚಂದ್ರ ಜೋಯಿಶಿ 3ನೇ ಎದ್ರಿ ಗಣಪತಿ ಜೋಯಿಶಿ } ಕಾರ್ಕಳ ರಂ ಜೋಯಿಶರ ಮಕ್ಕಳು

Ratan House, II floor, Tribhuvan Road, Bombay No

ಸದ್ರಿ 2,3, ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಸದ್ರಿ ಅಮ್ಲಜ್ಯಾರಿಯಲ್ಲಿ ಡಿಕ್ರಿಯಲ್ಲಿ ಮಾಗಾಟಕ್ಕೆ ವಿಧಿ ಇರುವ ಎಮ್ಮಸ್ಥಿರ ಸ್ಥಿಯನ್ನು ಮಾಡುವರೆ ಯಾ ಸದ್ರಿ ಕಾಲಂಕಾಲದಲ್ಲಿ ಮಾಡುವರೆ ತನಗೆ ಪರ್ಮಿಶನ ಕೊಡಿಸಬೇಕೆಂತಲೂ ಕೂಡಾ ಅರ್ಜಿದಾರಳು ಮೇಲ್ಕಂಡ ಕೋರ್ಟಿನಲ್ಲಿ ಮನವಿ ಮಾಡಿಕೊಂಡಿದ್ದಾಳೆ ಕುರಿತು ನೀವೇನಾದರೂ ಆಕ್ಷೇಪಿಸುವದಿದ್ದ್ರ ಸದ್ರಿ ಅಮ್ಲಜ್ಯಾರಿಯ ತನಿಖೆಗೆ ಇಟ್ಟ ತಾರೀಕು 28 10-39ನೇ ಶನಿವಾರ ದಿನ ಪೂರ್ವಾಹ್ನ ಗಂಟೆ 10ಕ್ಕೆ ನೀವು ಖುದ್ದಾಗಿಯಾಗಲೀ ಪ್ಲೀಡರ್ ಮೂಲಕವಾಗಲೀ (ಹಾಜರಾಗಿ) ನಿಮ್ಮ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯಿ ಮಾಡಿ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತು ಯೆಂತ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ

By order of the Court

ಕಾರ್ಕಳ 8—10—39 } K. L. Kodva Pleader for Petitioner

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತುಲಾಕಾವೇರಿ ಸಂಕ್ರಮಣ
ತಾರೀಕು ೧೭-೧೦-೧೯೩೯

ತಾರೀಕು 22-10-'39ರಲ್ಲು

ಮೈಸೂರು ದಸರಾಮಹೋತ್ಸವದ ಸಮಾರಂಭ
ತಾ. ೧೩-೧೦-'೩೯ರಿಂದ ೨೨-೧೦-'೩೯ರ ವರೆಗೆ

ಮೈಸೂರು ಶ್ರೀಮನ್ಮಹಾರಾಜರವರ ಜಂಬೂ ಸವಾರಿ ಮೆರವಣಿಗೆಯ ಚಿತ್ತಾಕರ್ಷಣೀಯ ನೋಟ, ಇವೆಲ್ಲಕ್ಕೂ ಒಂದೇ ಬಾರಿ ಅತ್ಯಲ್ಪ ಖರ್ಚಿನಿಂದ ನೋಡಲು ಬಂದೊದಗಿರುವ ಸುಸಂದರ್ಭವನ್ನು ಕಳಕೊಳ್ಳದಿರಿ—

ತಾರೀಕು ೧೭—೧೦—೧೯೩೯ರಲ್ಲು ಭಾಗಮಂಡಳದ ಸಮೀಪದಲಿ ರುವ ಪುಣ್ಯಪ್ರದವಾದ ತಲಕಾವೇರಿ ತೀರ್ಥದಲ್ಲಿ, ಮುಹೂರ್ತಕಾಲದಲ್ಲಿ ಮಿಂದು, ಪುಣ್ಯಾರ್ಜನೆಯನ್ನು ಮಾಡಿ ಅಲ್ಲಿಂದ ಹಿಂತಿರುಗಿ ಮಡಿಕೇರಿಗೆ ಬಂದು, ಮಡಿಕೇರಿಯಿಂದ ಮೈಸೂರಿಗೆ ಹೋಗಿ ಅಲ್ಲಿ ಅತೀ ವಿಜೃಂಭಣೆಯಿಂದ ನಡೆಯುವ ದಸರಾ ಮಹೋತ್ಸವವನ್ನು ನೋಡಿ ನೇತ್ರಾನಂದವನ್ನು ಹೊಂದುವರೆ ಇದು ಅತ್ಯುತ್ತಮವಾದ ಸಂದರ್ಭ

ವಿದ್ಯುದ್ದೀಪಗಳಿಂದಲಂಕೃತವಾದ ಅರಮನೆಯ ನೋಟ-ಚಾಮುಂಡಿ ಬೆಟ್ಟದ ಸೊಬಗು-ಶ್ರೀ ಚಾಮುಂಡೇಶ್ವರಿಯ ದರ್ಶನಲಾಭ-ಕನ್ನಂಬಾಡಿ ಟ್ಟೆಯ ನಿರ್ಮಾಣ ಚತುರತೆ-ವಿದ್ಯುದ್ದೀಪಗಳಿಂದ ಶೋಭಿಸುವ ಕಾರಂಜಿಗಳ ದೃಶ್ಯ-ಶ್ರೀ ರಂಗಸ್ವಾಮಿಯ ದರ್ಶನ ಟಿಪ್ಪುವಿನ ಕೋಟೆಯ ನಿರ್ಮಾಣ ಚತುರತೆ-ಶ್ರೀ ನಂಜುಂಡೇಶ್ವರನ ದರ್ಶನ ಶಿವಸಮುದ್ರದ ಸೊಬಗು-ಸುವ್ಯವಸ್ಥಿತ ಅಶ್ವಶಾಲೆ-ವಿವಿಧ ವಸ್ತು ಪ್ರದರ್ಶನಾಲಯದ ಪ್ರೇಕ್ಷಣೀಯ ನೋಟ-ಲಲಿತಮಹಾಲ ಅರಮನೆಯ ಬೆಡಗು-ಪ್ರಾಣಿ ಪ್ರದರ್ಶನಾಲಯದ ಸೊಬಗು ಇವೆಲ್ಲವನ್ನು ಒಂದೇ ಬಾರಿ ಅತ್ಯಲ್ಪ ಖರ್ಚಿನಿಂದ ನೋಡಲು ಇದೆ ಅತ್ಯುತ್ತಮ ಸಂದರ್ಭ—

ಹೆಚ್ಚಿನ ಮಾಹಿತಿಬಗ್ಗೆ-ಈ ಕೆಳಗಿನ ವಿಳಾಸಕ್ಕೆ ಪತ್ರಮುಖಾಂತರವಾಗಲಿ, ಅಥವಾ ಸ್ವತಹ ಬಂದು ಕೇಳಿಕೊಳ್ಳಬಹುದು.

ಪ್ರಯಾಣಿಕರಿಗೆ ಉಳಕೊಳ್ಳಲು ಮಡಿಕೇರಿ ಮತ್ತು ಮೈಸೂರಲ್ಲಿ ನಮ್ಮ ವಿಶ್ರಾಂತಿ ಗೃಹಗಳಿವೆ.

JOINT MANAGERS,

The Combined Booking Agency,
MANGALORE

The Joint Booking Office,
KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೇಹ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು



HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ ಪೆರಿಡೇಪಿ
P O Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ ಅವ್ವಲ್ ತರದ ಗುಡ್ಡು ಮುಡಿಗೆ	1-14-0	—
„ ದುಯಂ „ „	1—12 0	1—12—0
„ ಅವ್ವಲ್ ಸುಗ್ಗಿ „	1 12—0	—
„ ದುಯಂ „ „	1 10—0	—
ಅಕ್ಕಿ ಅವ್ವಲ್ ಗುಡ್ಡು „	5 4 0	—
„ ದುಯಂ „ „	5 2—0	—
„ ಅವ್ವಲ್ ಸುಗಿ „	5-2-0	—
„ ದುಯಂ „ „	4-14 0	?—0 0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	30-0—0	37 8-0
„ ಸಿಪ್ಪೆ ಇದ್ದದು „	32 8—0	42-8-0
ಕೊಬ್ಬರಿ ಆಫೀಸು ಖಂಡಿಗೆ	55—0 0	—
„ ದಿಲ್‌ಪಸಂದ	52-8 0	—
ತೆಂಗಿನ ಎಣ್ಣೆ ಮಣಕ್ಕೆ	3 12-0	3—12—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2-8-0	3-8-0
ಗೇರುಬೀಜ ಮುಡಿಗೆ	3 4-0	3-4-0
ಕಬ್ಬಿನ ಬೆಲ್ಲ ಖಂಡಿಗೆ	55 0-0	60 0-0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	16-0 0	18 0 0

ವಾರ್ಷಿಕ ಚಂದಾ ರೂ 2—0—0

Date 13—10—1939

Regd. No. M 3406

ಅಂಚೆ ವೆಚ್ಚ ಸೇರಿ ರೂ. 2—13—0

ಸ್ವದೇಶಾಭಿಮಾನಿ

ಸಂಪುಟ 33] ತಾರೀಕು 13—10—1939 [ಸಂಚಿಕೆ 41

YOUR AMBITION TO BUILD UP A BRIGHT
FUTURE IN YOUR RETIRED LIFE
YOUR DESIRE TO EDUCATE YOUR CHILDREN SO
THAT THEY MAY STAND ON THEIR OWN LEGS,
YOUR ANXIETY TO PROVIDE YOUR DEAR WIFE AND
CHILDREN WITH A MINIMUM MONTHLY ALLOWANCE,
YOUR MORAL LIABILITY TO PROVIDE FOR THE
MARRIGE OF YOUR DAUGHTERS,

may all be only a dream if you do not avail of modern scientific Life Insurance Schemes which will satisfy your Ambition Desire, Anxiety and Moral Liability and make the whole thing a reality by small contribution out of your own Monthly Savings towards the Payment of Premium in

THE BOMBAY LIEF ASSURANCE CO., LIMITED

To Insure or to Represent, please consult

MESSRS. KOCHIKAR BROTHERS LTD,

Madras Branch Secretaries,
Bombay Life Building,
Gandhi Nagar, UDIPI.

OR ANY OF THEIR FOLLOWING OFFICES

Puthiyara, Calicut

Car Street, Mangalore

Visweswarapuram Circle, Bangalore City

Post Box No. [illegible], Mount Road, Madras

Gautam Nivas, Charni Road, Girgaum, Bombay No. 4

Central Station Road, Trivandrum

MAKE LIFE WORTH-LIVING!

**Indigestion — Insomnia Dry Cough —
Nervousness — Weak Heart &c,
these make you weary of Life!**

**CONSULT US AND BUY
YOUR LIFE'S HAPPINESS!**

Oils — that cool the brain and induce sleep
Lehas — that build-up your wasted system
Asavas — that regenerate your jaded nerves

All Genuine Ayurvedic Preparations-

from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara.
(BRANCH—KUMTA N. KANARA)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ ದುರ್ಬಲ ಹೃತ್ಕ್ಲೇಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ
ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ - ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, - ದ ಕನ್ನಡ

ಸ್ಥಳೀಯ ಸ್ಟೋಕಿಸ್ಟರು (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

KANNADA ILLUSTRATED WEEKLY

Edited Printed & Published by A S Kamath at the Sharada Press, Car Street, Mangalore

ಸ್ವದೇಶಾಭಿಮಾನಿ
Swadeshabhimani. Estd 1906

ಸಂಪುಟ ೩೩ ✤ ತಾರೀಕು ೨೭—೧೦—೧೯೩೯ (27—10—1939) ✤ ಸಂಚಿಕೆ ೪

ಉಷಾದೇವಿ

THE MAYA EMPIRE, VICTIM OF MALARIA.

The fall of the Maya Empire which took place between 680 and 630 A. D., resulting in the emigration of the last survivors of this population, constituted until quite recently one of the enigmas of history. The American geologist, Wythe Cooke, after a prolonged study of the country, thought that the mysterious disappearance of the civilization of the Mayas could be attributed to great epidemics of malaria.

When the Mayas penetrated into Guatemala, they found a territory covered by virgin forest, where there were numerous lakes. They commenced to cultivate the forest on the shore of the lakes and laid out maize plantations. The lakes which were connected to one another, served for transporting merchandise.

To construct their superb temples, but also to obtain new land to put under cultivation, it became necessary to encroach still further on the forest, and the maize plantations were raised on terraces. But Guatemala is a tropical country where, during half the year there are violent tempests every day accompanied by heavy down-pours. These storms carried this fertile soil down to the lakes, so that eventually the latter filled up and became marshes.

The Mayas must have realised the danger that threatened them, for Wythe Cooke found the remains of dams, erected so as to prevent the formation of marshes; but they did not succeed in preventing the earth from being carried towards the lakes during the rainy season, and in consequence the lakes continued to be transformed into marshes.

On these marshes, the anopheles, the mosquitoes that transmit malaria, developed unhindered and finally the whole of the Mayas' territory became infected with malaria to such a degree that it became impossible to live there.

The flight of the last Mayas must have been a veritable panic, caused by malaria. This nation must have lost its energy, for in Yucatan, where most of the Mayas took refuge, they have never reached the same state of civilization.

How different would the destiny of the Mayas have been if they had only known about that natural product Quinine, had they been able to take a dose of 6 grains of quinine every day as a preventive measure, and if their sufferers had been cured by means of a daily dose of from 15 to 20 grains of quinine taken during 5 to 7 days, as recommended by the Malaria Commission of the League of Nations.

ನಿಮ್ಮ ಇಡೀ ಕುಟುಂಬಕ್ಕೆ
ಆರೋಗ್ಯ ಮತ್ತು ಬಲವನ್ನೀಯುವುದು!



ನಿಮ್ಮ ಕುಟುಂಬದ ಸೌಖ್ಯ ಆರೋಗ್ಯ ಮತ್ತು ಬಲ ಹಾಗೂ ನವಚೇತನವು ನಿಮ್ಮ ತಕ್ಕುದಾದ ಪೋಷಣೆಯ ಮೇಲೆ ಹೊಂದಿಕೊಂಡಿದೆ. ಆದಕಾರಣ ನಿಮ್ಮ ಕುಟುಂಬದ ಶಕ್ತಿಯುತವಾದ ಆರೋಗ್ಯವನ್ನು ಭದ್ರಪಡಿಸಲು ಯೋಗ್ಯವೂ ಉಚಿತವೂ ಆದ ಪೋಷಣೆಯನ್ನೀಯಿರಿ.

"ಓವಲ್ಟಿನ್" ಎಂಬ ಶ್ರೇಷ್ಠವಾದ ಶಕ್ತಿವರ್ಧಕ ಆಹಾರಪಾನಕವು, ದೇಹಕ್ಕೆ ಸಂಪೂರ್ಣವಾಗಿ ತಕ್ಕುದಾದ ಪೋಷಣೆಯನ್ನೀಯುವುದು. ಇದು ಪ್ರಕೃತಿಯು ಸಂಪನ್ನವಾದ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಿದುದಾಗಿರುತ್ತದೆ—ಮಾಗಿ ನೆನೆಹಾಕಿ ಹುರಿದ ಬಾರ್ಲಿ, ದನದ ಹಾಲು ಮತ್ತು ನೈಸರ್ಗಿಕ ಶಕ್ತಿವರ್ಧಕ ವಿಟಮಿನ್ ಮತ್ತು ಫೊಸ್ಫೈಟ್ಸ್‌ಗಳಿಂದ ಕೂಡಿದೆ. ಪ್ರತೀ ದಿನವೂ ಸೇವಿಸುವ ಅತ್ಯಂತ ರುಚಿಕರವಾದ ಒಂದು ಕಪ್ಪು "ಓವಲ್ಟಿನ್" ನಿಮ್ಮನ್ನೂ ನಿಮ್ಮ ಕುಟುಂಬವನ್ನೂ ಚುರುಕಾದ ಉತ್ತಮ ಆರೋಗ್ಯದಲ್ಲಿರಿಸುವುದು. "ಓವಲ್ಟಿನ"ನ್ನು ಉಪಯೋಗಿಸಲು ಪ್ರಾರಂಭಿಸಿರಿ—ಮತ್ತು ಇದರಿಂದ ನಿಮ್ಮ ಕುಟುಂಬಕ್ಕೆ ಯಾವ ರೀತಿಯ ಪ್ರಯೋಜನವು ದೊರಕುವುದೆಂದು ಗಮನಿಸಿರಿ.

ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:-
ಜೇಮ್ಸ್ ರೈಟ್ ಲಿಮಿಟೆಡ್ 149, ಬ್ರೋಡ್‌ವೇ, ಮದ್ರಾಸು.
ಬೊಂಬೈ, ಕಲ್ಕತ್ತಾ ಹಾಗೂ ಕರಾಚಿಯಲ್ಲಿ ದೆ.

'ಓವಲ್‌ಟಿನ್'
OVALTINE

'ಓವಲ್‌ಟಿನ್' ಬಿಸ್ಕುಟುಗಳು:—
ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ್ಯ ಬೆಲೆಯ 'ಓವಲ್‌ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.
OV/16/39

ವೈಸರಾಯರ ಪ್ರಕಟಣೆಯಿಂದ ಮುಖಂಡರು ಉದ್ವಿಗ್ನರಾಗಿದ್ದಾರೆ

★ 'ರೊಟ್ಟಿಯ ಬದಲು ಕಲ್ಲು ಸಿಕ್ಕಿತು'

★ 'ಆತ್ಮಗೌರವವುಳ್ಳವನು ಸಹಕರಿಸನು'

★ 'ಬಹಳ ನಿರಾಶಾಜನಕವಾದುದು'

★ 'ಬ್ರಿಟಿಷ್ ಧೋರಣೆಯು ಸಮಂಜಸವಲ್ಲ'

ಯುದ್ಧ ಮುಗಿದ ಬಳಿಕ ಹಿಂದೀ ಮುಖಂಡರೊಡನೆ ಆಲೋಚಿಸಬಹುದು

ವೈಸರಾಯರ ಹೇಳಿಕೆ

ಹಲವು ದಿನಗಳಿಂದ, ವೈಸರಾಯರು ಗಾಂಧಿಜಿಯವರನ್ನೂ ಭಾರತದ ನಿಜವಾದ ಮುಖಂಡರನೇಕರನ್ನೂ, ಆ ಮೇಲೆ ಎಲ್ಲಾ ಸಂಸ್ಥೆಗಳ, ಎಲ್ಲಾ ಜಾತಿಗಳ ಮುಂದಾಳುಗಳನ್ನು ಕರೆಸಿಕೊಂಡವರನ್ನೂ ಕಂಡು ಮಾತುಕತೆ ಮಾಡುತ್ತಿದ್ದರಷ್ಟೆ? ಈ ಬಗ್ಗೆ ಜನತೆಯ ದೃಷ್ಟಿಯು ಆ ಮಾತುಕತೆಗಳ ಫಲಿತಾಂಶದ ಕಡೆಗೆ ತಿರುಗಿತ್ತು. ಈಗ ವೈಸರಾಯರ ಪ್ರಕಟಣೆಯೊಂದು ಹೊರಟಿದೆ. ವಿಶಾಲ ಭಾರತದಲ್ಲಿ ಈಗ ತೀವ್ರ ನಿರಾಶೆ ಉದ್ವೇಗಗಳು ಉಂಟಾಗಿವೆ. ವೈಸರಾಯರ ಪ್ರಕಟಣೆಯು ಈ ಅರ್ಥ ಗರ್ಭಿತವಾಗಿದೆ.

ಹಿಂದೂದೇಶಕ್ಕೆ ಬೇಕಾದ ಹೊಸ ರಾಜ್ಯ ಘಟನೆಯನ್ನು ಇಲ್ಲಿನ ಎಲ್ಲಾ ಜಾತಿ ಪಂಗಡ, ನರೇಂದ್ರ ಮಂಡಲಗಳ ಪ್ರಾತಿನಿಧ್ಯದ ಅಭಿಪ್ರಾಯಗಳನ್ನು ವಿಚಾರಿಸಿ—ಯುದ್ಧ ಮುಗಿದ ಬಳಿಕ—ಮಾಡಬಹುದಾಗಿ ತನಗೆ ಸಾರ್ವಭೌಮ ಸರಕಾರದಿಂದ ಸಮ್ಮತಿ ದೊರಕಿದೆಯೆಂದು, ಅವರ ಅಭಿಪ್ರಾಯ.

ಈ ಕುರಿತು ಸಕಲರ ಪ್ರಾತಿನಿಧ್ಯದ ಒಂದು ಮಂಡಲವು ರಚಿತವಾಗುವುದೆಂದೂ, ಆ ಮಂಡಲವು ಯುದ್ಧದ ಚಟುವಟಿಕೆಗಳಲ್ಲಿ ಜನಮತವನ್ನು ಸಂಗ್ರಹಿಸುವ ಉದ್ದೇಶವಿಟ್ಟುಕೊಳ್ಳಬೇಕೆಂದೂ ಹೇಳಿರುವರು.

ಹಿಂದೂದೇಶದ ವಿಷಯ ಸರಕಾರದ ಅಭಿಪ್ರಾಯವು ಹಿಂದೆ ೧೯೨೯ರಲ್ಲಿಯೇ ಪ್ರಕಟಿಸಲ್ಪಟ್ಟಿದೆಯೆಂದೂ, ಅದು ಸ್ಪಷ್ಟವಿದೆಯೆಂದೂ ಹೇಳುತ್ತಾರೆ.

ಹಿಂದೂದೇಶದ ವಿಷಯದ ಸರಕಾರದ ಉದ್ದೇಶವೆಂದೂ, ಹಿಂದೂದೇಶಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡುವಲ್ಲಿ ಹಿಂದೀಯರು ಎದರಿಸಬೇಕಾದ ತೊಡಕುಗಳು ಪರಿಹಾರವಾಗಬೇಕೆಂದೂ, ಅಂತಹ ತೊಡಕುಗಳು ಹಿಂದೀಯರಿಂದಲೇ ಮಾಡಲ್ಪಟ್ಟುವೆಂದೂ ಹಿಂದಿನ ಹೇಳಿಕೆಯಲ್ಲಿ ಪ್ರಕಟವಾಗಿತ್ತು.

'ರೊಟ್ಟಿಯ ಬದಲು ಕಲ್ಲು ಸಿಕ್ಕಿತು'

ವೈಸರಾಯರ ಹೇಳಿಕೆಯ ಕುರಿತು ಗಾಂಧಿಜಿಯವರ ಅಭಿಪ್ರಾಯ

'ವೈಸರಾಯರ ಪ್ರಕಟಣೆಯು ನಿಜವಾಗಿಯೂ ನಿರಾಶೆಯನ್ನು ಹುಟ್ಟಿಸುವಂತಹುದು. ಬ್ರಿಟಿಷ್ ಸರಕಾರವು ಪ್ರಕಟಣೆಯನ್ನು ಕೊಡದಿದ್ದರೇ ಒಳ್ಳೆದಿತ್ತು. ವೈಸರಾಯರ ದೀರ್ಘ ಪ್ರಕಟಣೆಯು, ಇನ್ನೂ ಕೂಡಾ ಬ್ರಿಟಿಷರ ವಿಭಜನೆ ಮತ್ತು ಆಳ್ವಿಕೆಯ ತತ್ವವನ್ನು ಸೂಚಿಸುತ್ತದೆ. ನಾನು ತಿಳಿಸುವಂತೆ ಕಾಂಗ್ರೆಸು, ಹಾಗೂ ಕಾಂಗ್ರೆಸಿನ ವಿಶ್ವಾಸವುಳ್ಳ ಭಾರತವು ಹಿಟ್ಲರನೊಡನೆ ಮಾಡುವ ಬ್ರಿಟನಿನ ಈ ಯುದ್ಧದಲ್ಲಿ—ಇಂತಹ ಪ್ರಕಟಣೆಗಳಿಂದ ಸಹಕರಿಸುವುದು ಸಾಧ್ಯವಿಲ್ಲ. ಯುದ್ಧ ಮುಗಿದ ಕೂಡಲೇ ಇನ್ನೊಂದು ರೌಂಡ್‌ಟೇಬಲ್ ಕಾನ್ಫರೆನ್ಸು ಆಗಬಹುದೆಂಬ ಭರವಸೆ ಕೊಟ್ಟಿದ್ದಾರೆ. ಹಿಂದಿನ ಕಾನ್ಫರೆನ್ಸುಗಳಂತೆ ಇದು ಖಂಡಿತ ಅಪಜಯಹೊಂದದಿರದು. ಕಾಂಗ್ರೆಸು ರೊಟ್ಟಿ ಕೇಳಿತು ಆದರೆ ಅವರಿಗೆ ಕಲ್ಲು ಸಿಕ್ಕಿತು. ಭಾರತದ ಭವಿಷ್ಯದಲ್ಲಿ ಏನಿದೆಯೋ ನಾನು ಹೇಳಲಾರೆ. ನಾನು ಈ ದುರ್ಭಾಗ್ಯ ಫಲಿತಾಂಶಕ್ಕಾಗಿ ವೈಸರಾಯರನ್ನಾಗಲಿ, ಬ್ರಿಟನಿನ ಮುಖಂಡರನ್ನಾಗಲಿ ದೂರಲಾರೆ. ಕಾಂಗ್ರೆಸು ತನ್ನ ಉದ್ದೇಶವನ್ನು ಮುಟ್ಟುವ ವರೆಗೆ ಇನ್ನೆಷ್ಟು ಸಂಕಷ್ಟಗಳನ್ನು ಎದುರಿಸಬೇಕೋ ಹೇಳಲಾಗುವುದಿಲ್ಲ. ಕಾಂಗ್ರೆಸಿನವರು ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಎದುರು ನೋಡಬೇಕು' ಹೀಗೆನ್ನುತ್ತಾರೆ ಗಾಂಧಿಜಿಯವರು.

ಆತ್ಮಗೌರವವುಳ್ಳ ಭಾರತೀಯನು ಬ್ರಿಟನಿನೊಡನೆ ಸಹಕರಿಸಲಾರನು.

ನೆಹರು ಅಜಾದರ ಹೇಳಿಕೆ

'ವೈಸರಾಯ ಪ್ರಕಟಣೆಯನ್ನು ನಾವು ವಿಷಾದದಿಂದ ಓದಿದೆವು. ಇದೀ ಪ್ರಕಟಣೆಯು ಭಾರತದ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ತತ್ವದ ಹಾಸ್ಯಕರವಾಗಿದೆ. ಈ ಪ್ರಕಟಣೆಯನ್ನು ಇಪ್ಪತ್ತು ವರ್ಷಗಳ ಹಿಂದೆ ಮಾಡಬೇಕಿತ್ತು. ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳ ಬಗ್ಗೆ ಅದರಲ್ಲಿ ಯಾವ ವ್ಯಾಖ್ಯೆಯೂ ಇಲ್ಲ. ಆದರೆ ತಮಗಲ್ಲದ ಯುದ್ಧದಲ್ಲಿ ಭಾರತವು ಅದರ ಒಪ್ಪಿಗೆಯಿಲ್ಲದೆ ಎಳೆಯುವುದರಲ್ಲಿ ಸೇರಿಸುವಂತಹುದಾಗಿದೆ. 'ಉತ್ತಮ ಅಂತರ್‌ರಾಷ್ಟ್ರೀಯ ಪರಿಸ್ಥಿತಿ'ಯೆಂಬ ಬ್ರಿಟಿಷ್ ಪ್ರಧಾನರ ಮಾತು ಬ್ರಿಟಿಷ್ ಸಾಮ್ರಾಜ್ಯದ ಬಲವರ್ಧನೆಗಾಗಿದೆ ಮಾತ್ರವಲ್ಲದೆ, ಅವರ ಈ ಮಾತು ಕೇವಲ ಯೂರೋಪು ದೇಶಗಳಿಗೆ ಅನ್ವಯಿಸುವುದಲ್ಲದೆ, ಏಷ್ಯಾಖಂಡ, ಆಫ್ರಿಕಗಳಿಗೆ ಅನ್ವಯಿಸುವುದಿಲ್ಲವೆಂದು ಕಾಣುತ್ತದೆ. ಮಹಾಯುದ್ಧಗಳ ಊರ್ಜಿತಹೊಂದುವುದಿಲ್ಲ. ಸಾಮ್ರಾಜ್ಯಶಾಹಿಯು ಬೆಳೆಯುತ್ತಾ ಇದೆ.

'ಇದೇ ಯುದ್ಧದ ಉದ್ದೇಶವಾದರೆ, ಬ್ರಿಟನಿನೊಡನೆ ಆತ್ಮಗೌರವವುಳ್ಳ ಭಾರತೀಯನು ಸಹಕರಿಸಲಾರನು. ಕಾಂಗ್ರೆಸು ನೀಡಿದ ಸಹಾಯ ಹಸ್ತವು ಸರಕಾರದಿಂದ ಹಿಂದಕ್ಕೆ ತಳ್ಳಲ್ಪಟ್ಟಿತು. ನಮ್ಮ ಮುಂದಿನ ಹೆಜ್ಜೆಯೇನೆಂಬುದನ್ನು ವರ್ಕಿಂಗ್ ಕಮಿಟಿಯು ನಿಶ್ಚಯಿಸುವುದು. ಸಂಕಷ್ಟದ ಕಾಲಬಂದಿದೆ. ಧೈರ್ಯ ವಿಶ್ವಾಸಗಳಿಂದ ಇದನ್ನು ಎದುರಿಸಬೇಕಾಗಿದೆ. ರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಗಾಗಿ ಗೌರವದಿಂದ ಇದನ್ನು ಎದುರಿಸೋಣ' ಹೀಗೆಂದು ನೆಹರು—ಅಜಾದರು ವೈಸರಾಯರ ಪ್ರಕಟಣೆಯ ಕುರಿತು ಒಂದು ಹೇಳಿಕೆಯನ್ನು ಹೊರಡಿಸಿದ್ದಾರೆ.

'ಬಹಳವಾಗಿ ನಿರಾಶಾಜನಕವಾದುದು'

ರಾಷ್ಟ್ರಪತಿಗಳ ಹೇಳಿಕೆ

'ಬ್ರಿಟಿಷರ ತತ್ವವು ಹಿಂದಿನಿಂದ ಇದ್ದಂತೆಯೇ ಇಂದೂ ಕೂಡಾ, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ರಕ್ಷಣೆಗಳ ಮಾತು ಭಾರತಕ್ಕೆ ಅನ್ವಯಿಸುವ ತಹುದಲ್ಲವೆಂದೂ, ಬ್ರಿಟನಿಗೆ ಭಾರತವು ಸಹಾಯ ಕೊಡಲು ಸಿದ್ಧತೆ ಮಾಡಿದಾಗ ಹೀಗೆ ಅವಿಶ್ವಾಸ ರೂಪದ ಪ್ರಕಟಣೆ ಹೊರಡಿಸಿದ್ದು ಬಹಳ ನಿರಾಶಾಜನಕವಾದುದೆಂದೂ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ವೈಸರಾಯರ ಪ್ರಕಟಣೆಯ ಕುರಿತ ಅಭಿಪ್ರಾಯ ಪ್ರಕಟಿಸಿದರು. ಅವರ ಹೇಳಿಕೆಯಲ್ಲಿ —

'ನಮಗೆ ರೌಂಡ್‌ಟೇಬಲ್ ಕಾನ್ಫರೆನ್ಸುಗಳ ಅನುಭವವು ಇದೆ. ಆದರೆ ಏನಾದರೂ ಮುಂದಕ್ಕೆ, ಇಂದಿಗಿರುವ ಈ ದುರ್ಘಟನೆಗಳು (ಬ್ರಿಟಿಷರೇ ಅವುಗಳಿಗೆ ಜವಾಬ ದಾರರು) ಸರಿಗೊಳ್ಳದ ವಿನಹ ಅಂತಹ ಕಾನ್ಫರೆನ್ಸುಗಳಲ್ಲಿ ಸಹಕರಿಸುವ ಹಾಗಿಲ್ಲ. ಇಂದೂ ಕೂಡಾ ಬ್ರಿಟಿಷರು ನಮ್ಮನ್ನು ಒತ್ತಾಯದಿಂದ ಆಳಬಹುದು. ಆದರೆ ನಮ್ಮ ನೈತಿಕ ಸಹಾಯವು ಅವರಿಗೆ ಹಾಗೆ ಮಾಡುವುದರಿಂದ ಖಂಡಿತ ದೊರಕಲಾರದು. ವೈಸರಾಯರ ಪ್ರಕಟಣೆಯು ಅಂತಹ ನೈತಿಕ ಸಹಾಯವನ್ನು ಸಂಪೂರ್ಣ ಕಡಿದುಬಿಡಲು ಸಾಕಾಗಿದೆ. ಇಂದಿನ ಯುದ್ಧವು ಕೇವಲ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಲವರ್ಧನೆಗೆ ಮಾತ್ರವೇ ಆಗಿದೆ. ಹಿಂದೆ ಉದ್ಘೋಷಿಸುತ್ತಿದ್ದ ಬ್ರಿಟಿಷರ ದೊಡ್ಡ ಉದಾತ್ತ ತತ್ವಗಳು ಇಂದಿನ ಸತ್ವ ಪರೀಕ್ಷೆಯ ಕಾಲದಲ್ಲಿ ಧೂಳಿ ಧೂಸರವಾಗಿದೆ. ಆದುದರಿಂದ ಕಾಂಗ್ರೆಸಿನ ಅನುಯಾಯಿಗಳೆಲ್ಲರೂ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಶಾಂತತೆಯಿಂದ ಕಾಯುತ್ತಾ ಅದರಂತೆ ವರ್ತಿಸಬೇಕಾಗಿ ಅಪೇಕ್ಷಿಸುತ್ತೇನೆ.

ಸರೋಜಿನಿ ದೇವಿಯರ ಹೇಳಿಕೆ

'ನಮ್ಮ ದೇಶದ ಸ್ವಾತಂತ್ರ್ಯದಾನದ ವಿಷಯದಲ್ಲಿ ಹೆಚ್ಚಾಗಿ ನಮ್ಮೊಳಗಿನ ಆಂತರಿಕ ಅನೈಕ್ಯವನ್ನೇ ಪ್ರಧಾನವಾಗಿ ಹಿಡಿದೆತ್ತಿ, ನಮ್ಮನ್ನು ವಂಚಿಸುವ ಕೆಲಸವು ಯಶಸ್ವಿಯಾಗ ಮಾಡಲ್ಪಡುತ್ತಿದೆ. ಆದರೆ ಅಂತರ್‌ರಾಷ್ಟ್ರೀಯ ಗೊಂದಲದ ಈ ಕಾಲದಲ್ಲಿ ಭಾರತದ ಆದರ್ಶವನ್ನು, ಬ್ರಿಟಿಷರ ತತ್ವವನ್ನೂ ಹೀಗೆ ವ್ಯಕ್ತಪಡಿಸಿದ್ದು ಸರ್ವಥಾ ಯೋಗ್ಯವಾಗಲಿಲ್ಲ. ಒಬ್ಬ ರಾಜಕೀಯ ವಿಶಾರದನಲ್ಲದ ಕವಿ ಭವಿಷ್ಯ ದರ್ಶಿ ನಾವು ಬ್ರಿಟಿಷ್ ರಾಜನೀತಿಜ್ಞರಿಂದ ಮಾಯವಾಗಿದೆ. ಭಾರತವು ಯುದ್ಧ ಸಾಧಿಸುವ ಉದ್ದೇಶವೇನೆಂದೂ, ಆ ಉದ್ದೇಶವು ಭಾರತಕ್ಕೆ ಹೇಗೆ ಅನ್ವಯಿಸುತ್ತದೆಯೆಂದು ಕೇಳಿದ್ದನ್ನು ಸ್ಪಷ್ಟಪಡಿಸಲು ತಿರಸ್ಕರಿಸಿದ್ದನ್ನು ವಿಚಾರಿಸಿದರೆ ಇದಕ್ಕೆ ಎಡೆಯಾಗಿದೆ. ನಾವು ಇಂದಿನ ಪರಿಸ್ಥಿತಿಯಲ್ಲಿ ನಿರ್ಮಲವಾದ ಮತ್ತು ವಿಶಾಲ ಹೃದಯದಿಂದ ಬ್ರಿಟಿಷರಿಗೆ ಬೆಂಬಲ ಕೊಟ್ಟಿದ್ದೆವು. ಭಾರತವು ಮತ್ತು ಬ್ರಿಟನ್, ಗೆಳೆತನದಿಂದ ಇರುವುದ ಬಿಟ್ಟು ಜಗಳವಾಡುವ ಸಂದರ್ಭ ಪ್ರಾಪ್ತವಾಗುವುದೇ ಎಂಬ ವಿಚಾರವು ತಲೆದೋರಿದೆ.

SAVING & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

The Canara Industrial & Banking Syndicate Ltd.

(Incorporated in British India)

ESTD. 1925

Head Office: UDIPI (S. India)

VICTIM OF MALARIA

The fall of the Maya Empire which took place between 580 and 680 A. D., resolting in the emigration of the last survivors of this population constituted until quite recently one of the enigmas of history. The American geologist, Wythe Cooke, after a prolonged study of the country, thought that the mysterious disappearance of the civilization of the Mayas could be attributed to great epidemics of malaria.

When the Mayas penetrated into Guatemala, they found a territory covered by virgin forest, where there were numerous lakes. They commenced to cultivate the forest on the shore of the lakes, and laid out maize plantations. The lakes which were connected to one another, served for transporting merchandise.

To construct their superb temples, but also to obtain new land to put under cultivation, it became necessary to encroach still further on the forest, and the maize plantations were raised on terraces. But Guatemala is a tropical country where, during half the year there are violent tempestsevery day accompanied by heavy down-pours. These storms carried this fertile soil down to the lakes, so that eventually the latter filled up and became marshes.

The Mayas must have realised the danger that threatened them, for Wythe Cooke found the remains of dams, erected so as to prevent the formation of marshes; but they did not succeed in preventing the earth from being carried towards the lakes during the rainy season, and in consequence the lakes continued to be transformed into marshes.

On these marshes, the anopheles, the mosquitoes that transmit malaria, developed unhindered and finally the whole of the Mayas' territory became infected with malaria to such a degree that it became impossible to live there.

The flight of the last Mayas must have been a veritable panic, caused by malaria. This nation must have lost its energy, for in Yucatan, where most of the Mayas took refuge they have never reached the same state of civilization.

How different would the destiny of the Mayas have been if they had only known about that natural product Quinine, had they been able to take a dose of 6 grains of quinine every day as a preventive measure, and if their sufferers had been cured by means of a daily dose of from 15 to 20 grains of quinine taken during 5 to 7 days as recommended by the Malaria Commission of the League of Nations.

Mal. Eng. No. 60

ನಿಮ್ಮ ಇಡೀ ಕುಟುಂಬಕ್ಕೆ ಆರೋಗ್ಯ ಮತ್ತು ಬಲವನ್ನೀಯುವುದು!



ನಿಮ್ಮ ಕುಟುಂಬದ ಆರೋಗ್ಯ ಮತ್ತು ಬಲ ಹಾಗೂ ನವಚೇತನವು ನಿಮ್ಮ ತಕ್ಕದಾದ ಪೋಷಣೆಯ ಮೇಲೆ ಹೊಂದಿಕೊಂಡಿದೆ. ಆದಕಾರಣ ನಿಮ್ಮ ಕುಟುಂಬದ ಶಕ್ತಿಯುತವಾದ ಆರೋಗ್ಯವನ್ನು ಭದ್ರಪಡಿಸಲು ಯೋಗ್ಯವೂ ಉಚಿತವೂ ಆದ ಪೋಷಣೆಯನ್ನೀಯಿರಿ.

"ಓವಲ್ಟಿನ್" ಎಂಬ ಶ್ರೇಷ್ಠವಾದ ಶಕ್ತಿವರ್ಧಕ ಆಹಾರ ಪಾನಕವು, ದೇಹಕ್ಕೆ ಸಂಪೂರ್ಣವಾಗಿ ತಕ್ಕದಾದ ಪೋಷಣೆಯನ್ನೀಯುವುದು. ಇದು ಪ್ರಕೃತಿಯ ಸಂಪನ್ನವಾದ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಿದ್ದಾಗಿರುತ್ತದೆ—ಅಂದರೆ ನೆನೆಹಾಕಿ ಹುರಿದ ಬಾರ್ಲಿ, ದನದ ಹಾಲು ಮತ್ತು ನೈಸರ್ಗಿಕ ಶಕ್ತಿವರ್ಧಕ ವಿಟಮಿನ್ ಮತ್ತು ಫಾಸ್ಫೇಟ್ಸ್‌ಗಳಿಂದ ಕೂಡಿದೆ. ಪ್ರತೀ ದಿನವೂ ಸೇವಿಸುವ ಅತ್ಯಂತ ರುಚಿಕರವಾದ ಒಂದು ಕಪ್ಪು "ಓವಲ್ಟಿನ್" ನಿಮ್ಮನ್ನೂ ನಿಮ್ಮ ಕುಟುಂಬವನ್ನೂ ಚೆನ್ನಾಗಿ ಉತ್ತಮ ಆರೋಗ್ಯದಲ್ಲಿರಿಸುವುದು. "ಓವಲ್ಟಿನ"ನ್ನು ಉಪಯೋಗಿಸಲು ಪ್ರಾರಂಭಿಸಿರಿ—ಮತ್ತು ಇದರಿಂದ ನಿಮ್ಮ ಕುಟುಂಬಕ್ಕೆ ಯಾವ ರೀತಿಯ ಪ್ರಯೋಜನವು ದೊರಕುವುದೆಂಬುದನ್ನು ಗಮನಿಸಿರಿ.

ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:-

ಜೇಮ್ಸ್ ರೈಟ್ ಲಿಮಿಟೆಡ್ 149, ಬ್ರೋಡ್‌ವೇ, ಮದ್ರಾಸು.

ಬೊಂಬೈ, ಕಲ್ಕತ್ತಾ ಹಾಗೂ ಕರಾಚಿಯಲ್ಲಿ ದ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

'ಓವಲ್‌ಟಿನ್' ಬಿಸ್ಕುಟುಗಳು:— ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ ಬೆಲೆಯ 'ಓವಲ್‌ಟಿನ' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV/26/39

MISSING

PAGE 3 & 4

MISSING

PAGE 3 & 4

ವೈಸರಾಯರ ಪ್ರಕಟಣೆಯಿಂದ ಮುಖಂಡರು ಉದ್ವಿಗ್ನರಾಗಿದ್ದಾರೆ

★ 'ರೊಟ್ಟಿಯ ಬದಲು ಕಲ್ಲು ಸಿಕ್ಕಿತು'
★ 'ಆತ್ಮಗೌರವವುಳ್ಳವನು ಸಹಕರಿಸನು'
★ 'ಬಹಳ ನಿರಾಶಾಜನಕವಾದುದು'
★ 'ಬ್ರಿಟಿಷ್ ಧೋರಣೆಯು ಸಮಂಜಸವಲ್ಲ'

ಯುದ್ಧ ಮುಗಿದ ಬಳಿಕ ಹಿಂದೀ ಮುಖಂಡರೊಡನೆ ಆಲೋಚಿಸಬಹುದು

ವೈಸರಾಯರ ಹೇಳಿಕೆ

ಹಲವು ದಿನಗಳಿಂದ ವೈಸರಾಯರು ಗಾಂಧಿಜಿಯವರನ್ನೂ, ಭಾರತದ ನಿಜವಾದ ಮುಖಂಡರನೇಕರನ್ನೂ, ಆ ಮೇಲೆ ಎಲ್ಲಾ ಸಂಸ್ಥೆಗಳ, ಎಲ್ಲಾ ಜಾತಿಗಳ ಮುಂದಾಳುಗಳೆನಿಸಿಕೊಂಡವರನ್ನೂ ಕಂಡು ಮಾತುಕತೆ ಮಾಡುತ್ತಿದ್ದರಷ್ಟೆ? ಈ ಬಗ್ಗೆ ಜನತೆಯ ದೃಷ್ಟಿಯು ಆ ಮಾತುಕತೆಗಳ ಫಲಿತಾಂಶದ ಕಡೆಗೆ ತಿರುಗಿತ್ತು. ಈಗ ವೈಸರಾಯರ ಪ್ರಕಟಣೆಯೊಂದು ಹೊರಟಿದೆ. ವಿಶಾಲ ಭಾರತದಲ್ಲಿ ಈಗ ತೀವ್ರ ನಿರಾಶೆ ಉದ್ವೇಗಗಳು ಉಂಟಾಗಿವೆ. ವೈಸರಾಯರ ಪ್ರಕಟಣೆಯು ಈ ಅರ್ಥ ಗರ್ಭಿತವಾಗಿದೆ.

ಹಿಂದೂದೇಶಕ್ಕೆ ಬೇಕಾದ ಹೊಸ ರಾಜ್ಯ ಘಟನೆಯನ್ನು 'ಇಲ್ಲಿನ ಎಲ್ಲಾ ಜಾತಿ ಪಂಗಡ, ನರೇಂದ್ರ ಮಂಡಲಗಳ ಪ್ರಾತಿನಿಧ್ಯದ ಅಭಿಪ್ರಾಯಗಳನ್ನು ವಿಚಾರಿಸಿ—ಯುದ್ಧ ಮುಗಿದ ಬಳಿಕ—ಮಾಡಬಹುದಾಗಿ ತನಗೆ ಸಾರ್ವಭೌಮ ಸರಕಾರದಿಂದ ಸಮ್ಮತಿ ದೊರಕಿದೆಯೆಂದು ಅವರ ಅಭಿಪ್ರಾಯ.

ಈ ಕುರಿತು ಸಕಲರ ಪ್ರಾತಿನಿಧ್ಯದ ಒಂದು ಮಂಡಲವು ರಚಿತವಾಗುವುದೆಂದೂ, ಆ ಮಂಡಲವು ಯುದ್ಧದ ಚಟುವಟಿಕೆಗಳಲ್ಲಿ ಜನಮತವನ್ನು ಸಂಗ್ರಹಿಸುವ ಉದ್ದೇಶವಿಟ್ಟುಕೊಳ್ಳಬೇಕೆಂದೂ ಹೇಳಿರುವರು.

ಹಿಂದೂದೇಶದ ವಿಷಯ ಸರಕಾರದ ಅಭಿಪ್ರಾಯವು ಹಿಂದೆ ೧೯೨೯ರಲ್ಲಿಯೇ ಪ್ರಕಟಿಸಲ್ಪಟ್ಟಿದೆಯೆಂದೂ, ಅದು ಸ್ಪಷ್ಟವಿದೆಯೆಂದೂ ಹೇಳುತ್ತಾರೆ.

ಹಿಂದೂದೇಶದ ಏಳಿಗೆಯೇ ಸರಕಾರದ ಉದ್ದೇಶವೆಂದೂ, ಹಿಂದೂದೇಶಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡುವಲ್ಲಿ ಹಿಂದೀಯರು ಎದುರಿಸಬೇಕಾದ ತೊಡಕುಗಳು ಪರಿಹಾರವಾಗಬೇಕೆಂದೂ, ಅಂತಹ ತೊಡಕುಗಳು ಹಿಂದೀಯರಿಂದಲೇ ಮಾಡಲ್ಪಟ್ಟುವೆಂದೂ ಹಿಂದಿನ ಹೇಳಿಕೆಯಲ್ಲಿ ಪ್ರಕಟವಾಗಿತ್ತು.

'ರೊಟ್ಟಿಯ ಬದಲು ಕಲ್ಲು ಸಿಕ್ಕಿತು'

ವೈಸರಾಯರ ಹೇಳಿಕೆಯ ಕುರಿತು ಗಾಂಧಿಜಿಯವರ ಅಭಿಪ್ರಾಯ

'ವೈಸರಾಯರ ಪ್ರಕಟಣೆಯು ನಿಜವಾಗಿಯೂ ನಿರಾಶೆಯನ್ನು ಹುಟ್ಟಿಸುವಂತಹುದು. ಬ್ರಿಟಿಷ್ ಸರಕಾರವು ಪ್ರಕಟಣೆಯನ್ನು ಕೊಡದಿದ್ದರೇ ಒಳ್ಳೆದಿತ್ತು. ವೈಸರಾಯರ ದೀರ್ಘ ಪ್ರಕಟಣೆಯು, ಇನ್ನೂ ಕೂಡಾ ಬ್ರಿಟಿಷರ ವಿಭಜನೆ ಮತ್ತು ಆಳ್ವಿಕೆಯ ತತ್ವವನ್ನು ಸೂಚಿಸುತ್ತದೆ. ನಾನು ತಿಳಿಸುವಂತೆ ಕಾಂಗ್ರೆಸು, ಹಾಗೂ ಕಾಂಗ್ರೆಸಿನ ವಿಶ್ವಾಸವುಳ್ಳ ಭಾರತವು ಹಿಟ್ಲರನೊಡನೆ ಮಾಡುವ ಬ್ರಿಟನಿನ ಈ ಯುದ್ಧದಲ್ಲಿ—ಇಂತಹ ಪ್ರಕಟಣೆಗಳಿಂದ ಸಹಕರಿಸುವುದು ಸಾಧ್ಯವಿಲ್ಲ. ಯುದ್ಧ ಮುಗಿದ ಕೂಡಲೇ ಇನ್ನೊಂದು ರೌಂಡ್‌ಟೇಬಲ್ ಕಾನ್ಫರೆನ್ಸು ಆಗಬಹುದೆಂಬ ಭರವಸೆ ಕೊಟ್ಟಿದ್ದಾರೆ. ಹಿಂದಿನ ಕಾನ್ಫರೆನ್ಸುಗಳಂತೆ ಇದು ಖಂಡಿತ ಅಪಜಯಹೊಂದದಿರದು. ಕಾಂಗ್ರೆಸು ರೊಟ್ಟಿ ಕೇಳಿತು ಆದರೆ ಅವರಿಗೆ ಕಲ್ಲು ಸಿಕ್ಕಿತು. ಭಾರತದ ಭವಿಷ್ಯದಲ್ಲಿ ಏನಿದೆಯೋ ನಾನು ಹೇಳಲಾರೆ. ನಾನು ಈ ದುರ್ಭಾಗ್ಯ ಫಲಿತಾಂಶಕ್ಕಾಗಿ ವೈಸರಾಯರನ್ನಾಗಲಿ, ಬ್ರಿಟನಿನ ಮುಖಂಡರನ್ನಾಗಲಿ ದೂರಲಾರೆ. ಕಾಂಗ್ರೆಸು ತನ್ನ ಉದ್ದೇಶವನ್ನು ಮುಟ್ಟುವ ವರೆಗೆ ಇನ್ನೆಷ್ಟು ಸಂಕಷ್ಟಗಳನ್ನು ಎದುರಿಸಬೇಕೋ ಹೇಳಲಾಗುವುದಿಲ್ಲ. ಕಾಂಗ್ರೆಸಿನವರು ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಎದುರು ನೋಡಬೇಕು' ಹೀಗೆನ್ನುತ್ತಾರೆ ಗಾಂಧಿಜಿಯವರು.

ಆತ್ಮಗೌರವವುಳ್ಳ ಭಾರತೀಯನು ಬ್ರಿಟನಿನೊಡನೆ ಸಹಕರಿಸಲಾರನು.

ನೆಹರು ಅಜಾದರ ಹೇಳಿಕೆ

'ವೈಸರಾಯ ಪ್ರಕಟಣೆಯನ್ನು ನಾವು ವಿಷಾದದಿಂದ ಓದಿದೆವು. ಇದೀ ಪ್ರಕಟಣೆಯು ಭಾರತದ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ತತ್ವದ ಹಾನಿಕರವಾಗಿದೆ. ಈ ಪ್ರಕಟಣೆಯನ್ನು ಇಪ್ಪತ್ತು ವರ್ಷಗಳ ಹಿಂದೆ ಮಾಡಬೇಕಿತ್ತು. ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳ ಬಗ್ಗೆ ಅದರಲ್ಲಿ ಯಾವ ವ್ಯಾಖ್ಯೆಯೂ ಇಲ್ಲ. ಆದರೆ ತಮಗಲ್ಲದ ಯುದ್ಧದಲ್ಲಿ ಭಾರತವು ಅದರ ಒಪ್ಪಿಗೆಯಿಲ್ಲದೆ ಎಳೆಯುವುದರಲ್ಲಿ ಸೇರಿಸುವಂತಹುದಾಗಿದೆ. 'ಉತ್ತಮ ಅಂತರ್ರಾಷ್ಟ್ರೀಯ ಪರಿಸ್ಥಿತಿ, ಯೆಂಬ ಬ್ರಿಟಿಷ್ ಪ್ರಧಾನರ ಮಾತು ಬ್ರಿಟಿಷ್ ಸಾಮ್ರಾಜ್ಯದ ಬಲವರ್ಧನೆಗಾಗಿದೆ ಮಾತ್ರವಲ್ಲದೆ, ಅವರ ಈ ಮಾತು ಕೇವಲ ಯೂರೋಪು ದೇಶಗಳಿಗೆ ಅನ್ವಯಿಸುವುದಲ್ಲದೆ, ಏಸ್ಯಾ ಖಂಡ, ಆಫ್ರಿಕಗಳಿಗೆ ಅನ್ವಯಿಸುವುದಿಲ್ಲವೆಂದು ಕಾಣುತ್ತದೆ ವಸಾಹತ್ತುಗಳು ಊರ್ಜಿತಹೊಂದುವುದಿಲ್ಲ. ಸಾಮ್ರಾಜ್ಯಶಾಹಿಯು ಬೆಳೆಯುತ್ತಾ ಇದೆ.

'ಇದೇ ಯುದ್ಧದ ಉದ್ದೇಶವಾದರೆ, ಬ್ರಿಟನಿನೊಡನೆ ಆತ್ಮಗೌರವವುಳ್ಳ ಭಾರತೀಯ ಸಹಕರಿಸಲಾರನು. ಕಾಂಗ್ರೆಸು ನೀಡಿದ ಸಹಾಯ ಹಸ್ತವು ಸರಕಾರದಿಂದ ಹಿಂದಕ್ಕೆ ತಳ್ಳಲ್ಪಟ್ಟಿತು. ನಮ್ಮ ಮುಂದಿನ ಹೆಜ್ಜೆಯೇನೆಂಬುದನ್ನು ವರ್ಕಿಂಗ್ ಕಮಿಟಿಯು ನಿಶ್ಚಯಿಸುವುದು. ಸಂಕಷ್ಟದ ಕಾಲಬಂದಿದೆ. ಧೈರ್ಯ ವಿಶ್ವಾಸಗಳಿಂದ ಇದನ್ನು ಎದುರಿಸಬೇಕಾಗಿದೆ. ರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಗಾಗಿ ಗೌರವದಿಂದ ಇದನ್ನು ಎದುರಿಸೋಣ' ಹೀಗೆಂದು ನೆಹರು—ಅಜಾದರು ವೈಸರಾಯರ ಪ್ರಕಟಣೆಯ ಕುರಿತು ಒಂದು ಹೇಳಿಕೆಯನ್ನು ಹೊರಡಿಸಿದ್ದಾರೆ.

'ಬಹಳವಾಗಿ ನಿರಾಶಾಜನಕವಾದುದು'

ರಾಷ್ಟ್ರಪತಿಗಳ ಹೇಳಿಕೆ

'ಬ್ರಿಟಿಷರ ತತ್ವವು ಹಿಂದಿನಿಂದ ಇದ್ದಂತೆಯೇ ಇಂದೂ ಕೂಡಾ, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ರಕ್ಷಣೆಗಳ ಮಾತು ಭಾರತಕ್ಕೆ ಅನ್ವಯಿಸುವಂತಹುದಲ್ಲವೆಂದೂ, ಬ್ರಿಟನಿಗೆ ಭಾರತವು ಸಹಾಯ ಕೊಡಲು ಸಿದ್ಧತೆ ಮಾಡಿದಾಗ ಹೀಗೆ ಅವಿಶ್ವಾಸ ರೂಪದ ಪ್ರಕಟಣೆ ಹೊರಡಿಸಿದ್ದು ಬಹಳ ನಿರಾಶಾಜನಕವಾದುದೆಂದೂ' ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ವೈಸರಾಯರ ಪ್ರಕಟಣೆಯ ಕುರಿತು ಅಭಿಪ್ರಾಯ ಪ್ರಕಟಿಸಿದರು. ಅವರ ಹೇಳಿಕೆಯಲ್ಲಿ.—

'ನಮಗೆ ರೌಂಡ್‌ಟೇಬಲ್ ಕಾನ್ಫರೆನ್ಸುಗಳ ಅನುಭವವು ಇದೆ. ಆದರೆ ಯಾರೂ ಮುಂದಕ್ಕೆ, ಇಂದಿಗಿರುವ ಈ ದುರ್ಘಟನೆಗಳು (ಬ್ರಿಟಿಷರೇ ಅವುಗಳಿಗೆ ಜವಾಬುದಾರರು) ಸರಿಗೊಳ್ಳದ ವಿನಹ ಅಂತಹ ಕಾನ್ಫರೆನ್ಸುಗಳಲ್ಲಿ ಸಹಕರಿಸುವ ಹಾಗಿಲ್ಲ. ಇಂದೂ ಕೂಡಾ ಬ್ರಿಟಿಷರು ನಮ್ಮನ್ನು ಒತ್ತಾಯದಿಂದ ಆಳಬಹುದು. ಆದರೆ ನಮ್ಮ ನೈತಿಕ ಸಹಾಯವು ಅವರಿಗೆ ಹಾಗೆ ಮಾಡುವುದರಿಂದ ಖಂಡಿತ ದೊರಕಲಾರದು. ವೈಸರಾಯರ ಪ್ರಕಟಣೆಯು ಅಂತಹ ನೈತಿಕ ಸಹಾಯವನ್ನು ಸಂಪೂರ್ಣ ಕಡಿದುಬಿಡಲು ಸಾಕಾಗಿದೆ. ಇಂದಿನ ಯುದ್ಧವು ಕೇವಲ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಲವರ್ಧನೆಗೆ ಮಾತ್ರವೇ ಆಗಿದೆ. ಹಿಂದೆ ಉದ್ಘೋಷಿಸುತ್ತಿದ್ದ ಬ್ರಿಟಿಷರ ದೊಡ್ಡ ಉದಾತ್ತ ತತ್ವಗಳು ಇಂದಿನ ಸತ್ವ ಪರೀಕ್ಷೆಯ ಕಾಲದಲ್ಲಿ ಧೂಳಿ ಧೂಸರವಾಗಿದೆ. ಆದುದರಿಂದ ಕಾಂಗ್ರೆಸಿನ ಅನುಯಾಯಿಗಳೆಲ್ಲರೂ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಶಾಂತತೆಯಿಂದ ಕಾಯುತ್ತಾ ಅದರಂತೆ ವರ್ತಿಸಬೇಕಾಗಿ ಅಪೇಕ್ಷೆಪಡುತ್ತೇನೆ.

ಸರೋಜಿನಿ ದೇವಿಯರ ಹೇಳಿಕೆ

'ನಮ್ಮ ದೇಶದ ಸ್ವಾತಂತ್ರ್ಯದಾನದ ವಿಷಯದಲ್ಲಿ ಹೆಚ್ಚಾಗಿ ನಮ್ಮೊಳಗಿನ ಆಂತರಿಕ ಅನೈಕ್ಯವನ್ನೇ ಪ್ರಧಾನವಾಗಿ ಹಿಡಿದೆತ್ತಿ, ನಮ್ಮನ್ನು ವಂಚಿಸುವ ಕೆಲಸವು ಯಶಸ್ವಿಯಾಗಿ ಮಾಡಲ್ಪಡುತ್ತದೆ. ಆದರೆ ಅಂತರ್ರಾಷ್ಟ್ರೀಯ ಗೊಂದಲದ ಈ ಕಾಲದಲ್ಲಿ ಭಾರತದ ಆದರ್ಶವನ್ನೂ, ಬ್ರಿಟಿಷರ ತತ್ವವನ್ನೂ ಹೀಗೆ ವ್ಯಕ್ತಪಡಿಸಿದ್ದು ಸರ್ವಥಾ ಯೋಗ್ಯವಾಗಲಿಲ್ಲ. ಒಬ್ಬ ರಾಜಕೀಯ ವಿಶಾರದನಲ್ಲಿರತಕ್ಕ ಭವಿಷ್ಯ ದರ್ಶನವು ಬ್ರಿಟಿಷ್ ರಾಜನೀತಿಜ್ಞರಲ್ಲಿ ಮಾಯವಾಗಿದೆ. ಭಾರತವು ಯುದ್ಧ ಮಾಡುವ ಉದ್ದೇಶವೇನೆಂದೂ, ಆ ಉದ್ದೇಶವು ಭಾರತಕ್ಕೆ ಹೇಗೆ ಅನ್ವಯಿಸುತ್ತದೆಯೆಂದು ಕೇಳಿದ್ದನ್ನು ಸ್ಪಷ್ಟಪಡಿಸಲು ತಿರಸ್ಕರಿಸಿದುದನ್ನು ವಿಚಾರಿಸಿದರೆ ಇದಕ್ಕೆ ಎಡೆಯಾಗಿದೆ. ನಾವು ಇಂದಿನ ಪರಿಸ್ಥಿತಿಯಲ್ಲಿ ನಿಷ್ಕಲ್ಮಷವಾದ ಮತ್ತು ವಿಶಾಲ ಹೃದಯದಿಂದ ಬ್ರಿಟನಿಗೆ ಬೆಂಬಲ ಕೊಟ್ಟಿದ್ದೆವು. ಭಾರತವು ಮತ್ತು ಬ್ರಿಟನು, ಗೆಳೆತನದಿಂದ ಇರುವುದು ಬಿಟ್ಟು ಜಗಳಾಡಲು ಸಂದರ್ಭವೊದಗುವುದೇ ಎಂಬ ವಿಚಾರವು ತಲೆದೋರಿದೆ'.

SAVING & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

The Canara Industrial & Banking Syndicate Ltd.

(Incorporated in British India)

ESTD) (1925

Head Office: UDIPI (S. India)

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂ
ತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಶ್ವಾಸಕೋಶಗಳ ಬಾಧೆ
ಯನ್ನು ದೂರವಾಗಿರಿಸಿರಿ

ನೀವು ಶ್ವಾಸಕೋಶಗಳನ್ನು ದುರ್ಬಲಗೊಳಿಸುವ ಶೀತ, ದೀರ್ಘಕಾಲದ ಕೆಮ್ಮು, ಗಂಟಲು ನೋವು ಮೊದಲಾದವುಗಳಿಗೆ ತುತ್ತಾದರೆ ಕ್ರಿಮಿನಾಶಕ ಶ್ವಾಸನೀಯ ಪೆಪ್ಸ್ ಮಾತ್ರೆಗಳನ್ನು ಸೇವಿಸಿರಿ. ಈ ಎಚ್ಚರಿಕೆಯು ನಿಮ್ಮ ಶ್ವಾಸಕೋಶಗಳ ಬಾಧೆಯನ್ನು ದೂರೀಕರಿಸಿ ನಿಮೋನಿಯವು ಸಂಭವಿಸಬಹುದಾದಲ್ಲಿ ತಡೆಗಟ್ಟುವುದು

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ಶ್ವಾಸೇಂದ್ರಿಯಗಳನ್ನು ಪ್ರವೇಶಿಸುವುದು ಇದರಿಂದ ಶ್ವಾಸೇಂದ್ರಿಯಗಳೆಲ್ಲವೂ ಗುಣಹೊಂದಿ ಅದರ ಮೇಲಕ್ಕಿರುವ ಚರ್ಮದ ಪರೆಯ ಬಾತುಕೊಳ್ಳುವಿಕೆಯು ಕಡಿಮೆಯಾಗುತ್ತದೆ ಪೆಪ್ಸು ಶೀತವನ್ನು ನಾಶಮಾಡಿ ಕಫದ ಕ್ರಿಮಿಗಳನ್ನು ನಾಶಮಾಡಿ ಎಂಥಾ ಕಠಿಣ ತರದ ಶೀತ ಅಥವಾ ಕೆಮ್ಮನ್ನಾದರೂ ಗುಣಪಡಿಸುವುದು



ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ 1ರಂತೆ ಮಾರುತ್ತಾರೆ

ಏಜಂಟ್ಸ್:— ಮೆಸರ್ಸ್ ದಾಥಾ ಮತ್ತು ಕಂಪೆನಿ,
ಜಾರ್ಜ್‌ಟೌನ್ ಮದರಾಸು

ಯಾವಾಗಲೂ ಪೆಪ್ಸನ್ನೇ ಸೇವಿಸಿರಿ

PEPS

ಕ್ರಿಮಿನಾಶಕ ಶ್ವಾಸನೀಯ ಮಾತ್ರೆಗಳು

ಸಾವಕಾರ ಶ್ರೀನಿವಾಸ ರಂಗಪ್ಪೈ
[ಸ್ಥಾಪನೆ: ಕ್ರಿ ಶ 1858]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

ಗುಣಬಾರದಿದ್ದರೆ ಹಣ ವಾಪಾಸು
ಸುಪ್ರಸಿದ್ಧ ವೈದ್ಯರಾದ ಎಂ ಕೆ, ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಪೊಥಲೇ ಪೂರಾ ... ರವಾಡಿ ಔಷಧಿ ಬೇಡಿ ... ಸರ್ಟಿಫಿಕೆಟು ಡಾ ವೈದ್ಯ ಎಲ್ ಸಿ ಪಿ ಎಸ್ ಕೆಳವ... ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ... ಡಬ್ಬಿಯ ಕ್ರಯರೂ ೪ ... ವಿ ಪಿ

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, (S M C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಪಂಡಿತ ಡಿ. ಗೋಪಾಲಾಚಾರ್ಲುರವರ
ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು
ಆಯುರ್ವೇದಾಶ್ರಮ :: ::
ಮದರಾಸು

ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

THE PIE-MONEY BANK LTD.,
Maidan Road, MANGALORE.

Undertakes all kinds of Banking Business Current account at 2½%per annum. Savings Bank Deposits at 4½% per annum

FIXED DEPOSITS

For 3 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director*.

ಒಂದು ಸಣ್ಣ ಕತೆ:

ಅದೇ ಉಂಗುರ?

'ಈ ದಿನ ನಿನಗೆ ಊಟ ಹಾಕುವುದಿಲ್ಲ, ಸೋಮಾರಿಯಾಗಿ ನೀನು ಉಣ್ಣಲು ಸಾಧ್ಯವಿಲ್ಲ' ಆತನ ಚಿಕ್ಕಪ್ಪನು ಹೀಗೆಂದು ಹೇಳಿ ಬೈದು ಹುಡುಗನನ್ನು ಹೊರ ಹಾಕಿದನು!

'ಸೋಮಾರಿಯಾಗಿ ನೀನು ಉಣ್ಣುವುದು ಸಾಧ್ಯವಿಲ್ಲ!' ದಾರಿ ಹಿಡಿದು ಹೋಗುತ್ತಿದ್ದಂತೆ ಈ ಮಾತು ಆತನ ಕಿವಿಯಲ್ಲಿ ನಿರಂತರ ಧ್ವನಿ ಮಾಡುತ್ತಿತ್ತು! 'ಬೀಡಿ, ಬೀಡಾ, ಸಿಗರೇಟ್, ಚಾಕಲೇಟ್' ಗಟ್ಟಿಯಾಗಿ ಕೂಗಲು ಅವನಿಗೆ ಆಗಲಿಲ್ಲ. ಕಂಠವು ಗದ್ಗದವಾಯಿತು. ಹುಡುಗರ ಗುಂಪೊಂದು ಆ ಕಡೆ ಬಂದಿತು. ಹರಕು ಮತ್ತು ಕೊಳಕು ಅಂಗಿ ಹಾಕಿಕೊಂಡು, ಕೈಯಲ್ಲಿ ಬೀಡಿ ಬೀಡಾ ಹಿಡಕೊಂಡು ತಿರುಗಾಡುವ ಅವನನ್ನು ನೋಡಿ, ಅವರ ಚೇಷ್ಟೆಯು ಹೆಚ್ಚಿತು. 'ಬೀಡಿ, ಬೀಡಾ ಯಾರಿಗೆ ನನ್ನ ಬೀಡಿ ಬೀಡಾ ಬೇಕೊ" ಹೀಗೆಂದು ಕೇಳಿ ಅವರು ಒಬ್ಬರೊಬ್ಬರನ್ನು ನೋಡಿ ಗಟ್ಟಿಯಾಗಿ ನಕ್ಕರು. 'ಹೋ ನೀನು ಈಗ ಬೀಡಿ ಬೀಡಾ ಮಾರುತ್ತೀಯಾ? ನನಗೆ ಮೊದಲೇ ಗೊತ್ತಿತ್ತು, ನೀನು ಹಣ ಪೋಲಿಕ್ಕೂ ಆಗುವುದಿಲ್ಲವೆಂದು' ಹೀಗೆ ಒಬ್ಬನು ಅವನನ್ನು ಹಂಗಿಸಿ ಹೇಳಿದನು. ತಿರಿಗಿ ಹುಡುಗರು ಗಟ್ಟಿಯಾಗಿ ನಕ್ಕರು! ಅವರ ಗುಂಪು ಹೀಗೆ ಮುಂದೆ ಸಾಗಿತು.

ಹಿಂದೆ ತಂದೆಯು ಬದುಕಿದ್ದಾಗ, ಆತನೂ ಅವರೊಡನೆ ಶಾಲೆಗೆ ಹೋಗಿ ಓದುತ್ತಿದ್ದ. ತರಗತಿಯಲ್ಲಿ ಎಲ್ಲರನ್ನೂ ಮೀರಿಸಿ ಉಪಾಧ್ಯಾಯರ ಮೆಚ್ಚಿಗೆ ಪಡೆದಿದ್ದ. ಆದೆಲ್ಲಾ ತಂದೆಯು ಜೀವಿಸಿದ್ದಾಗ! ಈಗ ಇಂತಹ ಅವಸ್ಥೆಯಲ್ಲಿ ಕಂಡು, ಅವನ ಸಹಪಾಠಿಗಳು ಆತನನ್ನು ಕುಚೇಷ್ಟೆ ಮಾಡಿದರು. ಈ ನಿಷ್ಠುರ ಲೋಕದಲ್ಲಿ ತಂದೆಯು ಹೀಗೆ ತನ್ನನ್ನು ಒಂಟಿಗನಾಗಿ ಬಿಟ್ಟುಹೋಗಬೇಕೆ? ಅವನ ಬಾಡಿದ್ದ ಕೆನ್ನೆಯ ಮೇಲೆ, ಅತನಿಗೆ ತಿಳಿಯದಂತೆಯೇ ಕಂಬನಿಯೊಂದು ಉರುಳಿತು. ಕೂಡಲೇ ಅದನ್ನು ಕೈಯಿಂದ ಒರಸಿಕೊಂಡನು. ಒಬ್ಬ ನಡು ಹರೆಯದ ಶ್ರೀಮಂತನು, ತನ್ನ ಮಗಳೊಡನೆ ನಡೆದು ಆ ಕಡೆಗೇ ಬರುತ್ತಿದ್ದ.

ಬೀಡಾ ಬೀಡಿ, ಚಾಕಲೇಟ್' ಹುಡುಗನು ತಿರಿಗಿ ಕೂಗಿ ಹೇಳಲು ಸುರುಮಾಡಿದ. ಹುಡುಗಿಯು ಅಲ್ಲಿಯೇ ನಿಂತಳು. 'ಅಪ್ಪಾ' 'ನನಗೆ ಒಂದು ಚಾಕಲೇಟ್ ಬೇಕು'. ಹುಡುಗನ ಕಡೆಗೆ ಆಕೆ ಕೈತೋರಿಸಿ, ತಂದೆಯೊಡನೆ ಹೇಳಿದಳು. ಹುಡುಗನನ್ನು ಹತ್ತಿರ ಕರೆದು ಅವನಲ್ಲಿರುವ ವಸ್ತುಗಳನ್ನು ತನ್ನ ಮಗಳಿಗೆ ತೋರಿಸಲು ಆತ ಹೇಳಿದ. ಡಬ್ಬಿಯನ್ನು ಕೆಳಗಿಟ್ಟು ಹುಡುಗನು ಒಂದೊಂದೇ ತೆಗೆದು ತೋರಿಸಿದನು. ಚಾಕಲೇಟ್, ಲೋಸೆಂಜರ್ಸ್, ನೆಲಗಡಲೆ, ಹುರಿಗಡಲೆ ಹೀಗೆ ಹುಡುಗಿಯು ಪ್ರತಿಯೊಂದನ್ನೂ ಮುಟ್ಟಿ ಎಲ್ಲದರಿಂದಲೂ ಸ್ವಲ್ಪ ಸ್ವಲ್ಪ ತೆಗೆದು ತನ್ನ ಕೈ ತುಂಬಿಸಿಕೊಂಡಳು. ಅದರ ಕ್ರಯವನ್ನು ಆತನು ಕೊಟ್ಟನು. 'ಅಪ್ಪಾ, ಅದು ಎಷ್ಟು ಚೆನ್ನಾಗಿ ಹೊಳೆಯುತ್ತದೆ! ನನಗೆ ಅದೂ ಬೇಕು'. ಹುಡುಗನು ಬೆರಳಲ್ಲಿಟ್ಟಿದ್ದ ಗಾಜಿನ ಕಲ್ಲಿನಿಂದ ಹೊಳೆವ ಹಿತ್ತಾಳೆ ಉಂಗುರದ ಕಡೆಗೆ ಕೈತೋರಿಸಿ ಆಕೆ ಹೇಳಿದಳು. 'ಏನು ಆ ಹುಡುಗನ ಬೆರಳಲ್ಲಿರುವ ಹಿತ್ತಾಳೆ ಉಂಗುರವೇ?' ಕೆಟ್ಟ ಹುಡುಗಿ, ನಿನಗೆ ಅದು ಬೇಕೆ? ತಂದೆ ಬೆದರಿಸಿದ. ಆದರೆ ಅವಳು ಅದರಿಂದ ಸಮಾಧಾನಗೊಳ್ಳಲಿಲ್ಲ. ಹುಡುಗಿಯ ವಿಶಾಲವಾದ ಕಣ್ಣುಗಳಲ್ಲಿ ನೀರು ತುಂಬಿರುವುದನ್ನು ನೋಡಿ, ಹುಡುಗನಿಗೆ ಮರುಕವಾಯಿತು. 'ಇದು ಅವಳಿಗೆ ಇರಲಿ ಕಳೆದ ಜಾತ್ರೆಯ ಸಮಯ ತೆಕ್ಕೊಂಡಿದ್ದೆ. ಕೇವಲ ಒಂದಾಣೆ, ಇದರ ಬೆಲೆಯಾದರೂ ಹೆಚ್ಚಿಲ್ಲ. ಆಕೆ ಅಳುತ್ತಾಳೆ' ಹುಡುಗ ಹೇಳಿದ. ತಾಯಿಯಿಲ್ಲದ ಹುಡುಗಿಯನ್ನು ಕೂಗಿಸುವುದು ಬೇಡವೆಂದು, ಎರಡಾಣೆ ಕೊಟ್ಟು ಅದನ್ನು ಹುಡುಗನಿಂದ ಪಡಕೊಂಡು ತಂದೆಯು ಮಗಳಿಗಿತ್ತನು.

ಕೈಗೆ ಸಿಕ್ಕಿಸಿ ನೋಡಿದಾಗ ಆ ಉಂಗುರವು ಅವಳ ಬೆರಳಿಗೆ ದೊಡ್ಡದಾಗುತ್ತಿತ್ತು. ಆದರೂ ಹುಡುಗಿಯು ಸಂತೋಷದಿಂದ ನೆಗೆನೆಗೆದು ತಂದೆಯೊಡನೆ ಹೊರಟು ಹೋದಳು. ಕಣ್ಮರೆಯಾಗುವ ವರೆಗೆ ಹುಡುಗನು ಅವರನ್ನೇ ನೋಡುತ್ತಿದ್ದನು. ಸುಖಿಯಾಗಿದ್ದ ಆ ಹುಡುಗಿಯ ಸಲುವಾಗಿ, ಆತನು ಮತ್ಸರ ಪಡಲಿಲ್ಲ. ಆದರೆ ಆತನಿಗೆ ತನ್ನ ತಂದೆಯು ಈಗ ಬದುಕಿರಬೇಕೆಂದು ಮಾತ್ರ ಅನ್ನಿಸಿತು.

ಹಲವು ವಾರ, ಹೀಗೆ ಆ ಹುಡುಗಿಯನ್ನು ಆತನು ನೋಡುತ್ತಿದ್ದ. ನೋಡಿದಾಗ ಇಬ್ಬರೂ ಅನ್ಯೋನ್ಯ ಮುಗುಳ್ನಗು ನಗುವರು. ಕಡೆಗೆ ಒಂದು ವಾರ ಆತನು ಆಕೆಯನ್ನು ಕಾಣಲಿಲ್ಲ. ಆ ಮೇಲೆ ಆಕೆ ಬರಲೇ ಇಲ್ಲ. ತನ್ನನ್ನು ಆಕೆ ಮರೆತಿರಬಹುದೆಂದು ಆತ ವಿಚಾರಿಸಿದ. ದಿನಗಳು, ವಾರಗಳು ಕ್ರಮದಂತೆ ಉರುಳಿದುವು.

ಸಂತೋಷ-ಸಂಕಷ್ಟ, ನಗು-ಕಂಬನಿ ಇವುಗಳ ಕಾಣಿಕೆಗಳನ್ನು ಲೋಕಕ್ಕೆ ಕೊಡುತ್ತಾ ಹನ್ನೆರಡು ವರ್ಷಗಳು ಗತಿಸಿದುವು. ಒಂದು ಭಾನುವಾರ, ಸೂರ್ಯನು ಉದಿಸಿಬಂದಿದ್ದನು. ಮಾಳಿಗೆಯ ಕಿಟಕಿಯನ್ನು ತೆರೆದು ಓರ್ವ ಸುಂದರ ತರುಣಿಯು ಒಂದು ಮನೆಯಿಂದ ಹೊರಗೆ ನೋಡುತ್ತಿದ್ದಳು. ರಾತ್ರಿ ಚೆನ್ನಾಗಿ ಮಳೆ ಬಂದಿದ್ದುದರಿಂದ ಮಾರ್ಗವು ಸ್ವಚ್ಛವಾಗಿತ್ತು. ಜನರು ಅತ್ತಿತ್ತ ತಮ್ಮ ತಮ್ಮ ಕಾರ್ಯಗಳಲ್ಲಿ ಚಲಿಸುತ್ತಿದ್ದರು. ಒಮ್ಮೆ ಆಕೆ ನಿಡಿದಾಗಿ ಒಂದು ಉಸಿರೆಳೆದಳು.

ಎರಡು ವರ್ಷಗಳ ಹಿಂದೆ, ಅವಳ ತಂದೆಯು ತೀರಿಹೋಗಿದ್ದನು. ಕಾಲೇಜಿನಲ್ಲಿ ಮೂರನೇ ವರ್ಷದಲ್ಲಿ ಕಲಿಯುತ್ತಿದ್ದ ಆಕೆ, ವ್ಯಾಸಂಗವನ್ನು ಅಲ್ಲಿಯೇ ಕೊನೆಗಾಣಿಸಬೇಕಾಯಿತು. ಒಬ್ಬ ಹಿತಚಿಂತಕರ ಸಹಾಯದಿಂದ ಒಂದು ಹುಡುಗಿಯರ ಶಾಲೆಯಲ್ಲಿ ಅಧ್ಯಾಪಕಿಯಾಗಿ ಸೇರಿದ್ದಳು. ಈಗ ಆಕೆ ಸುಖವಾಗಿಯೇ ಇರುವಳೆಂದು ಇತರರು ತಿಳಿಯಬಹುದಿತ್ತು. ಆದರೆ ಅವಳ ಬಹಳ ಸಂಕಷ್ಟ ಅವಳಿಗೇ ಗೊತ್ತು! ತಾಯಿಯು ಮೊದಲೇ ತೀರಿಹೋಗಿರಲು, ಈಗ ತಂದೆಯೂ ಮೃತಿಹೊಂದಿದ ಮೇಲೆ, ತನ್ನವರೆಂಬವರು ಆಕೆಗೆ ಯಾರೂ ಇರಲಿಲ್ಲ. ಅವಳ ಹೃದಯವು ಇಂದು ಪ್ರೇಮ ಒಡನಾಟಗಳನ್ನು ಹಾರೈಸುತ್ತಿತ್ತು. ಎಷ್ಟೋ ದೂರದ ದಿಗಂತದಲ್ಲಿ ಮಸುಕುಮಸುಕಾದ ಕಲ್ಪನೆಯ ಚಿತ್ರವನ್ನು ಆಕೆ ಕಾಣುವಳು. ಏನೋ ಏನೋ ವಿಚಾರಗಳು ಬಂದುವು. ಕಡೆಗೆ ಹೊರಗಡೆಯಿಂದ ತನ್ನ ದೃಷ್ಟಿಯನ್ನು ಹಿಂತೆಗೆದಳು. ಹಾಸಿಗೆಯ ಬಳಿಯಿಟ್ಟಿದ್ದ, ಕೊಡೆಯ ಕಡೆಗೆ ಅವಳ ದೃಷ್ಟಿಯು ಬಿತ್ತು. 'ಆತನು ಒಳ್ಳೆಯ ದಯಾಳುವಾದ ಗೃಹಸ್ಥನು. ರಾತ್ರಿ ಅಕಸ್ಮಾತ್ತಾಗಿ ಮಳೆ ಸುರಿಯಲು, ತನ್ನ ಕೊಡೆಯನ್ನೇ ಕೊಟ್ಟು ಬಹಳ ಉಪಕಾರ ಮಾಡಿದ ಅವನ ಹೆಸರೇನೋ ಗೊತ್ತಿಲ್ಲ. ನಾನು ನನ್ನ ವಿಳಾಸವನ್ನು ಕೊಟ್ಟಿದ್ದೇನೆ. ಬಹುಶಃ ಕೊಡೆಗಾಗಿ ಈ ದಿನ ಆತನು ಬಂದರೂ ಬರಬಹುದು' ಹೀಗೆ ಯೋಚಿಸಿದಳು.

ಭಾನುವಾರವಾಗಿದ್ದರೂ, ಅವಳಿಗೆ ಸಮಯವಿರಲಿಲ್ಲ. ಮಧ್ಯಾಹ್ನದ ಊಟ ತೀರಿಸಿದ ಮೇಲೆ ರಾಶಿ ರಾಶಿಯಾಗಿದ್ದ ಅಭ್ಯಾಸ ಪುಸ್ತಕಗಳನ್ನು (Exercise Books) ತಿದ್ದಲು ಕುಳಿತಳು. ಒಂದೆರಡು ಪುಸ್ತಕಗಳನ್ನು ಮುಗಿಸುವಲ್ಲಿ ಆಕೆಗೆ ತಲೆನೋವು ಸುರುವಾಯಿತು. 'ಅಮ್ಮಾ' ಹೊರಗಿನಿಂದ ಆಳು ಕರೆದನು. ಬಾಗಿಲು ತೆಗೆಯಲು ಒಂದು ಚೀಟಿಯನ್ನು ಆತನು ಆಕೆಯ ಕೈಗಿತ್ತನು. ಒಂದು ಬಿಳಿಯ ಕಾರ್ಡು! ಅದರಲ್ಲಿ ಡಾ. ಪ್ರಭಾಕರರಾವ್ ಎಂ. ಬಿ. ಬಿ. ಎಸ್. ಎಂದು ಬರೆದಿತ್ತು. ಕರಿಯಾ, ನನ್ನನ್ನೇ ನೋಡಬೇಕೆಂದು ಅವರು ಹೇಳಿದರೇ, ಅಥವಾ ಏನಾದರೂ ತಪ್ಪಿರಲಿಕ್ಕಿಲ್ಲವಷ್ಟೆ? ನನಗೆ ಅವರ ಪರಿಚಯವಿದ್ದಂತೆ ಕಾಣುವುದಿಲ್ಲ ಎಂದು ಉದ್ವೇಗದಿಂದ ಆಳಿನೊಡನೆ ಕೇಳಿದಳು. 'ಹೌದಮ್ಮ, ರತ್ನಾದೇವಿಯವರನ್ನು ಕಾಣಬೇಕೆಂದು ನಿಮ್ಮ ಹೆಸರೆತ್ತಿಯೇ ಹೇಳಿದರು' ಎಂದು ಆಳು ಹೇಳಿದ. ಹಾಗಾದರೆ ಚಾವಡಿಗೆ ಬರಹೇಳು. ಒಂದೇ ನಿಮಿಷದಲ್ಲಿ ನಾನು ಅಲ್ಲಿಗೆ ಬರುತ್ತೇನೆ.

ಒಮ್ಮೆ ಆಕೆ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡಳು. ಮೆಲ್ಲನಿಯಿಂಥ ನಯವಾದ ಸ್ವರದಲ್ಲಿ ಆಲಾಪನೆ ಮಾಡುತ್ತಾ ಮೆಲ್ಲಮೆಲ್ಲನೆ ಮೆಟ್ಟಿಲಿಳಿದು ಬಂದಳು. ಏಕೋ ಹೊಸಬನನ್ನು ಕಂಡು ಮಾತನಾಡುವ ವಿಷಯದಲ್ಲಿಯೇ ಆಕೆ ವಿಭ್ರಮೆಗೊಂಡಿದ್ದಳು. ಸೀರೆಯ ಸೆರಗನ್ನು ಸರಿಮಾಡಿಕೊಂಡು ಚಾವಡಿಗೆ ಬಂದಳು. ಆತನು ಮಂಚದ ಬಳಿ ಮೊದಲೇ ಬಂದು ನಿಂತುಕೊಂಡಿದ್ದನು.

ನಮಸ್ಕಾರ ಆತ ಹೇಳಿದ 'ನಮಸ್ಕಾರ ಕುಳಿತುಕೊಳ್ಳಿ' ರತ್ನಾ ಉತ್ತರವಿತ್ತಳು. ಇಬ್ಬರೂ ಕುಳಿತರು. ಆಕೆ ತನ್ನ ಮರೆನೋಟದಿಂದ ಆತನನ್ನು ಒಮ್ಮೆ ನೋಡಿದಳು. ಆತನು ಒಳ್ಳೆಯ ಅಲಂಕಾರವಾಗಿ ಉಡುಗೆ ತೊಟ್ಟಿದ್ದ ಸುಂದರನಾದ ಲಕ್ಷಣವುಳ್ಳ ಯುವಕ. ಆತನು ಮೇಜಿನ ಮೇಲಿದ್ದ ಪತ್ರಿಕೆಯೊಂದರ ಪುಟವನ್ನು ತಿರುವುತ್ತ ಕುಳಿತಿದ್ದ.

ನಿಮಗೆ ನನ್ನ ಆಗಮನವು ಬಹಳ ವಿಚಿತ್ರವಾಗಿ ಕಂಡಿರಬಹುದು. ನಾನು ಹೀಗೆಯೇ ಈ ದಾರಿಯಿಂದ ಬಂದವನು, ಕೊಡೆಯನ್ನು ತೆಕ್ಕೊಂಡು ಹೋಗುವ ಎಂತ ಮನಸ್ಸಾಯಿತು. ಹಾಗೆ ಬಂದು . . .

ಹೋ! ನಿಮ್ಮನ್ನು ನಾನು ಗುರುತಿಸಲೇ ಇಲ್ಲವಲ್ಲಾ. ಆಗ ಕತ್ತಲೆಯಾಗಿದ್ದುದರಿಂದ ನಿಮ್ಮ ಗುರುತು ನನಗೆ ಸ್ಪಷ್ಟವಾಗಿ ಆಗಲಿಲ್ಲ. ತಡಿಯಿರಿ. ಕೊಡೆಯನ್ನು ಈಗ ತರುತ್ತೇನೆ" ಎಂದು ಮಾಳಿಗೆಗೆ ಆಕೆ ಓಡಿಹೋದಳು.

ಪ್ರಭಾಕರನು ಸುತ್ತು ಒಮ್ಮೆ ನೋಡಿದನು. ಮನೆ ಒಳ್ಳೆಯ ನಾಜೂಕಾಗಿತ್ತು. ಗೋಡೆಯಲ್ಲಿ ಒಂದೆಡೆ ವರ್ಣಮಯವಾದ ಗ್ರೇಟಾ ಗಾರ್ಬೋ ಚಿತ್ರವೂ ಇನ್ನೊಂದೆಡೆ ಮಸಕುಮಸಕಾದ ಹಳೆಯ ಮಹಾತ್ಮಾ ಗಾಂಧಿಯವರ ಚಿತ್ರವೂ ತೂಗಾಡಿಸಿತ್ತು! ಬಹಳ ರಸಿಕಳು ಎಂದುಕೊಂಡು ಆತನು ಮುಗುಳು ನಕ್ಕನು!

"ನಿಮ್ಮನ್ನು ಗುರುತು ಹಿಡಿಯದಿದ್ದಕ್ಕೆ ಕ್ಷಮಿಸಬೇಕು, ಬಹಳ ಉಪಕಾರವಾಯಿತು" ರತ್ನ ಕೊಡೆಯನ್ನು ಆತನ ಕೈಯಲ್ಲಿ ತಿರಿಗಿ ಕೊಡುತ್ತ ಹೇಳಿದಳು. "ಹಾಗೇನೂ ಇಲ್ಲ, ನಿಮ್ಮ ಪರಿಚಯವಾದದ್ದಕ್ಕೆ ಸಂತೋಷವಾಯಿತು. ಈಗ ಬರುತ್ತೇನೆ ನಮಸ್ಕಾರ" ಹೀಗೆಂದು ಅವಸರವಸರವಾಗಿ ಅವನು ಅಲ್ಲಿಂದ ಹೊರಟು ಹೋದನು.

ಆ ದಿನ ರಾತ್ರಿ ಆತನಿಗೆ ನಿದ್ರೆ ಹತ್ತಲೇ ಇಲ್ಲ. ರತ್ನಳ ಸ್ವರ ಪರಿಚಯವಿದ್ದಂತೆ ಆತನಿಗೆ ಅನ್ನಿಸಿತು. ಒಂದೊಂದೇ ಹಳೆಯ ನೆನಪುಗಳೂ ಹೊಳೆದುವು. ತೀರಿಹೋದ ತಂದೆತಾಯಿಗಳು, ತನ್ನ ಬಾಲ್ಯ, ಕಠಿಣನಾದ ತನ್ನ ಚಿಕ್ಕಪ್ಪ, ದಯಾಳು ಬ್ರಾಹ್ಮಣ ಪಂಡಿತನ ಆಶ್ರಯ, ವಿದ್ಯಾಭ್ಯಾಸ, ಬ್ರಾಹ್ಮಣನು ತೀರಿಹೋಗಲು ತನ್ನ ಹೆಸರಿಗೇ ಮರಣಶಾಸನವಾಡಿಟ್ಟಿದ್ದ. ಅದರಿಂದ ತನಗೊದಗಿದ ವಿಪುಲ ಸಂಪತ್ತು ಇವುಗಳೆಲ್ಲವನ್ನೂ ನೆನಸುತ್ತಿದ್ದಂತೆ ಲೋಕದ ವೈಚಿತ್ರ್ಯವನ್ನು ಎಣಿಸಿ ಆತನು ಆಶ್ಚರ್ಯಗೊಂಡನು.

ಕಡೆಗೆ ನಿದ್ರೆಬೀಳಬೇಕಾದರೆ ಸಾಧಾರಣ ಮುಂಜಾವವಾಗಿತ್ತು!

ಬುಧವಾರ ಸಂಜೆ ಶಾಲೆಬಿಟ್ಟು, ರತ್ನ ಬಸ್ಸಿಗಾಗಿ ಕಾದುನಿಂತಿದ್ದಳು. ಶಾಲೆಯ ಪಾಠದಿಂದ ಆಕೆಗೆ ನಿಜವಾಗಿ ಆ ದಿನ ಬಹಳ ಆಯಾಸವಾಗಿತ್ತು! ಮಾರ್ಗದಲ್ಲಿ ಅತ್ತ ಹಾದುಹೋಗುವ ಯುವಕನೊಬ್ಬನು ಆಕೆಯ ಮುಂದೆ ನಿಂತು 'ನಮಸ್ಕಾರ' ಎಂದನು. ರತ್ನ ಅಷ್ಟು ಆಯಾಸಗೊಂಡಿದ್ದರೂ ನಗಾಡಿ, ತಿರಿಗಿ ನಮಸ್ಕರಿಸಿದಳು. ಆತನು ಡಾ. ಪ್ರಭಾಕರನೇ ಆಗಿದ್ದನು.

"ನೀವು ಬಹಳ ಆಯಾಸಗೊಂಡಂತಿದೆ" ಆತ ಕೇಳಿದ, "ನಾನು ನಿಮಗೇನಾದರೂ ಸಹಾಯ ಮಾಡಬಹುದೇ?"

"ಥೇಂಕ್ಸ್, ನೀವು ಬಹಳ ದಯಾಳುಗಳು. ಮನೆಗೆ ಹೋದ ಮೇಲೆ ನನ್ನ ಆಯಾಸವೆಲ್ಲಾ ಕಡಿಮೆ ಯಾಗುತ್ತದೆ" ಆಕೆ ಉತ್ತರವಿತ್ತಳು.

ಒಟ್ಟು ಇಷ್ಟವಿದ್ದರೆ ಮನೆ ವರೆಗೆ ನಿಮ್ಮನ್ನು ನಾನು ಬಿಟ್ಟು ಬರಬಹುದು. ಮಾತ್ರವಲ್ಲದೆ ನಾನೂ ಒಬ್ಬ ಡಾಕ್ಟರ್ ಎಂದು ನಿಮಗೆ ಗೊತ್ತಿದೆಯಷ್ಟೆ?" ಪ್ರಭಾಕರನು ಹಸನ್ಮುಖನಾಗಿ ಹೇಳಿದ. ರತ್ನಾಳ ಅಸಹಾಯವಾದ ದೃಷ್ಟಿಯು ಆತನ ಹೃದಯವನ್ನು ಚೆನ್ನಾಗಿ ಮುಟ್ಟಿತು. ಇಬ್ಬರೂ ಮಾತನಾಡುತ್ತಾ ಮುಂತೆರಳಿದರು. ಆಕೆಯನ್ನು ಅವರ ಮನೆ ವರೆಗೆ ಮುಟ್ಟಿಸಿ ಪ್ರಭಾಕರನು ಹಿಂತಿರಳಿದನು. ಆತನು ಹಿಂತಿರಳುವಾಗ ರತ್ನ ಅತ್ಯಂತ ಆದರದಿಂದ "ನೀವು ಬಹಳ ಉಪಕಾರವನ್ನಾಗಿದಿರಿ" ಎಂದಳು. ಅನ್ಯೋನ್ಯ ಚಂಚಲ ದೃಷ್ಟಿಯು ಇಬ್ಬರನ್ನೂ ಎದೆಗೆಡಿಸಿತು!

ದಿನಗಳು ಹೋದಂತೆ ಅವರ ಪರಿಚಯವು ಹೆಚ್ಚಾಗಿ ಬೆಳೆಯಿತು! ಪ್ರೇಮವು ಅವರ ಹೃದಯಗಳನ್ನು ಇನ್ನಷ್ಟು ಸಮೀಪ ಸಮೀಪಕ್ಕೆ ಎಳೆದುಕೊಂಡಿತು.

ಒಂದು ದಿನ ಭಾನುವಾರ ಸಂಜೆ ರತ್ನಾ ಬೇಸರಬಂದು ಆರಾಮ ಕುರ್ಚಿಯಲ್ಲಿ ಕುಳಿತಿದ್ದಳು. ಒಂದು ಕಡೆ ಠಾಗೂರರ ಗೀತಾಂಜಲಿ, ಇನ್ನೊಂದು ಕಡೆ ತಂದೆಯ ಹಳೇ ಭಾವಚಿತ್ರ. ಬೇರೊಂದೆಡೆ ತಂದೆಯು ಬರೆಯುತ್ತಿದ್ದ ಒಂದು ಹಳೆಯ ಫೌಂಟನ್‌ಪೆನ್ನು. ಎಲ್ಲವನ್ನು ಎತ್ತಿಕೊಂಡು ಉದ್ದೇಶವಿಲ್ಲದೆ ತಿರುಗಿಸಿ ತಿರುಗಿಸಿ ನೋಡಿ ಕೆಳಗಿಟ್ಟಳು. ಮೇಜಿನ ಮೂಲೆಯಲ್ಲಿ ಬಿದ್ದಿದ್ದ ಒಂದು ಹಿತ್ತಾಳೆ ಉಂಗುರದ ಕಡೆಗೆ ಅವಳ ದೃಷ್ಟಿಯು ಬಿತ್ತು. ಕೆಂಪು ಗಾಜಿನ ಕಲ್ಲು ಅದರಲ್ಲಿ ಕೆತ್ತಿದ್ದು. ಕೈಯಲ್ಲಿ ತೆಕ್ಕೊಂಡಳು. ಬೆರಳಿಗೆ ಹಾಕಿ ನೋಡಿದರೆ, ಚೆಲುವಾಗಿ ಅದು ಬೆರಳಿಗೆ ಸರಿಯಾಗಿ ಒಪ್ಪಿಕೊಂಡಿತು. ಒರಿಯ ಹಿತ್ತಾಳೆಯ ಒಂದು ಉಂಗುರ! ಬೆರಳಿಗೆ ಎಷ್ಟು ಸರಿಯಾಗಿ ಒಪ್ಪುತ್ತದೆ? ಆದರೆ ಪ್ರಭಾಕರನು ಇದನ್ನು ನನ್ನ ಬೆರಳಲ್ಲಿ ಕಂಡರೆ, ಆತನಿಗೆ ಬೇರೆಯಾಗಿ ತೋರಲಾರದೇ ಎಂದು ಭಾವಿಸಿ, ಅದನ್ನು ಒಮ್ಮೆ ಬೆರಳಿಂದ ತೆಗೆದಳು. ಆದರೆ ಮನಸ್ಸು ಒಪ್ಪದೆ ತಿರಿಗಿ, ಅದನ್ನು ಬೆರಳಲ್ಲಿಯೇ ಇಟ್ಟುಕೊಂಡಳು.

ಹೊರಗೆ ಬಾಗಿಲು ತಟ್ಟಿದ ಶಬ್ದವಾಯಿತು. ಥಕ್ಕನೇ ಎದ್ದವಳು, ಕನ್ನಡಿಯ ಬಳಿ ಹೋಗಿ, ಮುಖವನ್ನು ಮುಂಗುರುಳನ್ನು ಒಪ್ಪಿ ಸೀರೆಯನ್ನು ಒಪ್ಪ ತಿದ್ದಿಕೊಂಡಳು. ಬಂದವನು ಪ್ರಭಾಕರನೇ ಎಂದು ಆಕೆಗೆ ಗೊತ್ತು!

"ಒಳಗೆ ಬನ್ನಿ. ಏನು ಸಮ್ಮತಿ ಬೇಕೇ?" ರತ್ನಾ ಒಯ್ಯಾರದಿಂದ ಹೇಳಿದಳು.

ಪ್ರಭಾಕರನು ಮುಗುಳು ನಗುತ್ತ ಒಳಬಂದನು. ಇಬ್ಬರೂ ಅನ್ಯೋನ್ಯ ಎದುರಾಗಿ ಕುಳಿತುಕೊಂಡರು. ಅಷ್ಟರಲ್ಲಿ ಸೇವಕನು ಚಹಾ ತಂದಿರಿಸಿದನು. ಇಬ್ಬರೂ ಏನೇನೋ ಮಾತನಾಡುತ್ತ ಚಹಾ ಕುಡಿದು ಮುಗಿಸಿದರು.

'ನಿಮಗೆ ಹೀಗೆ ಏಕಾಂಗಿಯಾಗಿರುವುದರಿಂದ ಬೇಸರಬಂದಿರಬೇಕು.' ಆತ ಹೇಳಿದ. 'ಹೌದು, ನಿಜವಾಗಿಯೂ' ಬೆರಳ ಉಂಗುರವನ್ನು ತಿರುಗಿಸಿ ತಿರುಗಿಸುತ್ತ ಆಕೆ ಉತ್ತರವಿತ್ತಳು. ಆತನು ಒಮ್ಮೆ ತನ್ನ ದೃಷ್ಟಿಯನ್ನೇ ನಂಬದಾದ. 'ಇದೇನು ಸ್ವಪ್ನವೇ? ನಿಮಗೆ ಈ ಉಂಗುರವು ಎಲ್ಲಿ ಸಿಕ್ಕಿತು?' ಸಂಭ್ರಮದಿಂದ ಅವಳ ಕೈ ಹಿಡಿದು ಆತ ಕೇಳಿದ. ಅವಳ [illegible] ಚಿಕ್ಕದಿರುವಾಗ, ಒಬ್ಬ ಚಾಕಲೇಟ್ ಹುಡುಗನಿಂದ' ಆಕೆ ಸಂಭ್ರಮದಿಂದ ಮೆಲ್ಲನೆ ವಿವರಿಸತೊಡಗಿದಳು. ಆತನು ಈಗ ಸ್ವಪ್ನ ಲೋಕದಿಂದ ಎಚ್ಚತ್ತನು! ಆಕೆಯ ಕೈಯನ್ನು ಮೆಲ್ಲನೆ ಬಿಟ್ಟು, ಆ ಸಣ್ಣ ಹುಡುಗಿಯೇ, ಚಾಕಲೇಟ್ ಹುಡುಗನ ಮನಸ್ಸಿನಲ್ಲಿ, ಮುಂದಕ್ಕೆ ತಾನು ಒಬ್ಬ ಯೋಗ್ಯ ಮನುಷ್ಯನಾಗಬೇಕೆಂದು ವಿಚಾರ ಹುಟ್ಟಿಸಿದಳು. ಆ ಮೇಲೆ ಅದೇ ಹುಡುಗಿಯನ್ನು ಕಾಣಬೇಕೆಂದೂ ಆತನು ಬಗೆದಿದ್ದನು. ಆದರೆ ಅಂತಹ ಘಟನೆಯು ಸಂಭವಿಸುವುದು ಸಾಧ್ಯವೆಂದು ಆತನು ಎಂದೂ ಕನವರಿಸಿರಲಿಲ್ಲ. ಪ್ರಭಾಕರನು ಹೇಳತೊಡಗಿದ.

ರತ್ನಾಳಿಗೆ ಆಶ್ಚರ್ಯವಾಯಿತು. ಏನು, ನೀವೇ?

"ಹೌದು, ರತ್ನಾ" ಆತನ ಸ್ವರದಲ್ಲಿ ಒಂದು ಉದ್ವೇಗ ಮತ್ತು ಮೋಹಕತೆಯಿತ್ತು. ಆಕೆಯನ್ನು ಹೆಸರೆತ್ತಿ ಆತನು ಅದೇ ಮೊದಲನೆಯ ಸಲ ಕರೆದಿದ್ದ.

\+ + + +

ರತ್ನಾ, ಪ್ರಭಾಕರನು ಆಕೆಯ ಕೈ ಹಿಡಿದು ಪ್ರೇಮಪೂರ್ಣನಾಗಿ ಕರೆದ. ರತ್ನಾಳ ತಲೆಬಾಗಿತು. ಪ್ರಶಾಂತವಾಗಿ, ಮೆಲ್ಲನೇ ಆಕೆ ಮುಖವೆತ್ತಿ ನೋಡಿದಳು, ಮುಗುಳು ನಗು! ನಾಚಿಕೆಯಿಂದ ಆಕೆಯ ಮುಖವು ಕೆಂಪಡಗಿತ್ತು!

(ಆಧಾರದಿಂದ) — ದುರ್ಗಾದಾಸ.

Kanarese No. 10

'ನನಗೀಗ ಅಸಹ್ಯಕರ
ವಾದ ಹುಣ್ಣುಗಳಾಗಲಿ
ಛಿದ್ರಗಳಾಗಲಿ ಇರುವ
ಚರ್ಮವಿರುವುದಿಲ್ಲ'

"ದುಬಾರಿ ಗುಣವುಳ್ಳ ಕುಟಿ ಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ. ಇದು ಮೈಯ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೇ ಅಂದವಾಗಿರಿಸುವುದು. ಪರಿಮಳತನ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಸಂತವಿಸಿ ವಾಸಿಮಾಡಿ ಕ್ರಿಮಿ ನಾಶಕ ಗುಣವಿರುವುದು ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ಮೈಯ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕುರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು. ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು—ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು.

ಕುಟಿಕೂರಾ ಸೋಪ್
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ (ಮಿತವ್ಯಯಕ್ಕೆ) ಮತ್ತು ಸಣ್ಣ ಬಿಲ್ಲೆಯ (ಪರಿಚಯದ ಸೈಜು) ಆಕಾರದಲ್ಲಿಯೂ ದೊರಕುವುದು.

ದುಃಖದಾಯಕವಾದ ಕಾಲ್ಮು[illegible] ನಿಂದ ವಿಮುಕ್ತರಾಗಿರಿ

ಜ್ಯಾಂಬಕು ಒಂದೂ ಕಲೆ[illegible] ಯನ್ನುಂಟುಮಾಡದೆ ಗುಣ[illegible] ಸುವುದು.

ಕಾಲ್ಮುರುಕು, ಹುಣ್ಣು, ವ್ರಣ [illegible] ಟಾದುವುಗಳ ಮೇಲೆ ಜ್ಯಾಂಬಕನ್ನು ಸ[illegible] ದೊಡನೆ ಕ್ರಿಮಿನಾಶಕವಾದ ಗುಣಕ್ಕೆ [illegible] ರಂಭವಾಗುವುದು. ಜ್ಯಾಂಬಕಿನಲ್ಲಿರುವ [illegible] ಮೂಲ್ಯವಾದ ಔಷಧೀಯ ತೈಲಗಳು [illegible] ಗದ ಮೂಲವನ್ನೇ ನಾಶಮಾಡಲು [illegible] ಗುವುದು. ಈ ಪ್ರಕಾರವಾಗಿ ಜ್ಯಾಂ[illegible] ನೋವನ್ನು ನಿವಾರಿಸುತ್ತದೆ. ಬಾತು[illegible] ಯನ್ನು ಕಡಿಮೆ ಮಾಡಿ ವ್ರಣಗಳಿಂದ [illegible] ವ ರಸಿಗೆಯನ್ನು ಒಣಗಿಸುತ್ತದೆ. ಜ್ಯಾಂಬಕನ್ನು ಪ್ರತೀ ಒಬ್ಬ ಡಾಕ್ಟ[illegible] ನರ್ಸುಗಳೂ ಶಿಫಾರಸು ಮಾಡುತ್ತಾರೆ ಎಲ್ಲಾ ಔಷಧಿ ವ್ಯಾಪಾ[illegible] ಜ್ಯಾಂಬಕನ್ನು ರೂಪಾ 1 ಅಥವಾ 2-4-0ರಂತೆ ಮಾರುತ್ತಾರೆ.

ಏಜಂಟ್ಸ್ —ಮೆಸರ್ಸ್ ದಾಧಾ ಮತ್ತು ಕಂಪೆನಿ,
ಪಾರ್ಕ್‌ಟೌನ್, ಮದರಾ[illegible]

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿ[illegible]

ZAM-BUK

ಪ್ರಾಣಿಕೊಬ್ಬಿನಿಂದ ವಿರಹಿತವಾದದ್ದು

'SECUNDUS'

ವೆಸ್ಟ್ ಎಂಡ್
ಇಕೊನಮಿ ಗ್ರೇಡ್!
'ಸೆಕುಂಡಸ್' ವಾಚುಗಳು

ಸುಂದರವಾದ ಅನೇಕ ಕಾಲ ಬಾಳುವ ಭರವಸೆಯ ವಾಚುಗಳು ಬಹಳ ಕಡಿಮೆ ಕ್ರಯ!

ನಿಕ್ಕಲ್ ಚೆಕ್ ರೂ. 2[illegible]
ರೋಲ್ಡ್ ಗೋಲ್ಡ್ ,, [illegible]



'ಸೆಕುಂಡಸ್' ಚಚ್ಚೌಕ.

ಬೆಲೆಯಲ್ಲಿಯೂ ಆಯ್ಕೆಯಲ್ಲಿಯೂ ಸರಿಸಾಟಿಯಿಲ್ಲದ ಆದರ್ಶ ಬಹುಮಾನಗಳು!



'ಸೆಕುಂಡಸ್' ನ್ಯೂ ಗೆಲ್ಲಿಬರ್ ಟನ್ನ್ಯೂ
ನಿಕ್ಕಲ್ ಚೆಕ್ ರೂ. 28 ರೋಲ್ ಗೋಲ್ ರೂ 38
ಎವರ್‌ಬ್ರೈಟ್ ಸ್ಟೀ. ರೂ 32 9 ಕೆರಟ್ ಚಿನ್ನ ರೂ 63
18 ,, ,, 95

ಸೆಕುಂಡಸ್ ಮಿನಿಯೇಚರ್ ಆಯತಾಕಾರ
ಎ. ಬ್ರೈ. ಸ್ಟೀಲ್ ರೂ 32
ರೋಲ್ಡ್ ಗೋಲ್ಡ್ ,, 34
9 ಕೆರಟ್ ಚಿನ್ನ ,, 45
18 ,, ,, ,, 65
ಕೆಟಲಾಗು ಧರ್ಮಾರ್ಥ
ವೆಸ್ಟ್ ಎಂಡ್ ವಾಚ್ ಕೊ
ಬೊಂಬಾಯಿ ಮತ್ತು ಕಲ್ಕತ್ತ.

WEST END WATCH Co.
BOMBAY CALCUTTA

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು, ಮನೆಗೆಲ್ಲಾ ಬೆಳಕು, ಬೆಳದಿಂಗಳು. ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತು ಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಜಿಲ್ಲಾ ಸಮಾಚಾರ

ಸೌತ್ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನ್. ತಾ ೧೭ರಲ್ಲಿ ಜರಗಿದ ಆಡಳಿತ ಮಂಡಲಿಯ ಸಭೆಯಲ್ಲಿ (೧) ತ್ರೈಮಾಸಿಕ ಲೆಕ್ಕ ಮಂಜೂರಾಯಿತು. (೨)ಕೆಲಸಗಾರರ ಕೇಳಿಕೆಯ ಕುರಿತು ಜಿ. ಕಲೆಕ್ಟರರ ಹತ್ತಿರ ಯೂನಿಯನ್ ಅಧಿಕಾರಿಗಳು ಮಾತಾಡಬೇಕೆಂದಾಯಿತು. (೩) ಕಡಿಮೆ ಸಂಬಳ ಪಡೆಯುವ ಕೆಲಸಗಾರರಿಗೆ ಯೂನಿಯನಿನ ಪ್ರವೇಶ ಮತ್ತು ಮಾಸಿಕ ಹಣ ಕಡಿಮೆ ಮಾಡಲಾಯಿತು.

ಮ್ಯುನಿಸಿಪಲ್ ಲೈಬ್ರೆರಿ — ಮಂಗಳೂರು ಮ್ಯುನಿಸಿಪಲ್ ಲೈಬ್ರೆರಿಯಲ್ಲಿ ಸ್ತ್ರೀಯರಿಗೆ ಓದುವ ಬಗ್ಗೆ ಒಂದು ಕೊಠಡಿಯನ್ನು ಪ್ರತ್ಯೇಕವಾಗಿ ಏರ್ಪಡಿಸಲಾಗಿದೆಯೆಂದು ಕಮಿಶನರು ತಿಳಿಸುತ್ತಾರೆ.

ದ ಕ ಜಿ. ಹರಿಜನ ಪರಿಷತ್ತಿನ ಸ್ವಾಗತ ಸಮಿತಿ:— ಈ ಸಮಿತಿಯ ಸಭೆಯು ಕಳೆದ ತಾ. ೧೫ರಲ್ಲಿ ಶ್ರೀ ಕೆ. ಅಂಗರ ಕೋಟಿಯನ್‌ರವರ ಅಧ್ಯಕ್ಷತೆಯಲ್ಲಿ ಸೇರಿತು ಕೆಲ ಭಜನೆ ಮಂಡಳಿಯವರು ಸ್ವಾಗತ ಸಮಿತಿಗೆ ಪ್ರತಿನಿಧಿಗಳನ್ನು ಆರಿಸದ ಕಾರಣ ನವಂಬರ ತಾ ೧೨ಕ್ಕೆ ಸಭೆ ಸೇರಬೇಕೆಂದೂ, ಅಷ್ಟರಲ್ಲಿ ಪ್ರತಿನಿಧಿಗಳನ್ನು ಆರಿಸಬೇಕೆಂದೂ, ಜಿಲ್ಲಾ ಬೋರ್ಡಿನ ಹರಿಜನ ಸದಸ್ಯರು ಈ ಪರಿಷತ್ತಿನ ಸ್ವಾಗತ ಸಮಿತಿಗೆ ಸೇರುವಂತೆ ಅವರನ್ನು ಕೇಳಿಕೊಳ್ಳಬೇಕೆಂದೂ ನಿರ್ಧಾರವಾಯಿತು.

ಪ್ರಕಟಣೆ — ಈ ಮೂಲಕ ಸರ್ವ ಪ್ರಯಾಣಸ್ಥರಿಗೆ ತಿಳಿಯಪಡಿಸುವುದೇನೆಂದರೆ —ಮೈಸೂರು ಪ್ರಾಂತದ ಹಾಸನ ಮತ್ತು ಕಡೂರು ಜಿಲ್ಲೆಗಳಲ್ಲಿ ಪ್ಲೇಗು ರೋಗವು ಹಬ್ಬಿಗೊಂಡಿರುತ್ತದೆ ಎಂತ ನಮ್ಮ ತಿಳುವಳಿಕೆಗೆ ಬಂದಿರುವುದ್ರಿಂದ ಸದ್ರಿ ರೋಗವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಹಬ್ಬದಂತೆ ಏರ್ಪಾಡು ಮಾಡುವ ಸಂಬಂಧವಾಗಿ ಸದರೀ ಕಡೂರು ಮತ್ತು ಹಾಸನ ಜಿಲ್ಲೆಗಳಿಂದ ಬರುವಂಥಾ ಪ್ರಯಾಣಸ್ಥರನ್ನು ಮತ್ತು ಅವರ ಸಾಮಾನುಗಳನ್ನು ಪರೀಕ್ಷೆ ಮಾಡುವ ಉದ್ದಿಶ್ಯವೂ ಈ ಜಿಲ್ಲೆಯ ಗಡಿಯೊಳಗೆ ತರುವಂತಾ ಧವಸಧಾನ್ಯಗಳ ಹೊರೆಗಳನ್ನು ಬಿಡಿಸಿ ಬಿಸಿಲಿನಲ್ಲಿ ಒಣಗಿಸುವ ಉದ್ದಿಶ್ಯವೂ ಈ ಜಿಲ್ಲೆಯ ಸೋಮೇಶ್ವರ ಚಾರ್ಮಾಡಿ ಮತ್ತು ಶಿರಾಡಿಯೆಂಬ ಸ್ಥಳಗಳಲ್ಲಿ ಒಂದೊಂದು ತನಖಿ ಸ್ಟೇಶನನ್ನು ತೆರೆಯಲಾಗಿಯದೆ. ಸರ್ವರೂ ಸಂಬಂಧಪಟ್ಟ ಸರಕಾರಿ ನಿಬಂಧಿಯವರಿಗೆ ಅಗತ್ಯವುಳ್ಳ ಸಹಾಯ ಮಾಡಬೇಕಾಗಿ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರವರು ಅಪೇಕ್ಷಿಸುತ್ತಾರೆ.

ದ. ಕ. ಜಿಲ್ಲೆಯ ಹಿಂದುಳಿದ ವರ್ಗದವರ ಸಮಿತಿ:— ಈ ಸಮಿತಿಯು ಕಳೆದ ತಾ. ೧೫ರಲ್ಲಿ ರಾ. ಬ. ಎನ್. ಸುವರ್ಣರ ಅಧ್ಯಕ್ಷತೆಯಲ್ಲಿ ಸೇರಿತು. ಸಮಿತಿಯ ಕಾರ್ಯದರ್ಶಿ ಶ್ರೀ. ಗೋಪಾಲಸಾಯ್ಯರು ಸಂಘದ ಉದ್ದೇಶವನ್ನು ವಿವರಿಸಿ, ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಇದುವರೆಗೆ ಮಾಫಿ ಇದ್ದ ಅರ್ಧ ಸಂಬಳದ ರಿಯಾಯಿತಿಯನ್ನು ಇತ್ತಲಾಗಿ ರದ್ದುಪಡಿಸಿ, ಪ್ರಥಮ ವರುಷ ತೇರ್ಗಡೆಯಾದವರು ಪೂರ್ತಿ ಸಂಬಳ ಕೊಡಬೇಕಾಗಿ ಸರಕಾರದವರು ವಿಧಿಸಿದ್ದಾರೆಂದೂ ಇದರಿಂದ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಅಭಿವೃದ್ಧಿಗೆ ಹಾನಿಯಾಗುವುದೆಂದೂ, ಮಾನ್ಯ ಸರಕಾರದವರು ಹಿಂದಿನ ರೀತಿಯನ್ನೇ ಅನುಸರಿಸುವಂತೆ ಪ್ರಾರ್ಥಿಸಬೇಕೆಂದೂ ಸೂಚಿಸಿದರು ಮತ್ತು ಹಿಂದುಳಿದವರು ಈ ಸಮಿತಿಗೆ ಸೇರಿ ತಮ್ಮ ನ್ಯಾಯವಾದ ಹಕ್ಕುಗಳಿಗಾಗಿ ಹೋರಾಡಬೇಕೆಂದೂ ಹೇಳಿದರು ಅಧ್ಯಕ್ಷರು ಹಿಂದುಳಿದ ವರ್ಗದವರ ಬಡತನವನ್ನು ವಿವರಿಸಿ ಅವರು ಸಂಘವನ್ನು ಸೇರಿ ಆ ಮೂಲಕ ತಮ್ಮ ಇಷ್ಟಾರ್ಥ ಪಡೆಯಲು ಯತ್ನಿಸುವುದು ಅಗತ್ಯವೆಂದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಕೃತಜ್ಞತಾ ಸಮರ್ಪಣೆ:— ತನ್ನ ಗತಿಸಿದ ಕುಮಾರಿಯ ಅಕಾಲ ನಿಧನದಿಂದ ತನಗುಂಟಾದ ಅಗಾಧ ದುಃಖದಲ್ಲಿ ಸಹಸಂತಾಪವನ್ನು ಸೂಚಿಸಿ ತಂತಿ, ಪತ್ರ ಮೊದಲಾದವುಗಳನ್ನು ಕಳುಹಿಸಿದ ಎಲ್ಲ ನನ್ನ ಹಿತಚಿಂತಕರಿಗೂ, ಬಂಧುಗಳಿಗೂ, ಗೆಳೆಯರಿಗೂ ತಾನು ಈ ಮೂಲಕ ತನ್ನ ಕೃತಜ್ಞತಾ ಸಮರ್ಪಣೆ ಮಾಡುವುದಾಗಿ ಶ್ರೀ ಎಂ. ಕೆ ವೈದ್ಯರು ತಿಳಿಸುತ್ತಾರೆ

ಮಿತ್ರಮಂಡಲಿಯಲ್ಲಿ ನಾಡಹಬ್ಬ: ಮಂಗಳೂರು ಮಿತ್ರಮಂಡಳಿಯವರು ಎಂದಿನಂತೆ ಈ ವರ್ಷವೂ ದಸರಾ ಸಮಯದಲ್ಲಿ ನಾಡಹಬ್ಬವನ್ನು ತಾ. ೧೮, ೧೯, ೨೦ನೇ ತಾರೀಕುಗಳಲ್ಲಿ ಆಚರಿಸಿದರು. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ವಿಟ್ಠಲ ಶೆಟ್ಟರು ತಾ ೧೮ರಂದು ಅಧ್ಯಕ್ಷತೆ ವಹಿಸಿ ನಾಡಹಬ್ಬದ ಉದ್ಘಾಟನೆ ಮಾಡಿದರು ಆ ದಿನ ಬೆಂಗಳೂರಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ. ಎಲ್ ಗುಂಡಪ್ಪನವರು 'ಕನ್ನಡದಲ್ಲಿ ಗ್ರೀಕ್ ನಾಟಕಗಳು' ಎಂಬ ವಿಷಯ ಭಾಷಣವಿತ್ತರು. ರಾತ್ರೆ ಯಮನ ಸೋಲು ಎಂಬ ನಾಟಕವು ಅಭಿನಯಿಸಲ್ಪಟ್ಟಿತು. ೧೯ನೇ ದಿನ ಬೆಂಗಳೂರಿನ ವೈಜ್ಞಾನಿಕರಾದ ಶ್ರೀ. ಎಚ್. ಸುಬ್ಬ ಜೋಯಿಸ್ ಇವರು 'ಇಂಗಾಲದ ಮಹಿಮೆ'ಎಂಬ ಕುರಿತು ಭಾಷಣವಿತ್ತರು ಶ್ರೀ. ಕೆ. ಆರ್ ಆಚಾರರು ಅಧ್ಯಕ್ಷತೆ ವಹಿಸಿದ್ದರು. 'ಪುನರ್ಜನ್ಮ' ನಾಟಕವು ಅಭಿನೀತವಾಯಿತು. ತಾ. ೨೦ರಂದು ಶ್ರೀ. ಪಿ. ಎಲ್. ಪುಣಿಚಿತ್ತಾಯರು 'ಕನ್ನಡದ ಸೇವೆ'ಯೆಂಬ ಕುರಿತು ಭಾಷಣವಿತ್ತರು. ಶ್ರೀ. ಎಸ್. ಕೃಷ್ಣ ಭಟ್ಟರು 'ಶಬರಿ' ಎಂಬ ಕಾವ್ಯವಾಚನ ಮಾಡಿದರು. ರಾತ್ರಿ ವಿನೋದಾವಳಿಗಳಿದ್ದುವು.

ಉಡುಪಿ

ಧಾರವಾಡದಲ್ಲಿ ಮಠಾಧಿಪತಿಗಳ ಆತ್ಮಹತ್ಯೆ—ಕಣ್ವತೀರ್ಥದಲ್ಲಿ ವೃಂದಾವನ —ಶ್ರೀ ಪೇಜಾವರ ಮಠದ ಶ್ರೀ ವಿಶ್ವಮಾನ್ಯ ತೀರ್ಥ ಶ್ರೀಪಾದಂಗಳವರು ಕಳೆದ ಆದಿತ್ಯವಾರ ರಾತ್ರೆ ಧಾರವಾಡದ ಡಾಕ್ ಬಂಗ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಮೃತ ಶರೀರವು ಡಾಕ್ಟರರ ಶೋಧನೆಗೊಳಪಟ್ಟು ಕಣ್ವತೀರ್ಥಕ್ಕೆ ತರಲ್ಪಟ್ಟು ಸನ್ಯಾಸಿಗಳಿಗೆ ಯುಕ್ತವಾದ ವೃಂದಾವನವಿಧಿ ಸಂಸ್ಕಾರವು ಬುಧವಾರ ದಿನ ನಡೆಯಿತು

ಕಾಸರಗೋಡು

ವಶಿಷ್ಠಾಶ್ರಮ:—ಶ್ರೀ "ವಶಿಷ್ಠಾಶ್ರಮ" ಎಡ್ವಾನ್ಸ್‌ಡ್ ಸಂಸ್ಕೃತ ಶಾಲಾ ಸುಪರಿಂಟೆಂಡೆಂಟರವರು ತಾ ೧೦ ಮತ್ತು ೧೧ ಈ ಎರಡು ದಿನಗಳಲ್ಲಿ ಸಂದರ್ಶಿಸಿ ಶಾಲಾ ವಿಷಯದಲ್ಲಿ ಕೆಲವು ಹಿತ ಸೂಚನೆಗಳನ್ನಿತ್ತು ಆಶ್ರಮಾಭಿವೃದ್ಧಿಯನ್ನು ಬಯಸಿ ತಾ ೧೧ರಲ್ಲಿ ಪ್ರಯಾಣವನ್ನು ಮುಂದರಿಸಿದರು.

ಶ್ರೀಗಳಾದ ಗೋಕಾಕ, ಬೇಂದ್ರೆ ವೀ. ಸಿ.ಯವರು:— ಪುತ್ತೂರಿನ ದಸರಾ ಮಹೋತ್ಸವದ ನಿಮಿತ್ತ ಬಂದಿದ್ದ ಶ್ರೀಗಳಾದ ವಿ ಕೃ ಗೋಕಾಕ ದ. ರಾ ಬೇಂದ್ರೆ ಮತ್ತು ವಿ ಸೀತಾರಾಮಯ್ಯನವರು ಮಂಗಳೂರು ಕಲ್ಚರಲ್ ಎಸೋಸಿಯೇಶನಿನ ಆಶ್ರಯದಲ್ಲಿ ಸಂಸ್ಕೃತಿ ಸಾಹಿತ್ಯಗಳ ವಿವಿಧ ಭಾವನೆಗಳ ವಿಷಯ ಉದಾತ್ತ ಭಾಷಣ ಮಾಡಿದರು

ನಮ್ಮ ಜಿಲ್ಲೆಯ ಮೊದಲನೆ ಬಿ ಓ ಎಲ್ ಡಿಗ್ರಿ ಪಡೆದವರು: — ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಸಹಾಯಕ ಅಧ್ಯಾಪಕರಾಗಿರುವ ವಿದ್ವಾನ್ ಟಿ. ಕೇಶವ ಹೆಗ್ಡೆಯವರು ಕಳೆದ ಸಪ್ಟೆಂಬರ ತಿಂಗಳಲ್ಲಿ ಜರಗಿದ ಮದ್ರಾಸು ವಿಶ್ವವಿದ್ಯಾಲಯದ ಬಿ ಓ. ಎಲ್ ಡಿಗ್ರಿ ಪರೀಕ್ಷೆಯಲ್ಲಿ ನಮ್ಮ ಜಿಲ್ಲೆಯವರಲ್ಲಿ ಇವರೇ ಮೊದಲನೆಯವರಾಗಿ ಉತ್ತೀರ್ಣರಾಗಿರುವ ವಿಷಯ ಸ್ತುತ್ಯವಾದುದು ಇವರು ಸೆಕೆಂಡರಿ ಗ್ರೇಡ್ ಉಪಾಧ್ಯಾಯರಾಗಿದ್ದು ತನ್ನ ಸಾಹಸ ಪರಿಶ್ರಮಗಳಿಂದ ೧೯೩೭ರಲ್ಲಿ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಆ ಮೇಲೆ ತುಲನಾತ್ಮಕ ದ್ರಾವಿಡ ಭಾಷಾಶಾಸ್ತ್ರ, ದಕ್ಷಿಣ ಭಾರತದ ಚರಿತ್ರ ಇವುಗಳಲ್ಲಿ ಉತ್ತೀರ್ಣರಾಗಿ, ಈಗ ಬಿ. ಎಸ್. ಸಿ. ಪರೀಕ್ಷೆಯ ಮೊದಲನೆಯ ಭಾಗದ ಆಂಗ್ಲಭಾಷಾ ಸಾಹಿತ್ಯ ಭಾಗದಲ್ಲಿಯೂ ವಿಜಯಿಗಳಾಗಿ ಡಿಗ್ರಿ ಪಡೆದಿರುವರು. ಕನ್ನಡ ಆಂಗ್ಲೋಭಯ ಭಾಷಾ ಸಾಹಿತ್ಯಗಳಲ್ಲಿ ಇವರು ಮುಂದಕ್ಕೂ ಹೆಚ್ಚಿನ ಅಭ್ಯಾಸವನ್ನು ಮಾಡಲೆಂದೂ, ಇವರಿಂದ ನಾಡು ನುಡಿಗಳಿಗೆ ಹೆಚ್ಚಿನ ಉಪಕಾರವು ದೊರಕುವಂತಾಗಲೆಂದೂ ಹಾರೈಕೆ.

ಪುತ್ತೂರು

ಪುತ್ತೂರಿನಲ್ಲಿ ದಸರಾ ಮಹೋತ್ಸವ:— ಪ್ರತಿ ವರ್ಷದಂತೆ ಪುತ್ತೂರಿನಲ್ಲಿ ಈ ವರ್ಷವೂ ದಸರಾ ಮಹೋತ್ಸವವು ಬಹಳ ವಿಜೃಂಭಣೆಯಿಂದ, ಉಪನ್ಯಾಸ, ನಾಟಕ, ಸ್ಪರ್ಧೆ ಮೊದಲಾದ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿಸಲ್ಪಟ್ಟಿತು

ಶ್ರೀಗಳಾದ ಕಸ್ತೂರಿ, ಎಲ್. ಗುಂಡಪ್ಪ, ಸುಬ್ಬಾ ಜೋಯಿಸ್, ದ ರಾ. ಬೇಂದ್ರೆ. ವಿ ಕೃ ಗೋಕಾಕ. ಎಚ್. ರಾಮರಾವ್ ವಿ. ಸೀತಾರಾಮಯ್ಯ, ಶ್ರೀಮತಿ ಶಕುಂತಲಾಬಾಯಿ ಮೊದಲಾದ ಅಖಿಲ ಕರ್ನಾಟಕದ ವಿದ್ವನ್ಮಣಿಗಳ ಉಜ್ವಲ ಭಾಷಣಗಳಿದ್ದುವು,

ಸಂಪಾಜೆ:— ಇದೇ ತಾ. ೧೮ನೇ ಬುಧವಾರ ದಿನ ಸಂಪಾಜೆ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಶಾರದಾ ಪೂಜೆಯು ಶ್ರೀ ಸಂಪಾಜೆ ಶೀನಪ್ಪಯ್ಯ ದೇಶಕೋಡಿಕಾರರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಆಚರಿಸಲ್ಪಟ್ಟಿತು ಶ್ರೀಮತಿ ನೀಲಮ್ಮ ಮತ್ತು ಇನ್ನಿತರ ಮಹನೀಯರ ಉತ್ತಮ ಭಾಷಣಗಳಿದ್ದುವು. ಅಧ್ಯಕ್ಷರು ತನ್ನ ಭಾಷಣದಲ್ಲಿ ಆಧುನಿಕ ಯುಗದಲ್ಲಿ ವಿದ್ಯೆಯ ಸ್ಥಾನ ಎಂಬ ವಿಷಯವಾಗಿ ಭಾಷಣ ಮಾಡಿದರು

ಕೋಟೆ:— ಕೆಳಿಯಾರು ಶ್ರೀ ಶಂಭವೀ ವಿದ್ಯಾಧಾಯಿನೀ ಹಾಯರ್ ಎಲಿಮೆಂಟರಿ ಶಾಲೆಯ ಶ್ರೀ ಶಾರದಾ ಪೂಜೆಯ ಸಮಾರಂಭವು ಕಳೆದ ತಾ. ೨೧ನೇ ಶನಿವಾರ ಸಂಜೆ ಘಂಟೆ ೪ಕ್ಕೆ ಶ್ರೀ ಡಾ ಎಸ್. ನಾರಾಯಣ ಸೆಟ್ಟರವರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಜರಗಿಸಲ್ಪಟ್ಟಿತು

ಕಾರ್ಕಳ

ಮದ್ರಾಸ ಪ್ರಾಂತ್ಯದ ಕೋಪರೇಟಿವ ಸೊಸಾಯ್ಟಿಗಳ ರಿಜಿಸ್ಟ್ರಾರರಾದ ಶ್ರೀ. ಯುಸ್ ಯು ವೆಂಕಟರಾಮನ ಯಂ. ಎ. ಐ. ಸಿ. ಎಸ್. ಯರವರು ತಾ. 19—10—1939ರ ದಿನ ಇಲ್ಲಿಗೆ ಬಂದಿದ್ದು ಸುಧಾಕೃಷ್ಣ ಬೋರ್ಡ್ ಹೈಸ್ಕೂಲಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಕಾರ್ಕಳ ಪರಸ್ಪರ ಸಹಕಾರ ಸಂಘದ ಕಡೆಯಿಂದ ಅದರ ಸ್ಥಾಪನೆ ಮೊದಲುಗೊಂಡು ದಿವಂಗತರಾಗುವ ತನಕ ಅಧ್ಯಕ್ಷರಾಗಿದ್ದ ಶ್ರೀ. ಇ. ವಾಸುದೇವಯ್ಯನವರ ತೈಲಚಿತ್ರ ಅನಾವರಣ ಸಮಾರಂಭವನ್ನು ನಡೆಸಿದರು.

ಸ್ಥಳೀಯ ಕೊಸ್ಮೊಪೊಲಿಟನ ಕ್ಲಬಿನಲ್ಲಿ ಕಳೆದ ವರ್ಷದಂತೆ ಈ ವರ್ಷವೂ ದಸರಾ ಮಹೋತ್ಸವವು ಕಳೆದ ತಾ ೧೩ರಿಂದ ಆರಂಭವಾಗಿ ಪ್ರತಿದಿನ ವ್ಯಾಯಾಮ ವಿನೋದ ಮತ್ತು ಪ್ರಚಲಿತ ವಿಷಯಗಳ ಮೇಲೆ ಮಹನೀಯರ ಭಾಷಣ ಗಾಯನ ಇತ್ಯಾದಿ ಕಾರ್ಯಕ್ರಮಗಳಿಂದ ಕೂಡಿ ವಿಜೃಂಭಣೆಯಿಂದ ನಡೆಯಿತು.

ಬ್ರಿಟಿಷ್ ಫ್ರಾನ್ಸುಗಳು ಒಂದಾಗಿ ಕಾದಾಡುತ್ತಿವೆ!

ಫ್ರಾನ್ಸಿಗೆ ೨೦,೦೦೦ ಬ್ರಿಟಿಷ್ ಸೈನ್ಯ!

ಬ್ರಿಟಿಷ್ ಯುದ್ಧನೌಕೆಯು ಧ್ವಂಸವಾಯಿತು!

ಇಂಗ್ಲಂಡಿನ ಮೇಲೆ ವಿಮಾನದಾಳಿಯೆ?



ಕಾಂಗ್ರೆಸು ಮಂತ್ರಿಮಂಡಲಗಳು ರಾಜಿನಾಮೆ ಕೊಡುವವು!

ಭಾರತದ ಮುಖಂಡರು ಉದ್ವೇಗಗೊಂಡಿದ್ದಾರೆ!

ವರ್ಕಿಂಗ್ ಕಮಿಟಿಯ ಸ್ಪಷ್ಟ ನಿರ್ಧಾರ!

ಬ್ರಿಟಿಷರ ಯುದ್ಧನೌಕೆಯು ಮುಳುಗಿಸಲ್ಪಟ್ಟಿತು

ಬ್ರಿಟಿಷರಿಗೆ ಅಪಾರ ನಷ್ಟ

ಜರ್ಮನ್ ಜಲಾಂತರ್ಗಾಮಿ ನಾವೆಯೊಂದು ಸ್ಕ್ಯಾಪಾಫ್ಲೋ ಎಂಬಲ್ಲಿಯ ಬಂದರದಲ್ಲಿ ಲಂಗರು ಹಾಕಿ ನಿಂತಿರುವ 'ರಾಯಲ್ ಓಕ್' ಎಂಬ ದೊಡ್ಡದಾದ ಬ್ರಿಟಿಷರ ಯುದ್ಧನೌಕೆಯನ್ನು ಟೋರ್ಪಿಡೋ ಹೊಡೆದು ಮುಳುಗಿಸಿ ಬಿಟ್ಟಿತು. ಸುತ್ತಲೂ ರಕ್ಷಣೆಗಾಗಿ ಬೇಕಾದ ತಡೆಗಳಿದ್ದರೂ, ಅವುಗಳನ್ನು ತಪ್ಪಿಸಿಕೊಂಡು ರೇವಿನ ಒಳನುಗ್ಗಿ ಹಡಗಿನ ಮೇಲೆ ಟಾರ್ಪಿಡೊ ಹೊಡೆದಿರುವ ಜರ್ಮನ್ ಜಲಾಂತರ್ಗಾಮಿ ನಾವಿಕರ ಸಾಹಸವು ಬಹಳವಾದುದೆಂದು ಬ್ರಿಟಿಷರೇ ಬೆರಗಾಗಿರುವರು. ಈ ಹಡಗಿನಲ್ಲಿ ಸುಮಾರು ೮೦೦ ಮಂದಿ ಅಧಿಕಾರಿಗಳೂ ಯೋಧರೂ ಜಲಾಹುತಿಯಾದರು. ಸುಮಾರು ೪೦೦ ಮಂದಿಯನ್ನು ಬದುಕಿಸಲಾಗಿದೆ.

'ರಾಯಲ್ ಓಕನ್ನು ಮುಳುಗಿಸಿದ ಸಾಹಸಿಗೆ ಜರ್ಮನಿಯಲ್ಲಿ ಬಹಳ ಮರ್ಯಾದೆ ಸಂದಿತು.

ಪೂರ್ವ ರಣರಂಗ

ಪೋಲೆಂಡನ್ನು ಜರ್ಮನರೂ ರಶ್ಯನರೂ ಪಾಲುಮಾಡಿಕೊಂಡ ಭಾಗದಲ್ಲಿ ರಶ್ಯ ತನ್ನ ಪಾಲಿಗೆ ಬಂದ ಭಾಗದಲ್ಲಿ ತನ್ನ ಕಮ್ಯುನಿಸ್ಟ್ ತತ್ವವನ್ನು ಪ್ರಚಾರಮಾಡುತ್ತಿರುವುದು. ಯುಕ್ರೇನಲ್ಲಿ ಚುನಾವಣೆ ಸುರುವಾಗಿದೆ. ಬಾಲ್ಶೆವಿಕ್ ತತ್ವಗಳಿಗೆ ಜಯವಾಗುವ ಹಾಗೆ ಚುನಾವಣೆಯ ಪ್ರಚಾರವಾಗುತ್ತಿದೆ. ಪೋಲೆಂಡಿನ ಪರ್ವತಪ್ರದೇಶಗಳ ಪೋಲ್ ಯೋಧರು ರಶ್ಯನರನ್ನು ಹಿಂಸೆಮಾಡುತ್ತಿದ್ದಾರೆ.

ಪಶ್ಚಿಮ ರಣರಂಗ

ಪಶ್ಚಿಮ ರಣರಂಗದಲ್ಲಿ ಯುದ್ಧವು ನಡೆಯುತ್ತಿದೆ. ಜರ್ಮನ್ ಸೀಜ್‌ಫ್ರೀಡ್ ದುರ್ಗದ ಹಿಂಬದಿಯಲ್ಲಿ ರಾತ್ರಿ ಸಮಯಗಳಲ್ಲಿ ಅಪಾರ ಸೈನ್ಯವನ್ನು ಸಾಮಾನುಗಳನ್ನು ಸಂಗ್ರಹಿಸುತ್ತಾರೆ. ಈಗಾಗಲೆ ೯,೦೦,೦೦೦ ಸೈನಿಕರು ಸಿದ್ಧರಾಗಿರುವರೆಂದು ತಿಳಿದಿದೆ. ಹಿಟ್ಲರನು ಬೇಗನೇ ಪ್ರಚಂಡ ಸಮರವನ್ನು ಹೂಡುವುದಾಗಿ ತಿಳಿದುಬರುತ್ತದೆ.

ಇಂಗ್ಲೆಂಡಿನ ಮೇಲೆ ವಿಮಾನಧಾಳಿ

ಜರ್ಮನಿಯ ವಿಮಾನಗಳು ಬ್ರಿಟಿಷ್ ಬಂದರಗಳ ಮೇಲೆ ಧಾಳಿಮಾಡಿ ಹಡಗುಗಳನ್ನು ನಾಶಮಾಡಲು ಯತ್ನಮಾಡಿವೆ. ಸ್ಕಾಟಲೆಂಡಿನ ಪರ್ತ್ ಎಂಬಲ್ಲಿ ಜರ್ಮನ್ ವಿಮಾನಗಳು ಹಾರಿ ಬಂದು ಬಾಂಬುಗಳನ್ನು ಹಾಕಿದುವು. ಇದರಿಂದ ಹಲವರು ಸತ್ತಿರುವರು. ಈ ವಿಮಾನಗಳಲ್ಲಿ ಕೆಲವನ್ನು ಬ್ರಿಟಿಷ್ ವಿಮಾನವಿಧ್ವಂಸಕ ಫಿರಂಗಿಗಳು ಕೆಳಕ್ಕೆ ಉರುಳಿಸಿವೆ.

ಇತ್ತೀಚೆಗೆ ಜರ್ಮನ್ನ್ ವಿಮಾನಗಳು ಇಂಗ್ಲೆಂಡಿನ ಪೂರ್ವತೀರಾವಳಿಯಲ್ಲಿ ಬಹಳ ಹಾರಾಡ ತೊಡಗಿವೆ. ಬ್ರಿಟಿಷ್ ವಿಮಾನಧ್ವಂಸಕ ಫಿರಂಗಿಗಳನ್ನು ಬಹಳ ಜಾಗರೂಕತೆಯಿಂದ ಎಲ್ಲೆಡೆಗಳಲ್ಲಿಯೂ ಇರಿಸಿರುವರು. ಶಾಂತವಾಗಿ ನಡೆಯುತ್ತಿರುವ ಯುದ್ಧವು ತೀವ್ರರೂಪವನ್ನು ಹೊಂದಿದೆ.

ಜರ್ಮನಿಯಲ್ಲಿ ಬ್ರಿಟಿಷರ ಟೀಕೆ

ಹಿಟ್ಲರರು ಕೊಟ್ಟ ಸೂಚನೆಗಳನ್ನು ಅಲ್ಲಗಳೆದು ಚೇಂಬರ್ಲೆನರು ಕೊಟ್ಟ ಭಾಷಣವನ್ನು ಟೀಕಿಸಲಾಗಿದೆ.

ಬ್ರಿಟಿಷ್ ಫ್ರಾನ್ಸು ಜತೆ ಯುದ್ಧ

ರೈನ್ ನದಿಯ ಮೇಲೆ ಕಟ್ಟಿಸಿದ ಅನೇಕ ಸೇತುವೆಗಳನ್ನು ಫ್ರೆಂಚರು ಪುಡಿಮಾಡಿದರು.

ಬ್ರಿಟಿಷ್ ವೈಮಾನಿಕರು ಫ್ರಾನ್ಸ ವೈಮಾನಿಕರಿಗೆ ನೆರವಾಗಲು ಬಂದುದರಿಂದ ಫ್ರಾನ್ಸಿನಲ್ಲಿ ಹೊಸ ಹುರುಪು ಬಂದಿದೆ.

ಜರ್ಮನಿಗೆ ರಶ್ಯದ ಬೆಂಬಲವಿಲ್ಲ

ಜರ್ಮನಿಗೆ ರಶ್ಯವು ಶಸ್ತ್ರಾಸ್ತ್ರ ಬೆಂಬಲ ಕೊಡುವುದಿಲ್ಲವಾಗಿ ಟರ್ಕಿಗೆ ಭರವಸೆ ಕೊಟ್ಟಿದೆ.

ರಶ್ಯ ಮತ್ತು ಎಸ್ಥೋನಿಯಾಗಳಿಗೆ ಆದ ಒಪ್ಪಂದದಂತೆ, ರಶ್ಯದ ದಲವು ಎಸ್ಥೋನಿಯದ ಎಂಡರಿಗೆ ಬಂದಿಳಿದಿದೆ. ಎಸ್ಥೋನಿಯಾ, ಲಿಥ್ವಿಯಾ ಲತ್ವೇನಿಯಾಗಳಲ್ಲಿರುವ ಜರ್ಮನರು ಹೋಗಿ ನೆಲಸಲು ಅವಕಾಶವೀಯಲಾಗಿದೆ.

ರಣರಂಗದಲ್ಲಿ ಹಿಟ್ಲರ್!

ಪಶ್ಚಿಮ ರಣರಂಗದಲ್ಲಿ ಹಿಟ್ಲರನು ಬಂದು ಬಹಳ ಯುದ್ಧ ಸಿದ್ಧತೆಗಳನ್ನು ಮಾಡುತ್ತಿದ್ದಾನೆ. ಜರ್ಮನ್ ಸೈನಿಕರಿಗೆ ಹೊಸ ಉತ್ಸಾಹಗಳು ಕೊಡಲಾಗಿವೆ.

ಮೆಜಿನೋ ದುರ್ಗಕ್ಕೆ ಬ್ರಿಟಿಷ್ ಸೈನಗಳೂ (೩೦೦೦೦) ಬಂದು ಸೇರಿವೆಯೆಂದು ತಿಳಿದಿದೆ.

ಮುಂದೆ ಹಿಟ್ಲರನು ಏನು ಮಾಡುವನೆಂಬ ವಿಚಾರ ರಶ್ಯದ ಸಹಾಯ, ಅಸಹಾಯಗಳನ್ನು ಆಧರಿಸಿದೆಯೆಂದು ತಿಳಿದಿದೆ.

ಜರ್ಮನರ ಹಾವಳಿ

ಸ್ಕಾಟ್‌ಲೆಂಡಿನ ಮೇಲೆ ಜರ್ಮನರ ಹಾವಳಿಯು ಬಲವಂತವಾಗಿದೆ. ವಿಮಾನಧಾಳಿಯು ಆಗಾಗ ಜರೆಯುತ್ತಿದೆ. ಕೂಡಲೇ ವಿಮಾನ ವಿಧ್ವಂಸಕ ಫಿರಂಗಿಗಳು ಕೆಲಸಮಾಡುವವು. ಸಮುದ್ರದಲ್ಲಿ ಜರ್ಮನ್ ವಿಮಾನಗಳು ಬಾಂಬು ಸುರಿಸಿದವು. ಹಡಗಗಳಿಗೆ ಹೆಚ್ಚಿನ ಅಪಾಯವಾಗಲಿಲ್ಲ.

ಜರ್ಮನಿಯ ಜಲಾಂತರ್ಗಾಮಿ ನಾವೆಗಳು ಬಹಳವಾಗಿ ಬ್ರಿಟಿಷ್ ಹಡಗಗಳನ್ನು ಧ್ವಂಸ ಮಾಡತೊಡಗಿವೆ.

ಬ್ರಿಟಿಷ್ ಹಡಗುಗಳು ಮುಳುಗಿದುವು

'ಯಾರ್ಕ್ ಶೀರ್,' 'ಸಿಟಿ ಓವ್ ಮಾಂಡಲೆ' ಎಂಬ ಎರಡು ಹಡಗುಗಳು ಮುಳುಗಿದುವು.

ಟರ್ಕಿಯೊಡನೆ ಒಪ್ಪಂದ

ಟರ್ಕಿ ಬ್ರಿಟನ್ನು ಫ್ರಾನ್ಸುಗಳೊಳಗೆ ಒಪ್ಪಂದವು ಅಂಕಾರಾದಲ್ಲಿ ಸಹಿಯಾಯಿತು. ಯಾವುದಾದರೂ ಒಂದು ರಾಷ್ಟ್ರವು ಯುದ್ಧಮಾಡಬೇಕಾಗಿ ಬಂದರೆ ನೆರವಾಗಬೇಕೆಂದ ಶರತವಾಗಿದೆ.

ಯುದ್ಧದ ಮೊದಲನೆಯ ಅಧ್ಯಾಯ ಮುಗಿಯಿತು

ಜರ್ಮನಿಯ ಒಂದು ಪ್ರಕಟಣೆಯು ಪಶ್ಚಿಮದಲ್ಲಿ ಯುದ್ಧದ ಮೊದಲನೆಯ ಅಧ್ಯಾಯವು ಮುಗಿಯಿತೆಂದು ಪ್ರಕಟಪಡಿಸಿದೆ. 'ಸಾರ್ ನದಿಯ ಮತ್ತು ಹಾರ್ಸ್ ಎಷ್ಕರ್ ಬೆಟ್ಟಗಳೊಡನೆ ನಡುವೆ ಜರ್ಮನ್ ಸೈನ್ಯಗಳು ಶತ್ರುಗಳನ್ನು ಹಿಂದಕ್ಕೆ ಅಟ್ಟಿವೆ. ಕೆಲವು ಕಡೆ ಕಾದಾಟವು ನಡೆದಿವೆ. ವಿಶೇಷವೇನೂ ಆಗಿಲ್ಲವೆಂದು' ಅದು ಬರೆಯುತ್ತದೆ.

ಟರ್ಕಿ–ಫ್ರಾನ್ಸು–ಬ್ರಿಟನು ಒಪ್ಪಂದ

ಈ ರಾಷ್ಟ್ರಗಳೊಳಗೆ ಆದ ಒಪ್ಪಂದವು ಬಹಳ ಮಹತ್ವದ್ದಾಗಿ ತಿಳಿಯುತ್ತದೆ. ಟರ್ಕಿಯನ್ನು ತನ್ನ ವಶ ಮಾಡುವಂತೆ ಜರ್ಮನಿಯು ಯತ್ನಿಸಿದರೂ ಅದು ಆಗದೆ ಇರುವುದು ಬ್ರಿಟನು ಫ್ರಾನ್ಸುಗಳಿಗೆ ದೊಡ್ಡ ಲಾಭವಾಗಿದೆ. ಟರ್ಕಿ, ಇರಾಕ್, ಇರಾನ್ ಮತ್ತು ಅಫ್ಘಾನಿಸ್ಥಾನಗಳ ಒಂದು ಕಾನ್ಫರೆನ್ಸ ನಡೆಯುವುದಾಗಿಯೂ ವಾರ್ತೆ.

ಹಿಟ್ಲರನ ಸಾಹಸ!

ಯುದ್ಧಭೂಮಿಗೆ ಹೋಗಿಯೂ, ಅಲ್ಲಿನ ಸೈನಿಕರಿಗೆ ಮುಖತೋರಿಸಿಯೂ, ಅವರನ್ನು ಹುರಿದುಂಬಿಸುವ ಭಾಷಣಗಳಿಂದ ಉನ್ಮತ್ತರಾಗಿ ಮಾಡಿಯೂ, ಹಲವು ಹೀಗೆ ಮಾಡಿದ ಸಾಹಸಗಳು ಪ್ರಚಾರಪಡಿಸಿಯೋ ಜರ್ಮನ್ ದೊರೆಯು ಇಂದು ಬಹಳ ಪ್ರಚಾರ ಕಾರ್ಯವನ್ನು ಕೈಕೊಂಡಿದ್ದಾನೆ. ಹಿಟ್ಲರನ ಒಬ್ಬ ಸಂಗಾತಿಯು ಜರ್ಮನ್ ಸೈನಿಕರಿಗೆ ಹೀಗೆಂದು ವಿವರಿಸಿದನು.

'ನಾವು ವಿಮಾನಧಾಳಿಯ ರಣಕ್ಷೇತ್ರಕ್ಕೆ ತೆರಳಿದೆವು. ವೈಮಾನಿಕ ದಳಪತಿಗಳ ಪರಿಚಯವನ್ನು ಹಿಟ್ಲರನು ಮಾಡಿಕೊಂಡನು. ಆತನು ಜರ್ಮನಿಯ ಕೀರ್ತಿಯನ್ನು ಬೆಳಗಿಸಿದ ಅವರನ್ನು ಅಭಿನಂದಿಸಿದನು. ನಾವು ಭಗ್ನವಾದ ಸಂಕದಲ್ಲಿಗೆ ಬಂದೆವು, ಸಂಕವನ್ನು ಜರ್ಮನರು ಪುನರ್ರಚನೆ ಮಾಡಿದ್ದರು. ಹಿಟ್ಲರನ ಕಾರು ಸಂಕದ ಮೇಲೆ ಹಾದುಹೋಯಿತು. ಮಾರ್ಗದ ಒಂದು ಬದಿಯಲ್ಲಿ ಸತ್ತು ಬಿದ್ದ ಶತ್ರು ಸೈನಿಕರ ಹೆಣಗಳು ಬಿದ್ದು ಕೊಳೆಯುತ್ತಿದ್ದವು. ನಾವು ರಣಕ್ಷೇತ್ರಕ್ಕೆ ಬಂದರೆ ಗುಂಡಿನ ಸುರಿಮಳೆ ಬೀಳುತ್ತಿತ್ತು. ಸೈನಿಕರು ಹಿಟ್ಲರನಿಗೆ ಅಪಾಯವೊದಗಬಾರದೆಂದು ಕಾರನ್ನು ಹಿಂದಕ್ಕೆ ತೆಕ್ಕೊಂಡು ಹೋಗುವಂತೆ ಹೇಳಿದರು. ಸೈನಿಕರು ಹಿಟ್ಲರನ ಸಂದರ್ಶನಕ್ಕಾಗಿಯೇ ಸಿಂಹಗಳಂತೆ ಮುಂದಾಗಿ ಬರುತ್ತಿದ್ದರು. ಅವರ ಆ ಅಮಿತ ಉತ್ಸಾಹದಿಂದ ಹಿಟ್ಲರನನ್ನು ರಕ್ಷಿಸುವುದೇ ಕಷ್ಟವಾಯಿತು. ಪ್ರತಿಯೊಬ್ಬ ಸೈನಿಕನ ಜೀವವು ನನ್ನ ಜೀವ ವೆಂದು ಹಿಟ್ಲರನು ಸೇನಾಧಿಪತಿಯೊಡನೆ ಮಾತನಾಡುವಾಗ ಹೇಳಿದನು. ಹೀಗೆ ಜರ್ಮನಿಯು ಉತ್ಸಾಹಭರಿತವಾಗಿರುವುದನ್ನು ಸುಖದಿಂದಲೇ ಇರುವುದನ್ನೂ ಹಿಟ್ಲರನ ಪ್ರತ್ಯಕ್ಷ ಸಂದರ್ಶಿಸಿ ಹಿಂದಿರುಗಿದನು.

ಯುದ್ಧವಾಗುವುದೆಂದು ತಿಳಿಸಿರಲೇ ಇಲ್ಲ

ಜರ್ಮನ್ ಸಿಪಾಯಿಗಳ ಕಳವಳ

ಫ್ರೆಂಚ್ ಸೈನ್ಯದವರು ಹಿಡಿದ ಜರ್ಮನ್ ಸಿಪಾಯಿಗಳು, ತಮಗೆ ಯುದ್ಧವಾಗುವ ವಿಷಯವನ್ನು ಯುದ್ಧವು ಆರಂಭವಾದ ಹಲವು ಕಾಲದ ಮೇಲೂ ತಿಳಿಸಿಲ್ಲವೆಂದೂ ತಮ್ಮನ್ನು ಹಿಡಿದು ಸೆರೆಗೊಯ್ದ ಅನಂತರ ಮಾತ್ರ ನಿಜವಾಗಿ ಯುದ್ಧವು ಆಗುತ್ತಿದೆಯೆಂದು ತಮ್ಮ ಗಮನಕ್ಕೆ ಬಂತೆಂದೂ ಹೇಳಿದರು.

ಆ ಜರ್ಮನ್ ಸಿಪಾಯಿಗಳು ಯುದ್ಧದ ಗೊಂದಲದ ಭೀಕರ ಗುಂಡಿನ ಶಬ್ದವನ್ನು ಕೇಳಿದಾಗ, ತಮಗೆ ಅದು ಕೇವಲ ಜರ್ಮನ ಸೈನಿಕರ ಶಿಕ್ಷಣ ಕಾಲದ ಶಬ್ದವೆಂದು ಹೇಳಲ್ಪಟ್ಟಿತ್ತೆಂದು ತಮಗೆ ತಿಳಿಸಲಾಗಿತ್ತು ಎನ್ನುತ್ತಾರೆ. ಹೀಗೆ ಮಾಡುತ್ತಿರುವಲ್ಲಿ ಫ್ರಾನ್ಸು ಮತ್ತು ಜರ್ಮನಿಗಳೊಳಗೆ ಅನ್ಯೋನ್ಯ ಯುದ್ಧವಾಗುವುದು ಸಾಧ್ಯವಿಲ್ಲವೆಂದೂ, ಹಿಟ್ಲರನು ಯುದ್ಧ ಮಾಡದೆಯೇ ಪ್ರತಿಯೊಂದನ್ನೂ ಪಡೆಯುವನೆಂದೂ ತಿಳಿಸಲಾಗಿತ್ತು.

ರಶ್ಯಾ ಜರ್ಮನ್ ಒಪ್ಪಂದದ ವಿಷಯವಾಗಿ ಆ ಬಂಧಿತರಾದ ಜರ್ಮನರು ನಂಬುವುದೇ ಇಲ್ಲ. 'ಹಾಗಾಗಲು ಸಾಧ್ಯವೇ ಇಲ್ಲ. ಹಿಟ್ಲರನು ರಶ್ಯನರನ್ನ ಬಹಳವಾಗಿ ದ್ವೇಷಿಸುತ್ತಾನೆ.' 'ಹೀಗೆಂದು ಒಬ್ಬನು ಹೇಳಿದನು. ಇನ್ನೊಬ್ಬನು 'ಬ್ರಿಟನು ಫ್ರಾನ್ಸುಗಳ ವಿರುದ್ಧವಾಗಿ ನಾವು ಯುದ್ಧ ಮಾಡುತ್ತಿರುವೆವೇ? ಅದು ನಿಜವಲ್ಲ' ಹೀಗೆಂದು ಹೇಳಿದನು. ಹೀಗೆ ಬಂದಿತರಾದ ಜರ್ಮನ್ ಸಿಪಾಯಿಗಳು ಜರ್ಮನಿಯ ಸರಕಾರದ ಧೋರಣೆಯನ್ನು ವ್ಯಕ್ತಪಡಿಸುತ್ತಿದ್ದಾರೆ.

ಇದುವರೆಗೆ ಬೊಬ್ಬೆ ಅಬ್ಬರಗಳಿಂದಲೇ ರಾಷ್ಟ್ರಗಳನ್ನು ನುಂಗಿ ಸುಖವಾಗಿ ನೀರು ಕುಡಿದಿರುವ ಜರ್ಮನ್ ದೊರೆಗೆ, ಪೋಲೆಂಡಿನ ವಿಷಯದಲ್ಲಿ ಇಂತಹ ಅವಸ್ಥೆಯಾಗಬಹುದೆಂದು ತಿಳಿದಿರಲ್ಲಿಲ್ಲವೋ?

ಮೈಸೂರಿನ ರಾಜಕೀಯ ಆಂದೋಲನ

ಜವಾಬ್ದಾರೀ ಸರಕಾರವನ್ನು ಕೊಡುವುದರಲ್ಲಿ ಮೈಸೂರು ಸರಕಾರವು ಯಾವ ವಿಚಾರವನ್ನೂ ಮಾಡದಿರುವುದರಿಂದ ಅಲ್ಲಿನ ಕಾಂಗ್ರೆಸು ಚಳವಳವು ತೀವ್ರವಾಗಿದೆ. ಅರಣ್ಯ ಸತ್ಯಾಗ್ರಹಗಳೂ ಬಿರಿಸಿನದಾಗಿವೆ, ಮುಖಂಡರನೇಕರು ದಸ್ತಗಿರಿಗಳಾಗಿವೆ. ಸತ್ಯಾಗ್ರಹಕ್ಕೆ ಜನಮತದ ಪ್ರಬಲ ಪ್ರೋತ್ಸಾಹವಿದ್ದು ಹಳ್ಳಿಯವರು ಬಹಳ ಭಾಗವಹಿಸುತ್ತಿದ್ದಾರೆ.

ಮೈಸೂರು ಸತ್ಯಾಗ್ರಹದ ಕುರಿತು ಪಂಡಿತ ಜವಾಹಿರಲಾಲ ನೆಹರುಗಳು ಒಂದು ಸಂದೇಶವಿತ್ತಿದ್ದಾರೆ.

'ಮೈಸೂರು ಜವಾಬ್ದಾರೀ ಸರಕಾರವನ್ನು ಪಡೆಯಲು ಅರ್ಹತೆ ಪಡೆದಿದೆ. ಆದರೂ ಇಂದು ಅಲ್ಲಿ ನಿರಂಕುಶ ಅಧಿಕಾರವು ತುಂಬಿಹೋಗಿದೆ. ಪ್ರಜೆಗಳ ಕೇಳಿಕೆಗೆ ತಿರಸ್ಕಾರವಿದೆ. ಸರಕಾರವು ಮಾಡಿದ ವಾಗ್ದಾನವನ್ನು ಪಾಲಿಸಲಿಲ್ಲ. ಸಂಸ್ಥಾನಿಕರಿಗೆ ವಿವೇಕ ಬಂದಿದೆಯೆಂದು ತಿಳಿದಿದ್ದೆ. ಆದರೆ ನನ್ನ ಅಭಿಪ್ರಾಯ ತಪ್ಪಾಯಿತು. ಅನೇಕ ಸುಶಿಕ್ಷಿತರು ಸೆರೆಮನೆಗೆ ಒಯ್ಯಲ್ಪಟ್ಟಿದ್ದಾರೆ. ಯಾರೂ ಧೈರ್ಯಗೆಡದಿರಲಿ. ಇದು ಪರೀಕ್ಷೆಯಾಗಿದೆ. ಮೈಸೂರಿನ ಪ್ರಜೆಗಳು ಆದರ್ಶ ತತ್ವಗಳಿಗಾಗಿ ಕಾದಾಡಬೇಕು.'

ಕೋಲಾರದ ಚಿನ್ನದ ಗನಿಯಲ್ಲಿ ಸತ್ಯಾಗ್ರಹವು ಹುಮ್ಮಸಿನಿಂದ ನಡೆದಿದೆ.

ಚಿತ್ರದುರ್ಗದಲ್ಲಿ ಪ್ರಕಟಿಸುವ 'ಸತ್ಯಾಗ್ರಹ'ವೆಂಬ ಕಲ್ಲಚ್ಚಿನ ಪತ್ರಿಕೆಯನ್ನು ನಿಲ್ಲಿಸಿದ್ದಾರೆ.

ಮೈಸೂರಿನ ಎರಡನೇ ಸರ್ವಾಧಿಕಾರಿಗಳಾಗಿದ್ದ ಶ್ರೀಮತಿ ಸುನಂದಾದೇವಿ ಮತ್ತು ಅವರ ಪತಿ ಶ್ರೀ ನರಸಿಂಹ ಅಯ್ಯಂಗಾರರನ್ನು ಬಂಧಿಸಲಾಗಿದೆ. ಶಿವಪುರದ ಕಾಂಗ್ರೆಸು ಖಚೇರಿಯು ಪರಿಶೋಧಿಸಲಾಗಿದೆ.

ಹಾಸನ, ಬೆಂಗಳೂರು, ಮೈಸೂರು, ಮಾಗಡಿ, ತುಮಕೂರುಗಳಲ್ಲಿ ದಿನನಿತ್ಯ ದಸ್ತಗಿರಿ ನಡೆಯುತ್ತದೆ.

ಶಿರಾ ತಾಲೂಕಿನಲ್ಲಿ ನಡೆಯುತ್ತಿದ್ದ 'ತ್ರಿಶೂಲ' ಪತ್ರಿಕೆಯನ್ನು ಮಾರುತ್ತಿರುವ ಸ್ವಯಂಸೇವಕರ ದಸ್ತಗಿರಿಯಾಗಿದೆ.

ಕಾಂಗ್ರೆಸು ಮುಖಂಡರ ಅತೃಪ್ತಿ

ಯುದ್ಧದಲ್ಲಿ ಭಾರತೀಯರು ಸಹಕರಿಸಬೇಕು, ಯುದ್ಧ ಮುಗಿದ ಮೇಲೆ ಅವರ ವಿಚಾರ ಆಲೋಚಿಸುವ ಎಂದು ಅಸ್ಪಷ್ಟ ನಿರ್ಲಕ್ಷ್ಯ ಧೋರಣೆಯಲ್ಲಿ ವೈಸರಾಯರು ಕೊಟ್ಟ ಹೇಳಿಕೆಗೆ ಭಾರತದ ಮುಖಂಡರು ಗಾಂಧಿಜಿಯವರೇ ಆದಿಯಾಗಿ ಸರ್ವರೂ ತಮ್ಮ ತೀವ್ರ ವಿಷಾದವನ್ನು ವ್ಯಕ್ತಪಡಿಸಿದರು. 'ಬ್ರಿಟಿಷರ ಇನಿತು ನಮ್ಮನ್ನು ವಿಂಗಡಿಸಿ ಆಳಲು ಯತ್ನಿಸುತ್ತಾರಲ್ಲ!' ಎಂದು ಖೇದಗೊಂಡರು ಗಾಂಧಿಜಿಯವರು. ಬ್ರಿಟನಿಗೂ ಅಲ್ಲಿನ ರಾಜಕೀಯ ಕುಶಲಿಗರಿಗೂ ಅರಿವೇ ಇಲ್ಲವೆಂದರು ಸರೋಜಿನಿದೇವಿಯವರು. 'ನಾನು ಹೇಳಿದಂತೆ ಆಂದೋಲನವು ಈಗ ಬಂದಿದೆ' ಎಂದು ಉದ್ಘೋಷಿಸಿದರು ಬೋಸರ. ಗೌರವವುಳ್ಳ ಭಾರತೀಯನ್ನು ಬ್ರಿಟನಿನೊಡನೆ ಸಹಕರಿಸಲಾರನೆಂದರು, ಅಜಾದರು. ನೆಹರುಗಳು ಬ್ರಿಟಿಸಿಗೆ ತತ್ವವಿಲ್ಲವೆಂದು ಖೇದಗೊಂಡರು, ರಾಷ್ಟ್ರಪತಿಗಳು. ಹೀಗೆ ಎಲ್ಲೆಡೆಗಳಲ್ಲಿಯೂ ಭಾರತೀಯ ಮುಖಂಡರು ಉದ್ವಿಗ್ನಗೊಂಡರು.

ನಮಗೆ ಆಲೋಚನೆ ಮಾಡುವ ವಿಷಯವೇನೂ ಉಳಿದಿಲ್ಲ. ಯಾವ ದಿನ ಸತ್ಯಾಗ್ರಹದ ಭೇರಿ ಹೊಡೆಯಲಿ ಎಂಬುದು ಮಾತ್ರ ನಿರ್ಧಾರವಾಗಬೇಕಾಗಿದೆಯೆಂದು ಹೇಳಿದರು. ರಾಷ್ಟ್ರಪತಿಗಳು. ಮದ್ರಾಸಿನ ಪ್ರಧಾನರಾದ ರಾಜಾಜಿಯವರು ತನ್ನ ತೀವ್ರ ಅಸಂತೃಪ್ತಿಯನ್ನು ವ್ಯಕ್ತಪಡಿಸಿರುವರು. ಮಾತ್ರವಲ್ಲದೆ ಬರುವ ಎಸೆಂಬ್ಲಿಯ ಅಧಿವೇಶನದಲ್ಲಿ ಯುದ್ಧದ ಕುರಿತು ಭಾರತದ ಸಹಭಾಗದ ಕುರಿತು ಒಂದು ಠರಾವನ್ನು ಮಂಡಿಸಲಿರುವವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ವಾರ್ಧಾದಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಅಧಿವೇಶನವು ಸೇರಿತು. ಮಹಾತ್ಮಾಜಿಯವರೂ ಸನ್ನಿಹಿತರಾದರು. ಎಲ್ಲಾ ಮಾತುಕತೆಯು ವೈಸರಾಯರ ಪ್ರಕಟಣೆ ಮತ್ತು ಕಾಂಗ್ರೆಸಿನ ಕಾರ್ಯಧೋರಣೆಯು ಕುರಿತಾಗಿಯೇ ಇತ್ತು. ಮಂತ್ರಿಮಂಡಳವು ಖಂಡಿತ ರಾಜಿಕೊಡತಿಂಗಳ ಅಂತ್ಯದಲ್ಲಿ ಮಂತ್ರಿಮಂಡಳವು ರಾಜಿಕೊಡುವುದು. ವೈಸರಾಯರ ಪ್ರಕಟಣೆಯು ಹಿಂದೂದೇಶದ ಅಂದರೆ ಕಾಂಗ್ರೆಸಿನ ಕೇಳಿಕೆಗೆ ಯಾವ ರೀತಿಯು ಸಮಾಧಾನಕರವಾದ ಉತ್ತರ ಹೇಳದೆ ಅಸ್ಪಷ್ಟ ಧೋರಣೆಯುಳ್ಳದ್ದಾಗಿದೆಯೆಂದು ಠರಾವು ಮಂಜೂರಾಯಿತು. ದೇಶದಲ್ಲಿ ಎಲ್ಲಾ ಕಾಂಗ್ರೆಸು ಕಾರ್ಯಕರ್ತರೂ ಈ ಸಮಯದಲ್ಲಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಒಮ್ಮತದಿಂದಿರಬೇಕೆಂದೂ, ಕಾಂಗ್ರೆಸಿನವರು ಮಾಡಿದ ನಿರ್ಣಯವನ್ನು ಪ್ರಯೋಗಕ್ಕೆ ತರುವಲ್ಲಿ ಶಿಸ್ತು ನಿಯಮಗಳನ್ನು ಮೀರಬಾರದಾಗಿಯೂ ಒಂದು ಹೇಳಿಕೆಯು ಹೊರಟಿದೆ.

ಶ್ರೀ ಸೆಟಲ್ವಾಡರು ಬ್ರಿಟನಿಗೆ ಎಚ್ಚರ ಕೊಡುತ್ತಾರೆ!

ಭಾರತದ ವ್ಯಾಪಾರ ಸಂಬಂಧ ಅಧ್ಯಕ್ಷರಾದ ಶ್ರೀ ಜಿ ಸಿ ಸೆಟಲ್ವಾಡರು ಬ್ರಿಟಿಸಿನ ಇಂದಿನ ಧೋರಣೆಯಿಂದ ಸರಕಾರವು ವ್ಯಾಪಾರ, ಕೈಗಾರಿಕೆ ಮೊದಲಾದ ರೀತಿಯಿಂದಲೂ ಬಹಳ ನಷ್ಟ ಹೊಂದುವುದೆಂದು ತಿಳಿಸಿದ್ದಾರೆ.

ಡಾ। ಖಾನ್ ಸಾಹೇಬ್

ಗಡಿನಾಡಿನ ಪ್ರಧಾನರಾದ ಡಾ ಖಾನ್ ಸಾಹೇಬರು ತಮ್ಮೊಂದ ಪ್ರಕಟಣೆಯಲ್ಲಿ ಬ್ರಿಟಿಷರ ವರ್ತನೆಯ ಕುರಿತು ತೀರಾ ವಿಷಾದ ಸೂಚಿಸಿ, ರಾಜಗೋಪಾಲಾಚಾರ್ಯರ ಹೇಳಿಕೆಯಲ್ಲಿ ತಾನು ಸಂಪೂರ್ಣ ಅನುಮೋದಿಸುತ್ತೇನೆಂದೂ, ಕಾಂಗ್ರೆಸಿನ ಅಪ್ಪಣೆಯಾದ ಕ್ಷಣದಲ್ಲಿ ತಾವು ಪದವಿಯಿಂದ ಕೆಳಗಿಳಿದು ರಾಷ್ಟ್ರದ ಸ್ವಾತಂತ್ರ್ಯ ಸಮರದಲ್ಲಿ ದುಮುಕುವುದಾಗಿಯೂ ಹೇಳಿದರು.

ಸರ್ ಟಿ ಬಿ ಸಪ್ರುಗಳು

ಕಾಂಗ್ರೆಸಿನವರು ಭಾರತದ ರಾಜ್ಯಸೂತ್ರವು ಒಂದು ಯೋಗ್ಯ ರೀತಿಯಲ್ಲಿ ಆಗಬೇಕೆಂದು ಈಗಾಗಲೇ ನಿರ್ಧರಿಸಿರಲು ಇಂದಿನ ವೈಸರಾಯರ ಪ್ರಕಟಣೆಯಿಂದ ಧುರೀಣರು ನಿರಾಶೆಗೊಳ್ಳುವುದು ಸಹಜವಾದುದೆಂದು ಸಪ್ರುಗಳು ಹೇಳುತ್ತಾರೆ.

ಶ್ರೀ ಸವರ್ಕಾರರು

ವೈಸರಾಯರು ಹಿಂದೆ ಹೇಳಿದ ಡೊಮಿನಿಯನ್ ಸ್ಟೇಟಸಿನ ಮಾತನ್ನು ಈಗ ಎತ್ತುತ್ತಾರೆ. ಕಳೆದ ಇಪ್ಪತ್ತು ವರ್ಷಗಳಿಂದ ಈ ಹೇಳಿಕೆಯ ಒಂದು ನಿಶ್ಚಯಕ್ಕೆ ಬರಲಿಲ್ಲ. ಯುದ್ಧ ಸುರುವಾಗುವವರೆಗೆ ಬ್ರಿಟಿಷರಿಗೆ ಅದು ಹೊಳೆದಿರಲೇ ಇಲ್ಲ. ಇಂದು ಹೇಳುವ ಈ ಪಲ್ಲವಿಯು ಹಿಂದಿನಂತೆ ವ್ಯರ್ಥವಾಗಲಾರದೆಂಬುದಕ್ಕೆ ಯಾವ ಆಧಾರವೂ ಇಲ್ಲವೆಂದು ...

"ಸರಕಾರದ ಧೋರಣೆಯು ನಿಂದ್ಯವಾದುದು"

ಸರ್ ಶಿವಸ್ವಾಮಿ ಅಯ್ಯರರ ಹೇಳಿಕೆ

ಗಾಂಧಿಜಿಯವರನ್ನು ತಿರುಗಿ ಆಮಂತ್ರಿಸಬೇಕು

'ಕಾಂಗ್ರೆಸು ವೈಸರಾಯರ ಪ್ರಕಟಣೆಯ ವಿಷಯದಲ್ಲಿ ತೋರಿಸಿದ ಅತೃಪ್ತಿಯ ಕುರಿತು ನ್ಯಾಯವನ್ನು ಬಲ್ಲವರೆಲ್ಲರೂ ಅದನ್ನು ಸರಿಯೆನ್ನಬೇಕು. ಬ್ರಿಟಿಷ್ ಸರಕಾರದ ಧೋರಣೆಯನ್ನು ಅದು ಖಂಡಿಸಿದೆ. ನಿಶ್ಚಯಮಾಡಿದ ಮಂತ್ರಿಮಂಡಳದ ರಾಜಿನಾಮೆಯು ಇದನ್ನು ದೃಢಪಡಿಸುವುದು.

ಗೌರವಶಾಲಿಯಾದ ಭಾರತದ ಉತ್ತರವಿದು

ವರ್ಕಿಂಗ್ ಕಮಿಟಿಯ ಠರಾವಿನ ಕುರಿತು ಬೊಂಬಯಿ ಪ್ರಧಾನರಾದ ಮಾನ್ಯ ಬಿ ಜಿ ಖೇರರ ಗೌರವವನ್ನು ತತ್ವವನ್ನು ಪ್ರಧಾನವಾಗಿ ತಿಳಿಯುವ ಭಾರತವು ನಿರ್ಣಯಕ್ಕೆ ಬರತಕ್ಕ ರೀತಿಯಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯ ನಿರ್ಣಯಕ್ಕೆ ಬದಿದೆಯೆ, ಮು ವೈಸರಾಯರ ಹಾಗೂ ಸೆಕ್ರೆಟರಿ ಒಫ್ ಸ್ಟೇಟ್ ಫೋರ್ ಇಂಡಿಯಾ ಇವರ ಪ್ರಕಟಣೆಯನ್ನು ಅನುಸರಿಸಿ, ನಮಗೆ ಮುಂದಕ್ಕೆ ಮಂತ್ರಿಮಂಡಲದಲ್ಲಿ ಕಾರ್ಯ ಮಾಡಿಕೊಂಡಿರಲು ಸಾಧ್ಯವಿಲ್ಲವೆಂದು ಹೇಳಿದರು.

'ಹಿಂದೂದೇಶದ ಕುರಿತು ಹೊಸ ಪ್ರಕಟಣೆಯಾಗಬಹುದು'

ಕಾಂಗ್ರೆಸು ವರ್ಕಿಂಗ್ ಕಮಿಟಿಯ ನಿರ್ಣಯ ಗಾಂಧಿಜಿ ರಾಜಾಜಿ ಮೊದಲಾದ ಮುಖ್ಯ ಮುಖಂಡರ ಹೇಳಿಕೆಯಂತೆ, ಮುಂದಕ್ಕೆ ಹಿಂದೂದೇಶದ ವಿಷಯದಲ್ಲಿ ಹೊಸತೊಂದು ವಿಚಾರಣೆ ಆಲೋಚನೆಗಳನ್ನು ವೈಸರಾಯರು ನಡೆಸಬಹುದಾಗಿ ತಿಳಿದುಬರುತ್ತದೆ.

ಬೇಗನೇ ನೆಹರು-ಜಿನ್ನಾರವರು ಒಂದುಗೂಡಿ ಮಾತನಾಡುವರಾಗಿ ತಿಳಿದಿದೆ.

ಸರ್ ಮಹಮ್ಮದ್ ಉಸ್ಮಾನ್

'ವೈಸರಾಯರ ಹೇಳಿಕೆಯನ್ನು ಭಾರತದ ರಾಜಕೀಯ ಮುಖಂಡರು ಅತೃಪ್ತಿಕರವಾಗಿ ಹೇಳಿದ್ದಾರೆ. ಆದ್ದರಿಂದ ಮುಂದಿನ ವಿಷಯದಲ್ಲಿ ಆಲೋಚಿಸಲು ಗಾಂಧಿಜಿ ಜಿನ್ನಾ ಮೊದಲಾದವರನ್ನ ವೈಸರಾಯರು ಪುನಃ ಕರೆಯುವುದು ವಿಹಿತವಾಗಿದೆ.'

ನೋಟೀಸು

ಕುಂದಾಪುರದ ಡಿ। ಮು। ಕೋರ್ಟಿನಲ್ಲಿ

R E P 334/1939 O S 331/1935

ಆನಂದರಾವ ಕೂಡಾ— ಅರ್ಜಿದಾರರು

ಮತ್ತು

ಶ್ರೀನಿವಾಸ ಹಪ್ಪಾರ ಕೂಡಾ— ಎದ್ರಿರು

9ನೇ ಎದ್ರಿ ರಾಮಚಂದ್ರ ಹಪ್ಪಾರ, 10ನೇ ಎದ್ರಿ ಲಕ್ಷ್ಮೀ ನಾರಾಯಣ ಹಪ್ಪಾರ	ವೆಂಕಟಾಚಲ ಹಪ್ಪಾರರ ಮಕ್ಕಳು ತೆಕ್ಕಟ್ಟೆ ಗ್ರಾಮ—

ವಾದಿ ಅರ್ಜಿದಾರರು ಸ್ಥಿರ ಆಸ್ತಿ ವಿಕ್ರಯದ ಬಗ್ಗೆ ಹಾಜರು ಪಡಿಸಿದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾ 6-11-1939ಕ್ಕೆ ಮೇಲೆ ಕಾಣಿಸಿದ ಕೋರ್ಟು ಮುಂದೆ ಇದೋ ನಾಗಿಯದೆ ಎಂಬ ಸಂಗ್ತಿ ಈ ಮೂಲಕ 9-10ನೇ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

ಕುಂದಾಪುರ, } **G SANJIVA RAO,** B. A. L. L. B

ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ

S C S No 126 1936
R E P No 46 /1937
R E A N 566/1939

ವಾದಿ ಶ್ರೀನಿವಾಸ ನ್ಯಾಕ, ಮುತ್ತಯ್ಯ ನ್ಯಾಕರ ಅಳಿಯ ಕಾರ್ಕಳ ತಾಲೂಕು ಕಕ್ಯಂದೂರು ಗ್ರಾಮದ ಪಕ್ರೆವರ್ನ ಬೆಟ್ಟು ಎಂಬಲ್ಲಿರುವವ	ಒಬ್ಬ

ಮತ್ತು

ಪ್ರತಿವಾದಿ— ಅಂತಪ್ಪ ಪಾಂಡಿ, ಚಂದು ಪಾಂಡಿರ ಅಳಿಯ ಸದ್ರಿ ತಾಲ್ಲೂಕ ಕಲ್ಯ ಗ್ರಾಮದ ಕುಂಟಾಡಿ ಕರ್ಮೋಳಿಬೆಟ್ಟು ಎಂಬಲ್ಲಿರುವವ	೭ ಶ್ರಿ

ಇವರೊಳಗೆ

ಸದ್ರಿ ಎದ್ರಿ ಅಂತಪ್ಪ ಪಾಂಡಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರನು ದಾಖ್ಲು ಮಾಡಿದ ಮೇಲ್ಕಂಡ ಅಮಲ್ದಾರಿಯಲ್ಲಿ ನಿಮ್ಮ ಬಾಬ್ತು ಜೀವನಾಂಶ ವಸೂಲ ಹಕ್ಕನ್ನು ಜಪ್ತಿ ಮಾಡಿಸಿ ಏಲಂ ಮಾಡಿಸುವ ಬಗ್ಗೆ ದಾಖ್ಲು ಮಾಡಿದ ಏಲಂ ಇಸ್ತಿಹಾರು ಮಂಜೂರು ಮಾಡಬೇಕಾಗಿಯೂ ಮತ್ತು ಸದ್ರಿ ಏಲಂ ಸಮಯ ಅರ್ಜಿದಾರನಿಗೆ Bil and set off ಪರ್ಮಿಶನ್ ಕೊಡಬೇಕಾಗಿ ದಾಖ್ಲು ಮಾಡಿದ ಅರ್ಜಿ ಸಹ ತಾರೀಕು 22—11—39ಕ್ಕೆ ಇಟ್ಟಿದೆ. ಅದುದರಿಂದ ನಿಮ್ಮ ಆಕ್ಷೇಪವಿದ್ದರೆ ನೀವು ಆ ದಿವಸ ಹಗಲು 11 ಘಂಟೆಗೆ ಸ್ವತಃ ಯಾ ವಕೀಲರ ಮುಖಾಂತರ (ಮೇಲ್ಕಂಡ ಕೋರ್ಟಿನ ಮುಂದೆ) ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗತಿ ತಿಳಿದಿರಲಿ.

ಈ ನೋಟೀಸನ್ನು ಕೋರ್ಟು ಹುಕುಂ ಪ್ರಕಾರ ಪ್ರಕಟಿಸಿದ್ದಾಗಿರುತ್ತದೆ.

ಕಾರ್ಕಳ, } ~~N N Adyanthaya,~~

ಶ್ರೀ ಸಹಸ್ರ ಲಿಂಗೇಶ್ವರ ದೇವಸ್ಥಾನ, ಉಪ್ಪಿನಂಗಡಿ

೧೯೩೫ನೇ ಇಸವಿ ಮಾರ್ಚಿ 31ಕ್ಕೆ ಅಂತ್ಯವಾಗುವ ವರ್ಷದ ಜಮಾ ಖರ್ಚಿನ ವಿವರ

ಜಮಾ	ರೂ ಆ ಪೈ
ಪ್ರಾರಂಭದ ಶಿಲ್ಕು (ಕೈಯಲ್ಲಿದ್ದ ನಗದಿ ಹಣ)	19—13—7
ಕಟ್ಟೋಣ ವ ಸ್ಥಳ ಬಾಡಿಗೆ	126—0—0
ಕಡವಿನಿಂದ	3166—4—6
ಗೇಣಿ ವಸೂಲಿ	167—0—0
ಸರಕಾರದಿಂದ ತಸ್ತೀಕು	860—0—0
ಕಾಣಿಕೆಯಿಂದ	424—0—3
ಕೋರ್ಟು ವ್ಯವಹರಣೆಗಳ ಬಾಬ್ತು	0—4—9
ಹಂಗಾಮಿ ಸಾಲ ಪಡಕೊಂಡದ್ದು	895—0—0
ಹಳೆ ಸಾಲ ವಸೂಲಿ	1240—0—0
ಚಿಲ್ಲರೆ ಸಾಮಾನು (ಅಂಗಡಿಗಳಿಂದ ಜಮಾ)	817—13—4
ಅವಸಾನಾತು ಲೆಕ್ಕ	45—0—0
	7261-4-5

ಖರ್ಚು	ರೂ. ಆ ಪೈ	ರೂ ಆ ಪೈ
ಸೇವೆ ಮತ್ತು ವಿನಿಯೋಗ		
ಸಹಸ್ರ ಲಿಂಗೇಶ್ವರ	213—11—9	
ಕಲ್ಕುಡ ದೈವ	176—0—11	
ಮಹಾ ಕಾಳಿಯಮ್ಮ	637—8—2	1027—4—10
ತಲುಬು ಮತ್ತು ಕೂಲಿ ಬಗ್ಗೆ		544—15—5
ದುರುಸ್ತಿ ಮತ್ತು ಕೂಲಿ ಬಗ್ಗೆ		133—11—10
ತೆಂಗೆ ಮತ್ತು ಕಂದಾಯ		201—2—0
ವ್ಯಾಜ್ಯಗಳ ಬಾಬ್ತು		16—13—3
ದೋಣಿ ದುರುಸ್ತಿ ಬಗ್ಗೆ		303—15—6
ಎಂಡೋಮೆಂಟಿಗೆ ವಂತಿಗೆ ಬಗ್ಗೆ		16—2—0
ದೀಪಗಳ ಬಗ್ಗೆ		12—11—6
ಪ್ರಯಾಣದ ಬಗ್ಗೆ		73—15—8
ಛಾಪಾ, ಬರವಣಿಗೆ ಸಲಕರಣೆ ಮತ್ತು ಟಪ್ಪಾಲು ಖರ್ಚು		62—10—5
ಇತರ ಖರ್ಚು		22—2—5
ದೇವಸ್ಥಾನದ ಕಟ್ಟೋಣವನ್ನು ಪುನಃ ಕಟ್ಟುವ ಬಗ್ಗೆ		2526—8—5
ಚಿಲ್ಲರೆ ಸಾಮಾನುಗಳಿಗೆ		687—6—0
ಹಂಗಾಮಿ ಸಾಲ ಸಂದಾಯ		180—0—0
ಹಳೆ ಡಿಕ್ರಿ ಹಣ ಸಂದಾಯ		52—6—0
ಅಖೈರು ಶಿಲ್ಕು (ಕೈಯಲ್ಲಿನ ನಗದಿ ಹಣ)		799—5—2
		7261-4-5

ಇದೇ ದಿನ ಅಲ್ಲಾದ ಬರೆದ ವರದಿಯ ಮೇರೆಗೆ ಲೆಕ್ಕ ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

(ಸಹಿ) ಎ ಉಮಾನಾಥರಾವ್, ರಿಜಿಸ್ಟರ್ಡ್ ಎಕೌಂಟೆಂಟ್, ಓಡಿಟರ್ – 31-12-1938

ಶ್ರೀ ಸಹಸ್ರ ಲಿಂಗೇಶ್ವರ ದೇವಸ್ಥಾನ, ಉಪ್ಪಿನಂಗಡಿ

1936ನೇ ಇಸವಿ ಮಾರ್ಚಿ 31ಕ್ಕೆ ಅಂತ್ಯವಾಗುವ ವರ್ಷದ ಜಮಾ ಖರ್ಚಿನ ವಿವರ

ಜಮಾ	ರೂ	ಆ	ಪೈ
ಪ್ರಾರಂಭದ ಶಿಲ್ಕು (ಕೈಯಲ್ಲಿದ್ದ ನಗದಿ ಹಣ)	799	5	2
ಕಟ್ಟೋಣ ವ ಸ್ಥಳ ಬಾಡಿಗೆ	224	8	0
ಕಡವಿನಿಂದ	361	13	9
ಗೇಣಿ ವಸೂಲಿ	58	15	0
ಸರಕಾರದಿಂದ ತಸ್ತೀಕು	360	0	0
ಕಾಣಿಕೆಯಿಂದ	366	5	9
ಕೋರ್ಟು ವ್ಯವಹರಣೆಗಳ ಬಾಬ್ತು ಜಮೆ	20	13	
ಹಂಗಾಮಿ ಸಾಲ ಪಡಕೊಂಡದ್ದು	310	0	0
ಡಿ ಪ್ರೊ ನೋಟುಗಳಿಂದ ಸಾಲಪಡಕೊಂಡದ್ದು	200	0	0
ಹಳೆ ಸಾಲ ವಸೂಲಿ	845	13	6
ಚಿಲ್ಲರೆ ಸಾಮಾನು (ಅಂಗಡಿಗಳಿಂದ ಜಮಾ)	351	11	0
ನಗಗಳ ಅಡವಿನ ಮೇಲೆ ಕೆನರಾ ಬ್ಯಾಂಕ್ ಲಿಮಿಟೆಡ್‌ನಿಂದ ಪಡಕೊಂಡ ಸಾಲ	90	0	0
ಅವಸಾನಾತು ಲೆಕ್ಕ	108		0
	4437-13-5		

ಖರ್ಚು	ರೂ	ಆ	ಪೈ	ರೂ	ಆ	ಪೈ
ಸೇವೆ ಮತ್ತು ವಿನಿಯೋಗಗಳಿಂದ						
ಸಹಸ್ರ ಲಿಂಗೇಶ್ವರ ದೇವರು	216	8	4			
ಕಲ್ಕುಡ ದೈವ	141	6	7			
ಮಹಾ ಕಾಳಿಯಮ್ಮ	9	1	3	369	0	2
ತಲುಬು ಮತ್ತು ಕೂಲಿ ಬಗ್ಗೆ				667	0	4
ದುರುಸ್ತಿ ಮತ್ತು ಕೂಲಿ ಬಗ್ಗೆ				135	6	10
ತೆಂಗ ಮತ್ತು ಕಂದಾಯ				95	12	0
ವ್ಯಾಜ್ಯಗಳ ಬಾಬ್ತು				773	10	10
ದೋಣಿ ದುರುಸ್ತಿ ಬಗೆ				32	5	0
ಎಂಡೋಮೆಂಟಿಗೆ ವಂತಿಗೆ ಬಗೆ				16	2	0
ದೀಪಗಳ ಬಗ್ಗೆ				11	0	3
ಪ್ರಯಾಣದ ಬಗ್ಗೆ				105	14	2
ಛಾಪಾ ಬರವಣಿಗೆ ಸಲಕರಣೆ ಮತ್ತು ಟಪ್ಪಾಲು ಖರ್ಚು				9	11	0
ಸಾಲಗಳ ಬಡ್ಡಿ ಬಗ್ಗೆ				0	5	8
ಹಂಗಾಮಿ ಸಾಲ ಸಂದಾಯಕ್ಕೆ				185	0	0
ಪಾತ್ರೆ ಮತ್ತು ಆಭರಣಗಳ ದುರುಸ್ತಿ ಬಗೆ				12	7	9
ನಗಗಳ ಅಡವಿನಮೇಲೆ ಕೆನರಾಬ್ಯಾಂಕ್ ಲಿಮಿಟೆಡ್‌ನಿಂದ ಪಡೆದ ಸಾಲಸಂದಾಯ				90	0	0
ಹಳೆ ಡಿಕ್ರಿ ಹಣ ಸಂದಾಯ				1189	14	10
ಚಿಲ್ಲರೆ ಸಾಮಾನುಗಳಿಗೆ				153	5	3
ಅವಸಾನಾತು ಲೆಕ್ಕ				5	0	0
ಅಖೈರು ಶಿಲ್ಕು (ಕೈಯಲ್ಲಿ ನಗದಿ ಹಣ)				35	12	3
				4437-13-5		

ಇದೇ ದಿನ ಅಲ್ಲಾದ ಬರೆದ ವರದಿಯ ಮೇರೆಗೆ ಲೆಕ್ಕ ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

(ಸಹಿ) ಎ ಉಮಾನಾಥರಾವ್, ರಿಜಿಸ್ಟರ್ಡ್ ಎಕೌಂಟೆಂಟ್, ಓಡಿಟರ್ – 31-12-1938

ಶ್ರೀ ಸಹಸ್ರ ಲಿಂಗೇಶ್ವರ ದೇವಸ್ಥಾನ, ಉಪ್ಪಿನಂಗಡಿ

1937ನೇ ಇಸವಿ ಮಾರ್ಚಿ 31ಕ್ಕೆ ಅಂತ್ಯವಾಗುವ ವರ್ಷದ ಜಮಾ ಖರ್ಚಿನ ವಿವರ

ಜಮಾ	ರೂ	ಆ	ಪೈ
ಪ್ರಾರಂಭದ ಶಿಲ್ಕು (ಕೈಯಲ್ಲಿದ್ದ ನಗದಿ ಹಣ)	35	12	8
ಕಟ್ಟೋಣ ವ ಸ್ಥಳ ಬಾಡಿಗೆ	256	7	1
ಕಡವಿನಿಂದ	267	8	2
ಗೇಣಿ ವಸೂಲಿ	145	7	0
ಸರಕಾರದಿಂದ ತಸ್ತೀಕು	360	0	0
ಕಾಣಿಕೆಯಿಂದ	415	1	9
ಇತರ ಆದಾಯ	56	10	0
ಚಿಲ್ಲರೆ ಸಾಮಾನುಗಳ ವಾರಾಟ	33	5	0
ನಗಗಳ ಅಡವಿನಮೇಲೆ ಕೆನರಾಬೇಂಕ್ ಲಿಮಿಟೆಡ್‌ನಿಂದ ಪಡಕೊಂಡ ಸಾಲ	672	0	0
ಹಂಗಾಮಿ ಸಾಲ ಪಡಕೊಂಡದ್ದು	637	0	0
ಹಳೆ ಸಾಲ ವಸೂಲಿ	293	9	6
ಚಿಲ್ಲರೆ ಸಾಮಾನು (ಅಂಗಡಿಗಳಿಂದ ಜಮಾ)	427	7	8
ಅವಸಾನಾತು ಲೆಕ್ಕ	50	0	0
	3649-15-5		

ಖರ್ಚು	ರೂ	ಆ	ಪೈ	ರೂ	ಆ	ಪೈ
ಸೇವೆ ಮತ್ತು ವಿನಿಯೋಗ						
ಸಹಸ್ರ ಲಿಂಗೇಶ್ವರ ದೇವರು	222	14	2			
ಕಲ್ಕುಡ ದೈವ	137	6	11			
ಮಹಾ ಕಾಳಿಯಮ್ಮ	14	8	7	374	13	8
ತಲುಬು ಮತ್ತು ಕೂಲಿ ಬಗ್ಗೆ				684	1	0
ದುರುಸ್ತಿ ಮತ್ತು ಕೂಲಿ ಬಗ್ಗೆ				241	7	6
ತೆಂಗೆ ಮತ್ತು ಕಂದಾಯ				122	11	0
ವ್ಯಾಜ್ಯಗಳ ಬಾಬ್ತು				76	5	0
ಸಾಲಗಳ ಬಡ್ಡಿ ಬಗ್ಗೆ				92	13	8
ದೋಣಿ ದುರುಸ್ತಿ ಬಗ್ಗೆ				41	1	8
ಎಂಡೋಮೆಂಟಿಗೆ ವಂತಿಗೆ				16	3	0
ದೀಪಗಳ ಬಗ್ಗೆ				12	10	2
ಪ್ರಯಾಣದ ಬಗ್ಗೆ				26	6	0
ಛಾಪಾ, ಬರವಣಿಗೆ ಸಲಕರಣೆ ಮತ್ತು ಟಪ್ಪಾಲು ಖರ್ಚು				7	5	6
ಹಳೆ ಡಿಕ್ರಿ ಹಣ ಸಂದಾಯ				383	0	0
ಚಿಲ್ಲರೆ ಸಾಮಾನುಗಳಿಗೆ				420	0	0
ಹಂಗಾಮಿ ಸಾಲ ಸಂದಾಯ				660	0	0
ನಗಗಳ ಅಡವಿನಮೇಲೆ ಕೆನರಾಬೇಂಕ್ ಲಿಮಿಟೆಡ್‌ನಿಂದ ಪಡೆದ ಸಾಲಸಂದಾಯ				447	0	0
ಅಖೈರು ಶಿಲ್ಕು (ಕೈಯಲ್ಲಿ ನಗದಿ ಹಣ)				94	2	1
				3649-15-5		

ಇದೇ ದಿನ ಅಲ್ಲಾದ ಬರೆದ ವರದಿಯ ಮೇರೆಗೆ ಲೆಕ್ಕ ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ.

[illegible]

ಗಾಂಧಿಜಿಯವರ ಪಟ್ಟಶಿಷ್ಯ

[illegible] ಮಹಾದೇವ ದೇಸಾಯಿ

[[illegible]]

ಅಖಿಲ ಜಗತ್ತೇ ಮಹಾತ್ಮಾ ಗಾಂಧಿಜಿಯವರ ವಿಷಯ ಕೇಳಿರುವಾಗ, ಅವರ ಹಿನ್ನೆಲೆಯಲ್ಲಿ—ನೆರಳಿನಂತೆ—ಸರ್ವದಾ ಚಲಿಸುತ್ತಿರುವ [illegible] ಮಹಾ ಯೋಗ್ಯರ ವಿಷಯ ಕೆಲವೇ ಜನರು ತಿಳಿದಿರುವರು. ಅವರನ್ನು ಕಂಡವರಂತೂ ಬಹಳ ಕಡಿಮೆ ಜನರಿರಬಹುದು. ಪ್ರಪಂಚದ ಬೆಳಕಿಗೆ ಮುನ್ನುಗ್ಗಿ ಬರುವ ಮುಂದಾಳುತನದ ಮಹತ್ವಾಕಾಂಕ್ಷೆಯಿಲ್ಲದೆ ಭಾರತ ಸೇವೆಯ ತಪಸ್ಸಿನಲ್ಲಿಯೇ ಕಳೆಯುವ ಆ ಕರ್ಮಯೋಗಿಯೇ ಮಹಾದೇವ ದೇಸಾಯಿಯವರು. ಶುದ್ಧ ಬಿಳಿ ಖಾದಿ ಉಡಿಗೆ ತೊಟ್ಟು ಕೈಯಲ್ಲಿ ನಿರಂತರವೂ ಒಂದು ಲೇಖಣಿಗೆ ಮತ್ತು ಕಾಗದ ಹಿಡಿದುಕೊಂಡಿದ್ದು, ಗುರುದೇವನ ಅಮೃತವಾಣಿಯನ್ನು ತನ್ನ ಬರಹದ ಧಾರೆಯಿಂದ ಹಂಚುವ ಉತ್ಸಾಹಿತರಾಗಿ ಗಾಂಧಿಜಿಯವರ ಸೇವೆಯಲ್ಲಿ ಚೆನ್ನಾಗಿ ಹದಗೊಂಡ ಜೀವಕ್ಕೆ ಮಹಾದೇವ ದೇಸಾಯಿಯವರು. ಗಾಂಧಿಜಿಯವರ ಪಟ್ಟಶಿಷ್ಯನಾಗಿ, ಅವರ ಆಪ್ತ ಸಖನಾಗಿ ತನ್ನ ಜೀವನವನ್ನು ಅವರು ಅಂತಹ ತಪಸ್ಸಿದ್ಧಿಗೆ ಅಣಿಮಾಡಿಕೊಂಡಿರುವರು. (ಮಹಾತ್ಮಾಜಿಯವರ [illegible] ಉದ್ದಾಮ ವ್ಯಕ್ತಿ [illegible] ಮಾಡಿಕೊಂಡಿರುವರು, ಅವರ ಬೆಂಬಳಿಯಿಂದ, ಇನ್ನೊಂದು ಅದೇ ತರದ ರಾಷ್ಟ್ರೀಯ ತಪಸ್ವಿಯ ವಿಷಯ ತಿಳಿದುಕೊಳ್ಳದಿದ್ದರೆ, ಅವರ ರಾಷ್ಟ್ರೀಯ ಜ್ಞಾನವು ಸಂಪೂರ್ಣವಾದಂತಾಗಲಿಲ್ಲ.)

ಮಹಾತ್ಮರಿಗರ್ಪಿಸಿದ ಜೀವ!

ಯಾವನಾದರೊಬ್ಬನು, ತನ್ನ ಪರಮೋಚ್ಚ ಭಕ್ತಿಯಿಂದ, ತನ್ನ ಒಡೆಯ([illegible])ನಿಗೆ ವಿಧೇಯನಾಗಿ ವಿನೀತನಾಗಿ ತನ್ನ ಇಡೀ ಜೀವನವನ್ನು ಅರ್ಪಿಸುವುದೆಂದರೆ, ನಿಜವಾಗಿಯೂ ಇದಕ್ಕೆ ಅದ್ಭುತ ವೈರಾಗ್ಯ ಬೇಕು; ನಿಶ್ಚಲ ವ್ರತನಿಯಮ ಬೇಕು; ತನ್ನೊಡೆಯನಲ್ಲಿ ಅಂತಹ ಭಕ್ತಿ ಭಾವನೆ ಬೇಕು. ಮಹಾತ್ಮಾಜಿಯವರ ಸೇವೆಗೆ ಪುನಸ್ಸು ಮಾಡದೆ, ವಕೀಲ ವೃತ್ತಿಯಲ್ಲಿ ಅವಲಂಬಿಸಿದ್ದರೆ ಮಹಾದೇವ ದೇಸಾಯಿಯವರು ಖಂಡಿತ ಹೆಚ್ಚು ಲಾಭ ಸಂಪತ್ತಿ ಐಶ್ವರ್ಯವನ್ನು ಸಂಪಾದಿಸಬಹುದಿತ್ತು. ಎಂ. ಡಿ. (M.D.) ಎಂಬ ಹೆಸರಿನಲ್ಲಿ ಅವರು ಹರಿಜನದಲ್ಲಿ ಮಹಾತ್ಮರ ಜೀವನವನ್ನೇ ಒಂದು ಬಗೆಯಿಂದ ಜಗತ್ತಿನೆದುರು ಚಿತ್ರಿಸಿತೋರಿಸು[illegible]ನ್ನಬಹುದು. ಹಿಂದಿನ ಮತ್ತು ಇಂದಿನ ಯಾವನೇ ಪತ್ರಿಕಾವ್ಯವಸಾಯಿಯೊಬ್ಬನಿಗಿಂತಲಾದರೂ, ಅವರು ಶ್ರೇಷ್ಠ [illegible] ಘಂಟಾಘೋಷವಾಗಿ ಸಾರಬಹುದು.

ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ಮಹಾದೇವ ದೇಸಾಯಿಯವರ ಜೀವನವು ಮಹಾತ್ಮರಿಗೆ ಅರ್ಪಿತವಾಗಿದೆ. ನಿಜವಾಗಿಯೂ ಗಾಂಧಿಜಿಯವರ ವಿಶ್ವಾಸವನ್ನು ಪಡೆದುಕೊಳ್ಳುವುದೆಂದರೆ, ಯಾರಿಗಾದರೂ ಇನ್ನು ಅದಕ್ಕಿಂತ ಅಧಿಕವಾದ ಭಾಗ್ಯವಿರಲಾರದು. ಆದರೆ, ಮಹಾದೇವ ದೇಸಾಯಿಯವರಂತಹ ವಿಧೇಯ ಪಟ್ಟಶಿಷ್ಯನನ್ನು ಪಡೆಯಬೇಕಿದ್ದರೆ ಗಾಂಧಿಜಿಯವರೇ ಭಾಗ್ಯಶಾಲಿಗಳೆನ್ನಬೇಕು. ಇಬ್ಬರೂ ಅವರವರ ಕಾರ್ಯಕ್ಷೇತ್ರದಲ್ಲಿ ಮಹನೀಯ ವ್ಯಕ್ತಿಗಳೇ ಇದ್ದು, ತಮ್ಮ ಉಭಯ ಜೀವನಗಳನ್ನು ರಾಷ್ಟ್ರದ ಜನತೆಯ ಸೇವೆಯ ಸಲುವಾಗಿ ಅರ್ಪಿಸಿರುವರು! ಇಂತಹ ಉಭಯರೂ, ಒಂದು ರೀತಿಯಲ್ಲಿ ಅನ್ಯೋನ್ಯ ಆಕರ್ಷಿತರಾಗಿ ಜೀವಿಸುವಂತವರು. ನಿಜವಾಗಿಯೂ ಯಾವುದೋ ಅದ್ಭುತ ಆಕರ್ಷಣೆಯಿರಬೇಕು. ಗಾಂಧಿಜಿ ಮತ್ತು ಅವರ ಆಪ್ತಕಾರ್ಯದರ್ಶಿ ಮಹಾದೇವ ದೇಸಾಯಿಯವರಂತೆ, ಉಭಯ ಜೀವಗಳು [illegible] ಆದರದಿಂದ ಒಂದಾದ ಘಟನೆಯನ್ನು ಚರಿತ್ರೆಯು ಎಲ್ಲಿಯೂ ಎತ್ತಿ ಹೇಳುವುದಿಲ್ಲ.

ಅಸಾಮಾನ್ಯ ಕಾರ್ಯದರ್ಶಿ[illegible]!

ಜಗತ್ತಿನ ವ್ಯವಹರಣೆಯಲ್ಲಿ ಕಾರ್ಯದರ್ಶಿಯೆಂಬ ಶಬ್ದಕ್ಕೆ ಯಾವ ಅರ್ಥವಿದೆಯೋ, ಆ ಅರ್ಥವನ್ನು ಮಹಾದೇವ ದೇಸಾಯಿಯವರಿಗೆ ಹಚ್ಚಿ ನೋಡಬಾರದು. ಗಾಂಧಿಜಿಯವರಾದರೂ, ಅವರನ್ನು ಒಬ್ಬ ಕಾರ್ಯದರ್ಶಿ ಎಂಬಂತೆ ನೋಡಿಕೊಳ್ಳದೆ ತನ್ನ ಜೀವದ ಗೆಳೆಯನಾಗಿ ವಿಚಾರಿಸುತ್ತಿದ್ದರು. ರಾಜಕೀಯ ವಿಚಾರ ವ್ಯವಹಾರವಿರಲಿ, ಧ್ಯಾನವಿರಲಿ, ದಿನದ ಎಲ್ಲಾ ಸಮಯ ತನ್ನ ಬೆಂಬಳಿಯಲ್ಲಿಯೇ ನಿಂತು ನೋಡುತ್ತಿರುವ ಈ ವ್ಯಕ್ತಿಯನ್ನು ಗಾಂಧಿಜಿಯವರೂ ಬಹಳವಾಗಿ ಗೌರವಿಸುತ್ತಿದ್ದರು.

ಇಂತಹ ಸಮರ್ಥ ಕಾರ್ಯದರ್ಶಿಯ ಸಹಾಯವಿಲ್ಲದೆ, ತನ್ನ ದಿನನಿತ್ಯದ ಕಾರ್ಯಗಳನ್ನು ನಡೆಸುವುದು ಗಾಂಧಿಜಿಯವರಿಗೆ ಸಾಧ್ಯವೇ ಇಲ್ಲ. ಕಾರ್ಯಮಗ್ನನಾಗಿರುವ ಮಹಾದೇವದೇಸಾಯಿಯವರನ್ನು ನೋಡುವುದೆಂದರೆ, ಇನ್ನೊಬ್ಬ ಗಾಂಧಿಯವರನ್ನು ದರ್ಶನಮಾಡಿದಂತೆಯೇ! ಒಂದು ಮಣ್ಣಿನ ಗೋಡೆಯ ಗುಡಿಸಲೇ ಅವರ ನಿವಾಸ ಸ್ಥಳ; ಜಗತ್ತಿನ ಯಾವುದೇ ಭಾಗದಲ್ಲಿ ಇರಲಾರದ ಅತ್ಯಂತ ಸರಲವಾದ 'ಆಫೀಸು' ಅವರದು! ಸಾಧಾರಣ ಹಕ್ಕಿಯವರಿಂದಲೇ ಹೆಣೆಯಲ್ಪಟ್ಟ ಚಾಪೆಯೊಂದರ ಮೇಲೆ ಕುಳಿತುಕೊಂಡು, ಅವರು ಜಗತ್ತಿನ ನಾನಾ ಮೂಲೆಗಳಿಂದ ಗಾಂಧಿಜಿಯವರಿಗೆ ಬರುವ ಕಾಗದ ಪತ್ರವ್ಯವಹಾರಗಳನ್ನು ಓದುತ್ತಾ ಬರೆಯುತ್ತಾ ಇರುವರು. ಇವೆಲ್ಲವೂ ಅವರ ಮುಂದೆ ರಾಶಿರಾಶಿಯಾಗಿ ಕ್ಷಣಕ್ಷಣವೂ ಬಿದ್ದುಕೊಂಡಿರುವುವು. ಕಡೆಗೆ ಅವೆಲ್ಲವನ್ನೂ ಒಂದು ಮಾರ್ಗ ಭದ್ರವಾಗಿ ಜಾಗರೂಕರಾಗಿ ಅವರು ಮುಂದಿರುವ ಮರದ ಕಪಾಟಿನಲ್ಲಿ [illegible] ತೆಗೆದಿರಿಸುವರು. ಅವರ ಸುತ್ತಲೂ ಜಗತ್ತಿನ ಮುಖ್ಯ ಪತ್ರಿಕೆಗಳು ಬಿದ್ದುಕೊಂಡಿರುವುವು. ನಿಜವಾಗಿಯೂ ಅಲ್ಲಿನ ಶುದ್ಧತೆ ಸರಳತೆಗಳನ್ನು ಕಂಡು ಇದ್ದರೆ ಜಗದ್ವಿಭೂತಿ ಪುರುಷರಾದ ಗಾಂಧಿಜಿಯವರ ನಿವಾಸಸ್ಥಳವೇ ಎಂದು ಯಾರಾದರೂ ಬೆಚ್ಚರ ಬೆರಗಾಗಬೇಕಾಗುತ್ತದೆ. ಮಹಾದೇವದೇಸಾಯಿಯವರ ಕಣ್ಣಿನ ಡಕವೂ ಸರಳತೆಯ ಸ್ವರೂಪವೇ ಆಗಿ [illegible] ನಿಷ್ಕಲಿನ ಪ್ರೇಮದಿಂದ ಅದು ಸಹಜ ರಮಣೀಯವಾಗಿ ಶೋಭಿಸುತ್ತಿದೆ!

[illegible]ದಿನನಿತ್ಯದ ಕಾರ್ಯಗಳು

ಭೂಲೋಕದ ರಾಜನೀತಿ ವಿಶಾರದರಿಗೆ ಯಾರಿಗೇ ಆದರೂ, ಅವರ ಕಾರ್ಯಗಳನ್ನು ಸಾಧಿಸುವ ಸಲುವಾಗಿ, ಕೆಸರು ದಾರಿಯಲ್ಲಿ ದಿನನಿತ್ಯ ಮೈಲು ಮೈಲುಗಳ ತನಕ ಸಂಚಾರ ಮಾಡುವ ಕಾರ್ಯದರ್ಶಿಯೊಬ್ಬನು ಸಿಗುವುದು ಅಸಾಧ್ಯ. [illegible] ಮಹಾದೇವದೇಸಾಯಿಯವರು ಅಂತಹ ಒಂದು ಅಪೂರ್ವ ವ್ಯಕ್ತಿಯಾಗಿದ್ದಾರೆ. ಸೇವಾಗ್ರಾಮದಿಂದ ಸೇಗಾಂವಿಗೆ ಐದು ಮೈಲು ದಿನನಿತ್ಯ ನಡೆದುಹೋಗುವುದು ಅವರ ಪ್ರತಿದಿನದ ಕಾರ್ಯವಾಗಿತ್ತು: ಜೋರು ಮಳೆಯು ಮುಸಲಧಾರೆಯಾಗಿ ಸುರಿಯುತ್ತಿದ್ದರೂ, ಮೇಲೆ ಉರಿ ಕೆಂಡದಂತಹ ಕಿರಣಗಳನ್ನು ಕಾರಿ ಸೂರ್ಯನು ಉಗ್ರನಾಗಿದ್ದರೂ, ದಿನನಿತ್ಯವೂ ಮಹಾತ್ಮರನ್ನು ಸಂದರ್ಶಿಸಲು ಬರುವ ಅತಿಥಿಗಳನ್ನು ಹೋಗಿ ಕರೆದುಕೊಂಡು ಬರುವುದೂ ಬಿಟ್ಟುಕೊಡುವುದೂ ಅವರ ಕರ್ತವ್ಯವಾಗಿದೆ.

[illegible] ಪ್ರತಿಯೊಂದು ಕೆಲಸವನ್ನೂ [illegible] ವ್ಯಾಪಿಸುತ್ತಾ, ಸೇಗಾಂವಿನಲ್ಲಿ ಜೀವನ ನಡೆಸುವುದೆಂದರೆ ಅದು ಹಂಸತೂಲಿಕಾತಲ್ಪದ ಸುಖಶಯನವೇನೂ ಅಲ್ಲ. ಆದರೆ, ಅದನ್ನು ಏನನ್ನೂ ವಿಚಾರಿಸದೆ ತನ್ನ ಕರ್ತವ್ಯವನ್ನೇ ಎಡೆಬಿಡದೆ ಮಾಡುತ್ತಿರುವ ದೇಸಾಯಿಯವರಿಗೆ, ಅದು ಕಷ್ಟಕರವಾಗಿಯೂ ತೋರಲಿಲ್ಲ. ತನ್ನ ಬಟ್ಟೆಯನ್ನು ತಾನೇ ಒಗೆದು ಮಡಿಮಾಡುತ್ತಾರೆ, ತನ್ನ ಕೋಣೆಯನ್ನು ತಾನೇ ಗುಡಿಸಿ ನಿರ್ಮಲವಾಗಿಡುತ್ತಾರೆ. ಮಹಾದೇವ ದೇಸಾಯಿಯವರ [illegible] ಜೀವನವನ್ನು [illegible] ಪರೀಕ್ಷಿಸಿ ಮುಂದೆ ಸಾಗಿಸಲು ಬಹುಮಂದಿ ಇಚ್ಛಿಸುವವರಿರಲಾರರು. ನಿಜವಾಗಿಯೂ ಅಂತಹ ಅಗ್ನಿಪರೀಕ್ಷೆಗೆ ಒಳಗಾಗದೆ ನಡೆಯಲೂ ಅತುಲ ಆತ್ಮಶಕ್ತಿಯು ಬೇಕಾಗುತ್ತದೆ.

[illegible]ಒಂದು ಘಟನೆ

ಒಮ್ಮೆ ಒಂದು ಘಟನೆಯಾಯಿತು! ಒಂದು ದಿನ ಬೆಳಗಿನ ಮುಂಜಾವಕ್ಕೆ, ಎಲ್ಲರೂ ಎದ್ದು, ನಿತ್ಯವಿಧಿ ತೀರಿಸಿ, ಫಲಹಾರ [illegible] ನಿಂತಿರಲು ಮಹಾದೇವ ದೇಸಾಯಿಯವರು, ಅವರೆಲ್ಲರೊಡನೆ ಒಂದು ಹಳ್ಳಿಗೆ ಹೋಗಿ ಅಲ್ಲಿನ ಹರಿಜನ ವಸತಿಯಲ್ಲಿ ನೈರ್ಮಲ್ಯಮಾಡಲು ಆದೇಶವಿತ್ತರು. ಸ್ವತಃ ದೇಸಾಯಿಯವರೇ ಹೆಗಲಲ್ಲಿ ಬುಕ್ಕಿಯೊಂದನ್ನು ಹೊತ್ತುಕೊಂಡು ಕೈಯಲ್ಲಿ ಹಿಡಸೂಡಿ ಹಿಡಿದುಕೊಂಡು ಆ ಸ್ವಯಂ ಸೇವಕ ದಳವನ್ನು ನಡೆಸಿದ್ದರು. ನಿಜವಾಗಿಯೂ [illegible] ದೇವತೆಗಳ [illegible] ದರ್ಶನೀಯವಾದ ನೋಟವಾಗಿತ್ತು. ಉದಯ ಸೂರ್ಯನು ತನ್ನ ಬಂಗಾರದ ಬಣ್ಣದ ಕಿರಣಗಳನ್ನು ಅವರ ಮೇಲೆ ಪಸರಿಸಿದ್ದನು; ಉದಯಕಾಲದ ಮಂದಸ್ನಿಗ್ಧ ವಾಯುವು ಅವರ ಮೇಲೆ ಚೆಲುವಾಗಿ ಬೀಸುತ್ತಿತ್ತು. ಅಷ್ಟರಲ್ಲಿ ಒಂದು [illegible]ಗಾಡಿಯಲ್ಲಿ ಸವಾರಿಮಾಡಿ ಬಂದವರೊಬ್ಬರು, ಅಲ್ಲಿಗೆ ಬಂದು, ಆ ಗುಂಪಿನಲ್ಲಿ ಮಹಾದೇವ ದೇಸಾಯಿಯವರು ಯಾರೆಂದು ಪ್ರಶ್ನೆ ಮಾಡಿದರು. ಆ ಪಂಗಡದ ಒಬ್ಬರು, ಹೆಗಲಲ್ಲಿ ಬುಕ್ಕಿ ಹೊತ್ತುಕೊಂಡು, ಕೈಯಲ್ಲಿ ಹಿಡಸೂಡಿ ಹಿಡಿದು ನಿಂತಿದ್ದ ವ್ಯಕ್ತಿಯ ಕಡೆಗೆ ಕೈತೋರಿಸಿದರು. ಅವರ ಕಿವಿಯು ಅದನ್ನು ನಂಬಲಾರದ್ದಾಯಿತು. ಅಂತಹ ಒಬ್ಬ ಹಳ್ಳಿಗಾಡಿನ [illegible] ಅವರ ದೃಷ್ಟಿಯೂ ನಿಜವಾಗಿಯೂ ಗುರುತಿಸಲಾರದು! ಜಗತ್ತಿನ ಮಹಾ ಪುರುಷರೊಬ್ಬರ ಕಾರ್ಯದರ್ಶಿಯು [illegible]ನ್ನು ಹುಡುಕಲು ಹಾಗೆ [illegible] ಹಾಗೆ ಇರಬಹುದೇ? ಮರುಮಾತನಾಡದೆ ಆ ಗೃಹಸ್ಥರು ಸ್ವಲ್ಪ ಮುಂದೆ ಹೋದರು.

ಆ ಪಂಗಡವು ಸ್ವಲ್ಪ ಸಮಯದಲ್ಲಿಯೇ ಗೊತ್ತುಮಾಡಿದ ಆ ಹಳ್ಳಿಯನ್ನು ಸೇರಿತು. ಆ ಹಳ್ಳಿಗಾಡಿನ ಮನುಷ್ಯ [illegible] ಒಂದು ಹೊಂಡವನ್ನು ಒಂದು [illegible] ಹಿಡಿಯಿಂದ ಗುಡಿಸಿದ ಕಸವನ್ನು ಒಂದು ಕೈಯ ಬುಕ್ಕಿಯಲ್ಲಿ ಸೇರಿಸಿ ತುಂಬಿಸುತ್ತಿದ್ದರು. ಸುಟಿಬೂಟುಗಳಲ್ಲಿ ವಿರಾಜಮಾನರಾಗಿದ್ದ ಆ ಗೃಹಸ್ಥರು ಈ ಮನೋಹರ

[೧೪ನೇ ಪುಟವನ್ನು ನೋಡಿರಿ]

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು. ಬ್ರೇಂಚ್: ಪೆಂಟ್‌ಲೆಂಡ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000.. ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ $3\frac{1}{2}$% ನಿರಖು ಠೇವಣಾತಿ 12 ತಿಂಗಳಿಗೆ $4\frac{1}{2}$%

„ 6 ತಿಂಗಳಿಗೆ 4% „ 24 ತಿಂಗಳಿಗೆ 5

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು:

ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

DIAMONDS! DIAMONDS

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್, ಮಂಗಳೂರು.

ಇಂಗ್ಲಾಂಡಿಗೆ ಜರ್ಮನರ ವಿಮಾನ ಧಾಳಿಯ ಭಯ

ಕಳೆದವಾರ ಜರ್ಮನರ ಎರಡು ಮೂರು ಯುದ್ಧ ವಿಮಾನಗಳು ಸ್ಕಾಟ್ಲೆಂಡಿನ ಕೆಲವು ಪ್ರದೇಶಗಳ ಮೇಲೆ ಬೊಂಬುಗಳನ್ನು ಹಾಕಿದುವು. ಆದರೆ ಮಿತ್ರಪಕ್ಷದ ವಿಮಾನಗಳು ಅವುಗಳನ್ನು ಬೆನ್ನಟ್ಟಿ ಹೋಗಿ ಕೆಡವಿ ಹಾಕಿದುದರಿಂದ ವಿಶೇಷ ಹಾನಿಯಾಗಲಿಲ್ಲ. ಹೀಗೆಯೇ ಜರ್ಮನ ಯುದ್ಧ ವಿಮಾನಗಳು ಇಂಗ್ಲಾಂಡಿನ ಮೇಲೆಯೂ ಕಾದಾಡ್ಯ ಬೋಂಬುಗಳ ಸುರಿಮಳೆ ಕರೆದು ಹಾನಿಯನ್ನುಂಟು ಮಾಡುವವೆ? ಆ ಯುದ್ಧ ವಿಮಾನಗಳು ಲಂಡನನ್ನು ಬೊಂಬುಗಳಿಂದ ಪುಡಿಮಾಡಿ ಒಂದು ಸಂಸ್ಕೃತಿಯ ಕೇಂದ್ರವನ್ನೇ ನಾಶ ಮಾಡಿಬಿಡಬಹುದೆ? ಈಗ ಯುರೋಪದಲ್ಲಿ ನಡೆಯುತ್ತಲಿರುವ ಇಂಗ್ಲಿಷ ಜರ್ಮನ ಯುದ್ಧದಲ್ಲಿ ಜರ್ಮನರ ವಿಮಾನ ದಾಳಿಯ ರೀತಿಯು ಯಾವದಿರಬಹುದು?

ಎ. ಆರ್. ಪಿ. ಯಲ್. ನ ಕರಪತ್ರ

ಎ. ಆರ್. ಪಿ. ಯಲ್. ಎಂದರೆ ಏಯರ್ ರೈಡ್ ಡಿಫೆನ್ಸ ಲೀಗ ಎಂಬ ಹೆಸರಿನ ಒಂದು ಸಂಸ್ಥೆಯು ಇಂಗ್ಲಾಂಡಿನಲ್ಲಿದೆ. ವಿಮಾನದಾಳಿಯಾಗುವಾಗ ಆತ್ಮರಕ್ಷಣೆಯನ್ನು ಹೇಗೆಮಾಡಿಕೊಳ್ಳಬಹುದೆಂಬ ಕುರಿತು ಪ್ರಜಾವರ್ಗಕ್ಕೆ ಶಿಕ್ಷಣವನ್ನು ಕೊಡುವದು ಇದರ ಕೆಲಸ. ಇಂಗ್ಲಾಂಡಿನ ಮೇಲೆ ಶತ್ರುಪಕ್ಷದವರಿಂದ ಆಗಬಹುದಾದ ಹಾನಿಯ ಕುರಿತು ಚರ್ಚಿಸುತ್ತ ಈ ಸಂಸ್ಥೆಯು ತನ್ನದೊಂದು ಕರಪತ್ರದಲ್ಲಿ. "ಪ್ರತಿಯೊಬ್ಬನಿಗೆ ವಿಮಾನದಾಳಿಯಿಂದ ಆತ್ಮರಕ್ಷಣೆಯ ಕೆಲವು ವಿಧಾನಗಳನ್ನು ಕಲಿಸಿಕೊಡುವುದಿಲ್ಲ. ಪರಂತು ಕೆಲವರಿಗೆ ಅದರ ಎಲ್ಲಾ ವಿಧಾನಗಳನ್ನು ತಿಳಿಸಿಕೊಡಬೇಕಾಗಿದೆ" ಎಂದು ಹೇಳಿರುವದು. ಅಂದರೆ ತಜ್ಞರಿಂದ ಕೂಡಿದ ಈ ಸಂಸ್ಥೆಯ ಅಭಿಪ್ರಾಯದಲ್ಲಿ— "ಇಂಗ್ಲಾಂಡಿನಲ್ಲಿ ಸರ್ವತ್ರ ಶತ್ರುಪಕ್ಷದ ಕಡೆಯಿಂದ ವಿಮಾನದಾಳಿಗಳಾಗುವ ಭಯವಿರುವುದಿಲ್ಲ. ಅಂಥ ವಿಮಾನದಾಳಿಗಳು ಕೆಲವೆ ಮುಖ್ಯ ಕೇಂದ್ರಗಳಲ್ಲಿ ನಡೆಯಬಹುದು.

ಲಂಡನಿನ ಮೇಲೆ ದಾಳಿ

ವಿಮಾನ ದಾಳಿಯಿಂದ ಕಷ್ಟ ನಷ್ಟಗಳನ್ನು ಕೊಟ್ಟು ಜನತೆಯ ಮನೋಸ್ಥೈರ್ಯವನ್ನು ಕೆಡಿಸಬಹುದಾದ ಸ್ಥಾನಗಳು ಇಂಗ್ಲಾಂಡಿನಲ್ಲಿ ಹಲವು ಇರುತ್ತವೆ. ಪರಂತು ಅವೆಲ್ಲಾವುಗಳನ್ನು ವಿಮಾನದಾಳಿಗೆ ಬಲಿಕೊಡುವದು ಎಂಥ ಪ್ರಬಲ ಶತ್ರುಪಕ್ಷಕ್ಕೂ ಸಾಧ್ಯವಲ್ಲ. ಆದ್ದರಿಂದ ಈ ಯುದ್ಧದಲ್ಲಿ ಇಂಗ್ಲಾಂಡಿನ ಮೇಲೆ ಜರ್ಮನಿಯ ವಿಮಾನದಾಳಿಗಳಾಗುವದಾದರೆ ಅವು ಕೆಲವೇ ಸ್ಥಾನಗಳಲ್ಲಿ ಆಗುವವು. ಅಂಥ ವಿಮಾನದಾಳಿಗಳಿಗೂ ಒಂದು ಕ್ರಮ, ಒಂದು ನೀತಿ, ಒಂದು ಯೋಜನೆಯಿರಬೇಕು. ಅಲ್ಲವಾವಾದರೆ ಆ ವಿಮಾನದಾಳಿಗಳು ಯಾವ ಪರಿಣಾಮವನ್ನು ಉಂಟುಮಾಡಲಾರವು. ಗುಡ್ಡ ಬೆಟ್ಟಗಳ ಮೇಲೆ ಬೊಂಬುಗಳು ಬಿದ್ದರೆ ಯಾವದೇನೂ ದೊಡ್ಡ ಹಾನಿಯಾದೀತು? ಅಲ್ಲದೆ ಈ ಯುದ್ಧದಲ್ಲಿ ಜರ್ಮನಿಯ ಸ್ಥಿತಿ ಗತಿಗಳನ್ನು ಆಲೋಚಿಸಬೇಕು. ಇಂದು ಜರ್ಮನಿಯು ದೀರ್ಘಕಾಲ ಯುದ್ಧಮಾಡಿಕೊಂಡಿರಲಿಕ್ಕೆ ಸಿದ್ಧವಿರಲೂ ಹೆಚ್ಚಂದರೆ ಅದು ಒಂದು ವರ್ಷದ ತನಕ ಯುದ್ಧ ಮಾಡಿಕೊಂಡಿರಬಹುದು. ಮಿಂಚುಗತಿಯ ಯುದ್ಧ ಮಾಡುವ ಕಾರ್ಯಕ್ರಮವನ್ನಿಟ್ಟುಕೊಂಡೇ ಜರ್ಮನಿಯ ಯುದ್ಧ ತಯಾರಿಯು ಆಗಿರುತ್ತದೆ. ಆದ್ದರಿಂದ ವಿಮಾನದಾಳಿಯು ಒಳ್ಳೇ ಪರಿಣಾಮಕಾರಿಯಾಗುವಂತೆ ಅದು ಕೆಲವೇ ಕಡೆಗಳಲ್ಲಿ ನಡೆಯಬೇಕು. ಜರ್ಮನಿಯು ಲಂಡನಿನಂಥ ನಗರಗಳನ್ನು ವಿಮಾನದಾಳಿಯಿಂದ ಸುಟ್ಟು ಹಾಕಬಹುದೆ? ಯುದ್ಧೋಪಕರಣಗಳ ತಯ್ಯಾರಿಮಾಡುವ ಕಾರ್ಖಾನೆಗಳನ್ನು ಕೆಡವಿ ಹಾಕಬಹುದೆ? ಅಥವಾ ವಿಮಾನ ನಿಲ್ದಾಣಗಳನ್ನು ನಾಶಮಾಡಬಹುದೆ?

ಇರುವ ಮೂರು ಉಪಾಯಗಳು

ಜರ್ಮನಿಗೆ ವಿಮಾನದಾಳಿಯ ಇವೇ ಮೂರು ಉಪಾಯಗಳು ಇರುತ್ತವೆ, ಆದರೆ ತಡೆಯದಾದ ವಿಮಾನ ನಿಲ್ದಾಣಗಳನ್ನು ನಾಶಮಾಡುವ ಉಪಾಯವು ನಿಷ್ಪ್ರಯೋಜಕವಾದ್ದು. ಈ ನಿಲ್ದಾಣಗಳನ್ನು ಕೆಡವಿಹಾಕುವುದಕ್ಕಿಂತ ಜರ್ಮನಿಗೆ ತನ್ನ ನಿಲ್ದಾಣಗಳನ್ನು ಕಾಪಾಡಿಕೊಳ್ಳುವದು ಹೆಚ್ಚು ಲಾಭಕಾರಿಯಾಗಿರುವದೆಂಬುದನ್ನು ಸ್ವಲ್ಪ ಆಲೋಚನೆಯಿಂದ ತಿಳಕೊಳ್ಳಬಹುದು. ಅದೇ ಯುದ್ಧೋಪಕರಣಗಳ ತಯ್ಯಾರಿಯ ಕಾರ್ಖಾನೆಗಳನ್ನು ಕೆಡವಿಹಾಕಿದರೆ ಇಂಗ್ಲಾಂಡಿಗೆ ಹೆಚ್ಚು ನಷ್ಟವಿದೆ. ನಿಲ್ದಾಣಗಳನ್ನು ಪುನಃ ಕಟ್ಟುವದೂ, ಪುನಃ ವ್ಯವಸ್ಥೆಗೊಳಿಸುವದೂ ಸುಲಭ. ಪರಂತು ಕಾರ್ಖಾನೆಗಳನ್ನು ಹಾಗೆ ಮಾಡಲಾಗುವದಿಲ್ಲ. ಆದರೆ ಜರ್ಮನಿಯು ಒಂದು ಈ ಕಾರ್ಖಾನೆಗಳ ಮೇಲೆ ಬೊಂಬು ಹಾಕಲಿಕ್ಕೆ ಅವು ಸಮುದ್ರ ಕಿನಾರೆಗೆ ಸಮೀಪದಲ್ಲಿ ಇರುವುದಿಲ್ಲ. ಇಂಥ ಎಲ್ಲಾ ಕಾರ್ಖಾನೆಗಳು ಒಳಪ್ರದೇಶಗಳಲ್ಲಿ, ಯಾರೂ ಅರಿಯದಂತೆ ಗುಪ್ತಸ್ಥಾನಗಳಲ್ಲಿ ಕಟ್ಟಲ್ಪಟ್ಟು ಇರುತ್ತವೆ. ವಿಮಾನ ದಾಳಿಗಳು ಹಗಲಿನಲ್ಲಿ ಆಗುವದು ಕಷ್ಟ. ಯಾಕೆಂದರೆ ಹಗಲಿನಲ್ಲಿ ಶತ್ರುಪಕ್ಷದ ವಿಮಾನಗಳನ್ನು ಗುರುತಿಸಿ ಮಿತ್ರ ಪಕ್ಷದ ವಿಮಾನಗಳು ಅವುಗಳನ್ನು ಬೆನ್ನಟ್ಟಿ ಅಥವಾ ಇತರ ಉಪಾಯಗಳಿಂದ ನಾಶಮಾಡುವುದು ಸುಲಭ. ಆದ್ದರಿಂದ ಜರ್ಮನಿಗೆ ಎರಡನೆಯದಾದ ಕಾರ್ಖಾನೆಗಳನ್ನು ಕೆಡವಿಹಾಕುವದೂ ಸಾಧ್ಯವಿರುವುದಿಲ್ಲ. ಅದಕ್ಕೆ ಲಂಡನಿನಂಥ ಕೆಲವು ನಗರಗಳ ಮೇಲೆ ವಿಮಾನ ದಾಳಿಗಳನ್ನು ಮಾಡುವುದು ಮಾತ್ರ ಸಾಧ್ಯವಾಗಿರುತ್ತದೆ.

ಜರ್ಮನ್ ಯೋಜನೆಯ ಸಫಲತೆ

ಆದ್ದರಿಂದ ಸಮುದ್ರದಂಡೆಗೆ ಹೊಂದಿರುವ ಕೆಲವು ಮುಖ್ಯ ನಗರಗಳನು ಬೊಂಬುಗಳಿಂದ ಸುಟ್ಟಿಡುವುದೇ ಪ್ರಕೃತ ಜರ್ಮನಿಯ ವಿಮಾನ ಯುದ್ಧದ ನೀತಿಯಾಗಿದ್ದಿರಬೇಕು. ಕಳೆದ ವಾರ ಜರ್ಮನಿಯ ಯುದ್ಧ ವಿಮಾನಗಳು ಸ್ಕಾಟ್ಲೆಂಡಿನ ಪರ್ವತ ಬಂದರವನ್ನು ತನ್ನ ಲಕ್ಷ್ಯವಾಗಿಟ್ಟುಕೊಂಡಿತ್ತೆಂಬುದು ನಮ್ಮ ತರ್ಕಸರಣಿಗೆ ಬಲವನ್ನು ಕೊಡುತ್ತದೆ. ಜರ್ಮನಿಯು ಮೆಲ್ಲಮೆಲ್ಲನೆ ಲಂಡನನ್ನು ತನ್ನ ವಿಮಾನ ದಾಳಿಗೆ ಗುರಿಯನ್ನಾಗಿಟ್ಟುಕೊಳ್ಳಲೂ ಬಹುದು. ಆದರೆ ಲಂಡನಿನ ಮೇಲೆ ಜರ್ಮನಿಯ ವಿಮಾನ ದಾಳಿಯು ಕೊನೆಯದಾಗಿ ಆಗಬಹುದು. ಯಾಕೆಂದರೆ ಲಂಡನು ಸಮುದ್ರ ದಂಡೆಗೆ ಹೊಂದಿದೆ. ಅದಕ್ಕೆ ಜಲಮಾರ್ಗ ಮಾರ್ಗಗಳಿಂದ ಆಕ್ರಮಣಲಯವಿದೆ. ಆದ್ದರಿಂದ ಬ್ರಿಟಿಷ ಸರಕಾರವು ಲಂಡನಿನ ರಕ್ಷಣೆಗೆ ಮಾಡಿರುವಷ್ಟು ಉಪಾಯಗಳನ್ನು ಬೇರೆ ಯಾವ ನಗರಕ್ಕಾಗಿಯೂ ಮಾಡಿರುವುದಿಲ್ಲ. ಅದು ಬ್ರಿಟಿಷ ಸಾಮ್ರಾಜ್ಯದ ರಾಜಧಾನಿಯಾಗಿಯೂ ಇರುವುದರಿಂದ ಬ್ರಿಟಿಷರು ತಮ್ಮ ಸರ್ವಶಕ್ತಿಗಳನ್ನು ಕಟ್ಟಿ ಅದನ್ನು ಕಾಪಾಡಬೇಕಾಗಿದೆ. ಈ ಎಲ್ಲಾ ಸಂಗತಿಗಳು ಜರ್ಮನಿಗೆ ಚೆನ್ನಾಗಿ ತಿಳಿದಿವೆ. ಆದ್ದರಿಂದ ಲಂಡನಿನ ಮೇಲೆ ವಿಮಾನ ದಾಳಿಯನ್ನಾರಂಭಿಸುವ ಮೊದಲು ಜರ್ಮನಿಯು ಹಿಂದುಮುಂದನ್ನು ಚೆನ್ನಾಗಿ ಆಲೋಚಿಸಬೇಕಾಗುವುದು. ಲಂಡನಿನ ಆಕ್ರಮಣದಲ್ಲಿ ಜರ್ಮನಿಯು ಎಂದೂ ಸಫಲನಾಗಲಾರದು.

ಮಾರ್ಶಲ ಫೋಕರ ಅಭಿಪ್ರಾಯ

ಜರ್ಮನಿಯು ಲಂಡನನ್ನಾಗಲೀ ಅದರಂಥ ಕೆಲವು ಇತರ ನಗರಗಳನ್ನಾಗಲೀ ಸುಟ್ಟು ಹಾಕಿತೆಂದೇ ಹೇಳುವದಾದರೂ ಅದರಿಂದ ಯುದ್ಧದ ಜಯಾಪಜಯಗಳ ಮೇಲೆ ಏನು ಪರಿಣಾಮವಾಗಬಹುದು? ಏನೂ ಇಲ್ಲ. ರಾಜಧಾನಿಗಳನ್ನು ಸುಟ್ಟು ಹಾಕುವುದರಿಂದ್ದ ಇಂಗ್ಲಾಂಡ ಫ್ರಾನ್ಸಿನ ಜನತೆಯು ಧೃತಿಗೆಡಲಾರದು, ನೀತಿಭ್ರಷ್ಟವಾಗಲಾರದು ಎಂದು ದಿವಂಗತ ಮಾರ್ಶಲ ಫೋಕರು ಗತ ಯುದ್ಧದಲ್ಲಿಯೇ ಹೇಳಿದ್ದರು. ರಾಜಧಾನಿಗಳ ನಾಶದಿಂದ ಯಾವ ಜನಾಂಗವೂ ಇದುವರೆಗೆ ಶತ್ರುಗಳಿಂದ ಪರಾಜಯ ಹೊಂದಿದುದಿಲ್ಲ; ಅಥವಾ ಶತ್ರುಗಳಿಗೆ ಶರಣಾಗತವಾದುದಿಲ್ಲ. ಆದರೆ ತಲೆಕೆಟ್ಟ ಈಗಿನ ಜರ್ಮನ ಸರಕಾರವು ಅಥವಾ ಪ್ರೋತ್ಸಾಹಕರು ಇತಿಹಾಸದ ಅವಲೋಕನ ಮಾಡುವರೆಂಬ ನಿಯಮವಿಲ್ಲ. ಅವರು ಲಂಡನಿಗೆ ವಿಮಾನ ದಾಳಿಗಳಿಂದ ಹೆಚ್ಚುಕಡಿಮೆ ಕಷ್ಟ ನಷ್ಟಗಳನ್ನು ಕೊಡಲೂ ಬಹುದು. ಪರಂತು ಈ ಯುದ್ಧದ ಸೋಲು ಗೆಲವುಗಳ ನಿರ್ಣಯವು ಲಂಡನಿನ ನಾಶದಿಂದ ಆಗುವುದಿಲ್ಲ; ಪರಂತು ಸತ್ಯ ಪಕ್ಷಕ್ಕೆ ಎಷ್ಟು ಸಹಾಯ ಸಹಾನುಭೂತಿಗಳು ದೊರೆಯುತ್ತವೆಂಬುದರ ಮೇಲೆ ಆಗುವುದು ಇದನ್ನು ಯಾರೂ ಮರೆಯತಕ್ಕದ್ದಲ್ಲ.

[೧ನೇ ಪುಟದಿಂದ]

ದೃಶ್ಯದಿಂದ ಬೆರಗಾಗಿ ಹೋದರು. ಆಗ ಮಾತ್ರ ಅವರಿಗೆ ಆ 'ಹಳ್ಳಿಯ ಮನುಷ್ಯ'ನೇ ಗಾಂಧೀಜಿಯವರೆಂತಹ ಮಹಾವ್ಯಕ್ತಿಯ ಯೋಗ್ಯ ಕಾರ್ಯದರ್ಶಿ ಎಂಬ ಮನವರಿಕೆಯಾಯಿತು. ... ಘಟನೆಯನ್ನು ಪ್ರತ್ಯಕ್ಷ ಕಂಡ ... ಮುಂದೆ ಅವರ ಜೀವನವನ್ನು ಅಂತಹ ಹರಿಜನ ವಸತಿ ನೈರ್ಮಲ್ಯದಂತಹ ಜನಸೇವೆಯ ಕಾರ್ಯದಲ್ಲಿಯೇ ಕಳೆದರು!

ಎಳೆಯರ ಗೆಳೆಯ...

ಮಹಾತ್ಮಾಜಿಯವರಂತೆ, ಮಹಾದೇವ ದೇಸಾಯಿಯವರಿಗೂ ಮಕ್ಕಳಲ್ಲಿ ಬಹಳ ಅಕ್ಕರೆ. ಗಾಂಧೀಜಿಯವರು ಪ್ರಯಾಣ ಮಾಡುತ್ತಿದ್ದಾಗ, ಅವರು ದೊಡ್ಡ ಮನುಷ್ಯರನೇಕರನ್ನು ಭೇಟಿಯಾಗುವರು; ಸಹಜವಾಗಿ ದೊಡ್ಡ ವಿಷಯಗಳ ಕುರಿತೇ ಆಗ ಮಾತುಕತೆಗಳು ನಡೆಯುವವು! ಹಿಂದೆ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬರೆಯುತ್ತಿದ್ದಂತೆ ಈ ಮಾತುಕತೆಗಳ ಕುರಿತು ಮಹಾದೇವ ದೇಸಾಯಿಯವರು ... ಜನದಲ್ಲಿ ಬರೆಯುತ್ತಾ ಇದ್ದರು. ಅಂತಹ ಸಂದರ್ಭದಲ್ಲಿ, ಇತರ ವಿಷಯಗಳಿಗಿಂತ ಯಾವ ವಿಷಯದಲ್ಲಿಯೂ ಕಡಿಮೆ ಪ್ರಾಧಾನ್ಯತೆ ಸಲ್ಲಿಸದೆ, ಮಹಾತ್ಮಾಜಿಯವರು ಮಕ್ಕಳೊಡನೆ ಮಾಡಿದ ಮಾತುಕತೆಯ ವಿಷಯವಾಗಿಯೂ ಬರೆದಿರುತ್ತಾರೆ.

... ಜೀವನ ...

ಹೀಗೆ ಇವರು ಅದ್ಭುತ ಪ್ರತಿಭಾ ಸಾಮರ್ಥ್ಯಗಳನ್ನು, ವಿಶೇಷ ವ್ಯಕ್ತಿತ್ವವನ್ನು ಪಡೆದ ಮಹಾ ವಿಭೂತಿ ಪುರುಷರಾಗಿದ್ದರು. ಜನತೆಯ ... ಸೇವಾದಿನ ಒಂದರಲ್ಲಿ ಗಳ ... ಹೊತ್ತು ಅವರು ದುಡಿಯುತ್ತಿದ್ದರು. ಹಗಲು ಹೊತ್ತು ಅವರ ಕೆಲಸಕ್ಕೆ ಸಾಕಾಗುತ್ತಿರಲಿಲ್ಲ. ಅವರು ಬಹುರಾತ್ರಿಯ ವರೆಗೆ ದೀಪವನ್ನು ಉರಿಸಿ ಇಟ್ಟುಕೊಳ್ಳುವರು. ಇಂತಹ ವಿಚಿತ್ರ ಹಾಗೂ ಕಷ್ಟಸಹಿಷ್ಣುವಾದ ಸಹನಾಮೂರ್ತಿ, ರಾಷ್ಟ್ರಪ್ರೇಮಿಯಾದ ಕಾರ್ಯದರ್ಶಿಯೊಬ್ಬನ ಕುರಿತು ಬೇರೆ ಕೇಳಿರುವುದು ಸಾಧ್ಯವೇ? ಜಗದ ಮಹಾ ಪುರುಷರಲ್ಲಿಯೂ ಮಹಾತ್ಮರೆನಿಸಿದವರ ಮಹಾಕಾರ್ಯದರ್ಶಿಗೆ ಇಬೇಕಾದ, ಎಲ್ಲಾ ವ್ಯಕ್ತಿತ್ವ ಗುಣಧರ್ಮಗಳೂ ಮಹಾದೇವ ದೇಸಾಯಿಯವರ ಸಂಪೂರ್ಣ ಅಡಕವಾಗಿದ್ದವು!

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನ O. S. 249/3

ಪರಮೇಶ್ವರ ಭಟ್ಟ ಕೊಡಾ – ವಾದಿ

ಗಣಪತಿ ಭಟ್ಟ ಕೊಡಾ–ಪ್ರತಿವಾದಿ

3ನೇ ಪ್ರತಿವಾದಿ ರಾಮಕೃಷ್ಣ ಭಟ್ಟ ಈ ಮೂಲಕ ತಿಳಿಸುವುದೇನೆಂದ್ರೆ:—

ಮೇಲ್ಕಂಡ ವ್ಯಾಜ್ಯವು ತಮ್ಮ ಬಗ್ಗೆ ತಾ 6-11-39ಕ್ಕೆ ಇಟ್ಟಿದೆ. ಅದರಲ್ಲಿ ವ್ಯಹರಿಸುವುದಿದ್ದರೆ ಅದಿನ್ನ ಹಗಲು 11 ಗಂಟೆಗೆ ಸರಿಯಾಗಿ ಸ್ವತಹ ವಕೀಲರ ಮುಖಾಂತ್ರ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಾರ್ಟಿ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು ತಿಳಿದಿರಲಿ.

ಪುತ್ತೂರು 18-10-39 — U. S. Sharley, Vakil for plaintiff

Canarese No 7



ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಕೇಕಡಾ ನೂರರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಇರಿಸುತ್ತದೆ, ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (Cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ ಇದು ಬೆವರನ್ನು ಎಳಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ

ಮಕ್ಕಳಿಗೆ ಉಪಯುಕ್ತವಾದುದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

NACET

De Luxe

SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳು ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸ್ಥಾಪಿತವಾದ ಉತ್ತಮ ಮುಖಕ್ಷೌರದ ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ. ಆದರೆ ಈ ಬಾರಿ ಕೆಲವು ಸುಧಾರಣೆಯಿಂದೊಡಗೂಡಿದೆ ಈ ಹೊಸ ಬ್ಲೇಡುಗಳ ನಡುವಿನಲ್ಲಿ "ಸಿಗಿಯಲ್ಪಟ್ಟಿವೆ" ಇದನ್ನು ಒಂದು ಬಾರಿ ಸೇವೆ ಪರೀಕ್ಷಿಸಿರಿ ಆಗ ಇದರ ಕೊಂಚ ವಿರಿಸಲ್ಪಟ್ಟ ಬೆಲೆಯು ಯೋಗ್ಯತೆಯೂ ನಿಮಗೆ ತಿಳಿಯುವುದು ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ.

★ ★ ★

ಧರ್ಮಾರ್ಥ ಇಸ್ತ್ರೀಟು ಪೆಟ್ಟಿಗೆಯನ್ನು ಪಡೆಯಿರಿ.

ಈ ಧರ್ಮಾರ್ಥದ ಇಸ್ತ್ರಿಟು ಪೆಟ್ಟಿಗೆಯನ್ನು ಪಡೆಯಲು 'NACET BLADES' ಎಂದು ಬರುವಂತೆ ಉಪಯೋಗಿಸಿದ 10 ಬ್ಲೇಡುಗಳನ್ನು ಕೂಡಿಸಿ ಇಡೀ ಸೆಟ್ಟನ್ನು ಮುಲ್ಲರ್ ಎಂಡ್ ಪಿ ಪ್ಸ್ (ಇಂಡಿಯಾ) ಲಿಮಿಟೆಡ್, 15, ಸಂಕುರಾಮು ಚೆಟ್ಟಿ ಸ್ಟ್ರೀಟ್ ಮದ್ರಾಸು ಇವರಿಗೆ ಕಳುಹಿಸಿರಿ.



Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore. And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE — ESTD. 1906

CANARA BANK, LIMITED.

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri.

Fixed Deposits will be received at following rates of interest.

For	3 month	3½%
„	6 „	1%
„	12 „	[illegible]
„	24 „ & upward	5½%

Interest Payable Quarterly

Savings Bank deposit 3½% on daily balances.

All kinds of banking business transacted

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p. a

in denominations of

RS. 50/-, 100/-, 500/-, 1,000/-, & 5,000/

are now issued at all our Branches.

For particulars call at or write to any of our nearest Branches.

ದೇಶರಕ್ಷಣೆಗಾಗಿಯೂ ಶಸ್ತ್ರಯುದ್ಧವು ಸಲ್ಲದು

ಹಿಂಸೆಯಿಂದ ಭಾರತದ ಆತ್ಮನಾಶವಾಗುವುದು

ಗಾಂಧಿಜಿಯವರ ಹೇಳಿಕೆ.

ಕಾಂಗ್ರೆಸಿನ ಸದಸ್ಯರ ಅಹಿಂಸಾ ತತ್ವದ ಕುರಿತು ಗಾಂಧಿಜಿಯವರು ಈ ರೀತಿಯ ಪ್ರಕಟಣೆಯೊಂದನ್ನು ಕೊಟ್ಟಿದ್ದಾರೆ:—

'ನಮ್ಮ ದೇಶಕ್ಕೆ ಸ್ವಾತಂತ್ರ್ಯವು ದೊರೆತ ಮೇಲೆ ಅಹಿಂಸಾತ್ಮಕ ರೀತಿಯಿಂದ ರಾಜ್ಯವನ್ನು ರಕ್ಷಿಸಿಕೊಳ್ಳಲು ಸಾಧ್ಯವಿದೆಯೋ ನೋಡಬೇಕು. ಬ್ರಿಟಿಷ್ ಸರಕಾರವು ತಮಗೆ ತೃಪ್ತಿಕರವಾದ ಉತ್ತರವೀಯಲಿ, ಈಯದಿರಲಿ, ನಮ್ಮ ರಾಷ್ಟ್ರಕ್ಕೆ ಅನ್ಯ ರಾಷ್ಟ್ರಗಳ ಆಕ್ರಮಣವೊದಗಿದಾಗ ನಾವದನ್ನು ಹಿಂಸೆಯಿಂದ ತಡೆಯುವೆವೋ ಎಂದು ನಿರ್ಧರಿಸಬೇಕು. ಈ ಕುರಿತು ಕಾಂಗ್ರೆಸು ಕಾರ್ಯಕಾರೀ ಸಮಿತಿಯವರು ಅಹಿಂಸೆಯಿಂದ ತಡೆಯುವ ಅಭಿಪ್ರಾಯದವರಲ್ಲವೆಂದು ತಿಳಿದು ವಿಷಾದಗೊಂಡಿದ್ದೇನೆ.

'ಶತ್ರುಗಳನ್ನು ಹೊರ ಓಡಿಸುವುದೂ, ಬರದಂತೆ ತಡೆಯುವುದೂ ಒಂದೇ ರೀತಿಯದಾಗಿರಬೇಕು. ನಮ್ಮ ಯುದ್ಧವು ಬಲಹೀನರ ಸತ್ಯಾಗ್ರಹವಾಗಿದ್ದುದರಿಂದ ಅಹಿಂಸೆಯ ಕುರಿತು ನಾವು ಸಂದೇಹ ಪಡುತ್ತೇವೆ. ನಾವು ಯುದ್ಧದಲ್ಲಿ ಶಸ್ತ್ರ ಸಜ್ಜಿತ ರಾಷ್ಟ್ರಗಳೊಂದಿಗೆ ಸೇರಿ ಕತ್ತಿ ಕಟ್ಟಿ ನಿಲ್ಲುವ ಸಹಕಾರ ಕೊಡುವುದಿದ್ದರೆ ಕಳೆದ 20 ವರ್ಷಗಳ ಪ್ರಯತ್ನವು ನಿಷ್ಫಲವಾಗುವುದು. ಆ ಸಮಯದಲ್ಲಿ ರಾಷ್ಟ್ರ ಸಭೆಯ ಸದಸ್ಯರು ಮಿಲಿಟರಿ ಶಿಕ್ಷಣ ಪಡೆಯಬಹುದಿತ್ತು. ಈ ದೌರ್ಬಲ್ಯಕ್ಕೆ ನಾನೇ ಕಾರಣನೆಂದೂ, ದೇಶವು ಬಲಶಾಲಿಗಳ ಅಹಿಂಸಾತ್ಮಕ ಸತ್ಯಾಗ್ರಹ ಮಾಡಲಿಲ್ಲ, ಬಲಹೀನ ಸತ್ಯಾಗ್ರಹ ಮಾಡಿತು. ಆದುದರಿಂದ ಅವರಿಗೆ ಸೈನಿಕ ಶಿಕ್ಷಣವನ್ನು ಕೊಡಲು ನಾನು ಯತ್ನಿಸಬೇಕಿತ್ತೆಂದು ಭವಿಷ್ಯದ ಚರಿತ್ರಕಾರನು ಬರೆಯಬಹುದು.

'ಆದರೆ ನನಗೆ ನನ್ನ ದೇಶವು ಅಹಿಂಸೆಯನ್ನು ಪಾಲಿಸುವುದೆಂಬ ಭರವಸೆಯಿದೆ. ದೊಣ್ಣೆ ಬೀಸುವುದು ಖಡ್ಗ ತಿರುಗಿಸುವುದು ಸಲ್ಲದೆಂದು ಹೇಳಿದ್ದಕ್ಕೆ ನಾನು ವ್ಯಸನಪಡಲಾರೆ. ಬ್ರಿಟಿಷರಲ್ಲದೆ ಅನೇಕ ಯುದ್ಧಾಕಾಂಕ್ಷಿಗಳಾದ ತುಂಬಾ ರಾಷ್ಟ್ರದವರಿರುವುದರಿಂದ, ಅವರಿಂದ ರಾಜ್ಯವನ್ನು ಕಾಪಾಡಬೇಕಾದೀತೆಂಬ ಮಾತು ನಿಜ. ಆದರೆ ಸತ್ಯಾಗ್ರಹದ ಸಮಯದಲ್ಲಿ ಹಲವು ಸ್ತ್ರೀ ಪುರುಷರು ತೋರಿಸಿದಂತಹ ಸಹನೆ ಧೈರ್ಯಗಳನ್ನು ತೋರಿಸಿ ಸಾಧ್ಯವಿಲ್ಲ'ವೆಂದು ದೃಢವಾಗಿ ಹೇಳಿದರೆ ಯಾರಿಗೂ ದಂಡೆತ್ತಿ ಗೆಲ್ಲಲು ಆಗಲಾರದು. ಕಾಂಗ್ರೆಸಿಗೆ ಅಹಿಂಸೆಯನ್ನು ಆಯುಧವನ್ನಾಗಿ ಜಗತ್ತಿಗೆ ಸಾರಿದ ಕೀರ್ತಿ ಇದೆ. ಅಹಿಂಸಾ ರೀತಿಯಲ್ಲಿ ನಾವು ಅವರಿಗೆ ಸಹಾಯ ಮಾಡಿದರೆ ಅವರ ಉದ್ದೇಶಕ್ಕೆ ನೆರವಾಗುವುದು. ಇದು ನನ್ನ ಸ್ವಂತ ವಿಚಾರ. ನಾನೊಬ್ಬನೇ ಈ ವಿಚಾರದವನಾಗಿದ್ದರೂ ನನ್ನ ವಿಚಾರವು ಸತ್ಯವೆಂದು ದೃಢವಿರುವುದರಿಂದ ಇತರರಿಗೆ ಈ ಕುರಿತು ಸಾರಿ ಅವರ ಮನಸ್ಸಿಗೆ ಖಚಿತಮಾಡಬೇಕು. ತನ್ನ ಗಡಿಯನ್ನು ಕಾಯ್ದುಕೊಳ್ಳುವಲ್ಲಿಯೂ ಭಾರತವು ಹಿಂಸೆಯನ್ನು ಮಾಡಬಾರದು. ಹಾಗೆ ಮಾಡಿದರೆ ಆತ್ಮಘಾತ ಮಾಡಿಕೊಂಡಂತೆ. ಅಹಿಂಸೆಯನ್ನು ಹಿಂದೂಸ್ಥಾನವು ಬಿಟ್ಟರೆ ಲೋಕದ ಕೊನೆಯ ಆಶೆಯೂ ಭಗ್ನವಾಗುವುದು. ಭಾರತವು ಕೊನೆಯವರೆಗೆ ಅಹಿಂಸೆಯನ್ನು ಪಾಲಿಸಿ ಮಾನವನ ಗೌರವವನ್ನೂ ಕಾಪಾಡಬೇಕೆಂದೂ, ಮಾನವನು ಹಿಂದೆ ಹೊಂದಿದ ಅಧೋಗತಿಗೆ ಮುಂದೆ ಬಲಿಯಾಗಬಾರದಾದರೂ ನಾನು ಆಶಿಸುತ್ತೇನೆ'

Wanted

Wanted one Inspector, two Organisers and Agents in south Kanara. Apply stating provious experience to:

The Bomboy Co-operative Insurance Society Ltd.,

Office for Mysore, Coorg and South Kanara:

'Asiatic Building', Kempe Gowda Road, Bangalore city

ಆರೋಗ್ಯ ಸುಖವೇ

ವ್ಯಾಧಿಗಳಿಂದ ಬಿಡುಗಡೆಹೊಂದುವುದು

ಇವರಿಗೆ ಮಾತ್ರ ಆರೋಗ್ಯದ ಪ್ರಥಮ ಸೂತ್ರದ ಪರಿಚಯವಿದೆ



ಅನುನಿತ್ಯ ಆಗಾಗ ಬರುವ ರೋಗಗಳು ಮಲಿನವಾದ ಹೊಟ್ಟೆಯಿಂದಾಗಿರುತ್ತದೆ. ಹೊಟ್ಟೆಯನ್ನು ನಿರ್ಮಲವಾಗಿರಿಸಿರಿ; ಆಗ ಮಾತ್ರ ನೀವು ಎಲ್ಲಾ ರೋಗಗಳಿಂದ ಪಾರಾಗಿ ಉತ್ತಮವಾದ ಆರೋಗ್ಯದಿಂದ ಸುಖಹೊಂದಬಹುದು. ನಿಮ್ಮ ಕುಟುಂಬಕ್ಕೆ ಆರೋಗ್ಯದ ಈ ಪ್ರಥಮ ಸೂತ್ರವನ್ನು ಕಲಿಸಿರಿ—ಹೊಟ್ಟೆಯನ್ನು ನಿರ್ಮಲವಾಗಿರಿಸಲು ಪ್ರತಿಯೊಬ್ಬರೂ ಯಾವಾಗಲೂ ಒಂದು ಗ್ಲಾಸು ಉಕ್ಕಿ ಬರುವ ಎಂಡ್ರೂಸ್ ಲವಣವನ್ನು ಸೇವಿಸುತ್ತಿರುವರೋ ಎಂದು ನೋಡಿರಿ.

ಹೊಟ್ಟೆಯನ್ನು ನಿರ್ಮಲಗೊಳಿಸಲು ಎಂಡ್ರೂಸ್ ಲವಣದಷ್ಟು ಉತ್ಕೃಷ್ಟವಾದುದು ಬೇರಾವುದೂ ಇಲ್ಲ. ರೋಗವನ್ನು ತರಬಹುದಾದಂತ ಮಲಿನ ಪದಾರ್ಥಗಳೆಲ್ಲವನ್ನೂ ಇದು ಹೊರದೂಡುವುದು, ರಕ್ತವನ್ನು ಶಾಂತಗೊಳಿಸಿ ನಿರ್ಮಲವಾಗಿರಿಸುವುದು. ಚರ್ಮವನ್ನು ನಿಚ್ಚಳವಾಗಿರಿಸುವುದಲ್ಲದೆ ಇಡೀ ದೇಹಕ್ಕೆ ಇದು ಟಾನಿಕ್‌ನಂತಿದೆ.

ಉತ್ತಮ ಆರೋಗ್ಯ ಮತ್ತು ರೋಗಗಳಿಂದ ವಿಮುಕ್ತರಾಗಲು ದೇಹದ ಒಳಭಾಗವನ್ನೂ ಹೊರಭಾಗವನ್ನೂ ನಿರ್ಮಲವಿರಿಸಬೇಕು. ಎಂಡ್ರೂಸ್ ಲವಣವು ಶಾಸ್ತ್ರೀಯ ರೀತಿಯಲ್ಲಿ ದೇಹದ ಒಳಭಾಗವನ್ನು ಶುದ್ಧಗೊಳಿಸುವುದು.

ಎಂಡ್ರೂಸ್ ಲವಣವು ನಿಮ್ಮ ದೇಹದ ಒಳಭಾಗವನ್ನು ಶುದ್ಧಗೊಳಿಸುವುದು ★ ರಕ್ತವನ್ನು ಶಾಂತರೀತಿಯಿಂದ ಶುದ್ಧಗೊಳಿಸುವುದು ★ ಚರ್ಮವನ್ನು ನಿಚ್ಚಳವಾಗಿರಿಸುವುದು ★ ಯಕೃತ್ತು, ಅಜೀರ್ಣ, ಮಲಬದ್ಧತೆ ಮೊದಲಾದ ಬಾಧೆಗಳನ್ನು ಗುಣಪಡಿಸುವುದು ★ ಇದರಿಂದ ಅಭ್ಯಾಸವಾಗುವಂತಿಲ್ಲ, ಮಕ್ಕಳಿಂದ ಹಿಡಿದು ಇಡೀ ಕುಟುಂಬಕ್ಕೆ ಯೋಗ್ಯವಾದುದಾಗಿದೆ.

ಈ ಪ್ರಮಾಣ ಪತ್ರವನ್ನೋದಿರಿ:—'ನಾನು ಅಜೀರ್ಣ, ವಾತ ಮೊದಲಾದ ರೋಗಗಳಿಂದ ನರಳುತ್ತಿದ್ದೆ. ಎರಡು ತಿಂಗಳಿಂದ ನಾನು ಎಂಡ್ರೂಸ್ ಲವಣವನ್ನು ಸೇವಿಸಲು ಪ್ರಾರಂಭಿಸಿದ್ದೆ. ಈಗ ನನ್ನ ಯಾವತ್ತು ವೇದನೆಗಳು ಮಾಯವಾದುವು. ನಾನು ಇಚ್ಛೆ ಇದ್ದ ಯಾವತ್ತು ಪದಾರ್ಥವನ್ನು ಸೇವಿಸುತ್ತಿರುವೆನು. ಇದರಿಂದ ನನಗೆ ಮೊದಲಿನ ಯಾವ ವೇದನೆಗಳೂ ಕಂಡುಬರುವುದಿಲ್ಲ.

ಎಂಡ್ರೂಸ್ ಲಿವರ್ ಸೋಲ್ಟ



ANDREWS LIVER SALT

ದೇಹದ ಒಳಭಾಗವನ್ನು ನಿರ್ಮಲವಾಗಿರಿಸುವುದು



ನೋಟಗಳು

ಕಾಂಗ್ರೆಸು ಮಂತ್ರಿಗಳು ರಾಜಿಕೊಡುವರು!

ಇನ್ನು ಮುಂದಿನ ಘಟನೆಗಳ ಕುರಿತು ಎ. ಐ. ಸಿ. ಸಿ ಯ ಕಡೆಗೆ ಎಲ್ಲರ ಗಮನ ಹರಿದಿದೆ.!

"ಇಂತಹ ಸಂದಿಗ್ಧ ಕಾಲದಲ್ಲಿ ದೇಶವನ್ನು ವಿಜಯದ ಕಡೆಗೆ ಮುನ್ನಡೆಸಲು, ಗಾಂಧಿಜಿಯವರ ಮುಂದಾಳುತನವು ಅವಶ್ಯವಿದೆ. ಗಾಂಧಿಜಿಯವರು ಮುಂಬಂದು ರಾಷ್ಟ್ರವನ್ನು ಮುನ್ನಡೆಸಬೇಕು." ಹೀಗೆಂದು ಶ್ರೀ। ಸತ್ಯಮೂರ್ತಿಗಳು ಸೂಚಿಸಿರುತ್ತಾರೆ.

ಕಾಂಗ್ರೆಸು ವಿರುದ್ಧವಾಗಿ ಹರಡಿರುವ ಕಟ್ಟುಕತೆಗಳನ್ನು ಕೇಳಿ ಬ್ರಿಟಿಷರು ಕಲಿಗೆಡಬಾರದಾಗಿಯೂ ಅವರುಹೇಳುವರು!

ಲಾರ್ಡ್ ಜೆಟ್ಲೆಂಡರು ಈ ಉಪದೇಶವನ್ನು ಕೇಳುವರೇ? ಇವರು ಸ್ವಕಲ್ಪಿತ ಮುಂದಾಳುಗಳಾದ ಅಲ್ಪಸಂಖ್ಯಾಕ ಮುಖಂಡರ ಮಾತಿನಲ್ಲಿ ವಿಶ್ವಾಸವುಳ್ಳವರು

ಕಾಂಗ್ರೆಸು ಮುಂದಾಳುಗಳ ಕುರಿತು ಜೆಟ್ಲೆಂಡರ ಅಭಿಪ್ರಾಯವು ತೀರಾ ವಿಷಮವಿದೆ. ಗಾಂಧಿಜಿಯವರು ಇಂಡಿಯಾ ಆಕ್ಟ್ ಕಾನೂನನ್ನು ಓದಲಿಲ್ಲವೆಂದು ಒಮ್ಮೆ ಅವರು ಉದ್ಗರಿಸಿದ್ದರು ಆದರೆ ಈಸಲ ಗಾಂಧಿಜಿಯವರಕುರಿತು ಅವರು ಸ್ವಲ್ಪ ದಯೆ ತೋರಿಸಿದಂತೆ ಇದೆ. ಇತರ ಕಾಂಗ್ರೆಸು ಧುರೀಣರ ವಿಷಯವಾಗಿ ಅವರಿಗೆ ಏನೇನೂ ಮನಸ್ಸಮಾಧಾನವಿದ್ದಹಾಗೆ ಕಾಣುವುದಿಲ್ಲ!

ಕಾಂಗ್ರೆಸಿನ ಕುರಿತು ಬ್ರಿಟಿಷರು ತಪ್ಪಭಿಪ್ರಾಯ ಮಾಡಿಕೊಂಡ ವಿಷಯದಲ್ಲಿ ರಾಜಾಜಿಯವರು ಇಂತಹ ಸಮಯ(ದ)ವಿನೊಡನೆ ಕಾಂಗ್ರೆಸು ಬ್ರಿಟಿಷರಿಗೆ ಬಂದ ಕಷ್ಟಕಾಲದಲ್ಲಿ ತನ್ನ ಪ್ರಯೋಜನವನ್ನು ಹೊಂದಲು ಬಯಸುವುದಿಲ್ಲವೆಂದೂ ಬ್ರಿಟಿಷರ ಈ ಕಷ್ಟ ನಿವಾರಣೆಯ ಸಲುವಾಗಿಯೇ ಕಾಂಗ್ರೆಸು ಬ್ರಿಟಿಷರೊಡನೆ ಕೆಲವು ಕೇಳಿಕೆಗಳನ್ನು ಮುಂದಿರಿಸುವುದಾಗಿಯೂ ಹೇಳಿದ್ದರು.

ಆದರೆ ಬ್ರಿಟಿಷ್ ಮುಂದಾಳುಗಳು ಕಾಂಗ್ರೆಸಿನ ಕೇಳಿಕೆಗಳನ್ನು ತಿರಸ್ಕರಿಸಿದರು

ಈ ರೀತಿ ತಿರಸ್ಕರಿಸಿದ ಬ್ರಿಟಿಷ ರಾಜತಂತ್ರಜ್ಞರ ಪ್ರಮಾದದಫಲವು ಮುಂದಿನ ಘಟನೆಗಳಿಂದ ವ್ಯಕ್ತವಾಗದಿರದು.

ಹಿಟ್ಲರನ ವಿರೋಧವಾಗಿ ಬ್ರಿಟಿಷರು ಯುದ್ಧಮಾಡಲು ನಿಶ್ಚಯ ಮಾಡಿದ್ದೇ, ಬ್ರಿಟಿಷ್ ರಾಜನೀತಿಜ್ಞತೆಯ ಪ್ರಮಾದವೆಂದು ಈಗ ಕೆಲವರ ಅಭಿಪ್ರಾಯ.

ಯಾತಕ್ಕೆಂದರೆ, ಹಿಟ್ಲರಿಜಂ ನಾಶವಾದರೆ ಯುರೋಪಿನಲ್ಲಿ ರಷ್ಯವು ಪ್ರಾಧಾನ್ಯತೆಗೆ ಬರುವುದೇ ಎಂದು ಕೆಲವರ ಭಯ.

ಜರ್ಮನಿಯ ಪತನವಾದಲ್ಲಿ ಕಮ್ಯೂನಿಸಂ ಫ್ರಾನ್ಸನ್ನು ಆಕ್ರಮಿಸಬಹುದೇ ಎಂದು ಫ್ರಾನ್ಸು ಹೆದರಿದೆ.

ಇಷ್ಟರಲ್ಲಿಯೇ ದಲಡಿಯರು ಫ್ರಾನ್ಸಿನಲ್ಲಿದ್ದ ಹಲವು ಕಮ್ಯುನಿಸ್ಟ್ ಚಳವಳಗಾರರನ್ನು ಸೆರೆಹಿಡಿಯಬೇಕಾಯಿತು.

ಇಂತಹ ಪರಿಸ್ಥಿತಿಯಲ್ಲಿ ರಣಭೂಮಿಯಲ್ಲಿ ಆದರೂ ನಡೆದ ಘಟನೆಗಳೇನು? ಫ್ರೆಂಚರ ಸೇನೆಯು ಜರ್ಮನಿಯಿಂದ ಹಿಂದೆ ಸರಿದಿದೆಯೆಂದು ವಾರ್ತೆ ಬಂದಿರುವುದು.

ಬ್ರಿಟಿಷರ ಧೋರಣೆ ಯಾವುದೆಂದು ತಿಳಿಯುವುದು ಕಷ್ಟವಾಗಿದೆ ಯುದ್ಧ ಪ್ರಾರಂಭದಲ್ಲಿ, ಪೋಲೆಂಡಿನ ಸ್ವಾತಂತ್ರ್ಯವನ್ನು ಅಪಹರಿಸಿದವರ ಮೇಲೆ ಬ್ರಿಟಿಷರು ಯುದ್ಧಕ್ಕಿಳಿಯುವುದಾಗಿ ಸಾರಲ್ಪಾಗಿತ್ತು ರಷ್ಯವು ಪೋಲೆಂಡಿನ ಸ್ವಾತಂತ್ರ್ಯವನ್ನು ಅಪಹರಿಸುವಲ್ಲಿ ಜರ್ಮನಿಯೊಡನೆ ಸಮಭಾಗಿಯಾಯಿತು. ಹೀಗಿರಲೂ ಬ್ರಿಟನು ರಷ್ಯದೊಡನೆ ಯಾವುವೇ ತರದ ವಿರೋಧವನ್ನು ಬಹಿರಂಗಪಡಿಸಲಿಲ್ಲ. ಅದರ ಬದಲು ರಷ್ಯದೊಡನೆ ಬ್ರಿಟಿಷರು ವ್ಯಾಪಾರ ಸಂಧಿಗಳನ್ನು ಮಾಡಿಕೊಳ್ಳುತ್ತಿದ್ದಾರೆ!

ಇದರ ಅಂತರಂಗವೇನೋ ತಿಳಿಯಲಾರದಾಗಿದೆ!

ಹಾಗಾದರೆ ಯುದ್ಧ ಪ್ರಕಟಣೆಯ ಉದ್ದೇಶವಾದರೂ ಏನು?

ಜಾರ್ಜ್ ಬರ್ನಾರ್ಡ್‌ಶಾರವರು, ಬ್ರಿಟಿಷರ ಯುದ್ಧ ಧೋರಣೆ, ಹೊಸ ರಾಜ್ಯ ಲಾಭಕ್ಕಾಗಿಯಲ್ಲವೆಂದು ಸ್ಪಷ್ಟೀಕರಿಸುತ್ತಾರೆ. ಅದು ಮಾತ್ರವಲ್ಲದೆ, ಈ ಯುದ್ಧವು ಕೇವಲ ರಾಜಕೀಯ ತತ್ವಗಳ ಸಂರಕ್ಷಣೆಗಾದರೆ, ಇನ್ನು ೩೦ ವರ್ಷಗಳ ವರೆಗೆ ಇದು ನಡೆಯಬಹುದೆಂದೂ ಅವರ ಅಭಿಪ್ರಾಯ.

ಹಿಂದೂ ಮಹಾಸಭೆಯ ಮುಂದಾಳು ಸಾವರ್ಕಾರರನ್ನು ವೈಸರಾಯರು ಆಮಂತ್ರಿಸಿದ್ದೇ ತಡ, ಈ ಮಹಾ ಸಭೆಯ ಚಟುವಟಿಕೆಗಳು ವಿಪರೀತ ಹೆಚ್ಚುತ್ತಿವೆ.

'ಮಹಾಸಭೆಯವರು 'ಹಿಂದೂ ರಾಷ್ಟ್ರೀಯ ದಿನ' ಆಚರಿಸಬೇಕೆಂದು ಅವರ ನಿರ್ಧರಿಸಿದ್ದಾರೆ.

ಈ ಉದಾಹರಣೆಯನ್ನು ಎಲ್ಲಾ ಧುರೀಣರೂ ಅನುಸರಿಸಿದಲ್ಲಿ ಸರ್ ಸೆಟ್ಲೂವಾಡರು, 'ಡೊಮಿನಿಯನ್ ಸ್ಟೇಟಸ್ ದಿನ'ವನ್ನೂ, ಸರ್ ಸಪ್ರುಗಳು ಉದ್ಯೋಗ ತೆರಿಗೆಯ ನಿಷೇಧ ದಿನವನ್ನೂ, ಡಾ। ಅಂಬ್ಡೇಕರರು, ಮತಾಂತರ ಸಹಾಯ ದಿನ(Pro-Conversion day)ವನ್ನೂ, ಮಿ। ಜಿನ್ನಾರವರೂ ಹಿಂದೀ ವಿರುದ್ಧ ದಿನವನ್ನೂ, ಕಡೆಗೆ ಹಿಂದೀ ವಿರುದ್ಧ ಚಳವಳಿಯಲ್ಲಿ ಪ್ರಖ್ಯಾತಿಗೆ ಬಂದ ಸ್ವಾಲಿನ್ ಜಗದೀಶರೆಂಬ ಮಹನೀಯರು, ನೂರು ವರ್ಷಗಳ ವರೆಗೆ ಅನ್ನ ಸತ್ಯಾಗ್ರಹ ದಿನವನ್ನೂ ಆಚರಿಸಬೇಕಾಗುವುದು!

ಇತ್ತೀಚೆಗೆ, ವೈಸರಾಯರೊಡನೆ ಭಾರೀ ಮಾತುಕತೆಗಳು ನಡೆದವು.

ಅನೇಕ ಸ್ವಕಲ್ಪಿತ ಮುಖಂಡರು ತಾವೇ ತಾವಾಗಿ ಮುಂಬಂದು ವೈಸರಾಯರಿಗೆ ತಂತಿಕೊಟ್ಟು ಡೆಲ್ಲಿಯನ್ನು ಸೇರಿದರು!

ಈ ಮಾತುಕತೆಗಳಿಂದ, ವೈಸರಾಯರಿಗೆ ಒಂದು ವಿಷಯವು ಸ್ಪಷ್ಟವಾಗದಿರದು.

ಕಾಂಗ್ರೆಸು, ತನ್ನನ್ನು ವೈಸರಾಯರು ಮಾತುಕತೆಗೆ ಕರೆಯಬೇಕೆಂದು ಒಮ್ಮೆಯಾದರೂ ಇಚ್ಛಿಸಲಿಲ್ಲ.

ವೈಸರಾಯರೇ ಕಾಂಗ್ರೆಸು ಧುರೀಣರನ್ನು ಗೌರವದಿಂದ ಆಮಂತ್ರಿಸಿ ಕೊಂಡರು!

ಇದರಿಂದಲೇ, ಕಾಂಗ್ರೆಸು ಮಾತ್ರ ನಿಜವಾದ ಭಾರತದ ಪ್ರತಿನಿಧಿ ಸಂಸ್ಥೆಯೆಂಬುದು ಬ್ರಿಟನಿಗೆ ಸ್ಪಷ್ಟ ತಿಳಿದಿರಬೇಕು.

ವೈಸರಾಯರ ಮಾತುಕತೆಯಿಂದ ಇಷ್ಟಾದರೂ ಸ್ಪಷ್ಟವಾಯಿತಷ್ಟೆ?

To Let.

Whole property well known "ARYASHRAM" Near City Post Office. Facing Navayath Galli to the West, and Aziz-uddin Road to the East. EXCELLANT ACCOMMODATION FOR residential quarters. Also suited for curing and factory purposes with improvements. Necessary improvements will be effected. Also separate houses available according to conveniences.

Apply to:

1 Sri A. Srinivasa Pai, B.A.,B.L., *"Hill House", Kasargod, S. Kanara.*

OR

2 Sri B. VaikuntaBaliga, B.A.,B.L. *"Lorretto Villa", Kodialbail Mangalore,*

ಉದರ ವ್ರಣಗಳಿಂದ ತೀಕ್ಷ್ಣ ವೇದನೆ ಉಂಟಾಯಿತು

ನಿಮ್ಮ ಉದರ ವೇದನೆಯು ಮಿ। ಎಸ್. ಎ ಯವರ ವೇದನೆಯಷ್ಟು ತೀಕ್ಷ್ಣವಿಲ್ಲದಿದ್ದರೂ ಅವರ ವೇದನೆಯು ಪ್ರಾರಂಭದಲ್ಲಿ ಕೇವಲ ಅಜೀರ್ಣದಿಂದಲೇ ಪ್ರಾರಂಭಿಸಿತೆಂದು ನೆನಪಿರಲಿ. ಯಾಕೆಂದರೆ ಪ್ರಾರಂಭದ ಅಜೀರ್ಣತೆಯೇ ಮುಂದಕ್ಕೆ ಭಯಂಕರವಾಗಿ ಪರಿಣಮಿಸುವುದು.

ಮಿ ಎಸ್ ಎ ಯವರು ಹೇಳುತ್ತಾರೆ. "ಮೆಕ್ಲಿನ್ ಸ್ಟೋಮಕ್ ಪೌಡರಿನಿಂದ ನನಗೆ ದೊರೆತ ಪ್ರಯೋಜನವನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವಾಗಿರುತ್ತದೆ ಉದರ ವ್ರಣಗಳಿಂದ ಮೂರು ವರ್ಷ ಕಾಲ ನಾನು ನರಳುತಿದ್ದೆ ನಾಲ್ಕು ಬಾರಿ ಎಕ್ಸ್‌ರೇ ಪರೀಕ್ಷೆಯನ್ನು ನಡೆಸಿದುದಾಯಿತು ಇಡೀ ಎರಡು ವರ್ಷದಲ್ಲಿ ಒಂದು ವಾರವಾದರೂ ಸರೀ ಕೆಲಸ ಮಾಡಲಿಲ್ಲ ಆದರೆ ಇಂದು ಮೆಕ್ಲಿನ್ ಸ್ಟೋಮಕ್ ಪೌಡರಿನಿಂದಾಗಿ ನಾನು ಬಹಳ ಸುಖಿಯಾಗಿರುತ್ತೇನೆ ಏಳು ವಾರದಿಂದ ನಾನೀಗ ಕೆಲಸಕ್ಕೆ ಹೋಗುತ್ತಿರುವೆನು ಮತ್ತು ನಾನೀಗ ಅತ್ಯಂತ ಆರೋಗ್ಯದ ಮನುಷ್ಯನಾಗಿರುತ್ತೇನೆ"

ನಿಮ್ಮ ಉದರ ವೇದನೆಯನ್ನು ಪ್ರಾರಂಭದಲ್ಲಿಯೇ ಸುಲಭವಾಗಿ ಗುಣಪಡಿಸಬಹುದು ಮೆಕ್ಲಿನ್ ಸ್ಟೋಮಕ್ ಪೌಡರನ್ನು ಹಾಲಿನಲ್ಲಾಗಲೀ ನೀರಿನಲ್ಲಾಗಲೀ ಬೆರಸಿ ಸೇವಿಸಿರಿ ಇದರಿಂದಲೇ ತೀಕ್ಷ್ಣತರದ ವೇದನೆಯಾದರೂ ಶಮನವಾಗುವುದು ಮೆಕ್ಲಿನ್ ಸ್ಟೋಮಕ್ ಪೌಡರಿನಲ್ಲಿರುವಉತ್ತಮ ದ್ರಾವಕಾಶಯದ ಆಲಾಲಿಸು ಉದರ ವೇದನೆಯನ್ನು ಸಂಪೂರ್ಣ ಗುಣಪಡಿಸುವುದು ಮಾತ್ರವಲ್ಲ ಹಿಂದಿನ ಆರೋಗ್ಯ ಸ್ಥಿತಿಯನ್ನುಂಟುಮಾಡಿ ಜೀರ್ಣಾಂಗಗಳನ್ನು ವ್ಯವಸ್ಥೆಗೊಳಿಸುವು.

ಖಾತ್ರಿಯಾದ ಮೆಕ್ಲಿನ್ ಬ್ರಾಂಡ್ ಸ್ಟೊಮಕ್ ಪೌಡರ. ಹಿಗುವಂತೆ ಅರಿಸಿರಿ.

Alex. C. Maclean

ಎಂಬ ದಸ್ಕತು ಬಾಟ್ಲಿಯ ಮೇಲೂ, ಪೆಟ್ಟಿಗೆಯ ಮೇಲೆ ದಸ್ಕತ್ತು ಕೆಂಪು ಸೀಲು ಇರುವುದಾದರೆ ಮಾತ್ರ ಅದು ಖಾತ್ರಿಯಾದದ್ದು. ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ ಪೆಟ್ಟಿಗೆಗಳಲ್ಲಿರುವ ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ. (ಹುಡಿ ಯಾ ಮಾತ್ರೆ ರೂಪದಲ್ಲಿ) ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

70⁴



ವಿಜ್ಞಾನಯುಗ

ನಮ್ಮ ವೈದ್ಯಕೀಯ ಸಂಶೋಧನೆ ನಂ. ೩

ಮುಟ್ಟುತನ

'ಬಹಿಷ್ಕರಾದ ಸ್ತ್ರೀಯರನ್ನು ಅಸ್ಪೃಶ್ಯರಾಗಿ ದೂರವಿರಿಸುವುದು ಅಶಾಸ್ತ್ರೀಯವೇ?

ನಮ್ಮಲ್ಲಿ ಹಿಂದಿನಿಂದಲೇ ಬಹಿಷ್ಠೆಯರಾದ ಸ್ತ್ರೀಯರನ್ನು, ಯಾವುವೇ ತರದ ಸಂಪರ್ಕದಿಂದ ದೂರವಿರಿಸುವ ಪದ್ಧತಿಯನ್ನು ಇಟ್ಟುಕೊಂಡಿರುವರು. ಇದು ಪುರಾತನಕಾಲದ ಕೇವಲ ಅಂಧಾಚಾರವೆಂದು ಇಂದಿನ ವಿದ್ಯಾವತಿಯರೆನಿಸಿಕೊಂಡವರಲ್ಲಿಯೂ, ಇತರರಲ್ಲಿಯೂ ಸಾಮಾನ್ಯ ಎಲ್ಲಾ ಕಡೆಗಳಲ್ಲಿಯೂ ಮುಟ್ಟುತನವು ಅಸ್ಪೃಶ್ಯತೆಯಿಂದ ದೂರವಾಗಿದೆ. ಹೀಗೆ ಮುಟ್ಟಾದ ಹೆಂಗುಸನ್ನು ದೂರವಿರಿಸುವ ವಿಷಯದಲ್ಲಿ ಜನರಿಗೆ ನಂಬಿಕೆಯಿರುವುದಿಲ್ಲ. ಆದರೆ ಈ ಸಂಪ್ರದಾಯವು ಹಿಂದೂಮತದ ಇತರ ಹಲವು ನಿಯಮಗಳಂತೆ ಶಾಸ್ತ್ರೀಯ ರೀತಿಯಿಂದ ಉಪಯೋಗಕರವೂ, ಸಮಾಜ ಹಿತಕರವೂ ಆಗಿದೆಯೆಂದು ಸಂಶೋಧನಾಕಾರರು ಸ್ಪಷ್ಟಪಡಿಸಿರುವರು.

ಫ್ರಾನ್ಸಿನ ಹಲವು ಕಾರ್ಖಾನೆಗಳಲ್ಲಿ ಸ್ತ್ರೀಯರು ಮುಟ್ಟಾದಾಗ ಕೆಲಸಮಾಡಬಾರದೆಂದು ನಿಯಮವಿದೆ. ಸಿಲ್ಕ್ ಮತ್ತು ಮಶ್ರೂಮ್ ಕೃಗಾಂಕೆಗಳು ಫ್ರಾನ್ಸಿನಲ್ಲಿ ಹೆಚ್ಚಾಗಿವೆ, ಇವುಗಳಲ್ಲಿ ಸ್ತ್ರೀಯರು ಮುಟ್ಟಾಗಿರುವಾಗ ಮುಟ್ಟಬಾರದಾಗಿ ವಿಧಿಸಲಾಗಿದೆ.

ಪ್ರೊಫೆಸರ್ ಶಿಕ್ ಎಂಬವರು ಮೊತ್ತ ಮೊದಲಾಗಿ, ಮುಟ್ಟಾದ ಹೆಂಗುಸಿನ ಸಂಪರ್ಕವು ಬಾಹಿರವಾದದ್ದು ಎಂಬುದನ್ನು ಕಂಡುಹಿಡಿದರು. ಅವರ ಕೆಲಸಗಾತಿಯು ಒಳ್ಳೆಯ ನೀರಿನ ಆಶ್ರಯದಲ್ಲಿರಿಸಿದ ಗುಲಾಬಿ ಹೂವಿನ ಪಾತ್ರವನ್ನು ಮುಟ್ಟಲು, ಆಕೆ ಬಹಿಷ್ಠೆಯಾಗಿರುವ ನಿಮಿತ್ತವಾಗಿ ಅದರಲ್ಲಿರುವ ಅರಳಿದ ಗುಲಾಬಿ ಹೂ ಬಾಡಿಹೋಯಿತು.

ಆ ಮೇಲೆ ಮಾಡಿದ ಹಲವು ಸಂಶೋಧನೆಗಳಿಂದ ಈ ವಿಷಯವು ತಿಳಿದಿದೆ.

ಮುಟ್ಟಾದ ಹೆಂಗುಸಿನ ಶರೀರದಲ್ಲಿ ಪ್ರಾಕೃತಿಕ ವಸ್ತುಗಳಿಗೆ ಅಪಾಯಕರವಾದ ಒಂದು ಪದಾರ್ಥವು ಹುಟ್ಟುತ್ತದೆಯೆಂದು ತಿಳಿದು ಬಂದಿದೆ.

ಆದುದರಿಂದ ಮುಟ್ಟಾದ ಹೆಂಗುಸಿನ ಹತ್ತಿರ ಹೋಗುವುದರಿಂದ ಅಂತಹ ಪದಾರ್ಥದ ಸಂಪರ್ಕವಾಗಿ ಇತರರ ಆರೋಗ್ಯಕ್ಕೆ ಹಾನಿ ಬರುವುದು. ಈ ಪದಾರ್ಥವು ಅವರ ಸ್ಪರ್ಶಸ್ಥಾಯಿಯಿನಲ್ಲಿ, ಬೆವರಿನಲ್ಲಿ, ಅವರು ಮುಟ್ಟಿದ ಹಾಲು ಮೊದಲಾದವುಗಳಲ್ಲಿಯೂ ಇರುವುದು. ಆದುದರಿಂದಲೇ ಸಣ್ಣ ಮಕ್ಕಳನ್ನಾಗಲಿ ಮುಟ್ಟಾದ ಹೆಂಗುಸರ ಬಳಿ ಬಿಡಬಾರದಾಗಿ ಹೇಳುವರು.

ಶಾರದಾ ಬಿಲ್ಲು ಬಂದ ಮೇಲೆ ನಮ್ಮ ಸಮಾಜದಲ್ಲಿ ಕೆಲವು ಸ್ತ್ರೀ ವಿಷಯಕವಾದ ಆಚಾರಗಳು ಆಚರಿಸಲ್ಪಡುವುದಿಲ್ಲ. ಹಿಂದಿನ ಪ್ರಾಚೀನ ಪದ್ಧತಿಗಳೆಲ್ಲಾ ಅರ್ಥವಿಲ್ಲದ ಗೊಡ್ಡು ಆಚಾರಗಳೆಂದು ಇಂದಿನವರು ತಿಳಿದುಕೊಂಡಂತಿದೆ.

ನಮ್ಮ ವಿದ್ಯಾವತಿಯರಾದ ಸೋದರಿಯರು ಈ ಕುರಿತು ತಮ್ಮ ಗಮನಕೊಡಲಾರರೆ? ಇಂತಹ ಉಪಯುಕ್ತ ವಿಚಾರಗಳಿಂದ ಕೆಲವು ಪ್ರಾಚೀನ ಪದ್ಧತಿಗಳು ಸಮಾಜದ ಹಿತಕ್ಕೆ ಅತ್ಯಂತ ಉಪಯೋಗವುಳ್ಳದ್ದೆಂದು ತಿಳಿದುಕೊಂಡು ಅದರಂತೆ ಆಚರಿಸಲಾರರೆ? ಹೀಗೆ ಮಾಡಿ ಗೃಹಶಾಂತಿಯನ್ನು ಪಡೆಸಲಾರರೆ?

Ref From the Journal of phamacology and experimental Therapeutics

K M S

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O P No 118/1939

1 ಪದ್ಮಾವತಿ ಸೋನ್ಸ್, ಗೇಬ್ರಿಲ್ ಸೋನ್ಸರ ವಿಧವೆ		ಅರ್ಜಿದಾರರು
2 ವಿಲ್‌ಫ್ರೆಡ್ ಗ್ಲೇಡ್‌ಸನ್	ಪ್ರಾಯಸ್ಥರು	
3 ಯುಡಿಟ್ ಮೇಬಲ್	ಕ್ಷೇಮಚಿಂತ	
4 ಲೊಯಿಸಾ ಕ್ಲಮೆಂಟಿನಾ	ಕಳು ತಾಯಿ 1ನೇ ಅರ್ಜಿದಾರಳು	
5 ಇಸಾಬೆಲ್ ಮೇರಿ ಗ್ರೇಸ್		
ಹೊಸದುರ್ಗ ಕ್ಷಬಾಗ್ಯದಲ್ಲಿ ವಾಸವಿರುವವರು		

ಸದ್ರಿ ಅರ್ಜಿದಾರರು ತಿಳಿಸುವುದೇನೆಂದರೆ.—

1ನೇ ಅರ್ಜಿದಾರಳ ಗಂಡ ಬಾಕಿ ಅರ್ಜಿದಾರರ ತಂದೆ ಮೃತಪಟ್ಟ ಗೇಬ್ರಿಲ್ ಸೋನ್ಸ್‌ರು "Singer Sewing Machine Company Central Agency 2/16 Mount Road, Madras, India P O Box 380" ಕಂಪೆನಿಯಲ್ಲಿ ಸೇಲ್ಸ್ ಮೇನ್ ಮತ್ತು ಕಲೆಕ್ಟರ್ ಆಗಿರುವಾಗ್ಯೆ ಜ್ಯಾಮೀನಾಗಿ ಡಿಪೊಜಿಟು ಮಾಡಿದ ರೂಪಾಯಿ 300/ನ್ನು ಸದ್ರಿ ಕಂಪೆನಿಯಿಂದ ವಸೂಲುಪಡಿಯುವರೆ ಮೃತನ ವಾರಿಸುದಾರರ ನೆಲೆಯಲ್ಲಿ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲುಮಾಡಿದ ಮೇಲ್ಕಂಡ ಅರ್ಜಿಯು ತಾ. 7—11—39ಕ್ಕೆ ಇಟ್ಟಿರುವುದರಿಂದ ಆ ಕುರಿತು ಯಾರಿಗಾದರೂ ಆಕ್ಷೇಪ ಹೇಳಲಿಕ್ಕೆ ಇದ್ದರೆ ಸದ್ರಿ ತಾರೀಕಿಗೆ ಬೆಳಿಗ್ಗೆ 11 ಗಂಟೆ ಸಮಯಕ್ಕೆ ಹಾಜರಾಗತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಲ್ಪಡುತ್ತದೆ.

Kasaragod 14—10—39 } S/d **C. V. Kamath** Advocate for Petitioners

ಭಾರತೀಯರ ಹೊಸ ಶೋಧನೆ

ತನ್ನಷ್ಟಕ್ಕೇ ಕೆಲಸಮಾಡುವ ಯಂತ್ರ

ಪರದೇಶಗಳಲ್ಲಿ ಅದರಲ್ಲಿಯೂ ಹೆಚ್ಚಾಗಿ ಅಮೇರಿಕದಲ್ಲಿ ಮನುಷ್ಯನು ಮಾಡುವ ಕೆಲಸದ ಬಹುಭಾಗವು ಯಂತ್ರಗಳಿಂದಲೇ ಆಗುತ್ತದೆ, ಅಂಗಡಿಯಲ್ಲಿ ದುಡ್ಡುಕೊಟ್ಟರೆ ಅದಕ್ಕೆ ಬೇಕಾದ ಸಾಮಾನುಗಳನ್ನು ಯಂತ್ರವೇ ಕೊಡುವುದು. ಅಂತಹ ಶೋಧನಾಯಂತ್ರವು ಹಿಂದೂದೇಶದಲ್ಲಿ ಆಗಿಲ್ಲ. ಈ ಕುರಿತು ಪಂಡರಪುರದಲ್ಲಿರುವ ಶ್ರೀ ಜಿ ಬಿ ಜಮ್ನೆಯವರು ಶ್ರೀ ರ್‍ಯಾಕರ್ ಎಂಬವರ ಸಹಾಯದಿಂದ ಎರಡು ಯಂತ್ರಗಳನ್ನು ತಯಾರಿಸಿದ್ದಾರೆ.

ಈ ಯಂತ್ರಗಳು ದುಡ್ಡು ಹಾಕಿದರೆ ಸಿಗರೇಟ, ಚಾಕಲೇಟು ಮೊದಲಾದವುಗಳನ್ನು ತೆಗದುಕೊಡುವವು. ಆಯಾ ವಸ್ತುವಿನ ಕ್ರಯವೆಷ್ಟೋ ಅಷ್ಟೇ ದುಡ್ಡು ಹಾಕಬೇಕು. ಅವಕ್ಕಿಂತ ಕಡಿಮೆ ದುಡ್ಡು ಹಾಕಿದರೆ ತೆಕ್ಕೊಳ್ಳುವುದಿಲ್ಲ. ಮಾತ್ರವಲ್ಲದೆ, ಯಂತ್ರದ ಒಳಗಡೆಯಲ್ಲಿ ಸಾಮಾನು ಮುಗಿದು ಹೋದರೂ ಅದು ದುಡ್ಡು ತೆಗೆದುಕೊಳ್ಳುವುದಿಲ್ಲ.

ವರ್ತಮಾನ ಪತ್ರಿಕೆಗಳನ್ನು ಮಾರಾಟ ಮಾಡುವುದು ಮೊದಲಾದ ಕೆಲಸಗಳನ್ನು ಇದು ಮಾಡುತ್ತದೆ.

ಶ್ರೀ ಜಾಮ್ನೆಯವರು ತಮ್ಮ ಯಂತ್ರವನ್ನು ಪೇಟಂಟ್ ಮಾಡಲು ಕಾರ್ತಕ್ಕೆ ಪಡೆದಿರುವರು.

TO LET.

From 1st November, 1939 Spacious building well known as 'VARTHAKA VILAS' in Bunder of Mangalore EMINENTLY SUITED FOR Offices or Mercantile Firms Banks With a comfort-able accommodation godowns, garbling and curing beds In the centre of business quarters facing the sea WITH ALL CONVENIENCES for residental pur-poses also With motor garage On short or long lease, Inspection can be arranged

Apply to.

1 Sri A Srinivasa Pai, B A, B L, *"Hill House", Kasargod, S Kanara*

OR

Sri B Vaikunta Baliga, B A, B L, 2, *"Loretto Villa" Kodialbail Mangalore*

ಹಾಸಿಗೆಯಿಂದೇಳುವಾಗಲೇ ಈತನಿಗೆ ತಲೆನೋವು ಇರುತಿತ್ತು. ಈಗ ಪ್ರತಿ ಪ್ರಾತಃಕಾಲವೂ ಅವನು ಚುರುಕಾಗಿಯೂ, ಚೈತನ್ಯಯುಕ್ತನಾಗಿಯೂ ಇರುವನು.

ಕ್ರುಶನ್ ಲವಣವು ಅವನಿಗೆ ತುಂಬಾ ಸಹಾಯ ಕೊಡುವಂತಾಗಿದೆ

ಈ ಮನುಷ್ಯನು ಪ್ರತಿ ಪ್ರಾತಃಕಾಲ ತಲೆನೋವಿನಿಂದಲೇ ಏಳುತ್ತಿದ್ದನು. ಇದರಿಂದವನು ಖಿನ್ನವದನನಾಗಿದ್ದು, ನಿರುತ್ಸಾಹಿಯಾಗಿರುತ್ತಿದ್ದನು. ಆ ಮೇಲೆ ಅವನು ಕ್ರುಶನ್ ಲವಣವನ್ನು ಉಪಯೋಗಿಸಿದನು. ಪರಿಣಾಮವಾಗಿ ಜೀವನವು ಅವನಿಗೆ ಹರ್ಷಮಯವಾಯಿತು. ಅವನ ಪತ್ರವನ್ನು ಈ ಕೆಳಗೆ ಓದಿರಿ.

'ಬೆಳಿಗ್ಗೆ ಹಾಸಿಗೆಯಿಂದ ಏಳುತ್ತಲೇ ಅಸಹ್ಯ ತಲೆನೋವು ನನ್ನನ್ನು ಅಂಟಿಕೊಂಡೇ ಇರುತ್ತಿತ್ತು. ಒಂದು ವರ್ಷದ ಕೆಳಗಿನಿಂದ ನಾನು ಕ್ರುಶನ್ ಲವಣವನ್ನು ಕ್ರಮವಾಗಿ ತೆಗೆದುಕೊಳ್ಳುವ ಅಭ್ಯಾಸ ಮಾಡಿಕೊಂಡೆ. ಈಗ ನಾನು ಏಳುವಾಗ ಚುರುಕಾಗಿಯೂ ಚೈತನ್ಯಭರಿತನಾಗಿಯೂ ಇರುವೆನು. ಮತ್ತು ನನ್ನ ದಿನನಿತ್ಯದ ಕೆಲಸಗಳನ್ನು ಸರಿಯಾಗಿ ಸುಲಭದಿಂದ ಮಾಡಬಲ್ಲೆನು. ಕ್ರುಶನ್ ಲವಣವು ನನಗೆ ತುಂಬಾ ಸಹಕಾರಿಯಾಗಿರುತ್ತದೆ. ಅದನ್ನು ತೆಗೆದುಕೊಂಡ ನಂತರ ನಾನು ತುಂಬಾ ಆರೋಗ್ಯವಂತನಾಗಿದ್ದೇನೆ. ಆ ಗ್ಲಾನಿಯುಕ್ತ ತಲೆನೋವುಗಳನ್ನು ಹೋಗಲಾಡಿಸಿ ಚೈತನ್ಯಭರಿತ ನವಜೀವನವನ್ನು ಪಡೆಯಲೆಳಸುವವರಿಗೆ ಕ್ರುಶನ್ ಲವಣವನ್ನು ನಾನು ತುಂಬಾ ಶಿಫಾರಸು ಮಾಡಬಯಸುತ್ತೇನೆ. ನನ್ನ ಜೀವನಾಂತ್ಯದ ವರೆಗೂ ಕ್ರುಶನ್ ಲವಣದ ಪ್ರಯೋಗವನ್ನು ಮುಂದುವರಿಸಲು ನಿರ್ಧರಿಸಿದ್ದೇನೆ.'

ಹೊಟ್ಟೆಯೊಳಗಿನ ಅವ್ಯವಸ್ಥೆಯೇ ತಲೆನೋವಿನ ಕಾರಣವಾಗಿರುತ್ತದೆ. ರಕ್ತವನ್ನು ವಿಷಮಯವಾಗಿ ಮಾಡುವ ಆಹಾರ ಶೇಷಗಳು ಹೊಟ್ಟೆಯಲ್ಲಿ ಕೊಳೆಯುತ್ತಿರುತ್ತವೆ. ಈ ವಿಷವನ್ನು ತೆಗೆದು ಹಾಕಿರಿ—ಅವುಗಳು ಇನ್ನುಮುಂದೆ ಒಟ್ಟುಗೂಡದಂತೆ ನೋಡಿರಿ. ಅಂದರೆ ನಿಮಗೆ ಸುಖವಾಗಬಹುದು. ಹೀಗೆಯೇ ಕ್ರುಶನ್ ಲವಣವು ಹೊಟ್ಟೆಯೊಳಗೆ ಕೆಲಸಮಾಡಿ



ಕ್ರಮವಾಗಿ ಗುಣವನ್ನು ಕೊಡುತ್ತದೆ. ಪ್ರಕೃತೀಯವಾಗಿ ಹೊಟ್ಟೆಯೊಳಗಿನ ಕಲ್ಮಶಗಳು ಕೊಳೆಯಲ್ಪಟ್ಟ ವಿಷಧಾತುಗಳು ಸಂಪೂರ್ಣವಾಗಿ ಹೊರಗೆ ಹಾಕಲ್ಪಡುವುವು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಸೀದಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆಮಾಡಲಾಗಿದೆ

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ. (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನು ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ–ಮುಡುಗೆರೆ, ಚಿಕ್ಕಮಂಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿಗೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಅಂಗುಬೆಗಾಗಿ ಶ್ರಿಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ— ಹಾಲಾಡಿ, ಶಂಕರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ; ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗ್ರಹಗಳಿವೆ.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

(Regd)

ಅಮ್ರುತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಿಂಟ್ಯಾನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ, ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ, ಆಯುರ್ವೇದಿಕ್ ಸಮಾಜ, ಪೆರಿಡೇಪಿ. P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ— ಅವ್ವಲ್ ತರದ ಗುಡ್ಡು ಮುಡಿಗೆ	1—9—0	1—10—0
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	4—13—0	4—14—0
,, ದುಯಂ ,, ,,	4—10—0	4—11—
,, ಅವ್ವಲ್ ಸುಗ್ಗಿ ,,	4—12—0	4—12—
,, ದುಯಂ ,, ,,	4—8—0	4—9—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
,, ಸಿಪ್ಪೆ ಇದ್ದದು ,,	37—8—0	47—0—0
ಕೊಬ್ಬರಿ ಆಫೀಸು ಖಂಡಿಗೆ	57—8—0	—
,, ದಿಲ್‌ಪಸಂದ ,,	— —	—
ತೆಂಗಿನ ಎಣ್ಣೆ ಮಣಕ್ಕೆ	8—15—0	8—15—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	2—8—0	— —
ಗೇರುಬೀಜ ಮುಡಿಗೆ	3—14—0	4—8—0
ಕಟ್ಟಿನ ಬೆಲ್ಲ ಖಂಡಿಗೆ	32—8—0	47—8—
ಒಳ್ಳೇಮೆಣಸು ಹಂಡ್ರೆಡ್ವೈಟಿಗೆ	15—0—0	16—8—0

Date 27—10—1939

Regd. No. M 3406

ಸ್ವದೇಶಾಭಿಮಾನಿ

ವಾರ್ಷಿಕ ಚಂದಾ ರೂ 2—0—0

ಅಂಚೆ ವೆಚ್ಚ ಸಹಿತ ರೂ. 2—13—0

ಸಂಪುಟ 33] ತಾರೀಖು 27—10—1939 [ಸಂಚಿಕೆ 42

The Bombay Life Assurance Company, Ltd.,
(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?
If you die-to your family and dependants?

REMEMBER THAT

If you live, Life Insurance takes the place of your professional income during your old age

If you die, it provides your family with enough income for their maintenance and the education of your children.

BOMBAY LIFE" offers all that is best in LIFE ASSURANCE

1938 RECORD

Completed Business	Rs 1 44 91,000
Life Assurance Fund	Rs 1 17 69 748
Total Assets	Rs 1 31,28 998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut — Car Street, Mangalore — [illegible] Bangalore City — Post Box No [illegible] Mount Road Madras

[illegible] Charni Road, Girgaum Bombay No 4 — Central Station Road, Trivandrum

MAKE LIFE WORTH-LIVING!

Indigestion — Insomnia — Dry Cough — Nervousness — Weak Heart &c ,

these make you wiery of Life!

GONSULT US AND BUY YOUR LIFE'S HAPPINESS!

Oils – that cool the brain and induce sleep

Lehas – that build-up your wasted system

Asavas – that regenerate your jaded nerves

All Genuine Ayurvedic Preparations -from this huge Ayurvedic Concern of a Century Standing –

Bhuvanendra Products, Ltd.,

Katapady, S. Kanara.

(BRANCH—KUMTA, N. KANARA)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ – ನಿದ್ರಾವಿಹೀನತೆ – ಒಣ ಕೆಮ್ಮು –
ನರಗಳ ಅಬಲತೆ – ದುರ್ಬಲ ಹೃತ್ಕೋಶ – ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆಕೊಡುವ — ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ ಆಸವಗಳು

ಒಂದು ಶತಮಾನದ ಅನುಭವದ ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ,—ದ ಕನ್ನಡ

ಸ್ಥಳೀಯ ಸ್ಟೋಕಿಸ್ಟರು. (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು ಪಾಂಡರಂಗ ನ್ಯಾಕ್, ರಥಬೀದಿ, ಮಂಗಳೂರು

KANNADA ILLUSTRATED WEEKLY

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

ಸಂಪುಟ ೩೩ | ತಾರೀಕು ೩—೧೧—೧೯೩೯ (10—11—1939) | ಸಂಚಿಕೆ ೪೪

AFRICA, THE LAND OF THE FUTURE

The colonial lands of Africa, which constitute an inexhaustible source of wealth for their mother countries, have passed through an extremely devastating period which has affected the sons of nearly all European peoples. Very great difficulties were met with during the exploration of the Niger Territory and the expeditions made with the object of reaching the legendary city of Timbuctoo in the Sudan.

The explorers, who generally attached themselves to caravans not only suffered from hunger and thirst for months on end and fought with hostile tribes of Touaregs and negroes, but were also exposed to tropical diseases such as sleeping sickness and malaria.

The accounts of the journeys of different explorers agreed perfectly on this point: to open up Central Africa to civilization, maintain a satisfactory sanitary condition there in future and bring the savage tribes into submission, all this would only be possible if Europeans could remain there for long periods in great numbers, and pacify the country. And this would be impossible without having an efficient remedy handy against tropical malaria.

'We can state unhesitatingly', declared a contemporary French explorer, 'that our colonies were not conquered by force of arms, but by quinine. It is quinine that has enabled French troops to remain and fight in Africa. Quinine is the sole remedy for malaria, a remedy that can be entrusted even to ignorant folk without any special precautions. Quinine is a remedy which, judiciously applied, is not only capable of ensuring the good health of entire armies, but can protect millions of people from malaria'.

All that is required is a daily dose of 6 grains of Quinine during the fever seasons; persons suffering from malaria only need to take 15 to 20 grains of quinine every day for from 5 to 7 days to deal with the first attack, any future relapses being dealt with in the same way. Such are the latest recommendations of the Malaria Commission of the League of Nations.

NOTICE

In the Court of the District Judge of South Kanara

Original Petition No. 106 of 1939.

In the matter of

1. Janardhana Kini } MINORS
2. Janhavi Bai }

Between:

Girija alias Laxmi Bai—Petitioner

and

1. U. Narasimha Kini, 2. U. Subraya Kini, 3. U. Vasudeva Kini, 4. U. Ananda Kini, Sons of Ullal Janardhana Kini, No. 1 resides in BOMBAY, Nos. 2 and 4 reside in MANGALORE TOWN and No. 3 resides in UDIPI KASBA, Udipi Taluk. } Respondents

To

The Respondents,

AND TO ALL WHOM IT MAY CONCERN

Take notice that on the 30th day of October 1939 the above-named petitioner, Girija alias Laxmi Bai, widow of Ullal Narayana Janardhana Kini, residing in Ullal Kasba village Mangalore Taluk, has presented an application to this court praying that she may be declared to be the guardian of the person and that she may also be declared or appointed to be the guardian of the property of the above-named minors, and for other reliefs, and that the 13th day of December 1939 has been fixed for the hearing of the application: and that if you desire to oppose the said application, or to apply for the appointment of any person other than the above-named petitioner as the guardian of the person and property of the said minors, you must appear on the said 13th day of December 1939 in this court in person or by a duly authorised pleader and be prepared to adduce any documentary or oral evidence upon which you wish to rely, and that, in default of your appearance, the said application may be heard and decided in your absence. Any relation or friend of the said minors may appear and be heard upon the said application, and may inspect and obtain a copy of the petition; and it shall not be necessary to present any petition for this purpose.

Mangalore, 3—11—1939 | H. VASUDEVA KAMATH, *Vakil for Petitioner.*

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ರಾತ್ರೆ ಸುಖವಾದ ನಿದ್ದೆ ಬೇಕಾದರೆ ಒಂದು ಕಪ್ಪು 'ಓವಲ್ ಟಿನ್' ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್ ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯು ಉಂಟಾಗುತ್ತದೆಂದು ಖಂಡಿತ ಹೇಳಬಹುದು.

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ಬಲಿತುವಾಗಿದ ಬಾರ್ಲಿ, ದನದ ಹಾಲು ಮತ್ತು ಇತರ ಅಮೂಲ್ಯವಾದ ವಿಟಮಿನು ಮತ್ತು ಫೊಸ್ಫೆಟೈಡ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್ ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ದೆಯೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ. ಇತರ ನಕಲಿ ಪಾನೀಯಗಳನ್ನು ಬಿಡಿರಿ.

'ಓವಲ್ ಟಿನ್'

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆಡ್,

149 ಬ್ರೋಡ್‌ವೇ, ಮದ್ರಾಸು

ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್ ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ್ಯ ಬೆಲೆಯ 'ಓವಲ್ ಟಿನ್' ಸೇರಿದುವುದು. 4 ಮತ್ತು 8 ಔನ್ಸುಗಳ ಪೇಕೆಟುಗಳಲ್ಲಿ ಮತ್ತು ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV/66/39

ಒಂದು ಸಣ್ಣ ಕತೆ:

ಮಿಲನ!

[ಮನುಷ್ಯನಿಗೆ ಆ ಸಾಹಿತ್ಯ ಸಾಮಗ್ರಿ, ಆ ಆಟವಿನೋದ, ಊಟಉಪಚಾರಗಳು ಯಾವುದೂ ಬೇಕಾಗಿರಲಿಲ್ಲ. ಆತನಿಗೆ ಅವನಾಕೆಯೂ ಮರಳಿ ಬೇಕಾಗಿತ್ತು . . . . ಆತನ ಸಹಚಾರಿಣಿಯು ಮರಳಿ ಬಂದ ದಿನ, ಮನುಷ್ಯನು ಅವಳ ಕೈಕಾಲುಗಳಿಗೆ ಬಿಗಿದಿದ್ದ ಕಬ್ಬಿಣ ಸಂಕಲೆಗಳನ್ನು ಕಡಿದೊಗೆದು, ಸ್ವತಂತ್ರಳನ್ನಾಗಿ ಮಾಡಿ, ಮೊದಲಿನ ಸಂಕಲೆಗಳ ಬದಲು ಚಿನ್ನದ ಆಭರಣಗಳನ್ನು ತೊಡಿಸಿ ಶೃಂಗರಿಸಿದ ಆಕೆಯ ಕೊರಳಿಗೆ ಮುತ್ತಿನ ಹಾರವನ್ನು ಹಾಕಿ, ಮತ್ತೆ ಅವಳನ್ನು ತನ್ನ ಬಾಹುಪಾಶದಿಂದ ಬಿಗಿದು ಮುದ್ದಿಟ್ಟು 'ಪ್ರಿಯೇ ನೀನು ಇನ್ನು ಮೇಲೆ ದಾಸಿಯಲ್ಲ ಅಪೂರ್ಣವನ್ನು ಪೂರ್ಣಮಾಡುವ, ಶೂನ್ಯವನ್ನು ಸಮೃದ್ಧಮಾಡುವ ಜೀವನ ಸಹಭಾಗಿನೀ ಸಖಿಯಾಗಿರುವಿ' ಎಂದು ಅವಳ ಕಿವಿಯಲ್ಲಿ ಮಧುರವಾದ ಸ್ವರದಲ್ಲಿ ಹೇಳಿದ]

ಮನುಷ್ಯನು ಮಹಾ ಮೂರ್ಖನಾಗಿದ್ದ ಅದೊಂದು ಕಾಲವಿತ್ತು. ಆಗ ಅವನು ತನ್ನ ಸಹಚಾರಿಣಿಯನ್ನು ಕ್ರಯಕ್ಕೆ ಕೊಂಡುಕೊಂಡ ದಾಸಿಯಂತೆ ನೋಡಿಕೊಳ್ಳುತ್ತಿದ್ದನು. ಅವಳ ಕೈಕಾಲುಗಳನ್ನು ಕಬ್ಬಿಣದ ಸಂಕಲೆಗಳಿಂದ ಕಟ್ಟಿಹಾಕಿದ್ದನು. ಅವಳು ತನ್ನ ಮನೆಕೆಲಸಗಳನ್ನು ಮಾಡಬಹುದಾಗಿತ್ತಷ್ಟೇ ಹೊರತು ಮನೆ ಬಿಟ್ಟು ಹೊರಗೆ ಕಾಲಿಡುವ, ಅಥವಾ ಪಲಾಯನ ಮಾಡುವ ಅನುಕೂಲತೆ ಸ್ವಾತಂತ್ರ್ಯಗಳು ಅವಳಿಗಿರಲಿಲ್ಲ. ನಿಜಕ್ಕೂ ಅವಳು ಕ್ರಯಕ್ಕೆ ಕೊಂಡುಕೊಂಡ ದಾಸಿಯಂತೆ ಕಾಲಯಾಪನೆ ಮಾಡಬೇಕಾಗಿತ್ತು.

ಅವಳ ಹೃದಯದ ದುಃಖವನ್ನು ಕೇಳುವವರು ಯಾರೂ ಇರಲಿಲ್ಲ. ಅವಳೊಬ್ಬಳೇ ಮನುಷ್ಯನ ಮನೆಯನ್ನು ಸಾರಿಸಿ, ಗುಡಿಸಿ, ಥಳಥಳ ಹೊಳೆಯುವಂತೆ ಚೊಕ್ಕವಾಗಿಡಬೇಕಾಗಿತ್ತು. ಪ್ರತಿ ದಿನವೂ ಬೆಳಗ್ಗೆ ಮತ್ತು ಸಾಯಂಕಾಲ, ಅಂಗಳದಲ್ಲಿನ ತುಳಸೀಕಟ್ಟೆಯ ಮುಂದೆ ನಿಂತು, ತುಪದ ದೀಪವನ್ನು ಉರಿಸಿ, ಕುಂಕುಮವನ್ನು ಹಚ್ಚಿ, ಮನುಷ್ಯನ ಸರ್ವ ಅನುಂಗಲಗಳು ದೂರವಾಗುವಂತೆ ಅವಳು ಭಗವತಿಯನ್ನು ಪ್ರಾರ್ಥಿಸಬೇಕಾಗಿತ್ತು. ಮನುಷ್ಯನ ಹೊಟ್ಟೆ ಹಸಿವೆಯು ದೂರವಾಗಲಿಕ್ಕೆ ಅಡಿಗೆಮಾಡುವವಳು ಅವಳೇ! ತೃಷೆಯು ಆರಲಿಕ್ಕೆ ಬಾವಿಕಟ್ಟೆಗೆ ಹೋಗಿ [illegible] ತರುವವಳು ಅವಳೇ! ದೇವಪೂಜೆಗೆ ಬೇಕಾದ [illegible] ಪುಷ್ಪಗಳನ್ನು ಸಂಗ್ರಹಿಸುವವಳು ಅವಳೇ! [illegible] ತನ್ನ [illegible] [illegible] ಮನುಷ್ಯನು ಅವಳೊಂದಿಗೆ [illegible] [illegible] ಸ್ವರೂಪನಾಗಿರುವನೆ [illegible] ಹಾಗೆ ವರ್ತಿಸುತ್ತಿರುವಳಾಗಿ [illegible] ಎಣಿಸುತ್ತಿದ್ದನು.

ಮನುಷ್ಯನ ಈ ದುರ್ಭಾವನೆಯನ್ನು ಕಂಡು ಸೃಷ್ಟಿಕರ್ತನ ಮನಸ್ಸಿನೊಳಗೇ ನಕ್ಕನು. ಒಂದು ತಮಾಷೆ ಮಾಡಿ ನೋಡೋಣವೆಂದು ಅವನು ಆಕೆಯನ್ನು ಮನುಷ್ಯನಿಂದ ಬೇರೆ ಮಾಡಿ ಎಲ್ಲಿಯೋ ಒಂದು ಅಜ್ಞಾತ ಪ್ರದೇಶದಲ್ಲಿಟ್ಟ. ಮನುಷ್ಯನು ಹೊರಗೆ ತಿರುಗಾಡಿ ಮನೆಯನ್ನು ಸೇರುವಾಗ ಅಲ್ಲಿ ಮೊದಲಿನಂತೆ ಅವನಿಗಾಗಿ ಅನ್ನ ನೀರು, ಹಣ್ಣುಕಾಯಿ, ಪತ್ರ ಪುಷ್ಪಗಳನ್ನು ತಂದಿಡುವವರು ಯಾರೂ ಇಲ್ಲದಿರುವುದನ್ನು ಕಂಡ. ಅದನ್ನು ಕಂಡಾಕ್ಷಣ ಮನುಷ್ಯನು ಕ್ರೋಧಾಗ್ನಿಯಿಂದ ಸುಟ್ಟು ಸುಣ್ಣವಾದ ಆಕೆಗಾಗಿ ಅವನು ಬೇಕಾದಷ್ಟು ಕೂಗಿದ, ಅರಚಿದ. ಆದರೆ ಏನೂ ಫಲವಾಗಲಿಲ್ಲ ಅವನ ಗುಲ್ಲು ಗಲಭೆಯನ್ನು ಕೇಳಲಿಕ್ಕೆ ಯಾರೂ ಬರಲಿಲ್ಲ ಆಕಾಶ ಪಾತಾಳ ಒಂದುಮಾಡಿ ಅವನು ಅವಳನ್ನು ಹುಡುಕತೊಡಗಿದ.

ಅದೇ ಸಮಯ, ಸೃಷ್ಟಿಕರ್ತನು ಬಂದು—'ಅಪ್ಪಾ! ಯಾಕೆ ಕೂಗುತ್ತೀ? ಏನು ಸಮಾಚಾರ?' ಎಂದು ಏನೂ ತಿಳಿಯದವನಂತೆ ಆತನನ್ನು ಪ್ರಶ್ನಿಸಲಾರಂಭಿಸಿದನು.

'ಏನು ಸಮಾಚಾರ?' ಮನುಷ್ಯನು ಸಿಟ್ಟಿನಿಂದ ಕೇಳಿದ 'ಏನು ಸಮಾಚಾರ? ನಿನಗೆ ತಿಳಿದಿಲ್ಲವೆ? ಅವಳು ಎಲ್ಲಿಗೆಹೋದಳು? ಇಲ್ಲಿ ಉಣ್ಣಲಿಕ್ಕೆ ಅನ್ನವಿಲ್ಲ, ಕುಡಿಯಲಿಕ್ಕೆ ನೀರಿಲ್ಲ, ಪೂಜೆಗೆ ಸಾಹಿತ್ಯ ಸಾಮಗ್ರಿಗಳಿಲ್ಲ. ಅವಳೊಬ್ಬಳೇ ದಿನ ನಿತ್ಯ ಈ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಳು ಅವಳು ಈಗ ಎಲ್ಲಿಗೆಹೋದಳು?

'ಅಷ್ಟೇ ತಾನೆ?'

'ಹೌದು, ಅಷ್ಟೆ'

'ಸರಿ, ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರು, ಪೂಜೆಗೆ ಸಾಹಿತ್ಯ ಸಾಮಗ್ರಿಗಳು—ಇವೆಲ್ಲ ನಿನಗೆ ಸಮಯ ಸಮಯಕ್ಕೆ ದೊರೆಯುತ್ತಲಿರುವವು [illegible] ದಲ್ಲಿ [illegible] ಬರಲಾರದು.'

'ಬ್ರಾಂಡೀ ಬಾಟ್ಲೆ'ಯಲ್ಲಿ ಸಾಳ್ವಿ ಮತ್ತು ಆಶಾಲತ

ಸೃಷ್ಟಿಕರ್ತನು ಅಲ್ಲಿಂದ ಅದೃಶ್ಯನಾದನು. ಆತನ ಮಂತ್ರಬಲದಿಂದ ಮನುಷ್ಯನಿಗೆ ಅನ್ನ ನೀರು, ಸಾಹಿತ್ಯ ಸಾಮಗ್ರಿ ಎಲ್ಲವುಗಳು ಸಮಯಕ್ಕೆ ಸರಿಯಾಗಿ ದೊರೆಯತೊಡಗಿದುವು. ಆದರೆ ಆತನ ಅವಳು ಮಾತ್ರ ಮರಳಿ ಬರಲಿಲ್ಲ.

ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರು ಪೂಜೆಗೆ ಹಣ್ಣು ಹಂಪಲು—ಇವೆಲ್ಲ ಮನುಷ್ಯನಿಗೆ ಬೇಕುಬೇಕಾದಷ್ಟು ದೊರೆಯುತ್ತಿದ್ದುವು. ಆದರೆ ಆತನ ಮನೆಯಲ್ಲಿ ಮೊದಲಾಗುತ್ತಿದ್ದ ಆ ಮಧುಮಧುರವಾದ ಸಂಗೀತಾಲಾಪನ, ಅನ್ನಪಾನ–ಪೂಜಾದಿಗಳ ನಡುವಿನ ಸಮಯವನ್ನು ಸಂತೋಷ ತೃಪ್ತಿಗಳಿಂದ ಕಳೆಯುತ್ತಿದ್ದ ಆ ಮಧುರಸವು ಮಾತ್ರ ಅಲ್ಲಿರಲಿಲ್ಲ. ಅಲ್ಲಿದ್ದುದು ಕೇವಲ ಅನ್ನಸಾಮಗ್ರಿ, ಫಲಪುಷ್ಪಗಳು. ಮನೆಕೆಲಸಗಳೆಲ್ಲ ಹೃದಯಹೀನ ಯಂತ್ರದ ಚಲನೆಯಂತೆ ನಡೆಯುತ್ತಿದ್ದವು ಮೂರ್ತಿಮಂತ ನೈಷ್ಫಲ್ಯವೇ ಅಲ್ಲಿದ್ದ ಹಾಗೆ ಮನುಷ್ಯನಿಗೆ ಭಾಸವಾಗುತ್ತಿತ್ತು.

ಹೊರಗಿನ ಕೆಲಸ ಕಾರ್ಯಗಳನ್ನು ಮುಗಿಸಿ ಮನುಷ್ಯನು ಆ ದಿನ ಬಹಳ ದಣಿದು ಮನೆಯ ಒಳಗೆ ಬಂದ ಅವನ ಆಗತ ಸ್ವಾಗತಕ್ಕಾಗಿ ಎಲ್ಲ ಸಾಹಿತ್ಯ ಸಾಮಗ್ರಿಗಳು ಅಲ್ಲಿ ಉಪಸ್ಥಿತವಾಗಿದ್ದುವು. ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರು, ಪೂಜೆಗೆ ಹಣ್ಣುಹಂಪಲು—ಇವೆಲ್ಲವುಗಳು ಅವನ ಬರವನ್ನು ಕಾದಿದ್ದುವು. ಆದರೂ ಮನುಷ್ಯನ ಅಂಗಾಂಗಗಳು ಉರಿಯತೊಡಗಿದುವು. ಯಾರಿಗೆ ಬೇಕಾಗಿದ್ದುವು ಆ ಸಾಹಿತ್ಯ ಸಾಮಗ್ರಿಗಳು? ಯಾರಿಗೆ ಬೇಕಾಗಿದ್ದುವು ಆ ಹೃದಯಹೀನ ಆಟವಿನೋದಗಳು? ಒಂದೇ ತುಳಿತದಿಂದ ಮನುಷ್ಯನು ಎಲ್ಲ ಅಡಿಗೆಯನ್ನು ಚೆಲ್ಲಿಬಿಟ್ಟ, ನೀರಿನ ಪಾತ್ರೆಗಳನ್ನು ಕೆಡವಿಹಾಕಿದ, ಹಣ್ಣು ಹೂವುಗಳ ರಾಶಿಯನ್ನು ಗಾಳಿಗೆ ಹಾರಿಸಿಕೊಟ್ಟ

ಅದೇ ಸಮಯ, ಸೃಷ್ಟಿಕರ್ತನು ಬಂದು—'ಏನು ಸಮಾಚಾರ? ಈಗೇನು ಸಮಾಚಾರ?' ಎಂದು ಮನುಷ್ಯನನ್ನು ಕೇಳಿದ. ಮನುಷ್ಯನ ಸಿಟ್ಟು ನೆತ್ತಿಗೇರಿತು. ಏನು ಸಮಾಚಾರ? ಯಾರಿಗೆ ಬೇಕು, ನಿನ್ನ ಈ ಎಲ್ಲ ಸಾಹಿತ್ಯ ಸಾಮಗ್ರಿಗಳು? ಯಾರಿಗೆ ಬೇಕು ನಿನ್ನ ಈ ಆಟವಿನೋದ? ಹೋಗು, ಹೋಗು; ಅವೆಲ್ಲವನ್ನು ತೆಗೆದುಕೊಂಡು ಹೋಗು. ಅವು ಯಾವುವೂ ನನಗೆ ಬೇಡ! ಕೇವಲ ನನ್ನಾಕೆಯನ್ನು ನನಗೆ ಮರಳಿ ಕೊಡು' ಎಂದವನು ಗರ್ಜಿಸಿದ.

ಮನುಷ್ಯನ ಮಾತುಗಳನ್ನು ಕೇಳಿ ಸೃಷ್ಟಿಕರ್ತಾರನು ನಸುನಕ್ಕನು. ಅವನು ಆತನ ಸಹಚಾರಿಣಿಯನ್ನು ಮರಳಿಸಿದ.

ಅದೇ ದಿನ ಮನುಷ್ಯನು ಅವಳ ಕೈಕಾಲುಗಳಿಗಿದ್ದ ಬಂಧನಗಳನ್ನು ಮುರಿದು ಅವಳನ್ನು ಸ್ವತಂತ್ರಳನ್ನಾಗಿ ಮಾಡಿದ. ಕಬ್ಬಿಣದ ಸಂಕಲೆಗಳ ಬದಲಿಗೆ, ಅವಳ ಕೈಕಾಲುಗಳಿಗೆ ಚಿನ್ನದ ಬಳೆಗಳನ್ನು ತೊಡಿಸಿದ; ಕೊರಳಿಗೆ ಮುತ್ತಿನ ಹಾರವನ್ನು ಹಾಕಿ ಮತ್ತೆ ಅವಳನ್ನು ತನ್ನ ಬಾಹುಪಾಶದಿಂದ ಬಿಗಿದಪ್ಪಿ ಮುದ್ದಿಟ್ಟು 'ಪ್ರಿಯೆ, ನೀನು ಕ್ರಯಕ್ಕೆ ಕೊಂಡುಕೊಂಡ ದಾಸಿ ಅಲ್ಲ, ಅಪೂರ್ಣವನ್ನು ಪೂರ್ಣಮಾಡುವ, ಶೂನ್ಯವನ್ನು ಸಮೃದ್ಧಮಾಡುವ ಜೀವನ ಸಹಭಾಗಿನಿಯಾದ ಸಖಿಯಾಗಿರುವಿ!' ಎಂದು ಅವಳ ಕಿವಿಯಲ್ಲಿ ಮೃದುಮಧುರವಾದ ಸ್ವರದಲ್ಲಿ ಹೇಳಿದ.

ಆ ದಿನ ಅವನು ಯಾವ ಹೂವುಗಳನ್ನು ತೆಗೆದುಕೊಂಡು ದೇವಪೂಜೆಗೆ ಕೂತುಕೊಂಡಿದ್ದನೋ, ಅವುಗಳ ಸುಗಂಧದಿಂದ ದೇವಲೋಕದ ದೇವತೆಗಳು ಜಾಗ್ರತರಾಗಿ ಪ್ರಸನ್ನರಾದರು.

'ವಿಶಾಲ ಭಾರತ'

ನೋಟೀಸು

ಪುತ್ತೂರು ಡಿ. ಮು ಕೋರ್ಟಿನಲ್ಲಿ

R E P. No. 771/39
R E A No. 521/39

ಅರ್ಜಿದಾರಳು—ಅಪ್ಪು ಹೆಂಗ್ಸು —(ಪ್ರತಿವಾದಿಳು)

ಎದುರು—ಮುತ್ತಪ್ಪರೈ ಕೂಡ —ಪ್ರತಿವಾದಿರು

11 [illegible] 1ನೇ [illegible] ಚನ್ನಮ್ಮನ
12 [illegible] ಮಕ್ಕಳು ಕಾಸರಗೋಡು
ಹೆಂಗ್ಸು ತಾಲೂಕು ಅದೂರು ಗ್ರಾ
13 ಮುತ್ತಮ್ಮ ಹೆಂಗ್ಸು | ಮದಲ್ಲಿರುವವರು

ಸದ್ರಿ ಮೂರು ಜನರಿಗೆ ತಿಳಿಯಪಡಿಸುವುದೇನೆಂದರೆ—

ಸದ್ರಿ ಅಮ್ಮಣ್ಣಿ ವ್ಯವಹಾರದಲ್ಲಿ [illegible] [illegible] ಪ್ರತಿವಾದಿ ಮುತ್ತಪ್ಪ ರೈಗಳು ಮೃತಪಟ್ಟದ್ದರಿಂದ ವಾದಿ–ಪ್ರತಿವಾದಿರ ಕುಟುಂಬದಲ್ಲಿ ಆತ್ಮಂತ [illegible] ಯಜಮಾನ್ತಿಯೂ ಆದ [illegible] ಎದ್ರು ಅಜ್ಜಕ್ಕ ಹೆಗ್ಗಡಸನ್ನು ಕುಟುಂಬದ ಎಜಮಾನ್ತಿ [illegible] ಅದಲ್ತಿದಾರಿಕೆ ಎಂತ ಕಾಣ್ಸಿ ಅಮ್ಮಣ್ಣಿ ವ್ಯವಹಾರಗಳ ಮುಂದರಿಸಬೇಕಾಗಿ ವಗೈರೆ ಸದ್ರಿ ಅರ್ಜಿದಾರಳು ಕೊಟ್ಟ ಮೇಲ್ಕಂಡ ಅರ್ಜಿ ವ್ಯವಹಾರಣೆಯೂ ತಪ್ಪ ಬಗ್ಗೆ ತಾರೀಕು [illegible] ಕ್ಕೆ ಇಟ್ಟಿರುವದ್ರಿಂದ ಈ ಕುರಿತು ನಿಮಗೇನಾದ್ರೂ ಆಕ್ಷೇಪ ಇರುವವಾದ್ರೆ ಸದ್ರಿ ತ್ಯಾದಿ ದಿವಸ ಕೋರ್ಟಿನ ಮುಂದೆ ಬೆಳಿಗ್ಗೆ ೧೧ ಘಂಟೆಗೆ ಹಾಜರು ಆಗಿ ನಿಮ್ಮ ಆಕ್ಷೇಪಗಳು ಜ್ಯಾಹೀರು ಮಾಡಬೇಕಾಗಿರುತ್ತದೆ. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾ ಮಾಡಿ ಸದ್ರಿ ವ್ಯವಹಾರಣೆಯು ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಕೋರ್ಟಿನ ಹುಕ್ಕುಂ ಮೇರೆಗೆ ಈ ಮೂಲಕ ತಿಳಿಸಲ್ಪಟ್ಟಿರುತ್ತದೆ.

ಪುತ್ತೂರು [illegible] H. Ganapathi Rao.
ಅರ್ಜಿದಾರಳ ಕಡೆ ವಕೀಲ್

AFRICA, THE LAND OF THE FUTURE.

The colonial lands of Africa, which constitute an inexhaustible source of wealth for their mother countries, have passed through an extremely devastating period which has affected the sons of nearly all European peoples. Very great difficulties were met with during the exploration of the Niger Territory and the expeditions made with the object of reaching the legendary city of Timbuctoo in the Sudan.

The explorers, who generally attached themselves to caravans not only suffered from hunger and thirst for months on end and fought with hostile tribes of Touaregs and negroes, but were also exposed to tropical diseases such as sleeping sickness and malaria.

The accounts of the journeys of different explorers agreed perfectly on this point; to open up Central Africa to civilization, maintain a satisfactory sanitary condition there in future and bring the savage tribes into submission, all this would only be possible if Europeans could remain there for long periods in great numbers, and pacify the country. And this would be impossible without having an efficient remedy handy against tropical malaria.

'We can state unhesitatingly', declared a contemporary French explorer, 'that our colonies were not conquered by force of arms, but by quinine. It is quinine that has enabled French troops to remain and fight in Africa. Quinine is the sole remedy for malaria, a remedy that can be entrusted even to ignorant folk without any special precautions. Quinine is a remedy which, judiciously applied, is not only capable of ensuring the good health of entire armies, but can protect millions of people from malaria'.

All that is required is a daily dose of 6 grains of Quinine during the fever seasons; persons suffering from malaria only need to take 15 to 20 grains of quinine every day for from 5 to 7 days to deal with the first attack, any future relapses being dealt with in the same way. Such are the latest recommendations of the Malaria Commission of the League of Nations.

NOTICE

In the Court of the District Judge of South Kanara

Original Petition No. 105 of 1939

In the matter of:

1. Janardhana Kini } MINORS
2. Janhavi Bai

Between:

Girija alias Laxmi Bai—Petitioner

and

1 U Narasimha Kini, 2 U Subraya Kini, 3 U Vasudeva Kini, 4 U Ananda Kini Sons of Ullal Janardhana Kini, No. 1 resides in BOMBAY Nos 2 and 4 reside in MANGALORE TOWN and No 3 resides in UDIPI KASBA, Udipi Taluk — Respondents

To

The Respondents

AND TO ALL WHOM IT MAY CONCERN

Take notice that on the 30th day of October 1939 the above-named petitioner, Girija alias Laxmi Bai widow of Ullal Narayana Janardhana Kini, residing in Ullal Kasba village Mangalore Taluk, has presented an application to this court praying that she may be declared to be the guardian of the person and that she may also be declared or appointed to be the guardian of the property of the above-named minors, and for other reliefs, and that the 13th day of December 1939 has been fixed for the hearing of the application and that if you desire to oppose the said application, or to apply for the appointment of any person other than the above named petitioner as the guardian of the person and property of the said minors you must appear on the said 13th day of December 1939 in this court in person or by a duly authorised pleader and be prepared to adduce any documentary or oral evidence upon which you wish to rely and that in default of your appearance the said application may be heard and decided in your absence. Any relation or friend of the said minors may appear and be heard upon the said application and may inspect and obtain a copy of the petition and it shall not be necessary to present any petition for this purpose

Mangalore 3—11—1939 | H VASUDEVA KAMATH, *Vakil for Petitioner*

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ಕಂಡುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ರಾತ್ರೆ ಸುಖವಾದ ನಿದ್ದೆ ಬೀಳಬೇಕಾದರೆ ಒಂದು ಕಪ್ಪು 'ಓವಲ್‌ಟಿನ್' ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್‌ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಚಕ್ಕವಟು ಉಂಟಾಗುತ್ತದೆಂದು ಖಂಡಿತ ಹೇಳಬಹುದು

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ಬಲಿತು ಮಾಗಿದ ಬಾರ್ಲಿ, ದನದ ಹಾಲು ಮತ್ತು ಇತರ ಆರೋಗ್ಯವಾದ ವಿಟಮಿನು ಮತ್ತು ಫೊಸ್ಫೈಟ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್‌ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ದೆಯೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ ಇತರ ನಕಲಿ ವಸ್ತುಗಳನ್ನು ಬಿಡಿರಿ



'ಓವಲ್‌ಟಿನ್'

OVALTINE ಒಂದು ಪುಷ್ಟಿಕರವಾದ ಆಹಾರ ಪಾನೀಯ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆಡ್,

149 ಬ್ರೋಡ್‌ವೇ, ಮದ್ರಾಸು

ಕಲ್ಕತ್ತಾ, ಬೊಂಬ್ಬಾ ಮತ್ತು ಕರಾಚಿ.

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ನಿಶ್ಚಿತ ಬೆಲೆಯ 'ಓವಲ್‌ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV 66/39

MISSING

PAGE 3, 4, 5, 6,

MISSING

PAGE 3,4,5,6,

ಒಂದು ಸಣ್ಣ ಕತೆ:

ಮಿಲನ!

[ಮನುಷ್ಯನಿಗೆ ಆ ಸಾಹಿತ್ಯ ಸಾಮಗ್ರಿ, ಆ ಆಟವಿನೋದ, ಊಟಉಪಚಾರಗಳು ಯಾವುದೂ ಬೇಕಾಗಿರಲಿಲ್ಲ. ಆತನಿಗೆ ಅವನಾಕೆಯು ಮರಳಿ ಬೇಕಾಗಿತ್ತು . . . . ಆತನ ಸಹಚಾರಿಣಿಯು ಮರಳಿ ಬಂದ ದಿನ, ಮನುಷ್ಯನು ಅವಳ ಕೈಕಾಲುಗಳಿಗೆ ಬಿಗಿದಿದ್ದ ಕಬ್ಬಿಣ ಸಂಕಲೆಗಳನ್ನು ಕಡಿದೊಗೆದು, ಸ್ವತಂತ್ರಳನ್ನಾಗಿ ಮಾಡಿ, ಮೊದಲಿನ ಸಂಕಲೆಗಳ ಬದಲು ಚಿನ್ನದ ಆಭರಣಗಳನ್ನು ತೊಡಿಸಿ ಶೃಂಗರಿಸಿದ ಆಕೆಯ ಕೊರಳಿಗೆ ಮುತ್ತಿನ ಹಾರವನ್ನು ಹಾಕಿ, ಮತ್ತೆ ಅವಳನ್ನು ತನ್ನ ಬಾಹುಪಾಶದಿಂದ ಬಿಗಿದು ಮುದ್ದಿಟ್ಟು 'ಪ್ರಿಯೇ ನೀನು ಇನ್ನು ಮೇಲೆ ದಾಸಿಯಲ್ಲ ಅಪೂರ್ಣವನ್ನು ಪೂರ್ಣ ಮಾಡುವ, ಶೂನ್ಯವನ್ನು ಸಮೃದ್ಧ ಮಾಡುವ ಜೀವನ ಸಹಭಾಗಿನೀ ಸಖಿಯಾಗಿರುವಿ' ಎಂದು ಅವಳ ಕಿವಿಯಲ್ಲಿ ಮಧುರವಾದ ಸ್ವರದಲ್ಲಿ ಹೇಳಿದ]

ಮನುಷ್ಯನು ಬಹಳ ಮೂರ್ಖನಾಗಿದ್ದ ಅದೊಂದು ಕಾಲವಿತ್ತು. ಆಗ ಅವನು ತನ್ನ ಸಹಚಾರಿಣಿಯನ್ನು ಕ್ರಯಕ್ಕೆ ಕೊಂಡುಕೊಂಡ ದಾಸಿಯಂತೆ ನೋಡಿಕೊಳ್ಳುತ್ತಿದ್ದನು. ಅವಳ ಕೈಕಾಲುಗಳನ್ನು ಕಬ್ಬಿಣದ ಸಂಕಲೆಗಳಿಂದ ಕಟ್ಟಿಹಾಕಿದ್ದನು. ಅವಳು ತನ್ನ ಮನೆಕೆಲಸಗಳನ್ನು ಮಾಡಬಹುದಾಗಿತ್ತೇ ಹೊರತು ಮನೆಬಿಟ್ಟು ಹೊರಗೆ ಕಾಲಿಡುವ, ಅಥವಾ ಪಲಾಯನ ಮಾಡುವ ಅನುಕೂಲತೆ ಸ್ವಾತಂತ್ರ್ಯಗಳು ಅವಳಿಗಿರಲಿಲ್ಲ. ನಿಜಕ್ಕೂ ಅವಳು ಕ್ರಯಕ್ಕೆ ಕೊಂಡುಕೊಂಡ ದಾಸಿಯಂತೆ ಕಾಲಯಾಪನೆ ಮಾಡಬೇಕಾಗಿತ್ತು.

ಅವಳ ಹೃದಯದ ದುಃಖವನ್ನು ಕೇಳುವವರು ಯಾರೂ ಇರಲಿಲ್ಲ. ಅವಳೊಬ್ಬಳೇ ಮನುಷ್ಯನ ಮನೆಯನ್ನು ಸಾರಿಸಿ, ಗುಡಿಸಿ, ಥಳಥಳ ಹೊಳೆಯುವಂತೆ ಚೊಕ್ಕವಾಗಿಡಬೇಕಾಗಿತ್ತು. ಪ್ರತಿ ದಿನವೂ ಬೆಳಗ್ಗೆ ಮತ್ತು ಸಾಯಂಕಾಲ, ಅಂಗಳದಲ್ಲಿನ ತುಳಸೀಕಟ್ಟೆಯ ಮುಂದೆ ನಿಂತು, ತುಪ್ಪದ ದೀಪವನ್ನು ಉರಿಸಿ, ಕುಂಕುಮವನ್ನು ಹಚ್ಚಿ, ಮನುಷ್ಯನ ಸರ್ವ ಅಮಂಗಲಗಳು ದೂರವಾಗುವಂತೆ ಅವಳು ಭಗವತಿಯನ್ನು ಪ್ರಾರ್ಥಿಸಬೇಕಾಗಿತ್ತು ಮನುಷ್ಯನ ಹೊಟ್ಟೆ ಹಸಿವೆಯು ದೂರವಾಗಲಿಕ್ಕೆ, ಅಡಿಗೆಮಾಡುವವಳು ಅವಳೇ! ತೃಷೆಯು ಆರಲಿಕ್ಕೆ ಬಾವಿಕಟ್ಟೆಗೆ ಹೋಗಿ ನೀರು ತರುವವಳು ಅವಳೇ! ದೇವಪೂಜೆಗೆ ಬೇಕಾದ ಫಲಪುಷ್ಪಗಳನ್ನು ಸಂಗ್ರಹಿಸುವವಳು ಅವಳೇ ಹೀಗಿದ್ದರೂ ಕೂಡ ತನ್ನ ಹೊರತು ಅವಳಿಗೆ ಬೇರೆ ಗತಿಯೇ ಇಲ್ಲವೆಂಬ ಹಾಗೆ ಮನುಷ್ಯನು ಅವಳೊಂದಿಗೆ ನಡಕೊಳ್ಳುತ್ತಿದ್ದನು; ತಾನೊಬ್ಬನೇ ಅವಳಿಗೆ ಆಧಾರಸ್ವರೂಪನಾಗಿರುವೆನೆಂದು ತಿಳಿದು ಅವಳ ಹಾಗೆ ಪರಿಶ್ರಮಿಸುತ್ತಿರುವವಳಾಗಿ ಅವನು ಎಣಿಸುತ್ತಿದ್ದನು.

ಮನುಷ್ಯನ ಈ ದುರ್ಭಾವನೆಯನ್ನು ಕಂಡು ಸೃಷ್ಟಿಕರ್ತನು ಮನಸ್ಸಿನೊಳಗೇ ನಕ್ಕನು ಒಂದು ತಮಾಷೆ ಮಾಡಿ ನೋಡೋಣವೆಂದು ಅವನು ಆಕೆಯನ್ನು ಮನುಷ್ಯನಿಂದ ಬೇರೆ ಮಾಡಿ ಎಲ್ಲಿಯೋ ಒಂದು ಅಜ್ಞಾತ ಪ್ರದೇಶದಲ್ಲಿಟ್ಟ. ಮನುಷ್ಯನು ಹೊರಗೆ ತಿರುಗಾಡಿ ಮನೆಯನ್ನು ಸೇರುವಾಗ ಅಲ್ಲಿ ಮೊದಲಿನಂತೆ ಅವನಿಗಾಗಿ ಅನ್ನ ನೀರು, ಹಣ್ಣುಕಾಯಿ, ಪತ್ರಪುಷ್ಪಗಳನ್ನು ತಂದಿಡುವವರು ಯಾರೂ ಇಲ್ಲದಿರುವುದನ್ನು ಕಂಡ. ಅದನ್ನು ಕಂಡಾಕ್ಷಣ ಮನುಷ್ಯನು ಕ್ರೋಧಾಗ್ನಿಯಿಂದ ಸುಟ್ಟು ಸುಣ್ಣವಾದ. ಆಕೆಗಾಗಿ ಅವನು ಬೇಕಾದಷ್ಟು ಕೂಗಿದ, ಅರಚಿದ. ಆದರೆ ಏನೂ ಫಲವಾಗಲಿಲ್ಲ ಅವನ ಗುಲ್ಲುಗಲಭೆಯನ್ನು ಕೇಳಲಿಕ್ಕೆ ಯಾರೂ ಬರಲಿಲ್ಲ. ಆಕಾಶ ಪಾತಾಳ ಒಂದುಮಾಡಿ ಅವನು ಅವಳನ್ನು ಹುಡುಕತೊಡಗಿದ.

ಅದೇ ಸಮಯ, ಸೃಷ್ಟಿಕರ್ತನು ಬಂದು—'ಅಪ್ಪಾ! ಯಾಕೆ ಕೂಗುತ್ತೀ? ಏನು ಸಮಾಚಾರ?' ಎಂದು ಏನೂ ತಿಳಿಯದವನಂತೆ ಆತನನ್ನು ಪ್ರಶ್ನಿಸಲಾರಂಭಿಸಿದನು.

'ಏನು ಸಮಾಚಾರ?' ಮನುಷ್ಯನು ಸಿಟ್ಟಿನಿಂದ ಕೇಳಿದ 'ಏನು ಸಮಾಚಾರ? ನಿನಗೆ ತಿಳಿದಿಲ್ಲವೆ? ಅವಳು ಎಲ್ಲಿಗೆಹೋದಳು? ಇಲ್ಲಿ ಉಣ್ಣಲಿಕ್ಕೆ ಅನ್ನವಿಲ್ಲ, ಕುಡಿಯಲಿಕ್ಕೆ ನೀರಿಲ್ಲ, ಪೂಜೆಗೆ ಸಾಹಿತ್ಯ ಸಾಮಗ್ರಿಗಳಿಲ್ಲ ಅವಳೊಬ್ಬಳೇ ದಿನ ನಿತ್ಯ ಈ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಳು ಅವಳು ಈಗ ಎಲ್ಲಿಗೆಹೋದಳು?

'ಇಷ್ಟೇ ತಾನೆ?'

'ಹೌದು, ಇಷ್ಟೆ'

'ಸರಿ, ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರು, ಪೂಜೆಗೆ ಸಾಹಿತ್ಯ ಸಾಮಗ್ರಿಗಳು—ಇವೆಲ್ಲಾ ನಿನಗೆ ಸಮಯ ಸಮಯಕ್ಕೆ ದೊರೆಯುತ್ತಲಿರುವವು. ಯಾವುದರಲ್ಲಿಯೂ ಕೊರತೆ ಬರಲಾರದು'

'ಬ್ರಾಂಡೀ ಬಾಟ್ಲಿ'ಯಲ್ಲಿ ಸಾಳ್ವಿ ಮತ್ತು ಆಶಾಲತ

ಸೃಷ್ಟಿಕರ್ತರನು ಅಲ್ಲಿಂದ ಅದೃಶ್ಯನಾದನು ಆತನ ಮಂತ್ರಬಲದಿಂದ ಮನುಷ್ಯನಿಗೆ ಅನ್ನ ನೀರು, ಸಾಹಿತ್ಯ ಸಾಮಗ್ರಿ ಎಲ್ಲವುಗಳು ಸಮಯಕ್ಕೆ ಸರಿಯಾಗಿ ದೊರೆಯತೊಡಗಿದುವು ಆದರೆ ಆತನ ಅವಳು ಮಾತ್ರ ಮರಳಿ ಬರಲಿಲ್ಲ

ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರು ಪೂಜೆಗೆ ಹಣ್ಣು ಹಂಪಲು—ಇವೆಲ್ಲ ಮನುಷ್ಯನಿಗೆ ಬೇಕುಬೇಕಾದಷ್ಟು ದೊರೆಯುತ್ತಿದ್ದುವು ಆದರೆ ಆತನ ಮನೆಯಲ್ಲಿ ಮೊದಲಾಗುತ್ತಿದ್ದ ಆ ಮಧುಮಧುರವಾದ ಸಂಗೀತಾಲಾಪನ, ಅನ್ನಪಾನ—ಪೂಜಾಪಾರಗಳ ಗಡುವಿನ ಸಮಯವನ್ನು ಸಂತೋಷ ತೃಪ್ತಿಗಳಿಂದ ಕಳೆಯುತ್ತಿದ್ದ ಆ ಮಧುರಸವು ಮಾತ್ರ ಅಲ್ಲಿರಲಿಲ್ಲ. ಅಲ್ಲಿದ್ದುದು ಕೇವಲ ಅನ್ನಸಾಮಗ್ರಿ, ಫಲಪುಷ್ಪಗಳು. ಮನೆಕೆಲಸಗಳೆಲ್ಲ ಹೃದಯಹೀನ ಯಂತ್ರದ ಚಲನೆಯಂತೆ ನಡೆಯುತ್ತಿದ್ದುವು ಮೂರ್ತಿಮಂತ ನೈಷ್ಫಲ್ಯವೇ ಅಲ್ಲಿದ್ದ ಹಾಗೆ ಮನುಷ್ಯನಿಗೆ ಭಾಸವಾಗುತ್ತಿತ್ತು.

ಹೊರಗಿನ ಕೆಲಸ ಕಾರ್ಯಗಳನ್ನು ಮುಗಿಸಿ ಮನುಷ್ಯನು ಆ ದಿನ ಬಹಳ ದಣಿದು ಮನೆಯ ಒಳಗೆ ಬಂದ ಅವನ ಆಗತ ಸ್ವಾಗತಕ್ಕಾಗಿ ಎಲ್ಲ ಸಾಹಿತ್ಯ ಸಾಮಗ್ರಿಗಳು ಅಲ್ಲಿ ಉಪಸ್ಥಿತವಾಗಿದ್ದುವು ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರು, ಪೂಜೆಗೆ ಹಣ್ಣುಹಂಪಲು—ಇವೆಲ್ಲವುಗಳು ಅವನ ಬರವನ್ನು ಕಾದಿದ್ದುವು. ಆದರೂ ಮನುಷ್ಯನ ಅಂಗಾಂಗಗಳು ಉರಿಯತೊಡಗಿದುವು. ಯಾರಿಗೆ ಬೇಕಾಗಿದ್ದುವು ಆ ಸಾಹಿತ್ಯ ಸಾಮಗ್ರಿಗಳ? ಯಾರಿಗೆ ಬೇಕಾಗಿದ್ದುವು ಆ ಹೃದಯಹೀನ ಆಟ ವಿನೋದಗಳು? ಒಂದೇ ತುಳಿತದಿಂದ ಮನುಷ್ಯನು ಎಲ್ಲ ಅಡಿಗೆಯನ್ನು ಚೆಲ್ಲಿಬಿಟ್ಟ, ನೀರಿನ ಪಾತ್ರೆಗಳನ್ನು ಕೆಡವಿಹಾಕಿದ, ಹಣ್ಣು ಹೂವುಗಳ ರಾಶಿಯನ್ನು ಗಾಳಿಗೆ ಹಾರಿಸಿಕೊಟ್ಟ

ಅದೇ ಸಮಯ, ಸೃಷ್ಟಿಕರ್ತನು ಬಂದು—'ಏನು ಸಮಾಚಾರ? ಈಗೇನು ಸಮಾಚಾರ?' ಎಂದು ಮನುಷ್ಯನನ್ನು ಕೇಳಿದ. ಮನುಷ್ಯನ ಸಿಟ್ಟು ನೆತ್ತಿಗೇರಿತು. ಏನು ಸಮಾಚಾರ? ಯಾರಿಗೆ ಬೇಕು, ನಿನ್ನ ಈ ಎಲ್ಲ ಸಾಹಿತ್ಯ ಸಾಮಗ್ರಿಗಳು? ಯಾರಿಗೆ ಬೇಕು ನಿನ್ನ ಈ ಆಟ ವಿನೋದ? ಹೋಗು, ಹೋಗು, ಅವೆಲ್ಲವನ್ನೂ ತೆಗೆದುಕೊಂಡು ಹೋಗು ಅವು ಯಾವುವೂ ನನಗೆ ಬೇಡ! ಕೇವಲ ನನ್ನಾಕೆಯನ್ನು ನನಗೆ ಮರಳಿ ಕೊಡು' ಎಂದವನು ಗರ್ಜಿಸಿದ.

ಮನುಷ್ಯನ ಮಾತುಗಳನ್ನು ಕೇಳಿ ಸೃಷ್ಟಿಕರ್ತರನು ಮಸಂನಕ್ಕನು. ಅವನು ಆತನ ಸಹಚಾರಿಣಿಯನ್ನು ಮರಳಿಸಿದ.

ಅದೇ ದಿನ ಮನುಷ್ಯನು ಅವಳ ಕೈಕಾಲುಗಳಿಗಿದ್ದ ಬಂಧನಗಳನ್ನು ಮುರಿದು ಅವಳನ್ನು ಸ್ವತಂತ್ರಳನ್ನಾಗಿ ಮಾಡಿದ. ಕಬ್ಬಿಣದ ಸಂಕಲೆಗಳ ಬದಲಿಗೆ, ಅವಳ ಕೈಕಾಲುಗಳಿಗೆ ಚಿನ್ನದ ಬಳೆಗಳನ್ನು ತೊಡಿಸಿದ; ಕೊರಳಿಗೆ ಮುತ್ತಿನ ಹಾರವನ್ನು ಹಾಕಿ ಮತ್ತೆ ಅವಳನ್ನು ತನ್ನ ಬಾಹುಪಾಶದಿಂದ ಬಿಗಿದಪ್ಪಿ ಮುದ್ದಿಟ್ಟು 'ಪ್ರಿಯೆ, ನೀನು ಕ್ರಯಕ್ಕೆ ಕೊಂಡುಕೊಂಡ ದಾಸಿ ಅಲ್ಲ, ಅಪೂರ್ಣವನ್ನು ಪೂರ್ಣಮಾಡುವ, ಶೂನ್ಯವನ್ನು ಸಮೃದ್ಧಮಾಡುವ ಜೀವನ ಸಹಭಾಗಿನಿಯಾದ ಸಖಿಯಾಗಿರುವಿ!' ಎಂದು ಅವಳ ಕಿವಿಯಲ್ಲಿ ಮೃದುಮಧುರವಾದ ಸ್ವರದಲ್ಲಿ ಹೇಳಿದ.

ಆ ದಿನ ಅವನು ಯಾವ ಹೂವುಗಳನ್ನು ತೆಗೆದುಕೊಂಡು ದೇವಪೂಜೆಗೆ ಕುಳಿತುಕೊಂಡಿದ್ದನೋ, ಅವುಗಳ ಸುಗಂಧದಿಂದ ದೇವಲೋಕದ ದೇವತೆಗಳು ಜಾಗ್ರತರಾಗಿ ಪ್ರಸನ್ನರಾದರು

'ವಿಶಾಲ ಭಾರತ'

ನೋಟೀಸು

ಪುತ್ತೂರು ಡಿ ಮು ಕೋರ್ಟಿನಲ್ಲಿ

R E P No 774/38

R E A No 521/39

ಅರ್ಜಿದಾರಳ ಅಪ್ಪ ಹೆಂಗ್ಸು

—(ಪ್ರತಿವಾದಿಳು)

ಎದುರು—ವ ತಿಪ್ಪಯ್ಯ ಶೆಟ್ಟಿ

—ಪ್ರತಿವಾದಿರು

11 ನಾರಾಯಣ ಶೆಟ್ಟಿ
12 ಭಾಗೀರಥಿ ಹೆಂಗ್ಸು
13 ಮುತ್ತಮ್ಮ ಹೆಂಗ್ಸು
} 9ನೇ ಎದ್ರಿ ಚನ್ನಮ್ಮನ ಮಕ್ಕಳು ಕಾಸರಗೋಡು ತಾಲೂಕು ಬದೂರು ಗ್ರಾಮದಲ್ಲಿರುವವರು

ಸದ್ರಿ ಮೂರು ಜನರಿಗೆ ತಿಳಿಯಪಡಿಸುವುದೇನೆಂದರೆ—

ಸದ್ರಿ ಅಮ್ಲಜ್ಯಾರಿ ವ್ಯವಹರಣೆಯಲ್ಲಿ-ಕುಟುಂಬದ ಯಜಮಾನ ವ ಅಡತ್ತೆದಾರನಾಗಿದ್ದ ೧ನೇ ಪ್ರತಿವಾದಿ ಮುತ್ತಪ್ಪ ರೈಗಳು ಮೃತಪಟ್ಟದ್ರಿಂದ ವಾದಿ—ಪ್ರತಿವಾದಿರ ಕುಟುಂಬದಲ್ಲಿ ಅತ್ಯಂತ ಹಿರಿಯಳೂ ಯಜಮಾನ್ತಿಯೂ ಆದ ೨ನೇ ಎದ್ರಿ ಅಬ್ಬಕ್ಕು ಹೆಂಗಸನ್ನು ಕುಟುಂಬದ ಯಜಮಾನ್ತಿ ವ ಅಡತ್ತೆದಾರಿಕೆ ಎಂತ ಕಾಣ್ಸಿ ಅಮ್ಲಜ್ಯಾರಿ ವ್ಯವಹರಣೆಗಳ ಮುಂದರಿಸಬೇಕಾಗಿ ವಗೈರೆ ಸದ್ರಿ ಅರ್ಜಿದಾರಳು ಕೊಟ್ಟ ಮೇಲ್ಕಂಡ ಅರ್ಜಿ ವ್ಯವಹರಣೆಯು ತನ್ನ ಬಗ್ಗೆ ತಾರೀಕು ೧೬-೧೧-೩೯ಕ್ಕೆ ಇಟ್ಟಿರುವದ್ರಿಂದ ಈ ಕುರಿತು ನಿಮಗೇನಾದ್ರೂ ಆಕ್ಷೇಪ ಇರುವದಾದ್ರೆ ಸದ್ರಿ ವ್ಯಾದೆ ದಿವ್ಸ ಕೋರ್ಟಿನ ಮುಂದೆ ಬೆಳಗ್ಗೆ ೧೦ ಘಂಟೆಗೆ ಹಾಜ್ರು ಆಗಿ ನಿಮ್ಮ ಆಕ್ಷೇಪಗಳು ಜ್ಯಾಹೀರು ಮಾಡಬೇಕಾಗಿರುತ್ತದೆ. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾ ಮಾಡಿ ಸದ್ರಿ ವ್ಯವಹರಣೆಯು ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಕೋರ್ಟು ಹುಕ್ಕುಂ ಮೇರೆಗೆ ಈ ಮೂಲಕ ಸೂಚಿತಪಡಿಸಿರುತ್ತೇನೆ.

ಪುತ್ತೂರು } **H. Ganapathi Rao.**
೩-೧೧-೩೯ } ಅರ್ಜಿದಾರಳ ಕಡೆ ವಕೀಲ್

AFRICA, THE LAND OF THE FUTURE

The colonial lands of Africa, which constitute an inexhaustible source of wealth for their mother countries, have passed through an extremely devastating period which has affected the sons of nearly all European peoples. Very great difficulties were met with during the exploration of the Niger Territory and the expeditions made with the object of reaching the legendary city of Timbuctoo in the Sudan.

The explorers, who generally attached themselves to caravans not only suffered from hunger and thirst for months on end and fought with hostile tribes of Touaregs and negroes, but were also exposed to tropical diseases such as sleeping sickness and malaria.

The accounts of the journeys of different explorers agreed perfectly on this point: to open up Central Africa to civilization, maintain a satisfactory sanitary condition there in future and bring the savage tribes into submission, all this would only be possible if Europeans could remain there for long periods in great numbers, and pacify the country. And this would be impossible without having an efficient remedy handy against tropical malaria.

'We can state unhesitatingly', declared a contemporary French explorer, 'that our colonies were not conquered by force of arms, but by quinine. It is quinine that has enabled French troops to remain and fight in Africa. Quinine is the sole remedy for malaria, a remedy that can be entrusted even to ignorant folk without any special precautions. Quinine is a remedy which, judiciously applied, is not only capable of ensuring the good health of entire armies, but can protect millions of people from malaria'.

All that is required is a daily dose of 6 grains of Quinine during the fever seasons; persons suffering from malaria only need to take 15 to 20 grains of quinine every day for from 5 to 7 days to deal with the first attack, any future relapses being dealt with in the same way. Such are the latest recommendations of the Malaria Commission of the

NOTICE

In the Court of the District Judge of South Kanara

Original Petition No. 106 of 1939

In the matter of:

1. Janardhana Kini } MINORS
2. Janhavi Bai

Between:

Girija alias Laxmi Bai—Petitioner

and

1. U. Narasimha Kini, 2. U. Subraya Kini, 3. U. Vasudeva Kini, 4. U. Ananda Kini, Sons of Ullal Janardhana Kini, No. 1 resides in BOMBAY, Nos. 2 and 4 reside in MANGALORE TOWN and No. 3 resides in UDIPI KASBA, Udipi Taluk. — Respondents

To

The Respondents,

AND TO ALL WHOM IT MAY CONCERN

Take notice that on the 30th day of October 1939 the above-named petitioner, Girija alias Laxmi Bai, widow of Ullal Narayana Janardhana Kini, residing in Ullal Kasba village Mangalore Taluk, has presented an application to this court praying that she may be declared to be the guardian of the person and that she may also be declared or appointed to be the guardian of the property of the above-named minors, and for other reliefs, and that the 13th day of December 1939 has been fixed for the hearing of the application; and that if you desire to oppose the said application, or to apply for the appointment of any person other than the above-named petitioner as the guardian of the person and property of the said minors, you must appear on the said 13th day of December 1939 in this court in person or by a duly authorised pleader and be prepared to adduce any documentary or oral evidence upon which you wish to rely, and that, in default of your appearance, the said application may be heard and decided in your absence. Any relation or friend of the said minors may appear and be heard upon the said application, and may inspect and obtain a copy of the petition; and it shall not be necessary to present any petition for this purpose.

Mangalore. 3-11-1939 | H. VASUDEVA KAMATH, *Vakil for Petitioner.*

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ರಾತ್ರೆ ಸುಖವಾದ ನಿದ್ದೆ ಬೇಕಾದರೆ ಒಂದು ಕಪ್ಪು 'ಓವಲ್‌ಟಿನ್' ಕುಡಿಯಿರಿ!

ನಿದ್ರೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್‌ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯೂ ಉಂಟಾಗುತ್ತದೆಂದು ಖಂಡಿತ ಹೇಳಬಹುದು.

ಇಷ್ಟು ಪದಾರ್ಥಗಳಲ್ಲದೆ ಉತ್ತಮವಾಗಿ ಬಲಿತು ಮಾಗಿದ ಬಾರ್ಲಿ, ದನದ ಹಾಲು ಮತ್ತು ಇತರ ಅಮೂಲ್ಯವಾದ ವಿಟಮಿನು ಮತ್ತು ಫ್ರೊಸ್ಫೆಟ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್‌ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ದೆಯೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ. ಇತರ ನಕಲಿ ಪಾನೀಯಗಳನ್ನು ಬಿಡಿರಿ.

'ಓವಲ್‌ಟಿನ್'

'OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆಡ್,

149 ಬ್ರೋಡ್‌ವೇ, ಮದ್ರಾಸು

ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ನೈಶಿಷ್ಟ ಬೆಲೆಯ 'ಓವಲ್‌ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ತಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV/66/39

ಒಂದು ಸಣ್ಣ ಕತೆ:

ಬಿ ಲ ನ!

[ಮನುಷ್ಯನಿಗೆ ಆ ಸಾಹಿತ್ಯ ಸಾಮಗ್ರಿ, ಆ ಆಟವಿನೋದ, ಊಟಉಪಚಾರಗಳು ಯಾವುದೂ 'ಬೇಕಾಗಿರಲಿಲ್ಲ ಆತನಿಗೆ ಅವನಾಕೆಯು ಮರಳಿ ಬೇಕಾಗಿತ್ತು . . . ಆತನ ಸಹಚಾರಿಣಿಯು ಮರಳಿ ಬಂದ ದಿನ, ಮನುಷ್ಯನು ಅವಳ ಕೈಕಾಲುಗಳಿಗೆ ಬಿಗಿದಿದ್ದ ಕಬ್ಬಿಣ ಸಂಕಲೆಗಳನ್ನು ಕಡಿದೂಗೆದು. ಸ್ವತಂತ್ರಳನ್ನಾಗಿ ಮಾಡಿ, ಮೊದಲಿನ ಸಂಕಲೆಗಳ ಬದಲು ಚಿನ್ನದ ಆಭರಣಗಳನ್ನು ತೊಡಿಸಿ ಶೃಂಗರಿಸಿದ ಆಕೆಯು ಕೊರಳಿಗೆ ಮುತ್ತಿನ ಹಾರವನ್ನು ಹಾಕಿ, ಮತ್ತೆ ಅವಳನ್ನು ತನ್ನ ಬಾಹುಪಾಶದಿಂದ ಬಿಗಿದು ಮುದ್ದಿಟ್ಟು 'ಪ್ರಿಯೇ ನೀನು ಇನ್ನು ಮೇಲೆ ದಾಸಿಯಲ್ಲ ಅಪೂರ್ಣವನ್ನು ಪೂರ್ಣ ಮಾಡುವ, ಶೂನ್ಯವನ್ನು ಸಮೃದ್ಧ ಮಾಡುವ ಜೀವನ ಸಹಭಾಗಿನೀ ಸಖಿಯಾಗಿರುವಿ' ಎಂದು ಅವಳ ಕಿವಿಯಲ್ಲಿ ಮಧುರವಾದ ಸ್ವರದಲ್ಲಿ ಹೇಳಿದ]

ಮನುಷ್ಯನು ಮಹಾ ಮೂರ್ಖನಾಗಿದ್ದ ಅದೊಂದು ಕಾಲವಿತ್ತು. ಆಗ ಅವನು ತನ್ನ ಸಹಚಾರಿಣಿಯನ್ನು ಕ್ರಯಕ್ಕೆ ಕೊಂಡುಕೊಂಡ ದಾಸಿಯಂತೆ ನೋಡಿಕೊಳ್ಳುತ್ತಿದ್ದನು. ಅವಳ ಕೈಕಾಲುಗಳನ್ನು ಕಬ್ಬಿಣದ ಸಂಕಲೆಗಳಿಂದ ಕಟ್ಟಿಹಾಕಿದ್ದನು. ಅವಳು ತನ್ನ ಮನೆಕೆಲಸಗಳನ್ನು ಮಾಡಬಹುದಾಗಿತ್ತಷ್ಟೇ ಹೊರತು ಮನೆ ಬಿಟ್ಟು ಹೊರಗೆ ಕಾಲಿಡುವ, ಅಥವಾ ಪಲಾಯನ ಮಾಡುವ ಅನುಕೂಲತೆ ಸ್ವಾತಂತ್ರ್ಯಗಳು ಅವಳಿಗಿರಲಿಲ್ಲ. ನಿಜಕ್ಕೂ ಅವಳು ಕ್ರಯಕ್ಕೆ ಕೊಂಡುಕೊಂಡ ದಾಸಿಯಂತೆ ಕೆಲಸಮಾಡಬೇಕಾಗಿತ್ತು.

ಅವಳ ಹೃದಯದ ದುಃಖವನ್ನು ಕೇಳುವವರು ಯಾರೂ ಇರಲಿಲ್ಲ. ಅವಳೊಬ್ಬಳೇ ಮನುಷ್ಯನ ಮನೆಯನ್ನು ಸಾರಿಸಿ, ಗುಡಿಸಿ, ಥಳಥಳ ಹೊಳೆಯುವಂತೆ ಚೊಕ್ಕವಾಗಿಡಬೇಕಾಗಿತ್ತು. ಪ್ರತಿದಿನವೂ ಬೆಳಗ್ಗೆ ಮತ್ತು ಸಾಯಂಕಾಲ, ಅಂಗಳದಲ್ಲಿನ ತುಳಸೀಕಟ್ಟೆಯ ಮುಂದೆ ನಿಂತು, ತುಪ್ಪದ ದೀಪವನ್ನು ಉರಿಸಿ, ಕುಂಕುಮವನ್ನು ಹಚ್ಚಿ, ಮನುಷ್ಯನ ಸರ್ವ ಅನುಂಗಲಗಳು ದೂರವಾಗಲೆಂತೆ ಅವಳ ಭಗವತಿಯನ್ನು ಪ್ರಾರ್ಥಿಸಬೇಕಾಗಿತ್ತು. ಮನುಷ್ಯನ ಹೊಟ್ಟೆ ಹಸಿವೆಯು ದೂರವಾಗಲಿಕ್ಕೆ, ಅಡಿಗೆಮಾಡುವವಳು ಅವಳೇ! ತೃಷೆಯು ಆರಲಿಕ್ಕೆ ಬಾವಿಕಟ್ಟೆಗೆ ಹೋಗಿ ನೀರು ತರುವವಳು ಅವಳೇ! ದೇವಪೂಜೆಗೆ ಬೇಕಾದ ಫಲ ಪುಷ್ಪಗಳನ್ನು ಸಂಗ್ರಹಿಸುವವಳು ಅವಳೇ ಹೀಗಿದ್ದರೂ ಕೂಡ ತನ್ನ ಹೊಟ್ಟೆಗೆ ಬೇರೆ ಗತಿಯೇ ಇಲ್ಲವೆಂಬ ಹಾಗೆ ಮನುಷ್ಯನು ಅವಳೊಂದಿಗೆ ನಡಕೊಳ್ಳುತ್ತಿದ್ದನು, ತಾನೊಬ್ಬನೇ ಅವಳಿಗೆ ಆಧಾರಸ್ವರೂಪನಾಗಿರುವೆನೆಂದು ತಿಳಿದು ತಾನೆ ಹಾಗೆ ಪರಿಶ್ರಮಿಸುತ್ತಿರುವಳಾಗಿ ಅವನ ಎಣಿಸುತ್ತಿದ್ದನು.

ಮನುಷ್ಯನ ಈ ದುರ್ಭಾವನೆಯನ್ನು ಕಂಡು ಸೃಷ್ಟಿಕರ್ತನ ಮನಸ್ಸಿನೊಳಗೇ ನಕ್ಕನು ಒಂದು ತಮಾಷೆ ಮಾಡಿ ನೋಡೋಣವೆಂದು ಅವನು ಆಕೆಯನ್ನು ಮನುಷ್ಯನಿಂದ ಬೇರೆ ಮಾಡಿ ಎಲ್ಲಿಯೋ ಒಂದು ಅಜ್ಞಾತ ಪ್ರದೇಶದಲ್ಲಿಟ್ಟ. ಮನುಷ್ಯನು ಹೊರಗೆ ತಿರುಗಾಡಿ ಮನೆಯನ್ನು ಸೇರುವಾಗ ಅಲ್ಲಿ ಮೊದಲಿನ ಹಾಗೆ ಅವನಿಗಾಗಿ ಅನ್ನ ನೀರು, ಹಣ್ಣುಕಾಯಿ, ಪತ್ರ ಪುಷ್ಪಗಳನ್ನು ತಂದಿಡುವವರು ಯಾರೂ ಇಲ್ಲದಿರುವುದನ್ನು ಕಂಡ. ಅದನ್ನು ಕಂಡಾಕ್ಷಣ ಮನುಷ್ಯನು ಕ್ರೋಧಾಗ್ನಿಯಿಂದ ಸುಟ್ಟು ಸುಣ್ಣವಾದ. ಆಕೆಗಾಗಿ ಅವನು ಬೇಕಾದಷ್ಟು ಕೂಗಿದ, ಅರಚಿದ. ಆದರೆ ಏನೂ ಫಲವಾಗಲಿಲ್ಲ. ಅವನ ಗುಲ್ಲು ಗಲಭೆಯನ್ನು ಕೇಳಲಿಕ್ಕೆ ಯಾರೂ ಬರಲಿಲ್ಲ. ಆಕಾಶ ಪಾತಾಳ ಒಂದುಮಾಡಿ ಅವನು ಅವಳನ್ನು ಹುಡುಕತೊಡಗಿದ.

ಅದೇ ಸಮಯ, ಸೃಷ್ಟಿಕರ್ತನು ಬಂದು—'ಅಪ್ಪಾ! ಯಾಕೆ ಕೂಗುತ್ತೀ? ಏನು ಸಮಾಚಾರ?' ಎಂದು ಏನೂ ತಿಳಿಯದವನಂತೆ ಆತನನ್ನು ಪ್ರಶ್ನಿಸಲಾರಂಭಿಸಿದನು.

'ಏನು ಸಮಾಚಾರ?' ಮನುಷ್ಯನು ಸಿಟ್ಟಿನಿಂದ ಕೇಳಿದ 'ಏನು ಸಮಾಚಾರ? ನಿನಗೆ ತಿಳಿದಿಲ್ಲವೆ? ಅವಳು ಎಲ್ಲಿಗೆಹೋದಳು? ಇಲ್ಲಿ ಉಣ್ಣಲಿಕ್ಕೆ ಅನ್ನವಿಲ್ಲ, ಕುಡಿಯಲಿಕ್ಕೆ ನೀರಿಲ್ಲ, ಪೂಜೆಗೆ ಸಾಹಿತ್ಯ ಸಾಮಗ್ರಿಗಳಿಲ್ಲ ಅವಳೊಬ್ಬಳೇ ದಿನ ನಿತ್ಯ ಈ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಳು ಅವಳು ಈಗ ಎಲ್ಲಿಗೆಹೋದಳು?

'ಅಷ್ಟೇ ತಾನೆ?'

'ಹೌದು, ಅಷ್ಟೆ!'

'ಸರಿ, ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರ, ಪೂಜೆಗೆ ಸಾಹಿತ್ಯ ಸಾಮಗ್ರಿಗಳು—ಇವೆಲ್ಲ ನಿನಗೆ ಸಮಯ ಸಮಯಕ್ಕೆ ದೊರೆಯುತ್ತಲಿರುವವು. ಯಾವುದರಲ್ಲಿಯೂ ಕೊರತೆ ಬರಲಾರದು'

ಹೀನ ಯಂತ್ರದ ಚಲನೆಯಂತೆ ನಡೆಯುತ್ತಿದ್ದವು ಮೂರ್ತಿಮತ್ತ ಸೈಷ್ಟರ್ಯವೇ ಅಲ್ಲಿದ್ದ ಹಾಗೆ ಮನೆ ಶೂನ್ಯಗೆ ಭಾಸವಾಗುತ್ತಿತ್ತು

ಹೊರಗಿನ ಕೆಲಸ ಕಾರ್ಯಗಳನ್ನು ಮುಗಿಸಿ ಮನುಷ್ಯನು ಆ ದಿನ ಬಹಳ ದಣಿದು ಮನೆಯ ಒಳಗೆ ಬಂದ ಅವನ ಸ್ವಾಗತಕ್ಕಾಗಿ ಎಲ್ಲ ಸಾಹಿತ್ಯ ಸಾಮಗ್ರಿಗಳು, ಅಲ್ಲಿ ಉಪಸ್ಥಿತವಾಗಿದ್ದುವು 'ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರು, ಪೂಜೆಗೆ ಹಣ್ಣುಹೂವು—ಇವೆಲ್ಲವುಗಳು ಅವನ ಬರವನ್ನು ಕಾದಿದ್ದವು. ಆದರೂ ಮನುಷ್ಯನ ಅಂಗಾಂಗಗಳು ಉರಿಯತೊಡಗಿದವು. ಯಾರಿಗೆ ಬೇಕಾಗಿದ್ದುವು

'ಬ್ರಾಂಡೀ ಬಾಟ್ಲಿ'ಯಲ್ಲಿ ಸಾಲ್ವಿ ಮತ್ತು ಆಶಾಲತ

ಸೃಷ್ಟಿಕರ್ತನು ಅಲ್ಲಿಂದ ಅದೃಶ್ಯನಾದನು ಆತನ ಮಂತ್ರಬಲದಿಂದ ಮನುಷ್ಯನಿಗೆ ಅನ್ನ ನೀರು, ಸಾಹಿತ್ಯ ಸಾಮಗ್ರಿ ಎಲ್ಲವುಗಳು ಸಮಯಕ್ಕೆ ಸರಿಯಾಗಿ ದೊರೆಯತೊಡಗಿದುವು ಆದರೆ ಆತನ ಅವಳು ಮಾತ್ರ ಮರಳಿ ಬರಲಿಲ್ಲ.

ಉಣ್ಣಲಿಕ್ಕೆ ಅನ್ನ, ಕುಡಿಯಲಿಕ್ಕೆ ನೀರು ಪೂಜೆಗೆ ಹಣ್ಣು ಹಂಪಲು—ಇವೆಲ್ಲ ಮನುಷ್ಯನಿಗೆ ಬೇಕುಬೇಕಾದಷ್ಟು ದೊರೆಯುತ್ತಿದ್ದುವು ಆದರೆ ಆತನ ಮನೆಯಲ್ಲಿ ಮೊದಲಾಗುತ್ತಿದ್ದ ಆ ಮಧುಮಧುರವಾದ ಸಂಗೀತಾಲಾಪನ, ಅನ್ನಪಾನ—ಪೂಜಾ ಪಾರಗಳ ಗಡುವಿನ ಸಮಯವನ್ನು ಸಂತೋಷ ತೃಪ್ತಿಗಳಿಂದ ಕಳೆಯುತ್ತಿದ್ದ ಆ ಮಧುರಸವು ಮಾತ್ರ ಅಲ್ಲಿರಲಿಲ್ಲ. ಅಲ್ಲಿದ್ದುದು ಕೇವಲ ಅನ್ನಸಾಮಗ್ರಿ, ಫಲ ಪುಷ್ಪಗಳು. ಮನೆಕೆಲಸಗಳೆಲ್ಲ ಹೃದಯ

ಆ ಸಾಹಿತ್ಯ ಸಾಮಗ್ರಿಗಳು? ಯಾರಿಗೆ ಬೇಕಾಗಿದ್ದುವು ಆ ಹೃದಯಹೀನ ಆಟವಿನೋದಗಳು? ಕ್ರೋಧ ತಾಳಿದಂತೆ ಮನುಷ್ಯನು ಎಲ್ಲ ಅಡಿಗೆಯನ್ನು ಚೆಲ್ಲಿಬಿಟ್ಟ, ನೀರಿನ ಪಾತ್ರೆಗಳನ್ನು ಕೆಡವಿ ಹಾಕಿದ, ಹಣ್ಣು ಹೂವುಗಳ ರಾಶಿಯನ್ನು ಗಾಳಿಗೆ ತೂರಿಸಿಕೊಟ್ಟ

ಅದೇ ಸಮಯ, ಸೃಷ್ಟಿಕರ್ತನು ಬಂದು—'ಏನು ಸಮಾಚಾರ? ಈಗೇನು ಸಮಾಚಾರ?' ಎಂದು ಮನುಷ್ಯನನ್ನು ಕೇಳಿದ. ಮನುಷ್ಯನ ಸಿಟ್ಟು ನೆತ್ತಿಗೇರಿತು ಏನು ಸಮಾಚಾರ? ಯಾರಿಗೆ ಬೇಕು, ನಿನ್ನ ಈ ಎಲ್ಲ ಸಾಹಿತ್ಯ ಸಾಮಗ್ರಿಗಳು? ಯಾರಿಗೆ ಬೇಕು ನಿನ್ನ ಈ ಆಟ ವಿನೋದ? ಹೋಗು, ಹೋಗು, ಅವೆಲ್ಲವನ್ನೂ ತೆಗೆದುಕೊಂಡು ಹೋಗು ಅವು ಯಾವುವೂ ನನಗೆ ಬೇಡ! ಕೇವಲ ನನ್ನಾಕೆಯನ್ನು ನನಗೆ ಮರಳಿ ಕೊಡು' ಎಂದವನು ಗರ್ಜಿಸಿದ.

ಮನುಷ್ಯನ ಮಾತುಗಳನ್ನು ಕೇಳಿ ಸೃಷ್ಟಿಕರ್ತಾರನು ನಸುನಕ್ಕನು ಅವನು ಆತನ ಸಹಚಾರಿಣಿಯನ್ನು ಮರಳಿಸಿದ

ಅದೇ ದಿನ ಮನುಷ್ಯನು ಅವಳ ಕೈಕಾಲುಗಳಿಗಿದ್ದ ಬಂಧನಗಳನ್ನು ಮುರಿದು ಅವಳನ್ನು ಸ್ವತಂತ್ರಳನ್ನಾಗಿ ಮಾಡಿದ. ಕಬ್ಬಿಣದ ಸಂಕಲೆಗಳ ಬದಲಿಗ, ಅವಳ ಕೈಕಾಲುಗಳಿಗೆ ಚಿನ್ನದ ಬಳೆಗಳನ್ನು ತೊಡಿಸಿದ; ಕೊರಳಿಗೆ ಮುತ್ತಿನ ಹಾರವನ್ನು ಹಾಕಿ ಮತ್ತೆ ಅವಳನ್ನು ತನ್ನ ಬಾಹುಪಾಶದಿಂದ ಬಿಗಿದಪ್ಪಿ ಮುದ್ದಿಟ್ಟು 'ಪ್ರಿಯೆ, ನೀನು ಕ್ರಯಕ್ಕೆ ಕೊಂಡುಕೊಂಡ ದಾಸಿ ಅಲ್ಲ, ಅಪೂರ್ಣವನ್ನು ಪೂರ್ಣಮಾಡುವ, ಶೂನ್ಯವನ್ನು ಸಮೃದ್ಧಮಾಡುವ ಜೀವನ ಸಹಭಾಗಿನಿಯಾದ ಸಖಿಯಾಗಿರುವಿ!' ಎಂದು ಅವಳ ಕಿವಿಯಲ್ಲಿ ಮೃದುಮಧುರವಾದ ಸ್ವರದಲ್ಲಿ ಹೇಳಿದ

ಆ ದಿನ ಅವನು ಯಾವ ಹೂವುಗಳನ್ನು ತೆಗೆದುಕೊಂಡು ದೇವಪೂಜೆಗೆ ಕೂತುಕೊಂಡಿದ್ದನೋ, ಅವುಗಳ ಸುಗಂಧದಿಂದ ದೇವಲೋಕದ ದೇವತೆಗಳು ಜಾಗ್ರತರಾಗಿ ಪ್ರಸನ್ನರಾದರು.

'ವಿಶಾಲ ಭಾರತಿ'

ನೋಟೀಸು

ಪುತ್ತೂರು ಡಿ ಮು ಕೋರ್ಟಿನಲ್ಲಿ

R L P N. 774/3-

F E A No 521/ 9

ಅರ್ಜಿದಾರಳು. ಅಪ್ಪು ಹೆಂಗ್ಸು

-(ಪ್ರತಿವಾದಿಳು)

ಎದುರು-ಮುತ್ತಪ್ಪರೈ ಕೂಡ

—ಪ್ರತಿವಾದಿರು

11 ನಾರಾಯಣರೈ
12 ಭಾಗೀರಥಿ ಹೆಂಗ್ಸು
13 ಮುತ್ತಕ್ಕು ಹೆಂಗ್ಸು

ಧನೇ ಎಡ್ರಿ ಚನ್ನಮ್ಮನ ಮಕ್ಕಳು ಕಾಸರಗೋಡು ತಾಲೂಕು ಅಡೂರು ಗ್ರಾಮದಲ್ಲಿರುವವರು

ಸದಿ ನಮೂದು ಜನರಿಗೆ ತಿಳಿಯಪಡಿಸುವುದೇನೆಂದರೆ –

ಸದ್ರಿ ಅಮ್ಮಲತ್ಯಾರಿ ವ್ಯವಹಾರಣೆಯಲ್ಲಿನ ಕುಟುಂಬದ ಯಜಮಾನ ಮತ್ತು ಅದಕ್ತೆ ದಾರರಾಗಿದ್ದ ೧ನೇ ಪ್ರತಿವಾದಿ ಮುತ್ತಪ್ಪ ರೈಗಳು ಮೃತಪಟ್ಟದ್ದರಿಂದ ವಾದಿ–ಪ್ರತಿವಾದಿರ ಕುಟುಂಬದಲ್ಲಿ ಅತ್ಯಂತ ಹಿರಿಯಳೂ ಯಜಮಾನ್ತಿಯೂ ಆದ ೨ನೇ ಎಡ್ರಿ ಅಬ್ಬಕ್ಕು ಹೆಂಗಸನ್ನು ಕುಟುಂಬದ ಯಜಮಾನ್ತಿ ಮತ್ತು ಅದಕ್ತೆದಾರಳೆಂತ ಜಾಕ್ಕಿ ಅಮ್ಮಲತ್ಯಾರಿ ವ್ಯವಹಾರಣೆಯಲ್ಲಿ ಮುಂದರಿಸಬೇಕಾಗಿ ಪಗ್ಗೆರೆ ಸದ್ರಿ ಅರ್ಜಿದಾರಳು ಕೊಟ್ಟ ಮೇಲ್ಕಂಡ ಅರ್ಜಿ ವ್ಯವಹಾರಣೆಯು ತಮ್ಮ ಒಗ್ಗೆ ತೀರ್ಮಾನಕ್ಕೆ ಇಟ್ಟಿರುವದ್ದರಿಂದ ಈ ಕುರಿತು ನಿಮಗೇನಾದ್ರೂ ಆಕ್ಷೇಪ ಇರುವದಾದ್ರೆ ಸದ್ರಿ ವ್ಯಾದೆ ದಿವಸ ಕೋರ್ಟಿನ ಮುಂದೆ ಬೆಳಗ್ಗೆ ೧೦ ಘಂಟೆಗೆ ಹಾಜರು ಆಗಿ ನಿಮ್ಮ ಆಕ್ಷೇಪಗಳು ಜಾಹೀರು ಮಾಡಬೇಕಾಗಿರುತ್ತದೆ ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರು ಮಾಡಿ ಸದ್ರಿ ವ್ಯವಹಾರಣೆಯು ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಕೋರ್ಟು ಹುಕ್ಕುಂ ಮೇರೆಗೆ ಈ ಮೂಲಕ ತಿಳಿಯಪಡಿಸುತ್ತೇನೆ.

ಪುತ್ತೂರು, H Ganapathi Rao.
೩-೧೧ ೮೯ ಅರ್ಜಿದಾರಳ ಕಡೆ ವಕೀಲ್

ಫ್ರೆಂಚರ ಪ್ರಚಂಡ ಸೈನ್ಯಕ್ಕೆ ಜರ್ಮನಿಯು ಸರಿಸಾಟಿಯೇ?

ಸೋಲು ಖಂಡಿತವೆಂಬ ಭವಿಷ್ಯವಾಣಿ ಅಭೇದ್ಯ ಮೆಜಿನೋ ದುರ್ಗ

ಅಪೂರ್ವ ಸೈನಿಕ ಯೋಜನೆ—ಜರ್ಮನರ ಬರಿ ಅಟ್ಟಹಾಸ



ಫ್ರಾನ್ಸಿನ ಪ್ರಧಾನಮಂತ್ರಿ ಡಲಾಡಿಯವರು

ಪಶ್ಚಿಮ ರಣರಂಗದಲ್ಲಿ ಆರಂಭವಾಗಿರುವ ಯುದ್ಧವು ಶಾಂತಿ ಪ್ರಯತ್ನಗಳಿಂದ ಮಧ್ಯದಲ್ಲಿ ನಿಲ್ಲಿಸಲ್ಪಡದಿದ್ದರೆ ಅದರಲ್ಲಿ ಜರ್ಮನರು ಸೋಲುವುದು ಖಂಡಿತವೆಂಬಹಾಗೆ ಕಾಣುತ್ತದೆ. ಏಕೆಂದರೆ ಅಲ್ಲಿ ಸ್ಥಳವೂ ಕಾಲವೂ ಫ್ರೆಂಚರಿಗೆ ಬಹಳ ಅನುಕೂಲವಾಗಿರುವುದು. ಯುದ್ಧೋಪಕರಣಗಳ ಸಂಗ್ರಹವೂ ಸೈನಿಕ ಸಿದ್ಧತೆಯೂ, ಜರ್ಮನರ ಕಡೆಗಿಂತ ಫ್ರೆಂಚರ ಕಡೆಯಿಂದ ಉತ್ತಮರೀತಿಯಲ್ಲಿ ನಡೆದು ಇದೆ.

ಭವಿಷದ್ವಾಣಿ

ಮಿತ್ರ ಪಕ್ಷದವರು ಅವಸರ ಮಾಡದೆ ಸಮಯವು ಅನುಕೂಲವಾದ ಹಾಗೆ ಮುಂದರಿಯುವರಾದರೆ ವಿಜಯಶ್ರೀಯು ಅವರ ಕೊರಳಿಗೆ ಜಯಮಾಲಿಕೆಯನ್ನು ಹಾಕುವುದು ಖಂಡಿತವೆಂದು ಅಮೇರಿಕದ ಮಾಜಿ ಪ್ರೆಸಿಡೆಂಟರಾದ ಹೂವರರು ಭವಿಷದ್ವಾಣಿಯನ್ನು ಮಾಡಿದ್ದಾರೆ. ಪಶ್ಚಿಮರಣರಂಗದಲ್ಲಿ ಫ್ರೆಂಚರು ಸಾವಧಾನದಿಂದಲೇ ಯುದ್ಧಕಾರ್ಯವನ್ನು ಮುಂದರಿಸುತ್ತಿರುವರಾಗಿಯೂ ಹೇಳಬಹುದು. ಯುದ್ಧ ಆರಂಭವಾದಾಗ ಕೂಡ ಫ್ರೆಂಚ ಸೇನಾಧಿಕಾರಿಗಳು ಬಹಳ ಜಾಗರೂಕತೆ ತೆಗೆದುಕೊಂಡು ಮೆಲ್ಲಡಿಯನ್ನು ಇಡುತ್ತ ಮುಂದಕ್ಕೆ ಸೈನ್ಯ ತೆಗೆದುಕೊಂಡು ಹೋದರು. ಅವರು ಜರ್ಮನರ ಸೀಜ್‌ಫ್ರೀಡ್ ಕೋಟೆಗಳ ಪಂಕ್ತಿಯನ್ನು ಮುರಿಯುವ ಪ್ರಯತ್ನ ಮಾಡಿದರು. ಆದರೆ ಆ ಪ್ರಯತ್ನವೆಂಬುದು ಹಿಟ್ಲರನನ್ನ ಪೋಲಿಡಿಂನ ಕಡೆಯಿಂದ ಪಶ್ಚಿಮರಣರಂಗದ ಕಡೆಗೆ ಬರಮಾಡಿಸಲಿಕ್ಕಾಗಿ ಮಾತ್ರ ಇತ್ತು. ಪೋಲೆಂಡಿನ ಯುದ್ಧವು ಮುಗಿದು ಹಿಟ್ಲರನು ತನ್ನ ಸೇನೆಯನ್ನು ಪಶ್ಚಿಮದ ಕಡೆಗೆ ಸಾಗಿಸಿರುವದರಿಂದ ಅಷ್ಟರ ಮಟ್ಟಿಗೆ ಫ್ರೆಂಚರು ತಮ್ಮ ಉದ್ದೇಶ ಸಾಧನೆಯಲ್ಲಿ ಸಫಲರಾಗಿದ್ದಾರೆಂದೇ ಹೇಳಬಹುದು. ಈಗ ತಾವು ಹಿಂದಕ್ಕೆ ಸರಿಯುತ್ತ ಜರ್ಮನ ಸೈನ್ಯವು ತಮ್ಮ ಮೆಜಿನೋ ಕೋಟೆಗಳ ಪಂಕ್ತಿಯನ್ನು ಎದುರಿಸುವಂತೆ ಮಾಡಿರುವರು.

ಮೆಜಿನೋ ದುರ್ಗದ ಅಭೇದ್ಯತೆ

ಫ್ರೆಂಚರ ಮೆಜಿನೋ ದುರ್ಗವು ಜರ್ಮನರ ಸೀಜ್‌ಫ್ರೀಡ್ ದುರ್ಗದಂತೆ ಇರುವುದಿಲ್ಲ. ಅದು ಅಭೇದ್ಯವಾಗಿದೆ. ಜರ್ಮನರು ಆ ಕೋಟೆಗಳ ಸುಭದ್ರ ಗೋಡೆಗಳಿಗೆ ತಮ್ಮ ತಲೆ ಹೊಡಕೊಂಡು ಇರಬೇಕಾಗುವುದಷ್ಟೇ ಅಲ್ಲದೆ ಅವುಗಳನ್ನು ಮುರಿದು ಮುಂದಕ್ಕೆ ಕಾಲಿಡುವುದು ಅವರಿಗೆ ಕನಸಿನಲ್ಲಿ ಕೂಡ ಸಾಧ್ಯವಾಗಿರುವುದಿಲ್ಲ. ಫ್ರೆಂಚರು ತಾವಾಗಿ ಅಜೇಯರಾಗಿರುವರು ಮಾತ್ರವಲ್ಲದೆ, ಅವರ ಸಹಾಯಕ್ಕೆ ಬ್ರಿಟಿಷರ ಪ್ರಚಂಡ ಶಕ್ತಿಯೂ ಮೆಜಿನೋ ಲೈನಿನ ಹಿಂದೆ ಅವರಿಗೆ ಒದಗಿ ಬಂದಿದೆ.

ಫ್ರೆಂಚ ಸೈನ್ಯದ ಸುಧಾರಣೆ

ಈ ಕಾರ್ಯವು ಇತ್ತೀಚೆಗೆ ತಾನೆ ನಡೆದಿರುವುದು. ಆದಕಾರಣ ಆಧುನಿಕ ಯುದ್ಧಕ್ರಮಗಳಲ್ಲಿ ಫ್ರೆಂಚರು ಹಿಂದಿದ್ದಾರೆಂದು ಊಹಿಸಲಿಕ್ಕೆ ಅವಕಾಶವೇ ಇರುವುದಿಲ್ಲ. ಜರ್ಮನಿ, ಸ್ವಿಜರಲೆಂಡುಗಳಿಗೆ ಹೊಂದಿರುವ ಫ್ರೆಂಚರ ಗಡಿನಾಡು ಮತ್ತು ಕೋಟೆಕೊತ್ತಳಗಳಲ್ಲಿ ಈ ಸುಧಾರಣಾಕಾರ್ಯವು ವಿಶೇಷ ರೀತಿಯಿಂದ ಆಗಿದೆ. ಈ ಪ್ರದೇಶದಲ್ಲಿ ಪ್ರತಿ ನಾಲ್ವರು ಸೈನಿಕರಿಗೆ ಒಂದೊಂದರಂತೆ ಮೇಶಿನುಗನ್ನುಗಳು ಇರುವವು. ಫ್ರಾನ್ಸಿನ ಕಾಲಾಳು ಸೈನ್ಯದಲ್ಲಿ ಇರುವಷ್ಟು ಮೆಶಿನುಗನ್ನುಗಳು ಬೇರೆ ಯಾವ ರಾಷ್ಟ್ರದ ಕಾಲಾಳು ಸೈನ್ಯದಲ್ಲಿಯೂ ಇರುವುದಿಲ್ಲ. ಆಧುನಿಕ ಶಸ್ತ್ರೋಪಕರಣಗಳಿಂದ ಪೂರ್ಣ ಸುಸಜ್ಜಿತವಾಗಿರುವುದು. ಫ್ರೆಂಚರಲ್ಲಿ ಅದ್ಭುತ ಫಿರಂಗಿಗಳೂ ಕುದುರೆ ಸೈನ್ಯವೂ ಇರುವುದು.

ಹೊಸಬರ ಶಿಕ್ಷಣಕ್ರಮ

ಫ್ರೆಂಚರ ಈಗಿರುವ ಶಿಕ್ಷಣ ಕ್ರಮವು ಎಂಥ ಪ್ರಬಲ ಶಕ್ತಿಯನ್ನಾದರೂ ಮುರಿಯಲಿಕ್ಕೆ ಸಾಕಷ್ಟು ಇದೆ. ಅಲ್ಲದೆ ಅಲ್ಲಿ ಸೈನ್ಯಕ್ಕೆ ಸೇರದ ಇತರ ಪ್ರಾಯಸ್ಥರನ್ನು ಸಹ ಸೈನ್ಯಕ್ಕೆ ಸೇರಿಸುವ ಅನುಕೂಲವಿದೆ ಅಂಥ ಹೊಸಬರ ಶಿಕ್ಷಣಕ್ಕೆ ಉತ್ಕೃಷ್ಟ ಶಿಕ್ಷಣಾಲಯಗಳು ಕೂಡ ದೇಶ ತುಂಬ ಸ್ಥಾಪಿತವಾಗಿವೆ. ಈ ಶಾಲೆಗಳಿಂದ ಹೊರಬೀಳುವ ಹೊಸ ಸೈನಿಕರು ಹಳಬರಿಗೆ ಯಾವ ರೀತಿಯಲ್ಲೂ ಕಡಿಮೆ ಯಾದವರಲ್ಲ.

ಸೈನಿಕ ಯೋಜನೆಯ ವ್ಯವಸ್ಥೆ

ಫ್ರೆಂಚರಲ್ಲಿ ಕಾಲಾಳು, ಕುದುರೆ, ಫಿರಂಗಿ ಮತ್ತು ವಿಮಾನ ಸೇನಗಳಿವೆ. ನಾವಿಕ ಸೇನೆಯೂ ಇರುವದು. ಇವುಗಳ ಪ್ರತ್ಯಪ್ರತ್ಯೇಕ ದಳಪತಿಗಳೂ ಪ್ರಧಾನರೂ ಇದ್ದಾರೆ. ಅವರಿಗೆ ಹಂಚಿಹಾಕಿದ ಪ್ರತ್ಯಪ್ರತ್ಯೇಕ ಕೆಲಸ ಕಾರ್ಯಗಳಿವೆ. ಈ ಸೇನೆಗಳು ಶಾಂತಿಯ ಕಾಲದಲ್ಲಿ ಕೂಡ ಒಂದೆರಡು ಕಡೆಗಳಲ್ಲಿ ರಾಜ್ಯ ಊರಿರದೆ ಅಲ್ಲಲ್ಲಿ ಹಂಚಿಹೋಗಿರುವವು. ಹೀಗಿದ್ದರೂ ಸಹ ಈ ಬೇರೆ ಬೇರೆ ಸೇನೆಗಳ ಕಾರ್ಯಕಲಾಪಗಳಲ್ಲಿ ಪರಸ್ಪರ ಸಂಘರ್ಷ ತಿಕ್ಕಾಟಗಳುಂಟಾಗದೆ ಅವುಗಳು ನಯಮಾರ್ಗದಲ್ಲಿ ನಡೆಯಲನುಕೂಲವಾಗುವಂತೆ ಫ್ರಾನ್ಸಿನಲ್ಲಿ ೧೯೩೨, ೩೪, ೧೯೩೬ರಲ್ಲಿ ಕೂಡ ಅಲ್ಲಿ ಸೈನಿಕ ಯೋಜನೆಯ ವ್ಯವಸ್ಥೆಗಳಾಗಿ ಈಗ ಅದರಲ್ಲಿ ಯಾರೂ ಯಾವ ಕುಂದು ಕೊರತೆಯನ್ನು ಕಾಣದಂತಾಗಿದೆ.

ಜರ್ಮನಿಯ ಪ್ರಚಾರಮಂತ್ರಿ ಗೊಬೆಲ್ಸನು

ಜರ್ಮನರ ಅಟ್ಟಹಾಸ

ಆದ್ದರಿಂದ ಜರ್ಮನರು ಫ್ರೆಂಚರನ್ನು ಎದುರಿಸುವುದೆಂಬುದು ಕೇವಲ ಅವರ ಅಟ್ಟಹಾಸ ಮಾತ್ರವಾಗಿರುವುದು. ಸೂರ್ಯನ ಪ್ರಕಾಶದಲ್ಲಿ ಮಿಣುಕು ಹುಳಗಳು ಮಿಣುಕಿ ತಾವೇ ಜಗತ್ತಿಗೆ ಪ್ರಕಾಶ ಕೊಡುವವುಗಳೆಂದು ಭ್ರಮಿಸುವಂತೆ ಜರ್ಮನರು ಫ್ರೆಂಚರನ್ನು ಎದುರಿಸಿ ಅವರನ್ನು ಸೋಲಿಸುವ ಕನಸ ಕಾಣುತಿದ್ದಾರೆ.

HALFTONE & LINE
BLOCK MAKING
UNDERTAKEN
Sharada Press,
MANGALORE

SAVING & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

The Canara Industrial & Banking Syndicate Ltd.

(*Incorporated in British India*)

ESTD) (1925

Head Office: UDIPI (S. India)



ಜಿಲ್ಲಾ ಸಮಾಚಾರ

ಮಂಗಳೂರು

ನಗರ ಸಭೆ:—ಕಳೆದ ವಾರ ಮಂಗಳೂರು ನಗರ ಸಭೆಯು ಸೇರಿತು.

ಸಾರ್ವಜನಿಕ ಸಭೆ.—ಕಳೆದ ವಾರ ಶ್ರೀ ಬಿ. ವಿ ಬಾಳಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಸೇರಿ ಕಾಂಗ್ರೆಸಿನ ಪ್ರತ್ಯಕ ಧೋರಣೆಯ ವಿಷಯ ಶ್ರೀ ಜಿನರಾಜ ಹೆಗ್ಡೆ ಮೊದಲಾದವರು ಭಾಷಣವಿತ್ತರು

ಯಕ್ಷಗಾನ:—ಕದಿರೆ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಂಘದವರು ಇದೇ ತಾ' ೧೧ನೇ ಶನಿವಾರ ರಾತ್ರಿ ಘಂಟೆ ೯ಕ್ಕೆ ಸರಿಯಾಗಿ ಕಲ್ಯಾಣಭವನದಲ್ಲಿ 'ದೀಪಾವಳಿ' ಹಬ್ಬದ ಸಲುವಾಗಿ ಯಕ್ಷಗಾನ ಕಾಲಕ್ಷೇಪ ನಡೆಸಲಿರುವುದು ಆರಂಭದಲ್ಲಿ ಶ್ರೀಯುತರುಗಳಾದ ಕೆ ಕೃಷ್ಣರಾವ್, ಬಿ ಎ ಮತ್ತು ವಿದ್ವಾನ್ ಯಂ ಆರ್ ಶಾಸ್ತ್ರಿಗಳು ಯಕ್ಷಗಾನ ಅಭಿವೃದ್ಧಿಯ ವಿಷಯ ಭಾಷಣ ಮಾಡಲಿರುವರು

ಭಗಿನಿ ಸಮಾಜ:—ಮಂಗಳೂರು ಭಗಿನಿ ಸಮಾಜದ ವಾರ್ಷಿಕ ಮಹಾ ಸಭೆಯು ಸೋನ್ಸ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು ಕಾರ್ಯದರ್ಶಿಯಿಂದ ವರದಿ ವಾಚನವಾದ ಬಳಿಕ ಶ್ರೀಮತಿ ಇ ಸೋನ್ಸ್—ಅಧ್ಯಕ್ಷೆ ಶ್ರೀಮತಿಗಳಾದ ಲೀಲಾಬಾಯಿ ಪಡುಬಿದ್ರೆ ಮತ್ತು ಲೀಲಾಬಾಯಿ ಏಕಾಂಬರರಾವ್—ಕಾರ್ಯದರ್ಶಿಗಳು ಆಗಿ ಚುನಾಯಿತರಾದರು ಕಾರ್ಯಕಾರಿ ಮಂಡಳಿಯ ರಚನೆಯ ಬಳಿಕ ಸಂಗೀತ—ನೃತ್ಯಗಳಿಂದ ಸಮಾಪ್ತವಾಯಿತು

ಅಖಿಲ ಕರ್ನಾಟಕ ಮಹಿಳಾ ಪರಿಷತ್ತು:—ಈ ಪರಿಷತ್ತು ಕಳೆದ ಆದಿತ್ಯವಾರ ಮಂಗಳೂರಿನ ನೇಶನಲ್ ಗರ್ಲ್ಸ್ ಶಾಲೆಯಲ್ಲಿ ಶ್ರೀಮತಿ ಎಚ್ ಫಿ ಪಿ ರೊಡ್ರಿಗಸರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಮತಿ ಇ ಸೋನ್ಸ್‌ರವರು ಪ್ರತಿನಿಧಿಗಳನ್ನು ಸ್ವಾಗತೀಕರಿಸಿದರು. ಜಗಳ ಬಗೆಹರಿಸಲು ಯುದ್ಧ ಆರಂಭಿಸುವ ಹವ್ಯಾಸವನ್ನು ಖಂಡಿಸಿ, ಅಹಿಂಸೆಯನ್ನು ಪುಷ್ಟೀಕರಿಸಿ, ಹರಿಜನ ದೇವಳ ಪ್ರವೇಶವನ್ನು ಅನುಮೋದಿಸಿ, ಸ್ವದೇಶಿ ಮತ್ತು ನಿರಕ್ಷರತಾ ನಿವಾರಣೆಯನ್ನು ಸಮರ್ಥಿಸಿ ಪಾನನಿಷೇಧವನ್ನು ಬಲವಾಗಿ ಅನುಮೋದಿಸಿ, ವರದಕ್ಷಿಣೆ ಮತ್ತು ಪರದಾ ಪದ್ಧತಿಗಳನ್ನು ಟೀಕಿಸಿ ಸ್ತ್ರೀಯರಿಗೆ ಸಮಾನ ಹಕ್ಕಿರಬೇಕೆಂದು ಸಾರುವ ಹಲವು ಠರಾವುಗಳು ಪಾಸಾದುವು.

ಹರಿಜನ ಸೇವಕ ಸಂಘ:—ಇದರ ಸಭೆಯೊಂದು ಸಂಘದ ಆಫೀಸಿನಲ್ಲಿ ಸಂಘದ ಅಧ್ಯಕ್ಷರಾದ ಡಾ। ಆಡಪರ ಅಧ್ಯಕ್ಷತೆಯಲ್ಲಿ ತಾ. ೬ರಂದು ಜರುಗಿತು. ಮುಂದಿನ ವರ್ಷದ ಸಂಘದ ಅಧ್ಯಕ್ಷರಾಗಿ ಡಾ। ಆಡಪರೂ, ಉಪಾಧ್ಯಕ್ಷರಾಗಿ ಶ್ರೀಗಳಾದ ಎಂ. ಆರ್. ಪೂಂಜ ಮತ್ತು ಎಂ. ಅಣ್ಣಪ್ಪರವರೂ, ಜನರಲ್ ಕಾರ್ಯದರ್ಶಿಗಳಾಗಿ ಶ್ರೀ ಎಂ. ಎಸ್. ಚೌಟರೂ ಚುನಾಯಿತರಾದರು. ಕಾರ್ಯಕಾರಿ ಮಂಡಳಿಯ ರಚನೆಯೂ ಆಯಿತು.

ಅಳಿಯ ಸಂತಾನ ಪರಿಷತ್ತು:—ಅಳಿಯ ಸಂತಾನ ಸಮಾಜ ಸುಧಾರಣಾ ಪರಿಷತ್ತು ತಾ. ೫ನೇ ಆದಿತ್ಯವಾರ ಸ್ಥಳೀಯ ಬಂಟರ ಹಾಸ್ಟೆಲಿನಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ, ಎಮ್ ಎಲ್ ಎ (ಕೇಂದ್ರ) ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕೆ. ಕೆ. ಶೆಟ್ಟರು ಪರಿಷತ್ತು ಕಳೆದ ನಾಲ್ಕು ತಿಂಗಳಲ್ಲಿ ನಡೆಸಿದ ಕಾರ್ಯಗಳನ್ನು ಸಭೆಯ ಮುಂದಿಟ್ಟರು. ಪರಿಷತ್ತಿನ ಉದ್ದೇಶದ ವಿಚಾರವಾಗಿ ಅಧ್ಯಕ್ಷರು ಮಾತನಾಡಿದ ಬಳಿಕ, ಅಳಿಯ ಸಂತಾನ ಬಿಲ್ಲಿನ ನಕಲು ಮಂಜೂರಾತಿ ಪಡೆಯಿತು.

ಇಂಟರ್ ಕಾಲೇಜ್ ಡಿಬೇಟ್:—ಇಂಟರ್ ಕಾಲೇಜು ತಾರ್ಕಿಕ ಸಭೆಯು ಗವರ್ನಮೆಂಟ್ ಕಾಲೇಜಿನಲ್ಲಿ ತಾ. ೩ರಂದು ಶ್ರೀ ಪಿ. ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು "ಕಾಯಿದೆ ಮಂಡಲಗಳ ಕಾಯಿದೆಗಳ ಮೂಲಕ ಸಮಾಜ ಸುಧಾರಣೆ ತರಲು ಸಾಧ್ಯವಿಲ್ಲೆಂಬ" ಠರಾವಿನ ಪರವಾಗಿ ಅಲೋಶಿಯಸ್ ಕಾಲೇಜಿನವರೂ, ವಿರೋಧವಾಗಿ ಗವರ್ನಮೆಂಟ್ ಕಾಲೇಜಿನವರೂ ಚರ್ಚೆ ನಡೆಸಿದರು. ಠರಾವು ಪಾಸಾಯಿತು

ರೆವರೆಂಡ್ ಫಾದರ್ ಟಿ ಗೊನ್ಸಾಲ್ವೀಸ್:—ಸೈಂಟ್ ಅಲೋಶಿಯಸ್ ಕಾಲೇಜಿನ ಪ್ರಿನ್ಸಿಪಾಲರಾದ ರೆ ಫಾ ಟಿ ಗೋನ್ಸಾಲ್ವೀಸರವರು—ಬೆಂಗಳೂರಿನ ಸೈಂಟ್ ಜೋಸೆಫ್ ಕಾಲೇಜಿನ ಪ್ರಿನ್ಸಿಪಾಲರಾದ ರೆ ಫಾ ಎ. ಅಂಬ್ರುಸಿಯವರು ರಜೆ ಪಡೆದುಕೊಂಡುದರಿಂದ ಅವರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟಿರುವರು.

ಕಾಸರಗೋಡು

ಇಲ್ಲಿ ಎರಡು ಮೂರು ದಿವಸಗಳಿಂದ ಯಕ್ಷಗಾನದಲ್ಲಿ ಹೆಸರುವಾಸಿಯಾದ ತೆಕ್ಕಟೆ ಬಾಬಣ್ಣ ದಾನುಭಾಗರು ಒಂದು ರಾಮಾಯಣವನ್ನು ಓದಿದರು ಸಭೆಗೆ ತುಂಬಾ ಊರ ಪರಜನ ನೆರೆದಿದ್ದರು ತೆಕ್ಕಟೆ ಬಾಬಣ್ಣ ದ್ಯಾನುಭಾಗರು ಇಲ್ಲಿಂದ ಪುತ್ತೂರು, ಹೊಸದುರ್ಗ ಅತ್ತಕಡೆ ಹೋಗುವರು ಅವರಿಗೆ ಎಲ್ಲರೂ ಪ್ರೋತ್ಸಾಹ ಕೊಡುವುದು ಯಥಾಯೋಗ್ಯವಾದದ್ದು

ಕರ್ನಾಟಕ

ಮೈಸೂರು

ಸತ್ಯಾಗ್ರಹ:—ಮೈಸೂರು ಸತ್ಯಾಗ್ರಹವು ಇನ್ನೂ ಹಾಗೆಯೇ ನಡೆದಿದೆ ಒಮ್ಮೆ ಬಿಡುಗಡೆ ಹೊಂದಿದ ಸತ್ಯಾಗ್ರಹಿಗಳನ್ನು ಪೋಲೀಸರು ಪುನಃ ಬಂಧಿಸುತ್ತಿರುವರು

ಈಗ ಜೇಲಿನಲ್ಲಿರುವ ಒಟ್ಟು ಸತ್ಯಾಗ್ರಹಿಗಳ ಸಂಖ್ಯೆ ಎರಡು ಸಾವಿರಕ್ಕೆ ಮಿಕ್ಕಿದೆಯೆಂದು ತಿಳಿಯುತ್ತದೆ.

ಮೈಸೂರ ಕಾಂಗ್ರೆಸಿನ ೨೨ನೇ ಸರ್ವಾಧಿಕಾರಿಗಳಾದ ಶ್ರೀಮಾನ್ ಭೀಮಪ್ಪನಾಯಕರು ಚಿತ್ರದುರ್ಗದಲ್ಲಿ ಸೆರೆಹಿಡಿಯಲ್ಪಟ್ಟು ಕ್ರಿಮಿನಲ್ ಪ್ರೊಸೀಜರ ಕೋರ್ಟಿನ ೧೦೭ ಕಲಮಿನನ್ವಯ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಲ್ಪಟ್ಟರೆಂದು ಇಲ್ಲಿ ಸುದ್ದಿ ಬಂದಿದೆ.

ಮುಂಬಯಿ—ದ ಬಾರ್ಕೂರು ಬಿಲ್ಲವರ ಚಾರಿಟಿ ಸಂಘದ ೨೨ನೇ ವಾರ್ಷಿಕ ಮಹಾಸಮಾರಂಭವು ಇದೇ ಬರುವ ನವಂಬರ ತಿಂಗಳ ತಾರೀಕು ೧೯ನೇ ಆದಿತ್ಯವಾರ ದಿವಸ ಅಪರಾಹ್ನ ಸರಿ ಘಂಟೆ ೩ಕ್ಕೆ ಸರ್ ಕಾವಸ್ಜಿ ಜಹಂಗೀರ್ ಹೋಲಿನಲ್ಲಿ ಶ್ರೀಯುತ ಜೆ. ಕೆ. ಕೆಮ್ ಅಲ್ವ, ಬಿ. ಎ, ಎಲ್ ಎಲ್, ಬಿ, ಎಡ್ವಕೇಟ್, ಇವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಜರಗಲಿರುವುದರಿಂದ, ಸಂಬಂಧಪಟ್ಟವರೆಲ್ಲರೂ ಬಂದು ಸಹಕರಿಸಬೇಕಾಗಿ ಸಂಘದ ಮಾನಾರ್ಥ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಉಡುಪಿ

ಆತ್ಮಹತ್ಯೆ:—ಕೆನರಾ ಬ್ಯಾಂಕಿಂಗ್ ಕೊರ್ಪರೇಶನಿನ ಡೈರೆಕ್ಟರರೂ, ಸಾರಸ್ವತ ಸಮಾಜದ ಶ್ರೀಮಂತರೂ ಆಗಿದ್ದ ಶ್ರೀ। ಕಾರ್ನಾಡು ರಾಮರಾಯರು ತಾ. ೧ರಂದು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವವಾಗಿ ತಿಳಿಯುತ್ತದೆ

ಮೈಸೂರು ಮಹಾರಾಜರ ಬಹುಮಾನ:—ಸ್ಥಳೀಯ ಸಂಸ್ಕೃತ ಪಾಠಶಾಲೆಯ ಸಂಶೋಧನಾ ವಿದ್ಯಾರ್ಥಿ ಶ್ರೀ ಕೆ. ರಾಮಕೃಷ್ಣ ತಂತ್ರಿಯವರಿಗೆ ಮೈಸೂರು ವಿದ್ವತ್ ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ಪಾಸಾದುದರಿಂದ ಮಹಾರಾಜರು ೩೦೦ ರೂ ಬಹುಮಾನ ಮತ್ತು ಮುಂಗೈ ಸರಪಣಿ ಕೊಟ್ಟಿರುವವಾಗಿ ತಿಳಿಯುತ್ತದೆ.

ವಿದ್ಯಾವಸ್ತು ಪ್ರದರ್ಶನ:—ಜಿಲ್ಲಾ ಟೀಚರ್ಸ್ ಗಿಲ್ಡಿನ ವತಿಯಿಂದ ವಿದ್ಯಾವಸ್ತು ಪ್ರದರ್ಶನವೊಂದನ್ನು ಪರ್ಯಾಯದ ವೇಳೆ (ಜನವರಿ) ಜರಗಿಸುವ ವ್ಯವಸ್ಥೆ ಮಾಡಲಾಗಿದೆ. ಈ ಪ್ರದರ್ಶನಕ್ಕೆ ಮೈಸೂರು ಕಬ್ಬಿಣದ ಕಾರ್ಖಾನೆಯ ಸಾಮಾನುಗಳೂ ಕಾಗದಗಳೂ ಪ್ರದರ್ಶನಕ್ಕೆ ಬರುವವೆಂದು ತಿಳಿದುಬರುತ್ತದೆ

ಲಕ್ಷದೀಪೋತ್ಸವ:—ತಾ. ೨೩-೧೧-೩೯ರಿಂದ ನಾಲ್ಕು ದಿನ ರಾತ್ರಿ ವಿಜೃಂಭಣೆಯಿಂದ ಜರಗಲಿದೆ ಈಗಲೇ ತಕ್ಕ ವ್ಯವಸ್ಥೆಗೆ ಪ್ರಾರಂಭವಾಗಿದೆ. ಈ ಉತ್ಸವವು ನವೀನ ರೀತಿಯಿಂದ ಚಿತ್ತಾಕರ್ಷಕವಾಗಿ ಧಾರ್ಮಿಕ ಮತ್ತು ಲೌಕಿಕರಿಗೆ ಮನಸೊಪ್ಪುವ ರೀತಿಯಲ್ಲಿ ಆಚರಿಸಲ್ಪಡಲಿರುವುದು ಇದಕ್ಕೆ ಊರು ಪರವೂರುಗಳಿಂದ ಯಥೇಷ್ಟ ಯಾತ್ರಿಕರು ಬರುವರೆಂದು ನಿರೀಕ್ಷಿಸಲಾಗಿದೆ. ಪರವೂರವರಿಗೆ ಉಳಕೊಳ್ಳಲಿಕ್ಕೆ ಸ್ಥಳದ ಅನುಕೂಲತೆಯನ್ನು ಪರ್ಯಾಯಮಠದ ಕಡೆಯಿಂದ ಒದಗಿಸುವ ವ್ಯವಸ್ಥೆ ನಡೆದಿದೆ

ಸಾದರ-ಸ್ವೀಕಾರ

೧ ಶ್ರೀ ಬಾಹುಬಲಿ ಗೋಮಟೇಶ್ವರ ಚರಿತ್ರೆ

ಲೇಖಕರು ಶ್ರೀ। ಮಂಜೇಶ್ವರ ಗೋವಿಂದ ಪೈಗಳು ಪ್ರಕಾಶಕೆ ಶ್ರೀಮತಿ ದೇಜಮ್ಮನವರು ಪಣಪಿಲ ಅರಮನೆ ಕಾರ್ಕಳ

೨ ಸ್ವಾರ್ಥಪ್ರಕಾಶ (ಅಧ್ಯಾತ್ಮಗ್ರಂಥ)

ಸಂಸ್ಕರಿಸಿದವರು ಪೈ ಸುಬ್ಬರಾಯರು ಅಧ್ಯಾತ್ಮಕಾರ್ಯಾಲಯ, ಹೊಳೆ ನರಸೀಪುರ.

೩ ಜಪಯೋಗಾಭ್ಯಾಸ

ಲೇಖಕರು: ಶ್ರೀ। ರಾಘವೇಂದ್ರ ಪ್ರಭುಗಳು ಪ್ರಕಾಶಕರು ಶ್ರೀ. ಬಳ್ಕುಂಜೆ ಸುಬ್ಬರಾಯರು, ಮೂಡಬಿದ್ರೆ.

೪ ಶ್ರೀ ಕೃಷ್ಣನು ತೋರಿದ ದಾರಿ

ಮೂಲ ಲೇಖಕರು: ಶ್ರೀ। ಚಕ್ರವರ್ತಿ ರಾಜಗೋಪಾಲಾಚಾರ್ಯರು, ಅನುವಾದಕರು: ಕೆ. ಸಂಪದ್ಗಿರಿರಾಯರು. ಪ್ರಕಾಶಕರು ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು ನಗರ.

೫ ಉಪನಿಷತ್ತಿನ ಕತೆಗಳು

ಮೂಲ ಲೇಖಕರು ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರ್ಯರು, ಅನುವಾದಕರು, ಶ್ರೀ. ಕೆ. ಸಂಪದ್ಗಿರಿರಾಯರು. ಪ್ರಕಾಶಕರು: ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು ನಗರ.

—ವಿಮರ್ಶೆಯ ಭಾವಕಾಶ

ಸಹಕಾರಿ ತರಬೇತು ಕ್ಲಾಸುಗಳು

ಸಹಕಾರ ಸಂಘಗಳ ಮೆಂಬರರಿಗೆ ಟ್ರೈನಿಂಗ್ ಕ್ಲಾಸುಗಳು ಕಾರ್ಕಳ, ಕೆಮ್ಮಣ್ಣು, ಬೈರಂಪಳ್ಳಿ ಕೇಂದ್ರಗಳಲ್ಲಿ ಜರಗಿದುವು. ಶ್ರೀಗಳಾದ ರಾಮರಾಯ ಮಲ್ಯ, ಕೋಟೆಕಾರ್ ಸುಬ್ಬಣ್ಣಯ್ಯ, ಸುಪರ್‌ವೈಸರ್ ಮಾಧವಯ್ಯ, ಇವರು ಸಹಕಾರ ತತ್ವಗಳ ಕುರಿತು ಉಪನ್ಯಾಸಗಳನ್ನಿತ್ತರು. ಕಾರ್ಕಳಕ್ಕೆ ಶ್ರೀ ಕೆ. ಜೆ. ಬಲ್ಲಾಳರೂ, ಶ್ರೀ ಕೆ. ಆರ್. ಶೆಣೈಯವರೂ ಒಂದು ಭಾಷಣ ಉಪನ್ಯಾಸವಿತ್ತರು.

ಕಾರ್ಕಳ

ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ನವಂಬರ ತಿಂಗಳ ಸಭೆಯು ತಾ ನಾಲ್ಕರಂದು ಶ್ರೀ ವೆಂಕಟರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಮಾನ್ಯ ಡಿಪ್ಟಿ ಇನ್ಸಪೆಕ್ಟರರು ಗೈರಹಾಜರಾಗಿದ್ದುದರಿಂದ ಕೇಂದ್ರ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ ನಕಿರಲಾರುಗಳ ಮತ್ತು ವರದಿವಾಚನವು ಮುಗಿದ ತರುವಾಯ ಶ್ರೀ. ಕೆ. ಭಾಸ್ಕರರಾಯರು ಹಳ್ಳಿಯ ಆರೋಗ್ಯದ ಕುರಿತು ಭಾಷಣವನ್ನಿತ್ತರು ಜೊತೆಗೆ 'ಕೇಂದ್ರಶಿಕ್ಷಕ' ಎಂಬ ಹಸ್ತಲಿಖಿತ ಮಾಸಪತ್ರಿಕೆಯ ಉದ್ಘಾಟನೆಯೂ ಆಯಿತು.

ಕುಂದಾಪುರ

ಕನ್ನಡ ವಿದ್ವನ್ಮಣಿಗಳು:—ದಸರಾ ಸಂಬಂಧ ದ. ಕ. ಜಿಲ್ಲೆಗೆ ಆಗಮಿಸಿರುವ ಕನ್ನಡ ವಿದ್ವನ್ಮಣಿಗಳಾದ ಶ್ರೀ ದ. ರಾ. ಬೇಂದ್ರೆ, ಶ್ರೀ. ವಿ. ಸೀತಾರಾಮಯ್ಯ, ಪ್ರೊ ವಿ ಕೃ. ಗೋಕಾಕ ಶ್ರೀ ಜಿ ಬಿ ಜೋಶಿ, ಶ್ರೀ. ಕೆ ವಿ. ರಾಘವಾಚಾರ್ ಇವರು ಇಲ್ಲಿನ ಕರ್ನಾಟಕ ಸಂಘದಲ್ಲಿ ಆಕರ್ಷಕ ಭಾಷಣ ಮಾಡಿದರು.

ಪುತ್ತೂರು

ನಿಧನ:—ಕಳೆದ ತಾ. ೨೭ರಂದು ಜಖಂ ಹೊಂದಿದ ಬೆಳ್ಳಿಪಾಡಿ ಕುಟುಂಬದ ವೆಂಕಪ್ಪ ಆಳ್ವರೆಂಬವರು ಆಸ್ಪತ್ರೆಯಲ್ಲಿ ತಾ ೨೭ರಂದು ಮೃತಿ ಹೊಂದಿರುವರಾಗಿ ತಿಳಿದುಬರುತ್ತದೆ

ಕಡಂದಲೆ:—ತಾ ೪—೧೧—೩೯ನೇ ಮಧ್ಯಾಹ್ನ ಘಂಟೆ ೧೨ಕ್ಕೆ ಕಡಂದಲೆ ಪಂಚಾಯತ ಬೋರ್ಡಿನವರು ಗ್ರಾಮದ ಯುವಕ ಸಂಘದವರ ಉದಾರಾಶ್ರಯದಿಂದ ದಿವಂಗತ "ಕಡಂದಲೆಗುತ್ತು ಶ್ರೀ ಉಮಾಪತಿ ರಾಯಿಯವರ ಸ್ಮಾರಕಾರ್ಥವಾಗಿ ಧರ್ಮಾರ್ಥ ವಾಚನಾಲಯ"ದ ಪ್ರವೇಶೋತ್ಸವ ಸಮಾರಂಭವು ಅಸಿಸ್ಟಾಂಟ್ ಪಂಚಾಯತ್ ಆಫೀಸರರಾದ ಶ್ರೀ ಕೆ. ಶೀನ ಶೆಟ್ಟಿ, ಬಿ. ಎ.ಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಕಾಲೋಚಿತ ಅಧ್ಯಕ್ಷರ ಭಾಷಣವಾಗಿ ಮುಹೂರ್ತಕ್ಕೆ ತಕ್ಕಂತೆ ಅಧ್ಯಕ್ಷರಿಂದ "ಶ್ರೀ ಉಮಾಪತಿ ವಾಚನಾಲಯ" ಎಂಬ ಹೆಸರಿಂದ ಉದ್ಘಾಟನಾ ಸಮಾರಂಭವನ್ನು ನೆರವೇರಿ, ಶಾಲಾ ಮಕ್ಕಳಿಗೂ, ಸಭಿಕರಿಗೂ ಫಲಾಹಾರಾದಿ ಸತ್ಕಾರಗಳಿಂದ ಯೋಗ್ಯರೀತಿಯಲ್ಲಿ ನೆರವೇರಿಸಲ್ಪಟ್ಟಿತು.

ಕೊಡಗು

ಫ್ರೇಜರ್‌ಪೇಟೆ:—ಕೊಡಗು ಡಿಸ್ಟ್ರಿಕ್ಟ್ ಫ್ರೇಜರ್‌ಪೇಟೆಯಲ್ಲಿ ತಾರೀಕು ೩೦—೧೧—೩೯ರಲ್ಲು ನಡಿಯುವ ಗಣಪತಿ ರಥೋತ್ಸವದ ಸಂದರ್ಭದಲ್ಲಿ ತಾ. ೧—೧೨—೩೯ರಿಂದ ತಾರೀಕು ೩—೧೨—೩೯ರ ವರೆಗೆ ದನಗಳ ಪ್ರದರ್ಶನವು ನಡಿಸಲ್ಪಡುವುದು.

ಯುದ್ಧವಾರ್ತೆ!



[illegible] ಫ್ರೆಂಚರು ಮುಂದೊತ್ತುವರು!

ಯೂರೋಪಿನ ಶಾಂತಿಸಾಧನೆ!

ರಶ್ಯವು ಶಾಂತಿಯಲ್ಲಿಲ್ಲವೆ?

ಉತ್ತರ ಸಾಗರದಲ್ಲಿ ವಿಮಾನಯುದ್ಧ!

ಜರ್ಮನ್, ರಶ್ಯಗಳ ಸ್ನೇಹವು ಬಲಿ[illegible]ಯಂತೆ, ರಶ್ಯವು ಜರ್ಮನಿಯನ್ನು ಹಿಮ್ಮೆಟ್ಟಿಸಲೋಸ್ಕರ ಬಲವಾಗುತ್ತಿರುವುದು ಕಂಡಿರುತ್ತದೆ. ಯೂರೋಪಿನ ಇಂದಿನ ರಾಜಕೀಯ ಪರಿಸ್ಥಿತಿಗಳನ್ನು ಪರೀಕ್ಷಿಸುವುದರಿಂದ, ಮುಂದಕ್ಕೆ ಹಿಟ್ಲರನು ತಗ್ಗಿ ಸ್ಟಾಲಿನನೇ ಮೇಲಕ್ಕೆ ಬರಬಹುದೇ ಎಂಬ ಸಂದೇಹ ತಲೆ ಎತ್ತುತ್ತಿದೆ.

ರಶ್ಯದ ಮಂತ್ರಿ ಮೊಲೊಟೋವನು ಮೊನ್ನೆ ಮಾಡಿದ ಭಾಷಣವೊಂದರಲ್ಲಿ ಹಿಟ್ಲರನಿಗೆ ಅವಶ್ಯ ಬೇಕಾಗಿರುವ ಸೈನ್ಯ ಸಹಾಯವನ್ನು ಕೊಡುವ ಯಾವ ಸೂಚನೆಯನ್ನೂ ಪ್ರಕಟಿಸಿರುವುದಿಲ್ಲ. ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿ ರಶ್ಯಕ್ಕೆ ಸ್ವಾತಂತ್ರ್ಯವಿರಬೇಕೆಂಬುದು ರಶ್ಯದ ಧ್ಯೇಯವೆಂದು ಸಾರಿದ್ದಾನೆ.

ಯೂರೋಪಿನ ಯುದ್ಧದ ವಿಷಯದಲ್ಲಿ ಫ್ರಾನ್ಸ್ ಇಂಗ್ಲೆಂಡುಗಳು ವಹಿಸಿದ ಪಾತ್ರವು ತಪ್ಪಾಯಿತೆಂದು ರಶ್ಯದ ಆರೋಪವಾಗಿದೆ. ಜರ್ಮನಿಯನ್ನು ಹದಮಾಡಿ, ಇನ್ನೊಂದು ವರ್ಸೇಲಿ ಒಪ್ಪಂದವನ್ನು ಮಾಡುವುದು ಉದ್ದೇಶವೇ ಎಂದು ಮೊಲೊಟೋವನು ಪ್ರಶ್ನಿಸಿದ್ದಾನೆ.

ಮಿ. ಚೆಂಬರ್ಲೇನರು ಪಾರ್ಲಿಮೆಂಟ್ ಸಭೆಯಲ್ಲಿ ಮಿತ್ರರಾಷ್ಟ್ರಗಳ ಯುದ್ಧ ಉದ್ದೇಶವು ಶಾಂತಿರಕ್ಷಣೆಯೆಂದು ಪುನಃ ಸಾರಿದರು. ಆದರೆ ಹಿಟ್ಲರ್ ಶಾಹಿಯನ್ನು ಎದರಿಸುವುದೇ ತಮ್ಮ ಧೋರಣೆಯೆಂದು ಚೆಂಬರ್ಲೇನರು ಸಾರಿ, ಜಗದ ಸಹಕಾರವನ್ನು ಅಪೇಕ್ಷಿಸುವುದಕ್ಕಿಂತ, ಸಾಮ್ರಾಜ್ಯ ಶಾಹೀ ಧೋರಣೆಯನ್ನು ಸ್ವತಃ ತಾವೇ ಬಿಟ್ಟುಕೊಟ್ಟಿರುವೆವೆಂದು ಹೇಳಿ, ತಮ್ಮ ಹೇಳಿಕೆಯನ್ನು ಕಾರ್ಯತಃ ಮಾಡಿತೋರಿಸುವುದೇ ಹೆಚ್ಚು ಪರಿಣಾಮವಾದೀತು.

ರಣರಂಗ

ಜರ್ಮನರು ಫ್ರೆಂಚ್ ಸೈನ್ಯವನ್ನು ಭೇದಿಸಿ ಮೆಜಿನೋ ದುರ್ಗದ ಬಳಿ ಬಂದಿರುವರಾಗಿ ಜರ್ಮನರ ಸುದ್ದಿ.

ಜರ್ಮನರು ಇಂಗ್ಲೆಂಡಿನ ಮೇಲೆ ಅನೇಕ ಸಲ ಧಾಳಿ ಮಾಡುವ ಹಂಚಿಕೆ ನಡೆಸಿದರೆಂದು ತಿಳಿದುಬರುತ್ತದೆ.

ವಿಪರೀತ ಮಳೆ ಬಂದುದರಿಂದ ರಣರಭಸವು ಸ್ವಲ್ಪ ಇಳಿದಿದೆ. ಪ್ರವಾಹದ ಹೊಡೆತದಿಂದ ಸಿಜ್‌ಫ್ರಿಡ್ ದುರ್ಗದ ಒಂದು ಭಾಗವು ಕಳಚಿ ಬಿದ್ದಿರುವುದಾಗಿಯೂ ತಿಳಿದುಬರುತ್ತದೆ.

ಕಾಯರನ್ ಮೋನಾ ಎಂಬ ಬ್ರಿಟಿಷ್ ಹಡಗವು ಜಲಸಮಾಧಿ ಹೊಂದಿತು.

ಮಲಬಾರ್, ಸೆಂಟನಿಡಾನ್ ಮತ್ತು ಲಿಂಗ್ಸ್ ಈ ಮೂರು ಬ್ರಿಟಿಷ್ ಹಡಗುಗಳೂ ಜರ್ಮನ್ ಜಲಾಂತರ್ಯಾನಿ ನಾವೆಗಳಿಂದ ಮುಳುಗಿಸಲ್ಪಟ್ಟವು.

ಜರ್ಮನ್ ವೈಮಾನಿಕರು ಮಿತ್ರರಾಷ್ಟ್ರಗಳ ನಾಲ್ಕು ವಿಮಾನಗಳನ್ನು ಪುಡಿಮಾಡಿರುವರಾಗಿ ಹೇಳಿದರು. ಅನೇಕ ಫ್ರೆಂಚ ವಿಮಾನಗಳು ಜರ್ಮನ್ ದುರ್ಗದ ಮೇಲೆ ಹಾರಿ, ಶತ್ರುಗಳ ವ್ಯೂಹರಚನೆಯ [illegible]ಗಟ್ಟನ್ನು ಸಂಗ್ರಹಿಸಿರುವುದಾಗಿ ತಿಳಿದುಬರುತ್ತದೆ.

ಪೋಲೆಂಡಿನಲ್ಲಿ

ಪೋಲೆಂಡನ್ನು ಆಕ್ರಮಿಸಿಕೊಂಡು ರಶ್ಯವು ಯುಕ್ರೆನಿನಲ್ಲಿ ರಶ್ಯಾ ರಾಜ್ಯಭಾರವನ್ನು ಸುರುಮಾಡಿದೆ. ಖಾಸಗೀ ಆಸ್ತಿಪಾಸ್ತಿಗಳನ್ನು ಸರಕಾರವು ತನ್ನ ವಶಪಡಿಸಿಕೊಂಡಿದೆ. ದೊಡ್ಡ ದೊಡ್ಡ ಭೂಮಾಲೀಕರ ಸೊತ್ತು ಹಂಚಲ್ಪಟ್ಟು ರಾಷ್ಟ್ರದ ಸೊತ್ತಿನಲ್ಲಿ ಎಲ್ಲರಿಗೂ ಒಂದೇ ರೀತಿಯ ಪಾಲು ಆಗಿದೆ.

ಜರ್ಮನರು ಆಕ್ರಮಿಸಿಕೊಂಡ ಪೋಲೆಂಡಿನಲ್ಲಿ ಜರ್ಮನ್ ರಾಜ್ಯಭಾರದ ದುರಂತ ರೀತಿಯು ಆರಂಭವಾಗಿದೆ. ಜನತೆಯು ಜರ್ಮನರ ಆಡಳಿತೆಯನ್ನು ಸಹಿಸದೆ ಹಾಹಾಕಾರವೆದ್ದಿದ್ದಾರೆ.

ಫಿನ್‌ಲ್ಯಾಂಡ್

ರಶ್ಯಾ ಫಿನ್‌ಲಾಂಡುಗಳ ವ್ಯವಹಾರವು ಮುಗಿದಂತೆ ಕಂಡುಬರುತ್ತದೆ. ರಶ್ಯಕ್ಕೆ ಫಿನ್‌ಲೆಂಡು ಕಡೆಯ ಮಾತು ಹೇಳಿಕಳುಹಿಸಿದೆ.

ರಶ್ಯದ [illegible]ನೇ ವಾರ್ಷಿಕೋತ್ಸವದ ಸಿದ್ಧತೆಗಳಾಗುತ್ತಿವೆ. ಈ ವರ್ಷದಲ್ಲಿ ರಶ್ಯದ ರಾಜನೀತಿಯ ವಿಷಯ ಕೆಲವು ತಿದ್ದುಪಡಿಗಳಾಗುವವೆಂದೂ, ರಶ್ಯದ ಸಾಮ್ಯವಾದ ಧೋರಣೆಯು ಸಡಿಲವಾಗುವುದೆಂದೂ ವದಂತಿ.

ಜರ್ಮನ್ ಹಡಗದ 'ಆತ್ಮಹತ್ಯೆ'

ಎಮ್ಮಿ ಫ್ರೀಡ್‌ರಿಕ್ ಎಂಬ ಜರ್ಮನಿಯ ಎಣ್ಣೆ ಪೆಟ್ರೋಲುಗಳನ್ನು ಸಾಗಿಸುವ ಹಡಗವು ಬ್ರಿಟಿಷ್ ಹಡಗಗಳು ಅದನ್ನು ಬೆಂಬತ್ತುತ್ತಿರಲು ಶತ್ರುಗಳ ಕೈಯಲ್ಲಿ ಸಿಕ್ಕಿ ಸಾಯುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವುದೇ ಮೇಲೆಂದು ಆ ಹಡಗವು [illegible]ಲ್ಲಿ ಮುಳುಗಿಸಲ್ಪಟ್ಟಿರುವುದಾಗಿ ತಿಳಿದಿದೆ. ಈ ಹಡಗದಲ್ಲಿ ಸುಮಾರು ೮೦೦೦ ಪೀಪಾಯಿ ಹಡಗುಗಳು ಇದ್ದುವಾಗಿ ತಿಳಿದುಬರುತ್ತದೆ.

ಫಿನ್‌ಲೆಂಡಿನ ಪರಿಸ್ಥಿತಿ

ಫಿನ್‌ಲೆಂಡನ್ನು ರಶ್ಯವ ತನ್ನ ಅಧೀನದಲ್ಲಿಟ್ಟುಕೊಳ್ಳಬೇಕೆಂದು ಹಲವರು ಹಂಚಿಕೆಗಳನ್ನು ಮಾಡುತ್ತಿದೆ. ಆದರೆ ಫಿನ್‌ಲೆಂಡಿನವರು ತಮ್ಮ ಸ್ವಾತಂತ್ರ್ಯವು ತಮಗೆ ಹೆಚ್ಚಿನದು. ಇದರಿಂದ ಸೋವಿಯಟಿಗೆ ಬಾಧಕವಿಲ್ಲ, ಆದಕಾರಣ ರಶ್ಯವು ತಂಟೆಗೆ ಬರಬಾರದಾಗಿ ಪ್ರಕಟಪಡಿಸಿರುವರು. ರಶ್ಯನ್ ಬೆದರಿಕೆಯು [illegible] ಅರ್ಥವಿಲ್ಲವೆಂಬುದೂ [illegible] ನಾವು ಅಂಜದವರೆಂದೂ ಅವರು ಸಾರಿದಾರೆ. [illegible]-ಟರ್ಕಿಗಳ ಒಪ್ಪಂದದಿಂದ [illegible] ಕದಡಿದೆ. ಪರಿಸ್ಥಿತಿಯು ಮುಂದಕ್ಕೆ ಯಾವ ರೀತಿಯಲ್ಲಿ ಮುಂದುವರಿಯುವುದೋ ಹೇಳಬರವುದಿಲ್ಲ. ಅಂತೂ ಎಲ್ಲರಿಗ ಸಮಪಾಲು ಎಂಬ ಉಚ್ಚತತ್ವವನ್ನು ಸಾರಿದ ರಶ್ಯವು ಈ ರೀತಿಯ ದುರ್ದಾಕ್ಷಿಣ್ಯ ಧೋರಣೆಯನ್ನು ಕೈಕೊಂಡದ್ದು ಸರ್ವಥಾ ಯೋಗ್ಯವಾಗಲಿಲ್ಲ.

ಇಟಲಿಯ ಮಂತ್ರಿಮಂಡಳಗಳ ಬದಲಾವಣೆ

ಇಟಲಿಯ ಮಂತ್ರಿಮಂಡಲವು ರಾಜಿನೆ ಕೊಟ್ಟು ಹೊಸ ಮಂತ್ರಿಮಂಡಳದ ರಚನೆಯಾಯಿತು. ಮೊದಲಿದ್ದವರು ಫಾಸಿಸ್ಟ ಕಾರ್ಯದರ್ಶಿಗಳೇ ಆದ ಸಿನಾರ್ ಸ್ಟಾರೇಸರ [illegible] ಮುಂದಿಯೊಡನೆ ರಾಜಿಕೊಟ್ಟಿರುವರ. ಸ್ವತಃ ಮುಸಲೋನಿಯೇ ವಹಿಸುತ್ತಿದ್ದ ಇಟಾಲಿಯನ್ ಆಫ್ರಿಕಾ ಖಾತೆಯು ಸಿನಾರ್ ಟೆರುಜಿಯವರಿಗೆ ಒಪ್ಪಿಸಲಾಗಿದೆ.

ಈ ಬದಲಾವಣೆಗಳ ಕಾರಣಗಳು ಸ್ಪಷ್ಟವಾಗಿ ತಿಳಿದು ಬಂದಿಲ್ಲವಾದರೂ, ಅದರಲ್ಲಿ ಮಹತ್ವದ ರಾಜಕೀಯ ವಿಚಾರಗಳು ಅಡಕವಾಗಿವೆಯೆಂದು ತಿಳಿದು ಬಂದಿದೆ. ಯಾವಾಗಲೂ ಜರ್ಮನಿಗೆ ಸಹಾನುಭೂತಿತೋರಿಸಿದ್ದ ಸಿನಾರ್ ಸ್ಟಾರೇಸರು ರಾಜಿನಾಮೆಕೊಟ್ಟಿರುವುದು ಪ್ರಾಮುಖ್ಯ ಸಂಗತಿಯಾಗಿದೆ.

ವಿದೇಶ ಇಲಾಖೆಯು ಇನ್ನೂ ಕೌಂಟ್ ಸಿಯಾನೋವಿನ ಕೈಯಲ್ಲಿಯೇ ಇದೆ. ಇವರಿಂದ ವಿದೇಶ ನೀತಿಯಲ್ಲಿ ಬದಲಾವಣೆಯಾಗಲಾರದೆಂದು ವಿದೇಶ ರಾಜನೀತಿಜ್ಞರು ಅಭಿಪ್ರಾಯಪಡುತ್ತಾರೆ. ಹೇಗಿದ್ದರೂ ಇಟಲಿಯು ತಟಸ್ಥ ಧೋರಣೆಯನ್ನು ಬಿಟ್ಟುಕೊಟ್ಟು ರಣರಂಗಕ್ಕಿಳಿಯುವುದು ಸಾಧ್ಯವಿಲ್ಲವೆಂದು ತೋರುತ್ತದೆ.

ನಾಜಿ ಪಂಗಡದಲ್ಲಿಯೇ ಅತೃಪ್ತಿ

ನಾಜೀ ಪಂಗಡದಲ್ಲಿ ಹಿಟ್ಲರನ ರಶ್ಯಾ ಸಂಬಂಧದ ಕುರಿತು ಜನರು ತೀವ್ರ ಅತೃಪ್ತಿಗೊಂಡಿರುವದಾಗಿ ತಿಳಿಯುತ್ತದೆ. ಸ್ಟೋರ್ಮ ಸೈನಿಕರಲ್ಲಿಯೇ ಕೆಲವರು ಅಂತಹ ಭಾವನೆಯುಳ್ಳವರಿರುವದರಿಂದ, ಸೈನಿಕರನ್ನ ಕೆಲವರನ್ನು ಅವರ ಮೇಲೆ ದೃಷ್ಟಿಯಿಟ್ಟುಕೊಳ್ಳುವಂತೆ [illegible]. ಇಂತಹ [illegible] ಸಂಖ್ಯೆಯು [illegible] ಇದೆ. ಇವರ ಹೆಸರುಗಳಲ್ಲಿ [illegible] ಇರಿಸಲಾಗಿದೆ.

ಬೆಲ್ಜಿಯಮಿನ ಮೇಲೆ ಜರ್ಮನ್ ವಿಮಾನಗಳು

ಬೆಲ್ಜಿಯಮಿನ ಮೇಲೆ ಜರ್ಮನ್ ವಿಮಾನಗಳ ಹಾರಾಡಿರುವ ವಿಷಯವಾಗಿ ಬೆಲ್ಜಿಯಮ್ ಸರಕಾರವು ನಿಷೇಧ ಸೂಚಿಸಿದೆ.

ಈಗಿನ [illegible] ವಾರ್ತೆ

ಹೈದ್ರಾಬಾದಿ ಜಿನ್ನಾರವರು ಒಂದು [illegible] ಪ್ರಕಟಣೆ ಹೊರಡಿಸುತ್ತಾ ಅದರಲ್ಲಿ, ಹಿಂದೂಗಳ ವಿಷಯ ತಮಗೆ ದ್ವೇಷವಿಲ್ಲವೆಂದೂ ತಾನ ಯಾವಾಗಲೂ ಒಪ್ಪಂದಕ್ಕೆ ಬರಲು ಇಷ್ಟವುಳ್ಳವನಾಗಿದ್ದೇ[illegible]ದ ವಿವರಿಸಿರುವರು.

★

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಒಂದು ಪ್ರಕಟಣೆ ಹೊರಡಿಸಿ ಅದರಲ್ಲಿ ಹಿಂದೀ [illegible] ಕೇಳಿದ ಕೇಳಿಕೆಗಳೇನೆಂಬ ವಿಷಯವಾಗಿ ತಿರಿಗಿ ಸ್ಪಷ್ಟಪಡಿಸಿರುವರು. ನಮ್ಮಲ್ಲಿ ಮುಖ್ಯ ನಿಜವಾದ ತೊಂದರೆಯು ಬ್ರಿಟಿಷರು ಎತ್ತಿ ತೋರಿಸುವ [illegible] ಜಾತೀಯ ಭೇದವಿಲ್ಲ, ರಾಜಕೀಯದಲ್ಲಿ ಬ್ರಿಟಿಷರ ಬಿಗಿ ಹಿಡಿತವೇ ಭಾರತದ ಪ್ರಗತಿಗೆ ಉಂಟಾದ ತೊಂದರೆಯೆಂದು ಅವರು ಅದರಲ್ಲಿ ವರ್ಣಿಸಿರುವರು.

★

ಲೋರ್ಡ್ ಜಟ್ಲೆಂಡರು ಪಾರ್ಲಿಮೆಂಟಿನಲ್ಲಿ ಪ್ರಶ್ನೆಗೆ ಉತ್ತರ ಹೇಳುತ್ತಾ ತನಗೆ ವೈಸರಾಯರು ಹಿಂದೂ ಮತ್ತು ಮುಸ್ಲಿಮರೊಳಗ ಒಂದು ನ್ಯಾಯ ರೀತಿಯ ನಿರ್ಧಾರವನ್ನು ಮಾಡಲು ಆಗದಿರುವ [illegible]ವಿಷಯವಾಗಿ ಬೇಸರಪಟ್ಟು [illegible]ದ ಹೇಳುತ್ತಾ ಕಾಂಗ್ರೆಸಿನವರ ವೈಸರಾಯರ ಸೂಚನೆಯನ್ನು ಸಂಪೂರ್ಣ [illegible] ಕರಿಸಿದೆಯೆಂದೂ [illegible] ಕಾಂಗ್ರೆ[illegible] ಹಿಂದೂದೇಶಕ್ಕೆ ಸ್ವಾತಂತ್ರ್ಯ ಸಿಕ್ಕದೆ ಇರುವ ಸ್ಥಿತಿಯಲ್ಲಿ ನಮ್ಮೊಡನೆ ಯಾವ ರೀತಿಯಲ್ಲಿಯೂ ಸಹಕರಿಸಲಾರದೆಂದೂ, ಸಾರಿರುವುದೆಂದು ಹೇಳಿ, ಕಡೆಗೆ ಈ ತೆರನ ಕಾಂಗ್ರೆಸಿನ ವಾದವನ್ನು ನಮ್ಮ ಸರಕಾರವು ಅಂಗೀಕರಿಸಲಾರದೆಂದೂ, ಹಿಂದೂದೇಶದೊಡನೆ ಅನೇಕ ವರ್ಷಗಳಿಂದ ನಡೆದುಬಂದ ಬ್ರಿಟಿಷರ ಸಂಬಂಧದಿಂದ ಹಿಂದೂದೇಶದ ಭವಿಷ್ಯ ಸ್ವಾತಂತ್ರ್ಯದ ರಾಜ್ಯರಚನೆಯು ನಮ್ಮ ದೇಶಕ್ಕೆಂದೂ ಹೇಳಿದರು.

★

ಪಶ್ಚಿಮ ರಣರಂಗದಲ್ಲಿ ನಡೆದ ವಿಮಾನ ಯುದ್ಧದಲ್ಲಿ ಫ್ರೆಂಚರು ವಿಜಯಿಗಳಾಗಿರುವರು.

★

ಡಚ್ ಬೆಲ್ಜಿಯಂ ರಾಷ್ಟ್ರಗಳು ಯೂರೋಪಿನ ಶಾಂತಿ ಸಾಧನೆಗಾಗಿ ಯತ್ನ ಮಾಡುತ್ತಿರುವರೆಂದು ತಿಳಿದಿದೆ.

★

ಸಾಮ್ರಾಜ್ಯ ಶಾಹಿಗಳು ಯುದ್ಧಮಾಡುತ್ತಿವೆ

ಮೊಲೊಟೊವ್ರೋ ಭಾಷಣ

ರಶ್ಯದ ಸೇನಾನಿ ಮೊಲೋಟೊವನ್ನು ಮೊನ್ನೆಯ ಭಾಷಣವೊಂದರಲ್ಲಿ ಇಂದು ಸಾಮ್ರಾಜ್ಯ ಲಾಲಸೆಯುಳ್ಳ ರಾಷ್ಟ್ರಗಳು ಯುದ್ಧರಂಗಕ್ಕಿಳಿದಿರುವವಾಗಿ ಅವುಗಳನ್ನು ಖಂಡಿಸಿರುತ್ತಾನೆ. ಈ ಸಾಮ್ರಾಜ್ಯಶಾಹಿಗಳು ತಮ್ಮೊಳಗಿನ ಅಂತರ್ಯುದ್ಧಗಳಿಂದ ಇದೀ ಜಗತ್ತಿನ ಅರ್ಧ ಭಾಗವನ್ನೇ ಯುದ್ಧದಲ್ಲಿ ಇಳಿಸಿವೆ. ರಶ್ಯವನ್ನು ಯುದ್ಧಕ್ಕೆ ಎಳೆಯುವುದಕ್ಕೆ ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲ. ನಾವು ನಮ್ಮ [illegible]ವನ್ನು ಹೆಂಬಿ ತೋರಿಸ ಪೆಸಿಫಿಕ್ ಕಡೆ ಬೇರೆಯವರ ಸಿಂಹ[illegible] ಯುದ್ಧ [illegible] ಕೇಳುವುದಿಲ್ಲ. ಆದುದರಿಂದ ಪ್ರಪಂಚದ ಎಲ್ಲಾ ಕಡೆಯ ಕೂಲಿಗಾರರೂ ತಮ್ಮನ್ನು ಒತ್ತುತ್ತಿರುವ ಅಧಿಕಾರಿಗಳ ವಿರುದ್ಧ ದಂಗೆಯೇಳಬೇಕು.

ಜರ್ಮನ್ ವಿಮಾನಗಳು ಉರುಳಿದುವು!

ಪಶ್ಚಿಮ ರಣರಂಗದ ಆಕಾಶ ಯುದ್ಧದಲ್ಲಿ ಎಂಟು ಸ್ಪಿಟ್‌ಫೈರ್ ವಿಮಾನಗಳು [illegible] ಜರ್ಮನ ವಿಮಾನಗಳು [illegible] ಉರುಳಿಸಲ್ಪಟ್ಟವು ಎಂದು

ಪಕ್ಷದವರೂ ಬಹಳ ಉತ್ಸಾಹದಿಂದ ಕಾದಾಡಿದರು.

ಕೆನಡಕ್ಕೆ ೧೫೦೦ ವಿಮಾನಗಳು!

ಕೆನಡವು ಅಮೇರಿಕದಿಂದ ೧೫೦೦ ವಿಮಾನಗಳನ್ನು ಪಡೆದುಕೊಳ್ಳಲು ನಿಶ್ಚಯಿಸಿದೆ.

ಕಳೆದ ವಾರದಿಂದ ಈ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ [illegible] ಭವುಂಟಾಗಿದೆ. ವೈಸರಾಯರು [illegible] ಯವರನ್ನು, ರಾಷ್ಟ್ರಪತಿ ರಾಜೇಂದ್ರ ಪ್ರಸಾದರನ್ನು, ಆ ಮೇಲೆ [illegible] ಲೀಗಿನ ಅಧ್ಯಕ್ಷರಾದ [illegible] ಜಿನ್ನಾರನ್ನೂ ಕರೆದು [illegible] ಮಾತುಕತೆ ನಡೆಸಿದರು. ಎಲ್ಲರ ದೃಷ್ಟಿಯು ಭಾರತದ [illegible] ಮಾತುಕತೆ [illegible]ತ್ತು. ಅಷ್ಟರಲ್ಲಿ ಬ್ರಿಟಿಷ್ ಸರಕಾರವು ಅಲ್ಪಸಂಖ್ಯಾಕರ ಹಕ್ಕಿನ ವಿಷಯ ಎತ್ತಿ ಹೇಳುವುದನ್ನೂ ಅದರಿಂದ ಹಿಂದೂ ಮುಸ್ಲಿಂ ಭೇದವಿರುವುದೆಂದ [illegible] ರೀತಿಯ ಜವಾಬ್ದಾರಿಯನ್ನು ಭಾರತೀಯರ ಮೇಲೆ [illegible] ಹೇಳುವುದನ್ನೂ [illegible] ಮೊದಲು ಐಕ್ಯವಾಗಿ [illegible] ವಿಷಯದಲ್ಲಿ [illegible] ಗಾಂಧೀಜಿ [illegible] ವೈಸರಾಯರಿಗೆ ಒಂದು ಒಮ್ಮತದ ಪ್ರಕಟಣೆಯನ್ನು [illegible] ಆಲೋಚಿಸಿದರು. ಅಷ್ಟರಲ್ಲಿ ವೈಸರಾಯರು [illegible] ಭಾರತದ ಮುಖಂಡರ ಮಾತುಕತೆಯು ನಡೆಯುತ್ತಿತ್ತು. ವೈಸರಾಯರು ಹಿಂದೂದೇಶಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು (Dominion Status) ಕೊಡಬಹುದಾಗಿಯೂ, ಆದರೆ ಅಲ್ಪಸಂಖ್ಯಾಕರ ಸಮಸ್ಯೆಯು ಇತ್ಯರ್ಥವಾಗಬೇಕೆಂದೂ, ಪ್ರಕೃತ ಸಂದರ್ಭದಲ್ಲಿ ವೈಸರಾಯರ ಸಮಾಲೋಚಕ ಸಮಿತಿಯಲ್ಲಿ ಕಾಂಗ್ರೆಸು ಮತ್ತು [illegible] ಲೀಗು ಸಹಕರಿಸಬೇಕೆಂದೂ, ಹೇಳಿದರಾಗಿ ತಿಳಿದುಬಂತು. ಆದರೆ ಅದಕ್ಕೆ ಉತ್ತರವಾಗಿ ಭಾರತದ ಮುಖಂಡರು, ಬ್ರಿಟಿಷರ ಯುದ್ಧ ಉದ್ದೇಶವೇನೆಂದೂ, ಅದು ಭಾರತಕ್ಕೆ ಹೇಗೆ ಅನ್ವಯಿಸುತ್ತವೆಯೆಂಬುದನ್ನೂ ಕಾಂಗ್ರೆಸು ಜನತೆಯು ಪರವಾಗಿ ಕೇಳಿರಲು, ಕಲ್ಪಿತ ಹಿಂದೂ ಮುಸ್ಲಿಂ ಭೇದವನ್ನು ಮುಂದೊಡ್ಡಿಕೊಂಡು ಬ್ರಿಟಿಷ್ ಸರಕಾರವು ಹೀಗೆ ವಕ್ರ

ಹಿಂದೂ ಬಾಂಧವರೊಡನೆ ನನಗೆ ದ್ವೇಷವಿಲ್ಲ!

ಜಿನ್ನರ ಹೃದಯ ನಿವೇದನೆ!

ಕಾಂಗ್ರೆಸು-ಲೀಗುಗಳ ಐಕ್ಯಸಾಧನೆ

ರಾಷ್ಟ್ರಪತಿಗಳ ಪ್ರಕಟಣೆ!

[illegible] ಸರಿಯಲ್ಲವೆಂದೂ ಹೇಳಿದರು.

ಒರಿಸ್ಸಾ ಮಂತ್ರಿಮಂಡಳದ ರಾಜಿನಾಮೆ

ಒರಿಸ್ಸಾ ಮಂತ್ರಿಮಂಡಳವು [illegible] ರಾಜಿನಾಮೆ [illegible] ಯುದ್ಧ [illegible] ಭಾರತದ ಸಹ[illegible] ವಿಷಯ [illegible]

ಸಾರ್ವಭೌಮರಿಗ ಸನಾತನಿಗಳ ತಂತಿ

ಪಶ್ಚಿಮ [illegible] ಭಾವ[illegible] ಸಿದರು [illegible] ರಾಜಕೀಯ [illegible] ಕಾಂಗ್ರೆಸಿನ [illegible] ಸನಾತನ ಧರ್ಮವು ಕಷ್ಟ[illegible] ಇನ್ನು [illegible] ಬ್ರಿಟಿಷ ಸರಕಾರವು ದೇವಸ್ಥಾನ ಪ್ರವೇಶ [illegible] ಹಿಂದೆಗೆಯಬೇಕೆಂದು [illegible] ಯುದ್ಧದಲ್ಲಿ [illegible] ವೇಕೆಂದು ಸನಾತನಿಗಳು [illegible] ಈ ಸಲವೂ [illegible] ಬಾಗಿದೂ ಇತ್ತು.

ಸರ್ದಾರ ಪಟೇಲರ ಸಿಂಹ ಗರ್ಜನೆ

ಕಾಂಗ್ರೆಸು ಬ್ರಿಟನಿಗೆ ಸಹಾಯಮಾಡುವ ಅಭಿಪ್ರಾಯವನ್ನು ಹಿಂದೆಗೆದಿಲ್ಲ. ಆದರೆ ಭಾರತಕ್ಕೆ ಸ್ವಯಂನಿರ್ಣಯದ ಅಧಿಕಾರವು ಸಿಗಬೇಕು. ವೈಸರಾಯರ ಮೊದಲಿನ ತಕ್ಕವಾದ ನಮ್ಮನ್ನು ವಿಭಜಿಸಿ ಆಳುವ ನೀತಿಯನ್ನೇ ಕೈಕೊಂಡಿದ್ದಾರೆ. ಜಾತೀಯ ಚುನಾವಣೆಯ ಮುಖಾಂತರ ಜಾತೀಯ ಭೇದವೆಂಬುದನ್ನು ಬ್ರಿಟಿಷರೇ ಇಲ್ಲಿ

ವೆಳೆಸಿದರು. ಆದರೆ ಅದನ್ನು ಇತರರು ಪರಿಹರಿಸುವ ಅಗತ್ಯವಿಲ್ಲ. ಭಾರತೀಯರೇ ಅದನ್ನು ಬಗೆಹರಿಸುವರು.

'ಭಾರತವು ಎಲ್ಲಾ ಯುದ್ಧಗಳನ್ನೂ ನಿಲ್ಲಿಸಲೂ ತಯಾರಿದೆ. ಶಸ್ತ್ರದ ಆಳುವಿಕೆಯು ನಾಶವಾಗುವುದನ್ನು ಭಾರತವು ನೋಡಬೇಕು. ಅದರೊಡನೆ ನಾಜೀ ಶಾಹೀ ಸಾಮ್ರಾಜ್ಯ ಶಾಹೀ ಇವೆಲ್ಲಾ ನಿರ್ನಾಮ ಹೊಂದಬೇಕು. ಇದಕ್ಕಾಗಿ ಭಾರತೀಯರೆಲ್ಲರೂ ಒಮ್ಮತದಿಂದ ಇರಬೇಕು. ನಮ್ಮ ಭೇದಗಳನ್ನು ಮರೆಯಬೇಕು. ನಮ್ಮ ರಾಷ್ಟ್ರದ ಏಕೈಕ ಮುಖಂಡರಾದ ಮಹಾತ್ಮಜಿಯವರು ನಡೆಸಿದ ಮಾರ್ಗದಲ್ಲಿ ನಾವು ನಡೆಯಬೇಕು' ಎಂದರು.

ಶ್ರೀ ಸತ್ಯಮೂರ್ತಿಯವರು ಮದ್ರಾಸಿನ ಮೇಯರರಾದರು

ಶ್ರೀ ಸತ್ಯಮೂರ್ತಿಗಳ ಮದ್ರಾಸು ಕಾರ್ಪೋರೇಶನಿನ ಮೇಯರರಾಗಿ ಚುನಾಯಿತರಾದರು.

ಗಡಿನಾಡಿನ ಮಂತ್ರಿಮಂಡಲದ ರಾಜಿನಾಮೆ

ಗಡಿನಾಡಿನ ಮಂತ್ರಿಮಂಡಳವು [illegible] ರಾಜಿನಾಮೆ [illegible] ದರೂ [illegible] ರಾಜಿನಾಮೆ [illegible] ಖಾನ ಸಾಹೇಬರು [illegible] ಗವರ್ನರರ [illegible]

ಯುದ್ಧ ಮುಗಿದಕೂಡಲೆ ಸ್ವಾತಂತ್ರ್ಯ

ಹಿಂದೂದೇಶಕ್ಕೆ ಯುದ್ಧ ಮುಗಿದ ಕೂಡಲೇ ಡೊಮಿನಿಯನ್ ಸ್ಟೇಟಸ್ [illegible] ಈಗ ಅದರ ಸಹಾಯ ಪಡೆಯಬೇಕಾಗಿಯೂ ಡೈಲಿ ಹೆರಾಲ್ಡ್ ಪತ್ರಿಕೆಯು ಬರೆಯುತ್ತದೆ.



ಯುದ್ಧವಾರ್ತೆ!



ಪಶ್ಚಿಮ ರಣರಂಗದಲ್ಲಿ ಫ್ರೆಂಚರು ಮುಂದೊತ್ತುವರು!

ಯುರೋಪಿನ ಶಾಂತಿಸಾಧನೆ!

ರಶ್ಯವು ಶಾಂತಿಯಲ್ಲಿಲ್ಲವೆ?

ಉತ್ತರ ಸಾಗರದಲ್ಲಿ ವಿಮಾನಯುದ್ಧ!

ಜರ್ಮನ್, ರಶ್ಯಗಳ ಸ್ನೇಹವು ಬಲಿದಂತೆ, ರಶ್ಯವು ಜರ್ಮನಿಯನ್ನು ಹಿಮ್ಮೆಟ್ಟಿ ತಾನೇ ಪ್ರಬಲವಾಗುತ್ತಿರುವುದು ಕಂಡಿರುತ್ತದೆ. ಯುರೋಪಿನ ಇಂದಿನ ರಾಜಕೀಯ ಪರಿಸ್ಥಿತಿಗಳನ್ನು ಪರೀಕ್ಷಿಸುವುದರಿಂದ, ಮುಂದಕ್ಕೆ ಹಿಟ್ಲರನು ಜಗ್ಗಿ ಸ್ಟಾಲಿನನೇ ಮೇಲಕ್ಕೆ ಬರಬಹುದೇ ಎಂಬ ಸಂದೇಹ ತಲೆ ಎತ್ತುತ್ತಿದೆ

ರಶ್ಯದ ಮಂತ್ರಿ ಮೊಲೊಟೋವನು ಮೊನ್ನೆ ಮಾಡಿದ ಭಾಷಣವೊಂದರಲ್ಲಿ ಹಿಟ್ಲರನಿಗೆ ಅವಶ್ಯ ಬೇಕಾಗಿರುವ ಸೈನ್ಯ ಸಹಾಯವನ್ನು ಕೊಡುವ ಯಾವ ಸೂಚನೆಯನ್ನೂ ಪ್ರಕಟಿಸಿರುವುದಿಲ್ಲ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿ ರಶ್ಯಕ್ಕೆ ಸ್ವಾತಂತ್ರ್ಯವಿರಬೇಕೆಂಬುದು ರಶ್ಯದ ಧ್ಯೇಯವೆಂದು ಸಾರಿದ್ದಾನೆ.

ಯುರೋಪಿನ ಯುದ್ಧದ ವಿಷಯದಲ್ಲಿ ಫ್ರಾನ್ಸ್ ಇಂಗ್ಲೆಂಡುಗಳು ವಹಿಸಿದ ಪಾತ್ರವು ತಪ್ಪಾಯಿತೆಂದು ರಶ್ಯದ ಆರೋಪವಾಗಿದೆ ಜರ್ಮನಿಯನ್ನು ಹದಮಾಡಿ, ಇನ್ನೊಂದು ವರ್ಸೈಲಿ ಒಪ್ಪಂದವನ್ನು ಮಾಡುವುದು ಉದ್ದೇಶವೇ ಎಂದು ಮೊಲೊಟೋವನು ಪ್ರಶ್ನಿಸಿದ್ದಾನೆ.

ಮಿ ಚೆಂಬರ್ಲೆನರು ಪಾರ್ಲಿಮೆಂಟ್ ಸಭೆಯಲ್ಲಿ ಮಿತ್ರರಾಷ್ಟ್ರಗಳ ಯುದ್ಧ ಉದ್ದೇಶವು ಶಾಂತಿರಕ್ಷಣೆಯೆಂದು ಪುನಃ ಸಾರಿದರು ಆದರೆ ಹಿಟ್ಲರ್ ಶಾಹಿಯನ್ನು ಎದರಿಸುವುದು ತಮ್ಮ ಧೋರಣೆಯೆಂದು ಚೆಂಬರ್ಲೆನರು ಸಾರಿ, ಜಗದ ಸಹಕಾರವನ್ನು ಅಪೇಕ್ಷಿಸುವುದಕ್ಕಿಂತ, ಸಾಮ್ರಾಜ್ಯ ಶಾಹೀ ಧೋರಣೆಯನ್ನು ಸ್ವತಃ ತಾವೇ ಬಿಟ್ಟು ಕೊಟ್ಟಿರುವೆವೆಂದು ಹೇಳಿ, ತಮ್ಮ ಹೇಳಿಕೆಯನ್ನು ಕಾರ್ಯತಃ ಮಾಡಿತೋರಿಸುವುದೇ ಹೆಚ್ಚು ಪರಿಣಾಮವಾದೀತು

ರಣರಂಗ

ಜರ್ಮನರು ಫ್ರೆಂಚ್ ಸೈನ್ಯವನ್ನು ಭೇದಿಸಿ ಮೊಜಿನೋ ದುರ್ಗದ ಬಳಿ ಬಂದಿರುವರಾಗಿ ಜರ್ಮನರ ಸುದ್ದಿ

ಜರ್ಮನರು ಇಂಗ್ಲೆಂಡಿನ ಮೇಲೆ ಅನೇಕ ಸಲ ಧಾಳಿ ಮಾಡುವ ಹಂಚಿಕೆ ನಡೆಸಿದರೆಂದು ತಿಳಿದುಬರುತ್ತದೆ

ವಿಪರೀತ ಮಳೆ ಬಂದುದರಿಂದ ರಣರಭಸವು ಸ್ವಲ್ಪ ಇಳಿದಿದೆ ಪ್ರವಾಹದ ಹೊಡೆತದಿಂದ ಸಿಜ್ ಫ್ರಿಡ್ ದುರ್ಗದ ಒಂದು ಭಾಗವು ಕಳಚಿ ಬಿದ್ದಿರುವುದಾಗಿಯೂ ತಿಳಿದುಬರುತ್ತದೆ.

ಕಾಯರನ್ ಮೋನಾ ಎಂಬ ಬ್ರಿಟಿಷ್ ಹಡಗವು ಜಲಸಮಾಧಿ ಹೊಂದಿತು

ಮಲಬಾರ್, ಸೆಂಟಿನಿಡಾನ್, ಮತ್ತು ಲಿಂಗ್ಸ್ ಈ ಮೂರು ಬ್ರಿಟಿಷ್ ಹಡಗುಗಳೂ ಜರ್ಮನ್ ಜಲಾಂತರ್ಯಾಮಿ ನಾವೆಗಳಿಂದ ಮುಳುಗಿಸಲ್ಪಟ್ಟವು

ಜರ್ಮನ್ ವೈಮಾನಿಕರು ಮಿತ್ರ ರಾಷ್ಟ್ರಗಳ ನಾಲ್ಕು ವಿಮಾನಗಳನ್ನು ಪುಡಿಮಾಡಿರುವರಾಗಿ ಹೇಳಿದರು ಅನೇಕ ಫ್ರೆಂಚು ವಿಮಾನಗಳು ಜರ್ಮನ್ ದುರ್ಗದ ಮೇಲೆ ಹಾರಿ, ಶತ್ರುಗಳ ವ್ಯೂಹರಚನೆಯ ಗುಟ್ಟನ್ನು ಸಂಗ್ರಹಿಸಿರುವುದಾಗಿ ತಿಳಿದ ಬರುತ್ತದೆ

ಪೋಲೆಂಡಿನಲ್ಲಿ

ಪೋಲೆಂಡನ್ನು ಆಕ್ರಮಿಸಿಕೊಂಡು ರಶ್ಯವು ಯುಕ್ರೈನಿನಲ್ಲಿ ರಶ್ಯಾ ರಾಜ್ಯಭಾರವನ್ನು ಸುರುಮಾಡಿದೆ ಖಾಸಗೀ ಆಸ್ತಿಪಾಸ್ತಿಗಳನ್ನು ಸರಕಾರವು ತನ್ನ ವಶಪಡಿಸಿಕೊಂಡಿದೆ ದೊಡ್ಡ ದೊಡ್ಡ ಭಂಡವಾಳಗಾರರ ಸೊತ್ತು ಹಂಚಲ್ಪಟ್ಟು ರಾಷ್ಟ್ರದ ಸೊತ್ತಿನಲ್ಲಿ ಎಲ್ಲರಿಗೂ ಒಂದೇ ರೀತಿಯ ಪಾಲು ಆಗಿದೆ

ಜರ್ಮನರು ಆಕ್ರಮಿಸಿಕೊಂಡ ಪೋಲೆಂಡಿನಲ್ಲಿ ಜರ್ಮನ್ ರಾಜ್ಯಭಾರದ ದುರಂತ ರೀತಿಯು ಆರಂಭವಾಗಿದೆ ಜನತೆಯು ಜರ್ಮನರ ಆಡಳಿತೆಯನ್ನು ಸಹಿಸದೆ ಹಾಹಾಕಾರವೆದ್ದಿದ್ದಾರೆ

ಫಿನ್‌ಲ್ಯಾಂಡ್

ರಶ್ಯಾ ಫಿನ್‌ಲಾಂಡುಗಳ ವ್ಯವಹಾರವು ಮುಗಿದಂತೆ ಕಂಡುಬರುತ್ತದೆ ರಶ್ಯಕ್ಕೆ ಫಿನ್‌ಲೆಂಡು ಕಡೆಯ ಮಾತು ಹೇಳಿಕಳುಹಿಸಿದೆ.

ರಶ್ಯದ ೨೨ನೇ ವಾರ್ಷಿಕೋತ್ಸವದ ಸಿದ್ಧತೆಗಳಾಗುತ್ತಿವೆ ಈ ವರ್ಷದಲ್ಲಿ ರಶ್ಯದ ರಾಜನೀತಿಯ ವಿಷಯ ಕೆಲವು ತಿದ್ದುಪಡಿಗಳಾಗುವವೆಂದೂ, ರಶ್ಯದ ಸಾಮ್ಯವಾದ ಧೋರಣೆಯು ಸಡಿಲವಾಗುವುದೆಂದೂ ವದಂತಿ

ಜರ್ಮನ್ ಹಡಗದ 'ಆತ್ಮಹತ್ಯೆ'

ಎಮಿಲ್ ಫ್ರೆಡ್‌ರಿಕ್ ಎಂಬ ಜರ್ಮನಿಯ ಎಣ್ಣೆ ಪೆಟ್ರೋಲುಗಳನ್ನು ಸಾಗಿಸುವ ಹಡಗವು ಬ್ರಿಟಿಷ್ ಹಡಗಗಳು ಅದನ್ನು ಬೆಂಬತ್ತುತ್ತಿರಲು ಶತ್ರುಗಳ ಕೈಯಲ್ಲಿ ಸಿಕ್ಕಿ ಸಾಯುವುದಕ್ಕಿಂತ ಆತ್ಮಹತ್ಯೆ ಮಾಡುಕೊಳ್ಳುವುದೇ ಮೇಲೆಂದು ಆ ಹಡಗವು ನೀರಲ್ಲಿ ಮುಳುಗಿಸಲ್ಪಟ್ಟಿರುವುದಾಗಿ ತಿಳಿದಿದೆ ಈ ಹಡಗದಲ್ಲಿ ಸುಮಾರು ೮೦,೦೦೦ ಪೀಪಾಯಿ ಹಡಗುಗಳು ಇದ್ದವಾಗಿ ತಿಳಿದುಬರುತ್ತದೆ

ಫಿನ್‌ಲೆಂಡಿನ ಪರಿಸ್ಥಿತಿ

ಫಿನ್‌ಲೆಂಡನ್ನು ರಶ್ಯವು ತನ್ನ ಅಧೀನದಲ್ಲಿಟ್ಟು ಕೊಳ್ಳಬೇಕೆಂದು ಹಲವರು ಹಂಚಿಕೆಗಳನ್ನು ಮಾಡುತ್ತಿದೆ ಆದರೆ ಫಿನ್‌ಲೆಂಡಿನವರು ತಮ್ಮ ಸ್ವಾತಂತ್ರ್ಯವು ತಮಗೆ ಹೆಚ್ಚಿನದು ಇದರಿಂದ ಸೋವಿಯಟಿಗೆ ಬಾಧಕವಿಲ್ಲ, ಆದಕಾರಣ ರಶ್ಯವು ತಂಟೆಗೆ ಬರಬಾರದಾಗಿ ಪ್ರಕಟಿಸಿರುವರು ರಶ್ಯನ್ ಬೆದರಿಕೆಯಲ್ಲಿ ಅರ್ಥವಿಲ್ಲವೆಂಬುದೂ ತಾವು ಮರಣಕ್ಕೂ ಅಂಜದವರೆಂದೂ ಅವರು ಸಾರಿದ್ದಾರೆ ಆಂಗ್ಲ ಟರ್ಕಿಗಳ ಒಪ್ಪಂದದಿಂದ ಮನವೂ ಕದಡಿದೆ ಪರಿಸ್ಥಿತಿಯು ಮುಂದಕ್ಕೆ ಯಾವ ರೀತಿಯಲ್ಲಿ ಮುಂದುವರಿಯುವುದೋ ಹೇಳಬರುವುದಿಲ್ಲ ಅಂತೂ ಎಲ್ಲರಿಗೆ ಸಮಪಾಲು ಎಂಬ ಉಚ್ಚತತ್ವವನ್ನ ಸಾರಿದ ರಶ್ಯವು ಈ ರೀತಿಯ ದುರ್ದಾಂತ ಧೋರಣೆಯನ್ನು ಕೈಕೊಂಡದ್ದು ಸರ್ವಥಾಯೋಗ್ಯವಾಗಲಿಲ್ಲ

ಇಟಲಿಯ ಮಂತ್ರಿಮಂಡಳಗಳ ಬದಲಾವಣೆ

ಇಟಲಿಯ ಮಂತ್ರಿಮಂಡಲವು ರಾಜಿಕೊಟ್ಟು ಹೊಸ ಮಂತ್ರಿಮಂಡಳದ ರಚನೆಯಾಯಿತು ಮೊದಲಿದ್ದವರು ಫಾಸಿಸ್ಟ ಕಾರ್ಯದರ್ಶಿಗಳೇ ಆದ ಸಿನಾರ್ ಸ್ಟಾರೇಸರು ಆರು ಮಂದಿಯೊಡನೆ ರಾಜಿಕೊಟ್ಟಿರುವರು ಸ್ವತಃ ಮುಸಲೋನಿಯೇ ವಹಿಸುತ್ತಿದ್ದ ಇಟಾಲಿಯನ್ ಆಫ್ರಿಕಾ ಖಾತೆಯು ಸಿನಾರ್ ಟೆರ್ರೂಜಿಯವರಿಗೆ ಒಪ್ಪಿಸಲಾಗಿದೆ

ಈ ಬದಲಾವಣೆಗಳ ಕಾರಣಗಳು ಸ್ಪಷ್ಟವಾಗಿ ತಿಳಿದು ಬಂದಿಲ್ಲವಾದರೂ, ಅದರಲ್ಲಿ ಮಹತ್ವದ ರಾಜಕೀಯ ವಿಚಾರಗಳು ಅಡಕವಾಗಿವೆಯೆಂದು ತಿಳಿದು ಬಂದಿದೆ. ಯಾವಾಗಲೂ ಜರ್ಮನಿಗೆ ಸಹಾನುಭೂತಿತೋರಿಸಿದ್ದ ಸಿನಾರ್ ಸ್ಟಾರೇಸರು ರಾಜಿನಾಮೆಕೊಟ್ಟಿರುವುದು ಪ್ರಾಮುಖ್ಯ ಸಂಗತಿಯಾಗಿದೆ.

ವಿದೇಶ ಇಲಾಖೆಯು ಇನ್ನೂ ಕೌಂಟ್ ಸಿಯಾನೋವಿನ ಕೈಯಲ್ಲಿಯೇ ಇದೆ ಇದರಿಂದ ವಿದೇಶ ನೀತಿಯಲ್ಲಿ ಬದಲಾವಣೆಯಾಗಲಾರದೆಂದು ವಿದೇಶ ರಾಜನೀತಿಜ್ಞರು ಅಭಿಪ್ರಾಯಪಡುತ್ತಾರೆ ಹೇಗಿದ್ದರೂ ಇಟಲಿಯು ತಟಸ್ಥ ಧೋರಣೆಯನ್ನು ಬಿಟ್ಟುಕೊಟ್ಟು ರಣರಂಗಕ್ಕಿಳಿಯುವುದು ಸಾಧ್ಯವಿಲ್ಲವೆಂದು ತೋರುತ್ತದೆ

ನಾಜಿ ಪಂಗಡದಲ್ಲಿಯೇ ಅತೃಪ್ತಿ

ನಾಜೀ ಪಂಗಡದಲ್ಲಿ ಹಿಟ್ಲರನ ರಶ್ಯಾ ಸಂಬಂಧದ ಕುರಿತು ಜನರು ತೀವ್ರ ಅತೃಪ್ತಿಗೊಂಡಿರುವುದಾಗಿ ತಿಳಿಯುತ್ತದೆ ಸೈನ್ಯಕರಲ್ಲಿಯೂ ಕೆಲವರು ಅಂತಹ ಭಾವನೆಯುಳ್ಳವರಿರುವುದರಿಂದ, ಸೈನಿಕರನ್ನು ಕೆಲವರನ್ನು ಅವರ ಮೇಲೆ ದೃಷ್ಟಿಯಿಟ್ಟುಕೊಳ್ಳುವಂತೆ ಹೇಳಿರುವನು ಇಂತಹ ಕಾವಲುಗಾರರಾದವರ ಸಂಖ್ಯೆಯು ೧೨೦ ಇದೆ ಇವರ ಹೆಸರುಗಳೆಲ್ಲಾ ಗುಪ್ತವಾಗಿ ಇರಿಸಲಾಗಿದೆ

ಬೆಲ್ಜಿಯಮಿನ ಮೇಲೆ ಜರ್ಮನ್ ವಿಮಾನಗಳು

ಬೆಲ್ಜಿಯಮಿನ ಮೇಲೆ ಜರ್ಮನ್ ವಿಮಾನಗಳು ಹಾರಾಡಿರುವ ವಿಷಯವಾಗಿ ಬೆಲ್ಜಿಯಮ್ ಸರಕಾರವು ನಿಷೇಧ ಸೂಚಿಸಿದೆ

ಸಾಮ್ರಾಜ್ಯ ಶಾಹಿಗಳು ಯುದ್ಧಮಾಡುತ್ತಿವೆ

ಮೊಲೊಟೊವೋ ಭಾಷಣ

ರಶ್ಯದ ಸೇನಾನಿ ಮೊಲೋಟೊವನ್ನು ಮೊನ್ನೆಯ ಭಾಷಣವೊಂದರಲ್ಲಿ ಇಂದು ಸಾಮ್ರಾಜ್ಯ ಲಾಲಸೆಯುಳ್ಳ ರಾಷ್ಟ್ರಗಳು ಯುದ್ಧರಂಗಕ್ಕಿಳಿದಿರುವವಾಗಿ ಅವುಗಳನ್ನು ಖಂಡಿಸಿರುತ್ತಾನೆ ಈ ಸಾಮ್ರಾಜ್ಯಶಾಹಿಗಳು ತಮ್ಮೊಳಗಿನ ಆಂತರ್ಯದ ಗಲಭೆಯಿಂದ ಇಡೀ ಜಗತ್ತಿನ ಅರ್ಧ ಭಾಗವನ್ನೇ ಯುದ್ಧದಲ್ಲಿ ಇಳಿಸಿವೆ ರಶ್ಯವನ್ನು ಯುದ್ಧಕ್ಕೆ ಎಳೆಯುವುದಕ್ಕೆ ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲ ನಾವು ನಮ್ಮ ನಿರ್ಣಯವನ್ನು ಹೊಂದಿಕೊಂಡಿರುವೆವಲ್ಲದೆ ಬೇರೆಯವರ ನಿರ್ಣಯವನ್ನು ಕೇಳುವುದಿಲ್ಲ ಆದುದರಿಂದ ಪ್ರಪಂಚದ ಎಲ್ಲಾ ಕಡೆಯ ಕೂಲಿಗಾರರೂ ತಮ್ಮನ್ನು ಒತ್ತುತ್ತಿರುವ ಅಧಿಕಾರಿಗಳ ವಿರುದ್ಧ ದಂಗೆಯೇಳಬೇಕು

ಜರ್ಮನ್ ವಿಮಾನಗಳು ಉರುಳಿದುವು!

ಪಶ್ಚಿಮ ರಣರಂಗದ ಆಕಾಶ ಯುದ್ಧದಲ್ಲಿ ಏಳು ಫ್ರೆಂಚ್ ವಿಮಾನಗಳು, ಇಪ್ಪತ್ತೇಳು ಜರ್ಮನ್ ವಿಮಾನಗಳೂ ಎಂಡಿಕ್ಕೆ ಕೆಳಹಾಕಲ್ಪಟ್ಟುವು ಎರಡು, ಪಕ್ಷದವರೂ ಬಹಳ ಉತ್ಸಾಹದಿಂದ ಕಾದಾಡಿದರು.

ಕೆನಡಕ್ಕೆ ೧೫೦೦ ವಿಮಾನಗಳು!

ಕೆನಡವು ಅಮೇರಿಕದಿಂದ ೧೫೦೦ ವಿಮಾನಗಳನ್ನು ಪಡೆದುಕೊಳ್ಳಲು ನಿಶ್ಚಯಿಸಿದೆ

ಈಗಿನ ವಾರ್ತೆ

ಮಹಮ್ಮದಾಲಿ ಜಿನ್ನಾರವರು ಒಂದು ಪ್ರಕಟಣೆ ಹೊರಡಿಸುತ್ತಾ ಅದರಲ್ಲಿ, ಹಿಂದುಗಳ ವಿಷಯ ತಮಗೆ ದ್ವೇಷವಿಲ್ಲವೆಂದೂ ತಾನು ಯಾವಾಗಲೂ ಒಪ್ಪಂದಕೆ ಬರಲು ಇಷ್ಟವುಳ್ಳವನಾಗಿದ್ದೇನೆಂದು ವಿವರಿಸಿರುವರು.

★

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಒಂದು ಪ್ರಕಟಣೆ ಹೊರಡಿಸಿ ಅದರಲ್ಲಿ, ಹಿಂದೀಯರು ಕೇಳಿದ ಕೇಳಿಕೆಗಳೇನೆಂಬ ವಿಷಯವಾಗಿ ತಿರಿಗಿ ಸ್ಪಷ್ಟಪಡಿಸಿರುವರು ನಮ್ಮಲ್ಲಿರುವ ನಿಜವಾದ ತೊಂದರೆಯು ಬ್ರಿಟಿಷರು ಎತ್ತಿ ತೋರಿಸುವಂತೆ ಜಾತೀಯ ಬೇಧವಿಲ್ಲ, ರಾಜಕೀಯದಲ್ಲಿ ಬ್ರಿಟಿಷರ ಬಿಗಿ ಹಿಡಿತವೇ ಭಾರತದ ಪ್ರಗತಿಗೆ ಉಂಟಾದ ತೊಂದರೆಯೆಂದು ಅವರು ಅದರಲ್ಲಿ ವರ್ಣಿಸಿರುವರು

★

ಲೋರ್ಡ್ ಜೆಟ್ಲೆಂಡರು ಪಾರ್ಲಿಮೆಂಟಿನಲ್ಲಿ ಪ್ರಶ್ನೆಗೆ ಉತ್ತರ ಹೇಳುತ್ತಾ ತನಗೆ ವೈಸರಾಯರು ಹಿಂದೂ ಮತ್ತು ಮುಸ್ಲಿಮರೊಳಗೆ ಒಂದು ನ್ಯಾಯ ರೀತಿಯ ನಿರ್ಧಾರವನ್ನು ಮಾಡಲು ಆಗದಿರುವ ವಿಷಯವಾಗಿ ಬೇಸರಪಡುತ್ತೇನೆಂದು ಹೇಳುತ್ತಾ ಕಾಂಗ್ರೆಸಿನವರು ವೈಸರಾಯರ ಸೂಚನೆಯನ್ನು ಸಂಪೂರ್ಣ ನಿರಾಕರಿಸಿದೆಯೆಂದೂ, ಮಾತ್ರವಲ್ಲದೆ ಕಾಂಗ್ರೆಸ್ ಹಿಂದೂದೇಶಕ್ಕೆ ಸ್ವಾತಂತ್ರ್ಯ ಸಿಕ್ಕದೆ, ಇರುವ ಸ್ಥಿತಿಯಲ್ಲಿ ನಮ್ಮೊಡನೆ ಯಾವ ರೀತಿಯಲ್ಲಿಯೂ ಸಹಕಾರಿಸಲಾರದೆಂದೂ, ಸಾರಿರುವುದೆಂದು ಹೇಳಿ, ಕಡೆಗೆ ಈ ತೆರನ ಕಾಂಗ್ರೆಸಿನ ವಾದವನ್ನು ನಮ್ಮ ಸರಕಾರವು ಅಂಗೀಕರಿಸಲಾರದೆಂದೂ, ಹಿಂದೂದೇಶದೊಡನೆ ಅನೇಕ ವರ್ಷಗಳಿಂದ ನಡೆದುಬಂದ ಬ್ರಿಟಿಷರ ಸಂಬಂಧದಿಂದ ಹಿಂದೂದೇಶದ ಭವಿಷ್ಯ ಸ್ವಾತಂತ್ರ್ಯದ ರಾಜ್ಯರಚನೆಯು ನಮ್ಮ ದೇಶಕ್ಕೆಂದೂ ಹೇಳಿದರು

★

ಪಶ್ಚಿಮ ರಣರಂಗದಲ್ಲಿ ನಡೆದ ವಿಮಾನ ಯುದ್ಧದಲ್ಲಿ ಫ್ರೆಂಚರು ವಿಜಯಿಗಳಾಗಿರುವರು

★

"ಡಚ್ ಬೆಲ್ಜಿಯಂ ರಾಷ್ಟ್ರಗಳು ಯುರೋಪಿನ ಶಾಂತಿ ಸಾಧನೆಗಾಗಿ ಯತ್ನ ಮಾಡುತ್ತಿರುವರೆಂದು ತಿಳಿದಿದೆ.

★

ಹಿಂದೂ ಬಾಂಧವರೊಡನೆ ನನಗೆ ದ್ವೇಷವಿಲ್ಲ!

ಜಿನ್ನರ ಹೃದಯ ನಿವೇದನೆ!

ಕಾಂಗ್ರೆಸು-ಲೀಗುಗಳ ಐಕ್ಯಸಾಧನೆ

ರಾಷ್ಟ್ರಪತಿಗಳ ಪ್ರಕಟಣೆ!

ಕಳೆದ ವಾರದಿಂದ ಹಿಂದೂದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಪ್ರಕ್ಷೋಭವುಂಟಾಗಿದೆ ವೈಸರಾಯರು ಗಾಂಧಿಜಿಯವರನ್ನೂ, ರಾಷ್ಟ್ರಪತಿ ರಾಜೇಂದ್ರ ಪ್ರಸಾದರನ್ನು ಆ ಮೇಲೆ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಹಮ್ಮದಾಲೀ ಜಿನ್ನಾರನ್ನೂ ಕೂಡಾ ಆಮಂತ್ರಿಸಿ ಮಾತುಕತೆ ನಡೆಸಿದರು ಎಲ್ಲರ ದೃಷ್ಟಿಯು ಭಾರತದ ಮುಖಂಡರ ಮಾತುಕತೆಯ ಕಡೆಗೆ ತಿರುಗಿತ್ತು ಅಷ್ಟರಲ್ಲಿ ಬ್ರಿಟಿಷ್ ಸರಕಾರವು ಅಲ್ಪ ಸಂಖ್ಯಾಕರ ಹಕ್ಕಿನ ವಿಷಯ ಎತ್ತಿಹೇಳುವುದನ್ನೂ, ಅದಲ್ಲದೆ, ಹಿಂದೂ ಮುಸ್ಲಿಂ ಭೇದವಿರುವುದರಿಂದ ಯಾವ ರೀತಿಯ ಜವಾಬ್ದಾರಿಯನ್ನೂ ಭಾರತೀಯರ ಮೇಲೆ ಅರ್ಪುದಿಲ್ಲವೆಂದು ಹೇಳುವುದನ್ನೂ, ಸಮಾಧಾನಗೊಳಿಸುವ ಸಲುವಾಗಿ, ಹಿಂದೂ ಮುಸ್ಲಿಂ ಐಕ್ಯವಾಗಿ, ಕಾಂಗ್ರೆಸಿನಲ್ಲಿ ಎಲ್ಲರೂ ಒಂದಾಗಿ, ರಾಷ್ಟ್ರಹಿತದ ವಿಷಯದಲ್ಲಿ ಸರ್ವರೂ ಕೂಡಾ ಯತ್ನಿಸಬೇಕೆಂದು ಉದ್ದೇಶಿಸಿ ಗಾಂಧಿಜಿಯವರು ಜಿನ್ನಾರೊಡನೆ ಮಾತುಕತೆ ನಡೆಸಿ ವೈಸರಾಯರಿಗೆ ಒಂದು ಒಮ್ಮತದ ಪ್ರಕಟಣೆಯನ್ನು ಕೊಡುವುದಾಗಿ ಆಲೋಚಿಸಿದರು ಅಷ್ಟರಲ್ಲಿ ವೈಸರಾಯರು ಮತ್ತು ಭಾರತದ ಮುಖಂಡರ ಮಾತುಕತೆಯು ನಡೆಯುತ್ತಿತ್ತು ವೈಸರಾಯರು ಹಿಂದೂದೇಶಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು (Dominion Status) ಕೊಡಬಹುದಾಗಿಯೂ, ಆದರೆ ಅಲ್ಪ ಸಂಖ್ಯಾಕರ ಸಮಸ್ಯೆಯು ಇತ್ಯರ್ಥವಾಗಬೇಕೆಂದೂ, ಪ್ರಕೃತ ಸಂದರ್ಭದಲ್ಲಿ ವೈಸರಾಯರ ಸಮಾಲೋಚಕ ಸಮಿತಿಯಲ್ಲಿ ಕಾಂಗ್ರೆಸು ಮತ್ತು ಮುಸ್ಲಿಂ ಲೀಗು ಸಹಕರಿಸಬೇಕೆಂದೂ, ಹೇಳಿದರಾಗಿ ತಿಳಿದುಬಂತು. ಆದರೆ ಅದಕ್ಕೆ ಉತ್ತರವಾಗಿ ಭಾರತದ ಮುಖಂಡರು, ಬ್ರಿಟಿಷರ ಯುದ್ಧ ಉದ್ದೇಶವೇನೆಂದೂ, ಅದು ಭಾರತಕ್ಕೆ ಹೇಗೆ ಅನ್ವಯಿಸುತ್ತದೆಯೆಂಬುದನ್ನೂ ಕಾಂಗ್ರೆಸು ಜನತೆಯ ಪರವಾಗಿ ಕೇಳಿರಲು, ಕಲ್ಪಿತ ಹಿಂದೂ ಮುಸ್ಲಿಂ ಭೇದವನ್ನು ಮುಂದೊಡ್ಡಿಕೊಂಡು ಬ್ರಿಟಿಷ್ ಸರಕಾರವು ಹೀಗೆ ವಕ್ರ

ಉತ್ತರವನ್ನು ಕೊಡುವುದು ಸರಿಯಲ್ಲವೆಂದೂ ಹೇಳಿದರು.

ಒರಿಸ್ಸಾ ಮಂತ್ರಿಮಂಡಳದ ರಾಜಿನಾಮೆ

ಒರಿಸ್ಸಾ ಮಂತ್ರಿಮಂಡಳವು ನವಂಬರ ೪ರಂದು ರಾಜಿನಾಮೆ ಕೊಡುವುದಕ್ಕಿಂತ ಮೊದಲು ಪ್ರಧಾನ ಮಂತ್ರಿಗಳು ಯುದ್ಧ ಕುರಿತು ಭಾರತದ ಸಹಕಾರದ ವಿಷಯ ಠರಾವನ್ನು ಅಸೆಂಬ್ಲಿಯ ಮುಂದಿಟ್ಟರು ಅದು ಮಂಜೂರು ಆಯಿತು

ಸಾರ್ವಭೌಮರಿಗೆ ಸನಾತನಿಗಳ ತಂತಿ

ದಕ್ಷಿಣ ಭಾರತದ ಸನಾತನಿಗಳ ಪರವಾಗಿ, ಮಧುರೆಯ ಸನಾತನಿಗಳ ಸಾರ್ವಭೌಮರಿಗೆ ಒಂದು ತಂತಿಯನ್ನು ಕಳುಹಿಸಿರುವರು ಅದರಲ್ಲಿ ಕಾಂಗ್ರೆಸು ಮಂತ್ರಿಮಂಡಳವು ರಾಜಿಕೊಟ್ಟದ್ದು ಒಳ್ಳೆದಾಯಿತೆಂದೂ, ಕಾಂಗ್ರೆಸಿನ ಆಡಳಿತದಲ್ಲಿ ಸನಾತನ ಧರ್ಮವು ಕಷ್ಟಕ್ಕೆ ತುತ್ತಾಗಿತೆಂದೂ, ಇನ್ನು ಬೇಗನೇ ಬ್ರಿಟಿಷ್ ಸರಕಾರವು ದೇವಸ್ಥಾನ ಪ್ರವೇಶ ಮಸೂದೆಯನ್ನು ಹಿಂದೆಗೆಯಬೇಕಾಗಿಯೂ, ಈಗಿನ ಯುದ್ಧದಲ್ಲಿ ಬ್ರಿಟನಿಗೆ ಗೆಲುವಾಗಬೇಕೆಂದು ಸನಾತನಿಗಳು ಪ್ರಾರ್ಥಿಸಿದಂತೆ ಈ ಸಲವೂ ಪ್ರಾರ್ಥಿಸುವುದಾಗಿಯೂ ಇತ್ತು.

ಸರ್ದಾರ ಪಟೇಲರ ಸಿಂಹ ಗರ್ಜನೆ ಕಾಂಗ್ರೆಸು ಬ್ರಿಟನಿಗೆ ಸಹಾಯಮಾಡುವ ಅಭಿಪ್ರಾಯವನ್ನು ಹಿಂದೆಗೆದಿಲ್ಲ ಆದರೆ ಭಾರತಕ್ಕೆ ಸ್ವಯಂನಿರ್ಣಯ ಅಧಿಕಾರವು ಸಿಗಬೇಕು —ವೈಸರಾಯ ಮೊದಲಿನ ತಕ್ಷವಾದ ನಮ್ಮನ್ನು ವಿಭಜಿಸಿ ಆಳುವ ನೀತಿಯನ್ನೇ ಕೈಕೊಂಡಿದ್ದಾರೆ, ಜಾತೀಯ ಚುನಾವಣೆಯ ಮೂಲಕ, ಜಾತೀಯ ಬೇಧವೆಂಬುದನ್ನು ಬ್ರಿಟಿಷರೇ ಇಲ್ಲಿ ಬೆಳೆಸಿದರು ಆದರೆ ಅದನ್ನು ಇತರರು ಪರಿಹರಿಸುವ ಅಗತ್ಯವಿಲ್ಲ. ಭಾರತೀಯರೇ ಅದನ್ನು ಬಗೆಹರಿಸುವರು

'ಭಾರತವು ಎಲ್ಲಾ ಯುದ್ಧಗಳನ್ನೂ ನಿಲ್ಲಿಸಲೂ ತಯಾರಿದೆ ಶಸ್ತ್ರದ ತಳುಕಿಯು ನಾಶವಾಗುವುದನ್ನು ಭಾರತವು ನೋಡಬೇಕು. ಅದರೊಡನೆ ನಾಜೀ ಶಾಹೀ ಸಾಮ್ರಾಜ್ಯ ಶಾಹೀ ಇವೆಲ್ಲಾ ನಿರ್ನಾಮ ಹೊಂದಬೇಕು ಇದಕ್ಕಾಗಿ ಭಾರತೀಯರೆಲ್ಲರೂ ಒಮ್ಮತದಿಂದ ಇರಬೇಕು ನಮ್ಮ ಭೇದಗಳನ್ನು ಮರೆಯಬೇಕು ನಮ್ಮ ರಾಷ್ಟ್ರದ ಏಕೈಕ ಧುರೀಣರಾದ ಮಹಾತ್ಮಾಜಿಯವರು ನಡೆಸಿದ ಮಾರ್ಗದಲ್ಲಿ ನಾವು ನಡೆಯಬೇಕು.'' ಎಂದರು

ಶ್ರೀ ಸತ್ಯಮೂರ್ತಿಯವರು ಮದ್ರಾಸಿನ ಮೇಯರರಾದರು

ಶ್ರೀ ಸತ್ಯಮೂರ್ತಿಗಳು ಮದ್ರಾಸು ಕೊರ್ಪೊರೇಶನಿನ ಮೇಯರರಾಗಿ ಚುನಾಯಿತರಾದರು

ಗಡಿನಾಡಿನ ಮಂತ್ರಿಮಂಡಲದ ರಾಜಿನಾಮೆ

ಗಡಿನಾಡಿನ ಮಂತ್ರಿಮಂಡಳವು ತಾ ೭ರಂದು ಅಧಿಕಾರಕ್ಕೆ ರಾಜಿನಾಮೆ ಕೊಟ್ಟಿತು 'ಯುದ್ಧ'ದ ಠರಾವು ಅದರಲ್ಲಿ ಮಂಜೂರಾಯಿತು ಮಂತ್ರಿಗಳೂ ಮತ್ತು ಪಾರ್ಲಿಮೆಂಟರಿ ಸೆಕ್ರೆಟರಿಯವರೂ ಒಟ್ಟಾಗಿ ರಾಜಿನಾಮೆ ಕೊಟ್ಟಿರುವರು. ಪ್ರಧಾನ ಮಂತ್ರಿ ಡಾ| ಖಾನ ಸಾಹೇಬರು ರಾಜಿಯನ್ನು ಗವರ್ನರರ ಹಸ್ತ ಕೊಟ್ಟರು

ಯುದ್ಧ ಮುಗಿದಕೂಡಲೆ ಸ್ವಾತಂತ್ರ್ಯ

ಹಿಂದೂದೇಶಕ್ಕೆ ಯುದ್ಧ ಮುಗಿದ ಕೂಡಲೇ ಡೊಮಿನಿಯನ್ ಸ್ಟೇಟಸ್ ಕೊಡಬೇಕಾಗಿಯೂ ಈಗ ಅದರ ಸಹಾಯಪಡೆಯಬೇಕಾಗಿಯೂ ಡೈಲಿ ಹೆರಾಲ್ಡ್ ಪತ್ರಿಕೆಯು ಬರೆಯುತ್ತದೆ



ದುಃಖದಾಯಕವಾದ ಗಂಟಲು ವೇದನೆಯನ್ನು ಗುಣಪಡಿಸುವುದು.

ನೀವು ಗಂಟಲು ವೇದನೆಯಿಂದ ನರಳುತ್ತಿದ್ದು ಆಹಾರವನ್ನು ನುಂಗುವಾಗ ಬೇನೆಯಾಗುವುದಾದರೆ ಕೂಡಲೇ ಪೆಪ್ಸನ್ನು ಸೇವಿಸಿರಿ, ಯಾಕಂದರೆ ಈ ಕ್ರಿಮಿನಾಶಕ ಶ್ವಾಸನೀಯ ಪೆಪ್ಸ್ ಮಾತ್ರೆಗಳು ಅಂಥಾ ವೇದನೆಗಳನ್ನು ಕೂಡಲೇ ಗುಣಪಡಿಸುತ್ತದೆ.

ಪೆಪ್ಸ್ ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸೇಂದ್ರಿಯಗಳನ್ನು ಪ್ರವೇಶಿಸುತ್ತವೆ. ಇದರಿಂದಾಗಿ ವೇದನೆಗೊಳಪಟ್ಟಂತಾ ಗಂಟಲು ಬೇನೆಯು ಗುಣವಾಗಿ ಬಾತುವಿಕೆಯು ಕಡಿಮೆಯಾಗುವುದು ಮಾತ್ರವಲ್ಲದೆ ವಿಷಕ್ರಿಮಿಗಳನ್ನು ನಾಶಮಾಡಿ ಬಿಡುವುದು. ಪೆಪ್ಸ್ ಸೇವಿಸಲು ಬಹಳ ರುಚಿಕರವಾದ ಮತ್ತು ಬಹಳ ಉತ್ತಮವಾದ್ದು

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ. 1ರಂತೆ ಮಾರುತ್ತಾರೆ

ಏಜಂಟ್ಸ್

ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಪೆಪ್ಸನ್ನೇ ಕೊಂಡುಕೊಳ್ಳಿರಿ

PEPS

ಕ್ರಿಮಿನಾಶಕ ಶ್ವಾಸನೀಯ ಮಾತ್ರೆಗಳು

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂ
ತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಸಾವುಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವುಕಾರ ಮಹಾಲ್, ಮಂಗಳೂರು.

Constructive Banking

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding a Crore. And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OF A CRORE

ESTED 1906

CANARA BANK, LIMITED.

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p a
in denominations of

RS. 50/-, 100/-, 500/-, 1,000/-, & 5,000/
are now issued at all our Branches

For particulars call at or write to any of our nearest Branches.

THE

BANK OF MANGALORE LTD.,

MANGALORE

ESTD 1921

Branches -

Mudabidri & Padubidri

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

All kinds of bankingbusiness transacted

ಅದೊಂದು ಶಿವರಾತ್ರಿಯ ದಿನ. ಮೋರ್ವಿಯ ಅಂಬಾ ಶಂಕರರು ಒಳ್ಳೆಯ ಸನಾತನಿಗಳು. ಅವರು ಶ್ರೀಮಂತ ಬ್ರಾಹ್ಮಣರು. ಹಗಲು ಉಪವಾಸ ಪ್ರಾರ್ಥನೆಗಳಲ್ಲಿ ಇಡೀ ಕುಟುಂಬ ಆ ದಿನ ಆಚರಣೆ ಮಾಡಿತು. ಅದು ಮುಗಿದ ಮೇಲೆ ಮನೆಯವರೆಲ್ಲರೂ ಶಿವಮಂದಿರಕ್ಕೆ ತೆರಳಿದರು. ಅಂಬಾ ಶಂಕರರು, ತನ್ನ ಮಗ ಮುಲ್ ಶಂಕರನನ್ನು ಕರೆದು 'ಈ ದಿನ ಶಿವರಾತ್ರಿ' ಆದುದರಿಂದ ರಾತ್ರಿ ಜಾಗರಣೆ ಮಾಡದಿದ್ದರೆ, ನಮ್ಮ ಹಗಲಿನ ಉಪವಾಸವೂ ವ್ಯರ್ಥವಾದೀತು ಎಚ್ಚರವಿರಲಿ ತಿಳಿಯಿತೇ?' ಎಂದರು. ಮುಲ್ ಶಂಕರನು ತಂದೆಯ ಮಾತಿಗೆ ತಲೆಯಲ್ಲಾಡಿಸಿದನು.

ಮಧ್ಯರಾತ್ರಿಗೆ ಶಿವಪೂಜೆಯು ಮುಗಿಯಿತು. ಪ್ರತಿಯೊಬ್ಬನಿಗೂ ಕಣ್ಣು ತೂಕಡಿಸುತಿತ್ತು. ಕ್ರಮವಾಗಿ ಒಬ್ಬೊಬ್ಬರೇ ಒರಗಿ ನಿದ್ರಿಸಹತ್ತಿದರು. ಅಂಬಾ ಶಂಕರರು ಕೆಲಹೊತ್ತು ಹೇಗೋ ಹೇಗೋ ನಿದ್ರೆಯನ್ನು ತಡೆದರೂ ಕಡೆಗೆ, ತೂಕಡಿಸುವುದು ತಡೆಯಲಾಗಲು ಅವರಿಗೂ ನಿದ್ರೆ ಹತ್ತಿತು. ಆದರೆ ಮುಲ್‌ಶಂಕರನು ಮಾತ್ರ ತಂದೆಗೆ ಕೊಟ್ಟ ಭಾಷೆಗೆ ಅನುಗುಣವಾಗಿ, ಶಿವಲಿಂಗದ ಕಡೆಗೆ ಏಕಧ್ಯಾನ ದೃಷ್ಟಿಯಿಂದ ನೋಡುತ್ತಾ ಮಂತ್ರವನ್ನು ಪಠಿಸುತ್ತಾ ಎಚ್ಚರನಾಗಿ ಕುಳಿತಿದ್ದನು.

ರಾತ್ರಿ ಒಂದು ತಾಸಿನ ಸಮಯ ಘೋರಾಂಧಕಾರದ ಮೌನವು ಇಲಿಗಳ ಶಬ್ದದಿಂದ ಭೇದಿಸಲ್ಪಟ್ಟಿತು. ಲಿಂಗದ ಪ್ರತಿಮೆಗೆ ಶಿವಾರ್ಪಣ ಮಾಡಿದ್ದ ವಸ್ತುಗಳನ್ನು ಇಲಿಗಳು ಅತ್ತಿಂದಿತ್ತ ತೆಗೆದುಕೊಂಡು ಓಡಾಡುತಿದ್ದವು. ಇದನ್ನು ನೋಡಿ ಮುಲ್‌ಶಂಕರನ ವಿಚಾರವು ಪ್ರಬುದ್ಧವಾಯಿತು.

ಸಂದೇಹ

"ಮನುಷ್ಯನು ದೇವರ ನಿರ್ಮಾಣದಲ್ಲಿ ಅತಿ ಉತ್ತಮನಾದವನು. ಆದರೆ ಶಿವಲಿಂಗವು ಮನುಷ್ಯನಿಂದ ನಿರ್ಮಿತವಾದುದು. ಮನುಷ್ಯನು ಲಿಂಗವನ್ನು ಬಹಳ ಭಯಭಕ್ತಿಗಳಿಂದ ಅರ್ಚಿಸುತ್ತಾನೆ. ಪೂಜಾರಿಯು ಮಾತ್ರ ಅದನ್ನು ಮುಟ್ಟಬಹುದಷ್ಟೆ? ಆದರೆ ಈ ಇಲಿಗಳು ಇದರ ಮೇಲೆ ಓಡಾಡುವುದೇ?" ಈ ವಿಚಾರವು ಹದಿನಾಲ್ಕು ವರ್ಷ ಪ್ರಾಯದ ಮುಲ್‌ಶಂಕರನ ತಲೆಯನ್ನು ಆವರಿಸಿತು. ಮಲಗಿದ್ದ ತಂದೆಯನ್ನು ಎಚ್ಚರಿಸಿ ತನ್ನ ಈ ಸಂದೇಹವನ್ನು ವಿವರಿಸಿದನು. ತಂದೆಯು ಏನೋ ಉತ್ತರ ಹೇಳಿದರೂ ಅದರಿಂದ ಮಗನಿಗೆ ತೃಪ್ತಿಯಾಗಲಿಲ್ಲ. ಆ ದಿನದ ಮೊದಲ್ಗೊಂಡು ಮುಲ್‌ಶಂಕರನು ಪ್ರತಿಮಾಪೂಜೆಯನ್ನು ಬಿಟ್ಟುಬಿಟ್ಟನು.

ಮುಲ್‌ಶಂಕರನು, ಹಿಂದೂಧರ್ಮದ ಸಂದೇಶವನ್ನು ದೇಶದ ವಿಶಾಲತೆಯಲ್ಲಿ ಹರಡಿದನು. ಆ ಹೊತ್ತಿಗೆ ಪಂಜಾಬದಲ್ಲಿ ಧಾರ್ಮಿಕ ಅವನತಿಯು ಆರಂಭವಾಗಿತ್ತು! ಈ ದಿವ್ಯಮೂರ್ತಿಯು ಹಿಂದೂಧರ್ಮಕ್ಕೆ ಹೊಸ ಜೀವಕಳೆಯನ್ನು ಕೊಟ್ಟನು. ಇಂದು ಆದುದರಿಂದಲೇ ಆತನನ್ನು ಸ್ವಾಮಿ ದಯಾನಂದ ಸರಸ್ವತಿಯೆಂದು, ಧಾರ್ಮಿಕ ಮಹಾಪುರುಷನೆಂದು ಎಲ್ಲೆಡೆಯಲ್ಲಿಯೂ ಜನರು ಕೊಂಡಾಡುತ್ತಿದ್ದಾರೆ. ೧೮೮೩ನೇ ಅಕ್ಟೋಬರ ೩೦ರಂದು, ಅವರು ತನ್ನ ೫೯ನೇ ವರ್ಷದಲ್ಲಿ, ಒಬ್ಬ ಹೆಂಗುಸು ಕೊಟ್ಟ ವಿಷಕಲಸಿದ ಆಹಾರವನ್ನು ಉಂಡು ಮೃತಹೊಂದಿದರು!

ಗೃಹತ್ಯಾಗ

ಆ ಶಿವರಾತ್ರಿ ದಿನದ ಘಟನೆಯಾದ ಮೇಲೆ ಹಗಲು ರಾತ್ರಿಯೆನ್ನದೆ, ಮುಲ್‌ಶಂಕರನು ಬಹಳ ವಿಚಾರಗ್ರಸ್ತನಾಗಿ ತನ್ನ ಸಂದೇಹವನ್ನು ನಿವೃತ್ತಿಗೊಳಿಸುವುದರಲ್ಲಿ ನಿಮಗ್ನನಾದನು. ಆದರೆ ಎಷ್ಟೇ ವಿಚಾರ ಮಾಡಿದರೂ ಸಮಸ್ಯೆಯು ಬಗೆಹರಿವಂತೆ ಕಂಡು ಬರಲಿಲ್ಲ. ಅಷ್ಟರಲ್ಲಿಯೇ ಅವನ ಸಹೋದರಿ ಅಸೌಖ್ಯದಲ್ಲಿದ್ದು ಮೃತಿಹೊಂದಿದಳು. ಇದರಿಂದ ಅವನಿಗೆ ಬಹು ಸಂತಾಪವಾಯಿತು. ಅಷ್ಟರಲ್ಲಿಯೇ ಆತನ ಚಿಕ್ಕಪ್ಪನೂ ತೀರಿಹೋದನು. ಇಷ್ಟರಲ್ಲಿ ಸಂಸಾರದ ವಿಷಯವಾಗಿ ಆತನಿಗೆ ಬೇಸರ ಹುಟ್ಟಿತು. ತಾನು ಕಾಶಿಗೆ ಹೋಗಿ ಅಲ್ಲಿ ವ್ಯಾಸಂಗಮಾಡಲು ಇಷ್ಟಪಡುವುದಾಗಿ ಆತನು ತಂದೆಗೆ ಹೇಳಿದನು.

ಜೀವಜ್ಯೋತಿಗಳು

ಸ್ವಾಮಿ ದಯಾನಂದ ಸರಸ್ವತಿ

[ವೈದಿಕ ಸಂಸ್ಕೃತಿಯ ಉದ್ಧಾರಕರು]

ಮಗನ ವಿರಕ್ತ ಭಾವನೆಯನ್ನು ತಿಳಿದ ಅಂಬಾ ಶಂಕರನು ಮಗನಿಗೆ ಮನೆ ಬಿಟ್ಟು ಎಲ್ಲಿಗೆ ಹೋಗಲೂ ಒಪ್ಪಿಗೆ ಕೊಡಲಿಲ್ಲ. ತನ್ನ ಮಗನಿಗೆ ಬೇಗನೇ ಮದುವೆ ಮಾಡಿಬಿಟ್ಟರೆ ವಿರಕ್ತ ಭಾವನೆಯು ಆತನ ಮನಸ್ಸಿನಿಂದ ಹೋಗಬಹುದೆಂದು ತಿಳಿದು, ತಂದೆಯು ಮಗನಿಗೆ ಮದುವೆ ಮಾಡಲು ಹಂಚಿಕೆಮಾಡಿದನು. ಆಗ ಐಶ್ವರ್ಯವಂತನ ಮಗನಿಗೆ ಹೆಣ್ಣು ಕೊಡಲು ಸಾವಿರಾರು ಮಂದಿ ಮುಂದೆ ಬಂದರು. ಆದರೆ ಒಂದು ದಿನ ಮುಂಜಾನೆಗೆ ಮುಲ್‌ಶಂಕರನು ಗೃಹದಿಂದ ಹೊರಹೊರಟು ಹೋದನು.

ಸನ್ಯಾಸಿಜೀವನ

ಸಂಗೀತ ಸ್ವರ ನಿನಾದೆಯಾದ ನರ್ಮದೆಯ ದಡದಲ್ಲಿ ತನ್ನ ೨೪ನೆಯ ವರ್ಷದಲ್ಲಿ ಮುಲ್‌ಶಂಕರನು ಸನ್ಯಾಸ ಸ್ವೀಕಾರಮಾಡಿ ಸ್ವಾಮಿ ದಯಾನಂದ ಸರಸ್ವತಿ ಎಂಬ ಹೆಸರನ್ನು ಅಂಗೀಕರಿಸಿದನು. ಆ ಮೇಲೆ ಹನ್ನೊಂದು ವರ್ಷಗಳ ದೇಶಾಟನದಲ್ಲಿ ವಿವಿಧ ಸನ್ಯಾಸಿಗಳೊಡನೆ ಇದ್ದು ದಯಾನಂದರು ಯೋಗಾಭ್ಯಾಸ ಮಾಡಿದರು. ಒಂದು ದಿನ ಮಥುರೆಯಲ್ಲಿ ಅವರು ಸ್ವಾಮಿ ವಿರಜಾನಂದರನ್ನು ಸಂದರ್ಶಿಸಿದರು. ಅವರ ಸಂದರ್ಶನವು ಸ್ವಾಮಿ ದಯಾನಂದ ಜೀವನದಲ್ಲಿ ಬಹಳ ಮಾರ್ಪಾಟನ್ನು ಉಂಟುಮಾಡಿತು. ಇಲ್ಲವಾದರೆ, ದಯಾನಂದರೂ ಕೂಡ ಇತರ ಸನ್ಯಾಸಿಗಳಂತೆ, ಕೇವಲ ಒಬ್ಬ ಪಂಡಿತನಾಗಿ ಬದುಕಿ ಸಾಯುತಿದ್ದರಲ್ಲದೆ ಸಮಾಜ ಸಂಸ್ಕಾರದಂತಹ ಕಾರ್ಯಗಳಿಗೆ ಕೈಯಿಕ್ಕುತ್ತಿರಲಿಲ್ಲ. ಸ್ವಾಮಿ ವಿರಜಾನಂದರು ಒಬ್ಬ ಕುರುಡ ಸನ್ಯಾಸಿಯಾಗಿದ್ದರು. ಆದರೆ ಅವರಿಗೆ ಆಗಿನ ಕಾಲದ ವೇದಗಳ ಅಪವ್ಯಾಖ್ಯೆಯನ್ನು ತಿಳಿದು ಮನಸ್ಸು ಮರುಗುತಿತ್ತು. ದಯಾನಂದರು ಅವರಲ್ಲಿ ಅಭ್ಯಾಸ ಮುಗಿಸಿದ ಮೇಲೆ ಗುರುವು ಒಂದು ದಿನ 'ನೀನು ಏನು ಗುರುದಕ್ಷಿಣೆ ಕೊಡುತ್ತಿ' ಎಂದು ಕೇಳಿದರು, 'ನನ್ನ ಜೀವನವೆಲ್ಲವೂ ನಿಮಗೆ ಅರ್ಪಿತವಾಗಿದೆ' ಶಿಷ್ಯರು ಹೀಗೆಂದರು.

ಗುರು ಸಂದೇಶ

ಶಿಷ್ಯನ ಮೇಲೆ ಪ್ರೀತಿಭಾವದಿಂದ ಗುರುವು 'ಹೋಗು, ಬೆಳಕನ್ನು ಪಸರಿಸು, ಕತ್ತಲನ್ನು ಪರಿಹರಿಸು, ಜನರನ್ನು, ಅಂಧ ಆಚಾರ ಅಜ್ಞಾನದಿಂದ ಮೇಲೆತ್ತು' ಹಿಂದುಗಳಿಗೆ ತಮ್ಮ ಧರ್ಮ ಮರೆತು ಹೋಗಿದೆ. ಅವರು ದೇವರ ಸ್ಥಳದಲ್ಲಿ ಕಲ್ಲು ಮಣ್ಣುಗಳನ್ನು ಇರಿಸಿ ಪೂಜಿಸುತ್ತಾರೆ. ವೇದಗಳ ಸ್ಥಾನದಲ್ಲಿ ತಮ್ಮ ಗ್ರಂಥಗಳನ್ನಿಟ್ಟು ಪಠಿಸುತ್ತಾರೆ. ಇದು ನಿನ್ನ ಜೀವನದಲ್ಲಿ ಒಂದು ಮುಖ್ಯ ಗುರಿಯಾಗಿರಲಿ. ಈ ಕಾರ್ಯವು ನಿಜವಾಗಿಯೂ ಕಷ್ಟಕರವಾದುದು, ಆದರೆ ದೇವರೂ ಋಷಿಗಳೂ ನಿನಗೆ ಆಶೀರ್ವದಿಸಲಿ' ಹೀಗೆ ಗುರುದೇವರು ಶಿಷ್ಯನನ್ನು ಆಶೀರ್ವದಿಸಿದರು.

ಯಾವ ಸಮಾಜ ಸುಧಾರಕನಿಗಾದರೂ ವಿಪತ್ತುಗಳು ಎದುರಾಗದೆ ಇಲ್ಲ. ದಯಾನಂದರೂ ತನ್ನ ಕಾರ್ಯದಲ್ಲಿ ಬಹಳ ತೊಂದರೆಗಳಿಗೆ ಗುರಿಯಾಗಬೇಕಾಯಿತು. ಮೂರ್ತಿ ಪೂಜೆಯನ್ನು ಖಂಡಿಸಿದಾಗ, ಜನರು ಅವರ ಮೇಲೆ ಉರಿದೆದ್ದರು. ಕಾಶಿಯಲ್ಲಿ ಇದರ ಕುರಿತು ಮಹಾತರ್ಕವೊಂದು ನಡೆಯಿತು. ಮೂವತ್ತು ಪಂಡಿತರು ಮೂರ್ತಿಪೂಜೆಯನ್ನು ಸಮರ್ಥಿಸಿದರು. ದಯಾನಂದರೊಬ್ಬರೇ ಅವರನ್ನು ವಿರೋಧಿಸಿ ಉತ್ತರವಿತ್ತರು. ಆದರೆ ಶತಮಾನಗಳ ಆಚಾರವನ್ನು ಬಿಡಲು ಪಂಡಿತರು ಒಪ್ಪಲಿಲ್ಲ. ಇದರ ಫಲವಾಗಿ ದಯಾನಂದರು ಸಮಾಜದಿಂದ ಬಹಿಷ್ಕೃತರಾದರು.

ಹಿಂದೀ ಸೇವೆ

ಬ್ರಹ್ಮಸಮಾಜದ ಮೂಲ ಪುರುಷರಾದ ಮಹರ್ಷಿ ದೇವೇಂದ್ರನಾಥ ಠಾಗೋರ, ಕೇಶವಚಂದ್ರಸೇನರನ್ನು ಅವರನ್ನು ಕಲ್ಕತ್ತಾದಲ್ಲಿ ಕಂಡು ಅಲ್ಲಿ ಅವರೊಡನೆ ತುಂಬಾ ಚರ್ಚೆ ಮಾಡಿದರು.

ಅಲ್ಲಿಯ ತನಕ ತನ್ನ ಭಾಷಣಗಳನ್ನು ಅವರು ಸಂಸ್ಕೃತ ಭಾಷೆಯಲ್ಲಿಯೇ ಮಾಡುತ್ತಿದ್ದರು. ಆದರೆ ಜನತೆಯ ಹೃದಯಕ್ಕೆ ತನ್ನ ಸಂದೇಶವು ಮುಟ್ಟುವುದಿಲ್ಲವೆಂದು ಅವರಿಗೆ ತಿಳಿಯಿತು. ಭಾರತದ ರಾಷ್ಟ್ರೀಯ ಭಾಷೆಯು ಹಿಂದಿಯಾಗಬಹುದೆಂದು ಅವರು ತಿಳಿದರು. ಆ ಮೇಲೆ ಅವರು ತನ್ನ ಭಾಷಣಗಳನ್ನು ಹಿಂದಿಯಲ್ಲಿಯೇ ಮಾಡತೊಡಗಿದರು. ಹಿಂದಿಯು ಭಾರತದ ರಾಷ್ಟ್ರಭಾಷೆಯಾಗಬಹುದೆಂದು ಮೊದಲಾಗಿ ತಿಳಿದವರು ದಯಾನಂದರು!

ಇದರಂತೆಯೇ ಹಿಂದೂಮುಸ್ಲಿಂ ಐಕ್ಯಕ್ಕಾಗಿಯೂ ಅವರು ಬಹಳ ಯತ್ನ ಮಾಡಿದ್ದರು.

ಅವರ ಜೀವನೋದ್ದೇಶ

ವೈದಿಕ ಧರ್ಮ ಮತ್ತು ಸಂಸ್ಕೃತಿಗಳ ಉದ್ಧಾರ ಪ್ರಚಾರಗಳೇ ಅವರ ಜೀವನೋದ್ದೇಶಗಳಾಗಿದ್ದುವು. ದೇವರು ಮತ್ತು ಭಕ್ತರಲ್ಲಿ ಭಿನ್ನತೆಯಿಲ್ಲವೆಂದು ಅವರು ಸಾರಿದರು.

ಅವರು ಸ್ಥಾಪಿಸಿದ ಆರ್ಯ ಸಮಾಜವು ಹಿಂದೂ ಸಮಾಜವನ್ನು ಅಂಧ ಅನ್ಯಾಯದ ಆಚಾರಗಳಿಂದ ಪರಿಶುದ್ಧಗೊಳಿಸಲು ಯತ್ನ ಮಾಡಿತು. ಸಾವಿರಾರು ಮಂದಿ ಅಸ್ಪೃಶ್ಯರಿಗೆ ಪವಿತ್ರ ಯಜ್ಞೋಪವೀತ ದಾನಮಾಡಿತು. ಹಿಂದುಗಳಲ್ಲದವರಿಗೂ ವೈದಿಕ ಸಂದೇಶಗಳನ್ನು ತಿಳಿಸಿತು.

ಬ್ರಹ್ಮಚರ್ಯ ಪಾಲನೆ

ಸಮಾಜ ಸುಧಾರಣೆಯೊಡನೆ ಬ್ರಹ್ಮಚರ್ಯದ ಸಾಧನೆಗಾಗಿ ಹೆಚ್ಚಾಗಿ ಪ್ರತಿಯೊಂದು ಪ್ರಾಂತದಲ್ಲಿಯೂ ಒಂದೊಂದು 'ಗುರುಕುಲ'ಗಳು ಈಗ ಇವೆ. ಭಾರತೀಯ ರೀತಿಯಲ್ಲಿ ಭಾರತೀಯ ಸಂಸ್ಕೃತಿಯನ್ನು ತಿಳಿಸಿದ ಪ್ರಥಮ ವಿದ್ಯಾನಿಲಯ ಎಂದರೆ ಗುರುಕುಲಗಳೇ! ಗುರುಕುಲದಲ್ಲಿ ಬ್ರಹ್ಮಚರ್ಯಕ್ಕೆ ಹಾಗೂ ನೀತಿಯ ನೆಲೆಗೆ ಹೆಚ್ಚಿನ ಪ್ರಾಶಸ್ತ್ಯವು ಕೊಡಲಾಗುತ್ತದೆ. ಭಾರತೀಯ ವಿದ್ಯಾಕೇಂದ್ರವಾಗಿ ಗುರುಕುಲಗಳು ಯೋಗ್ಯ ಸ್ಥಳಗಳಾಗಿವೆ.

ಸ್ವಾಮಿ ದಯಾನಂದರು ಉಜ್ವಲ ತತ್ವಜ್ಞಾನಿಗಳು, ಅಪ್ರತಿಮ ವಿದ್ವಾಂಸರು, ನಿರ್ಭಯ ಸಮಾಜ ಸುಧಾರಕರು, ಹಾಗೂ ಹಿಂದೂಧರ್ಮದಲ್ಲಿ ಹೊಸ ಜೀವಕಳೆ ತುಂಬಿಸಿದ ಮಹಾಜೀವಜ್ಯೋತಿಗಳು.



ತಯಾರಾಗಿವೆ!
1940ನೇ
ಇಸವಿಯ
ಶಾರದಾ ಡೈರಿಗಳು
ಸಣ್ಣ ಮತ್ತು ದೊಡ್ಡ
ಸೈಜುಗಳಲ್ಲಿ
ಈಗಾಗಲೇ ಮಾರಾಟಕ್ಕೆ
ಸಿದ್ಧವಾಗಿವೆ!
ದೊರೆಯುವ ಸ್ಥಳ:—
ಶಾರದಾ ಛಾಪಖಾನೆ,
ಮಂಗಳೂರು.

ದುಃಖದಾಯಕವಾದ ಗಂಟಲು ವೇದನೆಯನ್ನು ಗುಣಪಡಿಸುವುದು.

ನೀವು ಗಂಟಲು ವೇದನೆಯಿಂದ ನರಳುತ್ತಿದ್ದು ಆಹಾರವನ್ನು ನುಂಗುವಾಗ ಬೇನೆಯಾಗುವುದಾದರೆ ಕೂಡಲೇ ಪೆಪ್ಸನ್ನು ಸೇವಿಸಿರಿ, ಯಾಕೆಂದರೆ ಈ ಕ್ರಿಮಿನಾಶಕ ಶ್ವಾಸನೀಯ ಪೆಪ್ಸ್ ಮಾತ್ರೆಗಳು ಅಂಥಾ ವೇದನೆಗಳನ್ನು ಕೂಡಲೇ ಗುಣಪಡಿಸುತ್ತದೆ.

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸೇಂದ್ರಿಯಗಳನ್ನು ಪ್ರವೇಶಿಸುತ್ತವೆ. ಇದರಿಂದಾಗಿ ವೇದನೆಗೊಳಪಟ್ಟಂಥಾ ಗಂಟಲು ಬೇನೆಯು ಗುಣವಾಗಿ ಬಾತುವಿಕೆಯು ಕಡಿಮೆಯಾಗುವುದು ಮಾತ್ರವಲ್ಲದೆ ವಿಷಕ್ರಿಮಿಗಳನ್ನು ನಾಶಮಾಡಿ ಬಿಡುವುದು. ಪೆಪ್ಸು ಸೇವಿಸಲು ಬಹಳ ರುಚಿಕರವಾದ ಮತ್ತು ಬಹಳ ಉತ್ತಮವಾದ್ದು.

ಎಲ್ಲಾ ಔಷಧ ವ್ಯಾಪಾರಿಗಳು ಪೆಪ್ಸನ್ನು ರೂ. 1ರಂತೆ ಮಾರುತ್ತಾರೆ.



ಏಜಂಟ್ಸ್:
ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನು ಮದ್ರಾಸು

ಯಾವಾಗಲೂ ಪೆಪ್ಸನ್ನೇ ಕೊಂಡುಕೊಳ್ಳಿರಿ

PEPS

ಕ್ರಿಮಿನಾಶಕ ಶ್ವಾಸನೀಯ ಮಾತ್ರೆಗಳು

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಸಾವಕಾರ ಶ್ರೀನಿವಾಸರಂಗಪ್ಪ

[ಸ್ಥಾಪನೆ: ಕ್ರಿ. ಶ. 1858],

ಉಜ್ವಲ ಕಾಂತಿಯು

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore. ....And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE

ESTED: 1906

CANARA BANK, LIMITED.

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.
in denominations of

RS. 50/-, 100/-, 500/-, 1,000/-, & 5,000/
are now issued at all our Branches.

For particulars call at or write to any of our nearest Branches.

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of bankingbusiness transacted

ಆದೊಂದು ಶಿವರಾತ್ರಿಯ ದಿನ. 'ಮೋರ್ವಿ'ಯ ಅಂಬಾ ಶಂಕರರು ಒಳ್ಳೆಯ ಸನಾತನಿಗಳು. ಅವರು ಶ್ರೀಮಂತ ಬ್ರಾಹ್ಮಣರು. ಹಗಲು ಉಪವಾಸ ಪ್ರಾರ್ಥನೆಗಳಲ್ಲಿ ಇಡೀ ಕುಟುಂಬ ಆ ದಿನ ಆಚರಣೆ ಮಾಡಿತ್ತು. ಅದು ಮುಗಿದ ಮೇಲೆ ಮನೆಯವರೆಲ್ಲರೂ ಶಿವಮಂದಿರಕ್ಕೆ ತೆರಳಿದರು. ಅಂಬಾ ಶಂಕರರು, ತನ್ನ ಮಗ ಮುಲ್‌ಶಂಕರನನ್ನು ಕರೆದು 'ಈ ದಿನ ಶಿವರಾತ್ರಿ' ಆದುದರಿಂದ ರಾತ್ರಿ ಜಾಗರಣೆ ಮಾಡದಿದ್ದರೆ, ನಮ್ಮ ಹಗಲಿನ ಉಪವಾಸವೂ ವ್ಯರ್ಥವಾದೀತು. ಎಚ್ಚರವಿರಲಿ ತಿಳಿಯಿತೇ?' ಅಂದರು. ಮುಲ್‌ಶಂಕರನು ತಂದೆಯ ಮಾತಿಗೆ ತಲೆಯಲ್ಲಾಡಿಸಿದನು.

ಮಧ್ಯರಾತ್ರಿಗೆ ಶಿವಪೂಜೆಯು ಮುಗಿಯಿತು. ಪ್ರತಿಯೊಬ್ಬನಿಗೂ ಕಣ್ಣು ತೂಕಡಿಸುತ್ತಿತ್ತು; ಕ್ರಮವಾಗಿ ಒಬ್ಬೊಬ್ಬರೇ ಒರಗಿ ನಿದ್ರಿಸಹತ್ತಿದರು. ಅಂಬಾ ಶಂಕರರು ಕೆಲಹೊತ್ತು ಹೇಗೋ ಹೇಗೋ ನಿದ್ರೆಯನ್ನು ತಡೆದರೂ ಕಡೆಗೆ, ತೂಕಡಿಸುವುದು ತಡೆಯದಾಗಲು ಅವರಿಗೂ ನಿದ್ರೆ ಹತ್ತಿತ್ತು. ಆದರೆ ಮುಲ್‌ಶಂಕರನು ಮಾತ್ರ ತಂದೆಗೆ ಕೊಟ್ಟ ಭಾಷೆಗೆ ಅನುಗುಣವಾಗಿ, ಶಿವಲಿಂಗದ ಕಡೆಗೆ ಏಕಧ್ಯಾನ ದೃಷ್ಟಿಯಿಂದ ನೋಡುತ್ತಾ ಮಂತ್ರವನ್ನು ಪಠಿಸುತ್ತಾ ಎಚ್ಚರನಾಗಿ ಕುಳಿತಿದ್ದನು.

ರಾತ್ರಿ ಒಂದು ತಾಸಿನ ಸಮಯ ಭೀಕರ ಅಂಧಕಾರದ ಮೌನವು ಇಲಿಗಳ ಶಬ್ದದಿಂದ ಭೇದಿಸಲ್ಪಟ್ಟಿತು. ಲಿಂಗದ ಪ್ರತಿಮೆಗೆ ಶಿವಾರ್ಪಣ ಮಾಡಿದ್ದ ವಸ್ತುಗಳನ್ನು ಇಲಿಗಳು ಅತ್ತಿಂದಿತ್ತ ತೆಗೆದುಕೊಂಡು ಆಡ್ಡಾಡುತ್ತಿದ್ದವು. ಇದನ್ನು ನೋಡಿ ಮುಲ್‌ಶಂಕರನ ವಿಚಾರವು ಪ್ರಬುದ್ಧವಾಯಿತು.

ಸಂದೇಹ

"ಮನುಷ್ಯನು ದೇವರ ನಿರ್ಮಾಣದಲ್ಲಿ ಬಹಳ ಉತ್ತಮನಾದವನು. ಆದರೆ ಶಿವಲಿಂಗವು ಮನುಷ್ಯನಿಂದ ನಿರ್ಮಿತವಾದುದು. ಮನುಷ್ಯನು ಲಿಂಗವನ್ನು ಬಹಳ ಭಯಭಕ್ತಿಗಳಿಂದ ಅರ್ಚಿಸುತ್ತಾನೆ. ಪೂಜಾರಿಯು ಮಾತ್ರ ಅದನ್ನು ಮುಟ್ಟಬಹುದಷ್ಟೆ? ಆದರೆ ಈ ಇಲಿಗಳು ಇದರ ಮೇಲೆ ಓಡಾಡುವುದೇಕೆ?" ಈ ವಿಚಾರವು ಹದಿನಾಲ್ಕು ವರ್ಷ ಪ್ರಾಯದ ಮುಲ್‌ಶಂಕರನ ತಲೆಯನ್ನು ಆವರಿಸಿತು. ಮಲಗಿದ್ದ ತಂದೆಯನ್ನು ಎಚ್ಚರಿಸಿ, ತನ್ನ ಈ ಸಂದೇಹವನ್ನು ವಿವರಿಸಿದನು. ತಂದೆಯು ಏನೋ ಉತ್ತರ ಹೇಳಿದರೂ ಅದರಿಂದ ಮಗನಿಗೆ ತೃಪ್ತಿಯಾಗಲಿಲ್ಲ. ಆ ದಿನದ ಮೊದಲ್ಗೊಂಡು ಮುಲ್‌ಶಂಕರನು ಪ್ರತಿಮಾಪೂಜೆಯನ್ನು ಬಿಟ್ಟುಬಿಟ್ಟನು.

ಮುಲ್‌ಶಂಕರನು, ಹಿಂದೂಧರ್ಮದ ಸಂದೇಶವನ್ನು ದೇಶದ ವಿಶಾಲತೆಯಲ್ಲಿ ಹರಡಿದನು. ಆ ಹೊತ್ತಿಗೆ ಪಂಜಾಬದಲ್ಲಿ ಧಾರ್ಮಿಕ ಅವನತಿಯು ಆರಂಭವಾಗಿತ್ತು! ಈ ಭವ್ಯಮೂರ್ತಿಯು ಹಿಂದೂಧರ್ಮಕ್ಕೆ ಹೊಸ ಜೀವಕಳೆಯನ್ನು ಕೊಟ್ಟನು. ಇಂದು ಆದುದರಿಂದಲೇ ಆತನನ್ನು ಸ್ವಾಮಿ ದಯಾನಂದ ಸರಸ್ವತಿಯೆಂದು, ಧಾರ್ಮಿಕ ಮಹಾಪುರುಷನೆಂದು ಎಲ್ಲೆಡೆಯಲ್ಲಿಯೂ ಜನರು ಕೊಂಡಾಡುತ್ತಿದ್ದಾರೆ. ೧೮೮೩ನೇ ಅಕ್ಟೋಬರ ೩೦ರಂದು, ಅವರು ತನ್ನ ೫೯ನೇ ವರ್ಷದಲ್ಲಿ, ಒಬ್ಬ ಹೆಂಗುಸು ಕೊಟ್ಟ ವಿಷಕಲಸಿದ ಆಹಾರವನ್ನು ಉಂಡು ಮೃತಿಹೊಂದಿದರು!

ಗೃಹತ್ಯಾಗ

ಆ ಶಿವರಾತ್ರಿ ದಿನದ ಘಟನೆಯಾದ ಮೇಲೆ ಹಗಲು ರಾತ್ರಿಯೆನ್ನದೆ, ಮುಲ್‌ಶಂಕರನು ಬಹಳ ವಿಚಾರಗ್ರಸ್ತನಾಗಿ ತನ್ನ ಸಂದೇಹವನ್ನು ನಿವೃತ್ತಿಗೊಳಿಸುವುದರಲ್ಲಿ ನಿಮಗ್ನನಾದನು. ಆದರೆ ಎಷ್ಟೇ ವಿಚಾರ ಮಾಡಿದರೂ ಸಮಸ್ಯೆಯು ಬಗೆಹರಿವಂತೆ ಕಂಡು ಬರಲಿಲ್ಲ. ಅಷ್ಟರಲ್ಲಿಯೇ ಅವನ ಸಹೋದರಿ ಅಸೌಖ್ಯದಲ್ಲಿದ್ದು ಮೃತಿಹೊಂದಿದಳು. ಇದರಿಂದ ಅವನಿಗೆ ಬಹು ಸಂತಾಪವಾಯಿತು. ಅಷ್ಟರಲ್ಲಿಯೇ ಆತನ ಚಿಕ್ಕಪ್ಪನೂ ತೀರಿಹೋದನು. ಇಷ್ಟರಲ್ಲಿ ಸಂಸಾರದ ವಿಷಯವಾಗಿ ಆತನಿಗೆ ಬೇಸರ ಹುಟ್ಟಿತು. ತಾನು ಕಾಶಿಗೆ ಹೋಗಿ ಅಲ್ಲಿ ವ್ಯಾಸಂಗಮಾಡಲು ಇಷ್ಟಪಡುವುದಾಗಿ ಆತನು ತಂದೆಗೆ ಹೇಳಿದನು.

ಜೀವಜ್ಯೋತಿಗಳು

ಸ್ವಾಮಿ ದಯಾನಂದ ಸರಸ್ವತಿ

[ವೈದಿಕ ಸಂಸ್ಕೃತಿಯ ಉದ್ಧಾರಕರು]

ಮಗನ ವಿರಕ್ತ ಭಾವನೆಯನ್ನು ತಿಳಿದ ಅಂಬಾ ಶಂಕರನು ಮಗನಿಗೆ ಮನೆ ಬಿಟ್ಟು ಎಲ್ಲಿಗೆ ಹೋಗಲೂ ಒಪ್ಪಿಗೆ ಕೊಡಲಿಲ್ಲ. ತನ್ನ ಮಗನಿಗೆ ಬೇಗನೇ ಮದುವೆ ಮಾಡಿಬಿಟ್ಟರೆ ವಿರಕ್ತ ಭಾವನೆಯು ಆತನ ಮನಸ್ಸಿನಿಂದ ಹೋಗಬಹುದೆಂದು ತಿಳಿದು, ತಂದೆಯು ಮಗನಿಗೆ ಮದುವೆ ಮಾಡಲು ಹಂಚಿಕೆಮಾಡಿದನು. ಆಗ ಐಶ್ವರ್ಯವಂತನ ಮಗನಿಗೆ ಹೆಣ್ಣುಕೊಡಲು ಸಾವಿರಾರು ಮಂದಿ ಮುಂದೆ ಬಂದರು. ಆದರೆ ಒಂದು ದಿನ ಮುಂಜಾನೆಗೆ ಮುಲ್‌ಶಂಕರನು ಗೃಹದಿಂದ ಹೊರಹೊರಟು ಹೋದನು.

ಸನ್ಯಾಸಿಜೀವನ

ಸಂಗೀತ ಸ್ವರ ನಿನಾದೆಯಾದ ನರ್ಮದೆಯ ದಡದಲ್ಲಿ ತನ್ನ ೨೪ನೆಯ ವರ್ಷದಲ್ಲಿ ಮುಲ್‌ಶಂಕರನು ಸನ್ಯಾಸ ಸ್ವೀಕಾರಮಾಡಿ ಸ್ವಾಮಿ ದಯಾನಂದ ಸರಸ್ವತಿ ಎಂಬ ಹೆಸರನ್ನು ಅಂಗೀಕರಿಸಿದನು. ಆ ಮೇಲೆ ಹನ್ನೊಂದು ವರ್ಷಗಳ ದೇಶಾಟನದಲ್ಲಿ ವಿವಿಧ ಸನ್ಯಾಸಿಗಳೊಡನೆ ಇದ್ದು ದಯಾನಂದರು ಯೋಗಾಭ್ಯಾಸ ಮಾಡಿದರು. ಒಂದು ದಿನ ಮಥುರೆಯಲ್ಲಿ ಅವರು ಸ್ವಾಮಿ ವಿರಜಾನಂದರನ್ನು ಸಂದರ್ಶಿಸಿದರು. ಅವರ ಸಂದರ್ಶನವು ಸ್ವಾಮಿ ದಯಾನಂದ ಜೀವನದಲ್ಲಿ ಬಹಳ ಮಾರ್ಪಾಟನ್ನು ಉಂಟುಮಾಡಿತು. ಇಲ್ಲವಾದರೆ, ದಯಾನಂದರೂ ಕೂಡ ಇತರ ಸನ್ಯಾಸಿಗಳಂತೆ, ಕೇವಲ ಒಂದು ಸಂದಿ ತನಾಗಿ ಬದುಕಿ ಸಾಯುತ್ತಿದ್ದರಲ್ಲದೆ ಸಮಾಜ ಸಂಸ್ಕಾರದಂತಹ ಕಾರ್ಯಗಳಿಗೆ ಕೈಯಿಕ್ಕುತ್ತಿರಲಿಲ್ಲ. ಸ್ವಾಮಿ ವಿರಜಾನಂದರು ಒಬ್ಬ ಕುರುಡ ಸನ್ಯಾಸಿಯಾಗಿದ್ದರು. ಆದರೆ ಅವರಿಗೆ ಆಗಿನ ಕಾಲದ ವೇದಗಳ ಅಪವ್ಯಾಖ್ಯೆಯನ್ನು ತಿಳಿದು ಮನಸ್ಸು ಮರುಗುತ್ತಿತ್ತು. ದಯಾನಂದರು ಅವರಲ್ಲಿ ಅಭ್ಯಾಸ ಮುಗಿಸಿದ ಮೇಲೆ ಗುರುವು ಒಂದು ದಿನ 'ನೀನು ಏನು ಗುರುದಕ್ಷಿಣೆ ಕೊಡುತ್ತಿ?' ಎಂದು ಕೇಳಿದರು. 'ನನ್ನ ಜೀವನವೆಲ್ಲವೂ ನಿಮಗೆ ಅರ್ಪಿತವಾಗಿದೆ' ಶಿಷ್ಯರು ಹೀಗೆಂದರು.

ಗುರು ಸಂದೇಶ

ಶಿಷ್ಯನ ಮೇಲೆ ಪ್ರೀತಿಭಾವದಿಂದ ಗುರುವು 'ಹೋಗು, ಬೆಳಕನ್ನು ಪಸರಿಸು, ಕತ್ತಲನ್ನು ಪರಿಹರಿಸು; ಜನರನ್ನು, ಅಂಧ ಆಚಾರ ಅಜ್ಞಾನಗಳಿಂದ ಮೇಲೆತ್ತು'. ಹಿಂದುಗಳಿಗೆ ತಮ್ಮ ಧರ್ಮ ಮರೆತು ಹೋಗಿದೆ. ಅವರು ದೇವರ ಸ್ಥಳದಲ್ಲಿ ಕಲ್ಲು ಮಣ್ಣುಗಳನ್ನು ಇರಿಸಿ ಪೂಜಿಸುತ್ತಾರೆ. ವೇದಗಳ ಸ್ಥಾನದಲ್ಲಿ ತಮ್ಮ ಗ್ರಂಥಗಳನ್ನಿಟ್ಟು ಪಠಿಸುತ್ತಾರೆ. ಇದು ನಿನ್ನ ಜೀವನದಲ್ಲಿ ಒಂದು ಮುಖ್ಯ ಗುರಿಯಾಗಿರಲಿ. ಈ ಕಾರ್ಯವು ನಿಜವಾಗಿಯೂ ಕಷ್ಟಕರವಾದುದು; ಆದರೆ ದೇವರೂ ಋಷಿಗಳೂ ನಿನಗೆ ಆಶೀರ್ವದಿಸಲಿ' ಹೀಗೆ ಗುರುದೇವರು ಶಿಷ್ಯನನ್ನು ಆಶೀರ್ವದಿಸಿದರು.

ಯಾವ ಸಮಾಜ ಸುಧಾರಕನಿಗಾದರೂ ವಿಪತ್ತುಗಳು ಎದುರಾಗದೆ ಇಲ್ಲ. ದಯಾನಂದರೂ ತನ್ನ ಕಾರ್ಯದಲ್ಲಿ ಬಹಳ ತೊಂದರೆಗಳಿಗೆ ಗುರಿಯಾಗಬೇಕಾಯಿತು. ಮೂರ್ತಿ ಪೂಜೆಯನ್ನು ಖಂಡಿಸಿದಾಗ, ಜನರು ಅವರ ಮೇಲೆ ಉರಿದೆದ್ದರು. ಕಾಶಿಯಲ್ಲಿ ಇದರ ಕುರಿತು ಮಹಾತರ್ಕವೊಂದು ನಡೆಯಿತು. ಮೂವತ್ತು ಪಂಡಿತರು ಮೂರ್ತಿಪೂಜೆಯನ್ನು ಸಮರ್ಥಿಸಿದರು. ದಯಾನಂದರೊಬ್ಬರೇ ಅವರನ್ನು ವಿರೋಧಿಸಿ ಉತ್ತರವಿತ್ತರು. ಆದರೆ ಶತಮಾನಗಳ ಆಚಾರವನ್ನು ಬಿಡಲು ಪಂಡಿತರು ಒಪ್ಪಲಿಲ್ಲ. ಇದರ ಫಲವಾಗಿ ದಯಾನಂದರು ಸಮಾಜದಿಂದ ಬಹಿಷ್ಕೃತರಾದರು.

ಹಿಂದೀ ಸೇವೆ

ಬ್ರಹ್ಮಸಮಾಜದ ಮೂಲ ಪುರುಷರಾದ ಮಹರ್ಷಿ ದೇವೇಂದ್ರನಾಥ ಠಾಗೋರ, ಕೇಶವಚಂದ್ರ ಸೇನರನ್ನು ಅವರನ್ನು ಕಲ್ಕತ್ತಾದಲ್ಲಿ ಕಂಡು ಅಲ್ಲಿ ಅವರೊಡನೆ ತುಂಬಾ ಚರ್ಚೆ ಮಾಡಿದರು.

ಅಲ್ಲಿಯ ತನಕ ತನ್ನ ಭಾಷಣಗಳನ್ನು ಅವರು ಸಂಸ್ಕೃತ ಭಾಷೆಯಲ್ಲಿಯೇ ಮಾಡುತ್ತಿದ್ದರು. ಆದರೆ ಜನತೆಯ ಹೃದಯಕ್ಕೆ ತನ್ನ ಸಂದೇಶವು ಮುಟ್ಟುವುದಿಲ್ಲವೆಂದು ಅವರಿಗೆ ತಿಳಿಯಿತು. ಭಾರತದ ರಾಷ್ಟ್ರೀಯ ಭಾಷೆಯು ಹಿಂದಿಯಾಗಬಹುದೆಂದು ಅವರು ತಿಳಿದರು. ಆ ಮೇಲೆ ಅವರು ತನ್ನ ಭಾಷಣಗಳನ್ನು ಹಿಂದಿಯಲ್ಲಿಯೇ ಮಾಡತೊಡಗಿದರು. ಹಿಂದಿಯು ಭಾರತದ ರಾಷ್ಟ್ರಭಾಷೆಯಾಗಬಹುದೆಂದು ಮೊದಲಾಗಿ ತಿಳಿದವರು ದಯಾನಂದರು!

ಇದರಂತೆಯೇ ಹಿಂದೂಮುಸ್ಲಿಂ ಐಕ್ಯಕ್ಕಾಗಿಯೂ ಅವರು ಬಹಳ ಯತ್ನ ಮಾಡಿದ್ದರು.

ಅವರ ಜೀವನೋದ್ದೇಶ

ವೈದಿಕ ಧರ್ಮ ಮತ್ತು ಸಂಸ್ಕೃತಿಗಳ ಉದ್ಧಾರ ಪ್ರಚಾರಗಳೇ ಅವರ ಜೀವನೋದ್ದೇಶಗಳಾಗಿದ್ದುವು. ದೇವರು ಮತ್ತು ಭಕ್ತರಲ್ಲಿ ಭಿನ್ನತೆಯಿಲ್ಲವೆಂದು ಅವರು ಸಾರಿದರು.

ಅವರು ಸ್ಥಾಪಿಸಿದ ಆರ್ಯ ಸಮಾಜವು ಹಿಂದೂ ಸಮಾಜವನ್ನು ಅಂಧ ಅನ್ಯಾಯದ ಆಚಾರಗಳಿಂದ ಪರಿಶುದ್ಧಗೊಳಿಸಲು ಯತ್ನ ಮಾಡಿತು. ಸಾವಿರಾರು ಮಂದಿ ಅಸ್ಪೃಶ್ಯರಿಗೆ ಪವಿತ್ರ ಯಜ್ಞೋಪವೀತ ದಾನಮಾಡಿತು. ಹಿಂದುಗಳಲ್ಲದವರಿಗೂ ವೈದಿಕ ಸಂದೇಶಗಳನ್ನು ತಿಳಿಸಿತು.

ಬ್ರಹ್ಮಚರ್ಯ ಪಾಲನೆ

ಸಮಾಜ ಸುಧಾರಣೆಯೊಡನೆ ಬ್ರಹ್ಮಚರ್ಯದ ಸಾಧನೆಗಾಗಿ ಹೆಚ್ಚಾಗಿ ಪ್ರಯತ್ನಿಸಿದ ಕಾರ್ಯವೊಂದು ಪ್ರಾಂತದಲ್ಲಿಯೂ ಒಂದೊಂದು ಗುರುಕುಲಗಳು ಈಗ ಇವೆ. ಭಾರತೀಯ ರೀತಿಯಲ್ಲಿ ಭಾರತೀಯ ಸಂಸ್ಕೃತಿಯನ್ನು ತಿಳಿಸಿದ ಪ್ರಥಮ ವಿಶ್ವವಿದ್ಯಾನಿಲಯಗಳೆಂದರೆ ಗುರುಕುಲಗಳೇ! ಗುರುಕುಲದಲ್ಲಿ ಬ್ರಹ್ಮಚರ್ಯಕ್ಕೆ ಹಾಗೂ ನೀತಿಯ ನೆಲೆಗೇ ಹೆಚ್ಚಿನ ಪ್ರಾಶಸ್ತ್ಯವು ಕೊಡಲಾಗುತ್ತದೆ. ಭಾರತೀಯ ವಿದ್ಯಾಕೇಂದ್ರಗಳಾಗಲು ಗುರುಕುಲಗಳು ಯೋಗ್ಯ ಸ್ಥಳಗಳಾಗಿವೆ.

ಸ್ವಾಮಿ ದಯಾನಂದರು ಉಜ್ವಲ ತತ್ವಜ್ಞಾನಿಗಳು ಅಪ್ರತಿಮ ವಿದ್ವಾಂಸರು, ನಿರ್ಭಯ ಸಮಾಜ ಸುಧಾರಕರು; ಹಾಗೂ ಹಿಂದೂಧರ್ಮದಲ್ಲಿ ಹೊಸ ಜೀವಕಳೆ ತುಂಬಿಸಿದ ಮಹಾಜೀವಜ್ಯೋತಿಗಳು.



ತಯಾರಾಗಿವೆ!
1940ನೇ
ಇಸವಿಯ
ಶಾರದಾ ಡೈರಿಗಳು
ಸಣ್ಣ ಮತ್ತು ದೊಡ್ಡ
ಸೈಜುಗಳಲ್ಲಿ
ಈಗಾಗಲೇ ಮಾರಾಟಕ್ಕೆ
ಸಿದ್ಧವಾಗಿವೆ!
ದೊರೆಯುವ ಸ್ಥಳ:—
ಶಾರದಾ ಛಾಪಖಾನೆ,
ಮಂಗಳೂರು

ಹಿಟ್ಲರ್ ಗೋರಿಂಗರು ಕನಸಿನ ಗೋಪುರ ಕಟ್ಟುತ್ತಿದ್ದಾರೆ!

ಜರ್ಮನಿಯಲ್ಲಿ ಸಾಧನ ಸಂಪತ್ತಿಲ್ಲ

ವೈಮಾನಿಕರ ಬಲವು ದುರ್ಬಲವು

ಕೆಲಸಗಾರರು ಕಂಗಾಲಾಗಿದ್ದಾರೆ!



ಜರ್ಮನಿಯು ಹಿಟ್ಲರ ಸರಕಾರದ ಯುದ್ಧ ಮಂತ್ರಿಗಳಾದ ಗೋರಿಂಗರು ವೈಮಾನಿಕ ಯುದ್ಧದಲ್ಲಿ ಇಂಗ್ಲಾಂಡನ್ನು ಸೋಲಿಸುವುದು ಕೈ ಚಿಟಿಕೆ ತೆಗೆದಷ್ಟು ಸುಲಭಕಾರ್ಯವೆಂದು ಉತ್ತರ ಕುಮಾರನಂತೆ ಪೌರುಷಕೊಚ್ಚುತಿದ್ದಾರೆ! ಜರ್ಮನಿಯ ಹತ್ತಿರ ನೂರು ಸಾವಿರ ವಿಮಾನಗಳ ದೊಡ್ಡದೊಂದು ಪಡೆಯಿರುವುದೆಂದೂ ಹೇಳಲಾಗುತ್ತದೆ. ಈ ವಿಮಾನ ಪಡೆಯ ಮೇಲೆ ಹಿಟ್ಲರ ಗೋರಿಂಗ ದೊರೆಗಳಿಗೆ ಅತಿಶಯ ವಿಶ್ವಾಸವಿರುವುದು.

ಜರ್ಮನ ವಿಮಾನಪಡೆಯ ಬಲ

ಆದರೆ ಜರ್ಮನ ವಿಮಾನಪಡೆಯ ಬಲವೆಷ್ಟಿದ್ದಿತು? ಅದು ಬ್ರಿಟನಿನ ವಿಮಾನ ದಳದ ಮಹಾ ಶಕ್ತಿಯನ್ನು ಎದುರಿಸಲಿಕ್ಕೆ ಸಮರ್ಥವಾದೀತೆ? ಅದನ್ನು ಗೆದ್ದು ತಾನು ವಿಜಯಿಯಾಗಬಹುದೆ? ಆದರೆ ಇಂಗ್ಲಂಡಿನ ಕರಾವಳಿ ಮತ್ತು ಪಶ್ಚಿಮ ರಣರಂಗದಲ್ಲಾದ ಇತ್ತಡೆಯ ಬಲಪ್ರದರ್ಶನದ ಮೇಲಿಂದ ಹೇಳುವುದಾದರೆ ಹಿಟ್ಲರ ಗೋರಿಂಗರು ವಾಸ್ತವಿಕ ಪ್ರಪಂಚದಲ್ಲಿ ಇರುವುದಿಲ್ಲ. ಅವರು ಕಲ್ಪಿತ ಸಾಮ್ರಾಜ್ಯದಲ್ಲಿ ವಿಹರಿಸುತಿದ್ದಾರೆಂದು ಧಾರಾಳವಾಗಿ ಹೇಳಬಹುದು.

ಎಣ್ಣೆಯ ಕೊರತೆ

ಜರ್ಮನಿಯ ಹತ್ತಿರ ಎಷ್ಟು ದೊಡ್ಡ ವಿಮಾನ ಪಡೆಯಿದ್ದರೂ, ಅದಕ್ಕೆ ಬೇಕಾಗುವಷ್ಟು ಎಣ್ಣೆಯ ಸಂಗ್ರಹವು ಅಲ್ಲಿ ಇರುವುದಿಲ್ಲ. ವಿಮಾನ ಯುದ್ಧವು ದೊಡ್ಡ ಪರಿಮಾಣದಲ್ಲಿ ಕೇವಲ ಎರಡು ತಿಂಗಳು ನಡೆದರೂ ಹಿಟ್ಲರನ ಎಣ್ಣೆಯ ಉಗ್ರಾಣವು ಖಾಲಿಯಾಗುವುದು. ಆ ಮೇಲೆ ಅದು ತನ್ನ ವಿಮಾನಗಳಿಗೆ ನಕಲಿ ಎಣ್ಣೆಯನ್ನು ಉಪಯೋಗಿಸಬೇಕಾಗುವುದು. ಈ ಕೃತ್ರಿಮ ಎಣ್ಣೆಯನ್ನು ಪಡೆಯುವುದು ಕೂಡ ಜರ್ಮನಿಗೆ ಸುಲಭಕಾರ್ಯವಾಗಿರುವುದಿಲ್ಲ. 1939ರಲ್ಲಿ ಜರ್ಮನಿಯು ಬರೇ 25 ಮಿಲಿಯ ಪಿಪಾಯಿಗಳಷ್ಟು ಕೃತ್ರಿಮ ಎಣ್ಣೆಯನ್ನು ತಯಾರಿಸಲು ಸಮರ್ಥವಾಯಿತು. ಆದರೆ ಶಾಂತಿಯ ಕಾಲದಲ್ಲಿ ಅದಕ್ಕೆ ೫೨ ಮಿಲಿಯ ಮತ್ತು ಯುದ್ಧಕಾಲದಲ್ಲಿ ೧೫೦ ಮಿಲಿಯ ಪೀಪಾಯಿ ಎಣ್ಣೆಯು ಜರ್ಮನಿಗೆ ಒಂದೊಂದು ವರ್ಷಕ್ಕೆ ಬೇಕಾಗುವುದು. ವಿಮಾನಪಡೆಗೆ ಮಾತ್ರವಲ್ಲ, ಇತರ ಸೇನೆಗಳಿಗೂ ಜರ್ಮನಿಗೆ ಎಣ್ಣೆಯು ಅಗತ್ಯವಾಗಿದೆ.

ಇನ್ನು ಕೃತಕ ಎಣ್ಣೆಯು ಬೇಕಾಗುವಷ್ಟು ಜರ್ಮನಿಯಲ್ಲಿ ತಯ್ಯಾರಾಗುವುದೆಂದು ಮಾತಿಗೆ ಒಪ್ಪಿಕೊಂಡರೂ, ಆ ಎಣ್ಣೆಯು ವಿಮಾನ ಸಂಚಾಲನಕ್ಕೆ ಶುದ್ಧ ಪೆಟ್ರೋಲಿನಷ್ಟು ಉಪಯುಕ್ತವಾಗಿರುವುದಿಲ್ಲ. ಯುದ್ಧಕಾಲದಲ್ಲಿ ಇಂಥ ಎಣ್ಣೆಗಳನ್ನು ವಿಮಾನ ಮೊದಲಾದವುಗಳಿಗೆ ಉಪಯೋಗಿಸುವುದು ಅತ್ಯಪಾತಕವಾಗಿದೆ.

ಕಚ್ಚಾ ಸಾಮಗ್ರಿಗಳು ದೊರೆಯುವುದಿಲ್ಲ

ಜರ್ಮನಿಗೆ ಎಣ್ಣೆಯ ಅಭಾವ ಮಾತ್ರ ಇರುವುದೆಂದಲ್ಲ. ಅದಕ್ಕೆ ಕಚ್ಚಾಸಾಮಗ್ರಿಗಳೂ ದೊರೆಯುವುದಿಲ್ಲ. ಶಾಂತಿ ಇದ್ದಾಗ ಕೂಡಾ ಬೇಕಾದಷ್ಟು ಉಕ್ಕು, ಎಲ್ಯುಮಿನಿಯಂ ಮೊದಲಾದವುಗಳಿಲ್ಲದೆ ಅದು ತುಂಬ ಭಂಗಪಟ್ಟಿತ್ತು. ಈಗಂತೂ ಮಿತ್ರಮಂಡಲಿಯು ಅಂಥ ಸಾಮಗ್ರಿಗಳು ಜರ್ಮನಿಗೆ ಹೋಗದಂತೆ ತಡೆಹಾಕಿರುವುದರಿಂದ ಅವುಗಳನ್ನು ದೊರಕಿಸಿಕೊಳ್ಳುವುದು ಅದಕ್ಕೆ ಅಸಾಧ್ಯವೆಂಬಂತಾಗಿದೆ.

ವೈಮಾನಿಕರ ಯೋಗ್ಯತೆ

ಇಂಗ್ಲಾಂಡಿನ ವೈಮಾನಿಕರಂತೆ ಜರ್ಮನ ವೈಮಾನಿಕರು ಕ್ರಮಗೊಂಡ ಶಿಕ್ಷಣ ತರಬೇತಿ, ಅನುಭವಗಳನ್ನು ಪಡೆದವರಾಗಿರುವುದಿಲ್ಲ. ಸ್ಪೈನ ಪೋಲೆಂಡುಗಳಲ್ಲಿ ಈ ವೈಮಾನಿಕರು ತಮಗಿಂತ ದುರ್ಬಲರಾದವರೊಡನೆ ಹೋರಾಡಿದ್ದಾರೆ, ಮಾತ್ರ, ಅಲ್ಲಿ ಹಲವು ಕಡೆಗಳಲ್ಲಿ ಅವರನ್ನು ಎದುರಿಸುವವರ ಕೂಡ ಇದ್ದಿಲ್ಲ. ಆದರೆ ಇಂಗ್ಲಾಂಡಿನ ಮಾತು ಹಾಗಲ್ಲ. ಯೋಗ್ಯತೆಯಲ್ಲಿಯೂ ಸಂಖ್ಯೆಯಲ್ಲಿಯೂ ಇಂಗ್ಲಾಂಡಿನ ವೈಮಾನಿಕರು ಜರ್ಮನ ವೈಮಾನಿಕರನ್ನು ಮೀರಿಸಿರುವರು. ಸತ್ತ ಅಥವಾ ಗಾಯಗೊಂಡವರ ಸ್ಥಾನದಲ್ಲಿ ಹೊಸ ವೈಮಾನಿಕರನ್ನು ಇಟ್ಟುಕೊಳ್ಳಲಿಕ್ಕೂ ಜರ್ಮನಿಗೆ ಕಷ್ಟವಾಗಿದೆ. ಯಾಕೆಂದರೆ ಈಗ ಜರ್ಮನಿಯಲ್ಲಿ ವೈಮಾನಿಕರ ತರಬೇತಿ ಕೇಂದ್ರಗಳು ಹೆಸರು ಪೂರ್ತಿಗೆ ಮಾತ್ರ ಇರುವವು. ಆದರೆ ಫ್ರಾನ್ಸು ಯುದ್ಧಕಾಲದಲ್ಲಿ ಎಷ್ಟು ಮಂದಿಗಾದರೂ ವೈಮಾನಿಕ ಶಿಕ್ಷಣವನ್ನು ಕೊಟ್ಟು ರಣರಂಗಕ್ಕೆ ಕಳುಹಿಸಲಿಕ್ಕೆ ಸಮರ್ಥವಾಗಿದೆ. ಜರ್ಮನಿಯು ಸಿದ್ಧಗೊಳಿಸುವುದಕ್ಕಿಂತ ಮೂರು ನಾಲ್ಕು ಹೆಚ್ಚಿಗೆ ವೈಮಾನಿಕರನ್ನು ಫ್ರಾನ್ಸು ತಯಾರು ಮಾಡಬಲ್ಲುದು. ಬ್ರಿಟನಿನ ಸಿದ್ಧತೆಯು ಫ್ರಾನ್ಸಿನದನ್ನು ಮೀರಿರುತ್ತದೆ. ಅದಕ್ಕೆ ಸಾಮಂತ ರಾಜ್ಯಗಳ ಸಹಾಯವೂ ಅತಿಶಯವಾಗಿ ಇದೆ.

ಕೆಲಸಗಾರರ ದುಸ್ಥಿತಿ

ಜರ್ಮನ ಕೆಲಸಗಾರರು ಈಗ ಬಹಳ ದುಸ್ಥಿತಿಯಲ್ಲಿದ್ದಾರೆ. ಅವರಿಗೆ ಹೊಟ್ಟೆ ತುಂಬಾ ಅನ್ನ ಕೂಡ ದೊರೆಯುತ್ತಿರುವದಿಲ್ಲ. ಆದ್ದರಿಂದ ಜರ್ಮನಿಯಲ್ಲಿ ತಯ್ಯಾರಾದ ವಿಮಾನಗಳು ಕೀಳ್ತರದವುಗಳಾಗಿರುವವು. ಅಂಥ ಜನರಿಂದ ತಯಾರಾದ ವಿಮಾನಗಳಲ್ಲಿನ ಕುಂದು ಕೊರತೆಗಳನ್ನು ತಾತ್ಕಾಲಕ್ಕೆ ನಿವಾರಿಸಬಹುದಾದರೂ ಅಂಥ ಕುಂದುಕೊರತೆಗಳು ವೈಮಾನಿಕರ ಧೈರ್ಯಸ್ಥೈರ್ಯಗಳನ್ನು ಕುಂದಿಸುವಂಥವುಗಳಾಗಿರುವವು.

ಇಂಥ ವಿಮಾನ ಪಡೆಯಿಂದ ಇಂಗ್ಲಾಂಡನ್ನು ಸದೆಬಡೆಯುವ ಗೋರಿಂಗ ದೊರೆಗಳ ಕನಸು ಅದು ಕನಸಾಗಿಯೇ ಉಳಿಯುವುದರಲ್ಲಿ ಆಶ್ಚರ್ಯವೇನು?

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿ

THE PIE-MONEY BANK LTD.,
Maidan Road, MANGALORE

Undertakes all kinds of Banking Business Current account at 2½%per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction unit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director.*

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

Notice

In the Court of the District Munsiff
KASARAGOD

O S No 615/1937
R E P No 400/1939

Between

Kaipadi Abdul Rahiman Beari — *Petitioner (D. H.)*

and

Mahamad Kunhi Beari & another — *Respts (J D S.)*

To the 2nd Respondent — The Firm of Abdul Rahiman Haji and C. Mohamad doing business Golikatta Bazaar, Mangalore Town, represented by its managing partner C. Mohamad, son of Abdul Rahiman Haji, Golikatta Bazaar Mangalore

Take notice that the Decree holder has applied for the sale of immoveable properties and for permission to bid and set off under order XXI rules 66 and 72 C. P. C., you are hereby informed that the 25th day of November 1939 has been fixed for settling the terms of the D. S. P &c.

Kasaragod 5—11—1939 | *Sd/* **P. Ahmad,** *Advocate for Petitioners*

ವಿಭಾಗಿಸಿ ಸ್ವಾರ್ಥ ಸಾಧಿಸುವ ಜಿನ್ನರ ದುಸ್ಸಾಹಸ!

'ಲೀಗು ಮುಸ್ಲಿಮರ ಪ್ರಾತಿನಿಧಿಕ ಸಂಸ್ಥೆ ಅಲ್ಲ

ಮುಸ್ಲಿಂ ಮುಖಂಡರ ಘೋಷಣೆ!

ಕಾಂಗ್ರೆಸಿನ ಧವಳ ಕೀರ್ತಿಯ ಮೇಲೆ ಕೆಸರು ಮಣ್ಣು ಎರಚಿ ತಮ್ಮ ಸ್ವಾರ್ಥ ಸಾಧಿಸಲಿಕ್ಕೆ ಪ್ರಯತ್ನಿಸುವ ಸರ್ವ ಸಂಸ್ಥೆಗಳಲ್ಲಿ ಮುಸ್ಲಿಂ ಲೀಗೂ ಮಿ. ಜಿನ್ನಾ ಸಾಹೇಬರೂ ನಾಯಕಾಂಕಿತರಾಗಿದ್ದಾರೆ. ಆದರೆ ಅವರಿಗೆ ಮತ್ತು ಅವರ ಆ ಸಂಸ್ಥೆಗಳಿಗೆ ಮುಸ್ಲಿಂ ಜನತೆಯ ಬೆಂಬಲವು ಏನೇನೂ ಇರುವುದಿಲ್ಲ. ಆ ಸಂಸ್ಥೆಗಳೆಂಬವು ಕೇವಲ ಕೆಲವು ಜನ ಶ್ರೀಮಂತ ಮುಸಲ್ಮಾನರ ಸ್ವಾರ್ಥ ಸಾಧನೆಯ ಸಾಧನಗಳು ಎಂಬುದು ಸದ್ಯ ರಾಜಕೀಯ ಪರಿಸ್ಥಿತಿಯಲ್ಲಿ ನಡೆಗ ಘಟನೆಗಳಿಂದ ಎಲ್ಲರಿಗೂ ತಿಳಿಯುವಂತೆ ಸ್ಪಷ್ಟವಾಗಿದೆ. ಮುಸ್ಲಿಮರೇ ಲೀಗನ್ನೂ ಮಿ. ಜಿನ್ನಾ ಸಾಹೇಬರನ್ನೂ ತೆಗಳಿ ದೂಷಿಸುತ್ತಿದ್ದಾರೆ. ಅವರ ಕೇವಲ ಜನಾಂಗವನ್ನು ವಿಭಾಗಿಸಿದ್ದಾರೆ. ಅವರದು ಕೇವಲ, ಜನಾಂಗವನ್ನು ವಿಭಾಗಿಸಿ ಸ್ವಾರ್ಥ ಸಾಧಿಸುವ ಸಾಹಸವೆಂದು ಮುಸ್ಲಿಮರ ನಿಜಪ್ರತಿನಿಧಿಗಳು ಹೇಳಲಾರಂಭಿಸಿದ್ದಾರೆ.

ಸಂಯುಕ್ತ ಪ್ರಾಂತ್ಯದಲ್ಲಿ ನಿಷೇಧ

ಸಂಯುಕ್ತ ಪ್ರಾಂತ್ಯದಲ್ಲಿ ಲೀಗಿಗೆ ಮುಸ್ಲಿಮರ ವಿರೋಧವು ಬೆಳೆಯುತ್ತಾ ಬಂದಿದೆ. ಲೀಗಿನ ಸದಸ್ಯರಾಗಿದ್ದ ಅನೇಕ ಮಂದಿ, ಅದರ ಈಗಿನ ವಿಘಾತುಕ ಧೋರಣೆಯಿಂದ ಅಸಂತುಷ್ಟರಾಗಿ ತಮ್ಮ ಸದಸ್ಯತನಕ್ಕೆ ತಿಲಾಂಜಲಿ ಕೊಟ್ಟು ಹೊರಗೆ ಬಿದ್ದಿದ್ದಾರೆ. ಮುಸ್ಲಿಂ ಲೀಗು ಮುಸ್ಲಿಮರ ಪರವಾಗಿ ಮಾತನಾಡಬಲ್ಲ ಪ್ರಾತಿನಿಧಿಕ ಸಂಸ್ಥೆಯಾಗಿರುವದಿಲ್ಲವೆಂದು ಅವರು ಘೋಷಿಸಿರುವರು. ಅಹರಾರು, ಶೀಯರು, ಸುನ್ನಿಗಳು, ಮುಸ್ಲಿಂ ಕೆಲಸಗಾರರು, ರೈತರು, ತರುಣರು ಇವರು ಯಾರೂ ಲೀಗಿನ ಈಗಿನ ಧೋರಣೆಯಲ್ಲಿ ಅದರ ಬೆಂಬಲಕ್ಕಿರುವದಿಲ್ಲ- ಈ ಸಂದಿಗ್ಧ ಸಮಯದಲ್ಲಿ ಲೀಗು ಕಾಂಗ್ರೆಸಿನೊಂದಿಗೆ ಇರಬೇಕಾಗಿದ್ದಿತೆಂದೇ ಅವರ ಅಭಿಪ್ರಾಯವಾಗಿರುವದು. ನಿಜವಾದ ಆಂದೋಲನವು ಆರಂಭವಾದಾಗ ಲೀಗಿನಲ್ಲಿರುವ ಯಾವ ಪದವಿಧರನೂ, ಅಥವಾ ಪದವಿಧರನಾಗಲಿರುವವನು ಧೈರ್ಯ ಸ್ಥೈರ್ಯ ತ್ಯಾಗಗಳನ್ನು ತೋರಿಸಲಾರನು. ಆಗ ಈ ಲೀಗಿನ ಮುಖಂಡರ ಬಣ್ಣವು ಬಯಲಿಗೆ ಬರುವದು.

ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೆ ವಿರೋಧವಾಗಿ ಲೀಗು ಮಾಡಿದ ನಿರ್ಣಯಗಳು ಖಂಡನಾರ್ಹವಾಗಿವೆ. ಅವುಗಳನ್ನು ಮುಸ್ಲಿಮ ಜನತೆಯು ಎಲ್ಲಾ ಕಡೆಗಳಿಂದ ನಿಷೇಧಿಸಬೇಕು. ಮತ ತಮ್ಮ ಪರವಾಗಿ ಮಾತನಾಡುವ ಅಧಿಕಾರವು ಲೀಗಿಗೆ ಇರುವುದಿಲ್ಲವೆಂದು ಸಾರಬೇಕು ಎಂದು ಮುಸ್ಲಿಂ ಮುಖಂಡರು ಘೋಷಿಸಿದ್ದಾರೆ.

ಶೀಯಾ ಮುಖಂಡರ ಹೇಳಿಕೆ

ಪ್ರಸಿದ್ಧ ಶೀಯಾ ಮುಖಂಡರಾದ ಮಿ. ಯುಸ್ ಯುಮ್ ನವಾಬ್ ಅಬೀದಿಬವರು ಇದೇ ಸಂದರ್ಭದಲ್ಲಿ, ಹೊರಡಿಸಿದ ಹೇಳಿಕೆಯು ಮನನೀಯವಾಗಿರುವದು.

ಅದರಲ್ಲಿ—ಮಿ. ಜಿನ್ನರು ಮುಸ್ಲಿಮರನ್ನು ಸಾಮ್ರಾಜ್ಯವಾದಿಗಳು ಮತ್ತು ಜಾತಿವಾದಿಗಳನ್ನಾಗಿ ಮಾಡಲು ಇಚ್ಛಿಸುತ್ತಾರೆ. ಶುದ್ಧ ರಾಷ್ಟ್ರೀಯವಾಗಿದ್ದ ಮಿ. ಜಿನ್ನರೇ ಈಗ ರಾಜಭಕ್ತರೂ ಸ್ವಾತಂತ್ರ್ಯ ವಿರೋಧಿಗಳೂ ಆಗಿ ಪರಿವರ್ತನೆ ಹೊಂದಿದ್ದಾರೆ ಎಂದಿರುವರು. ಆದ್ದರಿಂದಲೇ ಅಹರಾರ್, ಶೀಯಾ ಉಲೇಮಾ ಮತ್ತು ರಾಷ್ಟ್ರೀಯ ಮುಸಲ್ಮಾನರಲ್ಲಿ ಯಾರ ಸಹಾನುಭೂತಿಯೂ ಲೀಗಿನ ಕಾರ್ಯಕ್ರಮದ ಮೇಲೆ ಇರುವದಿಲ್ಲ. ಲೀಗೂ ತನ್ನ ನಿಜ ವೇಷವನ್ನು ತೋರಿಸುತ್ತಲಿರುವದಕ್ಕೆ ಅವರಿಗೆ ಸಂತೋಷವಾಗಿದೆ.

ಮೂವತ್ತು ವರ್ಷಗಳ ತನಕ ಮಕ್ಕದಲ್ಲಿದ್ದು ಸದ್ಯ ಸ್ವದೇಶಕ್ಕೆ ಮರಳಿರುವ ಮೌಲಾನಾ ಅಬ್ದುಲ್ ಹಕೀಮರಿಗೂ ಲೀಗಿನ ರೀತಿ ನೀತಿ ಮತ್ತು ಮಿ. ಜಿನ್ನರ ಧೋರಣೆಯು ತುಂಬಾ ಅತೃಪ್ತಿಯನ್ನುಂಟು ಮಾಡಿದೆ. ಕಾಂಗ್ರೆಸನ್ನು ದೂರಿ ಲೀಗೂ ಜಾತಿಯ ಕಲಹಾಗ್ನಿಯನ್ನು ಪ್ರಜ್ವಲಿಸಿದೆ ಎಂದು ಅವರು ಹೇಳಿದ್ದಾರೆ. ಲಕ್ನೋವಿನ ಮಿ. ಮಹ್ಮದ ತಾಲ್ಲೂರವರು ಕೂಡ ಮುಸ್ಲಿಮರ ಹಿತಕ್ಕಾಗಿ ಕೆಲಸ ಮಾಡುವ ಸಂಸ್ಥೆ, ಲೀಗೂ ಒಂದೇ ಅಲ್ಲವೆಂದೂ, ಲೀಗಿನ ಕಾರ್ಯಕ್ರಮವನ್ನು ಒಪ್ಪದ ಮುಸ್ಲಿಮ ಸಂಸ್ಥೆಗಳು ದೇಶದಲ್ಲಿ ಅನೇಕ ಇರುವವೆಂದೂ, ವಸ್ತುಸ್ಥಿತಿಯ ಕಡೆಗೆ ದೃಷ್ಟಿಯನ್ನಿಡದೆ, ಮುಸ್ಲಿಮರ ಪರವಾಗಿ ಸರಕಾರವು ಲೀಗಿನೊಡನೆ ಏನಾದರೂ ವ್ಯವಹಾರ ಬೆಳಸಿದರೆ ಪ್ರಮಾದವಾದೀತೆಂದೂ ಅವರು ಎಚ್ಚರಿಕೆಯನ್ನಿತ್ತಿರುವರು.

Kanarese No 8

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ. ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತ್ತಿದ್ದಾರೆ. ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು. ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ. ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು. ಉಷ್ಣದಿಂದ ಬೆಂದಂತೆ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ. ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು. ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಮೆಚ್ಚುತ್ತಿರುವರು.

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ. ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ

ಸ್ತ್ರೀಯರಿಗೆ ಋತು ಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಟಾಕಿಸ್ಟರು:—ಪೋಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಸ್ಲೋವೇಕಿಯದಲ್ಲಿ ದಂಗೆಯೇಳಬಹುದು!

ಜನರು ಹಿಟ್ಲರಶಾಹಿಯಿಂದ ಅಶಾಂತರಾಗಿದ್ದಾರೆ!

ಇತ್ತೀಚೆಗೆ ಆಸ್ಟ್ರಿಯಾ, ಜೆಕೊಸ್ಲವೇಕಿಯಾ, ಸ್ಲೋವೇಕಿಯಾಗಳಲ್ಲಿ ನಾಜಿ ಜರ್ಮನಿಗೆ ವಿರುದ್ಧ ದಂಗೆಗಳು ಸುರುವಾಗಿದೆಯೆಂದು ತಿಳಿದಿದೆ. ತಮ್ಮ ತಲೆ ಮೇಲೆ ತುಳಿಯುತ್ತಿರುವ ಜರ್ಮನರ ಕುರಿತು ಅವರು ಬಹಳವಾಗಿ ಉದ್ರೇಕಗೊಂಡಿದ್ದಾರೆ. ಗುಪ್ತ ರೀತಿಯಿಂದ ಎಲ್ಲಾ ಕಡೆಗಳಲ್ಲಿಯೂ ಯುದ್ಧ ಸಿದ್ಧತೆಯು ಭರದಿಂದ ನಡೆಯುತ್ತಿದೆ.

ಮುಂದಿನ ಉಪಯೋಗಕ್ಕೆ!

ಮೊದಲನೆಯ ದಾಗಿ ಜರ್ಮನರು ಆಸ್ಟ್ರಿಯವನ್ನು ಪ್ರವೇಶಿಸಿದ ಕೂಡಲೇ ಮಾಡಿದ ಕೆಲಸವೆಂದರೆ, ಆಸ್ಟ್ರಿಯಾದ ಸೈನಿಕರನ್ನು ನಿಶ್ಶಸ್ತ್ರರನ್ನಾಗಿ ಮಾಡುವುದು. ಅವರ ಕೈಯ್ಯ ಕೋವಿ, ರೈಫಲ್, ರಿವಾಲ್ವರ್, ಹೀಗೆ ಅವರ ವಶವಿರುವ ಪ್ರತಿಯೊಂದು ಶಸ್ತ್ರವನ್ನೂ ಕೆಳಗಿಡಲು ಅವರಿಗೆ ಅಪ್ಪಣೆಯಾಯಿತು. ಜರ್ಮನರು ಗಡಿಯನ್ನು ದಾಟಬೇಕಾದರೆ, ಸ್ಲೋವೇಕರು ತಮ್ಮ ಆಯುಧಗಳನ್ನು ಅಡಗಿಸಿಟ್ಟಿದ್ದರು. ಮುಂದಕ್ಕೆ ಒಂದು ದಿನ ಪ್ರಯೋಜನಕ್ಕೆ ಬೀಳುವುದೆಂದು ತಿಳಿದು ಅವರು ಅವುಗಳನ್ನು ನಾಜಿಗಳ ಕಣ್ಣು ತಪ್ಪಿಸಿ ಅಡಗಿಸಿ ಇಟ್ಟಿದ್ದರು.

ಚಿತ್ರಹಿಂಸೆಯಾಯಿತು!

ಆದರೆ ಈ ವಿಷಯದ ಕುರಿತು ಜರ್ಮನರು ಸಂಶಯಗೊಂಡು, ಸ್ಲೋವೇಕಿಯರ ವಶವಿದ್ದ ಅಪಾರ ಶಸ್ತ್ರ ಸಂಗ್ರಹವು ಗುಪ್ತ ರೀತಿಯಲ್ಲಿ ಸಂಗ್ರಹಿಸಲ್ಪಟ್ಟಿದೆಯೆಂದು ತಿಳಿದು, ಅವನ್ನು ಎಲ್ಲಿ ಅಡಗಿಸಿಟ್ಟಿರುವರೆಂದು ಅವರು ತಿಳಿಸಬೇಕಾಗಿ ಭಯಂಕರ ಚಿತ್ರಹಿಂಸೆಗಳಿಂದ ಸ್ಲೋವೇಕರನ್ನು ಪೀಡಿಸತೊಡಗಿದರು. ಹಾರುವ ಸಿಡಿಗುಂಡುಗಳಿಗೆ ಹಲವರು ಎದೆಯೊಡ್ಡಬೇಕಾಯಿತು.

ಹಲವರು ಈ ವಿಷಯ ಏನು ಮಾಡಿದರೂ ಹೇಳಲಿಲ್ಲ. ಏಕೆಂದರೆ ಅವರಿಗೆ ಆ ಕುರಿತು ಗೊತ್ತೆ ಇರಲಿಲ್ಲ. ಆ ಗುಟ್ಟು ಕೆಲವು ಮಂದಿಗೆ ಮಾತ್ರ ಗೊತ್ತಿತ್ತು. ಆದರೆ ಅಂತಹವರ ಕುರಿತು ಜರ್ಮನರಿಗೆ ಎಳ್ಳಿನಷ್ಟಾದರೂ ಸಂದೇಹವು ಉಂಟಾಗಲು ಎಡೆಯಿರಲಿಲ್ಲ.

ಪ್ರತೀಕಾರ!

ಟ್ರೆಂಚಿನ್ ಎಂಬಲ್ಲಿನ ಆಸ್ಪತ್ರೆಯಲ್ಲಿ ೩೦೦ ಮಂದಿ ಜರ್ಮನ್ ಸಿಪಾಯಿಗಳು ವಿಷ ಆಹಾರ ಸೇವನೆಯ ನಿಮಿತ್ತ ಕಠಿಣ ಆಪತ್ತಿಗೆ ತುತ್ತಾಗಿ ನರಳುತ್ತಿದ್ದಾರೆ. ಇಂತಹ ಹಾವಳಿಯಿಂದ ಬೇರೆ ಬೇರೆ ಕಡೆಗಳಲ್ಲಿ ಹಲವರು ರೋಗಗಳಿಗೆ ಬಲಿಯಾಗಿರುವರು. ಹಲವರು ಮರಣಪಟ್ಟು ಹೋಗಿರುವರು. ಅಂಗಡಿಗಳಲ್ಲಿ ಅವರಿಗೆ ಬೇಕಾದ ಆಹಾರ ವಸ್ತುಗಳು ಸಿಗುವುದಿಲ್ಲ. ಆಹಾರವು ಜರ್ಮನಿಯಿಂದ ಬರುವುದೂ ಇಲ್ಲ.

ಪೆಟ್ರೋಲಿಗೆ ಸರಿಯಾಗಿ ನೀರು ಮಿಶ್ರಮಾಡಿ ಜರ್ಮನರಿಗೆ ಮಾರಾಟ ಮಾಡಿದರು. ಇದರಿಂದ ಅವರ ವಾಹನಗಳು ಮಾರ್ಗದ ಮಧ್ಯದಲ್ಲಿಯೇ ನಿಂತುಬಿಡುವಂತೆ ಆಗುತ್ತಿವೆ! ಹೀಗೆಲ್ಲಾ ಮಾಡುವುದಕ್ಕೆ ಭಯಂಕರ ಪ್ರತೀಕಾರವಿದೆಯೆಂದು ಗೊತ್ತಿದ್ದೇ ಸ್ಲೋವೇಕಿಯನರು ದಂಗೆಯೆದ್ದಿದ್ದಾರೆ!

ದಂಗೆಯ ಜ್ವಾಲೆ!

ಹೀಗಾಗಿ ಇಡೀ ರಾಷ್ಟ್ರದಲ್ಲಿಯೇ ದಂಗೆಯೇಳಲು ಸಮಯವು ಸನ್ನಿಹಿತವಾದರೆ ಸ್ಲೋವೇಕಿಯನರು ಯಾವ ಪರಿಸ್ಥಿತಿಯಲ್ಲಿ ನಡೆಯಬಹುದು ಎಂಬುದನ್ನು ಯೋಚಿಸಬಹುದು. ಗುಪ್ತವಾಗಿ ಅಡಗಿಸಿಟ್ಟ ಶಸ್ತ್ರಗಳನ್ನು ಕೈಯಲ್ಲಿ ಹಿಡಕೊಂಡು ಸ್ಲೋವೇಕನರು ತಮ್ಮ ಬಿಡುಗಡೆಯ ಸಲುವಾಗಿ ನಿರ್ಭಯರಾಗಿ ಹೋರಾಡುವರು.

ಇಂದಿನ ಯುದ್ಧದ ಪರಿಸ್ಥಿತಿಯ ಹಿಟ್ಲರನಿಗೆ ವಿಷಮ ನಿಂತಕೂಡಲೇ ಸ್ಲೋವೇಕಿಯವು ತನ್ನ ಬಿಡುಗಡೆಗಾಗಿ ಖಂಡಿತ ದಂಗೆಯೇಳುವುದು. ಅಲ್ಲಿನ ಜನರನ್ನು ದಿನಕ್ಕೆ ಹದಿಮೂರು ಗಂಟೆಗಳ ತನಕ ದುಡಿಸಿ ದುಡಿಸಿ, ರಾಷ್ಟ್ರದ ಉತ್ತಮ ಫಲ ಆಹಾರ ಸಾಧನಗಳನ್ನು ಜರ್ಮನಿಗೆ ಸಾಗಿಸುತ್ತಿದ್ದಾರೆ. ಇದರಿಂದ ಜನರು ಕೆರಳಿದ್ದಾರೆ.

ಅನ್ಯಾಯ ಹೆಚ್ಚಿತು!

ಯುದ್ಧ ಸುರುವಾದ ಮೇಲಂತೂ ಸ್ಲೋವೇಕನರು ಸಿಟ್ಟಿನಿಂದ ಕಿಡಿಕಿಡಿಯಾಗಿದ್ದಾರೆ. ಜರ್ಮನರಲ್ಲಿ ಇರುವ ಅನ್ಯಾಯ ವಂಚನೆಗಳು ಈಗೀಗ ಹೆಚ್ಚಾಗಿ ಸ್ಪಷ್ಟವಾಗುತ್ತಿದೆ. ಯುದ್ಧ ಸುರುವಾದಂದಿನಿಂದ ಜನತೆಯು ರಿಬನ್ ಟ್ರಾಪ್, ಗೋಬೆಲ್ಸ್, ಹಿಮ್ಲರ್ ಇವರ ಮೇಲೆ ಬಹಳ ಉರಿದು ಬೀಳುತ್ತದೆ. ಈ ಮೂರು ಮಂದಿ ಅವರ ಸ್ವಂತ ಹಸರಿನಲ್ಲಿ ವಿಯೆನ್ನದ ಉತ್ತಮ ಮತ್ತು ಐಶ್ವರ್ಯವತ್ತಾದ ಭಾಗಗಳನ್ನು ತಮ್ಮ ಹೆಸರಲ್ಲಿ ಮಾಡಿಕೊಂಡಿರುವರಂತೆ. ಹೀಗಾಗಿ ಜರ್ಮನಿಯ ಸಂಬಂಧವು ಕಡಿದ ಕ್ಷಣದಲ್ಲಿ ಈ ಮೂರು ಮಂದಿ ಸುಲಿಗೆಗಾರರು ಸ್ವಸ್ಥವಾಗಿ ಸ್ಲೋವೇಕಿಯದಲ್ಲಿ ಬಂದು ನೆಲಸಬಹುದು.

ಇಂದಿನ ಯುದ್ಧದಲ್ಲಿ ಜರ್ಮನರು ಸ್ಲೋವೇಕಿಯನರನ್ನು ಗುಂಡಿನೇಟಿಗೆ ಬಲಿಗೊಡಲು ಸೈನ್ಯಕ್ಕೆ ಸೇರಿಸುವುದನ್ನು ಅಲ್ಲಿನ ಜನರು ಸಹಿಸಲಾರದವರಾಗಿದ್ದಾರೆ.

ಕಾಂಗ್ರೆಸಿನ ಕುರಿತು ಅವಿಚಾರದ ಆರೋಪ

ಬ್ರಿಟಿಷ್ ಟೀಕಾಕಾರರಿಗೆ ಮಿ| ಪೋಲಕರ ಉತ್ತರ

ಹಿಂದೂದೇಶ ಮತ್ತು ಬ್ರಿಟನಿನ ಸಂಬಂಧದ ವಿಷಯದಲ್ಲಿ, ಸಮಾನತೆಯ ಸ್ಥಾನ ಮತ್ತು ರಾಷ್ಟ್ರೀಯ ಗೌರವದ ವಿಚಾರವು ಪ್ರಥಮವಾಗಿ ವಿಚಾರಿಸತಕ್ಕ ಪ್ರಾಮುಖ್ಯ ವಿಚಾರವಾಗಿದೆ. ಈ ಸಮಸ್ಯೆಯನ್ನು ಹೆಚ್ಚು ತಡಮಾಡದೆ ಬಗೆಹರಿಸಬೇಕು ಹೀಗೆಂದು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಗೆ ಒಂದು ಲೇಖನ ಬರೆಯುತ್ತಾ ಬ್ರಿಟಿಷ್ ಕೂಲಿಗಾರರ ಪಂಗಡದ ಮುಂದಾಳುಗಳಾದ ಮಿ| ಎಚ್. ಎಲ್. ಎಸ್. ಪೋಲಕರು, ಬ್ರಿಟನಿನ ಕೆಲವು ಕಾಂಗ್ರೆಸು ಟೀಕಾಕಾರರಿಗೆ ಸರಿಯಾದ ಉತ್ತರವಿತ್ತಿದ್ದಾರೆ.

'ಇಂದು ಕೆಲವು ಬ್ರಿಟಿಷ್ ಟೀಕಾಕಾರರು, ಕಾಂಗ್ರೆಸನ್ನು, ಬ್ರಿಟಿಷ್ ಮತ್ತು ಹಿಂದೀಯರ ಸಂಬಂಧದ ವಿಷಯವಾಗಿ ಅವರು ಸ್ಪಷ್ಟೀಕರಣ ಮಾಡಬೇಕೆಂದು ಹೇಳಿದ ವಿಷಯದಲ್ಲಿ, ಬ್ರಿಟಿಷರ ಕಷ್ಟವನ್ನು ಕಾಂಗ್ರೆಸಿನವರು ತಿಳಿದು ಅದರಿಂದ ಪ್ರಯೋಜನ ಪಡೆಯಲು ಬಯಸುತ್ತಾರೆ ಎಂದು ಹೇಳುವಂತಹುದು ಅಸತ್ಯ ಮತ್ತು ಅವಿಚಾರದ ಟೀಕೆಯಾಗಿದೆ. ನಿಜವಾಗಿ ನಾವು ಹಿಂದೂದೇಶದ ಗೌರವವನ್ನು ಉಳಿಸುವವರಾಗಿ, ಬ್ರಿಟಿಷ್ ಸಾಮ್ರಾಜ್ಯದ ಸಹೋದರೀ ರಾಷ್ಟ್ರಗಳಲ್ಲಿ ಅದಕ್ಕೂ ಯೋಗ್ಯ, ಸ್ಥಾನವನ್ನು ಕೊಡಕೊಡಲು ನಾವು ಖಂಡಿತವಾಗಿ ಇಷ್ಟವುಳ್ಳವರಾಗಿರುವೆವೆಂದು ಹಿಂದೀಯರಿಗೆ ಭರವಸೆಕೊಡಬಲ್ಲೆವಾದರೆ, ನಮ್ಮೊಡನೆ ಬಹು ಪ್ರೋತ್ಸಾಹದಿಂದಲೂ ಉದಾರತೆಯಿಂದಲೂ ಅವರು ನೆರವಾಗುವರು.

ಹೀಗೆ ಸ್ವಾರ್ಥಸಾಧಕರಂದ, ಕೆಲ ಟೀಕಾಕಾರರಿಗೆ ನಿಸ್ವಾರ್ಥದ ಉದಾರ ಹೃದಯದ ಬ್ರಿಟಿಷ್ ರಾಜಕೀಯ ಗಂಡರೇ ಖಂಡ ತುಂಡವಾದ ಉತ್ತರ ಹೇಳುತ್ತಾರೆ.

"ಭಾರತದ ಆರ್ಥಿಕ ರಾಜಕೀಯ ಉನ್ನತಿಗಾಗಿ ಯತ್ನಿಸಿರಿ"

ಪ್ರಜಾಪ್ರಭುತ್ವದ ತತ್ವವು ನೆಲಸಬೇಕು

ಶ್ರೀ ಕೃಷ್ಣನ್ ಮೇನನರಿಗೆ, ಸರ್ ಆರ್ಚಿಬಾಲ್ಡ್ ಸಿಂಕ್ಲೆಯವರ ಪತ್ರ

'ನಾಜೀ ಜರ್ಮನಿಯ ಉದ್ಧಟತನವನ್ನು ನಿರ್ನಾಮ ಗೊಳಿಸ ಮಗರೊಡನ ಭಾರತದ ಸಮಸ್ಯೆಯೂ ಪರಿಹಾರವಾಗಿ ಪ್ರಜಾಪ್ರಭುತ್ವ ತತ್ವವು ಹಿಂದೂದೇಶದಲ್ಲಿ ನೆಲೆನಿಲ್ಲಬೇಕೆಂದೂ ಅದಕ್ಕಾಗಿ ಕೂಲಿಗಾರರ ಪಕ್ಷವು ಯತ್ನಿಸಬೇಕೆಂದೂ ನೀವು ಅಪೇಕ್ಷೆ ಪಡುವಂತೆ ಖಂಡಿತ ಆಗುವುದಾಗಿ ನಾನು ನಂಬುತ್ತೇನೆ ಹೀಗೆಂದು ಶ್ರೀ| ವಿ. ಕೆ. ಕೃಷ್ಣನ್ ಮೇನನರಿಗೆ ಬರೆದು ಒಂದು ಪತ್ರದಲ್ಲಿ ಬ್ರಿಟಿಷ ಕೂಲಿಗಾರರ ಮುಖಂಡರಾದ ಸರ್ ಆರ್ಚಿಬಾಲ್ಡ್ ಸಿಂಕ್ಲೇಯರು ತಿಳಿಸುತ್ತಾರೆ.

ನಾವು ನಮ್ಮ ರಾಷ್ಟ್ರದ ಸಮಸ್ಯೆಯ ಕುರಿತು ವಿಚಾರ ಮಗ್ನರಾಗಿರುವಂತೆ, ನೀವು ನಿಮ್ಮ ರಾಷ್ಟ್ರದ ಸಮಸ್ಯೆಯ ಕುರಿತು ವಿಚಾರ ಮಗ್ನರಾಗಿರಿ. ಇದರಿಂದಲೇ ನಮ್ಮ ಉಭಯ ರಾಷ್ಟ್ರಗಳ ವಿಷಯದಲ್ಲಿ ನ್ಯಾಯವಾದ ಅಭಿಮತವು ನೆಲೆ ನಿಲ್ಲಬಹುದು. ಇದರಿಂದಲೇ ನಾವು ನಿಮ್ಮ ರಾಷ್ಟ್ರದ ಆರ್ಥಿಕ ರಾಜಕೀಯ ಏಳಿಗೆಯಲ್ಲಿ ಖಂಡಿತವಾಗಿ ನೆರವಾಗಿ ದುಡಿಯುವೆವು ಹೀಗೆನ್ನುತ್ತಾರೆ ಅವರು.

ಬ್ರಿಟಿಷ್ ಕೂಲಿಗಾರರ ಪಕ್ಷದವರು ಇಂದು ಭಾರತದ ವಿಷಯದಲ್ಲಿ ಬಹಳವಾಗಿ ನೆರವಾಗುತ್ತಿದ್ದಾರೆ.



ನೋಟಗಳು

ಡಿಲ್ಲಿಯ ವಾರ್ತೆಯು ನಿರಾಶಾಜನಕ ವಾಗಿದೆ!

ಗಾಂಧೀ—ಜಿನ್ನರ ಮಾತುಕತೆಗಳು ವ್ಯರ್ಥವಾದುವು!

ಜಿನ್ನಾರನ್ನೂ ಮಾರ್ಪಡಿಸಲು ಗಾಂಧಿಜಿಯವರ ಮಹಾಪ್ರಭಾವಕ್ಕೂ ಅಸಾಧ್ಯವಾಯಿತು.

ಗಾಂಧಿಜಿಯವರ ಎದುರು ಯಾವ ಸುಳ್ಳು, ಕಪಟ ವಂಚನೆಗಳ ಮಾತುಕತೆ ಯಾದರೂ ನಡೆಯುವುದಿಲ್ಲವೆಂದು ಪ್ರಸಿದ್ಧಿಯಿದೆ!

ಗಾಂಧಿಜಿಯವರಿಗೆ ಸತ್ಯವೊಂದೇ ಉಸಿರು. 'ಡಿಪ್ಲೊಮಸಿ' ಎಂಬುದು ಅವರಲ್ಲಿ ಇಲ್ಲವೇ ಇಲ್ಲ.

ಗಾಂಧಿಜಿಯವರಲ್ಲಿ ಇರತಕ್ಕ ಈ ಪ್ರಭಾವಕ್ಕಾಗಿ ಅರ್ವಿನ್ ಸಾಹೇಬರು ಅವರನ್ನು ಗೌರವದಿಂದ ಕಾಣುತ್ತಿದ್ದರು!

ವಿಲ್ಲಿಂಗ್ಡನ್ನ್ ಸಾಹೇಬರು ಗಾಂಧಿಜಿಯವರ ಭೇಟಿಯೆಂದರೆ ಯಾವಾಗಲೂ ತಪ್ಪಿಸುತ್ತಿದ್ದರು!

ಲಿನ್‌ಲಿತ್‌ಗೋರರವರು ಗಾಂಧಿಜಿಯವರನ್ನು ಮೆಚ್ಚುತ್ತಾರೆ! ಆದರೆ ಗಾಂಧಿಜಿಯವರ ಕೇಳಿಕೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಅವರು ಭಯಗ್ರಸ್ತರಂತಿದೆ!

ವೈಸರಾಯರ ಮುಂದೆ ಗಾಂಧಿಜಿಯವರು ಇರಿಸಿದ ಎಲ್ಲಾ ಒಳ್ಳೆಯ ಸಲಹೆಗಳೂ ಜಿನ್ನಾರವರ ದುರ್ಬೋಧನೆಗಳಿಂದ ಹಾಳಾಗಿ ಹೋದುವು.

ಆದರೂ, ವೈಸರಾಯರು ಗಾಂಧಿಜಿಯವರಿಗೆ ಇನ್ನೂ ತನ್ನ ಮನೆಯ ಬಾಗಿಲನ್ನು ತೆರೆದಿಟ್ಟಿದ್ದಾರೆ. ಗಾಂಧಿಜಿಯವರಾದರೂ ವೈಸರಾಯರು ಕರೆದರೆ ನೂರೊಂದು ಸಲವೂ ಅಲ್ಲಿಗೆ ಹೋಗಲು ತಯಾರಿದ್ದಾರೆ

ಗಾಂಧಿಜಿಯವರೊಡನೆ ಜಿನ್ನರ ಪ್ರಶ್ನೆಯೆಂದರೆ, ಕಾಂಗ್ರೆಸು ಜಾತೀಯ ಸಂಸ್ಥೆಯೆಂದೂ, ಅದು ಹಿಂದೂಗಳ ಸಂಸ್ಥೆಯೆಂದೂ ಅವರು ಒಪ್ಪಬೇಕೆಂಬುದೇ ಆಗಿದೆ!

ಜಿನ್ನರಿಗಾದರೂ ಕಾಂಗ್ರೆಸಿನ ಪ್ರಬಲ ಶಕ್ತಿಯು ತಿಳಿದಿದೆ. ತಿಳಿದಿದ್ದೂ ಅಸಾಧ್ಯ ಕೇಳಿಕೆಗಳನ್ನೇ ಅವರು ಮುಂದಿಡುತ್ತಿದ್ದಾರೆ.

...ಗೆ ಗಾಂಧಿಜಿಯವರ ಪ್ರಭಾವವ ...ಕ್ರಮಿಸಿ ಸ್ಥಿರವಾಗಿ ನಿಂತಿರುವ ಜಿನ್ನಾರವರು, ಗಾಂಧಿಜಿಯವರಿಗೆ ಬಹಳ ದೊಡ್ಡ ಅಪಮಾನವನ್ನು ಮಾಡಿದ್ದಾರೆ.

ಈ ಅವಿಚಾರದ ವರ್ತನೆಯು ಅವರ ಪಂಗಡಿಗರಲ್ಲಿಯೇ ತೀವ್ರ ಅಸಂತೃಪ್ತಿಯನ್ನು ಹುಟ್ಟಿಸಿದೆ.

ಅಖಿಲ ಮುಸ್ಲಿಮರ ಪ್ರತಿನಿಧಿ ಸ್ಥಾನದಲ್ಲಿ ನಿಂತು ಮಾತನಾಡಲು ಜಿನ್ನರಿಗೆ ಅಧಿಕಾರವಿಲ್ಲವೆಂದು ಬೇರೆ ಬೇರೆ ಕಡೆಗಳಿಂದ ಮುಸ್ಲಿಮರೇ ತಿಳಿಸಿದ್ದಾರೆ.

ಪಾರ್ಲಿಮೆಂಟಿನಲ್ಲಿ ಲಾರ್ಡ್ ಸಾಮುವೇಲರು ಒಹುಮತರ ಹಕ್ಕನ್ನು ಅಲ್ಪ ಸಂಖ್ಯಾಕರನಾಗಿ ಕಡೆಗಣಿಸಬಾರದಾಗಿ ಹೇಳಿದರು

ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡುವ ವಿಷಯದಲ್ಲಿ ಹಿಂದೂ ಮುಸ್ಲಿಂ ಬೇಧದ ಪ್ರಶ್ನೆಯನ್ನು ಮುಂತಾರ ಬಾರದಾಗಿ ಪಂಡಿತ ಮಾಲವೀಯರು ತಿಳಿಸಿದರು

ಕೆನಡದಲ್ಲಿ ಬ್ರಿಟಿಷ್ ಮತ್ತು ಫ್ರಂಚರೊಳಗೆ ಜಾತೀಯ ವೈಷಮ್ಯಗಳಿದ್ದರೂ ಅಲ್ಲಿಗೆ ಡೊಮಿನಿಯನ್ ಸ್ಟೇಟಸ್ ಕೊಡಲ್ಪಟ್ಟಿದೆಯೆಂದು ಅವರು ಉದಾಹರಿಸಿ ಸಿದ್ಧಾಂತಿಸಿದರು.

ಈ ಎಲ್ಲಾ ವಿಚಾರ ಪೂರ್ಣವಾದ ತರ್ಕಗಳನ್ನು ಬದಿಗೊತ್ತಿ ಜಿನ್ನರು ತಾವು ಹಿಡಿದ ಕೋಳಿಗೆ ಮೂರೇ ಕಾಲೆಂದು ವಾದಿಸುತ್ತಿದ್ದಾರೆ.

ಜಿನ್ನರ ಕುರಿತು ಗಾಂಧಿಜಿಯವರು ಬೇಸತ್ತು ಹೋಗಿದ್ದಾರೆ. ಆದರೆ ಈಗ ನೆಹರುಗಳು ತಿರಿಗಿ ಆಶೆಯ ಕಿರಣವನ್ನು ತೋರಿಸುವಂತೆ ಕಾಣುತ್ತದೆ.

ಜಿನ್ನಾ ಸಾಹೇಬರು ನೆಹರುಗಳ ವಿಷಯ ಸ್ವಲ್ಪ ಅಭಿಮಾನವಹಿಸಿದಂತೆಯೂ ತೋರುತ್ತದೆ.

ಆದರೆ ಈ ಅಭಿಮಾನವು ಬಹುಕಾಲ ಇರಲು ಸಾಧ್ಯವಿಲ್ಲ. ಯಾವ ಹೊತ್ತು ಮೇಲಿಂದ ಜಿನ್ನರಿಗೆ ನೆಹರುಗಳನ್ನು ತಿರಸ್ಕರಿಸಿ ಹೊರಹಾಕಲು ಅಪ್ಪಣೆ ಬರುವುದೋ, ಆಗ ಅನುಜ್ಞೆಗೆ ವಿಧೇಯರಾಗಿ ಅವರು ನಡೆಯುವುದರಲ್ಲಿ ಸಂದೇಹವಿಲ್ಲ

ಕಾಂಗ್ರೆಸಿನ ಪ್ರಾರಂಭ : ನಗಳಲ್ಲಿ ಜಿನ್ನರೂ ಒಬ್ಬ ರಾಷ್ಟ್ರೀಯ ಪ್ರೇಮಿಯಾಗಿದ್ದರು.

ರೌಂಡ್‌ಟೇಬಲ್ ಕಾನ್ಫರೆನ್ಸಿನ ಸಮಯದಲ್ಲಿ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡಬೇಕೆಂದು ಅವರೂ ವಾದಿಸಿದ್ದರು.'

ಈಗ ಅವರು ಕಾಂಗ್ರೆಸಿನ ವಿರುದ್ಧ ಹೋರಾಡುತಿದ್ದಾರೆ ಪ್ರಜಾಪ್ರಭುತ್ವ ಸರಕಾರವು ಭಾರತಕ್ಕೆ ಸಲದೆಂದೇ ಅವರ ಹೇಳಿಕೆಯಾಗಿದೆ! ಕಾಲಸ್ಥಕುಟಿಲಾಗತಿ!'

ಪುಸ್ತಕ-ವಿಮರ್ಶೆ

ಪಯಣ (ಭಾವಗೀತೆಗಳ ಸಂಗ್ರಹ)

ಕವಿಗಳು 'ವಿನಾಯಕ'. ಪ್ರಕಾಶಕರು—ಮನೋಹರ ಗ್ರಂಥಪ್ರಕಾಶನ ಸಮಿತಿ ಧಾರವಾಡ. ಕ್ರೌನ್ ೧/೮ ಆಕಾರದ ೧೧೬ ಪುಟಗಳು ಬೆಲೆ ೧೩ ಆಣೆ.

ಈ ಕಾವ್ಯದ ಕವಿಗಳಾದ ಶ್ರೀ 'ವಿನಾಯಕ'ರು (ಪ್ರೊ. ವಿನಾಯಕ ಕೃಷ್ಣ ಗೋಕಾಕ ಇವರು) ತಮ್ಮ ಪ್ರತಿಭೋಜ್ವಲವಾದ ಕೃತಿಗಳಿಂದ ಕನ್ನಡದಲ್ಲಿ ನೂತನ ಸಾಹಿತ್ಯಸಂಘವನ್ನು ನಿರ್ಮಾಣಮಾಡಿ, ಉದಿತೋದಿತ ಕೀರ್ತಿಶಾಲಿಗಳೆನಿಸಿದ ಕೆಲವು ತರುಣ ಕವಿಗಳಲ್ಲೊಬ್ಬರು. ಕಲೆ, ಸಾಹಿತ್ಯ, ಸಂಸ್ಕೃತಿಗಳು ಯಾವುದೇ ನಾಡಿನವಾಗಿರಲಿ ರಲಿ, ಅವು ವಿಶ್ವವ್ಯಾಪಿಯಾಗಿ ಜನಜೀವನವನ್ನು ಉದ್ರೇಕಿಸಿ, ಉದ್ಬೋಧಿಸಿ, ಉಜ್ವಲಗೊಳಿಸುವವುಗಳೆಂಬ ವಿಶಾಲ ದೃಷ್ಟಿಯುಳ್ಳವರಾಗಿ ಕನ್ನಡ ಸಾಹಿತ್ಯಕ್ಕೂ ವಿಶ್ವಸಾಹಿತ್ಯದ ನೆಲೆಯಲ್ಲಿ ಮನ್ನಣೆ ದೊರಕುವಂತಾಗಬೇಕೆಂಬ ಮಹೋದ್ದೇಶದಿಂದ ಪ್ರೇರಿತರಾಗಿ, ಇಂದು ಹಲವರು ಕನ್ನಡ ಸಾಹಿತ್ಯಕ್ಕೆ ಹೊಸರೂಪ, ಹೊಸ ಜೀವಕಳೆ, ಹೊಸ ಭಾವನೆಗಳನ್ನು ತುಂಬಿಸಿ ಸಫಲರಾಗಿದ್ದಾರೆ. ಅಂತಹ ಉತ್ತಮ ಆದರ್ಶವಾದಿಗಳಲ್ಲಿ ಶ್ರೀ 'ವಿನಾಯಕ'ರೆ ನೆಲೆಯೂ ಗಣನೀಯವಾದುದು. ಆಂಗ್ಲ ಸಾಹಿತ್ಯಾಚಾರ್ಯ ಸ್ಥಾನದಲ್ಲಿದ್ದು ಕನ್ನಡದ ಸೇವೆಗಾಗಿ ನಿರಂತರಶ್ರಮಿಸುತ್ತಿರುವ ಇವರ ಹಲವು ಕೃತಿಗಳು ಕನ್ನಡದ ತಾಯಿಗೆ ಮನ್ನಣೆಯ ಕಾಣಿಕೆಗಳಾಗಿ ಸಂದಿವೆ. ಈ ಪುಸ್ತಕವು ಅವರು ಕಳೆದ ಕೆಲವು ವರ್ಷಗಳಲ್ಲಿ ರಚಿಸಿದ ಭಾವಗೀತೆಗಳ ಸಂಗ್ರಹ ಗ್ರಂಥವು.

ಕವಿ ಹೃದಯದ ಸಂಸ್ಕಾರವನ್ನೂ, ಒಗೆಯುವ ಭಾವನೆಯ ಆಳವನ್ನೂ ಪ್ರಪಂಚದೆದುರು ವ್ಯಕ್ತವಾಗಿ ನೀಡುವ ಭಾವಗೀತೆಗಳು ಸುಂದರವಾದ ಕಾವ್ಯಸೃಷ್ಟಿಯಾಗಿವೆ. ಅಲಂಕಾರ ಯಮಕಪ್ರಾಸಗಳಿಂದ ಕನ್ನಡ ಕಾವ್ಯದೇವಿಗೆ ಆಭರಣವಿಟ್ಟು ಸಿಂಗರಿಸುವ ಕಾಲ ಹಿಂದಿನದು. ಆಶೆಯು ತೇಜೋಮಯಿಯಾಗಬೇಕು, ಭಾಸ್ವರ ಭಾವಪೂರ್ಣಗಳಾಗಬೇಕು. ಅಂತಃಶಕ್ತಿಯಿಂದ ಪ್ರಭಾವಶಾಲಿನಿಯಾಗಬೇಕೆಂದು ಈಗ ಕವಿಗಳು ಯತ್ನಮಾಡುತಿದ್ದಾರೆ. ಶ್ರೀ 'ವಿನಾಯಕ'ರ ಪಯಣವು ಆ ರೀತಿಯ ನವೀನ ಮಾರ್ಗದಲ್ಲಿ ಅಡಿಯಿಟ್ಟ ಸಾಹಸಿಯಾದ ಒಬ್ಬ ಕವಿಗನ ಪಯಣವಾಗಿದೆ.

ಕವಿಯ ಜೀವನದಲ್ಲಿ ಸ್ಫೂರ್ತಿ ಗೀತಗಳು ಹೊರಚಿಮ್ಮುತ್ತಿರುವುದನ್ನು, ಸಂಜೆ, ಮಿಂಚು, ಸೂರ್ಯಚಂದ್ರರ ನೋಟಗಳಿಂದ ಹೃದಯವನ್ನು ರಸಮಯವಾಗಿ ಮಾಡಿದ ನಿಸರ್ಗದ ರಮಣೀಯತೆಯನ್ನು ದುಃಖ, ಶಾಂತಿ, ಮೋಹ, ಸ್ಪೃಹೆ, ಬೇಟೆ ಬಾಳುವೆಗಳಲ್ಲಿ ತೊಳಲಿದ ಜೀವನದ ಏರಿಳಿತಗಳನ್ನು ತುಂಬಿದೂರು, ಭೂಮಿತಾಯಿ, ನಾಡಿನ ಹಾಡು, ಏಳು ಮೊದಲಾದವುಗಳಿಂದ ನಮ್ಮ ಋಣವಾದ ಜನ್ಮಭೂಮಿಯ ಸೇವಾಕಾಂಕ್ಷೆಯನ್ನು ಮತ್ತೆ ಸಂಸಾರದ ಕವಿಯನ್ನು, ವಿಶ್ವಜ್ಯೋತಿಯ ಮಹಿಮೆಯನ್ನು ಇವುಗಳೆಲ್ಲವ ಸಂಯೋಜನೆಯಲ್ಲಿ ಕಂಡ ರುದ್ರಸೌಂದರ್ಯವನ್ನು, ಜೀವಿಯು ಕೊನೆಯಿಲ್ಲದ ಕೊನೆಗಾಣದ ಅನಾದಿ ಅನಂತದ ಪಯಣವನ್ನು ಶ್ರೀ ವಿನಾಯಕರು ಈ ಭಾವಗೀತೆಗಳ ಮೂಲಕ ರಮಣೀಯವಾಗಿ ತೋರಹೊಮ್ಮಿಸಿದ್ದಾರೆ. ಭಾವನಾಸ್ಫೂರ್ತಿಯ ಅರ್ಥಗಾಂಭೀರ್ಯದ ಉಜ್ವಲತೆಯಲ್ಲಿ ಒಂದೊಂದು ಗೀತೆಯೂ, ರಸಮಯವಾದ ಒಂದು ಕಾವ್ಯಸಾರವೇ ಆಗಿದೆ. ಅಂತೂ ಈ ಗೀತೆಗಳ ಹಿನ್ನೆಲೆಯಲ್ಲಿ ಆದರ್ಶಧ್ಯೇಯದ, ಪ್ರತಿಭಾಸಂಸ್ಕೃತಿಗಳ ಒಂದು ಜೀವದ ಸ್ಫೂರ್ತಿಯಿರುವುದು ವ್ಯಕ್ತವಾಗಿ ತೋರುತ್ತದೆ. 'ಕಟೋಪಾಸನ'ದಲ್ಲಿ ಹೊಸದಾಗಿರುವ ಭಾವನೆಗೆ ಇಲ್ಲಿ ಸ್ಥಿತಿ ತಗಳನ್ನು ಕಲ್ಪಿಸಿದ್ದು ಕಾಣಬರುವುದು. ಕವಿರದ ಅಂತರ್ಜೀವವು ಭಾವನೆಯಾದಂತೆ ಹೊಸವ್ಯ ಛಂದಸ್ಸಾಗಿದೆ. ಭಾವನೆಯು ಈ ಎಲ್ಲ ಕವನಗಳಲ್ಲಿಯೂ ಉಜ್ವಲವಾಗಿ ಬಂದಂತೆ ಛಂದೋ ಬಂಧದ ಶಿಥಿಲತೆಯು ದೊಡ್ಡದಾಗಿ ಎಲ್ಲಾ ಕವಿತೆಗಳಲ್ಲಿ ಎಲ್ಲೆಡೆಗಳಲ್ಲಿಯೂ ಕಾಣುತ್ತಿದ್ದು, ನಮ್ಮಿಯ ಸನ್ನಿವೇಶದಲ್ಲಿ ಮುಕ್ತಛಂದ ಮಿಶ್ರವಾದ ರೀತಿ ರಚಿಸಿದಿನಿಸ್ವೇ. ... ಕವಿಗಳ ಕುರಿತು ಹಳೆಯ ಸಂಪ್ರದಾಯದವರು ನ್ಯಾಯವಾಗಿ ಎತ್ತಿತೋರಿಸುವ ಈ ದೋಷದಿಂದ 'ವಿನಾಯಕ'ರೂ ಅಪವಾದರಾಗಿಲ್ಲ. ಹೇಗೆ ರಸ್ಯದ ಸಮತಾವಾದವು ಇದ್ದಕ್ಕಿದ್ದಂತೆ ಭಾರತದಲ್ಲಿ ಅನ್ವಯಿಸಲಾರದೆಂದು ಭಾರತದ ರಾಜನೀತಿಜ್ಞರೇ ಅಭಿಪ್ರಾಯಪಡುತ್ತಾರೋ ಸಾಹಿತ್ಯದಲ್ಲಿಯೂ ಇಂತಹ ಯಥಾರ್ಥತೆಗೆ ನಾವು ಕಿವಿಗೊಡಬೇಕಾಗಿದೆ. ತಮ್ಮ ಉಜ್ವಲ ಭಾವನೆ-ವಿಚಾರ ಆದರ್ಶ ಇವುಗಳನ್ನು ಸಾರುವಲ್ಲಿ ಕನ್ನಡಿಗರ ಹೃದಯ ಸ್ಪರ್ಶಿಯಾಗುವ ರೀತಿಯನ್ನೂ ಅಳವಡಿಸಿಕೊಂಡು ಇನ್ನಷ್ಟು ಚೆಲುವಾಗಿ ಪೂರ್ಣ ರಸಮಯವಾಗಿ 'ವಿನಾಯಕ'ರು ಹಾಡಲಿ, ಈ ಹಾಡುಗಳಿಂದ ಕನ್ನಡಿಗರಲ್ಲಿ 'ನೂತನ ಚೇತನದುತ್ಸಾಹವು' ಹರಿಯಲಿ ಎಂದು ಆಶಿಸುತ್ತೇವೆ. — ಕಯ್ಯಾರ





ಮಂಗನು ಮಾತಾಡುತ್ತಾನೆ.

ಮಲಿಯಾದ್ವೀಪದ ಸುಮ್ಮಾತ್ರಾ ದ್ವೀಪದಲ್ಲಿ ಮಹಾರಣ್ಯಗಳಿವೆ ಬಹಳ ತೆಂಗಿನ ತೋಟಗಳೂ ಇವೆ. ಇಂತಹ ಮಹಾರಣ್ಯಗಳಲ್ಲಿ ಹಲವು ಅಮೂಲ್ಯ ಔಷಧಿಗಳಿವೆ ಮರದ ತುದಿಯಲ್ಲಿರುವ ಅಂತಹ ಔಷಧಿಗಳನ್ನು ತೆಗೆಯುವುದು ಮನುಷ್ಯ ಸಾಮಾನ್ಯರಿಗೆ ಸಾಧ್ಯವಿಲ್ಲದ ಲಕ್ಷಣವಾಗಿದೆ ಹೀಗಾಗಿ ಅಲ್ಲಿನ ಜನರು ಮರಗಳನ್ನೇರಿ ತಮ್ಮ ಕೆಲಸಗಳನ್ನು ಮಾಡಿಸಲು ಮಂಗಗಳನ್ನು ಸಾಕಿದ್ದರು

ಅವುಗಳಿಗೆ ಮೊಟ್ಟಮೊದಲು ಸನ್ನೆಗಳಿಂದ ಅಂತಿಂತಹ ಕಾರ್ಯಗಳನು ಮಾಡಬೇಕೆಂದು ಕಲಿಸತೊಡಗಿದರು ಇತ್ತೀಚೆಗೆ ವಿಜ್ಞಾನದ ಪ್ರಯೋಗದಿಂದ ಅವುಗಳನ್ನು ಮಾತನಾಡುವ ಹಾಗೂ ಮಾಡಿರುತ್ತಾರೆ ಮಂಗಗಳ ನಾಲಗೆಗೂ ಮನುಷ್ಯರ ನಾಲಿಗೆಯಂತೆ ಸರಿಯಾಗಿ ಹೊರಳುವಂತೆ ಮಾಡಿ ಶಬ್ದೋಚ್ಚಾರಣ ಮಾಡಲು ಕಲಿಸಿದ್ದಾರೆ ಇನ್ನು ಕೆಲವು ಸಮಯಗಳಲ್ಲಿ ಮಂಗನೂ ಮನುಷ್ಯನಂತೆಯೇ ಮಾತನಾಡಬಹುದು! ಮಂಗನೂ ಮನುಜನ ಹಿರಿಯನೆಂದು ಸಾರಿದ ಡಾರ್ವಿನ್ ತತ್ವಕ್ಕೂ ಇದಕ್ಕೂ ನಿಕಟ ಸಂಬಂಧವಿದೆಯಷ್ಟೆ?

ವಿದ್ಯುತ್ತಿನಿಂದ ಗೊಬ್ಬರವಾಗುವುದು

ಭೂಮಿಯು ಗೊಬ್ಬರ ಹಾಕುವುದರಿಂದ ಫಲವತ್ತಾಗುತ್ತದೆ ಹೀಗೆ ಆಗಲು ಕಾರಣವೆಂದರೆ ಭೂಮಿಯಲ್ಲಿರುವ ಹಲವು ಸೂಕ್ಷ್ಮವಾದ ಜೀವಾಣುಗಳು ವೃದ್ಧಿಯಾಗುವುದರಿಂದ ಸಸ್ಯಗಳು ಅವುಗಳನ್ನು ಉಪಯೋಗಿಸಿಕೊಂಡು ಬೆಳೆಯುತ್ತವೆ

ಹಿಂದಿನ ಕಾಲಕ್ಕೆ ಇಂತಹ ಜೀವಾಣುಗಳನ್ನು ಕೆಸರು, ಕಸಗಳಿಂದಲೇ ಒದಗಿಸುತ್ತಿದ್ದರು ಆ ಮೇಲೆ ಅನೇಕತರದ ಉಪ್ಪನ್ನು ಕಂಡು ಹಿಡಿದ ಕೃತಕ ಗೊಬ್ಬರಗಳನ್ನು ನಿರ್ಮಿಸತೊಡಗಿದರು

ಇತ್ತೀಚೆಗೆ ಒಂದುತರದ ವಿದ್ಯುತ್ ಪೆಟ್ಟಿಗೆಯಿಂದ ಗೊಬ್ಬರವನ್ನು ತಯಾರಿಸುತ್ತಿದ್ದಾರೆ. ಗೊಬ್ಬರ ಹಾಕಬೇಕಾದ ಭೂಮಿಯಲ್ಲೆಲ್ಲಾ ಆ ಯಂತ್ರವನ್ನು ತಿರುಗಿಸಿ ಬಿಡುತ್ತಾರೆ. ಆ ಯಂತ್ರವು ಹೋದಂತೆ ಅದರಡಿಯಲ್ಲಿರುವ ಹುಲ್ಲುಭೂಮಿಯನ್ನು ಕೊರೆಯುತ್ತಾ ಹೋಗುತ್ತದೆ ಇದರಿಂದ ಸಸ್ಯದ ಬೆಳವಣಿಗೆಗೆ ಬೇಕಾಗುವ ಅಣುಜೀವಿಗಳು ಭೂಮಿಯಲ್ಲಿ ಉತ್ಪನ್ನವಾಗುತ್ತವೆ. ಇತ್ತೀಚೆಗೆ ಅಮೇರಿಕದಲ್ಲಿ ಇಂತಹ ಗೊಬ್ಬರ ಹಾಕುವ ವಿಧಾನವು ಬಹಳವಾಗಿ ಪ್ರಚಾರಕ್ಕೆ ಬರತೊಡಗಿದೆ.

ಶೀತೋಷ್ಣಗಳಿಗೆ ಶರಣಾಗದ ಗಾಜು

ಕೋರಿಂಗ್ ಕಾರ್ಖಾನೆಯವರು ಒಂದು ಹೊಸ ತರದ ಗಾಜು ಸಿದ್ಧಮಾಡಿರುತ್ತಾರೆ ಬಿಸಿಯಾಗಿರುವಾಗ ನೀರಿನ ಹನಿ ಹನಿದರೆ ಇತರ ಗಾಜುಗಳಂತೆ ಇದು ಒಡೆದುಹೋಗುವುದಿಲ್ಲ ಚೆನ್ನಾಗಿ ಕಾಯಿಸಿ ಮಂಜುಗಡ್ಡೆಯ ಮೇಲಿಟ್ಟರೂ ಇದು ಒಡೆದುಹೋಗಲಾರದಂತೆ!

೧೨೦ ಸೀಟಿನ ಮೋಟರು

ಜರ್ಮನಿಯ ಆಲ್ಮ ಎಂಬ ನಗರದಲ್ಲಿ ೧೨೦ ಜನರು ಕೂತುಕೊಳ್ಳಬಹುದಾದ ದೊಡ್ಡದೊಂದು ಮೋಟರು ಬಂಡಿಯಿದೆ ದೊಡ್ಡದೊಂದು ಮೋಟರು ಬಂಡಿಯಿದೆ ದೊಡ್ಡ ರೈಲಿನ ಆಕಾರವದೆಯಿದು! ಪ್ರಪಂಚದ ಅತೀ ಹೆಚ್ಚು ದೊಡ್ಡ ಗಾತ್ರದ ಮೋಟಾರುಗಳಲ್ಲಿ ಇದೇ ಎಲ್ಲದಕ್ಕಿಂತಲೂ ದೊಡ್ಡ ಮೋಟರು!

ಔಷಧಿಗಳಿಗಿಂತ ಮೌನವೇ ಹೆಚ್ಚು ಫಲಕಾರಿಯಾಗಿದೆ

ಡಾ ರಾಜನರೊಡನೆ ಮಹಾತ್ಮರ ಹೇಳಿಕೆ

ಡಾ ರಾಜನರು ಶೇಗಾಸಿಗೆ ಹೋದಾಗ, ಮಹಾತ್ಮ ಗಾಂಧಿಜಿಯವರು ಮೌನ ವ್ರತದಲ್ಲಿದ್ದರು ಒಂದು ಕಾಗದದ ಮೇಲೆ ಅವರು ಇದು ನನ್ನ ಆರೋಗ್ಯದ ನಿಯಮವಾಗಿದೆಯೆಂದ ಬರೆದರು ಈ ಸಂದರ್ಭದಲ್ಲಿ ಡಾ ರಾಜನರು ಮೂರು ಪ್ರಶ್ನೆಗಳನ್ನು ಗಾಂಧಿಜಿಯವರೊಡನೆ ಕೇಳಿದರು

1 ಮೌನದಿಂದಿದ್ದರೆ ರಕ್ತದ ಒತ್ತಾಟದ ವ್ಯತ್ಯಾಸದಲ್ಲಿ ಏನಾದರೂ ಬದಲಾವಣೆಯಾಗುತ್ತದೆಯೆ?

2 ಮೌನಮಾಡಿದರೆ, ಆರೋಗ್ಯದಲ್ಲಿ ಒಳ್ಳೆಯದಾಗಿ ತೋರುತ್ತದೆಯೆ? ಕೆಲಸಗಳನ್ನು ಮಾಡಲು ಹೆಚ್ಚು ಉತ್ಸಾಹ ತೋರುತ್ತದೆಯೆ?

3 ಮಾನಸಿಕ ಆಯಾಸವು ಹೋಗಿ ತಿರುಗಿ ಶಕ್ತಿಯುಂಟಾಗುತ್ತದೆಯೆ?

ಈ ಮೂರು ಪ್ರಶ್ನೆಗಳ ವಿಷಯವಾಗಿ ಮಹಾತ್ಮಾಜಿಯವರು 'ಹರಿಜನ'ದಲ್ಲಿ ಹೀಗೆಂದು ಬರೆದಿರುವರು

ಮೌನವೆಂಬುದು ನನಗೆ ಒಂದು ಆಯಾಸದ ಕೆಲಸವಲ್ಲ ಮಾತುಕತೆ ಚರ್ಚೆ ನಡೆಸುವುದರಲ್ಲಿ ಬಹು ಆಯಾಸವುಂಟಾಗುದರಿಂದ ನಾನು ಅಗತ್ಯವಿದ್ದಾಗ ಮಾತ್ರ ಮಾತನಾಡುತ್ತೇನೆ ಮಾತ್ರ ಆದುದರಿಂದ ಈಗ ನಾನಗತ್ಯವಿರದ ಮ ಪ್ರಾಮುಖ್ಯ ವಿಚಾರಗಳಲ್ಲಿ, ಇಲ್ಲವೇ ನಾನು ಸೇರಿರುವ ಕೆಲವು ಕೆಲಸಗಳಲ್ಲಿ ಮಾತನಾಡುತ್ತೇನೆ ನಾನು ಆಶ್ರಮದಲ್ಲಿ ಯಾವಾಗಲೂ ಮೌನವಾಗಿರುತ್ತೇನೆ ಆಶ್ರಮವಾಸಿಗಳು ಅದಕ್ಕೆ ವಿರುದ್ಧವಾಗಿ ಆಚರಿಸಿದರೆ ನಾನು ಕೋಪಗೊಳ್ಳುತ್ತೇನೆ ಮೌನವು ಕೋಪವನ್ನು ಸಮಾಧಾನಪಡಿಸುತ್ತದೆ.

ಮಾನಸಿಕ ವಿಶ್ರಾಂತಿ

ಈಗ ಆ ಮೂರು ಪ್ರಶ್ನೆಗಳ ವಿಷಯ

1 ಮೌನ ಮಾಡುತ್ತಿರುವಾಗ, ರಕ್ತದ ಒತ್ತಾಟವು ಕಡಿಮೆಯಾಗುತ್ತದೆ ಆದುದರಿಂದಲೇ ಡಾಕ್ಟರರು ನಾನು ಹೆಚ್ಚು ಮೌನವಾಗಿರಬೇಕೆಂದ ಹಿತಸೂಚನೆ ಕೊಟ್ಟಿರುವರ

2 ಮೌನಮಾಡಿದ ಮೇಲೆ ನನ್ನ ದೇಹ ಶಕ್ತಿಯು ಹೆಚ್ಚುತ್ತದೆ

3 ಮೌನವಾಗಿದ್ದಾಗ, ಮನಸ್ಸು ಹೆಚ್ಚು ಶಾಂತಿಯನ್ನು ಹೊಂದುತ್ತದೆ ತನ್ನ ತಲೆಯ ಹೊರೆಯನ್ನು ಅದ ಕಡಿಮೆಮಾಡುತ್ತದೆ ನನ್ನ ಅನುಭವದಂತೆ ಯಾವುದೇ ಔಷದಿಗಿಂತಲೂ, ಮೌನವು ಹೆಚ್ಚು ಫಲಕಾರಿಯಾಗಿದೆ ಇದ ದ ನನಗೆ ಹೆಚ್ಚು ಸುಖನಿದ್ರೆಯೂ ಬೀಳುತ್ತದೆ

ಆದುದರಿಂದ ವೈದ್ಯರ ಹಿತಸೂಚನೆಯನ್ನನುಸರಿಸಿ ಆಗಾಗ ಮೌನ ಮಾಡುವುದು ಒಳ್ಳೆಯದು

ಹೊಟ್ಟೆಯೊಳಗೆ ವ್ರಣಗಳಾಗಿವೆ ಎಂದು ಸಂದೇಹ ವಿದ್ದೊಡನೆ

ಉದರವೇದನೆಯಿಂದ ನರಳುವವರು ಬೇಸರಿಸಬೇಕೆಂದಿಲ್ಲ ಭಯಂಕರವಾದ ವೇದನೆಯಿಂದ ಹೊಟ್ಟೆಯ ಪರೆಯನ್ನು ಹೊಟ್ಟೆಯೊಳಗೆ ಅತಿಯಾಗಿ ಉತ್ಪತ್ತಿಯಾದ 'ಎಸಿಡ' ಆಕ್ರಮಿಸುವಾಗ ಕೂಡ ಅಂಥ ವೇದನೆಯನ್ನು ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರು ಶಿಲ್ಲಿಸಿ, ಒಪರೇಷನು ಅಗತ್ಯವಿಲ್ಲದಂತೆ ಮಾಡಿದ ಎಷ್ಟೋ ಸಂದರ್ಭಗಳ ದೃಷ್ಟಾಂತವಾಗಿವೆ

ಒಂದು ಬಾರಿ ಒಬ್ಬ ವ್ಯಕ್ತಿಯು ತನ್ನ ಹೊಟ್ಟೆಯ ವ್ರಣವನ್ನು ಒಪರೇಷನಿನ ಮೂಲಕ ಗುಣಪಡಿಸಲು ಕೆನಡದಿಂದ ಇಂಗ್ಲಾಂಡಿಗೆ ಹೊರಟನು ಆಗ ಅವನು ಪ್ರಯಾಣ ಬೆಳೆಸುತಿದ್ದ ಹಡಗದ ಕಾರಭಾರಿಯು, ಅವನಿಗೆ ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರನ್ನು ಒಂದು ಬಾರಿ ಪರೀಕ್ಷಿಸುವಂತೆ ಶಿಫಾರಸು ಮಾಡಿದನು, ಅದರಂತೆ ಆ ವ್ಯಕ್ತಿಯು ಒಪರೇಷನಿನ ಬದಲು ಇದನ್ನು ಸೇವಿಸಿ ಗುಣಮುಖನಾದನು ನಂತರ ಇದರಿಂದಲೇ ಗುಣವಾಗಿ ಕೆನಡಕ್ಕೆ ಹೊಸ ಮನಸ್ಯನಾಗಿ ತಿರುಗಿದನು ಅವನು ಹೇಳುವಂತೆ ಈಗ ಅವನಿಗೆ ಹೊಟ್ಟೆಯ ಯಾವ ಬಾಧೆಗಳೂ ಇರುವುದಿಲ್ಲ

ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರಿನಲ್ಲಿ ಹಾಕಿದಂತಹ ಸಮತೂಕ ಪ್ರಮಾಣದ ಅಲ್ಕಾಲಿಸ ಹೊಟ್ಟೆಯೊಳಗೆ ಇರಬಹುದಾದ ಹುಳಿರಸವನ್ನು ಹೋಗಲಾಡಿಸಿ ಹೊಟ್ಟೆಯ ಪರೆಯನ್ನು ಎಸಿಡು ಬಂದು ಆಕ್ರಮಿಸದಂತೆ ನೋಡುತ್ತ ದ್ದೇ ನಿಧಾನವಾಗಿ ಮತ್ತು ಜಾಗತೆಯಿಂದ ಹೊಟ್ಟೆಯನ್ನು ಸ್ವಸ್ಥಪಡಿಸುವದು

ಖಾತ್ರಿಯಾದ ಮೆಕ್ಲಿನ್ ಬ್ರಾಂಡ್ ಪೌಡರನ್ನು ಕೊಂಡುಕೊಳ್ಳುವಾಗ ಎಚ್ಚರದಿಂದಿರಿ

ಎಂಬ ದಸ್ತಕ ಬಾಟ್ಲಿಯ ಮೇಲೂ ಕೆಂಪು ಮುದ್ರೆಯು ಪೆಟ್ಟಿಗೆಯ ಮೇಲೂ ಇದ್ದರೆ ಮಾತ್ರ ಅದು ಖಾತ್ರಿಯಾದದ್ದು ಬಿಡಿಯಾಗಿ ಮಾರಲ್ಪಡುವುದಿಲ್ಲ ಪೆಟ್ಟಿಗೆಯೊಳಗಿರುವ ಬಾಟ್ಲಿಗಳಲ್ಲಿ (ಹುಡಿಯ ಮಾತ್ರೆಯ ರೂಪದಲ್ಲಿ) ಸಿಕ್ಕುತ್ತದೆ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

K S 703



ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಒಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು, ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೆಟು—ಡಾ ವೈದ್ಯ ಎಲ್ ಕೆ. ಪಿ. ಎಸ್ ಕೆಳವಾವ್ಯಾಡಿಯು ಅವರು ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ಪ. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ೪—೦—೦

ವಿ. ಪಿ. ೪

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, S M C.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀಘ್ರಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನು ಸರ್ವಿಸುಗಳ ಏರ್ಪಾಡಿದೆ)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ—ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ

5 ಮಂಗಳೂರಿನಿಂದ—ಕಾರ್ಕಳ ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ—ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗ್ರಹಗಳಿವೆ.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು

JOINT MANAGERS,

The Combined Booking Agency,
MANGALORE

The Joint Booking Office,
KODIALBAIL.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾಯಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಶ್ಶಕ್ತಿ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಪ್ಲಾಯ್, ಪೆರಡೇಪಿ,
P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—9—0	1—10-0
,, ದುಯಂ ,, ,,	1—12-0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	4—13—0	4 14—0
,, ದುಯಂ ,, ,,	4—10—0	4—11—
,, ಅವ್ವಲ್ ಸುಗ್ಗಿ ,,	4—12—0	4—12—
,, ದುಯಂ ,, ,,	4—8—0	4—9—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	33—0—0	45—0—0
,, ಸಿಪ್ಪೆ ಇದ್ದದು ,,	37—8—0	47—0—0
ಕೊಬ್ಬರಿ ಆಫೀಸು ಖಂಡಿಗೆ	57—8—0	—
,, ದಿಲ್‌ಪಸಂದಿ ,,	— —	—
ತೆಂಗಿನ ಎಣ್ಣೆ ಘಟಕ್ಕೆ	8—15—0	8—15—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—3—0	— —
ಗೇರುಬೀಜ ಮುಡಿಗೆ	8—12—0	4—8—0
ಕಬ್ಬಿನ ಬೆಲ್ಲ ಖಂಡಿಗೆ	32—8—0	47—8—0
ಒಳ್ಳೇಮೆಣಸು ಹಂಡ್ರಡ್ವೇಟಿಗೆ	15—0—0	16—8

ವಾರ್ಷಿಕ ಚಂದಾ ರೂ. 2-0-0

Date 10-11-1939

Regd. No. M 3406

ಅಂಚೆ ವೆಚ್ಚ ಸೇರಿ ರೂ. 2-13-0

ಸ್ವದೇಶಾಭಿಮಾನಿ

ಸಂಪುಟ 33] ತಾರೀಕು 10-11-1939 [ಸಂಚಿಕೆ 44

The Bombay Life Assurance Company, Ltd.,

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?

If you die-to your family and dependants?

REMEMBER THAT

If you live, Life Insurance takes the place of your professional income during your old age

If you die, it provides your family with enough income for their maintenance and the education of your children.

'BOMBAY LIFE" offers all that is best in LIFE ASSURANCE

1938 RECORD

Completed Business	Rs 1 44 91,000
Life Assurance Fund	Rs 1 17,69 748
Total Assets	Rs 1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara Calicut

Car Street Mangalore

Visweswarapuram Circle Bangalore City

Post Box No 337 Mount Road Madras

Gautam Nivas Churni Road Girgaum, Bombay No 4

Central Station Road Trivandrum

MAKE LIFE WORTH-LIVING!

Indigestion – Insomnia – Dry Cough— Nervousness – Weak Heart &c ,

these make you wiery of Life!

CONSULT US AND BUY YOUR LIFE'S HAPPINESS!

Oils – that cool the brain and induce sleep

Lehas – that build-up your wasted system

Asavas = that regenerate your jaded nerves

All Genuine Ayurvedic Preparations-

-from this huge Ayurvedic Concern of a Century Standing –

Bhuvanendra Products, Ltd.,

Katapady, S. Kanara.

(BRANCH–KUMTA, N KANARA)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು - ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು

ಜೀವನದಲ್ಲಿ ನಿರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು

ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು

ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ

ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, — ದ ಕನ್ನಡ

ಸ್ಥಳೀಯ ಸ್ಟೋಕಿಸ್ಟರು. (ಬ್ರಾಂಚ್: ಕುಮಟೆ, ಉತ್ತರ ಕನ್ನಡ)

ಯು. ಪಾಂಡರಂಗ ನ್ಯಾಕ್, ರಥಬೀದಿ, ಮಂಗಳೂರು

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

ಸಂಪುಟ ೨೨] ತಾರೀಕು ೧೭ನೇ ನವಂಬರ ೧೯೪೯ [ಸಂಚಿಕೆ ೪೫

ಹಿಟ್ಲರನ ಪತನದ ಬೀಜವು ಬಿತ್ತಲ್ಪಟ್ಟಿದೆ

ಆದರೆ ಅದು ಮರವಾಗಿ ಬೆಳೆದು ಫಲಕೊಡಲಿಕ್ಕೆ ಇನ್ನೂ ಸಮಯ ಬೇಕು

ಎರಡು ಮೂರು ತಿಂಗಳ ಮಹಾಯುದ್ಧದ ಪರಿಣಾಮವಾಗಿ ಕಷ್ಟ ನಷ್ಟ ಪಟ್ಟ ಜರ್ಮನ ಜನತೆಯು ಹಿಟ್ಲರನ ರಾಷ್ಟ್ರೀಯ ಸಮಾಜವಾದದಲ್ಲಿ ಯಾವ ಹುರುಳೂ ಇಲ್ಲದಿರುವುದನ್ನು ಮನಗಾಣುತ್ತಲಿದೆ; ಈ ವಾದವು ಈಗ ಜರ್ಮನರ ಮೆಚ್ಚುಗೆಯನ್ನು ಕಳಕೊಳ್ಳುತ್ತಲಿದೆ. ರಾಷ್ಟ್ರೀಯ ಸಮಾಜವಾದದ ಪುರಸ್ಕರ್ತರಾಗಿದ್ದವರು, ಹಿಟ್ಲರನನ್ನು ದೇವರೆಂದು ಭಾವಿಸಿ ಪೂಜಿಸಿದ ಫಲವಾಗಿ ಈಗ ತಮ್ಮ ಸರ್ವಸ್ವವನ್ನು ರಣರಂಗದಲ್ಲಿ ಬಲಿಕೊಡಬೇಕಾಗಿ ಬಂದಿದೆ. ಅವನ ವಿರೋಧಿಗಳಾದವರು ಮುಂದೇನು ಸಂಭವಿಸುವುದೆಂಬುದರ ನಿಶ್ಚಯವಿಲ್ಲದಿರುವುದಾದರೂ ತಮ್ಮ ಪ್ರಾಣಗಳನ್ನು ಹಿಡಕೊಂಡು ಕಾತುಕೊಳ್ಳಬಹುದಾಗಿದೆ. ಆದ್ದರಿಂದ ರಾಷ್ಟ್ರೀಯ ಸಮಾಜವಾದವು ಹಿಟ್ಲರನ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಪೂರೈಸುವುದಕ್ಕಾಗಿ ಇದೆಯಲ್ಲದೆ ದೇಶದ ಹಿತಕ್ಕಾಗಿರುವುದಿಲ್ಲವೆಂಬುದನ್ನು ಜನತೆಯು ತಿಳಿಯುತ್ತಲಿದೆ

ಆದರೆ ಇಷ್ಟು ಹೇಳಿದ್ದರಿಂದ ಹಿಟ್ಲರನು ಕೂಡಲೇ ಪತಿತನಾಗುವನೆಂದು ತಿಳಿಯಕೂಡದು ನಾಝಿಗಳು ಜರ್ಮನಿಯಲ್ಲಿ ಅಲ್ಪಸಂಖ್ಯಾಕರಾಗಿರುವುದು ನಿಜವಾದರೂ ಅವರಲ್ಲಿ ಧೈರ್ಯಬಲಗಳಿವೆ, ಸಂಘಟನೆ ಇದೆ ಆದರೆ ಈ ನಾಝಿಗಳಿಗೆ ವಿರೋಧವು ಕೂಡ ಬೆಳೆಯುತ್ತಲಿದೆ ಎಂದು ದೃಢವಾಗಿ ನಂಬಬಹುದು. ಹಿಟ್ಲರನ ಪತನದ ಬೀಜವು ಅಲ್ಲಿ ಬಿತ್ತಲ್ಪಟ್ಟಿದೆ ಆದರೆ ಅದು ಮರವಾಗಿ ಫಲಕೊಡಲಿಕ್ಕೆ ಇನ್ನೂ ಸ್ವಲ್ಪ ಸಮಯಬೇಕು. ಹಿಟ್ಲರನ ಆಡಳಿತದ ಕುರಿತು ಜನರಲ್ಲಿ ತುಂಬಾ ಅತೃಪ್ತಿ ಅಸಮಾಧಾನಗಳು ಇದ್ದಿರುವುವು. ಹಿಟ್ಲರನಿಗಾಗಿ ದುಡಿದು ದುಡಿದು ಜರ್ಮನ ಕೂಲಿಕಾರರು ಬೇಸತ್ತು ಹೋಗಿದ್ದಾರೆ ಆದರೂ ಅವರ ಪರಿಶ್ರಮದಿಂದ ಆಧುನಿಕ ಯುದ್ಧೋಪಕರಣಗಳು ಸಿದ್ಧವಾಗುತ್ತಲಿವೆಯೇ ಹೊರತು ಅವರಿಗೆ ಹೊಟ್ಟೆ ತುಂಬಾ ಅನ್ನವು ಮೈ ತುಂಬ ಬಟ್ಟೆಗಳು ದೊರೆಯುತ್ತಿರುವುದಿಲ್ಲ, ಜರ್ಮನ ಸಿಪಾಯಿಯ ಉಡಿಗೆ ತೊಡಿಗೆಗಳು ಸಾಮಾನ್ಯತಃ ಕೀಳುತರದ್ದಾಗಿ ಇರುತ್ತವೆ. ಮಹಾಯುದ್ಧದಿಂದಾಗಿ ತಮ್ಮ ಅವಸ್ಥೆಯು ಇನ್ನೂ ಕೆಟ್ಟದಾಗಬಹುದೆಂದು ಜನರು ತುಂಬಾ ಭಯಪಟ್ಟಿರುತ್ತಾರೆ. ನಾಝಿ ಅಧಿಕಾರಿಗಳು ತಮ್ಮ ಶರೀರ ರಕ್ಷಣೆಯ ತುಂಬಾ ಉಪಾಯ ಮಾಡಿಕೊಂಡಿರುತ್ತಾರೆ. ಆದರೆ ಜನತೆಗೆ ವಿಮಾನಧಾಳಿಯಿಂದ ಯಾವ ರಕ್ಷಣೋಪಾಯವೂ ಇರುವುದಿಲ್ಲ. ಆದ್ದರಿಂದ ನಾಝಿ ಸ್ವಾರ್ಥಿಗಳ ಸ್ವಾರ್ಥಪರತೆಯ ಕುರಿತು ಜನತೆಯ ಹೊಟ್ಟೆಯು ಉರಿಯುತ್ತಲೂ ಇದೆ. ಚಳಿಗಾಲ ಕಟ್ಟಿಗೆಯ ಅಭಾವವುಂಟಾಗಲೂ ಬಹುದು. ಜರ್ಮನಿಯು ಮುಂದೆ ಹತ್ತಿ ರಬ್ಬರುಗಳನ್ನು ಎಲ್ಲಿಂದ ತಯಾರಿಸಬೇಕೋ ಗೊತ್ತಿಲ್ಲ. ರಶ್ಯದಲ್ಲಿ ಅವು ಆಗುತ್ತಿದ್ದಿಲ್ಲ. ಇತರ ದೇಶಗಳು ಜರ್ಮನಿಗೆ ಕೊಡುವ ಹಾಗಿಲ್ಲ.

ಜರ್ಮನ ಜನತೆಯು ಸರಕಾರ-ಕ್ರಮದಲ್ಲಿ ಪೂರ್ಣ ಪರಿವರ್ತನಗಳನ್ನು ಇಚ್ಛಿಸುತ್ತದೆ. ಅದಕ್ಕೆ ಈಗ ಯೂರೋಪದ ಹಲವು ದೇಶಗಳಲ್ಲಿರುವ ತರಹದ ಹೆಸರು ಪೂರ್ತಿಯ ಪ್ರಜಾಪ್ರಭುತ್ವವು ಬೇಡ. ಆ ದೇಶಗಳಲ್ಲಿ ಪ್ರಜಾಪ್ರಭುತ್ವವಿದೆ ಎಂದಾದರೂ, ಅವುಗಳಲ್ಲಿ ಶಾಸನಕರ್ತರು ಪ್ರಜೆಗಳಲ್ಲ, ಪರಂತು ಕೇವಲ ಹತ್ತಿಪ್ಪತ್ತು ಶ್ರೀಮಂತ ಮತ್ತು ಬಲಿಷ್ಠರ ಪ್ರತಿನಿಧಿಗಳಾಗಿರುತ್ತಾರೆ ಜನರಲ್ಲಿ ಕೆಲವರು ಸರ್ವಾಧಿಕಾರವೆಂದರೆ ಮೂಗು ಮುರಿದುಕೊಳ್ಳುತ್ತಾರೆ. ಆದರೆ ಮತ್ತೆ ಕೆಲವರು—ಈಗಾದ ಜರ್ಮನ ರಶ್ಯ ಒಪ್ಪಂದದಲ್ಲಿ ಮುಂದಾಗಬಹುದಾದ ಜರ್ಮನ ರಶ್ಯದ ಯಥಾರ್ಥ ಸ್ನೇಹ ಸಂಬಂಧವನ್ನು ಕಲ್ಪಿಸಿಕೊಂಡು ತಮ್ಮ ಭವಿಷ್ಯ ಜೀವನವು ಸುಖ ಪೂರ್ಣವಾಗಬಹುದೆಂದೂ ಆಶಿಸುತ್ತಾರೆ ಜರ್ಮನಿಯ ದಕ್ಷಿಣ ಮತ್ತು ಪಶ್ಚಿಮ ವಿಭಾಗಗಳಲ್ಲಿ ತಮ್ಮ ರಾಷ್ಟ್ರವು ಬೇರೆ ಬೇರೆ ಜರ್ಮನ ಪ್ರಾಂತಗಳ ಸಂಯುಕ್ತ ರಾಜ್ಯವಾಗಬೇಕೆಂದು ಜನರು ಆಶಿಸುತ್ತಾರೆ ಉತ್ತರದಲ್ಲಿ ಜನರು ರಶ್ಯ ಜರ್ಮನಿಯ ಸ್ನೇಹ ಸಂಬಂಧದ ಸುಖ ಸ್ವಪ್ನಗಳನ್ನು ಕಾಣುತ್ತಾರೆ. ಆದರೆ ಎಲ್ಲಿಯೂ ಹಿಟ್ಲರನಿಗೆ ಜನತೆಯ ಬೆಂಬಲವಿರುವುದಿಲ್ಲ ಹಿಟ್ಲರನ ರಾಜ್ಯದಲ್ಲಿ ಜನರಿಗೆ ನಾಗರಿಕ ಹಕ್ಕು ಬಾಧ್ಯತೆಗಳೂ ಇಲ್ಲದಿರುವುದರಿಂದ ಅವರೆಲ್ಲರೂ ಮನಸ್ಸಿನಲ್ಲೇ ಕುದಿಯುತ್ತಿದ್ದಾರೆ

ಹಿಟ್ಲರನ ಪಶುಬಲವು ಜನತೆಯನ್ನು ಸ್ವಲ್ಪ ಸಮಯದ ತನಕ ಸುಮ್ಮಗೆ ಮಾಡಬಹುದು ಆದರೆ ಅವನ್ನು ಎಲ್ಲಾ ಸಮಯಕ್ಕೆ ಸುಮ್ಮಗೆ ಮಾಡುವುದು ಸಾಧ್ಯವಿರುವುದಿಲ್ಲ. ಹಿಟ್ಲರನಿಗೆ ವಿರೋಧವು ಒಳಗಿಂದೊಳಗೆ ಬೆಳೆಯುತ್ತಲಿದೆ ಜರ್ಮನಿಯಲ್ಲಿ ಶಾಂತಿಸ್ಥಾಪನೆಯಾದ್ದಾದರೆ 'ಬೋಲ್ಶೆವಿಜಮು' ಬೆಳೆಯುವುದು. ಯುದ್ಧವು ದೀರ್ಘಕಾಲ ನಡೆದು ಜರ್ಮನಿಯು ಸೋತದ್ದಾದರೂ ಕೂಡ, ಹಿಟ್ಲರನ ಒಳ್ಳೆ ಪರಿಣಾಮವಾಗಲಿಕ್ಕಿಲ್ಲ ಆ ಸೋಲಿನಿಂದ ರಾಜ್ಯದಲ್ಲೆಲ್ಲ ರಾಜಕೀಯ ಅನಾಯಕತ್ವವಾಗಿ ರಶ್ಯನರ ಧ್ಯೇಯಾದರ್ಶಿಗಳು ದೇಶದ ಒಳನುಗ್ಗಲಿಕ್ಕೆ ಅವಕಾಶವಾಗುವುದು ಅಂತೂ ಹಿಟ್ಲರನ ಸ್ಥಿತಿಯು ಈಗ ಅತ್ತ ಹೋದರೆ ಹೊಳೆ. ಇತ್ತ ಬಂದರೆ ದರೆ ಎಂಬಂತಾಗಿದೆ.

ಅದು ಭಯಂಕರವಾದ ವ್ರಣವಾಗಿ ಪರಿಣಮಿಸುವುದೆ?

ನಿಮ್ಮ ಚರ್ಮವ್ಯಾಧಿಗಳನ್ನು ಜ್ಯಾಂಬಕನಿಂದ ನಿವಾರಿಸಿರಿ!

ಆ ಸಣ್ಣ ಸಣ್ಣ ಕಜ್ಜಿಯ ಗುರುತುಗಳು ದೊಡ್ಡ ವ್ರಣಗಳಾಗಿ ಪರಿಣಮಿಸಬಹುದಾದ ಎಕ್ಸಿಮಾದ ಮೊದಲಿನ ಚಿಹ್ನೆಯಾಗಿರುತ್ತದೆ ಆದುದರಿಂದ ಅದರ ಮೇಲೆ ಜ್ಯಾಂಬಕನ್ನು ಸವರಿ ಚರ್ಮವನ್ನು ಆರೋಗ್ಯವಾಗಿರಿಸಿರಿ. ಜ್ಯಾಂಬಕಿನಲ್ಲಿರುವ ವನಸ್ಪತಿ ತೈಲವು ನರನಾಡಿಗಳನ್ನು ಪ್ರವೇಶಿಸಿ ನೋವನ್ನು ನಿವಾರಿಸುತ್ತದೆ. ತುರಿಕೆಯನ್ನು ಮತ್ತು ಕೆಂಪಾಗಿ ಪರಿಣಮಿಸಬಹುದನ್ನು ಕಡಿಮೆ ಮಾಡುತ್ತದೆ. ಜ್ಯಾಂಬಕು ವ್ರಣಗಳಿಂದ ಹೊರಡುವ ಕೆಟ್ಟ ನೀರನ್ನು ಹಿಂಗಿಸುತ್ತದೆ ಮತ್ತು ಒಂದು ಕಲೆಯೂ ಉಳಿಯದಂತೆ ಗುಣಪಡಿಸುತ್ತದೆ. ಎಲ್ಲಾ ವ್ಯಾಪಾರಸ್ಥರು ಜ್ಯಾಂಬಕನ್ನು ರೂ 1 ಮತ್ತು 2 4-0ರಂತೆ ಮಾರುತ್ತಾರೆ

ಏಜಂಟ್ಸ್

ಮೆ:ಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿ ಕೊಬ್ಬುಗಳಿಂದ ವಿರಹಿತವಾದದ್ದು

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p. a.

in denominations of

RS. 50/-, 100/-, 500/-, 1,000/-, & 5,000/

are now issued at all our Branches.

For particulars call at or write to any of our nearest Branches.

ಸಾವಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

17—11—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೭—೧೧—೧೯೩೯

ಬಹು ಮಂದಿ ಮುಸ್ಲಿಮರು ಜಿನ್ನರ ಬೆಂಬಲವಿಲ್ಲ

ಇದು ವಿಭಜಿಸಿ ಆಳುವ ತತ್ವ ★ ಲಂಡನ್ ಪತ್ರಿಕೆಯ ಹೇಳಿಕೆ

ವಿಭಜಿಸಿ ಆಳುವುದು

ಲಂಡನ್ ಪತ್ರಿಕೆಯಾದ ನ್ಯೂಸ್ಟೇಟ್ಸ್‌ಮೇನ್ ಎಂಬುದು, ಇಂದು ಭಾರತದಲ್ಲಿ ಬ್ರಿಟಿಷರ ವಿಭಜಿಸಿ ಆಳುವ ತತ್ವವನ್ನು ವ್ಯಕ್ತಗೊಳಿಸಿ ಈ ರೀತಿಯಿಂದ ಬರೆಯುತ್ತದೆ

'ವೈಸರಾಯರ ಭಾಷಣ ಮತ್ತು ಜೆಟ್ಲೆಂಡರ ಪ್ರಕಟನೆ ಇವುಗಳನ್ನು ಓದಿದಾಗ, ಭಾರತದಲ್ಲಿ ಯಾವುದೇ ರಾಜಕೀಯ ಸುಧಾರಣೆಯು ಹಿಂದೂ ಮುಸ್ಲಿಂರಲ್ಲಿ ಐಕ್ಯವಾಗದಿದ್ದರೆ ಆಗಲಾರದೆಂದು ಗೊತ್ತಾಗುತ್ತದೆ ವೈಸರಾಯರು ಐಕ್ಯವಾಗಬೇಕೆಂದು ಹೇಳುತ್ತಾರೆ, ಆದರೆ ಅದರೊಡನೆ, ಬ್ರಿಟನು ಮುಸ್ಲಿಮರ ಪಕ್ಷಕ್ಕೆ ನ್ಯಾಯ ಸಿಕ್ಕದೆ ಯಾವ ಒಪ್ಪಂದವೂ ಮಾಡಲಾರದೆಂಬ ರೀತಿಯಲ್ಲಿ ಮುಸ್ಲಿಮರ ಅಲ್ಪಸಂಖ್ಯಾಕ ತತ್ವವನ್ನು ಎದುರೊಡ್ಡುತ್ತಿದ್ದಾರೆ.

'ಇದು ನ್ಯಾಯವಾದ ಮಾರ್ಗವಲ್ಲ ಇಡೀ ಮುಸ್ಲಿಮರ ಪ್ರತಿನಿಧಿಯಾಗಿ ಜಿನ್ನಾರನ್ನು ಆರಿಸಿದ್ದು ಹಾಗೆಯೇ ಆಗಿದೆ ಜಿನ್ನರು ಬಹಳ ಬುದ್ಧಿವಂತರೇನೊ ಹೌದು ಆದರೆ ಫೆಡರೇಶನನ್ನು ವಿರೋಧಿಸುತ್ತಾ, ಕೇಂದ್ರ ಸರಕಾರದಲ್ಲಿ ಬದಲಾವಣೆ ಬೇಡವೆನ್ನುವ ಅವರ ವಾದವು ಯಾರಿಗೂ ಅರ್ಥವಾಗುವಂತಹುದೇ ಅಲ್ಲ

'ಜಿನ್ನರು ಎಲ್ಲಾ ಮುಸ್ಲಿಮರ ಪರವಾಗಿ ಬಿಟ್ಟು, ಬಹುಮಂದಿ ಮುಸ್ಲಿಮರ ಪರವಾಗಿಯೂ ಮಾತನಾಡಲು ಅಧಿಕಾರವುಳ್ಳವರಾಗಿಲ್ಲ. ಉದಾಹರಣೆಗೆ ಮುಸ್ಲಿಂ ಬಹುಸಂಖ್ಯೆಯುಳ್ಳ ಪಂಜಾಬ್ ಎಸೆಂಬ್ಲಿಯು ಯುದ್ಧದಲ್ಲಿ ಶರತವಿಲ್ಲದೆ ಸಹಾಯವನ್ನು ಕೊಡಲು ಒಪ್ಪಿರುವುದಾದರೂ, ಯುದ್ಧದ ಅಂತ್ಯದಲ್ಲಿ ರಾಜಕೀಯ ಸುಧಾರಣೆಯಾಗಬೇಕೆಂದು ಕೇಳಿದೆ. ಅಲ್ಲಿ ಮುಸ್ಲಿಂ ಬಹುಸಂಖ್ಯೆಯಿದ್ದರೂ, ಜಿನ್ನರು ವಿಚಾರಿಸುವಂತೆ ಅವರು ವಿಚಾರಿಸುವುದಿಲ್ಲ. ಸಂಯುಕ್ತ ಪ್ರಾಂತದಲ್ಲಿ ಮುಸ್ಲಿಮರು ಕಾಂಗ್ರೆಸಿನ ಪರವಾಗಿ ಮತಕೊಡುತ್ತಿರುವರು ಬ್ರಿಟನು ಹೀಗೆ ಹಿಂದೂದೇಶಿಯರನ್ನು ಅನ್ಯೋನ್ಯ ಭೇದ ಹುಟ್ಟಿಸಿ ಆಳುತ್ತಿದೆ' ಹೀಗೆ ಹೇಳುತ್ತದೆ ಬ್ರಿಟನಿನ ಪತ್ರಿಕೆಯು.'

ತಿರುವಾಂಕೂರಿನಲ್ಲಿ ಕ್ರೂರ ದಬ್ಬಾಳಿಕೆ

ನಮ್ಮ ಭವಿಷ್ಯವನ್ನು ನಾವೇ ನಿರ್ಧರಿಸುವೆವು

ತಿರುವಾಂಕೂರು ದಬ್ಬಾಳಿಕೆ

ಗಾಂಧಿಜಿಯವರ ಖಂಡನೆ

ಇಂದು ಹಲವು ಆಶ್ರಿತ ರಾಜ್ಯಗಳಲ್ಲಿ ಜನರು ಜವಾಬ್ದಾರೀ ಸರಕಾರಕ್ಕಾಗಿ ಆಂದೋಲನವನ್ನು ಆರಂಭಿಸಿದ್ದಾರೆ ಆದರೆ ನವ ಯುಗದ ಪರಿಸ್ಥಿತಿಯ ಅನುಕೂಲತೆಗಳನ್ನು ಅರ್ಥಮಾಡದೆ ಆಶ್ರಿತ ರಾಜ್ಯಗಳ ಸರಕಾರಗಳು ಪ್ರಚಂಡ ದಬ್ಬಾಳಿಕೆಯನ್ನು ಆರಂಭಿಸಿವೆ ನಾನಾ ರೀತಿಯ ಕ್ರೂರ ಕಾನೂನುಗಳಿಂದ ನಾಗರಿಕರನ್ನು ಸಜ್ಜನರನ್ನು ಬಂಧನದಲ್ಲಿರಿಸಿವೆ ಈ ಕುರಿತು ತಿರುವಾಂಕೂರಿನ ಕಾಂಗ್ರೆಸಿನವರಿಗೆ ಮಹಾತ್ಮಾಜಿಯವರು ಈ ಸಾರಾಂಶದ ಸಂದೇಶವನ್ನು ಕಳುಹಿಸುತ್ತಾರೆ

'ತಿರುವಾಂಕೂರು ಸರಕಾರದ ತತ್ವವು ನನಗೆ ಅರ್ಥವಾಗುವುದಿಲ್ಲ ಅಲ್ಲಿನ ದಬ್ಬಾಳಿಕೆಯು ಪೂರ್ಣ ಅನ್ಯಾಯದ್ದಾಗಿದೆ ದೇಶದ ಉತ್ತಮ ನಾಗರಿಕರೆನಿಸಿದವರನ್ನು ಸೆರೆವನೆಯಲ್ಲಿರಿಸುವುದು ತಪ್ಪಾಗಿದೆ'.

"ನಾನು ಉಪದೇಶ ಮಾಡಿದ ಮೇಲೆ ತಿರುವಾಂಕೂರಿನ ಕಾಂಗ್ರೆಸಿನವರ ಚಳವಳವು ನಿಂತಿತ್ತು. ಆದರೆ ಈ ಮೌನವನ್ನು ಸರಕಾರವು ಕಾಂಗ್ರೆಸಿನ ದೌರ್ಬಲ್ಯವೆಂದು ತಪ್ಪು ತಿಳಕೊಂಡಂತೆ ಕಾಣುತ್ತದೆ. ಆ ಕುರಿತು ಅಲ್ಲಿಂದ ಬಂದ ಶಿಷ್ಟಮಂಡಲದವರು ನನ್ನೊಡನೆ ತಿರುವಾಂಕೂರಿನಲ್ಲಿ ಸಾಮಾನ್ಯ ರೀತಿಯ ರಾಜಕೀಯ ಕಾರ್ಯಗಳಿಗೂ ತಡೆಯಿದೆಯೆಂದೂ, ಈ ಸಂಧರ್ಭದಲ್ಲಿ ಏನು ಮಾಡಬೇಕೆಂದೂ ಕೇಳಿದರು. ಆದರೆ ತಿರುವಾಂಕೂರಿನ ಪರಿಸ್ಥಿತಿಯು ಪ್ರತ್ಯಕ್ಷ ಅನುಭವವಾಗದ್ದರಿಂದ ನಾನು ಏನೊಂದು ತೀರ್ಮಾನ ಹೇಳಲಾರದೆ ಅವರಿಗೇ ಆ ವಿಷಯ ಇತ್ಯರ್ಥಿಸಲು ಬಿಟ್ಟಿರುವೆನು.

'ಸ್ಟೇಟ್ ಕಾಂಗ್ರೆಸಿನವರು ಎರಡು ನಿರ್ಣಯಗಳನ್ನು ಮಾಡಿದ್ದಾರೆ ದಿವಾನರ ಜನ್ಮದಿನೋತ್ಸವದಲ್ಲಿ ಭಾಗಿಯಾಗದೆ ಇರಲು ಪ್ರತಿಯೊಬ್ಬನಿಗೂ ವೈಯಕ್ತಿಕ ಅಧಿಕಾರವು ಇದೆ. ಮೊದಲನೆಯದು ಆ ರೀತಿಯ ನಿರ್ಣಯ ಎರಡನೆಯದೆಂದರೆ ಸಾರ್ವಜನಿಕ ಚಟುವಟಿಕೆಗಳನ್ನು ಮಾಡಲು ಆಸ್ಪದವಿರಬೇಕೆಂಬುದ್ದಾಗಿದೆ '

'ಶ್ರೀ ತನು ಪಿಳ್ಳೆ, ಶ್ರೀ ಫಿಲಿಪೋಸ ಮೊದಲಾದ ಉತ್ತಮ ನಾಗರಿಕರೆನಿಸಿದವರನ್ನು ಬಂಧನದಲ್ಲಿರಿಸಿದ ವಾರ್ತೆ ಬಂದಿದೆ ಇಂತಹವರನ್ನು ಸೆರೆಗೊಯ್ಯುವುದು ತೀವ್ರ ದಬ್ಬಾಳಿಕೆಯೇ ಆಗಿದೆ '

ಆಶ್ರಿತರಾಜ್ಯಗಳಿಗೆ ಎಂದು ಬುದ್ಧಿ ಬರುವುದೋ?

ಭಾರತದ ನಿರ್ಧಾರವನ್ನು ಯಾರು ಮಾಡುವರು?

ಲಾರ್ಡ್ ಜೆಟ್ಲಂಡರು ಭಾಷಣ ಮಾಡುತ್ತಾ ಭಾರತದ ಭವಿಷ್ಯ ನಿರ್ಧಾರದ ವಿಷಯದಲ್ಲಿ ಬ್ರಿಟನಿಗೆ ಹಕ್ಕಿದೆಯೆಂದು ಎದೆ ತಟ್ಟಿ ಹೇಳಿದರು ಸಾಮ್ರಾಜ್ಯಶಾಹೀ ಬುದ್ಧಿಯು ಅವರ ತಲೆಯಿಂದ ಬಿಟ್ಟು ಹೋದ ಲಕ್ಷಣವು ಇದಲ್ಲ. ಒಮ್ಮೆ ಬ್ರಿಟನು ತನ್ನ ಆ ಬುದ್ಧಿಯನ್ನು ಬಿಟ್ಟು ಬಿಟ್ಟಲ್ಲಿ ಹಿಂದೂದೇಶದ ಸಮಸ್ಯೆಯ ಕುರಿತು, ಆ ಮೇಲೆ ಹೆಚ್ಚು ಚಡಪಡಿಸಬೇಕಾದ ಆವಶ್ಯಕತೆಯೇ ಇಲ್ಲ. ವೈಸರಾಯರಾದರೂ ಭಾರತದ ಮುಖಂಡರ ಕುರಿತು ಸಂಶಯಪಡುವ ಆವಶ್ಯಕತೆಯೂ ಇಲ್ಲ

ಬ್ರಿಟಿಷರು ಇಂದು ಸ್ವಾತಂತ್ರ್ಯ ರಕ್ಷಣೆಗಾಗಿ ಕಾದಾಡುತ್ತಿದ್ದಾರೆ. ಅವರು ಯುದ್ಧ ಮಾಡುತ್ತಿರುವ ಪವಿತ್ರ ಉದ್ದೇಶವೇ ಭಾರತದ ಕಡೆಗೆ ಅವರಿಗಿರುವ ವರ್ತನೆಯಿಂದ ಲಯವಾಗುವ ಕಾಲ ಬಂದದೆ.

ಬ್ರಿಟನು ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡುವುದು ಎಂಬುದು ಇಂದಿನ ಮಾತು. ಯಾವಾಗ ಎಂಬ ವಿಷಯವಾಗಿ ಏನೇನೂ ಸ್ಪಷ್ಟತೆಯಿಲ್ಲ ಅದನ್ನು ಸ್ಪಷ್ಟ ಮಾಡದ ವಿನಹ ಭಾರತದ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ತಲೆಕೆಡಿಸಿ ಆಲೋಚನ ಮಾಡಿಯಾದರೂ ಏನು ಪ್ರಯೋಜನವಾದೀತು?

ಲಾರ್ಡ್ ಜೆಟ್ಲೆಂಡರು ಚೆಂಬರ್ಲಿನರ ಬಳಿ ಕುಳಿತು ತಾಸು ತಾಸುಗಳ ತನಕ ಭಾರತದ ಕುರಿತು ಮಾತುಕತೆ ನಡೆಸುವರು ಆದರೆ ಮಾತುಕತೆಯೆಲ್ಲಾ ಏತಕ್ಕೆ? ನಾಳೆಯ ದಿನ ಬ್ರಿಟನು ಆತ್ಯಂತಿಕ ಹೆಜ್ಜೆಯಿಡಲು ಏನು ಮಾಡಲು ಸಿದ್ಧವಿದೆಯೆಂಬ ವಿಷಯ ಸ್ಪಷ್ಟ ಹೇಳಲಿ

ಆ ಮೇಲೆ ಭಾರತೀಯರ ನಿಜವಾದ ಸಮಸ್ಯೆಯೇನು? ಅವರೊಳಗೆ ಇರುವ ಕಲಹ ಕಾರಣವೇನು? ಎಂಬುದರ ಕುರಿತು ಬ್ರಿಟನು ಚಿಂತಿಸಬೇಕಾಗಿಲ್ಲ. ಅಂತಹ ಯೋಚನೆ ಮಾಡುವ ಕಾಲ ಇದಲ್ಲ ಈ ಯುದ್ಧದ ಅಂತ್ಯವೆಂದರೆ ಗುಲಾಮಗಿರಿಯ ಅಂತ್ಯವೆಂಬುದನ್ನು ಬ್ರಿಟನು ಹೇಳಬೇಕು. ಇದರಿಂದ ಮಾತ್ರ ಲಿನ್‌ಲಿತ್‌ಗೋರವರಿಗೂ ಕೆಲಸ ಸುಲಭವಾದೀತು ಅದಲ್ಲದೆ ಸುಮ್ಮನೇ ಭೇಟಿ, ಕಂಡಕಂಡವರನ್ನು ಕರೆದು ಮಾತನಾಡುವುದು ಈ ಪಜೀತಿ ಯಾತಕ್ಕೆ?

ಭಾರತವೇ ತನ್ನ ದಾರಿಯನ್ನು ಸ್ವತಃ ನಿರ್ಣಯಿಸಿಕೊಳ್ಳಬಲ್ಲುದು

ಹಿಂದೂದೇಶಕ್ಕೆ ಸ್ವಾತಂತ್ರ್ಯ

ಪಾರ್ಲಿಮೆಂಟು ಸಭೆಯಲ್ಲಿ ಮಿ. ಕಿರ್ಕ್‌ವುಡ್ಡರು ಹಿಂದೀಯರ ಹೃತ್ಪೂರ್ವಕ ಸಹಕಾರವನ್ನು ಪಡೆಯುವ ಅಭಿಲಾಷೆಯಿಂದ ಕೂಡಲೇ ಭಾರತದ ಕೇಂದ್ರ ಸರಕಾರವನ್ನು ಜನತೆಯ ಪ್ರತಿನಿಧಿಗಳಿಂದ ರಚಿತವಾಗುವ ಭರವಸೆಯು ಪ್ರಕಟಣೆಯಾಗಬೇಕೆಂದು ಹೇಳಿದರು. ಆದರೆ ಅದಕ್ಕೆ ಸಮರ್ಪಕವಾದ ಉತ್ತರವು ಸಿಗಲಿಲ್ಲ.

ಸ್ವದೇಶಾಭಿಮಾನಿ

ತಾರೀಕು 17-11-1939

ಅದೃಷ್ಟದ ತೀರ್ಮಾನ!

ಕಳೆದ ವಾರ ಬೆಲ್ಜಿಯಂ ಮತ್ತು ಹೋಲೆಂಡುಗಳು ಯುದ್ಧಕ್ಕೆ ಇಳಿದ ರಾಷ್ಟ್ರಗಳಿಗೆ ಶಾಂತಿಯ ಸೂಚನೆಗಳನ್ನು ಕೊಟ್ಟಿವೆ. ಆ ಸೂಚನೆಗಳನ್ನು ಜರ್ಮನಿಗೂ ಅದರಂತೆ ಯುದ್ಧಪ್ರವೃತ್ತವಾದ ಬ್ರಿಟನು ಫ್ರಾನ್ಸು ರಾಷ್ಟ್ರಗಳಿಗೂ ಕಳುಹಿಸಿರುತ್ತವೆ. ಆದರೆ ಯುದ್ಧಮಾಡುವ ರಾಷ್ಟ್ರಗಳು ಈ ಸೂಚನೆಗಳಿಗಿತ್ತ ಉತ್ತರವು ಯಾವ ವಿಧದಿಂದಲೂ ಪ್ರೋತ್ಸಾಹಕರವಾಗಿರುವುದಿಲ್ಲ. ಬ್ರಿಟನು ಫ್ರಾನ್ಸು ಈ ಮಿತ್ರರಾಷ್ಟ್ರಗಳ ಶಾಂತಿಯ ಶರತಗಳು ಎಲ್ಲರಿಗೂ ಗೊತ್ತಿರುವಂತಹವುಗಳೇ ಆಗಿವೆ. ಅವುಗಳು ಹಿಟ್ಲರ್‌ಶಾಹಿಯನ್ನು ಕೊನೆಗೊಳಿಸುವುದರೊಡನೆ ಪ್ರಪಂಚದಲ್ಲಿರುವ ಎಲ್ಲಾ ಬಗೆಯ ಬಲಪ್ರದರ್ಶನವನ್ನೂ ಮುರಿದಿಕ್ಕುವ ಸಲುವಾಗಿ ಸೊಂಟಕಟ್ಟಿರುವುದೆಂದು ಹೇಳುತ್ತಿವೆ. ತಟಸ್ಥ ರಾಷ್ಟ್ರಗಳು ಈ ವಿಷಯದ ಕುರಿತು ಹಿಂದೆಯೇ ಎಚ್ಚರಗೊಂಡಿವೆ. ಜರ್ಮನಿಯ ಅಂತ್ಯವೆಂಬುದು ಯುದ್ಧವು ಮುಂದುವರಿದಲ್ಲಿ ಕೇವಲ ಕಾಲಗಣನೆಯದೆಂದು ಅವುಗಳು ತಿಳಿದಿವೆ. ಯುದ್ಧ ಮುಂದುವರಿದು, ಜರ್ಮನಿಯು ಧ್ವಂಸವಾದ ಕೂಡಲೇ ಲೋಕದಲ್ಲಿ ಬಲಪರ್ವಗಳ ಪ್ರದರ್ಶನ ಕಡಿಮೆಯಾದಂತೆ ಆಗಲಿಲ್ಲ. ಯೂರೋಪಿನ ಎಲ್ಲಾ ತಟಸ್ಥ ರಾಷ್ಟ್ರಗಳಿಗೂ, ರಶ್ಯವು ಇಂದು ಯೂರೋಪಿನಲ್ಲಿ ಪ್ರಬಲವಾಗುತ್ತಾ ಇರುವುದರ ಬೆದರಿಕೆ ಹಿಡಿದಿದೆ. ಎಂ. ಮೊಲೋಟೋವರು ಇತ್ತೀಚೆಗೆ ಮಾಡಿದ ಭಾಷಣದಲ್ಲಿಯೂ, ಜರ್ಮನಿ, ಫ್ರಾನ್ಸು, ಬ್ರಿಟನು ಇವುಗಳೆಲ್ಲವುಗಳಿಗೂ ಒಂದೇ ಬಣ್ಣ ಕೊಟ್ಟು ಮಾತನಾಡಿರುವರು. ರಶ್ಯದ ಇಂದಿನ ಧೋರಣೆಯು ಯೂರೋಪಿಗೆ ಭಯಾನಕವಾಗಿ ಪರಿಣಮಿಸಿದೆ. ಇಂತಹ ಸಂದರ್ಭದಲ್ಲಿ ಯುದ್ಧವು ಬಹಳ ಕಾಲದ ವರೆಗೆ ಮುಂದುವರಿದಲ್ಲಿ ಅದರ ಭವಿಷ್ಯವೇನಾಗುವುದೆಂಬ ವಿಷಯ ಈಗ ಹೇಳುವುದು ಬಹಳ ಕಷ್ಟವಾಗಿನಿಂತಿದೆ. ತಟಸ್ಥ ರಾಷ್ಟ್ರಗಳು ಯುರೋಪಿನ ಯುದ್ಧಪ್ರವೃತ್ತರಾದ ರಾಷ್ಟ್ರಗಳು ಕೊಡುವ ಉತ್ತರದ ಕಡೆಗೆ ಕುತೂಹಲಗೊಂಡು ನಿರೀಕ್ಷಿಸುತ್ತಿವೆ.

“ಶಾಂತಿಯಾಗುವ ಪ್ರಾಮುಖ್ಯ ವಿಷಯವೆಂದರೆ, ಜರ್ಮನಿಯಲ್ಲಿ ಹಿಟ್ಲರ್‌ಶಾಯಿ ನಾಶವಾಗಿಯು ಜನತೆಗೆ ವಿಶ್ವಾಸವಿರುವ ಸರಕಾರವೊಂದು ಸ್ಥಾಪನೆಯಾಗಬೇಕು” ಎಂದು ಬ್ರಿಟಿಷ್ ಲೇಬರ್ ಪಕ್ಷದ ಮುಖಂಡರಾದ ಮಿ. ಅಟ್ಲಿಯವರು ಹೇಳುತ್ತಾರೆ. ಅದು ಮಾತ್ರವಲ್ಲದೆ ಅವರು, ಇಂದು ಯೂರೋಪಿನ ಹಲವು ಪ್ರಬಲ ರಾಷ್ಟ್ರಗಳೂ ಜರ್ಮನಿಯಂತೆ ಬಲಪರ್ವಗಳಿಂದ ದುರ್ಬಲರಾಷ್ಟ್ರಗಳನ್ನು ಪೀಡಿಸುತ್ತಿವೆಯೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ ಎಲ್ಲ ರಾಷ್ಟ್ರಗಳೂ ತಮ್ಮ ದರ್ಪ ನೀತಿಯನ್ನು ಬಿಟ್ಟುಕೊಟ್ಟು ಒಂದು ಶಾಂತಿ ಸಮ್ಮೇಳನವನ್ನು ರಚಿಸಬೇಕೆಂದು ಅವರು ಸೂಚಿಸಿರುವರು. ಜಗತ್ತಿನ ಎಲ್ಲಾ ರಾಷ್ಟ್ರಗಳೂ, ದುರ್ಬಲವಾಗಲಿ, ಸಬಲವಾಗಿರಲಿ, ಅವುಗಳ ಹಕ್ಕುಭಾಧ್ಯತೆಗಳಿಗೆ ಇತರ ರಾಷ್ಟ್ರಗಳು ಅಡ್ಡಬಾರದೆಂದೂ, ಜರ್ಮನರು ಪೋಲರಿಗೆ, ಜೆಕ್ಕರಿಗೆ, ಯೆಹೂದ್ಯರಿಗೆ ಎಲ್ಲರಿಗೂ ಸ್ವಾತಂತ್ರ್ಯವನ್ನು ಕೊಡಬೇಕೆಂದೂ, ಅದರಂತೆಯೇ ಬ್ರಿಟನು, ಭಾರತವೇ ಮೊದಲಾದ ತನ್ನ ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳನ್ನು ಇಂದಿನ ಬಂಧನದಿಂದ ವಿಮುಕ್ತಮಾಡಬೇಕೆಂಬೂ ಅವರ ಅಭಿಪ್ರಾಯವಾಗಿದೆ.

ಈ ಮಾತು ಇಂದಿನ ಬ್ರಿಟಿಷ್ ಸರಕಾರದ ಅಧಿಕಾರಿಗಳಿಗೆ ಹಿತಕರವಾಗುವುದೆಂದು ಹೇಳಬರುವುದಿಲ್ಲ. ಏಕೆಂದರೆ, ಸ್ವತಃ ಭಾರತೀಯರಿಗೆ ಎಷ್ಟರ ಮಟ್ಟಿಗೆ ಭಾರತದ ಹಿತಚಿಂತನೆಯು ಇದೆಯೋ ಅದಕ್ಕಿಂತ ಹೆಚ್ಚು ತಮಗೆ ಇದೆಯೆಂದು ಅವರು ಹೇಳಿಕೊಳ್ಳುವಂತಿದೆ. ಮಹಾತ್ಮಾಜಿಯವರು ಬ್ರಿಟಿಷ್ ರಾಜನೀತಿಜ್ಞರೊಡನೆ ಬ್ರಿಟಿಷರ ಯುದ್ಧದ ಉದ್ದೇಶವೇನೆಂಬ ಕುರಿತು ಸ್ಪಷ್ಟಪಡಿಸುವ ಪ್ರಕಟಣೆ ಮಾಡಬೇಕಾಗಿ ಕೇಳಿದ್ದಾರೆ” “ಗುಲಾಮರನ್ನು ಇಟ್ಟುಕೊಂಡವನೊಬ್ಬನು ತಾನು ಗುಲಾಮುತನವನ್ನು ಇಲ್ಲದೆ ಮಾಡಿ, ತನ್ನ ಅಧೀನವಿದ್ದ ಗುಲಾಮರನ್ನೆಲ್ಲಾ ಬಿಟ್ಟುಕೊಡಬೇಕಾದಲ್ಲಿ ಆ ಗುಲಾಮರಿಗೆ ಸ್ವಾತಂತ್ರ್ಯ ಬೇಕೇ ಬೇಡವೇ ಎಂದು ಕೇಳುವುದಿಲ್ಲ” ಎಂದು ಗಾಂಧಿಜಿಯವರು ಅಭಿಪ್ರಾಯಪಡುತಿದ್ದಾರೆ

ಇಷ್ಟೆಲ್ಲಾ ಮಾತುಗಳಿಗೂ, ಈ ರೀತಿಯ ಲೋಕದ ಅಭಿಮತಕ್ಕೂ ಭಾರತದ ಸಚಿವರು ದೃಢವಾಗಿ ಕೊಟ್ಟ ಉತ್ತರವೆಂದರೆ ‘ಇಲ್ಲ’ ಎಂಬುದು ಒಂದೇ! ಇಂತಹ ವಿಷಾದಕರವಾದ ಯೂರೋಪಿನ ಮುತ್ಸದಿಗಳ ಬುದ್ಧಿಯಿಂದಲೇ ಜಗತ್ತಿನಲ್ಲಿ ಇಂದು ಪ್ರಬಲ ಸಮಸ್ಯೆಗಳೂ, ಪರಿಹರಿಸಲಾರದ ರೀತಿಯ ಸಂಕಟಗಳೂ ಬಂದೊದಗಿವೆ ತಮ್ಮ ಈ ರೀತಿಯ ವಿಚಾರ ಧೋರಣೆಯನ್ನು ಅವರು ಬಿಟ್ಟುಕೊಟ್ಟಲ್ಲಿ ಇಡೀ ಜಗತ್ತಿನ ಅರ್ಧ ಸಂಕಟವೇ ಪರಿಹಾರವಾಗುವುದು ತಟಸ್ಥ ರಾಷ್ಟ್ರಗಳು ತಮ್ಮ ಶಾಂತಿಸೂಚನೆಗಳಿಗೆ ಯಾವ ರೀತಿಯ ಉತ್ತರವನ್ನು ಪಡೆಯಬಹುದೆಂಬುದು ಈಗಾಗಲೇ ತಿಳಿದು ಬಂದಹಾಗಿದೆ.

ಜಗತ್ತಿನ ಮಹಾಪ್ರಭುತ್ವ ರಾಷ್ಟ್ರಗಳು ತಮ್ಮ ದೊಡ್ಡಸ್ತಿಕೆ ಮತ್ತು ಆಳುವ ಇಚ್ಛೆಗಳನ್ನು ಬಿಟ್ಟು ಕೊಡಲು ಒಪ್ಪುವಂತೆ ಕಂಡು ಬರುವುದಿಲ್ಲ. ಹಾಗಾದರೆ ಶಾಂತಿಯೆಂಬುದು ಹೇಗೆ ಸಾಧ್ಯವಾಗಬೇಕು? ಜಗತ್ತಿನ ಪ್ರಳಯ ಕಾರ್ಯವು ಇನ್ನೂ ಹಲವು ಸಮಯಗಳ ವರೆಗೆ ಮುಂದುವರಿಯುವುದೆ? ಜನಕೆಯ ರಾಷ್ಟ್ರಗಳ ಒಪ್ಪಂದವು ಶಾಂತಿಸೂಚನೆಗಳಿಂದ ಸಾಧಿಸುವಂತೆ ಆಗದಿದ್ದರೆ, ಈಗ ಆರಂಭವಾಗಿರುವ ಈ ಲೋಕನಾಶ ಯುದ್ಧವು ಮುಂದುವರಿದು, ಕ್ರಾಂತಿಯೇ ಕಡೆಗೆ ಒಂದು ನೆಲೆಯನ್ನು ತರಲೂ ಬಹುದು. ಆದರೆ ಮಾನವನ ಸದ್ವಿಚಾರದ ಸದುಪಯೋಗವಾಗದೆ, ಹೀಗೆ ಜಗತ್ತು ದುರಂತದಲ್ಲಿ ಕೊನೆಗಾಣುವ ಅದೃಷ್ಟದ ತೀರ್ಮಾನಕ್ಕೆ ನಾವು ವಿಷಾದಿಸಬೇಕಾಗಿದೆ.

ಥಕ್ಕರ್ ಬಾಪಾ ಜಯಂತಿ

ಹರಿಜನರ ಉನ್ನತಿಗಾಗಿ ದೇಶದಲ್ಲೆಲ್ಲ ಹೆಚ್ಚಾಗಿ ದುಡಿಯುತ್ತಿರುವ ಪ್ರಮುಖ ಸಂಸ್ಥೆಯೆಂದರೆ ಅಖಿಳ ಹಿಂದೂಸ್ಥಾನದ ಹರಿಜನ ಸೇವಕ ಸಂಘವು ಅದರ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಅಮೃತ ಥಕ್ಕರ್ ಎಂಬುವವರೇ ಅದರ ನಿಜವಾದ ಜೀವವಾಗಿದ್ದಾರೆ. ಅವರು ಹರಿಜನರ ಹಾಗೂ, ಅವರಂತಹ ಎಲ್ಲವರ ಜನಕರೆಂದು ಗಾಂಧಿಜೀಯವರೇ ಅಭಿಪ್ರಾಯವಿತ್ತಿರುತ್ತಾರೆ ಯಾವುದೊಂದು ಹೊಗಳಿಕೆಯ ಕಡೆಗೂ ದೃಷ್ಟಿಯಿಡದೆ ಜನತಾ ಸೇವೆಯ ನಿರಂತರ ಪರಿಶ್ರಮದಲ್ಲೇ ನಿತ್ಯ ತೃಪ್ತರಿದ್ದು ತಮ್ಮ ಇಳಿಪ್ರಾಯವನ್ನೂ ಕೂಡ ಲಕ್ಷಿಸದೆ ಕಾರ್ಯರಂಗದಲ್ಲಿ ಅಗಾಧ ಸೇವೆ ಸಲ್ಲಿಸುವ ಅವರಂತಹ ಮಹನೀಯರು ತೀರಾ ವಿರಳ ಅವರ ಮಧುರವಾದ ಮಾತು, ಸರಳವಾದ ಜೀವನ ಮತ್ತು ಅವಿಶ್ರಾಂತ ಪರಿಶ್ರಮಗಳು ಯಾರನ್ನಾದರೂ ಮೆಚ್ಚಿಸುವವುಗಳು ತಾರೀಕು ೨೯—೧೧—೧೯೩೯ನೇ ದಿನ ಅವರ ೭೦ನೇ ವಯಸ್ಸು ತುಂಬುವುದು. ಈ ಸಂದರ್ಭದಲ್ಲಿ ಅವರಂತಹ ಅಪೂರ್ವ ಕಾರ್ಯದಕ್ಷರನ್ನು ಸನ್ಮಾನಿಸುವುದಕ್ಕಾಗಿ ಅವರಿಗೊಂದು ಥೈಲಿಯನ್ನು ಸಮರ್ಪಿಸಬೇಕೆಂದು ಡಿಲ್ಲಿಯಲ್ಲಿರುವ ಹರಿಜನ ನಿವಾಸದ ಬಂಧುಗಳು ನಿಶ್ಚಯಿಸಿರುತ್ತಾರೆ ಆ ಥೈಲಿಯು ೭೦ ಸಾವಿರ ರೂಪಾಯಾದರೂ ಇರಬೇಕೆಂಬ ಮಹಾತ್ಮಾಗಾಂಧಿಯವರ ಆಗ್ರಹದ ವಿನಂತಿಯು ಈ ಮೊದಲೇ ಹೊರಟಿರುತ್ತದೆ ಇಂದಿನ ಭಾರತದ ರಾಷ್ಟ್ರಪತಿ ಬಾಬೂರಾಜೇಂದ್ರಪ್ರಸಾದರು ಕೂಡಾ ಅದನ್ನು ಸಮರ್ಥಿಸಿದ್ದಾರೆ ಕರ್ಣಾಟಕ ಪ್ರಾಂತದಿಂದ ಕಡಿಮೆ ಪಕ್ಷ ೨೦೦೦ ರೂ ಯ ನಿಧಿಯನ್ನಾದರೂ ಸಂಗ್ರಹಿಸಿ ಕಳುಹಿಸಬೇಕಾದುದರಿಂದ ನಮ್ಮ ಜಿಲ್ಲೆಯ ಪರವಾಗಿ ನಾವೂ ನಿಧಿಸಂಗ್ರಹಮಾಡಬೇಕೆಂದು ಜಿಲ್ಲಾ ಹರಿಜನ ಸೇವಕ ಸಂಘದ ಮಹಾಸಭೆಯಲ್ಲಿ ನಿರ್ಣಯವಾಗಿರುತ್ತದೆ. ಈ ಭಾಗದಲ್ಲಿ ಎಲ್ಲಾ ಸ್ಥಳೀಕ ಕಾಂಗ್ರೆಸ್ ಕಮಿಟಿಗಳೂ, ಇತರ ಸಾರ್ವಜನಿಕ ಸಂಸ್ಥೆಗಳೂ ಮತ್ತು ಮಹನೀಯರೆಲ್ಲರೂ ಸಂಪೂರ್ಣ ಸಹಕಾರವಿತ್ತು ನಮ್ಮನ್ನು ಪ್ರೋತ್ಸಾಹಿಸುವರಾಗಿ ನಂಬಿರುತ್ತೇವೆ. ಸಂಗ್ರಹವಾದ ಹಣವನ್ನು ಜಿಲ್ಲಾ ಹರಿಜನ ಸೇವಕ ಸಂಘ, ಅತ್ತಾವರ—ಮಂಗಳೂರು ಎಂಬ ವಿಳಾಸಕ್ಕೆ ಕಳುಹಿಸಿ ಕೊಡಬೇಕಾಗಿ ಅಪೇಕ್ಷಿಸುತ್ತೇವೆ. ತಾರೀಕು ೨೯—೧೧—೩೯ನೇ ಸಾಯಂಕಾಲ ಘಂಟೆ ೫-೩೦ಕ್ಕೆ ಮಂಗಳೂರು ಬಿ. ಸಿ. ಮಿಶ್ಯನ್ ಸಭಾಸದನದಲ್ಲಿ ಜರಗಲಿರುವ ಥಕ್ಕರ್ ಬಾಪಾರವರ ಭಾವಚಿತ್ರದ ಅನಾವರಣ ಸಮಾರಂಭಕ್ಕೂ ಸಾರ್ವಜನಿಕ ಸಭೆಗೂ ದಯವಿಟ್ಟು ಬರಬೇಕಾಗಿ ವಿನಂತಿ.

(ಸಹಿ) ಎಚ್. ವಿ. ಅಡಪ್ಪ
ಅಧ್ಯಕ್ಷ, ದ. ಕ. ಜಿಲ್ಲಾ ಹರಿಜನ ಸೇವಕ ಸಂಘ

ತನ್ನ ಸ್ನೇಹಿತನಿಗೆ ವಕೀಲನೊಬ್ಬನ ಸಲಹೆ

ಇದು ಒಬ್ಬ ವಕೀಲನ ವೃತ್ತಾಂತ. ಆತನು ಇಡೀ ದಿವಸ ಕೋರ್ಟಿನಲ್ಲಿ ಜನನಿಬಿಡವಾದ ತನ್ನ ರೂಮಿನಲ್ಲಿರುತಿದ್ದನು, ಆತನ ಮುಖದಲ್ಲಿ ಕಾಣುವಷ್ಟು ಚೈತನ್ಯತೆಯು ಉತ್ಸಾಹವೂ ನಿಜವಾಗಿ ಆತನಲ್ಲಿರಲಿಲ್ಲ. ಆಗಾಗ ಅವನು ಆಯಾಸಗೊಳ್ಳುತಿದ್ದನು ಇದರಲ್ಲೇನು ಆಶ್ಚರ್ಯ? ದೇಹದ ಒಳಭಾಗಗಳೆಲ್ಲವೂ ಕಶ್ಮಲದಿಂದ ತುಂಬಿದ್ದು ಅನಾರೋಗ್ಯದಿಂದಿರುವಾಗ ಆತನಲ್ಲಿ ಚೈತನ್ಯವೂ ಉತ್ಸಾಹವೂ ಕಂಡು ಬರುವುದೆಂತು? ಅದರಲ್ಲಿಯೂ ಸ್ವಲ್ಪ ವಾದರೂ ವ್ಯಾಯಾಮವನ್ನು ಕೂಡಾ ತೆಗೆದುಕೊಳ್ಳಲು ಸಮಯವಿಲ್ಲದಂತ ವಕೀಲರ ವಿಷಯದಲ್ಲಿ ಉತ್ಸಾಹ ಚೈತನ್ಯಗಳು ಕಂಡುಬರಲೂ ಸಾಧ್ಯವಿಲ್ಲ

ವಕೀಲರ ಕೆಲಸವೆಂದರೆ ಇಡೀ ದಿವಸ ಕೂತು, ನಿಂತು ಕೋರ್ಟಿದಲ್ಲಿ ವ್ಯವಹರಿಸುವುದು ಮತ್ತು ತನ್ನ ಕಕ್ಷಿಗಾರರಿಗೆ ಸಲಹೆ ಕೊಡುವುದಾಗಿರುತ್ತದೆ ಇದರಿಂದಾಗಿ ಆತನ ಜೀರ್ಣಾಂಗಗಳು ಸರಿಯಾಗಿ ಕಾರ್ಯಿಸುವುದಿಲ್ಲ. ಜೀರ್ಣಾಂಗಗಳು ಸರಿಯಾಗಿ ಕಾರ್ಯಿಸಬೇಕಾದರೆ ತಕ್ಕುದಾದ ವ್ಯಾಯಾಮವು ಅಗತ್ಯ ಬರಬರುತ್ತಾ ವಕೀಲನ ಮುಖವು ರಕ್ತಹೀನವಾಗಿ ತೋರಿಬಂತು—ಆಗಾಗ ತಲೆಸಿಡಿತಕ್ಕೆ ಪ್ರಾರಂಭವಾಯಿತು—ಇದರಿಂದಲೂ ಕೆಟ್ಟ ಪರಿಣಾಮವಾಗಿ ಈತನು ಶ್ವಾಸವನ್ನು ಬಿಡುವಾಗ ದುರ್ಗಂಧವಾಸನೆಯು ಬರುತ್ತಿರುವುದನ್ನು ಆತನ ಕಕ್ಷಿಗಾರರು ಮನಗಂಡರು ಇದರಿಂದ ಆತನಿಗೆ ಜೀವನದಲ್ಲಿ ಜಿಗುಪ್ಸೆಯಾಯಿತು ಇನ್ನು ಮುಂದಾದರೂ ಇದನ್ನು ಸುಧಾರಿಸಬೇಕೆಂಬ ಆಲೋಚಯು ಅವನಲ್ಲಿ ಉಂಟಾಯಿತು ಇಡೀ ಜೀರ್ಣಾಂಗವನ್ನೇ ಶುಚಿಗೊಳಿಸಲು ತಕ್ಕುದಾದ ಹಂಚಿಕೆಯನ್ನು ಮಾಡಬೇಕೆಂದು ನಿಶ್ಚಯಿಸಿದನು ವಕೀಲನ ಅವಸ್ಥೆಯು ತೀರಾ ಚಿಂತಾಜನಕವಾಗಿ ಬರುವಾಗ ಆತನು ಇದರವಿಷಯ ತನ್ನ ಸ್ನೇಹಿತನೊಬ್ಬನೊಡನೆ ವಿಚಾರಿಸಿದನು “ದೇಹದ ಒಳಭಾಗವನ್ನು (ಹೊಟ್ಟೆ) ಶುಚಿಯಾಗಿರಿಸಿದರೆ ಎಲ್ಲವೂ ನೆಟ್ಟಗಾಗುವುದು. ಅತಿರೇಕವಾದ ಕೆಲಸದಿಂದೇನೂ ನೀನೂ ಚೈತನ್ಯ ಹೀನನಾದುದಲ್ಲ ಅಶುಚಿಯಾದ ಹೊಟ್ಟೆಯೇ ಇದಕ್ಕೆ ಕಾರಣ” ಎಂದು ಆ ಸ್ನೇಹಿತನೆಂದನು ಸ್ನೇಹಿತನ ಹಿತೋಕ್ತಿಗಳನ್ನು ವಕೀಲನು ಅನುಸರಿಸಿದನು. ಮರುದಿನ ಪ್ರಾತಃಕಾಲದಿಂದಲೇ ಪತೀನಿತ್ಯವೂ ಒಂದು ಗ್ಲಾಸು ಎಂಡ್ರೂಸ್ ಲಿವರ್ ಸೋಲ್ಟನ್ನು ಸೇವಿಸಲು ಪ್ರಾರಂಭಿಸಿದನು ಈಗ ಅವನ ಜೀರ್ಣಾಂಗಗಳು ಶುಚಿಯಾದುದು ಮಾತ್ರವಲ್ಲದೆ ಆರೋಗ್ಯವಾಗಿರುವುವು ಕಳೆದು ಹೋದಂತ ಯೌವನತ್ವವು ಆತನ ವೃತ್ತಿಗೆ ಬೇಕಾದಂತ ನವ ಚೈತನ್ಯವೂ ಆತನಲ್ಲಿ ತುಂಬಿತು.

ಜಾತಿ ಮತಗಳ ಪಂಗಡಗಳು ರಾಷ್ಟ್ರದೇಳಿಗೆಗೆ ತಡೆಯಾಗಿವೆ

ನಾಡಿನ ಯುವಕರಿಗೊಂದು ಎಚ್ಚರ

ಒಂದು ವಿಲಕ್ಷಣ ರೀತಿಯಿಂದ ವಿಪರೀತಕ್ಕೆಳೆಯುತ್ತಿರುವ ಕೆಲವು ರಾಜಕೀಯ ಮಾರ್ಗಗಳನ್ನು ಕಂಡು ರಾಜಕೀಯ ವಿದ್ಯಾರ್ಥಿ ಯೋರ್ವನು ಬೆಕ್ಕಸ ಬೆರಗಾಗುವನು. ಯಾವುದೇ ರೀತಿಯಲ್ಲಾದರೂ ವ್ಯವಸ್ಥೆ-ಇತ್ಯರ್ಥಗಳಿಲ್ಲದೆ ರಾಜಕೀಯದಲ್ಲಿ ಭಿನ್ನವಿಭಿನ್ನತೆಗಳಾಗಿ ಜನಮತವನ್ನು ವಿಮುಖನಾಡುತ್ತಿರುವ ಅನೇಕ ಪಂಗಡಗಳು ಸೇರಿ ರಾಷ್ಟ್ರೀಯ ಅಭ್ಯುದಯವನ್ನು ಹಾನಿಗೊಳಿಸುತ್ತಿರುವುದನ್ನು ಕಂಡರೆ, ದೇಶಾಭಿಮಾನಿಯು ಕಂಬನಿ ಸುರಿಸುವಂತಾಗಿದೆ. ಎಲ್ಲರೆದೆಯಲ್ಲಿಯೂ, ದೇಶದ ಏಳಿಗೆ, ಸ್ವಾತಂತ್ರ್ಯ ಪ್ರೇಮ, ಇವುಗಳ ಉಜ್ವಲ ಅಭಿಮಾನ, ಕಾರ್ಯ ನಿರ್ವಹಣ ಧ್ಯೇಯವು ಸಹಜವಾಗಿ ಇದ್ದರೂ, ಕೆಲವು ಕಂಟಕಗಳು ಅಪರಿಹಾರ್ಯವಾಗಿ ಬಂದು ನಿಂತಿರುವುದನ್ನು ಕಂಡು ದೇಶಾಭಿಮಾನಿಯು ಕಿಚ್ಚಿಗೇಳುವನು. ಭಾರತದ ಭವಿಷ್ಯ ನಿರ್ಮಾಪಕರಾದ ಯುವಕರು ಈ ಕಡೆಗೆ ಗಮನ ಕೊಡಬೇಕು.

ಸ್ವಾತಂತ್ರ್ಯವೆಂದರೇನು?

ಈ ವಿಷಯವಾಗಿಯೇ ಜನತೆಯು ಹಲವು ಪಂಗಡಗಳು ಭಿನ್ನ ಮತವುಳ್ಳವುಗಳಾಗಿ ಕಂಡು ಬರುತ್ತವೆ. ಬಹು ಮಂದಿ ಜನರಿಗೆ ಸ್ವಾತಂತ್ರ್ಯವೆಂದರೆ 'ಸ್ವರಾಜ್ಯ'ವೆಂದು ಸ್ಪಷ್ಟವಿದೆ. ಹಿಂದೂಸ್ಥಾನದ ಒಳಗಿನ ಮತ್ತು ಅದಕ್ಕೆ ಸಂಬಂಧಿಸಿದ ಹೊರಗಿನ ವ್ಯವಹಾರಗಳೆಲ್ಲವೂ ಹಿಂದೀಯರಿಗೆ ಸಿಗುವಂತಾಗುವುದೇ ಈ 'ಸ್ವರಾಜ್ಯ'ದ ಅರ್ಥವಾಗಿದೆ. ಇನ್ನು ಕೆಲವರಿಗೆ ಸ್ವಾತಂತ್ರ್ಯವೆಂದರೆ, ಈಗ ನಮ್ಮ ಮೇಲೆ ಆಧಾರವಾಗಿರುವ ಸಾಮ್ರಾಜ್ಯ ಶಾಹಿಯ ಅಧೀನದಲ್ಲಿ ಸಿಗುವ ಸ್ವಾತಂತ್ರ್ಯವಾಗಿದೆ. ಇನ್ನು ಜಾತೀಯ ಪಂಗಡಗಳಿಗೆ ಸ್ವಾತಂತ್ರ್ಯವೆಂದರೆ, ತಮ್ಮ ತಮ್ಮ ಜಾತಿಗಳಿಗೆ ಸಿಗುವ ಪ್ರಯೋಜನವೇ ಆಗಿದೆ. ಹೀಗೆ ಬಹು ಮುಖವಾಗಿ ಜನತೆಯಲ್ಲಿ ಸ್ವಾತಂತ್ರ್ಯದ ವಿಷಯವಾಗಿ ಭಾವನೆ ಹರಡಿದೆ.

ಪ್ರಾಮುಖ್ಯ ರಾಜಕೀಯ ಪಕ್ಷಗಳು

ಮೊದಲನೆಯ ರಾಜಕೀಯ ಪಂಗಡವೆಂದರೆ ಕಾಂಗ್ರೆಸು. ನಿಷ್ಪಕ್ಷಪಾತವಾಗಿ ಹೇಳುವುದಿದ್ದರೆ, ಕಾಂಗ್ರೆಸು ಎಂಬುದು ಶುದ್ಧ ರಾಜಕೀಯ ತತ್ವವೊಂದರ ಮೂಲಾಧಾರದಿಂದಲೇ ನಿಂತು, ಭಾರತದ ರಾಜಕೀಯ ಅಭಿವೃದ್ಧಿಗಾಗಿ ಹೆಣಗಾಡುವ ಜನತೆಯ ಬಹುಮತದ ವಿಶ್ವಾಸವನ್ನು ಸಂಪಾದಿಸಿದ ಒಂದೇ ಒಂದು ಪ್ರತಿನಿಧಿ ಸಂಸ್ಥೆಯಾಗಿದೆ. ಎಲ್ಲಾ ಜಾತಿ, ಎಲ್ಲಾ ಮತ, ಎಲ್ಲಾ ಭಾರತೀಯರೂ ಇದರಲ್ಲಿ ಸೇರಿದ್ದು ಇದು ರಾಷ್ಟ್ರೀಯ ಸಂಸ್ಥೆಯಾಗಿರುವುದು. ಪ್ರಾಂತ, ಜಾತಿಗಳ ಭೇದವಿಲ್ಲದೆ ಅಖಿಲಭಾರತದ ಕುರಿತು ಎದೆ ತಟ್ಟಿ ಮಾತನಾಡಬಲ್ಲ ಜನತೆಯ ಪ್ರಾತಿನಿಧ್ಯವಿರುವ ಪ್ರಬಲವಾದ ಸಂಸ್ಥೆಯು ಇದೊಂದೇ!

ಆ ಮೇಲೆ ಮುಸ್ಲಿಂಲೀಗು ಹೆಸರಿಂದಲೇ ಇದರ ವಿಷಯವು ಗೊತ್ತಾಗುತ್ತದೆ. ಇದು ಬರಿಯ ಮುಸ್ಲಿಮರಿಗಾಗಿ ಮಾತ್ರ ಇರುವಂತಹುದು. ಇದು ಕೇವಲ ಜಾತೀ ಸಂಸ್ಥೆಯಾಗಿದ್ದರೂ, ಈಗ ಇದಕ್ಕೆ ರಾಜಕೀಯದಲ್ಲಿಯೂ ಸ್ಥಾನ ದೊರಕುವಂತಾಗಿದೆ. ಮುಸ್ಲಿಂ ಜಾತಿಯ ಸಲುವಾಗಿ ರಾಜಕೀಯವನ್ನು ಈ ಸಂಸ್ಥೆಯು ಎತ್ತಿಹಿಡಿಯುವದಂತೆ!

ಮೂರನೆಯದು ಹಿಂದೂ ಮಹಾಸಭೆ. ಇದು ಮೇಲಿನ ಸಂಸ್ಥೆಯಷ್ಟೇ ಸಂಕೋಚದ್ದಾಗಿ, ಕೇವಲ ಜಾತಿಪರವಾದುದು. ಇಂದು ಹಿಂದುಗಳ ಕುರಿತು ವಾದಿಸಲು ಇದಕ್ಕೆ ರಾಜಕೀಯದಲ್ಲಿಯೂ ಪ್ರವೇಶ ಬೇಕಾಗಿದೆಯಂತೆ. ಇವನ್ನು ಬಿಟ್ಟು ಇನ್ನೂ ಚಿಲ್ಲರೆ, ಚಿಲ್ಲರೆ ಜಾತಿಗಳ ಪರವಾಗಿರುವ ಅನೇಕ ಸಂಸ್ಥೆಗಳು ಭಾರತದ ರಾಜಕೀಯದಲ್ಲಿ ಕೈಯಿಕ್ಕಿ ಪರಿಸ್ಥಿತಿಯನ್ನು ಕಲುಷಿತಮಾಡುತ್ತಿವೆ.

ಭೇದಗಳ ಮೂಲವೆಲ್ಲಿ?

ಈ ಪಂಗಡಗಳಿಂದಲೇ ಭಾರತದ ರಾಜಕೀಯದಲ್ಲಿ ಭೇದಗಳು ಉಂಟಾಗಿವೆ. ನಿಜವಾಗಿ ನೋಡಿದರೆ ಮುಸ್ಲಿಂ ಲೀಗು ಮತ್ತು ಹಿಂದೂ ಮಹಾಸಭೆಗಳು ಆಯಾಯ ಜಾತಿಗಳ ಪರವಾಗಿ ಮಾತನಾಡಬಲ್ಲ ಅಧಿಕಾರವುಳ್ಳವುಗಳಾಗಿಲ್ಲ. ಅವುಗಳಲ್ಲಿ ಆಯಾಯ ಜಾತಿಗಳಿಗೆ ಸೇರಿದವರಿದ್ದರೂ, ಅನೇಕ ಮಂದಿ ರಾಜಕೀಯ ದೃಷ್ಟಿಯಿಂದ ಹಿಂದುಗಳೂ ಮುಸ್ಲಿಮರೂ ಕಾಂಗ್ರೆಸಿನ ರಾಜಕೀಯ ತತ್ವವನ್ನೇ ಒಪ್ಪಿಕೊಂಡಿದ್ದಾರೆ. ಆದುದರಿಂದ ಈ ಜಾತೀಯ ಪಂಗಡಗಳು ಕೇವಲ ಜಾತಿಯ ಕುರಿತು ಮಾತ್ರ ಅಲ್ಪಸ್ವಲ್ಪ ಮಾತನಾಡಲು ಅಧಿಕಾರವುಳ್ಳವುಗಳಲ್ಲದೆ, ರಾಜಕೀಯದಲ್ಲಿ ಸ್ಥಾನವೇ ಇಲ್ಲ. ಯಾವುದೇ ಜಾತೀಯ ಪಂಗಡವಾದರೂ, ಜಾತಿಯ ಮಟ್ಟಿಗೆ ಯತ್ನಿಸುವಷ್ಟು ಸಂಕೋಚದಲ್ಲಿರುವುದರಿಂದ ರಾಷ್ಟ್ರದ ಕುರಿತು ಏನೇನೂ ಮಾತನಾಡುವುದು ಸರಿಯಲ್ಲ. ಅದನ್ನು ಬಿಟ್ಟು ಇಂದು, ರಾಷ್ಟ್ರದ ವಿಷಯದಲ್ಲಿ ತಮ್ಮ ಅಧಿಕಾರವುಂಟೆಂದು ಮುಂದೆ ಬರುವುದರಿಂದಲೇ ಭಾರತದ ರಾಜಕೀಯವು ಇವುಗಳಿಂದ ಹಾಳಾಗಲು ಎಡೆಯಾಗಿದೆ.

ಹೊಸ ಸಮಸ್ಯೆ

ಇಡೀ ಭಾರತದಲ್ಲಿ ರಾಷ್ಟ್ರೀಯ ಆವೇಶವನ್ನು ತುಂಬಿಸಿದ ಸಂಸ್ಥೆಯೆಂದರೆ ಕಾಂಗ್ರೆಸು. ಎಲ್ಲಾ ಜಾತಿಮತದವರನ್ನು ತನ್ನೊಳಗೆ ಸೇರಿಸಿಕೊಂಡು ಕಾಂಗ್ರೆಸು ರಚನೆಯಾಗಿದೆ. ಹೀಗೆ ರಾಷ್ಟ್ರದ ರಚನೆಯಾಗುತ್ತಿರುವಾಗ ಅಧಿಕಾರದ ವಿಭಜನೆಯಲ್ಲಿ ಹೊಸ ಸಮಸ್ಯೆ ಹುಟ್ಟಿತು.

ಕಾಂಗ್ರೆಸು ರಾಜಕೀಯದಿಂದ ಸೇರಿದ ಹಿಂದುರಾಜಕೀಯ ಸಂಸ್ಥೆಯೇ ಅಧಿಕಾರ ನಡೆಸಬೇಕೆಂದು ಸಾರುತ್ತದೆ. ಇದನ್ನು ಮುಸ್ಲಿಂ ಲೀಗಿನವರು ಹಿಂದುಗಳು ತಮ್ಮನ್ನು ಆಳುವ ಸಲುವಾಗಿ ಹೀಗೆ ಮಾಡುವರೆಂದೂ, ಭಾರತದಲ್ಲಿ ಬಹು ಮಂದಿ ಹಿಂದುಗಳಿರುವುದರಿಂದ ಬಹುಮಂದಿಯ ಒಡೆತನದಲ್ಲಿ ಮುಸ್ಲಿಮರಿಗೆ ಆತಂಕವುಂಟೆಂದೂ ತಮ್ಮ ಹಕ್ಕುಬಾಧ್ಯತೆಗಳು ಪಾಲಿತವಾಗಬೇಕೆಂದೂ ಕಿರುಕುಳವೆಬ್ಬಿಸಿದರು. ಕಾಂಗ್ರೆಸು ಅಲ್ಪಸಂಖ್ಯಾಕರ ಕುರಿತು ಎಷ್ಟೊಂದು ಭರವಸೆಯಿತ್ತರೂ, ಮುಸ್ಲಿಂ ಲೀಗಿನ ಕೂಗು ನಿಲ್ಲಲಿಲ್ಲ. ರಾಷ್ಟ್ರೀಯ ಸ್ವಾತಂತ್ರ್ಯ ಸಾಧನೆಯ ಮಾರ್ಗದಲ್ಲಿ ಹೀಗೆ ಜಾತಿಮತಗಳು ಎದುರಾಗಿ ನಮ್ಮ ಪ್ರಗತಿಯು ಹಾಳಾಗಿದೆ.

ಮುಸ್ಲಿಮರಾಗಲಿ, ಹಿಂದುಗಳಾಗಲಿ ಇನ್ನು ಯಾರೇ ಆಗಲಿ ಭಾರತೀಯರಿಗೆ ಧರ್ಮವೆಂದರೆ ಬಹಳ ಹೆಚ್ಚಿನದು. ಜನತೆಯ ಈ ಬುದ್ಧಿಯನ್ನು ಕೆಲವು ಪುಢಾರಿಗಳು ತಮ್ಮ ಸ್ವಾರ್ಥದ ಸಲುವಾಗಿ ಉಪಯೋಗಿಸಿ ರಾಷ್ಟ್ರದ ಹಾನಿಮಾಡಿದರು. ಇವರಿಗೆ ಭಾರತದಲ್ಲಿ ಸ್ವಾತಂತ್ರ್ಯ ಸ್ಥಾಪನೆಯಾಗಬೇಕೆಂದು ಹಗಲಿರುಳು ಶ್ರಮಿಸುತ್ತಿರುವ ಕಾಂಗ್ರೆಸಿನ ಕಾರ್ಯವು ಗಮನಕ್ಕೆ ಬರದೆ ತಮ್ಮ ಜಾತಿಮತಗಳ ವ್ಯರ್ಥ ಆಲಾಪವೇ ಹೆಚ್ಚಾಗಿದೆ.

ಒಂದೇ ಮಾರ್ಗ

ಕಾಂಗ್ರೆಸು ಹಿಂದೂ, ಮುಸ್ಲಿಂ ಭೇದವಿಲ್ಲದೆ ಎಲ್ಲರಿಗೂ ಪ್ರಾತಿನಿಧಿಕವಾಗಿ ಯೋಗ್ಯ ಇತ್ಯರ್ಥಕ್ಕೆ ಬರಲು ಒಪ್ಪುತ್ತಿರುವಾಗ, ಅದಕ್ಕೆ ಈ ಸಂಕೋಚ ಬುದ್ಧಿಯ ಸಂಸ್ಥೆಗಳು ತಡೆಮಾಡುತ್ತಿರಲು ಇಂದು ನಮಗೆ ಒಂದೇ ಮಾರ್ಗವುಳಿದಿದೆ. ಅಲ್ಪಸಂಖ್ಯಾಕರ ವಿಷಯವೆಂಬುದು ಎಲ್ಲಾ ದೇಶದಲ್ಲಿಯೂ ಇರುವುದರಿಂದ ನಮ್ಮ ದೇಶಕ್ಕೇ ಒಂದು ವಿಶೇಷವಲ್ಲ. ಆದುದರಿಂದ ರಾಷ್ಟ್ರೀಯ ವಿಷಯದಲ್ಲಿ ಜಾತಿಯನ್ನು ಬೆರೆಸುವ ಅಲ್ಪಬುದ್ಧಿಯವರನ್ನು ಕಡೆಗಣಿಸಬೇಕು. ಎಲ್ಲರೂ ಒಂದೇ ತತ್ವದಿಂದ ಒಂದೇ ಮಾರ್ಗದಲ್ಲಿ ಮುನ್ನಡೆಯದಿದ್ದರೆ ಸ್ವಾತಂತ್ರ್ಯವನ್ನು ಪಡೆಯುವುದು ಅಸಾಧ್ಯ. ಇದುವರೆಗಿನ ಅಲಕ್ಷ್ಯವೇ ಸಾಕಾಗಿದೆ. ರಾಜಕೀಯದಲ್ಲಿ ಜಾತಿಯ ಸ್ವಾರ್ಥಗಳು ಕೆಡಿಸಿ ನಮ್ಮ ಪ್ರಗತಿಗೆ ಅಡ್ಡಬರದಂತೆ ನಾಡಿನ ಸ್ತ್ರೀಪುರುಷರೆಲ್ಲರೂ ಎಚ್ಚರದಿಂದಿರಬೇಕು.

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of bankingbusiness transacted

ನೋಟೀಸು

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 80/37 R. I. A. 1063/39

ನಾರಾಯಣ ಹೆಬ್ಬಾರ—ವಾದಿ

ದತ್ತಾತ್ರಿ ರಾವ್ ಕೂಡ-ಪ್ರತಿವಾದಿರು

1-4ನೇ ಪ್ರತಿವಾದಿರಿಗೆ ತಿಳಿಸುವುದೇನಂದರೆ:

1ನೇ ಪ್ರತಿವಾದಿ, ದತ್ತಾತ್ರಿಯರಾವ್, ಕೃಷ್ಣಪ್ಪಯ್ಯನವರ ಮಗ ಕಂಬದಕೋಣೆ ಗ್ರಾಮಸ್ಥ.

4ನೇ ಪ್ರತಿವಾದಿ ಬಾವಿತಡಿ ವೆಂಕಟ, ಬಸರೂರು ಹಳಿಪೈಕ ಚಿಕ್ಕ ಮಗ, ಕೆರಗಾಲ ಗ್ರಾಮಸ್ಥ.

ಸದ್ರಿ ವ್ಯಾಜ್ಯದಲ್ಲಿ ಸದ್ರಿ ವ್ಯಾಜ್ಯದ ಕೈಸೇತನ್ನೂ ಮತ್ತು ಡಿಕ್ರಿಯನ್ನೂ ಕೂಡ ದುರುಸ್ತು ಪಡಿಸಬೇಕಾಗಿ ವಾದಿಯು ಮೇಲ್ಕಂಡ ಅರ್ಜಿಕೊಟ್ಟಿರುವುದರಿಂದ ಅದರ ಕುರಿತು ನಿಮ್ಮ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು ತಾ. 17-11-39ಕ್ಕೆ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಖುದ್ದಾಗಲೀ ವ ವಕೀಲದ್ವಾರಾವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಕುಂದಾಪುರ | **B. Mahabala Holla,**
8-11-39 | Advocate for Plaintiff.

ರಾಜಸಿಂಹಾಸನವನ್ನು ಬಿಟ್ಟರೂ ರಾಷ್ಟ್ರಾಭಿಮಾನವನ್ನು ಬಿಡಲಿಲ್ಲ

ಡ್ಯೂಕ್ ಓಫ್ ವಿಂಡ್ಸರರ ದೇಶಾಭಿಮಾನ

[ಒಂದು ಸುಂದರಿಯ ಸಲುವಾಗಿ ಎಡ್ವರ್ಡರು (ಡ್ಯೂಕ್ ಓಫ್ ವಿಂಡ್ಸರರು) ರಾಜಸಿಂಹಾಸನವನ್ನು ತ್ಯಾಗಮಾಡಿದರು! ಕಳೆದ ಕೆಲ ಕಾಲದಲ್ಲಿ ಇಂಗ್ಲಂಡಿನ ಹೊರ ಹೋಗಿ, ಆ ಪ್ರೇಮದಂಪತಿಗಳು ವಿಹರಿಸಿದರು. ಆದರೆ ಇಂಗ್ಲಂಡು ಯುದ್ಧಪ್ರಸಕ್ತವಾಗಿರುವ ವಾರ್ತೆಯನ್ನು ಕೇಳಿ, ಅವರ ಹೃದಯವು ಸುಮ್ಮಗಿರಲಿಲ್ಲ. ರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿ ಅವರಿಂದು ಇಂಗ್ಲಂಡಿಗೆ ಪುನಃ ಬಂದು ಯುದ್ಧಾಳುಗಳಾಗಿದ್ದಾರೆ]

ಇಂಗ್ಲೆಂಡು ಎಡ್ವರ್ಡರನ್ನು ಬಹಳವಾಗಿ ಮೆಚ್ಚುತ್ತಿದೆ. ರಾಷ್ಟ್ರಕ್ಕಾಗಿ ಅವರಿಗಿರುವ ಅಭಿಮಾನವೇ ಇದಕ್ಕೆ ಕಾರಣ. ಕಳೆದ ಮಹಾಯುದ್ಧದಂದು ಕೇವಲ ಇಪ್ಪತ್ತು ವರ್ಷದ ಎಳೆಯ ಯುವಕನಾದ ಅವರು ಯುದ್ಧರಂಗಕ್ಕಿಳಿದು ಸೈನಿಕರನ್ನು ಜಯದಿಂದ ವಿಜಯದ ಕಡೆಗೆ ನಡೆಸಿದರು.

ಇಂದಿನ ಇಂಗ್ಲೆಂಡಿನ ರಾಜರು ಹಿಂದಿನವರಂತಲ್ಲ. ಹಿಂದಿನ ರಾಜರು ಯುದ್ಧಕ್ಕಿಳಿದು ಕಾದಾಡುತಿದ್ದರು. ಏಕೆಂದರೆ ಅಂದಿನ ಯುದ್ಧವು ರಾಜರ ಸಾಮ್ರಾಜ್ಯ ಲಾಲಸೆಯದಾಗಿತ್ತು. ಅರಸರೇ ಕಲಹ ಕಾರಣರೂ ಆಗಿದ್ದರು ಆದರೆ ಇಂದಿನ ಪ್ರಜಾಪ್ರಭುತ್ವದಲ್ಲಿ ರಾಜರಿಗಿರುವ ಜವಾಬ್ದಾರಿಯು ಕಡಿಮೆಯಾಗಿರುವಾಗ ಅರಸು ಮನೆತನದವರು ಯುದ್ಧದಲ್ಲಿ ರಕ್ತ ಚೆಲ್ಲುವ ಅವಶ್ಯಕತೆಯಾದರೂ ಏನಿದೆ? ಆದರೆ ಎಡ್ವರ್ಡರು ಇವನ್ನು ಯೋಚಿಸದೆ ರಾಷ್ಟ್ರದ ವಿಪತ್ತು ತನ್ನ ವಿಪತ್ತೆಂದೇ ರಣರಂಗಕ್ಕೆ ದುಮುಕಿದ್ದರು

ಲಾರ್ಡ್ ಕಿಚ್ನರರೊಡನೆ ಸಮ್ಮತಿ

ಕಳೆದ ಮಹಾಯುದ್ಧದ ಸಮಯ, ಇಂಗ್ಲೆಂಡಿಗೆ ಇಂಗ್ಲೆಂಡೇ ಯುದ್ಧಕ್ಕಿಳಿದಿತ್ತು. ಇಪ್ಪತ್ತು ವರ್ಷದ ಎಡ್ವರ್ಡರೂ ಸೈನಿಕ ಶಿಕ್ಷಣವನ್ನು ಪಡೆದು, ಮಾತಾಪಿತೃಗಳ ಅನುಮತಿ ಪಡೆದು ರಣರಂಗಕ್ಕೆ ಹೊರಡಲು ಅನುವಾದರು ಆದರೆ ಅವರಿಗೆ ಸೇನಾಧಿಪತಿಗಳ ಅನುಮತಿ ಸಿಗಲಿಲ್ಲ. ಆದುದರಿಂದ ಒಂದು ದಿನ ಸ್ವತಹ ಸೇನಾಧಿಪತಿಯಾದ ಲಾರ್ಡ್ ಕಿಚ್ನರರನ್ನು ಕಂಡು ಮಾತನಾಡಿದರು. ಯುವಕ ಎಡ್ವರ್ಡರ ಉತ್ಸಾಹ ದೇಶಪ್ರೇಮಗಳನ್ನು ಕಂಡು ಸೇನಾಧಿಪತಿಯು ಮೆಚ್ಚಿದನು. ಆದರೆ ಎಲ್ಲಿ ರಾಜಸಂತತಿಗೆ ಅಪಾಯವೊದಗಬಹುದೋ ಎಂದು ಆತನು ಸಮ್ಮತಿಗೊಡಲಿಲ್ಲ

ಹಾಗಾದ ಮೇಲೆ ಅವರು ಇತರರ ಮೂಲಕ ಸೇನಾಧಿಪತಿಯೊಡನೆ ಮಾತನಾಡಿಸಿ, ಅನುಮತಿ ಪಡೆಯಲು ಯತ್ನ ಮಾಡಿದರೂ ಆ ಕಾರ್ಯವೂ ವ್ಯರ್ಥವಾಯಿತು. ಆದರೂ ನಿರಾಶರಾಗದೆ, ಸ್ವತಃ ತಿರಿಗಿ ಒಮ್ಮೆ ಸೇನಾಪತಿಯನ್ನು ಕಂಡು ತನಗೆ ಯುದ್ಧಕ್ಕೆ ಹೋಗಲು ಅನುಮತಿ ಕೇಳಿದರು ಆಗಲೂ ಅದು ಸಿಗಲಿಲ್ಲ

ಸಂದರ್ಭ ಒದಗಿತು

ಯುದ್ಧವು ಬೇಗನೆ ಮುಗಿಯಬಹುದೆಂದು ಇಂಗ್ಲೆಂಡಿನಲ್ಲಿ ಭಾವನೆಯಿತ್ತು ಆದರೆ ತಿಂಗಳು ತಿಂಗಳುಗಳ ವರೆಗೆ ಯುದ್ಧವು ಮುಂದುವರಿಯಿತು. ಜರ್ಮನಿಯ ಕೈಸರನು ಯುದ್ಧದಲ್ಲಿ ಒಂದರ ಮೇಲೆ ಇನ್ನೊಂದರಂತೆ ಜಯಶಾಲಿಯಾದನು. ಇಷ್ಟರಲ್ಲಿ ಬ್ರಿಟನು ಎಚ್ಚರಗೊಂಡಿತು.

ಸ್ವತಃ ರಾಜಕುಮಾರನನ್ನು ಯುದ್ಧರಂಗಕ್ಕೆ ಕಳುಹಿಸಿದರೆ ಸೈನಿಕರು ವೀರಾವೇಶದಿಂದ ಕಾದಾಡುವರೆಂದು ಈ ಸಲ ಅನುಮತಿ ಸಿಕ್ಕಿತು ೧೯೧೪ನೇ ಇಸವಿ ನವೆಂಬರ ೧೬ರಂದು ಲಾರ್ಡ್ ಕಿಚ್ನರಿಗೆ ವಂದಿಸಿ ಎಡ್ವರ್ಡರು ಸಮರಭೂಮಿಗೆ ನಡೆದರು

ಬೇರೆಬೇರೆ ಕಡೆಗಳಲ್ಲಿ ಅವರು ಮೊದಲಾಗಿ ಯುದ್ಧಮಾಡಿದರು. ಈ ಸಮಯದಲ್ಲಿ ಅವರು ತೋರಿಸಿದ ಸಾಹಸದ ಕುರಿತು ಸೇನಾಧಿಪತಿಗಳು ಬಹಳ ಪ್ರಶಂಶಿಸಿದ್ದಾರೆ

೧೯೧೬ರಂದು ಸುವೆಜ್ ಕಾಲುವೆಯ ರಕ್ಷಣೆಗಾಗಿ ಅವರನ್ನು ಈಜಿಪ್ತಿಗೆ ಕಳುಹಿಸಲಾಯಿತು ಆಸ್ಟ್ರಿಯಾ, ನ್ಯೂಜಿಲೆಂಡುಗಳ ಯೋಧರ ಸಾಹಸ ಪರಾಕ್ರಮಗಳನ್ನು ಕಂಡು ಇವರಲ್ಲಿ ಹೊಸ ಚೇತನವು ಬಿದ್ದಿತ್ತು ಅಲ್ಲಿ ಕೆಲಸ ಮುಗಿಸಿ ಮರಳುವಾಗ ಇಟಲಿಯ ರಾಜನ ಅತಿಥಿಯಾಗಿ ಕೆಲಸಮಯ ಇಟಲಿಯಲ್ಲಿದ್ದರು

ಯುದ್ಧರಂಗದಲ್ಲಿ ಯಾವಾಗಲೂ ಮುಂದುಗಡೆ ನಿಂತು ಕಾದಾಡುತ್ತಿದ್ದರು ಆದರೂ ಒಂದು ಕೂದಲೆಳೆಯೂ ಕದಲದಂತೆ ನೋಡಿಕೊಳ್ಳುವ ಚತುರತೆ ಇತ್ತು. ಎಷ್ಟೋ ಸಮಯ ಅನೇಕ ದುರ್ಘಟನೆಗಳಿಂದ ತಪ್ಪಿಸಿಕೊಳ್ಳಬೇಕಾದರೆ ಅವರಿಗೆ ಜೀವಕ್ಕೆ ಬರುತಿತ್ತು.

ನಾಲ್ಕು ವರ್ಷಗಳ ವರೆಗೆ ಅವರು ಯುದ್ಧಮಾಡಿ ಬಹಳ ಅನುಭವ ಪಡೆದರ. ದೇಶದ ಸಲುವಾಗಿ ಪ್ರಾಣತೆತ್ತ ಅನೇಕ ವೀರರನ್ನು ಅವರು ಕಣ್ಣಾರೆ ಕಂಡರು

ಶಾಂತಿಸಾಧನೆ

ಯುದ್ಧದ ಭೀಕರತೆಯನ್ನು ಕಂಡು ಅವರ ಮನಸ್ಸು ಜಗತ್ತಿನ ಶಾಂತಿಯ ಸಲುವಾಗಿ ತಿರುಗಿತ್ತು. ಇತ್ತೀಚೆಗಿನ ಅವರ ಕಾರ್ಯಗಳನ್ನು ಪರಿಶೀಲಿಸಿದರೆ ಅವರು ಶಾಂತಿಗಾಗಿ ಯತ್ನಿಸುತ್ತಿದ್ದರೆಂದು ತಿಳಿಯುವುದು. ಆದರೆ ಇಂದು ಜರ್ಮನಿಯ ಸರ್ವಾಧಿಕಾರಿಯು ಇಡೀ ಯೂರೋಪನ್ನೇ ಯುದ್ಧಕ್ಕೆಳೆದಿದ್ದಾನೆ ಇಂಗ್ಲೆಂಡಿನ ರಾಜಕುಮಾರರು ಈಗ ತಿರಿಗಿ ಮಾತೃಸೇವೆಯ ಸಲುವಾಗಿ ಬಂದಿರುವರು

ನೋಟೀಸು

ಕುಂದಾಪುರದ ಮು ಕೋರ್ಟಿನಲ್ಲಿ

O S No 155/39

ಪದ್ಮನಾಭ ಪೈ – ವಾದಿ

ಮತ್ತು

ನರಸಯ್ಯ ಯಾನೆ ನರಶಿಂಹ ಕಾರಂತ ಕೂಡಾ – ಪ್ರತಿವಾದಿರು

ಉಡ್ಪಿ ತಾಲೂಕು ಚಿತ್ರಪಾಡಿ ಗ್ರಾಮದ ಪಣಿಯಪ್ಪ ಕಾರಂತರ ಮಗಂದಿರಾದ 3ನೇ ಪ್ರತಿವಾದಿ ಶ್ರೀನಿವಾಸ ಕಾರಂತ ಮತ್ತು 4ನೇ ಪ್ರತಿವಾದಿ ಲಕ್ಷ್ಮೀನಾರಾಯಣ ಕಾರಂತ, ಇವರಿಗೆ—

1ನೇ ಪ್ರತಿವಾದಿಯು ಕುಟುಂಬದ ಪ್ರಯೋಜನಾರ್ಥವಾಗಿ ತಾ 23-4-36ರಲ್ಲಿ ವಾದಿಗೆ ಬರಕೊಟ್ಟ ಈಡು ದಸ್ತಾವೇಜಿನ ಪ್ರತಿಫಲ ರೂ. 952-10-6ರ ಮೇಲೆ ತಾ 24-4-38ರ ವರೆಗೆ ಬಾಬಾ ಬಡ್ಡಿ ವಗೈರೆ ಸಿನ್ನತ್ತಿಗಳ ಬಗ್ಗೆ ಮೇಲ್ಕಾಣುವ ದಾವೆಯನ್ನು ದಾಖಲು ಮಾಡಿರುತ್ತಾನೆ ಸದ್ರಿ ದಾವೆಯು ತಾ 25-11-39ಕ್ಕೆ ತಸ್ಕಿಗೆ ಇಡೋಣಾಗಿಯದೆ ಅದಕಾರಣ ಆ ದಿನ ನೀವಾಗಲಿ ವಕೀಲ ಮೂಲಕವಾಗಲಿ ಹಾಜರಾಗಲಿಕ್ಕೆ ತಪ್ಪಿದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಾಗುವುದೆಂದು ನೀವು ತಿಳಿದಿರತಕ್ಕದ್ದು

ಹುಕುಂ ಪ್ರಕಾರ

ಕುಂದಾಪುರ 8-11-39 — **K. S. Karanth,** Advocate for Plaintiff.

ನಡುವಿನಲ್ಲಿ ಸಿಗೆಯಲ್ಪಟ್ಟ ಈಗಿನ 7 ಓ' ಕ್ಲೋಕ್ ಬ್ಲೇಡುಗಳು ಹಳೇ ಮಾದರಿಯ ಮೂರು ತೂತುಗಳ ಬ್ಲೇಡುಗಳಿಗಿಂತ ಸುಧಾರಣೆ ಹೊಂದಿವೆ ಇದರ ಕ್ರಯವು ಅಗ್ಗ ಮಾತ್ರವಲ್ಲದೆ ಚೆನ್ನಾಗಿ ಹರಿತವಾಗಿದ್ದು ಉತ್ತಮವೂ ನುಣುಪೂ ಆದ ಕ್ಷೌರವನ್ನು ಉಂಟುಮಾಡುವುದಲ್ಲದೆ ಅನೇಕ ಕಾಲದ ವರೆಗೆ ಬಾಳುವುದು

7 ಓ'ಕ್ಲೋಕ್ ಬ್ಲೇಡುಗಳು ಹಳೇ ಮತ್ತು ಹೊಸ ಮಾದರಿಯ ಬ್ಲೇಡುಗಳಿಗೆ ಅಚ್ಚುಕಟ್ಟಾಗುತ್ತವೆ.

7QZ

ಒಂದು ಸಣ್ಣ ಕತೆ:

ಸರಕಿನ ಸಾಯಿಬ

[ಅನುವಾದಕರು. ಕಟಪಾಡಿ ಶ್ರೀನಿವಾಸ ಶೆಟ್ಟಿ, ಕಾರ್ಕಳ]

ತಾಯಿತಂದೆಗಳು ತಮ್ಮ ಬಿಡಾರವನ್ನು ಆ ಬೀದಿಗೆ ತಂದಂದಿನಿಂದ ಸುನೀತಿಯು ಸರಕಿನ ಸಾಯಿಬನನ್ನು ತಪ್ಪದೆ ಕಾಣುತಿದ್ದಳು. ಆಗ ಅವಳಿಗೆ ಎಂಟು ವರ್ಷ ಪ್ರಾಯ ಮಾತ್ರ. ಪ್ರತಿಯೊಂದು ಆದಿತ್ಯವಾರ'ಹರಿದ ಚಿಂದಿ ಬಟ್ಟೆಗಳನ್ನುಟ್ಟ ಸರಕಿನ ಸಾಯಿಬನು, ತನ್ನ ಸಾಮಾನುಗಳು ಇರುವ ಹರಕುಮುರುಕಾದ ಒಂದು ತಗಡಿನ ಪೆಟ್ಟಿಗೆಯನ್ನು ತಲೆಯ ಮೇಲಿಟ್ಟುಕೊಂಡು 'ಸಾಯಿಬಾ ಬಂದಾ ಸಾಯಿಬಾ, ಸರಕು ಬೇಕೇ ಸರಕು!' ಎಂದು ಕೂಗುತ್ತ ಬೀದಿಯ ಆ ತುದಿಯಿಂದ ಈ ತುದಿಯ ತನಕ ತಿರುಗಾಡುತಿದ್ದಾಗ ಎರಡೂ ಪಕ್ಕಗಳ ಮನೆಗಳಲ್ಲಿರುವ ಸ್ತ್ರೀಯರು ಕಿಟಕಿಗಳಿಂದ ಅವನನ್ನು ಇಣಿಕಿ ನೋಡಲಿಕ್ಕೆ ಬರುತಿದ್ದರು. ಆತನ ಸರಕುಗಳು ಅವರಿಗೆ ಬೇಕಾಗಿದ್ದುವೆಂದಲ್ಲ, ಆದರೆ ಅವನನ್ನು ನೋಡುವಲ್ಲಿ ಒಂದು ಬಗೆಯ ಆಕರ್ಷಣವಿರುತಿತ್ತು. ಅವನು ಪ್ರತಿ ದಿನ ಬರುತ್ತಿದ್ದಿಲ್ಲ. ಆದರೆ ಪ್ರತಿ ದಿನ ಆದಿತ್ಯವಾರ ಎಂದೂ ತಪ್ಪುತ್ತಿರಲಿಲ್ಲ.

ಆದಿತ್ಯವಾರ ದಿನ ಆ ಬೀದಿಯಲ್ಲಿ ಎಲ್ಲರೂ ನೋಡುವ ನೋಟವಾಗಿತ್ತದು—ಸರಕಿನ ಸಾಯಿಬನು 'ಸರಕು ಬೇಕೇ ಸರಕು' ಎಂದು ಕೂಗುತ್ತ ಎರಡು ಮೂರು ಬಾರಿ ಅತ್ತಿತ್ತ ಓಡಾಡಿದ ಬಳಿಕ ಅವನು ನಡು ಬೀದಿಯಲ್ಲಿ ಕೂತುಕೊಂಡು ಬಿಡುವನು. ತನ್ನ ಪೆಟ್ಟಿಗೆಯನ್ನು ತೆರೆದು, ಒಂದು ಚಿಂದಿ ಬಟ್ಟೆಯನ್ನು ನೆಲದ ಮೇಲೆ ಹಾಸುವನು, ಸಾಮಾನುಗಳನ್ನು ತೆಗೆದು ಒಂದೊಂದಾಗಿ ಬಟ್ಟೆಯ ಮೇಲೆ ಪ್ರದರ್ಶನಮಾಡುವನು. ಆ ಸಾಮಾನುಗಳಲ್ಲಿ ಯಾವುದಿಲ್ಲ, ಯಾವುದುಂಟು ಎಂದು ಹೇಳುವ ಹಾಗಿಲ್ಲ. ಮಣಿ, ಸರ, ಚೂರಿ, ಕತ್ತರಿ, ಕನ್ನಡಿ, ಕರಡಿಗೆ, ಗೊಂಬೆ, ನೂಲು, ದಾರ ಎಲ್ಲವೂ ಅಲ್ಲಿರುವವು. 'ಏನು ತಂದಿದ್ದಿ, ಸಾಯಿಬಾ, ಏನು ತಂದಿದ್ದಿ' ಎಂದು ತೊದಲು ಮಾತುಗಳಲ್ಲಿ ಕೇಳುತ್ತ ಸುತ್ತಮುತ್ತಲಿನ ಮಕ್ಕಳು ಬಂದು ಅವನ ಸುತ್ತಾಗಿ ನಿಲ್ಲುವರು. ಅರುವತ್ತು ವರ್ಷ ಪ್ರಾಯದ ಆ ಹಣ್ಣುಹಣ್ಣಾದ ಮುದುಕನು ನಸುನಗುತ್ತ ಎಲ್ಲರಿಗೆ ತಾನು ತಂದುದನ್ನು ಒಂದೊಂದಾಗಿ ತೋರಿಸುವನು.

ಆತನಿಗೆ ಅಲ್ಲಿ ವ್ಯಾಪಾರವು ಬಹಳ ಆಗುತ್ತಿರಲಿಲ್ಲ ಹೇಳಬೇಕಾಗುತಿದ್ದಿಲ್ಲ. ಆದರೆ ಬಹಳ ಲಾಭ ಗಿಟ್ಟುತ್ತಿರಲಿಲ್ಲ ಎಂದು ಹೇಳಿ ಅವನು ಯಾವ ಕೆಲಸವಿದ್ದರೂ ಅದನ್ನು ಬಿಟ್ಟು ಆದಿತ್ಯವಾರ ಆದಿತ್ಯವಾರ ಆ ಬೀದಿಗೆ ಬರುತಿದ್ದನು. ಅವನ ಗಿರಾಯಿಕಿಗಳಲ್ಲಿ ಸುನೀತಿಯೂ ಒಬ್ಬಳಾಗಿದ್ದಳು. ಅವಳು ಕಾಡಿ ಬೇಡಿ, ಅತ್ತು ಹೊರಳಿ ತನ್ನ ತಾಯಿಯಿಂದ ಪ್ರತಿ ಆದಿತ್ಯವಾರ ಕಾಸು ದುಗ್ಗಾಣಿಯನ್ನು ತೆಗೆದುಕೊಳ್ಳುವಳು. ಅವನ್ನು ತೆಗೆದುಕೊಂಡು ಸಾಯಿಬನ ಸುತ್ತು ಹಾಕಿದ ಮಕ್ಕಳ ಸಂದಣಿಯನ್ನು ಕೂಡುವಳು. ಆ ಮುದುಕನಿಗೆ ಸುನೀತಿ ಬಂದಾಗ ಅಪರಿಮಿತ ಆನಂದವಾಗುವುದು. 'ಏನವ್ವಾ ಏನು ಬೇಕು' ಎಂದವನು ಪ್ರೇಮದಿಂದ ಅವಳನ್ನು ಕೇಳುವನು. ಸಾಯಿಬನಿಗೆ ಬೇಕಾದುದು ವ್ಯಾಪಾರವಲ್ಲ; ಮುದ್ದು ಮಕ್ಕಳ ನಿಶ್ಚಲ ಪ್ರೇಮ. ಅವನು ಕಾಸು ತೆಗೆದುಕೊಂಡು, ನಸುನಗುತ್ತ ಒಂದು ಮಣಿಸರವನ್ನು ತೆಗೆದು ಆಕೆಯ ಕೈಯ್ಯಲ್ಲಿಡುವನು. 'ಮಗೂ! ದೇವರು ನಿನಗೆ ಒಳ್ಳೇದು ಮಾಡಲಿ' ಎಂದು ಆಶೀರ್ವದಿಸುವನು. ಸುನೀತಿಯನ್ನು ಕಂಡರೆ ಹೆತ್ತ ಮಕ್ಕಳ ಮೇಲೆ ಹೆತ್ತವರಿಗಿಲ್ಲದಷ್ಟು ಪ್ರೇಮವು ಆತನ ಹೃದಯದಿಂದ ಉಕ್ಕಿ ಬರುವುದು.

ಸುನೀತಿಗೆ ಈಗ ಹದಿನಾರು ವರ್ಷ ಪ್ರಾಯ. ಅವಳು ಮೊದಲಿನಂತೆ ಮಕ್ಕಳ ಗುಂಪನ್ನು ಸೇರುವುದಿಲ್ಲ. ಸಾಯಿಬನು ಬಂದಾಗ ಅವಳೇ ಅವನನ್ನು ತನ್ನ ಮನೆಯ ಮುಂದುಗಡೆಗೆ ಕರೆಯುವಳು. 'ಹೇಗಿದ್ದೀಯಾ, ಸಾಯಿಬಾ' ಎಂದು ಪ್ರೇಮದಿಂದ ಕೇಳುವಳು. 'ಹಾಂ, ಅವ್ವಾ, ಕ್ಷೇಮವಾಗಿದ್ದೇನೆ' ಎಂದು ಹೇಳಿ ಅವನು ತಲೆ ಮೇಲ್ಲಿನ ಪೆಟ್ಟಿಗೆಯನ್ನು ಮನೆಯ ಮೆಟ್ಟಲಿನ ಮೇಲಿಟ್ಟು 'ಏನು ಬೇಕವ್ವಾ' ಎಂದು ಆಕೆಯ ಮುಖ ನೋಡುವನು. 'ಅವ್ವಾ, ದೊಡ್ಡವಳಾಗಿ ಬೆಳೆದಿದ್ದೀಯಾ! ಇನ್ನು ಮದುವೆಯಾಗಬೇಕು' ಎಂದು ಹೇಳಿ ದಣಿವು ಪರಿಹಾರ ಮಾಡಿಕೊಳ್ಳಲಿಕ್ಕೆ ಅಲ್ಲೇ ಕೂತುಕೊಂಡು ಒಂದು ನಿಟ್ಟುಸಿರು ಬಿಡುವನು. 'ಅವ್ವಾ! ಯಾವಾಗ ನಿನಗೆ ಮದುವೆ? ಯಾರೊಡನೆ ಸಂಬಂಧ' ಎಂದು ಪುನಃ ಪ್ರಶ್ನಿಸುವನು. ಪ್ರಶ್ನೆಯನ್ನು ಕೇಳಿ ಸ್ವಭಾವಸಿದ್ಧ ಲಜ್ಜೆಯಿಂದ ಸುನೀತಿಯ ಮುಖಮಂಡಲವು ಕೆಂಪುಕೆಂಪಾಗುವುದು. ಹೀಗೆಯೇ ಪ್ರತಿ ದಿನ ಆದಿತ್ಯವಾರ ನಡೆಯುವುದು.

ಎಂದಿನಂತೆ ಅಂದೂ ಆದಿತ್ಯವಾರವಾಗಿದ್ದಿತು. ಸಾಯಿಬನೂ ಮನೆ ಮುಂದೆ ಬಂದು ಕೂತುಕೊಂಡಿದ್ದ. ವಾಡಿಕೆಯ ಪ್ರಶ್ನೆಯನ್ನೂ ಕೇಳಿದ್ದ. ಆದರೆ ಆ ಸಲ ಸುನೀತಿ ಮೌನವನ್ನು ಸಾಧಿಸಿರಲಿಲ್ಲ. ಅವಳು—'ನೆರೆಮನೆಯ ರಮೇಶ, ಗೊತ್ತಿದೆಯೆ?' ಎಂದಳು.

'ಏನು ಅಪಲಕ್ಷಣ ಮಾತನಾಡುತ್ತಾನೆ ಮುದಕ!'

'ಹೌದು ಒಳ್ಳೆ' ಎಂದನವನು. ಆದರೆ ಆತನ ಮುಖವು ವಿಚಾರದಿಂದ ಕಪ್ಪಿಟ್ಟಿತು. ಸುನೀತಿ ಇನ್ನೂ ಮಾತನ್ನು ಮುಂದರಿಸಿದಳು—'ನೋಡು, ವರ್ಷಗಳ ಹಿಂದೆ ನಾನೂ ಅವನೂ ಕೂಡಿಯೇ ನಿನ್ನನ್ನು ಸುತ್ತುಹಾಕುತಿದ್ದೆವು. ನಡು ಬೀದಿಯಲ್ಲಿ...' ಸುನೀತಿ ಇನ್ನೇನನ್ನೋ ಹೇಳಲಿಕ್ಕಿದ್ದಳು. ಆದರೆ ಸಾಯಿಬನು ತಡೆದು—'ಅವ್ವಾ, ನೀನು ಅವನನ್ನು ಮದುವೆಯಾಗುವಿಯಾ?' ಎಂದನು. ಆತನೊಡನೆ ತನ್ನ ನಿಶ್ಚಯವಾಗಿದೆ ಎಂದು ಸುನೀತಿ ತಲೆ ಆಡಿಸಿದಳು.

ಒಂದೆರಡು ಕ್ಷಣಗಳ ತನಕ ಇಬ್ಬರೂ ಮಾತನಾಡಲಿಲ್ಲ. ಎಲ್ಲವೂ ಮೌನವಾಗಿದ್ದಿತು.

'ಅವ್ವಾ! ನಾನು ನೀನಾಗಿದ್ದರೆ ಅವನನ್ನು ಮದುವೆಯಾಗುತಿದ್ದಿಲ್ಲ' ಎಂದು ಫಕ್ಕನೆ ಆತನು ನುಡಿದ.

'ನಿನಗೆ ಅವನು ಮೆಚ್ಚುಗೆಯಾಗುವುದಿಲ್ಲವೆ?' ಎಂದು ಸುನೀತಿ ಕೇಳಿದಳು.

'ಇಲ್ಲ ಅವ್ವಾ! ಅವನು ನಿನಗೆ ಒಳ್ಳೆಯ ಗಂಡನಾಗಲಾರನು' ಇದನ್ನು ಹೇಳುವಾಗ ಆತನ ಕಂಠವು ಗದ್ಗದಿತವಾಗಿದ್ದಿತು.

ಸುನೀತಿಗೆ ಸ್ವಲ್ಪ ಸಿಟ್ಟು ಬಂದಿತು. 'ಏನು ಅಪಲಕ್ಷಣ ಮಾತನಾಡುತ್ತಾನೆ, ಮುದುಕ!' ಎಂದು ಅವಳಿಗೆ ಅನ್ನಿಸಿತು. 'ಯಾಕೆ? ಅವನು ನಿನ್ನೊಡನೆ ಏನನ್ನೂ ಕೊಂಡುಕೊಳ್ಳುವುದಿಲ್ಲವೆ?' ಎಂದು ಅವಳು ಸಾಯಿಬನನ್ನು ಪ್ರಶ್ನಿಸಿದಳು.

'ಅದಕ್ಕಲ್ಲ ಅವ್ವಾ! ಅವನು ನನ್ನ ಎಲ್ಲಾ ಸಾಮಾನುಗಳನ್ನು ಕೊಂಡುಕೊಂಡರೂ ನಾನವನಿಗೆ ನಿನ್ನನ್ನು ಮದುವೆ ಮಾಡಿ ಕೊಡಲೊಲ್ಲೆ. ನೀವಿಬ್ಬರು ಸುಖವಾಗಿರಲಾರಿರಿ ಎಂದೇ ನನಗೆ ಅದು ಹೇಗೋ ತೋರುತ್ತದೆ' ಎಂದವನು ದುಃಖ ಮಿಶ್ರಿತವಾದ ನಗುವಿನಿಂದ ಹೇಳಿದ.

ಅವನು ಸರಕುಗಳನ್ನು ಪೆಟ್ಟಿಗೆಯೊಳಗಿಟ್ಟು ಅಲ್ಲಿಂದ ಹೊರಟು ಹೋದ. ಅವನು ಹೇಳಿದ ಮಾತುಗಳ ನೆನಪು ಯಾರಿಗೂ ಉಳಿಯಲಿಲ್ಲ. ಸುನೀತಿಯಂತೂ ಹೇಳಿದಾಕ್ಷಣವೇ ಮರೆತಿದ್ದಳು. ಕೆಲವು ದಿನಗಳಲ್ಲಿ ರಮೇಶನೊಡನೆ ಸುನೀತಿಯ ವಿವಾಹವಾಗಿ ಅವಳು ಕಲ್ಕತ್ತಕ್ಕೆ ಹೊರಟು ಹೋದಳು. ಅಲ್ಲಿ ರಮೇಶನಿಗೆ ಕೆಲಸವಾಗಿದ್ದಿತು.

ಇದಾದ ಕೆಲವು ಆದಿತ್ಯವಾರ ಎಂದಿನಂತೆ ಸಾಯಿಬನು ಆ ಬೀದಿಗೆ ಬಂದು ಹೋಗುತ್ತಿದ್ದನು. ಆದರೆ ಆಗ ಅವನ ಮುಖದ ಮೇಲೆ ಮೊದಲಿನ ಉತ್ಸಾಹ, ಸಂತೋಷಗಳು ಇದ್ದಿರಲಿಲ್ಲ. ಮತ್ತೆ ಅವನನ್ನು ಕಾಣಲಿಲ್ಲ. ಮಾರಿ ಒಂದು ರೋಗ ಬಂದಿತು ಎಂದು ಮಕ್ಕಳ ಹೆತ್ತವರು ಒಂದು ಊಹಿಸಿ ಬಿಟ್ಟರು. ಮಕ್ಕಳೂ ಮೆಲ್ಲ ಮೆಲ್ಲನೆ ಸರಕಿನ ಸಾಯಿಬನನ್ನು ಮರೆಯುತ್ತ ಬಂದರು. ಅವನು ಸತ್ತ ಅಥವಾ ಊರಿಗೆ ಹೋದನೆಂದೇ ಜನರು ಭಾವಿಸಿದರು.

ಕಲ್ಕತ್ತೆಗೆ ಹೋದಮೇಲೆಯೂ ಸುನೀತಿಗೆ ಮಾತ್ರ ಸಾಯಿಬನ ನೆನಪು ಆಗುತಿತ್ತು. ಅವನ ಮಾತು ಸತ್ಯವಾಗುತ್ತಿರುವುದನ್ನು ಅವಳು ಮೆಲ್ಲ ಮೆಲ್ಲಗೆ ಕಂಡುಕೊಳ್ಳಲಾರಂಭಿಸಿದಳು. ರಮೇಶನಿಗೆ ಸಿಕ್ಕಿದ್ದು ಸಾಕಾಗದೆ ಅವನು ಸಾಲಮಾಡಲಾರಂಭಿಸಿದನು. ಅವನು ದುರ್ಜನರ ಸಹವಾಸವನ್ನಾರಂಭಿಸಿದನು. ಒಂದು ದಿನ ಅವನು ಕುಡಿದು ಬಂದಿದ್ದನು. ಆ ರಾತ್ರಿ ಸುನೀತಿಗೆ ಸಾಕೋಸಾಕಾಯಿತು. ದಿನದಿನವೂ ಅವನ ಸ್ವಭಾವದಲ್ಲಿ ಪರಿವರ್ತನೆಯಾಗುತಿತ್ತು. ಒಂದು ದಿನ ಕುಡಿಯಲಿಕ್ಕೆ ಹಣ ಬೇಕೆಂದಾಗ, ಅವಳು ತನ್ನ ಆಭರಣ ಕೊಡಲೊಪ್ಪದುದರಿಂದ ರಮೇಶನು ಸಿಟ್ಟುಗೊಂಡು ಸುನೀತಿಯನ್ನು ಹೊಡೆದು ಹಾಕಲಿದ್ದ. ಇಷ್ಟರಲ್ಲೇ ಸುನೀತಿಯ ಕರುಣಕತೆ ಮುಗಿಯಲಿಲ್ಲ. ಒಂದು ದಿನ ಪೋಲೀಸರು ಬಂದು—'ಒಬ್ಬ ಸೂಳೆಯ ಮನೆಯಲ್ಲಿ ಕೆಲವು ಕುಡುಕರು ಅಮಲೇರಿ ರಮೇಶನನ್ನು ಕೊಂದು ಹಾಕಿದರೆಂ'ದೂ ಸುನೀತಿಗೆ ತಿಳಿಸಿದರು.

ಸುನೀತಿ ತನ್ನ ಜೀವನದಲ್ಲಿ ಎಂದೂ ಅತ್ತುದಿಲ್ಲ. ಈಗ ಅವಳ ಕಣ್ಣುಗಳಿಂದ ಧಾರಾಳವಾಗಿ ನೀರು ಹರಿಯಿತು. ಆಗ ಸರಕಿನ ಸಾಯಿಬನು ಹೇಳಿದ ಮಾತು ಸತ್ಯವೆಂದು ಮನಸ್ಸಿಗೆ ಹೊಳೆಯಿತು. ಅವಳು ಅದಾದ ಕೆಲವು ದಿನ ಕಲ್ಕತ್ತದಲ್ಲಿದ್ದು ಮತ್ತೆ ತಾಯಿತಂದೆಗಳ ಮನೆಗೆ ಬಂದಳು.

ಸಾಯಿಬನು ಸತ್ತಿರಲಿಲ್ಲ. ಆದರೆ ಅದಕ್ಕೆ ಕೆಲವೇ ದಿನಗಳು ಉಳಿದಿದ್ದುವು. ಅವನು ತನ್ನ ಗುಡಿಸಲಿನಲ್ಲಿ ಒಬ್ಬನೇ ರುಗ್ಣಶಯ್ಯೆಯ ಮೇಲೆ ಮಲಗಿದ್ದ. ಅವನ ಆರೈಕೆ ನೋಡುವವರು ಯಾರೂ ಇದ್ದಿರಲಿಲ್ಲ. ಮರಣೋನ್ಮುಖನಾಗಿದ್ದ ಅವನು ಒಂದು ಹರಕು ಹಾಸಿಗೆಯ ಮೇಲೆ ಮಲಗಿ ತನ್ನ ಕೊನೆಯ ದಿನಗಳನ್ನು ಲೆಕ್ಕ ಮಾಡುತಿದ್ದ.

ಒಂದು ದಿನ ಯಾರೋ ಒಬ್ಬಳು ಅವನ ಗುಡಿಸಲಿನ ಒಳಗೆ ಬಂದಳು. ಸಾಯಿಬನು ಹಾಯಿಲೆ ಬಿದ್ದಾಗಿನಿಂದ ಬಾಗಿಲು ತೆರೆದು ಒಳಗೆ ಬಂದವರಲ್ಲಿ ಅವಳೇ ಮೊದಲಿಗಳಾಗಿದ್ದಳು. 'ಹೇಗಿದ್ದೀಯಾ ಸಾಯಿಬಾ?' ಎಂದು ಅವಳು ಕೇಳಿದಳು. ಸ್ವರವು ಪರಿಚಯದ್ದಾಗಿತ್ತು. ಆದರೆ ಅದರಲ್ಲಿ ಮೊದಲಿನ ಸಂತೋಷವಿರಲಿಲ್ಲ. ಕರುಣೆಯೂ ದಯಾಭಾವವೂ ಅದರಲ್ಲಿ ಮಿಶ್ರಿತವಾಗಿದ್ದುವು.

ಸಾಯಿಬನು ಕಣ್ಣು ತೆರೆದು ಆಕೆಯನ್ನು ನೋಡಿದ. ಅವಳು ಸುನೀತಿ! ಅವನು ಮೆಲ್ಲನೆ ನಸುನಗುವ ಪ್ರಯತ್ನಮಾಡಿದ. 'ಅವ್ವಾ! ಕ್ಷೇಮವಾಗಿದ್ದೇನೆ. ನೀನು ಹೇಗಿದ್ದೀಯಾ?' ಎಂದು ಕೇಳಿ ಅವನು ಆಕೆಯನ್ನು ನೋಡಿದ. ಅವಳು ಬಿಳಿ ಸೀರೆಯನ್ನು ಉಟ್ಟುಕೊಂಡಿದ್ದಳು, ಮೈ ಮೇಲೆ ಚಿನ್ನಾಭರಣಗಳಿಲ್ಲ. ಹಣೆಯ ಮೇಲೆ ಕುಂಕುಮವೂ ಇದ್ದಿಲ್ಲ. ಅವಳು ಅಳುತಿದ್ದಳು.

ಅವನ ಹೃದಯವು ಒಡೆದು ಬಂದಿತು. 'ಅವ್ವಾ! ಇಲ್ಲಿ ಬಾ' ಎಂದವನು ಕರೆದ. ಸುನೀತಿ ಸಾಯಿಬನ ಬದಿಯಲ್ಲಿ ಹೋಗಿ ಕುಳಿತಳು. 'ಸಾಯಿಬಾ! ನೀನು ಹೇಳಿದ್ದು ನಿಜವಾಯಿತು' ಎಂದು ಅವಳು ತನ್ನ ಕತೆಯನ್ನೆಲ್ಲ ಅವನಿಗೆ ಹೇಳಿದಳು. 'ಹಾಂ' ಅವ್ವಾ' ಹಾಗಾಗುವುದೆಂದು ನನಗೆ ಅದು ಹೇಗೋ ಆಗಲೇ ಹೊಳೆಯುತಿತ್ತು. ಆದರೆ . ಮಾತು ಮುಗಿಸಬೇಕಾದರೆ ಸಾಯಿಬನು ಮೂರ್ಛೆ ಬಿದ್ದನು. ಸುನೀತಿಯ ದೈನ್ಯವನ್ನು ಅವನಿಂದ ನೋಡಲಾಗಲಿಲ್ಲ.

ಮರುದಿನ ಸರಕಿನ ಸಾಯಿಬನು ಸತ್ತನು. ಸುನೀತಿಯು ತನ್ನ ಜೀವಮಾನದಲ್ಲಿ ಎರಡನೆಯ ಬಾರಿಗೆ ಅತ್ತಳು. ಆದರೆ ಇಂದಿನ ಅವಳ ರೋದನವು ವಿಶೇಷ ತರದ್ದಾಗಿತ್ತು. ತಂದೆಯ ಪತ್ತರದೀ ಅವಳು ಸರಕಿನ ಸಾಯಿಬನಿಗೆ ಒಂದು ಒಳ್ಳೆಯ ಗೋರಿಯನ್ನು ಕಟ್ಟಿಸಿದಳು.

ಮೊದಲಿನಂತೆಯೇ ಆ ಬೀದಿ ಇದೆ. ಮೊದಲಿನಂತೆಯೇ ಮಕ್ಕಳಿಗೆ ತಾಯಂದಿರು ಕಾಸು ದುಗ್ಗಾಣಿ ಕೊಡುತ್ತಾರೆ. ಅವು ಹೋಗಿ ಮಣಿ ಸರಕು ಕೊಂಡುಕೊಳ್ಳುತ್ತವೆ. ಆದರೆ ಸರಕಿನ ಸಾಯಿಬನು ಮಾತ್ರ ಇಲ್ಲ. ಸುನೀತಿಗೆ ಬಿಟ್ಟು ಉಳಿದವರಿಗೆ ಅವನ ನೆನಪೂ ಇಲ್ಲ. ಪ್ರತಿ ದಿನ ಆದಿತ್ಯವಾರ ಸರಕಿನ ಸಾಯಿಬನು ಬರುತಿದ್ದ ಹೊತ್ತಿಗೆ ಸುನೀತಿ ಈಗಲೂ ಮನೆ ಕಿಟಕಿಯಿಂದ ಇಣಿಕಿ ನೋಡಿ ಸಾಯಿಬನು ಬರುತ್ತಿರುವನೇ, ಅವನು—'ಸರಕು ಬೇಕೇ ಸರಕು, ಸಾಯಿಬಾ ಬಂದಾ ಸಾಯಿಬಾ!' ಎಂದು ಕೂಗುವ ಕೂಗು ಕೇಳುತ್ತದೆಯೇ ಎಂದು ನೋಡುವಳು.

ಫ್ರೆಂಚ ಸರ್ವ ಸೇನಾಧಿಪತಿ ಜನರಲ್ ಗೆಮಲಿನ್

ಶಾಂತಿ-ಅಶಾಂತಿಯ ಕಾಲಗಳಲ್ಲಿ ಅವನು ಮಾಡಿದ ಮಹತ್ಕಾರ್ಯಗಳ ಪರಿಚಯ

[redacted] ದಿನಗಳಲ್ಲಿ ಫ್ರೆಂಚ ಮತ್ತು ಮಿತ್ರ ಮಂಡಲಿಯು ಫ್ರಾನ್ಸಿಗೆ ಕಳುಹಿಸಿದ ಸೇನೆಗಳ ಸರ್ವ ಸೇನಾಧಿಪತಿಯಾದ ಜನರಲ್ ಗೆಮಲಿನನ ಮೇಲಿರುವ ಹೊಣೆಗಾರಿಕೆಯು ಬೇರೆ ಯಾರ ಮೇಲೂ ಇರುತ್ತದಲ್ಲ. ಮಿತ್ರಮಂಡಲಿಯ ಸೇನೆಗಳ ಯೋಗಕ್ಷೇಮ ವಿಚಾರವು ಅವನ ಪಾಲಿಗೆ ಬಂದಿರುವುದು ಮಾತ್ರವಲ್ಲದೆ ಫ್ರಾನ್ಸಿನ ಲಕ್ಷಾಂತರ ಮಂದಿ ಸೈನಿಕರ ತಾಯಂದಿರ, ಹೆಂಡತಿ ಮಕ್ಕಳು, ಬಂಧು ಬಾಂಧವ ಮತ್ತು ಇಷ್ಟಮಿತ್ರರ ಯೋಗಕ್ಷೇಮ ವಿಚಾರವೂ ಅವನಿಗೆ ಇದೆ. ಈಗ ಯುರೋಪದಲ್ಲಿ ಪ್ರಾರಂಭವಾದ ಯುದ್ಧದ ಬೇರೆ ಬೇರೆ ಪ್ರಸಂಗ ಮತ್ತು ಅಗತ್ಯ ಅವಸರಗಳಲ್ಲಿ ಅವನೇನು ಮಾಡುವನೆಂದು ಯಾರೂ ಹೇಳಲಾರರಾದರೂ, ಅವನು ಅನ್ಯಾಯವಾಗಿ ಯುದ್ಧದ ಬಲಿವೇದಿಕೆಯ ಮೇಲೆ ತನ್ನ ಸೈನಿಕರನ್ನು ಬಲಿಕೊಡಲಾರನೆಂಬ ಭರವಸೆ ಎಲ್ಲರಿಗೂ ಇದೆ. ಅವಿಚಾರ ಅಥವಾ ದೂರದರ್ಶಿತ್ವವು ಇಲ್ಲದ್ದರಿಂದಲೂ, ಕೋಟೆ ಕೊತ್ತಳಗಳ ಅನುಕೂಲವಿಲ್ಲದ್ದರಿಂದಲೂ ಕಳೆದ ಬಾರಿಯ ಯುದ್ಧದಲ್ಲಿ ಅನೇಕ ಫ್ರೆಂಚ ಸೈನಿಕರು ಹೀಗೆಯೇ ಪ್ರಾಣ ಕೊಡಬೇಕಾಗಿ ಬಂದಿದ್ದಿತು. ಆ ಸಮಯದ ಅನೇಕ ದುರಂತಗಳ ಅನುಭವವಾಗಿರುವುದರಿಂದ, ಮತ್ತು ಫ್ರಾನ್ಸು ಅತ್ಯಾಧುನಿಕ ರೀತಿಗಳಲ್ಲಿ ಅಭೇದ್ಯವಾದ ಮೆಜಿನೋ ಕೋಟೆ ಸಾಲುಗಳನ್ನು ರಚಿಸಿರುವುದರಿಂದ, ಮಹಾ ಸಂಗ್ರಾಮವು ಹೂಡಲ್ಪಟ್ಟರೂ, ಫ್ರೆಂಚರ ಕಡೆಯಿಂದ ಅಕಾಲ ಮರಣಕ್ಕೆ ತುತ್ತಾಗುವ ಸೈನಿಕರ ಸಂಖ್ಯೆಯು ಕಳೆದ ಬಾರಿಯದಕ್ಕಿಂತಲೂ ಎಷ್ಟೋ ಪಾಲು ಕಡಿಮೆಯಾಗುವುದೆಂದು ಧಾರಾಳವಾಗಿ ನಂಬಬಹುದು. ಜನರಲ್ ಗೆಮಲಿನನು ಎಂದೂ ತನ್ನ ಸೈನಿಕರ ವ್ಯರ್ಥದ ಕೊಲೆಯಾಗಲಿಕ್ಕೆ ಬಿಡುವವನಲ್ಲ.

ಅಧಿಕಾರದಿಂದ ಮಾತನಾಡುವ ಸಾಮರ್ಥ್ಯ

ಮಿಲಿಟರಿ ವಿಚಾರಗಳಲ್ಲಿ ಇಂದು ಅಧಿಕಾರವಾಣಿಯಿಂದ ಮಾತನಾಡಬಲ್ಲವನು ಫ್ರಾನ್ಸಿನಲ್ಲಿ ಯಾರಾದರೂ ಇರುವನಾದರೆ ಅವನು ಗೆಮಲಿನನೊಬ್ಬನೇ. ಆ ವಿಚಾರಗಳಲ್ಲಿ ಅವನ ಮಾತಿಗೆ ತುಂಬಾ ಬೆಲೆ ಇರುವುದು; ಮಾನ್ಯತೆಯೂ ಇರುವುದು. ಅವನು ಮಾತನಾಡುವುದು ಕಡಿಮೆ, ಆದರೆ ಆಲೋಚಿಸುವುದೂ ಕೆಲಸಮಾಡುವುದೂ ಹೆಚ್ಚು. ಅದ್ದರಿಂದ ಅವನ ವಿಷಯವಾಗಿ ಓದಲಿಕ್ಕೆ ಸಿಗುವುದು ಅಪರೂಪವಾಗಿದೆ. ಆದರೆ ಅವನ ಪ್ರತಿಭೆ, ಕ್ರಿಯಾಶಕ್ತಿಗಳನ್ನು ಕಂಡು ತಲೆದೂಗದವರಿಲ್ಲ. ಫ್ರೆಂಚ ಸೇನೆಗಳ ಸುಧಾರಣೆಗೆ ಅವನೇ ಪ್ರಧಾನ ಕಾರಣ ಪುರುಷನಾಗಿದ್ದಾನೆ. ಫ್ರೆಂಚ ರಾಜಕಾರಣಪಟು ಮಿ. ದಲಾಡಿಯರ ಮತ್ತು ಸರ್ವ ಸೇನಾಧಿಪತಿ ಗೆಮಲಿನ—ಇವರಿಬ್ಬರು ಅಚ್ಚುಮೆಚ್ಚಿನವರಾಗಿರುವರಾದರೂ, ಗೆಮಲಿನನು ರಾಜಕೀಯದಲ್ಲಿ ತಲೆ ಹಾಕುವುದು ಕಡಿಮೆ. ಆದರೂ ಕೂಡ ರ್‍ಹೈನಲ್ಯಾಂಡನ್ನು ಜರ್ಮನಿಯ ಹಿಟ್ಲರ ಸರಕಾರವು ಆಕ್ರಮಿಸಿದಾಗ, ಅದು ಝೆಕೊಸ್ಲೊವೇಕಿಯವನ್ನು ಮುತ್ತಿದಾಗ ಫ್ರೆಂಚ ಸರಕಾರವು ಮೆತ್ತಗೆ ವರ್ತಿಸಿದ್ದು ಚೆನ್ನಾಗಲಿಲ್ಲ. ಆಗಾಗಲೇ ಹಿಟ್ಲರನ ಮುಷ್ಟಿಗೆ ಮುಷ್ಟಿ ತೋರಿಸಿ ಅವನ ಸೊಕ್ಕು ಮುರಿಯಬೇಕಾಗಿದ್ದಿತು. ಅದಕ್ಕೆ ಫ್ರೆಂಚ ಸೇನೆಯು ಯೋಗ್ಯತೆ ಮತ್ತು ಸಾಮರ್ಥ್ಯಗಳನ್ನು ಪಡೆದಿದ್ದಿತು ಎಂದು ಅವನು ಅಭಿಪ್ರಾಯಪಟ್ಟಿದ್ದನೆ. ಈಗ ಗೆಮಲಿನನು ೬೭ ವರ್ಷ ಪ್ರಾಯದ ಮುದುಕನಾಗಿರುವನಾದರೂ ಅವನ ನಸುನಗು ಮತ್ತು ಗುಣನಡತೆಗಳು ಮನಮೋಹಕವಾಗಿರುವವು. ದೇಹದಾರ್ಢ್ಯವಂತೂ ಯುವಕರನ್ನು ನಾಚಿಸುವಂತಿದೆ. ಹುಕುಮು ಕೊಟ್ಟು ಸೇನೆಯಿಂದ ಕೆಲಸ ತೆಗೆದುಕೊಳ್ಳುವುದಕ್ಕಿಂತ ಅವನ್ನು ಕೆಲಸಮಾಡಿಸಿಕೊಳ್ಳುವುದರ ಮರ್ಮ ಪ್ರಯೋಜನಗಳನ್ನು ಅವನು ಚೆನ್ನಾಗಿ ತಿಳಕೊಂಡಿದ್ದಾನೆ. ಆದ್ದರಿಂದ ಸೇನಾಧಿಪತಿಯ ಮೊದಲುಗೊಂಡು ಸಾಮಾನ್ಯ ಸೈನಿಕನ ವರೆಗೆ ಪ್ರತಿಯೊಬ್ಬನು ಗೆಮಲಿನನನ್ನು ಗೌರವಿಸುವನು; ಪ್ರೀತಿಯಿಂದ ಕಾಣುವನು.

ಗೆಮಲಿನನ ಮಹತ್ಕಾರ್ಯಗಳು

ಪೆಂಸ ನಗರದ ಯುದ್ಧ ಕಾರ್ಯಾಲಯದ ಎದುರಿಗಿದ್ದ ಒಂದು ಚಿಕ್ಕ ಮನೆಯಲ್ಲಿ ಗೆಮಲಿನನು ೧೮೭೨ರಲ್ಲಿ ಹುಟ್ಟಿದನು. ಅವನ ತಂದೆಯ ಕುಟುಂಬದವರೂ ತಾಯಿ ಕುಟುಂಬದವರೂ ಸೇನೆಗಳಲ್ಲಿ ಕೆಲಸಮಾಡಿ ಪ್ರಸಿದ್ಧರಾದವರು. ಇದು ಅವನ ಸೈನಿಕ ಶಿಕ್ಷಣಕ್ಕೆ ತುಂಬ ಅನುಕೂಲ ಮಾಡಿಕೊಟ್ಟಿತು. ಕಾಲೇಜಿನಲ್ಲಿ ಶಿಕ್ಷಣವನ್ನು ಮುಗಿಸಿದ ತರುವಾಯ ಅವನು ಕೆಲವು ವರ್ಷ ಆಫ್ರಿಕದಲ್ಲಿ ಒಂದು ಸೇನೆಯ ಲೆಫ್ಟನೆಂಟನಾಗಿ ಕೆಲಸ ಮಾಡಿದನು. ಅನಂತರ ಸೇನಾಧಿಪತಿ ಜನರಲ್ ಜೋಫ್ರೆಯ ಹಸ್ತಗತನಾದನು. ಜೋಫ್ರೆಯು ಅವನ ಪ್ರತಿಭಾಶಕ್ತಿಯನ್ನು ಮೊದಲೇ ಗುರುತಿಸಿದುದರಿಂದ ಅವನೊಡನೆ ಆಪ್ತಾಲೋಚನೆ ಮಾಡದೆ ಯಾವ ಕೆಲಸವನ್ನೂ ಮಾಡುತಿದ್ದಿಲ್ಲ. ಗಂಡಾಂತರಗಳಲ್ಲಿ ಸಿಕ್ಕಿಬಿದ್ದಾಗ ಅದರಿಂದ ಪಾರಾಗುವ ಉಪಾಯವು ಗೆಮಲಿನನಿಗೆ ತ್ವರ್ಯದಲ್ಲಿ ಹೊಳೆಯುವುದು. ಅದ್ದರಿಂದ ಕಳೆದ ಮಹಾಯುದ್ಧ ಕಾಲದಲ್ಲಿ ಗೆಮಲಿನನ ಈ ಶಕ್ತಿಯು ಫ್ರೆಂಚರನ್ನು ಅಪರಿಮಿತ ಹಾನಿಯಿಂದ ತಪ್ಪಿಸಿತು.

ಯುದ್ಧದ ಅನಂತರ

ಮಹಾಯುದ್ಧವು ಮುಗಿದ ಮೇಲೆ ಸಿರಿಯದ ಫ್ರೆಂಚ ವಸಾಹತಿನಲ್ಲಿ ದಂಗೆ ಉಂಟಾಗಿದ್ದಿತು. ಗೆಮಲಿನನು ಅಲ್ಲಿಗೆ ಹೋಗಿ ಬಹಳ ನಿಪುಣತೆಯಿಂದ ಆ ದಂಗೆಯನ್ನು ಅಡಗಿಸಿ ಅಲ್ಲಿ ಶಾಂತಿಯನ್ನು ಸ್ಥಾಪಿಸಿದನು. ಅಲ್ಲಿಯ ಜನರಿಗೂ ತೃಪ್ತಿಯನ್ನು ಕೊಟ್ಟನು. ಅದಕ್ಕಾಗಿ ಫ್ರೆಂಚ ಸರಕಾರವು ಅವನಿಗೆ ಅನೇಕ ಬಿರುದು ಪದವಿಗಳನ್ನು ಕೊಟ್ಟು ಬಹುಮಾನಿಸಿತು. ಆ ಮೇಲೆ ಅವನು ಒಂದೊಂದೇ ಪದವಿಗೆ ಏರುತ್ತ ಕ್ರೊನೆಗೆ ಫ್ರೆಂಚ ಸೇನೆಗಳ ಸರ್ವ ಸೇನಾಧಿಪತಿಯೂ ಆದನು. ಈಗ ಯೂರೋಪಿನ ಭವಿಷ್ಯವು ಅವನ ಕೈಯ್ಯಲ್ಲಿ ತೂಗುತ್ತಿದೆ ಎನ್ನಬಹುದು. ಅವನು ಹಿಡಿದ ಕಾರ್ಯವು ಜಯವಾದರೆ ಅವನ ಹೆಸರು ಯೂರೋಪಿನ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಲ್ಪಡುವುದು ಮತ್ತು ಅಲ್ಲಿ ಚಿರ ಶಾಂತಿಯು ಸ್ಥಾಪಿತವಾಗುವುದು. ಅಲ್ಲವಾದರೆ ಯೂರೋಪಿನ ಭವಣೆಯನ್ನು ವರ್ಣಿಸುವುದು ಯಾರಿಗೂ ಸಾಧ್ಯವಾಗಲಾರದು. ಆದರೆ ಗೆಮಲಿನನ ಶಕ್ತಿ ಸಾಮರ್ಥ್ಯಗಳ ಕುರಿತು ಎಲ್ಲರಿಗೂ ತುಂಬಾ ವಿಶ್ವಾಸವಿದೆ.

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು ಮನೆಗೆಲ್ಲಾ ಬೆಳಕು, ಬೆಳದಿಂಗಳು. ಆದ್ದರಿಂದಲೇ ಸ್ತ್ರೀಯರ ಆರೋಗ್ಯವು ಅಷ್ಟು ಮುಖ್ಯ.

ಸ್ತ್ರೀಯರಿಗೆ ಋತು ಸಂಬಂಧವಾದ ದೋಷಗಳಿಂದ ಶರೀರವು ಕೃಶಿಸಿ ಸಂತಾನ ವಾಂಛೆಯು ಸಫಲತೆ ಹೊಂದದು. ಆದರೆ ಲೋಧ್ರವನ್ನು ಸೇವಿಸಿದರೆ ಸ್ತ್ರೀಯರಿಗೆ ಸತ್ಸಂತಾನವೂ, ಸೌಖ್ಯ ಜೀವನವೂ ತಪ್ಪದು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಟಾಕಿಸ್ಟರು:—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 398/39

ವಾದಿ—ಪಿ. ಮಹಾಬಲರಾವ್ —ಶ್ರೀನಿವಾಸರಾಯರ ಮಗ, ವಕೀಲ್ ಕುಂದಾಪುರ ಕಸಬೆಯಲ್ಲಿರುವವ.

ಪ್ರತಿವಾದಿರು—1 ಸುಬ್ಬಕ್ಕ ಶೆಟ್ತಿ, 2 ಬಚ್ಚಿ ಯಾನೆ ಶಿವಮ್ಮ ಶೆಟ್ತಿ. ಹಂಡಿಕೆ[illegible] ಮನೆ ಅಂತಮ್ಮ ಶೆಟ್ತಿ ಮಕ್ಕಳು, ಉಡ್ಪಿ ತಾಲೂಕು ಗಿಳಿಯಾರ ಗ್ರಾಮದಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಸುವದೇನಂದರೆ—

ನೀವು ತಲೂರ ನಂಧ್ಯಪ್ಪ ಶೆಟ್ಟಿಗೆರೂ. 330ಕ್ಕೆ ತಾ. 21-12-1926ರಲ್ಲು ಬರಕೊಟ್ಟ ಈಡು ದಸ್ತೈವಜಿನ ಪ್ರಕಾರ ನಿಮ್ಮಿಂದ ಸಲ್ಲತಕ್ಕ ಹಣ[illegible] ವಸೂಲು ಹಕ್ಕನ್ನು ನಾನು ಸದ್ರಿ ನಂಧ್ಯಪ್ಪ ಶೆಟ್ರ[illegible] ಮೇಲೆ, ಮೇಲೆ ಕಾಣಿಸಿದ ಕೋರ್ಟಿನಲ್ಲಿ ಸ್ಮಾಲ್[illegible] ನಂಬ್ರ629/34ಕ್ಕೆ ಪಡೆದ ಡಿಕ್ರಿಮೇಲೆ ನಡಿಸಿ[illegible] S. E. P. No. 1519/37ನೇ ಅಮ್ಲುಜಾ[illegible] ಯಲ್ಲಿ ಜಪ್ತುಮಾಡಿಸಿ ಏಲಂಗೆ ಇಡಿಸಿದಾಗ[illegible] ಸದ್ರಿ ಈಡಿನ ಹಕ್ಕನ್ನು ನಾನೇ ತಾ. 12-2-'3[illegible] ರಲ್ಲಿ ದರ್ಕಾಸ್ತಿಗೆ ನಿತ್ತ ಪ್ರಕಾರ ಸದ್ರಿ ಏಲಮು[illegible] ನನ್ನಹೆಸರಲ್ಲಿ ಕಾಯಂಆಗಿದೆ. ನಂತರ ನಿಮ್ಮಿಂ[illegible] ನನಗೆ ಬರತಕ್ಕ ಈಡಿನ ಹಣಕ್ಕೆ ನಾನು ವಾ[illegible] ಯಾಗಿ ನಿಮ್ಮ ಮೇಲೆ ಮಾಡಿದ ಕ್ರಮ ನಂ[illegible] 398/39ನೇ ವ್ಯಾಜ್ಯವು ತಾ. 27-11-39[illegible] ಮೇಲೆ ಕಾಣಿಸಿದ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿರ[illegible] ವುದರಿಂದ ಆ ದಿವಸ ನೀವು ಬೆಳಿಗ್ಗೆ ಗಂಟೆ 10[illegible] ಸದ್ರಿ ಕೋರ್ಟು ಮುಂದೆ ಹಾಜರಾಗಿ ಸದ್ರಿ ದ[illegible] ವೆಯ ಕುರಿತು ನಿಮ್ಮ ಉದಾಹರಣೆ ಇದ್ದರೆ ಜಾ[illegible] ಹೀರ ಮಾಡಿಕೊಳ್ಳಬಹುದು. ಆ ರೀತಿ ನೀ[illegible] ವರ್ತಿಸುವದೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯ[illegible] ದ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿ[illegible] ಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿ[illegible] ಯುದೆ.

ಕುಂದಾಪುರ 9-11-39. | P. Mahabala Rao, Vakil for Plaintiff



ಜಿಲ್ಲಾ ಸಮಾಚಾರ

ಮಂಗಳೂರು

ಎಸ್. ಆರ್. ಎಸ್. ಹೋಮ್:— ಸ್ಥಳೀಯ ಎಸ್ ಆರ್. ಎಸ್. ಹೋಮ್ ಯೂನಿಯನಿನ ದಿನಾಚರಣೆಯು ತಾ. ೧೨ನೇ ಆದಿತ್ಯವಾರ, ನಮ್ಮ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರಾದ ಜನಾಬ್ ಎಮ್. ಜಿಯಾದ್ದೀನ್ ಸಾಹೇಬ್ ಬಹದ್ದೂರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಉಪಹಾರ ಪ್ರಾರ್ಥನೆ ಅಧ್ಯಕ್ಷರ ಚುನಾವಣೆ, ಅಧ್ಯಕ್ಷರ ಆರಂಭ ಭಾಷಣಗಳಾದ ನಂತರ, ಶ್ರೀ. ಬಿ. ಬಾಲಕೃಷ್ಣ ಶೆಟ್ಟರು 'ಟೋಸ್ಟ್' ಭಾಷಣವನ್ನು ಮಾಡಿದರು. ಕಾರ್ಯದರ್ಶಿಗಳ ವರದಿವಾಚನ, ಅಧ್ಯಕ್ಷರ ಭಾಷಣಗಳಾದ ನಂತರ ವಿವಿಧ ವಿನೋದಾವಳಿಗಳೊಡನೆ ಸಭಾಂತ್ಯವಾಯಿತು.

ದ. ಕನ್ನಡ ಜಿಲ್ಲಾ ಕನ್ನಡ ವ್ಯೋಲಿಯವರ ಸಮಾಜ ಸುಧಾರಕ ಸಂಘದ ವಾರ್ಷಿಕೋತ್ಸವ:— ಉತ್ಸಾಹೀ ತರುಣರಿಂದ ಸ್ಥಾಪಿಸಲ್ಪಟ್ಟು ಸಮಾಜದ ಸೇವೆಯನ್ನು ಯಥಾಶಕ್ತಿ ನಡೆಸಿಕೊಂಡು ಬರುವ ಮೇಲಿನ ಸಂಘದ ವಾರ್ಷಿಕೋತ್ಸವವು 'ರಾಷ್ಟ್ರಬಂಧು' ಪತ್ರಿಕೆಯ ಉಪಸಂಪಾದಕರಾದ ಶ್ರೀ ಕೆ ಕೃಷ್ಣರಾವ್ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಕಳೆದವಾರ ಯಶಸ್ವಿಯಾಗಿ ನೆರವೇರಿತು. ಸಂಘದ ಕಾರ್ಯದರ್ಶಿಗಳಾದ ಶ್ರೀ. ಎಂ ಗುರುವಪ್ಪನವರು ಸಂಘದ ವರದಿಯನ್ನೋದಿದರು.

ಜನ್ಮೋತ್ಸವ: — ದಯಾನಂದ ಸರಸ್ವತಿಯವರ ನಿರ್ವಾಣೋತ್ಸವವೂ, ಶ್ರೀ ಶ್ರದ್ಧಾನಂದ ಅನಾಥಾಶ್ರಮ ಸ್ಥಾಪನಾಕಾರ್ಯವೂ ಶುಕ್ರವಾರ ಸಂಜೆ ಸ್ಥಳೀಯ ಆರ್ಯಸಮಾಜ ಮಂದಿರದಲ್ಲಿ ನಮ್ಮ ಜಿಲ್ಲಾಜಡ್ಜರಾದ ಶ್ರೀ ಪಿ. ರಾಜಗೋಪಾಲಾಚಾರ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು. ಭಜನೆ, ಅಧ್ಯಕ್ಷರ ಚುನಾವಣೆ ಭಾಷಣಗಳು ನಡೆದ ಬಳಿಕ ಅಧ್ಯಕ್ಷರ ಭಾಷಣವೂ, ಅನಾಥಾಶ್ರಮ ಸ್ಥಾಪನಾ ಕಾರ್ಯವೂ, ನೆರವೇರಿದುವು. ವಂದನಾರ್ಪಣೆಯೊಡ ನಂತರ ಸಭಾಂತ್ಯವಾಯಿತು.

ಪಂಪೋತ್ಸವ:— ಇದೇ ಕಾರ್ತಿಕ ಶುದ್ಧ ಪಂಚಮಿ (ನವಂಬರ) ತಾ. ೧೬ ಗುರುವಾರ ಕನ್ನಡ ಕವಿಸಾರ್ವಭೌಮನಾದ ಪಂಪನ ಗ್ರಂಥ ಸಂಪೂರ್ತಿಯ ವಾರ್ಷಿಕ ದಿನವಾದುದರಿಂದ, ಆ ದಿನ ಸಾಯಂ. ಘಂಟೆ ೫॥ಗೆ ಜೇಡಿಗುಡ್ಡೆ ಥಿಯೊಸೋಫಿಕಲ್ ಲೋಜಿನಲ್ಲಿ ಕೇಂದ್ರ ಶಾಸನ ಮಂಡಲ ಸದಸ್ಯರಾದ ಶ್ರೀ. ಕೆ ಬಿ. ಜಿನರಾಜ ಹೆಗ್ಗಡೆ, ಎಂ. ಎಲ್. ಎ., ಇವರ ಅಧ್ಯಕ್ಷತೆಯಲ್ಲಿ 'ಪಂಪೋತ್ಸವವು' ಜರಗಿತು. ಈ ಸಂದರ್ಭದಲ್ಲಿ 'ನಾಡೋಜ ಪಂಪ' ಮಹಾ ಗ್ರಂಥದ ಕರ್ತೃಗಳಾದ ಶ್ರೀ. ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರಿಗೆ ಅವರ ಕನ್ನಡ ಸಾಹಿತ್ಯ ಸೇವೆಯ ಶ್ಲಾಘನೆಯಾಗಿ ಒಂದು ಮಾನಪತ್ರವು ಸಮರ್ಪಿತವಾಯಿತು. ಶ್ರೀ. ತಿಮ್ಮಪ್ಪಯ್ಯನವರ ಕಾವ್ಯವಾಚನವೂ ನಡೆಯಿತು.

ಬಿಡುಗಡೆ:— ಉಡುಪಿ ತಾಲೂಕಿನ ಹಿರಿಬೆಟ್ಟು ಎಂಬಲ್ಲಿನ ಮಂಜುನಾಥ ನಾಯ್ಕ ಎಂಬವನು ತಾ. ೪—೬—೩೯ರಲ್ಲು ಸುಮಾರು ಮಧ್ಯರಾತ್ರಿ ಸಮಯ ಈಗ ತಪ್ಪಿಸಿಕೊಂಡಿರುವ ಇನ್ನೊಬ್ಬನೊಡನೆ ಕೂಡಿಕೊಂಡು, ಕುಪ್ಪಪ್ಪ ನಾಯ್ಕನೆಂಬಾತನನ್ನು ಗುಂಡು ಹಾಕಿ ಹಾಗೂ ಚೂರಿಯಿಂದ ತಿವಿದು ಕೊಂದನೆಂಬ ಆರೋಪದ ಮೇಲೆ ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟಿದ್ದ. ಮೃತನು ಅಪಾದಿತನ ಅಂಗಡಿಯಲ್ಲಿ ಲೆಕ್ಕಪತ್ರಗಳನ್ನು ಬರೆಯುವ ಕೆಲಸ ಮಾಡುತ್ತಿದ್ದನಂತೆ. ಅಲ್ಲದೆ ಅಪಾದಿತನ ಎಳೆ ಪ್ರಾಯದ ಮಗಳೊಡನೆ, ಅಪಾದಿತನ ಗೈರುಹಾಜರಿಯಲ್ಲಿ ವಿನೋದವಾಡುತ್ತಿದ್ದನಂತೆ. ಇದರಿಂದ ಸಂಶಯಗೊಂಡ ಅಪಾದಿತನು ಕೊಲೆಗೆ ಮುಂದಾದನೆಂದು ಊಹೆ. ಅಪಾದಿತನು ತಾನು ನಿರಪರಾಧಿಯೆಂದು ವಾದಿಸಿದ. ಎಸೆಸರರು ಅಪಾದಿತನು ನಿರಪರಾಧಿ ಎಂದರು. ಜಡ್ಜರು ಎಸೆಸರರ ಅಭಿಪ್ರಾಯವನ್ನು ಒಪ್ಪಿ, ಅಪಾದಿತನನ್ನು ಬಿಡುಗಡೆ ಮಾಡಿದರು. ಅಪಾದಿತನ ಕಡೆಯಿಂದ ಶ್ರೀ ಜ. ಸೋಮಶೇಖರರಾಯರೂ ಸರಕಾರದ ಕಡೆಯಿಂದ ಪಬ್ಲಿಕ್ ಪ್ರೊಸೆಕ್ಯೂಟರರೂ ವಾದಿಸಿದರು.

ವಿವಿಧ ವಿನೋದಾವಳಿ:— ಇದೇ ತಾ. ೧೮ನೇ ಶನಿವಾರ ರಾತ್ರಿ ಘಂಟೆ ೯-೩೦ಕ್ಕೆ ಸರಿಯಾಗಿ ಬಿ. ಇ. ಯಂ ಹೈಸ್ಕೂಲಿನ 'ಸೆಂಟನೆರಿ' ಸದನದಲ್ಲಿ, ಹಳೇ ವಿದ್ಯಾರ್ಥಿಗಳ ಸಂಘದ ಸಹಾಯಾರ್ಥವಾಗಿ, ಹಳೇ ವಿದ್ಯಾರ್ಥಿಗಳಲ್ಲಿನ ನಟರಿಂದ ಶ್ರೀ. ಬಿ. ವೆಂಕಟ್ರಾವ್ ಬಾಳಿಗ, ಬಿ ಎ, ಬಿ ಎಲ್, ಎಮ್ ಎಲ್ ಎ ಚೆಯರ್‌ಮೇನ್ ಮುನ್ಸಿಪಲ್ ಕೌನ್ಸಿಲ್ ಇವರ ನೇತೃತ್ವದಲ್ಲಿ ವಿವಿಧ ವಿನೋದಾವಳಿಯ ಪ್ರದರ್ಶನವು ನಡೆಯುವುದು 'ನೃತ್ಯ—ಗೀತ' 'ಪ್ರಹಸನಗಳು' 'ಶಕ್ತಿಪ್ರದರ್ಶನ' 'ಮೂಕದೃಶ್ಯ' 'ಹಳ್ಳಿಯ ಹಾಡು' 'ಸೂತ್ರದಾರ' 'ವೃಂದ ಸಂಗೀತ' ಮತ್ತು ಇನ್ನಿತರ ವಿನೋದಗಳು ಇವುಗಳಲ್ಲದೆ 'ವಿಧಿವಿಲಾಸ'ವೆಂಬ ಐತಿಹಾಸಿಕ ನಾಟಕವೂ ಅಭಿನಯಿಸಲ್ಪಡುವುದು

ಲೇಡೀಸ್ ಕ್ಲಬ್

ವಿವಿಧ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚುವ ಕಾರ್ಯವು ತಾ. ೯ರಂದು ಶ್ರೀಮತಿ ಎಮ್. ಕೆ ನಾಯರ್‌ರಿಂದ ಜರುಗಿತು. ಮಿಸೆಸ್ ಸವ್ರೋತ್ತಮ್‌ರಾಯರ ಟೆನ್ನಿಸ್ ಕಪ್ ಮಿಸ್ ಫ್ಲೋರಿ ಪಾಯ್ಸ್‌ರಿಗೂ, ಮಿಸೆಸ್ ವೆಂಕಟೇಶ ಪೈಗಳ ಪಿಂಗ್‌ಪಾಂಗ್ ಕಪ್, ಮಿಸೆಸ್ ಯು ಪಿ ಎಸ್. ಭಟ್ಟರ ಕೇರಂ ಕಪ್ ಮತ್ತು ಮಿಸೆಸ್ ಲಲಿತಾ ಪಡುಬಿದ್ರಿಯವರ ಜೊತೆಗೆ ಶ್ರೀಮತಿ ಬಿ. ನಾಗೇಂದ್ರರಾವ್ ಬೆಡ್‌ಮಿಂಟನ್ ಕಪ್ ಹಾಗೂ ೩ ಮೂರು ಕಪ್ಪುಗಳನ್ನು ಮಿಸ್ ಐರೀನ್ ಮಸ್ಕರೇನ್ಹಾಸ್‌ರೂ ಪಡೆದರು. ಲಘು ಉಪಹಾರಾನಂತರ, ಶ್ರೀಮತಿ ಡಿ. ಟಿಸ್ರೂರ್‌ರವರ ನೃತ್ಯದೊಡನೆ ಸಭೆಯು ಅಂತ್ಯವಾಯಿತು.

ಸೌ॥ ಶ್ಯಾಮಲಾದೇವಿಯವರು:— ಕರ್ನಾಟಕದ ಪ್ರಸಿದ್ಧ ಬರಹಗಾರ್ತಿಯರೂ, 'ಜಯಕರ್ನಾಟಕ' ಪತ್ರಿಕೆಯ ಸಹಸಂಪಾದಕೀಯರೂ ಆದ ಸೌ॥ ಶ್ಯಾಮಲಾದೇವಿಯವರು ಕರ್ನಾಟಕ ಮಹಿಳಾ ಪರಿಷತ್ತನ್ನು ಭಾಗವಹಿಸುವುದಕ್ಕಾಗಿ ಮಂಗಳೂರಿಗೆ ಬಂದಿದ್ದು ಪರಿಷತ್ತಿನ ಕಾರ್ಯಗಳನ್ನು ತೀರಿಸಿ ತಿರಿಗಿ ಧಾರವಾಡಕ್ಕೆ ತೆರಳಲಿರುವರು.

ಪ್ರಗತಿ ನಾಟ್ಯಕಲಾ ನಾಟ್ಯವಿಲಾಸಿ ಸಂಘ, ಪದವು, ಇವರು "ಸಂಸಾರಿ ಸನ್ಯಾಸಿ ಅಥವಾ ಗೋಮುಖ ವ್ಯಾಘ್ರ" ಎಂಬ ಸಾಮಾಜಿಕ ನಾಟಕವನ್ನೂ, "ದಹನ ಚಿತ್ರ" ಎಂಬ ರುದ್ರ ರೂಪಕವನ್ನೂ ಸಧ್ಯದಲ್ಲೇ ಅಭಿನಯಿಸಲಿರುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಬೀಳ್ಕೊಳ್ಳುವ ಸಮಾರಂಭ:— ಗ. ಟ್ರೈ. ಸ್ಕೂಲಿನ ಅಧ್ಯಾಪಕತ್ರಯರಾದ ಶ್ರೀಗಳಾದ ಕೆ. ಗೋಪಾಲರಾಯರು, ಶಂಕರನಾರಾಯಣರಾವ್, ಮಾಧವಭಟ್ಟರನ್ನು ನಿವೃತ್ತಿ ಹೊಂದುವಾಗ ಬೀಳ್ಕೊಳ್ಳುವ ಸಮಾರಂಭವು ಕಳೆದವಾರ ಜರಗಿತು.

ಉಡುಪಿ

ಸಹಕಾರ ತತ್ವಗಳ ಪುನರಾವರ್ತನೆ:— ಸಹಕಾರ ಸಂಘಗಳ ಪಂಚಾಯಿತರ ಹಾಗೂ ಸದಸ್ಯರಿಗೆ ಸಹಕಾರ ತತ್ವಗಳ ಕುರಿತು ಬೋಧಪ್ರದ ಭಾಷಣವನ್ನೀಯುವ ಪುನರಾವರ್ತನೆ ತರಗತಿಗಳು ಹೆರ್ಗ, ಪಡುತೋನ್ಸೆ, ಕೆಮ್ಮಣ್ಣು, ಬೈರಂಪಳ್ಳಿ ಕೇಂದ್ರಗಳಲ್ಲಿ ಜರಗಿದುವು.

ಕಾರ್ಕಳ

ಮದ್ರಾಸು ರಿಲೀಜಿಯಸ್ ಎಂಡೋಮೆಂಟ್ಸ್ ಬೋರ್ಡಿನ ಕಮಿಶನರರಾದ ಶ್ರೀ ಪಿ. ಕಾಮೇಶ್ವರರಾಯರು, ಡಾ ಯಂ ಕೇಶವ ಪೈ, ಡಾ ಪಿ. ರಾಮ ಕಾಮತ್ ಮೊದಲಾದವರಿಂದೊಡಗೂಡಿ ತಾ. ೬—೧೧—೩೯ರದಿನ ಸ್ಥಳೀಯ ಶ್ರೀ ವೆಂಕಟ್ರಮಣ ದೇವಾಲಯ, ಶ್ರೀ ಶ್ರೀನಿವಾಸ ಆಶ್ರಮ ಮೊದಲಾದ ಸಂಸ್ಥೆಗಳನ್ನು ಸಂದರ್ಶಿಸಿ ಅವುಗಳ ಕಾರ್ಯಕಲಾಪಗಳ ಕುರಿತು ತಮ್ಮ ಸಂತೋಷವನ್ನು ವ್ಯಕ್ತಮಾಡಿದರು.

ವೈದಿಕವೃತ್ತಿ ಮತ್ತು ಪೌರೋಹಿತ್ಯವನ್ನು ಕಲಿಸುವುದಕ್ಕೋಸ್ಕರ ಕಾರ್ಕಳ ಶ್ರೀ ವೆಂಕಟ್ರಮಣ ದೇವಾಲಯದಲ್ಲಿ ಹೀಗೆ ಎರಡು ಮೂರು ತಿಂಗಳ ಹಿಂದೆ ಸ್ಥಾಪಿತವಾದ ಆಗಮ ಪಾಠಶಾಲೆಯನ್ನು ದೇವಾಲಯದ ಕಡೆಯಿಂದಲೇ ನಡೆಯಿಸಿಕೊಂಡು ಬರುವ ವಿಚಾರವು ನಡೆದಿದೆ. ಈ ಉದ್ದೇಶದಿಂದ ಒಬ್ಬ ಯೋಗ್ಯ ಅಧ್ಯಾಪಕರನ್ನು ನೇಮಿಸುವ ಆಲೋಚನೆಯಾಗಿ, ಅದಕ್ಕೆ ಅಂಥವರಿಂದ ಅರ್ಜಿಗಳೂ ಅಪೇಕ್ಷಿಸಲಾಗಿವೆಯೆಂದು ತಿಳಿದುಬರುತ್ತದೆ.

ಪುರಸ್ಕಾರ:— ಒಂದೆರಡು ತಿಂಗಳುಗಳಿಂದ ಬಿಡುವಿಲ್ಲದೆ ಒಂದೇ ಸಮನೆ ಹರಿಕೀರ್ತನೆಗಳನ್ನು ಮಾಡಿ ಜನಪ್ರೀತಿಯನ್ನು ಸಂಪಾದಿಸಿದ ಶ್ರೀ. ಕೆ ಸಂಜೀವರಾಯರಿಗೆ ಅವರ ಹಿತೈಷಿಗಳು ಒಂದು ಚಿನ್ನದ ಪದಕವನ್ನು ಕೊಟ್ಟು ಗೌರವಿಸಿರುತ್ತಾರೆ

ಕುಂದಾಪುರ

ಹರಿಜನ ಸೇವೆ:— ಕಳೆದ ವಾರ ಇಲ್ಲಿನ ಕಾಂಗ್ರೆಸು ಕಮಿಟಿಯವರು ಶ್ರೀಮತಿ ಸುಶೀಲಾಬಾಯಿ ಉಡುಪರ ಅಧ್ಯಕ್ಷತೆಯಲ್ಲಿ ೪೦ ಜನ ಹರಿಜನ ವಿದ್ಯಾರ್ಥಿಗಳಿಗೆ ಪೂರ್ಣ ಉಡಿಗೆ ದಾನವನ್ನೂ ಇಲ್ಲಿನ ಆಯುರ್ವೇದ ವೈದ್ಯರಾದ ಶ್ರೀ ಕಣ್ಣ ಪಂಡಿತರು ಊಟವನ್ನು ಕೊಟ್ಟದ್ದು ಸ್ತುತ್ಯವಾಗಿದೆ.

ಕರ್ನಾಟಕ ಸ್ಪೋರ್ಟಿನ ಶಾಖೆ:— ಉಡುಪಿ ಕರ್ನಾಟಕ ಸ್ಪೋರ್ಟಿನ ಶಾಖೆಯೊಂದನ್ನು ಶೀಘ್ರದಲ್ಲಿಯೇ ಕೋಟೇಶ್ವರದಲ್ಲಿ ಸ್ಥಾಪಿಸುವ ಯತ್ನ ನಡೆಯುತ್ತಿರುವುದಾಗಿ ತಿಳಿಯುತ್ತದೆ.

ಬಡವರೆಲ್ಲರಿಗೂ ಅಕ್ಕಿ ಧರ್ಮ:— ತಾ. ೩-೧೧-೩೯ನೇ ಶುಕ್ರವಾರ ಪೂ ಘಂಟೆ ೧೦ಕ್ಕೆ ದಿವಂಗತ ಹಲ್ಲನಾಡು ಮಾದಪ್ಪಯ್ಯನವರ ಸ್ಮಾರಕಕ್ಕಾಗಿ ಬಡವರಿಗೆಲ್ಲಾ (ದೊಡ್ಡವರಿಗೆ ಒಂದು ಸೇರು ಮತ್ತು ಮಕ್ಕಳಿಗೆ ಅರ್ಧ ಸೇರಿನಂತೆ) ಅಕ್ಕಿಯನ್ನೂ ತಲೆಗೆ ಎಣ್ಣೆಯನ್ನೂ ದಾನ ಮಾಡಿದರೆಂದು ತಿಳಿದು ಬರುತ್ತದೆ.

ಹಿಂದೀ ಪರೀಕ್ಷೆಯ ಫಲಿತಾಂಶ: ಕಳೆದ ಸಪ್ಟಂಬರದಲ್ಲಿ ಜರಗಿದ ಹಿಂದೀ ಪರೀಕ್ಷೆಯಲ್ಲಿ ರಾಷ್ಟ್ರಭಾಷೆಯಲ್ಲಿ ಒಂದರಲ್ಲಿ ಒಂದು; ಮಾಧ್ಯಮಿಕ ೩೪ರಲ್ಲಿ ೩೦ ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಈಗ, ಪ್ರಾಥಮಿಕದಿಂದ ರಾಷ್ಟ್ರಭಾಷೆಯ ವರೆಗೆ ಎಲ್ಲಾ ತರಗತಿಗಳಲ್ಲಿಯೂ ಸಂಕಿಂತ ಹೆಚ್ಚಿನ ವಿದ್ಯಾರ್ಥಿಗಳು ಹಿಂದಿಯನ್ನು ಕಲಿಯುತ್ತಿದ್ದಾರೆ.

ಕಾಸರಗೋಡು

ಯಕ್ಷಗಾನ ಪ್ರೇಮ:— ನೀಲೇಶ್ವರ ರಾಜಾಸ್ ಹೈಸ್ಕೂಲಿನ ಕನ್ನಡ ವಿದ್ಯಾರ್ಥಿಗಳು ಯಕ್ಷಗಾನಕ್ಕೆ ಪ್ರೋತ್ಸಾಹವೀಯುವುದು ಸ್ತುತ್ಯ. ಕಳೆದ ವಾರ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ರಾಮಕೃಷ್ಣರಾಯರ ಮನೆಯಲ್ಲಿ ಒಂದು ತಾಳಮದ್ದಳೆ ಕೂಟವು ಜರಗಿತು.

ಮೈಸೂರು

ಸತ್ಯಾಗ್ರಹ:— ನವಂಬರ ೬ರಿಂದ ಮೈಸೂರು ಸರಕಾರದ ಉಗ್ರಘೋಷಣೆಗೆ ೩೬೧ಕ್ಕೆ ಮಿಕ್ಕಿದ ವೀರ ಸತ್ಯಾಗ್ರಹಿಗಳು ಬಲಿಬಿದ್ದವರಾಗಿ ತಿಳಿಯುತ್ತದೆ. ಸತ್ಯಾಗ್ರಹವು ಭರದಿಂದ ಮುನ್ನಡೆಯುತ್ತಿದೆ ದಬ್ಬಾಳಿಕೆಯೂ ಅಪ್ರತಿಹತವಾಗಿ ಇದೆ

ರಾಜಕೀಯ ಸುಧಾರಣೆ:— ಮೈಸೂರಿಗೆ ರಾಜಕೀಯ ಸುಧಾರಣೆಯು ಪ್ರಕಟವಾಗಿದೆ ಸುಧಾರಣೆಯಲ್ಲಿ ಏನೇನೂ ತಿರುಳಿಲ್ಲವೆಂದು ಬಹುಮಂದಿ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರು

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು:— ೨೪ನೇ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಕನ್ನಡದ ಸುಪ್ರಸಿದ್ಧ ದೇಶಾಭಿಮಾನಿ ವಾಗ್ಮಿಗಳಾದ ಶ್ರೀ ಮುದವೀಡು ಕೃಷ್ಣರಾಯರು ವಹಿಸಲು ಒಪ್ಪಿರುವರಾಗಿ ತಿಳಿದುಬರುತ್ತದೆ.

ಧಾರವಾಡ

ವಿದ್ಯಾವರ್ಧಕ ಸಂಘ:— ಪ್ರತಿವರ್ಷದಂತೆ ಈ ಸಲವೂ ಕರ್ನಾಟಕ ವಿದ್ಯಾವರ್ಧಕ ಸಂಘದ ಪರವಾಗಿ ಕನ್ನಡದಲ್ಲಿ ಪ್ರಕಟವಾದ ಉತ್ತಮ ಗ್ರಂಥಗಳಿಗೆ ಈಗಿರುವ ನಿಯಮಗಳನುಸಾರವಾಗಿ ಧನಸಹಾಯ ಕೊಡುವರು. ಧನಸಹಾಯಪೇಕ್ಷಿಗಳಾದ ಗ್ರಂಥಕರ್ತರು ಗ್ರಂಥದ ೬ ಪ್ರತಿಗಳನ್ನು ಮುದ್ರಿಸಿ ನಮೂನೆಯ ಮೇಲೆ ಅರ್ಜಿ ಬರೆದು ಕಾರ್ಯದರ್ಶಿಗಳಿಗೆ ಡಿಶಂಬರ ೧೫ ತಾರೀಕಿಗೆ ಕಳುಹಿಸಬೇಕು. ನಮೂನೆಗಳು ಸಂಘದಲ್ಲಿ ೨ ಆಣೆಗಳಿಗೆ ಒಂದರಂತೆ ದೊರೆಯುವವು.

ಸಾದರ ಸ್ವೀಕಾರ

೧. ತುಟಿ ಮೀರಿದುದು:—ಲೇಖಕರು: ರಾ ಶಿ ಪ್ರಕಾಶಕರು, ಮನೋಹರ ಗ್ರಂಥ ಪ್ರಕಟನಾ ಸಮಿತಿ, ಧಾರವಾಡ.

೨. ಜಯಂತಿ:—ದೀಪಾವಳಿ ಸಂಚಿಕೆ.

೩. ಜಪಯೋಗಾಭ್ಯಾಸ ೪. ಗಾಯತ್ರೀಧ್ಯಾನ. ೫. Yoga of Right Conduct ೬. ಸಂಕೀರ್ತನ ಭಕ್ತಿಯೋಗ:— ಈ ಮೇಲಿನ ನಾಲ್ಕು ಪುಸ್ತಕಗಳು ಹಿಮಾಲಯ ದಿವ್ಯ ಜೀವನ ಸಂಘದ ಪ್ರಕಟಣೆಗಳು. ಇವುಗಳ ಮೂಲ ಲೇಖಕರು: ಶ್ರೀ ಸ್ವಾಮಿ ಶಿವಾನಂದರು. ಧಾರ್ಮಿಕ ತತ್ವಜ್ಞಾನಿಗಳಿಗೆ ಈ ಗ್ರಂಥಗಳು ಉಚಿತಾರ್ಥವಾಗಿ ಮೂರು ಬಿಲ್ಲೆ ದಿವ್ಯಜೀವನ ಸಂಘದ ಅಧ್ಯಕ್ಷರಿಗೆ ಬರೆದರೆ ಸಿಗುವುದು.

ಯುದ್ಧವಾರ್ತೆ!

ಸ್ಟಾಲೀನನ್ನು ಹೊರ ಹಾಕಲು ಹಿಟ್ಲರನು ಯತ್ನಿಸುತ್ತಿರುವನು

ರಶ್ಯದ ವಿಮಾನಗಳ ಮೇಲೆ ಪಿನ್ನರ ಗುಂಡು!

ಹತ್ತು ವಾರಗಳ ಯುದ್ಧ — ತಟಸ್ಥ ರಾಷ್ಟ್ರಗಳ ಸಂಧಿಪ್ರಯತ್ನ

ಹತ್ತು ವಾರಗಳ ಯುದ್ಧ!
ಚರ್ಚಿಲ್ಲರ ವಿವರಣೆ

ಚರ್ಚಿಲ್ಲರು ಒಂದು ಬ್ರಾಡ್‌ಕಾಸ್ಟ್ ಭಾಷಣವನಾಡುತ್ತಾ ಅದರಲ್ಲಿ ಹತ್ತು ವಾರಗಳ ಯುದ್ಧದ ವಿವರವನ್ನು ವಿವರಿಸಿ, ದಿನದಿಂದ ದಿನಕ್ಕೆ ಇಂಗ್ಲೆಂಡು ಫ್ರಾನ್ಸುಗಳು ಬಲಹೊಂದುತ್ತಿವೆಯೆಂದೂ ಜರ್ಮನಿಯು ತನ್ನ ಪ್ರಚಾರವಾಡುವುದರಿಂದಲೇ ಅದರ ನಿರ್ಬಲತೆಯು ಗೊತ್ತಾಗುವುದೆಂದೂ ಹೇಳಿದರು

ಫಿನ್‌ಲೆಂಡ್ ರಶ್ಯೆ ಸಮಸ್ಯೆ

ಫಿನ್‌ಲೇಂಡಿನ ಸೂಚನೆಗಳನ್ನು ಅಂಗೀಕರಿಸುವುದುಸಾಧ್ಯವಿಲ್ಲವೆಂದು ಸ್ಟಲೀನನು ಹೇಳಿರುತ್ತಾನೆ ಫಿನ್‌ಲೇಂಡಿನ ವರ್ತನೆಯು ಅಸಾಧ್ಯವಾದುದೆಂದು ಸ್ಟೈಲೀನನ ಮತ ಆದರೆ ಮಾತುಕತೆ ನಡೆಯುತ್ತಾ ಇದೆ

ಪಾರಿಸಿನಬಳಿ ಜರ್ಮನ್ ವಿಮಾನಗಳು

ಕೆಲವು ಜರ್ಮನ್ ವಿಮಾನಗಳು ಪಾರಿಸಿನ ಮೇಲೆ ಹಾರಾಡಿರುವವೆಂದು ತಿಳಿದುಬಂದಿದೆ ಅವುಗಳನ್ನು ಫ್ರಾನ್ಸಿನ ವಿಮಾನಗಳು ಹಿಂದಟ್ಟಿರುವವು ಅವುಗಳು ಬೆಲ್ಜಿಯಮಿನ ಸಹಾಯದಿಂದ ತಿರಿಗಿ ಜರ್ಮನಿಗೆ ಮರಳಿ ಬಂದಿವೆ

ಮಾಜಿ ಕೈಸರನ ಮಗನಿಗೆ ಬಂಧನ

ಮಾಜಿ ಕೈಸರನ ನಾಲ್ಕನೆಯ ಮಗನಾದ ಪ್ರಿನ್ಸ್ ಆಗಸ್ಟ್ ವಿಲ್ ಹೆಲ್ಮನನ್ನು ಗೆಸ್ಟೆಪೋ ದಳದವರು ಸೆರೆಹಿಡಿದಿರುವರಾಗಿ ತಿಳಿದಿದೆ ಅವನ ಮನೆಯ ಮುಂದುಗಡೆ ಅರಸನಸಂತತಿಯವರ ಪರವಾಗಿ ಆದ ಒಂದ ಮೆರವಣಿಗೆಯ ನಿಮಿತ್ತ ಈ ಬಂಧನವಾಗಿದೆಯಂತೆ ಹಿಂದೆ ಒಮ್ಮೆ ಆತನು ನಾಜೀಪಕ್ಷಕ್ಕೆ ಸೇರಿದ್ದನು

ಕರಾವಳಿಯ ಹಡಗವು ಮುಳುಗಿತು

೧೪ ಮಂದಿಗಳು ಬದುಕಿದರು

ಕಾವರ್ಡನ್ ಕರಾವಳಿಯ ಒಂದು ಹಡಗವು ಉತ್ತರ ಸಮುದ್ರದಲ್ಲಿ ಮುಳುಗಿಸಲ್ಪಟ್ಟಿದೆ

ಹೋಲೆಂಡಿಗೆ ಜರ್ಮನಿಯ ಹೆದರಿಕೆ

ಡಚ್ ಗಡಿಯಲ್ಲಿ ಜರ್ಮನರ ಸಿದ್ಧತೆಯು ಭರದಿಂದ ನಡೆಯುತ್ತಿದೆ ಜರ್ಮನ್ ವಿಮಾನಗಳು ಬೆಲ್ಜಿಯಮ್ ಮತ್ತು ಹೋಲೇಂಡುಗಳ ಮೇಲೆ ಹಾರಾಡುತ್ತಿವೆ

ಈ ವರ್ಷದಲ್ಲಿ 'ನೋಬೆಲ್' ಪಾರಿತೋಷಕಗಳು

ಈ ವರ್ಷದಲ್ಲಿ ಪದಾರ್ಥ ವಿಜ್ಞಾನದ ಸಲುವಾಗಿ ನೋಬೆಲ್ ಪಾರಿತೋಷಿಕವು (೮ ಲಕ್ಷ ಪವನು) ಕೆಲಿಫೋರ್ನಿಯೊದ ಪ್ರೊಫೆಸರರಾದ ಅರ್ನೆಸ್ಟ್ ಒರ್ಲಾಂಡೋ ಲಾರೆನ್ಸ ಇವರಿಗೆ ಅವರು ಸೈಕ್ಲೋಟ್ರೋನಿನ ವಿಷಯದಲ್ಲಿ ಮಾಡಿದ ಸಂಶೋಧನೆಯ ಸಲುವಾಗಿ ದೊರೆತಿದೆ

ರಸಾಯನ ಶಾಸ್ತ್ರದ ನೋಬೆಲ್ ಪಾರಿತೋಷಿಕವು ಬರ್ಲಿನ್ ವಿಶ್ವವಿದ್ಯಾಲಯದ ಪ್ರೊಫೆಸರ್ ಬುಟೆನಂಟ್ ಮತ್ತು ಹೈಡಲ್‌ಬರ್ಗ ವಿಶ್ವವಿದ್ಯಾಲಯದ ಪ್ರೊಫೆಸರ್ ರುಸರವರಿಗೂ ಸಿಕ್ಕಿದೆ

ಸಾಹಿತ್ಯದ ವಿಷಯದಲ್ಲಿ ಈ ವರ್ಷದ ನೋಬೆಲ್ ಬಹುಮಾನವು ಫಿನ್‌ಲೇಂಡಿನ ಫ್ರಾನ್ಸ ಸಿಲೆಂಪೀಸ ಎಂಬ ಪ್ರಸಿದ್ಧ ಕಾದಂಬರೀಕಾರರಿಗೆ ಕೊಡಲಾಗಿದೆ ಬೇಸಾಯಗಾರರ ಜೀವನಚಿತ್ರದ ಇವರ ಕಾದಂಬರಿಗಳು ಜಗತ್ ಪ್ರಸಿದ್ಧವಾಗಿವೆ

ಹಿಟ್ಲರನ ಮೌನ

ಶಾಂತಿಯ ಸೂಚನೆಯ ವಿಷಯದಲ್ಲಿ ಬೆಲ್ಜಿಯಂ ನೆದರ್ಲೆಂಡಿನ ಅರಸರು ಕಳುಹಿಸಿದ ಹೇಳಿಕೆಯ ಕುರಿತು ಹಿಟ್ಲರನು ಮೌನ ತಾಳಿರುವನು ಅವನು ಆ ಕುರಿತು ಯಾವ ಮಾತನ್ನೂ ಹೇಳದೆ ಪ್ರತಿಯೊಂದನ್ನೂ ಕುಶಲತೆಯಿಂದ ಕಾರ್ಯರೂಪದಲ್ಲಿಯೇ ಮಾಡಿತೋರಿಸಬಹುದಾಗಿ ತಿಳಿದುಬಂದಿದೆ

ಮುನಿಕಿನಲ್ಲಿ ಆಸ್ಫೋಟನ

ಹಿಟ್ಲರನು ತಪ್ಪಿಸಿಕೊಂಡ!

ಹಿಟ್ಲರನು ಭಾಷಣಕೊಡುವರೆ ಏರ್ಪಡಿಸಿದ ಜಾಗಕ್ಕೆ ಆತನು ಹತ್ತು ನಿಮಿಷಗಳ ಮೊದಲೇ ಬಂದಿದ್ದ ಆತನು ನಿಂತ ಜಾಗದಲ್ಲಿ ಬಾಂಬುಸ್ಫೋಟನವಾಯಿತು ಆದರೆ ಅದರಿಂದ ಹಿಟ್ಲರನಿಗೆ ಏನೂ ಪ್ರಾಣಾಪಾಯವಾಗಲಿಲ್ಲ ಅನೇಕ ಮಂದಿ ಇತರರಿಗೆ ಗಾಯವಾಗಿದೆ ಇದು ಜರ್ಮನ್ ವಿರುದ್ಧ ಕಾರ್ಯಮಾಡುವ ವಿದೇಶೀಯರ ಕೆಲಸವೆಂದು ಹಲವರನ್ನು ಗುಮಾನಿಯಿಂದ ಬಂಧನದಲ್ಲಿರಿಸಲಾಗಿದೆ ಯೆಹೂದ್ಯ, ಬ್ರಿಟಿಷ, ಮತ್ತು ನಾಜೀಪಕ್ಷಕ್ಕೆ ವಿರುದ್ಧವಾಗಿರುವ ರಾಜಕೀಯ ಪಕ್ಷ ಇವರ ಮೇಲೆ ಹಿಟ್ಲರನು ಮೊದಲಾಗಿ ಸೇಡುತೀರಿಸುವನು

ಹಿಟ್ಲರನು ಇದರಿಂದ ತಪ್ಪಿಸಿಕೊಂಡದ್ದು ಒಂದು ಅತ್ಯಾಶ್ಚರ್ಯದ ಘಟನೆಯೆಂದು ತಿಳಿಯುತ್ತದೆ

ಹಲವರು ಹೇಳುವಂತೆ ಇದು ಒಂದು ಪಾರ್ಸೆಂದೂ ತಿಳಿಯುತ್ತದೆ ಹಿಟ್ಲರನು ಮಹಾ ಪುರುಷನೆಂದೂ, ಆತನಿಗೆ ದೇವ ಸಹಾಯವುಂಟೆಂದೂ ಜನರನ್ನು ಮರುಳುಗೊಳಿಸುವ ಸಲುವಾಗಿ ಈ ಸ್ಫೋಟನವನ್ನು ಬೇಕೆಂತಲೇ ಮಾಡಿ ಹಿಟ್ಲರನಿಗೆ ಅಪಾಯವಾಗದಂತೆ ಮೊದಲೇ ಗೊತ್ತುಮಾಡಿರಬಹುದೇ ಎಂದೂ ಸಂದೇಹವಾಗುತ್ತದೆಯೆಂದು ಬ್ರಿಟಿಷ ಪತ್ರಿಕೆಗಳು ಹೇಳುತ್ತವೆ

ಸೋವಿಯಟ್–ಫಿನ್‌ಲೆಂಡ್

ಸೋವಿಯಟ್ ಮತ್ತು ಫಿನ್‌ಲೇಂಡಗಳೊಳಗೆ ಮಾತುಕತೆ ನಡೆಯುತ್ತಿದ್ದು ಬೇಗನೆ ಆ ಉಭಯ ರಾಷ್ಟ್ರಗಳೊಳಗೆ ಒಂದು ಇತ್ಯರ್ಥವಾಗುವುದೆಂದು ತಿಳಿದುಬಂದಿದೆ

ಜಪಾನು ನಿರ್ನಾಮಹೊಂದುವುದು

ಚೈನದಳಪತಿಗಳ ಚರವಸೆ

ಚಿಯಾಂಗ್ ಕೈಶೇಕರು ಮಾತನಾಡುತ್ತಾ ಕಳೆದ ಒಂಭತ್ತು ತಿಂಗಳ ಚೈನಾ ಜಪಾನು ಯುದ್ಧದ ವಿವರವನ್ನು ಹೇಳಿ ತನ್ನ ಪಕ್ಷದ ಮುಖಂಡರಿಗೆ ಜಪಾನ ಖಂಡಿತವಾಗಿಯೂ ಅಪಜಯ ಹೊಂದಿ ನಿರ್ನಾಮವಾಗುವುದೆಂದು ಸಾರಿದರು ಚೈನದ ಸೈನಿಕರ ಯುದ್ಧ ಉತ್ಸಾಹಗಳಿಂದ ತಾನು ಆ ವಿಷಯ ಧೈರ್ಯಗೊಂಡಿರುವೆನೆಂದರು

ಪಶ್ಚಿಮ ರಣರಂಗದಲ್ಲಿ

ಸೀಜ್ ಫ್ರೀಡ್ ಲೈನನ್ನು ಭದ್ರವಾಗಿ ಮಾಡುತ್ತಿರುವರೆಂದು ತಿಳಿದುಬಂದಿದೆ

ಜರ್ಮನ್ ಸೈನ್ಯಗಳು ದುರ್ಗದ ಹಿಂಬದಿಯಲ್ಲಿ ಯಾವಾಗಲೂ ಚಟುವಟಿಕೆಯಿಂದ ಯುದ್ಧ ತಯಾರಿಯಲ್ಲಿಯೇ ನಿರತವಾಗಿವೆ

ಮೊಲೆಟೋವರು ಮಾಡಿದ ಭಾಷಣದ ಪ್ರತಿಗಳ ಕರಪತ್ರವನ್ನು ಫ್ರಾನ್ಸಿನಲ್ಲಿ ಜರ್ಮನ್ ವಿಮಾನಗಳು ಬಿಕ್ಕಿವೆ

ಐದು ವರ್ಷಗಳ ತನಕ ಯುದ್ಧ

ಹಿಟ್ಲರನು ಮಾತನಾಡುತ್ತಾ ತಾನು ಐದು ವರ್ಷಗಳ ತನಕ ಯುದ್ಧಮಾಡಲು ಸಂಪೂರ್ಣ ಸಿದ್ಧತೆ ಮಾಡಬೇಕಾಗಿ ಗೋರಿಂಗನಿಗೆ ಅನುಜ್ಞೆಯಿತ್ತಿರುವೆನೆಂದು ಹೇಳಿದನು

ಮಹಾಸಮರವು

ಜರ್ಮನಿಯು ಮಹಾಸಮರವೊಂದನ್ನು ಆರಂಭಿಸಿ ಮಿತ್ರರಾಷ್ಟ್ರಗಳನ್ನು ಪ್ರಚಂಡವಾಗಿ ಎದರಿಸಲು ಸಿದ್ಧಯ ಮಾಡಿರುವುದೆಂದೂ, ಇನ್ನು ಕೆಲದಿನಗಳಲ್ಲಿ ಹಾಗೆ ಮಾಡುವುದೆಂದೂ ಈ ಕುರಿತು ರಶ್ಯ ಇಟಲಿಗಳಿಗೆ ತಿಳಿಸಿರುವುದೆಂದೂ ವದಂತಿ. ಆದರೆ ರಶ್ಯ ಇಟಲಿಗಳು ಜರ್ಮನಿಯ ಜಯದ ವಿಷಯದಲಿ ಏನೂ ಭರವಸೆಗೊಂಡಿಲ್ಲವೆಂದು ತಿಳಿದುಬರುತ್ತದೆ

ಜರ್ಮನ್ ವಿಮಾನವು ಉರುಳಿಸಲ್ಪಟ್ಟಿತು

ಪಶ್ಚಿಮ ರಣರಂಗಕ್ಕೆ ಕಳುಹಿಸಲಾದ ಬ್ರಿಟಿಷ್ ವೈಮಾನಿಕರು ಜರ್ಮನಿಯ ಒಂದು ಬಾಂಬಿನಸೆಯುವ ವಿಮಾನವನ್ನು ಕೆಳಗುರುಳಿಸಿದರು

ಸೀಜ್‌ಫ್ರೀಡ್ ಲೈನನ್ನು ಕಟ್ಟುತ್ತಿದ್ದಾರೆ

ಜರ್ಮನರು ತಮ್ಮ ದುರ್ಗವಾದ ಸೀಜ್‌ಫ್ರೀಡ್ ಲೈನನ್ನು ಬೆಲ್ಜಿಯನ್ ಮತ್ತು ಡಚ್ ಗಡಿಗಳಲ್ಲಿ [illegible] ಕಟ್ಟುತ್ತಿರುವರಾಗಿ ತಿಳಿದಿದೆ

ಚೈನಕ್ಕೆ ಗಾಂಧಿ ಠಾಗೋರರ ಸಂದೇಶ



ಚೈನದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚೈನೀಯರು ಸ್ವಾತಂತ್ರ್ಯವನ್ನು ಪಡೆಯುವಂತಾಗಲಿ ಎಂದು ಗಾಂಧಿಯವರೂ ಠಾಗೋರರೂ ಸಂದೇಶಗಳನ್ನು ಕಳುಹಿರುವರು

ಆಸ್ಟ್ರಿಯದಲ್ಲಿ ನಾಜಿವಿರುದ್ಧ ದಂಗೆ

ಜರ್ಮನಿಯ ಕೈಕೆಳಕ್ಕೆ ಸಿಕ್ಕಿ ಕಂಗಾಲಾಗುತ್ತಿರುವ [illegible]ಭಿಮಾನಿಗಳಿಂದ ಆಸ್ಟ್ರಿಯನರು ನಾಜೀ ಅಧಿಕಾರದ ವಿರುದ್ಧ ದಂಗೆಯೇಳಲು ಸರ್ವಸಿದ್ಧತೆಗಳನ್ನೂ ಮಾಡುತ್ತಿರುವರೆಂದು ತಿಳಿದಿದೆ

ಪೋಪ್ ಸಾಹೇಬರ ಹೇಳಿಕೆ

ದೇವರ [illegible] ಇಡದ ವಿನಹ, ಜಗತ್ತಿನಲ್ಲಿ ಶಾಂತಿಯಾಗುವುದು ಸಾಧ್ಯವಿಲ್ಲವೆಂದೂ ಇಂದಿನ ಪಶುಶಕ್ತಿಯ ದರ್ಪವು ಕಡಿಮೆಯಾಗದೆಂದೂ ಪೋಪ್ ಸಾಹೇಬರು ಹೇಳುತ್ತಾರೆ

ಹೊಲೆಂಡಿಗೆ ಜರ್ಮನ್ ಧಾಳಿಯು?

ಹೊಲೆಂಡು ಮತ್ತು ಬೆಲ್ಜಿಯಮ್‌ಗಳು ಇಂಗ್ಲೆಂಡ ಜರ್ಮನಿಗೆ ಮಾಡುತ್ತಿರುವ ತಡೆಯಲ್ಲಿ ನೆರವಾಗುವ ಕುರಿತು ಅವುಗಳನ್ನು ಅತ್ಯುಗ್ರ ಭಾಷೆಯಲ್ಲಿ ಜರ್ಮನ್ ಪತ್ರಿಕೆಗಳು ಟೀಕೆಮಾಡಿಕೊಂಡಿವೆ

ಜರ್ಮನ್ ಸೈನ್ಯವು ಹೋಲೆಂಡಿನ ಕಡೆಗಾಗಿ ಸಾಗಿ

ಜರ್ಮನರ ತೀವ್ರ ಹೋರಾಟ

ತಾ ೧೧ರಿಂದ ಜರ್ಮನರ ಸೈನ್ಯವು ರಣರಂಗದಲ್ಲಿ ಭಯಂಕರವಾಗಿ ಕಾದಾಡಿದರು ಜರ್ಮನ್ ಫಿರಂಗಿಗಳು ಎಲ್ಲ ಕಡೆಗೂ ಗುಂಡುಗಳನ್ನೆಸೆದವು ಫ್ರಾನ್ಸ ನಮೋಲ್ಲಜೆಯಲ್ಲಿಯೂ ಜರ್ಮನ್ ವಿಮಾನಗಳು ಬಂದಿವೆಯೆಂದು ತಿಳಿಯುತ್ತದೆ



ಕಲ್ಕತ್ತಾ ಗಿರಣಿಗಳ ಮುಷ್ಕರ

ಕಲ್ಕತ್ತದ ಬಾರಾ ನಗರದಲ್ಲಿರುವ ಗೋಣಿ ನಾರಿನ ಗಿರಣಿಯಲ್ಲಿ ೯,೦೦೦ ಕೆಲಸಗಾರರು ಮುಷ್ಕರಹಿಡಿದಿರುವರಾಗಿ ತಿಳಿದುಬಂದಿದೆ

ವರ್ಕಿಂಗ್‌ಕಮಿಟಿ

ವರ್ಕಿಂಗ್ ಕಮಿಟಿಯ ಸಭೆಯು ಅಲ್ಲಹಾಬಾದಿನಲ್ಲಿ ತಾ ೧೯ರಿಂದು ಸೇರುವುದಾಗಿ ತಿಳಿದಿದೆ ಮಹಾತ್ಮಾಜಿಯವರೂ ಸಭೆಗೆ ಹಾಜರಾಗುವರು ಆನಂದ ಭವನದಲ್ಲಿ ಅವರ ಉಳಕೊಳ್ಳುವರು

ಮುಸ್ಲಿಮರೂ ಮುಂದಿನ ಭಾರತವೂ

ಜಿನ್ನಾರ ಹೇಳಿಕೆ

ಇದ್ ದಿನದ ಭಾಷಣದಲ್ಲಿ ಮಿ। ಜಿನ್ನರು ಒಂದು ಬ್ರಾಡ್‌ಕಾಸ್ಟ್ ಭಾಷಣ ಮಾಡುತ್ತಾ, ಅದರಲ್ಲಿ ಶಿಸ್ತು, ಪ್ರೇಮ, ಸಹನೆಗಳು ಮುಖ್ಯವಾಗಿ ಜೀವನದಲಿ ಅಭ್ಯಾಸಿಸಬೇಕಾದ ಧರ್ಮವೆಂದು ಹೇಳಿದರು

ನಮ್ಮ ಮನೆಯೊಳಗೆ, ನಮ್ಮ ದೇಶದೊಳಗೆ, ಹೀಗೆ ವಿಶಾಲ ವಿಶ್ವದಲ್ಲಿ ಸಮಸ್ನೇಹವನ್ನು ಪಸರಿಸುವ ಕಾರ್ಯಕ್ಕಿಂತ ಉದಾತ್ತವಾದ ಕಾರ್ಯವು ಬೇರೊಂದಿಲ್ಲ ಮುಂದಿನ ಭಾರತದಲ್ಲಿ ಮುಸ್ಲಿಮರು ತಮ್ಮ ಹಕ್ಕು ಹೇಳಿಕೆಗಳಿಗೆಯಾದರೂ, ಅವರ ಆ ಕರಿತ ಘೋಷ್ಟೆ [illegible]

ಲಂಡನಿನಲ್ಲಿ

ಇಂಡಿಯನ್ ನೇಶನ್ ಕಮಿಟಿ

ಭಾರತದ [illegible] ಲಂಡನಿನಲ್ಲಿ ದ ಡಿಯ [illegible] ಇಂಡಿಯನ್ ನೇಶನಲ್ ಕಮಿಟಿಯ ಬ ಸಂಸ್ಥೆಯೊಂದು ಸ್ಥಾಪನೆಯಾಗಿರುವುದು ಅನೇಕ ಮಂದಿ ಪ್ರಮುಖ ಭಾರತೀಯರು ಅದರಲ್ಲಿ ಸೇರಿರುವರು

ಹಿಂದೀ ವಿರುದ್ಧ ಚಳವಳಗಾರರ ಬಿಡುಗಡೆ

ಕಾಂಗ್ರೆಸು ಸರಕಾರವು ಇರುವಾಗ ಹಿಂದೀ ವಿರುದ್ಧ ಚಳವಳ ಮಾಡಿ ಸೆರೆಮನೆಗ ಹೋದವರನ್ನು ಈಗಿನ ಗವರ್ನರರ ಆದಳಿತದಲ್ಲಿ ಬಿಡುಗಡೆ ಮಾಡುವರೆಂದು ತಿಳಿದುಬಂದಿದೆ.

ಡಾ। ಮೋಂಟೆಸೋರಿ

ಸುಪ್ರಸಿದ್ಧ ವಿದ್ಯಾಂಗ ವಿಚಕ್ಷಣರಾದ ಡಾ। ಮೋಂಟೆಸೋರಿಯವರು ಮದ್ರಾಸಿಗೆ ಆಗಮಿಸುವರು ಮದ್ರಾಸು ನಗರಸಭೆಯವರು ಅವರಿಗೆ ಒಂದು ಮಾನಪತ್ರವನ್ನು ಸಮರ್ಪಿಸುವರು

ದಸ್ತಗಿರಿಗಳು

ಹಿಂದೂದೇಶದ ಹಲವು ಕಡೆ, ಸೋಶಿಯಲಿಸ್ಟ ಮತ್ತು ಫಾರ್ವರ್ಡ್ ಬ್ಲಾಕ್ ಧುರೀಣರನ್ನು ಭಾಷಣಕೊಟ್ಟುದೇ ಮೊದಲಾದ ಅಪರಾಧನೆಗಳಿಗಾಗಿ ಬಂಧಿಸಲಾಗುತ್ತದೆ

ಗಾಂಧಿಜಿಯವರು ಧಿಲ್ಲಿಗೆ ಹೋಗಬಹುದು

ವರ್ಕಿಂಗ್ ಕಮಿಟಿಯ ಸಭೆಯು ಅಲ್ಲಾಹಾಬಾದಿನಲಿ ಜರಗಿದ ಮೇಲೆ ಗಾಂಧಿಜಿಯವರೂ ರಾಷ್ಟ್ರಪತಿಗಳೂ ಡಿಲ್ಲಿಗೆ ಹೋಗಬಹುದಾಗಿ ತಿಳಿದುಬರುತ್ತದೆ ವಾರ್ಧಾಕ್ಕೆ ತೆರಳಬೇಕೆಂದು ನಿಶ್ಚಯಿಸಿದ ರಾಷ್ಟ್ರಪತಿಗಳು ಅನಾರೋಗ್ಯದ ನಿಮಿತ್ತ ಅಲ್ಲಿಗೆ ಹೋಗದೆ ಸೀದಾ ಅಲ್ಲಾಹಾಬಾದಿಗೆ ತೆರಳಲಿರುವರು

ಅಖಿಲಭಾರತ ಖಾದಿ ಮತ್ತು ಸ್ವದೇಶಿ ಪ್ರದರ್ಶನ

ಮದ್ರಾಸಿನಲ್ಲಿ ಅಖಿಲಭಾರತ ಖಾದಿ ಮತ್ತು ಸ್ವದೇಶಿ ಪ್ರದರ್ಶನವು ದಶಂಬರ ೨೦ರಿಂದ ಜನವರಿ ೨೦ರ ವರೆಗೆ ನಡೆಯುವುದು ಅನೇಕ ಕಡೆಗಳಿಂದ ತಮ್ಮ ತಮ್ಮ ಸಾಮಗ್ರಿಗಳನ್ನು ಅಲ್ಲಿರಿಸಲು ಸ್ಥಳದ ಅವಕಾಶಕ್ಕೆ ಈಗಾಗಲೇ ಪತ್ರ ಬಂದಿರುವುದಾಗಿ ತಿಳಿಯುತ್ತದೆ

ಮಂತ್ರಿಗಳು ರಾಜಿಕೊಟ್ಟದ್ದು ಯೋಗ್ಯವಾಯಿತು

ಸೋಶಿಯಲಿಸ್ ಪಕ್ಷದ ಹೇಳಿಕೆ

ಲಕ್ನೋದಲ್ಲಿ ಸೇರಿದ ಕಾಂಗ್ರೆಸು ಸೋಶಿಯಲಿಸ್ಟ ಪಕ್ಷದ ಕಾರ್ಯಕಾರೀ ಮಂಡಳಿಯು ಒಂದು ದೀರ್ಘವಾದ ಪ್ರಕಟಣೆಯನ್ನು ಹೊರಡಿಸಿದೆ ಅದರಲ್ಲಿ ವರ್ಕಿಂಗ್ ಕಮಿಟಿಯ ನಿರ್ಣಯವ್ನೂ, ಅದಕ್ಕನುಸಾರವಾಗಿ ಕಾಂಗ್ರೆಸು ಮಂತ್ರಿಮಂಡಲಗಳ ರಾಜಿನಾಮೆಯು ಸಮಯೋಚಿತವಾದುದೆಂದೂ, ವೈಸರಾಯರ ಮತ್ತು ಪಾರ್ಲಿಮೆಂಟಿನ ಪ್ರಕಟಣೆಗಳು ಶೋಚನೀಯವೆಂದೂ ವಿವರಿಸಲಾಗಿದೆ

ಗಡಿನಾಡಿಗೆ ಸೋಶಿಯಲಿಸ್ಟರ ಪ್ರಯಾಣ

ಗಡಿನಾಡಿನಲ್ಲಿ ಸೋಶಿಯಲಿಸ್ಟ ಪಕ್ಷದ ಸ್ಥಾಪನೆಗಾಗಿ ಹೋಗಿದ್ದ ಶ್ರೀ ಯೂಸುಫ್ ಮೆಹರಾಲಿ ಮತ್ತು ಡಾ ರಾಮಮೋಹನಲೋಹಿಯೋ ಇವರು ಅಲ್ಲಿಂದ ಈಗ ಮರಳಿ ಬಂದರು

ಸಾಮ್ರಾಜ್ಯಶಾಹಿಗೆ ನಮ್ಮ ಬೆಂಬಲವಿಲ್ಲ!

ನೆಹರುಗಳ ಸ್ಪಷ್ಟವಾದ ಹೇಳಿಕೆ

ಕಲ್ಕತ್ತದಲ್ಲಿ ೨೬,೦೦೦ ಮಂದಿಯ ಮುಷ್ಕರ.

ಸಾಮ್ರಾಜ್ಯಶಾಹಿಯು ಅಳಿಯಬೇಕು

ಬ್ರಿಟಿಷ್ ಲೇಬರ್ ಪಕ್ಷದವರ ನಿರ್ಣಯ

ಬ್ರಿಟಿಷ ಲೇಬರ್ ಪಕ್ಷದ ಸಭೆಯೊಂದು ಸೇರಿ ಅದರಲ್ಲಿ, ಜಗತ್ತಿನಲ್ಲಿ ಹೊಸ ರೂಪವು ಬರಬೇಕೆಂದೂ, ಅಂತಹ ಹೊಸ ರೂಪದಲ್ಲಿ ಯಾವ ಬಲಾತ್ಕಾರವೆಂಬುದೇ ಇರಬಾರದೆಂದೂ, ಬ್ರಿಟಿಷರ ತಮ್ಮ ಸಾಮ್ರಾಜ್ಯಶಾಹೀ ಬುದ್ಧಿಯನ್ನ ಬಿಟ್ಟುಕೊಟ್ಟು ಆಫ್ರಿಕನರನ್ನು ಮತ್ತು ಭಾರತೀಯರನ್ನೂ ಸ್ವತಂತ್ರರಾಗಿ ನೋಡಬೇಕೆಂದೂ ಅಭಿಪ್ರಾಯವಿತ್ತರು

ಭಾರತೀಯ ನೌಕಾ ದಳದವರನ್ನು ಸೆರೆಯಿಟ್ಟರು

ಮುನ್ನೂರು ಮಂದಿಗೆ ಬಂಧನ

ಭಾರತೀಯ ನೌಕಾದಳದಲ್ಲಿ ಕೆಲಸ ಮಾಡುವವರಿಗೆ ಸಂಬಳ ಕೊಡುವಲ್ಲಿ ಬ್ರಿಟಿಷ್ ಸರಕಾರದವರ ಮಾಡಿದ ಅನ್ಯಾಯಕ್ಕಾಗಿ ಅವರು ತಾವು ಕೆಲಸ ಮಾಡ ವುದಿಲ್ಲವೆಂದ ಹೇಳಿದ್ದಕ್ಕೆ [illegible] ಬಂದರುಗಳಲ್ಲಿ ಮುನ್ನೂರ ಮಂದಿಯನ್ನು ಸರೆಯಲ್ಲಿ [illegible] [illegible] ಹೆಚ್ಚಿಸುತ್ತಿದೆಯೆಂದು ಭರವಸೆ [illegible] ಆ ಮೇಲೆ ಹಾಗೆ ಮಾಡದಿರುವುದಕ್ಕಾಗಿ ಅವರು ಸುಮ್ಮಗಿದ್ದರೆಂದ ತಿಳಿದುಬರುತ್ತದೆ ಆಲ್ ಇಂಡಿಯಾ ಸೀಮೆನ್ ಫೆಡರೇಶನಿನ ಕಾರ್ಯದರ್ಶಿಗಳಾದ ಆಲಿಯವರು, ನಮ್ಮ ಮಾಳಿಗೆಗಳಿಗಿಂತ ಬ್ರಿಟಿಷ್ ಸೆರೆಮನೆಗಳಲ್ಲಿ ಇರುವುದೇ ಒಳ್ಳೇಯದೆಂದೂ, ತಮ್ಮ ಕೇಳಿಕೆಗಳನ್ನು ಪಡೆಯುವ ಸಲುವಾಗಿ ಸೆರೆಮನೆಗೆ ಹೋಗಲು ನಾವೆಲ್ಲರು ನಿಶ್ಚಯಿಸಿರುವೆವೆಂದೂ ಹೇಳಿರುವರು

ಡಾ। ಖಾನ್‌ಸಾಹೇಬರು

ಗಡಿನಾಡಿನ ಪ್ರಧಾನಮಂತ್ರಿ ಪಟ್ಟಕ್ಕೆ ರಾಜಿಕೊಟ್ಟ ಡಾ ಖಾನ್‌ಸಾಹೇಬರು ಅಫ್ಘಾನಿಸ್ಥಾನದ ರಾಜನ ಆಮಂತ್ರಣದಂತೆ ಅಲ್ಲಿಗೆ ಹೋಗಲು ಆಲೋಚಿಸಿದ್ದು, ಕಡೆಗೆ ಇಂತಹ ಸಂದರ್ಭದಲ್ಲಿ ಸ್ವದೇಶದಲ್ಲಿಯೇ ಇರುವ ಅಗತ್ಯವುಂಟೆಂದು ತನ್ನ ಪ್ರಯಾಣವನ್ನು ಮುಂದವರಿಸಿರುವರಾಗಿ ತಿಳಿದಿದೆ.



ಹೊಸ ವಾರ್ತೆ

ಲಂಡನಿನ ಇಂಡಿಯನ್ ಲೀಗಿನಲ್ಲಿ ನಡೆಯುವ ಸಾರ್ವಜನಿಕ ಸಭೆಗೆ ಪಂಡಿತ ನೆಹರುಗಳು ಒಂದು ಪತ್ರ ಬರೆಯುತ್ತಾ ಬ್ರಿಟನು ಸ್ವಾತಂತ್ರ್ಯಕ್ಕಾಗಿ ಕಾದಾಡುವುದಿದ್ದರೆ ಕೂಡಲೆ ಭಾರತದ ಸ್ವತಂತ್ರದ ಪ್ರಕಟಣೆ ಮಾಡಬೇಕೆಂದೂ ಹಾಗಲ್ಲದಿದ್ದರೆ ಸಾಮ್ರಾಜ್ಯಶಾಹಿಯನ್ನು ಎಂದಿಗೂ ಭಾರತವು ಸಹಾಯ ಮಾಡಲಾರದೆಂದೂ ತಿಳಿಸಿದರು

ಪ್ರೊಫೆಸರ್ ಲಾಸಿಕಿ ಅವರು ಮಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಸರಕಾರವು ಒಂದು ನಿಶ್ಚಿತ ಸಮಯದಲ್ಲಿ ಸಾಮ್ರಾಜ್ಯತರ್ಗತ ಸ್ವಾತಂತ್ರ್ಯ ಕೊಡುವ ಪ್ರಕಟನೆ ಮಾಡಬೇಕೆಂದೂ [illegible] ರೀತಿಯಿಂದ ವೈಸರಾಯರ [illegible]ಗಳನ್ನು ನಡೆಸಬೇಕೆಂದು ಒಂದು ಹೇಳಿಕೆಯನ್ನು ಕೊಟ್ಟಿರುವರು

ಕಲ್ಕತ್ತದ ವಿಲ್ಲಿನ [illegible] ಚಳವಳವು ಉಗ್ರ ರೂಪ ತಾಳಿ ೨೬,೦೦೦ ಕೆಲಸಗಾರರು ಚಳವಳ ಮಾಡುತ್ತಿದ್ದಾರೆ

ಟೈಮ್ಸ್ ಪತ್ರಿಕೆಯು ಬರೆಯುತ್ತಾ ಹಿಟ್ಲರನ ಬೇಗನೇ ಸ್ಟಾಲಿನನ್ನು ಹೊರಹಾಕುವ ಯತ್ನವಾದ ತ್ತಿರುವುದು ಹೇಳುತ್ತದೆ

ಫಿನ್‌ಲೇಂಡಿನ ಪೋಲಿಸು ಹಾರಾಡುವ ರಶ್ಯದವಿಮಾನಗಳನ್ನು ಫಿನ್ನರು ಗುಂಡಿಕ್ಕಿ ಕೆಳಗುರುಳಿಸುವರು.

Kanarese No. 11

ಹಳೆಯ ಶೈಲಿಯಲ್ಲಿಯೇ ನುಡಿಯಬಾರದು

ಬ್ರಿಟನಿಗೆ ಗಾಂಧಿಜಿಯವರ ಸಲಹೆ

ಭಾರತದ ಮುಖಂಡರೊಡನೆ ವೈಸರಾಯರು ಮಾತನಾಡಿದ ಮೇಲೆ ಅವರು ಮಾಡಿದ ಬ್ರಾಡ್ ಕಾಸ್ಟಿನ ವಿಷಯವಾಗಿ ಗಾಂಧಿಜಿಯವರು ಹೀಗೆಂದು ಬರೆಯುತ್ತಾರೆ:—

"ಏನಾದರೂ ಒಂದು ಯೋಗ್ಯ ಇತ್ಯರ್ಥಕ್ಕೆ ಬರಬೇಕೆಂದು ವೈಸರಾಯರಿಗೆ ಅಪೇಕ್ಷೆಯಿರುವ ವಿಷಯದಲ್ಲಿ ನಾನು ತುಂಬಾ ಅಭಿಮಾನಗೊಂಡಿದ್ದೇನೆ. ಆದರೆ ಬ್ರಿಟನು ಯುದ್ಧದ ಉದ್ದೇಶವನ್ನು ಸ್ಪಷ್ಟಪಡಿಸದ ವಿನಹ ಯಾವುದೇ ಇತ್ಯರ್ಥವೂ ಆಗಲು ಸಾಧ್ಯವಿಲ್ಲ. ಇದುವರೆಗೆ ಸರಕಾರವು ಮಾಡಿದ ಪ್ರಕಟಣೆಯು ಹಳೆಯ ಶೈಲಿಯದೇ ಆಗಿದ್ದು, ಸ್ವಾತಂತ್ರ್ಯ ಅಭಿಲಾಷೆಯು ಭಾರತೀಯರನ್ನು ಅದು ಸಂತೃಪ್ತಿಗೊಳಿಸಲಾರದು.

ಸಾಮ್ರಾಜ್ಯ ಶಾಹಿಯು ನಾಶವಾಗಿದ್ದರೆ, ಹಿಂದಿನ ಪರಿಸ್ಥಿತಿಯಲ್ಲಿ ಸ್ಪಷ್ಟ ಮಾಪಾರ್ಟು ತೋರಬೇಕು. ಹೊಸ ಕಾಲಕ್ಕೆ ಯೋಗ್ಯವಾದ ಮಾತನ್ನು ಉಪಯೋಗಿಸಬೇಕು. ಒಬ್ಬ ಗುಲಾಮರನ್ನು ಇಟ್ಟುಕೊಂಡವನು ಗುಲಾಮಗಿರಿಯನ್ನು ತೆಗೆದು ಹಾಕಲು ಬಯಸುವುದಿದ್ದರೆ, ಆ ಕುರಿತು ತನ್ನ ಗುಲಾಮರೊಡನೆ ಅವರಿಗೆ ಸ್ವಾತಂತ್ರ್ಯವು ಬೇಕೋ ಎಂದು ಅಭಿಪ್ರಾಯವನ್ನು ಕೇಳುವುದಿಲ್ಲ.

"ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಪ್ರಕಟ ಮಾಡಿದ ಕೂಡಲೇ, ಭಾರತದ ಹಲವು ಸಮಸ್ಯೆಗಳು ಪರಿಹಾರವಾಗುವವು. ಅಲ್ಪ ಸಂಖ್ಯಾತರ ಸಮಸ್ಯೆಯು ಆಗ ತನ್ನಷ್ಟಕ್ಕೇ ನಿವೃತ್ತಿಯಾಗುವುದು. ಅಲ್ಪಸಂಖ್ಯಾತರಿಗೆ ಬಹುಸಂಖ್ಯಾತರಂತೆಯೇ ಹಕ್ಕು ರಕ್ಷಣೆಗಳ ಭರವಸೆಯಿಲ್ಲದ ಸ್ವಾತಂತ್ರ್ಯವು ಪ್ರಯೋಜನವಿಲ್ಲ. ರಾಷ್ಟ್ರದ ಘಟನೆಯನ್ನು ತಯಾರಿಸುವಾಗ ಅಲ್ಪಸಂಖ್ಯಾತರೂ ಸೇರಿ ಮಾಡಬೇಕು.

'ಬ್ರಿಟನು ಇದುವರೆಗೆ ಅಧಿಕಾರವನ್ನು ಇಟ್ಟುಕೊಂಡಿದೆ. ಬಹುಸಂಖ್ಯಾತರಿದುರು ಅಲ್ಪ ಸಂಖ್ಯಾತರ ದೂರನ್ನು ಎತ್ತಿ ಹೇಳುವುದು ಸಾಮ್ರಾಜ್ಯಶಾಹಿಗೆ ಅನುಕೂಲವಾಗಿದೆ. ಪ್ರತಿನಿಧಿಗಳ ಮೇಲೆಯೇ ಅವರ ಪಕ್ಷದ ಸಮಸ್ಯೆಯನ್ನು ಪರಿಹರಿಸುವ ಭಾರವನ್ನು ಬಿಡಬೇಕು. ಬ್ರಿಟನು ಆ ಭಾರವನ್ನು ವಹಿಸುತ್ತದೆಯೆಂದರೆ, ಭಾರತವನ್ನು ಇನ್ನೂ ಬಂಧನದಲ್ಲಿ ಇಟ್ಟುಕೊಳ್ಳಲು ಇಷ್ಟಪಡುತ್ತಿದೆಯೆಂದು ಅರ್ಥ. ಇಂತಹ ಸಂದರ್ಭದಲ್ಲಿ ನಾನು ಅವರನ್ನು ಮುನ್ನಡೆಸಿದರೆ, ದೇಶಾಭಿಮಾನಿಗಳು ಅಹಿಂಸೆಯಿಂದ ಕಾಳಗ ಹೂಡಬಹುದು, ನನಗೆ ಮುನ್ನಡೆಸಲು ಸಾಧ್ಯವಾಗದಿದ್ದರೆ ಅವರು ಹಿಂಸೆಯನ್ನೂ ಅವಲಂಬಿಸಬಹುದು. ನಿಜವಾಗಿ ಭೀಕರ ಶಾಪವಾದ ಯುದ್ಧವು ಬ್ರಿಟನಿಗೆ ಒಂದು ರೀತಿಯಿಂದ ಒಳ್ಳೆಯದೇ ಆಗಬೇಕಾದರೆ ಪ್ರಾಚೀನ ಮಹತ್ವದ ಹಿಂದೂದೇಶವನ್ನು ವಿಮೋಚನೆಮಾಡುವ ಕಾರ್ಯವು ಇದರಿಂದ ಸಾಧಿಸಲ್ಪಡಬೇಕು".

ನಾವೆಲ್ಲರೂ ಒಂದೇ ಜನಾಂಗ

—ಗಾಂಧಿಜಿಯವರ ಹೇಳಿಕೆ—

ಅಲಿಗರದಿಂದ ಒಬ್ಬ ಮುಸ್ಲಿಮರು ಗಾಂಧಿಜಿಯವರಿಗೆ ಒಂದು ಪತ್ರ ಬರೆಯುತ್ತಾರೆ. ಅದರಲ್ಲಿ ಮುಸ್ಲಿಮರು ಪ್ರತ್ಯೇಕ ಜನಾಂಗವೆಂದೂ, ಭಾರತವು ಬೇರೆ ಬೇರೆ ಜನಾಂಗಗಳ ರಾಷ್ಟ್ರವೆಂದೂ ಹೇಳಿದ್ದಕ್ಕೆ ಉತ್ತರವಾಗಿ ಗಾಂಧಿಜಿಯವರು ಈ ಸಾರಾಂಶದ ಪ್ರಕಟಣೆಯೊಂದನ್ನು ಕೊಡುತ್ತಾರೆ.

'ಮುಸ್ಲಿಮರು ಪ್ರತ್ಯೇಕ ಜನಾಂಗವೆಂದು ಹೇಳಿದ್ದು ನನಗೆ ಆಶ್ಚರ್ಯವನ್ನು ಉಂಟುಮಾಡಿದೆ. ಎಷ್ಟು ಧರ್ಮಗಳು ಲೋಕದಲ್ಲಿ ಇವೆಯೋ ಅಷ್ಟು ಜನಾಂಗಗಳಿವೆಯೆಂದು ನಾನು ಇದುವೊದಲಾಗಿ ಮಾತ್ರ ಕೇಳಿದ್ದು. ಅವರ ಅಭಿಪ್ರಾಯದಂತೆ ಜಪಾನೀಯರು, ಆಂಗ್ಲೇಯರು, ಅಮೇರಿಕನರು ಇವರೆಲ್ಲಾ ಜನಾಂಗಗಳಲ್ಲವೆಂದು ತೋರುತ್ತದೆ. ಮುಸ್ಲಿಮರು ಹಿಂದುಗಳು, ಪಾರ್ಸಿಗಳು, ಸಿಕ್ಕರು ಇವರು ಮಾತ್ರ ಜನಾಂಗಗಳೇ? ಧರ್ಮಕ್ಕನುಸರಿಸಿ ಜನಾಂಗಗಳನ್ನು ವಿಭಾಗಿಸಿದ ಕ್ರಮವನ್ನು ನೋಡಿ ನನಗೆ ಬೆರಗಾಗಿದೆ. ಅದು ಮಾತ್ರವಲ್ಲದೆ ಮುಸ್ಲಿಮರು ಹಿಂದೂದೇಶವನ್ನು ಹಿಂದುಗಳ ದೇಶ, ಮುಸ್ಲಿಮರ ದೇಶವೆಂದು ಎರಡು ವಿಭಾಗವಾಗಿ ಇಳಿದರೆಂದು ಹೇಳುವುದು ಸರಿಯಲ್ಲ. ಅಕ್ಬರನು ಇಡೀ ಸಾಮ್ರಾಜ್ಯವನ್ನು ವಿಶಾಲ ಹೃದಯದಿಂದ ಆಳಿದನು. ಮುಸ್ಲಿಂ ಸಾಮ್ರಾಜರೂ ಇಡೀ ಹಿಂದೂದೇಶವನ್ನು ಒಂದೇ ಜನಾಂಗದ ರಾಷ್ಟ್ರವಾಗಿ ತಿಳಿದಿದ್ದರು.

'ನಾವು ಹಿಂದು ಮುಸ್ಲಿಮರು ಮತ್ತು ಇತರರೂ ಕೇವಲ ಸ್ವಯಂ ಪ್ರಭುತ್ವ ಸರಕಾರವನ್ನು ನಡೆಸುವುದದರೆ ಹೆಚ್ಚಿನ ಜನರಿಗೆ ಮತಕೊಟ್ಟು ಅವರಿಂದ ಚುನಾಯಿತರಾದ ಸದಸ್ಯರು ರಚಿತವಾದ ಎಸೆಂಬ್ಲಿಯು ಮೂಲಕ ರಾಜ್ಯಸೂತ್ರವನ್ನು ರಚಿಸುವೆವು. ಆದರೆ ಇಂದಿನ ಬ್ರಿಟಿಷ ಸರಕಾರದ ಪ್ರಕಟಣೆಯಲ್ಲಿ ಯಾವ ತರದ ಶುದ್ಧ ಹೃದಯವೂ ತೋರುವುದಿಲ್ಲ. ಇಂಗ್ಲಿಷರ ಸಾಮ್ರಾಜ್ಯಶಾಹೀ ಧೋರಣೆಯು ತೀವ್ರವಾಗಿದೆ ತೋರಿದ. ತಾವು ಸಾಮ್ರಾಜ್ಯಶಾಹೀ ಬುದ್ಧಿಯನ್ನು ಬಿಟ್ಟುಕೊಟ್ಟಿರುವುದಾಗಿ ಹೇಳಿದರೂ ಇಂದೂ ಅದು ಇದ್ದೇ ಇದೆ. ಸಾಮ್ರಾಜ್ಯಶಾಹಿಯು ಬೆಳವಣಿಗಾಗಿ ಹಿಂದೂದೇಶದ ಬಲಿಕೊಡುವರು.

ಬ್ರಿಟಿಷರ ಯುದ್ಧದ ಉದ್ದೇಶವೇನೆಂದು ಹೇಳದಿರುವುದೂ ಸಂಶಯಕ್ಕೆ ಎಡೆಕೊಟ್ಟಿದೆ. ಎಂಟು ಪ್ರಾಂತಗಳಲ್ಲಿ ಕಾಂಗ್ರೆಸು ಮಂತ್ರಿಮಂಡಳವನ್ನು ವಹಿಸಿಮಾಡಿದ ಕಾರ್ಯದಿಂದ ಕಾಂಗ್ರೆಸು ಅಲ್ಪಸಂಖ್ಯಾತರ ಕುರಿತು ಹೇಗೆ ಗಮನಕೊಡುತ್ತಿತ್ತೆಂಬುದು ಗೊತ್ತಾಗಿದೆ. ಮುಸ್ಲಿಂಲೀಗು ಭಾರತವನ್ನು ಭಿನ್ನವಾಗಿ ವಿಭಜಿಸಲು ಬಗೆಯಲಾರದೆಂದು ಆಶಿಸುತ್ತೇನೆ. ಇಂದಿನ ಜಿನ್ನಾ ನೆಹರುಗಳ ಮಾತುಕತೆಯು ಜಯಪ್ರದವಾಗಲೆಂದು ಹಾರೈಸುತ್ತೇನೆ.

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ!

ಛಿದ್ರವಾದ ನನ್ನನ್ನು ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು ತೈಲ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈ ಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ.

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ. ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ. ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ. ಕುಟಿಕೂರಾ ಮುಲಾಮು (Cuticura Ointment) ನಿಂದ ಮುದ್ದಣ ಛಿದ್ರ, ಗಜ್ಜಿಗಳನ್ನು ನಾಶಮಾಡಿ ಇದರ ವಿಷಹಾರಕ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಶೈತ್ಯಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು.

ಕುಟಿಕೂರಾ ಸಾಬೂನು
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪ್ರವಾಸಕ್ಕೆ) ದೊರೆಯುತ್ತದೆ.

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಚಳಿಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½%per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction Chit Funds ranging from Rs 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

ಉಪನಿಷತ್ತಿನ ಒಂದು ಕತೆ:

ಮೈತ್ರೇಯಿ

[ಮೂಲ ಲೇಖಕರು: ಶ್ರೀ. ಸಿ. ರಾಜಗೋಪಾಲಾಚಾರ್ಯರು]

ಯಾಜ್ಞವಲ್ಕ್ಯರು ಇಹಲೋಕದ ಬಾಳನ್ನು ಮುಗಿಸಿ ಅರಣ್ಯಕ್ಕೆ ಹೋಗಲು ಏರ್ಪಾಡು ಮಾಡಿದ ಸಮಯ. ತಮ್ಮಿಬ್ಬರು ಹೆಂಡಂದಿರಲ್ಲಿ ಪರವಸ್ತುವಿನ ವಿಷಯದಲ್ಲಿ ಜ್ಞಾನವನ್ನು ಪಡೆದಿದ್ದ ಮೈತ್ರೇಯಿಯನ್ನು ಕರೆದರು. 'ಮೈತ್ರೇಯಿ, ನಾನು ಅರಣ್ಯಕ್ಕೆ ಹೋಗಲು ಬಯಸಿದುದು ನಿನಗೆ ಗೊತ್ತಿರುವ ಸಂಗತಿಯಲ್ಲವೆ? ನಿನಗೂ ಕಾತ್ಯಾಯನಿಗೂ ತಕ್ಕ ಏರ್ಪಾಡು ಮಾಡುವುದು ಯೋಗ್ಯವಲ್ಲವೇ?' ಎಂದರು. ಅದನ್ನು ಕೇಳಿ ಮೈತ್ರೇಯಿಯು 'ಭಗವನ್, ಸಂಪತ್ತುಗಳು ತುಂಬಿದ ಭೂಮಿಯೆಲ್ಲವನ್ನೂ ನೀವು ನನಗೆ ಕೊಟ್ಟರೂ, ಅದನ್ನು ತೆಗೆದುಕೊಂಡು ನಾನು ಮುಕ್ತಿಯನ್ನು ಹೊಂದಿಯೇನೆ?' ಎಂದಳು.

ಯಾಜ್ಞವಲ್ಕ್ಯರು 'ಅದು ಹೇಗೆ ಸಾಧ್ಯ? ಐಶ್ವರ್ಯದಿಂದ ಯಾವ ಸುಖವನ್ನು ಹೊಂದಬಹುದೋ, ಅವುಗಳೆಲ್ಲವನ್ನೂ ನೀನು ಹೊಂದಬಹುದು. ಅಮೃತತ್ವವನ್ನು ಆಶಿಸಲಾಗದು' ಎಂದರು. 'ಸ್ವಾಮಿ, ಮುಕ್ತಿ ಕೊಡದಂತಹ ಐಶ್ವರ್ಯವನ್ನು ಇಟ್ಟುಕೊಂಡು ನಾನೇನು ಮಾಡಲಿ? ತಾವು ಅರಣ್ಯಕ್ಕೆ ಹೋಗುವುದಕ್ಕಿಂತ ಮೊದಲು, ನನಗೆ ಜ್ಞಾನವನ್ನು ಉಪದೇಶಿಸಬೇಕು. ಅದನ್ನೇ ಬಯಸುವೆನು' ಎಂದಳು. ಯಾಜ್ಞವಲ್ಕ್ಯರು ಮನಸ್ಸಿನಲ್ಲಿ ಹಿಗ್ಗಿದವರಾಗಿ 'ಪ್ರಿಯೇ, ನನ್ನ ಪ್ರೀತಿಯನ್ನು ಹೆಚ್ಚಿಸಿರುವಿ. ಬಾ, ಕುಳಿತುಕೋ, ನಾನು ಹೇಳುವುದನ್ನು ಗಮನವಿಟ್ಟು ಕೇಳು, ಗಂಡನನ್ನು ಪ್ರೀತಿಸುವವಳು ಹೆಂಡತಿ; ಆ ಪ್ರೀತಿಯ ಪ್ರಯೋಜನವು ಏನೆಂದು ತಿಳಿದಿರುವೆ? ಗಂಡನನ್ನು ಆಶಿಸುವುದಲ್ಲ. ಅವನಲ್ಲಿರುವ ನಿಜವಾದ ಆತ್ಮವಸ್ತುವನ್ನು ಕೋರುವುದೇ ಅದು' ಎಂದು ಉಪದೇಶಿಸತೊಡಗಿದರು.

೨

'ಗಂಡನನ್ನು ಪ್ರೀತಿಸುವುದು ಗಂಡನ ಮೇಲಿರುವ ಪ್ರೀತಿಯಿಂದಲ್ಲ. ಪರಮಾತ್ಮನನ್ನು ಪ್ರೀತಿಸುವ ಒಂದು ಸಾಧನವೇ ಅದು. ಗಂಡನು ಹೆಂಡತಿಯನ್ನು ಪ್ರೀತಿಸುವುದೂ ಇದಕ್ಕಾಗಿಯೇ. ಇದೇ ಪ್ರೀತಿಯ ಪ್ರಯೋಜನವೂ, ಅದರ ಸ್ವರೂಪವೂ ಆಗಿದೆ. ಹೆತ್ತ ಮಕ್ಕಳ ವಿಷಯದಲ್ಲಿ ಮನಸ್ಸು ಕರಗುವುದೂ ಇದಕ್ಕಾಗಿಯೇ. ಐಶ್ವರ್ಯವನ್ನು ಆಶಿಸುವುದೂ ಇದಕ್ಕಾಗಿಯೇ. ಹೆಂಡತಿ, ಗಂಡ, ಮಕ್ಕಳು, ಐಶ್ವರ್ಯ, ಹಸುಗಳು ಇವುಗಳಲ್ಲಿರುವ ಪರವಸ್ತುವನ್ನು ಕಂಡು, ಅದರೊಂದಿಗೆ ಕಲೆತು ಒಂದಾಗಲು ಅಂತರಂಗವು ಉಕ್ಕಿಬರಬೇಕು. ಈ ಸಾಧನೆಗಳನ್ನು ಪಡೆಯುವುದೇ ಅವುಗಳನ್ನು ಪ್ರೀತಿಸಿ ಅನುಭವಿಸಿ ಬಾಳುವುದರ ನಿಜವಾದ ಪ್ರಯೋಜನ.

'ಒಬ್ಬನಿಗೆ ತನ್ನ ಕುಲದಮೇಲೆ ಪ್ರೀತಿ. ಕುಲವೂ ಜಾತಿಯೂ ಕೂಡ ಪಾರಮಾರ್ಥಿಕ ಭಕ್ತಿಗೆ ಸಾಧನೆಯೇ ಆಗುವುದು. ಎಲ್ಲರಲ್ಲಿಯೂ ವ್ಯಾಪಿಸಿ ನಿಲ್ಲುವ ಸತ್ಯವಾದ ವಸ್ತುವನ್ನು ಕಂಡು, ಪ್ರೀತಿಸಲೋಸುಗವೇ ವೇದವನ್ನು ಓದುವುದು, ಕಲೆಗಳನ್ನು ಕಲಿಯುವುದು, ಭೂತದಯೆ ಮೊದಲಾದ ಗುಣಗಳು ವ್ಯವಸ್ಥೆಯಾಗಿರುವವೆಂದು ತಿಳಿ. ಪರವಸ್ತುವನ್ನು ಹುಡುಕಿ ಬದುಕಿದರೂ ಅದು ಮೋಸವೇ ಆಗುವುದು.

'ಪರವಸ್ತುವನ್ನು ಬೇರೆಯಾಗಿ ಕಾಣಲು ಅಥವಾ ಹೊಂದಲು ಮನುಷ್ಯನ ಬಾಳಿನಲ್ಲಿ ಸಾಧ್ಯವಿಲ್ಲ. ಇತರ ವಸ್ತುಗಳೊಳಗೆ ಅದು ಇರುವುದನ್ನು ತಿಳಿದು ಆ ವಸ್ತುಗಳ ಮಾರ್ಗವಾಗಿಯೇ ಅದನ್ನು ಹೊಂದಬಹುದು. ಭೇರಿಯಲ್ಲಿಯೂ ಶಂಖದಲ್ಲಿಯೂ ಬಲವಾದ ಶಬ್ದವಾಗುವುದು. ಆ ಶಬ್ದವನ್ನು ಮಾತ್ರ ಎತ್ತಿ ಹಿಡಿದುಕೊಳ್ಳಲು ಸಾಧ್ಯವಿಲ್ಲ. ಶಂಖವನ್ನೂ, ಭೇರಿಯನ್ನೂ ಅವುಗಳನ್ನು ಶಬ್ದಮಾಡುವವನನ್ನೂ ಹೊಂದಿ ಶಬ್ದವನ್ನು ಪಡೆಯಬಹುದು. ವೀಣೆಯ ನಾದವನ್ನು ಹಿಡಿದು ಇಟ್ಟುಕೊಳ್ಳಲು ಸಾಧ್ಯವಿಲ್ಲ. ಪರವಸ್ತುವನ್ನು ಕಾಣುವುದು ಹೀಗೆಯೇ.'

ಒಳ್ಳೆಯ ರೀತಿಯಲ್ಲಿ ಇಹದ ಬಾಳನ್ನು ನಡೆಯಿಸಿ, ಅಂತರಂಗವು ಪಕ್ವವಾದ ಮೇಲೆಯೇ ತ್ಯಾಗದ ಸ್ಥಿತಿಯು ನಿಜವಾದ ಪ್ರಯೋಜನವನ್ನು ತರುವುದೆಂದು ನಮ್ಮ ಧರ್ಮಗ್ರಂಥಗಳ ಸಿದ್ಧಾಂತ. ಇಹದ ಬಾಳಿನಿಂದ ಮನಸ್ಸು ಪಕ್ವವಾಗುವುದು ಹೇಗೆ? ಒಬ್ಬನು ತನ್ನ ಹೆಂಡತಿಯನ್ನು ಪ್ರೀತಿಸಿ ತನ್ನನ್ನು ತಾನೇ ಸ್ವಲ್ಪ ಮಟ್ಟಿಗಾದರೂ ಮರೆಯುವ ತ್ಯಾಗಬುದ್ಧಿಯನ್ನು ಕಲಿಯುವನು. ಹಾಗೆಯೇ ಒಂದು ಕುಟುಂಬದ ಹಿತ, ಕುಲದ ಹಿತ, ಅತಿಥಿಗಳ ತೃಪ್ತಿ ಮೊದಲಾದುವೂ 'ತಾನು' ಎನ್ನುವ ಬಲೆಯಿಂದ ಕ್ರಮೇಣ ಹೊರಕ್ಕೆ ಬರಲು ಮನುಷ್ಯನಿಗೆ ಸಾಧನಗಳೇ ಆಗುವುವು. ಈ ಸಾಧನೆಗಳನ್ನು ದಾರಿ ತೋರುವವು ಇಹದ ಬಾಳಿನ ಪ್ರೀತಿ ವಿಶ್ವಾಸಗಳೆಲ್ಲವೂ ಪರಮ ಪ್ರೀತಿಗೆ. ಒಂದು ರೀತಿಯಲ್ಲಿ ಸಾಧನಗಳನ್ನು ಸರಿಯಾಗಿ ಮುಗಿಸಿದ ಮೇಲೆಯೇ ಅಂತರಂಗದಲ್ಲಿ ಜ್ಞಾನಮಾರ್ಗಕ್ಕೆ ಪ್ರವೇಶವುಂಟಾಗುವುದು. ಮಕ್ಕಳು, ಹೆಂಡತಿ, ಗಂಡ, ಕುಲದವರು, ಊರಿನವರು ಎಂದು ಲಕ್ಷ್ಯಗಳನ್ನಿಟ್ಟುಕೊಂಡು ಚಿಂತಿಸಿ ಪ್ರೀತಿಯನ್ನೂ ಸೇವೆಯನ್ನೂ ಸಲ್ಲಿಸಿದರೆ ಆ ವಿಷಯಗಳಲ್ಲಿ ಮರೆಯಾಗಿರುವ ಸತ್ಯವನ್ನು ಕಾಣುವ ಜ್ಞಾನವು ಉಂಟಾಗುವುದು. ಆದರೆ ಇದಕ್ಕೆ ಇಹದ ಬಾಳು ಒಂದು ಧಾರ್ಮಿಕ ವಿಷಯವೆಂದೆಣಿಸಿ, ಅದನ್ನು ಧರ್ಮ ಮಾರ್ಗದಲ್ಲಿ ನಡೆಯಿಸಿ ಕ್ರಮೇಣ ಸಂಗರಹಿತವಾಗಿ ಸಾಧನೆಯನ್ನು ಕೈಕೊಳ್ಳಬೇಕು.

೩

ಇದೂ ಯಾಜ್ಞವಲ್ಕ್ಯರು ಮೈತ್ರೇಯಿಗೆ ಹೇಳಿದ ಉಪದೇಶವಾಗಿದೆ:

'ಹಸಿಯಾಗಿರುವ ಕಟ್ಟಿಗೆಗಳನ್ನು ಹಾಕಿ ಉರಿಮಾಡುವುದರಿಂದ ಹೊಗೆಯೇಳುವುದು. ಹಾಗೆಯೇ ವೇದ, ಪುರಾಣ, ಕಲೆ, ಉಪನಿಷತ್ತು, ಯಾಗ ದಾನ ಎಲ್ಲವೂ ಬೆಂಕಿಯಂತೆ ಪರವಸ್ತುವಿನಿಂದ ಹೊರಬಿದ್ದುವೆಂದು ತಿಳಿ. ಸರಿಯಾಗಿ ಉರಿಯಾದರೆ ಹಿಂದಿರುವ ಬೆಂಕಿಯನ್ನು ಕಾಣುವೆ.

'ಒಂದು ಉಪ್ಪಿನಕಲ್ಲಿಗೆ ಹೊರ ರೂಪ ಒಳ ರೂಪವೆಂದು ಬೇರಿಲ್ಲ. ಎಲ್ಲವೂ ಕೇವಲ ಉಪ್ಪು. ನೀರಿನಲ್ಲಿ ಕರಗಿಸಿದರೆ ಮರೆಯಾಗಿ ಅಷ್ಟೂ ಉಪ್ಪುನೀರಾಗಿಯೇ ಹೋಗುವುದು. ಹಾಗೆಯೇ [illegible] ಮೇಲೆ, ಪಂಚಭೂತಗಳನ್ನು ಬಿಟ್ಟು ಪರವಸ್ತುವಿನೊಂದಿಗೆ ಬೆರೆತು ಒಂದಾಗಿ ಬಿಡುವುದು. ಅನಂತರ ಅದಕ್ಕೆ ತನ್ನ ಅರಿವು ಇರುವುದಿಲ್ಲ.'

ತಾನೆನ್ನುವ ಅರಿವು ಹೋಗುವುದೆಂದ ಕೂಡಲೇ ಮೈತ್ರೇಯಿಯು ಗಾಬರಿಗೊಂಡಳು. ಅದನ್ನು ಕಂಡು ಯಾಜ್ಞವಲ್ಕ್ಯರು 'ಏತಕ್ಕೆ ಗಾಬರಿಯಾಗುವೆ?' ಎಂದು ಉಪದೇಶವನ್ನು ಮುಂದುವರಿಸಿದರು: 'ಎರಡು ವಸ್ತುಗಳಿದ್ದರೆ ಒಂದು ಮತ್ತೊಂದನ್ನು ನೋಡುವುದು, ಒಲಿಸುವುದು, ಸವಿಯಿಸುವುದು, ನಮಸ್ಕರಿಸುವುದು, ಕೇಳುವುದು, ಅರಿಯುವುದು– ಇವುಗಳು ಸಾಧ್ಯ. ಎಲ್ಲವೂ ಒಂದು ವಸ್ತುವಾದ ಅನಂತರ ಒಂದು ಮತ್ತೊಂದನ್ನು ಮುಟ್ಟುವುದೂ ನೋಡುವುದೂ ಅರಿಯುವುದೂ ಹೇಗೆ?

'ಅರಿವು ಎನ್ನುವವನೇ ಅವನು. ಅದಕ್ಕೂ ಹೆಚ್ಚಾಗಿ ಅವನನ್ನು ಅರಿಯುವುದು ಹೇಗೆ ಸಾಧ್ಯ? 'ಇದು ಅದೇ' 'ಇದು ಅದಲ್ಲ' ಎಂದೇ ಪರವಸ್ತುವಿನ ಲಕ್ಷಣವನ್ನು ಹೇಳಲಾಗದು. ಬೇರೆ ಲಕ್ಷಣವನ್ನು ಹೇಳಲಾಗದು. ಅರಿಯುವವನೂ ಅರಿಯಲ್ಪಡುವ ವಸ್ತುವೂ ಒಂದೇ ಆದ ಮೇಲೆ 'ಅರಿವು' ಎನ್ನುವುದೆಲ್ಲಿ?

'ಮೈತ್ರೇಯಿ, ಇದೇ ನಿನಗೆ ಉಪದೇಶ. ಪರವಸ್ತುವನ್ನು ಕುರಿತು ಇಷ್ಟು ಮಾತ್ರವೇ ತಿಳಿಸಲು ಸಾಧ್ಯ' ಎಂದು ಹೇಳಿ, ಯಾಜ್ಞವಲ್ಕ್ಯರು ಅರಣ್ಯಕ್ಕೆ ತೆರಳಿದರು.

[ಶ್ರೀ ಕೆ. ಸಂಪದ್ಗಿರಿರಾಯರು ಅನುವಾದಿಸಿದ, ಶ್ರೀ ರಾಜಗೋಪಾಲಾಚಾರ್ಯರ 'ಉಪನಿಷತ್ತಿನ ಕಥೆಗಳು' ಎಂಬ ಗ್ರಂಥದಿಂದ]

ನೋಟೀಸು

ಕಾರ್ಕಳ ಡಿ ಮು ಕೋರ್ಟಿನಲ್ಲಿ

R E P No 717/1939
R. E A N. 911 1939

ಯೇಮಿ ಬದ್ರಿಗ್ಸ — ಅರ್ಜಿದಾರರಳು

ಮತ್ತು

1 ಬಜಾರಿಯೋ ಬದ್ರಿಗ್ಸ, ಪೆದ್ರು ಬದ್ರಿಗ್ಸರ ಮಗ 2 ಪೀಟರ ಬದ್ರಿಗ್ಸ, 1ನೇ ಬಜಾರಿಯೋ ಬದ್ರಿಗ್ಸರ ಮಗ } [illegible]

ಕಾರ್ಕಳ ತಾಲೂಕು ಉಚ್ಚಪೊಡು ಗ್ರಾಮದ ಮುಂತಸೀರ ಎಂಬಲ್ಲಿರುವವರು —

ಇವರೊಳಗೆ

ಈ ಮೂಲಕ ಎದುರಿಗೆ ತಿಳಿಯಪಡಿಸುವುದೇನೆಂದರೆ — ಮೇಲ್ಕಂಡ ಅಮಲ್ದಾರಿಯಲ್ಲಿ ಅರ್ಜಿದಾರರು ಹಾಜರುಪಡಿಸಿದ ಏಲಂ ಇಸ್ತಿಹಾರಿನ ಕುರಿತು ಆಕ್ಷೇಪಣೆಗಳಿದ್ದರೆ ಹೇಳುವರೆ ಮತ್ತು ಆಸ್ತಿ ಏಲಂ ಸಮಯ ಬಿಡ್ ಮಾಡುವರೆ ಕೂಡಾ ತನಗೆ ಪರ್ಮಿಶನ ಕೊಡಿಸಬೇಕಾಗಿ ವಗೈರೆ ಕೊಟ್ಟ R E A. No. 814/1939ನೇ ಅರ್ಜಿಯು ಇದೇ ಬರುವ ತಾ 20-11-'39ಕ್ಕೆ ಇಟ್ಟಿರುತ್ತದೆ. ಆದುದರಿಂದ ಈ ಕುರಿತು ನಿಮ್ಮ ಆಕ್ಷೇಪಣೆಗಳನ್ನು ಸದ್ರಿ ತಾರೀಕಿಗೆ ಸದ್ರಿ ಕೋರ್ಟ ಮುಂದೆ ಬೆಳಗ್ಗೆ 10 ಘಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸಪಾರ್ಟ ಮಾಡಿ ಸದ್ರಿ ಅಮಲ್ದಾರಿ ಮುಂದರಿಸೋಣಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕೋರ್ಟ ಹುಕುಂ ಪ್ರಕಾರ

ಕಾರ್ಕಳ 13-11-'39 } Sd/ H. S. Hussain
Sd/ B. Vasudeva Rao
Advocate
ಅರ್ಜಿದಾರರ ಕಡೆ ವಕೀಲರು

Constructive Banking

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding a Crore. And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OF A CRORE — ESTED. 1906

CANARA BANK, LIMITED.

HALFTONE & LINE BLOCK MAKING UNDERTAKEN
Sharada Press, MANGALORE

ಜರ್ಮನಿಯಲ್ಲಿ ನಾಝಿ ಸರಕಾರದ ವಿರುದ್ಧ ಚಳವಳ

ಸರ್ವಾಧಿಕಾರಿ ಹಿಟ್ಲರನು ಪದಚ್ಯುತನಾಗುವ ಸಂಭವ

ಸರ್ವಾಧಿಕಾರಿ ಹಿಟ್ಲರನನ್ನು ಪದಚ್ಯುತನನ್ನಾಗಿ ಮಾಡಿ, ಅವನ ನಾಝಿ ಸರಕಾರದ ಬದಲಿಗೆ ಒಂದು ಸ್ವತಂತ್ರ ಸರಕಾರವನ್ನು ವ್ಯವಸ್ಥೆಗೊಳಿಸಲಿಕ್ಕೆ ಜರ್ಮನಿಯಲ್ಲಿ ಗುಪ್ತ ಪ್ರಯತ್ನಗಳು ನಡೆದಂತೆ ಕಾಣುತ್ತದೆ. ಈ ಅಂತಃ ಕಲಹಗಳಲ್ಲಿ ವಿರೋಧಿಗಳ ಕೈ ಮೇಲಾದರೆ, ಸಿಟ್ಟಿನಿಂದ ಬುದ್ಧಿ ಕೆಟ್ಟ ಹಿಟ್ಲರನು ಜರ್ಮನ ನಗರಗಳನ್ನು ಜರ್ಮನಿಯ ಫಿರಂಗಿ ಗುಂಡುಗಳಿಂದಲೇ ಸುಟ್ಟು ನಾಶಮಾಡಬಹುದು. ಅವನ ವಿರುದ್ಧ ವಿದ್ರೋಹದ ಬೀಜಾರೋಪಣವು ಜರ್ಮನಿಯ ಎಲ್ಲಾ ಪ್ರಧಾನ ನಗರಗಳಲ್ಲಿ ಆಗಿರುವುದನ್ನು ತಿಳಿದು, ಹಿಟ್ಲರನು ಸಂದು ಕಟ್ಟಿನ ಸ್ಥಾನಗಳಲ್ಲೆಲ್ಲ ಫಿರಂಗಿಗಳನ್ನು ಅಡಗಿಸಿ ಇಟ್ಟಿದ್ದಾನೆ. ವಿಶೇಷ ಪ್ರಸಂಗಗಳಲ್ಲಿ ಮನಸ್ಸಿಗೆ ಬಂದ ಹಾಗೆ ನಡೆಯಲು ಅವನು ತನ್ನ ಅನುಯಾಯಿಗಳಿಗೆ ಸರ್ವ ಸ್ವಾತಂತ್ರ್ಯವನ್ನೂ ಕೊಟ್ಟಿರುವನಂತೆ! ಜರ್ಮನ ಸೈನಿಕರು ಸ್ಥೈರ್ಯ ಕೆಟ್ಟಿರುವರಾದ್ದರಿಂದ, ತನ್ನ ಪತನವು ಒಂದೇ ಯುದ್ಧದಲ್ಲಿ ನಿರ್ಧಾರವಾಗದ ಹಾಗೆ ಮಾಡಲಿಕ್ಕೆ ಹಿಟ್ಲರನೀಗ ಕೇವಲ ಫ್ರಾನ್ಸಿನ ಗಡಿಪ್ರದೇಶವನ್ನಷ್ಟೇ ತನ್ನ ರಣರಂಗವನ್ನಾಗಿ ಮಾಡಿಟ್ಟುಕೊಳ್ಳದೆ, ಅದನ್ನು ಸ್ವಿಜರ್ಲೆಂಡು, ಫ್ರಾನ್ಸ್, ಬೆಲ್ಜಿಯಮು ಮತ್ತು ಹೊಲ್ಲೆಂಡಿನ ಗಡಿಯ ತನಕವೂ ವಿಸ್ತರಿಸಿರುವನು!

ನವಜರ್ಮನಿಯ ರಚನೆ

ದಕ್ಷಿಣ ಜರ್ಮನಿಯ ಒಂದು ಪ್ರಧಾನ ನಗರದಲ್ಲಿ ಬೇರೆ ಬೇರೆ ರಾಜಕೀಯ ಸೈನಿಕ ಮತಭೇದವುಳ್ಳ ಹಿಟ್ಲರ ವಿರೋಧಿಗಳೆಲ್ಲರೂ ಒಟ್ಟುಕೂಡಿ ಅವನ ವಿರುದ್ಧ, ಹಿಂಸಾತ್ಮಕ ಆಂದೋಲನವನ್ನೆಬ್ಬಿಸುವ ಸಿದ್ಧತೆಗಳನ್ನು ಆರಂಭಿಸಿದ್ದಾರೆ. ಸ್ವತಂತ್ರ ಜರ್ಮನಿಯ ಪುನರ್ರಚನೆ ಮಾಡುವುದೇ ಈ ಮಂಡಲಿಯ ಉದ್ದೇಶವಾಗಿದೆ. ಈ ಮಂಡಲಿಯ ಪ್ರತಿನಿಧಿಗಳು ಜರ್ಮನಿಯ ಬೇರೆ ಬೇರೆ ನಗರಗಳಲ್ಲಿ ಉದ್ದೇಶ ಸಾಧನೆಗೆ ಆಗಬೇಕಾದ ಕಾರ್ಯಕಲಾಪಗಳನ್ನು ಚರ್ಚಿಸಿ ನಿರ್ಣಯಿಸುವರು. ಹಿಟ್ಲರನ ವಿರೋಧಿಗಳೂ, ಅವನ ಆಡಳಿತದಿಂದ ನಿರಾಶರಾದವರೂ ಮೆಲ್ಲಮೆಲ್ಲಗೆ ಈ ಮಂಡಲಿಯನ್ನು ಸೇರುತ್ತಿರುವರು. ಒಬ್ಬ ಇಂಜಿನಿಯರ್, ಒಬ್ಬ ವ್ಯಾಪಾರಿ, ಒಬ್ಬ ಖನಿಜ ಕೆಲಸದವ, ಒಬ್ಬ ವೈಮಾನಿಕ, ಒಬ್ಬಳು ಗಿರಣಿ ಕೆಲಸಗಾರ್ತಿ, ಒಬ್ಬ ಗುಮಾಸ್ತ ಮತ್ತೆ ಇಬ್ಬರು ಸೇನಾಧಿಕಾರಿಗಳು ಇವರ ವಶ. ಈ ಮಂಡಲಿಯ ಸೂತ್ರವು ಇರುತ್ತದೆ. ನಾಝಿ ಸರಕಾರದ ಕ್ರಮಪದ್ಧತಿಗಳನ್ನು ಅಂತ್ಯಗೊಳಿಸುವದನ್ನೂ ದೇಶವಿದೇಶಗಳ ಬೇರೆ ಬೇರೆ ಸರಕಾರಗಳೊಡನೆ ಸಹಕರಿಸಿ ಲೋಕಶಾಂತಿಯನ್ನು ಸ್ಥಾಪಿಸುವುದನ್ನೂ ಸದ್ಯ ಇವರು ತಮ್ಮ ಕಾರ್ಯಕ್ರಮವನ್ನಾಗಿಟ್ಟುಕೊಂಡಿದ್ದಾರೆ. ಹಿಟ್ಲರನು ಪದಚ್ಯುತನಾದ ಬಳಿಕ ಎಲ್ಲ ಸಂಗಡಗಳ ಪ್ರಾತಿನಿಧ್ಯವಿರುವ ಒಂದು ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಿ, ಲೋಕಶಾಂತಿಯನ್ನು ಉಂಟುಮಾಡಿದ ಮೇಲೆ ಕ್ರಮಗೊಂಡ ಪ್ರಜಾಪ್ರಭುತ್ವವನ್ನು ಬಳಕೆಗೆ ತರುವ ಆಲೋಚನೆಯನ್ನು ಮಂಡಲಿಯು ಮಾಡಿದೆ. ಲೋಕಶಾಂತಿಯ ಸ್ಥಾಪನೆಗಾಗಿ ತಾತ್ಕಾಲಿಕ ಸರಕಾರವು ಜೆಕೊಸ್ಲೊವೇಕಿಯ, ಪೋಲಾಂಡ, ಆಸ್ಟ್ರಿಯಗಳಿಗೆ ಸ್ವಯಂ ನಿರ್ಧಾರದ ಅಧಿಕಾರವನ್ನು ಕೊಡುವುದು. ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳ ಶಸ್ತ್ರಸನ್ಯಾಸಕ್ಕೆ ಪ್ರಯತ್ನಿಸುವುದು; ಮತ್ತು ಆ ರಾಷ್ಟ್ರಗಳೊಡನೆ ಸಮಾನ ಹಕ್ಕು ಅಧಿಕಾರಗಳನ್ನು ತಡೆಯುವ ಆರ್ಥಿಕ ಮತ್ತು ವಾಣಿಜ್ಯ ಒಡಂಬಡಿಕೆಗಳನ್ನು ಮಾಡಿಕೊಳ್ಳುವುದು. ಪ್ರಜೆಗಳಿಗೆ ನಾಗರಿಕ ಸ್ವಾತಂತ್ರ್ಯವನ್ನು ಕೊಡುವುದು. ಇಂಥ ಮನಮೋಹಕವಾದ ಕಾರ್ಯಕ್ರಮವನ್ನು ಇಟ್ಟುಕೊಂಡಿರುವುದರಿಂದ ಈ ಮಂಡಲಿಗೆ ನಾಝಿಗಳು ಬಿಟ್ಟು ಉಳಿದ ಎಲ್ಲಾ ಜರ್ಮನರ ಕ್ರಿಯಾತ್ಮಕ ಸಹಕಾರವು ಪ್ರಾಪ್ತವಾಗತೊಡಗಿದೆ. ರಾಜಕೀಯ ಸ್ವಾತಂತ್ರ್ಯ, ವೈಯುಕ್ತಿಕ ಭದ್ರತೆ, ಸಾಮಾಜಿಕ ಉನ್ನತಿ ಮತ್ತು ಲೋಕಶಾಂತಿಯು ಮಂಡಲಿಯ ಧ್ಯೇಯವಾಗಿರುವುದು.

ಹಿಟ್ಲರನ ವ್ಯಾತ್ಯ ನೃತ್ಯ

ಅಂತಃಕಲಹದ ಸಂಭವ

ಈ ಮಂಡಲಿಯ ಚಿತ್ತಾಕರ್ಷಕವಾದ ಕಾರ್ಯಕ್ರಮ ಮತ್ತು ಧ್ಯೇಯೋದ್ದೇಶಗಳ ಪರಿಣಾಮವಾಗಿ ಜರ್ಮನಿಯಲ್ಲಿ ಅಂತಃಕಲಹಗಳೆದ್ದು ತಾನು ಪದಚ್ಯುತನಾಗಬಹುದೆಂಬ ಹೆದರಿಕೆಯು ಹಿಟ್ಲರನಿಗೆ ತುಂಬಾ ಉಂಟಾಗಿರುವುದು; ಆದ್ದರಿಂದಲೇ ಅವನು ತಾನು ಆರಂಭಿಸಿದ ಯುದ್ಧವು ಶೀಘ್ರದಲ್ಲಿ ಕೊನೆಗೊಳ್ಳುವಂತೆ ಚತುರೋಪಾಯಗಳನ್ನು ಕೈಕೊಂಡಿದ್ದಾನೆ. ತಟಸ್ಥ ರಾಷ್ಟ್ರಗಳೂ ರಣರಂಗಕ್ಕೆ ಒರುವಂತೆ ಮಾಡಿ ತನ್ನ ಕಾರ್ಯ ಸಾಧಿಸುವ ಪ್ರಯತ್ನ ಮಾಡಿದ್ದಾನೆ. ನಾಝಿಗಳು ಈಗ ಕರ್ತವ್ಯಮೂಢರಾಗಿರುವರು. ಅವರ ಪ್ರಮುಖರು ಯುದ್ಧ ವಿಚಾರದಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಪರಸ್ಪರ ವಿರುದ್ಧ ಮಾತುಗಳನ್ನು ಆಡುತ್ತಲಿರುವರು. ನಾಝಿಗಳ ಕಾರ್ಯಕ್ಷೇತ್ರದಲ್ಲಿ ತುಂಬ ಗೊಂದಲ ಪ್ರಾರಂಭವಾಗಿದೆ. ರಷ್ಯದೊಡನೆ ಸ್ನೇಹದಿಂದಿರುವ ನೆವನವನ್ನು ಮುಂದೆ ಮಾಡಿ, ನಾಝಿ ಅನುಯಾಯಿಗಳೆಂದು ನಟಿಸುತಿದ್ದ ಕೂಲಿಕಾರರೆಲ್ಲರು ಬೊಲ್ಶೆವಿಕರೊಡನೆ ಸಹಾನುಭೂತಿಯನ್ನು ತೋರಿಸುತಿದ್ದಾರೆ. ಆರು ವರ್ಷಗಳ ತನಕ ಮೌನರಾಗಿದ್ದವರು ಈಗ ಹಿಟ್ಲರನ ವಿರುದ್ಧ ಕಾರ್ಯಕ್ಷೇತ್ರಕ್ಕೆ ಇಳಿದಿರುವರು. ಹಿಟ್ಲರನ ಹಸ್ತಕರು ಕೂಡ ಯುದ್ಧವಿಚಾರದಲ್ಲಿ ಒಮ್ಮತವಿಲ್ಲದವರಾಗಿರುವರು. ಅವರಲ್ಲಿ ಪ್ರತಿಯೊಬ್ಬನೂ, ಹಿಟ್ಲರನನ್ನಾದರೂ ಫಾಶಿ ಕಂಭಕ್ಕೆ ಬಲಿಕೊಟ್ಟು ತಮ್ಮ ಸ್ವಾರ್ಥವನ್ನು ಸಾಧಿಸುವ ಮಹಾಪ್ರಯತ್ನದಲ್ಲಿದ್ದಾರೆ. ಅಧಿಕಾರಲಾಲಸೆಯಿಂದ ಅವರು ಏನೂ ಮಾಡಲಿಕ್ಕಾದರೂ ಸಿದ್ಧರು. ಆದ್ದರಿಂದ ಜರ್ಮನಿಯಲ್ಲಿ ಅಂತಃಕಲಹಗಳಾಗಿ ಹಿಟ್ಲರನ ಸ್ಥಾನಭ್ರಷ್ಟನಾಗುವದಷ್ಟು ಖಂಡಿತವಾಗಿದೆ.

ಪ್ರಸಿದ್ಧ ಪತ್ರಿಕೆ

ಹಾಸನ ಟವನ್ ೩೧ನೇ ವಾರ್ಷಿಕ ದನಗಳ ಪ್ರದರ್ಶನ

೧ ಮಾಮೂಲಿನಂತೆ ಹಾಸನ ಟವನ್ ಮುನಿಸಿಪಾಲಿಟಿ ಪ್ರದರ್ಶನ ಕ್ಷೇತ್ರದಲ್ಲಿ ಈ ಸಲದ ಪ್ರದರ್ಶನವು ೧೯೪೦ನೇ ಜನವರಿ ಮಾಹೆ ೨ನೇ ತಾರೀಕು ಮಂಗಳವಾರ ಪ್ರಾತಃಕಾಲದ ಆರಂಭವಾಯ್ತು ೬ನೆಯ ತಾರೀಕು ಶನಿವಾರ ಪರಿಯಂತರ ನಡಿಯುತ್ತದೆ.

೨ ಪ್ರದರ್ಶನಕ್ಕೆ ಬರತಕ್ಕ ಪ್ರತಿ ರಾಸು ಒಂದಕ್ಕೆ ಎರಡು ಆಣೆಯಂತೆ ಫೀವಸೂಲು ಮಾಡಲಾಗುತ್ತದೆ. ಪ್ರದರ್ಶನಕ್ಕೆ ಒರುವ ರಾಸುಗಳ ಮೇಲೆ ವಸೂಲು ಮಾಡುವ ಫೀಜಾಬನ್ನು ಮತ್ತು (ಮುನಿಸಿಪಲ್) ಜಾಗದಲ್ಲಿ ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನೂ ಸಹ ತಾರೀಕು ೫-೧೨-೩೯ನೇ ಮಂಗಳವಾರ ಮಧ್ಯಾಹ್ನ ೩ ಘಂಟೆ ಆಗಾಯ್ತು ಹಾಸನದ ಸಂತೆ ಬಳಿಯಿರುವ ಆಕ್ಟ್ರಾಯಿ ಕಟ್ಟೆ ಒಳಿ ಬಹಿರಂಗವಾಗಿ ಕ್ಯಾಟಲ್‌ಷೋ ಕಮಿಟಿ ಪ್ರೆಸಿಡೆಂಟರು ಯಾ ಮುನಿಸಿಪಲ್ ವೈಸ್ ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತದೆ. ಅಂಗಡಿ-ನಾಟಕ-ಸಿನೆಮಾ ವಗೈರೆಗಳಿಗಾಗಿ ವಿಂಗಡಿಸಿರುವ ಜಾಗಗಳನ್ನು ತಾರೀಕು ೧೫-೧೨-೩೯ರ ಆಗಾಯ್ತು ಹಾಸನ ಟವನ್ ಮುನಿಸಿಪಲ್ ಆಫೀಸಿನಲ್ಲಿ ವಿಲೇವಾರಿ ಮಾಡಲು ಉಪಕ್ರಮಿಸುತ್ತೆ.

೩ ಪ್ರದರ್ಶನದ ಮೈದಾನದಲ್ಲಿ ಜನ-ಜಾನುವಾರುಗಳಿಗೆ ಸಮೃದ್ಧಿಯಾಗಿ ನೀರು ಮತ್ತು ಜಾನುವಾರುಗಳಿಗೆ ಮೇವಿಗಾಗಿ ಹುಲ್ಲು ಸಹ ದೊರೆಯುತ್ತದೆ—ಅಲ್ಲದೆ ಸ್ಥಳ ನೈರ್ಮಲ್ಯ ವಿಚಾರದಲ್ಲಿಯೂ ಜನ-ಜಾನುವಾರುಗಳ ಆರೋಗ್ಯ ಭಾಗ್ಯ ವಿಷಯದಲ್ಲಿಯೂ ಹೆಚ್ಚು ಗಮನವಹಿಸಿ ನೋಡಿಕೊಳ್ಳಲು ವೈದ್ಯಶಾಲೆಗಳೂ ಪ್ರದರ್ಶನ ಕಾಲದಲ್ಲಿ ಜನಗಳ ಸೌಕರ್ಯಕ್ಕಾಗಿ ಅಲ್ಲಿಯೇ ಹಂಗಾಮಿಯಾಗಿ ಪೋಸ್ಟು ಆಫೀಸು ಮತ್ತು ಜನರಕ್ಷಣೆ ಧನರಕ್ಷಣೆಗಾಗಿ ಪೋಲೀಸಿನವರ ಸಹಾಯ್ಯವನ್ನೂ ಕಲ್ಪಿಸಲಾಗುತ್ತದೆ.

೪ ಪ್ರದರ್ಶನಕಾಲದಲ್ಲಿ ಉತ್ತಮವಾದ ರಾಸುಗಳಿಗೆ ದೊರೆಯತಕ್ಕ ಬಹುಮಾನವನ್ನೂ, ವ್ಯವಸಾಯ ಪ್ರದರ್ಶನ ಲಾಭವನ್ನೂ, ಲಾಭಕರವಾದ ದನಗಳ ಮತ್ತು ಎಲ್ಲಾ ವಿಧವಾದ ವ್ಯಾಪಾರ ಸೌಕರ್ಯಗಳನ್ನೂ ನಾಟಕ ಸಿನೆಮಾ ವಗೈರೆ ಆಟ ಪಾಟಗಳ ದೃಶ್ಯವನ್ನೂ ಉಪಯೋಗಿಸಿಕೊಂಡು ಲಾಭ ಪಡಿಯಲೆಂದು ಕೋರಿದೆ.

೫ ಅಲ್ಲದೆ ಬಹು ದೂರದಿಂದ ಈ ಸಂದರ್ಭದಲ್ಲಿ ವಿಶೇಷವಾಗಿ ಒರತಕ್ಕ ಸಮ್ಮತಿಸಿತ ಬಾಂಧವರ ಸಂತೋಷಾರ್ಥವಾಗಿ ವಿಧವಿಧವಾದ ಆಟ ಪಾಟಗಳನ್ನು ಅವರಿಗಾಗಿ ಏರ್ಪಡಿಸಿ ಅವರಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡಲು ಏರ್ಪಡಿಸಿರುತ್ತದೆ.

ಹಾಸನ } ಪಿ. ಎಸ್. ರಾಮಸ್ವಾಮಿ
4-11-'39 } ಪ್ರೆಸಿಡೆಂಟ್
ಕ್ಯಾಟಲ್‌ಷೋ ಕಮಿಟಿ ಟವನ್ ಮುನಿಸಿಪಾಲಿಟಿ
ಹಾಸನ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುತ್ತದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಿಸುತ್ತಿಹರು, ಆಹೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪-೦-೦

ವಿ. ಪಿ. ೫

ವಿಳಾಸ: ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಕಾಂಗ್ರೆಸು ಮಂತ್ರಿಗಳ ನಿಸ್ವಾರ್ಥ ದೇಶಸೇವೆ

ನೇಶನಲ್ ಹೆರಾಲ್ಡ್ ಪತ್ರಿಕೆಯ ಪ್ರಶಂಸೆ

ಬ್ರಿಟಿಷ್ ಸರಕಾರಕ್ಕೆ ಒಂದು ಸೂಚನೆ

ಖಾದೀ ಸೈನ್ಯದಲ್ಲಿ ಒಬ್ಬ ಕವಿ

ಯಾರೆಷ್ಟು ಟೀಕಿಸಿದರೂ ನಿಷ್ಪಕ್ಷಪಾತದಿಂದ ದುಡಿದಿದ್ದಾರೆ

ಕಾಂಗ್ರೆಸು ಮಂತ್ರಿಮಂಡಲಗಳ ನಿಸ್ವಾರ್ಥ ಸೇವೆ

ನೇಶನಲ್ ಹೆರಾಲ್ಡ್ ಪತ್ರಿಕೆಯು, ಕಾಂಗ್ರೆಸು ಮಂತ್ರಿಮಂಡಲದ ರಾಜಿನಾಮೆಯ ಕುರಿತು ಹೀಗೆ ಬರೆಯುತ್ತದೆ

"ಕಾಂಗ್ರೆಸು ಮಂತ್ರಿಮಂಡಳಗಳು ರಾಜಿನಾಮೆಕೊಟ್ಟು ಹೊರಬಂದುವು, ಆದರೆ ಅವುಗಳ ಹಿಂದಿನ ಅವಸ್ಥೆಯಲ್ಲಿ ತಿರಿಗಿ ಅವುಗಳು ಅಧಿಕಾರಕ್ಕೆ ಬರುವುದು ಬೇಡವೆಂದು ನಾವು ಆಶಿಸಬಹುದು. ಇಂದು ಜಗತ್ತಿನ ಯಾವುದೇ ರಾಷ್ಟ್ರವಾಗಲಿ ಅಧೋಗತಿಯನ್ನು ಹೊಂದುವುದು ಸಾಧ್ಯವಿಲ್ಲ; ಅದರಲ್ಲಿಯೂ ಹಿಂದೂದೇಶವು ಸರ್ವಥಾ ಅವನತಿ ಹೊಂದಲಾರದು. ಹಳೆಯ ಕ್ರಮಗಳು ಜಾರಿಸಿಹೋಗಿ ಹೊಸ ಕ್ರಮಗಳು ರೂಪಿತಕ್ಕೆ ಬರುವವು

"ಕಾಂಗ್ರೆಸು ಮಂತ್ರಿಮಂಡಳಗಳು ಮಾಡಿದ ಮಹತ್ಕಾರ್ಯವೇನು? ಕಾಂಗ್ರೆಸು ಮಂತ್ರಿಗಳನ್ನು ದೂರುವವರು ಸಾವಿರಾರು ಮಂದಿಯಿದ್ದರು. ಹಲವರು ಅವರು ಮಾಡುವ ಕಾರ್ಯದಲ್ಲಿ ಏನೇನೂ ತೃಪ್ತಿಗೊಂಡಿರಲಿಲ್ಲ. ಕಾಂಗ್ರೆಸು ಮಂತ್ರಿಗಳು ಹೀಗೆ, ಇಂತಹ ಅವಸ್ಥೆಯಲ್ಲಿಯೂ ಯಾವ ರೀತಿಯ ಸೇವೆಸಲ್ಲಿಸಿರುವರೆಂಬ ವಿಷಯವಾಗಿ, ಒಂದು ದಿನ ನಾವು ತಿಳಿಯುವೆವು.

"ನಾವು ಅವರು ಮಾಡಿದ ಕಾರ್ಯಗಳನ್ನು ಹೊಗಳುವುದಾಗಲಿ, ತೆಗಳುವುದಾಗಲಿ ಅಲ್ಲ. ಅವರು ಆ ಕೆಲಸ ಮತ್ತು ಈ ಕೆಲಸದಲ್ಲಿ ಸೋತುಹೋದರೊ ಜಯಹೊಂದಿದರೋ ಎಂಬ ವಿಷಯವಲ್ಲ. ಅದರೆ ಅವರ ಉದಾತ್ತಗುಣ ಕಷ್ಟಸಹಿಷ್ಣುತೆಯಿಂದ ಮಾಡಿದ ಕಾರ್ಯಗಳು ನಿಜವಾಗಿಯೂ ಪ್ರಶಂಸನೀಯವಾದದ್ದು. ಎಷ್ಟೋ ವಿಮರ್ಶೆ ಮಾಡಿ, ಟೀಕೆಮಾಡಿ ಅವರನ್ನು ದೂರಿದರೂ ಅವರು ನಿಷ್ಪಕ್ಷಪಾತದಿಂದ ಕೆಲಸಗಳನ್ನು ಮಾಡಿದ್ದಾರೆ. ಇದರ ಸತ್ಯಾಂಶವು ಮುಂದೆ ಬರಲಿರುವ ದಿನಗಳಲ್ಲಿ ನಮಗೆ ತಿಳಿಯುವುದು."

ಕಾಂಗ್ರೆಸಿನೊಡನೆ ತೃಪ್ತಿಕರವಾದ ಇತ್ಯರ್ಥವು ಹೇಗಾದೀತು?

ಬ್ರಿಟಿಷ್ ಸರಕಾರಕ್ಕೆ ಒಂದು ಸೂಚನೆ

ಭಾರತದ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿಯ ಕುರಿತು ಬರೆಯುತ್ತಾ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯು ಹೀಗೆಂದು ಹೇಳುತ್ತದೆ.

"ವೈಸರಾಯರು ಮತ್ತು ಸರ್ ಸಾಮುವೇಲ್ ಹೋರರು ಸ್ಪಷ್ಟವಾದ ಒಂದು ಪ್ರಕಟಣೆ ಕೊಟ್ಟು ಅದರಲ್ಲಿ ಯುದ್ಧವು ಮುಗಿದ ಮೇಲೆ ಹಿಂದೂದೇಶದಲ್ಲಿ ಜನಪ್ರಿಯವಾಗಿರುವ ಪಕ್ಷದವರಿಂದ ರಚಿತವಾದ ಕೇಂದ್ರ ಎಸೆಂಬ್ಲಿಯೂ ನಿರ್ಮಾಣವಾಗಿ, ರಾಜ್ಯಸೂತ್ರವು ಬ್ರಿಟಿಷ ಅಧಿಕಾರಿಗಳ ತಡೆಯಿಲ್ಲದೆ ಭಾರತೀಯರಿಂದಲೇ ನಡೆಯುವಂತೆ ಮಾಡುವ ಸ್ಪಷ್ಟ ಪ್ರಕಟಣೆಯನ್ನು ಕೊಟ್ಟಲ್ಲಿ ಇಂದಿನ ರಾಜಕೀಯ ಸಮಸ್ಯೆಯು ಪರಿಹಾರವಾಗುವುದು!

"ಸಾಮುವೇಲ್ ಹೋರರು ಮತ್ತು ಕಾಂಗ್ರೆಸು ಧುರೀಣರು ಪ್ರಕಟಪಡಿಸಿದ ಪ್ರಕಟಣೆಗಳಿಂದ ಇಂದಿನ ಪರಿಸ್ಥಿತಿಯು ಯಾವ ವಿಧದಿಂದಲೂ ಸಮಾಧಾನಕರವಾಗಿ ಕೊನೆಗೊಳಿಸಲಾರದ ಅವಸ್ಥೆಗೆ ಬಂದಿದೆಯೆಂದು ತಿಳಿಯುವುದಿಲ್ಲ. ಸರಕಾರವು, ಜಾತೀಯ ಭೇದವನ್ನು ಮುಂದಿರಿಸುವುದರ ಬದಲು, ಇಂಗ್ಲೆಂಡಿನ ತೊಂದರೆಯಿಲ್ಲದೆ, ಜನಮತದಿಂದ ಆರಿಸಿಬಂದ ಪ್ರತಿನಿಧಿಗಳಿಂದ ಕೇಂದ್ರ ಸರಕಾರವನ್ನು ರಚಿಸುವ ಪ್ರಕಟಣೆ ಕೊಡುವುದು ಸುಲಭವಾಗಿದೆ. ಜಾತೀಯ ಭೇದವೆಂಬ ನೆವನವು ಹಿಂದೂದೇಶಕ್ಕೆ ಸಿಗಬೇಕಾದ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯಕ್ಕೆ ಎಂದೆಂದೂ ತಡೆಯಾಗಲಾರದು

"ಆದ ಕಾರಣ ಕೂಡಲೇ ಪ್ರಜಾಪಕ್ಷದವರು ಸರಕಾರವನ್ನು ನಡೆಸುವಂತೆ ಎಡೆಕೊಡುವುದರಲ್ಲಿ ಯಾವ ತೊಂದರೆಯೂ ಇರುವುದಿಲ್ಲ. ಗವರ್ನಮೆಂಟ್ ಓಫ್ ಇಂಡಿಯಾ ಆಕ್ಟಿನಲ್ಲಿಯು ಕೂಡ ದೇಶದ ಮಹಾಮೇಧಾವಿಗಳೂ, ರಾಜಕಾರಣ ವಿಚಕ್ಷಣರೂ ಜನಪ್ರಿಯರೂ ಆದ ಮುಖಂಡರನ್ನು ವೈಸರಾಯರು ಕರೆದು ಅವರ ಸೂಚನೆಯಂತೆ ದಿನದಿನದ ರಾಜ್ಯಸೂತ್ರವನ್ನು ಕೈಕೊಳ್ಳಲು ಯಾವ ಆತಂಕವೂ ಇರುವುದಿಲ್ಲ."

ಖಾದೀ ಸೈನ್ಯದಲ್ಲಿ ಕವಿಯೂ ಸೇರಿದರು!

ಮಹಾದೇವ ದೇಸಾಯಿಗಳ ಪ್ರಶಂಸೆ

ಖಾದೀ ಪ್ರೇಮಿಗಳ ಸೈನ್ಯದಲ್ಲಿ ಒಬ್ಬ ಹೊಸ ಮತ್ತು ಗಣನೀಯ ವ್ಯಕ್ತಿಯು ಸೇರಿರುವರೆಂದು ಶ್ರೀ ಮಹಾದೇವ ದೇಸಾಯಿಗಳು, ಹಿಂದೀ ಕವಿಗಳಲ್ಲಿ ಗಣನೀಯರಾದ ಶ್ರೀ ಮೈಥಿಲೀಶರಣರ ವಿಷಯವಾಗಿ 'ಹರಿಜನ' ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ

'ಈ ವರ್ಷದ ಗಾಂಧಿ ಜಯಂತಿಯ ಸಮಯದಲ್ಲಿ ಅನೇಕ ಮಂದಿ ಹೊಸ ನೂಲುವವರು ಮುಂದೆ ಬಂದಿದ್ದಾರೆ. ಅವರಲ್ಲಿ ಮುಖ್ಯರಾದವರು ಹಿಂದಿ ಕವಿಗಳಾದ ಶ್ರೀ ಮೈಥಿಲಿಶರಣ ಗುಪ್ತರು. ಗಾಂಧಿಜಿಯವರ ರಾಜಕೋಟದ ಉಪವಾಸದ ಚಾರಿತ್ರಿಕ ಮಹತ್ವದ ದಿನಗಳಲ್ಲಿ ಅವರೂ ಅವರ ಕುಟುಂಬದವರೂ ನೂಲುವ ಕಾರ್ಯವನ್ನು ಆರಂಭಮಾಡಿದರು. ಅವರು ಒಂದು ಪತ್ರದಲ್ಲಿ ನನಗೆ (ದೇಸಾಯಿಗಳಿಗೆ) ಹೀಗೆಂದು ಬರೆಯುತ್ತಾರೆ

'ನಾನು ಮೊದಲನೆಯ ಸಲವಾಗಿ, ಮಹಾತ್ಮಾಜಿಯವರು ರಾಜಕೋಟದಲ್ಲಿ ಉಪವಾಸವಾಚರಣೆ ಮಾಡಿದಂದು ಚರಕಾ ಹಿಡಿದು ನೂಲಲು ಸುರುಮಾಡಿದೆ. ಆ ಕಾರ್ಯವನ್ನು ಮುಂದುವರಿಸಲು ನೀವು ನನಗೆ ಹೇಳಿದಿರಿ. ನಾನು ಹಾಗೆಯೇ ಮುಂದುವರಿಸಿದೆ. ಆ ಕೆಲಸದಿಂದ ನಾನ ಆನಂದಗೊಂಡಿದ್ದೇನೆ. ಆ ಮೇಲೆ ೭೦ ದಿನಗಳ ಅವಧಿಯಲ್ಲಿ ೭೦,೦೦೦ ಯಾರ್ಡು ನೂಲು ಆಗಬೇಕೆಂದು ಕೇಳಿದಿರಿ. ನನ್ನ ಸಹೋದರ ಮತ್ತು ಆತನ ಹೆಂಡತಿಯೂ ಈ ನೂಲುವ ಯಜ್ಞದಲ್ಲಿ ಸೇರಿದರು.

"ನನಗೆ ದೊಡ್ಡ ಆಕಾಂಕ್ಷೆಯಿತ್ತು. ನಾನು ಕೆಲವು ದಿನಗಳ ಮೊದಲೇ ನನ್ನ ನೂಲುವ ಕೆಲಸ ಮುಗಿಸಿ, ಅದನ್ನು ನೇಯಿಸಿ ವಸ್ತ್ರಮಾಡಿ ಗಾಂಧಿಜಿಯವರಿಗೆ ಕಳುಹಿಸಬೇಕೆಂದಿದ್ದೆ. ನಾನು ನೂತ ವಸ್ತ್ರವನ್ನು ಗಾಂಧಿಜಿಯವರು ಉಡುವ ಸಂದರ್ಭ ಬರಬಹುದು! ಗಾಂಧಿಜಿಯವರು ತಾನು ಮಾಡಿದ ವಸ್ತ್ರವನ್ನು ಉಡುವರೆಂದು ಕೇಳಿದ ಯಾವ ನೂತವನ ಹೃದಯವು ಆನಂದಪರವಶವಾಗಲಾರದು? ನನಗೆ ನೂಲುವ ವಿದ್ಯೆ ಕಲಿಯಲು ಹೆಚ್ಚು ಸಮಯ ಹಿಡಿಯಲಿಲ್ಲ. ನಾನು ಅದರಲ್ಲಿ ಸಾಕಷ್ಟು ನುರಿತವನಾಗಿ ನನ್ನ ಸಂಪೂರ್ಣ ಹೃದಯವನ್ನೆ ಅದರಲ್ಲಿರಿಸುತ್ತಿದ್ದೆ. ದಿನಕ್ಕೆ ಎಂಟೊಂಬತ್ತು ಗಂಟೆ ನೂಲು ಮಾಡಿದೆ. ನನಗೆ ಅದರಿಂದ ಅಮಿತ ಆನಂದವಾಯಿತು. ಈ ಕಾರ್ಯದಲ್ಲಿ ಉದ್ಯುಕ್ತನಾಗಲು ಪ್ರೇರೇಪಿಸಿದ ನಿಮಗೆ ನನ್ನ ಧನ್ಯವಾದಗಳು.'

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಎಂಬ ಹಂಬಲದಿಂದ ದಮ್ಮು ಹತ್ತಿ ಬಳಲುವವನು ತೀವ್ರ ಗುಣವಾಗುವ ಆಶೆಯಿಂದ ಎಂಟು ಹತ್ತು ನಿಮಿಷಗಳಲ್ಲಿಯೇ ದಮ್ಮು ನೆಟ್ಟಗೆ ಆಗುವದು ಎಂದು ಪ್ರತಿಜ್ಞೆ ಕೊಡುವ ಪೇಟಂಟ ಉಪಾಯಗಳನ್ನು ಉಪಯೋಗಿಸಿ ಬೇಸತ್ತು ಹೋಗುತ್ತಾನೆ. ಆದರೆ ದಮ್ಮಿನಂಥ ಕಠಿಣ ಬೇನೆಯನ್ನು ಸಾಂಗೋಪಾಂಗ ಚಿಕಿತ್ಸೆ ಮಾಡದೆ, ಬೇರು ಸಹಿತ ನಾಶಮಾಡಿ ನೆಟ್ಟಗೆ ಆದೀತು ಎಂಬ ಆಶೆ ಹಿಡಿಯುವದು ವ್ಯರ್ಥ.

ದಮ್ಮು ಹತ್ತಿದವನ ಪ್ರಕೃತಿಯು ಒಳಗಿಂದೊಳಗೆ ಕೆಟ್ಟು ಹೋಗಿರುತ್ತದೆ. ದಮ್ಮು ಮಾತ್ರ ಬರೇ ಹೊರಗೆ ತೋರುತ್ತದೆ. ಆದ್ದರಿಂದ ಬಳಲುವದು ಸ್ವಲ್ಪ ವೇಳೆ ಶಾಂತವಾದರೆ ದಮ್ಮು ಗುಣವಾಯಿತು ಎಂದು ಅರ್ಥವಲ್ಲ. ಉಸುರಾಡುವದನ್ನು ನಿಯಮಿತವಾಗಿಯೂ ದೃಢವಾಗಿಯೂ ಮಾಡುವಂಥ ಔಷಧಗಳೇ ದಮ್ಮನ್ನು ನೆಟ್ಟಗೆ ಮಾಡುವವು. ಆದರೆ ಆ ಔಷಧಗಳಿಂದ ಸಂಪೂರ್ಣ ಗುಣವಾಗಬೇಕಾದರೆ ಅವುಗಳ ಜೊತೆಗೆ ನಿಯಮಿತ ಶೌಚಶುದ್ಧಿಯಾಗಿ ಪಚನ ಕ್ರಿಯೆಯು ಸುಧಾರಿಸುವಂಥ ಮತ್ತು ಶಕ್ತಿಯನ್ನು ಹೆಚ್ಚಿಸುವಂಥ ಉಪಾಯವೂ ಆಗಬೇಕು.

ಪುರೋಹಿತ ಶ್ವಾಸಹಾರಿಯಲ್ಲಿ ಇಂಥ ಧರ್ಮಗಳು ಸರಿಯಾಗಿ ಕೂಡಿದ್ದರಿಂದ ದಮ್ಮಿನ ಮೂಲಕಾರಣವನ್ನು ತಿಳಿದು ಅದರ ಮೇಲೆ ತನ್ನ ಪ್ರಭಾವವನ್ನು ತೋರಿಸಿ ಮೆಲ್ಲಮೆಲ್ಲಗೆ ಆದರೆ ಖಂಡಿತವಾಗಿ ದಮ್ಮನ್ನು ನೆಟ್ಟಗೆ ಮಾಡುವ ದಾಕ್ಟರೀಯ ಔಷಧಗಳಲ್ಲಿ ಇದು ಎಷ್ಟೋ ವರ್ಷಗಳಿಂದ ಶ್ರೇಷ್ಠವೆಂದು ಗಣಿತವಾಗಿದೆ. ಆದ್ದರಿಂದ ದಮ್ಮು, ಕೆಮ್ಮು, ಸುಂಯಿಸುಂಯಿ ಇಲ್ಲವೆ ಗಂಟಲು ಉರಿಯುವಂಥ ಕೆಮ್ಮು ಮತ್ತು ಪುಪ್ಫುಸದ ಎಲ್ಲ ವ್ಯಥೆಗಳಿಗೆ ಇದು ಗುಣಮಾಡುವಂಥ ಔಷಧವು ಆಗಿದೆ

ರೂ. ೩, ರೂ. ೧—೪, ರೂ. ೦ ಬೆಲೆಯ ಬಾಟಲಿಗಳಲ್ಲಿ ಎಲ್ಲ ಕಡೆಯಲ್ಲೂ ಸಿಗುತ್ತದೆ.

ಪುರೋಹಿತ ಶ್ವಾಸಹಾರಿ ದಮ್ಮಿಗೆ ಗುಣಕಾರಿ

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆಮಾಡಲಾಗಿದೆ.

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನು ಸರ್ವಿಸುಗಳ ಏರ್ಪಾಡಿದೆ)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬ್ಯಾಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ

5 ಮಂಗಳೂರಿನಿಂದ— ಕಾರ್ಕಳ ಸೋಮೇಶ್ವರ, ಆಂಗುಬೆಗಾಗಿ ಶ್ರಿಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಘಾಳಿಬರಿಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗ್ರಹಗಳಿವೆ.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು

JOINT MANAGERS,

The Combined Booking Agency, MANGALORE

The Joint Booking Office, KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಏದೆಸೋವು ಘಾಯಗಳು, ಚಾಚುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೇಗಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರಿ)ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಂಟ್ಯಾನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಲೀಕಟ್ಟ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆಂಡೇಪಿ.
P. O. Peridepi (ನೆಲ್ಲೂರು ಜಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ - ಅವ್ವಲ್ ತರದ ಗುಡ್ಡು ಮುಡಿಗೆ	1—9—0	1—10—0
,, ದುಯಂ ,, ,,	1—12—0	1—12—0
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,	1—10—0	—
ಅಕ್ಕಿ ಅವ್ವಲ್ ಗುಡ್ಡು ,,	4—13—0	4 14—0
,, ದುಯಂ ,, ,,	4—10—0	4—11—
,, ಅವ್ವಲ್ ಸುಗ್ಗಿ ,,	4—12—0	4—12—
,, ದುಯಂ ,, ,,	4—8—0	4—9—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
,, ಸಿಪ್ಪೆ ಇದ್ದದು ,,	37—8—0	47—0—0
ಕೊಬ್ಬರಿ ಆಫೀಸು ಖಂಡಿಗೆ	57—8—0	—
,, ದಿಲ್‌ಪಸಂದಿ ,,	— —	—
ತೆಂಗಿನ ಎಣ್ಣೆ ಮಣಕ್ಕೆ	3—15—0	3—15—0
ಸಿಪ್ಪೆಯದ್ದ ಅಡಿಕೆ 1000ಕ್ಕೆ	2—8—0	— —
ಗೇರುಬೀಜ ಮುಡಿಗೆ	3—12—0	4—8—0
ಕಬ್ಬಿನ ಬೆಲ್ಲ ಖಂಡಿಗೆ	32—8—0	47—8—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	15—0—0	16—8

ಸ್ವದೇಶಾಭಿಮಾನಿ

ಸಂಪುಟ ೩೩]   ತಾರೀಕು:-೨೪ನೇ ನವಂಬರ ೧೯೩೯   [ಸಂಚಿಕೆ ೪೬



ಫ್ರಾನ್ಸಿನ ವಿಮಾನ ವಿಧ್ವಂಸಕ ಫಿರಂಗಿಗಳು

Date 17-11-1939 Regd. No. M 3406

ವಾರ್ಷಿಕ ಚಂದಾ ರೂ. 2-0-0 | [illegible] ರೂ. 2-13-0

ಸ್ವದೇಶಾಭಿಮಾನಿ

ಸಂಪುಟ 33] ಕಾರ್ತಿಕ 17-11-1939 [ಸಂಚಿಕೆ 45

The Bombay Life Assurance Company, Ltd.,

(Estd. 1908)

COMPARE

our Life Assurance with any other property you possess

What is its Guaranteed Value

If you live-today-a few years more-when you are old?

If you die-to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

MAKE LIFE WORTH-LIVING!

Indigestion — Insomnia — Dry Cough — Nervousness — Weak Heart &c.,

these make you wiery of Life!

CONSULT US AND BUY YOUR LIFE'S HAPPINESS!

Oils — that cool the brain and induce sleep.

Lehas — that build-up your wasted system.

Asavas — that regenerate your jaded nerves.

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬೇಡಿರಿ!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು - ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು

ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ — ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು

ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು

ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ

ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡರಂಗ ನ್ಯಾಕ್, ರಥಬೀದಿ, ಮಂಗಳೂರು.

KANNADA ILLUSTRATED WEEKLY

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

ಸಂಪುಟ ೨೨] ತಾರೀಕು:-೨೪ನೇ ನವಂಬರ ೧೯೩೯ [ಸಂಚಿಕೆ ೪೬



ಫ್ರಾನ್ಸಿನ ವಿಮಾನ ವಿಧ್ವಂಸಕ ಫಿರಂಗಿಗಳು

ಪ್ರಸಿದ್ಧ ಪತ್ರಿಕೆ
ಹಾಸನ ಟವನ್ ೪೧ನೇ ವಾರ್ಷಿಕ ದನಗಳ ಪ್ರದರ್ಶನ

೧ ಮಾಮೂಲಿನಂತೆ ಹಾಸನ ಟವನ್ ಮುನಿಸಿಪಾಲಿಟಿ ಪ್ರದರ್ಶನ ಕ್ಷೇತ್ರದಲ್ಲಿ ಈ ಸಲದ ಪ್ರದರ್ಶನವು ೧೯೩೯ನೇ ಇಸವಿ ಡಿಸೆಂಬರ್ ೫ನೇ ತಾರೀಕು ಮಂಗಳವಾರ ಪ್ರಾತಃಕಾಲದ ಲಾಗಾಯ್ತು ೯ನೆಯ ತಾರೀಕು ಶನಿವಾರ ಪರಿಯಂತರ ನಡಿಯುತ್ತದೆ.

೨ ಪ್ರದರ್ಶನಕ್ಕೆ ಬರತಕ್ಕ ಪ್ರತಿ ರಾಸು ಒಂದಕ್ಕೆ ಎರಡು ಆಣೆಯಂತೆ ಫೀ ವಸೂಲು ಮಾಡಲಾಗುತ್ತದೆ ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲು ಮಾಡುವ ಫೀ ಬಾಬನ್ನು ಮತ್ತು (ಮುನಿಸಿಪಲ್) ಜಾಗದಲ್ಲಿ ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನೂ ಸಹ ತಾರೀಕು ೨೮-೧೧-೩೯ನೇ ಮಂಗಳವಾರ ಮಧ್ಯಾಹ್ನ ೩ ಘಂಟೆ ಲಾಗಾಯ್ತು ಹಾಸನದ ಸಂತೆ ಬಳಿಯಿರುವ ಆಫೀಸಿನಲ್ಲಿ ಬಹಿರಂಗವಾಗಿ ಕ್ಯಾಟಲ್‌ಷೋ ಕಮಿಟಿ ಪ್ರೆಸಿಡೆಂಟರು ಯಾ ಮುನಿಸಿಪಲ್ ವೈಸ್ ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತದೆ ಅಂಗಡಿ-ನಾಟಕ-ಸಿನಿಮಾ ವಗೈರೆಗಳಿಗಾಗಿ ವಿಂಗಡಿಸಿರುವ ಜಾಗಗಳನ್ನು ತಾರೀಕು ೧೫-೧೧-೩೯ರ ಲಾಗಾಯ್ತು ಹಾಸನ ಟವನ್ ಮುನಿಸಿಪಲ್ ಆಫೀಸಿನಲ್ಲಿ ಏಲಂ ಮಾಡಲು ಉಪಕ್ರಮಿಸುತ್ತೆ.

೩ ಪ್ರದರ್ಶನದ ಮೈದಾನದಲ್ಲಿ ಜನ-ಜಾನುವಾರುಗಳಿಗೆ ಸಮೃದ್ಧಿಯಾಗಿ ನೀರು ಮತ್ತು ಜಾನುವಾರುಗಳಿಗೆ ಮೇವಿಗಾಗಿ ಹುಲ್ಲು ಸಹ ದೊರೆಯುತ್ತದೆ—ಅಲ್ಲದೆ ಸ್ಥಳ ನೈರ್ಮಲ್ಯ ವಿಚಾರದಲ್ಲಿಯೂ ಜನ-ಜಾನುವಾರುಗಳ ಆರೋಗ್ಯ ಭಾಗ್ಯ ವಿಷಯದಲ್ಲಿಯೂ ಹೆಚ್ಚು ಗಮನವಹಿಸಿ ನೋಡಿಕೊಳ್ಳಲು ವೈದ್ಯಶಾಲೆಗಳೂ ಪ್ರದರ್ಶನ ಕಾಲದಲ್ಲಿ ಜನಗಳ ಸೌಕರ್ಯಕ್ಕಾಗಿ ಅಲ್ಲಿಯೇ ಹಂಗಾಮಿಯಾಗಿ ಪೋಸ್ಟು ಆಫೀಸು ಮತ್ತು ಜನರಕ್ಷಣೆ ಧನರಕ್ಷಣೆಗಾಗಿ ಪೋಲೀಸಿನವರ ಸಹಾಯವನ್ನೂ ಕಲ್ಪಿಸಲಾಗುತ್ತದೆ.

೪ ಪ್ರದರ್ಶನಕಾಲದಲ್ಲಿ ಉತ್ತಮವಾದ ರಾಸುಗಳಿಗೆ ದೊರೆಯತಕ್ಕ ಬಹುಮಾನವನ್ನೂ ವ್ಯವಸಾಯ ಪ್ರದರ್ಶನ ಲಾಭವನ್ನೂ ಲಾಭಕರವಾದ ಸಾಧನಗಳ ಮತ್ತು ಎಲ್ಲಾ ವಿಧವಾದ ವ್ಯಾಪಾರ ಸೌಕರ್ಯಗಳನ್ನೂ ನಾಟಕ ಸಿನಿಮಾ ವಗೈರೆ ಆಟ ಪಾಟಗಳ ದೃಶ್ಯವನ್ನೂ ಉಪಯೋಗಿಸಿಕೊಂಡು ಲಾಭ ಪಡಿಯಲೆಂದು ಕೋರಿದೆ

೫ ಅಲ್ಲದೆ ಬಹು ದೂರದಿಂದ ಈ ಸಂದರ್ಭದಲ್ಲಿ ವಿಶೇಷವಾಗಿ ಬರತಕ್ಕ ನಮ್ಮ ರೈತ ಬಾಂಧವರ ಸಂತೋಷಾರ್ಥವಾಗಿ ವಿಧವಿಧವಾದ ಆಟ ಪಾಟಗಳನ್ನು ಅವರಿಗಾಗಿ ಏರ್ಪಡಿಸಿ ಅದರಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡಲು ಏರ್ಪಡಿಸಿರುತ್ತದೆ

ಹಾಸನ 4 11 '39 — ಪಿ. ಎಸ್. ರಾಮಸ್ವಾಮಿ, ಪ್ರೆಸಿಡೆಂಟ್

ಕ್ಯಾಟಲ್‌ಷೋ ಕಮಿಟಿ ಟವನ್ ಮುನಿಸಿಪಾಲಿಟಿ ಹಾಸನ.

ತಯಾರಾಗಿವೆ!
1940ನೇ ಇಸವಿಯ
ಶಾರದಾ ಡೈರಿಗಳು
ಸಣ್ಣ ಮತ್ತು ದೊಡ್ಡ ಸೈಜುಗಳಲ್ಲಿ

ಈಗಾಗಲೇ ಮಾರಾಟಕ್ಕೆ ಸಿದ್ಧವಾಗಿವೆ!

ದೊರೆಯುವ ಸ್ಥಳ:—

ಶಾರದಾ ಛಾಪಖಾನೆ, ಮಂಗಳೂರು.

ನಿಮ್ಮ ದೇಹ, ಮಿದುಳು ಮತ್ತು ನರಗಳು ಬಳಲಿದಾಗ

ನಿಮ್ಮ ದೇಹವು ದಣಿದು ಬಳಲುವುದು, ನಿಮ್ಮ ಮಿದುಳು ಆಯಾಸವಡುವುದು, ನರನಾಡಿಗಳು ಅಸ್ವಸ್ಥನಡುವುದು ಇವೆಲ್ಲವು ನಿಮ್ಮ ದಿನನಿತ್ಯದ ಆಹಾರ ಮತ್ತು ಪೋಷಣೆಯು ಸರಿಯಿಲ್ಲವೆಂಬುದರ ಚಿಹ್ನೆಯಾಗಿರುತ್ತದೆ

—ನಿಮ್ಮ ಈ ಆಸಡ್ಡೆ ಮತ್ತು ಬಳಲಿಕೆಯು ಮಾಯವಾಗಬೇಕಾದರೆ ನಿಮ್ಮ ದೇಹ, ಮಿದುಳು ಮತ್ತು ನರನಾಡಿಗಳಿಗೆ ತಕ್ಕದಾದ ಪೋಷಣೆಯು ದೊರೆಯಬೇಕು. ಈ ಪೋಷಣೆಯು ಉತ್ತಮ ಟೋನಿಕಿನ ಗುಣವುಳ್ಳ 'ಓವಲ್ಟೀನ್' ಪಾನೀಯದಲ್ಲಿ ದೊರಕುವುದು

ರುಚಿಕರವಾದ ಈ 'ಓವಲ್ಟೀನ್' ಪಾನೀಯವು ದೇಹಕ್ಕೆ ಉತ್ತಮವೂ ತಕ್ಕದೂ ಆದ ಆಹಾರವಾಗಿರುತ್ತದೆ ಉತ್ತಮ ನಿದ್ರೆ, ಆರೋಗ್ಯವನ್ನು ಸವಿಸಲು ಬಳಿಗ್ಗೆ ಮತ್ತು ರಾತ್ರೆ ಒಂದು ಕಪ್ಪು 'ಓವಲ್ಟೀನ್' ಕುಡಿಯಿರಿ ಇತರ ಪಾನೀಯಗಳನ್ನು ನಿರಾಕರಿಸಿರಿ

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರಲ್ಪಡುವುದು

ವಿತರಣಾಕಾರರು:—

ಜೇಮ್ಸ್‌ರೈಟ್ ಲಿಮಿಟೆಡ್,

149 ಬೋಡ್ಷೆ-ಮದ್ರಾಸು,

ಬೊಂಬಾಯಿ, ಕರಾಚಿ ಮತ್ತು ಕಲ್ಕತ್ತ

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯ'

ಓವಲ್‌ಟಿನ್ ಬಿಸ್ಕತ್ತುಗಳು:

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದವು ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕತ್ತುಗಳು ಇವುಗಳಲ್ಲಿ ಪ್ರತಿಷ್ಠಿತ ಬೆಲೆಯ ಓವಲ್ಟೀನ್ ಸೇರಿರುವುದು 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತವೆ.

OV/34/39

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

24—11—1939] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೪—೧೧—೧೯೩೯

ದೇಶಪ್ರೇಮವಿಲ್ಲದವರು ದೇಶದ ಪ್ರತಿನಿಧಿಗಳಲ್ಲ!

ಜೆಟ್ಲೆಂಡರಿಗೆ ಆಚಾರ್ಯ ಕೃಪಾಲಿನಿಯವರ ಉತ್ತರ

ಲೋರ್ಡ್ ಜೆಟ್ಲೆಂಡರಿಗೆ ಆಚಾರ್ಯ ಕೃಪಾಲನಿಯವರು ಒಂದು ಯೋಗ್ಯ ಉತ್ತರವನ್ನು ಕೊಟ್ಟಿರುವರು. ಕಾಂಗ್ರೆಸಿಗೆ ಜನತೆಯ ಬೆಂಬಲವಿದೆಯೇ ಎಂದು ಜೆಟ್ಲೆಂಡರು ಕೇಳಿದ್ದರು. ಅದಕ್ಕೆ ಉತ್ತರವಾಗಿ ಕೃಪಾಲನಿಯವರು ಹೇಳುತ್ತಾ, 'ಕಾಂಗ್ರೆಸಿನಲ್ಲಿ ಕೇವಲ ಹತ್ತೇ ಮಂದಿಯಾದರೂ, ಭಾರತದ ಹಿತೇಚ್ಛುಗಳಾದವರು ಇದ್ದರೆ ಸಾಕು. ಅವರೇ ನಿಜವಾದ ರಾಷ್ಟ್ರದ ಪ್ರತಿನಿಧಿಗಳು. ಅಂತಹ ಉದ್ದೇಶವೇ ಇಲ್ಲದ ಮಿಲಿಯಾಂತರ ಮಂದಿಯು ಜನತೆಯ ಪ್ರತಿನಿಧಿಗಳೆಂದು ಕರೆಯಲ್ಪಡಲಾರರು' [illegible] ನೆರೆದ ಸಭೆಯಲ್ಲಿ ಕೃಪಾಲನಿಯವರು ಹೀಗೆಂದು ಹೇಳಿದರು:

ಆವರು ಹಿಂದೂಸ್ಥಾನದಲ್ಲಿ [illegible] ಕಪ್ಪಿತ್ತ [illegible] ಮಾತುಗಳನ್ನು ಜನರ ಮಕ್ಕಳು, ಹೆಂಗಸರೆಲ್ಲರೂ ಮೌನದಿಂದ [illegible] ಕಾಂಗ್ರೆಸ ಮಂತ್ರಿಗಳು ರಾಜಿನಾಮೆ ಕೊಟ್ಟ ವಿಷಯವಾಗಿ ಅವರು [illegible] ನಾಡಿದರು. ಕಾಂಗ್ರೆಸು, ಜನತೆಯ ಪ್ರತಿನಿಧಿಯೆಂಬುದನ್ನು ಅತುಲ ಸ್ವಾರ್ಥತ್ಯಾಗಗಳಿಂದ, ಲಾಠೀ ಪೆಟ್ಟುಗಳನ್ನು ತಿನ್ನುವುದರಿಂದ, ಸೆರೆಮನೆಯ ಸಂಕಷ್ಟಗಳನ್ನು ಅನುಭವಿಸುವುದರಿಂದ ಜಗತ್ತಿಗೆ ಸಾರಿದೆಯೆಂದು ಅವರು ವಿವರವಾಗಿ ಹೇಳಿದರು.

'ಜನತೆಯ ಪ್ರತಿನಿಧಿಗಳು ನಾವೆಂಬುದನ್ನೂ, ಕಾಂಗ್ರೆಸಿನ ಕೇಳಿಕೆಯು ಬಲವಂತವೆಂಬುದನ್ನೂ ನಾವು ಪ್ರಮಾಣಪೂರ್ವಕ ತೋರಿಸುತ್ತೇವೆ. ಅವುಗಳನ್ನೆಲ್ಲಾ ಬ್ರಿಟಿಷ್ ಸರಕಾರವು ಅಲ್ಲಗಳೆಯಬಹುದು. ಹೆಚ್ಚಾದರೆ ಒಂದೆರಡು ವರ್ಷಗಳ ವರೆಗೆ ಅಲ್ಲಗಳೆಯಬಹುದು. ಎಂದೆಂದೂ ಹಾಗೆ ಮಾಡಲು ಸಾಧ್ಯವಿಲ್ಲ. ಈಗಾಗಲೇ ಹಿಂದೂದೇಶದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಮೂಲವೇ ಸಮೂಲ ಅಲ್ಲಾಡಿದೆ. ಅದನ್ನು ಸಂಪೂರ್ಣ ಜಾಡಿಸಿಬಿಡುವುದು ಕೆಲವೇ ಸಮಯಗಳ ಅವಧಿ ಮಾತ್ರವಾಗಿದೆ. ಭಾರತವು ಸ್ವಾತಂತ್ರ್ಯವನ್ನು ಬೇಗನೇ ಪಡೆಯುತ್ತದೆಂಬುದರಲ್ಲಿ ಏನೇನೂ ಸಂಶಯವಿಲ್ಲ.

ಕಾಂಗ್ರೆಸು ರಾಷ್ಟ್ರದ ಪ್ರತಿನಿಧಿಯೆಂದು ಜಗತ್ತಿಗೆ ಹೇಗೆ ಸಾರಿದೆ?

ಅತುಲ ಸ್ವಾರ್ಥತ್ಯಾಗಗಳಿಂದ! ಸೆರೆಮನೆಯ ಸಂಕಷ್ಟಗಳಿಂದ!!

ಇಂತಹ ವರ್ತನೆಯು ಲಜ್ಜಾಸ್ಪದವಾದುದು

ರಾಷ್ಟ್ರದ ಸ್ವಾತಂತ್ರ್ಯದ ಕುರಿತು ರಾಯಿಗಳ ಹೇಳಿಕೆ!

ಅವರು ಇಂದಿನ ಅಂತರ್ ರಾಷ್ಟ್ರೀಯ ಪರಿಸ್ಥಿತಿಯ [illegible] ಮಾತನಾಡುತ್ತಾ ಮಹಾತ್ಮಾಜಿಯವರು ಯಾವ ಸಿದ್ಧಾಂತ ಬುದ್ಧಿಯಿಂದ ಬ್ರಿಟನ ಪ್ರಾಸ್ತ್ಯಗಳಿಗೆ ಬೆಂಬಲ ಕೊಟ್ಟಿರುವರೆಂದು ವಿವರಿಸಿದರು. ಹೇಳುತ್ತಾ ಕಾಂಗ್ರೆಸು ಮಹಾತ್ಮಾಜಿಯವರಷ್ಟು ತಾತ್ವಿಕ ದೃಷ್ಟಿಯುಳ್ಳದ್ದಾಗಿಲ್ಲವೆಂದೂ, ಕಾಂಗ್ರೆಸಿಗೆ, ಬ್ರಿಟಿಷರ ಯುದ್ಧ ಉದ್ದೇಶವೇನೆಂದು ಸ್ಪಷ್ಟವಾದರೆ, ಅವರ ಆ ಕಾರಣಗಳನ್ನೇ ತನ್ನ ಕಾರಣವಾಗಿ ಮಾಡಿ ಕಾದಾಡಲು ಇಚ್ಛಿಸುತ್ತದೆಯೆಂದೂ ಹೇಳಿದರು.

'ನಮ್ಮ ಸ್ವಾತಂತ್ರ್ಯವನ್ನು ಯಾರಿಗೂ ಕೂಡಾ ನಮ್ಮಿಂದ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಅದು ಹೋಗುವುದಿದ್ದರೆ ನಮ್ಮ ಆತ್ಮವಂಚನೆಯಿಂದ ಮಾತ್ರ' ಎಂದರು.

'ನಾವು ನಮ್ಮನಮ್ಮೊಳಗೆ ಅಭಿಪ್ರಾಯ ಭೇದಗಳನ್ನು ಮರೆತು ಸ್ವಾತಂತ್ರ್ಯದ ಹಾದಿಯಲ್ಲಿ ತೀವ್ರದಿಂದ ಮುಂದುವರಿಯಬೇಕು. ಮುಂದೆ ಹೋಗುವ ಪಕ್ಷ ಹಿಂದೆ ಹೋಗುವ ಪಕ್ಷಗಳನ್ನು ಮರೆತು ಬಿಡಬೇಕು. ಭೀಕರ ರಾಷ್ಟ್ರೀಯ ಸಮಸ್ಯೆಯ ಪರಿಹಾರಕ್ಕಾಗಿ ಒಂದೇ ಉದ್ದೇಶದಿಂದ ಒಂದು ರಾಷ್ಟ್ರಧ್ವಜದ ನೆರಳಲ್ಲಿ ನಾವು ನಿಲ್ಲಬೇಕು' ಎಂದರು.

ಯುದ್ಧವಾದ ಮೇಲೆ ಸ್ವಾತಂತ್ರ್ಯವೆಂಬುದು ಕೇವಲ ಹುಚ್ಚು ಹೇಳಿಕೆ!

ಎಂ ಎನ್ ರಾಯಿಗಳ ಧೀರೋಕ್ತಿ

'ಇಂಡಿಪೆಂಡೆಂಟ್ ಇಂಡಿಯಾ'ದಲ್ಲಿ ಇತ್ತೀಚೆಗೆ ಒಂದ ಲೇಖನ ಬರೆಯುತ್ತಾ ಶ್ರೀ. ಎಂ ಎನ್ ರಾಯಿಗಳು ಯುದ್ಧವಾದ ಮೇಲೆ ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂಬ ಕಾಂಗ್ರೆಸಿನ ಕೇಳಿಕೆಯು ಕೇವಲ ಹುಚ್ಚುತನವೆಂದು ಬರೆಯುತ್ತಾರೆ

'ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತವು ಬೇರೆಯಾಗುವ ಹಾಗೆ ಸ್ವಾತಂತ್ರ್ಯದ ಆದರ್ಶವನ್ನು ಇಟ್ಟುಕೊಂಡು, ಯುದ್ಧವಾದ ಮೇಲೆ ಅಂತಹ ಸ್ವಾತಂತ್ರ್ಯವನ್ನು ಬ್ರಿಟನು ಭಾರತಕ್ಕೆ ಕೊಡಬಹುದು ಎಂದು ತಿಳಿಯುವದು ತಪ್ಪು; ರಾಜಕೀಯ ವಿಜ್ಞಾನ ಕುಶಲನು ಬ್ರಿಟಿಷ್ ಸರಕಾರವು ಆ ರೀತಿಯ ಸಾಧ್ಯವಾದ ಪ್ರಕಟಣೆ ಮಾಡಲು ಸಿದ್ಧವಾದೀತೆಂದು ಖಂಡಿತವಾಗಿಯೂ ತಿಳಿದುಕೊಳ್ಳಲು ಯಾವ ರೀತಿಯ ಆಸ್ಪದವೂ ಇರುವುದಿಲ್ಲ. ಭಾರತವನ್ನು ಬಿಟ್ಟುಕೊಡಲು ಬ್ರಿಟನು ತಯಾರಿಲ್ಲ.

'ಹೇಗಿದ್ದರೂ, ವೈಸರಾಯರ ಇತ್ತೀಚೆಯ ಹೇಳಿಕೆಯನ್ನು ಕೇಳಿದ ಮೇಲಂತೂ, ಆ ರೀತಿಯ ಕೇಳಿಕೆಯನ್ನು ಕಾಂಗ್ರೆಸು ತಿರಿಗಿ ಕೇಳುವುದರಲ್ಲಿ ಅರ್ಥವೇ ಇಲ್ಲ. ವಿಷಮಕಾಲದಲ್ಲಿ, ಭಾರತದ ಮುಖಂಡರು ಸಂಪೂರ್ಣ ನಿಶ್ಚಯವಾದ ಕಾರ್ಯಸಾಧನೆಗಾಗಿ ಬೇಗನೇ ತಯಾರಿ ಮಾಡಿರಬೇಕಾಗಿದೆ. ಬ್ರಿಟಿಷ್ ಸರಕಾರವು ನಮ್ಮ ಕೇಳಿಕೆಗಳನ್ನು ಕೊಟ್ಟು ನಮಗೆ ಹಿತಮಾಡಲಾರದು. ನಿಜವಾಗಿ ನಮಗೆ ಸ್ವಾತಂತ್ರ್ಯ ಬೇಕಿದ್ದರೆ ಅದಕ್ಕೆ ಒಂದೇ ಒಂದು ಕೆಲಸ ಮಾಡಬೇಕಾಗಿದೆ; ಎಂದರೆ ಅದಕ್ಕಾಗಿ ಹೋರಾಡಬೇಕಾಗಿದೆ, ಅದಲ್ಲದೆ ಬೇರೆ ಮಾರ್ಗವಿಲ್ಲ.'

ಮುಸ್ಲಿಮರು ಬ್ರಿಟಿಷ್ ಸರಕಾರಕ್ಕೆ ಶರಣಾಗುವುದಲ್ಲ!

ಅಲ್ಪಸಂಖ್ಯಾಕ ಸಮಸ್ಯೆಯ ಕುರಿತು ಮುಸ್ಲಿಂ ಧುರೀಣರ ಹೇಳಿಕೆ!

ಬೀಹಾರಿನ ಮುಸ್ಲಿಂ ಇಂಡಿಪೆಂಡೆಂಟ್ ಪಕ್ಷದ ಮುಖಂಡರಾದ ಮೌಲಾನಾ ಅಬುಲ್ ಮೊಹಸಿನ್ ಮಹಮ್ಮದ್ ಸಜದರು ಒಂದು ಪ್ರಕಟಣೆಯಲ್ಲಿ ಅಲ್ಪಸಂಖ್ಯಾಕರೂ, ಭಾರತದ ಸ್ವಾತಂತ್ರ್ಯವೂ ಎಂಬ ಕುರಿತು ಹೀಗೆಂದು ಬರೆಯುತ್ತಾರೆ.

'ಹಿಂದೂದೇಶದ ಸ್ವಾತಂತ್ರ್ಯದ ಸಮಸ್ಯೆಗೆ ಹಿಂದೂ ಮುಸ್ಲಿಂ ಐಕ್ಯಸಮಸ್ಯೆಯಾಗಲಿ, ಅಲ್ಪಸಂಖ್ಯಾಕ ಸಮಸ್ಯೆಯಾಗಲಿ ಆತಂಕವಾಗಬಾರದು. ಅಲ್ಪಸಂಖ್ಯಾಕರ ಪ್ರತಿನಿಧಿಗಳೆಂಬವರು ತಮ್ಮ ಸಂಗಡದ ಪಕ್ಷಬಾಧ್ಯತೆಗಳ ರಕ್ಷಣೆಗಾಗಿ ಬ್ರಿಟಿಷ್ ಸರಕಾರದ ಕಾಲು ಹಿಡಿದಿರುವರು. ಇಂತಹ ಕಾರ್ಯವು ನಿಜವಾಗಿಯೂ ಲಜ್ಜಾಸ್ಪದವಾದುದ.

'ಮುಂದಕ್ಕೆ ಹಿಂದೂದೇಶದ ಆಡಳಿತದ ವಿಷಯವಾಗಿ ಅನೇಕ ಸಮಸ್ಯೆಗಳು ಬರಬಹುದು. ಅನಂತರ ಒಳಗಿನ ಆಡಳಿತೆ ಮತ್ತು ಬಹುಸಂಖ್ಯಾಕ ಅಲ್ಪಸಂಖ್ಯಾಕರ ಸಮಸ್ಯೆಗಳು ಸಹಜವಾಗಿ ಪರಿಹಾರವಾಗಬೇಕಾದ ವಿಷಯಗಳೇ ಆಗಿವೆ. ಆದರೆ ಪ್ರತಿಯೊಂದು ಅಲ್ಪಸಂಖ್ಯಾಕರ ಸಂಗಡವೂ, ಆ ಅಲ್ಪಸಂಖ್ಯಾಕರ ಸಂಗಡದ ಪ್ರತಿಯೊಬ್ಬ ವ್ಯಕ್ತಿಯೂ ತೃಪ್ತಿಹೊಂದುವವರೆಗೆ ಸ್ವಾತಂತ್ರ್ಯವು ಸಾಧ್ಯವಿಲ್ಲವೆನ್ನುವುದಕ್ಕೆ ಅರ್ಥವಿಲ್ಲ. ಜಗತ್ತಿನಲ್ಲಿ ಇಂತಹ ಅಭಿಪ್ರಾಯಕ್ಕಿಂತ ಹೀನ ತರದ ವಿಚಾರವು ಬೇರೊಂದು ಇರಲಾರದು.'

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

ಸ್ವದೇಶಾಭಿಮಾನಿ

ತಾರೀಖು 24-11-1939

ಹಿಟ್ಲರನ ವಿಪತ್ತುಗಳು!

ಇಂದು ಕೇಳಿ ಬರುತ್ತಿರುವ ವಾರ್ತೆಗಳನ್ನು ವಿಚಾರಿಸಿದರೆ ನಾಜಿಗಳು ಜರ್ಮನಿಯಲ್ಲಿ ವಿಶೇಷವಾದ ವಿಪತ್ತಿನ ಸಂದನಲ್ಲಿ ಸಿಲುಕಿರುವರೆಂದು ತಿಳಿದು ಬರುವುದು. ಈಗಿನ ಹಿಟ್ಲರ್ ಸರಕಾರದೊಳಗೆಯೇ, ಅಧಿಕಾರವನ್ನು ಏರಲು ಬಯಸುವ ಪಂಗಡವೊಂದು ಮೇಲೆದ್ದು ಜರ್ಮನಿಯಲ್ಲಿ ಕ್ರಾಂತಿಯನ್ನು ತರುವ ಸೂಚನೆಗಳು ತಲೆದೋರಿವೆ. ಹಿಟ್ಲರನು ಹಿಡಿದೊತ್ತಿದ ಜೆಕೊಸ್ಲೊವೇಕಿಯದಲ್ಲಿ ಇಂದಿನ ಐರೋಪ್ಯ ಯುದ್ಧವು ಆರಂಭವಾದ ಮುಹೂರ್ತದಿಂದ ತೊಡಗಿ, ಜರ್ಮನಿಗೆ ವಿರುದ್ಧವೆದ್ದಿರುವ ಉಗ್ರ ಕ್ರಾಂತಿಯು, ನಾಜಿಗಳ ಭಯಂಕರ ತಡೆದರ್ಪಗಳು ನಡೆಯುತ್ತಿದ್ದರೂ ಏನೇನೂ ಅಡಗಿರುವಂತೆ ಕಂಡುಬರುವುದಿಲ್ಲ. ಪ್ರೇಗಿನಲ್ಲಿ ಮೊನ್ನೆ ಹಲವು ಮಂದಿ ದೇಶಾಭಿಮಾನಿಗಳಾದ ಯುವಕರು ಒಂದು ಮೆರವಣಿಗೆ ಮಾಡಿದರು; ಅದರ ಪರಿಣಾಮವಾಗಿ, ಅವರಲ್ಲಿ ಒಂಬತ್ತು ಮಂದಿ ಸ್ವಾತಂತ್ರ್ಯದ ಬಲಿವೇದಿಯಲ್ಲಿ ಆಹುತಿಯಾದರು! ಡಾ|| ಬೆನೆಸರಿಗೆ ಸಂಬಂಧಿಸಿ ಚಳವಳವು ಅಲ್ಲಿ ಆರಂಭವಾಗಿದೆಯೆಂದು ಬರ್ಲಿನ್ ಪತ್ರಿಕೆಗಳೇ ಒಪ್ಪಿರುತ್ತವೆ. ಜೆಕ್ಕರು ತಮ್ಮ ತಲೆ ಮೆಟ್ಟಿ ನಿಂತು ದರ್ಪದಿಂದ ಆಳುವ ನಾಜಿಗಳ ಏಕೈಕ ಪ್ರಭುತ್ವಕ್ಕೆ ಎಷ್ಟರ ಮಟ್ಟಿಗೆ ಕುದಿಯುತ್ತಿದ್ದಾರೆಯೆಂಬುದು ಇದರಿಂದಲೇ ವಿದಿತವಾಗುವುದು. ಆದರೆ ಜೆಕ್ಕರು ತಾವೇ ತಾವಾಗಿ ಸ್ವತಂತ್ರರಾಗಲು, ನಾಜೀ ಪ್ರಭುತ್ವದ ವಿನಾಶವನ್ನು ಮಾಡಲು ಶಕ್ತಿಯುಳ್ಳವರಾಗಿಲ್ಲ. ಅವರಿಗೆ ಇರುವ ಒಂದೇ ಒಂದು ದಾರಿಯೆಂದರೆ, ತಮ್ಮ ಪರವಾಗಿ ನಾಜಿಗಳ ಜರ್ಮನಿಯಲ್ಲಿಯೇ ಸಹಾನುಭೂತಿಯು ಹೆಚ್ಚುವಂತೆ ಮಾಡುವುದು. ಇದರಿಂದ ಇಂದಿನ ಪ್ರಭುತ್ವಕ್ಕೆ ಎದುರಾಗಿ ಜರ್ಮನರೇ ಕತ್ತಿಕಟ್ಟಿ ನಿಲ್ಲುವಂತೆ ಆಗಬಹುದು. ಇಂತಹ ಅತೃಪ್ತಿಯ ಚಿಹ್ನೆಗಳು ಈಗಾಗಲೇ ಅಲ್ಲಿನ ರಾಜಕೀಯ ಅಧಿಕಾರೀ ಪಂಗಡದಲ್ಲಿ ಮತ್ತು ಸಾಮಾನ್ಯ ಜನತೆಯಲ್ಲಿಯೂ ಹರಡಿರುವುದನ್ನು ಕಾಣಬಹುದಾಗಿದೆ.

ಆದರೆ, ಬ್ರಿಟಿಷ್ ಪತ್ರಿಕೆಗಳೇ ಪ್ರಕಟಿಸುವ ಸುದ್ದಿಗಳನ್ನು ನೋಡುತ್ತಿರುವಂತೆ, ಇದುವರೆಗಾದರೂ, ಜರ್ಮನಿಯಲ್ಲಿ ಹಿಟ್ಲರನನ್ನು ಅಧಿಕಾರದಿಂದ ಉರುಳಿಸುವ ನಾಜೀ ವಿರುದ್ಧ ಆಂದೋಲನವು ಇಂದೂ ಪೂರ್ತಿಗೊಂಡಿರುವುದಾಗಿ ಕಂಡುಬರುವುದಿಲ್ಲ. ಇಂದೂ ಹಿಟ್ಲರನು ಜರ್ಮನಿಯಲ್ಲಿ ಜನಪ್ರಿಯನೇ ಆಗಿದ್ದಾನೆ. ಕೆಲಕಾಲದಲ್ಲಿ ಒಂದು ದಂಗೆಯು ಏಳಲೇಬೇಕೆಂಬುದರ ಚಿಹ್ನೆಗಳು ಮಾತ್ರ ತೋರುತ್ತಿದೆ. ಜರ್ಮನಿಯ ಅಧಿಕಾರದಲ್ಲಿರುವವರು, ನಾಜೀ ಪಕ್ಷದ ಮುಖಂಡರೂ ಅನ್ಯೋನ್ಯ ಭಿನ್ನಾಭಿಪ್ರಾಯದವರಾಗಿರುವರೆಂದು ತಿಳಿಯುತ್ತದೆ. ಉದಾಹರಣೆಗಾಗಿ, ಸೈನ್ಯವು ಮೆಲ್ಲನೇ ಮುಂದುವರಿಯುತ್ತಿದೆ. ಆದರೆ ನಾಜೀ ತೀವ್ರ ಗಾಮಿ ಮುಂದಾಳುಗಳು ಅದನ್ನು ಸಹಿಸುವುದಿಲ್ಲ. ಕಳೆದವರ್ಷ ಯುದ್ಧಮಂತ್ರಿಯಾಗಿ ದಳಪತಿ ಪದದಲ್ಲಿದ್ದ ಜನರಲ್ ವಾನ್ ಬ್ಲಾಂಬರ್ಗ್ ಎಂಬವನನ್ನು ಗುಂಡಿಕ್ಕಿ ಕೊಂದಿರುವುದಾಗಿಯೂ, 150 ಮಂದಿ ಆಫೀಸರರನ್ನು ಸೆರೆಮನೆಗೊಯ್ದಿರುವುದಾಗಿಯೂ ವಾರ್ತೆಯಿದೆ. ಅಷ್ಟು ಮಾತ್ರವಲ್ಲದೆ, ಜರ್ಮನಿಯಲ್ಲಿ ಹಿಂದಿನ ಚಕ್ರವರ್ತಿಯ ವಂಶದವರನ್ನು ತಿರುಗಿ ಸಿಂಹಾಸನದಲ್ಲಿ ಏರಿಸುವ ಒಂದು ಪಕ್ಷದ ಪ್ರಚಾರವೂ ಪ್ರಬಲದಿಂದ ಸಾಗುತ್ತಿದೆ. ಮಾಜಿ ಕೈಸರನ ಮಗನನ್ನೇ ಸೆರೆಮನೆಯಲ್ಲಿಟ್ಟಿರುವುದರಿಂದ ಆ ಕುರಿತು ನಾಜಿಗಳೂ ಎಚ್ಚರ ತೆಗೆದುಕೊಂಡಿರುವರಾಗಿಯೂ ತಿಳಿಯಬಹುದು. ಹೀಗೆಯೇ ಬವೇರಿಯದ ಪಂಗಡದವರೂ ನಾಜಿಗಳ ಕುರಿತು ಅತೃಪ್ತರಾಗಿರುವರು. ಅಂತೂ ಕಡೆಗಿನ ಒಂದು ನಿರ್ಣಯವೇನೆಂದರೆ, ಇಂದು ಜರ್ಮನಿಯಲ್ಲಿ, ನಾಜಿ ಆಡಳಿತದಲ್ಲಿ, ಎಲ್ಲಾ ವಿಧದಿಂದಲೂ ಅತೃಪ್ತಿ, ಅಸಮಾಧಾನಗಳು ತುಂಬಿವೆಯೆಂಬುದು ಈಗ ವಿರುದ್ಧ ಅಂದೋಲನವು ಸಾಮೂಹಿಕ ರೀತಿಯಿಂದ ಆರಂಭವಾಗದಿದ್ದರೂ, ಅದರ ಅಂತರ್ಜ್ವಾಲೆಯು ಯಾವಾಗ ಹೊರಧುಮುಕುವುದೆಂದು ಹೇಳಬರುವುದಿಲ್ಲವೆಂಬುದಾಗಿದೆ. ನಾಜಿಗಳ ಸಾಹಸಕ್ಕೆ ಎಂದು ಅಂತ್ಯವು ಕಾದಿದೆಯೋ ಎಂದು ನಿರೀಕ್ಷಿಸಬಹುದಾಗಿದೆ.

ಹಿಟ್ಲರನು ರಷ್ಯದೊಡನೆ ಒಪ್ಪಂದ ಮಾಡಿಕೊಂಡು ಏನೇನೂ ಲಾಭಹೊಂದಲಿಲ್ಲ; ಬದಲಾಗಿ ವಿಪತ್ತಿಗೇ ಗುರಿಯಾಗಿರುವನೆಂದು ಜನರು ಅಸಮಾಧಾನಗೊಂಡಿರುತ್ತಾರೆ ಅದು ಮಾತ್ರವಲ್ಲದೆ ಮೊನ್ನೆ ತಾನೇ ಇಟಲಿ ಮತ್ತು ಸ್ಪೈನುಗಳು ತಟಸ್ಥ ರಾಷ್ಟ್ರಗಳಾದ ಬೆಲ್ಜಿಯಂ ಹಾಲೆಂಡುಗಳ ವಿಷಯದಲ್ಲಿ ಜರ್ಮನಿಯು ತೊಂದರೆಗೆ ಹೋಗಕೂಡದೆಂದು ಕೊಟ್ಟ ಎಚ್ಚರಿಕೆಯ ವಿಷಯವು ಗಮನಾರ್ಹವಾಗಿದೆ. ಜಗತ್ತಿನ ಈ ದ್ವಂದ್ವಗಳು ಹಿಟ್ಲರ್ ಮುಸಲನಿಗಳು ಹೀಗೆ ಭಿನ್ನವಾಗಿರುವಂತೆ ಕಂಡುಬರುವುದು ಕುತೂಹಲವನ್ನು ಹುಟ್ಟಿಸತಕ್ಕ ವಿಷಯವೇ ಆದುದು. ಇದರ ಭವಿಷ್ಯದ ಕುರಿತು ಇಂದು ಅವಸರವಾಗಿ ಯಾವ ನಿರ್ಧಾರವನ್ನೂ ಹೇಳಬರುವುದಿಲ್ಲ. ಆದರೆ ಇಟಲಿಯು ಯುದ್ಧವು ಪಶ್ಚಿಮ ದಿಕ್ಕಿನಲ್ಲಿ ವಿಸ್ತರಿಸುವುದನ್ನು ಖಂಡಿತವಾಗಿ ಅಪೇಕ್ಷಿಸುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಬೆಲ್ಜಿಯಂ ಹಾಲೆಂಡುಗಳ ಮೇಲೆ ಜರ್ಮನಿಯ ಆಕ್ರಮಣವೆಂದರೆ ಇಂದಿನ ಈ ಸ್ಥಿತಿಯನ್ನು ಎಲ್ಲಾ ತಲೆಕೆಳಗು ಮಾಡಿದಂತೆ ಎಂಬುದೇ ಅರ್ಥ. ಅದು ಜೀವನ ಮತ್ತು ಮರಣದ ಸಂಗ್ರಾಮವಾಗಿ ಪರಿಣಮಿಸಬಹುದು. ಅಂತಹ ಸಂದರ್ಭದಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುವ ಇಟಲಿಯೂ ಯುದ್ಧದಿಂದ ದೂರನಿಲ್ಲುವುದು ಸಾಧ್ಯವಾಗಲಾರದು. ಇನ್ನೊಂದು ವಿಷಯವೇನೆಂದರೆ, ಸಹಜವಾಗಿ ತನ್ನ ಗೆಳೆಯನಾದ ಹಿಟ್ಲರನಿಗೆ ಈ ಯುದ್ಧದಲ್ಲಿ ಅಪಜಯವಾಗಬಾರದೆಂದು ಇಟಲಿಯು ಅಪೇಕ್ಷಿಸಿದ್ದು, ಜರ್ಮನಿಯು ಬೇರೆ ದ್ವೇಷಗಳನ್ನು ಈ ಸಂದರ್ಭದಲ್ಲಿ ಕಟ್ಟಿಕೊಳ್ಳಬಾರದೆಂದು ಈ ಸೂಚನೆಯನ್ನು ಕೊಟ್ಟಿದ್ದರೂ ಇರಬಹುದು. ಏಕೆಂದರೆ ಜರ್ಮನಿಯು ಅಪಜಯ ಹೊಂದಿದರೆ, ಮುಂದಕ್ಕೆ ಯೂರೋಪಿನಲ್ಲಿ ಬೋಲ್ಶೆವಿಸಮಿನ ಪ್ರವಾಹವೇ ಹರಿದೀತೆಂದು ಮುಸಲನಿಯು ಅಂಜಿಕೊಂಡಿದ್ದಾನೆ. ಇದೇ ರಷ್ಯದ ವಿರುದ್ಧವಾಗಿ ಇಟಲಿಯು ವಹಿಸಿದ ಪ್ರಚಾರದ ಹಾಗೂ ಬಾಲ್ಕನ್ ರಾಷ್ಟ್ರಗಳ ತಾಟಸ್ಥ್ಯದಲ್ಲಿ ಅದು ವಹಿಸಿದ ಪ್ರಾಮುಖ್ಯ ಪಾತ್ರಗಳ ಗುಟ್ಟಾಗಿರುತ್ತದೆ. ಮುಸಲನಿಯು ಯಾವ ಅಭಿಪ್ರಾಯದಿಂದಲೇ ಈಗ ಹೀಗೆ ಅಡ್ಡಬಂದು ನಿಂತಿದ್ದರೂ ಹಿಟ್ಲರನು ಇದರಿಂದ ದಿಗ್ಭ್ರಾಂತನಾಗುವುದರಲ್ಲಿ ಸಂಶಯವಿಲ್ಲ. ಹೇಗಿದ್ದರೂ ಹಿಟ್ಲರನಿಗೆ ಅಮಂಗಳದ ಕಾಲವು ಬಂದಿದೆ!

ಕಮಲಾ ನೆಹರುಗಳ ಸ್ಮಾರಕ

ಅಂತಹ ಸೌಭಾಗ್ಯದ ಸುಪ್ಪತ್ತಿಗೆಯಲ್ಲಿದ್ದು, ರಾಷ್ಟ್ರದ ಅಪಾರ ಸಂಕಷ್ಟಗಳನ್ನು ಕಂಡು ವ್ಯಥೆಗೊಂಡ ನೆಹರುದಂಪತಿಗಳು ಕಳೆದ ಸತ್ಯಾಗ್ರಹ ಆಂದೋಲನಗಳ ಸಮಯದಲ್ಲಿ ಮಾಡಿದ ಸ್ವಾರ್ಥತ್ಯಾಗ, ದೃಢಸಂಕಲ್ಪ ಇವುಗಳು ಯಾವ ರಾಷ್ಟ್ರೀಯ ಯುವಕಯುವತಿಯರನ್ನು ಜಡನಿದ್ರೆಯಿಂದ ಹೊಡೆದೆಬ್ಬಿಸಲಿಕ್ಕಿಲ್ಲ? ಜನ್ಮಭೂಮಿಯ ಸೇವೆಗೆಂದೇ ಅರ್ಪಿತವಾದ ಅವರಿಬ್ಬರ ಜೀವನವು ಯಾರಿಗೆ ಆದರ್ಶವೆನಿಸಲಿಕ್ಕಿಲ್ಲ? ಆದರೆ ಶ್ರೀಮತಿ ಕಮಲಾ ನೆಹರುಗಳು, ಜವಾಹಿರಲಾಲರೇ ತಮ್ಮ ಆತ್ಮಕಥೆಯಲ್ಲಿ ವಿವರಿಸಿದಂತೆ, ಅವರಿಗೆ ಯಾವಾಗ ತಮ್ಮ ಧರ್ಮಪತ್ನಿಯ ನೆರವು ಬೇಕಿತ್ತೋ ಅ ಪ್ರಾಯದಲ್ಲಿ ಅವರನ್ನು; ಕೈಹಿಡಿದ ಪತಿಯನ್ನು ಕೈಬಿಟ್ಟುಹೋದರು. ಏಕಮಾತ್ರ ಪುತ್ರಿಕುಮಾರಿ ಇಂದಿರೆಯನ್ನು ಮಾತೃ ವಿರಹಿತರನ್ನಾಗಿ ಮಾಡಿ, ಹೀಗೆ ಸಮಸ್ತ ಭಾರತವನ್ನೇ ಅಪಾರ ದುಃಖದಲ್ಲಿ, ಕಂಬನಿಯ ಕಡಲಲ್ಲಿ ಅದ್ದಿಹೋದರು.

ಆ ವೀರ ಭಾರತ ಪುತ್ರಿಯ ಸ್ಮಾರಕವಾಗಿ ಈಗ ಅಲ್ಲಹಾಬಾದಿನಲ್ಲಿ ಒಂದು ಚಿಕಿತ್ಸಾಲಯವು (Matermity) ನಿರ್ಮಿತವಾಗಲು ಮೊನ್ನೆ ಮಹಾತ್ಮಾಜಿಯವರ ಅಮೃತಹಸ್ತದಿಂದ ಅದರ ಮೂಲ ಶಿಲಾರ್ಪಣವಾಯಿತು. ಕಾಯ್ಯಾದಿನ ದೀನರ ಕುರಿತು, ದುಃಖಿತರ ಕುರಿತು ದಿನನಿತ್ಯ ನರಳುತ್ತಿರುವ ಸಾವಿರಾರು ಮಂದಿ ನಿರ್ಭಾಗ್ಯರ ಕುರಿತು ಯಾರು ಜೀವಂತರಾಗಿದ್ದಾಗ ಬಹಳ ಮನಕರಗುತ್ತಿದ್ದರೋ, ಅಂತಹ ಕಮಲಾ ನೆಹರುಗಳ ಚಿರಸ್ಮಾರಕವಾಗಿ, ಇಂತಹ ಚಿಕಿತ್ಸಾಲಯವೊಂದು ಮಹಾತ್ಮಾಜಿಯವರ ಸಲಹೆಯಂತೆ ಏರ್ಪಟ್ಟದ್ದೂ, ಮಹಾತ್ಮಾಜಿಯವರೇ ಅದರ ಮೂಲ ಶಿಲಾರ್ಪಣ ಮಾಡಿದ್ದೂ ಸಮಂಜಸವೂ, ಮಹತ್ವವೂ ಆದ ವಿಷಯವಾಗಿದೆ! ಆ ಚಿಕಿತ್ಸಾಲಯದ ರಚನೆ, ಏರ್ಪಾಡುಗಳಿಗಾಗಿ ನಿಶ್ಚಯಮಾಡಿದ್ದ ೫,೦೦,೦೦೦ ರೂಪಾಯಿಗಳಲ್ಲಿ ಅರ್ಧಾಂಶದಷ್ಟು ಈಗಾಗಲೇ ಒಟ್ಟು ಸೇರಿದ್ದು, ಮುಂದಕ್ಕೆ ನಿಶ್ಚಿತ ಮೂಲಧನಕ್ಕೆ ಮಿಕ್ಕಿಯೇ ಹಣವು ಶೀಘ್ರವಾಗಿ ಆ ದೇಶಸೇವಕರ ವಿಷಯದಲ್ಲಿ ಭಾರತೀಯರಿಗಿರುವ ಅಭಿಮಾನ ಗೌರವಗಳು ವ್ಯಕ್ತವಾಗಲಿ ಎಂದು ಹಾರೈಸುವುದರೊಡನೆ, ಪುಣ್ಯಜೀವಿನಿಯಾಗಿದ್ದ ಅವರ ಆತ್ಮಕ್ಕೆ ಶಾಂತಿವಿಶ್ರಾಂತಿಗಳನ್ನು ದೇವರು ದಯಪಾಲಿಸಲಿ ಎಂದು ಬಯಸುತ್ತೇವೆ.

ಕರ್ನಾಟಕ ಸಾಹಿತ್ಯಪರಿಷದಧ್ಯಕ್ಷರು

ಈ ವರ್ಷ ದಶಂಬರದಲ್ಲಿ ಬೆಳಗಾವಿಯಲ್ಲಿ ಜರಗುವ ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನವು ಕರ್ನಾಟಕದ ವಯೋವೃದ್ಧ ದೇಶಭಾಷಾಭಿಮಾನಿಗಳಾದ ಶ್ರೀ. ಮುದವೀಡು ಕೃಷ್ಣರಾಯರಿಂದ ಅಲಂಕೃತವಾಗಲಿದೆಯೆಂಬ ವಿಷಯವು ಅಖಿಲ ಕರ್ನಾಟಕಕ್ಕೆ ಆನಂದದ ಸಂಗತಿಯಾಗಿದೆ. ನಾಡನುಡಿಗಳ ಸೇವೆಗಳಿಗಾಗಿ ವ್ಯಯಿಸಲಾಗಿರುವ ಜೀವ ಅವರದು; ಕನ್ನಡದಲ್ಲಿ ಬಹಳ ಗ್ರಂಥಗಳನ್ನು ಬರೆದಿರುವ ತೀವ್ರಬುದ್ಧಿಯ ಸಾಹಿತ್ಯ ನಿರ್ಮಾಣಕರ್ತರು ಹಲವರಿದ್ದಾರೆ. ಆದರೆ ಅವರ ಎಷ್ಟೋ ಪುಸ್ತಕಗಳನ್ನು ಜನತೆಯು ಓದಿ ಕಂಡು ಕೇಳಿ ಅರಿಯದಿರಬಹುದು. ಕಂಡ ಹಲವು ಪುಸ್ತಕಗಳು ಜನತೆಯ ಹೃದಯವನ್ನು ಮುಟ್ಟುವ ಯೋಗ್ಯತೆಗೆ ಬಂದಿರದೆಯೂ ಇರಬಹುದು; ಆದರೆ ಶ್ರೀ. ಮುದವೀಡು ಕೃಷ್ಣರಾಯರ ಸೇವೆಯನ್ನು ಆ ಸಮಗ್ರ ಕರ್ನಾಟಕದ ಜನತೆಯು ತಿಳಿದಿದೆ. ಅವರ ಗಂಡು ಧ್ವನಿಯು ಕನ್ನಡದ ಎಲ್ಲೆಎಲ್ಲೆಗಳಲ್ಲಿ ಗುಡುಗಿ ಜನತೆಗೆ ಚೇತನಕೊಟ್ಟಿದೆ. ಕಾಯ್ಯಾದಿನ ಕುರಿತು ಅವರ ಅಭಿಮಾನ ಹೃದ್ಗತಗಳನ್ನು ಶ್ರೀ. ರಾಯರ ಪ್ರಚಂಡ ವಾಗ್ವೈಖರಿಯ ಮೂಲಕ ಆ ಬಾಲವೃದ್ಧರಾದಿಯಾಗಿ ಸರ್ವರೂ ಹೀರಿ ಹೀರಿ ಪರವಶರಾಗಿದ್ದಾರೆ. ಸಹಜವಾಗಿ ಇಂದಿನ ಇಳಿಪ್ರಾಯದ ಸಮಯದಲ್ಲಿಯೂ ಕೂಡಾ ತರುಣರನ್ನು ಮೀರಿಸುವ ಅವರ ಉತ್ಸಾಹಗಳು ಕನ್ನಡ ಲೋಕವನ್ನೇ ಬೆರಗುಮಾಡಿವೆ!

ಇವರು ಕನ್ನಡದ ಸೇವೆಯಲ್ಲಿ ಬಹಳವಾಗಿ ಜೀವ ಸವೆದವರು! ಇಂತಹವರನ್ನು ಅಧ್ಯಕ್ಷಪೀಠಕ್ಕೆ ಆರಿಸುವುದರಿಂದ ಕರ್ನಾಟಕ ಸಾಹಿತ್ಯ ಪರಿಷತ್ತು ತನ್ನನ್ನೇ ತಾನು ಗೌರವಿಸಿಕೊಂಡಿದೆ! ಅಧ್ಯಕ್ಷಪೀಠದಿಂದ ಹೊರಡುವ ಶ್ರೀ. ರಾಯರ ಸಿಂಹನಾದವು ಕನ್ನಡಿಗರಲ್ಲಿ ನೂತನ ಚೈತನ್ಯವನ್ನು ಹುಟ್ಟಿಸಬಹುದೆಂದು ನಾವು ಹಾರೈಸಬಹುದಾಗಿದೆ.

ರಶ್ಯದ ಸಂಶೋಧನಾ ಸಂಸ್ಥೆಯಲ್ಲಿ ಒಬ್ಬ ಭಾರತೀಯ ಅಧಿಕಾರಿ!

—ಶ್ರೀ. ಕೆ. ಎಸ್. ರಾಮಯ್ಯನವರು—

[ರಶ್ಯದ ಮೋಟರು ವಾಹನಗಳ ಉದ್ಯೋಗ ವ್ಯವಸಾಯದಲ್ಲಿ ಪ್ರಾಮುಖ್ಯ ಅಧಿಕಾರವನ್ನು ವಹಿಸಿರುವ ಶ್ರೀ ಕೆ. ಎಸ್. ರಾಮಯ್ಯನವರ ವಿಷಯ ಬಹುಮಂದಿ ಭಾರತೀಯರಿಗೆ ಗೊತ್ತಿಲ್ಲ! ಆದರೆ ಅವರು ಅಲ್ಲಿ ಅಂತಹ ಅಧಿಕಾರದಲ್ಲಿ ಇರುವರೆಂದು ಕೇಳಿ ಯಾವ ಭಾರತೀಯನು ತಾನೆ ಹೆಮ್ಮೆಪಡಲಾರನು?]

ಮೊಸ್ಕೋ ಪಟ್ಟಣದಿಂದ ಉತ್ತರದಲ್ಲಿರುವ ಸುಪ್ರಸಿದ್ಧ ಮೋಟಾರು ವಾಹನ ಮೊದಲಾದುವುಗಳ ಕಾರ್ಖಾನೆಯೊಂದನ್ನು ಸಂದರ್ಶಿಸಿ ಅಲ್ಲಿನ ಮುಖ್ಯ ಅಧಿಕಾರಿಯವರಿಂದ ಕೇಳಿದರೆ, ಶ್ರೀ ಕೆ ಎಸ್ ರಾಮಯ್ಯನೆಂಬ ಭಾರತೀಯನೊಬ್ಬನನ್ನು ನೀವು ತಿಳಿಯುವಿರಿ! ಕೆಲವು ವರ್ಷಗಳ ಹಿಂದೆ ಮದ್ರಾಸು ಪ್ರಾಂತದ ಉಯ್ಯೂರು ಎಂಬಲ್ಲಿನ ಬೀದಿಯಲ್ಲಿ ಬರಿಗಾಲಿನಲ್ಲಿ ಅಲೆಯುತಿದ್ದ ಒಬ್ಬ ಹುಡುಗನು ವಿದೇಶಕ್ಕೆ ವಿಜಯಯಾತ್ರೆ ಮಾಡಿ ಅಲ್ಲಿ ಈ ಅಧಿಕಾರಕ್ಕೆ ಏರಿರುವನೆಂದರೆ ಯಾರಾದರೂ ಬೆಚ್ಚಿ ತಲೆದೂಗಬೇಕಾದ ವಿಷಯವಾಗಿದೆ

ಕೋಲಾಚಲ ಸೀತಾರಾಮಯ್ಯನವರು ತನ್ನ ಎಳೆ ಪ್ರಾಯದಲ್ಲಿ ಮದ್ರಾಸಿನಲ್ಲಿ ಅನಿಬಿಸೆಂಟರು ಸ್ಥಾಪಿಸಿ, ರಾಗೋಪರರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ನೇಶನಲ್ ಯುನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ ಹೊಂದಿದರು. ೧೯೨೨ರಲ್ಲಿ ಅವರು ಅನೇಕ ಸಂಕಷ್ಟಗಳನ್ನು ಅನುಭವಿಸಿ, ಅಮೇರಿಕಕ್ಕೆ ಹೋಗಿ, ಅಲ್ಲಿ ಷಿಕಾಗೋ ಯುನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ ಮಾಡಿ ೧೯೨೪ರಲ್ಲಿ ವಿಜ್ಞಾನದಲ್ಲಿ ಪದವಿಯನ್ನು ಪಡೆದರು ಆ ಮೇಲೆ ನ್ಯೂಯೊರ್ಕಿನಲ್ಲಿ ಡಾಕ್ಟರ್ ಒಫ್ ಫಿಲಾಸಫಿ ಡಿಗ್ರಿಯನ್ನು ಹೊಂದಿದ ಮೇಲೆ ಆರ್ಥಿಕ ದುರವಸ್ಥೆಯಿಂದ ಅವರು ವಿದ್ಯಾಭ್ಯಾಸವನ್ನು ಅಲ್ಲಿಯೇ ಮುಗಿಸಬೇಕಾಯಿತು. ವಿದ್ಯಾಭ್ಯಾಸವನ್ನು ಮುಗಿಸಿದವರೇ ಸಹಜವಾಗಿ ಉದ್ಯೋಗವನ್ನು ಅರಸಿದರು. ಮೊದಲನೆಯದಾಗಿ ಪೆಟ್ರೋಲಂ ಎಣ್ಣೆ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದರು. ಕಷ್ಟಕೆಲಸಗಳನ್ನು ಮಾಡುವುದರಲ್ಲಿ ಅವರಿಗೆ ಆಯಾಸವೇ ಇರಲಿಲ್ಲ. ಸಣ್ಣದಿರುವಾಗ ಅನೇಕ ಕಷ್ಟಗಳನ್ನು ಅವರು ಅನುಭವಿಸಿದ್ದರು.

ರಶ್ಯವು ಮನಸೆಳೆಯಿತು

ರಶ್ಯದ ಇತಿಹಾಸವನ್ನು ಕೇಳಿ, ಜಗತ್ತಿಗೆ ಆದರ್ಶನಾದ ಒಂದು ಜೀವನವು ಅಲ್ಲಿ ನಡೆಯುತ್ತಿದೆಯೆಂಬುದನ್ನು ತಿಳಿದು ಅಲ್ಲಿಗೆ ಹೋಗಬೇಕೆಂದು ಅವರ ಮನಸ್ಸು ತವಕಿಸಿತು. ಹಾಗಾಗಿ ೧೯೩೧ರಲ್ಲಿ ಅವರು ರಶ್ಯಕ್ಕೆ ಹೋದರು. ತನ್ನ ಹಲವು ಸಮಯಗಳ ಹಂಬಲವನ್ನು ತೀರಿಸಿಕೊಂಡು ಸುಖದಿಂದ ದುಡಿದು ಜೀವನ ಮಾಡಲು ಆರಂಭಿಸಿದರು.

ಮೊದಲನೆಯದಾಗಿ ರಶ್ಯದಲ್ಲಿ ಪೆಟ್ರೋಲಂ ಸಂಶೋಧನಾ ಸಂಸ್ಥೆಯ ಮುಖ್ಯಾಧಿಕಾರಿಗಳಾಗಿ ನೇಮಕ ಹೊಂದಿದರು ೩೦ ಮಂದಿ ಎಂಜಿನಿಯರು, ವೈಜ್ಞಾನಿಕ ಕೆಲಸಗಾರರ ಮೇಲಧಿಕಾರಿಗಳಾಗಿದ್ದರು ಇಲ್ಲಿ ಕೆಲಸಮಾಡುತ್ತಿದ್ದಂತೆ ಬೇರೆ ಬೇರೆ ಕಡೆಗಳಿಗೆ ಅವರನ್ನು ಸಲಹೆ ಸೂಚನೆಗಳನ್ನು ಕೇಳಲು ಅಲ್ಲಿನವರು ಆಮಂತ್ರಿಸುತ್ತಿದ್ದರು

ಆ ಮೇಲೆ ಅವರು ಇಂದಿನ ಈ ಉದ್ಯೋಗದಲ್ಲಿ ನೇಮಕ ಹೊಂದಿದರು ಮೋಟರು ವಾಹನಾದಿಗಳನ್ನು ಮಾಡುವ ಕಾರ್ಖಾನೆಯ ಮುಖ್ಯ ಅಧಿಕಾರಿಗಳಾಗಿದ್ದಾರೆ. ಇವರ ಕೈಕೆಳಗೆ ಹಲವು ಮಂದಿ ಎಂಜಿನಿಯರು ಕೆಲಸಮಾಡುತ್ತಿದ್ದಾರೆ.

ಈ ಕಾರ್ಖಾನೆಯು ಇಡೀ ರಶ್ಯದಲ್ಲಿ ಪ್ರಾಮುಖ್ಯ ಸಂಸ್ಥೆಯಾಗಿದೆ ಒಂದು ಸಾವಿರಕ್ಕೆ ಮಿಕ್ಕಿದ ಕೆಲಸದವರು ಇಲ್ಲಿ ದುಡಿಯುತ್ತಿದ್ದಾರೆ ಇಲ್ಲಿನ ಹಲವು ಸಂಶೋಧನಾತ್ಮಕವಾದ ಕಾರ್ಯಗಳೆಲ್ಲವೂ ಶ್ರೀ ರಾಮಯ್ಯನವರ ಮೇಲ್ವಿಚಾರಣೆಯಿಂದಲೇ ನಡೆಯುತ್ತದೆ

ಶ್ರೀ ಸೀತಾರಾಮಯ್ಯನವರು ದೃಢಶರೀರಿಗಳಾಗಿದ್ದಾರೆ ಬೂದು ಬಣ್ಣದವರು, ತಲೆಯಲ್ಲಿ ಬಿಳಿ ತಲೆಗೂದಲು ಬಂದಿವೆ ಪ್ರಾಯದಲ್ಲಿ ಇಂದು ನಲ್ವತ್ತರ ಗಡಿಗೆ ತಲಪಿದಬಹುದು ಅವರು ರಶ್ಯದ ಒಂದು ಕುಲೀನ ಹೆಂಗುಸನ್ನು ಮದುವೆಯಾಗಿದ್ದಾರೆ ಒಬ್ಬಳೊ ಪ್ರಾಯಕ್ಕೆ ಒಂದ ಮಗಳು ಇದೆ, ಅವಳೂ ವಿಜ್ಞಾನವನ್ನು ಕಲಿಯುತ್ತಿದ್ದಾಳೆ

ಒಮ್ಮೊಮ್ಮೆ ಬಿಡುವಿದ್ದಾಗ ಸಂಜೆ ಹೊತ್ತಿಗೆ ಶ್ರೀ ಸೀತಾರಾಮಯ್ಯನವರು ತನ್ನ ಮನೆಯಲ್ಲಿ, ತುಂಬ ಪುಸ್ತಕಗಳಿರುವ ತನ್ನ ಓದುವ ಕೋಣೆಯಲ್ಲಿ ಕುಳಿತುಕೊಂಡು, ರಸಾಯನ. ಪದಾರ್ಥ ವಿಜ್ಞಾನ, ಎಂಜಿನೀಯರಿಂಗ್, ಭಾರತೀಯ ತತ್ವ ಗ್ರಂಥಗಳೆ ಮೊದಲಾದ ಬೇರೆ ಬೇರೆ ವಿಷಯಗಳ ಕುರಿತು ಓದುತ್ತಾ ಇರುತ್ತಾರೆ!

ರಶ್ಯದಲ್ಲಿ ಇಂತಹ ಪ್ರಾಮುಖ್ಯ ಅಧಿಕಾರದಲ್ಲಿ ಒಬ್ಬ ಭಾರತೀಯ ಕುಶಲ ಕಾರ್ಯಪಟುವು ಇರುವುದು ಯಾರಿಗೆ ತಾನೇ ಅಭಿಮಾನವೆನಿಸಲಾರದು?

HALFTONE & LINE
BLOCK MAKING
UNDERTAKEN
Sharada Press,
MANGALORE





ಕಮ್ಯೂನಿಸಂ ಮತ್ತು ನಾಜಿಸಂಗಳು ಒಂದೇ ದಾರಿ ಹಿಡಿದಿವೆ?

ರಶ್ಯಾ-ಜರ್ಮನ್ ಒಪ್ಪಂದದ ಗುಟ್ಟು!

ಹಿಟ್ಲರನ ಪತನವೇ ಸ್ಟಾಲೀನನ ಗುರಿ!

[ಯೂರೋಪಿನ ಇತ್ತೀಚಿಯ ಘಟನೆಗಳಲ್ಲಿ ಜರ್ಮನಿ ಮತ್ತು ರಶ್ಯದ ಒಪ್ಪಂದದ ಮಾತು, ಪ್ರಪಂಚದ ಎಲ್ಲೆಡೆಗಳಲ್ಲಿಯೂ ವಾದದ ವಿಷಯವಾಗಿದೆ. ಹಿಟ್ಲರ್-ಸ್ಟಾಲಿನ್ ಇಬ್ಬರೂ ಬೇರೆ ಬೇರೆ ರಾಜಕೀಯ ತತ್ವದವರಾದರೂ ಹೇಗೆ ಒಪ್ಪಂದವಾದರೂ ಎಂಬುದು ಸಮಸ್ಯೆಯಾಗಿದೆ. ಆದುದರಿಂದ ಆ ಕುರಿತು ತಿಳಿಯಬೇಕಾದರೆ ಸ್ಟಾಲಿನನ ಕಮ್ಯೂನಿಸಂ ತತ್ವ ಹಾಗೂ ಹಿಟ್ಲರನ ನಾಜಿಸಂಗಳ ವಿಷಯವಾಗಿ ತಿಳಿಯುವುದು ಆವಶ್ಯ ಮತ್ತು ವಿಚಾರಣೀಯವಾಗಿದೆ.]

ಜರ್ಮನಿಯಲ್ಲಿ ಹಿಟ್ಲರನು ಅಧಿಕಾರ ವೇರಿದ ಮೇಲೆ, ನಿರಂತರವಾಗಿ ರಶ್ಯದ ಕಮ್ಯುನಿಸ್ಟ್ ತತ್ವದ ಮೇಲೆ ರೇಗಿ ರೊಚ್ಚಿಗೇಳುತ್ತಿದ್ದವನು, ಇಂದು ಅದರೊಡನೆ ಒಪ್ಪಂದ ಮಾಡಿಕೊಂಡನೆ? ಆದರೆ ಈಗಿನ ಕೆಲವು ವರ್ಷಗಳ ನಾಜೀ ತತ್ವ ಮತ್ತು ಕಮ್ಯುನಿಸ್ಟ್ ತತ್ವಗಳ ಬೆಳವಣಿಗೆಯನ್ನು ವಿಚಾರಮಾಡಿದರೆ ಅವುಗಳೆರಡೂ ಒಂದು ಮಹಾ ಪ್ರವಾಹಕ್ಕೆ ಸೇರುವ ಸೂಚನೆಯು ತೋರಿ ಬರುತ್ತಿತ್ತು. ಮುಂದಿನ ಪ್ರಪಂಚದ ರಾಜಕೀಯದಲ್ಲಿ ರಶ್ಯಾ ಜರ್ಮನಿಗಳು ಯಾವ ರೂಪವನ್ನು ಹೊಂದುವವೆಂಬುದು ಆವಶ್ಯ ಆಲೋಚನೀಯವಾಗಿದೆ.

ಹೋಲಿಕೆಗಳು

ಈ ಎರಡು ರಾಷ್ಟ್ರಗಳ ಆಡಳಿತದಲ್ಲಿ ಹಲವು ಹೋಲಿಕೆಗಳಿವೆ. ಮೊದಲನೆಯದಾಗಿ ಈ ಎರಡು ರಾಷ್ಟ್ರಗಳ ಅಧಿಕಾರಗಳು ಸರ್ವಾಧಿಕಾರಿಗಳ ಕೈಕೆಳಗಿವೆ. ಎರಡು ರಾಷ್ಟ್ರಗಳಲ್ಲಿಯೂ ಪಕ್ಷಗಳೇ ಅಧಿಕಾರವನ್ನು ವಹಿಸುವವು. ಈ ಪಕ್ಷಗಳ ಆಡಳಿತಕ್ಕೆ ಇತಿಮಿತಿಯೆಂಬುದಿಲ್ಲ. ಒಂದು ರೀತಿಯಿಂದ ಅದು ಪಕ್ಷಗಳ ಆಡಳಿತವಾಗಿ ಪ್ರಜಾಪ್ರಭುತ್ವವೆಂದು ಊಹಿಸಬಹುದಾದರೂ, ಬೇರೆ ಕಡೆಯ ಪ್ರಜಾಪ್ರಭುತ್ವಕ್ಕೂ ಅಲ್ಲಿನದಕ್ಕೂ ವಿಶೇಷ ವ್ಯತ್ಯಾಸವಿದೆ. ಬೇರೆ ಕಡೆಗಳಲ್ಲಿ ವಿರೋಧ ಪಕ್ಷಕ್ಕೆ ಸ್ಥಾನವಿದೆ. ಪ್ರಜೆಗಳು ರಾಜಕೀಯ ಭಿನ್ನತೆಯನ್ನು ಸಾರಬಹುದು. ಆದರೆ ರಶ್ಯ ಜರ್ಮನಿಗಳಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕೆ ಎದುರಾಗಿ ನಿಂತವರು ಗುಂಡಿನೇಟಿಗೆ ಆಹುತಿಯಾಗುವರು!

ಅಲ್ಲಿ ವ್ಯಕ್ತಿಗಳ ಕಾರ್ಯ ಅಭಿಪ್ರಾಯಗಳೆಲ್ಲವೂ ಸರಕಾರಕ್ಕೆ ಅನುಗುಣವಾಗಿ ಬದಲಾಗಬೇಕಾಗುತ್ತದೆ. ನಿನ್ನೆ ಸದಾಚಾರವಾಗಿದ್ದುದು ಇಂದು ಅನಾಚಾರವಾಗಿ ಪರಿಣಮಿಸಬಹುದು. ಕಳೆದ ವರ್ಷದಲ್ಲಿ ಕಮ್ಯುನಿಸಮನ್ನು ಹಿಟ್ಲರನು ದ್ವೇಷಿಸುತ್ತಿದ್ದುದರಿಂದ ಅದರ ಕುರಿತು ಸಹಾನುಭೂತಿ ತೋರಿಸಿ ಬಂದೇ ಒಂದು ಮಾತನ್ನೂ ಯಾರೂ ಆಡಕೂಡದಿತ್ತು! ಆದರೆ ಇಂದು ಅವರಿಬ್ಬರೂ ಭುಜಕ್ಕೆ ಭುಜಕೊಟ್ಟು ಇದ್ದಾರೆ. ರಶ್ಯದಲ್ಲಿಯೂ ಹೀಗೆಯೇ ಆಗಿದೆ.

ಆದರೆ ಕೆಲವು ವಿಷಯಗಳಲ್ಲಿ ಒಂದು ರೀತಿಯಿಂದ ವ್ಯತ್ಯಾಸಗಳೂ ಕಂಡು ಬರುವುದುಂಟು. ಮುಖ್ಯವಾಗಿ ರಶ್ಯದ ಕ್ರಾಂತಿಯಲ್ಲಿ, ಕೂಡಲೇ ಬಂಡವಾಳ ಶಾಹಿಯು ಕುಸಿದು ಬಿದ್ದು, ಎಲ್ಲಾ ಸೊತ್ತು ಸರಕಾರದ ವಶವಾಯಿತು. ಸ್ವಂತ ಆಸ್ತಿ ಆಡಳಿತ, ಕಾರಬಾರಗಳು ಉಳಿಯಲಿಲ್ಲ. ಆದರೆ ನಾಜೀಗಳು ಅಧಿಕಾರಕ್ಕೆ ಬಂದ ಕೂಡಲೇ ಹಾಗೆ ಮಾಡಲಿಲ್ಲ. ಅವರು ಅಪ್ರತ್ಯಕ್ಷವಾಗಿ ಈ ಬಂಡವಾಳ ಶಾಹಿಯ ಮೇಲೆ ಸಂಪೂರ್ಣ ಅಧಿಕಾರವನ್ನು ಇಟ್ಟುಕೊಂಡರು. ಹೀಗಿದ್ದರೂ ಸರಕಾರವನ್ನು ಯಾವುದೇ ರೀತಿಯಿಂದಲಾಗಲಿ ವಿಕ್ಕಿ ನಡೆಯದಂತೆ ಅವರು ಎಲ್ಲಾ ಆಡಳಿತೆಯವರ ಮೇಲೆ ತಮ್ಮ ವಜ್ರಮುಷ್ಟಿಯನ್ನು ಬಿಗಿದು ಹಿಡಿದಿದ್ದಾರೆ.

ಆದುದರಿಂದ ಸ್ವಂತ ಸಾಹಸ ಮಾಡುವವರಿಗೆ ನಾಜೀ ಜರ್ಮನಿಯಲ್ಲಿ ಎಡೆಯಿದೆ. ಆದರೆ ಅದರ ಲಾಭದ ಅಂಶ ಮಾತ್ರ ಸರಕಾರದ ಬೊಕ್ಕಸಕ್ಕೆ ಬೀಳಬೇಕು. ಆದರೆ ಇತ್ತೀಚೆಗೆ ಮಾಡಿದ ಕೆಲವು ನಿಬಂಧನೆಗಳು ರಶ್ಯದ ಕಮ್ಯುನಿಸಂಗಿಂತ ಹೆಚ್ಚು ವ್ಯತ್ಯಾಸದಿಂದಿರುವುದಿಲ್ಲ. ರಶ್ಯದಲ್ಲಿ ಎಲ್ಲಾ ಕಾರ್ಯಗಳು ಕೂಲಿಗಾರರ ಪರವಾಗಿ, ಅವರ ಏಳಿಗಾಗಿ ಇರುವುದೆಂಬ ಪ್ರಚಾರವು ಹೆಚ್ಚಾಗಿ ಇದೆ. ಹೀಗಿದ್ದರೂ ಈ ಎರಡು ರಾಷ್ಟ್ರಗಳಲ್ಲಿ ಸರಕಾರಕ್ಕೆ ನಿರಂಕುಶ, ಅಧಿಕಾರವು ಮಾತ್ರ ಇದೆ. ಇವುಗಳ ಕ್ರಮಗಳ ಬೇರೆ ಬೇರೆಯಾಗಿದ್ದರೂ ಪರಿಣಾಮವು ಒಂದೇ ಆಗಿದೆ.

ಸ್ವಂತ ಆಸ್ತಿ ಮತ್ತು ವ್ಯಕ್ತಿ ಹಕ್ಕುಗಳು

ನಾಜೀ ಜರ್ಮನಿಯಲ್ಲಿ ಹಿಂದೆ ಇದ್ದಂತೆ ಇಂದೂ ಸ್ವಂತ ಆಸ್ತಿ, ಕಾಮಗಾರಿಕೆಗಳಿಂದ ಲಾಭ ಪಡೆಯಲು ಆಸ್ಪದವಿದ್ದರೂ, ಆ ಲಾಭದ ಉಪಯೋಗದ ವಿಷಯದಲ್ಲಿ ಮಾತ್ರ ಸರಕಾರವು ಬಹಳ ನಿಯಮಗಳನ್ನಿಟ್ಟಿದೆ. ಆದರೆ ರಶ್ಯದಲ್ಲಿ ಸ್ವಂತ ಆಸ್ತಿಯೇ ಇಲ್ಲದೇ ಇದ್ದು ಕೆಲ ಸಮಯ ನಡೆದರೂ ಇತ್ತೀಚೆಗೆ ಸ್ವಲ್ಪ ಮಟ್ಟಿಗೆ ಸ್ವಂತ ಆಸ್ತಿಯನ್ನಿಟ್ಟು ಕೆಲಸ ಮಾಡುವ ಅಧಿಕಾರವನ್ನು ವ್ಯಕ್ತಿಗಳಿಗೆ ಕೊಡುವ ಕಾರ್ಯವು ನಡೆದಿದೆ. ಹೆಚ್ಚು ಸಾಮರ್ಥ್ಯವುಳ್ಳವರು, ಉದ್ಯೋಗಶಾಲಿಗಳು ಇತರರಿಗಿಂತ ಹೆಚ್ಚು ಸಂಪಾದನೆ ಮಾಡಲು ಎಡೆಯಾಗಿದೆ. ರಶ್ಯದಲ್ಲಿ ದಿನದಿಂದ ದಿನಕ್ಕೆ ವ್ಯಕ್ತಿ ಸ್ವಾತಂತ್ರ್ಯವು ಹೆಚ್ಚಾಗುತ್ತದೆ.

ಹೀಗೆ ವ್ಯಕ್ತಿ ಹಕ್ಕು ಮತ್ತು ಸ್ವಂತ ಆಸ್ತಿಯ ಪದ್ಧತಿಯು ರಶ್ಯದ ಸಮತಾವಾದದ ತತ್ವಕ್ಕೇ ವಿರೋಧವಾದುದು. ಹೀಗಿದ್ದರೂ ಇಂದು ನಾಜಿ ಮತ್ತು ಕಮ್ಯುನಿಸಂ ತತ್ವಗಳು ಹೀಗೆ ಏಕಮುಖವಾಗಿ ಕೂಡಿಬರುವ ಕುರುಹು ಮಾತ್ರ ಇದರಿಂದ ಒಡೆದು ಕಾಣುತ್ತದೆ.

ಸೊತ್ತು ಸರಕಾರದ ವಶವೇ ಆಗಬೇಕು

ರಶ್ಯದಲ್ಲಿದ್ದಂತೆ, ಸೊತ್ತು ಸಂಪೂರ್ಣ ಸರಕಾರದವಾಗಿದ್ದು, ಜರ್ಮನಿಯಲ್ಲಿರುವಂತೆ, ಸೊತ್ತಿನ ಉಪಯೋಗದ ಪ್ರಯೋಜನವು ಸರಕಾರದ ಅಧೀನಲ್ಲಿದ್ದು, ಬಂಡವಾಳಶಾಹಿಯು ಇಷ್ಟರಿಂದ ಮುರಿಯುವಂತಾಗಿ, ಕೂಲಿಗಾರರಿಗೆ ಹೆಚ್ಚಿನ ಪ್ರಯೋಜನವೊದಗಿದೆಯೆಂದು ಮೇಲಿಂದ ಮೇಲೆ ನಿರೀಕ್ಷಿಸುವವನು ಹೇಳಬಹುದು. ಆದರೆ ಈ ಎರಡು ರಾಷ್ಟ್ರಗಳ ಯುದ್ಧಸಿದ್ಧತೆಗಳಿಗಾಗಿ ವೆಚ್ಚವಾಗುವ ಹಣದಿಂದಲಾಗಿ, ಕೂಲಿಗಾರರ ಹೊಟ್ಟೆಗೆ ಯಾವ ರೀತಿಯಿಂದಲೂ ಹಿಂದಿಗಿಂತ ಹೆಚ್ಚು ಅನ್ನ ಸಿಗುವಂತಾಗಲಿಲ್ಲ. ಆದುದರಿಂದ ಸ್ವಂತ ಸಾಹಸಮಾಡಿ ಸಂಪಾದನೆ ಮಾಡುವವರಿಗೂ ತೊಂದರೆಯಾದಂತಾಯಿತಲ್ಲದೆ, ಬಡವರಿಗೆ ಯಾವ ರೀತಿಯಲ್ಲಿಯೂ ಉಪಕಾರವಾಗಲಿಲ್ಲ.

ಸಂಸ್ಕೃತಿಯ ಹೋಲಿಕೆ

ಹೀಗೆ ಈ ಎರಡು ರಾಷ್ಟ್ರಗಳ ರಾಜಕೀಯ ಆರ್ಥಿಕಸ್ಥಿತಿಗತಿಗಳಲ್ಲಿ ಹೋಲಿಕೆಯಿದ್ದಂತೆ ಸಂಸ್ಕೃತಿಯ ಕ್ಷೇತ್ರದಲ್ಲಿಯೂ ಹೋಲಿಕೆಗಳಿವೆ. ಈ ಉಭಯ ರಾಷ್ಟ್ರಗಳ ಮುಖ್ಯ ಸಂಸ್ಕೃತಿಯೆಂದರೆ, ಬಲ, ಹಿಂಸೆ, ದರ್ಪವೇ ಆಗಿದೆ. ಸೈನ್ಯದ ಆಳುವಿಕೆಯಲ್ಲಿಯೇ ಎರಡು ರಾಷ್ಟ್ರಗಳು ನಡೆಯುತ್ತವೆ. ಈ ಹಿಂಸಾಬಲ ಪ್ರದರ್ಶನದ ತತ್ವಗಳಿಗೆ ಕಾರಣವೆಂದರೆ, ಅವುಗಳ ರಾಜಕೀಯ ಅಭಿಪ್ರಾಯಗಳನ್ನು ವಿರೋಧಿಸುವ ಇತರ ರಾಷ್ಟ್ರಗಳ ಮೇಲೆ ಅವುಗಳಿಗಿರುವ ಮಹತ್ತರವಾದ ದ್ವೇಷವೇ ಆಗಿದೆ. ಈ ದ್ವೇಷಬುದ್ಧಿಯಿಂದ ಈ ಉಭಯ ರಾಷ್ಟ್ರಗಳೂ ಇಂದು ಜಗತ್ತಿನ ಬೇರೆ ರಾಷ್ಟ್ರಗಳ ವಿರುದ್ಧ ಒಂದಾಗಿ ಮಾಡಿದೆ.

ಮೂಲಭೂತ ಭಿನ್ನತೆಗಳು

ರಶ್ಯದಲ್ಲಿ ಇಂದು ಉದ್ಯೋಗದ ಆಡಳಿತೆಯು ಕೂಲಿಗಾರರ ವಶವಿದೆ. ಆದರೆ ಜರ್ಮನಿಯಲ್ಲಿ ವಂಶಪರಂಪರೆಯಿಂದ ಬಂದ ಜನರಿಗೇ ಇದೆ. ಈ ಜನರ ಬುದ್ಧಿ ವಿಚಾರಗಳೂ ರಶ್ಯದಂತೆ ತೀರಾ ಮಾರ್ಪಾಟಾಗಲಿಲ್ಲ.

ಹೀಗಿದ್ದರೂ ಈ ಉಭಯ ರಾಷ್ಟ್ರಗಳು ಹೀಗೆ ಹೆಚ್ಚಿನ ಮಟ್ಟಿಗೆ ಹೋಲಿಕೆಯುಳ್ಳವುಗಳೇ ಆಗಿವೆ. ಇತ್ತೀಚೆಗೆ ನಡೆದ ಒಪ್ಪಂದವು ಈ ತರದ ಹೋಲಿಕೆಗಳ ಕುರುಹು ಆಗಿದೆ.

ಈ ದೃಷ್ಟಿಯಿಂದ ವಿಚಾರಿಸಿದರೆ ಸ್ಟಾಲಿನನ ಇಂದಿನ ಧೋರಣೆಯನ್ನು ಅರ್ಥಮಾಡಬಹುದು. ಹಿಟ್ಲರನ ಜನರು ಕಮ್ಯುನಿಸಮ್ಮನ್ನು ಅಂಗೀಕರಿಸಲು ತಯಾರಿರುವರೆಂದು ಅವನು ತಿಳಿದಿದ್ದಾನೆ. ಈ ತಿಳುವಳಿಕೆಯಿಂದಲೇ ಹಿಟ್ಲರನಿಗೆ ಸ್ಟಾಲಿನನು ಸಹಾಯ ಹಸ್ತವನ್ನಿತ್ತು, ಲೋಕಕಂಟಕ ಕಾರ್ಯದಲ್ಲಿ ಮುಂದೊತ್ತುವಂತೆ ಪ್ರೋತ್ಸಾಹಿಸಿರುತ್ತಾನೆ

ಹಿಟ್ಲರನ ಅಂತ್ಯವೇ ಸ್ಟಾಲಿನನ ಧ್ಯೇಯ

ಸ್ಟಾಲಿನನಿಗೆ, ಎಲ್ಲರಿಗಿಂತಲೂ ಮೊದಲೇ ಇಂದಿನ ಯುದ್ಧದಲ್ಲಿ ಹಿಟ್ಲರನು ನಿರ್ನಾಮವಾಗುವನೆಂದು ಗೊತ್ತು. ಜರ್ಮನಿಯಂತಹ ಮಹತ್ತಾದ ರಾಷ್ಟ್ರದಲ್ಲಿ ತನ್ನ ತತ್ವವಾದ ಕಮ್ಯುನಿಸಮನ್ನು ಹರಡಲು ಅದೇ ಆತನಿಗೆ ಯೋಗ್ಯ ಸಂದರ್ಭವಾದೀತು! ಇದೇ ಹಿಟ್ಲರನಿಗೆ ಸ್ಟಾಲಿನು ಕೊಡುವ ಪ್ರೋತ್ಸಾಹದ ಗುಟ್ಟು!

ಬರುವ ವಾರದ ಕತೆ:

ಪಗನಲಾಲನ ★ ★ ಆತ್ಮೋದ್ಧಾರ!

ಓದಲು ಮರೆಯಬೇಡಿರಿ

ಒಂದು ಸಣ್ಣ ಕತೆ:

ಮುಯ್ಯಿಗೆ ಮುಯ್ಯಿ!

[ಅನುವಾದಕರು: ಕಟಪಾಡಿ ಶ್ರೀನಿವಾಸ ಶೆಟ್ಟಿ, ಅಧ್ಯಾಪಕ, ಕಾರ್ಕಳ]

ಜೈಲಿನಿಂದ ಪರಾರಿಯಾದ ಕೃಷ್ಣಪ್ಪನು ದೂರದಿಂದ ರೈಲುಗಾಡಿಯು ಓಡಿಬರುವ ಶಬ್ದವನ್ನು ಕೇಳಿದ. ರೈಲ್ವೆ ನಿಲ್ದಾಣಕ್ಕೆ ಇನ್ನು ಒಂದೆರಡು ಮೈಲುಗಳ ದೂರ ಮಾತ್ರ. ಸ್ಟೇಶನಿಗೆ ಮುಟ್ಟಿ ಒಂದು ಗಾಡಿಯನ್ನು ಹತ್ತಿದನೆಂದರೆ, ಮತ್ತೆ ಅವನ ಕೆಲಸವು ಮುಗಿದಂತೆಯೇ! ರೈಲುಗಾಡಿಯು ಬರುವ ಶಬ್ದವನ್ನು ಕೇಳಿ ಕೃಷ್ಣಪ್ಪ ಯೋಚಿಸಿದ ಕಾರ್ಯವು ಸಾಧಿಸಿತೆಂದು ಆನಂದದಿಂದ ಉಬ್ಬಿ ಹೋದನು.

★

ಆರು ತಿಂಗಳ ಮೊದಲು—ಕೃಷ್ಣಪ್ಪನೆಂದರೆ ಆ ಊರಲ್ಲಿ ಅವನಂಥ ದಂಡಾಳು ಬೇರೊಬ್ಬ ನಿರಲಿಲ್ಲ. ಕುದುರೆ ಗಾಡಿ ಹೊಡೆದು ಅವನ ಜೀವನ. ಕಾವೇರಿಯು ಅವನ ಗುಣ ಸ್ವಭಾವಗಳಿಗೆ ಒಪ್ಪುವ ಹೆಂಡತಿಯಾಗಿದ್ದಳು. ಅದ್ದರಿಂದ ದಿನಗಳು ಸುಖದಿಂದ ಕಳೆಯುತಿದ್ದುವು. ಆದರೆ ಒಂದು ದಿನ ಗಾಡಿ ಹೊಡೆಯುವಾಗ ಅದು ನಡುದಾರಿಯಲ್ಲಿ ನಿಂತಿದ್ದ ಊರ ಶ್ರೀಮಂತನ ಮೈಮೇಲೆ ಏರುವುದರಲ್ಲಿತ್ತು. ತಪ್ಪು ಕೃಷ್ಣಪ್ಪನದ್ದಿರಲಿಲ್ಲವಾದರೂ, ಶ್ರೀಮಂತನ ಕೈಚಳಕದಿಂದ ಪೋಲೀಸರು ಅವನ ಮೇಲೆ ಅನ್ಯಾಯದ ಫಿರ್ಯಾದು ಮಾಡಿದರು. ಸಾಮಾನ್ಯ ಸ್ಥಿತಿಯಲ್ಲಾದರೆ, ಗಾಡಿ ಹೊಡೆಯುವಾಗ ಅಜಾಗರೂಕನಾಗಿದ್ದನೆಂದು ಒಂದು ಹತ್ತು ರೂಪಾಯಿ ಜುರುಮಾನೆ ಅಥವಾ ಒಂದು ತಿಂಗಳ ಶಿಕ್ಷೆಯಾಗಬಹುದಿತ್ತು. ಆದರೆ ಪೋಲೀಸರು ತಮ್ಮ ಸ್ವಾರ್ಥಸಾಧನೆಗಾಗಿ, ಕೃಷ್ಣಪ್ಪನು ಕುಡಿದು ನಿಂದ್ಯ ಬಿಗಾರಿಯವನೆಂದೂ ಸುಳ್ಳುಸುಳ್ಳಾಗಿ ಅವನ ಮುಖಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡಿದ್ದರು. ಕೃಷ್ಣಪ್ಪನು ಎಲ್ಲ ಆರೋಪಗಳನ್ನು ನಿರಾಕರಿಸಿ, ಎಚ್ಚರಿಕೆ ಕೊಟ್ಟಿದ್ದರೂ ಶ್ರೀಮಂತನು ಬದಿಗೆ ಸರಿಯಲಿಲ್ಲವಾದ್ದರಿಂದ ಗಾಡಿ ಅವನ ಬದಿಯಿಂದ ಹಾದು ಹೋಯಿತೆಂದು ಹೇಳಿದನು. ಶ್ರೀಮಂತನಿಗಾದ ಗಾಯಗಳು ತನ್ನ ಗಾಡಿ ಅವನ ಮೈಮೇಲೆ ಹೋಗಿ ಆದವುಗಳಲ್ಲವೆಂದೂ, ತಾನೀಗ ಪರಿಶುದ್ಧ ಜೀವನವನ್ನು ನಡೆಸುತ್ತಲಿರುವೆನೆಂದೂ ಅವನು ಹೇಳಿದನು. ಆದರೆ ಅವನ ಈ ಮಾತುಗಳನ್ನು ಕೇಳಿ ಮೆಜಿಸ್ಟ್ರೇಟರೂ ಶ್ರೀಮಂತನ ವಕೀಲರೂ, ಸಾಕ್ಷಿಗಾರರೂ, 'ಇನ್ನಿತರರೂ 'ಬಹಳ ಸಂಭಾವಿತನಾಗಿದ್ದೀಯಾ?' ಎಂದು ಕಲಕಿಲಿಸಿ ನಕ್ಕರು. ಅವರ ಆ ಅರ್ಥಹೀನ ನಗುವನ್ನು ನೋಡಿ ಕೃಷ್ಣಪ್ಪನ ಮುಖದ ಸಿಟ್ಟಿನಿಂದ ಕೆಂಪೇರಿತು. ಆದರೆ ಹಣದ ಪ್ರತಾಪದ ಮುಂದೆ ಅವನು ಏನೂ ಮಾಡಲಾರದವನಾಗಿದ್ದನು. ಬಂದ ಸಿಟ್ಟನ್ನು ಕಹಿ ಔಷಧದ ಗುಟುಕಿನಂತೆ ಕುಡಿದುಕೊಂಡನು. ಆ ನಗುವಿನ ಮುಯ್ಯಿಗೆ ಮುಯ್ಯಿ ತೀರಿಸಬೇಕೆಂಬ ಒಂದು ಪ್ರತೀಕಾರ ಭಾವನೆಯು ಮಾತ್ರ ಅವನ ಮನಸ್ಸಿನಲ್ಲಿ ಉಳಿಯಿತು. ಆರು ತಿಂಗಳ ಶಿಕ್ಷೆಯಾಗಿ ಕೃಷ್ಣಪ್ಪನು ಜೈಲಿಗೆ ಹೋದನು.

★

ಜೈಲಿನಲ್ಲಿ ಕೃಷ್ಣಪ್ಪನು ಮಾದರಿಯ ಕೈದಿಯಾಗಿದ್ದ. ಅವನ ಸದ್ವರ್ತನವನ್ನು ನೋಡಿದ ಜೈಲಿನ ಅಧಿಕಾರಿಗಳಿಗೆ ಅವನು ಜೈಲಿಗೆ ಹೇಗೆ ಬಂದನೆಂಬುದು ಒಂದು ಸಮಸ್ಯೆಯಾಗಿತ್ತು. ಜೈಲಿನಲ್ಲಿ ಎಲ್ಲರ ಪ್ರೀತಿಪಾತ್ರನಾಗಿ, ಜೈಲು ಶಿಸ್ತು ಕ್ರಮಗಳಿಗೆ ಎಳ್ಳಷ್ಟು ಭಂಗ ಬಾರದಂತೆ ಅವನು ನಡೆದುದರಿಂದ, ಶಿಕ್ಷೆಯ ಅವಧಿಯು ಪೂರ್ಣ ಮುಗಿಯುವ ಒಂದು ತಿಂಗಳ ಮೊದಲೆ ಅವನ ಬಿಡುಗಡೆ ಆಗಲಿಕ್ಕಿತ್ತು. ಆದರೆ ತನ್ಮಧ್ಯೆ ಒಂದು ಆಶ್ಚರ್ಯದ ಘಟನೆಯು ನಡೆದುಹೋಯಿತು. ಬಿಡುಗಡೆಗೆ ಹದಿನೈದು ದಿವಸಗಳಿರುವಾಗ ಕೃಷ್ಣಪ್ಪನು ಜೈಲಿನ ಎತ್ತರದ ಗೋಡೆಯನ್ನು ಹಾರಿ ಪಲಾಯನವಾದನು. ಅವನ ಈ ವ್ಯವಹಾರವನ್ನು ನೋಡಿ ಜೈಲಿನ ಅಧಿಕಾರಿಗಳಿಗೆ ಎಷ್ಟು ಆಶ್ಚರ್ಯವಾಯಿತೋ, ಅಷ್ಟೇ ದುಃಖವೂ ಆಯಿತು. ಕೃಷ್ಣಪ್ಪನು ಸಿಕ್ಕಿದನಾದರೆ ಅವನಿಗೆ ಪುನಃ ಶಿಕ್ಷೆಯಾಗುವುದು. ಅಧಿಕಾರಿಗಳು ಅವನನ್ನು ಹಿಡಿಯುವುದಕ್ಕಾಗಿ ಎಲ್ಲಾ ಕಡೆಗೆ ಬೇಗನೆ ತಂತಿ ಸಮಾಚಾರ ಕಳುಹಿಸಿದರು. ಆದರೆ ಅವನು ಎಲ್ಲಿಯೂ ಸಿಗಲಿಲ್ಲ.

ಕೃಷ್ಣಪ್ಪನು ಜೈಲಿಗೆ ಸಮೀಪದ ಕಾಡಿನಲ್ಲಿಯೇ ಒಂದು ಗವಿಯಲ್ಲಿ ವಾಸವಾಗಿದ್ದ. ಹಗಲಿನಲ್ಲಿ ಗವಿಯಲ್ಲಿ ವಾಸ, ರಾತ್ರಿಯಲ್ಲಿ ಆಹಾರ ಸಂಪಾದನೆ, ಒಂದು ತಿಂಗಳ ತನಕ ಇದೇ ಅವನ ದಿನಚರಿಯಾಗಿದ್ದಿತು. ಅವನನ್ನು ಹುಡುಕಲಿಕ್ಕೆ ಹೊರಟ ಪೋಲೀಸರು ಒಂದು ದಿನ ಅದೇ ಗವಿಯ ಸಮೀಪದಿಂದ ಹಾದುಹೋಗುತಿದ್ದರು. ಎಷ್ಟೋ ವರ್ಷಗಳಿಂದ ವಾಸವಾಗಿದ್ದ ಹೆಬ್ಬುಲಿಯನ್ನು ಅಲ್ಲಿಂದ ಓಡಿಸಿ, ಆದರ ಗವಿಯನ್ನು ತನ್ನ ಮನೆಯನ್ನಾಗಿ ಮಾಡಿಕೊಂಡ ಕೃಷ್ಣಪ್ಪನು, ಅಷ್ಟು ದೂರದಿಂದ ಪೋಲೀಸರು ಬರುವುದನ್ನು ನೋಡಿ ಬೆಚ್ಚಿಬಿದ್ದನು. ಆದರೆ ಪೋಲೀಸರು ಅವನನ್ನು ಗುರುತಿಸಲಾರದೆ ಮುಂದೆ ಹೋದರು.

★

ಉರಿಯುತಿತ್ತು. ಅವನು ಸಣ್ಣಸ್ವರದಿಂದ— 'ಕಾವೂ, ಕಾವೂ, ಬಾಗಿಲು ತೆರೆ, ನಾನು ಬಂದಿದ್ದೇನೆ' ಎಂದ. ಕಾವೇರಿಯು ಮಲಗಿದ್ದಳು. ಮೂರನೆ ಬಾರಿ ಕರೆದಾಗ ಗಾಬರಿಗೊಂಡು ಅವಳು ಎಚ್ಚೆತ್ತಳು. 'ಯಾರು, ಯಾರು?' ಎಂದು ಕಣ್ಣುಜ್ಜುತ್ತ ಕೇಳಿದಳು. 'ಕಾವೂ, ನಾನು ಬಂದಿದ್ದೇನೆ, ಕೃಷ್ಣಪ್ಪ' ಎಂದು ಅವನು ಪುನಃ ಹೇಳಿದ. ಕಾವೇರಿ ಮೊದಲು ತನ್ನ ಕಣ್ಣುಗಳನ್ನು ತಾನು ನಂಬಲಾರದೆ ಹೋದಳು. ಕೃಷ್ಣಪ್ಪನಲ್ಲಿ ಈಗ ಅಷ್ಟು ಬದಲಾವಣೆಗಳಾಗಿದ್ದುವು! ಕೊನೆಗೆ ಅವಳು ಬಾಗಿಲು ತೆರೆದು ಅವನನ್ನು ಒಳಗೆ ಕರಕೊಂಡು ಹೋದಳು.

★

ಕೃಷ್ಣಪ್ಪನು ಬಂದು ಕಾವೇರಿಗೆ ಸಂತೋಷ



'ನೀನು ಹೋಗಿ ನಾನು ಬಂದ ಸಮಾಚಾರವನ್ನು ಪೋಲೀಸರಿಗೆ ತಿಳಿಸು' ಎಂದು ಕೃಷ್ಣಪ್ಪನು ಕಾವೇರಿಯೊಡನೆ ಹೇಳಿದನು

ಆ ಊರಿನ ರೈಲ್ವೆಯಿಂದ ಎರಡು ಘಂಟೆಗಳ ಪ್ರಯಾಣ. ವೇಷ ಪಲ್ಲಟಿಸಿಕೊಂಡು ಸಾಧುವಿನಂತೆ ತೋರುತಿದ್ದ ಕೃಷ್ಣಪ್ಪನು ತನ್ನ ಊರಿಗೆ ಹೋಗಲಿಕ್ಕೆ ಸ್ಟೇಶನಿಗೆ ಬಂದಿದ್ದನು. ಕೃಷ್ಣಪ್ಪನನ್ನು ಹುಡುಕಿ ಕೊಟ್ಟವರಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ದೊರೆಯುವುದೆಂದು ಸರಕಾರವು ಸಾರಿದ್ದಿತು. ಬಹುಮಾನದ ಆಶೆಯಿಂದ ಕೃಷ್ಣಪ್ಪನನ್ನು ಹುಡುಕಲಿಕ್ಕೆ ಹೊರಟ ಕೆಲವರು ಆ ಸ್ಟೇಶನಿನಲ್ಲಿಯೂ ಇದ್ದರು. ಅವರ ಮಾತುಕತೆಗಳನ್ನು ಕೇಳಿ ಒಮ್ಮೆಗೆ ಕೃಷ್ಣಪ್ಪನ ಮೈ ಝುಮ್ಮೆಂದಿತು. ಆದರೆ ಮರುಕ್ಷಣದಲಿಯೇ ಅವನು ತನ್ನ ಚಾತುರ್ಯಕ್ಕಾಗಿ ನಸುನಕ್ಕನು. ಅವರು ಕೃಷ್ಣಪ್ಪನನ್ನು ಕಣ್ಣಾರೆ ಕಂಡೂ ಗುರುತಿಸಲಾರದೆ ಹೋಗಿದ್ದರು. ರೈಲುಗಾಡಿಯು ಹೊರಡುವ ಸಮಯವಾಯಿತು. 'ಜೈ ಸೀತಾರಾಮ್' ಎಂದು ಹೇಳಿ ಕೃಷ್ಣಪ್ಪನು ಮೂರನೆ ದರ್ಜೆಯ ಒಂದು ಗಾಡಿಯಲ್ಲಿ ಹೋಗಿ ಕೂತುಕೊಂಡನು. ಅವನ ಆ ರೂಪ-ವೇಷಗಳನ್ನು ನೋಡಿ ಜನರು ಭಕ್ತಿಭಾವದಿಂದ ಅವನಿಗೆ ಸ್ಥಳ ಮಾಡಿಕೊಟ್ಟರು.

★

ಮಧ್ಯರಾತ್ರಿಯ ಸಮಯವಾಗಿದ್ದಿತು. ನಾಲ್ಕೂ ಕಡೆ ನಿಶ್ಶಬ್ದವಿದ್ದಿತು. ಕೃಷ್ಣಪ್ಪನು ಗಾಡಿಯಿಂದಿಳಿದು ಮೂರು ಮೈಲು ದೂರವಿರುವ ತನ್ನ ಮನೆಗೆ ಹೊರಟನು. ಆದರೆ ಹೋಗುತ್ತಾ ಅವನಿಗೆ ಒಂದು ಸಂದೇಹ! ಕಾವೇರಿ ಆ ಸಮಯಕ್ಕೆ ಮನೆಯಲ್ಲಿರುವಳೆ, ಇಲ್ಲವೆ? ಅವಳ ಗತಿ ಏನಾಗಿರಬಹುದು? ತನ್ನ ವಿರಹ ದುಃಖವನ್ನು ಸಹಿಸಲಾರದೆ ಅವಳು ನದಿ-ಬಾವಿಗಳ ಶರಣುಹೋಗಿರಬಹುದೆ? ಉಪವಾಸ ಇರಲಿಕ್ಕಾಗದೆ ಊರು ಬಿಟ್ಟು ಹೋಗಿರಬಹುದೆ? ಹೀಗೆ ಆಲೋಚಿಸುತ್ತಾ ಅವನು ಮನೆಗೆ ಬಂದು ಮುಟ್ಟಿದ. ಹಿಂಗಡೆಯಿಂದ ಹೋಗಿ ಕಿಟಕಿಯಲ್ಲಿ ಇಣಿಕಿ ನೋಡಿದ. ಸಣ್ಣ ದೀಪವು ಮಿಣಮಿಣಿ

ವಾದುದು ನಿಜ. ಆದರೆ ತನ್ನ ಭವಿಷ್ಯದ ಕುರಿತು ಅವಳಿಗೆ ಭಯವೂ ಆಗಿ— 'ಸ್ವಾಮಿ, ನೀವು ಇದೇನು ಮಾಡಿದಿರಿ? ಇನ್ನು ಕೆಲವು ದಿನ ಸುಮ್ಮಗಿದ್ದರೆ ಸ್ವತಂತ್ರವಾಗಿ ಇರಬಹುದಾಗಿತ್ತು. ಆದರೆ ಈಗ ಪೋಲೀಸರು ನಿಮ್ಮನ್ನು ಹುಡುಕಾಡುತಿದ್ದಾರೆ. ನೀವು ಅವರ ಕೈಗೆ ಸಿಕ್ಕಿಬಿಟ್ಟರೆ ...' ಮುಂದೆ ಮಾತನಾಡಲಾಗದೆ ಕಾವೇರಿ ಕೃಷ್ಣಪ್ಪನ ತೊಡೆಗಳ ಮೇಲೆ ತನ್ನ ಮುಖವನ್ನಿಟ್ಟು ಅಳತೊಡಗಿದಳು.

ಅವನು ಕಾವೇರಿಯ ಬೆನ್ನು ತಟ್ಟಿ ಸಮಾಧಾನ ಮಾಡುತ್ತ 'ಕಾವೂ! ಹೆದರಬೇಡ. ನಾನು ಜೈಲಿನಿಂದ ಸುಮ್ಮಗೆ ಓಡಿಬರಲಿಲ್ಲ. ನೋಡು! ನನ್ನನ್ನು ಹುಡುಕಿಕೊಟ್ಟವರಿಗೆ ಸರಕಾರವು ಒಂದು ಸಾವಿರ ರೂಪಾಯಿಗಳ ಬಹುಮಾನ ಕೊಡುವುದು. ನೀನು ಹೋಗಿ ನಾನು ಬಂದ ಸಮಾಚಾರವನ್ನು ಪೋಲೀಸರಿಗೆ ತಿಳಿಸು. ನಿನಗೆ ಒಂದು ಸಾವಿರ ರೂಪಾಯಿ ಸಿಕ್ಕುವುದು. ಒಂದು ಸಾವಿರ ರೂಪಾಯಿಗಳಿಂದ ಸುಖವಾಗಿ ಎರಡು ವರ್ಷಗಳ ಕಾಲಕ್ಷೇಪವಾಗುವುದು' ಎಂದನು.

ಈ ಮಾತುಗಳನ್ನು ಕೇಳಿ ಕಾವೇರಿ ಕತ್ತರಿಸಿದಳು. ಗಂಡನನ್ನು ಜೈಲಿಗೆ ಕಳುಹಿಸಿ ಸಿಕ್ಕುವ ಹಣವು ಯಾವ ಹೆಂಡತಿಗೆ ಬೇಕು? ಅಂಥ ಹಣವನ್ನು ಇಚ್ಛಿಸುವವಳು ಹೆಂಡತಿಯೇ ಅಲ್ಲ. ಅವಳು ಹೇಳಿದಳು—'ಸ್ವಾಮಿ, ತಾವು ಪೋಲೀಸರ ಕೈಗೆ ಸಿಕ್ಕಿದರೆ....'

'ಕಾವೇರಿ, ಹೆದರಬೇಡ. ಸಾವಿರ ರೂಪಾಯಿ ಎಂದರೆ ಸಣ್ಣ ಗಂಟು ಎಂದು ಎಣಿಸಬೇಡ. ನಾನು ಜೈಲಿಗೆ ಹೋಗುವುದು ನಿಜ. ಆದರೆ ಅಲ್ಲಿಯ ಜೀವನವು ನನಗೆ ಚೆನ್ನಾಗಿ ಅಭ್ಯಾಸವಾಗಿದೆ. ಹೆಚ್ಚಾದರೆ ನನಗೆ ಜೈಲಿನಿಂದ ಓಡಿಹೋದ ಅಪರಾಧದ ಮೇಲೆ ಮೂರು ತಿಂಗಳು ಅಥವಾ ಆರು ತಿಂಗಳ ಹೆಚ್ಚಿಗೆ ಶಿಕ್ಷೆಯಾಗಬಹುದು. ಅದನ್ನು ಅನುಭವಿಸಿ ಬರುವುದು ದೊಡ್ಡ ಮಾತೇ ಅಲ್ಲ. ಆದರೆ ನಿನಗೆ ಸರಕಾರದಿಂದ ಒಂದು ಸಾವಿರ ರೂಪಾಯಿ ದೊರೆಯುವುದು ಮಾತ್ರವಲ್ಲದೆ ನನಗೆ ಇನ್ನೊಂದು ಸಮಾಧಾನವೂ ಆಗುವುದು. 'ನಾನು ನಿರಪರಾಧಿ, ಪವಿತ್ರ ಜೀವನವನ್ನು ನಡೆಸಿಕೊಂಡು ಬರುತ್ತೇನೆ' ಎಂದಾಗ ಆ ದಿನ ಕೋರ್ಟಿನಲ್ಲಿ ಎಲ್ಲರೂ ವ್ಯಂಗ್ಯ ನಗುವನ್ನು ನಗಾಡಿದ್ದರು, ಪೋಲೀಸರು, ಮೆಜಿಸ್ಟ್ರೇಟರು ನನ್ನನ್ನು ಅನ್ಯಾಯವಾಗಿ ಜೈಲಿಗೆ ಕಳುಹಿಸಿ ಮೀಸೆ ಹುರಿಮಾಡಿದ್ದರು. ಈಗ ಅವರ ದೀನತನಕ್ಕಾಗಿ, ಭಗೀರಥ ಪ್ರಯತ್ನ ಮಾಡಿದರೂ ಪಲಾಯನವಾದ ನನ್ನನ್ನು ಹಿಡಿಯಲಾಗದುದಕ್ಕಾಗಿ ಅವರನ್ನು ಕಂಡು ನಾನೇ ನಗಬಹುದಲ್ಲ! ಕೋರ್ಟಿನಲ್ಲಿ ಅವರ ಮುಂದೆ ನಾನೇ ಮೀಸೆ ಹುರಿಕಟ್ಟಬಹುದಲ್ಲ!' ಆದಕ್ಕಾಗಿಯೇ ಕಾವೇರಿ, ನಾನು ಇಷ್ಟು ಉದ್ದ ಮೀಸೆ ಬೆಳಸಿದ್ದೇನೆ. ನೋಡು! ಆರು ತಿಂಗಳು ಶಿಕ್ಷೆ ಅನುಭವಿಸಿ ಬಂದ ಮೇಲೆ, ಕಾವೇರಿ, ನಾನೂ ನೀನೂ ಸುಖವಾಗಿ ಮುಂದಿನ ಜೀವನ ಸಾಗಿಸಬಹುದು! ಪ್ರಪಂಚದ ಈ ಜನರ ಮೂರ್ಖತನವನ್ನು ನೋಡಿ, ನಾವು ಉಳಿದ ಜೀವನವನ್ನು ಉಲ್ಲಾಸದಲ್ಲಿ ಕಳೆಯಬಹುದು' ಎಂದನು.

ಮುಯ್ಯಿಗೆ ಮುಯ್ಯಿ ತೀರಿಸುವುದಕ್ಕಾಗಿ ಕೃಷ್ಣಪ್ಪನು ಹೀಗೆ ಆಡಿದ. ಕಾವೇರಿ ಅವನ ಮಾತುಗಳನ್ನು ಕೇಳಿ ನಿರುತ್ತರಳಾದಳು.

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.
in denominations of

RS. 50/-, 100/-, 500/-, 1,000/-, & 5,000/
are now issued at all our Branches.

For particulars call at or write to any of our nearest Branches.

ಜಾವಾದ ಜನರಿಗೆ ಗಾಂಧಿಜಿ ಯವರಲ್ಲಿ ಅನುಪಮ ಪ್ರೇಮಗೌರವಗಳು

ಒಬ್ಬ ಕಲಾವಿದರ ಹೇಳಿಕೆ

ಶಾಂತಿನಿಕೇತನ ಸಂಗೀತ ಶಾಖೆಯ ಅಧ್ಯಾಪಕರಾದ ಶ್ರೀ ಶಾಂತಿದೇವಘೋಷರು, ಕವೀಂದ್ರ ಠಾಗೋರರ ಹೇಳಿಕೆಯಿಂದ ಜಾವಾದ ನೃತ್ಯ ಮತ್ತು ಸಂಗೀತಗಳ ಅಭ್ಯಾಸಗಳಿಗಾಗಿ ಜಾವಾಕ್ಕೆ ಪ್ರಯಾಣಮಾಡಿದ್ದರು. ಅಲ್ಲಿನ ಹಲವು ಪ್ರಾಮುಖ್ಯ ವಿದ್ಯಾಕೇಂದ್ರಗಳನ್ನು ಸಂದರ್ಶಿಸಿ, ಅಲ್ಲಲ್ಲಿ ರವೀಂದ್ರರ ಸಂಗೀತ ಮತ್ತು ಶಾಂತಿನಿಕೇತನ ಕಾರ್ಯಗಳ ಕುರಿತು ಹಲವು ಭಾಷಣಗಳನ್ನಿತ್ತರು. ಹಲವು ವಿದ್ಯಾಸಂಸ್ಥೆಗಳ ಅಧಿಕಾರಿಗಳು ಇವರನ್ನು ಬಹಳ ಗೌರವ ಆದರಗಳಿಂದ ಆಮಂತ್ರಿಸಿದರು. ಸೊಲಕ್ಕಾರ್ಟ ಮತ್ತು ಜೋಡ್ಜಕಾರ್ಟಗಳಸುಲ್ತಾನರು ಠಾಗೋರರ ಆಪ್ತಮಿತ್ರರಾಗಿದ್ದುದರಿಂದ ಶ್ರೀ ಘೋಷರಿಗೆ ಅಲ್ಲಿ ಬಹಳ ಸಹಾಯವಿತ್ತರು.

'ಟಾಮುಸಿಸ್ವಾ' ಎಂಬ ಪ್ರಸಿದ್ಧ ವಿದ್ಯಾನಿಲಯದಲ್ಲಿ ಶ್ರೀ ಘೋಷರು ಕೆಲಸಮಯಗಳ ವರೆಗೆ ಇದ್ದರು. ಅಲ್ಲಿನ ಹಲವು ಮಂದಿ ವಿದ್ಯಾರ್ಥಿಗಳು ಶಾಂತಿನಿಕೇತನಕ್ಕೆ ಬಂದು ಇಲ್ಲಿ ವಿದ್ಯೆಯನ್ನು ಪಡೆದಿದ್ದರು. ಅಲ್ಲಿನ ರೇಡಿಯೋಗಳಲ್ಲಿ ಅವರು ಭಾರತೀಯ ಸಂಗೀತ ಆಲಾಪನೆಗಳನ್ನು ಮಾಡಿದ್ದರು.

ಶ್ರೀ ಘೋಷರು ಹೇಳುತ್ತಾರೇನೆಂದರೆ ಜಾವಾದ ಜನರಿಗೆ ಭಾರತದ ಮೇಲೆ ಬಹಳ ಮಮತೆಯಿದೆಯಂತೆ. ಮಹಾತ್ಮಾಗಾಂಧಿ ಮತ್ತು ಕವಿ ಠಾಗೂರರನ್ನು ಅವರು ಭಕ್ತಿಗೌರವಗಳಿಂದ ಪ್ರೀತಿಸುತ್ತಾರಂತೆ. ಅಲ್ಲಿ ಹೋಗಿ ವಾಸವಾಗಿದ್ದ ಹಿಂದುಗಳು, ಹಿಂದೂದೇಶದೊಡನೆ ತಮ್ಮ ಸಾಂಸ್ಕೃತಿಕ ಸಂಬಂಧವನ್ನು ಬೆಳೆಸಲು ಆತುರವನ್ನು ವ್ಯಕ್ತಪಡಿಸಿದರಂತೆ. ಆರ್ಯಸಮಾಜದವರು ಈ ಬಗೆಗಾಗಿ ಅಲ್ಲಿಗೆ ಹೋಗಿ ಯತ್ನಿಸಿ ಹಿಂದೀಯ ಸಂಸ್ಕೃತಿಯನ್ನು ಆ ನಮ್ಮ ದೇಶಬಾಂಧವರ ಹೃದಯಗಳಲ್ಲಿ ತಿರುಗಿ ಉದ್ದೀಪಿಸುವ ಕಾರ್ಯಗಳನ್ನು ಮಾಡಬಹುದೆಂದು ಶ್ರೀ ಘೋಷರು ಅಭಿಪ್ರಾಯಪಟ್ಟಿರುವರು.





ಪ್ರತೀ ಒಬ್ಬ ಹೆಂಗಸರು ತಮ್ಮ ದೇಹದ ಒಳಭಾಗವನ್ನು ನಿರ್ಮಲವಾಗಿರಿಸಿದ್ದಲ್ಲಿ ಸ್ವಚ್ಛವಾದ ರೂಪವೂ, ಉತ್ತಮವಾದ ಕೇಶರಾಶಿಯೂ ಮಿಂಚುವ ಕಣ್ಣುಗಳಿದ್ದು ಉತ್ತಮ ಆರೋಗ್ಯವಿರುವುದು.

ನಿರ್ಮಲವಾದ ಹೊಟ್ಟೆಯು ಆರೋಗ್ಯವನ್ನುಂಟುಮಾಡುವುದು. ಒಳಭಾಗವು ನಿರ್ಮಲವಾಗಿದ್ದಲ್ಲಿ ದೇಹವು ಆರೋಗ್ಯದಿಂದಿರುವುದು. ಎಂಡ್ರೂಸ್ ಲಿವರ್ ಸೋಲ್ಟನ್ನು ಸೇವಿಸಿ ಹೊಟ್ಟೆಯನ್ನು ಶುಚಿಯಾಗಿರಿಸಿರಿ. ಸೌಂದರ್ಯಯುಕ್ತವಾದ ರೂಪು ಕೇಶರಾಶಿಯನ್ನು ಪಡೆದು ಯೌವನರಾಗಿರಿ.

ಎಂಡ್ರೂಸ್ ಲವಣವು ಹೊಟ್ಟೆಯನ್ನು ಸ್ವಚ್ಛಗೊಳಿಸುವುದು, ಸೌಂದರ್ಯವನ್ನು ನಾಶ ಮಾಡಬಹುದಾದಂಥ ಅನಾರೋಗ್ಯವನ್ನುಂಟುಮಾಡುವ ಮಲೀನ ಪದಾರ್ಥಗಳನ್ನು ಹೊರದೂಡುವುದು. ಎಂಡ್ರೂಸ್ ಲವಣವು ನಾಲ್ಗೆ, ಹೊಟ್ಟೆಯನ್ನು ಸ್ವಚ್ಛಗೊಳಿಸುವುದು, ಇಡೀ ದೇಹಕ್ಕೆ ಒಂದು ತರದ ಉತ್ತೇಜನವನ್ನೀಯುವುದು.

ಎಂಡ್ರೂಸ್ ಲವಣವು ದೇಹದ ಒಳಭಾಗವನ್ನು ನಿರ್ಮಲಗೊಳಿಸುವುದು ● ರಕ್ತವನ್ನು ಶುದ್ಧಿಗೊಳಿಸುವುದು ● ಚರ್ಮವನ್ನು ನಿಚ್ಚಳವಾಗಿರಿಸುವುದು ● ಹೊಟ್ಟೆ, ಪ್ಲೀಹ, ಮಲಬದ್ಧತೆಯನ್ನು ನಿವಾರಿಸುವುದು ● ಇದರ ಅಭ್ಯಾಸವಾಗುವಂತಿಲ್ಲ, ಚಿಕ್ಕ ಮಕ್ಕಳಿಂದ ಮೊದಲ್ಗೊಂಡು ಇಡೀ ಕುಟುಂಬಕ್ಕೆ ಯೋಗ್ಯವಾಗಿರುವುದು.

ಒಬ್ಬ ಮಹಿಳೆಯು ಈ ರೀತಿ ಬರೆಯುತ್ತಾರೆ:

"ಒಂದು ವರ್ಷದ ಹಿಂದಿನ ವರೆಗೆ ನಾನು ಕಾಳಜಿದ ಬಾಧೆಯಿಂದ ಮತ್ತು ಉದರವೇದನೆಯಿಂದ ನರಳುತಿದ್ದೇನೆ. ಕೂಡಲೇ ನಾನು ಎಂಡ್ರೂಸ್ ಲವಣವನ್ನು ಸೇವಿಸಿದೆ ಅದು ವೇದನೆಗಳಿಂದ ನನ್ನನ್ನು ರಕ್ಷಿಸಿದುದು ಮಾತ್ರವಲ್ಲದೆ ನನಗೆ ಒಂದು ನವೀನರೀತಿಯ ಉತ್ತೇಜನವಿತ್ತಿರುವುದು"

ಎಂಡ್ರೂಸ್ ಲಿವರ್ ಸೋಲ್ಟ್

ANDREWS LIVER SALT

ದೇಹದ ಒಳಭಾಗವನ್ನು ಸ್ವಚ್ಛಗೊಳಿಸುವುದು.



ಶಿಕ್ಷಣ ಹೊಂದಿದ ಹರಿಜನ ಸೇವಕರು

ಐವತ್ತು ಮಂದಿಗೆ ತರಬೇತಿ

ಶ್ರೀಮತಿ ರಮೇಶ್ವರಿ ನೆಹರುಗಳು ಸ್ಟೇಟ್ಸ್‌ಮೇನ್ ಪತ್ರಿಕೆಯಲ್ಲಿ ಹಿಂದೂದೇಶದಲ್ಲಿರುವ ಒಟ್ಟು ೫೦,೧೯೩,೦೦೦ ಹರಿಜನರ ಸೇವೆಯನ್ನು ಮಾಡಲು ಸಿದ್ಧರಾಗಿ ಐದು ವರ್ಷಗಳ ವರೆಗೆ ಅದೇ ಕಾರ್ಯಕ್ಕೆ ಪ್ರತಿಜ್ಞೆ ಕೊಡುವ ಐವತ್ತು ಮಂದಿಗೆ ತರಬೇತಿಯನ್ನು ಕೊಟ್ಟು ಅವರನ್ನು ಆ ಕೆಲಸಕ್ಕೆ ತಯಾರಿಮಾಡುವರೆಂದು ಬರೆಯುತ್ತಾರೆ.

ಕೇಂದ್ರ ಹರಿಜನ ಸೇವಕ ಸಂಘವು ಇಂತಹ ಐವತ್ತು ಮಂದಿಯ ಶಿಕ್ಷಣ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿರುತ್ತದೆ. ಇಂತಹ ಕೆಲಸಗಾರರಿಗೆ ಬೇಕಾದ ಸೌಕರ್ಯಗಳೆಲ್ಲವೂ ಸಿದ್ಧವಾಗಿದೆ. ಪ್ರಾಂತಪ್ರಾಂತಗಳಿಂದ ಆ ಕಾರ್ಯಕ್ಕಾಗಿ ಜನರನ್ನು ಆರಿಸುವ ಕಾರ್ಯವು ನಡೆದಿದೆ.

ಅಲ್ಪ ಪ್ರತಿಫಲದಿಂದ, ಮಾತೃಭೂಮಿಯ ದಲಿತ ಹರಿಜನರ ಸಲುವಾಗಿ ತಮ್ಮ ಸೇವೆಯನ್ನರ್ಪಿಸಲು ಸಿದ್ಧರಾದ ಇಷ್ಟು ಮಂದಿಯ ಕಾರ್ಯದ ಫಲವು ಸಹಜವಾಗಿ ರಾಷ್ಟ್ರದಲ್ಲಿ ಬಹಳ ಜಾಗ್ರತಿಯನ್ನು ಹುಟ್ಟಿಸುವುದೆಂಬುದರಲ್ಲಿ ಏನೇನೂ ಸಂಶಯವಿಲ್ಲ. ಹಲವು ವರ್ಷಗಳ ಹಿಂದೆಯೇ ಮಾಡತಕ್ಕ ಈ ಕಾರ್ಯವು ಇಂದೀಗ ಆರಂಭವಾಗಿರುತ್ತದೆ. ಈ ವೀರಸ್ವಯಂಸೇವಕ ದಲದ ಅನುಪಮ ಸೇವೆಯ ಫಲದಿಂದ ಹರಿಜನ ಸೇವಕ ಸಂಘದ ಕಾರ್ಯವು ಉತ್ತರೋತ್ತರ ಶ್ರೇಯಸ್ಕರವಾಗಿ, ರಾಷ್ಟ್ರದ ಉದ್ಧಾರದಲ್ಲಿ ಅದರ ಮಹತ್ವದ ಭಾಗವು ಬಹುಮಟ್ಟಿಗೆ ಪೂರ್ತಿಯಾಗಬಹುದು ಎಂಬುದರಲ್ಲಿ ಸ್ವಲ್ಪವೂ ಸಂಶಯಪಡಬೇಕಾಗಿಲ್ಲ.

ಜಿಲ್ಲಾ ಸಮಾಚಾರ

ಮಂಗಳೂರು

ನಗರ ಸಭೆ:— ಮಂಗಳೂರು ನಗರ ಸಭೆಯು ಶ್ರೀ ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಕಳೆದ ತಾ. ೧೫ನೇ ಬುಧವಾರ ಸಾಯಂಕಾಲ ನಡೆಯಿತು. ಯುದ್ಧ ವಿಷಯದಲ್ಲಿ ಬ್ರಿಟಿಷ್ ಸರಕಾರದ ಗುರಿಯೇನೆಂದು ರಾಷ್ಟ್ರಸಭೆಯವರು ಕೇಳಿದ ಪ್ರಶ್ನೆಗೆ ಬ್ರಿಟಿಷ್ ಸರಕಾರವಿತ್ತ ಉತ್ತರವು ಸಮರ್ಪಕವಾಗಿಲ್ಲವೆಂದೂ ರಾಷ್ಟ್ರ ಸಭೆಯವರು ಕೈಕೊಂಡ ಧೋರಣೆಯು ಸರಿಯೆಂದೂ, ಕಾಂಗ್ರೆಸು ಮಂತ್ರಿಮಂಡಲಗಳು ರಾಜಿನಾಮೆ ಕೊಟ್ಟುದಕ್ಕಾಗಿ ಅವುಗಳನ್ನು ಪ್ರಶಂಸಿಯೂ ಠರಾವಾಯಿತು. ಈ ಠರಾವನ್ನು ಸಮರ್ಥಿಸಿ ಶ್ರೀ ಎಂ. ಮಾಧವರಾಯರೂ, ಶ್ರೀ. ಎಲ್. ಸಿ. ಪಯಸ್‌ರವರೂ, ಡಾ| ವಿಟ್ಠಲ ಶೆಟ್ಟಿಗೂ ಮಿ| ಮೂಸಬ್ಬನವರೂ ಮಾತಾಡಿದರು.

ಸಂಸ್ಥಾಪಕರ ದಿನ:— ಸ್ಥಳೀಯ ಕೆನರಾ ಹೈಸ್ಕೂಲಿನ ಸ್ಥಾಪಕರ ದಿನಾಚರಣೆಯು ಕಳೆದ ದಿತ್ಯವಾರ ಜರಗಿತು. ಮುಂಜಾನೆ ಶ್ರೀ. ಜಿ. ಉಪೇಂದ್ರ ಪ್ರಭುಗಳವರು ಧ್ವಜವಂದನೆಯನ್ನು ಮಾಡಿದ ಬಳಿಕ, ಶಾಲಾ ಮಕ್ಕಳಿಗೆ ಮಿಠಾಯಿ ಹಂಚಲಾಯಿತು. ಸಂಜೆಗೆ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಕೆ. ಎಸ್. ಯು. ಕಾಯರರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ವಂದೇ ಮಾತರಂ ಗೀತೆಯ ನಂತರ ಶ್ರೀ. ಎಂ. ವೆಂಕಟೇಶ ಪೈಯವರು ಸುಬ್ರಾಯ ಪೈ ಸ್ಮಾರಕ ನಿಧಿಯ ವರದಿಯನ್ನೋದಿದರು. ಶ್ರೀ. ಬಿ. ಸಂಜೀವ ರಾಯರು ಕೊಮೆಮರೇಶನ್ ಭಾಷಣವಿತ್ತರು. ಶ್ರೀ ಜಿ. ಉಪೇಂದ್ರ ಪೈಯವರು ಧನ್ಯವಾದ ಸಮರ್ಪಣೆ ಮಾಡಿದರು.

ಶ್ರೀ. ಪಿ. ಎಸ್. ಕುಡ್ವರಿಗೆ ಮಾನಪತ್ರ:— ತಾ. ೧೩ರಂದು ಸಿ. ಪಿ. ಸಿ. ಕೆಲಸಗಾರರು ಸದ್ರಿ ಕಂಪನಿಯ ಜನರಲ್ ಮ್ಯಾನೇಜರರಾದ ಶ್ರೀ ವಿ. ಎಸ್. ಕುಡ್ವರಿಗೆ ಮಾನಪತ್ರ ಅರ್ಪಣ ಸಮಾರಂಭವನ್ನು ಡಾ| ವಿಟ್ಠಲ ಶೆಟ್ರಿ ಅಧ್ಯಕ್ಷತೆಯಲ್ಲಿ ಜರಗಿಸಿದರು. ಶ್ರೀಗಳಾದ ಪದ್ಮರಾಜ, ಪುರುಷೋತ್ತಮ ಪೈ, ಆಲ್ಫ್ರೆಡ್ ಸೋನ್ಸ್, ಡಾ| ಗಿರಿಧರರಾವ್, ಮಾಧವರಾವ್, ಸಾಹುಕಾರ್ ವೆಂಕಟೇಶ ಪೈ ಇವರು ಶ್ರೀ ಕುಡ್ವರ ಗುಣಕಥನ ಮಾಡಿದರು. ಶ್ರೀ ಕುಡ್ವರು ಮಾನಪತ್ರಕ್ಕೆ ಉತ್ತರವನ್ನೀಯುತ್ತಾ, ತಾನು ಸಂಸ್ಥೆಯ ಅವಿಶ್ರಾಂತ ಸೇವೆಯಲ್ಲಿ ಚಿಕ್ಕ ಕಾರಣನೆಂದೂ, ಕೆಲಸಗಾರರಿಗೆ ಕಂಪನಿಯ ಪೂರ್ವಾಧಿಕಾರಿಯೂ, ತನ್ನ ಆಪ್ತ ಸಂಬಂಧಿಯೂ ಆಗಿ ಮಾನವನರೂ ಆಗಿದ್ದ ದಿವಂಗತ ಶ್ರೀ ವಿ. ಎಸ್. ಕಾಮತರ ಮೇಲಿರುವ ಭಕ್ತಿ ಮಮತೆಗಳು ತನ್ನ ಅಭಿಮಾನವೆಂದೂ, ಅವರೇ ತನಗೆ ದಾರಿತೋರಿದವರೆಂದೂ, ಅವರಂತೆಯೇ ತಾನೂ ಅನುಕರಿಸಲು ಯತ್ನಿಸುತ್ತಿದ್ದು ಕೂಲಿಗಾರರ ಸೇವೆಗೆ ಸಿದ್ಧನಿರುವೆನೆಂದು ಮೊದಲಾಗಿ ಹೇಳಿದರು.

ಸೈನ್ಯಕ್ಕೆ ಜನ ಸೇರಿಸುವುದು:— ಮದ್ರಾಸು ಜಿಲ್ಲೆಯ ರಿಕ್ರೂಟಿಂಗ್ ಆಫೀಸರರು ಮಂಗಳೂರಿನಲ್ಲಿ ತಾ. ೨೮—೧೧—೧೯೩೯ರಿಂದ ೨—೧೨—೩೯ರ ವರೆಗೆ ಮಂಗಳೂರು ರಿಜರ್ವ್ ಪೋಲಿಸ್ ಆಫೀಸಿನಲ್ಲಿ ಸೈನ್ಯಕ್ಕೆ ಸೇರಲಿರುವ ಜನರನ್ನು ಆರಿಸಲಿರುವರು. ಸಿಗ್ನಲ್ ಸ್ಪೇಷ್ಟರ್ ಟ್ರೈನರ್ ಮತ್ತು ಆರ್ಟಿಲರಿ ಕೆಲಸಗಳಿಗೆ ಜನರನ್ನು ಸೇರಿಸಲಾಗುವುದು.

ಪಾಣೆಮಂಗಳೂರು:— ದ. ಕ. ಡಿಸ್ಟ್ರಿಕ್ಟ್ ಬೋರ್ಡು ರೋಡ್ ಮೇಸ್ತ್ರಿ ಎಸೋಸಿಯೇಶನಿನ ಸಭೆಯು ಕಳೆದ ತಾ. ೧೨ನೇ ಬೆಳಿಗ್ಗೆ ಸೇರಿ ಸಂಘವನ್ನು ರಿಜಿಸ್ಟರ್ಡ್ ಮಾಡಬೇಕೆಂದೂ ಪ್ರೊವಿನ್ಸಿಯಲ್ ಮೇಸ್ತ್ರಿ ಎಸೋಸಿಯೇಶನಿನ ಅಂಗವಾಗಿ ಮಾಡಬೇಕಾಗಿಯೂ ಠರಾವಾಯಿತು.

ಉಡುಪಿ

ಉಡುಪಿ ಪರ್ಯಾಯ ವಸ್ತುಪ್ರದರ್ಶನ:— ಶ್ರೀ ಅದ್ಮಾರು ಮಠದ ಶ್ರೀ ಪಾದಂಗಳವರ ಪರ್ಯಾಯ ಮಹೋತ್ಸವ ಕಾಲದಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸುವರೆ ಸ್ಥಳೀಯ ಆಢ್ಯ ಮಹನೀಯರ ಸಭೆಯೊಂದು ತಾ. ೧೭ರಲ್ಲಿ ಡಾಕ್ಟರ್ ಎಸ್. ಆರ್. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ವಸ್ತು ಪ್ರದರ್ಶನವು ಜನವರಿ ತಾ. ೮ರಿಂದ ೨೨ರ ತನಕ ಜರಗತಕ್ಕದ್ದೆಂದು ನಿರ್ಧಾರವಾಗಿ ಪ್ರದರ್ಶನವು ಯಶಸ್ವಿಯಾಗುವಂತೆ ಸಕಲ ಸನ್ನಾಹಗಳನ್ನು ತಯಾರಿಸುವರೆ ಒಂದು ಕಮಿಟಿಯು ನೇಮಕವಾಯಿತು:—ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರು ಮತ್ತು ಶ್ರೀ ಅದ್ಮಾರು ಮಠದ ಶ್ರೀ ವಿಬುಧ ಪ್ರಿಯ ತೀರ್ಥ ಶ್ರೀಪಾದಂಗಳವರು (ಆಶ್ರಯದಾತರು;) ಶ್ರೀ| ಎ. ಲಕ್ಷ್ಮೀನಾರಾಯಣ ರಾವ್ (ಅಧ್ಯಕ್ಷ,) ಡಾ| ಎಸ್. ಆರ್. ಪೈ, ಡಾ| ಮಾಧವ ಪೈ (ಉಪಾಧ್ಯಕ್ಷರು,) ಶ್ರೀಗಳಾದ ಗೋಪಾಲ ನಾಯಕ್; ಉಪೇಂದ್ರ ಪೈ, ಪಿ. ಎಸ್. ಪ್ರಭು (ಜತೆ ಕಾರ್ಯದರ್ಶಿಯರು;) ಮಿ. ಆರ್. ಎಸ್. ಅಂದ್ರಾದೆ (ಖಜಾಂಚಿ,) ಪೆಂಕೋಬಾಚಾರ್, ಶ್ರೀನಿವಾಸ ಪೆಜತ್ತಾಯ, ಎಸ್. ಯು. ಪಣಿಯಾಡಿ, ಕೆ. ಜೆ. ಬಲ್ಲಾಳ್, ವಾಮನ ಭಟ್ ಮತ್ತು ದಾ| ಸಿ. ಜಿ. ಆಚಾರ್ಯರು (ಕಮಿಟಿ ಸದಸ್ಯರು).

ಜಿಲ್ಲಾ ಬೋರ್ಡು ಸಭೆ:— ಇದೇ ತಾ ೧೮ರಂದು ಬೆಳಿಗ್ಗೆ ಘಂಟೆ ೧೦ಕ್ಕೆ ಸರಿಯಾಗಿ ದ. ಕ. ಜಿಲ್ಲಾ ಬೋರ್ಡು ಸಭೆಯು ಶ್ರೀಮಾನ್ ನಿಕಳಶೆಟ್ಟರ ಅಧ್ಯಕ್ಷತೆಯಲ್ಲಿ ಉಡುಪಿಯ ಮುನಿಸಿಪಾಲ್ ಮೈನ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತ್ತು.

ಪ್ರಕೃತದ ರಾಜಕೀಯ ಬಿಕ್ಕಟ್ಟಿನ ವಿಚಾರ ಬೋರ್ಡಿನ ಮುಂದೆ ಜಿಲ್ಲಾ ಬೋರ್ಡು ಕೊಂಗ್ರೆಸ್ ಪಾರ್ಟಿಯ ಪರವಾಗಿ ಪಾರ್ಟಿ ಲೀಡರ್ ಶ್ರೀಮಾನ್ ವೈಕುಂಠ ಬಾಳಿಗಾ ಅವರು ಮಂಡಿಸಿದ ಯುದ್ಧ ವಿಷಯಕ ಠರಾವನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು

ಕೊಂಗ್ರೆಸಿನ ನಿರ್ಧಾರವನ್ನನುಸರಿಸಿ ಮದ್ರಾಸು ಸರಕಾರವು ಮಂಜೂರು ಮಾಡಿದ ಠರಾವಿಗೆ ಪೂರ್ಣ ಬೆಂಬಲ ಕೊಡಲಾಯಿತು.

ಬಸ್ ಸರ್ವಿಸ್ ಯೋಜನೆ:— ಜಿಲ್ಲಾ ಬೋರ್ಡಿನವರು ಜಿಲ್ಲೆಯಲ್ಲಿ ಬಸ್ಸು ಸರ್ವಿಸು ನಡೆಸಬೇಕೋ ಬೇಡವೋ ಎಂಬು ವಿಚಾರಿಸಿ ತಮ್ಮ ತೀರ್ಮಾನವನ್ನು ಬೋರ್ಡಿಗೆ ಒಪ್ಪಿಸುವ ಬಗ್ಗೆ ಶ್ರೀಮಾನ್ ಬಿ. ವೈಕುಂಠ ಬಾಳಿಗರು, ಶ್ರೀ. ಎಫ್. ಸಿ. ಎಸ್. ಅಲ್ಬುಕರ್ಕರು, ಶ್ರೀ. ಎಸ್. ಎನ್. ಹೊಳ್ಳರು, ಶ್ರೀ. ಕೃಷ್ಣಶೆಟ್ಟರು ಹಾಗೂ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ. ನಿಕಳಶೆಟ್ಟರಿಂದೊಡಗೂಡಿದ ಸಮಿತಿಯೊಂದನ್ನು ನೇಮಿಸಲಾಯಿತು.

ವ್ಯಾಯಾಮ ಮತ್ತು ಸ್ಕೌಟುಗಳ ಚಟುವಟಿಕೆ:— ಸ್ಥಳೀಯ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳ ವ್ಯಾಯಾಮ ಪ್ರದರ್ಶನ ಮತ್ತು ಸ್ಕೌಟುಗಳ ಚಟುವಟಿಕೆಗಳ ವಿಹಾರ ಸಮಾರಂಭವೊಂದು ತಾ. ೧೮ನೇ ಶನಿವಾರ ಸಂಜೆ ೪-೩೦ಕ್ಕೆ ಶಾಲಾ ಕಂಪೌಂಡಿನಲ್ಲಿ ಡಿ. ಬೊ. ಪ್ರೆಸಿಡೆಂಟ್ ಡಾ. ನಿಕಳಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಶಾಲೆಯೊಳಗಿನ ಕ್ರಿಕೆಟ್ ಪಂದ್ಯಾಟಗಳ ಬಹುಮಾನವಿತರಣೆ ಮಾಡಿದರು.

ಮೈಸೂರು ಯುವರಾಜರು:— ತಾ. ೩೦ರಿಂದ ಜರಗಲಿರುವ ಶ್ರೀ ಕೃಷ್ಣ ಸನ್ನಿಧಿಯ ಲಕ್ಷದೀಪೋತ್ಸವ ಕಾಲಕ್ಕೆ ಮೈಸೂರು ಯುವರಾಜರು ತಾ. ೨೬ಕ್ಕೆ ಚಿತ್ತೈಸುವರಾಗಿ ತಿಳಿದು ಬರುತ್ತದೆ. ಈ ಬಗ್ಗೆ ಸಿದ್ಧತೆಗಳು ಆಗುತ್ತವೆ.

ಕಾರ್ಕಳ

ಕಾರ್ಕಳ ಶ್ರೀ ವೆಂಕಟ್ರಮಣ ದೇವಾಲಯದ ಮೊಕ್ತೇಸರರ ಒಂದು ಸಭೆಯು ಕಳೆದ ತಾರೀಕು ೧೩ರಂದು ಕೂಡಿ ಮಂಗಳೂರಿನ ಜಿಲ್ಲಾ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಜ್ಞಾನವೃದ್ಧಕ ಸಭೆಗೂ ಆಗಮ ಪಾಠಶಾಲೆಯ ವ್ಯವಸ್ಥಾಪಕ ಮಂಡಲಿಗೂ ಶ್ರೀ. ಆರ್. ಗೋವರ್ಧನ ಶೆಣೈಯವರನ್ನು ದೇವಸ್ಥಾನದ ಕಡೆಯಿಂದ ಪ್ರತಿನಿಧಿಯನ್ನಾಗಿ ಚುನಾಯಿಸಿದರು. ದೇವಸ್ಥಾನದ ಆಡಳಿತ ಮಂಡಳಿಗೆ ಶ್ರೀಗಳಾದ ಕೆ. ಅಚ್ಯುತ ಪ್ರಭು, ಆರ್. ಜಿ. ಶೆಣೈ ಮತ್ತು ಕೆ. ಲಕ್ಷ್ಮಣ ಪೈಯವರೂ, ಶ್ರೀ ವೆಂಕಟ್ರಮಣ ವಿದ್ಯಾಲಯ ಮ್ಯಾನೇಜಿಂಗ್ ಬೋರ್ಡಿಗೆ ಸೋಲಿನ ಆಡಳಿತ ಮೊಕ್ತೇಸರರು ಮಾತ್ರವಲ್ಲದೆ ಶ್ರೀಗಳಾದ ಸಿ. ಮಂಜುನಾಥ ಕಾಮತ್, ಕೆ. ಲಕ್ಷ್ಮೀನಾರ್ಣಪ್ಪಯ್ಯ, ಕೆ. ವೆಂಕಟೇಶ ಕಾಮತ್, ಕೆ. ಕೃಷ್ಣ ಪೈ ಮತ್ತು ಕೆ. ವೆಂಕಟೇಶಪ್ರಭುಗಳವರೂ ಆರಿಸಲ್ಪಟ್ಟಿರುತ್ತಾರೆ.

ಸ್ಥಳೀಯ ಪಬ್ಲಿಕ ಹೆಲ್ತ ಕಮಿಟಿಯ ಒಂದು ಸಭೆಯು ಕಳೆದ ತಾ. ೧೪ರಂದು ಬೋರ್ಡ ಮೈನ ಎಲಿಮೆಂಟರಿ ಶಾಲೆಯಲ್ಲಿ ಕೂಡಿ ಪಬ್ಲಿಕ ಹೆಲ್ತ ವೀಕನ್ನು ಕಾರ್ಕಳಕ್ಕೆ ಅನ್ವಯಿಸುವ ಸಂದರ್ಭದಲ್ಲಿ ಕೈಕೊಳ್ಳಬೇಕಾದ ಕಾರ್ಯಕ್ರಮದ ಕುರಿತಾಗಿಯೂ ಮುಂಬರುವ ಆರೋಗ್ಯ ಮತ್ತು ಶಿಶುಸಪ್ತಾಹವನ್ನು ಯೋಗ್ಯ ರೀತಿಯಲ್ಲಿ ಆಚರಿಸುವ ಕುರಿತಾಗಿಯೂ ಆಲೋಚನೆ ನಡೆಯಿತು

ಇಲ್ಲಿಯ ಪ್ರಸಿದ್ಧ ವನಿಮಸುದಾರರಲ್ಲೊಬ್ಬರಾದ ಸಾಹುಕಾರ ಶ್ರೀ ಕೆ ಪಿ. ರಾಮ ಪ್ರಭುಗಳವರು ಕೆಲವು ದಿನಗಳ ಕಾಯಿಲೆಯಿಂದ ವೈಕುಂಠವಾಸಿಗಳಾದರು. ಅವರ ಆತ್ಮಕ್ಕೆ ಚಿರಶಾಂತಿಯನ್ನು ಬಯಸುತ್ತೇವೆ.

ಕಾಸರಗೋಡು

ನೀಲೇಶ್ವರ—ಶಾಲಾ ವಾರ್ಷಿಕೋತ್ಸವ.— ಬರುವ ದಶಂಬರ ತಾ. ೩ರಲ್ಲಿ ಮಾನ್ಯ ಜಿಲ್ಲಾ ನ್ಯಾಯಾಧೀಶರಾದ ಶ್ರೀ. ಪಿ. ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಇಲ್ಲಿನ ರಾಜಾಸ್ ಹೈಸ್ಕೂಲಿನ ವಾರ್ಷಿಕೋತ್ಸವವು ಜರಗಲಿರುವುದು

ಪೆರಡಾಲ:— ಇಲ್ಲಿನ ಎಂ ಎಸ್ ಕಾಲೇಜಿನ ವಾರ್ಷಿಕೋತ್ಸವವು ದಶಂಬರ ತಾ. ೧೨ರಂದು ಜರಗುವುದಾಗಿಯೂ ಅದರೊಡನೆ ಹಳೆಯ ವಿದ್ಯಾರ್ಥಿಗಳ ವಾರ್ಷಿಕ ಸಭೆಯೊಂದು ಜರಗುವುದಾಗಿಯೂ ತಿಳಿದುಬರುತ್ತದೆ

ಕುಂದಾಪುರ

ಬೈಲೂರು:— ಇಲ್ಲಿಯ ಕೊಂಗ್ರೆಸ್ ಕಮಿಟಿಯ ಆಹ್ವಾನದಂತೆ ಕಳೆದ ತಾ. ೪ನೇ ಸೋಮವಾರ ಸ್ಥಳೀಯ ಮಿಲಿಟರಿ ಮೈದಾನಿನಲ್ಲಿ ಶ್ರೀ. ದೇಶಭಕ್ತ ಎಸ್. ಎಸ್. ಕಿಲ್ಲೆಯವರು, ನೆರೆದ ಪ್ರಚಂಡ ಜನಸಮೂಹದೆದುರಿಗೆ, ಇಂದಿನ ಪ್ರಾಪಂಚಿಕ ಪರಿಸ್ಥಿತಿಯನ್ನೂ ಈ ಸಂಬಂಧದಲ್ಲಿ ಕಾಂಗ್ರೆಸಿನ ಧೋರಣೆಯನ್ನೂ ಕುರಿತು ಉಜ್ವಲ ಭಾಷಣವನ್ನಿತ್ತರು.

ಪುತ್ತೂರು

ಸುಬ್ರಹ್ಮಣ್ಯ:— ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂರ್ವ ಸಂಪ್ರದಾಯ ಪ್ರಕಾರ ಇದೇ ಬರುವ ಪ್ರಮಾಥಿಸಂವತ್ಸರದ ಕಾರ್ತಿಕ ಬ. ೧೩ ಯು ಶುಕ್ರವಾರ ತಾ. ೮—೧೨—೩೯ರಲ್ಲಿ ಮಹೋತ್ಸವವು ಪ್ರಾರಂಭವಾಗಿ ಕಾರ್ತಿಕ ಬ. ೩೦ ಯು| ರವಿವಾರ ತಾ. ೧೦—೧೨—೩೯ರಲ್ಲಿ ಲಕ್ಷದೀಪೋತ್ಸವ, ಮಾರ್ಗಶಿರ ಶು. ೪. ಯುಕ್ತ ಪಂಚಮಿಯು ಶುಕ್ರವಾರ ತಾ. ೧೫—೧೨—೩೯ರಲ್ಲಿ ಹೂವಿನ ತೇರು ಶು. ೫ಯು ಶನಿವಾರ ತಾ. ೧೬—೧೨—೩೯ರಲ್ಲಿ ಪಂಚಮಿ ರಥೋತ್ಸವ, ಶು. ೬ಯು ರವಿವಾರ ತಾ. ೧೭—೧೨—೩೯ರಲ್ಲಿ ಪಂಚಾಷಷ್ಠಿ ಮಹಾ ರಥೋತ್ಸವ,' ಅದೇ ಶು. ೭ಯು ಸೋಮವಾರ ತಾ. ೧೮—೧೨—೩೯ರಲ್ಲಿ ಅವಭೃತೋತ್ಸವವು ಮೊದಲಾಗಿ ವಿಶೇಷ ಉತ್ಸವಗಳು ನಡೆದು ಬರುವವು.

ಕರ್ನಾಟಕ

ಕನ್ನಡ ಸಾಹಿತ್ಯ ಪರಿಷತ್ತು:— ಶ್ರೀ| ಬೆನಗಲ್ ರಾಮರಾಯರ ರಾಜಿನಾಮೆ—ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಪ್ರಕೃತ ಅನುಸರಿಸುವ ಧೋರಣೆಯಲ್ಲಿ ಅಸಮಾಧಾನಗೊಂಡು ಶ್ರೀಮಾನ್ ಬೆನಗಲ್ ರಾಮರಾಯರು ಪರಿಷತ್ತಿನ ಸಂಬಂಧಗಳನ್ನು ತ್ಯಜಿಸಿ ಪರಿಷತ್ತಿಗೆ ತಮ್ಮ ರಾಜಿನಾಮೆಯನ್ನು ಕಳುಹಿಸಿದ್ದಾರೆಂದು ತಿಳಿದು ಬರುತ್ತದೆ.

ಬೆಳಗಾವಿ

ಲಾ ಕಾಲೇಜ್:— ಬೆಳಗಾವಿಯಲ್ಲಿ ಕರ್ನಾಟಕ ಲಾ ಸೊಸಯಿಟಿಯವರು ಲಾ ಕಾಲೇಜೊಂದನ್ನು ಕಳೆದ ಸೋಮವಾರ ಪ್ರಾರಂಭಮಾಡಿರುವರು. ಪ್ರಾರಂಭದಲ್ಲಿ ಹಿಂದಿನ ರೀತಿಯಲ್ಲಿಯೇ ಪಾಠಕ್ರಮಗಳು ಆರಂಭವಾಗುವವು.

ಮೈಸೂರು

ಬಿಡುಗಡೆ:— ಮೈಸೂರು ಸತ್ಯಾಗ್ರಹದಲ್ಲಿ ಸೆರೆಮನೆಗೊಯ್ದಿರುವ ಕೆಲವು ರಾಜಕೀಯ ಮುಖಂಡರನ್ನು ಸರಕಾರದವರು ಸೆರೆಮನೆಯಿಂದ ಬಿಡುಗಡೆ ಮಾಡಿರುವರು.

ಅಂತರಾಳ ಮಂತ್ರಿಮಂಡಳ:— ಮೈಸೂರು ಸರಕಾರದವರು ರಾಜಕೀಯ ಘಟನೆಯಲ್ಲಿ ಆಗಲಿರುವ ಸುಧಾರಣೆಗಳ ಪ್ರಕಾರ ಪ್ರತಿನಿಧಿ ಸಭೆ ಮತ್ತು ಕಾಯದೇ ಮಂಡಲಗಳು ಪುನರ್ಘಟಿಸಲ್ಪಡುವವು. ಈ ಸಂಬಂಧದಲ್ಲಿ ಸಾರ್ವತ್ರಿಕ ಚುನಾವಣೆಯು ನಡೆಯುವ ಪೂರ್ವದಲ್ಲಿ ಹೊಸ ಮತದಾರಯಾದಿಗಳನ್ನು ತಯಾರು ಮಾಡಬೇಕಾಗುವುದು. ಇವಲ್ಲದೆ ಈ ಸುಧಾರಣೆಗಳನ್ನು ಕಾರ್ಯಕಾರಿ ಮಾಡಲು ಇನ್ನೂ ಅನೇಕ ಪ್ರಾಥಮಿಕ ಸಿದ್ಧತೆಗಳು ಬೇಕಾಗುವವು.

ಇವನ್ನೆಲ್ಲ ಅನುಲಕ್ಷಿಸಿ ಹೊಸ ಘಟನೆಯ ಪ್ರಕಾರ ಮಂತ್ರಿಮಂಡಲವು ರಚಿಸಲ್ಪಡುವ ವರೆಗೆ ಸರಕಾರದವರು ಈಗಿರುವ ಸಭೆಗಳ ಸದಸ್ಯರೊಳಗಿನ ಕೆಲವರನ್ನು ತಾತ್ಕಾಲಿಕ ಮಂತ್ರಿಗಳಾಗಿ ನಿಯಮಿಸುವರೆಂಬ ವದಂತಿಯು ಇಲ್ಲಿ ಬಹಳವಾಗಿ ಹಬ್ಬಿತ್ತು.

ಆದರೆ ಸರಕಾರದವರು ತಾತ್ಕಾಲಿಕ ಮಂತ್ರಿಮಂಡಳವನ್ನು ನಿಯಮಿಸದೆ ಹೊಸ ಘಟನೆಯ ಪ್ರಕಾರ ಚುನಾವಣೆಗಳು ನಡೆದ ಆನಂತರವೇ ಮಂತ್ರಿಗಳನ್ನು ಆರಿಸುವರೆಂದು ಅಸೋಸಿಯೇಟೆಡ್ ಪ್ರೆಸ್ಸಿನ ಪ್ರತಿನಿಧಿಗೆ ತಿಳಿದುಬಂದಿದೆ.

ಯುದ್ಧವಾರ್ತೆ!

ಜರ್ಮನಿಯು ಹೋಲೆಂಡಿನ ಮೇಲೆ ಧಾಳಿ ನಡೆಸುವುದೆ?

ಇಟಲಿಯು ಜರ್ಮನಿಯನ್ನು ಎಚ್ಚರಿಸಿದೆ!

ಜಲಾಂತರ್ಗಾಮಿಗಳ ಚಟುವಟಿಕೆ! — ಅನೇಕ ಹಡಗುಗಳ ನಷ್ಟ!

ಜರ್ಮನಿಗೆ ವಿರುದ್ಧ ಜೆಕ್ಕರ ದಂಗೆ

೧೭—೧೧—'೩೯

ರಶ್ಯಾ ಫಿನ್‌ಲೆಂಡು ಮಾತುಕತೆಗಳು ಯ ವಿಷಮವಾಗಿದೆ.

ಮ್ಯುನಿಕಿನಲ್ಲಿ ನಡೆದ ಆಸ್ಫೋಟದ ಕುರಿತು ಹಲವರ ಬಂಧನವಾಗಿದೆ

ಯುದ್ಧಕಾಲದಲ್ಲಿ ಮುಷ್ಕರ ಹೂಡುವುದಿಲ್ಲವೆಂದು ಬ್ರಿಟನಿನ ಕೂಲಿಗಾರರು ಭರವಸೆಯಿತ್ತಿರುವರು

ಅಟ್ಲಾಂಟಿಕ್ ಸಾಗರದಲ್ಲಿ 'ಫೋನ್ ನಾಸೊ' ಎಂಬ ಬ್ರಿಟಿಷ್ ಹಡಗು ಮುಳುಗಿತು

ಷೆಟ್ಲೆಂಡ್ ದ್ವೀಪಗಳ ಮೇಲೆ ಜರ್ಮನಿಯ ಧಾಳಿಯು ಪುನಃ ಆರಂಭವಾಗಿದೆ

ಅಮೇರಿಕಕ್ಕೆ ಪೋಪರು ಶಾಂತಿಯ ಒಂದು ಸಂದೇಶವನ್ನು ಬ್ರಾಡ್‌ಕಾಸ್ಟ್ ಮಾಡಿದ್ದಾರೆ

೧೮—೧೧—'೩೯

'ಮೆಕ್ಲೆನ್‌ಬರ್ಗ್'ಮತ್ತು 'ಪರಾನಾ' ಎಂಬ ಎರಡು ಜರ್ಮನ್ ಹಡಗಗಳೂ, ಸರ್ದಾನಾ ಮತ್ತು ಫೋನ್‌ನಾಸೋ ಎಂಬ ಬ್ರಿಟಿಷ್ ಹಡಗಗಳೂ ಮುಳುಗಿದುವೆಂದು ತಿಳಿದುಬಂದಿದೆ ಸಿಂಗಾಪುರದ ಬಳಿ 'ಸರ್‌ಡಾನು' ಎಂಬ ಬ್ರಿಟಿಷ್ ಹಡಗೂ ಮುಳುಗಿತು

ಹಾಲೆಂಡಿನ ಮೇಲೆ ಜರ್ಮನಿಯು ಎದ್ದರೆ ಅಮೇರಿಕವು ಸುಮ್ಮನಿರುವುದಿಲ್ಲವೆಂದು ತಿಳಿಸಿದ

ಲಾರ್ಡ್ ನಫೀಲ್ಡರು ಬ್ರಿಟಿಷ್ ಪಡೆಗೆ ೫೦,೦೦೦ ಡಾಲರುಗಳನ್ನು ದಾನಮಾಡಿದರು

ಒಂದು ಬ್ರಿಟಿಷ್ ಡಿಸ್ಟ್ರಾಯರು ಮುಳುಗಿತು ಮತ್ತು 'ವೆಂಬ ೮೦೦೦ ಟನ್ನು ಭಾರದಹಡಗೂ ಜಲಾಹುತಿಯಾಯಿತು

೧೫—೧೧—'೩೯

ಮುಸಲಿನಿಯವರು ವಿದ್ಯಾರ್ಥಿಗಳಿಗೆ ಉಪದೇಶಮಾಡುತ್ತಾ, 'ವಿದ್ಯಾರ್ಥಿಗಳು ತಮ್ಮ ಪುಸ್ತಕದೊಡನೆ ಕೋವಿಗಳನ್ನೂ ಹಿಡಕೊಂಡಿರಬೇಕು' ಎಂದು ಹೇಳಿದರು ಜರ್ಮನಿಯ ಪ್ರಶ್ಯಾ ಮತ್ತು ಬವೇರಿಯಗಳಲ್ಲಿ ಜರ್ಮನಿ ವಿರುದ್ಧ ಚಳವಳಿವು ನಡೆಯುತ್ತಿದೆ, ಹಿಂದಿನ ರಾಜಮನೆತನವನ್ನು ತಿರಿಗಿ ಸಿಂಹಾಸನಕ್ಕೇರಿಸಬೇಕೆಂಬ ಆಂದೋಲನವು ಅದು, ಜನರು ದಂಗೆಯಾಗಿದ್ದಾರೆ

ಇಲ್ಲಿಯ ವರೆಗೆ ಜರ್ಮನಿಯು ತಟಸ್ಥ ರಾಷ್ಟ್ರಗಳಿಗೆ ಸೇರಿದ ೪೫,೪೭೧ ಟನ್ನು ಭಾರದಷ್ಟು ಹಡಗುಗಳನ್ನು ಮುಳುಗಿಸಿವೆ ಪೋಲೆಂಡಿನ ಸೇನಾನಿ ಮಾರ್ಶಲ್ ಸ್ಮಿಗ್ಲಿ ರಿಡ್ಜರನ್ನು ತೆಗೆದುಹಾಕಿ ಬೇರೆ ರಾಜ್ಯಸೂತ್ರವನ್ನು ನಡೆಸುವ ಯೋಚನೆ ಮಾಡಲಾಗಿದೆ

ಸ್ಮಿಗ್ಲಿ ರಿಡ್ಜ್

ಬ್ರಿಟನು ಮತ್ತು ಬಲ್ಗೇರಿಯಗಳು ವ್ಯಾಪಾರದ ಒಪ್ಪಂದ ಮಾಡಿಕೊಳ್ಳಲು ಯೋಚಿಸಿರುವುವು ಬ್ರಿಟಿಷ್ ಫ್ರಾನ್ಸುಗಳ ಹಣಕಾಸುಗಳ ವಿಷಯವಾಗಿ ಎರಡು ಸರಕಾರಗಳು ಯೋಚನೆಮಾಡುತ್ತವೆ

ಜರ್ಮನಿಯು ಬೆಲ್ಜಿಯಂ ಹಾಲೆಂಡುಗಳ ಶಾಂತಿಸೂಚನೆಗಳನ್ನು ತಿರಸ್ಕರಿಸಿತು

೧೬—೧೧—೩೯

ಕಾಮನ್ಸ್ ಸಭೆಯಲ್ಲಿ ಸರ್ ಜಾನ್ ಸೈಮನರು ಕಳೆದ ಎರಡು ವಾರಗಳ ಯುದ್ಧವಿವರವನ್ನು ಹೇಳಿದರು ಬೆಲ್ಜಿಯಂ ರಾಜರೂ, ಹಾಲೆಂಡಿನ ರಾಣಿಯೂ ಕೊಟ್ಟ ಶಾಂತಿಸೂಚನೆ, ಅವುಗಳಿಗೆ ಬ್ರಿಟನು ಫ್ರಾನ್ಸುಗಳು ಕೊಟ್ಟ ಸಹಕಾರದ ಉತ್ತರ ಜರ್ಮನಿಯ ಆಕ್ಷೇಪ ಉತ್ತರಗಳ ಕುರಿತು ವಿವರಿಸಿ ಹೇಳಿದರು

ಸೋವಿಯಟ್ ಮತ್ತು ಫಿನ್‌ಲೆಂಡುಗಳೊಳಗೆ ಕಳೆದ ಎರಡು ವಾರಗಳಿಂದ ನಡೆದುಬಂದ ಮಾತುಕತೆಯು ಮುರಿದಂತೆ ಕಂಡುಬರುತ್ತಿದೆ

ಆಫ್ರಿಕಾ ತೀರದಲ್ಲಿ ಬ್ರಿಟಿಷ್ ಹಡಗವೊಂದನ್ನು ಜರ್ಮನ್ ನಾವೆಯು ಮುಳುಗಿಸಿತು.

ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಮಿ ಆರ್ಥರ್ ಗ್ರೀನ್‌ವುಡ್ಡರು ಹೇಳಿದರು

ಲಿಥ್ವೇನಿಯಾದ ಎರಡು ಹಡಗಗಳು ಮುಳುಗಿಸಲ್ಪಟ್ಟವು ಜರ್ಮನಿಯ ಹಿಂದಿನ ಚಕ್ರವರ್ತಿಗಳನ್ನು ತಿರಿಗಿ ಸಿಂಹಾಸನಕ್ಕೇರಿಸುವ ಪ್ರಬಲ ಚಳವಳಿವು ಸುರುವಾದುದಾಗಿ ತಿಳಿಯಿತು

ಜರ್ಮನಿ ಸ್ವೀಡನ್‌ಗಳ ವ್ಯಾಪಾರ ಒಪ್ಪಂದದ ಮಾತುಕತೆಯು ಮುರಿದು ಹೋಯಿತು

೧೭—೧೧—'೩೯

ಬೆಲ್ಜಿಯಂ ರಾಜರೂ, ಹಾಲೆಂಡಿನ ರಾಣಿಯೂ ತಮ್ಮ ಯೂರೋಪಿನ ಶಾಂತಿ ಸಲಹೆಗೆ ನಾರ್ವೆ, ಸ್ವೀಡನ್ ಮತ್ತು ಡೆನ್‌ಮಾರ್ಕುಗಳು ಸಹಾಯವೀಯಬೇಕೆಂದು ಹೇಳಿದರು ಇಟಲಿ ಮತ್ತು ಸ್ಪೈನು ಸರಕಾರಗಳು ಹಾಲೆಂಡು ಮತ್ತು ಬೆಲ್ಜಿಯಂಗಳ ಮೇಲೆ ಜರ್ಮನಿಯು ಬೀಳಬಾರದೆಂದು ತಿಳಿಸಿರುವುವು

ಲಂಡನಿನಲ್ಲಿ ಸುಪ್ರೀಂ ವಾರ್ ಕೌನ್ಸಿಲಿನ ಸಭೆ ನಡೆಯಿತು ದಲಾಡಿಯರರು ಹೆಲಿಫಾಕ್ಸರು ಚೆಂಬರ್ಲಿನರು ಮೊದಲಾದವರು ಹಾಜರಿದ್ದರು ಚೆಂಬರ್ಲಿನ್ ಮತ್ತು ದಲಾಡಿಯರರು ಒಂದು ಸಂಯುಕ್ತ ಹೇಳಿಕೆಯನ್ನು ಕೊಟ್ಟು ಅದರಲ್ಲಿ ಬ್ರಿಟನು ಮತ್ತು ಫ್ರಾನ್ಸುಗಳು ಹಿಂದಿನ ಯುದ್ಧನೀತಿಯನ್ನು ಇದರಲ್ಲಿ ಯೂ ಉಪಯೋಗಿಸುವವೆಂದೂ, ಮಿತ್ರರಾಷ್ಟ್ರಗಳಿಗೆ ಇತರ ರಾಷ್ಟ್ರಗಳ ಬೆಂಬಲವುಂಟೆಂದೂ ಹೇಳಿದರು

ಡಾ ಬೆನೆಷರ್ ಮೇಲೆ ಸಹಾನುಭೂತಿ ತೋರಿಸಿದ ಒಂಭತ್ತುಮಂದಿ ಜೆಕ್ಕ ವಿದ್ಯಾರ್ಥಿಗಳ ಮೇಲೆ ಜರ್ಮನ್ ಸರಕಾರವು ಗುಂಡುಹಾರಿಸಿದ್ದಾಗಿ ತಿಳಿಯಿತು

ದಲಾಡಿಯರ್

೧೮—೧೧— ೩೯

ನಾಜಿಗಳು ಹೋಲೆಂಡಿನ ಮೇಲೆ ಧಾಳಿಯಿಡಲು ಹಂಚಿಕೆ ಮಾಡುತ್ತಿರುವರಾಗಿ ತಿಳಿದು ಬಂತು ಡಚ್ಚರು ಆ ಕುರಿತು ತಮ್ಮ ನಿಷೇಧವನ್ನು ಪ್ರಕಟಪಡಿಸಿದ್ದಾರೆ ಜರ್ಮನಿಯು ಫ್ರಾನ್ಸಿನ ಮೇಲೆ ವಿಮಾನ ದಾಳಿ ನಡೆಸಿರುವುದಾಗಿ ತಿಳಿಯಿತು

ಪಶ್ಚಿಮ ರಣರಂಗದಲ್ಲಿ ಯುದ್ಧ ಮಾಡುವ ಜರ್ಮನಿ ಫ್ರಾನ್ಸುಗಳ ವಿಮಾನ ಯುದ್ಧವು ಇನ್ನು ಹೊಸ ಯೋಜನೆಯಿಂದ ನಡೆಯುವುದೆಂದೂ, ಜರ್ಮನಿಯು ಮೇಲೆಯೇ ವಿಮಾನ ಧಾಳಿ ನಡೆಸಲು ಯತ್ನಿಸಲಾಗುವುದೆಂದೂ ತಿಳಿದು ಬಂದಿದೆ

ಸೈಮನ್ ಬೊಲಿವರ್ ಎಂಬ ಡಚ್ ಹಡಗವೊಂದು, ಜರ್ಮನಿಯಿಂದ ಮುಳುಗಿಸಲ್ಪಟ್ಟಿತು ಅದರಲ್ಲಿ ತುಂಬಾ ಸ್ತ್ರೀಯರೂ ಬಾಲಕರೂ ಇದ್ದರು.

ಈಜಿಪ್ಟ್ ಬ್ರಿಟನಿಗೆ ಸಹಾಯ ಕೊಡುವುದೆಂದು ಭರವಸೆ ಕೊಟ್ಟಿತು

ಜೆಕೊಸ್ಲವೇಕಿಯದಲ್ಲಿ ವಿದ್ಯಾರ್ಥಿಗಳು ಮಾಡಿದ ಮೆರವಣಿಗೆಗಾಗಿ, ಜರ್ಮನಿ ಸರಕಾರವು ಮಾರ್ಶಲ್ ಲಾ ಜಾರಿ ಮಾಡಿದೆ ಗುಂಪು ಗುಂಪನ್ನೇ ಬಂಧಿಸಿದ್ದಾರೆ

೧೯—೧೦—'೩೯

ಜೆಕೊಸ್ಲೆವಿಯದಲ್ಲಿ ಎದ್ದ ದಂಗೆಯಿಂದ ೮೦,೦೦೦ ಜನರನ್ನು ನಾಜೀ ಸರಕಾರವು ಬಂಧನದಲ್ಲಿಟ್ಟಿರುವುದಾಗಿ ತಿಳಿಯುತ್ತದೆ ವಿದ್ಯಾರ್ಥಿಗಳ ಮೇಲೆ, ಕಾಲೇಜುಗಳ ಮೇಲೆ ವಿಮಾನ ಧಾಳಿ ನಡೆಸಲಾಯಿತು

ಹೋಲೆಂಡಿನ ಮೇಲೆ ಜರ್ಮನಿಯ ವಿಮಾನವು ಹಾರಾಡಿತು

ಕಲ್ಕತ್ತಕ್ಕೆ ತಲಪಿದ ಸಿಟಿ ಓಪ್ ಕೈರೊ' ಹಡಗವನ್ನು ಜರ್ಮನ್ ಜಲಾಂತರ್ಗಾಮಿ ನಾವೆಯು ಬೆಂಬತ್ತಿದುದಾಗಿ ತಿಳಿದು ಬಂತು

ಜೆಕೊಸ್ಲೋವೇಕಿಯದ ಮಾಜಿ ಅಧ್ಯಕ್ಷರಾದ ಡಾ| ಬೆನೆಷರೂ ಪೋಲೆಂಡಿನ ಪ್ರಧಾನರಾದ ಸಿಕೊರ್ಸ್ಕಿಯವರೂ ಅನ್ಯೋನ್ಯ ಭೇಟಿಯಾದರು ಈ ಎರಡು ರಾಷ್ಟ್ರಗಳ ಸ್ವಾತಂತ್ರ್ಯಗಳೂ ಜರ್ಮನಿಯಿಂದ ಅಪಹೃತವಾಗಿದ್ದು ಅವುಗಳನ್ನೂ ತಿರಿಗಿ ಪಡೆವ ಹಂಚಿಕೆಯನ್ನು ಯೋಚಿಸುವ ಸಲುವಾಗಿಯೇ ಎಂದು ತಿಳಿದಿದೆ

೨೦—೧೧— ೩೯

ಲಂಡನಿನಲ್ಲಿ ಎತ್ತರ ಆಕಾಶದಲ್ಲಿ ಒಂದು ಶತ್ರು ವಿಮಾನವು ಹಾರಿ ಹೋಗುವುದು ಕಂಡು ಬಂತು

ಪಶ್ಚಿಮ ರಣರಂಗದಲ್ಲಿ ವಾತಾವರಣವು ಕೆಟ್ಟಿದೆ ರೈನ್‌ನದಿಯು ತಿರಿಗಿ ನೆರೆಯಿಂದ ಉಕ್ಕಿ ಬಂದಿದೆ

ಟೋರ್ಚ್ ಬೇರರ್ ಎಂಬ ಆಂಗ್ಲ ಹಡಗವೂ ಒಂದು ಫ್ರೆಂಚ್ ಹಡಗವೂ, ಕೌನಸ್ ಎಂಬ ಲಿಥ್ವೇನಿಯದ ಹಡಗವೂ ಮುಳುಗಿಸಲ್ಪಟ್ಟಿವೆ ವಿಗ್ಮೋರ್ ಎಂಬ ಇನ್ನೊಂದು ಹಡಗವೂ ಮುಳುಗಿವೆ ಆರ್ಲಿಂಗ್ ಕೋರ್ಟು ಎಂಬ ಬೇರೊಂದು ಹಡಗವೂ ಮುಳುಗಿಸಲಾಗಿದೆ

ಇವುಗಳಲ್ಲಿ ಹಲವು ಮೆಗ್ನೆಟಿಕ್ ಮೈನುಗಳಿಂದ ಎಂದರೆ ಸಮುದ್ರದಲಿಟ್ಟ ಬಾಂಬುಗಳಿಂದ ಮುಳುಗಿಸಲ್ಪಟ್ಟಿವೆ

ಡಚ್ಚರು ಒಂದು ನಾಜೀ ವಿಮಾನವನ್ನು ಗುಂಡಿಕ್ಕಿ ಕೆಳಗೆ ಹೊರಳಿಸಿರುವರು, ಅದರ ವೈಮಾನಿಕನನ್ನು ಕೊಂದುಹಾಕಿದ್ದಾರೆ

ಹೆಲಿಫಾಕ್ಸ್

ರಶ್ಯವೂ ಕಲಹಕಂಟಕವಾದುದು ಎಂದು ಪೋಲೆಂಡ್ ಪ್ರಧಾನ ಮಂತ್ರಿ ಸಿಕೋರ್ಸ್ಕಿಯವರು ಹೇಳಿದರು

ಜೆಕೊಸ್ಲವೇಕಿಯದ ನಾಜೀ ಪ್ರತಿನಿಧಿಯು ಹಿಟ್ಲರನನ್ನು ಕಂಡು, ಅಲ್ಲಿನ ದಂಗೆಯ ಕುರಿತು ವಿವರಿಸಲು ಹೋಗಿರುವುದಾಗಿ ತಿಳಿಯುತ್ತದೆ ಜೆಕೊಸ್ಲವೇಕಿಯದ ದಂಗೆಯೆದ್ದವರಲ್ಲಿ ೧೨೦ ಮಂದಿಯನ್ನು ಪಾಶಿಗೆ ಕೊಟ್ಟಿದ್ದಾರೆ

ಜೆಕ್ಕರು ಯಾಕೆ ದಂಗೆಯೆದ್ದರು?

ಜೆಕೊಸ್ಲೊವೇಕಿಯದಲ್ಲಿ ದಂಗೆಯೆದ್ದ ಜನರ ಮೇಲೆ ಜರ್ಮನರು ಕರಾಳ ರೀತಿಯ ಕಾರ್ಯಗಳನ್ನು ಕೈಗೊಂಡಿದ್ದಾರೆ, ಕಾಲೇಜುಗಳಿಗೆ ಸೈನಿಕರು ಹೊಕ್ಕು ಅನೇಕ ವಿದ್ಯಾರ್ಥಿಗಳನ್ನು ಲಾರಿಗಳಲ್ಲಿ ಹಾಕಿ ಸೆರೆಮನೆಗೆ ಕೊಂಡೊಯ್ದರು

ಚೆಂಬರ್‌ಲೀನ್

ಇದು ಆದುದು ಏಕೆಂದರೆ ಜೆಕೊಸ್ಲೊವೇಕಿಯದ ಸ್ವಾತಂತ್ರ್ಯ ಅಭಿಮಾನಿಗಳಾದ ವಿದ್ಯಾರ್ಥಿಗಳು ದೇಶದ ಸಲುವಾಗಿ ಮಡಿದವರ ಗೋರಿಗಳ ಬಳಿಗೆ ಹೋಗಿ ತಮ್ಮ ರಾಷ್ಟ್ರಗೀತೆಯನ್ನು ಹಾಡಿದ್ದಕ್ಕೆ ಹಾಗೆಮಾಡಕೊಡದೆಂದು ನಾಜೀ ಸರಕಾರವು ತಡೆಮಾಡಿತು! ಅದರಿಂದ ದಂಗೆ ಹುಟ್ಟಿತು!

ಜನರಲ್ ಬ್ಲೊಂಬರ್ಗರನ್ನು ಗುಂಡಿಕ್ಕಿ ಕೊಂದರು

ಫೀಲ್ಡ್ ಮಾರ್ಶಲ್ ವಾನ್ ಬ್ಲೊಂಬರ್ಗರು ಕಳೆದ ಸರ್ವ ಯುದ್ಧ ಮಂತ್ರಿಗಳಾಗಿದ್ದು ಹಿಟ್ಲರನ ನಾಜೀ ಆಡಳಿತೆಗೆ ಬಹಳವಾಗಿ ಬೆಂಬಲವಿತ್ತವರು ೧೯೩೨ರಿಂದ ಹಿಟ್ಲರ್ ಮತ್ತು ಇವರೊಳಗೆ ಸ್ನೇಹವು ಬೆಳೆದಿತ್ತು ಆದರೆ ಹಿಟ್ಲರನು ಅಧಿಕಾರಕ್ಕೆ ಬರುವವರೆಗೆ ಇವರು ತನ್ನ ರಾಜಕೀಯವನ್ನು ಗುಪ್ತವಾಗಿಟ್ಟಿದ್ದರು ಹಿಟ್ಲರನು ಅಧಿಕಾರಕ್ಕೇರಿದ ಮೇಲೆ ಅವರನ್ನು ವಿಮಾನದಲ್ಲಿ ಕರೆತಂದು ಸರಕಾರದ ಆಡಳಿತದಲ್ಲಿ ಸೇರಿಸಲಾಗಿತ್ತು

೧೯೩೪ರ ಶುದ್ಧೀಕರಣದ ಪ್ರಕರಣದಲ್ಲಿ ಜನರಲ್ ಶ್ಲೈಕರೆಂಬವರನ್ನು ಗುಂಡಿಕ್ಕಿಕೊಂದು ಯುದ್ಧಮಂತ್ರಿ ಪದವಿಗೆ ಇವರನ್ನು ಏರಿಸಲಾಗಿತ್ತು ಆ ಮೇಲೆ ಕೆಲಸಮಯದಲ್ಲಿ ಹಿಟ್ಲರ್ ಮತ್ತು ಇವರೊಳಗೆ ಅಭಿಪ್ರಾಯ ಭೇದವುಂಟೆಂದು ಪ್ರಚಾರವಿತ್ತು. ಆ ಬಳಿಕ ಇವರು ಎರಡನೆ ಮದುವೆ ಮಾಡಿಕೊಂಡರು ಪ್ರಾಯಕ್ಕೆ ಬಹುಕಿರಿಯಳೂ ಕೆಳತರಗತಿಯ ಕುಟುಂಬದವಳೂ ಆದ ಒಬ್ಬ ಕನ್ನಿಕೆಯನ್ನು ಮದುವೆಯಾದರು ಮದುವೆಗೆ ಹಿಟ್ಲರ್ ಗೋರಿಂಗರೇ ಹಾಜರಿದ್ದರು ಆದರೆ ಸೈನಿಕರು ಆ ಕುರಿತು ನಿಷೇಧ ಸೂಚಿಸಿ ಅಂತಹ ಮದುವೆಯು ಸೈನಿಕರಶಾಸನಕ್ಕೆ ವಿರುದ್ಧವೆಂದು ದೂರಲು ಹಿಟ್ಲರನು ಅವರನ್ನು ಕೆಲಸದಿಂದ ತಳ್ಳಿಹಾಕಿದನು

ಈಗ ಅವರನ್ನು ಗುಂಡಿಕ್ಕಿ ಕೊಂದಿತು ವ ವಾರ್ತೆ ಬಂದಿದೆ!

ಭಾರತೀಯ ನೌಕಾ ಕೆಲಸಗಾರರ ಬಂಧನ

ಅವರ ಬಿಡುಗಡೆಗಾಗಿ ಲಂಡನಿನಲ್ಲಿ ಚಳವಳ

ಲಂಡನಲ್ಲಿರುವ ನೌಕಾ ಕೆಲಸಗಾರರ ಸಂಘದವರು, ಮೊನ್ನೆ ತಾನೇ ಸೆರೆಮನೆಯಲ್ಲಿ ಇಟ್ಟಿರುವ ಹಲವು ಮಂದಿ ಭಾರತೀಯ ನೌಕಾ ಕೆಲಸಗಾರರನ್ನು ಅವರ ಕೇಳಿಕೆಗಳನ್ನು ಕೊಟ್ಟು ಬಿಡುಗಡೆ ಮಾಡಬೇಕಾಗಿ ಒಂದು ಠರಾವನ್ನು ಮಂಜೂರು ಮಾಡಿದರು ಅದಲ್ಲದೆ ಭಾರತದ ರಾಜಕೀಯ ಸುಧಾರಣೆಯ ವಿಷಯವಾಗಿಯೂ ಒಂದು ನಿರ್ಣಯವು ಮಂಜೂರಾಯಿತು

ಜರ್ಮನಿಯ ಕೈಸರರ ಆಶೆ!

ಇಂದು ಜರ್ಮನಿಯಲ್ಲಿ ನಡೆಯುವ ಘಟನೆಗಳಲ್ಲಿ ಜರ್ಮನಿಯ ಮಾಜಿ ದೊರೆಗಳಾದ ಕೈಸರರು ಬಹಳ ಕುತೂಹಲಗೊಂಡಿರುವರಾಗಿಯೂ, ಹಿಟ್ಲರನ ಅವಸ್ಥೆಯು, ಈ ಯುದ್ಧದಿಂದ ನಿರ್ಣಯವಾಗತಕ್ಕದ್ದಿದೆಯೆಂದೂ ಅವರ ಅಭಿಪ್ರಾಯ ಪಡುತ್ತಿರುವರಾಗಿ ರೂಟರ್ ವಾರ್ತೆ ಜರ್ಮನಿಯಲ್ಲಿ ಹಿಂದಿನ ರಾಜವಂಶದವರಿಗೆ ಬೆಂಬಲ ಕೊಡುವ ಚಳವಳಿವು ಹೆಚ್ಚುತ್ತಿರುವುದರಿಂದ ಅವರು ಆಶೆಗೊಂಡಿರುವರಂತೆ!

ಡಿಲ್ಲಿಯಲ್ಲಿ ವೈಸರಾಯರನ್ನು ಶ್ರೀ ಬಿರ್ಲಾರು ಕಂಡು ಮಾತನಾಡಿದರು ಅವರು ಅನಂತರ ಮಹಾತ್ಮಾಜಿಯವರನ್ನು ಕಂಡರು ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆ ತೀರಿದ ಮೇಲೆ ಮಹಾತ್ಮಾಜಿಯವರು ತಿರಿಗಿ ಒಮ್ಮೆ ವೈಸರಾಯರನ್ನು ಸಂದರ್ಶಿಸಲಿರುವರೆಂದೂ ವದಂತಿಯಿತ್ತು. ಆದರೆ ಈಗ ಅದು ಸುಳ್ಳೆಂದು ತಿಳಿದಿದೆ

ಬಂಗಾಳದ ರಾಜಕೀಯ ಕೈದಿಗಳಲ್ಲಿ ೪೦ ಮಂದಿಯನ್ನು ಸರಕಾರವು ಬಿಡುಗಡೆ ಮಾಡುವುದಾಗಿ ತಿಳಿದು ಬರುತ್ತದೆ

ಧಾಮಿ ಸಂಸ್ಥಾನದಲ್ಲಿ ಪುನಃ ಆಂದೋಲನವು ಉಗ್ರರೂಪದಿಂದ ಆರಂಭವಾಗಿರುವುದಾಗಿ ಗೊತ್ತಾಗಿದೆ

ಶ್ರೀ ಸತ್ಯಮೂರ್ತಿಯವರು ಮಾತನಾಡುತ್ತಾ ಜಗತ್ತಿನ ಹಿತದ ಸಲುವಾಗಿ, ಹಿಟ್ಲರಿಸಂ, ಸ್ಟಾಲಿನಿಸಂ, ಇಂಪೀರಿಯಲಿಸಂ ಇವೆಲ್ಲಾ ಹಾಳಾಗಿ ಹೋಗಬೇಕೆಂದೂ ಹೇಳಿದರು

ಡಿಲ್ಲಿಯಲ್ಲಿ ತಾ ೧೬ರಂದು ಅಖಿಲ ಭಾರತದ ಪ್ರದರ್ಶನವು ನಡೆಯಿತು

ಅಹಿಂಸೆಯ ಭರವಸೆ ಸಿಗದೆ ಆಂದೋಲನ ಆರಂಭಿಸಲಾರೆ!

ಗಾಂಧಿಜಿಯವರ ಖಂಡಿತ ನಿರ್ಧಾರ!

ವರ್ಕಿಂಗ್ ಕಮಿಟಿಯ ಅಧಿವೇಶನ! — ಜಿನ್ನಾ-ನೆಹರುಗಳ ಸಂಧಿಪ್ರಸ್ತಾಪ!

ತೆಂಕಾಶಿಯಲ್ಲಿ ನಡೆದ ಆಶ್ಚರ್ಯ ಘಟನೆ

ಕಲ್ಕತ್ತದಲ್ಲಿ ಮುಷ್ಕರ ಹೂಡಿದ ಕೆಲಸಗಾರರ ಸಂಬಳವನ್ನು ಸೇಕಡಾ ೧೦ರಷ್ಟು ಹೆಚ್ಚಿಸಲಾಗಿದೆಯೆಂದು ತಿಳಿಯಿತು

ರಾಜಾಜಿಯವರು ಒಂದು ಹೇಳಿಕೆ ಕೊಡುತ್ತಾ ಅದರಲ್ಲಿ ಮೈಸೂರು ಸರಕಾರವು ಪತ್ರಿಕೆಗಳ ಕಡೆಗೆ ಇಟ್ಟಿರುವ ಧೋರಣೆಯನ್ನು ತೀವ್ರ ಖಂಡಿಸಿದರು ಸರಕಾರಕ್ಕೆ ಸರಿಯಾಗಿಯಲ್ಲದೆ ಅದಕ್ಕೆ ಅಹಿತವೆಂದು ಆಗುವ ಯಾವ ಸುದ್ದಿಯನ್ನು ಮೈಸೂರು ಪತ್ರಿಕೆಗಳು ಪ್ರಕಟಿಸಿದರೆ ಅವುಗಳು ಬದುಕುವಂತಿಲ್ಲವೆಂದೂ, ಚಂದಾದಾರರಿಂದ, ಜಾಹಿರಾತುದಾರರಿಂದ, ಪ್ರೆಸ್ಸಿನ ಮಾಲಿಕರಿಂದ ಆದಿಯಾಗಿ ಹೆದರಿಸಿ ದರ್ಪದಿಂದ ಸರಕಾರದವರು ಆಳುತ್ತಿರುವರೆಂದೂ ಹೇಳಿ ಇದು ಮೈಸೂರಿನ ಮರೆಗಿಗೆ ಭೂಷಣವಲ್ಲವೆಂದರು! ಮೈಸೂರು ಸರಕಾರದ ಮರಿ ಹಿಟ್ಲರ್‌ಶಾಹಿಯ ಗುಟ್ಟು ರಾಜಾಜಿಯವರಿಗೆ ಚೆನ್ನಾಗಿ ಗೊತ್ತು!

ಅಸ್ಸಾಮಿನಲ್ಲಿ ಎದುರು ಪಕ್ಷದ ಮುಖಂಡರಾದ ಸರ್ ಮಹಮ್ಮದ್ ಸಾದುಲ್ಲರವರು ಹೊಸಮಂತ್ರಿಮಂಡಲವನ್ನು ರಚಿಸಿರುವರು

ಹಿಂದೂದೇಶವು ಯಾವಾಗಲೂ ಬ್ರಿಟನಿನ ಅಧೀನದಲ್ಲಿಯೇ ಉಳಿಯಬೇಕೊ, ಬ್ರಿಟನು ಅದಕ್ಕೆ ಸ್ವಾತಂತ್ರ್ಯವನ್ನು ಕೊಡಲು ಸಿದ್ಧವಿದೆಯೋ? ಈ ಪ್ರಶ್ನೆಯನ್ನು ಮಾತ್ರ ಕಾಂಗ್ರೆಸು ಬ್ರಿಟಿಷ ಸರಕಾರದ ಮುಂದಿಟ್ಟಿದೆಯಲ್ಲದೆ, ಬ್ರಿಟನಿನ ವಿಪತ್ತಿನಲ್ಲಿ ಕಾಂಗ್ರೆಸು ಲಾಭಪಡೆಯಲು ಯತ್ನಿಸುತ್ತಿದೆಯೆಂಬ ಬ್ರಿಟಿಷ್ ಪತ್ರಿಕೆಗಳ ಗಲಿಬಿಲಿಗೆ ಅರ್ಥವಿಲ್ಲವೆಂದೂ ಗಾಂಧಿಜಿಯವರು ಲಂಡನಿನ ಪತ್ರಿಕೆಯೊಂದಕ್ಕೆ ಕಳುಹಿಸಿದ ಸಂದೇಶವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ

ಮದ್ರಾಸಿನ ಹಿಂದೀ ವಿರೋಧಿಗಳಲ್ಲಿ ಮುಖ್ಯಸ್ಥರಾದ ರಾಮಸ್ವಾಮಿನಾಯಕರು ತಮಿಳರು ಹಿಂದೀಯರಲ್ಲವೆಂದೂ ಅವರಿಗೆ ಪ್ರತ್ಯೇಕ ದೇಶವು ಸಿಗಬೇಕೆಂದೂ ಅಂದುಬಿಟ್ಟಿದ್ದಾರೆ!

ಗಡಿನಾಡಿನ ಮಾಜಿ ಪ್ರಧಾನರಾಗಿದ್ದ ಡಾ ಖಾನ್ ಸಾಹೇಬರು ಪುನಃ ಡಾಕ್ಟರಿಕೆ ಪ್ರಾರಂಭಿಸಲು ಮಾಡುವುದಿಲ್ಲವೆಂದು ತಿಳಿದಿದೆ

ಬೊಂಬಾಯಿಯ ಮಂತ್ರಿಗಳಾಗಿದ್ದ ಶ್ರೀ ಕೆ ಯಂ ಮುನ್ಶಿಯವರು ಈಗ ತಿರಿಗ ವಕಾಲತ್ತು ನಡೆಸುತ್ತಿರುವರು

ಜಿನ್ನಾ ನೆಹರುಗಳ ಮಾತುಕತೆಯು ಬಹುಶಃ ಬರುವ ತಿಂಗಳ ಪ್ರಾರಂಭದಲ್ಲಿ ಸುರುವಾಗಬಹುದೆಂದು ತಿಳಿದಿದೆ

ಸಿಲೋನಿನಲ್ಲಿ ಒಂದು ದಿನ ಭಯಂಕರ ಮಳೆ ಬಂದು ಹಲವರು ನೆರೆಹಾವಳಿಗೊಳಗಾಗಿದ್ದಾರೆ

ತೆಂಕಾಶಿಯಲ್ಲಿ ಒಬ್ಬ ಪಕ್ಷವಾತ ಹಿಡಿದ ರೋಗಿಯು ರೋಗದಿಂದ ನರಳುತ್ತಿದ್ದು, ಹೇಗಾದರೂ ಇದು ಗುಣವಾದರೆ ಊರದೇವರಿಗೆ ತನ್ನ ನಾಲಿಗೆಯನ್ನು ಅರ್ಪಿಸುವುದಾಗಿ ಹೇಳಿ ಹಲದಿನ ದೇವಾಲಯದಲ್ಲಿ ಭಕ್ತಿಯಿಂದ ಇದ್ದನೆಂದೂ ಆ ಮೇಲೆ ಅವನಿಗೆ ರೋಗ ಗುಣವಾಯಿತೆಂದೂ, ರೋಗ ಗುಣವಾದ ಬಳಿಕ ತನು ಹರಕೆ ಹೇಳಿದಂತೆ ತನ್ನ ಅರ್ಧ ನಾಲಗೆಯನ್ನು ಕೊಯ್ದು ಅಭಿಷೇಕ ಮಾಡಿ ಅರ್ಪಿಸಿದನೆಂದೂ, ಹಾಗೆ ಅರ್ಪಿಸುತಿದ್ದಂತೆ ನಾಲಗೆಯು ಕರಗುತ್ತಾ ಬಂದು, ಅವನ ಬಾಯಿಯಲ್ಲಿ ನಾಲಗೆಯು ಕೂಡುತ್ತಾ ಬಂತೆಂದೂ ಎಸೋಸಿಯೇಟೆಡ್ ಪ್ರೆಸ್ಸಿನ ವಾರ್ತೆ!

ಮೈಸೂರಿನ ರಾಜಕೀಯ ಮುಖಂಡರು ತಮ್ಮ ಮುಂದಿನ ವಿಚಾರಗಳನ್ನು ಮಾಡಬೇಕಾದರೆ ಗಾಂಧಿಜಿಯವರ ಸಲಹೆಗಳನ್ನು ಕೇಳಿಬರಲು ಹೋಗಿರುವರು

ಗಾಂಧಿಜಿಯವರು ಅಲ್ಲಹಾಬಾದಿಗೆ ಬಂದು ಅಲ್ಲಿ ಕಮಲಾನೆಹರು ಸ್ಮಾರಕ ಆಸ್ಪತ್ರೆಯ ಅಸ್ತಿವಾರ ಶಿಲಾರ್ಪಣ ಮಾಡಿದರು



ಹರಿಜನ ಸೇವೆಯಲ್ಲಿ ಅವಿಶ್ರಾಂತವಾಗಿ ದುಡಿದ ಶ್ರೀ ಠಕ್ಕರ್‌ಬಾಪ್ಪರಿಗೆ ಇವರ ೭೦ನೇ ಜನ್ಮೋತ್ಸವವು ತಾ ೨೯ರಲ್ಲಿ ಆಗುವುದು ಅವರ ಸೇವೆಯ ಗೌರವಕ್ಕಾಗಿ ಒಂದು ಥೈಲಿಯು ಅವರಿಗೆ ಅರ್ಪಿತವಾಗುವುದು

ರಾಜಾಜಿಯವರೂ, ಅಲ್ಲಾಹಾಬಾದ್ ವರ್ಕಿಂಗ್‌ಕಮಿಟಿಯ ಸಭೆಗೆ ಆ ಸಂತ್ರ ಣದಂತೆ ಹೋಗಿರುವರು

ಬೊಂಬಾಯಿಯಲ್ಲಿ ಹಿಂದೂ ಮಹಾಸಭೆಯು ಸೇರಿ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕೆ ಬ್ರಿಟನು ಪೂರ್ಣ ಭರವಸೆ ಕೊಡಬೇಕೆಂದ ಠರಾವು ಮಾಡಿತು

ಪಂಜಾಬಿನ ಪ್ರಧಾನರಾದ ಸರ್ ಸಿಕಂದರ್ ಹಯ್ಯಾತ್ ಖಾನರು ಜಿನ್ನಾ ನೆಹರೂ ಮಾತುಕತೆಗಳ ಕುರಿತು ಆಶಾಪೂರ್ಣರಾಗಿದ್ದಾರೆ

ವಾರ್ಧದಲ್ಲಿ ಕಾಂಗ್ರೆಸ ವರ್ಕಿಂಗ್ ಕಮಿಟಿ ಸಭೆಯು ಜರಗಿತು ಅದರಲ್ಲಿ ಅನೇಕ ವಿಷಯಗಳ ಚರ್ಚಿಸಲ್ಪಟ್ಟವು ಸತ್ಯಾಗ್ರಹವು ಅವಸರವಾಗಿ ಸುರು ಮಾಡಲಾಗುವುದಿಲ್ಲವೆಂದೂ, ಹಾಗೆ ಮಾಡಬೇಕಾದರೆ ಗಾಂಧಿಜಿಯವರಿಗೆ, ಭಾರತವು ಅಹಿಂಸೆಗೆ ತಯಾರಾಗಿದೆಯೆಂಬ ವಿಶ್ವಾಸವು ಬರಬೇಕೆಂದೂ ತಿಳಿದ ಬಂತು

ನೆಹರುಗಳು ಲಕ್ನೋದಲ್ಲಿ ಭಾಷಣ ಮಾಡುತ್ತಾ ಅಹಿಂಸೆಯೊಂದೇ ನಮ್ಮ ಮಾರ್ಗವೆಂದ ಹೇಳಿದರು

ಮಕ್ಕಳಿಗೆ ದೇಹ ಶಿಕ್ಷೆ ಕೊಡಬಾರದು

ಮದ್ರಾಸು ಸರಕಾರದ ಪ್ರಕಟನೆ

ಎಲಿಮೆಂಟರಿ ಶಾಲೆಗಳಲ್ಲಿ ಮಕ್ಕಳಿಗೆ ದೇಹ ದಂಡನೆಯಾಗಿ, ಹೊಡೆಯುವುದೇ ಮೊದಲಾದ ಶಿಕ್ಷೆಗಳನ್ನು ಕೊಡಬಾರದೆಂದು ಒಂದು ಪ್ರಕಟನೆಯು ಹೊರಬಿದೆ

ನಾಝಿಗಳ ನರಕ ರಾಜ್ಯದಲ್ಲಿ ಗೋಬೆಲ್ಸನ ಭವಣೆ!

ಪ್ರಚಾರ ಮಂತ್ರಿಯ ಮೇಲೆ ಹಿಟ್ಲರನ ವಕ್ರದೃಷ್ಟಿ

ಈ ಸಲದ ಮಹಾಯುದ್ಧವು ಆರಂಭವಾದ ಮೊದಲುಗೊಂಡು, ಜರ್ಮನಿಯ ನಾಝಿ ಸರಕಾರದ ಪ್ರಚಾರ ಮಂತ್ರಿಯಾಗಿದ್ದ ಡಾಕ್ಟರ್ ಗೋಬೆಲ್ಸನ ಬಾಯಿಯು ಕಟ್ಟಿಹೋಗಿರುವುದು. ಸಂದರ್ಭ, ಅವಸರಗಳನ್ನು ನೋಡದೆ, ಎಲ್ಲಾ ಸಮಯಗಳಲ್ಲೂ ನಾಝಿ ಸರಕಾರದ ಪೌರುಷವನ್ನು ಕೊಚ್ಚಿಕೊಂಡು ಅದರ ಮೂಲಕ ಆತ್ಮಸ್ತುತಿಯನ್ನು ಮಾಡಿಕೊಳ್ಳುತ್ತಿದ್ದ ಅವನೀಗ ಮೌನವ್ರತವನ್ನು ತಾಳಿದ್ದಾನೆ. ವಿದೇಶೀಯ ಬೇಂಕುಗಳಲ್ಲಿ ಜರ್ಮನ ಜನರು ತಮ್ಮ ಹಣಕಾಸುಗಳನ್ನು ಠೇವಣಾತಿ ಇಡಕೂಡದೆಂದು ಸರಕಾರದ ಕಟ್ಟಾಜ್ಞೆ ಇದ್ದರೂ, ಅದನ್ನು ಮೀರಿ ಗೋಬೆಲ್ಸನೂ ಇತರ ನಾಝಿ ಪ್ರಮುಖರೂ ವಿದೇಶೀ ಬೇಂಕುಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಇಟ್ಟಿರುವರೆಂದೂ; ಯುದ್ಧದ ಪರಿಣಾಮವು ಏನೇ ಆಗಲಿ, ಜರ್ಮನ ಜನತೆಯು ನರಕದ ಸಂಕಷ್ಟಗಳನ್ನೇ ಅನುಭವಿಸಲಿ, ಈ ಮುಖಂಡರು ತಮ್ಮ ಭವಿಷ್ಯ ಜೀವನದ ಏರ್ಪಾಡು ಮಾಡಿಟ್ಟಿದ್ದಾರೆಂದೂ, ಆರೋಪವುಂಟಾಗಿರಲು, ಅದನ್ನು ಅಲ್ಲಗಳೆಯಲಿಕ್ಕೆ ಮಾತ್ರ ಗೋಬೆಲ್ಸ ಒಂದು ಬಾರಿ ಮಾತನಾಡಿದುದಲ್ಲದೆ, ಯುದ್ಧದ ಅನಂತರ ಅವನು ಬಾಯಿ ಎತ್ತಿದುದೇ ಇಲ್ಲ. ಆದುದರಿಂದ ಗೋಬೆಲ್ಸನ ಭವಿಷ್ಯದ ಕುರಿತು ನಾನಾ ಊಹಾಪೋಹೆಗಳು ಎದ್ದಿರುವುವು.

ಮಹಾ ವಾಗ್ಮಿ

ಡಾಕ್ಟರ ಗೋಬೆಲ್ಸನಂಥ ಮಹಾ ವಾಗ್ಮಿಯು ಜಗತ್ತಿನಲ್ಲೇ ಇಲ್ಲವೆನ್ನಬಹುದು. ಆತ್ಮಸ್ತುತಿಯನ್ನು ಮಾಡಿಕೊಳ್ಳುವುದರಲ್ಲಿ ಅವನು ಪ್ರವೀಣನಾಗಿದ್ದಾನೆ. ತನ್ನನ್ನು ತಾನು ಹೊಗಳಿಕೊಳ್ಳುವಾಗ ಗೋಬೆಲ್ಸನು ಮರ್ಯಾದೆಯ ಮೇರೆಯನ್ನು ಮೀರಲಿಕ್ಕೂ ಹೇಸನು. ವಂಚನೆ ಮೋಸ, ಮಿಥ್ಯಾಸ್ತುತಿ ಮಿಥ್ಯಾ ನಿಂದೆಗಳು ಅವನ ಹುಟ್ಟುಗುಣಗಳಾಗಿರುವುವು. ನಾಝಿಗಳು ಅಧಿಕಾರಕ್ಕೆ ಬಂದ ತರುವಾಯವೂ ಅದಕ್ಕೆ ಮೊದಲೂ, ಜನತೆಯ ಬೆಂಬಲವು ಅವರಿಗೆ ಸಿಗಲಿಕ್ಕೆ ಈ ಪ್ರಚಾರ ಮಂತ್ರಿಯ ಪ್ರಚಾರದಿಂದ ಜನರು ಮರುಳಾದದ್ದೇ ಕಾರಣವು. ಇಂಥವನು ಹಿಟ್ಲರನ ಬಲಕೈಯಂತಿದ್ದರೆ ಆಶ್ಚರ್ಯವಿಲ್ಲ. ಆದರೆ ಈಗೀಗ ಅವನ ಹೆಸರೇ ಕೇಳಿಬರುವುದಿಲ್ಲ. ಮಾತ್ರವಲ್ಲ ಗೋಬೆಲ್ಸನ ದ್ವೇಷಿಗನಾದ ಗೋರಿಂಗನ ಮಿತ್ರ ಡಾಕ್ಟರ ಮೈನರು ಎಂಬವನು ಗೋಬೆಲ್ಸನ ಉತ್ತರಾಧಿಕಾರಿಯಾಗುವನೆಂದೂ ಸುದ್ದಿ ಉಂಟಾಗಿದೆ. ಈ ಸುದ್ದಿಯುಂಟಾಗಲು ಕೆಲವು ಬಲವಾದ ಕಾರಣಗಳಿವೆ. ಪ್ರಚಾರ ಕಲೆಯಲ್ಲಿ ಗೋಬೆಲ್ಸನು ಕುಶಲನಾಗಿದ್ದನಾದರೂ, ನಾಝಿ ಪ್ರಮುಖರಿಗೆ ಅವನನ್ನು ಕಂಡರಾಗುವುದಿಲ್ಲ. ಅವನ ಮುಖಲಕ್ಷಣಗಳನ್ನು ನೋಡುವಾಗ, ಅವನು ಶುದ್ಧ ಆರ್ಯನಲ್ಲವೆಂದು ತೋರುತ್ತದೆ. ಅಲ್ಲದೆ ಪರಸ್ತ್ರೀಯರ ಮೇಲೆ ಅವನಿಗೆ ಯಾವಾಗಲೂ ಕಣ್ಣಿರುವುದಾದರಿಂದ ಅವನ ಹೆಸರು ಕೇಳಿದೊಡನೆ ಹಲವು ಗಂಡಂದಿರು ಸಿಟ್ಟಿನಿಂದ ಹಲ್ಲು ಕಚ್ಚುವರು. ಆದರೂ ಪ್ರಚಾರ ಮಾಡಿ 'ಹಿಟ್ಲರನು ಜರ್ಮನರ ಅಧಿದೇವತೆ' ಎಂಬ ಭಾವನೆ ಉಂಟಾಗುವಂತೆ ಮಾಡಿದವನೇ ಗೋಬೆಲ್ಸನಾಗಿದ್ದಾನೆ. ಇದನ್ನು ಯಾವ ನಾಝಿಯೂ ಮರೆಯುವ ಹಾಗಿಲ್ಲ.

ಗೋಬೆಲ್ಸನ ಪ್ರತಿಭೆ

ಗೋಬೆಲ್ಸನು ಪ್ರತಿಭಾಸಂಪನ್ನನಾಗಿದ್ದಾನೆ. ಆದರೆ ಅವನು ತನ್ನ ಈ ಗುಣವನ್ನು ದುಷ್ಕೃತ್ಯಗಳಿಗೆ ಉಪಯೋಗಿಸದ್ದಲ್ಲವಾದರೆ ಅವನಿಂದ ಪ್ರಪಂಚಕ್ಕೆ ತುಂಬಾ ಉಪಕಾರವಾಗುವುದರಲ್ಲಿ ಸಂದೇಹವಿದ್ದಿರಲಿಲ್ಲ. ಅನನ್ಸ್ವರೋಹೇವನು ಲಂಪಟನಾಗಿದ್ದುದರಿಂದ ನಾಝಿಗಳು ಅವನ ಕೊಲೆ ಮಾಡಿದರೆಂದು ಗೋಬೆಲ್ಸನು ಸುಳ್ಳು ಪ್ರಚಾರ ಮಾಡಿದ; ಆದರೆ ಜರ್ಮನ ಮಹಿಳೆಯರ ಕಾರ್ಯಕ್ಷೇತ್ರವು ಮನೆಯಾಗಿದೆ ಎಂದು ದೊಡ್ಡ ದೊಡ್ಡ ತತ್ವಗಳ ಬೋಧನೆ ಮಾಡಿ ನಾಝಿಗಳ ಲಂಪಟತನವನ್ನು ಆ ತತ್ವಗಳ ಮರೆಯಲ್ಲಿ ಅಡಗಿಸಿದ. ಗೋಬೆಲ್ಸನ ಈ ಎರಡೂ ಮಾತುಗಳನ್ನು ಜನರು ನಂಬಿದರು. ಆದರೆ ಪೋಲಾಂಡ ಯುದ್ಧದಲ್ಲಿ ಹಿಟ್ಲರನು ವಿಜಯಿಯಾದನಾದರೂ, ಅರ್ಧಕ್ಕಿಂತ ಹೆಚ್ಚಿಗೆ ಪೋಲಾಂಡದ ಅಂಶವು ರಶ್ಯದ ಪಾಲಿಗೆ ಯಾಕೆ ಹೋಯಿತೆಂಬುದನ್ನು ಜನರು ನಂಬುವಂತೆ ಯಾರೂ ಹೇಳಿದವರಿಲ್ಲ. ಆದುದರಿಂದ ಗೋಬೆಲ್ಸನೀಗ ಪ್ರಚಾರ ಮಂತ್ರಿಯಾಗಿಲ್ಲ; ಆಗಿದ್ದರೂ ಅವನು ಸ್ವೇಚ್ಛೆಯಿಂದ ಮಾತನಾಡುವ ಹಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪ್ರಾಯಶಃ ಅವನಿಗೂ ಇತರ ನಾಝಿಪ್ರಮುಖರಿಗೂ ಅಭಿಪ್ರಾಯ ಬೇಧವುಂಟಾಗಿರಬೇಕು. ಗೋಬೆಲ್ಸನು ಯುದ್ಧದ ವಿರೋಧಿಯಲ್ಲವಾದರೂ, ಯುದ್ಧವನ್ನು ಸಾರಲಿಕ್ಕೆ ಇದು ಅನುಕೂಲ ಸಮಯವಲ್ಲವೆಂದಿರಬಹುದು; ಅವನ ಈ ಮಾತು ಇತರರಿಗೆ ಮೆಚ್ಚುಗೆಯಾಗಿಲ್ಲದಿರಬಹುದು.

ಯುದ್ಧದ ಮೇಲೆ ಪ್ರೀತಿ

ಯಾವುದು ಮನುಷ್ಯನಿಗೆ ಪ್ರಾಪ್ತವಾಗುವುದಿಲ್ಲವೋ, ಅದನ್ನೇ ಪಡೆಯಲಿಕ್ಕೆ ಅವನು ಭಗೀರಥ ಪ್ರಯತ್ನ ಮಾಡುತ್ತಾನೆ. ಗೋಬೆಲ್ಸನು ಬಾಲ್ಯದಲ್ಲಿ ಕಾದಾಡುವವನಾಗಿದ್ದನು. ಆದರೆ ಅವನಿಗೆ ತನ ವಿದ್ಯಾರ್ಥಿದಸೆಯಲ್ಲಾಗಲೀ, ಅದನ್ನು ಕಳೆದ ಮೇಲಾಗಲೀ ಕಾದಾಡುವ ಸಂದರ್ಭಗಳೇ ದೊರೆಯಲಿಲ್ಲ. ಆದುದರಿಂದ ಅವನಿಗೆ ಯುದ್ಧದ ಮೇಲೆ ಅತ್ಯಾಸೆಯುಂಟಾಯಿತು. 'ಸಂಘರ್ಷವು ಮನುಷ್ಯ ಜೀವನದ ಸಹಜ ಗುಣವಾಗಿದೆ. ಯುದ್ಧವನ್ನು ವಿರೋಧಿಸುವುದೆಂದರೆ, ಮನುಷ್ಯನ ಉನ್ನತಿಯನ್ನು ತಡೆದ ಹಾಗೆ' ಎಂದು ಅವನು ಮನಮೋಹಕವಾದ ನುಡಿಗಳಲ್ಲಿ ಆಡಿ ಜನರನ್ನು ಯುದ್ಧಕ್ಕೆ ಅನುಕೂಲರಾಗುವಂತೆ ಪ್ರೇರೇಪಿಸಿದುದಿದೆ. ಅವನಲ್ಲಿ ಶಾರೀರಿಕ ಕುಂದುಕೊರತೆಗಳಿದ್ದು, ಮತ್ತೆ ಪ್ರಚಾರ ಮಂತ್ರಿಯಾಗಿದ್ದಲ್ಲವಾಗಿದ್ದರೆ, ಎಂದೋ ಸಿಕ್ಕಸಿಕ್ಕವರ ಕೂಡೆ ಜಗಳವನ್ನೆಬ್ಬಿಸಿ ಹಲ್ಲುಮುರಿಸಿಕೊಳ್ಳುತ್ತಿದ್ದನು! ಒಮ್ಮೆಗೆ ಸಿಟ್ಟುಗೊಂಡ ಜನರು ಅವನಿಗೆ ನಾಲ್ಕು ಏರಿಸಿ ಚೆನ್ನಾಗಿ ಬುದ್ಧಿ ಕಲಿಸಿದ್ದಾರಂತೆ?

ಮಾತಿನ ಬೊಂಬು

ಗೋಬೆಲ್ಸನ ತಂದೆ, ಒಬ್ಬ ಮೇಸ್ತ್ರಿಯಾಗಿದ್ದ. ಅವನ ಅಜ್ಜನು ಒಬ್ಬ ಕಮ್ಮಾರ. ಈಗ ಅವನಿಗೆ ಕೇವಲ ೪೨ ವರ್ಷ ಪ್ರಾಯ. ಆದರೂ ಅವನು ಮಾತಿನ ಬೊಂಬುಗಳನ್ನು ಸುರಿದು ಪ್ರಪಂಚವೇ ತಲೆದೂಗುವಂತೆ ಮಾಡಿದ್ದಾನೆ. ಕತ್ತಿಗಿಂತ ಲೇಖನಿಯ ಶಕ್ತಿಯು ಪ್ರಬಲವಾಗಿದೆ ಎಂಬುದನ್ನು ಅವನು ಚೆನ್ನಾಗಿ ತೋರಿಸಿಕೊಟ್ಟಿದ್ದಾನೆ. ಲೇಖನಿಯೇ ಅವನ ಅಪ್ರತಿಮ ಶಸ್ತ್ರವಾಗಿರುವುದು. ನಾಲಗೆಯೇ ಅವನ ಅನುಪಮ ಬಾಣವಾಗಿರುವುದು. ಈ ಎರಡು ಶಸ್ತ್ರಾಸ್ತ್ರಗಳ ಮೂಲಕ ಸಾಮಾನ್ಯ ಮೇಸ್ತ್ರಿಯ ಮಗನಾಗಿದ್ದ ಅವನು ಜರ್ಮನ ಸರಕಾರದ ಪ್ರಚಾರ ಮಂತ್ರಿಯ ಉಚ್ಚ ಪದವಿಗೇರಿದನು! ಪ್ರಚಾರ ಮಾಡುವದೆಂದರೆ ಎಂಥ ಕಲೆಯಾಗಿರುವುದೆಂಬುದನ್ನು ತನಗೆ ಅನ್ನಕೊಟ್ಟ ಹಿಟ್ಲರನಿಗೇ ಕಲಿಸಿಕೊಟ್ಟನು.

ಹಿಟ್ಲರನ ವಕ್ರದೃಷ್ಟಿ

ಹೇಳಬೇಕಾದುದನ್ನು, ಸತ್ಯವನ್ನು ಸುಳ್ಳಾಗಿಯೂ, ಸುಳ್ಳನ್ನು ಸತ್ಯವಾಗಿಯೂ ತಿರುವಿ ಮುರುವಿ ಜನಮನರಂಜನೆಯಾಗುವಂತೆ, ಮತ್ತು ಜನರು ನಂಬುವಂತೆ ಗೋಬೆಲ್ಸನೊಬ್ಬನೇ ಹೇಳಬಲ್ಲನು. ನಾಝಿಗಳಿಗೆ ತಮ್ಮ ಕಾರ್ಯ ಸಾಧನೆಗೆ ಇಂಥವನೇ ಪ್ರಚಾರ ಮಂತ್ರಿ ಕೆಲಸಕ್ಕೆ ಬೇಕಾಗಿದ್ದನು. ಹಿಟ್ಲರನು ಗೋಬೆಲ್ಸನಿಂದ ಪ್ರೇರಿತನಾಗಿಯೇ ಅನೇಕ ವಾರ 'ಢೋಲ್ ಬಜಾವ್' ಮಾಡಿ ಕಾರ್ಯವನ್ನು ಸಾಧಿಸಿಕೊಂಡು ಕೃತಾರ್ಥನಾಗಿದ್ದಾನೆ. ತನ್ನಷ್ಟು ಬುದ್ಧಿವಂತರು ಯಾರೂ ಇಲ್ಲವೆಂಬುದರಭಿಮಾನವು ಗೋಬೆಲ್ಸನಲ್ಲಿ ತುಂಬಾ ಇರುವುದರಿಂದ, ಅವನು ಸಾಮಾನ್ಯಜನತೆಯನ್ನು ಕಾಸಿನ ಪ್ರಯೋಜನಕ್ಕೆ ಬಾರದ ಜಾತಿ ಎಂದು ತಿಳಿಯುವನು. ಜನರು ವೇದಾಂತಕ್ಕೆ ಹುಚ್ಚಾಗುತ್ತಾರೆ ಎಂದು ಗೋಬೆಲ್ಸ ತಿಳಿದು, ಅವನು ಜನರಿಗೆ ವೇದಾಂತವನ್ನೇ ಹೇಳಿ ಕಾರ್ಯಸಾಧಿಸಿದನು. ಆದರೆ ಅವನು ಸ್ವತಃ ವೇದಾಂತಿ ಅಥವಾ ವೈರಾಗ್ಯಪರನಲ್ಲ! ಜರ್ಮನಿಯಲ್ಲಿ ಕಾಫಿಗೆ ಕೊರತೆ ಉಂಟಾಗಿರುವುದರಿಂದ ಜರ್ಮನರು ಕಡಿಮೆ ಕಾಫಿ ಕುಡಿಯಬೇಕೆಂದು ಅವನು ಹೇಳಲಿಲ್ಲ. ಪರಂತು ಕಾಫಿಯಿಂದ ಆರೋಗ್ಯಕ್ಕೆ ಹಾನಿಯಿರುವುದರಿಂದ ಅದನ್ನು ಕಚ್ಚ ಕುಡಿಯಬಾರದೆಂದನು. ಜನರು ಅವನ ಮಾತನ್ನು ನಂಬಿದರು. ಜರ್ಮನಿಯಲ್ಲಿ ಕಾಫಿ ಕಡಿಮೆಯಾಗಿದೆ ಎಂಬುದು ಅವರಿಗೆ ತಿಳಿಯಲೇ ಇಲ್ಲ! ಅಂಥ ಗೋಬೆಲ್ಸನೇ ಈಗ ಹಿಟ್ಲರನ ಅಪಕೃಪೆಗೆ ಪಾತ್ರನಾಗಿರುವನು. ನಾಝಿ ಪ್ರಮುಖರೆಲ್ಲರೂ ಅವನ ದ್ವೇಷಿಗರಾಗಿರುವುದರಿಂದ ಅವರ ನರಕರಾಜ್ಯದಲ್ಲಿ ಅವನಿಗೆ ಈಗ ಯಾವ ಪದವಿಯು ಪ್ರಾಪ್ತವಾಗಿರುವುದೋ, ಅವನು ಎಂಥ ಯಾತನೆಗಳನ್ನು ಅನುಭವಿಸುತ್ತಲಿರುವನೋ, ಪರಮಾತ್ಮನಿಗೇ ಗೊತ್ತು!

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of bankingbusiness transacted

Kanarese No. 5

ನಾಝಿಗಳ ಅಕೃತ್ಯಕ್ಕೆ ಅಮೇರಿಕದ ಪ್ರತೀಕಾರ!

ಗೋರಿಂಗ್

ಜರ್ಮನಿಯ ಹಿಟ್ಲರ ಅನುಯಾಯಿಗಳು ಮತ್ತು ಅವರ ಮುಖಂಡರು, ಜರ್ಮನಿಯು ನಾಶವಾದರೂ ತಾವು ಸುಖವಾಗಿರಬೇಕೆಂಬ ದಕ್ಕೋಸ್ಕರ ಲಕ್ಷಾಂತರ ಪವನುಗಳ ಸಂಪತ್ತಿಯನ್ನು ವಿದೇಶಗಳಲ್ಲಿ ಸಂಗ್ರಹಿಸಿಟ್ಟಿರುವರೆಂದು ಮೊದಲೊಮ್ಮೆ ವರ್ತಮಾನವೆದ್ದಿತ್ತು. ಹೀಗೆ ನಾಝಿಗಳು ವಿದೇಶಗಳಲ್ಲಿ ಮಾಡಿದ ಜೀವವಿಮೆ ಮತ್ತು ನಗದು ಹಣವು ಏಳು ಮಿಲಿಯ ಪವನುಗಳಷ್ಟಾಗಿರುವುದೆಂದು ಈಗ ಅಂದಾಜಾಗಿದೆ. ಈಗ ಹಣವನ್ನು ನಾಝಿಗಳಿಂದ ಪೀಡಿತರಾಗಿ ದೇಶಾಂತರವಾಸಿಗಳಾದ ಯೆಹೂದಿಯರು ಮೊದಲಾದ ದುರ್ಭಾಗಿಗಳಿಗೆ ಪರಿಹಾರವಾಗಿ ಯಾಕೆ ಕೊಡಕೂಡದೆಂಬ ವಿಚಾರವು ನಡೆದಿದೆ

ವಕೀಲರ ಅಭಿಪ್ರಾಯ

ಅಮೇರಿಕದಲ್ಲಿರುವ ನಾಝಿ ಸತ್ತೆಯ ವಿರೋಧಿಗಳು ಈ ವಿಚಾರವನ್ನು ವಕೀಲರ ಮುಂದಿಟ್ಟು, ಅಮೇರಿಕದಲ್ಲಿರುವ ನಾಝಿಗಳ ಸಂಪತ್ತನ್ನು ಅವರಿಂದ ಪೀಡಿತರಾದವರಿಗೆ ಪರಿಹಾರವಾಗಿ ಕೊಡಲಿಕ್ಕೆ ಕಾನೂನು ಕಾಯಿದೆಗಳ ಆತಂಕವಿದೆಯೋ ಎಂಬುವ ಪರೀಕ್ಷಿಸುತ್ತಲಿದ್ದಾರೆ. ಗೋರಿಂಗ, ಹೆಸ್ ಗೋಬೆಲ್ಸ, ರಿಬ್ಬನ್ ಟ್ರೋಪ, ಹಿಮ್ಲರ್ ಮೊದಲಾದ ನಾಝಿ ಪ್ರಮುಖರು ಹೇರಳ ಹಣವನ್ನು ತಮ್ಮ ಮತ್ತು ತಮ್ಮ ಏಜಂಟರುಗಳ ಹೆಸರಿನಲ್ಲಿ ಅಮೇರಿಕದ ಬೇಂಕುಗಳಲ್ಲಿ ವಿಮಾ ಕಂಪೆನಿಗಳಲ್ಲೂ ಸಂಗ್ರಹಿಸಿಟ್ಟಿರುವರು. ಇಷ್ಟು ದೊಡ್ಡ ಸಂಪತ್ತಿಯು ಅವರಿಗೆ ಹೀಗೆಯೇ ಪ್ರಾಪ್ತವಾಗಲಿಲ್ಲ. ಜರ್ಮನಿಯಲ್ಲಿ ವಾಸವಾಗಿದ್ದ ಯೆಹೂದಿ ಮತ್ತು ಇತರ ಶ್ರೀಮಂತರನ್ನು ಸುಲಿದು ಅವರು ಈ ಸಂಪತ್ತನ್ನು ತಮ್ಮ ಹೆಸರಿಗೆ ಮಾಡಿಕೊಂಡುದಾಗಿದೆ. ಆದ್ದರಿಂದ ಈ ಸಂಪತ್ತಿಯ ನಿಜವಾದ ಅಧಿಕಾರಿಗಳು ನಾಝಿ ಮುಖಂಡರ ವಕ್ರದೃಷ್ಟಿ ಮತ್ತು ಅವರ ಕೃಪೆಗೆ ಪಾತ್ರರಾದ ಆ ಯೆಹೂದಿ ಮೊದಲಾದವರಲ್ಲದೆ ಗೋರಿಂಗ ಹೆಸ್ ಮೊದಲಾದವರಲ್ಲ. ಆದ್ದರಿಂದ ನೀತಿಯ ದೃಷ್ಟಿಯಿಂದ ಈ ಹಣವನ್ನು ಮುಟ್ಟುಗೋಲು ಹಾಕಿ ಅದನ್ನು ಅದರ ಮೊದಲಿನ ಯಜಮಾನರಿಗೆ ಕೊಡುವ ಅಧಿಕಾರವು ಅಮೇರಿಕ ಸರಕಾರಕ್ಕೆ ಇರುವುದಾಗಿ ಹೇಳಲಾಗುತ್ತದೆ.

ಪೀಡಿತರಿಗೆ ಸಹಾಯ

ಆದ್ದರಿಂದ ನಾಝಿಗಳ ಅತ್ಯಾಚಾರ ಅನಾಚಾರಗಳಿಂದ ಪೀಡಿತರಾದವರಿಗೆ ಸಹಾಯ ಮಾಡುವುದಕ್ಕೋಸ್ಕರ ಹುಟ್ಟಿ ಅಮೇರಿಕದ ಸಂಘ ಸಂಸ್ಥೆಗಳು, ಆ ದೇಶದಲ್ಲಿ ಎಲ್ಲೆಲ್ಲಿ ನಾಝಿಗಳ ಎಷ್ಟೆಷ್ಟು ಸಂಪತ್ತಿ ಇದೆ ಎಂಬುದರ ಮಾಹಿತಿಯನ್ನು ಪಡೆಯಲಾರಂಭಿಸಿವೆ. ಸ್ಟೀಚೆರ್ ಎಂಬ ನಾಝಿ ಮುಖಂಡನು ಅಮೇರಿಕದಲ್ಲಿ ಬಹಳ ಸಂಪತ್ತನ್ನು ಅಲ್ಲಿಯ ಅಡವಾನ ಪತ್ರ ಮೊದಲಾದುವುಗಳಲ್ಲಿ ವಿಯೋಗಿಸಿದ್ದಾನೆ. ಗೋಬೆಲ್ಸ ಎಂಬ ಇನ್ನೊಬ್ಬ ನಾಝಿ ಮುಖಂಡನು ಯೆಹೂದಿಗಳಿಂದ ಸುಲಿದು ತನ್ನ ಸ್ವಂತದ ಲೆಕ್ಕಕ್ಕೆ ಬರೆದ ಸಂಪತ್ತಿಯ ಬೆಲೆಯು ೧,೫೦೦,೦೦೦ ಪವನು ಆಗಿರುವುದು. ಈ ದೊಡ್ಡ ಸಂಪತ್ತಿಯು ಒಂದು ದೊಡ್ಡ ರೇವಾಣಾತಿಯಾಗಿ ಇಡುವುದಕ್ಕೋಸ್ಕರ ಅವನು ಬೋಚರ ಎಂಬವನನ್ನು ತನ್ನ ಏಜೆಂಟನನ್ನಾಗಿ ಮಾಡಿ ಅಮೇರಿಕಕ್ಕೆ ಕಳುಹಿಸಿದ್ದನು. ಎಂಬೀ ಮೊದಲಾದ ಸಂಗತಿಗಳು ಮಾಹಿತಿ ಸಂಗ್ರಹದ ಕಾಲಕ್ಕೆ ಬಯಲಿಗೆ ಬಂದಿವೆ. ಈ ಹಣವನ್ನೆಲ್ಲ ಮೊದಲಿನ ಮಾಲಕರಿಗೇ ಕೊಡಿಸಬೇಕೆಂಬುದು ಆ ಸಂಘ ಸಂಸ್ಥೆಗಳ ಪ್ರಯತ್ನವಾಗಿರುವುದು.

ನಾಝಿಗಳು ಕಳ್ಳರು

ಅಮೇರಿಕದ ನಾಝಿ ವಿರುದ್ಧ ಲೀಗ ಎಂಬ ಸಂಸ್ಥೆಯ ಕಾರ್ಯದರ್ಶಿ ಕಪ್ಪನಕ್ಷಿ ಜಿ ಎಗರ್ಟನ ಹೆನ್ರಿಮನ ಎಂಬವರು ಪತ್ರಿಕಾ ಪ್ರತಿನಿಧಿಯೊಡನೆ ಮಾತನಾಡುತ್ತ 'ನಾಝಿಗಳೆಂದರೆ ದೊಡ್ಡ ಕಳ್ಳರು, ಪರರಸೊತ್ತನ್ನು ಸುಲಿದು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳುವ ಧೂರ್ತರು. ಆದ್ದರಿಂದ ಅಮೇರಿಕದಲ್ಲಿ ಬಂದು ನೆಲಸಿರುವ ನಾಝಿ ಪೀಡಿತರ ಹಣ ಸಂಪತ್ತಿಯನ್ನು ಯಾರಾದರೂ ನಾಝಿ ಮುಖಂಡರು ಸುಲಿದವರಾದರೆ, ಆ ಹಣವನ್ನು ನಾಝಿಗಳ ಅಮೇರಿಕದಲ್ಲಿದ್ದ ಸಂಪತ್ತಿಯಿಂದ ಅವರಿಗೆ ತೆರಿಸಲಿಕ್ಕೆ ನಮ್ಮ ಸಂಘವು ಬೇಕಾದ ಸಹಾಯ ಮಾಡುವುದು' ಎಂದು ಹೇಳಿರುತ್ತಾರೆ

ಒತ್ತಾಯದ ಹಿಂದಿ ಶಿಕ್ಷಣ ಯೋಜನೆ ಬಿಡಲಾಗುವುದಿಲ್ಲ

ಹಿಂದೀ ವಿರೋಧಕ ಚಳವಳಿಯ ಜನರನ್ನು ಬಿಡುಗಡೆಮಾಡುವುದಕ್ಕೆ ಮದ್ರಾಸ ಸರಕಾರದವರು ನಿಶ್ಚಯಿಸಿದ್ದುದು, ಇಲಾಖೆಯಲ್ಲಿಯ ಕೆಲವು ಶಾಲೆಗಳಲ್ಲಿ ಮೊದಲನೆ ಮೂರು ವರ್ಗಗಳಲ್ಲಿ ಹಿಂದಿಯನ್ನು ಒತ್ತಾಯದಿಂದ ಕಲಿಸುವುದಕ್ಕೆ ಯಾವದೆ ಪ್ರಕಾರದಿಂದ ಬಾಧಕವಾಗಿರುವುದಿಲ್ಲ. ಯಾಕೆಂದರೆ ಕಾಂಗ್ರೆಸ್ ಮಂತ್ರಿಮಂಡಳದವರು ಜಾರಿಯಲ್ಲಿ ತಂದ ಯೋಜನೆಯನ್ನು ಹಿಂತೆಗೆದುಕೊಳ್ಳುವುದು ಸರಕಾರದ ವಿಚಾರವಿಲ್ಲೆಂದು ತಿಳಿದುಬರುತ್ತದೆ.

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ತಕ್ಕುದಾದ ಸುಲಭ ರೀತಿಯಲಿ ನಾಶಮಾಡಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಹೆದು ಕುರುಹುಣ್ಣು, ಮುದ್ದಣ ಕಾಲು ಕುಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣಮಾಡುತ್ತದೆ.

ಕುಟಿಕೂರಾ ಮುಲಾಮು (cuticura ointment) ನೆದುರು ಯಾವ ಕ್ರಿಮಿಗಳು ತಡೆಯವು ಆದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ. ಕುಟಿಕೂರವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು. ಒಂದುವರ್ಷ ಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು.

ಕುಟಿಕೂರಾ ಮುಲಾಮನ್ನು (cuticura ointment) ಗಜ್ಜಿ, ಕುರು, ವ್ರಣ, ಹುಣ್ಣು, ಮುದ್ದಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮಛಿದ್ರಗಳನ್ನೂ ಗುಣಪಡಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು

Cuticura Ointment

ಗುಣಬಾರದಿದ್ದರೆ ಹಣ ವಾಪಾಸು

ಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಲ ಹಡೆದುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಸಂತಾನವಾದುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರವನಾದಿ ಔಷಧ ಬೇಡಿರಿ. ದಯಿಷ್ಯ ಸರ್ಟಿಫಿಕೇಟು... ವೈದ್ಯ ಎಲ್. ಸಿ. ಪಿ. ಎಸ್. ಕಳವಾವಾರು. ನೋಡೋ: ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ದಬ್ಬಿಗೆ ಕ್ರಯದರ ೪-೦-೦

ವಿ. ಪಿ. ಆ...

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜಿ, S. M C.

The Auttur & Jawahar Bank, Limited.

ದಿ ಅತ್ತೂರು ಎಂಡ್ ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು. ಕೆನರಾ ಹೈಸ್ಕೂಲ್ ರೋಡು | ಬ್ರೇಂಚ್: ಪೆಂಟ್ ಲೆಂಡ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000. | ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% | ನಿರಖು ಠೇವಣಾತಿ 12 ತಿಂಗಳಿಗೆ 4½

" 6 ತಿಂಗಳಿಗೆ 4% | " 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು:

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್.

[illegible] ಮಾತೆಯು ವೀರ ಪುತ್ರಿಯೆನಿ [illegible] ಸ್ಮಾರಕ ವೈದ್ಯಾಲಯದ [illegible] ಅಲ್ಲಾಬಾದಿನಲ್ಲಿ [illegible] ಮಹಾತ್ಮಾಜಿಯವರ ಅಮೃತಹಸ್ತದಿಂದ ನಡೆಯಿತು! [illegible] ಇದೀ ಜೀವ ಮಾನ [illegible] ಅಗರ್ಭ ಐಶ್ವರ್ಯ [illegible] ದಲ್ಲಿಯೇ [illegible] ಯಬಲ್ಲ ಸಂಪತ್ತಾಲಿನಿ ಯಾಗಿದ್ದರೂ, ರಾಷ್ಟ್ರದ ಬಡಬಗ್ಗರಿಗಾಗಿ, ದೀನರಿಗಾಗಿ, ಸಂಕಷ್ಟದಿಂದ ನರಳುವ ಸೋದರರಿಗಾಗಿ ಮರುಗುತ್ತಿದ್ದ [illegible] ದು ಶ್ರೇಷ್ಠ ಸ್ಮಾರಕ ಕಾರ್ಯವಾಯಿತು! ತನ್ನ ವೀರ ಪತಿಯಾದ ಜವಾಹಿರಲಾಲ ರಂತೆ, ಅವರೂ ಕೂಡ ರಾಷ್ಟ್ರದ ಸಲು ವಾಗಿ ಧೈರ್ಯಪೂರ್ವಕ ಹೋರಾಟ ಮಾಡಿದರು. ಈ ರಾಷ್ಟ್ರಯುದ್ಧದಲ್ಲಿ ಸಾವಿರಾರು ಮಂದಿಯೊಡನೆ ಅವರೂ [illegible]! ಭಾರತದ [illegible] ಸಲುವಾಗಿ ಅವರ ಹೃದಯವು [illegible] ಆವೇಶಪೂರ್ಣವಾಗಿತ್ತು!

[illegible] ಜವಾಹಿರಲಾಲ ನೆಹರುಗಳು ಸತ್ಯಾಗ್ರಹದಲ್ಲಿ [illegible] ಸೆರೆಮನೆಗೆ ತೆರಳಿದರು. ಉಚ್ಚ [illegible] ಯಾದ ಆಕೆಯು, ಭಾರತೀಯ ಸ್ತ್ರೀಯರ ಆದರ್ಶದಂತೆ, ಗಂಡನನ್ನು ಹಿಂಬಾಲಿಸಿ ಹೋಗುವುದು ಹೆಂಡತಿಯ ಕರ್ತವ್ಯವೆಂದು ತಾನೂ ಸತ್ಯಾಗ್ರಹಕ್ಕಿಳಿದರು! ಅಖಿಲ ಭಾರತವೇ ಬೆರಗಾಯಿತು! ಪತಿಯಲ್ಲಿ ಇರುವ ಪ್ರೇಮ, ಭಕ್ತಿಗಳಿಗೆ [illegible] ಅವರಿಗೆ ಭಾರತಮಾತೆಯ [illegible] [illegible] ತನ್ನ ಮರಣ ಶಯ್ಯೆಯಲ್ಲಿಯೂ ಅದೇ ಅವರ ಮಾತಾಗಿತ್ತು!

ಯೂರೋಪಿಗೆ ಅಸ್ವಸ್ಥಳಾಗಿ ಹೋಗಿದ್ದಾಗ, ಅಲ್ಲಿ ತನ್ನ ಕೊನೆಯ ಕಾಲದಲ್ಲಿ, ಪತಿಯು ಬಳಿಯೇ ಇರಲು, ಪತಿಯ ಕಾರ್ಯವು ಭಾರತದಲ್ಲಿ [illegible] ಹೆಯೆಂದು ಅವರಿಗೆ ತಿಳಿಯಬಂತು ತನ್ನ ಪರಿಸ್ಥಿತಿಯನ್ನು ಗಮನಿಸದೆ, ರಾಷ್ಟ್ರದ ಸಲುವಾಗಿ, ಬೇಗನೇ ಮಾತೃಭೂಮಿಗೆ ತೆರಳಿರೆಂದು ಪತಿಯನ್ನು ಅವರು ಬೇಳ್ಕೊಟ್ಟರು. ಜೀವನ ಮರಣದ ಸಂದರ್ಭದಲ್ಲಿಯಾದರೂ ಅವರಿಗೆ ಮಾತೃಭೂಮಿಯ ಸೇವೆಯೇ ಹೆಚ್ಚಿನದೆನಿಸಿತ್ತು.

ಜವಾಹಿರಲಾಲರು ನೈನಿ ಜೈಲಿನಲ್ಲಿ ಬಂಧಿತರಾಗಿದ್ದರು ಕಮಲಾ ನೆಹರುಗಳಿಗೆ ಪ್ರಾಣಾಂತಿಕ ಅಸ್ವಸ್ಥವಾಗಿತ್ತು ರಾಜಕೀಯ ವಿಷಯದಲ್ಲಿ ಮುಂದಕ್ಕೆ ಪ್ರವೇಶಿಸುವುದಿಲ್ಲವೆಂದು ಬರಕೊಟ್ಟರೆ, ನೆಹರುಗಳನ್ನು ಬಿಡಬಹುದಾಗಿ ಸರಕಾರವು ಹೇಳಿತು! ಈ ಮಾತು ಕಮಲಾ ನೆಹರುಗಳನ್ನು ಎಷ್ಟು ವ್ಯಥೆಗೊಳಿಸಲಿಲ್ಲ? ಒಂದು ಸಲ ಪತ್ನಿಯನ್ನು ನೋಡುವಂತೆ ನೆಹರುಗಳಿಗೆ ಒಪ್ಪಿಗೆ ಸಿಕ್ಕಿತು. ಅವರು ರುಗ್ಣಶಯ್ಯೆಯಲ್ಲಿರುವ ಪತ್ನಿಯನ್ನು ಕಂಡರು. ಜ್ವರವು ವಿಪರೀತವಿತ್ತು. ತನ್ನ ಪ್ರಾಣೇಶನು ತನ್ನ ಬಳಿ ಇರಬೇಕೆಂದು ಆಕೆಗೆ ಎಷ್ಟೊಂದು ಆತುರ [illegible] ರಲಿಕ್ಕಿಲ್ಲ? ತಿರಿಗಿ ಸೆರೆಮನೆಗೆ ಹೋಗುವ ಸಮಯ

ಜೀವಜ್ಯೋತಿಗಳು:

ಪಂಡಿತ ನೆಹರುಗಳ ಧರ್ಮಪತ್ನಿ ದಿವಂಗತಾ ಕಮಲಾ ನೆಹರು

[ನಾನು ಆಫ್ರಿಕದಿಂದ ಬಂದ ಮೇಲೆ ಕಮಲಾಳ ಪರಿಚಯವು ಉಂಟಾಯಿತು. ಆಕೆ ಗಣನೀಯ ಸ್ತ್ರೀಯಾಗಿದ್ದಳು. ಇತರ ಹಿಂದೂ ಸ್ತ್ರೀಯರಂತೆ ಪತಿಭಕ್ತಿಪರಾಯಣೆಯಾಗಿದ್ದುದು ಮಾತ್ರವಲ್ಲದೆ, ತನ್ನ ಜನ್ಮಭೂಮಿಯನ್ನು ಆಕೆ ಬಹಳವಾಗಿ ಪ್ರೀತಿಸಿದ್ದಳು. ಈ ಪ್ರೇಮವು ಅಪಾರವಾಗಿತ್ತು. ಉದಾತ್ತ ಧ್ಯೇಯದ ಮಾನಿನಿಯಾಗಿದ್ದಳು. ಯಾವುದನ್ನಾದರೂ ಆಕೆ ಮಾಡುವುದಿದ್ದರೆ ಅದು ಕರ್ತವ್ಯಪ್ರೇರಕವಾಗಿತ್ತಲ್ಲದೆ ಜಗತ್ತಿನ ಕೀರ್ತಿ ಲಾಲಸೆಯಿಂದ ಆಗಿರಲಿಲ್ಲ. ಕಮಲಾಳ ಜೀವಕ್ಕೆ ಭಗವಂತನು ಶಾಂತಿ ವಿಶ್ರಾಂತಿಗಳನ್ನು ದಯಪಾಲಿಸಲಿ.'—ಗಾಂಧಿಜಿ]



ಅಗಲಬೇಕಾಯಿತು! ಆದರೆ ಕಮಲಾನೆಹರುಗಳು ಮುಗುಳು ನಗುತ್ತಾ ಹೇಳಿದರು: 'ಇದೇನು ದೊಡ್ಡದು! ಸರಕಾರಕ್ಕೆ ನೀವು ಹಾಗೆಂದು ನನ್ನಾಣೆ ಬರಕೊಡಬೇಡಿ! ನನ್ನ ಜೀವವು ಮಾತೃಭೂಮಿಯ ಸೇವೆಗಿಂತ ದೊಡ್ಡದಲ್ಲ!' ಅದು ಎಂತಹ ಧೈರ್ಯ! ಎಂತಹ ದೇಶಾಭಿಮಾನ! [illegible]

ಜೀವನ ಸಂಗ್ರಾಮ

ಅವರು ಅತುಲ ಸಂಪತ್ತಿನಲ್ಲಿ ಅಮಿತ ಸುಖದಲ್ಲಿ ಬೆಳೆದವರು, ಮಹಾಮೇಧಾವಿಯನ್ನು, ಅಗರ್ಭ ಶ್ರೀಮಂತನನ್ನು ಕೈ ಹಿಡಿದವರು, ಆದರೆ ಒಂದು ಕ್ಷಣ ಶಾಂತಿಯಿಲ್ಲದೆ, ಅವರು ಜೀವನದಲ್ಲಿ ಎದುರಿಸಬೇಕಾಗಿದ್ದ ಒಂದೊಂದೇ ವಿಪತ್ಪರಂಪರೆಗಳನ್ನು ವಿಚಾರಿಸಿದರೆ, ಅದರಿಂದ, ಸಾಮಾನ್ಯ ಸ್ತ್ರೀಯೋರ್ವಳ ಹೃದಯವು ವಿದೀರ್ಣವಾಗುವಂತೆ [illegible]! ಆದರೆ ಅವರ ಮುಖದ ಕಳೆ ಪ್ರಸನ್ನತೆಗಳು ಒಮ್ಮೆಯೂ ಕೆಟ್ಟಿರಲಿಲ್ಲ.

ನೆಹರುಗಳ ನೆನಹು

ಪಂಡಿತ ನೆಹರುಗಳು ತನ್ನ ಆತ್ಮಚರಿತ್ರೆಯಲ್ಲಿ ತನ್ನ [illegible] ಕುರಿತು ಹೀಗೆ ಬರೆಯುತ್ತಾರೆ —

'ನನಗೆ ಮದುವೆಯಾದಾಗ ಇಪ್ಪತ್ತಾರು ವರ್ಷ, ಆಕೆಗೆ ಹದಿನೇಳು ವರ್ಷ ಆಕೆ ಕೇವಲ ಮುಗ್ಧ ಬಾಲಿಕೆ ಜಗತ್ತಿನ ವಿಷಯ [illegible] ರಲಿಲ್ಲ ನಮ್ಮಿಬ್ಬರ ವಿಚಾರಗಳಲ್ಲಿ ಬಹಳ ಅಭ್ಯಂತರವಿತ್ತು. ಆದರೆ ಆಕೆಯ ಮುಗ್ಧಭಾವದಲ್ಲಿ, ಮುದುಡಿದ ಹೂವಿನಲ್ಲಿರುವಂತೆ ಮುಂದಿನ ಪ್ರಸನ್ನತೆಯಿತ್ತೆಂದೂ, ಆದುದರಿಂದ ಜಾಗರೂಕತೆಯಿಂದ ಅವಳನ್ನು ನೋಡಿಕೊಳ್ಳಬೇಕೆಂದೂ ನಾನು ತಿಳಿದೆ. ನಾವಿಬ್ಬರೂ ಅನ್ಯೋನ್ಯ ಆಕರ್ಷಿತರಾದೆವು. ಹೀಗೆ ನಾವಿಬ್ಬರೂ ಸುಖದಿಂದ ಜೀವನಮಾಡಿದೆವು. ಮದುವೆಯಾದ ಇಪ್ಪತ್ತಮೂರನೆಯ ತಿಂಗಳಲ್ಲಿ ಮಗಳು ಇಂದಿರೆಯು ಹುಟ್ಟಿದಳು. ದೇಶದ ರಾಜಕೀಯ ವಿಷಯಗಳಲ್ಲಿ ಪ್ರಬಲ ಮಾರ್ಪಾಟಾಗುತ್ತಿದ್ದಂತೆ ನನ್ನ ಮನಸ್ಸು ಆ ಕಡೆ ತೀರಾ ಆಕರ್ಷಿತವಾಯಿತು ಸಾರ್ವಜನಿಕ ಕಾರ್ಯದಲ್ಲಿ ನಾನು ಸಂಪೂರ್ಣ ಸೇರಿಹೋದೆನು

'ಸಾರ್ವಜನಿಕ ಕಾರ್ಯದಲ್ಲಿ ನಾನು ಆಸಕ್ತನಾಗುತ್ತಿದ್ದಂತೆ ಅವಳ ಸಹವಾಸದಿಂದ ದೂರವಿರಬೇಕಾಯಿತು ಸಹಜವಾಗಿ ಅಂತಹ ಸಮಯ ಆಕೆ ಬೇಸರಗೊಂಡಿರಬಹುದು. ಆದರೆ ನನ್ನ ಪ್ರೀತಿ [illegible] ಅವಳು ನನಗೆ ಆಗಾಗ ಆವೇಶವನ್ನು ತುಂಬಿಸಿದಳು ಆ ಮೇಲೆ ಆಕೆ ಅಸೌಖ್ಯದಿಂದ ಬಿದ್ದಳು, ನಾನು ಹಲಗಾಲ ಸೆರೆಮನೆಯಲ್ಲಿ ಇರಬೇಕಾಯಿತು ಸತ್ಯಾಗ್ರಹವು ಆಕೆಯನ್ನು ರಣಕ್ಷೇತ್ರಕ್ಕೆ ಎಳೆಯಿತು ಆಕೆಯೂ ನನ್ನೊಡನೆ ಸೆರೆಮನೆಗೆ ಹೋದಾಗ ಸಹಜವಾಗಿ, ಬಹಳ ಆನಂದಗೊಂಡಿದ್ದಳು

'ನಾವು ಒಮ್ಮೊಮ್ಮೆ ಮಾತ್ರ ಒಂದಾಗುತ್ತಿದ್ದೆವು! ಆದರೆ ಆ ಮುಹೂರ್ತಗಳು ಅಮೂಲ್ಯವಾಗಿದ್ದುವು ಮದುವೆಯಾಗಿ ಹದಿನೆಂಟು ಸಂವತ್ಸರಗಳು ದಾಟಿದ್ದರೂ ಅವಳಲ್ಲಿ ಹಿಂದಿನ ಮುಗ್ಧ ಬಾಲಿಕಾ ಚಪಲತೆಯಿತ್ತು!

ಸಮಯದ ಚಿಹ್ನೆ

'ಆದರೆ ನಾನು ಬದಲಾಗಿದ್ದೆ. ನನ್ನ ತಲೆಯ ಕೂದಲು ನರೆತು, ಹಲವು ಕೂದಲುಗಳು ಉದುರಿಹೋಗಿದ್ದವು ನನ್ನ ಮುಖದಲ್ಲಿ ನೆರಿಗೆ ಬಿದ್ದಿತ್ತು ಕಣ್ಣಿಗೆ ಕತ್ತಲು ಕಟ್ಟಿತ್ತು! ಕಳೆದ ನಾಲ್ಕು ವರ್ಷಗಳ ಗೊಂದಲದಿಂದ ನಾನು ತುಂಬಾ ಬಳಲಿದ್ದೆ. ಆದರೆ ಮಗಳು ಇಂದಿರೆ ಮತ್ತು ಅವಳು ಇಬ್ಬರು ಅಕ್ಕತಂಗಿಯರಂತೆಯೇ ಕಾಣುತ್ತಿದ್ದರು

'ಆಕೆ, ತನ್ನ ಅನಾರೋಗ್ಯದ ಕುರಿತು ಜಾಗರೂಕತೆ ತೆಗೆದುಕೊಳ್ಳದ ವಿಷಯ ನಾನು ಸ್ವಲ್ಪ ಸಿಡಿದುಕೊಂಡೆ; ಆದರೆ ರಾಷ್ಟ್ರದ ಸಮರದಲ್ಲಿ ತಾನು ಪ್ರವೇಶಿಸಲಾರೆನಲ್ಲಾ ಎಂದು ವ್ಯಥೆಗೊಂಡಿದ್ದ ಆಕೆಯನ್ನು ನಾನು ಹೇಗೆ ದೂರಲಿ? ಅದೇ ಚಿಂತೆಯಿಂದ ಆಕೆ ತನ್ನ ಶರೀರದ ಕುರಿತೂ ಸರಿಯಾಗಿ ಶ್ರದ್ಧೆ ತೆಗೆದುಕೊಳ್ಳಲಿಲ್ಲ. ಖಂಡಿತವಾಗಿ ಆಕೆ ನನ್ನ ಕೈ ಬಿಟ್ಟು ಹೋಗಲಾರಳು! ಈಗ ಆಕೆಯ ಸಹಾಯ ನನಗೆ ಬೇಕಾಗಿದೆ ನನ್ನ ವಿವಾಹ ಜೀವನವು ಈಗ ಆರಂಭವಾಗಿದೆ ಹೀಗೆ ನಾನು ಯೋಚಿಸಿ, ದಿನ ದಿನ ತನ್ನ ಅವಳನ್ನೇ ಅವಲೋಕಿಸುತ್ತೇನೆ' [illegible]

ಪಂಡಿತ ನೆಹರುಗಳು ಆಶಿಸಿದ್ದಂತೆ ಆಕೆ ವಿದೇಶದಲ್ಲಿ ತನ್ನ ಕೊನೆಯುಸಿರನ್ನೆಳೆದರು. ಎಂತಹ ಜೀವ! ಎಂತಹ ದೇಶಪ್ರೇಮ! ಏನು ಯಾತನೆ! ಎಲ್ಲವೂ ಮಾತೃಭೂಮಿಯ ಸೇವೆಗಾಗಿ—

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

NACET BLADES
3 ಗೂಟಗಳ ರೇಜರುಗಳಿಗೆ


ನೆಸಿಟು ಬ್ಲೇಡುಗಳು ತಮ್ಮ ವಿಶಿಷ್ಟ ಗುಣಕ್ಕೂ ಕಡಿಮೆ ಕ್ರಯಕ್ಕೂ ಶಾಶ್ವತವಾದ ಖ್ಯಾತಿಯನ್ನು ಪಡೆದಿವೆ. ಇವುಗಳ ಪೂರ್ಣವಾದ ಭರವಸೆಯಿಂದಾಗಿ ಇವು ಜನಪ್ರೀತವಾಗಿವೆ—ಪ್ರತೀ ಬ್ಲೇಡುಗಳು ಉತ್ತಮವೂ ಸುಖವೂ ಆದ ಕ್ಷೌರವನ್ನುಂಟುಮಾಡುವುದು.
INT

DIAMONDS! DIAMONDS!
BEST BRILLIANCY!
K. R. K. SHET,
MANGALORE
ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ
ವಜ್ರಗಳು!
ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ
ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟತೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ. ಆರ್ ಕೆ. ಶೆಟ್, ಜುವೆಲ್ಲರ್,

ಹಿಟ್ಲರನನ್ನು ಅಧಿಕಾರಕ್ಕೇರಿಸಲು ಬೆಂಬಲ ಕೊಟ್ಟವರು ಯಾರು?

ಕೆಲವು ಜರ್ಮನ್ ಸಿರಿವಂತರ ಗುಟ್ಟು!

[ಹಿಟ್ಲರನು ಅಧಿಕಾರಕ್ಕೇರಬೇಕಾದರೆ, ಆತನ ನಾಜೀಪಕ್ಷವು ಬಲವಂತವಾಗಬೇಕಾಯಿತು; ಅಭಿವೃದ್ಧಿಗೆ ಬಲಗೈಯ್ಯ ಹಿಟ್ಲರನು ಏನು ತಾನೇ ಮಾಡಬಹುದಿತ್ತು! ಈ ಸಮಯದಲ್ಲಿ ಜರ್ಮನಿಯ ಕೆಲಮಂದಿ ಶ್ರೀಮಂತರು ಗುಪ್ತವಾಗಿ ಆತನಿಗೆ ಬೆಂಬಲವಿತ್ತರು—ಅಂದಿನ ಸಹಾಯದ ಇಮ್ಮಡಿ ಪ್ರತಿಫಲವು ಅವರಿಗೆ ಈಗ ದೊರಕುತ್ತದೆ!—ಹಾಗಾದರೆ ಹಿಟ್ಲರನನ್ನು ಈಗಿನ ಅಧಿಕಾರಕ್ಕೆ ಏರಿಸಿದವರು ಯಾರು?]

ಡಾ। ಜಿ. ಕ್ರುಪ್ ಮತ್ತು ಅವರ ಪತ್ನಿ.

ಹಿಟ್ಲರನು ಪರರಬೆಂಬಲವಿಲ್ಲದೆ ತಾನೇ ತಾನಾಗಿ ಹೀಗೆ ಅಪ್ರತಿಮ ಸಾಹಸ ಶೌರ್ಯಗಳಿಂದ ಜರ್ಮನಿಯ ದೊರೆಯಾದನೆ? ಹಿಟ್ಲರನು ನಾಜೀ ಪಕ್ಷ ಕಟ್ಟಿಕೊಂಡು ಅಧಿಕಾರವನ್ನು ಪಡೆಬೇಕಾದರೆ ಯಾರು ಆತನಿಗೆ ಬೆಂಬಲವಿದ್ದರು? ಈ ವಿಷಯವು ನಿಜವಾಗಿ ಮನೋರಂಜಕ ವರ್ಣನೆಯಾಗಿದೆ.

ಜಿ. ಕಿರ್ಡಾರ್ಫ್

ಉಕ್ಕಿನ ಮತ್ತು ಕಲ್ಲಿದ್ದಲ್ಲಿನ ವ್ಯಾಪಾರಿಯಾಗಿದ್ದ ಮಿಲಿಯಾಧಿಪತಿ ಜಿ. ಕಿರ್ಡಾರ್ಫ್ ಎಂಬವನು ಕಳೆದ ವರ್ಷ ತನ್ನ ೯೧ನೇ ವಯಸ್ಸಿನಲ್ಲಿ ತೀರಿಹೋದನು. ಆತನ ೯೦ನೇ ವಾರ್ಷಿಕ ದಿನದಂದು ಸ್ವತಃ ಹಿಟ್ಲರ್ ಮತ್ತು ಗೊಬೆಲ್ಸರು ಹೋಗಿ ಸಂಭ್ರಮದ ಕೂಟದಲ್ಲಿ ಸಹ ಭಾಗಿಗಳಾಗಿದ್ದರು.

ಕಳೆದ ಅರ್ಧ ಶತಮಾನಗಳಿಂದ ಈ ಮುದುಕನು ಕೇವಲ ಆಸ್ತಿಸಂಪಾದನೆ, [illegible], ತನ್ನ ಕೈ ಕೆಳಗೆ ಕೆಲಸಮಾಡುತ್ತಿದ್ದ ಸಾವಿರಾರು ಮಂದಿ ಕೂಲಿಗಾರರನ್ನು ಭಯಂಕರ ಹಿಂಸೆ ಕೊಟ್ಟು ಕೆಲಸಮಾಡಿಸುತ್ತಿದ್ದನು. ಪ್ರಾಯಕ್ಕೆ ಬಂದ ಅವನ ಮಕ್ಕಳೂ ಕೂಡಾ, ತಂದೆಯ ಈ [illegible] ವರ್ತನೆಯ ಕುರಿತು ಸಿಟ್ಟಿಂದ ಮಾತನಾಡಲು ಧೈರ್ಯಗೊಂಡಿರಲಿಲ್ಲ. ಅವನ ವ್ಯಕ್ತಿತ್ವವು ಅಷ್ಟು ಕಠೋರವಾಗಿತ್ತು! ಕೂಲಿಗಾರರ ಸಂಘವೆಂದರೆ ಅವನ ಮೈ ಉರಿಯುತ್ತಿತ್ತು. ತನ್ನ ಕಾರ್ಖಾನೆಯಲ್ಲಿ, ತನ್ನ ಕೆಲಸಗಾರರ ವಿಷಯದಲಿ ತಾನೇ ಒಬ್ಬನು ಹೇಳಿದಂತಲ್ಲದೆ ಇತರರು ಉಸಿರೆತ್ತಬಾರದಾಗಿ ಆತನು ಖಂಡಿತ ಹೇಳುತ್ತಿದ್ದನು

ಕಳೆದ ಯುದ್ಧಕ್ಕೆ ಮೊದಲು ಕೈಸರನಿಗೂ ಅವನಿಗೂ ಮನೋಭೇದವುಂಟಾಯಿತು. ಆ ಮೇಲೆ ರಾಷ್ಟ್ರದಲ್ಲಿ ಹಬ್ಬಿದ ನಾಜೀ ಪಕ್ಷಕ್ಕೆ ಗುಪ್ತವಾಗಿ ಸಾವಿರಾರು ರೂಪಾಯಿಗಳಿಂದ ಈತ ಧನ ಸಹಾಯ ಮಾಡಿದ. ನಿರುದ್ಯೋಗಿಗಳಾದ ಹಲ ಮಂದಿ ಯುವಕರು, ನಿರಂತರ ಮನಸ್ಸಿನಿಂದ ನಾಜೀ ಸರಕಾರಕ್ಕಾಗಿ ದುಡಿಯುವವರಾದರು. ಹಿಟ್ಲರನು ಕಿರ್ಡಾರ್ಫ್‌ನ ಬೆಂಬಲಕ್ಕಾಗಿ ತುಂಬಾ ಭರವಸೆ ಕೊಟ್ಟನು. ೧೯೩೩ರಲ್ಲಿ ಹಿಟ್ಲರನು ಜರ್ಮನಿಯ ಏಕೈಕ ಪ್ರಭುವಾದ ಮೇಲೆ ಕಿರ್ಡಾರ್ಫನ ಕಾರ್ಖಾನೆಯಿಂದ ಬೇಕಾದ ಸಾಲ ಸಾಮಗ್ರಿಗಳನ್ನು ತರಿಸಿ ಆತನು ಕೊಟ್ಟ ಹಣದ ಇಮ್ಮಡಿ ಮುಮ್ಮಡಿ ಲಾಭಮಾಡಿದನು

ಫ್ರಿಟ್ಜ್ ತಿಸೆನ್

ಜರ್ಮನಿಯ ೨೬ ಕಾರ್ಖಾನೆಗಳ ಡೈರೆಕ್ಟರನಾಗಿರುವ ಫ್ರಿಟ್ಜ್ ತಿಸೆನ್ ಎಂಬವನು ಅಂತವರಲ್ಲಿ ಇನ್ನೊಬ್ಬನು. ೧೯೩೧ರಲ್ಲಿ ಆತನು ಮತ್ತು ಗೋರಿಂಗನು ಭೇಟಿಯಾಗಿ ನಾಜೀ ಪಕ್ಷಕ್ಕೆ ಆತನು ಕೊಡತಕ್ಕ ಹಣ ಸಹಾಯ, ಆ ಮೇಲೆ ಆತನಿಗೆ ಪ್ರತಿಫಲವಾಗಿ ಮಾಡುವ ಕಾರ್ಯಗಳ ಕುರಿತು ಒಪ್ಪಂದ ಮಾಡಿಕೊಂಡರು.

ಮೂರು ವರ್ಷಗಳ ಹಿಂದೆ ದೊಡ್ಡ ಉದ್ಯೋಗಸ್ಥರ ಒಂದು ಸಭೆಯನ್ನು ಕರೆದಾಗ, ಅಲ್ಲಿ ಸ್ವತಃ ಹಿಟ್ಲರನೇ ಬಂದು, ಒಂದು ದೀರ್ಘ ಭಾಷಣವನ್ನು ಮಾಡಿದ್ದನು.

ಹಿಟ್ಲರನು ಅಧಿಕಾರಕ್ಕೆ ಬಂದ ಕೂಡಲೇ ಫ್ರಿಟ್ಜ್ ತಿಸೇನನು ರೈನ್‌ಲೇಂಡ್ ಮತ್ತು ವೆಸ್ಟ್ಫಾಲಿಯಗಳ ಕಮಿಶನನಾಗಿ ನೇಮಕ ಹೊಂದಿದನು. ಪ್ರಶಿಯನ್ ಸ್ಟೇಟ್ ಕೌನ್ಸಿಲಿನ ಪರವಾಗಿ ರಿಜ್ ಸ್ಟ್ಯಾಗಿನ ಸದಸ್ಯನೂ ಆಗಿ ಆರಿಸಲ್ಪಟ್ಟನು. ಹಿಂದೆ ಆತನು ಕೊಟ್ಟ ಸಹಾಯದ ಪ್ರತಿಫಲವನ್ನು ಇಂದು ಬಹಳವಾಗಿ ಹಿಟ್ಲರನಿಂದ ಪಡೆಯುತ್ತಿದ್ದಾನೆ.

೧೯೩೮ರ ಯೆಹೂದ್ಯರ ಪ್ರಕರಣದಲ್ಲಿ ಅವರ ಅಸಂಖ್ಯ ಸೊತ್ತುಗಳನ್ನು ಬಹಳ ಕಡಿಮೆ ಕ್ರಯದಲ್ಲಿ ಈತನು ಹಿಟ್ಲರನ ಮೂಲಕ ಪಡಕೊಂಡಿದ್ದಾನೆ.

ಡಾ. ಜಿ. ಕ್ರುಪ್

ಡಾಕ್ಟರ್ ಜ್ಯುಸ್ಟಾವ್ ಕ್ರುಪ್ ಇವನು, ರಾಜಕಾರಣಕ್ಕೆ ಸೇರಿದ್ದು ಮೊಟ್ಟಮೊದಲು ನಾಜೀ ಪಕ್ಷಕ್ಕೆ ಸೇರಲು ಸಂಶಯಪಡುತ್ತಿದ್ದನು. ಎರಡನೇ ವಿಲ್‌ಹೆಲ್ಮನ ಕುಟುಂಬದೊಡನೆ ಇವನು ಆಪ್ತನಾಗಿದ್ದನು. ಆದರೆ ನಾಜಿಗಳಿಂದ ಯಾವ ಪ್ರಯೋಜನವು ಸಿಗಬಹುದೆಂದು ತಿಳಿದಾಗ ಕ್ರುಪನು ತನ್ನ ಧೋರಣೆಯನ್ನು ಬದಲಾಯಿಸಿ, ಹಿಟ್ಲರನ ಅನುಯಾಯಿಯಾಗಿಬಿಟ್ಟನು

ಯೆಹೂದ್ಯರ ಅನೇಕ ಬ್ಯಾಂಕುಗಳಲ್ಲಿ ಕ್ರುಪನು ಇಂದು ಮುಖ್ಯಾಧಿಕಾರಿಯಾಗಿದ್ದಾನೆ. ಹೀಗೆ ಹಿಟ್ಲರನ ಅದ್ಭುತ ಏಕಾಧಿಪತ್ಯವು ಬೆಳೆಯಿತು! ಆದರಿಂದ ಜರ್ಮನಿಯ ಹಲವು ಶ್ರೀಮಂತರು ತಮ್ಮ ಶ್ರೀಮಂತಿಕೆಯ ಹೊಟ್ಟೆಯನ್ನು ಮತ್ತೂ ಬೆಳೆಸಿಕೊಂಡರು.

ಮಕ್ಕಳಿಗೆ
ಡೋಂಗರೆ
ಬಾಲಾಮೃತವೆ
ಆದರ್ಶಕರವಾದ
ಪೌಷ್ಟಿಕ.
ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಸಾವಕಾರ ಶ್ರೀನಿವಾಸ ರಂಗಪ್ಪೈ
[ಸ್ಥಾಪನೆ: ಕ್ರಿ. ಶ. 1858]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

[illegible]

ಪುರೋಹಿತ ಶ್ವಾಸಹಾರಿಯಲ್ಲಿ ಇಂಥ ಔಷಧಿ [illegible]

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಜಗತ್ತಿನ ಮಹಾ ಪುರುಷರ ಮೇಲೆ ಸನಾತನಿಗಳ ಆರೋಪ

ಗಾಂಧಿಜಿಯವರು ವ್ಯಭಿಚಾರಿಗಳೆ?

ಮಹಾತ್ಮಾ ಗಾಂಧಿಯವರೆಂದರೆ ಜಗದ್ವಿಖ್ಯಾತ ವಿಭೂತಿ ಪುರುಷರಾಗಿರುವರು. ಅವರ ಸತ್ಯನಿಷ್ಠೆ, ಅಹಿಂಸಾವಾದಗಳು ಲೋಕಪ್ರಖ್ಯಾತವಾಗಿವೆ ಅವರಂಥ ನೀತಿಪ್ರತಿಪಾದಕರು ಸಧ್ಯ ಪ್ರಪಂಚದಲ್ಲೇ ಬೇರೆ ಇರಲಾರರು. ಅವರ ಜೀವನವು ಸಾರ್ವಜನಿಕ ಜೀವನವಾಗಿದೆ. ಅದರಲ್ಲಿ ಗುಪ್ತವಾದದ್ದು ಏನೂ ಇರುವುದಿಲ್ಲ. ಅಂಥವರು ವ್ಯಭಿಚಾರಿಗಳಾಗಿರುವರೆಂದೂ, ಡಾಕ್ಟರ ಸುಶೀಲಾ ನಾಯರ್, ಪ್ರೇಮಾಬೆನ್ ಕಂಟಕ ಮೊದಲಾದ ನುರಿತ ಅನುಭವೀ ಕೆಲಸಗಾರಿಣಿಯರೊಂದಿಗೆ ದುರಾಚರಣೆಯ ಸಂಬಂಧವನ್ನಿಟ್ಟುಕೊಂಡಿರುವರೆಂದೂ ನಮ್ಮ ಸನಾತನಿಗಳು ಅವರ ಮೇಲೆ ಸುಳ್ಳು ಆರೋಪವನ್ನು ಹಾಕಿದ್ದಾರೆ ಅವರ ಈ ಸುಳ್ಳು ಆರೋಪವನ್ನು ವಿಲಾಯತಿಯ ನಮ್ಮ ಹಿತಶತ್ರುಗಳು ತಮ್ಮ ಸ್ವಾರ್ಥದ ಬೇಳೆಯನ್ನು ಬೇಯಿಸಲಿಕ್ಕೆ ದುರುಪಯೋಗ ಮಾಡುತ್ತಲಿರುವರು ಎಂದು ಈಗ ತಾನೆ ಪ್ರಕಟವಾಗಿರುವುದು ಸನಾತನಿಗಳ ಈ ಹೊಲಸು ಮನೋವೃತ್ತಿಯು ತ್ಯಾಜ್ಯವಾಗಿರುವುದು ಇಂಥ ಸುಳ್ಳು ಪ್ರಚಾರದಿಂದ ಅವರಿಗೇನು ಲಾಭವಿಲ್ಲ ಅದರ ಬದಲಿಗೆ ದೇಶಕ್ಕೆ ತುಂಬ ಹಾನಿಯಾಗುತ್ತದೆ

ಸುಳ್ಳು ಪ್ರಚಾರಕ್ಕೆ ಕಾರಣ

ಮಹಾತ್ಮಾಜಿಯವರ ಅಸ್ಪೃಶ್ಯತಾ ನಿವಾರಣೆ ಮತ್ತು ಹರಿಜನ ಸೇವೆಯು ನಮ್ಮ ಸನಾತನಿ ಬಂಧುಗಳಿಗೆ ಬೇಡವಾಗಿದೆ. ಹರಿಜನರೊಡನೆ ಪಶುತುಲ್ಯ ವ್ಯವಹಾರವನ್ನಿಟ್ಟುಕೊಂಡಿರುವುದೇ ತಮಗೂ ತಮ್ಮ ಹಿಂದೂಧರ್ಮಕ್ಕೂ ಗೌರವಾಸ್ಪದವಾಗಿರುವದೆಂದು ಅವರು ಎಣಿಸಿರಬಹುದು ಆದ್ದರಿಂದ ಮೊದಲು ಮಹಾತ್ಮರ ಹಿಂಬಾಲಕರಾಗಿದ್ದ ಈ ಸನಾತನಿಗಳೇ ಈಗ ಅವರ ಎದುರು ನಿಂತಿದ್ದಾರೆ. ಬೇರೆ ಯಾವ ಉಪಾಯದಿಂದಲೂ ಮಹಾತ್ಮರ ಧವಳಕೀರ್ತಿಯ ಮೇಲೆ ಕೆಸರೆರಚಲಿಕ್ಕೆ ಆಗದಿರುವುದನ್ನು ಕಂಡು ಈಗ ಈ ಸುಳ್ಳು ಪ್ರಚಾರದ ಸಾಧನವನ್ನು ಕೈಕೊಂಡಿದ್ದಾರೆ ಆದರೆ ಸೂರ್ಯನ ಕಡೆಗೆ ಉಗುಳಲಿಕ್ಕೆ ಹೋದವರಂತೆಯೇ ಈ ಸನಾತನಿಗಳ ಸ್ಥಿತಿಯಾಗಿದೆ ಸತ್ಯಕ್ಕೇ ಜಯವಾಗುವದಲ್ಲದೆ ಸುಳ್ಳಿಗಲ್ಲ. ಸನಾತನಿಗಳು ಧರ್ಮರಕ್ಷಣೆಯ ಸೋಗು ಹಾಕಿಕೊಂಡು ಜನರ ಮೆಚ್ಚುಗೆಯನ್ನು ಪಡೆಯಲಿಕ್ಕೆ ಇಂಥ ಸುಳ್ಳು ಪ್ರಚಾರವನ್ನು ಕೈಕೊಂಡರೆ ಅದರಿಂದ ಅವರ ದುಷ್ಟ ಮನೋವೃತ್ತಿಯು ಬಯಲಿಗೆ ಬರುತ್ತದಲ್ಲದೆ ಬೇರೇನಿಲ್ಲ.

ಸನಾತನಿಗಳು ಹೇಳುವದೇನು?

ಶ್ರೀಮತಿ ಡಾಕ್ಟರ ಸುಶೀಲಾ ನಾಯರರು ತೈಲಾಭ್ಯಂಗದ ವಿಷಯದಲ್ಲಿ ಪ್ರವೀಣೆಯರಾಗಿರುವರು. ಗಾಂಧಿಯವರು ಅವರಿಂದ ಕ್ರಮವರಿತು ತೈಲಾಭ್ಯಂಗ ಮಾಡಿಸಿಕೊಳ್ಳುತ್ತಾರೆ. ಆದರೆ ಇದರಲ್ಲಿ ಗುಪ್ತವಾದುದೇನೂ ಇರುವುದಿಲ್ಲ. ಎಲ್ಲವೂ ಬಯಲಿನಲ್ಲಿ ನಡೆಯುತ್ತದೆ. ಶ್ರೀಮತಿ ಪ್ರೇಮಾಬೆನ್ ಕಂಟಕರು ಸಾಬರಮತಿ ಆಶ್ರಮದ ಸದಸ್ಯೆಯರು ಅವರು ವಿಶ್ವವಿದ್ಯಾಲಯದ ಪದವೀಧರರು, ಸಾರ್ವಜನಿಕ ಜೀವನದಲ್ಲಿ ತಮ್ಮ ಗೊತ್ತುಗುರಿ ಮತ್ತು ಜವಾಬುದಾರಿಕೆಗಳನ್ನು ಚೆನ್ನಾಗಿ ಬಲ್ಲ ಅನುಭವಿಗಳು ಅವರು ಆಗಾಗ ಬ್ರಹ್ಮಚರ್ಯದ ಕುರಿತು ಪ್ರಶ್ನೆಗಳನ್ನು ಕೇಳಿ, ಮಹಾತ್ಮರಿಂದ ಸದುತ್ತರಗಳನ್ನು ಪಡೆದುದಿದೆ ಆ ಉತ್ತರಗಳು ಸಂಪೂರ್ಣ ನಿರ್ದುಷ್ಟ ಮತ್ತು ನಿರ್ಮಲ ಅಂತಃಕರಣದಿಂದ ಪ್ರೇರಿತವಾದವುಗಳಾಗಿವೆ ಇವುಗಳಂಥ ಘಟನೆಗಳನ್ನೆ ಸನಾತನಿಗಳು ಎತ್ತಿಕೊಂಡು, ಅವುಗಳಿಗೆ ಬೇಕಾದಂತೆ ಬಣ್ಣಕೊಟ್ಟು ತಮ್ಮ ಕಾರ್ಯಸಾಧನೆಗೆ ಉಪಯೋಗಿಸಿಕೊಂಡಿದ್ದಾರೆ ಮತ್ತು ಮಹಾತ್ಮರ ವ್ಯಭಿಚಾರಿಗಳೆಂದೂ, ಅನೀತಿಯ ಪ್ರಚಾರಕರೆಂದೂ, ತಮ್ಮ ಕಾಮಾಸಕ್ತಿಯನ್ನು ಮರೆಸಲಿಕ್ಕೆ ಬ್ರಹ್ಮಚರ್ಯದ ಸೋಗು ಹಾಕಿಕೊಂಡಿದ್ದಾರೆಂದೂ ಅವರ ಮೇಲೆ ಸುಳ್ಳು ಅಪವಾದವನ್ನು ಹೊರಿಸಿದ್ದಾರೆ

ಮಹಾತ್ಮರ ನಿರಾಕರಣೆ

ದ್ವೇಷಿಗರು ಈ ಸುಳ್ಳು ಪ್ರಚಾರದಿಂದ ತಮ್ಮ ಸ್ವಾರ್ಥವನ್ನು ಸಾಧಿಸುತ್ತಿರುವರೆಂದೂ ವಿಲಾಯತಿಯ ವೃತ್ತಪತ್ರಿಕೆಗಳಲ್ಲಿ ಕೂಡ ಈ ಕಾರ್ಯವು ನಡೆದಿರುವದೆಂದೂ ಮೊನ್ನೆ ಬಂದಿದ್ದ ಡಾಕ್ಟರ್ ಧರ್ಮನ್ನರ ಹೇಳಿದರು ಆದ್ದರಿಂದ ಮಹಾತ್ಮರು ಸನಾತನಿಗಳ ಈ ಸುಳ್ಳು ಪ್ರಚಾರದಿಂದ ಕಡುನೊಂದು, ಅವರು ಹೇಳಿರುವದನ್ನೆಲ್ಲ ನಿರಾಕರಿಸಿದ್ದಾರೆ ಹರಿಜನದಲ್ಲಿ ಒಂದು ಲೇಖನವನ್ನು ಬರೆದು 'ನನಗೆ ಸ್ತ್ರೀಯರ ಕಾಮಾಸಕ್ತಿ ಇದ್ದರೆ, ಈ ಮುದಿ ಪ್ರಾಯದಲ್ಲಾದರೂ ಅದನ್ನು ತೃಪ್ತಿಪಡಿಸಿಕೊಳ್ಳುವ ಮನೋಧೈರ್ಯವು ನನಗಿದ್ದರೆ ಅಗತ್ಯವಿದ್ದರೆ ನಾನು ಬಹುಮಂದಿ ಸ್ತ್ರೀಯರನ್ನು ಮದುವೆಯಾಗುತಿದ್ದೆನು ನನ್ನ ಜೀವನದಲ್ಲಿ ಗುಪ್ತವಾದುದೇನೂ ಇರುವುದಿಲ್ಲ ನನ್ನ ದುರ್ಬಲತೆಗಳನ್ನು ಕುಂದುಕೊರತೆಗಳನ್ನೂ ನಾನು ಒಪ್ಪಿಕೊಂಡಿದ್ದೇನೆ, ಒಪ್ಪಿಕೊಳ್ಳುತಿದ್ದೇನೆ. ನಾನು ಕಾಮವಾಸನೆಗೆ ಬಲಿಬಿದ್ದಿದ್ದರೆ ಅದನ್ನೂ ಒಪ್ಪಿಕೊಳ್ಳಲಿಕ್ಕೆ ಹಿಂಜರಿಯುವವನಲ್ಲ. ಕಾಮುಕತನವು ನಿಂದನೀಯವೂ ತ್ಯಾಜ್ಯವೂ ಆಗಿದೆ. ಆದರೆ ಉಚ್ಛೃಂಖಲ ಕಾಮುಕ ಜೀವನವು ನಾಯಿಜೀವನಕ್ಕಿಂತಲೂ ನಿಕೃಷ್ಟವಾಗಿರುವುದು'' ಎಂದು ಹೇಳಿದ್ದಾರೆ

Constructive Banking

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore. And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OF A CRORE — ESTD 1906

CANARA BANK. LIMITED

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾಪತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕೆ ಬರೆಯಿರಿ

ಲೋಧ್ರ

ಸತೀಮಣಿಯರಿಗೆ ಸಂತತಿ ಸೌಖ್ಯಗಳು!

ಸತೀಮಣಿಯರ ಸಂತತಿ ಸೌಖ್ಯಗಳು
ಮನೆಗೆಲ್ಲಾ ಬೆಳಕು ಬೆಳದಿಗಳು
ಆದ್ದರಿಂದಲೇ ಸ್ತ್ರೀಯರ ಆರೋಗ್ಯವು
ಅಷ್ಟು ಮುಖ್ಯ

ಸ್ತ್ರೀಯರಿಗೆ ಋತು ಸಂಬಂಧವಾದ
ದೋಷಗಳಿಂದ ಶರೀರವು ಕೃಶಿಸಿ
ಸಂತಾನ ವಾಂಛೆಯು ಸಫಲತೆ
ಹೊಂದದು ಆದರೆ ಲೋಧ್ರವನ್ನು
ಸೇವಿಸಿದರೆ ಸ್ತ್ರೀಯರಿಗೆ ಸತ್ಸಂ
ತಾನವೂ, ಸೌಖ್ಯ ಜೀವನವೂ ತಪ್ಪದು

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಟಾಕಿಸ್ಟರು:—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಪುಸ್ತಕ-ವಿಮರ್ಶೆ

ಶ್ರೀ ಬಾಹುಬಲಿ ಗೋಮಟೇಶ್ವರ ಚರಿತ್ರೆ:—ಲೇಖಕರು ಮಂಜೇಶ್ವರ ಗೋವಿಂದ ಪೈಗಳು. ಪ್ರಕಾಶಿಕೆ-ಶ್ರೀಮತಿ ದೇಜಮ್ಮನವರು, ಪಣಿಯಿಲ ಅರಮನೆ, ನೆಲ್ಲಿಕಾರು ಅನಂತಕೀರ್ತಿ ಗ್ರಂಥಮಾಲೆಯ ಹನ್ನೊಂದನೆಯ ಪುಷ್ಪ. ಕ್ರೌನ್ ೧/೮ ಆಕಾರದ ೩೫ ಪುಟಗಳು. ಬೆಲೆ-ಸದ್ವಿನಿಯೋಗ.

ಇದು ಕರ್ನಾಟಕದ ಪ್ರತಿಭಾವಂತ ಇತಿಹಾಸ ಸಂಶೋಧಕರಾದ ಶ್ರೀಮಾನ್ ಗೋವಿಂದ ಪೈಗಳ ಚಾರಿತ್ರಿಕ ವಿಷಯ ಗ್ರಂಥವೆಂದರೆ, ಗ್ರಂಥದ ಗುರುತ್ವಕ್ಕೆ ಅದೇ ಸಾಕಷ್ಟು ಆಧಾರವಾಗಬಹುದು. ಮೈಸೂರಿನ ಶ್ರವಣ ಬೆಳ್ಗೊಳದಲ್ಲಿಯೂ, ತುಳುನಾಡಿನ ಕಾರ್ಕಳ ವೇಣೂರುಗಳಲ್ಲಿಯೂ ಇರುವ ಉನ್ನತ ಪುರುಷಾಕೃತಿಯ, ಮೂರು ಏಕಶಿಲಾವಿಗ್ರಹಗಳನ್ನು ಬಾಹುಬಲಿ ಗೋಮಟೇಶ್ವರನ ಭುವನ ಭಾಸ್ವರವೆನಿಸಿದ ಚಿರಂತನ ಮೂರ್ತಿಗಳನ್ನು—ಸಂದರ್ಶಿಸಿದ ಯಾವನಿಗೆ, ಅದರ ಇತಿಹಾಸದ ಕುರಿತು ಜಿಜ್ಞಾಸೆ ಹುಟ್ಟಿರಲಿಕ್ಕಿಲ್ಲ? ಗೋಮಟೇಶ್ವರನ ಇತಿಹಾಸ, ಶಿಲಾವಿಗ್ರಹಗಳು ಪ್ರತಿಷ್ಠೆಗೊಂಡ ಸಂದರ್ಭ, ಗೋಮಟ ಮೊದಲಾದ ಹೆಸರುಗಳಾಗಲು ಒದಗಿದ ಕಾರಣಗಳು ಮೊದಲಾದವುಗಳನ್ನು ಶ್ರೀಯುತರು ಆಧಾರಪೂರ್ವಕವಾಗಿ, ತಮ್ಮ ಪಾಂಡಿತ್ಯ ಸಹಜ ಗಂಭೀರವಾದ ಶೈಲಿಯಲ್ಲಿ ಸಂಪೂರ್ಣವಾಗಿಯೂ, ಸಂಕೋಚವಾಗಿಯೂ, ಸಾರವತ್ತಾಗಿಯೂ ವಿವರಿಸಿದ್ದಾರೆ.

ಚಾಮುಂಡರಾಯ ಪುರಾಣ ಜಿನಸೇನನ ಸಂಸ್ಕೃತದ ಪೂರ್ವ ಪುರಾಣ, ಭರತೇಶ ವೈಭವ ಮೊದಲಾದ ಗ್ರಂಥಗಳಿಂದ ಬೊಪ್ಪಣ ಪಂಡಿತ, ಪಿರಿಯ ಪಟ್ಟಣದ ದೊಡ್ಡಯ್ಯ, ಪಂಚಬಾಣ, ದೇವಚಂದ್ರ, ಚದುರ ಚಂದ್ರವರ್ಮ ಮೊದಲಾದ ಕವಿಗಳ ಕೃತಿಗಳಿಂದ್ಲೂ, ಆ ಮೇಲೆ ಕಾರ್ಕಳ ಮೊದಲಾದೆಡೆ ಉಪಲಬ್ಧವಾದ ಶಾಸನಗಳಿಂದ ವಿಷಯ ಪ್ರತಿಪಾದನೆ ಮಾಡುವಲ್ಲಿ ಬಹಳ ಮೂಲ ವಿಷಯಗಳನ್ನು ಪರಿಶೋಧಿಸಿ ಈ ಗ್ರಂಥವನ್ನು ಬರೆದಿದ್ದಾರೆ. ಇದು ಇತಿಹಾಸ ಸಂಶೋಧನಾಚಾರ್ಯರೆನಿಸಿದ ಶ್ರೀಯುತರಂತಹರ ಲೇಖನಿಯಿಂದಲೇ ಬರತಕ್ಕ ವಿಷಯವಾಗಿದ್ದು, ಅದನ್ನು ಅವರಿಂದಲೇ ಬರೆಯಿಸಿದ ಪ್ರಕಾಶಿಕೆಯರಾದ ಶ್ರೀಮತಿ ದೇಜಮ್ಮನವರು ಹೆಚ್ಚಿನ ಪ್ರಶಂಸೆಗೆ ಯೋಗ್ಯರಾಗಿದ್ದಾರೆ.

ಶ್ರೀಮತಿ ದೇಜಮ್ಮನವರಂತಹ ಧಾರ್ಮಿಕ ಪರಿಣತಿಯುಳ್ಳ, ವಿದ್ಯಾಭಿಮಾನಿಗಳಾದ, ಉದಾರ ಮನಸ್ಸಿನ ಸಿರಿವಂತೆಯರು ಈಗ ನಮ್ಮ ನಾಡಿನಲ್ಲಿ ಬಹುಮಂದಿ ಬೇಕಾಗಿದ್ದಾರೆ. ಇದುವರೆಗೆ ಇಂತಹ ಹನ್ನೊಂದು ಉತ್ತಮ ಕೃತಿಗಳನ್ನು ಪ್ರಗಲ್ಭ ಪಂಡಿತರಿಂದಲೇ ಬರೆಸಿ, ಉಚಿತವಾಗಿ ಆ ಗ್ರಂಥಗಳನ್ನು ಪ್ರಚಾರ ಮಾಡಿಸಿದ ಅವರ ಕಾರ್ಯಗಳಿಂದ ಕನ್ನಡಿಗರ ಮೇಲೆ ಅವರು ತೀರಿಸಲಾರದ ಋಣವನ್ನು ಹೊರಿಸಿದ್ದಾರೆ. ಧಾರ್ಮಿಕ ಗ್ರಂಥಗಳನ್ನು ವಿಶ್ವ ವಿಶಾಲ ಧರ್ಮಬುದ್ಧಿಯುಳ್ಳ ಮಹಾನುಭಾವರಿಂದ ಬರೆಸಿ, ಅವುಗಳನ್ನು ಹೀಗೆ ಪ್ರಚಾರ ಮಾಡುವುದರಿಂದ ಜಗತ್ತಿಗೆ ಮಂಗಳವುಂಟು. ಎಲ್ಲದಕ್ಕಿಂತಲೂ ಹೆಚ್ಚಾಗಿ ಕನ್ನಡ ಸಾಹಿತ್ಯಕ್ಕೆ ಅಮೋಘ ಪ್ರಯೋಜನವುಂಟು. ಶ್ರೀಮತಿಯವರಿಂದ ಮುಂದಕ್ಕೂ ಇಂತಹ ಹೆಚ್ಚಿನ ಲೋಕೋಪಕಾರವನ್ನು ಹಾರೈಸುವಲ್ಲಿ ಅವರಿಗೆ ಶ್ರೇಯಸ್ಸನ್ನು ಬಯಸಲು ನಾವು ಮರೆಯಲಾರೆವು.

ಸ್ವಾತ್ಮ ಪ್ರಕಾಶಿಕಾ:—ಸಂಸ್ಕರಿಸಿದವರು ವೈ. ಸುಬ್ಬರಾವ್, ಅಧ್ಯಾತ್ಮ ಕಾರ್ಯಾಲಯ, ಹೊಳೆನರಸೀಪುರ. ಕ್ರೌನ್ ೧/೮ ಆಕಾರದ ೨೭ ಪುಟಗಳು. ಬೆಲೆ ಮೂರಾಣೆ.

ಶ್ರೀ ಮದಾದ್ಯ ಶಂಕರಾಚಾರ್ಯರಿಂದ ರಚಿತವೆಂದು ಪ್ರಸಿದ್ಧವಾದ ಈ ಮೂಲ ಸಂಸ್ಕೃತ ಗ್ರಂಥವನ್ನು, ಮೂಲ (ಕನ್ನಡ ಲಿಪಿಯಲ್ಲಿ) ಅನುವಾದ ಟಿಪ್ಪಣಿ, ಪರಿಶಿಷ್ಟಗಳು ಸಮೇತ ಶ್ರೀ ಸುಬ್ಬರಾಯರು ಸಂಸ್ಕರಿಸಿದ್ದಾರೆ. ಸ್ವಾತ್ಮ ಪ್ರಕಾಶಿಕಾ ಎಂದರೆ ತನ್ನ ಆತ್ಮದ ಸ್ವರೂಪವನ್ನು ಬೆಳಕಿಗೆ ತರುವ ಗ್ರಂಥವೆಂದರ್ಥ. ಶ್ರೀ ಶಂಕರಾಚಾರ್ಯ ಪ್ರಣೀತವೆನಿಸಿದ ಈ ಗ್ರಂಥವು ನಿಜವಾಗಿ ಆಧ್ಯಾತ್ಮಿಕ ವಿಚಾರ ಜಿಜ್ಞಾಸುಗಳಿಗೆ ಉಜ್ವಳ ಬಹಯುಕ್ತವಾಗಿದೆ. ಮೂಲ ಸಂಸ್ಕೃತದ ಶೈಲಿಯು, ಶಂಕರಾಚಾರ್ಯರ ಇತರ ಗ್ರಂಥಗಳ ಶೈಲಿಯಂತೆಯೇ ಮನೋಹರವಾಗಿದೆ. ಉಪನಿಷತ್ತುಗಳನ್ನು ವಿವೇಕಾನಂದ ಮೊದಲಾದವರ ವ್ಯಾಖ್ಯಾನಗಳನ್ನೂ ಇವರು ಪ್ರಕಟಿಸಿರುವರಾಗಿ ಕೇಳುತ್ತೇವೆ. ಜನರು ಪರವಸ್ತು ವಿಜ್ಞಾನದ ಕುರಿತು ಅಂಧರಾಗಿರುವ ಈ ಕಾಲದಲ್ಲಿ ಇಂತಹ ಗ್ರಂಥಗಳು ನಮಗೆ ದಾರಿ ತೋರಿಸುವ ದೀವಿಗೆಗಳಾಗಿವೆ.

— ಕಯ್ಯಾರ

ನೋಟಗಳು

ಭುಲಾಭಾಯಿ ದೇಸಾಯಿಯವರು ಬೊಂಬಾಯಿಯ ಒಂದು ಭಾಷಣದಲ್ಲಿ 'ಹಿಂದೂ ದೇಶವು ಅಭಿನ್ನವಾದ ರಾಷ್ಟ್ರ'ವೆಂದರು. ಸ್ಟಾಲಿನರು ಹೇಳುತ್ತಾರೆ "ಶಾಂತಿಯು ಅಭಿನ್ನವಾದುದು" ಎಂದು. ಪಂಡಿತ ನೆಹರುಗಳು ಹೇಳುತ್ತಾರೆ 'ಸ್ವಾತಂತ್ರ್ಯವು ಅಭಿನ್ನ''ವೆಂದು. ಹೀಗೆಯೇ ಸ್ವಲ್ಪ ಸಮಯದಲ್ಲಿ ಜಿನ್ನರೂ ಕೂಡ "ಮುಸ್ಲಿಂ ಲೀಗೂ ಅಭಿನ್ನವಾದುದು" ಎಂದು ಉದ್ಗರಿಸಬಹುದು

◆

'ಈದ್ ಹಬ್ಬ'ದ ದಿನ ಬೊಂಬಾಯಿಯಲ್ಲಿ ಜಿನ್ನಾ ಸಾಹೇಬರು ಒಂದು ದೀರ್ಘ ಭಾಷಣವನ್ನು ಮಾಡುತ್ತಾ ಅದರಲ್ಲಿ ಸತ್ಯವೆಂದೂ ನಮ್ಮ ಮಾರ್ಗದರ್ಶಿಯೆಂದು ಬೋಧಿಸಿದರು

◆

ಸತ್ಯದ ಅನುಯಾಯಿಗಳಿಗೆ ಪರಿಪೂರ್ಣವಾದ ಸತ್ಯದ ಉದಾಹರಣೆಯು ಕಾಣಸಿಗುವುದು 'ಇಂದು ವಾರ್ಧಾದಲ್ಲಿ' ಆದರೆ ಜಿನ್ನರು ಹೇಳುತ್ತಾರೆ ಅದು ಫ್ಯಾಸಿಸ್ಟ್ ಗ್ರ್ಯಾಂಡ್ ಕೌನ್ಸಿಲು ಎಂತ!

◆

ಜಿನ್ನಾ ಸಾಹೇಬರು ತನ್ನ ಈ ಮಹತ್ವವಾದ ಮಾತನ್ನು ಯಾವಾಗ ಕಾರ್ಯತಃ ಆಚರಣೆಯಿಂದ ಮಾಡಿತೋರಿಸಲಿರುವರೆಂಬುದು ನೋಡತಕ್ಕದ್ದಿದೆ.

◆

ಹಿಟ್ಲರನ ಹೆಸರಿಗೇ ಕಳುಹಿಸಲಾದ ೨೦ ಚೀಲ ಕಾಫಿಯು ಬ್ರಿಟಿಷ್ ಹಡಗುಗಳಿಂದ ಸಮುದ್ರದಲ್ಲಿ ಹಿಡಿಯಲ್ಪಟ್ಟಿದೆ. ಇದು ಏಡನಿನಿಂದ ಹ್ಯಾಂಬರ್ಗಿಗೆ ಕಳುಹಿಸಲ್ಪಟ್ಟಿದ್ದು ಎರಡು ಟನ್ನುಗಳಿಗಿಂತ ಮಿಕ್ಕು ಭಾರವಿದ್ದಿತ್ತು!

◆

ಎರಡು ಟನ್ನು ಕಾಫಿಯೆಂದರೆ ಬ್ರಹ್ಮಚಾರಿಯಾದ ಹಿಟ್ಲರನೊಬ್ಬನಿಗೆ ಸಾಧಾರಣ ನೂರು ವರ್ಷಗಳ ಖರ್ಚಿಗೆ ಸಾಕಾಗುತಿತ್ತು!

◆

ರಷ್ಯಾ-ಫಿನ್‌ಲೆಂಡುಗಳ ಮಾತುಕತೆಯು ಪ್ರಯೋಜನವಿಲ್ಲವೆಂದು ತಿಳಿದು ಬಂದಿದೆ. ಆದರೆ ಹಿಂದೂದೇಶದ ವೈಸರಾಯರಂತೆ, ಅವರೂ ತಿರಿಗಿಯೂ ಮಾತನಾಡುವುದು ಮತ್ತು ವಿಚಾರಿಸುವುದೆಂಬ ತತ್ವದಲ್ಲಿ ವಿಶ್ವಾಸವಿಟ್ಟುಕೊಂಡಿದ್ದಾರೆ. ಮೋಸ್ಕೋದಲ್ಲಿ ಯಾವ ಗೊಂದಲವೂ ಇಲ್ಲದೆ ಮಾತುಕತೆ ನಡೆಯುತ್ತಾ ಇತ್ತು, ಅದರ ಫಲವು ಏನೇ ಇರಲಿ ಯಾರೂ ಸಿಟ್ಟಿಗೇಳಲಿಲ್ಲ. ಡಿಲ್ಲಿಯ ಮಾತುಕತೆಗಳ ಸ್ವಭಾವವೂ ಅದೇ ರೀತಿಯದು. ಆದರೆ ಹೀಗೆ ಪ್ರಯತ್ನಮಾಡಿನೋಡುವಿಕೆಯು ಎಷ್ಟು ಸಮಯಗಳ ವರೆಗೆ ಹೋದೀತು ಎಂಬುದು ಹಲವರ ಪ್ರಶ್ನೆಯಾಗಿದೆ.

◆

ಹಿಟ್ಲರನು ಸ್ಟಾಲಿನನಿಗೆ ವಿರುದ್ಧವಾಗಿ ಮುಸೋಲಿನಿಯನ್ನೇ ನಿಲ್ಲಿಸಲು ಯುಕ್ತಿ ಸುತ್ತುತ್ತಿರುವನೆಂದು ತಿಳಿದು ಬಂದಿದೆ. ಸ್ಟಾಲಿನನು ಜರ್ಮನಿಗೆ ಸೈನಿಕ ಸಹಾಯವನ್ನು ಕೊಡಲು ಒಪ್ಪಲಿಲ್ಲ. ಸ್ಟಾಲಿನನು ಹಿಟ್ಲರನ ಮಿತ್ರನಾಗಿ ಇದ್ದರೂ ಆತನನ್ನು ಮರಣಗೊಳಿಸುವ ಯೋಚನೆಯಲ್ಲಿಯೇ ಹಿಟ್ಲರನು ಬಹಳ ವ್ಯಗ್ರನಾಗಿದ್ದಾನಂತೆ! ಆದರೆ ರಷ್ಯದ ದೊರೆಯ ಬೆನ್ನು ಹಿಡಿಯುವುದು ಹಿಟ್ಲರನಿಗೆ ಸಾಧ್ಯವಾಗದ ಸಾಹಸವಾಗಿದೆ!

◆

ಡಿಲ್ಲಿಯಲ್ಲಿ ಇಂದು ಏನು ನಡೆಯುತ್ತಿವೆ? ಬೇರೆಬೇರೆ ಪಂಗಡದವರು ಹಲವು ಹಂಚಿಕೆ ಸೂಚನೆಗಳನ್ನು ಮಾಡುತ್ತಾರೆಂದು ತಿಳಿಬರುತ್ತದೆ. ಆದರೆ ಅಧಿಕಾರಿಗಳು ಮಾತ್ರ ಮೌನರಾಗಿದ್ದಾರೆ. ಬಹುಶಃ ವೈಸರಾಯರು ವೈಟ್ ಹಾಲಿನೊಡನೆ ಮಾತನಾಡಿ ಇಲ್ಲಿನ ಅಲ್ಲಿನ ಸಂಗತಿಗಳನ್ನು ತಿಳಿಯಲು ಸ್ವಲ್ಪ ಸಮಯ ಬೇಕಾದೀತು. ಆದರೆ ಲಂಡನಿನಲ್ಲಿಯೂ ಕೂಡ ಆ ಕುರಿತು ಯಾವ ಸೂಚನೆಗಳೂ ತೋರಿಬರುವುದಿಲ್ಲ.

◆

ವೈಸರಾಯರು, ಕಾಂಗ್ರೆಸಿಗೆ ಜನತೆಯ ಬೆಂಬಲವೆಷ್ಟಿದೆಯೆಂದು ಲಂಡನಿಗೆ ಒಂದು ವರದಿ ತಯಾರಿಸಿ ಕಳುಹಿಸಬೇಕು. ಅದು ಮಾತ್ರವಲ್ಲದೆ ಮುಸ್ಲಿಂ ಲೀಗು ಮೊದಲಾದ ಅಲ್ಪ ಸಂಖ್ಯಾಕ ಪಕ್ಷಗಳೆಲ್ಲವೂ ರಾಷ್ಟ್ರದ ರಾಜಕೀಯ ವಿಚಾರದಲ್ಲಿ ಕಾಂಗ್ರೆಸಿಗಿಂತ ಭಿನ್ನವಾಗಿಲ್ಲವೆಂದೂ, ಖಚಿತಪಡಿಸಿದರೆ ಜೆಟ್ಲೆಂಡು ಮೊದಲಾದವರು ಅಲ್ಪಸಂಖ್ಯಾಕರ ಕುರಿತು, ಲಂಡನಿನಲ್ಲಿ ಹಗಲು ರಾತ್ರಿಯೆನ್ನದೆ ವಿಚಾರ ಮಾಡಿ ಕಷ್ಟಪಡುವುದು ಸ್ವಲ್ಪ ಕಡಿಮೆಯಾಗಿ ಅದರಿಂದ ಅವರಿಗೂ ಸುಖವುಂಟು, ನಮಗೂ ಸುಖವುಂಟು

SAVING & SPENDING

Every Rupee that you save adds materially to your present wealth for the satisfaction of a future want, while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

The Canara Industrial & Banking Syndicate Ltd.

(Incorporated in British India)

ESTD) (1925

Head Office: UDIPI (S. India)

ಎಕ್ಸ್‌ರೇ ಫೋಟೋಗ್ರಫಿಯು ಸುಲಭದಲ್ಲಿ ಆಗುತ್ತದೆ

ಹಿಂದಕ್ಕೆ ಎಕ್ಸ್‌ರೇ ಫೋಟೋಗ್ರಫಿ ತೆಗೆಯಬೇಕಾದರೆ, ಅದಕ್ಕೆ ಉಪಯೋಗಿಸುವ ಫಿಲ್ಮಿಗೆ ಹೆಚ್ಚು ಕ್ರಯ ಕೊಡಬೇಕಾಗಿದ್ದುದರಿಂದ, ಎಕ್ಸ್‌ರೇ ಫೋಟೋಗ್ರಫಿಯು ಸಾಮಾನ್ಯಜನರಿಗೆ ಸಾಧ್ಯವಿಲ್ಲದ ವಿಷಯವಾಗಿತ್ತು. ಇತ್ತೀಚೆಗೆ ಅಮೇರಿಕದ ಒಬ್ಬ ವೈಜ್ಞಾನಿಕನು ಆ ಫಿಲ್ಮಿನ ಬದಲಾಗಿ ಒಂದು ಬಹಳ ಕಡಿಮೆ ಕ್ರಯದ ಕಾಗದವನ್ನು ಉಪಯೋಗಿಸಬಹುದಾಗಿ ಕಂಡು ಹುಡುಕಿರುತ್ತಾನೆ. ಈ ಕಾಗದವನ್ನು ಉಪಯೋಗಿಸಿ ತೆಗೆದ ರೋಗಿಯೊಬ್ಬನ ಹೃದಯದ ಫೋಟೋದಲ್ಲಿ ಹೃದಯದ ಸೂಕ್ಷ್ಮ ಅಂಶಗಳೂ ವ್ಯಕ್ತವಾಗಿ ಕಂಡುಬಂದಿವೆ.

ಈಗಾಗಲೇ ೫೦೦,೦೦೦ ಜನರನ್ನು ಈ ರೀತಿ ಪರೀಕ್ಷಿಸಲಾಗಿದೆ. ಇವರ ರೋಗದ ವಿಷಯದಲ್ಲಿ ಡಾಕ್ಟರರಿಗೆ ಇದರಿಂದ ಪೂರ್ಣ ಅನುಭವವು ಸಿಕ್ಕಿದೆ.

ಕ್ಷೌರಕತ್ತಿಗೆ ಬಿಸಿನೀರು

ಗಡ್ಡ ತೆಗೆಯುವಾಗ ಸುಖವಾಗಬೇಕಾದರೆ, ಮುಖಕ್ಕೆ ತಣ್ಣೀರನ್ನೂ ಕ್ಷೌರಕತ್ತಿಗೆ ಬಿಸಿನೀರನ್ನೂ ಉಪಯೋಗಿಸಬೇಕೆಂದು ಈ ವಿಷಯದಲ್ಲಿ ಅನುಭವಶಾಲಿಗಳಾದ ಮಿ। ಪೀಟರ್ ಎಂಬವರು ತಿಳಿಸುತ್ತಾರೆ.

ಮುಖಕ್ಕೆ ತಂಪು ನೀರು ಹಾಕುವುದರಿಂದ, ಚರ್ಮವು ಮುದುಡಿದಂತಾಗಿ ಸೂಕ್ಷ್ಮವಾಗಿ ಕೂದಲು ತೆಗೆಯಲು ಅವಕಾಶವಾಗುವುದಂತೆ. ಕ್ಷೌರಕತ್ತಿಯನ್ನು ಆಗಾಗ ಬಿಸಿನೀರಲ್ಲಿ ಅದ್ದುವುದರಿಂದ, ಬಿಡ್ಡಾಗುವ ಅದರ ತುದಿಯು ಮೊದಲಿನ ಹರಿತದಿಂದಲೇ ಇರಲು ಸಾಧ್ಯವುಂಟಂತೆ!

ಕಳೆದ ಮಹಾಯುದ್ಧದ ಸಮಯದಲ್ಲಿ ೬೦ ರೀತಿಯ ಗ್ಯಾಸುಗಳನ್ನು ಉಪಯೋಗಿಸಿದ್ದರು. ಇವುಗಳಲ್ಲಿ ಹಲವು ರಸಾಯನಿಕ ಕಂಪೌಂಡ್ ಅಥವಾ ಎಲಿಮೆಂಟುಗಳಾಗಿದ್ದುವು! ಇವುಗಳೆಲ್ಲವೂ ಶಾಂತಿಯ ಕಾಲದಲ್ಲಿಯೂ ಬಹಳ ಉಪಯುಕ್ತವಾದವುಗಳೇ ಆಗಿದ್ದುವು.

ಮನುಷ್ಯನಿಗೆ ಸಜೀವ ಕೃತಕ ಅಂಗಗಳನ್ನು ಕೊಡಬಹುದು

ಸ್ಯೆಂಟ್ ಗಿಲ್ಬಾಸ್ ದ್ವೀಪದ ಡಾ. ಎಲೆಕ್ಸಿಸ್ ಕಾರೆಲರ ನೂತನ ಸಂಶೋಧನೆಯಂತೆ ಮನುಷ್ಯನಿಗೆ ಪ್ರತ್ಯೇಕವಾಗಿ ಹೊಸ ಅಂಗಗಳನ್ನು ಕೊಟ್ಟು, ಹಳೆಯ ಅಂಗಗಳನ್ನು ತೆಗೆದು ರೋಗಗಳನ್ನು ಗುಣಪಡಿಸಬಹುದಾಗಿ ತಿಳಿದುಬಂದಿದೆ.

ಡಾಕ್ಟರರು ಮೊದಲು ಒಬ್ಬ ರೋಗಿಗೆ ಕೃತಕ ಹೃದಯವೊಂದನ್ನು ರಚಿಸಿ ಇಟ್ಟರು. ಇದರಿಂದ ಆತನು ಮೊದಲಿನಂತೆಯೇ ಯಾವ ಹಾನಿಯೂ ಇಲ್ಲದೆ ಇದ್ದದ್ದು ಮಾತ್ರವಲ್ಲದೆ ಆತನ ರೋಗವೂ ಬೇಗನೇ ಗುಣವಾಯಿತು. ಕರ್ನಲ್ ಲಿಂಡ್‌ಬರ್ಗ್‌ರೆಂಬವರು ಇತ್ತೀಚೆಗೆ ಇಂತಹ ಸಂಶೋಧನೆಯಲ್ಲಿ ಬಹಳ ಭರವಸೆಯುಳ್ಳವರಾಗಿರುವರು. ಇದೇ ಮನುಷ್ಯನ ಅಂಗಗಳೆಲ್ಲಕ್ಕೂ ರೋಗ ತಗಲಿದ್ದರೂ ಅವುಗಳನ್ನೂ ತೆಗೆದು ಕೃತಕ ಅಂಗಗಳನ್ನಿಟ್ಟು ಮೊದಲಿನಂತೆಯೇ ಅವುಗಳನ್ನು ಸಜೀವವಾಗಿರಿಸಬಹುದೆಂದು ಅವರು ಅಭಿಪ್ರಾಯಪಡುತ್ತಾರೆ. ರೋಕ್‌ಫೆಲ್ಲರ್ ಸಂಶೋಧನಾಲಯದಲ್ಲಿ ಈ ವಿಷಯದ ಸಂಶೋಧನೆ ನಡೆಸಿ, ಅದರಿಂದ ಪೂರ್ಣ ಭರವಸೆ ಹೊಂದಿರುವರು.

ಕುದುರೆ ಮೊದಲಾದುವುಗಳಿಂದ ತೆಗೆದಿರಿಸಿದ ದೊಡ್ಡ ದೊಡ್ಡ ಅಂಗಗಳು ಸರಿಯಾಗಿ ಕೆಲಸಮಾಡುವವೆಂದು ತಿಳಿದು ಬಂದಿದೆ. ಹಾಗೆ ಮಾಡಿ ರೋಗಿಯನ್ನು ಬಹುಬೇಗನೇ ಗುಣಪಡಿಸಬಹುದಂತೆ.

ಯಂತ್ರವು ಮನುಷ್ಯನಿಗೆ ತರಬೇತಿ ಕೊಡುವುದು

ಕೃತಕ ಉಸಿರಾಟ ಮಾಡಲು, ಹೃದಯಕೋಶದಿಂದ ಗಾಳಿಯು ಹೊರಗೆ ಒಳಗೆ ಸಂಚರಿಸುವಂತೆ ಮಾಡುವ ಕ್ರಮವನ್ನು ಹೇಳಿಕೊಡುವ ಒಂದು ಯಂತ್ರವನ್ನು ಕಂಡುಹಿಡಿದಿದ್ದಾರೆ. ಅದರಲ್ಲಿ ಎಷ್ಟು ಸಮಯದ ವರೆಗೆ ಯಾಗೆ ಕೃತಕ ಉಸಿರಾಟವನ್ನು ಕಲ್ಪಿಸಬೇಕೆಂಬ ಸವು ಸೂಚನೆಯೂ ಸ್ಪಷ್ಟವಾಗಿ ಕೊಟ್ಟಿರುತ್ತದೆ. ಇದರಿಂದ ಬಹು ಬೇಗನೇ ಒಬ್ಬನಿಗೆ ಈ ವಿಷಯಗಳನ್ನು ಕಲಿತುಕೊಳ್ಳಲು ಸುಲಭವಾಗುವುದಾಗಿ ತಿಳಿದುಬಂದಿದೆ.

ವಿಚಿತ್ರ ಮೃಗಗಳ ಜನನ

ಕೆಲಿಫ್ಲೋರ್ನಿಯಾದಲ್ಲಿ ಎರಡು ಮುಖವೊಂದು ಚಿಕ್ಕಿನ ಮರಿಯೂ ಐದು ಕಾಲುಗಳುಳ್ಳ ಒಂದು ಕುರಿಮರಿಯೂ ಹುಟ್ಟಿದೆ! ಇದರ ಕಾರಣಗಳ ಕುರಿತು ವೈಜ್ಞಾನಿಕರು ಸಂಶೋಧನೆ ಮಾಡುತ್ತಿದ್ದಾರೆ.

ಇಮ್ಮಡಿಯಾಗುವ ಬ್ರೆಡ್

ಮಹಾತ್ಮಾಗಾಂಧಿಯವರು ಶೇಗಾವಿನಲ್ಲಿ ಒಂದಕ್ಕೆ ಎರಡುಪಾಲ್ಕು ಆಗುವ ಒಂದು ಬ್ರೆಡನ್ನು ಪರೀಕ್ಷಿಸುತ್ತಿರುವರು ಎಂಬ ವಿಷಯದಲ್ಲಿ, ಬಂಗಾಳದ ಜಮೀನ್ದಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ. ಹೇಮೇಂದ್ರಗುಹ ರೈಗಳವರು ಈ ರೀತಿ ಬರೆಯುತ್ತಾರೆ.

"ಅಂತಹ ಒಂದು ಬ್ರೆಡ್ಡು ಬರಿಸಲ್ ಜಿಲ್ಲೆಯ ಪತಾ ಕಾಳಿ ಸಬ್ ಡಿವಿಜನಿನಲ್ಲಿ ಕಾಣಸಿಕ್ಕಿತು. ಅದನ್ನು ಸಂಶೋಧನೆ ಮಾಡಿ ನೋಡಿದರು. ನೀರು ಮತ್ತು ಉಪ್ಪು ಬೆರಸಿದ ಮಿಶ್ರಣದಲ್ಲಿ ಅದನ್ನು ಹಾಕಿಟ್ಟಾಗ ಅದು ಒಂದು ವಾರದಲ್ಲಿ ಇಮ್ಮಡಿಯಾಗಿ ಬೆಳೆಯಿತು. ಆ ಬ್ರೆಡ್ ಇಮ್ಮಡಿಯಾಗಿ ಬೆಳೆದ ಆ ದ್ರವವು ಅಜೀರ್ಣದ ನಿವೃತ್ತಿಗೆ ಉತ್ತಮ ಔಷಧವಾಗಿ ಕಂಡುಬಂತು.

ಆ ಬ್ರೆಡ್ಡಿನ ಮೂಲಕಥೆಯು ಹೀಗಿದೆ: ಕೆಲವು ಮರಕಡಿಯುವವರು ಸುಂದರಬನಕ್ಕೆ ಮರಕಡಿಯಲು ಹೋಗಿದ್ದರು. ಅವರಲ್ಲಿ ಒಬ್ಬನಿಗೆ ಜೋರು ಹೊಟ್ಟೆನೋವು ಇತ್ತು. ಅದರಿಂದಲಾಗಿ ಆತನು ಆತ್ಮಹತ್ಯಮಾಡಲು ಯತ್ನಿಸಿದನು. ಆವರೆ ಅಲ್ಲಿಗೆ ಸಮೀಪದಲ್ಲಿ ಒಬ್ಬ ಫಕೀರನು ಇದ್ದನು. ಅವನು ಆತನಿಗೆ ಒಂದು ಬ್ರೆಡನ್ನು ಕೊಟ್ಟು ಅದನ್ನು ಕೆಲಸಮಯ ನೀರು ಮತ್ತು ಉಪ್ಪಿನ ಮಿಶ್ರಣದಲ್ಲಿ ಇಡಬೇಕಾಗಿಯೂ, ಆ ಬ್ರೆಡು ಇಮ್ಮಡಿಯಾದ ಮೇಲೆ ಆ ನೀರನ್ನು ಹೊಟ್ಟೆಗೆ ತೆಗೆದುಕೊಳ್ಳಬೇಕಾಗಿಯೂ, ಹೇಳಿದನು.

ಮರ ಕಡಿಯುವವನು ಹಾಗೆಯೇ ಮಾಡಲು ಹೊಟ್ಟೆನೋವು ಗುಣವಾಯಿತು. ಆ ಫಕೀರನು ಅದನ್ನು ಸಮುದ್ರದ ದಡದಲ್ಲಿ ಕೊಟ್ಟೆನೆಂದು ಹೇಳಿದ್ದನಂತೆ. ಆದರೆ ಆ ಮೇಲೆ ಅದರ ಕುರಿತ ವೈದ್ಯಕೀಯ ಅನುಭವಶಾಲಿಗಳು ಪರೀಕ್ಷೆ ನಡೆಸಲು ಅದು ಎಲ್ಲಿಯೂ ಸಮುದ್ರದ ದಡದಲ್ಲಿ ಕಂಡುಬರಲಿಲ್ಲವಂತೆ.

ಇದರ ಕುರಿತು ಮಹಾತ್ಮಾಜಿಯವರು ಶೇಗಾವಿನಲ್ಲಿ ಸಂಶೋಧನೆ ನಡೆಸುತ್ತಿರುವರಾಗಿ ತಿಳಿದಿದೆ.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director*

ತ್ರಾಸವಿಲ್ಲದೆ ಸುಖಮಯವಾದ ಭೋಜನ!

ನಿಮ್ಮ ಭೋಜನವು ಸತತವೂ ತ್ರಾಸದಾಯಕವಾಗುವುದೆ? ಉದರ ವೇದನೆಗೆ ಹೆದರಿ ನೀವು ಸೇವಿಸುವ ಪ್ರತೀ ಒಂದು ಆಹಾರದ ಅಗುಳಿನ ವಿಷಯ ಅತ್ಯಂತ ಜಾಗರೂಕತೆಯನ್ನು ವಹಿಸಬೇಕಾಗುವುದೇ? ಉದರವೇದನೆಯು ನಿಮ್ಮ ಪ್ರಾಣಕ್ಕೆ ಅಪಾಯವನ್ನು ತರಲು ಸಾಧ್ಯವುದೆ?

ಉದರವೇದನೆಯೆಂಬ ಈ ಕಡು ವೈರಿಯ ಒಲೆಯಲ್ಲಿ ನೀವು ಬಿದ್ದಿದ್ದಾದರೆ [illegible] ಭಯ ಪಡಬೇಡಿರಿ. [illegible] ನಿಮ್ಮ ಕೈಯಲ್ಲೇ ಇದೆ. ಪ್ರತೀ ಒಬ್ಬರಿಗೂ [illegible]

ಉದರವೇದನೆ ಮತ್ತು [illegible] ಕೆಲವು [illegible] ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ಸೇವಿಸಿ [illegible] ಜನರಿಗೆ [illegible] ಗುಣವಾಗುವುದು [illegible]

ಮೆಕ್ಲೀನ್ ಬ್ರಾಂಡ್ ಸ್ಟೊಮಕ್ [illegible] ದಕ್ಕೆ [illegible] ಔಷಧಿಯೇ [illegible] ಸ್ವಲ್ಪ ಸಮಯದಲ್ಲಿಯೇ ಸಂಪೂರ್ಣ ಗುಣಮುಖವಾಗುವುದು [illegible] ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರು ದೊರೆಯುವುದು [illegible]

ಎಂಬ ದಸ್ಕತೂ ಪೆಟ್ಟಿಗೆಯ ಮೇಲೆ ದಸ್ಕತೂ ಕೆಂಪು ಸೀಲೂ ಇದ್ದರೆ ಮಾತ್ರ ಅದು ಖಾತ್ರಿಯಾದುದು. ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರು ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ—ಪೆಟ್ಟಿಗೆಗಳಲ್ಲಿರುವ ಬಾಟ್ಲಿಗಳಲ್ಲಿ ಮಾತ್ರ ಮಾರಲ್ಪಡುತ್ತದೆ. (ಹುಡಿ ಯಾ ಮಾತ್ರೆ ರೂಪದಲ್ಲಿದೆ) ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

K S 706



ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನು ಸರ್ವಿಸುಗಳ ಏರ್ಪಾಡಿದೆ)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ–ಮೂಡಿಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ

5 ಮಂಗಳೂರಿನಿಂದ— ಕಾರ್ಕಳ ಸೋಮೇಶ್ವರ, ಆಂಗುಬೆಗಾಗಿ ಶೃಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು

JOINT MANAGERS,

The Combined Booking Agency, MANGALORE

The Joint Booking Office, KODIALBAIL.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ವಾಸಿಯಾಗುವುದು. ಚೇಳು ವಿಷ ಮುಂತಾದ ಜೇನೆ, ಪಕ್ಷವಾತ, ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪನಿಯಲ್ಲಿ ದೊರೆಯುವುದು.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ ಪಂಡಿತ,
P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

	ಸಾಮುಗ್ರಿಗಳು	ಮೊಬಲಗಿನಿಂದ	ಮೊಬಲಗು ವರೆಗೆ
ಭತ್ತ	ಅವ್ವಲ್ ಕಂಡ ಗುಡ್ಡು ಮುಡಿಗೆ	1-9-0	1-10-0
„	ದುಯಂ „ „	1-12-0	1-12-0
„	ಅವ್ವಲ್ ಸುಗ್ಗಿ „	1-12-0	—
„	ದುಯಂ „ „	1-10-0	–
ಅಕ್ಕಿ	ಅವ್ವಲ್ ಗುಡ್ಡು „	4-13-0	4-14-0
„	ದುಯಂ „ „	4-10-0	4 11-
„	ಅವ್ವಲ್ ಸುಗ್ಗಿ „	4-12-0	4-12-
„	ದುಯಂ „ „	4-8-0	4-9-0
ತೆಂಗಿನ ಕಾಯಿ	ಸುಲಿದದ್ದು 1000ಕ್ಕೆ	35-0-0	45-0-0
„	ಸಿಪ್ಪೆ ಇದ್ದದು „	37-8-0	47-0-0
	ಕೊಬ್ಬರಿ ಆಫೀಸು ಖಂಡಿಗೆ	57-8-0	–
	„ ದಿಲ್‌ಪಸಂದ „	—	—
	ತೆಂಗಿನ ಎಣ್ಣೆ ಮುಡಿಕ್ಕೆ	8-15-0	8-15-0
	ಸಿಪ್ಪೆಸುದ್ದ ಅಡಕೆ 1000ಕ್ಕೆ	2-8-0	– –
	ಗೇರುಬೀಜ ಮುಡಿಗೆ	3-12-0	4-8-0
	ಕಬ್ಬಿನ ಬೆಲ್ಲ ಖಂಡಿಗೆ	32-8-0	47-8-0
	ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	15-0-0	16-8

Date 24—11—1939 ವಾರ್ಷಿಕ ಚಂದಾ ರೂ. 2—0—0 ಅಂಚೆವೆಚ್ಚ ಸೇರಿ ರೂ.2—13—0 Regd.No. M 3406

ಸ್ವದೇಶಾಭಿಮಾನಿ

SWADESHABHIMANI

ಸಂಪುಟ 33] ತಾರೀಖು 24—11—1939 [ಸಂಚಿಕೆ 46

The Bombay Life Assurance Company, Ltd.,

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?
If you die-to your family and dependants?

REMEMBER THAT

If you live, Life Insurance takes the place of your professional income during your old age

If you die, it provides your family with enough income for their maintenance and the education of your children

"BOMBAY LIFE" offers all that is best in LIFE ASSURANCE

1938 RECORD

Completed Business	Rs	1,44 91 000
Life Assurance Fund	Rs	1 17 69 748
Total Assets	Rs	1 31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut

Car Street, Mangalore

Visweswarapuram Circle Bangalore City

Post Box No 137 Mount Road Madras

Gautam Nivas, Charni Road Girgaum, Bombay No 4

Central Station Road Trivandrum

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N KANARA)

Stockist **U. Panduranga Nayk,** Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆ
ಯಿಂದ ಇರಬೇಕಾದರೆ ಸಾಕಷ್ಟು
ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾ
ಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ,— ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು (ಬ್ರಾಂಚ್: ಕುಮಟ, ಉತ್ತರ ಕನ್ನಡ.)
ಯು ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

Edited Printed & Published by A. S. Kamath at the Sharada Press, Car Street, Mangalore